1600 ವರ್ಷಗಳ ಒಕ್ಕಲಿಗರ ಇತಿಹಾಸ

ಪರಿಷ್ಕೃತ



ಡಾ. ಬಿ. ಪಾಂಡುಕುಮಾರ್



1600 ವರ್ಷಗಳ ಒಕ್ಕಲಿಗರ ಇತಿಹಾಸ

(ಪರಿಷ್ಕೃತ)

ನೇಗಿಲಯೋಗಿ



ನೇಗಿಲ ಹಿಡಿದಾ ಹೊಲದೊಳ ಹಾಡುತ
ಉಳುವಾ ಯೋಗಿಯ ನೋಡಲ್ಲಿ.
ಫಲವನು ಬಯಸದ ಸೇವೆಯೆ ಪೂಜೆಯು
ಕರ್ಮವೆ ಇಹಪರ ಸಾಧನವು.
ಕಷ್ಟದೊಳನ್ನವ ದುಡಿವನೆ ತ್ಯಾಗಿ
ಸೃಷ್ಟಿನಿಯಮದೊಳಗವನೇ ಭೋಗಿ.

ಲೋಕದೊಳೇನೇ ನಡೆಯುತಲಿರಲಿ,
ತನ್ನೀ ಕಾರ್ಯವ ಬಿಡನೆಂದೂ.
ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ,
ಹಾರಲಿ ಗದ್ದುಗೆ ಮಕುಟಗಳು,
ಮುತ್ತಿಗೆ ಹಾಕಲಿ ಸೈನಿಕರೆಲ್ಲ,
ಬಿತ್ತುಳುವುದನವ ಬಿಡುವುದೆ ಇಲ್ಲ.

ಬಾಳಿತು ನಮ್ಮಿ ನಾಗರಿಕತೆ ಸಿರಿ
ಮಣ್ಣಿಣಿ ನೇಗಿಲಿನಾಶ್ರಯದಿ,
ನೇಗಿಲ ಹಿಡಿದಾ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು.
ನೇಗಿಲ ಬಲದೊಳು ವೀರರು ಮೆರೆದರು,
ಶಿಲ್ಪಿಗಳೆಸೆದರು, ಕವಿಗಳು ಬರೆದರು.

ಯಾರೂ ಅರಿಯದ ನೇಗಿಲ ಯೋಗಿಯೆ
ಲೋಕಕೆ ಅನ್ನವನೀಯುವನು
ಹೆಸರನು ಬಯಸದೆ ಅತಿಸುಖಕೆಳಸದೆ
ದುಡಿವನು ಗೌರವಕಾಶಿಸದೆ.
ನೇಗಿಲಕುಳದೊಳಗಡಗಿದೆ ಕರ್ಮ
ನೇಗಿಲ ಮೇಲೆಯ ನಿಂತಿದೆ ಧರ್ಮ.

– ಡಾ. ಕುವೆಂಪು

1600 ವರ್ಷಗಳ ಒಕ್ಕಲಿಗರ ಇತಿಹಾಸ

(ಪರಿಷ್ಕೃತ)

ಡಾ. ಬಿ. ಪಾಂಡುಕುಮಾರ್

ಇತಿಹಾಸ ಪ್ರಾಧ್ಯಾಪಕರು (ವಿಶ್ರಾಂತ)
ವಿವೇಕಾನಂದ ಕಾಲೇಜು
ಬೆಂಗಳೂರು ವಿಶ್ವವಿದ್ಯಾಲಯ ಸಂಯೋಜನೆ
ಬೆಂಗಳೂರು-560 055.

ಪ್ರಕಾಶಕರು :

ವೇದಾವತಿ ಪ್ರಕಾಶನ

"ಮಂಡ್ಯ ಹೌಸ್", # 1539, 1ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ
ನ್ಯಾಯಾಂಗ ಬಡಾವಣೆ, ಜಿ.ಕೆ.ವಿ.ಕೆ. ಅಂಚೆ, ಬೆಂಗಳೂರು-560 065.
ಮೊಬೈಲ್: 98804 10304

1600 Varshagala Vokkaligara Iithihasa - A Comprehensive History of Vokkaligas, beasing Cultural, Social and Evolutional aspects, Written by : ***Dr. B. Pandukumar;*** Published by : ***Vedavathi Prakashana,*** "Mandya House", # 1539, 1st Main, 6th Cross, Judicial Layout, GKVK Post, Bengaluru-560 065. Mobile : 98804 10304

ಪ್ರಥಮ ಮುದ್ರಣ : 2007 ಅಕ್ಟೋಬರ್
ಎರಡನೇ ಮುದ್ರಣ : 2007 ಡಿಸೆಂಬರ್
ಮೂರನೇ ಮುದ್ರಣ : 2009 ಮಾರ್ಚ್
ನಾಲ್ಕನೇ ಮುದ್ರಣ : 2010 ಜೂನ್
ಐದನೇ ಮುದ್ರಣ : 2010 ಜುಲೈ
ಆರನೇ ಮುದ್ರಣ : 2012 ಫೆಬ್ರವರಿ
ಏಳನೇ ಮುದ್ರಣ : 2013 ಜೂನ್
ಎಂಟನೇ ಮುದ್ರಣ : 2015 ಮಾರ್ಚ್
ಒಂಬತ್ತನೇ ಮುದ್ರಣ : 2016 ನವೆಂಬರ್
ಹತ್ತನೇ ಮುದ್ರಣ : 2019 ಫೆಬ್ರವರಿ
ಹನ್ನೊಂದನೆ ಮುದ್ರಣ : 2022 ಅಕ್ಟೋಬರ್

ಪುಟಗಳು : xvi+xvi+640=672

ಬೆಲೆ : **₹ 650/-**

ಅಕ್ಷರ ಜೋಡಣೆ : ಪದ್ಮಶಾಲಿ ಕೆ.ವಿ. ರಾಘವೇಂದ್ರಕುಮಾರ್

ಮುಖಪುಟ ವಿನ್ಯಾಸ : ಎಂ.ಪಿ. ಶ್ರೇಯಸ್ ಮತ್ತು ಡಾ. ಬಿ. ಪಾಂಡುಕುಮಾರ್

ಮುದ್ರಕರು : **ಸತ್ಯಶ್ರೀ ಪ್ರಿಂಟರ್ಸ್ (ಪ್ರೈ) ಲಿ.,**
16/1, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಕಸ್ತೂರಿಬಾ ನಗರ
ಮೈಸೂರು ರಸ್ತೆ, ಬೆಂಗಳೂರು–560 026.
ದೂರವಾಣಿ: 080–26748811; ಮೊಬೈಲ್: 9342864761

ಪ್ರಾಸ್ತಾವಿಕ ಮಾತು

ಈ ಗ್ರಂಥಕ್ಕೆ **"1600 ವರ್ಷಗಳ ಒಕ್ಕಲಿಗರ ಇತಿಹಾಸ"** ಎಂಬ ಶೀರ್ಷಿಕೆ ನೀಡಲಾಗಿದೆ. ಇಂದಿಗೆ 1600 ವರ್ಷಗಳು ಎಂದರೆ ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿ ತಲೆ ಎತ್ತಿದ ತಲಕಾಡಿನ ಗಂಗರನ್ನು ಮೂಲವಾಗಿಟ್ಟುಕೊಂಡು ಅಲ್ಲಿಂದ ಇಲ್ಲಿಯ ತನಕ ಇರುವ ಒಕ್ಕಲಿಗರ ಇತಿಹಾಸ ಎಂಬರ್ಥದಲ್ಲಿ ಈ ಶೀರ್ಷಿಕೆಯನ್ನು ನೀಡಲಾಗಿದೆ. ಈಗಾಗಲೇ ತಿಳಿಸಿರುವಂತೆ ಒಕ್ಕಲಿಗರು ಕೇವಲ ಕೃಷಿಕರಲ್ಲ **"ಕೃಷಿಕ ಯೋಧರು"** ತಲಕಾಡಿನ ಗಂಗರು, ಹೊಯ್ಸಳರು, ರಾಷ್ಟ್ರಕೂಟರು, ಮಧುಗಿರಿ ಮಹಾನಾಡ ಪ್ರಭುಗಳು, ಯಲಹಂಕ ಪ್ರಭುಗಳು – ಹೀಗೆ ನಾಡನ್ನಾಳಿದ ನಾಡಪ್ರಭುಗಳಾಗಿ ಮೆರೆದಿದ್ದಾರೆ. ಈ ನಾಡು, ಈ ಪುಣ್ಯಭೂಮಿ ಬ್ರಿಟಿಷರ ದಾಸ್ಯಶೃಂಕಲೆಗೆ ಸಿಕ್ಕಿದಾಗ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಸ್ವಾತಂತ್ರ್ಯಾನಂತರ ಅಧಿಕಾರದ ಗದ್ದುಗೆಯನ್ನಿಡಿದು ಆಡಳಿತ ನೀಡಿದ ಹಾಗೂ ನೀಡುತ್ತಿರುವ ಉತ್ತಮ ರಾಜಕಾರಣಿಗಳಾಗಿ, ಸಾಹಿತ್ಯ, ಸಂಗೀತ, ನಾಡುನುಡಿಗಾಗಿ ಒಕ್ಕಲಿಗ ಕುಲಬಾಂಧವರು ಶ್ರಮಿಸುತ್ತಿದ್ದಾರೆ. ಅಮೆರಿಕಾ, ಇಂಗ್ಲೆಂಡ್, ಸಿಂಗಪುರದಂತಹ ರಾಷ್ಟ್ರಗಳಲ್ಲಿ ವೈದ್ಯರಾಗಿ, ಇಂಜಿನಿಯರುಗಳಾಗಿ – ಹೀಗೆ ನಾನಾ ಹುದ್ದೆಗಳಲ್ಲಿದ್ದು ಹೊರನಾಡಿನಲ್ಲಿ ಸೇವೆಸಲ್ಲಿಸುತ್ತಿದ್ದಾರೆ.

2007ರಲ್ಲಿ **"1600 ವರ್ಷಗಳ ಒಕ್ಕಲಿಗರ ಇತಿಹಾಸ"** ಎಂಬ ನನ್ನ ಚೊಚ್ಚಲ ಕೃತಿಯನ್ನು ಹೊರತರಲು ಪ್ರಬಲವಾದ ಕಾರಣವಿದೆ. ಅದೇನೆಂದರೆ ಇಂದಿಗೆ ಸರಿಸುಮಾರು ಇಪ್ಪತ್ತು ವರ್ಷಗಳ ಹಿಂದೆ ನನ್ನ ಸ್ನೇಹಿತರೊಬ್ಬರು ಡಾ॥ ಹೆಚ್.ಎಲ್. ನಾಗೇಗೌಡರ **"ಭೂಮಿಗೆ ಬಂದ ಗಂಧರ್ವ"** ಎಂಬ ಕೃತಿಯನ್ನು ನನಗೆ ತಂದು ಕೊಟ್ಟು ಓದಲು ತಿಳಿಸಿದರು. ಆ ಕೃತಿಯನ್ನು ಓದಿ ಮುಗಿಸಿದ ಮೇಲೆ ನನ್ನ ಮನಸ್ಸಿನಲ್ಲಿ ಒಂದು ರೀತಿಯ ನೋವು ಮತ್ತು ಹತಾಶ ಭಾವ ಹುಟ್ಟಿತು. ಏಕೆಂದರೆ ಸಂಗೀತಗಾರ ಭೈರವಿ ಕೆಂಪೇಗೌಡರಂತಹ ಹಲವಾರು ಮಂದಿ ಒಕ್ಕಲಿಗ ಜನಾಂಗದಲ್ಲಿ ಜನಿಸಿದ ಎಷ್ಟೋ ಮರೆಯಲಾಗದ, ಮರೆಯಬಾರದ ವ್ಯಕ್ತಿಗಳು ನಾಡು, ನುಡಿ ಸಂಸ್ಕೃತಿಗೆ ಕೊಡುಗೆಯನ್ನು ಕೊಟ್ಟಿದ್ದಾರೆ. ಅಂತಹವರ ಕುರಿತು ವಿವರಗಳನ್ನು ಒಂದೆಡೆ ತರಬೇಕೆಂದು ಅಂದೇ ತೀರ್ಮಾನಿಸಿದೆ. ಆದರೆ ನನ್ನಾಸೆ ಫಲಿಸಲು ಕಾಲದ ಹಂಗಿಗೆ ಬೀಳಬೇಕಾಯಿತು. ಕಾರಣವೇನೆಂದರೆ ನಮ್ಮ

ಜನಾಂಗದಲ್ಲಿ ಸಾಕಷ್ಟು ಜನ ಹಿರಿಯ ಸಾಹಿತಿಗಳು, ಕವಿಗಳು, ಮೇಧಾವಿಗಳಿದ್ದಾರೆ. ಸುದೀರ್ಘವಾಗಿರುವ ಒಕ್ಕಲಿಗ ಜನಾಂಗದ ಇತಿಹಾಸ ರಚಿಸುವುದು ಸಾಮಾನ್ಯವಾದ ಕೆಲಸವಲ್ಲವೆಂದು ತಿಳಿದು ಕೈಚೆಲ್ಲಿ ಕುಳಿತೆ.

1998ರಲ್ಲಿ ಪಿಹೆಚ್.ಡಿ. ಪದವಿ ಗಳಿಸಿದ ಕೂಡಲೆ ಸುಮ್ಮನೆ ಕೂರದೆ ಒಕ್ಕಲಿಗ ಸಮುದಾಯದ ಮೇರು ವ್ಯಕ್ತಿಗಳನ್ನು ಕುರಿತು **"ಒಕ್ಕಲಿಗ ಅನರ್ಘ್ಯ ರತ್ನಗಳು"** ಎಂಬ ಕೃತಿಯನ್ನು ಹೊರತರಬೇಕೆಂದೂ ನಿರ್ಧರಿಸಿ ಕೆಲಸ ಪ್ರಾರಂಭಿಸಿದೆ. ಅದು ಕುಂಟುತ್ತಾ ಸಾಗುತ್ತಿದ್ದಂತೆ ನನ್ನ ಸ್ನೇಹಿತರಾದ ಇತಿಹಾಸ ಪ್ರಾಧ್ಯಾಪಕ ಡಾ. ಅಶ್ವಥ್ ನಾರಾಯಣ ಅವರು ಒಕ್ಕಲಿಗರ ಸಂಘಕ್ಕೆ ನೂರು ವರ್ಷ ತುಂಬುತ್ತಾ ಬರುತ್ತಿದೆ. ಏಕೆ ಸಂಘದ ಇತಿಹಾಸದ ಬಗ್ಗೆ ಕೆಲಸ ಮಾಡಬಾರದು ಎಂದು ಹೇಳಿ ಕೆಲವು ಮಾಹಿತಿಗಳನ್ನು ನೀಡಿದರು. ಅದರಂತೆ ಯು.ಜಿ.ಸಿ.ಗೆ ಕಳುಹಿಸಿದ್ದ "*Role of Vokkaligara Sangha in the change of Social and Political activities in Karnataka*" ಎಂಬ ವಿಷಯದ ಮೇಲೆ ಸಂಶೋಧನೆ ಮಾಡಲು ಪ್ರಾಜೆಕ್ಟ್ ದೊರೆಯಿತು. ಅದನ್ನು ಪೂರ್ಣಗೊಳಿಸಿದ ತರುವಾಯ ಮೈಸೂರು ವಿಶ್ವವಿದ್ಯಾಲಯದ ಡಾ. ಜಯಪ್ಪ ಗೌಡರು ಅದನ್ನು ಇನ್ನೂ ವಿಸ್ತರಿಸಿ **"ಒಕ್ಕಲಿಗರ ಇತಿಹಾಸ"** ವೆಂದು ತನ್ನಿ ಎಂದು ತಿಳಿಸಿದರು. ಈಗಾಗಲೇ ಸಾಕಷ್ಟು ವರ್ಷಗಳಿಂದ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದ ನನಗೆ ಅವರ ಸಲಹೆ ಸರಿ ಕಂಡಿತು. ಹಲವಾರು ಕಡೆ ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆ ಹಾಕತೊಡಗಿದೆ. ಮನಸ್ಸಿನಲ್ಲಿ ಒಂದು ರೀತಿಯ ಛಲ, ಹುಮ್ಮಸ್ಸು ಅಷ್ಟೇ ಅಲ್ಲ ಒಂದು ರೀತಿಯ ಹುಚ್ಚು ಹಿಡಿಸಿಕೊಂಡೆ. ಪುಸ್ತಕಗಳು ಹಾಗೂ ಮಾಹಿತಿಗಾಗಿ ಕಂಡ ಕಂಡವರಿಗೆ ದುಂಬಾಲು ಬಿದ್ದೆ. ಕೆಲವರು ತಮ್ಮಲ್ಲಿ ಸಾಕಷ್ಟು ಪುಸ್ತಕಗಳಿದ್ದರೂ ಕೊಡುವುದಿಲ್ಲವೆಂದು ನಿಷ್ಠುರವಾಗಿಯೇ ಹಿಂದಕ್ಕಟ್ಟಿದರು. ಒಮ್ಮೆ ಬಿ.ಪಿ. ರಾಧಾಕೃಷ್ಣರವರ "ನನ್ನ ತಂದೆ" ಎಂಬ ಕೃತಿಗಾಗಿ ಬಸವನಗುಡಿ ಗೋಖಲೆ ಸಾರ್ವಜನಿಕ ಗ್ರಂಥಾಲಯದ ಮುಂದೆ ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4ರ ವರೆಗೆ ಕಾಯ್ದು ಕೊನೆಗೂ ಪುಸ್ತಕ ಸಿಗದೆ ಹತಾಶನಾಗಿ ಮನೆಗೆ ಹಿಂತಿರುಗಿದೆ. ಅಷ್ಟೇ ಅಲ್ಲ ನಮ್ಮ ಜನಾಂಗದ ಉದಯೋನ್ಮುಖ ಹಾಗೂ ಹಿರಿಯ ಸಾಹಿತಿಗಳ, ಸಂಶೋಧಕರ ಸಾಧನೆಗಳನ್ನು ಕಲೆ ಹಾಕುವ ಭರದಲ್ಲಿ ಒಬ್ಬ ಮರಿ ಸಾಹಿತಿಯನ್ನು ದೂರವಾಣಿಯ ಮೂಲಕ ಸಂಪರ್ಕಿಸಿದೆ. ಅವರು ಒಕ್ಕಲಿಗರ ಸಾಹಿತ್ಯ ಸಾಧನೆಗಳ ಬಗ್ಗೆ ಮಾಹಿತಿ ನೀಡಲು ಸಹಕರಿಸಲಿಲ್ಲ. ಇಷ್ಟೇ ಅಲ್ಲದೆ ತಮ್ಮ ತಂದೆ ಇಲ್ಲವೇ ತಾತನ ಫೋಟೋ ಬೇಕೆಂದು ನೂರಾರು ಬಾರಿ ಕೆಲವರನ್ನು ಒತ್ತಾಯಿಸಿದರೂ ಕೊಡುವ ಬಗ್ಗೆ ಆಶ್ವಾಸನೆ ಬಂತೇ ವಿನಃ ಅದು ಕಾರ್ಯಗತವಾಗಲಿಲ್ಲ. ಇವೇ ಮುಂತಾದವು ಮರೆಯಲಾಗದ ಕಹಿ ಅನುಭವಗಳಾಗಿ ಉಳಿದಿವೆ. ಆದರೂ ಛಲ

ಬಿಡದೆ ಡಾ. ಬಿ.ಪಿ. ರಾಧಾಕೃಷ್ಣರವರ ಮನೆಯನ್ನು ಹುಡುಕಿಕೊಂಡು ಹೋಗಿ ಪುಸ್ತಕ ಹಾಗೂ ಅವರ ಭಾವಚಿತ್ರವನ್ನೂ ಪಡೆದೆ.

ಹೀಗಾಗಿ ನನ್ನಲ್ಲಿ ಏನೋ ಒಂದು ವಿಧವಾದ ಸಂತೋಷ ಮತ್ತು ಏನನ್ನಾದರೂ ಸಾಧಿಸಬೇಕೆಂದು ಛಲ ಮೂಡಿತು. ಜನಾಂಗದ ಬಗ್ಗೆ ಕಾಳಜಿ ಇರುವವರಲ್ಲಿ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳನ್ನು ನೆನೆಯುವುದು ಅತ್ಯವಶ್ಯಕವಾಗಿದೆ. ಕಾರಣವೇನೆಂದರೆ ಇಂದಿಗೆ ಹತ್ತು ವರ್ಷಗಳ ಹಿಂದೆಯೇ ಜನಾಂಗದ ಇತಿಹಾಸದ ಬಗ್ಗೆ ಹತ್ತಾರು ಸಂಪುಟಗಳ ಗ್ರಂಥಗಳನ್ನು ಹೊರತರಲು ಯೋಜನೆಯೊಂದನ್ನು ರೂಪಿಸಿದರು. ಆದರೆ ಅನಿವಾರ್ಯ ಕಾರಣಗಳಿಂದ ಆ ಕೆಲಸ ಪೂರ್ಣಗೊಳ್ಳಲಿಲ್ಲ. ಅದರ ಒಂದು ಪುಟ್ಟ ಪ್ರಯತ್ನವನ್ನು ನಾನು ಮಾಡಿ ಮುಗಿಸಿದ್ದೇನೆ ಎಂದು ಹೇಳಲು ಹರ್ಷಿಸುತ್ತೇನೆ.

ಈ ಕೃತಿಯನ್ನು ರಚಿಸುವಾಗ ಕೆಲವಾರು ವ್ಯಕ್ತಿಗಳನ್ನು ಸಂದರ್ಶಿಸಿ ಅವರಿಂದ ಮೌಖಿಕ ಇತಿಹಾಸವನ್ನು ಸಂಪಾದಿಸಿ ಕೃತಿಯ ರೂಪಕ್ಕಿಳಿಸಿದೆ. ಅವರುಗಳಲ್ಲಿ ಶ್ರೀಯುತರಾದ ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕು ಮಂದಗೆರೆಯ ಶ್ರೀ ಎಸ್.ಸಿ. ದೊಡ್ಡೇಗೌಡ, ಮಾಜಿ ಶಾಸಕರಾದ ಶ್ರೀ ನೆಲಮನೆ ಚನ್ನೇಗೌಡ, (ಹಾಸನ ಗುಂಡಪ್ಪ ಗೌಡರ ಅಳಿಯ), ಅದೇ ಮೈಸೂರಿನಲ್ಲಿ ವಾಸವಾಗಿರುವ ವಕೀಲರಾದ ಶ್ರೀ ಸಿ.ಜೆ. ದೇವನಾಥ (ರಾವ್ ಬಹದ್ದೂರ್ ಹೆಚ್. ಚನ್ನಯ್ಯನವರ ಮೊಮ್ಮಗ ಹಾಗೂ ಶ್ರೀ ಹೆಚ್.ಸಿ. ಜವರಾಯರ ಪುತ್ರ) ಡಾ. ಜಯಪ್ಪಗೌಡ (ಮೈಸೂರು ವಿಶ್ವವಿದ್ಯಾಲಯ) ಡಾ. ಬಿ.ಪಿ. ರಾಧಾಕೃಷ್ಣ, ಲೋಕಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಗಡೆ, ವಿಶ್ರಾಂತ ಲೋಕಾಯುಕ್ತ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, ಬಂಟ ಸಂಘದ ಮಾಜಿ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ರೈ ಹಾಗೂ ಬಂಟ ಸಂಘದ ಪದಾಧಿಕಾರಿಗಳು ಇನ್ನೂ ಮೊದಲಾದವರಿಗೆ ನನ್ನ ಅನಂತ ಧನ್ಯವಾದಗಳು.

ಅಂದು ಈ ನನ್ನ ಚೊಚ್ಚಲ ಕೃತಿಯು ಹೊರಬರಲು ಅನೇಕ ಮಂದಿ ಪ್ರತ್ಯಕ್ಷವಾಗಿ - ಪರೋಕ್ಷವಾಗಿ ನನಗೆ ಸಹಾಯ ಮಾಡಿದ್ದಾರೆ. ಅವರಲ್ಲಿ ಕೆಲವರನ್ನಾದರೂ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಮೊದಲಿಗೆ ನಾನು ಚಿರಋಣಿಯಾಗಿರಬೇಕಾದ ವ್ಯಕ್ತಿ ಎಂದರೆ ಡಾ. ಸೂರ್ಯನಾಥ ಯು. ಕಾಮತ್‌ರವರು. ಕಾರಣವೇನೆಂದರೆ ಅವರು ಗೆಜೆಟಿಯರ್‌ನ ಮುಖ್ಯ ಸಂಪಾದಕರಾಗಿದ್ದಾಗ ಜನಾಂಗದ ಗಣ್ಯ ವ್ಯಕ್ತಿಗಳ ಮನೆಯಲ್ಲಿ ಸಂಗ್ರಹಿಸಿಟ್ಟಿದ್ದ ಹಳೆಯ ದಾಖಲೆ ಪತ್ರಗಳು, ಕಡತಗಳು, ಮಹಾತ್ಮ ಗಾಂಧೀಜಿ, ಸರ್ದಾರ್ ವಲ್ಲಭಬಾಯಿ ಪಟೇಲರು ಬರೆದಿರುವ ಪತ್ರಗಳು ಇವೇ

ಮುಂತಾದವುಗಳನ್ನು ಸಂಗ್ರಹಿಸಿ ರಾಜ್ಯ ಪತ್ರಾಗಾರ ಇಲಾಖೆಯಲ್ಲಿ ಸಂಗ್ರಹಿಸಿಟ್ಟಿ ಮಹದುಪಕಾರ ಮಾಡಿದ್ದಾರೆ. ಇಷ್ಟೇ ಅಲ್ಲದೇ ನಾನು ಈ ಕೃತಿಯನ್ನು ರಚಿಸುತ್ತಿರುವುದನ್ನು ಅವರಿಗೆ ತಿಳಿಸಿದ ಕೂಡಲೇ ಕೆಲವು ಮಾಹಿತಿಗಳನ್ನು ನೀಡಿದ್ದಾರೆ. ಕಾಮತ್‌ರಿಗೆ ನನ್ನ ಅನಂತ ಧನ್ಯವಾದಗಳು.

ನಂತರ ನನ್ನ ಆತ್ಮೀಯರೂ, ಹಿತೈಷಿಗಳೂ ಆದ ಡಾ. ಎಂ.ಜಿ. ನಾಗರಾಜ್ ರವರು ತಮ್ಮ ಹಲವಾರು ಕೆಲಸದ ಒತ್ತಡಗಳ ನಡುವೆಯೂ ವಿಶ್ವಾಸಪೂರ್ವಕವಾಗಿ ಕರಡು ಪ್ರತಿಯನ್ನು ಸಂಪೂರ್ಣವಾಗಿ ಓದಿ ಸೂಕ್ತ ಸಲಹೆ, ಸೂಚನೆಗಳನ್ನು ನೀಡಿದರು. ಕರಡು ಪ್ರತಿಯನ್ನು ತಿದ್ದಿ ಇಡೀ ಗ್ರಂಥವನ್ನು ಭಾಷಾ ದೋಷದಿಂದ ಮುಕ್ತಗೊಳಿಸಿದ ಡಾ. ಕೆ.ಆರ್. ಗಣೇಶ್‌ರವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಈ ಕೃತಿಯನ್ನು ರಚಿಸಬೇಕಾದ ಸಂದರ್ಭದಲ್ಲಿ ಕರ್ನಾಟಕದ ಕೆಲವು ಭಾಗಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ಸಮಗ್ರ ಕರ್ನಾಟಕವೇ ಅಲ್ಲದೆ ದಕ್ಷಿಣ ಭಾರತದಾದ್ಯಂತ ಅದರಲ್ಲೂ ವಿಶೇಷವಾಗಿ ಉದಕಮಂಡಲ (ಊಟಿ) ಕೊಯಮತ್ತೂರು, ಸೇಲಂ, ಕೃಷ್ಣಗಿರಿ, ಹೊಸೂರು, ಆದೋನಿ ಸೇರಿದಂತೆ ಕೆಲವಾರು ಭಾಗಗಳಲ್ಲಿ ಒಕ್ಕಲಿಗರು ಬಹುಸಂಖ್ಯೆಯಲ್ಲಿ ನೆಲೆಸಿದ್ದಾರೆ. ಮುಂದೆ ಅಂತಹ ಕಡೆಗಳಲ್ಲಿ ಕ್ಷೇತ್ರಕಾರ್ಯ ಮಾಡಿ ಸಮಗ್ರ ಅಧ್ಯಯನ ನಡೆಸಿ, ಸಂಪುಟಗಳ ರೂಪದಲ್ಲಿ ಗ್ರಂಥಗಳನ್ನು ಹೊರತರಬೇಕೆಂದು ಹಂಬಲವಿದೆ.

ಸುಮಾರು ಏಳು-ಎಂಟು ವರ್ಷಗಳ ತರುವಾಯ ಕೃತಿ ರಚನೆ ಕೆಲಸ ಪೂರ್ಣಗೊಂಡು ಅದರ ಬಿಡುಗಡೆಯ ಬಗ್ಗೆ ಚಿಂತಿಸುತ್ತಿದ್ದೆ. ಅದೇ ವೇಳೆಗೆ ಅಲ್ಲಿಗೆ ಬಂದ ನನ್ನ ಸ್ನೇಹಿತರಾದ ಡಾ. ಎಂ.ಕೆ. ಪುರುಷೋತ್ತಮ್ ಅವರು ಗ್ರಂಥ ಲೋಕಾರ್ಪಣಾ ಸಮಿತಿಯನ್ನು ರಚಿಸೋಣ ಎಂದು ಸಲಹೆ ನೀಡಿದರು. ಅದರಂತೆ ಈ ಕೆಳಕಂಡ ಮಹಾಶಯರುಗಳು ಮಹಾಪೋಷಕರಾಗಿಯೂ, ಪೋಷಕರಾಗಿಯೂ ಗ್ರಂಥ ಲೋಕಾರ್ಪಣಾ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಂಡರು. ಅವರುಗಳೆಂದರೆ –

ಮಹಾಪೋಷಕರಾಗಿ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ, ಶ್ರೀ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಶ್ರೀ ಶ್ರೀ ನಂಜಾವಧೂತ ಸ್ವಾಮೀಜಿ, ಶ್ರೀ ಶ್ರೀ ಶ್ರೀ ಓಂಕಾರಾನಂದ ಸ್ವಾಮೀಜಿ, ಪೋಷಕರಾಗಿ – ಶ್ರೀ ಜಿ. ನಾರಾಯಣ, ಶ್ರೀ ಬಿ.ಎಲ್. ಲಕ್ಕೇಗೌಡ, ಪ್ರೊ. ಟಿ. ಶಿವಣ್ಣ, ಡಾ. ವಿಠ್ಠಲ್, ಡಾ. ಹೇಮಚಂದ್ರ ಸಾಗರ್, ಶ್ರೀ ಕೆ.ವಿ. ಮುನಿವೆಂಕಟರೆಡ್ಡಿ, ಪ್ರೊ. ಮಾಲಿಮದ್ದಣ್ಣ, ಪ್ರೊ. ವೆಂಕಟಸ್ವಾಮಿ, ಶ್ರೀ ಡಬ್ಲ್ಯು.ಪಿ. ಕೃಷ್ಣ, ಶ್ರೀ ಚಂದ್ರಹಾಸ್ ರೈ, ಶ್ರೀ ಗಾಳಿಸ್ವಾಮಿ ಇವರುಗಳಿಗೆ ನಾನು ಚಿರಋಣಿಯಾಗಿದ್ದೇನೆ.

ಕೊನೆಯದಾದರೂ ಅತಿ ಮುಖ್ಯವಾಗಿ ನಾನು ಅಭಾರಿಯಾಗಿರಬೇಕೆಂದರೆ ನನ್ನನ್ನು ಈ ಹಂತಕ್ಕೆ ತಂದ ನನ್ನ ಅಣ್ಣನವರಾದ ಶ್ರೀ ಬಿ. ನಾಗೇಶ್ ಬಿ.ಇ., (ಬೋರಿವಿಲಿ ಈಸ್ಟ್, ಮುಂಬೈ), ಶ್ರೀ ಬಿ. ನಂಜಪ್ಪ (ಮಂಡ್ಯ), ಇನ್ನೂ ಹೆಚ್ಚಾಗಿ ಹೇಳಬೇಕೆಂದರೆ ನಾನು ಹೊರಬೇಕಾಗಿದ್ದ ಸಂಸಾರದ ನೊಗವನ್ನು ತಾನೇ ಹೊತ್ತು ಇಷ್ಟು ವರ್ಷಗಳ ಕಾಲ ನನ್ನ ಸಂಶೋಧನೆಗಳಿಗೆ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ಮೇಲೇರಲು ಸಹಕಾರಿಯಾಗಿ ನಿಂತ ನನ್ನ ಬಾಳಸಂಗಾತಿ ಶ್ರೀಮತಿ ಎಸ್.ಡಿ. ವೇದಾವತಿ ಇವರುಗಳಿಗೆ ನಾನು ಆಭಾರಿಯಾಗಿದ್ದೇನೆ. ಇದೇ ರೀತಿಯ ಸಹಕಾರವನ್ನು ಮುಂದೆಯೂ ನಿರೀಕ್ಷಿಸುತ್ತೇನೆ. ನನ್ನೊಡನೆ ಸಹಕರಿಸಿದ ನನ್ನ ಮಕ್ಕಳಾದ ಎಂ.ಪಿ. ಯಶಸ್ ಮತ್ತು ಎಂ.ಪಿ. ಶ್ರೇಯಸ್‌ಗೆ ಮತ್ತು ಸೊಸೆ ಎಂ.ಪಿ. ಅರ್ಪಿತ ಇವರುಗಳಿಗೆ ಶ್ರೇಯಸ್ಸನ್ನು ಕೋರುತ್ತೇನೆ.

ಸಮಯಕ್ಕೆ ಸರಿಯಾಗಿ ಅಂದವಾಗಿ ಮುದ್ರಿಸಿಕೊಟ್ಟ ಸತ್ಯಶ್ರೀ ಪ್ರಿಂಟರ್ಸ್ ಮಾಲೀಕರಾದ ಮಾನ್ಯಶ್ರೀ ಎಲ್. ಲಿಂಗಪ್ಪನವರಿಗೂ ಹಾಗೂ ಡಿ.ಟಿ.ಪಿ.ಗೆ ಸಹಾಯ ಸಹಕಾರ ಮಾಡಿದ ಪದ್ಮಶಾಲಿ ಶ್ರೀ ಕೆ.ವಿ. ರಾಘವೇಂದ್ರಕುಮಾರ್ ಮತ್ತು ಸುಂದರವಾಗಿ ಮುಖಪುಟವನ್ನು ಮುಡಿಸಿಕೊಟ್ಟ ಶ್ರೀ ಸುನೀಲ್ ಕುಮಾರ್‌ರವರಿಗೆ ಹಾಗೂ ಎಲ್ಲಾ ರೀತಿಯಲ್ಲಿ ಸಹಕಾರ ನೀಡಿದ ಪ್ರೆಸ್‌ನ ಸಿಬ್ಬಂದಿ ವರ್ಗದವರಿಗೂ ನನ್ನ ಅನಂತಾನಂತ ಧನ್ಯವಾದಗಳು.

ಬೆಂಗಳೂರು **ಪ್ರೊ|| ಡಾ. ಬಿ. ಪಾಂಡುಕುಮಾರ್**

ಪರಿಷ್ಕೃತ ಹಾಗೂ ಹನ್ನೊಂದನೆ ಮುದ್ರಣ ಹೊರಬಂದ ಸವಿನೆನಪು

"1600 ವರ್ಷಗಳ ಒಕ್ಕಲಿಗರ ಇತಿಹಾಸ" 672 ಪುಟಗಳ ಗ್ರಂಥವನ್ನು ನಿಮ್ಮ ಕೈಗಿಡುತ್ತಿದ್ದೇನೆ. 2007ರಲ್ಲಿ ಅಂದಿನ ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದ ಶ್ರೀ ಎಸ್.ಎಂ. ಕೃಷ್ಣರವರು ಈ ಮೇಲ್ಕಂಡ ಗ್ರಂಥವನ್ನು ಬಿಡುಗಡೆ ಮಾಡಿದರು. ಆ ಬೃಹತ್ ಸಮಾವೇಶವನ್ನು ಶ್ರೀಯುತರುಗಳಾದ ಪ್ರೊ. ಎಂ.ಕೆ. ಪುರುಷೋತ್ತಮ್, ಪ್ರೊ. ಟಿ. ಶಿವಣ್ಣ, ಡಾ. ಹೇಮಚಂದ್ರ ಸಾಗರ್, ಶ್ರೀ ಜಿ. ನಾರಾಯಣ, ಶ್ರೀ ಬಿ.ಎಲ್. ಲಕ್ಕೇಗೌಡ, ಶ್ರೀ ಚಂದ್ರಹಾಸ ರೈ, ಶ್ರೀ ಗಾಳಿಸ್ವಾಮಿ, ಶ್ರೀ ಮರಿಮಲ್ಲಯ್ಯ ಇವರೇ ಮುಂತಾದವರು ಶ್ರಮವಹಿಸಿ ಯಶಸ್ವಿಗೊಳಿಸಿದುದಕ್ಕೆ ನಾನು ಆಭಾರಿಯಾಗಿದ್ದೇನೆ.

ಅಲ್ಲಿಂದ ಇಲ್ಲಿಯ ತನಕ 18 ಸಾವಿರಕ್ಕೂ ಹೆಚ್ಚು ಕೃತಿಗಳು ಓದುಗರ ಕೈ ಸೇರಿದೆ. ಆ ಸಮಾರಂಭದಲ್ಲಿ ಹಾಜರಿದ್ದ ಜಸ್ಟೀಸ್ ಎ.ಜೆ. ಸದಾಶಿವರವರಿಗೆ ಇತ್ತೀಚೆಗೆ ಈ ವಿಷಯವನ್ನು ತಿಳಿಸಿದಾಗ 15 ವರ್ಷಗಳಲ್ಲಿ ಕೇವಲ 18 ಸಾವಿರ ಕೃತಿಗಳು ಹೊರ ಬಂದಿರುವುದು ಸಾಲದು. 80 ಲಕ್ಷಕ್ಕೂ ಹೆಚ್ಚಿರುವ ಒಕ್ಕಲಿಗರು ಕರ್ನಾಟಕದಲ್ಲಿರುವಾಗ ಕನಿಷ್ಠವೆಂದರೂ ಒಂದು ಲಕ್ಷ ಪ್ರತಿಗಳು ಈಗಾಗಲೇ ಮಾರಾಟವಾಗಬೇಕಿತ್ತು. ರಾಜ್ಯದ ಮೂಲೆಮೂಲೆಗಳಿಗೆ ತಲುಪಿಸುವ ಕಾರ್ಯವನ್ನು ಮಾಡಿ ಎಂದು ಆಶೀರ್ವದಿಸಿದರು. ಇದು ಕಾರ್ಯಗತವಾಗಬೇಕಾದರೆ ಶ್ರೀಕ್ಷೇತ್ರ ಆದಿಚುಂಚನಗಿರಿಯ ಪೀಠಾಧ್ಯಕ್ಷರೂ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ನಿರ್ಮಾಲಾನಂದನಾಥ ಮಹಾಸ್ವಾಮಿಗಳು ಕೃಪಾಶೀರ್ವಾದಬೇಕೆಂದು ಅವರಿಗೆ ತಿಳಿಸಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ಮೂಲೆಮೂಲೆಗಳಲ್ಲಿ ಒಕ್ಕಲಿಗ ಸಮುದಾಯದ ಸಂಘ-ಸಂಸ್ಥೆಗಳಿವೆ ಈ ಸಂಘ ಸಂಸ್ಥೆಗಳ ಪ್ರತಿಯೊಬ್ಬ ಸದಸ್ಯರೂ ಕೊಂಡು ಓದಬೇಕು. ಈ ಗ್ರಂಥದ ಉದ್ದೇಶವೇ ನಮ್ಮಲ್ಲಿರುವ ಕೀಳರಿಮೆಯನ್ನು ಬಿಟ್ಟು ನಮ್ಮ ಜನಾಂಗ ನಡೆದು ಬಂದ ದಾರಿ ನಮ್ಮ ಜನಾಂಗದ ಪೂರ್ವಿಕರು ರಾಜ ಮಹಾರಾಜರಾಗಿ, ನಾಡಪ್ರಭುಗಳಾಗಿ, ಪಾಳೇಯಗಾರರಾಗಿ ಆಳ್ವಿಕೆ ಮಾಡಿ ನಾಡು ನುಡಿಗೆ ಕೊಡುಗೆಯನ್ನು ನೀಡಿದ್ದಾರೆ. ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ ಬ್ರಿಟಿಷರ ವಿರುದ್ಧ ಹೋರಾಡಿ ತುರಂಗವಾಸ ಅನುಭವಿಸಿದ್ದಾರೆ. ಸ್ವಾತಂತ್ರ್ಯಾನಂತರ

ಮುಖ್ಯಮಂತ್ರಿಗಳಾಗಿ, ಮಂತ್ರಿಗಳಾಗಿ, ಸಮಾಜ ಸುಧಾರಕರಾಗಿ, ಸಾಹಿತಿಗಳು ಮತ್ತು ಸಂಗೀತಾಗಾರರಾಗಿ ನಾಡುನುಡಿ ಸಂಸ್ಕೃತಿಗೆ ತಮ್ಮ ಕೊಡುಗೆಯನ್ನು ನೀಡಿದ ಮಹನ್ ಚೇತನಗಳ ಜೀವನಗಾಥೆಯನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ. ನಮ್ಮ ಸಮುದಾಯದಲ್ಲಿರುವ ಉಪಪಂಗಡಗಳು, ಅವುಗಳಲ್ಲಿ ಕೆಲವು ಉಪಪಂಗಡಗಳ ಆಚಾರ-ವಿಚಾರ ನಂಬಿಕೆ ಇವೇ ಮುಂತಾದವುಗಳನ್ನು ಚಿಕ್ಕದಾಗಿ ತಿಳಿಸಲಾಗಿದೆ. ನಮ್ಮ ಬಡಾವಣೆಯಲ್ಲಿರುವ ನನ್ನ ಸ್ನೇಹಿತರಾದ ಡಾ. ಕೆ.ಎಸ್. ಕೃಷ್ಣಾರೆಡ್ಡಿ (ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳು)ಯವರು ನನ್ನ ಕೃತಿಯನ್ನು ಓದಿ ಡಾಕ್ಟ್ರೇ ನೀವು ಕೋಲಾರದಿಂದ ಮಂಗಳೂರಿನವರೆಗೆ ಬರೆದಿದ್ದೀರಿ, ಅದೇ ರೀತಿ ಚಿತ್ರದುರ್ಗದಿಂದ ರಾಯಚೂರಿನ ವರೆಗೂ ಇರುವ ಒಕ್ಕಲಿಗರ ಬಗ್ಗೆಯೂ ತಿಳಿಸಿ ಎಂದರು. ನಂತರ ಚಿತ್ರದುರ್ಗ, ಗದಗ, ರೋಣ, ಬಿಜಾಪುರ, ಗುಲ್ಬರ್ಗ ಸೇರಿದಂತೆ ಆಪ್ರದೇಶಗಳ ಒಕ್ಕಲಿಗ ಮುಖಂಡರ ಒಕ್ಕಲಿಗ ಉಪಜಾತಿಗಳ ಬಗ್ಗೆ ಮಾಹಿತಿ ಕಲೆ ಹಾಕಿ ಈ ಪರಿಷ್ಕೃತ ಗ್ರಂಥದಲ್ಲಿ ಸೇರಿಸಲಾಗಿದೆ. ಹೊಸದಾಗಿ ಕುಡು ಒಕ್ಕಲಿಗರು (ಗುಲ್ಬರ್ಗ, ಬಿಜಾಪುರ, ರಾಯಚೂರು) ಹಾಲಕ್ಕಿ, ಕೊಟ್ಟೆ, ಗಾಮ, ಕರೆ, ಪಟಗಾರ, ಮಡಿ ಒಕ್ಕಲಿಗರು (ಸಿರಸಿ, ಸಿದ್ಧಾಪುರ, ಹೊನ್ನಾವರ, ಬೆಳ್ತಂಗಡಿ, ಸಾಗರ, ಶೃಂಗೇರಿ, ಕೊಪ್ಪ, ಹಾಸನ, ಸಕಲೇಶಪುರ) ಇವೇ ಮುಂತಾದ ಉಪಪಂಗಡಗಳ ಬಗ್ಗೆ ಬರೆಯಲಾಗಿದೆ.

ಈ ಮೇಲ್ಕಂಡ 650 ಪುಟಗಳ ಗ್ರಂಥವು ಆದಷ್ಟು ಕಡಿಮೆ ಬೆಲೆಗೆ ಕೈಗೆಟುಕುವಂತೆ ಮಾಡುವ ಉದ್ದೇಶದಿಂದ ನಾನು ನೆಲೆಸಿರುವ ನ್ಯಾಯಾಂಗ ಬಡಾವಣೆಯ ಜಸ್ಟೀಸ್ ಹೊಂಬೇಗೌಡ ಒಕ್ಕಲಿಗರ ಸಂಘದ ಸದಸ್ಯರು ಮತ್ತು ಕೆಲವು ಸ್ನೇಹಿತರು ತಮ್ಮ ಕೈಲಾದಷ್ಟು ಧನಸಹಾಯ ಮಾಡಿದ್ದಾರೆ. ಅವರುಗಳೆಂದರೆ – ಶ್ರೀಯುತರುಗಳಾದ ಡಾ. ಕೆ.ಎಸ್. ಕೃಷ್ಣಾರೆಡ್ಡಿ, ಅ.ತಿ. ರಂಗನಾಥ್, ಎನ್. ಕೃಷ್ಣಪ್ಪ, ಕೆ.ಎಸ್.ಪಿ.ಎಸ್.(ನಿ.) ಪ್ರಶಾಂತ್ ಜಯಪ್ರಕಾಶ್, ಜೆ.ವಿ. ಈರಣ್ಣ, ಶ್ರೀರಾಮರೆಡ್ಡಿ, ಐ.ಎ.ಎಸ್.(ನಿ.), ಎಂ. ಸತೀಶ್, ಹೆಚ್.ಟಿ. ಕೃಷ್ಣಪ್ಪ, ಕೆ.ಎಸ್.ಪಿ.ಎಸ್. (ನಿ.), ಎನ್.ಸಿ. ಪುಟ್ಟರಾಮು, ಪಿ. ಕೆಂಪಣ್ಣ, ಡಿ.ಎನ್. ನವೀನ್, ಪಿ. ಗೋವಿಂದರಾಜು, ಅಶ್ವತ್ಥ್ ನಾರಾಯಣಗೌಡ, ಗಿರೀಶ್ ಎನ್., ಚಂದ್ರಶೇಖರ್ ಸಿ., ರಘುನಾಥರೆಡ್ಡಿ, ಬಿ.ವಿ. ಭೈರಾರೆಡ್ಡಿ, ಡಾ॥ ಎನ್.ಪಿ. ಪ್ರಮೋದ್, ರಾಘವೇಂದ್ರ, ಎಂ. ಕೃಷ್ಣಯ್ಯ, ಕೆ. ಕೃಷ್ಣಮೂರ್ತಿ, ಚನ್ನಳ್ಳಿ ರಾಜಣ್ಣ, ಎಲ್. ರಮೇಶ್, ಶ್ರೀಮತಿ ಹೆಚ್.ಎಸ್. ಅಶ್ವತಮ್ಮ ಹಾಗೂ ಇತರರು.

ಇತ್ತೀಚಿನ ದಿನಗಳಲ್ಲಿ ಒಕ್ಕಲಿಗರು ಮತ್ತು ಒಕ್ಕಲಿಗರ ಒಳಪಂಗಡಗಳ ವಿಚಾರಕ್ಕೆ ಬಂದಾಗ ಒಕ್ಕಲಿಗರಲ್ಲಿ 120 ಪಂಗಡಗಳಿವೆ 160 ಉಪಪಂಗಡಗಳಿವೆ.

ಹೀಗೆ ತಮ್ಮ ಮನಸ್ಸಿಗೆ ತೋಚಿದನ್ನು ಹೇಳುತ್ತಾರೆ. ಇಷ್ಟೇ ಅಲ್ಲದೆ ಫೇಸ್‌ಬುಕ್‌ಗಳಲ್ಲಿ ಹರಿದಾಡುತ್ತಿರುತ್ತದೆ. ಇವರ್‍ಯಾರು ಒಕ್ಕಲಿಗ ಜನಾಂಗದ ಬಗ್ಗೆ ಚನ್ನಾಗಿ ತಿಳಿದುಕೊಂಡವರಲ್ಲ. ವಾಸ್ತವವಾಗಿ ಹೇಳಬೇಕೆಂದರೆ 'ಕುಲಶಾಸ್ತ್ರ' ಅಧ್ಯಯನ ಮಾಡಬೇಕು. ಇಷ್ಟೇ ಅಲ್ಲದೆ ಕ್ಷೇತ್ರ ಕಾರ್ಯ ಮಾಡಿ ತಿಳಿದುಕೊಂಡಿರಬೇಕು. ತಪ್ಪು ಮಾಹಿತಿ ನೀಡಬಾರದು ಎಂಬುದು ನನ್ನ ಅನಿಸಿಕೆ.

ಈ ಗ್ರಂಥವು 100 ಪುಟಗಳು ಸೇರಿ ಪರಿಷ್ಕೃತಗೊಳ್ಳಲು ಹಾಗೂ ಪರಿಪಕ್ವಗೊಳ್ಳಲು ನಮ್ಮ ರಾಜ್ಯದ ನಾನಾ ಭಾಗಗಳ ಜನಾಂಗದ ಅಭಿಮಾನಿಗಳು ಕುಲಬಾಂಧವರು ನನ್ನ ನೆರವಿಗೆ ಬಂದರು. ಅವರುಗಳನ್ನು ನೆನೆಯುವುದು ನನ್ನ ಕರ್ತವ್ಯ ಅವರುಗಳೆಂದರೆ – ಮಡಿ ಒಕ್ಕಲಿಗರ ಬಗ್ಗೆ ಮಾಹಿತಿ ನೀಡಿದ ಶ್ರೀಯುತರುಗಳಾದ ಹಾಸನ ಜಿಲ್ಲೆ ಸಕಲೇಶಪುರದ ಮಾಜಿ ಶಾಸಕರೂ ಹಾಗೂ ರೈತ ಸಂಘದ ಧುರೀಣರಾದ ಹೆಚ್.ಎಂ. ವಿಶ್ವನಾಥ್, ಮಂಜುನಾಥ್ ಬಿದರಹಳ್ಳಿ, ಅಣ್ಣೇಗೌಡರು ಮಾವಿನಹಳ್ಳಿ, ಗಿರೀಶ್ ಕೆ.ಎ.ಎಸ್. ಅಧಿಕಾರಿಗಳು, ನ್ಯಾಯವಾದಿಗಳಾದ ಡಿ.ಕೆ. ಪ್ರಸನ್ನ ಮೂಡಿಗೆರೆ, ಮಯೂರ್ ಹಾಲೂರ್ ಹಾಗೂ ಭೂಪಾಲ್ ಮಲಸಾವರ, ಶಿವಮೊಗ್ಗ ಜಿಲ್ಲೆ ಸಾಗರದ ಮಹಾಬಲ, ತಿಮ್ಮಪ್ಪಗೌಡ, ಮನುದೇವ ದೇವಂಗಿ, ಸೊರಬದ ರಂಗನಾಥಗೌಡ, ಮೈಸೂರಿನ ನೇಗಿಲಯೋಗಿ ಬಳಗದ ರವಿಕುಮಾರ್, ಡಾ. ಬಿ.ಎನ್. ರವೀಶ್, ಎಂ.ಎನ್. ಚಂದ್ರಶೇಖರ್ ನ್ಯಾಯವಾದಿಗಳು, ಕೆ.ಬಿ. ಲಿಂಗರಾಜ್, ಡಾ. ಇ.ಸಿ. ನಿಂಗರಾಜ್‌ಗೌಡ, ಡಾ॥ ಎಸ್.ಪಿ. ಯೋಗಣ್ಣ, ಎನ್. ಬೆಟ್ಟೇಗೌಡ ಇವರೇ ಮುಂತಾದವರು. ಕೋಲಾರ ಭಾಗದ ಒಕ್ಕಲಿಗರ ಅಭಿವೃದ್ಧಿ ನಿಗಮ ಫೌಂಡೇಷನ್ ಮತ್ತು ಮುಳಬಾಗಿಲು ತಾಲ್ಲೂಕು ಒಕ್ಕಲಿಗರ ಸಂಘ (ರಿ.)ನ ಕಾರ್ಯಕರ್ತರಾದ ರೋಹನ್ ಕುಮಾರ್ ಕೆ., ನಾಗೇಶ್ ಎಂ.ಎನ್. ಮಿಟ್ಟೂರು, ವಿ. ಸದಾಶಿವರೆಡ್ಡಿ ದಿಂಬಲ ಶ್ರೀನಿವಾಸಪುರ, ನಾಗರಾಜಗೌಡ ಗಜಾನನ ಟೆಲಿ ಸಿಸ್ಟಮ್ಸ್, ಅಪ್ಪಾಜಿಗೌಡ ಎ.ಎಂ. ಅಗ್ರಹಾರ, ಹೊಸಕೋಟೆಯ ಲಕ್ಷ್ಮಣಗೌಡ, ಡಾ. ಶ್ರೀರಾಮಪ್ಪ ವರೇ ಮುಂತಾದವರುಗಳನ್ನು ನಾನು ನೆನೆಯಬೇಕು.

ಬೆಂಗಳೂರು **ಪ್ರೊ॥ ಡಾ. ಬಿ. ಪಾಂಡುಕುಮಾರ್**

[illegible]

[illegible]

1600 ವರ್ಷಗಳ ಒಕ್ಕಲಿಗರ ಇತಿಹಾಸದ ಒಳನೋಟಗಳು

ಲೇಖಕನಿಗೆ ಭೈರವೇಶ್ವರನು ಸಕಲ
ಸನ್ಮಂಗಳವನ್ನುಂಟು ಮಾಡಲಿ



ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ

ಪದ್ಮಭೂಷಣ ಡಾ॥ ಬಾಲಗಂಗಾಧರನಾಥ ಸ್ವಾಮೀಜಿ

ಲೇಖಕನಿಗೆ ಭೈರವೇಶ್ವರನು ಸಕಲ
ಸನ್ಮಂಗಳವನ್ನುಂಟು ಮಾಡಲಿ



ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ

ಡಾ|| ನಿರ್ಮಲಾನಂದನಾಥ ಮಹಾಸ್ವಾಮಿಗಳವರು

ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ಲೇಖಕನಿಗೆ ಭಗವಂತನು
ಸಕಲ ಸನ್ಮಂಗಳನ್ನುಂಟು ಮಾಡಲಿ



ಶ್ರೀಶ್ರೀಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ

ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠ
ಶ್ರೀಕ್ಷೇತ್ರ ಗುರುಜ್ಞಾನ ಕೇಂದ್ರ, ಮೈಸೂರು ರಸ್ತೆ, ಬೆಂಗಳೂರು

ಲೇಖಕನಿಗೆ ಭಗವಂತನು
ಸಕಲ ಸನ್ಮಂಗಳನ್ನುಂಟು ಮಾಡಲಿ



ಶ್ರೀಶ್ರೀ ನಂಜಾವದೂತ ಸ್ವಾಮೀಜಿ
ಶ್ರೀಕ್ಷೇತ್ರ ಪಟ್ಟನಾಯಕನಹಳ್ಳಿ, ಸಿರ, ತುಮಕೂರು ಜಿಲ್ಲೆ

ಅರ್ಪಣೆ

ಮಾತೃದೇವೋಭವ ಪಿತೃದೇವೋಭವ



ಶ್ರೀ ಸಿ. ಅಪ್ಪಾಜಿಗೌಡ



ಶ್ರೀಮತಿ ಎಸ್.ಕೆ. ಗೌರಮ್ಮ

ಈ ಗ್ರಂಥವು ನಿಮ್ಮೆಲ್ಲರ ಸಹಕಾರದಿಂದ ಹೊರಬರಲು ಕಾರಣವಾದುದಕ್ಕೆ ನಮ್ಮ ಧನ್ಯವಾದಗಳು




ಸಾಹಿತಿ ಡಾ॥ ಬಿ. ಪಾಂಡುಕುಮಾರ್, ಶ್ರೀಮತಿ ಎಸ್.ಡಿ. ವೇದಾವತಿ
ಶ್ರೀಮತಿ ಅರ್ಪಿತ, ಸೊಸೆ, ಶ್ರೀ ಯಶಸ್ ಮತ್ತು ಚಿ॥ ಶ್ರೇಯಸ್



1600ವರ್ಷಗಳ ಒಕ್ಕಲಿಗರ ಇತಿಹಾಸ ಗ್ರಂಥ ಲೋಕಾರ್ಪಣ ಸಮಾರಂಭ
ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದ ಶ್ರೀ ಎಸ್.ಎಂ. ಕೃಷ್ಣರವರಿಂದ 2007



ಗ್ರಂಥ ಬಿಡುಗಡೆ





ಗ್ರಂಥಲೋಕಾರ್ಪಣೆ



ದಂಪತಿಗಳಿಗೆ ಸನ್ಮಾನ






ಡಾ. ಹೇಮಚಂದ್ರಸಾಗರ ರವರಿಗೆ ಗೌರವಾರ್ಪಣೆ



ದೆಹಲಿಯ ಕರ್ನಾಟ ಸಂಘದಲ್ಲಿ ಕೆಂಪೇಗೌಡರ 500ನೇ ವರ್ಷಾಚರಣೆಯ
ಸಂದರ್ಭದಲ್ಲಿ ಡಾ॥ ಪಾಂಡುಕುಮಾರ್‌ರವರ ನಾಡಪ್ರಭು ಕೆಂಪೇಗೌಡರ ಕೃತಿ ಬಿಡುಗಡೆ - 2012





ಯು.ಜಿ.ಸಿ. ಪ್ರಾಯೋಜಿತ ಪ್ರಾಜೇಕ್ಟ್ ಲೋಕಾರ್ಪಣೆ
ವಿವೇಕಾನಂದ ಕಾಲೇಜಿನಲ್ಲಿ - 2005



ಫೇಸಸ್ ಆಫ್ ಹರ್ಬ್‌ನೈಸೇಶನ್ ಕೃತಿ ಬಿಡುಗಡೆ
ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿಗಳಾದ ಪ್ರೊ. ತಿಮ್ಮೇಗೌಡರವರಿಂದ





ಡಾ|| ಬಿ. ಪಾಂಡುಕುಮಾರ್ 'ಕರ್ನಾಟಕದ ರತ್ನಗಳು' ಗ್ರಂಥ ಲೋಕಾರ್ಪಣ ಮತ್ತು ಅಭಿನಂದನಾ ಸಮಾರಂಭ ಡಾ. ಎಂ. ಚಿದಾನಂದ ಮೂರ್ತಿರವರಿಂದ



ಕರ್ನಾಟಕ ರತ್ನಗಳು ಗ್ರಂಥ ಬಿಡುಗಡೆ ಸಮಾರಂಭ



ಸಾಹಿತಿ ಡಾ. ಪಾಂಡುಕುಮಾರ್ ದಂಪತಿಗಳಿಗೆ ಸನ್ಮಾನ



ಲೇಖಕರಿಗೆ ಸನ್ಮಾನ

ವಿದ್ಯಾರ್ಥಿಗಳ ಮತ್ತು ಬಂದು ಬಾಂಧವರಿಂದ ಡಾ॥ ಪಾಂಡುಕುಮಾರ್ ರವರ 60ನೇ ವರ್ಷದ ಹುಟ್ಟಹಬ್ಬ ಆಚರಣೆಯ ಚಿತ್ರಗಳು







ಡಾ॥ ಪಾಂಡುಕುಮಾರ್ ರವರಿಗೆ ನಾಡಪ್ರಭು ಕೆಂಪೇಗೌಡ
ಪ್ರಶಸ್ತಿ ಪ್ರದಾನ ಮಾಡಿದಾಗಿನ ಚಿತ್ರ



ದುಬೈನಲ್ಲಿ ನಡೆದ ಕೆಂಪೇಗೌಡ ಜಯಂತ್ಯೋತ್ಸವದಲ್ಲಿ ಡಾ॥ ಪಾಂಡುಕುಮಾರ್ ರವರ
ಮಣ್ಣಿನ ದೀಪಗಳು ಗ್ರಂಥ ಲೋಕಾರ್ಪಣೆ





ಒಕ್ಕಲಿಗರ ಪತ್ರಿಕೆಯ ನೂರಹತ್ತನೆಯ ವರ್ಷದ ಸಮಾರಂಭ



510ನೇ ವರ್ಷದ ಕೆಂಪೇಗೌಡ ಜಯಂತ್ಯೋತ್ಸವದ ಅಂಗವಾಗಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಲೇಖಕರಾದ ಡಾ. ಪಾಂಡುಕುಮಾರ್ ಅವರು ಮುಖ್ಯಭಾಷಣಕಾರರಾಗಿ





ದಿನಾಂಕ 05/09/2021ರಂದು ಒಕ್ಕಲಿಗರ ಈ ಬುಕ್ಸ್ ಡಾಟ್ ಕಾಂ. ಅಂತರಜಾಲ ಲೋಕಾರ್ಪಣೆ ಸಮಾರಂಭದಲ್ಲಿ ಶ್ರೀಗಳು ಆಶೀರ್ವಚನ ನೀಡುತ್ತಿರುವುದು.



ಮೈಸೂರಿನ ನೇಗಿಲಯೋಗಿ ಸಂಘದ ವತಿಯಿಂದ 2021ರಲ್ಲಿ "ಒಕ್ಕಲಿಗರ ಸಂಘದ ಇತಿಹಾಸ" ಪರಿಷ್ಕೃತ ಪುಸ್ತಕ ಬಿಡುಗಡೆ ಸಮಾರಂಭ






ಒಕ್ಕಲಿಗರ ಈ ಬುಕ್ಸ್ ಲೋಕಾರ್ಪಣ ಸಮಾರಂಭದಲ್ಲಿ ಬಂಧು ಬಾಂಧವರೊಂದಿಗೆ



ತಮಿಳುನಾಡು ರಜಧಾನಿ ಚನ್ನೈದಲ್ಲಿ 'ಜೀವಮಾನ ಸಾಧಕ' ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು
ಅಧ್ಯಕ್ಷತೆ ಪ್ರೊ. ಎಂ.ಕೆ. ಸೂರಪ್ಪ, ಕುಲಪತಿಗಳು, ಅಣ್ಣಾ ವಿಶ್ವವಿದ್ಯಾಲಯ, ಚನ್ನೈ
ಶ್ರೀ ಪಳನಿಸ್ವಾಮಿ ಶಿಕ್ಷಣ ಸಚಿವರು ತಮಿಳುನಾಡು ಮುಖ್ಯ ಅತಿಥಿಗಳು.



ಪೀಠಿಕೆ

ಪ್ರಾಚೀನ ಕಾಲದಿಂದಲೂ ನಮ್ಮ ರಾಷ್ಟ್ರವು ಹಲವಾರು ಧರ್ಮ, ಜಾತಿ, ಭಾಷೆಗಳ ತವರೂರು. ಇಲ್ಲಿ ವಿವಿಧತೆಯಲ್ಲಿ ಏಕತೆಯನ್ನು ಕಾಣಬಹುದು. ಹಿಂದೊಮ್ಮೆ ತಲೆ ಎತ್ತಿದ ಹಾಗೂ ಬಿತ್ತಿದ ಜಾತಿ ಎಂಬ ವಿಷ ಬೀಜವು ಇಂದು ಹೆಮ್ಮರವಾಗಿದೆ. ಇಂದು ಜಾತಿ, ಉಪಜಾತಿಗಳಾಗಿ ಮೇಲು ಕೀಳೆಂಬ ಭಾವನೆ, ತಾರತಮ್ಯಗಳು ತಾರಕಕ್ಕೇರಿದೆ. ನಿರಕ್ಷರ ಕುಕ್ಷಿಗಳಿಗಿಂತಲೂ ವಿದ್ಯಾವಂತರು ಜಾತಿಯ ವಿಷ ವರ್ತುಲಕ್ಕೆ ಸಿಲುಕಿದ್ದಾರೆ. ಸಣ್ಣ ಗ್ರಾಮಗಳಿಂದ ಹಿಡಿದು ನಗರಗಳ ಪ್ರತಿ ಬಡಾವಣೆಗಳಲ್ಲೂ ಜಾತಿ ಸಂಘಗಳು ತಲೆ ಎತ್ತಿವೆ. ಈ ರೀತಿಯ ಜಾತಿ ಇಲ್ಲವೆ ಸಮುದಾಯದ ಸಂಘ ಸಂಸ್ಥೆಗಳು ಆ ಕ್ಷಣಕ್ಕೆ ಪರಿಹಾರವನ್ನು ಮತ್ತು ಮನರಂಜನೆಯನ್ನು ನೀಡುತ್ತವೆಯಾದರೂ ಮುಂದಿನ ಪೀಳಿಗೆಗೆ ಇದು ಶಾಪವಾಗಿ ಪರಿಣಮಿಸುತ್ತದೆ. ಜಗತ್ತಿನ ಯಾವ ರಾಷ್ಟ್ರದಲ್ಲೂ ಭಾರತದಲ್ಲಿರುವಂತಹ ಜಾತಿ ಪದ್ಧತಿ, ಸಾಮಾಜಿಕ ರೋಗ ರುಜಿನಗಳು ಕಾಣಬರುವುದಿಲ್ಲ. ಇಷ್ಟಾದರೂ ಒಂದು ಸಮುದಾಯ ಇಲ್ಲವೆ ಜನಾಂಗದ ಇತಿಹಾಸವನ್ನು ಬರೆಯಲು ಕಾರಣವೇನೆಂದರೆ ಒಕ್ಕಲಿಗರಲ್ಲಿರುವ ಒಳ್ಳೆಯ ಗುಣ, ಹಾಗೂ ಅವರ ಮೇಲೆ ಬೆಳಕು ಚೆಲ್ಲುವುದು ಹಾಗೂ ದೋಷಗಳನ್ನು ಸರಿಪಡಿಸಿಕೊಳ್ಳುವಂತೆ ಮಾಡುವುದು. ಸಮುದಾಯದ ಮೇರು ವ್ಯಕ್ತಿಗಳ ವ್ಯಕ್ತಿ ಚಿತ್ರಣವನ್ನು ಹೊರಗೆಡವಿ ನಾವೂ ಕೂಡ ಅವರಂತೆಯೇ ಸತ್ಪ್ರಜೆಗಳಾಗಬೇಕು ಎಂಬ ಸಂದೇಶ ಸಾರುವುದು. ನಮ್ಮಲ್ಲಿರುವ, ಇರಬಹುದಾದ ಕೀಳರಿಮೆಯನ್ನು ಓಡಿಸಿ ಶ್ರೇಷ್ಠತೆ ಹಾಗೂ ಜೇಷ್ಠತಾ ಭಾವನೆಯನ್ನು ಗಳಿಸಿ ಸಮಾಜದ ಮುಖ್ಯವಾಹಿನಿಗೆ ಸೇರುವಂತೆ ಮಾಡುವುದು. ಒಕ್ಕಲಿಗ ಜನಾಂಗದ ಇತಿಹಾಸ, ಸಂಸ್ಕೃತಿ, ಸಾಧನೆಗಳನ್ನು, ಗತವೈಭವವನ್ನು ಜನರ ತಿಳುವಳಿಕೆಗೆ ತಂದು ಜಾಗೃತರಾಗುವಂತೆ ಮಾಡುವುದು ಈ ಕೃತಿ ರಚನೆಯ ಉದ್ದೇಶ ಮತ್ತು ಆಶಯವೂ ಆಗಿದೆ.

ಕೃಷಿಕರಾಗಿದ್ದ ಒಕ್ಕಲಿಗರು ದೇಶದ ಮೂಲ ನಿವಾಸಿಗಳು ಎಂತಲೂ, ಇವರು ದ್ರಾವಿಡ ಮೂಲದವರೆಂದೂ, ಆರ್ಯರ ಆಕ್ರಮಣದಿಂದ ಇವರು ದಕ್ಷಿಣಕ್ಕೆ

ತಳ್ಳಲ್ಪಟ್ಟರೆಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ನವಶಿಲಾಯುಗ, ತಾಮ್ರಶಿಲಾಯುಗಗಳಲ್ಲಿ ಭಾರತದಲ್ಲಿ ಕೃಷಿ ಮತ್ತು ಪಶುಪಾಲನೆ ಜೊತೆ ಜೊತೆಯಾಗಿ ಬೆಳೆಯತೊಡಗಿತು. ವೇದ ಮತ್ತು ವೇದೋತ್ತರ ಕಾಲದಿಂದಲೂ ಕೃಷಿ ಮತ್ತು ಪಶುಪಾಲನೆಯಲ್ಲಿ ತೊಡಗಿದ್ದ ಜನಾಂಗಗಳ ಬಗ್ಗೆ ಮಾಹಿತಿಗಳು ಸಿಗುತ್ತವೆ. ಇನ್ನು ಬೃಹತ್ ಶಿಲಾಯುಗದಲ್ಲಿ ಕಬ್ಬಿಣದ ಬಳಕೆಯೊಂದಿಗೆ ಕೃಷಿ ಹೊಸ ತಿರುವನ್ನು ಪಡೆದುಕೊಂಡಿತು. ಕೃಷಿ ಅವಲಂಬನೆ ಹೆಚ್ಚಾಯಿತು. ಅಲ್ಲಿಂದ ಭಾರತದಲ್ಲಿ ಹೆಚ್ಚಾಗಿ ಕೃಷಿ ಚಟುವಟಿಕೆಗಳು ಉತ್ತರ ಭಾರತ ಹಾಗೂ ದಕ್ಷಿಣದ ನದಿಪ್ರದೇಶಗಳಲ್ಲಿ ಹುಟ್ಟಿಕೊಂಡವು. ಕೃಷಿ ಮತ್ತು ಕೃಷಿ ಅವಲಂಬಿಸಿ ಬದುಕು ಆರಂಭಗೊಂಡು ಕಾಲಾನಂತರ ವ್ಯವಸಾಯವನ್ನೇ ಕಸುಬು ಮಾಡಿಕೊಂಡ ಜನವರ್ಗ ಹುಟ್ಟಿಕೊಂಡಿತು.

ಕೃಷಿ ಬೆಳವಣಿಗೆಯೊಂದಿಗೆ ಒಕ್ಕಲುತನ ಹುಟ್ಟಿಕೊಂಡಿತು. ಮುಂದೆ ಅದೊಂದು ಜಾತಿ ವ್ಯವಸ್ಥೆಯಾಗಿ ಮಾರ್ಪಾಡು ಹೊಂದಿತು.

ಹೀಗೆ ಕಸುಬು ಆಧಾರಿತ ಜನರು ಗ್ರಾಮಗಳನ್ನು, ಸೀಮೆಗಳನ್ನು ಹಾಗೂ ನಗರಗಳನ್ನು ನಿರ್ಮಿಸಿಕೊಳ್ಳತೊಡಗಿದರು. ತೋಳ್ಬಲ ಉಳ್ಳವರು ಗೋಗ್ರಹಣ, ಭೂಗ್ರಹಣ ಮಾಡತೊಡಗಿದರು. ಸೈನ್ಯವನ್ನು ಕಟ್ಟಿ ಸುತ್ತಮುತ್ತಲ ಪ್ರದೇಶಗಳನ್ನು ಆಕ್ರಮಿಸಿಕೊಂಡು ತಮ್ಮದೇ ಆದ ಪಾಳೆಯಪಟ್ಟನ್ನು ಕಟ್ಟಿಕೊಂಡರು. ಕ್ರಮೇಣವಾಗಿ ರಾಜ್ಯ, ಸಾಮ್ರಾಜ್ಯವನ್ನು ನಿರ್ಮಿಸಿಕೊಂಡು ರಾಜ, ಮಹಾರಾಜ, ರಾಜಾಧಿರಾಜ ಇವೇ ಮುಂತಾದ ಬಿರುದು, ಬಾವಲಿಗಳನ್ನು ಪಡೆದುಕೊಂಡರು. ಮುಂದೆ ರಾಜತ್ವ ವಂಶಪಾರಂಪರ್ಯವಾಗಿ ಸಾಗುತ್ತಾ ಬಂದಿತು ಹಾಗೂ ರಾಜತ್ವ ಅಮರವಾಯಿತು. ಹೀಗೆ ತಮ್ಮ ತೋಳ್ಬಲದಿಂದ ರಾಜ್ಯ ಕಟ್ಟಿ ಆಳ್ವಿಕೆ ಪ್ರಾರಂಭಿಸಿದ ರಾಜವಂಶಸ್ಥರು ತಮ್ಮ ಪೂರ್ವಾಶ್ರಮವನ್ನು ಮರೆಮಾಚಲು ತಾವು ಸೂರ್ಯವಂಶಸ್ಥರು, ಚಂದ್ರವಂಶಸ್ಥರು, ಇಕ್ಷ್ವಾಕು ವಂಶಸ್ಥರು ಎಂತಲೂ, ತಮ್ಮ ಪೂರ್ವಿಕರು ಉತ್ತರ ಭಾರತದ ಗಂಗೆಯ ತಟದಿಂದ ಇಲ್ಲವೇ ಬಂಗಾಳದಿಂದ ಬಂದವರೆಂದು ತಮ್ಮ ಶಾಸನಗಳಲ್ಲಿ ಹೇಳಿಕೊಂಡಿರುವುದನ್ನು ನೋಡಬಹುದು. ರಾಜವಂಶಸ್ಥರು ರಾಜ್ಯ ವಿಸ್ತರಿಸಲು ಇಲ್ಲವೇ ರಾಜ್ಯ ಉಳಿಸಿಕೊಳ್ಳಲು ನೆರೆಹೊರೆಯ ರಾಜವಂಶಸ್ಥ–ರೊಂದಿಗೆ ವೈವಾಹಿಕ ಬಾಂಧವ್ಯವನ್ನು ಏರ್ಪಡಿಸಿಕೊಳ್ಳುತ್ತಿದ್ದರು. ಉದಾಹರಣೆ: ಗಂಗರು ಇತರೆ ರಾಜಮನೆತನಗಳಾದ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರೊಂದಿಗೆ ಇಂತಹ ಸಂಬಂಧವನ್ನಿರಿಸಿಕೊಂಡಿದ್ದರು.

ನಮ್ಮ ರಾಜ್ಯವನ್ನಾಳಿದ ಬಹುತೇಕ ರಾಜವಂಶಸ್ಥರೆಲ್ಲ ಬ್ರಾಹ್ಮಣೇತರರು. ಅದರಲ್ಲೂ ವಿಶೇಷವಾಗಿ ಒಕ್ಕಲಿಗರು ಎಂದರೆ ತಪ್ಪಾಗಲಾರದು. ವೇದಗಳ ಕಾಲದಲ್ಲಿ ಕ್ಷತ್ರಿಯ ಎಂಬ ಪ್ರತ್ಯೇಕ ವರ್ಗವಿರಲಿಲ್ಲ. ವ್ಯವಸಾಯ ಮತ್ತು ಪಶುಸಂಗೋಪನೆ–

ಯಂತಹ ಕಷ್ಟಕರವಾದ ವೃತ್ತಿಯನ್ನು ಇವರು ಆರಿಸಿಕೊಂಡುದರ ಪರಿಣಾಮವಾಗಿ ಒರಟು ಹಾಗೂ ದಾಷ್ಟಿಕ ಸ್ವಭಾವಗಳು ಇವರ ರಕ್ತದೊಂದಿಗೆ ಬಂದ ಗುಣ ಎನ್ನಬಹುದು. ಕಾಲಚಕ್ರಕ್ಕೆ ಸಿಲುಕಿದ ಇವರು ರಾಜ್ಯಕೋಶವನ್ನು ಕಳೆದುಕೊಂಡು ತಮ್ಮ ವೃತ್ತಿಯಾದ ವ್ಯವಸಾಯಕ್ಕೆ ಅಂಟಿಕೊಂಡರು. ಗೇಣುಭೂಮಿಗಾಗಿ ತಮ್ಮ ಸರ್ವಸ್ವವನ್ನು ಬಲಿಕೊಟ್ಟು ಬರಿದು ಮಾಡಿಕೊಂಡ ಉದಾಹರಣೆಗಳು ಹೇರಳವಾಗಿದೆ. ಭೂಗ್ರಹಣ, ಭೂವಿಸ್ತರಣೆ ಇವರ ಹವ್ಯಾಸಗಳಲ್ಲಿ ಅತಿಮುಖ್ಯ-ವಾದುದು. ಸಾಕಷ್ಟು ಆಳು ಕಾಳುಗಳಿಂದ ತುಂಬಿದ್ದ ಊರಿನ ಜಮೀನ್ದಾರನೇ 'ಗೌಡ' ಅಥವಾ 'ಪಟೇಲ'. ಒಮ್ಮೆ ಆ ಗೌಡನ ಮನೆ ಊರಿನ ಅನ್ನಸತ್ರವಾಗಿ, ನ್ಯಾಯಾಲಯವಾಗಿ, ದೀನದಲಿತರ ಆಶ್ರಯ ತಾಣವಾಗಿ, ದಾನಧರ್ಮಗಳ ನೆಲೆಯಾಗಿ, ಅತಿಥಿ ಅಭ್ಯಾಗತರ ತಾಣವಾಗಿ, ಸತ್ಕಾರ್ಯಗಳ ಕೇಂದ್ರವಾಗಿ, ಊರೊಟ್ಟಿನ ಪಡಸಾಲೆಯಾಗಿದ್ದದ್ದು ಈಗ ಇತಿಹಾಸವಾಗಿದೆ. ಊರಗೌಡ ಆ ಊರಿನ ಯಜಮಾನ, ಪ್ರತಿನಿಧಿ, ರಾಯಭಾರಿ ಅಷ್ಟೇ ಅಲ್ಲ ಸ್ಥಳೀಯ ರಾಜನಿದ್ದಂತೆ. (ಈಗ ಊರಿನಲ್ಲಿರುವವರೆಲ್ಲಾ ಗೌಡರು, ಪಟೇಲರೇ – ಆದರೆ ಮೇಲ್ಕಂಡ ಗುಣಗಳು ಮಾತ್ರ ಇಲ್ಲ.)

ಒಕ್ಕಲಿಗರು ಮೂಲತಃ ಶೈವಧರ್ಮೀಯರಾದರೂ ಕಾಲಕಾಲಕ್ಕೆ ಆಯಾ ಧರ್ಮ, ಮತ, ಪಂಥಗಳು ಪ್ರಬಲವಾದಂತೆಲ್ಲಾ ಆಯಾ ಮತಧರ್ಮಗಳನ್ನು ಅನುಸರಿಸಿಯೋ, ಅವಲಂಬಿಸಿಯೋ, ಉದರಿಸಿಯೋ, ಪೋಷಿಸಿದ್ದುಂಟು. ಅನ್ಯ ಮತ ಸಹಿಷ್ಣುತೆ ಒಕ್ಕಲಿಗರ ರಕ್ತದ ಗುಣ (ಮುಂದೆ ಸವಿವರವಾಗಿ ಹೇಳಿದೆ). ಉದಾ: ಹೊಯ್ಸಳರ ಬಿಟ್ಟಿದೇವ ರಾಮಾನುಜಾಚಾರ್ಯರಿಂದ ಪ್ರಭಾವಿತನಾಗಿ ವೈಷ್ಣವ ಧರ್ಮವನ್ನು ಸ್ವೀಕರಿಸಿದರೂ ತನ್ನ ಪತ್ನಿಯಾದ ಶಾಂತಲಾದೇವಿಯನ್ನು ವೈಷ್ಣವ ಧರ್ಮ ಸೇರಲು ಒತ್ತಾಯಿಸಲಿಲ್ಲ. ಆಕೆ ತನ್ನ ಉಸಿರಿರುವ ತನಕ ಜೈನಧರ್ಮೀಯಳಾಗಿಯೇ ಮುಂದುವರೆದಳು.

ಒಕ್ಕಲಿಗರು ಆದಿಚುಂಚನಗಿರಿ ಮಠ, ಕದ್ರಿಮಠ, ಪಟ್ಟಣಯಕನಹಳ್ಳಿ ಮಠ ಇನ್ನೂ ಮುಂತಾದ ಮಠಗಳಿಗೆ ನಡೆದುಕೊಳ್ಳುವುದನ್ನು ನಾವು ಕಾಣಬಹುದು. ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಬಸವಣ್ಣನವರು ವೀರಶೈವ ಧರ್ಮವನ್ನು ಪುನಶ್ಚೇತನಗೊಳಿಸಲಾಗಿ ಅಲ್ಲಿದ್ದ ಸಾಕಷ್ಟು ಜನ ಒಕ್ಕಲಿಗರು ಆ ಜಾತಿ ಇಲ್ಲವೆ ಧರ್ಮಕ್ಕೆ ಸೇರಿದರು. ತುಮಕೂರು ಸುತ್ತಮುತ್ತಲಿನ ಪ್ರದೇಶದಲ್ಲಿ ಕುಂಚಟಿಗರು, ಸಾದರು, ಸರ್ಪ ಒಕ್ಕಲಿಗರು ಹೆಚ್ಚಿನ ಪ್ರಮಾಣದಲ್ಲಿ ಮತಾಂತರ ಹೊಂದಿದರು. ಈ ಜನರು ಈಗ ತಮ್ಮ ಮೂಲವನ್ನೇ ಸಂಪೂರ್ಣವಾಗಿ ಮರೆತಂತಿದೆ. ಇಂದಿಗೂ ಗೌಡಮನೆ ಲಿಂಗಾಯಿತರು, ಸಾದ ಲಿಂಗಾಯಿತರು ಇತ್ಯಾದಿಯಾಗಿ ಕರೆಯುವುದನ್ನು

ಕಾಣಬಹುದು. ಅಷ್ಟೇ ಏಕೆ ಬೆಂಗಳೂರು ಕೆಂಪೇಗೌಡನ ನಂತರ ಆತನ ಕೆಲವು ವಂಶೀಕರು ಲಿಂಗಾಯಿತರಾಗಿ ಮತಾಂತರ ಹೊಂದಿದ ಉದಾಹರಣೆ ಇದೆ.

'ಒಕ್ಕಲಿಗರ ಇತಿಹಾಸ'ವೆಂಬ ಈ ಕೃತಿಯು 10 ಅಧ್ಯಾಯಗಳನ್ನು ಹೊಂದಿದೆ. ಮೊದಲನೇ ಅಧ್ಯಾಯವಾದ **ಒಕ್ಕಲುತನ ಮತ್ತು ಒಕ್ಕಲಿಗರು** – ಈ ಅಧ್ಯಾಯದಲ್ಲಿ ವಿಶ್ವದಲ್ಲಿ ಒಕ್ಕಲುತನ ಪ್ರಾರಂಭವಾದ ಬಗ್ಗೆ, ಅದೇ ರೀತಿ ಭಾರತದಲ್ಲಿ ಕರ್ನಾಟಕದಲ್ಲಿನ ಕೃಷಿ ಚಟುವಟಿಕೆಗಳನ್ನು ವಿವರಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ 'ಒಕ್ಕಲಿಗ ರಾಜಮನೆತನಗಳ ಇತಿಹಾಸ ಮತ್ತು ಪರಂಪರೆ'ಯಲ್ಲಿ ಕ್ರಿ.ಶ. ನಾಲ್ಕನೇ ಶತಮಾನದಲ್ಲಿ ತಲೆ ಎತ್ತಿದ ಗಂಗರು, ಸುಮಾರು 10ನೇ ಶತಮಾನದ ತನಕ ಕರ್ನಾಟಕದ ಇತರೆ ರಾಜಮನೆತನಗಳೊಂದಿಗೆ ವೈವಾಹಿಕ ಬಾಂಧವ್ಯವನ್ನು ಇಟ್ಟುಕೊಂಡಿದ್ದರು. ಈ ಅಧ್ಯಾಯದಲ್ಲಿ ಯಲಹಂಕ ನಾಡಪ್ರಭು –ಗಳು, ಮಧುಗಿರಿ ಪಾಳೇಗಾರರು ಇನ್ನೂ ಮುಂತಾದವರು, ಇವರ ಸಾಧನೆಗಳನ್ನು ತಿಳಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ 1906ರಲ್ಲಿ ಸ್ಥಾಪನೆಯಾದ **'ಒಕ್ಕಲಿಗರ ಸಂಘ'**, ಈ ಸಂಘಕ್ಕಾಗಿ ದುಡಿದ ಗಣ್ಯವ್ಯಕ್ತಿಗಳು. ಸಂಘದ ಅಭಿವೃದ್ಧಿ ಮತ್ತು ಸಾಧನೆಗಳನ್ನು ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ 1907ರಲ್ಲಿ ಸ್ಥಾಪನೆಯಾದ **'ಒಕ್ಕಲಿಗರ ಪತ್ರಿಕೆ'**, ಆ ಪತ್ರಿಕೆಗಾಗಿ ದುಡಿದ ಹಿರಿಯ ಚೇತನಗಳು, ಪತ್ರಿಕೆಯು ಸಮುದಾಯದ ಮೇಲೆ ಬೀರಿದ ಪ್ರಭಾವ ಇವೇ ಮುಂತಾದವುಗಳನ್ನು ಗುರ್ತಿಸಲಾಗಿದೆ.

ಐದನೇ ಅಧ್ಯಾಯದಲ್ಲಿ **'ಬ್ರಾಹ್ಮಣೇತರ ಚಳವಳಿ'**ಗೆ ಕಾರಣವಾದ ಅಂಶಗಳು, ಹಿರೇಹಳ್ಳಿ ಚೆನ್ನಯ್ಯನವರ ಪಾತ್ರ, ಮಿಲ್ಲರ್ ಸಮಿತಿಯ ವರದಿ, ಹಿಂದುಳಿದ ವರ್ಗಗಳ ಆಯೋಗಗಳು, ಇವುಗಳು ಜನಾಂಗದ ಮೇಲೆ ಬೀರಿದ ಪ್ರಭಾವ ಇವೇ ಮುಂತಾದವುಗಳನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

ಆರನೇ ಅಧ್ಯಾಯದಲ್ಲಿ **'ಸ್ವಾತಂತ್ರ್ಯ ಹೋರಾಟದಲ್ಲಿ ಒಕ್ಕಲಿಗ ಜನಾಂಗದ ಪಾತ್ರ'**, ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಜನಾಂಗದ ಪ್ರತಿನಿಧಿಗಳ ಪಾತ್ರ, ಪ್ರಜಾಮಿತ್ರ ಮಂಡಳಿಯ ಸ್ಥಾಪನೆ, ಕಾಂಗ್ರೆಸ್ ಪಕ್ಷದ ಮುಂಚೂಣಿಯಲ್ಲಿ ಜನಾಂಗದ ಹಿರಿಯ ಚೇತನಗಳು ಹಾಗೂ ಅವರ ದೇಶಾಭಿಮಾನ ಇವೇ ಮುಂತಾದವುಗಳನ್ನು ವಿವರಿಸಲಾಗಿದೆ.

ಏಳನೇ ಅಧ್ಯಾಯದಲ್ಲಿ **'ಸ್ವಾತಂತ್ರ್ಯಾನಂತರ ರಾಜ್ಯ ರಾಜಕಾರಣದಲ್ಲಿ ಒಕ್ಕಲಿಗರು'** ಕೆ.ಸಿ.ರೆಡ್ಡಿ, ಕೆಂಗಲ್ ಹನುಮಂತಯ್ಯ, ಇನ್ನೂ ಮುಂತಾದ

ಮುಖ್ಯಮಂತ್ರಿಗಳು, ಪ್ರಧಾನಮಂತ್ರಿ ಪಟ್ಟಕ್ಕೆ ಏರಿದ ಹೆಚ್.ಡಿ.ದೇವೇಗೌಡರ ಬಗ್ಗೆ ವಿವರಿಸಲಾಗಿದೆ.

ಎಂಟನೇ ಅಧ್ಯಾಯದಲ್ಲಿ **'ಸಾಮಾಜಿಕ ಬದಲಾವಣೆಯಲ್ಲಿ ಜನಾಂಗದ ಪಾತ್ರ'**, ಒಕ್ಕಲಿಗರ ಸಮಾಜ, ಜನಾಂಗಕ್ಕೆ ಅನಿವಾರ್ಯವಾದ ಸಂಘಟನೆಗಳು, ಅದರಲ್ಲೂ ವಿಶೇಷವಾಗಿ ಗುರುಮಠಗಳು, ರೈತ ಸಂಘ ಮತ್ತು ಒಕ್ಕಲಿಗರ ಸಂಘದ ಪಾತ್ರವನ್ನು ಸವಿಸ್ತಾರವಾಗಿ ವಿವರಿಸಲಾಗಿದೆ.

ಒಂಭತ್ತನೇ ಅಧ್ಯಾಯದಲ್ಲಿ **'ನಾಡಿನ ಸಾಹಿತ್ಯ, ಕಲೆ, ಸಂಸ್ಕೃತಿಗೆ ಜನಾಂಗದ ಕೊಡುಗೆ'**, ಮೇರು ಸಾಹಿತಿಗಳಲ್ಲದೆ ಉದಯೋನ್ಮುಖ ಲೇಖಕರು, ಸಾಹಿತಿಗಳು, ಬರಹಗಾರರನ್ನು ಸಾಧ್ಯವಾದಷ್ಟರ ಮಟ್ಟಿಗೆ ಒಂದೆಡೆಗೆ ತರಲಾಗಿದೆ.

ಹತ್ತನೇ ಅಧ್ಯಾಯವು **'ಉಪಸಂಹಾರ'**ದಿಂದ ಕೂಡಿದೆ.

ಈ ಕೃತಿಯಲ್ಲಿ ಸಮುದಾಯದಲ್ಲಿರುವ ಕೊರತೆಗಳು, ಸಮಸ್ಯೆಗಳು, ಲೋಪದೋಷಗಳು, ಇವೇ ಮುಂತಾದವುಗಳನ್ನು ಚಿತ್ರಿಸಲಾಗಿದೆ ಹಾಗೂ ಇದರಲ್ಲಿ 50ಕ್ಕೂ ಹೆಚ್ಚು ಒಕ್ಕಲಿಗ ಜನಾಂಗದ ಮಹಾನ್ ಚೇತನಗಳ ವ್ಯಕ್ತಿ ಚಿತ್ರಣಗಳನ್ನು ನೀಡಲಾಗಿದೆ. ರಾಜ್ಯದ ಮೂಲೆ ಮೂಲೆಗಳಲ್ಲಿ ಹಾಗೂ ಹೊರ ರಾಜ್ಯಗಳಲ್ಲಿ ಸಂಚರಿಸಿ ನಮ್ಮ ಜನಾಂಗ ಮಾಡಿರುವ ಸಾಧನೆಗಳನ್ನು ಅಧ್ಯಯನ ಮಾಡಿ ತರಲು ಸಾಧ್ಯವಾಗಲಿಲ್ಲ. ಮುಂದಿನ ದಿನಗಳಲ್ಲಿ ಸಾಕಷ್ಟು ಪ್ರಯತ್ನಿಸುತ್ತೇನೆ. ಮುಂದಿನ ಪೀಳಿಗೆಗೆ ಇವರು ದಾರಿದೀಪವಾಗಲೆಂದು ಆಶಿಸುತ್ತೇನೆ.

□

ಒಕ್ಕಲುತನ ಮತ್ತು ಒಕ್ಕಲಿಗರು – ನೆಲೆ, ಹಿನ್ನೆಲೆ, ಇತಿಹಾಸ, ಐತಿಹ್ಯ ಇತ್ಯಾದಿ

ಒಕ್ಕಲಿಗರು ಕರ್ನಾಟಕದಲ್ಲಿ ಬಹುಸಂಖ್ಯಾತರಾಗಿ ಮೂಲತಃ ಕೃಷಿಯನ್ನೇ ಅವಲಂಬಿಸಿ ಬದುಕುತ್ತಿರುವ ಪ್ರಧಾನ ಜನಸಮುದಾಯಕ್ಕೆ ಸೇರಿದವರು. 'ಒಕ್ಕಲಿಗರು' ಎಂಬ ಪದದ ಅರ್ಥ 'ಬೇಸಾಯಗಾರರು' ಎಂದು. ಈ ಅರ್ಥವ್ಯಾಪ್ತಿಗೆ ಸೇರುವವರು ಈಗ ಆಯಾ ಸಾಮಾಜಿಕ ಮತ್ತು ಪ್ರಾದೇಶಿಕ ವರ್ಗಗಳಲ್ಲಿ ಸೇರಿ ಹೋಗಿದ್ದಾರೆ. ಒಕ್ಕಲಿಗರು ಎಂಬ ಶಬ್ದ ಮೊದಲು ವೃತ್ತಿವಾಚಕವಾಗಿ ಪ್ರಯೋಗವಾಗಿದೆ. ಕಾಲಾನುಕ್ರಮದಲ್ಲಿ ಜಾತಿವಾಚಕವಾಗಿಯೂ ಪ್ರಯೋಗವಾಗಿದೆ. ಒಕ್ಕಲಿಗರು ವೃತ್ತಿ ಮೂಲಕವೂ ಗುರ್ತಿಸಿಕೊಳ್ಳುವವರು ಎಂದಾದರೆ ಅದು ಬರಿಯ ಕಸುಬನ್ನು ಮಾತ್ರ ಪ್ರಮುಖವಾಗಿ ಬಿಂಬಿಸುವ ಸಾಧ್ಯತೆ ಇದೆ. ಇದನ್ನು ಜಾತಿವಾಚಕವಾಗಿ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬೇಕಾಗಿದೆ. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ನಿರ್ದಿಷ್ಟ ಜಾತಿಯೊಂದರ ಆಚಾರ, ವಿಚಾರ, ಸಂಪ್ರದಾಯಗಳು, ಸಾಂಸ್ಕೃತಿಕ ಚೌಕಟ್ಟಿಗೆ ಬರುತ್ತವೆ. ಇದನ್ನೇ ಮುಂದೆ ಜನಾಂಗ ಅಥವಾ ಸಮುದಾಯವೆಂದು ಕರೆಯಬಹುದು. ಈ ಹಿನ್ನೆಲೆಯಲ್ಲಿ 'ಒಕ್ಕಲಿಗ' ಶಬ್ದದ ನಿಷ್ಪತ್ತಿ, ಅರ್ಥ, ವ್ಯಾಪ್ತಿ ಮತ್ತು ವಿವಿಧ ಕಾಲಘಟ್ಟಗಳಲ್ಲಿ ಅದು ಪಡೆದುಕೊಂಡ ಅರ್ಥ, ಸ್ವರೂಪಗಳು ಇವೇ ಮುಂತಾದ ವಿಷಯಗಳನ್ನು ಚರ್ಚಿಸುವುದು ಅವಶ್ಯಕವಾಗಿದೆ.

ಒಕ್ಕಲು ಪದ 'ಒಕ್ಕು' ಧಾತುವಿನಿಂದ ಮೂಡಿದೆ ಎಂಬ ಅಭಿಪ್ರಾಯವಿದೆ. ಆದರೆ ಒಕ್ಕು ಮತ್ತು ಒಕ್ಕಲು ಎಂಬ ಪದಗಳು ಬೇರೆ ಬೇರೆ ಅರ್ಥವನ್ನು ಕೊಡುತ್ತವೆ. ಮೊದಲನೆಯದು ವ್ಯವಸಾಯಕ್ಕೆ ಸಂಬಂಧಿಸಿದ ಶಬ್ದವಾಗಿದೆ. ಎಂದರೆ ಭೂಮಿಯನ್ನು ಉಳು, ಅಗೆ, ಗೀರು ಇನ್ನೂ ಮುಂತಾದ ಅರ್ಥವನ್ನು ನೀಡುತ್ತದೆ. ಎರಡನೆಯದಾದ ಒಕ್ಕಲು ಎಂಬ ಪದ ಕುಟುಂಬ, ಸಂಸಾರ, ಮನೆತನ, ಗೇಣಿದಾರ, ಕುಲ ಇನ್ನೂ ಮುಂತಾದ ಅರ್ಥಗಳನ್ನು ಕೊಡುತ್ತದೆ. ಒಕ್ಕಲುತನ ಅಥವಾ ಕೃಷಿ ಒಕ್ಕಲಿಗರ ಮೂಲ

ಉದ್ಯೋಗವಾಗಿದೆ. ಭಾರತದ ಬಗ್ಗೆ ಹೇಳುವುದಾದರೆ ನಮ್ಮ ಪ್ರಾಚೀನ ಗ್ರಂಥವಾದ ಋಗ್ವೇದದಲ್ಲಿ ಒಂದು ಕಡೆ ಹೀಗೆ ಉಲ್ಲೇಖಿಸಿದೆ: ಪಗಡೆಯಾಟದಲ್ಲಿ ಕಾಲ ಕಳೆಯಬೇಡ; ಕೃಷಿಯಲ್ಲಿ ತೊಡಗಿದವನಾಗು, ಅದು ತರುವ ಸಂಪತ್ತಿನಿಂದ ಸಂತುಷ್ಟನಾಗು (ಋಕ್-10.3.5.13). ಕೃಷಿಯ ಬಗ್ಗೆ ಬಹಳಷ್ಟು ಹಿಂದೆಯೆ ಋಗ್ವೇದದಂತಹ ಶ್ರೇಷ್ಠ ಕೃತಿಯಲ್ಲಿ ಉಲ್ಲೇಖಿಸಿದೆ ಹಾಗೂ ಕೃಷಿಯ ಕಾಲುವೆಗಳ ಬಗ್ಗೆಯೂ ಸಾಕಷ್ಟು ತಿಳಿಸಿದೆ. ಅದೇ ರೀತಿ ರಾಮಾಯಣ ಮತ್ತು ಮಹಾಭಾರತಗಳಿಂದಲೂ ಕೆಲವು ಉದಾಹರಣೆಗಳನ್ನು ಕೊಡಬಹುದು. ಜನಕ ಮಹಾರಾಜನು ನೇಗಿಲನ್ನು ತನ್ನ ಧ್ವಜವನ್ನಾಗಿ ಮಾಡಿಕೊಂಡಿದ್ದ. ಮಹಾರಾಜ ಜನಕನು ಸ್ವತಃ ಭೂಮಿಯನ್ನು ಉಳುತ್ತಿರುವಾಗ ಇಲ್ಲವೆ ಉಳುಮೆ ಮಾಡಿಸುತ್ತಿರುವಾಗ ದೊರೆತ ಮಗು ಅಥವಾ ಶಿಶುವೇ ಸೀತಾದೇವಿ. ಅದೇ ರೀತಿ ಶ್ರೀಕೃಷ್ಣ ಪರಮಾತ್ಮನ ಸಹೋದರನಾದ ಬಲರಾಮನ ಆಯುಧ ನೇಗಿಲು ಆಗಿತ್ತು. ರುದ್ರದೇವನನ್ನು ಕೃಷಿ ಕಾರ್ಯದ ಕಾರಣ ಸಂಕರ್ಷಣಾ ಮೂರ್ತಿ ಸ್ವರೂಪ ಎಂದಿದ್ದಾರೆ. ಈ ದೃಷ್ಟಾಂತಗಳಿಂದ ಕೃಷಿಗೆ ಅಂದು ರಾಜನು ಎಷ್ಟು ಮಹತ್ವ ಕೊಡುತ್ತಿದ್ದನು ಎಂಬುದನ್ನು ತಿಳಿಯಬಹುದು. ಇದು ಕೃಷಿಕರಿಗೆ ಸಂದ ಗೌರವವಾಗಿದೆ.

ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ (1993)ದಲ್ಲಿ ಹೇಳುವಂತೆ ಕೃಷಿ ಕಾರ್ಯ ಆರಂಭವಾದುದು ಇಂದಿಗೆ 9,000 ಇಲ್ಲವೆ 10,000 ವರ್ಷಗಳ ಹಿಂದೆ (ಕ್ರಿ.ಪೂ. 7,000). ಈ ಅವಧಿಯಲ್ಲಿ ಪ್ಯಾಲೆಸ್ಟೈನ್‌ನ ನಟುಫಿಯನ್ ಎಂಬ ಜನಾಂಗದವರು ಹರಿತವಾದ ಕಲ್ಲಿನ ಆಯುಧ ಅಥವಾ ಕುಡುಗೋಲನ್ನು ಬಳಸಿ ವ್ಯವಸಾಯ ಮಾಡುತ್ತಿದ್ದುದಾಗಿ ತಿಳಿದುಬರುತ್ತದೆ. ರುದ್ರನನ್ನು ಪಶುಪತಿ ಎಂದು ಕರೆಯುತ್ತಿದ್ದರು ಎಂದು ಸಿಂಧೂ ನಾಗರಿಕತೆಯ ಮುದ್ರಿಕೆಗಳಿಂದ ತಿಳಿದುಬರುತ್ತದೆ.

ವಿಶ್ವದಲ್ಲಿ ಮೊದಲು ವ್ಯವಸಾಯ ಕಾರ್ಯ ಆರಂಭವಾದ ಬಗೆ

ಈ ಭೂಮಿಯ ಮೇಲೆ ವಿಶೇಷ ಬುದ್ಧಿ ಇರುವ ಪ್ರಾಣಿಯ ರೂಪದಲ್ಲಿ ಮಾನವ ಕಾಣಿಸಿಕೊಂಡಿದ್ದು ಸುಮಾರು ಮೂರು-ನಾಲ್ಕು ಲಕ್ಷ ವರ್ಷಗಳ ಹಿಂದೆ. ಆತ ಅಲೆಮಾರಿಯಾಗಿದ್ದು, ಪ್ರಾಣಿಗಳ ಬೇಟೆಯಾಡುವುದು, ಬೇಟೆಯಾಡಿ ತಂದ ಆಹಾರವನ್ನು ಸೇವಿಸುವುದು, ಕೆಲವೊಮ್ಮೆ ಬಲಿಷ್ಠ ಪ್ರಾಣಿಗಳಿಗೆ ತಾನೇ ಆಹಾರವಾಗುವುದು ಇದೇ ನಡೆದಿತ್ತು. ನವಶಿಲಾಯುಗದ ಕಾಲದಲ್ಲಿ ತನ್ನ ಅಲೆಮಾರಿ ಜೀವನವನ್ನು ನಿಲ್ಲಿಸಿ ಒಂದೆಡೆ ನೆಲೆಸುವುದನ್ನು ಕಲಿತ. ಕೃಷಿಯನ್ನು ತನ್ನ ಬದುಕಿನ ಸಂಗಾತಿಯಾಗಿ ಕಂಡವನು ರೈತ. ಹೊಟ್ಟೆಯ ತುತ್ತಿಗಾಗಿ, ಸೂರಿಗಾಗಿ, ನೆಮ್ಮದಿಯ ನಿದ್ದೆಗಾಗಿ ಅವನು ಅದನ್ನೇ ನೆಚ್ಚಿಕೊಂಡು, ಮೆಚ್ಚಿಕೊಂಡು ಸಹಸ್ರಾರು ವರ್ಷಗಳಿಂದ ಜೀವಿಸುತ್ತಾ ಬಂದಿದ್ದಾನೆ. ಆ ಬಾಳಿನಲ್ಲಿ ಅನ್ಯರ ಹೊಟ್ಟೆ

ತುಂಬಿಸಿದ್ದಾನೆ. ನಾಡಿಗೆ ತುತ್ತು ಕೊಡಲು ದುಡಿದಿದ್ದಾನೆ. ಹೀಗೆ ಸಾಗಿ ಬರುವಲ್ಲಿ ತನ್ನ ಬದುಕಿನ ಕಷ್ಟ ನಿಷ್ಠೂರಗಳನ್ನು ಸಹಿಸಿಕೊಂಡು ತ್ಯಾಗದ ನಿಸ್ಸೀಮಜೀವಿಯಾಗಿಯೂ ಕಾಣಿಸಿಕೊಂಡಿದ್ದಾನೆ. ಕೃಷಿಯನ್ನು ಮೊದಲು ಪ್ರಾರಂಭಿಸಿದ್ದು ಹೆಣ್ಣು, ಗಂಡಲ್ಲ. ಆದರೆ ಗಂಡಿಗೆ ಸಿಕ್ಕ ಪ್ರಚಾರ ಹೆಣ್ಣಿಗೆ ಸಿಗಲಿಲ್ಲ. ವಿಶೇಷತಃ ದಲಿತ ವರ್ಗವೂ ವ್ಯವಸಾಯ ಮತ್ತು ಪಶುಸಂಗೋಪನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮಣ್ಣಿನ ಮಕ್ಕಳಾಗಿ ದುಡಿದಿದ್ದಾರೆ. 'ಲೌಟೆ' ಎಂಬ ವಿದ್ವಾಂಸರು ಹೆಣ್ಣೇ ಈ ಭೂಮಿಯ ಮೊದಲ ರೈತ ಎಂಬುದಾಗಿ ನುಡಿದಿದ್ದಾರೆ. ಅಂದೇ ಜಗತ್ತಿಗೆ ಮೊದಲ ತುತ್ತನ್ನು ಅಹಿಂಸಾತ್ಮಕವಾಗಿ ಕೊಟ್ಟಾಕೆ ಹೆಣ್ಣು. (ಕರ್ನಾಟಕ ರೈತ ಚಳವಳಿ, ಸತ್ಯಾಗ್ರಹಗಳು) – ಸಂಪುಟ–1, ಪುಟ–1, – ಡಾ. ಎಂ.ಜಿ. ನಾಗರಾಜ್, ಬೆಂ.). ವ್ಯವಸಾಯ ಮತ್ತು ಪಶುಸಂಗೋಪನೆ ಆತನ ಬದುಕಿನ ಅವಿಭಾಜ್ಯ ಅಂಗವಾಯಿತು. ಇರಾನ್‌ನ ಗಡಿ ಪ್ರದೇಶ ಅಲಿಕೋಶ್ ಎಂಬಲ್ಲಿ ವಿನಕಾರ್ನ್ ಎಂಬ ಒಂದು ಜಾತಿಯ ಗೋಧಿ, ಹೆಮ್ಮರ್ ಗೋಧಿ ಹಾಗೂ ಕಾಳು ಜಾತಿಯ ಬಾರ್ಲಿಯನ್ನು ಕ್ರಿ.ಪೂ. 7000 ಸುಮಾರಿಗೆ ಬೆಳೆಯುತ್ತಿದ್ದ. ಆದರೆ ಇದನ್ನೇ ಕೃಷಿಯ ಮೊದಲ ಯತ್ನಗಳೆಂದು ಪರಿಗಣಿಸಲಾಗದು. ಉತ್ತರ ಥಾಯ್‌ಲ್ಯಾಂಡ್‌ನ ಸ್ಪೀರಿಟ್ ಕೇವ್ ಎಂಬ ನಿವೇಶನದಲ್ಲಿ ಫಿನಿಯೋಲಸ್ ಎಂಬ ಒಂದು ಜಾತಿಯ ಹುರುಳಿಕಾಳು, ಬಟಾಣಿ ಇವೇ ಮುಂತಾದವುಗಳನ್ನು ಕ್ರಿ.ಪೂ. 9000ದಿಂದ 7000ದ ಸಮಯದಲ್ಲಿ ಬೆಳೆಯುತ್ತಿದ್ದುದು ಕಂಡುಬರುತ್ತದೆ. ಈಜಿಪ್ಟ್‌ನ ನೈಲ್ ನದಿಯ ದಂಡೆಯ ಮೇಲೆ ಇಂದಿಗೆ 6000 ವರ್ಷಗಳ ಹಿಂದೆ ಗೋಧಿ, ಬಾರ್ಲಿ, ಹತ್ತಿ ಮತ್ತು ನಾರಿರುವ ಕತ್ತಾಳೆ ಜಾತಿಯ ಗಿಡಗಳನ್ನು ಬೆಳೆಯುತ್ತಿದ್ದರು. ನಾರಿನಿಂದ ಬಟ್ಟೆ ತಯಾರಿಸುತ್ತಿದ್ದರು. ಈಜಿಪ್ಟ್‌ನ ಅಲ್‌ಬದಾರಿನಲ್ಲಿ ಪ್ರಾಣಿಗಳನ್ನು ಬಳಸಿ ಈಗಾಗಲೆ ಕೃಷಿ ಆರಂಭಿಸಿದ್ದರು. ಅದೇ ರೀತಿ ನೈಲ್ ನದಿಯ ಮೆಕ್ಕಲು ಮಣ್ಣಿನಲ್ಲಿ ಸಮೃದ್ಧವಾದ ಕೃಷಿ ಪ್ರದೇಶವಿದ್ದಿತು. ಕೃಷಿಯೇತರ ಚಟುವಟಿಕೆಗಳಿಂದಾಗಿ ಅಲ್ಲಿನ ರಾಜ ಮಹಾರಾಜರು ಶ್ರೀಮಂತರಾಗಿದ್ದರು. ತಾವು ಗಳಿಸಿದ ಅಧಿಕ ಹಣ ಅಥವಾ ಸಂಪತ್ತನ್ನು ಪಿರಮಿಡ್ಡುಗಳನ್ನು ನಿರ್ಮಾಣ ಮಾಡಲು ವ್ಯಯ ಮಾಡುತ್ತಿದ್ದರು. ಕ್ರಿ.ಪೂ. 3000ದ ಹೊತ್ತಿಗೆ ಈಜಿಪ್ಟ್‌ನಲ್ಲಿ ನೈಲ್ ನದಿಗೆ ಅಣೆಕಟ್ಟು ಕಟ್ಟುವಂತಹ ವ್ಯವಸ್ಥೆ ಕಂಡುಬಂದಿತು. ಈಜಿಪ್ಟ್‌ನ ಫೆರೋಗಳು ವ್ಯವಸಾಯಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತಿದ್ದರು. ನೈಲ್ ನದಿಯಲ್ಲಿ ಬರುವ ಪ್ರವಾಹದ ನೀರನ್ನು ತಿರುಗಿಸಿ 19 ಕಿ.ಮೀ. ಉದ್ದದ ಕಾಲುವೆ ಮೂಲಕ ಲೇಕ್ ಮೋರಿಸ್ ಜಲಾಶಯದಲ್ಲಿ ಆ ನೀರನ್ನು ಸಂಗ್ರಹಿಸಿಡುತ್ತಿದ್ದರು. ಈಜಿಪ್ಟ್‌ನ ಜನರು ಬಹಳ ಹಿಂದೆಯೇ ನೀರಾವರಿಗೆ ಕೊಟ್ಟ ಕೊಡುಗೆ ಇದಾಗಿದೆ. (ಖಾರವೇಲನ ಹಾಥಿಗುಂಫಾ ಶಾಸನದಲ್ಲಿಯೂ ಕಾಲುವೆ ಪ್ರಸ್ತಾಪ ಬಂದಿದೆ.)

ಮೆಸಪೊಟೋಮಿಯಾ (ಈಗಿನ ಇರಾಕ್)ದಲ್ಲಿ ರೈತರು ಮತ್ತು ಕೃಷಿ ಕಾರ್ಮಿಕರು ಪೇಟೆ ಅಥವಾ ಪಟ್ಟಣಗಳಲ್ಲಿದ್ದು ಆಗಿಂದಾಗ್ಗೆ ಹಳ್ಳಿಗಳಿಗೆ ಹೋಗಿ ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಕ್ರಿ.ಪೂ. 3000ದಷ್ಟರಲ್ಲಿ ಗೋಧಿ, ಬಾರ್ಲಿ, ಖರ್ಜೂರ, ದ್ರಾಕ್ಷಿ, ಸೇಬು ಇವೇ ಮುಂತಾದವುಗಳನ್ನು ಬೆಳೆಯುತ್ತಿದ್ದರು. ಅದೇರೀತಿ ಕುರಿಗಳನ್ನು ಹಾಲು ಮತ್ತು ಮಾಂಸಕ್ಕಾಗಿ ಬಳಸುತ್ತಿದ್ದರು. ಚೀನಾದಲ್ಲಿ ಕ್ರಿ.ಪೂ. 1750ರಷ್ಟರಲ್ಲಿ ಕೃಷಿ ಚಟುವಟಿಕೆಗಳು ಕಾಣತೊಡಗಿದವು. ಬ್ರಿಟಾನಿಕಾ ವಿಶ್ವಕೋಶದ ಪ್ರಕಾರ ಫಿನನುಂಗ್ ಎಂಬ ಒಬ್ಬ ಪೌರಾಣಿಕ ಚಕ್ರವರ್ತಿಯು ಒಂದು ಮರದ ತುಂಡನ್ನು ನೇಗಿಲಿನಂತೆ ರೂಪಿಸಿಕೊಂಡು ಕೃಷಿ ಕಾರ್ಯದಲ್ಲಿ ತೊಡಗಿಸಿಕೊಂಡ ಎಂದು ಉಲ್ಲೇಖಿಸಲಾಗಿದೆ. ಚೀನಾದ ಪೈ–ಹು–ತ್ ಎಂಬ ಪುರಾಣದಲ್ಲಿ ಹೇಳಿರುವಂತೆ ಹಿಂದೆ ಜನರು ಪ್ರಾಣಿಗಳ ಹಾಗೂ ಹಕ್ಕಿಗಳ ಮಾಂಸವನ್ನು ತಿಂದು ಬದುಕುತ್ತಿದ್ದರು. ಕಾಲಾನಂತರ ಕೃಷಿ ಚಟುವಟಿಕೆಯನ್ನು ಆರಂಭಿಸಿದರು ಎಂಬ ಉಲ್ಲೇಖವಿದೆ. ಹ್ಯಾಂಗ್ ಹೋ ಅಥವಾ ಹಳದಿ ನದಿಯ ತೀರದಲ್ಲಿ ಕ್ರಿ.ಪೂ. 2000ನೇ ಇಸವಿಯಲ್ಲಿ ನೀರಾವರಿ ಆಧಾರಿತ ಕೃಷಿ ಆರಂಭವಾಯಿತು. ಉತ್ತರ ಚೀನಾದಲ್ಲಿ ಕೃಷಿ ಚಟುವಟಿಕೆಗಳು ಆರಂಭವಾಗಿ ಹೆಚ್ಚು ಜನಪ್ರಿಯವಾಯಿತು. ಚೀನಿಯರೂ ಕೂಡ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು. ಬಹುಶಃ ಇವರು ಈಜಿಪ್ಟ್ ಇಲ್ಲವೆ ಮೆಸಪೊಟೋಮಿಯಾ ಜನರಿಂದ ಈ ವಿಧಾನವನ್ನು ಕಂಡುಕೊಂಡಿರಬಹುದು. (ಒಕ್ಕಲುತನ ಮತ್ತು ಒಕ್ಕಲಿಗರು– ಡಾ. ಸೂರ್ಯನಾಥ ಕಾಮತ್, ಬೆಂ. ಪುಟ–)

ಭಾರತದಲ್ಲಿ ಕೃಷಿ ಚಟುವಟಿಕೆಗಳು

ಇಂದಿಗೆ ಸರಿಸುಮಾರು 5000 ವರ್ಷಗಳಷ್ಟು ಹಿಂದೆ ಸಿಂಧೂ ನದಿ ಪರಿಸರದಲ್ಲಿ ಹರಪ್ಪಾ ಮತ್ತು ಮೊಹೆಂಜೋದಾರೋ ಕಾಲಕ್ಕಾಗಲೇ ಕೃಷಿ ಚಟುವಟಿಕೆಗಳು ಆರಂಭವಾಗಿದ್ದವು. ಭಾರತದ ಸಿಂಧೂ ನದಿ ಚೀನಾ ಮತ್ತು ಈಜಿಪ್ಟ್‌ಗಳ ನದಿಗಳಿಗಿಂತ ಉತ್ತಮವಾದಂತಹ ನದಿಯಾಗಿದ್ದು ಇದರ ಮುಖಜ ಭೂಮಿಯು ಫಲವತ್ತತೆಯಿಂದ ಕೂಡಿದ್ದಿತು. ಇತ್ತೀಚಿನ ಶೋಧನೆಗಳಿಂದಾಗಿ ಸಿಂಧೂ–ಗಂಗಾ ನದಿಗಳಿಗೂ ಹೆಚ್ಚು ದೊಡ್ಡದಾದ ಸರಸ್ವತಿ ನದಿ ಇದ್ದಿತು ಎಂದು ತಿಳಿದು ಬಂದಿದೆ. ಋಗ್ವೇದದಲ್ಲಿ ನದೀತಮೇ (ನದಿಗಳಲ್ಲೇ ಹೆಚ್ಚು ದೊಡ್ಡದು) ಎಂದು ಇದನ್ನು ಉಲ್ಲೇಖಿಸಲಾಗಿದೆ. ಆದರೆ ಕ್ರಿ.ಪೂ. 2200–2000ದ ನಡುವೆ ಕಾಣಿಸಿದ ಒಂದು ಭಾರೀ ಶುಷ್ಕ ವಾತಾವರಣದಿಂದ ಇಲ್ಲವೇ ಮತ್ತೆ ಯಾವುದೋ ಕಾರಣದಿಂದ ಈ ನದಿ ಬತ್ತಿ ಹೋಯಿತು. ಈ ಮೊದಲು ಈ ನದಿಯು ಸಿವಾಲಿಕ್ ಪರ್ವತದಿಂದ ಹೊರಟು ಹರಿಯಾಣ, ರಾಜಸ್ಥಾನ, ಕಚ್‌ಪ್ರದೇಶಗಳ ಮೂಲಕ

ಸಮುದ್ರವನ್ನು ಸೇರುತ್ತಿತ್ತು. ಜೋದ್‌ಪುರದ ಟ್ರೈಜೋನ್ ಡೆವೆಲಪ್‌ಮೆಂಟ್ ಇನ್ಸ್‌ಟಿಟ್ಯೂಟ್ ಎಂಬ ಸಂಸ್ಥೆಯು ಈ ನದಿಯ ಹರಿವಿನ ಪ್ರದೇಶದ ನಕಾಶೆಯನ್ನು ಪ್ರಕಟಿಸಿದೆ. ಇತ್ತೀಚೆಗೆ (2001) ಇಸ್ರೋ ಸಂಸ್ಥೆಯ 'ಸ್ಪೇಸ್ ಇಂಡಿಯಾ' ಎಂಬ ತ್ರೈಮಾಸಿಕದಲ್ಲೂ ಈ ನಕಾಶೆಯನ್ನು ಕಾಣಬಹುದು. (ಒಕ್ಕಲುತನ ಮತ್ತು ಒಕ್ಕಲಿಗರು- ಡಾ. ಸೂರ್ಯನಾಥ ಕಾಮತ್- ಬೆಂಗಳೂರು-2006, ಪುಟ-28) ಇಂದು ಮರುಭೂಮಿಯಾಗಿರುವ ರಾಜಾಸ್ಥಾನವು 5000 ವರ್ಷಗಳ ಹಿಂದೆ ಹರಪ್ಪಾ ಸಂಸ್ಕೃತಿಗೆ ಮೂಲ ನೆಲೆಯಾಗಿತ್ತೆಂದು ಕಂಡುಬಂದಿದೆ. ಹರಪ್ಪಾದ ಭಾರಿ ಗಾತ್ರದ ಉಗ್ರಾಣದ ಅವಶೇಷದಿಂದಾಗಿ ಆ ಪರಿಸರದಲ್ಲಿ ಕೃಷಿ ಚಟುವಟಿಕೆ ಹಾಗೂ ಉತ್ಪಾದನೆ ಎಷ್ಟಿತ್ತೆಂದು ತಿಳಿಯುತ್ತದೆ. ಇಲ್ಲಿನ 12 ಕೊಠಡಿಗಳ ಒಟ್ಟು ವಿಸ್ತಾರ 90,000 ಚದರ ಅಡಿ. ಹರಪ್ಪಾ ಸಂಸ್ಕೃತಿಯ ಪ್ರಸ್ತುತ ರಾಜಸ್ಥಾನ ರಾಜ್ಯಕ್ಕೆ ಸೇರಿರುವ ಖಾಲಿಬಂಗನ್‌ನಲ್ಲಿ ಉಳುಮೆ ಮಾಡಿದ ಭೂಮಿಯ ಕುರುಹು ಸಿಕ್ಕಿದೆ. ಈ ರೀತಿಯ ಉಗ್ರಾಣ ವ್ಯವಸ್ಥೆ ಆಧುನಿಕ ಜಗತ್ತಿಗೆ ಅಚ್ಚರಿ ಮೂಡಿಸುವಂತಹದ್ದಾಗಿದೆ. ಇದು ಸ್ವಂತಿಕೆಯಿಂದ ಕೂಡಿದ್ದು ಯಾವುದೇ ವಿದೇಶಿ ಪ್ರಭಾವಕ್ಕೆ ಒಳಗಾಗಿಲ್ಲ ಎಂಬುದಾಗಿ ಬ್ರಿಟಾನಿಕಾದಲ್ಲಿ ಉಲ್ಲೇಖವಾಗಿದೆ.

ಆಹಾರ ಧಾನ್ಯಗಳು

ಅಂದಿನ ಕಾಲದ ಜನಗಳು ಸಾಮಾನ್ಯವಾಗಿ ಬಳಸುತ್ತಿದ್ದ ಹಾಗೂ ಅವಶ್ಯಕತೆ ಇದ್ದ ದವಸ-ಧಾನ್ಯಗಳನ್ನು ಬೆಳೆಯುತ್ತಿದ್ದರು. ದಪ್ಪನೆಯ ಜವೆ ಗೋಧಿ, ಬಾರ್ಲಿ, ಉದ್ದು, ಗೋಧಿ, ಗಿಡ್ಡ ಗೋಧಿ, ಅದರಲ್ಲೂ ವಿಶೇಷವಾಗಿ ಖರ್ಜೂರ, ನವಣೆ, ಎಳ್ಳು ಇವೇ ಮುಂತಾದವುಗಳನ್ನು ಬೆಳೆಯುತ್ತಿದ್ದರು. ಹಿಂದಿನ ಕಾಲದಲ್ಲಿ ದವಸ ಧಾನ್ಯಗಳಲ್ಲಿ ಹೆಚ್ಚಿನ ಪ್ರಾಧಾನ್ಯತೆಯನ್ನು ಎಳ್ಳಿಗೆ ನೀಡಿದ್ದರು. ಇದನ್ನು ಖಾದ್ಯ ತೈಲವಾಗಿ, ದೀಪದ ಎಣ್ಣೆಯಾಗಿ, ಇವೇ ಮುಂತಾದ ದಿನಬಳಕೆಗೆ ಬಳಸುತ್ತಿದ್ದರು. ದಖನ್ ಪ್ರಸ್ಥಭೂಮಿಯ ಪಶ್ಚಿಮ ಭಾಗದ ಲೋಥಾಲ್ ಮತ್ತು ರಂಗಪುರ ಪರಿಸರದಲ್ಲಿ ಕ್ರಿ.ಪೂ. 2700ರ ಸುಮಾರಿಗೆ ಗೋಧಿ, ಬಾರ್ಲಿ, ನವಣೆಯ ಜೊತೆಗೆ ಭತ್ತವನ್ನು ಬೆಳೆದು ಅಕ್ಕಿಯ ಬಳಕೆ ಗೊತ್ತಿದ್ದದ್ದು ಬೆಳಕಿಗೆ ಬಂದಿದೆ. ಕಾಲಾನಂತರ ದಕ್ಷಿಣ ಭಾರತದಲ್ಲಿ ಉದ್ದು, ಹೆಸರು ಮತ್ತು ರಾಗಿಯನ್ನು ಬೆಳೆಯುತ್ತಿದ್ದರು. ರಾಗಿಯು ಆಫ್ರಿಕಾದ ಮುಖ್ಯ ಬೆಳೆಯಾಗಿದ್ದು ಕಾಲಾನಂತರ ದಕ್ಷಿಣ ಭಾರತಕ್ಕೂ ಬಂದು ಸೇರಿತು. ತಮಿಳುನಾಡಿನಲ್ಲಿ ಅದರ ಬಳಕೆ ಹೆಚ್ಚಾಗಿತ್ತು. ಈ ಪ್ರದೇಶದಲ್ಲಿ ಹಳೆಯ ಕಾಲದ ಕರೀ ಬಣ್ಣದ ರಾಗಿ ತಮಿಳುನಾಡಿನ ಹಳ್ಳೂರಿನಲ್ಲಿ ದೊರೆತಿದೆ. ರಾಂಧಾವ ಎಂಬ ಕೃಷಿತಜ್ಞರು ಅದಕ್ಕೂ ಹಿಂದಿನಿಂದಲೂ ರಾಗಿಯನ್ನು ವ್ಯಾಪಕವಾಗಿ ಕರ್ನಾಟಕದಲ್ಲಿ ಬೆಳೆಯುತ್ತಿದ್ದರೆಂದು ಹೇಳಿದ್ದಾರೆ. (ಎ ಹಿಸ್ಟರಿ ಆಫ್ ಅಗ್ರಿಕಲ್ಚರ್ ಇನ್ ಇಂಡಿಯಾ 1980, ಪುಟ 235) ಕ್ರಿ.ಪೂ. 2000ದ ಹೊತ್ತಿಗೆ

ಭಾರತದಲ್ಲಿ ಭತ್ತ ಇಲ್ಲವೆ ಅಕ್ಕಿಯ ಬಳಕೆ ಸರ್ವೇ ಸಾಮಾನ್ಯವಾಗಿದ್ದಿತು. ವೇದಗಳಲ್ಲಿಯೂ ಕೂಡ ಅಕ್ಕಿ, ಗೋಧಿ, ಬಾರ್ಲಿ, ಉದ್ದು, ಹೆಸರು, ಕಬ್ಬು, ರಾಗಿ, ಎಳ್ಳು ಇನ್ನೂ ಮುಂತಾದ ಅನೇಕ ಧಾನ್ಯಗಳ ಉಲ್ಲೇಖವಿದೆ. ಅದೇ ರೀತಿ ಹಣ್ಣುಗಳಲ್ಲಿ ಮಾವು, ಸೀಬೆ, ದ್ರಾಕ್ಷಿ, ಕಲ್ಲಂಗಡಿ, ಬಾಳೆ ಇವೇ ಮುಂತಾದ ಹಣ್ಣುಗಳ ಹಾಗೂ ತರಕಾರಿಗಳ ಉಲ್ಲೇಖವಿದೆ. ಅದೇ ರೀತಿ ಹಾಲು, ಮೊಸರು, ಬೆಣ್ಣೆ, ತುಪ್ಪದ ಉಲ್ಲೇಖವೂ ಇದೆ.

ಗಂಗರ ಕಾಲದ ಕೃಷಿ ಚಟುವಟಿಕೆಗಳು

ಕರ್ನಾಟಕದಲ್ಲಿ ನವಶಿಲಾಯುಗದ ಕಾಲದಲ್ಲಿಯೇ ದಕ್ಷಿಣ ಭಾರತದಲ್ಲಿ ಕೃಷಿ ಚಟುವಟಿಕೆಗಳು ಕಂಡುಬರುತ್ತವೆ. ನವಶಿಲಾಯುಗದ ನಿವೇಶನಗಳಾದ ಪಿಕಳಿಹಾಳ, ತೆಕ್ಕಲಕೋಟೆ, ಮಾಸ್ಕಿ, ಸಂಗನಕಲ್ಲು, ಬ್ರಹ್ಮಗಿರಿ, ಚಂದ್ರವಳ್ಳಿ, ಹಳ್ಳೂರು, ಟಿ.ನರಸೀಪುರ ಮತ್ತು ಎಮ್ಮಿಗೆ ಸೇರಿದಂತೆ ಹಲವಾರು ಪ್ರದೇಶಗಳಲ್ಲಿ ಕೃಷಿ ಚಟುವಟಿಕೆಗಳು ಕಂಡುಬಂದಿವೆ. ಶಾತವಾಹನರ ಪತನದ ನಂತರ ಪಲ್ಲವರು ಕರ್ನಾಟಕದ ಹಲವಾರು ಭಾಗಗಳನ್ನು ಹಿಡಿದುಕೊಂಡಿದ್ದರು. ಕ್ರಿ.ಶ. 4ನೇ ಶತಮಾನದ ಮಧ್ಯಭಾಗದಲ್ಲಿ ಬನವಾಸಿಯ ಕದಂಬರು, ಗಂಗರು, ಕೃಷಿ ನೀರಾವರಿಗೆ ವಿಶೇಷ ಪ್ರೋತ್ಸಾಹವನ್ನಿತ್ತರು. ಗಂಗವಾಡಿಯ ಬಹುಭಾಗವು ಕಾವೇರಿ ನದಿಯ ಮುಖಜ ಭೂಮಿಯಾಗಿದೆ. ಕಾವೇರಿಯ ಉಪನದಿಗಳಾದ ಕಬಿನಿ, ಲಕ್ಷ್ಮಣತೀರ್ಥ, ಸುವರ್ಣಾವತಿ, ಶಿಂಷಾ, ಗುಂಡಲ್, ಅರ್ಕಾವತಿ, ಪಾಲಾರ್, ಪೆನ್ನಾರ್, ವೇದಾವತಿ, ಕೃಷ್ಣಾನದಿ ಅದರ ಉಪನದಿಗಳಾದ ತುಂಗ ಮತ್ತು ಭದ್ರ ಇವೇ ಮುಂತಾದವು. ಗಂಗ ಅರಸನಾದ ದುರ್ವಿನೀತನು ಬಹುದೊಡ್ಡದಾದ ಕೆರೆ–ಕುಂಟೆಗಳನ್ನು ಕಟ್ಟಿಸಿದುದಾಗಿ ನಲ್ಲಾಳ ತಾಮ್ರಪಟಗಳಿಂದ ತಿಳಿದುಬರುತ್ತದೆ. ಕ್ರಿ.ಶ. 904ರ ಗಂಗರ ಕಾಲದ ಘಟ್ಟವಾಡಿಯ ಶಾಸನದಲ್ಲಿ ಅಲ್ಲಿನ ಅಗ್ರಹಾರದ ವಿದ್ವಾಂಸನಾದ ಶಿವಯ್ಯ ಎಂಬಾತನು ಸಾಗರವನ್ನು ನಾಚಿಸುವಂತೆ ಭಾರೀ ಜಲಾಶಯವನ್ನು ಕಟ್ಟಿಸಿದನೆಂದು ಹೇಳಿದೆ. ಅದೇ ಊರಿನಲ್ಲಿ ಹಿಂದೆ ಗಂಗರ ರಾಣಿಯೊಬ್ಬಳು ಕಟ್ಟಿಸಿದ್ದ ಗಲ್ಲಕೆರೆ ಎಂಬುದು ಇತ್ತು. ಗಂಗರ ರಾಜಧಾನಿಗಳಲ್ಲಿ ಒಂದಾದ ಮಣ್ಣೆ (ಮಾನ್ಯಪುರ)ದಲ್ಲಿ ಇಂದಿಗೂ ಆ ಕಾಲದ ಎರಡು ವಿಶಾಲ ಕೆರೆಗಳಿವೆ. ಗಂಗರ ಕಾಲದ ಕೆರೆಯೊಂದರ ಉಲ್ಲೇಖ ದೊಡ್ಡಬಳ್ಳಾಪುರ ತಾಲ್ಲೂಕಿನ ತಿಪ್ಪೂರಿನಲ್ಲಿ ಕಾಣಬರುತ್ತದೆ. ಈ ಕೆರೆಗಳ ರಕ್ಷಣೆಗೆ 'ಬಿತ್ತುವಟ್ಟ' ಎಂಬ ಭೂಮಿಯನ್ನು ಬಿಡುತ್ತಿದ್ದರು. ಈ ರೀತಿ ಕೊಡುಗೆಯಾಗಿ ಬಿಟ್ಟ ಜಮೀನನ್ನು ಅನುಭವಿಸುವವನು ಕೆರೆಯ ರಕ್ಷಣೆ ಮಾಡುವುದು, ದುರಸ್ತಿ ಕಾರ್ಯ ಇವೆ ಮುಂತಾದವುಗಳನ್ನು ನೋಡಿಕೊಳ್ಳಬೇಕಾಯಿತು. ನಾಗಮಂಗಲ ತಾಲ್ಲೂಕಿನ ಅರಣೆಯಲ್ಲಿ ಗಂಗರ ಮಂತ್ರಿಯಾಗಿದ್ದ ಮಚಾಬಲ್ಲಯ್ಯನು ಕಟ್ಟಿಸಿರಬಹುದಾದ ಕೆರೆಗೆ

ಅವನೇ ಬಿತ್ತು ವಟ್ಟವನ್ನು ಬಿಟ್ಟಿರುವುದು ಕಂಡುಬರುತ್ತದೆ. ಇಂತಹ ಹಲವಾರು ಉದಾಹರಣೆಗಳನ್ನು ಕಾಣಬಹುದು. ಗಂಗರ ನಂತರ ಆಳ್ವಿಕೆಗೆ ಬಂದ ಹೊಯ್ಸಳರು, ವಿಜಯನಗರ ಸಾಮ್ರಾಜ್ಯದ ಒಡೆಯರು ಕೃಷಿ ಚಟುವಟಿಕೆಗಳಿಗೆ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. (ಒಕ್ಕಲುತನ ಮತ್ತು ಒಕ್ಕಲಿಗರು– ಡಾ. ಸೂರ್ಯನಾಥ ಕಾಮತ್, ಪುಟ–40.)

ಕ್ರಿ.ಶ. 1800ರ ಕಾಲದ ಒಂದು ಚಿತ್ರಣ

ಟಿಪ್ಪುಸುಲ್ತಾನನ ಅವನತಿಯ ನಂತರ ಅಂದರೆ 1799ರ ನಂತರ ಅಂದಿನ ಮದ್ರಾಸ್ ಪ್ರೆಸಿಡೆನ್ಸಿಯ ರಾಜ್ಯಪಾಲನು ಕ್ರಿ.ಶ. 1800ರ ಕಾಲದಲ್ಲಿ ಬುದ್ಧಿವಂತನೂ, ಮೇಧಾವಿಯೂ ಆದ ಡಾ. ಫ್ರಾನ್ಸಿಸ್ ಬುಕಾನನ್ ಎಂಬ ವ್ಯಕ್ತಿಯನ್ನು ಸಮಗ್ರ ದಕ್ಷಿಣ ಭಾರತದ ಕೃಷಿ ಮತ್ತು ಭೂಕಂದಾಯ, ವ್ಯಾಪಾರ ವಾಣಿಜ್ಯ ಇವೇ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಸಂಗ್ರಹಿಸಲು ನೇಮಿಸಿದನು. ಫ್ರಾನ್ಸಿಸ್ ಬುಕಾನನ್ ಮದ್ರಾಸ್‌ನಿಂದ ಹೊರಟು ಬೆಂಗಳೂರು, ಮೈಸೂರು, ಮಂಗಳೂರಿನಿಂದ ಕೇರಳದ ಕರಾವಳಿ ಒಳಗೊಂಡಂತೆ ಇಡೀ ದಕ್ಷಿಣ ಭಾರತದಾದ್ಯಂತ ಕ್ಷೇತ್ರಕಾರ್ಯ ಮಾಡಿ, 'ಎ ಜರ್ನಿಫ್ರಮ್ ಮದ್ರಾಸ್ ತ್ರೂ ದಿ ಕಂಟ್ರೀಸ್ ಆಫ್ ಮೈಸೂರ್, ಕೆನರ ಅಂಡ್ ಮಲಬಾರ್' ಎಂಬ ಮೂರು ಸಂಪುಟಗಳ ಬೃಹತ್ ವರದಿಯನ್ನು 1807ರಲ್ಲಿ ಪ್ರಕಟಪಡಿಸಿದನು. ಬುಕಾನನ್ ಮಾಡಿದ ಈ ಕ್ಷೇತ್ರ ಕಾರ್ಯದಿಂದ ಇನ್ನೂರು ವರ್ಷಗಳ ಹಿಂದಿನ ಕೃಷಿ ಮತ್ತು ಜಾತಿ, ಉಪಜಾತಿ ಮತ್ತು ವರ್ಗಗಳ ಬಗೆಗೆ ವಿಪುಲವಾದ ಮಾಹಿತಿ ಲಭ್ಯವಾಗುತ್ತದೆ.

ಬುಕಾನನ್ ಕೃಷಿಯ ಬಗ್ಗೆ ವಿವರ ನೀಡುತ್ತಾ ಬೇರೆ ಬೇರೆ ಕೃಷಿ ಉತ್ಪನ್ನಗಳ ವಿವರ ನೀಡುವುದರ ಜೊತೆಗೆ ಅವುಗಳನ್ನು ಹೆಚ್ಚಾಗಿ ಎಲ್ಲೆಲ್ಲಿ ಬೆಳೆಯುತ್ತಾರೆ ಹಾಗೂ ಬೇರೆ ಬೇರೆ ಸ್ಥಳಗಳಲ್ಲಿ ಅದನ್ನು ಹೇಗೆ ಬೆಳೆಯುತ್ತಾರೆ. ಇವೇ ಮುಂತಾದ ವಿವರಗಳನ್ನು ಕೊಡುತ್ತಾನೆ. ಬೇರೆ ಬೇರೆ ಪ್ರದೇಶಗಳಲ್ಲಿ ಬಳಸುವ ಕೃಷಿ ಉಪಕರಣಗಳ ಚಿತ್ರ, ಏತನೀರಾವರಿಗಳ ವಿವರಣೆ, ಸಾಕುಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಆಡು ಇವೇ ಮುಂತಾದವುಗಳಲ್ಲದೆ, ಎಣ್ಣೆ ತೆಗೆಯುವ ಗಾಣಗಳ, ಹತ್ತಿ ಬಿಡಿಸುವ ಯಂತ್ರಗಳ, ಆಲೆಮನೆಗಳ ಚಿತ್ರಣವನ್ನು ನೀಡಿದ್ದಾನೆ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣಕ್ಕೆ ಹೋದಾಗ ಅಷ್ಟಗ್ರಾಮ ವಿಭಾಗದ ಗೌಡರನ್ನು (ಪಟೇಲರನ್ನು) ಸೇರಿಸಿ ಆತನು ಅದುವರೆಗೆ ಸಂಗ್ರಹಿಸಿದ ಮಾಹಿತಿಗಳು ಅಪೂರ್ವವೂ, ಅಮೋಘವೂ ಆಗಿದೆ. ರೈತರು ತಮ್ಮ ಭೂಮಿಯನ್ನು ಒಣಭೂಮಿ, ತರಿಭೂಮಿ ಮತ್ತು ಭಾಗಾಯ್ತು ಎಂಬ ಮೂರು ಭಾಗಗಳನ್ನು ಮಾಡಿಕೊಂಡಿದ್ದುದರ ಬಗ್ಗೆ ವಿವರಣೆ ನೀಡಿದ್ದಾನೆ. ಅಲ್ಲಿನ ಮಣ್ಣನ್ನು ಎರೆ, ಕೃಷ್ಣ

ಅಥವಾ ಜಿಗುಟು, ಕೆಬ್ಬೆ (ಕೆಂಪು ಮಣ್ಣು), ಮರಳು ಮಿಶ್ರಿತಮಣ್ಣು ಎಂದು ವರ್ಗೀಕರಿಸಿರುವ ಬಗ್ಗೆ ವಿವರಣೆ ನೀಡಿದ್ದಾನೆ. ಶ್ರೀರಂಗಪಟ್ಟಣದ ಅಷ್ಟಗ್ರಾಮದ ರೈತರು ತರೀಭೂಮಿಯಲ್ಲಿ ಭತ್ತ, ಕಬ್ಬು, ಹೆಸರು, ಹುಚ್ಚೆಳ್ಳು, ತೊಗರಿಕಾಳುಗಳನ್ನು ಬೆಳೆಯುತ್ತಾರೆ. ಮಳೆಗಾಲದ ಬೆಳೆಗೆ ಐನು ಅಥವಾ ಗಂಡುಬೆಳೆ, ಬೇಸಿಗೆ ಬೆಳೆ, ಕಾರುಬೆಳೆ ಅಥವಾ ಹೆಣ್ಣು ಬೆಳೆ ಇವೆ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದರೆಂಬ ಮಾಹಿತಿಗಳನ್ನು ನೀಡಿದ್ದಾನೆ. ಬುಕಾನನ್ ಬೆಂಗಳೂರು ಜಿಲ್ಲೆ ದೊಡ್ಡಬಳ್ಳಾಪುರ, ತುಮಕೂರು ಜಿಲ್ಲೆಯ ಮಿಡಿಗೇಶಿ ಪರಿಸರ, ಮಧುಗಿರಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಪ್ರದೇಶದ ಕೃಷಿ ನೀರಾವರಿ ಆಧಾರಿತ ಭತ್ತ ಬೆಳೆಯುವ ವಿವಿಧ ವಿಧಾನಗಳ ಬಗ್ಗೆ ಮಾಹಿತಿ ನೀಡಿದ್ದಾನೆ. ಅದೇರೀತಿ ಉತ್ತರಕನ್ನಡದ ಕೃಷಿಯ ಬಗ್ಗೆ ಕೂಡ ಸಾಕಷ್ಟು ವರದಿ ನೀಡಿದ್ದಾನೆ. ತುಳುನಾಡಿನ ಕೃಷಿ ಜಮೀನುಗಳು ಮಲಬಾರಿಗಿಂತ ಹುಲುಸಾಗಿವೆ ಎಂದು ತಿಳಿಸುತ್ತಾನೆ. ಶ್ರೀಮಂತ ಕೃಷಿಕರು 20ರಿಂದ 25 ನೇಗಿಲುಗಳನ್ನು ಹೊಂದಿದ್ದಾರೆ. ಬಡ ಕೃಷಿಕರು ಕನಿಷ್ಠ ಒಂದು ನೇಗಿಲನ್ನಾದರೂ ಹೊಂದಿರುತ್ತಾರೆ. ಸಮುದ್ರ ಕಿನಾರೆಯ ಸಮೀಪ ತೋಟ ಮತ್ತು ಗದ್ದೆಗಳಿದ್ದು ಅಲ್ಲೂ ರಾಗಿ, ಭತ್ತ, ತೆಂಗು ಇವೇ ಮುಂತಾದ ಫಸಲನ್ನು ತೆಗೆಯುತ್ತಿದ್ದ ಬಗ್ಗೆ ವಿವರಣೆ ನೀಡಿದ್ದಾನೆ. ಈ ಕೃಷಿಕರಲ್ಲೂ ಶ್ರೀಮಂತ ವರ್ಗವೆಂದರೆ ಬಂಟರು ಯಾನೆ ನಾಡವರು. ಸ್ಫುರದ್ರೂಪಿಗಳಾದ ಇವರು ಕಷ್ಟಪಟ್ಟು ದುಡಿಯುತ್ತಾರೆ. ಇವರು ಕೇರಳದ ನಾಯರ್ ಜನರನ್ನು ಹೋಲುತ್ತಾರೆ. ಇವರು ತುಳುನಾಡಿನ ಒಕ್ಕಲಿಗರು, ಒಕ್ಕೆಲ್ ಎಂದು ಕಾಣಿಸಿಕೊಳ್ಳುತ್ತಾರೆ, ಎಂದೆಲ್ಲಾ ವಿವರಣೆ ನೀಡಿದ್ದಾನೆ.

ಒಕ್ಕಲಿಗ : ಬೇಟೆ ಮತ್ತು ಪಶುಪಾಲನೆಯ ಘಟ್ಟವನ್ನು ದಾಟಿ ಕೃಷಿ ಕೆಲಸದಲ್ಲಿ ತೊಡಗಿದಾಗ ಮಾನವರೆಲ್ಲಾ ಒಕ್ಕಲಿಗರೆನಿಸಿದರು. ಕಾಲಕ್ರಮೇಣ ಅನಿವಾರ್ಯ ಕಾರಣಗಳಿಂದ ಬೇರೆ ಬೇರೆ ವೃತ್ತಿ ಹುಟ್ಟಿಕೊಂಡಿವೆ. ಇದನ್ನೆ ಗೀತಾಚಾರ್ಯರು 'ಜನ್ಮನಾ ಜಾಯತೇ ಶೂದ್ರ, ಸಂಸ್ಕಾರ್ರೈ ದ್ವಿಜ ಉಚ್ಚತೇ' ಎಂದರೆ ಹುಟ್ಟಿನಿಂದ ಪ್ರತಿಯೊಬ್ಬನು ಶೂದ್ರನೇ ಆಗಿದ್ದು ಬೆಳೆಸಿಕೊಂಡ ಸಂಸ್ಕಾರಗಳಿಗೆ ಅನುಗುಣವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯನಾಗುವನು ಎಂದಿದ್ದಾರೆ. ಹೀಗಾಗಿ ಜಾತಿಗಳ ಹಾಗೂ ಸಾಮಾಜಿಕ ವ್ಯವಸ್ಥೆಯ ಹುಟ್ಟನ್ನು ಹೀಗೆ ಅರ್ಥೈಸಿದ್ದಾರೆ. ಒಕ್ಕಲು ಶಬ್ದಕ್ಕೆ ಒಕ್ಕುವಿಕೆ, ಮನೆ, ಹೊಲ, ಬೇಸಾಯಗಾರ, ಗುತ್ತಿಗೆದಾರ ಇವೇ ಮುಂತಾದ ಅರ್ಥಗಳಿದ್ದು ತಾನೇ ಬೇರ್ಪಡಿಸುವ ಕೃಷಿಕಾಯಕಕ್ಕೆ ಒಕ್ಕು ಎನ್ನಲಾಗುವುದು. ನಂತರ ಕಾಲದಲ್ಲಿ ಕೃಷಿಕಾರ್ಯ ಮಾಡುವ ರೈತನು ಯಾವುದೇ ಗುಂಪಿಗೆ ಸೇರಿರಲಿ ಒಕ್ಕಲಿಗ ಎಂದು ಕರೆಯಲಾಗುತ್ತಿತ್ತು. ವೃತ್ತಿ ಸೂಚಕವಾಗಿದ್ದ ಈ ಶಬ್ದ ಜಾತಿ ಸೂಚಕವಾದದ್ದು ಇತ್ತೀಚಿನ ವರ್ಷಗಳಲ್ಲಿ ಬರುಬರುತ್ತಾ ಒಕ್ಕಲಿಗ ಜನಾಂಗದ ಉಪ ಪಂಗಡಗಳೆಲ್ಲಾ ತಮ್ಮ ತಮ್ಮ ಜಾತಿಗಳನ್ನು ಗುರ್ತಿಸಿಕೊಳ್ಳುತ್ತಿವೆ.

ಒಕ್ಕಲಿಗ ಶಬ್ದದ ಮೂಲರೂಪ ಹಾಗೂ ಪ್ರಾಚೀನತೆಯ ಬಗ್ಗೆ ಕನ್ನಡದ ಕೇಶಿರಾಜ ತನ್ನ ಶಬ್ದಮಣಿ ದರ್ಪಣದಲ್ಲಿ ಹೀಗೆ ತಿಳಿಸಿದ್ದಾನೆ. ಉರ್ಕೆಯಿಂದ ನಿಷ್ಪತ್ತಿಯನ್ನು ಕಂಡುಕೊಳ್ಳಬಹುದು. ಉರ್ಕೆ ಎಂದರೆ ಕೇಶೀರಾಜನ ಪ್ರಕಾರ ಉಚ್ಚಸ್ವಭಾವ ಎಂದು. ಹಳಗನ್ನಡದ ಮತ್ತೊಂದು ಪ್ರಯೋಗ ನೇಗಿಲಿಂ ಗೇಯುವುದು ಉರ್ಕೆ (ಕನ್ನಡ ನಿಘಂಟು ಸಂಪುಟ ಒಂದು, ಕಸಾಪ, ಪುಟ..... ಬೆ-1) ಎಂದರೆ ನೇಗಿಲಿಂದ ನೆಲವನ್ನು ಉಳುವುದು ಎಂದು ಅರ್ಥ. ಉರ್ಕೆ ಉಚ್ಚಾರಣೆ ಕಷ್ಟವಾದ್ದರಿಂದ ಮಿತವ್ಯಯ ದೃಷ್ಟಿಯಿಂದ ಉಕ್ಕೆಯಾಗಿ ಪರಿವರ್ತನೆಯಾಗಿದೆ. ಉಕ್ಕೆಗೆ 'ಯಿಗ' ಪ್ರತ್ಯಯ ಸೇರಿ ಉಕ್ಕೆಯಿಗೆ ಆಯಿತು. ಅನಂತರದಲ್ಲಿ ಉಕ್ಕಲಿಗ ಆಯಿತು. ಇಲ್ಲಿ 'ಕೆ' ಬದಲಾಗಿ 'ಲಾ'ಕಾರ ಬಂದು 'ಕ್ಕೆ' ಕಾರದ ಉಕಾರ ಲೋಪವಾಗಿ ಒಕ್ಕಲಿಗ ಒಕ್ಕಲಿಗವಾಯ್ತು. ಈ ಒಕ್ಕಲಿಗದ ಆದಿಯ ಧ್ವನಿ ಒಕಾರವಾಗಿ ಒಕ್ಕಲಿಗ ಆಕೃತಿಮಾ ಸಿದ್ದವಾಗಿದೆ. ಈ ಹಿನ್ನೆಲೆಯನ್ನು ಅರಿಯದ ಕೆಲವರು ಒಕ್ಕಲು ಮತ್ತು ಒಕ್ಕ ಎಂಬ ಶಬ್ದಗಳು 'ಒಕ್ಕಲಿಗ' ಶಬ್ದವಾಯಿತು ಎಂದು ಭಾವಿಸಿದಂತಾಗಿದೆ. ವಾಸ್ತವವಾಗಿ ಒಕ್ಕಲು ಎಂದರೆ ಒಂದು ಕುಲ, ಒಂದು ಗುಂಪು, ಒಂದು ಸಂಸಾರ ಒಂದು ಕುಟುಂಬ ಎಂದು ಅರ್ಥವಾಗುತ್ತದೆ. ಒಕ್ಕಲಿಗ ಎಂದರೆ ತಳ್ಳು, ಹೊಡೆ ಎಂದು ಅರ್ಥ. ಆದ್ದರಿಂದ ಒಕ್ಕ ಮತ್ತು ಒಕ್ಕಲು ಶಬ್ದಗಳಿಗೂ- ಒಕ್ಕಲಿಗರೆಂಬ ಶಬ್ದಕ್ಕೂ ಏನೇನೂ ಸಂಬಂಧವಿಲ್ಲವೆಂದು ವಿದಿತವಾಗುತ್ತದೆ. ಆದುದರಿಂದ ಭೂಮಿಯನ್ನು ಉತ್ತು ಬಿತ್ತು ಬೆಳೆ ತೆಗೆಯುವ ಬೇಸಾಯಗಾರನೆ ಒಕ್ಕಲಿಗ ಎಂಬ ಮಾತು ಅನ್ವಯವಾಗುತ್ತಿರಬೇಕು. ಈ ಕೆಲಸಕ್ಕೆ ಮೀಸಲಾಗಿದ್ದ ಜನರ ವೃತ್ತಿಯೇ ಜಾತಿಯ ಹೆಸರೂ ಆಯಿತು. ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಗಳ ಕಾರಣದಿಂದ ಬೇರೆ ಬೇರೆ ಜಾತಿಯವರು ಒಕ್ಕಲುತನ ಮಾಡುತ್ತಿರುವವರನ್ನು ಒಕ್ಕಲಿಗರೆಂದು ಕರೆಯಲು ಸಾಧ್ಯವಾಗದ ಸಂದರ್ಭದಲ್ಲಿ ಬೇಸಾಯ ಮಾಡುವ ಇತರೆ ಜನರೆಲ್ಲರಿಗೂ ರೈತ ಎಂಬ ಶಬ್ದವನ್ನು ಬಳಸಿ ತೊಡಕನ್ನು ನಿವಾರಿಸಿಕೊಳ್ಳಲಾಯಿತು. ಹೀಗಾಗಿ 'ಒಕ್ಕಲಿಗ' ಶಬ್ದವು ವ್ಯವಸಾಯವನ್ನು ಮಾತ್ರ ಮಾಡುವವರು ಎಂಬ ಅರ್ಥವನ್ನು ಕಳೆದುಕೊಂಡು ಕ್ರಮೇಣ ಒಂದು ಜಾತಿಯ ಹೆಸರಾಯಿತು.

ಗಾವುಂಡ, ಗಾಮುಂಡ, ಗಾವುಡ, ಗೌಡಿ, ಗೌಡ ಮುಂತಾದ ಉಪನಾಮ ಉಳ್ಳವರೆಲ್ಲರು ಒಕ್ಕಲಿಗರಾಗಿದ್ದಾರೆಯೇ, ಇಲ್ಲವೇ ಎಂಬುದನ್ನು ಕರ್ನಾಟಕ ಸರ್ಕಾರ ಅಂದು ನೇಮಿಸಿದ ಎಲ್.ಜಿ.ಹಾವನೂರ್ ಆಯೋಗದ ವ್ಯಾಖ್ಯೆ ಹೀಗಿದೆ: ಒಕ್ಕಲಿಗರೆಂದರೆ ವಕ್ಕಲಿಗ, ಹಳ್ಳಿಕಾರ್, ಕುಂಚಟಿಗ, ರೆಡ್ಡಿ, ಕಾಪು, ಹೆಗ್ಗಡೆ, ಕಮ್ಮಾಗೌಂಡರ್ ಉತ್ತರ ಕರ್ನಾಟಕದಲ್ಲಿ ಗಾವುಂಟರ್‌ಗೌಡ ಎಂಬ ಉಪನಾಮ ಪಡೆದ ಸಮುದಾಯದ ಬಹುಭಾಗ ವೀರಶೈವ ಧರ್ಮದ

ಅನುಯಾಯಿಗಳಾಗಿದ್ದಾರೆ. ಅದಕ್ಕೂ ಹಿಂದೆ ಗಾವುಂಡರಲ್ಲಿ ಅನೇಕರು ಜೈನಮತಾವಲಂಬಿಗಳಾಗಿದ್ದಾರೆಂದು ಶಾಸನಗಳಿಂದ ತಿಳಿದು ಬರುತ್ತದೆ. ಮತ್ತೆ ಅವರಲ್ಲಿ ಬಹುಮಂದಿ ಬಸವಣ್ಣನವರ ಪ್ರಭಾವದಿಂದಲೋ ಏನೋ ಜೈನಧರ್ಮ ತೊರೆದು ವೀರಶೈವರಾದರು. ಶ್ರೀ ರಾಮಾನುಜರ ಪ್ರಭಾವದಿಂದ ಒಕ್ಕಲಿಗರ ಒಂದು ಗುಂಪು ಶ್ರೀವೈಷ್ಣವ ಪಂಥವನ್ನು ಅನುಸರಿಸಿ ಶ್ರೀ ವೈಷ್ಣವ ನಾಮಧಾರಿ ಒಕ್ಕಲಿಗರಾದರು. ಒಕ್ಕಲಿಗರ ವ್ಯಾಪ್ತಿ ಕೆಲವೆಡೆ ಹೆಗ್ಗಡೆ, ನಾಯಕರು, ಬಂಟರು, ಒಡೆಯಾ, ಅಯ್ಯಾ ಎಂಬ ಉಪನಾಮಗಳೊಂದಿಗೆ ಒಂದು ಕುಟುಂಬದ ಸದಸ್ಯರನ್ನು ಹೊಂದಿರುವುದನ್ನು ಕಾಣಬಹುದು. ಒಕ್ಕಲಿಗ ಸಮುದಾಯದಲ್ಲಿ ಗೌಡ ಎಂಬ ಉಪನಾಮ ಅಧಿಕವಾಗಿದೆ. 12ನೇ ಶತಮಾನಕ್ಕೂ ಹಿಂದಿನ ಶಾಸನಗಳಲ್ಲಿ ಬರುವ ಗೌಡ ಉಪನಾಮ ಬಹುಮಟ್ಟಿಗೆ ಒಕ್ಕಲಿಗರನ್ನೇ ಕುರಿತಾದದ್ದು ಎಂದು ಹೇಳಬಹುದು.

ಐತಿಹ್ಯ

ನಾಡಿನ ಜನಸಂಖ್ಯೆಯ ಬೃಹತ್ ಪ್ರಮಾಣದಲ್ಲಿರುವ ಒಕ್ಕಲಿಗ ಜನಾಂಗದ ಮೂಲ, ಹುಟ್ಟು ಮತ್ತು ವಿಕಾಸದ ಬಗೆಗೆ ಹಲವಾರು ಐತಿಹ್ಯಗಳು ಮತ್ತು ದಂತಕಥೆಗಳು ಹುಟ್ಟಿಕೊಂಡವು. ಇವುಗಳು ಇತಿಹಾಸದಂತೆ ಕರಾರುವಾಕ್ಕಾಗಿಲ್ಲ. ಆದರೂ ಕೂಡ ಇಂತಹ ಐತಿಹ್ಯಗಳಲ್ಲೇ ಜನಸಾಮಾನ್ಯರಲ್ಲಿ ಬಲವಾದ ನಂಬಿಕೆ ಇದೆ ಎಂದರೆ ತಪ್ಪಾಗಲಾರದು. ಒಕ್ಕಲಿಗರ ಮೂಲವನ್ನು ತಿಳಿಸುವ ಮಹಾಭಾರತದ ಉಪಕಥೆಯೊಂದು ಈ ರೀತಿ ಇದೆ. ಮಹಾಭಾರತದ ಮೇರು ವ್ಯಕ್ತಿಯಾದ ಅರ್ಜುನನು ಒಂದು ದಿನ ಒಂದು ಊರಿನಲ್ಲಿ ಜೋಗಿಯ ವೇಷ ಧರಿಸಿ ನರ್ತಿಸುತ್ತಾ ಬರುತ್ತಿರಲು ಅರ್ಜುನನ ನೃತ್ಯವನ್ನು ನೋಡಲು ಆ ಊರಿನ ಜನ ನೆರೆದಿದ್ದರು. ಆ ನಾಟ್ಯವನ್ನು ನೋಡುವ ಉದ್ದೇಶದಿಂದ ಮಹಿಳೆಯೊಬ್ಬಳು ತನ್ನ ಮನೆಕೆಲಸದ ಜೊತೆ ಜೊತೆಗೆ ತನ್ನ ಮನೆಯ ಜಗುಲಿಯ ಮೇಲೆ ತನ್ನ ಚಿಕ್ಕಮಗುವಿನೊಂದಿಗೆ ಬಂದು ಕುಳಿತಳು. ತನ್ನ ಗೃಹಕೃತ್ಯವನ್ನು ಮಾಡಬೇಕಾದ ಅನಿವಾರ್ಯತೆ ಇದ್ದುದರಿಂದ ಸೋರೇಕಾಯಿಯನ್ನು ಹೆಚ್ಚುತ್ತಾ ನೃತ್ಯವನ್ನು ನೋಡುತ್ತಾ ಕುಳಿತಳು. ಅರ್ಜುನನ ನೃತ್ಯವನ್ನು ನೋಡುತ್ತಾ ಮೈಮರೆತ ಆ ಗೃಹಿಣಿ ತನ್ನ ಮಗುವಿನ ತಲೆಯನ್ನೇ ಸೋರೇಕಾಯೆಂದು ತಿಳಿದು ಕತ್ತರಿಸಿದಳು. ಅದೇ ರೀತಿ ಅದರ ಕಾಲನ್ನೂ ಕತ್ತರಿಸಿದಳು. ಇದು ಆಕೆಯ ಅರಿವಿಗೆ ಬರಲಿಲ್ಲ. ತನ್ನಿಂದಾದ ಅಚಾತುರ್ಯದಿಂದಾಗಿ ಭಯಭೀತಳಾದ ಆ ಮಹಿಳೆ ರೋದಿಸಿದಳು, ಚೀರಿಟ್ಟಳು. ನೆರೆದಿದ್ದ ಜನ ನೃತ್ಯವನ್ನು ನೋಡುವುದನ್ನು ಬಿಟ್ಟು ಗೃಹಿಣಿಯತ್ತ ಗಮನ ಹರಿಸಿದರು. ಈ ರೀತಿಯಾಗಲು ನೃತ್ಯಗಾರನೇ ಕಾರಣನೆಂದು ದೂಷಿಸಿದಳು ಹಾಗೂ ಆಗಿರುವ ಅವಗಡವನ್ನು ಸರಿಪಡಿಸುವಂತೆ ಆತನಲ್ಲಿ

ಮೊರೆಯಿಟ್ಟಳು. ಅರ್ಜುನನು ಎಷ್ಟೇ ಬಲಶಾಲಿಯಾಗಿದ್ದರೂ ಆ ಸಂದರ್ಭದಲ್ಲಿ ತನ್ನ ತಪಃಶಕ್ತಿಯನ್ನು ಹಾಗೂ ಮಹಿಮೆಯನ್ನು ತೋರಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಆದರೆ ಗೃಹಿಣಿಯ ಮೊರೆ ಕೇಳಿದ ಅರ್ಜುನನು ಒಂದು ಸಲಹೆಯನ್ನು ನೀಡಿದನು. ಅದೇನೆಂದರೆ ಬೆಟ್ಟದ ಮೇಲಿರುವ ಭೈರವೇಶ್ವರನನ್ನು ಪ್ರಾರ್ಥಿಸುವಂತೆಯೂ ಈ ರೀತಿ ಪ್ರಾರ್ಥಿಸಿದರೆ ಸರ್ವಶಕ್ತನಾದ ಭೈರವೇಶ್ವರನು ಕೃಪೆ ತೋರಿ ಆಗಿರುವ ಅವಗಡವನ್ನು ಸರಿಪಡಿಸುವನೆಂದೂ ತಿಳಿಸಿದನು. ಆ ಗೃಹಿಣಿಯು ಹಾಗೆ ಮಾಡಲು ಅರ್ಜುನನು ಕತ್ತರಿಸಿದ್ದ ಮಗುವಿನ ರುಂಡ ಮುಂಡಗಳನ್ನು ಜೋಡಿಸಲಾಗಿ ಆ ಮಗುವು ಬದುಕಿ ಉಳಿಯಿತು. ಆದರೆ ಕತ್ತರಿಸಿದ್ದ ಕಾಲು ಸರಿಹೋಗದಿದ್ದಾಗ ಮತ್ತೊಮ್ಮೆ ಗೃಹಿಣಿಯು ಆ ಕಾಲನ್ನು ಸರಿಪಡಿಸುವಂತೆ ಕೇಳಿಕೊಳ್ಳಲಾಗಿ ಅದಕ್ಕೆ ಒಪ್ಪದ ಅರ್ಜುನನು ಆ ಮಗುವಿಗೆ ಆಶೀರ್ವದಿಸಿ ಅಲ್ಲಿಂದ ಹಿಂತೆರಳಿದನು. ಮುಂದೆ ಆ ಮಗುವೇ 'ಒಕ್ಕಾಲು' ಅಥವಾ ಒಂದೇ ಕಾಲುಳ್ಳ ಮಗುವಾಯಿತು ಎಂತಲೂ ನಂತರ ಆತನೇ ಒಕ್ಕಲಿಗನಾದನೆಂತಲೂ ಈ ಐತಿಹ್ಯವು ಹೇಳುತ್ತದೆ. ಇದು ಎಷ್ಟು ಸಮಂಜಸವೋ ತಿಳಿಯದು. ಆದರೆ ಇಂದಿಗೂ ಒಕ್ಕಲಿಗರು ಭೈರವದೇವನ ಒಕ್ಕಲಾಗಿದ್ದು ಚುಂಚನಗಿರಿಯ ಭೈರವನಿಗೆ ನಡೆದುಕೊಳ್ಳುತ್ತಾರೆ ಹಾಗೂ ಭೈರವ ಅವರ ಆರಾಧ್ಯ ದೈವ ಕೂಡ ಹೌದು.

ಲೂಯಿ ರೈಸ್‌ರವರು ಒಕ್ಕಲಿಗ ಶಬ್ದಕ್ಕೆ ತಮ್ಮ ಮೈಸೂರ್ ಗೆಜಿಟಿಯರ್‌ನಲ್ಲಿ ಈ ರೀತಿ ಹೇಳಿದ್ದಾರೆ: ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನಿಗೆ ತಪಸ್ವಿ ಓರ್ವನು ಸಿದಿರಸವನ್ನು ಅನುಗ್ರಹಿಸಿದನು. ಆ ಸಿದಿ ರಸವನ್ನು ಕಬ್ಬಿಣದ ಮೇಲೆ ಚೆಲ್ಲಿದರೆ ಆ ಕಬ್ಬಿಣವು ಚಿನ್ನವಾಗಿ ಪರಿವರ್ತನೆ ಹೊಂದುತ್ತಿತ್ತು. ಈ ಕಾರಣದಿಂದ ಚಿನ್ನವನ್ನು ಪಡೆಯುವ ಹಂಬಲದಿಂದ ರಾಜ ವಿಷ್ಣುವರ್ಧನನು ಹೀಗೆ ಆಜ್ಞಾಪಿಸಿದನು. ಇನ್ನು ಮುಂದೆ ರೈತರು ಭೂಕಂದಾಯವನ್ನು ಕೊಡುವ ಬದಲಿಗೆ ಕೆಲಸಕ್ಕೆ ಬಾರದ ಯಾವುದಾದರೂ ಕಬ್ಬಿಣದ ತುಂಡನ್ನು ನೀಡಬೇಕೆಂದನು. ಹೀಗೆ ಸಂಗ್ರಹವಾದ ಕಬ್ಬಿಣವನ್ನು ಹಿಂದಿನ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಹೊಯಿಸಳಲು ಗ್ರಾಮದ ಬಳಿ ಇವುಗಳೆಲ್ಲವನ್ನೂ ಸೇರಿಸಿ ಸಿದಿ ರಸವನ್ನು ಅದರ ಮೇಲೆ ಚೆಲ್ಲಿ ಚಿನ್ನವನ್ನು ಪಡೆಯುತ್ತಿದ್ದರು. ಈ ಸ್ಥಳ ಇಂದಿಗೂ "ರಸಬಾವಿ" ಎಂದು ಹೆಸರಾಗಿದೆ. ಈ ಒಕ್ಕುಳದ ಕುಲವೇ ಕ್ರಮೇಣ ಒಕ್ಕಲಿಗ ಆಗಿರಬಹುದು.

ಮತ್ತೊಂದು ಐತಿಹ್ಯದ ಪ್ರಕಾರ ಒಮ್ಮೆ ಜಗತ್ತಿನಲ್ಲಿ ಇಡೀ ಮಾನವ ಜನಾಂಗಕ್ಕೆ ಆಹಾರದ ಕೊರತೆಯಾಯಿತಂತೆ. ಆ ನರಮಾನವರೆಲ್ಲಾ ಕೈಲಾಸಕ್ಕೆ ಹೋಗಿ ಶಿವನನ್ನು ಪ್ರಾರ್ಥಿಸಿದರಂತೆ. ಅವರ ಸಂಕಷ್ಟವನ್ನು ಕೇಳಿದ ಶಿವನು ಚಿಂತಾಕ್ರಾಂತನಾದನು. ಶಿವನ ಮುಂದಿದ್ದ ನಂದಿಯು ಮುಂದೆ ಬಂದು

ಯಾರಾದರೊಬ್ಬರು ತನ್ನ ಜೊತೆಯಲ್ಲಿ ಭೂಮಿಗೆ ಬಂದರೆ ತಾನು ಸಮಸ್ಯೆಯನ್ನು ಪರಿಹರಿಸುವುದಾಗಿಯೂ ವಿನಮ್ರವಾಗಿ ಕೇಳಿಕೊಂಡಿತು. ಆ ಸಮಯದಲ್ಲಿ ಯಾರೂ ಮುಂದೆ ಬರದಿದ್ದಾಗ ಒಬ್ಬ ವ್ಯಕ್ತಿ ಮುಂದೆ ಬಂದನು. ಭೂಮಿಗೆ ಬಂದಿಳಿದ ನಂದಿ ಮತ್ತು ಆ ವ್ಯಕ್ತಿ ಇಬ್ಬರೂ ಸೇರಿ ಭೂಮಿಯನ್ನು ಉತ್ತು, ಬಿತ್ತಿ, ಬೆಳೆ ಬೆಳೆದು ಜನರ ಆಹಾರ ಸಮಸ್ಯೆಯನ್ನು ಪರಿಹರಿಸಿದರು. ಜನಗಳ ಸಮಸ್ಯೆಗಳನ್ನು ನಿವಾರಿಸಿದರು. ಮುಂದೆ ಈತನೇ ಒಕ್ಕಲಿಗನಾದನು. ಇಂದಿಗೂ ಕೂಡ ರಾಸುಗಳು ಇಲ್ಲವೇ ಎತ್ತುಗಳು ರೈತರ ಜೀವನ ಶೈಲಿಯ ಅವಿಭಾಜ್ಯ ಅಂಗವಾಗಿವೆ. ಬಹುಶಃ ಈ ಐತಿಹ್ಯವು ಇಂದಿನ ಪ್ರಸ್ತುತತೆಗೆ ಬಹಳ ಸಮೀಪವಾದುವೆಂದು ಹೇಳಬಹುದು.

ಗೌಡ–ಗೌಡಿಕೆ–ಪಟೇಲ–ನಾಡಗೌಡ–ನಾಡಪ್ರಭು ಇತ್ಯಾದಿ

ಸಂಶೋಧಕರಾದ ಡಾ. ಜಯಪ್ಪಗೌಡ ಮತ್ತು ಡಾ. ಸೂರ್ಯನಾಥ್ ಕಾಮತ್‌ರವರು ಗೌಡ–ಗೌಡಿಕೆ–ನಾಡಪ್ರಭುಗಳ ಬಗ್ಗೆ ಸಾಕಷ್ಟು ವಿವರಣೆ ನೀಡಿದ್ದಾರೆ. ಊರಿಗೆ ಒಬ್ಬನನ್ನು ಗೌಡನನ್ನಾಗಿ ನೇಮಿಸುವ ಪದ್ಧತಿ ಎಂದಿನಿಂದ ಬಂತೆಂದು ಹೇಳಲು ಸಾಧ್ಯವಿಲ್ಲ. ಗೌಡ ಎಂಬ ಪದ ರೂಢಿಗೆ ಬರುವ ಮೊದಲು 'ಭೋಜಕ' ಎಂಬ ಶಬ್ದ ಬಳಕೆಯಲ್ಲಿತ್ತೆಂದು ಹೇಳಬಹುದು. ಬನವಾಸಿ ಕದಂಬರ 6ನೇ ಶತಮಾನದ (ಮೃಗೇಶವರ್ಮ) ಶಾಸನದಲ್ಲಿ (ಸೊರಬ 33) ದೇಶಗ್ರಾಮ ಭೋಜಕ ಎಂಬುದರ ಉಲ್ಲೇಖವಿದ್ದು ಈ ದೇಶಭೋಜಕನೇ ಮುಂದೆ ನಾಡಗೌಡ ಎಂತಲೂ ಈ ಗ್ರಾಮಭೋಜಕನೇ ಊರ ಮುಖಂಡ ಊರಗೌಡನೆಂತಲೂ ಬದಲಾಗಿರಬಹುದು. ಒಕ್ಕಲುತನ ಮಾಡುವವರನ್ನು ರೈತರು, ಬೇಸಾಯ ಮಾಡುವ ಕೆಲಸದಲ್ಲಿ ನಿರತರಾದವರನ್ನು ಒಕ್ಕಲಿಗರೆಂತಲೂ, ಊರ ಮುಖಂಡನನ್ನು ಸಂಬೋಧಿಸಲು ಗೌಡ ಎಂಬ ಪದ (ಗ್ರಾಮ ಮುಖಂಡ–ಗಾಮುಂಡ–ಗಾವುಡ–ಗೌಡ) ಬಂದಿರಬಹುದೆಂದು ಹೇಳಬಹುದು. ಗೌಡಬೋವ ಎಂಬುವರೂ ಇದ್ದರು. ಇದಕ್ಕೆ ಸಂಬಂಧಪಟ್ಟ ಶಾಸನೋಕ್ತ ಆಧಾರವಿದೆ. ಕೆಲವೊಮ್ಮೆ ಸಣ್ಣ ಊರಿಗೆ ಒಬ್ಬನೇ ಗೌಡನನ್ನು ನೇಮಿಸಿದರು. ಮೊದಲು ದೊಡ್ಡ ಊರುಗಳಿಗೆ ಒಂದಕ್ಕಿಂತ ಹೆಚ್ಚು ಗೌಡರನ್ನು ನೇಮಿಸಿದ್ದಂತೆ ಕಾಣುತ್ತದೆ. ಕೆಲವೊಂದು ಊರುಗಳಲ್ಲಿ ದೊಡ್ಡ ರೈತ ಇಲ್ಲವೆ ಬಲಿಷ್ಠನಾದ ಕೃಷಿಕನೊಬ್ಬನನ್ನು ಗೌಡನನ್ನಾಗಿ ನೇಮಿಸಿರಬಹುದು. ಇವರನ್ನು ಮೂಲಿಗರು ಎಂತಲೂ ಕರೆಯುತ್ತಿದ್ದರು. ಕ್ರಿ.ಶ. 1414ರ ಕಬ್ಬೂರು ಶಾಸನದಲ್ಲಿ ಕಬ್ಬೂರ ಮೂಲಿಗ ಮಾಚಗಾವುಣ್ಡನ ಅನುಮತಿ ಪಡೆದು ಆ ಊರಿನ ಮುಕ್ತೇಶ್ವರ ದೇವಾಲಯಕ್ಕೆ ದಾನವಿತ್ತಿರುವಲ್ಲಿ ಮುಖಂಡ ಅಥವಾ ಗೌಡನ ಪ್ರತ್ಯೇಕ ಉಲ್ಲೇಖವಿಲ್ಲದಿರುವುದರಿಂದ ಆತನೇ ಊರ ಗೌಡನಾಗಿರಬೇಕು ಎಂದು ತಿಳಿದುಬರುತ್ತದೆ (ದಾವಣಗೆರೆ, 156). ಅದೇ ರೀತಿ ಬೆಳಗವತ್ತಿಯ ಮೂಲಿಗ

ಬೊಮ್ಮಗಾವುಡ ಹಾಗೂ ಮಾಳಗಾವುಡ ಇವರಲ್ಲದೇ ಬಿಡತೊರ ಕೇತಗಾವುಡ, ಬನ್ನಳಿಯ ಬೊಮ್ಮಗಾವುಡ, ಇದೇ ರೀತಿ ಹತ್ತಿಲೂರು, ಮೇದೂರು ಮುಂತಾದ ಊರ ಪ್ರಭು ಗಾವುಂಡಗಳು ಕ್ರಿ.ಶ. 1222ರಲ್ಲಿ ಮಾದನಬಾವಿ, ಮಲ್ಲಿಕಾರ್ಜುನ ದೇವಾಲಯ ಹಾಗೂ ಬಸದಿಗೆ ದಾನ ಮಾಡಲು ಒಪ್ಪಿಗೆ ಕೊಟ್ಟದ್ದು ಕಾಣುತ್ತದೆ.

ಊರಿನ ಗೌಡನ ಪ್ರಾಚೀನತೆಯನ್ನು ನೋಡುವುದೇ ಆದರೆ ಗಂಗರ ಕಾಲದಲ್ಲಿ ಹಾಗೂ ನಂತರ ಬಾದಾಮಿ ಚಾಲುಕ್ಯರ ಕಾಲದಲ್ಲಿ ಈ ರೀತಿಯ ವ್ಯವಸ್ಥೆ ಇದ್ದಿತೆಂದು ಕಂಡುಬರುತ್ತದೆ. ಬಾದಾಮಿ ಚಾಲುಕ್ಯರ ಕಾಲದ ಕ್ರಿ.ಶ. 658ರ ಬಳ್ಳಿಗಾವೆ ಶಾಸನದ (ಶಿಕಾರಿಪುರ 154) ವೊಳೆಯೂರ ಮಣಿಯ ಗಾಮುಣ್ಡರು ಇತ್ಯಾದಿಯಾಗಿ ಊರ ಗೌಡನಿಗೆ ಸಂಬಂಧಿಸಿದ ಶಾಸನವಾಗಿರುತ್ತದೆ. ಇಲ್ಲಿ ಒಂದೊಂದು ಊರಿಗೂ ಮೂರು ಇಲ್ಲವೇ ನಾಲ್ಕು ಗೌಡರಿದ್ದದ್ದು ಕಾಣಿಸುತ್ತದೆ. ಶ್ರೀರಂಗಪಟ್ಟಣದ ಗಂಗ ಇಮ್ಮಡಿ ಶಿವಮಾರನ ಶಾಸನವೊಂದರಲ್ಲಿ ದಾನವೊಂದಕ್ಕೆ ಸಾಕ್ಷಿಯಾಗಿ ಪ್ರತಿ ಊರಿನ ಇಬ್ಬರು ಗಾವುಂಡರನ್ನು ನಾಲ್ಕು ಗ್ರಾಮಗಳಿಗೆ ಸಂಬಂಧಿಸಿ ಹೇಳಲಾಗಿದೆ. (ಶ್ರೀರಂಗಪಟ್ಟಣ 66) ಎಂದರೆ ಆರಂಭದ ದಾಖಲೆಗಳಲ್ಲಿ ಒಬ್ಬನಿಗಿಂತ ಹೆಚ್ಚು ವ್ಯಕ್ತಿಯನ್ನು ಊರ ಗೌಡನನ್ನಾಗಿ ನೇಮಿಸಿದ್ದು ಕಂಡುಬರುತ್ತದೆ. ಮುಳಬಾಗಿಲು (ಕೋಲಾರ ಜಿಲ್ಲೆ) ತಾಲ್ಲೂಕು ಗೊಲ್ಲರಹಳ್ಳಿ ಕ್ರಿ.ಶ. 909ರ ಶಾಸನದಲ್ಲಿ ಬಾಣ ಅರಸರ (ಇವರು ಗಂಗ ಅರಸರ ಮಾಂಡಲಿಕರು) ಕಾಲದಲ್ಲಿ ಮಣಿಘಟ್ಟ (ಈಗಿನ ಮಣಿಘಟ್ಟ-ಗೊಲ್ಲರಹಳ್ಳಿ) ಮಣಿಘಟ್ಟೆಯೂ ಮಾಣಿಕ್ಯದಂತಿದ್ದ ಮೆಂಡಿಮುದುಳಗೌಂಡರ ಮಗ ಕಸವಯ್ಯ ಯುದ್ಧವೊಂದರಲ್ಲಿ ಹತನಾದ ವಿಷಯವಿದೆ. ಈ ವೀರಗಲ್ಲು ಮೇಲೆ ಹೇಳಿದ ಮಂಡಿಮುದುಳಗೌವುಣ ಊರಿನ ಮಾಣಿಕ್ಯ ಎಂದಿರುವುದರಿಂದ ಊರ ಗೌಡನಾಗಿರಬೇಕು (ಮುಳಬಾಗಿಲು 229). ಇಲ್ಲಿ ಇವನಲ್ಲದೆ ಬೇರೆ ಗೌಡಿಕೆ ಮಾಡುವ ವ್ಯಕ್ತಿ ಇದ್ದನೆಂದು ತಿಳಿಯಲು ಮಾರ್ಗವಿಲ್ಲ.

ಗೌಡಿಕೆ ಎಂಬುದು ವಿವಿಧ ಗ್ರಾಮೀಣ ಸಮುದಾಯಗಳಿಗೆ ಸೇರಿರ ಬಹುದಾದರೂ ಒಕ್ಕಲಿಗರಲ್ಲಿ ಅದು ಬೇರ್ಪಡಿಸಲಾಗದ ಹುದ್ದೆಯಾಗಿರಬಹುದು. ಗೌಡಿಕೆಯಿಂದಾಗಿ ಈ ಸ್ಥಾನಮಾನವನ್ನು ಪಡೆದ ವ್ಯಕ್ತಿಯು ಗ್ರಾಮದ ಆಗುಹೋಗುಗಳ ಬಗ್ಗೆ ನಿಯಂತ್ರಣ ಹೊಂದಿರುತ್ತಿದ್ದನು. ಇದರಿಂದಾಗಿ ಆತನಿಗೆ ಆ ಊರಿನಲ್ಲಿ ಪ್ರತಿಷ್ಠೆ ಮತ್ತು ಪುರಸ್ಕಾರಗಳು ದೊರೆಯುತ್ತಾ ಬಂದವು. ಗ್ರಾಮದ ಕಾನೂನು ವ್ಯವಸ್ಥೆ ನೋಡಿಕೊಳ್ಳುವುದು, ಭೂಕಂದಾಯವನ್ನು ವಸೂಲಿ ಮಾಡುವುದು, ಧಾರ್ಮಿಕ ಆಚರಣೆಗಳ ವ್ಯವಸ್ಥೆಯಂತಹ ಜವಾಬ್ದಾರಿಯುತ ಕೆಲಸ ಕಾರ್ಯಗಳನ್ನು ಆತ ನಿರ್ವಹಿಸುತ್ತಾ ಬಂದನು.

ಈ ಗ್ರಾಮಗೌಡಿಕೆ ಒಕ್ಕಲುತನ ಮಾಡುವ ಒಕ್ಕಲಿಗನಿಗೆ ಅಥವಾ ಕೃಷಿಕನಿಗೆ ಅಥವಾ ಜಮೀನ್ದಾರನಿಗೆ ಏಕೆ ಬಂದಿತು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅಂದು ವ್ಯವಸಾಯವೇ ಸಮಾಜದ ಅಡಿಗಲ್ಲಾಗಿತ್ತು. ನೀರಾವರಿ ವ್ಯವಸ್ಥೆ ಮತ್ತು ಒಳ್ಳೆಯ ಮಾರುಕಟ್ಟೆ ವ್ಯವಸ್ಥೆ ಇಲ್ಲದ ಆ ಕಾಲದಲ್ಲಿ ವ್ಯವಸಾಯ ಮಾಡಿ ತಾನು ಉಂಡುಟ್ಟು, ತನ್ನನ್ನೇ ಅವಲಂಬಿಸಿರುವ ಇತರರಿಗೂ ಕೊಟ್ಟು ಸಮಾಜದಲ್ಲಿ ನೆಮ್ಮದಿ ತರುವುದು ಸುಲಭದ ಕೆಲಸವಾಗಿರಲಿಲ್ಲ. ರಾಜನ ಸೈನ್ಯಕ್ಕೆ ಯೋಧರು ಸೇರಿದಂತೆ ಅಗತ್ಯವಾದ ವಸ್ತುಗಳನ್ನು ಒದಗಿಸುವ ಭೂ ಕಂದಾಯ ಮತ್ತು ತೆರಿಗೆಯನ್ನು ವಸೂಲಿ ಮಾಡುವ ಜವಾಬ್ದಾರಿ ಅಥವಾ ಹೊಣೆಗಾರಿಕೆ ಈ ಗ್ರಾಮ ಮುಖಂಡನ ಮೇಲಿದ್ದಿತು. ರಾಜ ಅಥವಾ ರಾಜ್ಯವು ಆಂತರಿಕವಾಗಿ ಸಂಕಷ್ಟಕ್ಕೆ ಸಿಲುಕಿರುವಾಗ ಜಮೀನ್ದಾರರು ಅಥವಾ ರೈತರು ಸೈನಿಕರಂತೆ ತಮ್ಮ ರಾಜ್ಯಕ್ಕಾಗಿ ಸೇವೆ ಸಲ್ಲಿಸುತ್ತಿದ್ದರು. ಇವರನ್ನು ಬೇಸಾಯಗಾರ ಯೋಧ ಇಲ್ಲವೇ (Agro Martial) ಕೃಷಿಕ ಯೋಧ ಎಂದು ಕರೆಯುತ್ತಿದ್ದುದಾಗಿ ಇತಿಹಾಸಕಾರರು ಉಲ್ಲೇಖಿಸಿದ್ದಾರೆ. ರೈತರು ಬೇರೆ ಎಲ್ಲಾ ಕಸುಬುದಾರರಿಗಿಂತಲೂ ಬಹುಸಂಖ್ಯಾತರಾಗಿದ್ದರು. ಆದುದರಿಂದ ಜನಬಲ, ಧನಬಲ, ಹೈನುಗಳ ಸಂಪತ್ತನ್ನು ಹೊಂದಿದ್ದ ಈ ರೈತಾಪಿ ಜನರಿಗೆ ಗ್ರಾಮಗಳ ಆಡಳಿತ ಹುದ್ದೆಯಾದ ಗೌಡಿಕೆಯನ್ನು ರಾಜಮಹಾರಾಜರುಗಳು ತಲೆತಲಾಂತರಗಳಿಂದಲೂ ವಹಿಸಿಕೊಡುತ್ತಾ ಬಂದರು. ಈ ಹುದ್ದೆ ಆನುವಂಶಿಕವಾಯಿತು. ಈ ರೀತಿ ಗೌಡಿಕೆ ಮಾಡಿದವರು ಪಾಳೆಯಗಾರರಾಗಿ ಇಲ್ಲವೆ ನಾಡಪ್ರಭುಗಳಾಗಿ ಇಲ್ಲವೇ ರಾಜ ಮಹಾರಾಜರಾಗಿ ಮೆರೆದ ಉದಾಹರಣೆಗಳಿವೆ.

ಇಲ್ಲಿ ಗೌಡಿಕೆ ಕೇವಲ ಇಂದಿನ ಒಕ್ಕಲಿಗ ಜಾತಿಗೆ ಸೀಮಿತವಾದದ್ದು ಎಂದು ಭಾವಿಸಬಾರದು. ಅದು ಒಕ್ಕಲುತನ ಮಾಡುವ ಇತರರಿಗೂ ದೊರೆಯುತ್ತಿತ್ತು.

ಗೌಡಿಕೆ ಜಾತಿಯಿಂದ ಒಕ್ಕಲಿಗರು, ವೀರಶೈವರು, ಕುರುಬರು, ಉಪ್ಪಾರರು ಮೊದಲಾದವರು ಎಲ್ಲೆಲ್ಲಿ ಬಹುಸಂಖ್ಯಾತ ರೈತಾಪಿ ವರ್ಗದಲ್ಲಿ ಇದ್ದರೋ ಅವರಿಗೆಲ್ಲಾ ಪ್ರಾಪ್ತವಾಯ್ತು. ಬ್ರಾಹ್ಮಣರಲ್ಲಿ ಕೂಡ ಒಕ್ಕಲುತನವನ್ನು ಮಾಡುವವರು ಹೇರಳವಾಗಿದ್ದಾರೆ. ಉದಾ: ಶಿವಮೊಗ್ಗ ಜಿಲ್ಲೆಯಲ್ಲಿ **'ಸಂಕೇತಿ ಬ್ರಾಹ್ಮಣ'**ರ ಮುಖ್ಯ ಕಸುಬು ವ್ಯವಸಾಯ. ಈಗ ಮುಸ್ಲಿಮರಲ್ಲೂ ವ್ಯವಸಾಯ ಮಾಡುವವರನ್ನು ಕಾಣಬಹುದು. ಗೌಡ ಎಂಬ ಹುದ್ದೆ ಎಷ್ಟು ಜನಪ್ರಿಯವಾಯ್ತು ಎಂದರೆ ಅಲೆಮಾರಿ ಇಲ್ಲವೆ ಗುಡ್ಡಗಾಡು ಜನರ ಪಂಗಡಗಳವರೂ ಕೂಡ ತಮ್ಮ ಕುಲ ಮುಖ್ಯಸ್ಥನಿಗೆ **'ಗೌಡ'** ಎಂಬ ಪದನಾಮ ನೀಡಿರುವುದನ್ನು ಕಾಣಬಹುದು. ಅಗ್ರಹಾರಗಳು ಹಾಗೆಯೇ ಮಹಾಜನ ಸಭೆಗಳು ಮತ್ತು ಕೆಲವು ವೃತ್ತಿಸಂಘಗಳು ಗೌಡಿಕೆ

ವ್ಯಾಪ್ತಿಯಿಂದ ಹೊರತಾಗಿದ್ದವು. ಅಲ್ಲದೆ ಗೌಡ, ಪ್ರಭು, ಪ್ರಭುಗೌಡ, ಹೆಗ್ಗಡೆ, ನಾಯಕ ಎಂಬುದು ಊರ ಗೌಡನಿಗೆ ಸಂಬಂಧಿಸಿದ್ದೆಂದು ಸ್ಪಷ್ಟವಾಗುತ್ತದೆ. ಇವುಗಳು ಗೌಡ ಸಂಬಂಧಿಯಾದ ಪದಗಳಾಗಿವೆ.

ಗ್ರಾಮ ಗೌಡ, ಗ್ರಾಮಸಭೆ

ಆಡಳಿತದ ಮೂಲ ವ್ಯವಸ್ಥೆ ಗ್ರಾಮದಿಂದ ಪ್ರಾರಂಭವಾಗುತ್ತಿದ್ದಿತು. ಈ ಗ್ರಾಮಕ್ಕೆ ಒಂದು ಪ್ರಾದೇಶಿಕ ಎಲ್ಲೆ ಇರುತ್ತಿದ್ದಿತು. ಪ್ರತಿ ಕುಟುಂಬ ಅಥವಾ ಒಕ್ಕಲೇ ಈ ಗ್ರಾಮದ ಸದಸ್ಯರು. ಚಿಕ್ಕ ಗ್ರಾಮದಲ್ಲಿ 20ರಿಂದ 30 ಒಕ್ಕಲುಗಳಿದ್ದರೆ ದೊಡ್ಡ ಗ್ರಾಮಗಳಲ್ಲಿ ನೂರಾರು ಒಕ್ಕಲುಗಳಿರುವುದುಂಟು. ಕೆಲವೊಮ್ಮೆ ಒಂದಕ್ಕಿಂತ ಹೆಚ್ಚು ಹಳ್ಳಿಗಳು ಈ ಗ್ರಾಮದ ವ್ಯಾಪ್ತಿಗೆ ಬರುತ್ತಿದ್ದವು. ಗ್ರಾಮದ ಎಲ್ಲ ವ್ಯವಹಾರಗಳು ಸಭೆ ಅಥವಾ ಊರು ಎಂಬ ಸಂಘದ ಮೂಲಕ ನಡೆಯುತ್ತಿದ್ದಿತು. ಬೇರೆ ಮಾತಿನಲ್ಲಿ ಹೇಳುವುದಾದರೆ ಇದೇ ಗ್ರಾಮ ಪಂಚಾಯಿತಿ. ಈ ಗ್ರಾಮ ಸಭೆಗೆ ಗ್ರಾಮ ಗೌಡನು ಮುಖ್ಯಸ್ಥನಾಗಿರುತ್ತಿದ್ದನು. ಗೌಡನು ಗ್ರಾಮಸ್ಥರ ಪ್ರತಿನಿಧಿಯಾಗಿಯೂ ಸರ್ಕಾರದ ಮಧ್ಯವರ್ತಿಯಾಗಿಯೂ, ಕಾರ್ಯ ನಿರ್ವಹಿಸಬೇಕಾಗಿದ್ದಿತು. ಅಂದರೆ ಇಲ್ಲಿ ಅಧಿಕಾರಶಾಹಿಯ ದಬ್ಬಾಳಿಕೆ ನಡೆಯದಂತೆ ಜನರ ಇಂಗಿತ, ಕಷ್ಟಸುಖ ಅರಿತು ನಡೆಯುವ ಸ್ಥಳೀಯ ಮುಖಂಡನನ್ನೇ ಗೌಡನನ್ನಾಗಿ ರಾಜರು ನೇಮಿಸುತ್ತಿದ್ದರು. ಹೀಗೆ ನೇಮಿತನಾದ ಗೌಡನಿಗೆ ಹೆಚ್ಚಿನ ಸಂದರ್ಭದಲ್ಲಿ ಗೌಡಿಕೆ ವಂಶಪಾರಂಪರ್ಯವಾಗಿ ಮುಂದುವರಿಯುತ್ತಿದ್ದಿತು.

ಗ್ರಾಮಗೌಡನ ಮುಖ್ಯ ಕರ್ತವ್ಯಗಳೆಂದರೆ ಗ್ರಾಮದಲ್ಲಿ ಲಭ್ಯವಿದ್ದ ಸಾಗುವಳಿ ಜಮೀನಿನ ಮೇಲೆ ಕಂದಾಯ ಹಾಕಿ ವಸೂಲು ಮಾಡಿಕೊಡುವುದು; ವಿವಿಧ ವ್ಯಕ್ತಿಗಳ ಜನರ ಆದಾಯದ ಮೇಲೆ ತೆರಿಗೆ ವಿಧಿಸುವುದು; ಇದನ್ನೆಲ್ಲ ಸರ್ಕಾರದ ಖಜಾನೆಗೆ ಜಮಾ ಮಾಡುವುದು; ಗ್ರಾಮಸ್ಥರ ಕಷ್ಟನಷ್ಟಗಳನ್ನು ಗಮನಿಸುವುದು; ವ್ಯಕ್ತಿಗತ ವ್ಯಾಜ್ಯಗಳನ್ನು ಪಂಚಾಯತಿ ಮೂಲಕ ತೀರ್ಮಾನಿಸುವುದು; ಊರಿನ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ನಡೆದುಕೊಂಡು ಬರುವಂತೆ ನೋಡಿಕೊಳ್ಳುವುದು ಇತ್ಯಾದಿ. ಗೌಡನ ಈ ಕಾರ್ಯನಿರ್ವಹಣೆಗೆ ಗೌಡಗೊಡಗೆ ಅಥವಾ ಗೌಡಿಕೆ ಕೊಡುಗೆ ಎಂಬ ತೆರಿಗೆ ರಹಿತ ಭೂಮಿಯನ್ನು ಬಿಡುತ್ತಿದ್ದರು. ಒಂದು ಅಭಿವೃದ್ಧಿಯಾಗದ ಪ್ರದೇಶವನ್ನು ಅಭಿವೃದ್ಧಿಗೊಳಿಸಿ ಸಾಗುವಳಿ ಮಾಡಿ ಅಲ್ಲಿ ಒಕ್ಕಲುಗಳು ನೆಲೆಸುವಂತೆ ಮಾಡಿದವರಿಗೂ ಗೌಡಿಕೆ ಕೊಡುತ್ತಿದ್ದರು. ತುಮಕೂರು ಜಿಲ್ಲೆಯ ಕ್ರಿ.ಶ. 1486ರ ಒಂದು ಶಾಸನದಲ್ಲಿ ನರಸಿಂಗರಾಯನು ಗಂಗೇಗೌಡ ಎಂಬುವನಿಗೆ 'ಹೆಜಜಿ' ಎಂಬ ಗ್ರಾಮವನ್ನು ಸ್ಥಾಪಿಸಿದ್ದಕ್ಕಾಗಿ ಗೌಡಿಕೆ ಕೊಟ್ಟ ಉಲ್ಲೇಖವಿದೆ. ನೀರಾವರಿಗೆ ಕಾಲುವೆ ತೋಡಿಸಿದವರು, ದೇವಸ್ಥಾನ

ಕಟ್ಟಿಸಿದವರು ಗೌಡಿಕೆ ಪಡೆದ ವಿವರಗಳೂ ಶಾಸನಗಳಲ್ಲಿ ದೊರೆಯುತ್ತವೆ. ಅಂದರೆ ಜನೋಪಯೋಗಿ ಕಾರ್ಯಗಳನ್ನು ಮಾಡಿ ಸ್ಥಳೀಯ ಜನರನ್ನು ರಕ್ಷಿಸುವ ಸಾಮರ್ಥ್ಯ ಇದ್ದವರಿಗೆ ಗೌಡಿಕೆ ಕೊಡುತ್ತಿದ್ದರು.

ಗ್ರಾಮ ಗೌಡಿಕೆಯಲ್ಲದೆ ಸ್ಥಳದ ಗೌಡಿಕೆ, ಜಾತಿ ಗೌಡಿಕೆಯೂ ಇದ್ದಿತು. ಇದು ಒಂದಕ್ಕಿಂತ ಹೆಚ್ಚು ಗ್ರಾಮಗಳನ್ನು ಒಳಗೊಳ್ಳುತ್ತಿತ್ತು. ಇದಕ್ಕೆ ಕೆಲವೆಡೆ ಮುಂದೆ ಗೌಡಿಕೆ ಎಂಬ ಹೆಸರಿತ್ತು. ಮಲೆನಾಡಿನಲ್ಲಿ ಸಾವಿರವೆಂದು ಕರೆಯಲಾಗುವ ಮುಖ್ಯ ಗ್ರಾಮಕ್ಕೆ ಒಂದು ಮುಂದೆ ಗೌಡಿಕೆ ಇರುತ್ತಿತ್ತು. ಇದು ಸಾಧಾರಣವಾಗಿ ನಾಲ್ಕೈದು ಗ್ರಾಮಗಳ ಕೇಂದ್ರ. ಇವರೆಲ್ಲ ನಾಡಗೌಡನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇವರನ್ನು ನಾಡಗೌಡರು, ನಾಯಕರು ಅಥವಾ ರಾಜನ ಅಧಿಕಾರಿಗಳು ನೇಮಿಸುತ್ತಿದ್ದರು. ಈ ಗೌಡಿಕೆಯನ್ನು ಬದಲಿಸುವ ಅಧಿಕಾರ ಸರ್ಕಾರಕ್ಕಿತ್ತು. ಆದರೆ ಇವು ಆನುವಂಶಿಕ ಹುದ್ದೆಗಳಾದ್ದರಿಂದ ಹೊಸ ನೇಮಕಗಳು ವಿರಳವಾಗಿ ಮಾತ್ರ ಆಗುತ್ತಿದ್ದವು.

ನಾಡಗೌಡ, ನಾಡಪ್ರಭು

ಹಲವಾರು ಗ್ರಾಮಗಳ ಗುಂಪಿಗೆ ಒಂದು ನಾಡು ಇರುತ್ತಿದ್ದಿತು. ಈ ನಾಡು ಹೆಚ್ಚು ಕಡಿಮೆ ಇಂದಿನ ಹೋಬಳಿ ವ್ಯಾಪ್ತಿಯಷ್ಟಿತ್ತು. ಈ ನಾಡಿಗೆ ಪರ್ಯಾಯವಾಗಿ ಸೀಮೆ ಎಂದು ಕರೆಯುತ್ತಿದ್ದುದೂ ಉಂಟು. ಉದಾಹರಣೆಗೆ ಯಲಹಂಕ ನಾಡಾಗಿದ್ದರೆ ಮಾಗಡಿ ಸೀಮೆಯಾಗಿದ್ದಿತು. ನಾಡಿಗೆ ನಾಡಗೌಡ ಅಥವಾ ನಾಡಪ್ರಭು ಮುಖ್ಯನಾಗಿರುತ್ತಿದ್ದನು. ಸೀಮೆಗೆ ಸೀಮೆಗೌಡ ಇರುತ್ತಿದ್ದನು. ಗ್ರಾಮಗಳ ಗೌಡರು ಸ್ಥಳದ ಅಥವಾ ಮಂದೇ ಗೌಡರು ಸೇರಿ ನಾಡಸಭೆಯಾಗುತ್ತಿದ್ದಿತು. ಈ ನಾಡಗೌಡರನ್ನು ರಾಜ, ಸಾಮಂತಾಧಿಕಾರಿ ಅಥವಾ ಪ್ರತಿನಿಧಿ ನೇಮಿಸುತ್ತಿದ್ದರು.

ನಾಡು ಪ್ರಮುಖ ಆಡಳಿತ ಘಟಕ. ಒಂದು ಪ್ರದೇಶದ ಶಾಂತಿ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವ ಮತ್ತು ರಾಜ್ಯದ ಬೊಕ್ಕಸಕ್ಕೆ ಸಂಪನ್ಮೂಲವನ್ನು ಕ್ರೋಢೀಕರಿಸುವ, ಸೈನ್ಯಕ್ಕೆ ಯೋಧರನ್ನು ಸೇರಿಸುವ ಮುಖ್ಯ ಕಾರ್ಯಗಳು ನಾಡಗೌಡ ಅಥವಾ ನಾಡಪ್ರಭುವಿಗಿದ್ದವು. ರಾಜ ಈ ನಾಡಗೌಡರನ್ನೇ ಅವಲಂಬಿಸಿ ಆಳ್ವಿಕೆ ನಡೆಸುತ್ತಿದ್ದನು. ವಿವಿಧ ಗ್ರಾಮಗಳ ನಡುವೆ ವಿವಾದಗಳು ಹುಟ್ಟಿದಾಗ ನಾಡಗೌಡ ಮತ್ತು ನಾಡಸಭೆ ಸೇರಿ ಅವನ್ನು ಇತ್ಯರ್ಥಗೊಳಿಸುತ್ತಿದ್ದರು. ರಾಜಕೀಯ ಬದಲಾವಣೆಗಳು ನಡೆದಾಗ, ದಾಳಿ ದಂಗೆಗಳಾದಾಗ ನಾಡನ್ನು ರಕ್ಷಿಸಿಕೊಳ್ಳುವ ಹೊಣೆಗಾರಿಕೆ ನಾಡಗೌಡನಿಗಿದ್ದಿತು. ನಾಡಗೌಡನು ರಾಜನ ಅನುಮತಿ ಪಡೆದು ಕೋಟೆ ಕೊತ್ತಳಗಳನ್ನು ಕಟ್ಟಿ ಸೈನ್ಯವನ್ನು ಕಟ್ಟುವ ಅಧಿಕಾರವೂ ಇದ್ದಿತು. ದೊರೆಯಿಂದ ಕರೆಬಂದಾಗ ಸೈನ್ಯ ಮತ್ತು ಸಾಮಗ್ರಿಗಳನ್ನು ಒದಗಿಸಲು ನಾಡಪ್ರಭು

ಬದ್ಧನಾಗಿದ್ದನು. ನಾಡಿಗೆ ಸೇರಿದ ಮುಖ್ಯ ಧಾರ್ಮಿಕ ಸ್ಥಳಗಳ ಉಸ್ತುವಾರಿ, ಧಾರ್ಮಿಕ ದತ್ತಿಗಳನ್ನು ಬಿಡುವುದು, ತೆರಿಗೆ ಮನ್ನಾ ಮಾಡುವುದು ಮೊದಲಾದ ಅಧಿಕಾರಗಳು ನಾಡಗೌಡನಿಗಿದ್ದವು. ಬೆಂಗಳೂರಿನ ಯಲಹಂಕ ಪ್ರಭುಗಳೂ ನಾಡಪ್ರಭುಗಳಾಗಿ ಬಹಳಕಾಲ ಆಡಳಿತ ನಡೆಸಿದರು. ಅಧಿಕಾರ ವ್ಯಾಪ್ತಿಯನ್ನು ಬಲಪಡಿಸಿಕೊಳ್ಳಲು ಮತ್ತು ರಾಜ್ಯ ವಿಸ್ತರಿಸಲು ಹವಣಿಸಿದರು. ಇದರಿಂದಾಗಿ ಯಲಹಂಕ ಪ್ರಭುಗಳು ಹಿರಿಯ ಅಥವಾ ಒಂದನೇ ಕೆಂಪೇಗೌಡನ ಕಾಲದಲ್ಲಿ (ಕ್ರಿ.ಶ. 1513–1569) ಅಚ್ಯುತರಾಯನಿಂದ ಬೆಂಗಳೂರು, ವರ್ತೂರು, ಬೇವೂರು, ಹಲಸೂರು, ಕೆಂಗೇರಿ, ತಲಘಟ್ಟಪುರ, ಹೆಸರುಘಟ್ಟ ಮೊದಲಾದ ಹನ್ನೆರಡು ಸ್ಥಳಗಳ ಮೇಲೆ ಅಧಿಕಾರ ವಿಸ್ತರಣೆಗೆ ಮನ್ನಣೆ ಪಡೆದರು. ಬೆಂಗಳೂರು ನಗರದಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಿಸಿದರು. ಇದರಿಂದಾಗಿ ಯಲಹಂಕದ ನಾಡಪ್ರಭುಗಳಾಗಿದ್ದ ಕೆಂಪೇಗೌಡರ ಮನೆತನ ಒಂದು **ಪಾಳೆಯಪಟ್ಟಿನ** ಅಥವಾ **ಸಾಮಂತ ರಾಜರ ಸ್ಥಾನಮಾನಕ್ಕೇ**ರಿತು.

ಕೆಂಪೇಗೌಡನು ವಿಜಯನಗರದವರ ರಾಜಕೀಯ ಸಂಚಿನಿಂದ ಕೆಲವು ವರ್ಷಗಳ ಕಾಲ ಅವರ ಸೆರೆಯಲ್ಲಿ ಇರಬೇಕಾಗಿ ಬಂದರೂ ಕೊನೆಗೆ ದೋಷಮುಕ್ತನಾಗಿ ಬಿಡುಗಡೆ ಹೊಂದಿದನು. ಇದು ಆತನ ನೈತಿಕ ಶಕ್ತಿಯನ್ನು ಹೆಚ್ಚಿಸಿತು. ಅವನು ಮುಂದೆ ಧೃತಿಗೆಡದೆ ಬೆಂಗಳೂರು ನಗರವನ್ನು ಅಭಿವೃದ್ಧಿಪಡಿಸಿ ಬೆಂಗಳೂರು ಕೆಂಪೇಗೌಡನೆನಿಸಿದನು. ತಾಳಿಕೋಟೆಯ ಯುದ್ಧಾನಂತರ ವಿಜಯನಗರ ದುರ್ಬಲಗೊಂಡಿದ್ದರಿಂದ ಬೆಂಗಳೂರು ಅಥವಾ ಯಲಹಂಕ ರಾಜ್ಯ ನಾಮಮಾತ್ರದ ಅಧೀನತ್ವವನ್ನು ಬಿಟ್ಟರೆ ತನ್ನ ಆಂತರಿಕ ವ್ಯವಹಾರಗಳಲ್ಲಿ ಸ್ವತಂತ್ರವಾಯಿತು.

ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಈ ರಾಜಕೀಯ ಗೊಂದಲದ ಕಾಲದ ಆಡಳಿತವು ಕಟ್ಟಳೆ, ಕಾನೂನುಗಳ ಪ್ರಭಾವಕ್ಕಿಂತಲೂ ಹೆಚ್ಚಾಗಿ ರಾಜನ ವೈಯಕ್ತಿಕ ವರ್ಚಸ್ಸನ್ನು ಅವಲಂಬಿಸಿದ್ದಿತು. ಅವನು ತನ್ನ ಸಾಮರ್ಥ್ಯದಿಂದ ಚಕ್ರವರ್ತಿಯ ಮನ್ನಣೆ ಗಳಿಸಿ ಶ್ರೀಮತು ರಾಜಮಾನ್ಯ ಕೆಂಪೇಗೌಡ ಎನಿಸಿದನು ಎಂದು ಶಾಸನಗಳು ದಾಖಲಿಸಿವೆ. ಕೆಂಪೇಗೌಡನ ಸೊಸೆ ಲಕ್ಷ್ಮಮ್ಮ ಕೋಟೆಯ ದ್ವಾರ ಸ್ಥಿರವಾಗಿ ನಿಲ್ಲಲು ತನ್ನನ್ನೇ ಬಲಿಕೊಟ್ಟುಕೊಂಡ ಐತಿಹ್ಯವಿದೆ. ಆಕೆಯ ಮಹಾತ್ಯಾಗಕ್ಕಾಗಿ ಕೆಂಪೇಗೌಡ ಕೋರಮಂಗಲದಲ್ಲಿ ಲಕ್ಷ್ಮಮ್ಮನ ಹೆಸರಿನಲ್ಲಿ ಒಂದು ಸ್ಮಾರಕವನ್ನು ಕಟ್ಟಿಸುತ್ತಾನೆ. ಈ ಘಟನೆಗಳು ಏನನ್ನು ಸೂಚಿಸುತ್ತವೆಂದರೆ ಯಾವುದೇ ರಾಜಮಹಾರಾಜರ ಅನುಗ್ರಹದಿಂದ ಕೆಂಪೇಗೌಡ ರಾಜ್ಯ ಪಡೆಯದೆ ತನ್ನ ಧೈರ್ಯ, ಸಾಹಸ ಮತ್ತು ತನ್ನ ಕುಟುಂಬದವರ ತ್ಯಾಗ ಬಲಿದಾನಗಳಿಂದ ರಾಜ್ಯ ಕಟ್ಟಿದ್ದನು.

ಶಿವಗಂಗೆಯ ಗುಹೆಯಲ್ಲಿರುವ ಕೆಂಪೇಗೌಡ ಮತ್ತು ಆತನ ಕುಟುಂಬದವರ ಕಂಚಿನ ಶಿಲ್ಪಗಳಲ್ಲಿ ಕೆಂಪೇಗೌಡ ಮಾತ್ರವಲ್ಲದೆ ಆತನ ಪತ್ನಿಯೂ ಸೊಂಟದಲ್ಲಿ ಒಂದು ಕಿರುಕತ್ತಿ ಅಥವಾ ಹಿಡಿಗತ್ತಿಯನ್ನು ಹಿಡಿದಿರುವುದನ್ನು ಕಾಣಬಹುದು. ಹಿಂದಿನ ಕಾಲದಲ್ಲಿ ಆತ್ಮರಕ್ಷಣೆಗೋಸ್ಕರ ಮಹಿಳೆಯರು ಕೂಡ ಆಯುಧ ಧರಿಸುತ್ತಿದ್ದರು. ಇದು ಒಂದು ಕಾನೂನು ವ್ಯವಸ್ಥೆಯನ್ನು ಕಾಪಾಡಲು ಸ್ತ್ರೀ ಪುರುಷರ ಕ್ಷಾತ್ರ ಗುಣಗಳು ಹೇಗೆ ಅಗತ್ಯವಾಗಿದ್ದವೆಂಬುದನ್ನು ಸೂಚಿಸುತ್ತದೆ.

ಒಕ್ಕಲಿಗರಲ್ಲಿರುವ ಪಂಗಡಗಳು

ರಾಜ್ಯದಲ್ಲಿರುವ ಜನಸಂಖ್ಯೆಯಲ್ಲಿ ಮೊದಲ ಇಲ್ಲವೇ ಎರಡನೆಯ ಸ್ಥಾನದಲ್ಲಿರುವ ಒಕ್ಕಲಿಗ ಜನಾಂಗದಲ್ಲಿ ಒಳಪಂಗಡಗಳನ್ನು ಕುರಿತು ವರ್ಗೀಕರಣ ಮಾಡುವುದು ಕಷ್ಟಕರವಾದ ಕೆಲಸವಾಗಿದೆ. ಒಳಪಂಗಡಗಳ ಸಂಖ್ಯೆ ಇಂತಿಷ್ಟೆ ಎಂದು ಹೇಳುವುದು ಇನ್ನೂ ಕಷ್ಟಕರವಾದ ಕೆಲಸವಾಗಿದೆ. ಕರ್ನಾಟಕದ ಇತಿಹಾಸಕ್ಕೆ ಉತ್ತಮವಾದ ಕೊಡುಗೆಯನ್ನು ನೀಡಿದ ಬ್ರಿಟಿಷ್ ಅಧಿಕಾರಿ ಬಿ.ಲೂಯಿಸ್ ರೈಸ್‌ರಿಂದ ಹಿಡಿದು ಇಂದಿನವರೆವಿಗೂ ಉಪಪಂಗಡಗಳನ್ನು ಗುರುತಿಸುವಲ್ಲಿ ಸಾಕಷ್ಟು ಜನ ಶ್ರಮಿಸಿದ್ದಾರೆ.

ಒಕ್ಕಲಿಗರ ಒಳಪಂಗಡಗಳು 54 ಎಂತಲೂ, ಕೆಲವರು 62 ಎಂತಲೂ ಹೇಳುತ್ತಾರೆ. 1799 ಮತ್ತು 1804ರಲ್ಲಿ ಮೈಸೂರು ರಾಜ್ಯದಲ್ಲಿ ನಡೆಸಿದ ಜನಗಣತಿಯಂತೆ ಒಕ್ಕಲಿಗರು ಎಂಬ ಜಾತಿಗೆ ಒಕ್ಕಲಿಗರಲ್ಲದ ಉಪ್ಪಾರ, ಗೊಲ್ಲ, ಅಗಸ ಹೀಗೆ ಇತರೇ ಜಾತಿಯ ಜನರನ್ನು ಸೇರಿಸಿ ಗೊಂದಲ ಉಂಟುಮಾಡಲಾಗಿತ್ತು. 1901ರಲ್ಲಿ ಒಕ್ಕಲಿಗ ಒಂದು ಜಾತಿ ಎಂತಲೂ ಕೃಷಿ ಅವರ ಪ್ರಧಾನ ಕಸುಬು ಎಂಬುದಾಗಿ ಸ್ಪಷ್ಟಪಡಿಸಲಾಯಿತು.

"ಒಕ್ಕಲಿಗರು ಮತ್ತು ಸಂಪ್ರದಾಯ" ಎಂಬ ಕೃತಿಯ ಲೇಖಕ ಮಾಕೋನಹಳ್ಳಿ ದೊಡ್ಡಪ್ಪಗೌಡರು ಉಲ್ಲೇಖಿಸಿರುವ ಒಕ್ಕಲಿಗರ 54 ಒಳಪಂಗಡಗಳ ಸಂಖ್ಯೆ ಈ ಕೆಳಕಂಡಂತಿದೆ.

1.	ಗಂಗಡಿಕಾರ	8.	ಮಡಿ
2.	ಕೋಪಿ	9.	ಸಾದರು
3.	ಉಪ್ಪಿನ ಕೊಳಗ	10.	ಮಾಳವ
4.	ಸ್ವಲ್ಪ	11.	ಮಾಣಿಗ
5.	ಹೇಮರೆಡ್ಡಿ	12.	ನಾಮಧಾರಿ
6.	ಮೋತಾಟಿ	13.	ತುಳುವ
7.	ಜೋತ್ರದವ	14.	ಅಂಗಲೀಕ

15.	ಕುಳಿಬೆಡಗ	35.	ರೊಡ್ಡಗಾರು
16.	ಪಾಂಡರು	36.	ಆಲಮಟ್ಟಿ
17.	ಭೋಗರು	37.	ಗಂಪಲ ಕಮ್ಮೇರು
18.	ಮಲೆಗೌಡ	38.	ಗೋಸಂಗಿ
19.	ನಾಡುವಾರ್	39.	ಮುಸುಕು
20.	ಬಂಡೇರು	40.	ಕಂಬವಳ್ಳಿ
21.	ಕುಶಲಿ	41.	ಮೊರಸು
22.	ರಾಜಪುರಿ	42.	ಸಂಕರ ಜಾತಿ
23.	ಹನಮ	43.	ಸಂಣಕೋಡು
24.	ಸಿಂಗದವರು	44.	ಗಂಗಿ ಒಕ್ಕಲಿಗ
25.	ಏಳುಮನೆಯವರು	45.	ಹಳ್ಳಿಕಾರ
26.	ಯೆಳನಾಟಿ	46.	ಹಳೆ ಒಕ್ಕಲು
27.	ಕೋದಾಟಿ	47.	ಕಾಮ ಒಕ್ಕಲು
28.	ಪಾಕಿನಾಟರೆಡ್ಡಿ	48.	ಕುಂಚಟಿಗ
29.	ಯೆತ್ತಿನಕುಂಚಟಿಗ	49.	ಲಾಲಗುಂಡ
30.	ತಂಡಗೌಡ	50.	ದೇವನ ಮಕ್ಕಳು
31.	ಮಡ್ಡರು	51.	ನೊಣಬ
32.	ಮೇಘದಾ	52.	ರೆಡ್ಡಿ
33.	ಹೊಲಿಕಾಲವರು	53.	ಸಮುದ್ರ ಕುಲ
34.	ದಾಸವಂಟಿಗೆ	54.	ಕಮ್ಮೆವಾರು

ಮತ್ತೊಂದು ಮಾಹಿತಿಯ ಪ್ರಕಾರ ಒಕ್ಕಲಿಗರಲ್ಲಿರುವ ಒಳಪಂಗಡಗಳು

1.	ಗಂಗಡಿಕಾರ	10.	ಪಾಳ್ಯದ ಸೀಮೆ
2.	ದಾಸ ಒಕ್ಕಲಿಗ (ವೈಷ್ಣವ)	11.	ಕಾನುಸಾಲು
3.	ಮುಳ್ಸು ಒಕ್ಕಲಿಗ (ಶೈವ)	12.	ನೇರಳಗಟ್ಟದ ಸಾಲು
4.	ಮೊರಸು	13.	ಕುತ್ತೇರು ಸಾಲು
5.	ಮುಸುಕು	14.	ಭೈರೇದೇವರ ಒಕ್ಕಲು
6.	ಬೆರಳ್ಕೊಡು	15.	ಹೊಸ ದ್ಯಾವ್ರು
7.	ರೆಡ್ಡಿ	16.	ಬಂಡಿ ದ್ಯಾವ್ರು
8.	ಕಾಪು/ಕಮ್ಮಾ	17.	ಊರ ದ್ರಾವ್ರು
9.	ಮಡಿ	18.	ಭೈರವ ಒಕ್ಕಲಿಗ

19. ಪೆಟ್ಟಿಗೆ ಸಾಲಿನ
20. ಬೆಳ್ಳಿ ಒಕ್ಕಲಿಗ
21. ರೊದ್ದಗಾರು
22. ನಾಮದ ರೆಡ್ಡಿ
23. ಪಾಮದ ರೆಡ್ಡಿ
24. ಕುಂಚಿಟಿಗ
25. ಹಳ್ಳಿಕಾರ
26. ನೊಣಬ
27. ಸರ್ಪ
28. ನಾಮಧಾರಿ
29. ಚೋಳ
30. ಸೆಟ್ಟಿಗಾರ
31. ಬಂಟರು
32. ಮಲೆಗೌಡ(ಶೈವ)
33. ಉಪ್ಪಿನಕೊಳಗ
34. ಹೇಮರೆಡ್ಡಿ
35. ಜೋತ್ರದವರು
36. ಆರವೇದಿಗ
37. ವೆಲ್ಲಾಳ
38. ಮಾಳವ
39. ಮಾಣಗ
40. ತುಳುವ
41. ಅಂಗಲೀಕ
42. ಕುಳಿಬೆಡಗ
43. ಪಾಂಡರು
44. ನಾಡವಾರು
45. ಬಂಡೇರು
46. ಕುಳಲಿ
47. ಏಳನಾಟಿ
48. ಕೋದಾಟು
49. ಕಾಕಿನಾಟ
50. ತಂಡಗೌಡ
51. ಮೊಗ್ಗದರು
52. ಹೋಲಕಾಲು
53. ದಾಸವಂಟಿಕೆ
54. ದೊಡ್ಡಗಾಂಟ
55. ಅಲಮಟ್ಟಿ
56. ಗಂಪಲ
57. ಕಮ್ಮರು
58. ಸಣ್ಣಗೋಂಡಿ
59. ಗಂಗಿ(ಗಂಗಳ)
60. ಹಳೇ ಒಕ್ಕಲು
61. ಕಾಮ ಒಕ್ಕಲು
62. ವಾಲಿ ಗುಂಡ
63. ದೇವನ ಮಕ್ಕಳು
64. ಕಮ್ಮನಾಡು
65. ಗೌಂಡರು
66. ಹಾಲುಒಕ್ಕಲಿಗ
67. ಹೆಗ್ಗಡೆ
68. ಅಲಮಟ್ಟಿ
69. ಕೊಂಕಣಿ ಒಕ್ಕಲಿಗ
70. ಕೊಡಗು ಗೌಡ
71. ಅರೆಬಾಷೆ ಒಕ್ಕಲಿಗ
72. ಸಾದರ ಒಕ್ಕಲಿಗರು
73. ಬಡಗಗೌಡ
74. ಗ್ರಾಮ ಒಕ್ಕಲು (ಪಟ್ಟಗಾರ)
75. ಕರಿ ಒಕ್ಕಲು
76. ಕೊಟ್ಟೆ ಒಕ್ಕಲು
77. ಹೊನ್ನೆ
78. ಕುಂಬಿ
79. ಬೆಳಕವಾಡಿ
80. ಎಲ್ಲಮಕಾಪು

81. ಕೊಡಿಗೆಗೌಡ
82. ಕಮ್ಮಗೌಡ
83. ಕೋಡು ಒಕ್ಕಲಿಗ
84. ತುಳೇರು
85. ಗಾಮಗೌಡ
86. ಕೆರೆ ಒಕ್ಕಲಿಗ
87. ಪಡಿಯಾಚಿ ಗೌಡ
88. ಶೀಲ ಒಕ್ಕಲ್
89. ಹಾಲಕ್ಕಿ ಒಕ್ಕಲಿಗ
90. ದೇಶ ಗೌಡ
91. ವೆಲ್ಲಾಳ/ಬೆಳ್ಳಾಳ/ಬಲ್ಲಾಳ
92. ಜಾನಕಲ್ಲೋರು
93. ನಾಡಗೌಡ
94. ಆರ್ಮುಂಡಿ
95. ಕುಟಿಕ ಒಕ್ಕಲು
96. ಪಾಂಡ್ಯ ಒಕ್ಕಲಿಗ
97. ಸಪ್ಪೆ
98. ಕುಡು ಒಕ್ಕಲಿಗ
99. ಪಾಕನಾಕ
100. ಪಣಯರು
101. ಗದ್ದಿಗರು
102. ಮೊತಾಬಿ
103. ಕೋಪಿ
104. ಲಾಳಗೊಮಡ
105. ಸಜ್ಜನ
106. ಗೊಂಡೊಕ್ಕಲಿಗ
107. ಕೊಡತಿ


ಆದರೆ **ಜೇಮ್ಸ್ ಮ್ಯಾನರ್**ರವರು ಒಕ್ಕಲಿಗರನ್ನು ಗಂಗಡಿಕಾರ, ಮೊರಸು, ಕುಂಚಟಿಗ, ರೆಡ್ಡಿ, ಹಾಲು, ಹಳ್ಳಿಕಾರ ಎಂದು ಆರು ಗುಂಪುಗಳಾಗಿ ಮಾಡಿದ್ದಾರೆ.

ಹೀಗೆ ಒಕ್ಕಲುತನ ಮತ್ತು ಒಕ್ಕಲಿಗರ ನೆಲೆ, ಹಿನ್ನೆಲೆಯನ್ನು ನೋಡಿದಾಗ ಒಕ್ಕಲಿಗರು ಇಲ್ಲವೆ ಗೌಡರು ಸಾವಿರಾರು ವರ್ಷಗಳಿಂದ ಒಕ್ಕಲುತನವನ್ನೇ ತಮ್ಮ ವೃತ್ತಿ ಇಲ್ಲವೇ ಕಸುಬನ್ನಾಗಿ ಮಾಡಿಕೊಂಡಿದ್ದರು. ಬಲಿಷ್ಠರು ಕ್ರಮೇಣ ಜಮೀನ್ದಾರರಾಗಿ, ಊರಿನ ಯಜಮಾನರಾಗಿ, ನಾಡಪ್ರಭುಗಳಾಗಿ ತಲೆ ಎತ್ತಿದರು ಎಂದು ತಿಳಿದುಬರುತ್ತದೆ.

□

ಒಕ್ಕಲಿಗರ ರಾಜಮನೆತನಗಳು ಮತ್ತು ಕೆಲವು ಪ್ರಮುಖ ಪಂಗಡಗಳು

ಕ್ರಿ.ಶ. ನಾಲ್ಕನೆಯ ಶತಮಾನದಿಂದ ಇಪ್ಪತ್ತನೆಯ ಶತಮಾನದವರೆಗೆ ಆಳ್ವಿಕೆ ಮಾಡಿದ ಬಹುತೇಕ ಎಲ್ಲಾ ರಾಜಮನೆತನಗಳು ಒಕ್ಕಲಿಗ ಸಮುದಾಯಕ್ಕೆ ಸೇರಿದವು ಎಂದರೆ ತಪ್ಪಾಗಲಾರದು. (ರಾಷ್ಟ್ರಕೂಟರ ರಾಜಲಾಂಛನದಲ್ಲಿ ನೇಗಿಲಿನ ಚಿತ್ರವಿರುವುದನ್ನು ಕಾಣಬಹುದು). ಹಿಂದೊಮ್ಮೆ ಪಾಲರು ಬ್ರಾಹ್ಮಣೇತರ ರಾಜಮನೆತನಕ್ಕೆ ಸೇರಿದವರಾಗಿದ್ದು, ಇವರು ಬಂಗಾಳದಲ್ಲಿ ಆಳ್ವಿಕೆ ಮಾಡಿದರು ಎಂಬ ಇತಿಹಾಸವಿದೆ. ಕೆಲವು ವಿದ್ವಾಂಸರು ಇವರು ಒಕ್ಕಲಿಗ ಸಮುದಾಯಕ್ಕೆ ಸೇರಿದವರೆಂದು ಹೇಳಿದ್ದಾರೆ. ಬಲಾಢ್ಯರಾದ ಒಕ್ಕಲಿಗರು ಹಿಂದೊಮ್ಮೆ ಒಕ್ಕಲುತನ ಅಥವಾ ವ್ಯವಸಾಯ ಮತ್ತು ಪಶುಸಂಗೋಪನೆಯೇ ಅಲ್ಲದೆ ಸೈನಿಕರಾಗಿಯೂ ನಾಡಿಗೆ ಸೇವೆ ಸಲ್ಲಿಸಬೇಕಿತ್ತು. ಇದರಿಂದಾಗಿ ಇವರನ್ನು ಕೃಷಿ ಯೋಧ (Agro Martial) ರೆಂದು ಕರೆಯುತ್ತಿದ್ದರು. ಉದಾ: ಇಂದಿಗೂ ದಕ್ಷಿಣ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ನೆಲೆಸಿರುವ ಬಂಟರು ತಮ್ಮನ್ನು ಕೃಷಿಕರು ಎಂದು ಕರೆಸಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ ಯೋಧರು



(ರಾಷ್ಟ್ರಕೂಟರ ಲಾಂಛನದಲ್ಲಿ ನೇಗಿಲನ್ನು ಕಾಣಬಹುದು)

ಎಂದು ಕರೆಸಿಕೊಳ್ಳಲು ಇಚ್ಛೆಪಡುತ್ತಾರೆ. ಕರ್ನಾಟಕದ ಇತಿಹಾಸದಲ್ಲಿ ಪ್ರಾಚೀನ ರಾಜಮನೆತನವಾದ ಗಂಗರು, ಚಾಲುಕ್ಯರು, ರಾಷ್ಟ್ರಕೂಟರು ಮತ್ತು ಹೊಯ್ಸಳರು ಒಕ್ಕಲುತನ ಮಾಡುವ ಒಕ್ಕಲಿಗರೇ ಆಗಿದ್ದರೆಂದು ಹೇಳಬಹುದು. ಒಕ್ಕಲಿಗರು ರಾಜ್ಯ ನಿರ್ಮಾಪಕರಾಗಿ, ನಾಡಪ್ರಭುಗಳಾಗಿ, ಪಾಳೆಯ ಪಟ್ಟುಗಳನ್ನು ನಿರ್ಮಿಸಿ ಪಾಳೆಯಗಾರರಾಗಿ, ಫೌಜುದಾರರಾಗಿ ಇಷ್ಟೇ ಅಲ್ಲ ಆಡಳಿತದ ಕೊನೆಯ ಅಂಗವಾದ ಗ್ರಾಮಗಳ ಮುಖಂಡರು ಅಥವಾ ಪಟೇಲರು / ಗೌಡರಾಗಿ ಆಳ್ವಿಕೆ ಮಾಡಿದ ಉದಾಹರಣೆ ಇದೆ.

ಗಂಗರಸರು,
ನಾಡಪ್ರಭು ಕೆಂಪೇಗೌಡರು,
ಮಧುಗಿರಿ ಪಾಳೆಯಗಾರರು ಇತ್ಯಾದಿ

ಗಂಗರು

ಒಕ್ಕಲಿಗ ಜನಾಂಗಕ್ಕೆ ಇಂದಿಗೆ **ಒಂದು ಸಾವಿರದ ಆರುನೂರು ವರ್ಷಗಳ ರಾಜಕೀಯ ಇತಿಹಾಸವಿದೆ.** ಒಕ್ಕಲಿಗರಲ್ಲಿ ಹಲವಾರು ಪಂಗಡಗಳಿವೆ. ಅವರಲ್ಲಿ ಪ್ರಮುಖರು ಗಂಗಡಕಾರ ಒಕ್ಕಲಿಗರು ಅಥವಾ ಗಂಗಡಿಕಾರ ಒಕ್ಕಲು ಎಂದು ಹೇಳಬಹುದು. ಕ್ರಿ.ಶ. ನಾಲ್ಕನೆಯ ಶತಮಾನದಿಂದ ಹನೊಂದನೆಯ ಶತಮಾನದವರೆಗೆ ಆಳ್ವಿಕೆಯನ್ನು ಮಾಡಿದ ಇವರು ಅಂದಿನ ಕಾಲದ ಸಮಕಾಲೀನ ರಾಜಮನೆತನಗಳಾದ ರಾಷ್ಟ್ರಕೂಟರು ಮತ್ತು ಹೊಯ್ಸಳರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸುವುದರ ಮೂಲಕ ತಮ್ಮ ರಾಜ್ಯ ಮತ್ತು ಕೋಶವನ್ನು ಉಳಿಸಿ ಬೆಳೆಸಿದರು. ಇದರಿಂದಾಗಿ ಗಂಗರು ಸುಮಾರು ಏಳು ನೂರುವರ್ಷಗಳ ಕಾಲ ತಲಕಾಡನ್ನು ತಮ್ಮ ರಾಜಧಾನಿಯನ್ನಾಗಿಟ್ಟುಕೊಂಡು ಆಳ್ವಿಕೆ ಮಾಡಿದರು. ಪ್ರತಿಷ್ಠಿತ ತಲಕಾಡು ಗಂಗರ ವಂಶಸ್ಥರೇ ಇಂದಿನ ಗಂಗಡಕಾರ ಒಕ್ಕಲಿಗರು ಎಂದು ಪ್ರೊ. ಷೇಕ್ ಆಲಿಯವರು ತಮ್ಮ "ಹಿಸ್ಟರಿ ಆಫ್ ವೆಸ್ಟರ್ನ್ ಗಂಗಾಸ್" ಎಂಬ ಸಂಶೋಧನಾತ್ಮಕ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಹೀಗೆ ಒಕ್ಕಲಿಗರ ರಾಜಕೀಯ ಹಿರಿಮೆ ಗರಿಮೆಯನ್ನು ಗುರುತಿಸಬಹುದಾಗಿದೆ. ಇವರಲ್ಲಿ ಗಂಗಡಿಕಾರ ಒಕ್ಕಲಿಗರ ಮೂಲ ಮತ್ತು ರಾಜಕೀಯ ಇತಿಹಾಸವನ್ನು ಚರ್ಚಿಸುವುದು ಅವಶ್ಯವಾಗಿದೆ. ಗಂಗಡಿಕಾರ ಎಂಬುದು ಗಂಗವಾಡಿಕಾರ ಅಥವಾ ಗಂಗವಾಡಿಯವ ಎಂಬ ಅರ್ಥ ಕೊಡುತ್ತದೆ. ಈ 'ವಾಡಿ' ಶಬ್ದ ಗಂಗರ ವಾಸಸ್ಥಳ ಅಥವಾ ಸಂಬಂಧಿಸಿದ ವಸತಿ ಹಾಗೂ ಅವರ ನಾಡನ್ನು ಸೂಚಿಸುತ್ತದೆ. ರಾಜವಾಡಿ ಅರಮನೆ ಎನ್ನುವ ಹಾಗೆ ಇದರಲ್ಲಿ ಗಂಗರು ಎನ್ನುವುದು ನಾಮಪದವೆಂದು ಸ್ಪಷ್ಟವಾಗುತ್ತದೆ. (ಗಂಗಡಿಕಾರ ಒಕ್ಕಲಿಗರು – ಡಾ. ನೆಲ್ಲೂರು ಪ್ರಸಾದ್– 2001, ಪುಟ–60, ಬೆಂ).

ನಾಡಿನ ಹಿರಿಯ ಸಂಶೋಧಕರು, ಇತಿಹಾಸಕಾರರಾದ ಡಾ. ಬ.ರಾ. ಗೋಪಾಲ್‌ರವರು ಕನ್ನಡ ವಿಷಯ ವಿಶ್ವಕೋಶದಲ್ಲಿ ತಲಕಾಡಿನ ಗಂಗರ ಬಗ್ಗೆ ಹೀಗೆ ಹೇಳುತ್ತಾರೆ :

ಗಂಗರ ಸಾಮ್ರಾಜ್ಯ

ನಾಲ್ಕನೆಯ ಶತಮಾನದ ಮಧ್ಯಭಾಗದಿಂದ ಹನ್ನೊಂದನೆಯ ಶತಮಾನದ ದವರೆಗೆ ಕರ್ನಾಟಕದ ದಕ್ಷಿಣ ಭಾಗವನ್ನು ಆಳಿದ ಗಂಗ ಸಂತತಿಯ ಅರಸರು ಪಶ್ಚಿಮ ಗಂಗರೆಂದು ಪ್ರಸಿದ್ಧರಾಗಿದ್ದಾರೆ. ಇವರದು ಕನ್ನಡ ನಾಡಿನ ಇತಿಹಾಸದಲ್ಲೇ ಅತಿ ದೀರ್ಘಕಾಲ ಆಳ್ವಿಕೆ ನಡೆಸಿದ ಮನೆತನ. ಇವರ ಶಾಸನಗಳು ಕೊಡಗು ಜಿಲ್ಲೆಯಿಂದ ಉತ್ತರದ ಆರ್ಕಾಟ್ ಜಿಲ್ಲೆಯುವರೆಗೂ ಬಳ್ಳಾರಿ ಜಿಲ್ಲೆಯಿಂದ ಸೇಲಂ, ಕೊಯಮತ್ತೂರು ಜಿಲ್ಲೆಗಳವರೆಗೂ ದೊರೆತಿವೆ. ಇವರ ಪ್ರಭುತ್ವ ಅಷ್ಟು ವಿಸ್ತಾರವಾದ ಪ್ರದೇಶದ ಮೇಲೆ ಸ್ಥಾಪಿತವಾಗಿತ್ತು. ಇವರ ರಾಜ್ಯವನ್ನು ಗಂಗವಾಡಿ 96,000 ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಶಾಂತಿ ಸುಭಿಕ್ಷೆಗಳ ಬೀಡಾದ ಇವರ ನಾಡಿಗೆ 'ಶ್ರೀರಾಜ್ಯ' ಎಂಬ ಅನ್ವರ್ಥನಾಮವಿತ್ತು. ಪ್ರಜಾನುರಾಗಿಗಳು, ರಾಜನೀತಿಕುಶಲರು ಎಂದು ಕರೆದುಕೊಳ್ಳುವ ಈ ವಂಶದ ಅರಸರು ದಕ್ಷಿಣರಾಜ್ಯ ಸಂರಕ್ಷಣ ಸಮರ್ಥ, ಕೊಂಗುಣಿವರ್ಮ, ಧರ್ಮಮಹಾರಾಜಾಧಿರಾಜ, ಶ್ರೀವಲ್ಲಭ, ಪೆರ್ಮಾನಡಿ ಮೊದಲಾದ ಬಿರುದುಗಳನ್ನು ಧರಿಸಿದ್ದರು. ಮೈಸೂರು ಜಿಲ್ಲೆಯ 'ತಲಕಾಡು' ಇವರ ರಾಜಧಾನಿ. ಅದಕ್ಕೂ ಮೊದಲು ಕುವಳಾಲ (ಕೋಲಾರ), ಮಣ್ಣೆ ಅಥವಾ ಮನ್ನೆ (ಮಾನ್ಯಪುರ), ಮಾಕುಂದ (ಚನ್ನಪಟ್ಟಣ) ರಾಜಧಾನಿಗಳಾಗಿದ್ದವು. ಗಜ ಅಥವಾ ಆನೆ ಈ ವಂಶದವರ ರಾಜಲಾಂಛನ, ಗಂಗಮನೆತನದ ರಾಜರು ತಮ್ಮ ಸುದೀರ್ಘ ಆಳ್ವಿಕೆಯ ಕಾಲದಲ್ಲಿ ಕಂಚಿಯ ಪಲ್ಲವರು, ಬನವಾಸಿಯ ಕದಂಬರು, ಬಾದಾಮಿಯ ಚಾಳುಕ್ಯರು, ಮಳಖೇಡದ ರಾಷ್ಟ್ರಕೂಟರು, ಮಧುರೆಯ ಪಾಂಡ್ಯರು, ಉರೈಯೂರಿನ ಚೋಳರು, ಕಲ್ಯಾಣದ ಚಾಳುಕ್ಯರು ಹಾಗೂ ಹೊಯ್ಸಳ ರಾಜಮನೆತನಗಳೊಡನೆ ಒಂದಿಲ್ಲೊಂದು ರೀತಿಯ ರಾಜಕೀಯ ಸಂಬಂಧವನ್ನು ಹೊಂದಿದ್ದರು. ಬಾದಾಮಿಯ ಚಾಳುಕ್ಯ ಹಾಗೂ ರಾಷ್ಟ್ರಕೂಟ ಸಾರ್ವಭೌಮ ಮನೆತನಗಳೊಡನೆ ಮಧುರ-ಬಾಂಧವ್ಯ ಹೊಂದಿದ್ದರು. ಆ ಮನೆತನದ ಸಾಮ್ರಾಟರ ಸಹಾಯಕ್ಕೆ ಹಲವು ಮಂದಿ ಗಂಗರಾಜರು ಸೈನ್ಯಸಮೇತ ಧಾವಿಸಿ ದಕ್ಷಿಣದಲ್ಲಿ ರಾಮೇಶ್ವರದವರೆಗೂ ಉತ್ತರದಲ್ಲಿ ಉಜ್ಜಯಿನಿಯವರೆಗೂ ತಮ್ಮ ಪರಾಕ್ರಮವನ್ನು ಮೆರೆದಿದ್ದಾರೆ.

ಗಂಗರು ಉತ್ತರ ಭಾರತದ ಇಕ್ವಾಕು ಸಂತತಿಗೆ ಸೇರಿದವರೆಂದೂ ಅಯೋಧ್ಯೆಯಿಂದ ಬಂದು ಇಲ್ಲಿ ರಾಜ್ಯ ಸ್ಥಾಪಿಸಿದರೆಂದೂ ಗಂಗಮನೆತನದ ರಾಜರ ಹಲವು ಶಾಸನಗಳಲ್ಲಿ ವರ್ಣಿಸಲಾಗಿದೆ. ಈ ವರ್ಣನೆಯ ಪ್ರಕಾರ ರಾಜ್ಯಸ್ಥಾಪನೆ

ಮಾಡಿದ ದಡಿಗ ಮತ್ತು ಮಾಧವರು ಉತ್ತರದಿಂದ ಬರುವಾಗ ಕಡಪ ಜಿಲ್ಲೆಯ ಪೇರೂರು ಎಂಬಲ್ಲಿ 'ಸಿಂಹನದಿ' ಎಂಬ ಜೈನಯತಿಯನ್ನು ಸಂದರ್ಶಿಸಿದರೆಂದು ಸಹೋದರರೀರ್ವರ ರಾಜಕಳೆಯಿಂದ ಆಕರ್ಷಿತನಾದ ಜೈನಯತಿಯು ಇಂದಿನ ಕೋಲಾರದ ಬಳಿಯಲ್ಲಿ ಕರ್ಣಿಕಾರ ಪುಷ್ಪದ ಕಿರೀಟವನ್ನು ತನ್ನ ಕೈಯಿಂದಲೇ ತೊಡಿಸಿ ಖಡ್ಗವನ್ನು ದೊರಕಿಸಿಕೊಟ್ಟನೆಂದು ನಂತರ ಇವರ ರಾಜ್ಯಕ್ಕೆ ಗಂಗವಾಡಿ ತೊಂಬತ್ತಾರು ಸಾವಿರ ಎಂದು ಹೆಸರಾಯಿತೆಂದೂ ವಿವರಿಸಲಾಗಿದೆ. ಶಾಸನಗಳಲ್ಲಿ ಗಂಗರು ಕಾಣ್ವಾಯನ ಸಗೋತ್ರದವರೆಂದು ಹೇಳಿಕೊಂಡಿರುವುದರಿಂದ ಇವರು ಉತ್ತರದ ಕಣ್ವಸಂತತಿಗೆ ಸೇರಿದ್ದವರಾಗಿರಬಹುದೆಂದು ಚರ್ಚಿಸಲಾಗಿದೆ. ಅಲ್ಲದೆ ಗಂಗರಿಗೆ **'ಕೊಂಗುಣಿವರ್ಮ'** ಎಂಬ ಬಿರುದಿದ್ದುದರಿಂದ ಪ್ರಾರಂಭದಲ್ಲಿ ಇವರು ತಮಿಳುನಾಡಿನ ಭಾಗವಾದ ಕೊಂಗುನಾಡಿನಲ್ಲಿ ರಾಜ್ಯ ಸ್ಥಾಪಿಸಿರಬೇಕೆಂದು ಹಾಗೂ ಕೊಯಮತ್ತೂರು ಜಿಲ್ಲೆಯಲ್ಲಿರುವ ಪೇರೂರು ಮೇಲೆ ಹೆಸರಿಸಿದ ಸ್ಥಳವಾಗಿರಬೇಕೆಂದು ತರ್ಕಿಸಲಾಗಿದೆ. ಆದರೆ ಈ ವಿಷಯಗಳು ವಿವಾದಾಸ್ಪದವಾಗಿವೆ. ಇಕ್ಷ್ವಾಕು ಅಥವಾ ಅಯೋಧ್ಯೆಗೆ ಸಂಪರ್ಕ ಕಲ್ಪಿಸುವ ಮಾಹಿತಿ ಮೊದಲು ಕಾಣಿಸುವುದು ಹನ್ನೊಂದನೆಯ ಶತಮಾನದ ಒಂದು ಶಾಸನದಲ್ಲಿ. ಹತ್ತು-ಹನ್ನೊಂದನೆಯ ಶತಮಾನಗಳಲ್ಲಿ ಸಾಮಾನ್ಯವಾಗಿ ದಕ್ಷಿಣ ಭಾರತದ ರಾಜಮನೆತನಗಳು ತಮ್ಮ ಉಗಮಕ್ಕೆ ಸಂಬಂಧಿಸಿದ ಕಥೆಗಳನ್ನು ನಿರ್ಮಿಸಿಕೊಂಡ ಕಾಲವಾದ್ದರಿಂದ ಗಂಗಮನೆತನದ ಈ ಕಥೆಯೂ ಇದರಿಂದ ಹೊರತಾಗಿಲ್ಲ. ಸಿಂಹನಂದಿಯ ಹೆಸರು ಏಳನೆಯ ಶತಮಾನದ ಕೊನೆಯವರೆಗೂ ತಿಳಿದುಬರುವುದಿಲ್ಲ. ಕ್ರಿ.ಶ. 963ರ ಕೂಡಲೂರು ತಾಮ್ರ ಶಾಸನದಲ್ಲಿ ಪ್ರಪ್ರಥಮವಾಗಿ ಗಂಗವಂಶ ಮತ್ತು ಸಿಂಹನಂದಿಯ ಸಂಬಂಧದ ಈ ವಿವರಣೆ ಕಂಡುಬರುತ್ತದೆ. ಅಲ್ಲದೆ ಗಂಗವಂಶದ ಪ್ರಾರಂಭದ ಅರಸರೆಲ್ಲ ಜೈನ ಇಲ್ಲವೆ ಹಿಂದೂಧರ್ಮಾನು-ಯಾಯಿಗಳಾಗಿದ್ದರು. ಮಿಗಿಲಾಗಿ ಅವರ ಆಳ್ವಿಕೆ ಪ್ರಾರಂಭದಲ್ಲಿ ಕಾವೇರಿ ನದಿಯ ಬಯಲಿನಲ್ಲಿ ತಲಕಾಡಿನ ಪ್ರದೇಶದಲ್ಲೇ ಸ್ಥಾಪನೆಯಾಯಿತೆಂದೂ ಅನಂತರ ಕೊಂಗು ಮತ್ತು ಕೋಲಾರದವರೆಗೆ ವಿಸ್ತರಿಸಲ್ಪಟ್ಟಿತ್ತೆಂತಲೂ ಶಾಸನಗಳಿಂದ ವೇದ್ಯವಾಗುತ್ತದೆ. ಪ್ರಾರಂಭದ ರಾಜರ ಶಾಸನಗಳು ಮೈಸೂರು ಮತ್ತು ಆಸುಪಾಸಿನ ಜಿಲ್ಲೆಗಳಲ್ಲೇ ದೊರೆತಿವೆ. ಈ ವಂಶದ ಮೂರನೆಯ ರಾಜನಾದ ಹರಿವರ್ಮನ ಒಂದು ಶಾಸನ ತಲಕಾಡು ಅವರ ರಾಜಧಾನಿಯಾಗಿತ್ತೆಂದು ಅಧಿಕೃತವಾಗಿ ತಿಳಿಸುತ್ತದೆ. ಸ್ಥಳಪುರಾಣಗಳ ಪ್ರಕಾರ ತಲಕಾಡು ಆ ಕಾಲದಲ್ಲಿ ದಟ್ಟವಾದ ಅರಣ್ಯಗಳಿಂದ ಕೂಡಿದ್ದು ಗಜಾರಣ್ಯವೆಂದು ಪ್ರಸಿದ್ಧವಾಗಿತ್ತು. **'ಮದಗಜ'** ಗಂಗಲಾಂಛನವಾಗಲು ಈ ಸಂಗತಿಯೇ ಕಾರಣವಿರಬೇಕು. ಈ ವಂಶದ ಮೂಲಪುರುಷರು ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಜಿಲ್ಲೆಗಳ ಪ್ರದೇಶಗಳಲ್ಲಿ ಇಂದಿಗೂ ವ್ಯವಸಾಯವನ್ನವಲಂಬಿಸಿ ಕನ್ನಡವನ್ನೇ ಮಾತೃಭಾಷೆಯಾಗುಳ್ಳ ಹಾಗೂ ಅಧಿಕ

ಸಂಖ್ಯೆಯಲ್ಲಿ ವಾಸಿಸುತ್ತಿರುವ **'ಗಂಗಡಿಕಾರ ಒಕ್ಕಲಿಗರು'** ಎಂಬ ಗುಂಪಿಗೆ ಸೇರಿದವರು. ಆದ್ದರಿಂದ ಇವರ ರಾಜ್ಯಕ್ಕೆ ಗಂಗವಾಡಿ ಎಂದೂ ಇವರ ಸಂತತಿಗೆ ಗಂಗರೆಂದೂ ಹೆಸರಾಯಿತು ಎಂಬುದು ಅಭಿಪ್ರಾಯ. ಗಂಗಸಂತತಿಯ ರಾಜರು ಹೊಂದಿದ್ದ ಪ್ರಜಾನುರಾಗ, ಅತ್ಯಂತ ದೀರ್ಘವಾದ ಆಳ್ವಿಕೆ ಮೊದಲಾದ ಅಂಶಗಳು ಇವರು ಹೊರಗಿನಿಂದ ಬಂದವರಾಗಿರದೆ ಈ ಪ್ರದೇಶದ ನಿವಾಸಿಗಳೇ ಇರಬೇಕೆಂಬುದನ್ನು ಸೂಚಿಸುತ್ತವೆ. ಶಾತವಾಹನರ ಆಳ್ವಿಕೆಯ ಪತನ ಹಾಗೂ ಅನಂತರ ಉದ್ಭವಿಸಿದ ರಾಜಕೀಯ ಪರಿಸ್ಥಿತಿಗಳ ಸಂದರ್ಭಗಳನ್ನು ಉಪಯೋಗಿಸಿಕೊಂಡು ಕನ್ನಡ ನಾಡಿನಲ್ಲಿ ಕದಂಬ ಮತ್ತು ಬಾಣರಂತೆ ಗಂಗ ಅರಸರೂ ರಾಜ್ಯ ಸ್ಥಾಪಿಸಿರಬೇಕು. ಇವರು ಪ್ರಾರಂಭದಲ್ಲಿ ವೈದಿಕ ಮತಾವಲಂಬಿಗಳಾಗಿದ್ದು ಶಿವ ಹಾಗೂ ವೈಷ್ಣವೋಪಾಸಕರಾಗಿದ್ದು ಅನಂತರ ಜೈನಧರ್ಮವನ್ನು ಸ್ವೀಕರಿಸಿ ಆಸ್ಥಾನದ ವಿದ್ವಾಂಸರಿಂದ ಸಿದ್ಧಪಡಿಸಲ್ಪಟ್ಟ ಗೋತ್ರ ಹಾಗೂ ಮೂಲಕ್ಕೆ ಸಂಬಂಧಿಸಿದ ಪೌರಾಣಿಕ ವರ್ಣನೆಗಳನ್ನು ಅಂಗೀಕರಿಸಿರಬೇಕು.

ಗಂಗರ ಇತಿಹಾಸ ಕಾಲ ನಿರ್ಣಯ ಸ್ವಲ್ಪ ಜಟಿಲವಾಗಿದೆ. ಕಾರಣವೇನೆಂದರೆ ನಮಗೆ ದೊರಕಿರುವ ಆಧಾರಗಳು ಅಷ್ಟು ಸ್ಪಷ್ಟವಾಗಿ ಇಲ್ಲವೆ ನಿಖರವಾಗಿ ಕಾಲ ನಿರ್ಣಯ ಮಾಡುವಲ್ಲಿ ವಿಫಲವಾಗಿವೆ. ಈಗಾಗಲೇ ತಿಳಿಸಿರುವಂತೆ **ಗಂಗ** ಎಂಬ ಹೆಸರು ಉತ್ತರದ ಗಂಗಾ ನದಿ ತಟದಿಂದ ಬಂದಿರಬಹುದೆಂತಲೂ ಇವರು ಇಕ್ಷ್ವಾಕು ಕುಲದವರು ಇವೇ ಮುಂತಾದ ತಮ್ಮ ಪೂರ್ವಾಶ್ರಮವನ್ನು ತಮ್ಮ ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಕ್ರಿ.ಶ. ನಾಲ್ಕನೆಯ ಶತಮಾನದಿಂದ ಹತ್ತನೆಯ ಶತಮಾನದ ಕಾಲದ ತನಕ, ಎಂದರೆ ಸುಮಾರು ಆರುನೂರು ವರ್ಷಗಳ ಕಾಲ ಇಪ್ಪತ್ತೈದು ದೊರೆಗಳು ಸುದೀರ್ಘ ಆಳ್ವಿಕೆ ಮಾಡಿದರು.

ಇವರ ರಾಜಲಾಂಛನ ಗಜ ಅಥವಾ ಆನೆ. ಆನೆಯನ್ನೇ ತಮ್ಮ ರಾಜಲಾಂಛನವನ್ನಾಗಿ ಮಾಡಿಕೊಳ್ಳಲು ಕಾರಣವೇನೆಂದರೆ ಅಂದಿನ ಕಾಲದಲ್ಲಿ (ಸಾವಿರದ ಆರುನೂರು ವರ್ಷಗಳ ಹಿಂದೆ) ಆನೆಗಳು ಸಾಕಷ್ಟು ಪ್ರಮಾಣ -ದಲ್ಲಿದ್ದು ಅವುಗಳನ್ನು ಪಳಗಿಸಿ ಯುದ್ಧಗಳಿಗೆ ಬಳಕೆ ಮಾಡುವ ಕಲೆಯನ್ನು ಕಂಡುಕೊಂಡರು. ಹೇಗೆಂದರೆ ಗಂಗ ದೊರೆಗಳಲ್ಲೇ ಮೇರುವ್ಯಕ್ತಿಯಾದ ಶ್ರೀಪುರುಷನು **'ಗಜಶಾಸ್ತ್ರ'** ಎಂಬ ಕೃತಿಯನ್ನು ರಚಿಸಿದರೆ ಶಿವಮಾರನು 'ಗಜಾಷ್ಟಕ' ಎಂಬ ಕೃತಿಯನ್ನು ರಚಿಸಿದನು.



ಗಂಗರ ರಾಜಲಾಂಛನದಲ್ಲಿ ಆನೆಯ ಚಿತ್ರ

ಶ್ರೀಪುರುಷನ ಗಜಶಾಸ್ತ್ರ ಕೃತಿಯು ಆನೆಗಳನ್ನು ಪಳಗಿಸುವ ತಂತ್ರ ವಿದ್ಯೆಯನ್ನು ತಿಳಿಸುತ್ತದೆ. ಆಗಿನ ಕಾಲದಲ್ಲಿ ಕತ್ತಿ, ಗುರಾಣಿಗಳನ್ನು ಬಳಸುತ್ತಿದ್ದ ಶತ್ರು ಸೈನ್ಯವನ್ನು ಸದೆ ಬಡಿಯಲು ದೈತ್ಯ ಗಾತ್ರದ ಪ್ರಾಣಿಯಾದ ಆನೆಗಳನ್ನು ಯುದ್ಧಗಳಲ್ಲಿ ಬಳಸಿ ಶತ್ರುಗಳನ್ನು ಸದೆಬಡಿಯುವ ಮೂಲಕ ಗಂಗರು ತಮ್ಮ ರಾಜ್ಯವನ್ನು ಸಾಕಷ್ಟು ಪ್ರಮಾಣದಲ್ಲಿ ವಿಸ್ತರಿಸಿದರು.

ದಡಿಗನು ಮುಂದೆ 'ಕೊಂಕಣಿವರ್ಮ'ನೆಂಬ ಹೆಸರಿನಲ್ಲಿ ಆಳ್ವಿಕೆ ಪ್ರಾರಂಭಿಸಿದನು. ಸಹೋದರನಾದ ಮಾಧವನು ಅಣ್ಣನ ಸಹಾಯಕ್ಕೆ ನಿಂತನು. ಕೊಂಗಾಳ್ವರು ಮತ್ತು ಚಂಗಾಳ್ವರು, ಬಾಣರನ್ನು ಸದೆ ಬಡಿದು 'ಬಾಣವಂಶ ದವಾನಲ' ಎಂಬ ಬಿರುದನ್ನು ಗಳಿಸಿದನು. ಕುವಲಾಳ ಪ್ರದೇಶವನ್ನು (ಇಂದಿನ ಕೋಲಾರ) ತಮ್ಮದಾಗಿಸಿಕೊಂಡು ಕೆಲವು ಕಾಲ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಗಂಗರು ಪ್ರಾರಂಭದಲ್ಲಿ ವೈದಿಕಧರ್ಮವನ್ನು ಅನುಸರಿಸುತ್ತಿದ್ದು ಕ್ರಮೇಣ ಸಿಂಹನಂದಿ ಎಂಬ ಜೈನಮುನಿಯಿಂದ ಪ್ರಭಾವಿತರಾಗಿ ಜೈನಧರ್ಮೀಯರಾಗಿ ಜೈನಧರ್ಮ ಪೋಷಕರಾದರು. ಗಂಗ ದೊರೆಗಳಲ್ಲೇ ಮೇರುವ್ಯಕ್ತಿ ಎಂದರೆ ಕ್ರಿ.ಶ. ಆರನೆಯ ಶತಮಾನದಲ್ಲಿ ಸಿಂಹಾಸನಾರೋಹಣ ಮಾಡಿದ ದುರ್ವಿನೀತ. ಶೂರನೂ, ದಂಡಯಾತ್ರಾರ್ಥಿಯೂ, ಸಾಹಿತ್ಯ ಪೋಷಕನೂ ಸ್ವತಃ ಕವಿಯೂ ಆಗಿದ್ದ ಈತ ಪ್ರಾಚೀನ ಕರ್ನಾಟಕದ ಇತಿಹಾಸದಲ್ಲಿ ಗಂಗರಾಜ್ಯವನ್ನು ಸಾಮ್ರಾಜ್ಯವನ್ನಾಗಿಸಿದ್ದಾನೆ. ಚಾಲುಕ್ಯರೊಂದಿಗೆ ವೈವಾಹಿಕ ಬಾಂಧವ್ಯವನ್ನು ಹೊಂದಿದ್ದ ದುರ್ವಿನೀತನು ರಾಜತಂತ್ರ ನಿಪುಣನೂ ಆಗಿದ್ದನು. ಪಲ್ಲವರನ್ನು ಹಿಮ್ಮೆಟ್ಟಿಸಿ ಅಂಧೇರಿ, ಕೊಯಮತ್ತೂರು, ಸೇಲಂ, ಚಂಗಲ್‌ಪೇಟೆ ಇನ್ನೂ ಮುಂತಾದ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದರ ಮೂಲಕ ದಕ್ಷಿಣ ಭಾರತದಲ್ಲಿ ಬಲಾಢ್ಯ ದೊರೆಯಾದನು. ಅಂದು ತಮಿಳುನಾಡು ಸೇರಿದಂತೆ ದಕ್ಷಿಣ ಭಾರತದ ಎಲ್ಲೆಡೆ ಗಂಗರ ಇಲ್ಲವೇ ರಾಷ್ಟ್ರಕೂಟರ ಅಧಿಕಾರಿಗಳಾಗಿ ತೆರಳಿದವರಲ್ಲಿ ಬೆಂಗಳೂರಿನ ಕೆಂಪೇಗೌಡನ ವಂಶಸ್ಥರೂ ಸೇರಿದ್ದಾರೆ ಎಂದು ಡಾ. ಎಂ.ಜಿ. ನಾಗರಾಜ ಉಲ್ಲೇಖಿಸಿದ್ದಾರೆ (ಬೆಳ್ಳಿ ಬಾಗೀನ ಪುಟ 156, 1991–ಬೆಂ. ಸ್ಮರಣ ಸಂಚಿಕೆ). ಜೈನ ವಿದ್ವಾಂಸನಾಗಿದ್ದ ಪೂಜ್ಯಪಾದ (ದೇವನಂದಿ)ನು ಈತನ ಗುರುವಾಗಿದ್ದನು. ಸ್ವತಃ ಕವಿಯೂ ಆಗಿದ್ದ ದುರ್ವಿನೀತನು ಭಾರವಿ ಕವಿಯ 'ಕಿರಾತಾರ್ಜುನೀಯ' ಎಂಬ ಕೃತಿಗೆ ವ್ಯಾಖ್ಯಾನ ಬರೆದಿದ್ದಾನೆ ಎಂದು ಶಾಸನವೊಂದರಲ್ಲಿ ಉಲ್ಲೇಖವಿದೆ.

ದುರ್ವಿನೀತನ ಬಳಿಕ ಕೆಲವು ದೊರೆಗಳು ಆಳ್ವಿಕೆ ಮಾಡಿದರು. ಆದರೆ ಅವರೆಲ್ಲರಿಗಿಂತಲೂ ಬಲಿಷ್ಠರಾದ ದೊರೆಗಳೆಂದರೆ ಶ್ರೀ ಪುರುಷ (ಕ್ರಿ.ಶ. ಎಂಟನೆಯ ಶತಮಾನ) ಮತ್ತು ಮಾರಸಿಂಹ (963–74). ಇವರಲ್ಲಿ ಶ್ರೀಪುರುಷನು ಬಾದಾಮಿ

ಚಾಲುಕ್ಯರೊಂದಿಗೆ ಹಾಗೂ ರಾಷ್ಟ್ರಕೂಟರೊಂದಿಗೆ ಸಂಬಂಧವನ್ನು ಹೊಂದಿದ್ದನು. ಚಾಲುಕ್ಯರು ಮತ್ತು ರಾಷ್ಟ್ರಕೂಟರ ನಡುವೆ ಯುದ್ಧಗಳಾಗಿ ಚಾಲುಕ್ಯರು ಅಧಃಪತನದ ಹಾದಿಯನ್ನು ಹಿಡಿದಾಗ ಶ್ರೀ ಪುರುಷನು ಚಾಲುಕ್ಯರ ಪರ ನಿಂತು ರಾಷ್ಟ್ರಕೂಟರ ಕೃಷ್ಣನಿಗೆ ಬುದ್ಧಿ ಹೇಳಿದ ಧೀರ. ಚಾಲುಕ್ಯರ ಪಕ್ಷಪಾತಿಯಾದ ಶ್ರೀಪುರುಷನ ವಿರುದ್ಧವೇ ರಾಷ್ಟ್ರಕೂಟರು ಕತ್ತಿ ಎತ್ತಿದಾಗ ಅದನ್ನು ಸಮರ್ಥವಾಗಿ ತಡೆದ. ಈತನ ಕಾಲದಲ್ಲಿ ರಾಜ್ಯ ಸುಭಿಕ್ಷವಾಗಿತ್ತು. ಇದರಿಂದಾಗಿ ಈತನ ಕಾಲವನ್ನು ಶ್ರೀರಾಜ್ಯವೆಂದು ಇತಿಹಾಸಕಾರರು ಕರೆದಿದ್ದಾರೆ.

ಕ್ರಿ.ಶ. ಹತ್ತನೆಯ ಶತಮಾನದಲ್ಲಿ ಸಿಂಹಾಸನಕ್ಕೆ ಬಂದ ಗಂಗವಂಶ ಕುಲತಿಲಕ ಮಾರಸಿಂಹ (963–74)ನು ಪ್ರಬಲನಾದ ದೊರೆಯಾಗಿದ್ದನು. ರಾಷ್ಟ್ರಕೂಟರೊಡನೆ ಈಗಾಗಲೆ ವೈವಾಹಿಕ ಬಾಂಧವ್ಯ ಮಾಡಿದ್ದುದರಿಂದ ಗಂಗರು ಹಾಗೂ ರಾಷ್ಟ್ರಕೂಟರು ದಕ್ಷಿಣ ಭಾರತದಲ್ಲಿ ಪ್ರಬಲ ರಾಜಮನೆತನಗಳಾಗಿದ್ದವು. ಮಾರಸಿಂಹನು ರಾಷ್ಟ್ರಕೂಟರ ದೊರೆ ಮೂರನೆಯ ಇಂದ್ರನ ಜೊತೆ ಸೇರಿ ಉತ್ತರ ಭಾರತದ ಮಾಳವ, ಗೂರ್ಜರ, ಪ್ರತಿಹಾರರನ್ನು ಸೋಲಿಸಿ ಇಂದಿನ ಗುಜರಾತಿನವರೆಗೂ ದಾಳಿಯಿಟ್ಟು ಕೆಲವಾರು ಪ್ರದೇಶಗಳನ್ನು ಕೈವಶಕ್ಕೆ ತೆಗೆದುಕೊಂಡಿದ್ದನು.

ಗಂಗವಾಡಿ: ಹೀಗೆ ಕ್ರಿ.ಶ. ನಾಲ್ಕನೆಯ ಶತಮಾನದಿಂದ ಹತ್ತನೆಯ ಶತಮಾನದವರೆಗೂ ಆಳ್ವಿಕೆ ಮಾಡಿದ ಗಂಗರು ಶಾಸನಗಳಲ್ಲಿ ತಮ್ಮ ಆಳ್ವಿಕೆಯ ಪ್ರದೇಶವನ್ನು ಗಂಗವಾಡಿ ತೊಂಬತ್ತಾರು ಸಾವಿರ ಎಂದು ಕರೆದುಕೊಂಡಿದ್ದಾರೆ. ಈ ಗಂಗವಾಡಿ ಯಾವುದೆಂಬುದನ್ನು ತಿಳಿಯುವುದು ಅವಶ್ಯವಾಗಿದೆ. ಕೋಲಾರ 300, ಎಡೆನಾಡು 70, ಅರಿದಾಳ್ಳೆ 70, ಬೆದ್ದೊರೆಗೆರೆ 70, ನಿರ್ಗಂದ 300, ಪುನ್ನಾಡು–6000, ಕೊಂಗುನಾಡು–8000, ಮಲೆ–1000, ಮಂಡಲಿ–1000, ಇವೇ ಮುಂತಾದ ನಾಡುಗಳ ಪ್ರಸ್ತಾಪವಿದೆ. (ಈ ಮೇಲ್ಕಂಡ ಸಂಖ್ಯೆಗಳು ಗ್ರಾಮಗಳೋ ಅಥವಾ ಕಂದಾಯ ತರುವ ಹಣದ ಲೆಕ್ಕಾಚಾರವೋ ತಿಳಿದು ಬರುವುದಿಲ್ಲ.) ಗಂಗರಿಗೆ ಇಂದಿನ ಕರ್ನಾಟಕದ ದಕ್ಷಿಣ ಭಾಗವಾದ ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರು, ಚಾಮರಾಜನಗರ, ಮಡಿಕೇರಿ, ಚಿಕ್ಕಮಗಳೂರು ಜಿಲ್ಲೆಯೇ ಅಲ್ಲದೆ ಮಲೆನಾಡು ಪ್ರದೇಶವಾಗಿರುವ ಶಿವಮೊಗ್ಗದ ಕೆಲವು ಭಾಗಗಳು ಸೇರಿದ್ದವೆಂದು ಹೇಳಬಹುದು. ಕಾಲಚಕ್ರಕ್ಕೆ ಸಿಕ್ಕ ಗಂಗರು ತಮ್ಮ ರಾಜ್ಯಕೋಶವನ್ನು ಕಳೆದುಕೊಂಡರು. ಗಂಗವಾಡಿ ಎಂಬ ಪ್ರಾದೇಶಿಕ ಹೆಸರು ಕ್ರಮೇಣ ಮಾಸುತ್ತಾ ಬಂತು. ಈ ಮೇಲ್ಕಂಡ ಪ್ರದೇಶದಲ್ಲಿ ವ್ಯವಸಾಯ, ಪಶುಸಂಗೋಪನೆ, ಇವೇ ಮುಂತಾದ ಕಸುಬನ್ನು ಮಾಡಿಕೊಂಡು ಬರುತ್ತಿರುವ ಈ ಜನರನ್ನು 'ಗಂಗಡಿಕಾರ/ ಗಂಗಡಕಾರ ಒಕ್ಕಲಿಗರು' ಎಂದು ಕರೆಯುತ್ತಾ ಬಂದರು.

ಸುಮಾರು ಆರುನೂರು ವರ್ಷಗಳ ಕಾಲ ಸುದೀರ್ಘವಾಗಿ ಆಳ್ವಿಕೆ ಮಾಡಿದ ಗಂಗರು ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಪ್ರೋತ್ಸಾಹ ನೀಡಿದರು. ಅನ್ಯಮತ ಸಹಿಷ್ಣುಗಳಾದ ಇವರು ಹಿಂದೂ ಹಾಗೂ ಜೈನಧರ್ಮಗಳಿಗೂ ಪ್ರೋತ್ಸಾಹ ನೀಡಿ ದೇವಾಲಯಗಳು, ಜಿನಾಲಯಗಳನ್ನು ನಿರ್ಮಿಸಿದರು. ಇವುಗಳು ಇಂದಿಗೂ ಗಂಗರ ಕಾಲದ ಸ್ಮಾರಕಗಳಾಗಿವೆ. ಅವುಗಳೆಂದರೆ ಗಂಗರ ಪ್ರಥಮ ರಾಜಧಾನಿಯಾಗಿದ್ದ ಕುವಲಾಳ ಅಥವಾ ಇಂದಿನ ಕೋಲಾರದಲ್ಲಿ ಗುಡಿಗಳನ್ನು ನಿರ್ಮಿಸಿದ್ದರಾದರೂ ಅವುಗಳು ನಶಿಸಿಹೋಗಿವೆ. ಆದರೆ ದೇವನಹಳ್ಳಿಯ ಗಂಗವಾರ ಎಂಬಲ್ಲಿ ಸೋಮೇಶ್ವರ ದೇವಾಲಯ, ಚನ್ನಪಟ್ಟಣದ ಮಳೂರು ಪಟ್ಟಣ ಎಂಬಲ್ಲಿ ನಾರಾಯಣಸ್ವಾಮಿ ದೇವಾಲಯ, ಮೈಸೂರು ಜಿಲ್ಲೆ ಬನ್ನೂರಿನಲ್ಲಿ ಹನುಮಂತೇಶ್ವರ ದೇವಾಲಯದ ಮೂಲಗುಡಿ, ಅದೇ ಮೈಸೂರು ತಾಲ್ಲೂಕಿನ ವರುಣ ಎಂಬಲ್ಲಿ ಬೂತೇಶ್ವರ ದೇವಾಲಯ, ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿಯಲ್ಲಿ ಆದೀಶ್ವರ ಬಸದಿ, ಹಾಸನ ಜಿಲ್ಲೆ ಶ್ರವಣಬೆಳಗೊಳದಲ್ಲಿ ಚಾವುಂಡರಾಯ ಬಸದಿ ಇವೇ ಮುಂತಾದವು.

ಗಂಗರು ಭಾರತದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಕೊಟ್ಟ ಅಮೋಘ ಕೊಡುಗೆ ಎಂದರೆ ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ದೊರೆ ರಾಚಮಲ್ಲನ ಕಾಲದಲ್ಲಿ ಆತನ ಮಂತ್ರಿಯಾಗಿದ್ದ ಚಾವುಂಡರಾಯನು ನಿರ್ಮಿಸಿದ ಗೊಮ್ಮಟೇಶ್ವರ ವಿಗ್ರಹ. ಇದು ಇಡೀ ಭಾರತದಲ್ಲಿಯೇ ಎತ್ತರವಾದ ಏಕಶಿಲಾವಿಗ್ರಹವಾಗಿದೆ. ಒಟ್ಟು ಮೂರ್ತಿಯ ಎತ್ತರ 58 ಅಡಿಗಳು. ಇದು ಬಹುಶಃ ಕ್ರಿ.ಶ. 983ರಲ್ಲಿ ಕೆತ್ತಿಸಿರಬಹುದೆಂದು ಹೇಳುತ್ತಾರೆ. ಈ ಮೂರ್ತಿ ನಿರ್ಮಾಣದ ತರುವಾಯ ಕರ್ನಾಟಕದ ಇತರ ಭಾಗಗಳಲ್ಲಿ ಬಾಹುಬಲಿ ವಿಗ್ರಹಗಳು ನಿರ್ಮಾಣವಾದವು. ಆದರೆ ಈ ಸ್ಥಳವು ಇಡೀ ಭಾರತದಲ್ಲಿಯೇ ಪವಿತ್ರ ಜೈನಯಾತ್ರಾ ಸ್ಥಳವಾಗಿದೆ. ಇಂದಿಗೂ ರಾಷ್ಟ್ರದಾದ್ಯಂತ ನೆಲೆಸಿರುವ ಜೈನ ಭಕ್ತಾದಿಗಳು ತಮ್ಮ ಜೀವಮಾನದಲ್ಲಿ ಒಂದು ಬಾರಿಯಾದರೂ ಭೇಟಿ ನೀಡುತ್ತಾರೆ. ಇಲ್ಲಿ ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಮಹಾ ಮಸ್ತಕಾಭಿಷೇಕ ನಡೆಯುತ್ತದೆ.

ಇಷ್ಟೇ ಅಲ್ಲದೆ ತಲಕಾಡು, ಹೆಮ್ಮಿಗೆ, ಟಿ. ನರಸೀಪುರ, ಕಿತ್ತೂರು, ಆವನಿ, ಹೆಬ್ಬಟ, ಚನ್ನಪಟ್ಟಣ, ಮಂಡ್ಯ ಮತ್ತು ಹಾಸನ ಜಿಲ್ಲೆಯ ಹಲವಾರು ಕಡೆ ಗಂಗರ ಕಾಲದಲ್ಲಿ ಗುಡಿ, ಗೋಪುರಗಳನ್ನು ಕಟ್ಟಿರುವುದನ್ನು ಕಾಣಬಹುದು.

ಹೀಗೆ ಗಂಗರು ಕೇವಲ ರಾಜ್ಯ ವಿಸ್ತರಣೆಗೆ ಮಾತ್ರ ಪ್ರಾಮುಖ್ಯತೆ ನೀಡದೆ ಧರ್ಮ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ಸೇರಿದಂತೆ ನಾನಾ ರಂಗಗಳಿಗೆ ಪ್ರಾಮುಖ್ಯತೆ ನೀಡಿದರು. ಇಂದಿಗೂ ಇವರು ನಿರ್ಮಿಸಿದ ದೇವಾಲಯಗಳು ಗಂಗರ ಬಗೆಗಿನ

ಇತಿಹಾಸವನ್ನು ಹೇಳುವ ಮೂಕಸಾಕ್ಷಿಗಳಾಗಿವೆ. ಇಂದಿಗೂ ಮಂಡ್ಯ, ಮೈಸೂರು, ಟಿ.ನರಸೀಪುರ, ಹಾಸನ, ಚಿಕ್ಕಮಗಳೂರು, ಕನಕಪುರ, ಚನ್ನಪಟ್ಟಣ ಸೇರಿದಂತೆ ಬಹುಭಾಗಗಳಲ್ಲಿ ನೆಲೆಸಿರುವ ಗಂಗವಂಶಿಕರನ್ನು ಗಂಗಡಕಾರ ಒಕ್ಕಲಿಗರೆಂದು ಕರೆಯಲಾಗುತ್ತದೆ. ಇದನ್ನು ಸಾಕಷ್ಟು ಇತಿಹಾಸಕಾರರು, ಸಂಶೋಧಕರು ದೃಢಪಡಿಸಿರುತ್ತಾರೆ.

ಗಂಗ ದೊರೆಗಳ ಆಳ್ವಿಕೆ

ಗಂಗ ದೊರೆಗಳು ಏಳುನೂರು ವರ್ಷಗಳಲ್ಲಿ ಒಟ್ಟು 24 ದೊರೆಗಳು ಆಳ್ವಿಕೆ ಮಾಡಿದರು. ಅವರಲ್ಲಿ ಅತಿ ಪ್ರಮುಖರೆಂದರೆ ಶ್ರೀ ಪುರುಷ, ಎರಡನೆ ಶಿವಮಾರ, ಎರಡನೆ ಭೂತಗ, ಮೂರನೆ ಮಾರಸಿಂಹ, ನಾಲ್ಕನೆಯ ರಾಜಮಲ್ಲ ಇವರೇ ಮುಂತಾದವರು. ಇವರು ತಮ್ಮ ಸಮಕಾಲಿನರಾದ ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಪಲ್ಲವರು, ಪಾಂಡ್ಯರು, ಚೋಳರೊಂದಿಗೆ ಸ್ನೇಹ, ಸಂಘರ್ಷ, ವೈವಾಹಿಕ ಭಾಂದವ್ಯ, ಶಾಂತಿ ಒಪ್ಪಂದ ಯುದ್ಧಪೂರ್ವ ಹಾಗೂ ಯುದ್ದೋತ್ತರ ಒಪ್ಪಂದ ಇವೇ ಮುಂತಾದ ರಾಜತಾಂತ್ರಿಕತೆಯನ್ನು ಮಾಡುವುದರ ಮೂಲಕ ಸರಿಸುಮಾರು ಏಳುನೂರು ವರ್ಷಗಳ ಕಾಲ (ಕ್ರಿ.ಶ. 350–1024) ಆಳ್ವಿಕೆ ಮಾಡಿದರು.ಅವರಲ್ಲಿ ಕೆಲವರ ಬಗ್ಗೆ ತಿಳಿಯೋಣ.

ಒಂದನೆ ಮಾಧವ ಕೊಂಗಣೀ ವರ್ಮ

ಗಂಗರ ಬಗೆಗಿನ ಅಧ್ಯಯನ ಮಾಡಲು ಅವರ ಶಾಸನಗಳು, ತಾಮ್ರ ಪತ್ರಗಳು, ಓಲೆಗರಿ ಇವೇ ಮುಂತಾದ ಆಕರ ಗ್ರಂಥಗಳು ನಮಗೆ ಸಹಾಯ ಮಾಡುತ್ತವೆ. ಗಂಗ ವಂಶ ಸ್ಥಾಪಕರು 'ಧಡಿಗ' ಮತ್ತು 'ಮಾಧವ' ಎಂಬ ಸಹೋದರರು. ದಕ್ಷಿಣ ಭಾರತದಲ್ಲಿ ಪ್ರಬಲರಾಗಿದ್ದ ಶಾತವಾಹನರ ನಂತರ ಅಲ್ಲಲ್ಲಿ ಸ್ಥಳೀಯ ದೊರೆಗಳು ತಲೆ ಎತ್ತಿದರು. ಅದರಂತೆ ದಡಿಗನ ಸಹೋದರ ಮಾಧವನು ಕ್ರಿ.ಶ. 340 ರಿಂದ 370ರ ತನಕ ಆಳ್ವಿಕೆ ಮಾಡಿದನು. ಪ್ರಾರಂಭದಲ್ಲಿ ಗಂಗರು ಬಾಣರನ್ನು ಸೋಲಿಸಿ ತಮ್ಮ ರಾಜ್ಯವನ್ನು ವಿಸ್ತರಿಸಿದರು. "ತಲಕಾಡು" ಒಂದನೆ ಮಾಧವನ ಕಾಲದಲ್ಲೇ ರಾಜಧಾನಿಯಾಗಿತ್ತು ಎಂದು ತಿಳಿದು ಬರುತ್ತದೆ. ಕೂಟ ಶಾಸನಗಳಲ್ಲಿ ವರ್ಣಿಸಿರುವಂತೆ ಸೇಲಂ, ಕೊಯಮತ್ತೂರು ಜಿಲ್ಲೆಗಳ ಹಲವಾರು ಪ್ರದೇಶಗಳಿಗೆ ಸೈನ್ಯವನ್ನು ಕಳುಯಿಸಿ "ಕೊಂಗು" ನಾಡನ್ನು ವಶಪಡಿಸಿಕೊಂಡನೆಂದು ತಿಳಿದು ಬರುತ್ತದೆ. ದೊರೆ ಮಾಧವನಿಗೆ "ಕೊಂಗಣಿ ವರ್ಮ" ಎಂಬ ಬಿರುದಿದ್ದಿತು ಎಂದು ತಿಳಿದು ಬರುತ್ತದೆ. ನಂತರದ ಕಾಲದಲ್ಲಿ ಮಾಧವನಿಗೂ ಕದಂಬರಿಗೂ ಘರ್ಷಣೆಯಾಗಿ ತನ್ನ ರಾಜ್ಯವನ್ನು ಕೊಂಕಣದವರೆವಿಗೂ ವಿಸ್ತರಿಸಿದನೆಂದು ಶಾಸನಗಳಿಂದ ಉಕ್ತವಾಗುತ್ತದೆ.

ಎರಡನೆ ಮಾಧವ (ಕ್ರಿ.ಶ. 370–390)

ಒಂದನೆ ಮಾಧವ ಕೊಂಗಣಿ ವರ್ಮನ ನಂತರ ಅವನ ಹಿರಿಯ ಸಹೋದರನ ಮಗ ಎರಡನೆ ಮಾಧವ / ಕಿರಿಯ ಮಾಧವನು (ಕ್ರಿ.ಶ. ಸುಮಾರು 370–390) ರಾಜನಾಗಿದ್ದನು. ಶಾಂತಿ ಪ್ರಿಯನಾದ ದೊರೆ ಈತನ ಆಸ್ಥಾನದಲ್ಲಿ ರಾಜನೀತಿ ನಿಪುಣರಿದ್ದರು. ಈತ "ದತ್ತಕಸೂತ್ರ"ಕ್ಕೆ ಭಾಷ್ಯ ಬರೆದನು.

ಹರಿವರ್ಮ (ಕ್ರಿ.ಶ. 390–410)

ಹರಿವರ್ಮನು ದಕ್ಷನಾದ ದೊರೆ ಈತನ ಪಟ್ಟಾಭಿಷೇಕ ಮಹೋತ್ಸವಕ್ಕೆ ಪಲ್ಲವ ದೊರೆ 'ಸಿಂಹವರ್ಮ'ನು ಬಂದು ಭಾಗವಹಿಸಿದ್ದ ಎಂದು ಇತಿಹಾಸಕಾರರು ದಾಖಲೆ ಸಹಿತ ಉಲ್ಲೇಖಿಸಿದ್ದಾರೆ. ಇದರಿಂದಾಗಿ ಗಂಗರ ಮತ್ತು ಪಲ್ಲವರ ನಡುವೆ ಭಾಂದವ್ಯ ಇದ್ದಿತು ಎಂದು ತಿಳಿಯುತ್ತದೆ. ಚಿಕ್ಕತ್ತೂರು ಶಾಸನದ ಪ್ರಕಾರ ಹರಿವರ್ಮನು ತಲಕಾಡನ್ನು ತನ್ನ ರಾಜಧಾನಿಯನ್ನಾಗಿಸಿಕೊಂಡಿದ್ದರೆ ಆತನ ಮಗ ಅಯ್ಯ ವರ್ಮನು ಕೋಲಾರ ಜಿಲ್ಲೆಯ ಕೈವಾರದಲ್ಲೂ ಮತ್ತೊಬ್ಬ ಮಗ ತಡಂಗಲ ಮಾಧವನು ಕೋಲಾರದ ಕೆಲವು ಭಾಗಗಳನ್ನು ಆಳುತ್ತಿದ್ದನು ಎಂದು ತಿಳಿಯುತ್ತದೆ. ಹರಿವರ್ಮನು ಯುದ್ಧಕಲೆಯಲ್ಲಿ ನಿಪುಣನಾಗಿದ್ದನು ಎಂತಲೂ ಆನೆಗಳನ್ನು ಪಳಗಿಸಿ ಯುದ್ಧದಲ್ಲಿ ಅವುಗಳನ್ನು ತೊಡಗಿಸುತ್ತಿದ್ದ ಎಂತಲೂ ಸಾಕಷ್ಟು ಧನ ಕನಕಗಳನ್ನು ಹೊಂದಿದ್ದ ಎಂದು "ತಂಜಾವೂರು ಪ್ರಶಸ್ತಿ"ಯು ತಿಳಿಸುತ್ತದೆ. (I.A.Vol.VIII, P–212) ಹರಿವರ್ಮನ ಕೀರ್ತಿಯೂ ನಾಲ್ಕು ಸಮುದ್ರಗಳಿಗೆ ಹರಡಿತ್ತು ಎಂಬುದು ನಂಜನಗೂಡು ತಾಮ್ರ ಶಾಸನವು ತಿಳಿಸುತ್ತದೆ (E.C. Vol-III-Nj-122).

ವಿಷ್ಣುಗೋಪ (ಕ್ರಿ.ಶ. 410–430)

ದಕ್ಷತೆಯಿಂದ ಆಳ್ವಿಕೆ ಮಾಡಿದ ಈತನ ಬಗ್ಗೆ ಹೆಚ್ಚಿನ ಶಾಸನಗಳು ಲಭ್ಯವಾಗಿಲ್ಲ. ಈತನ ನಂತರ ಇವನ ಮಗ ತಡಂಗಲ ಮಾಧವ ಅಥವಾ ಮೂರನೆಯ ಮಾಧವನು ರಾಜನಾಗಿ ಕ್ರಿ.ಶ. 430 ರಿಂದ 466ರವರೆಗೆ ಆಳ್ವಿಕೆ ಮಾಡಿದ.

ಅವನೀತ (ಕ್ರಿ.ಶ. 466–495)

ಪರಾಕ್ರಮಿಯಾದ ಅವನೀತನು ತಡಂಗಲ ಮಾಧವನ ಮಗ ಈತನು ಪುನ್ನಾಟದ ರಾಜನಾದ ಸ್ಕಾಂದ ವರ್ಮನ ಪುತ್ರಿಯಾದ ಜೇಷ್ಠಾದೇವಿಯನ್ನು ಸ್ವಯಂವರ ಪದ್ದತಿಯಂತೆ ವರಿಸಿದನು. ಗಜ ತುರಗಳ ಬಗ್ಗೆ ಚನ್ನಾಗಿ ಅರಿತ್ತಿದ್ದನು. ಯುದ್ದ ಪ್ರವೀಣನಾದ ಈತನನ್ನು ಕಂಡರೆ ಶತ್ರುಗಳಿಗೆ ಭಯವಿತ್ತು. ಇವನ ಶಾಸನಗಳಲ್ಲಿ ಅಂದು ಚಾಲ್ತಿಯಲ್ಲಿದ್ದ ಪಣ, ಕಾರ್ಷಪಣ ಇವೇ ಮೊದಲಾದ ನಾಣ್ಯಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಆತನ ಕಾಲದಲ್ಲಿದ್ದ ವರ್ಣಾಶ್ರಮ

ಧರ್ಮವನ್ನು ಹಾಗೂ ಹದಿನೆಂಟು ಉಪಕಸುಬುಗಳ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ. ಈತನ ಕಾಲದಲ್ಲಿ ರಾಜ್ಯದಲ್ಲಿ ಶಾಂತಿ, ನೆಮ್ಮದಿ ಇದ್ದಿತು.

ಮಾಧವ ದುರ್ವಿನೀತ (ಕ್ರಿ.ಶ. 495–535)

ಗಂಗ ಗೊರೆಗಳಲ್ಲಿ ಸುಪ್ರಸಿದ್ಧ ದೊರೆ ಸಾಹಿತ್ಯ ಮತ್ತು ಸಂಸ್ಕೃತಿಗೆ ಹೆಚ್ಚಿನ ಮಹತ್ವನೀಡಿದನು.ಈತನ "ಹೆಬ್ಬಟ್ಟಿ" ಶಾಸನವು ಗಂಗ ವಂಶಸ್ಥರ ಪ್ರಾರಂಭದ ದೊರೆಗಳ ಆಳ್ವಿಕೆಯ ಕಾಲವನ್ನು ತಿಳಿಸಲು ಬಹು ಮಟ್ಟಿಗೆ ನೆರವಾಗಿದೆ. ಮಾಧವ ದುರ್ವಿನೀತನಿಗೂ ಆತನ ತಮ್ಮನಿಗೂ ಒಳ ಜಗಳ ಪ್ರಾರಂಭವಾಗಿ ಸಿಂಹಾಸನಕ್ಕಾಗಿ ಹೋರಾಟ ನಡೆಯಿತು. ದುರ್ವಿನೀತನು ತನ್ನ ಮಲ ಸಹೋದರನನ್ನು ಸೋಲಿಸಿ ಶಾಂತಿ ಮಾಡಿಸಿದನು. ಅಣ್ಣ ತಮ್ಮಂದಿರ ಜಗಳದ ಲಾಭವನ್ನು ಪಡೆಯಬೇಕೆಂದು ಕಂಚಿಯ ಪಲ್ಲವರು ದುರ್ವಿನೀತನ ಮಲತಮ್ಮನ ಪರವಹಿಸಿ ಬಂದರು. ದಕ್ಷನಾದ ದುರ್ವಿನೀತನು ಪಲ್ಲವರನ್ನು ಹಿಂದಕ್ಕಟ್ಟಿದನು. ಅಷ್ಟಕ್ಕೆ ಸುಮ್ಮನಿರದ ಪಲ್ಲವರು ಕೆಲವು ವರ್ಷಗಳ ತರುವಾಯ ದುರ್ವಿನೀತನ ವಿರುದ್ಧ ಸೈನ್ಯಾಚರಣೆ ನಡೆಸಿದರು. ದುರ್ವಿನೀತನು ಪಲ್ಲವರನ್ನು ಕೊಯಮತ್ತೂರು, ಸೇಲಂ, ಆಲತ್ತೂರು, ಪೊರುಲಾರೆ, ಮತ್ತು ಪೆನ್ನಾಗರಂ ಇವೇ ಮುಂತಾದ ಸ್ಥಳಗಳಲ್ಲಿ ಸೋಲಿಸಿದನು. ಕದಂಬರು ಪಲ್ಲವರ ಪರ ನಿಂತರು. ಕದಂಬರ ದೊರೆ ಕೃಷ್ಣ ವರ್ಮನ ಮಕ್ಕಳಾದ ಅಜವರ್ಮ ಮತ್ತು ಭೋಗವರ್ಮರನ್ನು ಕೂಡ ಸೋಲಿಸಿದನು. ಪುನ್ನಾಟದ ದೊರೆ ಸ್ಕಾಂದ ವರ್ಮ ಮತ್ತು ಆತನ ಮಗ (ದುರ್ವಿನೀತನ ಮಾವ ಹಾಗೂ ಭಾವಮೈದ) ಅಸುನೀಗಿದುದರಿಂದ ಪುನ್ನಾಟ ರಾಜ್ಯವೂ ಗಂಗ ಸಾಮ್ರಾಜ್ಯಕ್ಕೆ ಸೇರಿತು. ಕಾಲಾನಂತರ ಬಾದಾಮಿ ಚಾಲುಕ್ಯರು ಹಾಗೂ ಗಂಗ ದೊರೆಗಳ ನಡುವೆ ಬಾಂಧವ್ಯ ಏರ್ಪಟ್ಟು ಚಾಲುಕ್ಯರು ಗಂಗರ ಪರ ನಿಂತರು. ರಾಜ್ಯದಲ್ಲಿ ಶಾಂತಿ ಸುಭಿಕ್ಷೆ ನೆಲೆಸುವಂತೆ ಮಾಡಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಬ್ರಾಹ್ಮಣರಿಗೆ ಅಗ್ರಹಾರಗಳನ್ನು ಕಟ್ಟಿಸಿಕೊಟ್ಟನು.

ಮುಷ್ಕರ (ಕ್ರಿ.ಶ. 535–585)

ತಂದೆಯಂತೆ ಪರಾಕ್ರಮಿ ಬಳ್ಳಾರಿ ಮತ್ತು ಧಾರವಾಡ ಕಡೆಗೆ ತನ್ನ ರಾಜ್ಯವನ್ನು ವಿಸ್ತರಿಸಿದ. ಮುಷ್ಕರನು ಇಂದಿನ ಶಿವಮೊಗ್ಗ ಜಿಲ್ಲೆಯ ಸಿಂಧು ಸಂಸ್ಥಾನದ ರಾಜಕುಮಾರಿಯನ್ನು ವಿವಾಹವಾದನು. ಈತನ ಮರಣಾ ನಂತರ ಇವನ ಮಗನಾದ ಶ್ರೀ ವಿಕ್ರಮನು ಆಳ್ವಿಕೆಗೆ ಬಂದನು.

ಶ್ರೀ ವಿಕ್ರಮ (ಕ್ರಿ.ಶ. 585–635)

ಶ್ರೀ ವಿಕ್ರಮ ಹಾಗೂ ಈತನ ಮಗ ಭೂವಿಕ್ರಮರು ಕ್ರಮವಾಗಿ ಗಂಗವಾಡಿ ಮತ್ತು ಕೋಲಾರ ಪ್ರಾಂತ್ಯವನ್ನು ಆಳ್ವಿಕೆ ಮಾಡುತ್ತಿದ್ದರು. ಈತನಿಗೆ "ಗುಣವಿನೀತ" ಎಂಬ ಬಿರುದ್ದಿತ್ತು.

ಭೂ ವಿಕ್ರಮ (ಕ್ರಿ.ಶ. 635–679)

ತಂದೆಯ ನಂತರ ಗಂಗವಾಡಿಯ ಸಿಂಹಾಸನಕ್ಕೆ ಬಂದನು, ಚಾಲುಕ್ಯರಿಗೂ ಪಲ್ಲವರಿಗೂ ನಿಕಟ ಭಾಂದವ್ಯವಿದ್ದಿತು. ಚಾಲುಕ್ಯರ ದೊರೆ ಇಮ್ಮಡಿ ಪುಲಿಕೇಶಿ ಪ್ರಬಲನಾಗಿ ಪಲ್ಲವರ ವಿರುದ್ದ ಹೋರಾಡಿದಾಗ ಆತನಿಗೆ ಸಹಕರಿಸಲು ಪಲ್ಲವರ ವಿರುದ್ದ ಸೈನ್ಯಾಚರಣೆ ನಡೆಸಿದನು. ಪಲ್ಲವರ ವಿರುದ್ದ ಸತತವಾಗಿ ಸೆಣಸಿದನು. ಈತನಿಗೆ "ಗಜಪತಿ", "ಶ್ರೀ ವಲ್ಲಭ", "ದುಗ್ಗಮಾರ" ಇವೇ ಮುಂತಾದ ಬಿರುದುಗಳಿದ್ದವು. ಈತನ ನಂತರ ಈತನ ತಮ್ಮ ಒಂದನೆ ಶಿವಮಾರನು ರಾಜನಾದನು.

ಒಂದನೆ ಶಿವಮಾರ (ಕ್ರಿ.ಶ. 679–725)

ಒಂದನೆ ಶಿವಮಾರನ ವಿಶೇಷವೆಂದರೆ ನೂರು ವಸಂತಗಳ ಕಾಲ ಬದುಕ್ಕಿದ್ದನು (625–725) ಹಾಗೂ ಈತ 46 ವರ್ಷಗಳ ಕಾಲ ಆಳ್ವಿಕೆ ಮಾಡಿದ ಎಂಬುದಾಗಿ ಬರದೂರು ದತ್ತಿ ಶಾಸನವು ತಿಳಿಸುತ್ತದೆ. (E.C. III-Md-113 ಹಾಗೂ Ins. No. 15, M.A.R. 1944) ಈತನ ಆಳ್ವಿಕೆಯ ಕಾಲದಲ್ಲಿ ರಾಜ್ಯದಲ್ಲಿ ಶಾಂತಿ ಸುಭಿಕ್ಷೆ ನೆಲೆಸಿತ್ತು ಎಂಬುದಾಗಿ ಶಾಸನಗಳು ಹಾಗೂ ತಾಮ್ರ ಪತ್ರಗಳಿಂದ ತಿಳಿಯುತ್ತದೆ. ಗಂಗರ ಹಾಗೂ ಚಾಲುಕ್ಯರ ನಡುವೆ ಮಧುರ ಬಾಂಧವ್ಯವಿದ್ದಿತು. ಪಲ್ಲವರು ಮತ್ತು ಗಂಗರು ಸಾಂಪ್ರದಾಯಕ ಶತೃಗಳಾಗಿಯೇ ಉಳಿದರು. ಪಲ್ಲವರು ಭೂವಿಕ್ರಮನ ಕಾಲದಲ್ಲಿ ಅನುಭವಿಸಿದ ಪರಾಜಯದ ಸೇಡನ್ನು ತೀರಿಸಿಕೊಳ್ಳಲು ಅವಣಿಸುತ್ತಿದ್ದರು. ಪಲ್ಲವರು ಶಿವಮಾರನ ವಿರುದ್ದ ಸೇನಾಚರಣೆ ಮಾಡಿದರು. ಹಲ್ಲೇಗೆರೆ ಶಾಸನದ ಪ್ರಕಾರ. ಶಿವಮಾರನು ವೀರಾವೇಶದಿಂದ ಹೋರಾಡಿ ಪಲ್ಲವರನ್ನು ಹಿಮ್ಮೆಟ್ಟಿಸಿದ ಹಾಗೂ ವೃದ್ದ ಮುತ್ತುರಾಜ ಜಯ ಎಂಬ ಪಲ್ಲವ ಯುವರಾಜರನ್ನು ಸೆರೆಹಿಡಿದನು. ಪಲ್ಲವರು ತಪ್ಪಿಸಿಕೊಂಡು ಅಪಾರವಾದ ಯುದ್ಧ ಪರಿಹಾರ ಭತ್ಯವನ್ನು ನೀಡಿದರು. ಇದೇ ಸಮಯದಲ್ಲಿ ಅವಿಧೇಯತೆಯನ್ನು ತೋರಿದ ನೊಳಂಬ ರಾಜನನ್ನೂ ಕೂಡ ಶಿಕ್ಷಿಸಲಾಯ್ತು.

ತನ್ನ ರಾಜ್ಯವನ್ನು ಕೊಂಗು, ತೊರೆನಾಡು 500, ಪುನ್ನಾ 100, ಕೊಂಗಲ್ ನಾಡು 2000, ಮಲೆನಡು 1000 ಇವೇ ಮೊದಲಾದ ಪ್ರಾಂತ್ಯಗಳನ್ನಾಗಿ ವಿಂಗಡಿಸಿ –ದನು ಹಾಗೂ ತನ್ನ ಮಗ ಎರೆಗಂಗನನ್ನು ತನ್ನ ಮೊಮ್ಮಗನಾದ ಶ್ರೀಪುರುಷನನ್ನು ಈ ಮೇಲ್ಕಂಡ ನಾಡುಗಳಿಗೆ ಪ್ರಾಂತ್ಯಾಧಿಕಾರಿಗಳನ್ನಾಗಿ ನೇಮಿಸಿದನು. (No.CL. VII.I.A.XIV.P.229 ಇಂದು ಇದು ಬ್ರಿಟೀಷ್ ಮ್ಯೂಸಿಯಂನಲ್ಲಿದೆ) ಶಿವಮಾರನ ಕಾಲದಲ್ಲಿ ಹಿಂದೂಗಳಿಗೆ ಜೈನರಿಗೆ ಉಧಾರವಾಗಿ ದಾನ ದತ್ತಿಗಳನ್ನು ನೀಡಿದನು. ಶಿವಮಾರನಿಗೆ ಕೊಂಗಣೀವರ್ಮ, ಮಹೇಂದ್ರ ಸ್ಥಿರವಿನೀತ, ದೇವರಾಜ, ವೃದ್ದರಾಜ ಲೋಕಧೂತ ಇವೇ ಮುಂತಾದ ಬಿರುದು ಬಾವಲಿಗಳಿದ್ದವು.

ಶ್ರೀ ಪುರುಷ (ಕ್ರಿ.ಶ. 725–788)

ಗಂಗ ಅರಸರಲ್ಲೆ ಶ್ರೇಷ್ಠ ಹಾಗೂ ಪ್ರಬಲ ದೊರೆ ಎಂದರೆ ಶ್ರೀ ಪುರುಷ. ಈತನ ತಂದೆ ಎರೆಯಂಗನು ಆತನ ತಂದೆ ಶಿವಮಾರನ ಕಾಲದಲ್ಲೇ ಮೃತನಾದನು. (ಶಿವಮಾರ ನೂರು ವರ್ಷಗಳ ಬದುಕ್ಕಿದ್ದನು) ಶ್ರೀ ಪುರುಷನ ಕಾಲದಲ್ಲಿ ಶಾಂತಿ, ಸುಭಿಕ್ಷೆ, ನೆಮ್ಮದಿ ನೆಲೆಸಿದ್ದ ಕಾರಣದಿಂದಾಗಿ ಈತನ ಕಾಲವನ್ನು "ಶ್ರೀ ರಾಜ್ಯ" ಎಂದು ಕರೆಯುತ್ತಿದ್ದರು. ಒಂದು ವಿಶೇಷವೆಂದರೆ ಈತನ ಕಾಲದಲ್ಲೆ ಬಾದಾಮಿ ಚಾಲುಕ್ಯರು (ಕ್ರಿ.ಶ. 757) ಅವನತಿಯ ಹಾದಿಯನ್ನಿಡಿದರು.ಉತ್ತರ ಕರ್ನಟಕ ಭಾಗದಲ್ಲಿ ಮಾನ್ಯಖೇಟದ ರಾಷ್ಟ್ರಕೂಟರು ತಲೆ ಎತ್ತಿದರು.ಬಾಣರ ಪ್ರಭಾವ ಇಳಿಮುಖವಾಗತೊಡಗಿತು. ಪಲ್ಲವರು, ಚಾಲುಕ್ಯರು, ರಾಷ್ಟ್ರಕೂಟರು ತಮ್ಮ ರಾಜ್ಯವನ್ನು ವಿಸ್ತರಿಸುವ ಉದ್ದೇಶದಿಂದ ಗಂಗರ ಸಾಮ್ರಾಜ್ಯದ ಕಡೆ ವಿಸ್ತರಿಸಲು ಸಾಕಷ್ಟು ಪ್ರಯತ್ನಿಸಿದರು. ಆದರೆ ಶ್ರೀಪುರುಷನು ಪ್ರಬಲ ದೊರೆಯಾದ ಕಾರಣ ಶತೃಗಳ ಆಟ ಆತನ ಮುಂದೆ ನಡೆಯಲಿಲ್ಲ.

ಶ್ರೀಪುರುಷನು ರಾಜನಾಗುವ ಮೊದಲು ಮಾಕುಂದನಾಡು, ಎಳೆನಾಗರನಾಡು, ಅವನೀಯನಾಡು, ಕರೆಗೋಡುನಾಡು ಇವೇ ಮುಂತಾದ ಪ್ರದೇಶಗಳ ರಾಜ್ಯಪಾಲನಾಗಿ ಸೇವೆಸಲ್ಲಿಸಿದ ವಿಷಯವು ಒಂದು ತಾಮ್ರ ಪತ್ರದಿಂದ ತಿಳಿಯುತ್ತದೆ (I.A.XIVP 229) ಒಂದು ವಿಶೇಷವೆಂದರೆ ಈ ಮಹತ್ವದ ವಿಚಾರ (ರಾಜ್ಯಪಾಲರನ್ನಾಗಿ ನೇಮಿಸುತ್ತಿದ್ದ ವಿಚಾರ) ತಿಳಿಸುವ ತಾಮ್ರಪತ್ರವು ಇಂಗ್ಲೆಂಡಿನ ಲಂಡನ್ ಮ್ಯೂಸಿಯಂನಲ್ಲಿದೆ) ಗಂಗರ ಶತೃಗಳಾದ ಪಲ್ಲವರು, ಬಾಣರು, ರಾಷ್ಟ್ರಕೂಟರು ಇವರೇ ಮುಂತಾದವರ ಉಪಟಳವನ್ನು ತಡೆಯುವಂತಹ ಉದ್ದೇಶದಿಂದ ಗಂಗ ದೊರೆಗಳು ಶ್ರೀ ಪುರುಷನಂತೆ ದಕ್ಷರನ್ನು ತಮ್ಮ ಪ್ರಾಂತ್ಯಗಳಿಗೆ ಪ್ರಾಂತ್ಯಾಧಿಕಾರಿಗಳನ್ನಾಗಿ ಇಲ್ಲವೆ ರಾಜ್ಯಪಾಲರನ್ನಾಗಿ ನೇಮಿಸುತ್ತಿದ್ದರು. ಈ ಮೇಲ್ಕಂಡ ಶತೃ ರಾಜರು ಆಗಿಂದಾಗ್ಗೆ ಗಂಗರ ವಿರುದ್ದ ಸಮರ ಸಾರುತ್ತಿದ್ದರು. ಬಾಣರು ಗಂಗರ ಮಾಂಡಲೀಕರಾಗಿದ್ದ ಕಾರಣ ಆಗಿಂದಾಗ್ಗೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದರು. ಗಂಗದೊರೆ ಶ್ರೀ ಪುರುಷನು ಶತೃಗಳ ಬಾಧೆಯಿಂದ ತನ್ನ ರಾಜ್ಯವನ್ನು ಸಂರಕ್ಷಿಸಿದ್ದ ಎಂದೇಳಬಹುದು ಬಾಣರು ಸ್ವಾತಂತ್ರ್ಯಕ್ಕಾಗಿ ತಮ್ಮ ದೊರೆ "ಮಹಾಬಲಿ ಬಾಣ"ನ ನೇತೃತ್ವದಲ್ಲಿ ಗಂಗರ ವಿರುದ್ದ ಯುದ್ದ ಘೋಷಿಸಿದರು.ಶ್ರೀ ಪುರುಷನು ಬಾಣರ ಸೈನ್ಯವನ್ನು ಸೋಲಿಸಿ ತನ್ನ ಪರಮಾಧಿಕಾರವನ್ನು ಸ್ಥಾಪಿಸಿದನು. ಇಷ್ಟೇ ಅಲ್ಲದೆ ಬಾಣ ದೊರೆ ಮಹಾಬಲಿ ಬಾಣನನ್ನು ಸಿಂಹಾಸದಿಂದ ಇಳಿಸಿ ಅವನ ಮಗನಾದ ಜಗದೇಕಮಲ್ಲ ಬಾಣನಿಗೆ ಪಟ್ಟಕಟ್ಟಿದನು. ನಂದಿ ತಾಮ್ರಪತ್ರದ ಪ್ರಕಾರ (M.A.R. 1914) ಶ್ರೀಪುರುಷನ ಮೂರನೇ ವರ್ಷದ ಆಳ್ವಿಕೆಯ ಮೇಲೆ ಬೆಳಕು ಚಲ್ಲುತ್ತದೆ. ಬಾಣರು ಅತಾಷರಾಗಿ ಮತ್ತೆ ಗಂಗ ದೊರೆ ಶ್ರೀಪುರುಷನ ವಿರುದ್ದ ಯುದ್ದ

ಘೋಷಿಸಿದರು. ಶ್ರೀಪುರುಷನು ಸೇನಾ ಸಮೇತನಾಗಿ ಹೋಗಿ ಪುಂಗನೂರು, ತುಂಡಕಲ್, ಮದ್ಯತೂರು, ಲಡ್ಡಿಗನ ಇವೇ ಮುಂತಾದ ಪ್ರದೇಶಗಳಲ್ಲಿ ಬಾಣರನ್ನು ಸೋಲಿಸಿ "ಬಾಣಕಲಕಲ" ಎಂಬ ಬಿರುದನ್ನು ಪಡೆದನು. ಈ ಮೇಲ್ಕಂಡ ಯುದ್ದಗಳಲ್ಲಿ ಶ್ರೀಪುರುಷನು ತನ್ನ ಸಾಮಂತ ಅರಸರ ಸಹಾಯ ಪಡೆದನು ಅವರಲ್ಲೆಲ್ಲಾ "ದುಂಡು" ಎಂಬ ಸಾಮಂತನು ಶ್ರೀಪುರುಷನ ಪರ ಹೋರಾಡಿದುದರ ಫಲವಾಗಿ ಆತನಿಗೆ ಮಾನ್ಯತೂರು ಎಂಬ ಪ್ರದೇಶವನ್ನು ಜಹಗೀರಾಗಿ ನೀಡಿದನು. ಪಲ್ಲವರು ಆಗಿಂದಾಗ್ಗೆ ಗಂಗರ ವಿರುದ್ಧ ಯುದ್ಧ ಘೋಷಿಸಿದರು ಪಲ್ಲವರ ವಿರುದ್ದ ಶ್ರೀಪುರುಷನು ಹೋರಾಡಿ ಅವರನ್ನು ಹಿಮ್ಮೆಟ್ಟಿಸಿದನು. ಕ್ರಿ.ಶ. ಎಂಟನೆಯ ಶತಮಾನದಲ್ಲಿ (ಕ್ರಿ.ಶ. 725) ರಾಷ್ಟ್ರಕೂಟರು ಪ್ರವರ್ದಮಾನಕ್ಕೆ ಎಂದರು. ರಾಷ್ಟ್ರಕೂಟರು ಕನ್ನಡಿಗರಾದರೂ ಕೂಡ ಗಂಗರ ಸಹಾಯಕ್ಕೆ ನಿಲ್ಲದೆ ವಿರೋಧಿಗಳಾದರು. ಶ್ರೀಪುರುಷನು ರಾಷ್ಟ್ರಕೂಟರನ್ನು ಸಮರ್ಥವಾಗಿ ಎದುರಿಸಿದನು.ಮಧುರೆಯಿಂದ ಪಾಂಡ್ಯರು ದಾಳಿ ಮಾಡ ತೊಡಗಿದರು ಶ್ರೀ ಪುರುಷನು ತನ್ನ ಸಾಮಂತ ದೊರೆಗಳ ಸಹಾಯದಿಂದ ಪಾಂಡ್ಯರನ್ನು ಹಿಮ್ಮೆಟಿಸಿದನು. ಆಯಾಕಟ್ಟಿನ ಸ್ಥಳಗಳಲ್ಲಿ ಸೈನ್ಯದ ತುಕಡಿಗಳನ್ನು ಖಾಯಂ ಆಗಿ ನೇಮಿಸಿದನು. ಎರಡನೇ ನಂದಿವರ್ಮನ ಪಲ್ಲವಮಲ್ಲನು ಚಾಲುಕ್ಯರ ಮೇಲೆ ಸೇಡು ತೀರಿಸಿಕೊಳ್ಳಲು ಹವಣಿಸಿ ಗಂಗವಾಡಿಗೆ ಸೇರಿದ ಕೊಂಗು ರಾಜ್ಯವನ್ನು ಮತ್ತು ಚಾಲುಕ್ಯ ಸಾಮ್ರಾಜ್ಯದ ಗಡಿಗಳನ್ನು ಆಕ್ರಮಿಸಿದನು. ಪ್ರಾರಂಭದಲ್ಲಿ ಶ್ರೀಪುರಷನು ಪರಾಜಯ ಹೊಂದಿದನು. ಹಿಂದೆ ಶ್ರೀಪುರುಷನ ತಾತ ಭೂವಿಕ್ರಮನು ಪಲ್ಲವರಿಂದ ಕಸಿದುಕೊಂಡಿದ್ದ "ಉಗ್ರೋದಯ" ಎಂಬ ಬೆಲೆಬಾಳುವ ಆಭರಣವನ್ನು ಶ್ರೀಪುರುಷನು ವಿಧಿಇಲ್ಲದೆ ಹಿಂತಿರುಗಿಸಬೇಕಾಯಿತು. ಆದರೆ ಶ್ರೀಪುರುಷನು ತನ್ನ ಬಲವನ್ನು ಹೆಚ್ಚಿಸಿಕೊಂಡು ಪಲ್ಲವರನ್ನು ಎದುರಿಸಿದನು. (E.C. XIImd.3.E.C.XII:S.l. Vol-11.P517) "ವಿಲಂದೆ" ಎಂಬಲ್ಲಿ ಘೋರ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಶ್ರೀಪುರುಷನು ವಿರಾವೇಶದಿಂದ ಹೋರಾಡಿ ಪಲ್ಲವ ರಾಜನನ್ನು ಕೊಂದನು. ಪಲ್ಲವ ಸೈನ್ಯವು ದಿಕ್ಕಾಪಾಲಾಗಿ ಓಡಿಹೋಯಿತು. ಶ್ರೀಪುರುಷನು "ಪೆರ್ಮಾಡಿ" ಎಂಬ ಪಲ್ಲವರ ಬಿರುದನ್ನು ಧರಿಸಿದುದಲ್ಲದೆ "ಭೀಮಕೋಪ" ಎಂಬ ಬಿರುದಿಗೂ ಪಾತ್ರನಾದನು. ಈ ಬಿರುದು ಗಂಗ ವಂಶಕ್ಕೆ ಸಂದ ಗೌರವವೆಂದೇಳ ಬಹುದು. ಈ ಯುದ್ಧದಲ್ಲಿ, ಬಾಣರು ಪಲ್ಲವರಪರ ನಿಂತಿದ್ದ ಫಲವಾಗಿ "ಶತೃವಿನ ಮಿತ್ರ ಶತೃ" ಎಂಬ ಚಾಣಕ್ಯನ ನೀತಿಯಂತೆ ಶ್ರೀಪುರುಷನು ಬಾಣರನ್ನು ಶಿಕ್ಷಿಸಿದನು. ಈ ಯುದ್ದದಲ್ಲಿ ಶ್ರೀಪುರುಷನ ಮಗ ಸಿಯಗೆಲ್ಲ ಸೇರಿದಂತೆ ಗಂಗರ ಸಾಮಂತ ದೊರೆಗಳು ಸೈನ್ಯಾಧಿಕಾರಿಗಳು ವೀರಾವೇಷದಿಂದ ಹೋರಾಡಿದರು. ಇಡೀ ದಕ್ಷಿಣ ಭಾರತದಲ್ಲಿ ಗಂಗರು ಪ್ರಬಲರಾದರು. ಈ ಕೀರ್ತಿ ಶ್ರೀಪುರುಷನಿಗೆ ಸಲ್ಲುತ್ತದೆ.

ತಮಿಳುನಾಡಿನಲ್ಲಿ ಪಲ್ಲವರು, ಪಾಂಡ್ಯರು ಹಾಗೂ ಸ್ಥಳೀಯ ರಾಜ ಮಹಾರಾಜರು ಕೊಂಗುದೇಶದ ಅಧಿಪತ್ಯಕ್ಕಾಗಿ ಯುದ್ದಗಳು ಘರ್ಷಣೆಗಳು ನಡೆಯತೊಡಗಿತು. ಅದೇ ಕೊಂಗು ನಾಡಿಗಾಗಿ ಗಂಗರ ಶ್ರೀಪುರುಷನೂ ಯುದ್ಧ ಮಾಡ ಬಯಸಿದನು. "ವೆಲ್ವಕುಡಿ" ಶಾಸನದ ಪ್ರಕಾರ ಶ್ರೀಪುರುಷನ ಕಾಲದಲ್ಲಿ ಗಂಗರು ಮತ್ತು ಪಾಂಡ್ಯರ ನಡುವೆ ವೈವಾಹಿಕ ಭಾಂದವ್ಯ ಏರ್ಪಟ್ಟಿತು. ಶ್ರೀಪುರುಷನು ತನ್ನ ಪುತ್ರಿಯರಲ್ಲಿ ಒಬ್ಬಳನ್ನು ರಾಜಸಿಂಹಪಾಂಡ್ಯ ಎಂಬ ಪಾಂಡ್ಯರ ಯುವರಾಜನಿಗೆ ಕೊಟ್ಟು ವಿವಾಹ ಮಾಡಿದನು. ಗಂಗರ ಹಾಗೂ ಪಾಂಡ್ಯರ ಸ್ನೇಹವು ಗಟ್ಟಿಗೊಳ್ಳುತ್ತದೆ. ಪಲ್ಲವರ ವಿರುದ್ದ ಹೋರಾಡಲು ಯುದ್ಧ ಪೂರ್ವಬಾವಿ ಒಪ್ಪಂದ ಏರ್ಪಟ್ಟಿತು. ಪಲ್ಲವರಿಗೆ ಇದು ಕಂಟಕವಾಗಿ ಪರಿಣಮಿಸಿತು.

ಇತ್ತ ಕ್ರಿ.ಶ. 757 ರಾಷ್ಟ್ರಕೂಟರ ದಂತಿದುರ್ಗನು ಚಾಲುಕ್ಯರ ದೊರೆ ಎರಡನೆ ಕೀರ್ತಿವರ್ಮನನ್ನು ಸೋಲಿಸಿ ಬಾದಾಮಿಯನ್ನು ಆಕ್ರಮಿಸಿದನು. ರಾಷ್ಟ್ರಕೂಟರು ಹೀಗೆ ಪ್ರಾಬಲರಾಗಿ ಚಾಲುಕ್ಯರು ಹಿಂದುಳಿದಿದ್ದು ಶ್ರೀಪುರುಷನಿಗೆ ಚಿಂತೆಯಾಯಿತು. ಕಾರಣವೇನೆಂದರೆ ಚಾಲುಕ್ಯರು ಹಾಗೂ ಗಂಗರ ನಡುವೆ ಉತ್ತಮ ಭಾಂದವ್ಯವಿದ್ದಿತು. ಆದರೆ ಗಂಗರ ಹಾಗೂ ರಾಷ್ಟ್ರಕೂಟರ ನಡುವೆ ಅಂತಹ ಬಾಂಧವ್ಯವಿರಲಿಲ್ಲ. ಕೆಲವೇ ವರ್ಷಗಳಲ್ಲಿ ರಾಷ್ಟ್ರಕೂಟರ ದಂತಿದುರ್ಗನು ಅಸುನೀಗಿದನು. ಇದು ಒಂದು ರೀತಿಯಲ್ಲಿ ಗಂಗರಿಗೆ ನೆಮ್ಮದಿ ತಂದಿತಾದರೂ ದಂತಿ ದುರ್ಗನ ಸ್ಥಾನಕ್ಕೆ ಆತನ ಚಿಕ್ಕಪ್ಪನಾದ ಒಂದನೇ ಕೃಷ್ಣನು ಅಧಿಕಾರಕ್ಕೆ ಬಂದನು. ಈತ ಯುದ್ಧೋತ್ಸಾಹಿಯಾಗಿದ್ದು ಸೇನಾಸಮೇತನಾಗಿ ಬಂದು ಗಂಗರಿಗೆ ಸೇರಿದ ಪ್ರದೇಶಗಳ ಮೇಲೆರಗಿದ (ಕ್ರಿ.ಶ. 768ರಲ್ಲಿ) ಗಂಗರಿಗೂ ರಾಷ್ಟ್ರಕೂಟರಿಗೂ ನಿರಂತರವಾಗಿ ಯುದ್ದಗಳು ನಡೆದವು. ರಾಷ್ಟ್ರಕೂಟರ ಕೃಷ್ಣನನ್ನು ಶ್ರೀಪುರುಷನು ಸಮರ್ಥವಾಗಿ ಎದುರಿಸಿದನು. ಬಹುಷಃ ಗಂಗ ಸಾಮ್ರಾಜ್ಯದಲ್ಲಿ ಶ್ರೀ ಪುರುಷನಲ್ಲದೆ ಬೇರೆ ದೊರೆಗಳಿದ್ದರೆ ರಾಷ್ಟ್ರಕೂಟರ ದಾಳಿಯನ್ನು ಸಮರ್ಥವಾಗಿ ಎದುರಿಸಲಾಗದೆ ಕ್ರಿ.ಶ. 8ನೇ ಶತಮಾನದಲ್ಲೆ ಗಂಗರು ಅದಃಪಥನದ ಹಾದಿಯನ್ನು ಹಿಡಿಯಬೇಕಾಗುತ್ತಿತ್ತೇನೋ ಎನಿಸುತ್ತದೆ. ಆದರೆ ಶ್ರೀಪುರುಷನು ಸಮರ್ಥವಾಗಿ ಎದುರಿಸಿ "ರಾಜಾಧಿರಾಜ ಪರಮೇಶ್ವರ ಶ್ರೀಪುರುಷ" ಎಂಬ ಬಿರುದನ್ನು ಪಡೆದನು. ಶ್ರೀಪುರುಷನು ತನ್ನ ಚಾಣಕ್ಷತನ, ರಾಜ ತಾಂತ್ರಿಕತೆ ಹಾಗೂ ಯುದ್ದ ಕೌಶಲ್ಯತೆಯನ್ನು ಹೊಂದಿದ್ದ ಕಾರಣ ಇಡೀ ದಕ್ಷಿಣ ಭಾರತದಲ್ಲಿ ಹೆಸರುವಾಸಿಯಾಗಿದ್ದನು. ಎಂದಿನಂತೆ ತಮ್ಮ ಸಾಂಪ್ರದಾಯಕ ವೈರಿಗಳಾದ ರಾಷ್ಟ್ರಕೂಟರ ದೊರೆಯು ಪ್ರಬಲನಾಗಿದ್ದ ಕೃಷ್ಣನು ಕ್ರಿ.ಶ. 773ರಲ್ಲಿ ಮೃತನಾದನು ಕೃಷ್ಣನ ಹಿರಿಯ ಮಗನಾದ ಗೋವಿಂದನು ಸಿಂಹಾಸನಾಧೀಶನಾದನು. ಅಸಮರ್ಥನಾದ ಗೋವಿಂದನು ಯಾವುದೇ ಕದನ ಇಲ್ಲವೆ ಯುದ್ಧದ ಗೋಜಿಗೆ ಹೋಗಲಿಲ್ಲ. ಇದು ಗಂಗರಿಗೆ ಬೇಕಾಗಿತ್ತು.ಅತ್ತ ರಾಷ್ಟ್ರಕೂಟರ ದೊರೆ ಕೃಷ್ಣನ ಮತ್ತೊಬ್ಬ

ಮಗನಾದ "ದೃವನು" ತನ್ನ ಅಣ್ಣನ ವಿರುದ್ದ ತಿರುಗಿಬಿದ್ದನು. ಈ ಬೆಳವಣಿಗೆಯನ್ನು ಗಮನಿಸಿದ ಗಂಗದೊರೆ ಶ್ರೀಪುರುಷನು ರಾಷ್ಟ್ರಕೂಟ ದೊರೆ ಗೋವಿಂದನ ಪರ ನಿಂತನು. ಮುಂದೆ ಗಂಗರು ತಮ್ಮ ಆಂತರಿಕ ವಿಷಯಗಳಲ್ಲಿ ತಲೆಹಾಕಿದರೆ ತನಗೆ ಆಪತ್ತು ಕಾದಿದೆ ಎಂದು ತಿಳಿದ ದೃವನು ತನ್ನ ಅಣ್ಣ ಗೊಂವಿಂದನನ್ನು ಕೊಂದುಹಾಕಿ ಸಿಂಹಾಸನಕ್ಕೆ ಬಂದನು. ದೃವನು ಸೇಡುತೀರಿಸಿಕೊಳ್ಳುವ ಉದ್ದೇಶದಿಂದ ಗಂಗ ದೊರೆ ಶ್ರೀ ಪುರುಷನ ವಿರುದ್ದ ಎಂದಿನಂತೆ ಯುದ್ದವನ್ನು ಮುಂದುವರಿಸಿದನು. ಪರಾಕ್ರಮಿಗಳಾದ ಶ್ರೀಪುರುಷ ಮತ್ತು ದೃವನ ನಡುವೆ ಯುದ್ಧವಾಯಿತು.ಈ ಯುದ್ಧದಲ್ಲಿ ಗಂಗರಿಗೆ ಸೇರಿದ್ದ ಕೆಲವಾರು ಪ್ರದೇಶಗಳು ರಾಷ್ಟ್ರಕೂಟರಿಗೆ ಸೇರಿತು ಎಂಬ ವಿಷಯವು ಶಾಸನಗಳಿಂದ ತಿಳಿಯುತ್ತದೆ. (E.C. XIII.P.275).

ಶ್ರೀಪುರುಷನ ಆಡಳಿತ ಮತ್ತು ರಾಜಕೀಯ ಮುತ್ಸದ್ದಿತನ

ಶ್ರೀಪುರುಷನು ಗಂಗ ದೊರೆಗಳಲ್ಲೇ ಮಹಾಪರಾಕ್ರಮಿ ಎಂದೇಳಬಹುದು. ದಕ್ಷಿಣ ಭಾರತದಲ್ಲಿ ನೊಳಂಬರು, ಚಾಲುಕ್ಯರು, ರಾಷ್ಟ್ರಕೂಟರು, ಕಂಚಿಯ ಪಲ್ಲವರು, ಪಾಂಡ್ಯರು ಇವರೇ ಮುಂತಾದವರು ಗಂಗರ ಸಾಮ್ರಾಜ್ಯವನ್ನು ಮುತ್ತಲು ಹವಣಿಸುತ್ತಿದ್ದರು. ಗಂಗ ದೊರೆ ಶ್ರೀಪುರುಷನ ಆಡಳಿತ ಮತ್ತು ರಾಜಕೀಯ ಮುತ್ಸದ್ದಿತನದಿಂದಾಗಿ ಶತೃಗಳನ್ನು ಮಣಿಸಲು ಸಾದ್ಯವಾಯಿತು ಎಂದೇಳ ಬಹುದು. ಶಾಂತ ಸ್ವಭಾವದ ಶತೃಗಳಾಗಿದ್ದರೆ ಅವರೊಂದಿಗೆ ವೈವಾಹಿಕ ಬಾಂಧವ್ಯವನ್ನು ಏರ್ಪಡಿಸಿ ಅವರ ಸ್ನೇಹವನ್ನು ಸಂಪಾದಿಸುತ್ತಿದ್ದ. ಶ್ರೀ ಪುರುಷನ ಹಲವು ಪತ್ನಿಯರಲ್ಲಿ ಒಬ್ಬಳಾದ "ರಾಣಿ ವಿಜಯಮಹಾದೇವಿ"ಯು ಚಾಲುಕ್ಯ ಸಂತತಿಗೆ ಸೇರಿದವಳಾಗಿದ್ದಳು. ಇವಳನ್ನು ಒಂದು ಪ್ರಾಂತ್ಯದ ಪ್ರಾಂತ್ಯಾಧಿಕಾರಿಯನ್ನಾಗಿ ಶ್ರೀಪುರುಷನು ನೇಮಿಸಿದ್ದನು. ಮತ್ತೊಬ್ಬ ಪಟ್ಟಮಹಿಷಿಯಾದ "ವಿನಯಮತಿ ನಿಮ್ಮಡಿ" ಎಂಬುವವಳನ್ನು ಮೈಸೂರಿನ ಬಳಿಯ "ಮಲೆವೆಲ್ಲೂರು" ಎಂಬ ಪ್ರಾಂತ್ಯಕ್ಕೆ ಪ್ರಾಂತ್ಯಾಧಿಕಾರಿಯನ್ನಾಗಿ ನೇಮಿಸಿದ್ದನು (M.A.R. 1916-17, pav 78) ಶ್ರೀಪುರುಷನು ಸಮರ ಕಲಿಯಾಗಿದ್ದನು. ಆನೆಗಳನ್ನು ಪಳಗಿಸುವುದರಲ್ಲಿ ವಿಶೇಷ ಕಲೆಯನ್ನು ಕರಗತ ಮಾಡಿಕೊಂಡಿದ್ದನು. "ಗಜಶಾಸ್ತ್ರ" ಎಂಬ ಗ್ರಂಥವನ್ನು ಬರೆದ ಆದರೆ ಅದರ ಪೂರ್ಣಪಾಠ ಇಂದಿಗೂ ಲಭ್ಯವಾಗಿಲ್ಲ (ಚೂರು ಪಾರು ದೊರೆತಿದೆ) ಶ್ರೀಪುರುಷನ ಅಸಲಿ ಹೆಸರು ಮುತ್ತಯ್ಯ, ಮುತ್ತರಸ, ಮಾಧವ ಮುತ್ತರಸ ಹಾಗೂ ಕೊಂಗುಣೀ ಮುತ್ತರಸ ಇವೇ ಮುಂತಾದವು ಎಂಬುದಾಗಿ ಆತನ ಕೆಲವು ಶಾಸನಗಳಿಂದ ತಿಳಿಯುತ್ತದೆ. ತನ್ನ ಶೌರ್ಯ, ಪರಾಕ್ರಮ ಮತ್ತು ಚಾಣಕ್ಯತನದಿಂದಾಗಿ ತನ್ನ ರಾಜ್ಯವನ್ನು ಶ್ರೀ ರಾಜ್ಯವನ್ನಾಗಿ ಮಾಡಿ ತನ್ನ ಹೆಸರನ್ನು ಶ್ರೀ ಪುರುಷ ಎಂದು ಬದಲಿಸಿಕೊಂಡನು ಎಂಬುದಾಗಿ ತಿಳಿಯುತ್ತದೆ.

ಶ್ರೀಪುರುಷನಿಗೆ ಶಿವಮಾರ, ವಿಜಯಾಧಿತ್ಯ, ರಣವಿಕ್ರಮ, ದುಗ್ಗಮಾರ, ಯರೆಯಪ್ಪ, ಸಿಯಗೆಲ್ಲ ಇವರೆ ಮುಂತಾದ (ಹೆಣ್ಣು ಮಕ್ಕಳನ್ನು ಹೊರತುಪಡಿಸಿ) ವರಿದ್ದರು. ಇವರುಗಳನ್ನು ತನ್ನ ಪ್ರಾಂತ್ಯಗಳಿಗೆ ಪ್ರಾಂತ್ಯಾಧಿಕಾರಿಗಳನ್ನಾಗಿ ನೇಮಿಸಿದ್ದನು. ಇವರು ಕೇವಲ ರಾಜ್ಯಪಾಲರಾಗಿ ಆಡಳಿತದ ಮೇಲಿನ ಅಧಿಕಾರವೇ ಅಲ್ಲದೆ ಸೈನ್ಯ ಹಾಗೂ ಪ್ರಾಂತ್ಯದ ಮೇಲಿನ ರಕ್ಷಣೆಯನ್ನು ಹೊಂದಿದ್ದರು. ಉದಾ. ಶ್ರೀ ಪುರುಷನ ಮಕ್ಕಳಲ್ಲಿ ಒಬ್ಬನಾದ ದುಗ್ಗಮಾರನು ಇಂದಿನ ಬಳ್ಳಾರಿಯ: ಹತ್ತಿರದ "ಕಂಪಿಲಿ" ವರೆವಿಗೂ ದಂಡೆತ್ತಿಹೋಗಿ ತನ್ನ ರಾಜ್ಯವನ್ನು ವಿಸ್ತರಿಸಿದ್ದ ಬಗ್ಗೆ ದಾಖಲೆಗಳಿವೆ (ಸಿ. ಹಯವದನ ರಾವ್ – Mysore Gazetier 1909-10 para 54) ಶ್ರೀಪುರುಷನ ರಾಣಿಯರು, ಮಕ್ಕಳು ಸೈನ್ಯಾಧಿಕಾರಿಗಳು ಹಾಗೂ ಸಾಮಂತರಿಂದಾಗಿ ತನ್ನ ಸಾಮ್ರ್ಯಾಜ್ಯವನ್ನು ವಿಸ್ತರಿಸಿರುವುದೇ ಅಲ್ಲದೆ ರಾಷ್ಟ್ರಕೂಟರು, ನೊಳಂಬರು, ಪಲ್ಲವರು, ಪಾಂಡ್ಯರು, ಚಾಲುಕ್ಯರು ಇವರೇ ಮುಂತಾದವರಿಂದ ತನ್ನ ಸಾಮ್ರಾಜ್ಯವನ್ನು ಸಂರಕ್ಷಿಸಿಕೊಂಡನು. ಗಂಗರ ಇತಿಹಾಸದಲ್ಲಿ ಶ್ರೀಪುರುಷನು ಇಲ್ಲದಿದ್ದರೆ ಶತೃಗಳಿಂದಾಗಿ ಗಂಗ ಸಾಮ್ರಾಜ್ಯವು ಎಂದೂ ಅವನತಿಯ ಹಾದಿಯನ್ನಿಡಬೇಕಾಗುತ್ತಿತ್ತು. ಶ್ರೀ ಪುರುಷನು ಆರು ದಶಕಗಳಿಗೂ ಹೆಚ್ಚುಕಾಲ (63 ವರ್ಷ) ರಾಜ್ಯಭಾರ ಮಾಡಿದನು. ಶ್ರೀಪುರುಷನಿಗೆ ಶ್ರೀವಲ್ಲಭ, ಭೀಮಕೋಪ, ಪೆರ್ಮಾಡಿ, ರಣಭಾಜನ, ಕೊಂಗುಣೀ ರಾಜಾಧಿರಾಜ ಪರಮೇಶ್ವರ ಶ್ರೀ ಪುರುಷ ಇವೇ ಮುಂತಾದ ಬಿರುದುಗಳಿದ್ದವು. ಶ್ರೀ ಪುರುಷನು ಗಂಗರ ಇತಿಹಾಸದಲ್ಲಿ ಅಜರಾಮರನಾಗಿ ಉಳಿದಿದ್ದಾನೆ.

ಎರಡನೆ ಶಿಮಾರ (ಕ್ರಿ.ಶ.788–812)

ಶ್ರೀಪುರುಷನ ಮಗನಾದ ಎರಡನೆ ಶಿವಮಾರನು ಸಿಂಹಾಸನಕ್ಕೆ ಬಂದನು. ಈತನ ಪೂರ್ಣ ಹೆಸರು "ಸೈಗುಟ್ಟ ಶಿವಮಾರ" ಎಂದು. ಈತನೂ ಕೂಡ ಶ್ರೀಪುರುಷನಂತೆ ತಮ್ಮ ಸಾಂಪ್ರದಾಯಿಕ ಶತೃಗಳಾದ ರಾಷ್ಟ್ರಕೂಟರು, ಪಲ್ಲವರು, ಚಾಲುಕ್ಯರೊಂದಿಗೆ ಹೋರಾಡಬೇಕಾಯ್ತು. ಇದರ ಜೊತೆಗೆ ಈತನ ಸಹೋದರನಾದ ದುಗ್ಗಮಾರನು ತನ್ನ ಸಹೋದರನಾದ ಶಿವಮಾರನೊಂದಿಗೆ ಘರ್ಷಣೆಗಿಳಿದನು. ಇಂತಹ ಸಂದರ್ಭದಲ್ಲಿ ದೃತಿಗೆಡದ ಶಿವಮಾರನು ನೊಳಂಬರಾಜ ಸಿಂಗಪೋತನ ಸಹಾಯದಿಂದ ತನ್ನ ಸಹೋದರ ದುಗ್ಗಮಾರನನ್ನು ಸದೆಬಡಿದು ಸೆರೆಯಲ್ಲಿಟ್ಟನು. ಶಿವಮಾರನು ತಮ್ಮ ಸಾಂಪ್ರದಾಯಿಕ ಶತೃವಾದ ರಾಷ್ಟ್ರಕೂಟರ ಆಂತರಿಕ ವಿಷಯದಲ್ಲಿ ತಲೆಹಾಕಿದ. ರಾಷ್ಟ್ರಕೂಟರ ದೊರೆ ದೃವನ ಮರಣಾನಂತರ (ಕ್ರಿ.ಶ. 794) ಆತನ ಮಕ್ಕಳಾದ ಕಂಬನಿಗೂ ಮತ್ತು ಗೋವಿಂದನಿಗೂ ಸಿಂಹಾಸನಕ್ಕಾಗಿ ಹೋರಾಟ ಪ್ರಾರಂಭವಾಯಿತು. ಶಿವಮಾರನು ಮೊದಲು ಗೋವಿಂದನ ಪರ ನಂತರ ಆತನ ತಮ್ಮ ಕಂಬನ ಪರ ವಹಿಸಿದ.

ಅಂತಿಮವಾಗಿ ರಾಷ್ಟ್ರಕೂಟರ ಗೋವಿಂದನು ಸಿಂಹಾಸನಕ್ಕೆ ಬರಲಾಗಿ ಶಿವಮಾರನನ್ನು ಶಿಕ್ಷಿಸಲು ಮುಂದಾದನು. ಮುಂದೆ ನಡೆದ ಯುದ್ಧದಲ್ಲಿ ಗಂಗದೊರೆ ಶಿವಮಾರನು ಕೆಲವಾರು ಪ್ರದೇಶಗಳನ್ನು ಕಳೆದುಕೊಳ್ಳ ಬೇಕಾಯಿತು. ಇಂತಹ ಸಂದರ್ಭದಲ್ಲಿ ಶಿವಮಾರನು ಚಾಲುಕ್ಯರ ಸಾಮಂತ ದೊರೆಗಳನ್ನು ಸೋಲಿಸಿದನು.

ತನ್ನ ಜೀವಿತಕಾಲದಲ್ಲಿ ನಡೆದ ಯುದ್ಧಗಳು ಸೋಲು, ಗೆಲುವು, ಮನಸ್ತಾಪ ಇವೇ ಮುಂತಾದವು ಶಿವಮಾರನನ್ನು ನೆಮ್ಮದಿಯಾಗಿ ಇರಲು ಬಿಡಲಿಲ್ಲ. ತನ್ನ ಕೊನೆಗಾಲವನ್ನು ಶಾಂತಿ ಮತ್ತು ನೆಮ್ಮದಿಯಾಗಿರಲು ಜೈನ ಧರ್ಮವನ್ನು ಸ್ವೀಕರಿಸಿದನು. ಶ್ರವಣಬೆಳಗೊಳ ಸೇರಿದಂತೆ ಹಲವಾರು ಕಡೆಗಳಲ್ಲಿ ಜೈನ ಬಸದಿಗಳನ್ನು ಕಟ್ಟಿಸಿ ದಾನದತ್ತಿಗಳನ್ನು ನೀಡಿದನು. ಇದರಿಂದಾಗಿ ಜೈನಧರ್ಮದ ಮಹಾ ಪೋಷಕನೆಂಬ ಹೊಗಳಿಕೆಗೆ ಪಾತ್ರನಾದನು. ಶಿವಮಾರನು "ಗಜಾಷ್ಟಕ", "ಸೇತುಬಂಧು" ಇವೇ ಮುಂತಾದ ಗ್ರಂಥಗಳನ್ನು ರಚಿಸಿದ. ತನ್ನ ಕೊನೆಯ ಕಾಲವನ್ನು ಶಾಂತಿ ಮತ್ತು ನೆಮ್ಮದಿಯಿಂದ ಕಳೆದನು. ಈತನಿಗೆ ಮಾರಸಿಂಹ ಎರೆಯಪ್ಪ ಮತ್ತು ಪೃಥ್ವಿಪತಿ ಎಂಬ ಇಬ್ಬರು ಮಕ್ಕಳಿಗೆ ತನ್ನ ರಾಜ್ಯವನ್ನು ಹಂಚಿದನು.

ಒಂದನೇ ಮಾರಸಿಂಹ ಎರೆಯಪ್ಪ (ಕ್ರಿ.ಶ.812–817)

ಈಗಾಗಲೆ ತಿಳಿಸಿರುವಂತೆ ಗಂಗರು ಮತ್ತು ರಾಷ್ಟ್ರಕೂಟರು ಬದ್ಧ ವೈರಿಗಳು. ಮಾರಸಿಂಹನ ತಂದೆ ಎರಡನೇ ಶಿವಮಾರನು ರಾಷ್ಟ್ರಕೂಟರ ವಿರುದ್ಧ ಹೋರಾಡಿ ಅವರ ಕೈಮೇಲಾಗಿ ಶತ್ರುಗಳಿಗೆ ಸೋತು ಸೆರೆವಾಸ ಅನುಭವಿಸಿದ.ಅಂತಹ ಸಂದರ್ಭದಲ್ಲಿ ಒಂದನೇ ಮಾರಸಿಂಹನು ಆಡಳಿತವನ್ನು ಸುಸೂತ್ರವಾಗಿ ನಡಸಿ ಗಂಗ ಸಾಮ್ರಾಜ್ಯವನ್ನು ಉಳಿಸಿದ ಕೀರ್ತಿ ಮಾರಸಿಂಹನಿಗೆ ಸಲ್ಲುತ್ತದೆ. ಎರಡನೇ ಶಿವಮಾರನ ಮತ್ತೊಬ್ಬ ಮಗನಾದ ಪೃಥ್ವಿಪತಿಯು ಪಲ್ಲವರ ಸ್ನೇಹ ಸಂಪಾದಿಸಿ ರಾಷ್ಟ್ರಕೂಟ, ತೆಲಗು ಚೋಡ ಮತ್ತು ಮೈದುಂಬ ಇವೇ ಮುಂತಾದ ರಾಜ ಮನೆತನಗಳೊಂದಿಗೆ ಯುದ್ಧ ಮಾಡಿದ. ಪೃಥ್ವಿಪತಿಯ ರಾಣಿಯೊಬ್ಬಳು ನಂದಿ ಬೆಟ್ಟದ ಬಳಿ ನಂದಿಕೇಶ್ವರ ದೇವಾಲಯಕ್ಕೆ ಸಾಕಷ್ಟು ದಾನದತ್ತಿಗಳನ್ನು ನೀಡಿದಳು.

ಪೃಥ್ವಿಪತಿಯು ಮೂರನೇ ರಾಜಮಲ್ಲನ ಸಹಾಯದಿಂದ ರಾಜ್ಯವನ್ನು ರಕ್ಷಿಸಿಕೊಂಡನು.

ಒಂದನೇ ರಾಜಮಲ್ಲ ಸತ್ಯವಾಕ್ಯ (ಕ್ರಿ.ಶ.817–853)

ಮಾರಸಿಂಹನ ಮರಣಾನಂತರ ಅವನ ಚಿಕ್ಕಪ್ಪ ವಿಜಯಾದಿತ್ಯನು ರಾಜನಾಗಿ ಕೆಲವು ವರ್ಷಗಳ ಕಾಲ ಆಳ್ವಿಕೆ ಮಾಡಿದನು. ತಮ್ಮ ಸಾಂಪ್ರಾಯಿಕ ವೈರಿಯಾದ ರಾಷ್ಟ್ರಕೂಟರ ವಿರುದ್ಧ ಸೆಣಸಿದನು. ರಾಷ್ಟ್ರಕೂಟರ ದಂಡನಾಯಕ ಬಂಕೇಶನು

ಗಂಗರ ಕೆಲವಾರು ಪ್ರದೇಶಗಳನ್ನು ವಶಪಡಿಸಿಕೊಂಡನು. ಆತನು ರಾಷ್ಟ್ರಕೂಟರ ವಿರುದ್ದ ಹೋರಾಡಿ ಗಂಗವಾಡಿಯು ಕಳೆದು ಕೊಂಡಿದ್ದ ಕೆಲವು ಭಾಗಗಳನ್ನು ಮತ್ತೆ ಗಳಿಸಿದನು. ಅನ್ಯಮತ ಸಹಿಷ್ಣುಗಳಾದ ಗಂಗರಸರು ಹಿಂದೂ, ಜೈನ ಧರ್ಮಗಳಿಗೆ ಉದಾರವಾಗಿ ಧನಕನಕಗಳನ್ನು ನೀಡಿ ಪ್ರೋತ್ಸಾಹಿಸಿದನು. ಬ್ರಾಹ್ಮಣರಿಗೆ ಅಗ್ರಹಾರಗಳನ್ನು ಕಟ್ಟಿಸಿಕೊಟ್ಟನು. ಜೈನರಿಗೆ ಜಿನಾಲಯಗಳನ್ನು, ಗುಹಾಲಯಗಳನ್ನು ನಿರ್ಮಿಸಿಕೊಟ್ಟನು.

ನೀತಿ ಮಾರ್ಗ ಎರೆಗಂಗ (ಕ್ರಿ.ಶ.853–870)

ಎರೆಗಂಗನು ಅಧಿಕಾರಕ್ಕೆ ಬರುತ್ತಲೆ ತನ್ನಸೈನ್ಯವನ್ನು ಅದರಲ್ಲೂ ವಿಶೇಷವಾಗಿ ಗಜಪಡೆಯನ್ನು ಬಲಪಡಿಸಿದನು. ಇದೇ ವೇಳೆಗೆ ಬಾಣರ ದೊರೆ ವಿಜಯಾದಿತ್ಯನು ಗಂಗವಾಡಿಯ ಕೆಲವು ಗ್ರಾಮಗಳನ್ನು ಆಕ್ರಮಿಸಿದನು. ಎರೆಗಂಗನು ಬಾಣರನ್ನು ಸದೆಬಡಿದು ಹಿಂದಕ್ಕಟ್ಟಿದನು. ರಾಷ್ಟ್ರಕೂಟರ ಪ್ರಬಲ ದೊರೆಯಾಗಿದ್ದ ಅಮೋಘವರ್ಷ ನೃಪತುಂಗನು ಗಂಗರ ವಿರುದ್ದ ಪ್ರಬಲ ಸೈನ್ಯವನ್ನು ಕಳುಹಿಸಿದನು. ನೀತಿ ಮಾರ್ಗ ಎರೆಗಂಗನು ರಾಷ್ಟ್ರಕೂಟರ ಸೈನ್ಯವನ್ನು ಕೋಲಾರ ಜಿಲ್ಲೆಯ ರಾಜರಮಡು (ರಾಜಮಡು) ಎಂಬಲ್ಲಿ ಎದುರಿಸಿ ಸಂಪೂಣವಾಗಿ ಸೋಲಿಸಿದನು. ನೃಪತುಂಗನು ತನ್ನ ಸಾಮ್ರಾಜ್ಯವನ್ನು ದಕ್ಷಿಣ ಭಾರತವೇ ಅಲ್ಲದೆ ಉತ್ತರ ಭಾರತಕ್ಕೂ ವಿಸ್ತರಿಸಲು ಅವಣಿಸುತ್ತಿದ್ದನು. ಹೀಗಾಗಿ ಗಂಗರ ನೀತಿ ಮಾರ್ಗನ ಶೌರ್ಯ, ಪ್ರತಾಪವನ್ನು ಕಂಡು ಮೆಚ್ಚಿದ ಅಮೋಘವರ್ಷ ನೃಪತುಂಗನು ನೀತಿಮಾರ್ಗ ಎರೆಗಂಗನ ಮಗನಾದ ಭೂತಗನಿಗೆ ತನ್ನ ಮಗಳಾದ ಚಂದ್ರೋಬಲಬ್ಬೆಯನ್ನು ಕೊಟ್ಟು ವಿವಾಹ ಮಾಡಿದನು. ಇದು ಗಂಗರಿಗೆ ಸಂದ ಗೌರವ ಎಂದೇಳಬಹುದು. ದಶಕಗಳಿಂದ ಗಂಗರು ಹಾಗೂ ರಾಷ್ಟ್ರಕೂಟರ ನಡುವಿನ ಹೋರಾಟಕ್ಕೆ ವಿರಾಮ ದೊರೆತಂತಾಯಿತು.(ಯುದ್ದ ವಿರಾಮ) ಎರೆಗಂಗನು ಹಿಂದೂ ಧರ್ಮ ಜೈನ ಧರ್ಮಗಳಿಗೆ ಉದಾರವಾಗಿ ಸಹಾಯ ಮಾಡಿದನು.

ಎರಡನೇ ರಾಜಮಲ್ಲ ಸತ್ಯವಾಕ್ಯ (ಕ್ರಿ.ಶ.870–907)

ವೀರನೂ ಶೂರನೂ ಆದ ಸತ್ಯ ವಾಕ್ಯನು ಬಾಣ, ಚೋಳ, ವೆಂಗಿ, ಚಾಲುಕ್ಯರ ವಿರುದ್ದ ಯುದ್ದ ಮಾಡಿ ಗೆಲುವನ್ನು ಸಾಧಿಸಿದನು. ರಾಷ್ಟ್ರಕೂಟರ ನಡುವೆ ಮಧುರ ಬಾಂಧವ್ಯವನ್ನು ಹೊಂದಿದ್ದನು. ರಾಷ್ಟ್ರಕೂಟರ ಪರವಾಗಿ ವೆಂಗಿ ಚಾಲುಕ್ಯರ ಮೂರನೆಯ ವಿಜಯಾದಿತ್ಯನ ಮೇಲೆ ಯುದ್ದ ಮಾಡಿದನು. ಗಂಗ ಸಂತತಿಯ ಉಪಶಾಖೆಯ ದೊರೆ ಇಮ್ಮಡಿ ಪೃಥ್ವಿಪತಿಯು ಸತ್ಯವಾಕ್ಯನ ವಿರುದ್ದವೇ ತಿರುಗಿಬಿದ್ದಾಗ ಅವನನ್ನು ಯಶಸ್ವಿಯಾಗಿ ಸೋಲಿಸಿ ಹಿಂದಕ್ಕಟ್ಟಿದನು. ಈತನ ನಂತರ ಎರೆಯಪ್ಪನು ಅಧಿಕಾರಕ್ಕೆ ಬಂದನು.

ಎರಡನೇ ರಾಜಮಲ್ಲ ಎರೆಯಪ್ಪ (ಕ್ರಿ.ಶ.907)

ಈತನು ಸೌಮ್ಯ ಸ್ವಭಾವದವನಾಗಿದ್ದು ರಾಜ್ಯವನ್ನು ಶಾಂತಿ ಸುಭಿಕ್ಷೆಯಿಂದ ನಡೆದುಕೊಂಡು ಹೋಗುವಂತೆ ಮಾಡಿದನು.ಯುದ್ಧ ಪ್ರಿಯನಲ್ಲ ಶಾಂತಿಪ್ರಿಯ, ಅಷ್ಟೇ ಅಲ್ಲದೆ ಅನ್ಯಮತ ಹಾಗೂ ಅನ್ಯ ಧರ್ಮ ಸಹಿಷ್ಣುವಾಗಿದ್ದನು.

ಎರಡನೇ ನೀತಿ ಮಾರ್ಗ ಎರೆಯಪ್ಪ (ಕ್ರಿ.ಶ.907–920)

ಈತನು ಯುವರಾಜನಾಗಿ, ರಾಜನಾಗಿ 13 ವರ್ಷಗಳ ಕಾಲ ಆಳ್ವಿಕೆ ಮಾಡಿದನೊಳಂಬ ದೊರೆ ವೀರಮಹೇಂದ್ರನು ಗಂಗರ ಪ್ರದೇಶಗಳನ್ನು ಮುತ್ತಿಗೆ ಹಾಕಿದುದರಿಂದ ರಾಜ ಎರಿಯುಪ್ಪನುನೊಳಂಬರ ವಿರುದ್ದ ಹೋರಾಡಿ ಹಿಮ್ಮೆಟ್ಟಿಸಿನು. ಮತ್ತೊಮ್ಮೆ ನೊಳಂಬ ದೊರೆ ವೀರ ಮಹೇಂದ್ರನು ಬೆಂಗಳೂರಿನ –ವರೆವಿಗೂದಾವಿಸಿ ಬಂದು ಗಂಗರ ಪ್ರದೇಶವನ್ನು ವಶಪಡಿಸಿಕೊಂಡಿದ್ದನು. ದೊರೆ ರಾಜಮಲ್ಲನು ತನ್ನ ದಂಡನಾಯಕನಾಗಿದ್ದ ನಾಗತ್ತರ ಎಂಬುವನ ನೇತೃತ್ವದಲ್ಲಿ (ದಂಡನಾಯಕ) ನೊಳಂಬರನ್ನು ಎದುರಿಸಿದ. ದಂಡನಾಯಕನಾಗಿದ್ದ ನಾಗತರನು ವೀರಾವೇಶದಿಂದ ಹೋರಾಡಿ ನೊಳಂಬರನ್ನು ಹಿಮ್ಮೆಟಿಸಿದ. ನಂತರ "ತುಂಬೆಪಾಡಿ" ಎಂಬಲ್ಲಿ ನಡೆದ ಯುದ್ದದಲ್ಲಿ ರಣರಂಗದಲ್ಲೇ ಅಸುನೀಗಿದನು. ಎದೆಗುಂದದ ಎರೆಯಪ್ಪನು ನೊಳಂಬ ದೊರೆ ಮಹೇಂದ್ರನನ್ನು ಕೊಂದನು.ತನ್ನ ನೆಚ್ಚಿನ ದಂಡನಾಯಕ "ನಾಗತ್ತರ"ನ ನೆನಪಿಗಾಗಿ ಬೆಂಗಳೂರು ಬಳಿಯ ಬೇಗೂರಿನಲ್ಲಿ (ದೇವಸ್ಥಾನದ ಬಳಿ) ಒಂದು ವೀರಗಲ್ಲನ್ನು ಹಾಕಿಸಿದನು. ಹಾಗೂ ಆತನ ಮಗ ಇರುಗಪ್ಪನನ್ನು ದಂಡನಾಯಕನನ್ನಾಗಿ ಮಾಡಿದನು. ಈ ಶಾಸನದ ವಿಶೇಷವೆಂದರೆ ಕರ್ನಾಟಕದ ರಾಜಧಾನಿ "ಬೆಂಗಳೂರು" ಎಂಬ ಹೆಸರು ಕ್ರಿ.ಶ. 9–10ನೇ ಶತಮಾನದಲ್ಲೇ ಉಲ್ಲೇಖಗೊಂಡಿರುವುದು. ಕೆಲವರು ಹೇಳುವ ಪ್ರಕಾರ "ಬೆಂದಕಾಳೂರು ಬೆಂಗಳೂರು" ಆಯಿತು ಎನ್ನುವುದು ತಪ್ಪು.ಅವನ ಮಂತ್ರಿಗಳು ಹಾಗೂ ಉನ್ನತಾಧಿಕಾರಿಗಳಾಗಿದ್ದ ನಾಗಮರ್ಮ, ಗೋವಿಂದ, ಧರಸೇನ ಇನ್ನೂ ಮೊದಲಾದವರ ಹೆಸರುಗಳು ಶಾಸದಲ್ಲಿ ಉಲ್ಲೇಖವಾಗಿದೆ.

ನರಸಿಂಹದೇವ (ಕ್ರಿ.ಶ.920–925)

ನೀತಿ ಮಾರ್ಗ ಎರೆಯಪ್ಪನ ನಂತರ ಸಿಂಹಾಸನಕ್ಕೆ ಬಂದನು ಸುಸಂಸ್ಕೃತನಾಗಿದ್ದ ನರಸಿಂಹದೇವನು ಐದು ವರ್ಷಗಳ ಕಾಲ ಆಳ್ವಿಕೆ ಮಾಡಿ ಕ್ರಿ.ಶ. 925ರಲ್ಲಿ ಆತನ ಆಳ್ವಿಕೆ ಕೊನೆಗೊಂಡಿತು.

ಮೂರನೆಯ ರಾಜಮಲ್ಲ ಸತ್ಯವಾಕ್ಯ (ಕ್ರಿ.ಶ.925–939)

ನರಸಿಂಹ ದೇವನ ನಂತರ ಆತನ ಸಹೋದರನಾದ ರಾಜಮಲ್ಲನು ಆಳ್ವಿಕೆ ಮಾಡಿದನು. ಈತನ ಕಿರಿಯ ತಮ್ಮ ಇಮ್ಮಡಿ ಭೂತಗನು ನೀತಿ ಮಾರ್ಗ ಎರೆಯಪ್ಪ

ರಾಷ್ಟ್ರಕೂಟ ದೊರೆ ಮೂರನೆ ಅಮೋಘವರ್ಷ ನೃಪತುಂಗನ ಕುಮಾರಿ ದೇವಕನಿಮ್ಮಡಿಯನ್ನು ವಿವಾಹವಾದನು ಅಲ್ಲಿಂದ ಸಹೋದರರ ನಡುವೆ ಸಿಂಹಾಸನಕ್ಕಾಗಿ ಕಲಹಗಳು ನಡೆದವು. ರಾಷ್ಟ್ರಕೂಟರ ಕೃಷ್ಣನ ಸಹಾಯದಿಂದ ಭೂತಗನು ತನ್ನ ಸಹೋದರನಾದ ಸತ್ಯವಾಕ್ಯನನ್ನು ಕೊಂದು ಅಧಿಕಾರಕ್ಕೆ ಬಂದನು.

ಎರಡನೆ ಭೂತಗ (ಕ್ರಿ.ಶ. 939–960)

ಗಂಗ ದೊರೆಗಳಲ್ಲಿ ಶ್ರೀಪುರುಷನ ನಂತರ ದಕ್ಷಿಣ ಭಾರತದಲ್ಲೇ ಧೀರನೂ, ಶೂರನೂಆಗಿ ಪ್ರಾಖ್ಯಾತಿಗಳಿಸಿದ ರಾಜನೆಂದರೆ ಗಂಗರ ಎರಡನೇ ಭೂತಗ. ಈತನತಂದೆ ಎರೆಯಪ್ಪ ಇವನಿಗೆ ನರಸಿಂಹ, ರಾಚಮಲ್ಲ ಮತ್ತು ಭೂತಗ ಎಂಬ ಮೂರು ಜನ ಮಕ್ಕಳಿದ್ದರು. ಭೂತಗನು ಕಿರಿಯವನಾದರೂ ಅಧಿಕಾರದ ದಾಹವಿದ್ದಿತು.ತನ್ನ ಸಹೋದರರನ್ನು ಮಣಿಸಿ ಸಿಂಹಾಸನಕ್ಕೆ ಬಂದ (ಗಳಿಸಿದ) ಭೂತಗನು ತಮ್ಮ ಸಾಂಪ್ರದಾಯಿಕ ಶತ್ರುಗಳಾದ ರಾಷ್ಟ್ರಕೂಟರೊಂದಿಗೆ ವೈವಾಹಿಕ ಸಂಬಂಧವನ್ನು ಏರ್ಪಡಿಸಿದನು. ಇದರ ಫಲವಾಗಿ ಎರಡು ಒಕ್ಕಲಿಗೆ ರಾಜಮನೆತನಗಳೊಂದಿಗೆ ಉತ್ತಮ ಭಾಂದವ್ಯ ಬೆಳೆದುದೇ ಅಲ್ಲದೆ ರಾಷ್ಟ್ರಕೂಟರು ತಮಗೆ ಸೇರಿದ್ದು ಪುಲಿಗೆರೆ, ಬೆಳವೂಲ, ಕಿಸುಗಾಡು, ಬಾಗೆ ನಾಡು ಎಂಬ ಇವೇ ಮೊದಲಾದ ಪ್ರದೇಶಗಳನ್ನು ಬಳುವಳಿ (ವರದಕ್ಷಿಣೆ)ಯಾಗಿ ಭೂತಗನಿಗೆ ನೀಡಿದರು. ಇದರೊಂದಿಗೆ ಗಂಗರ ಸಾಮ್ರಾಜ್ಯವು ಹುಬ್ಬಳ್ಳಿ, ಧಾರಾವಾಡ, ಬೆಳಗಾವಿಯವರೆಗೂ ಸಾಮ್ರಾಜ್ಯವು ವಿಸ್ತರಣೆಗೊಂಡಿತು. ಹೀಗೆ ಕರ್ನಾಟಕ ರಾಜಮನೆತನಗಳು ಒಂದಾಗಿ ತಮಿಳುನಾಡಿನ ಚೋಳರ, ಚೇರರ ವಿರುದ್ದ ಯುದ್ಧ ಮಾಡಿ ತಮ್ಮ ಸಾಮ್ರಾಜ್ಯನ್ನು ತಮಿಳು ನಾಡು ಪ್ರದೇಶಗಳಲ್ಲೂ ವಿಸ್ತರಿಸಲು ಇದು ಸಾದ್ಯವಾಯಿತು.

ರಾಷ್ಟ್ರಕೂಟ ದೊರೆ ಮೂರನೆ ಅಮೋಘವರ್ಷ ನೃಪತುಂಗನು ಮರಣವಾದ ಬಳಿಕ ಆತನ ಮಗ ಮುಮ್ಮಡಿ ಕೃಷ್ಣನು ಅಧಿಕಾರಕ್ಕೆ ಬಂದನು. ಆತ ಗಂಗರ ಭೂತಗನ ಭಾವಮೈದುನನಾಗಿದ್ದನು. ಮುಮ್ಮಡಿ ಕೃಷ್ಣನು ತನ್ನ ರಾಜಧಾನಿಯಿಂದ ಹೊರಗಿದ್ದು ಬೇರೆ ಬೇರೆ ರಾಜ್ಯಗಳ ಮೇಲೆ ದಂಡಯಾತ್ರೆಯನ್ನು ಕೈಗೊಂಡಿದ್ದ ಸಮಯದಲ್ಲಿ ಅಲ್ಲಯ್ಯ ಎಂಬ ಸಾಮಂತನು ತನ್ನ ರಾಜನು ರಾಜಧಾನಿಯಲ್ಲಿ ಇಲ್ಲದ ಸಮಯದಲ್ಲಿ ದಾಳಿ ಮಾಡಿದನು. ಈ ವಿಷಯವು ಭೂತಗನಿಗೆ ತಿಳಿಯುತ್ತಲೆ ಸೇನಾ ಸಮೇತನಾಗಿ ಬಂದು ಶತ್ರುವನ್ನು ಧಮನ ಮಾಡಿ ಆತನಿಂದ ಗಜ, ತುರಗ, ಬೆಳ್ಗೊಡೆಯನ್ನು ಆತನಿಂದ ಪಡೆದುಕೊಂಡು ರಾಜಧಾನಿಯನ್ನು ಶತ್ರುಗಳಿಂದ ಪಾರುಮಾಡಿದನು, ಸ್ವಲ್ಪದಿನ ಕಳೆಯುತ್ತಲೆ ಚೋಳರ ದೊರೆ ಪಾರಾಂತಕ ಮತ್ತು ಆತನ ಮಗ ಆದಿತ್ಯನು ಸೇನಾ ಸಮೇತರಾಗಿ ಕರ್ನಾಟಕದ ಗಡಿಗಳನ್ನು ಮುತ್ತಿದರು. ಗಂಗರ ಹಾಗೂ

ರಾಷ್ಟ್ರಕೂಟರ ಪ್ರದೇಶಗಳಮೇಲೆ ದಾಳಿ ನಡೆಸ ತೊಡಗಿದರು. ಗಂಗರ ಜೊತೆಗೆ ಮತ್ತು ರಾಷ್ಟ್ರಕೂಟರ ಮುಮ್ಮಡಿ ಕೃಷ್ಣರು ಸೇನಾ ಸಮೇತರಾಗಿ ಬಂದು ಚೋಳರ ಸೈನ್ಯವನ್ನು ಎದುರಿಸಿದರು. ಕ್ರಿ.ಶ. 949ರಲ್ಲಿ "ತಕ್ಕೋಂ" ಎಂಬಲ್ಲಿ ಘೋರ ಕದನವಾಯಿತು. ಚೋಳರ ಸೈನ್ಯ ಗಂಗರ ಮತ್ತು ರಾಷ್ಟ್ರಕೂಟರ ಸಂಯುಕ್ತ ಸೈನ್ಯವನ್ನು ಒಗ್ಗೂಡಿಸಿ ಗಂಗರ ವಿರುದ್ದ ಹೋರಾಡಿದನು. ಭೂತಗನುಆದಿತ್ಯನ ಸೈನ್ಯವನ್ನು ಸೋಲಿಸಿದುದೇ ಅಲ್ಲದೆ ಆದಿತ್ಯನನ್ನು ಕೊಂದು ಹಾಕಿದನು. ಈ ಸಂಯುಕ್ತ ಸೈನ್ಯ ಮುಂದುವರಿದು ತಮಿಳುನಾಡಿನ ಕಂಚಿಯನ್ನು ಆಕ್ರಮಿಸಿದರು. ಚೋಳರ ಪಾರಾಂತಕನು ತಲೆಮರೆಸಿಕೊಂಡು ಕಂಚಿಯನ್ನು ಬಿಟ್ಟು ಓಡಿ ಹೋದನು. ಗಂಗ ದೊರೆ ಭೂತಗನು ರಾಜಧಾನಿಯಿಂದ ಬಹಳ ಕಾಲ ಹೊರ ಭಾಗದಲ್ಲಿ ಇದ್ದ ಕಾರಣದಿಂದ ಸಾಮಂತರು ಹಾಗೂ ನೊಳಂಬರು ಸೈನ್ಯಾಚರಣೆ ಮಾಡತೊಡಗಿದರು. ರಾಜಧಾನಿಗೆ ಹಿಂತಿರುಗಿದ ಭೂತಗನು ಶತ್ರುಗಳಿಂದ ರಾಜಧಾನಿಯನ್ನು ಮುಕ್ತಗೊಳಿಸಿದನು.

ಹೀಗೆ ಗಂಗರಲ್ಲಿಯೇ ಪ್ರಬಲ ದೊರೆಗಳಾದ ಭೂತಗನು ದಕ್ಷಿಣ ಭಾರತದಾದ್ಯಂತ ಗಂಗರ ಲಾಂಛನವನ್ನು ಹಾರಿಸಿದನು. ಗಂಗರ ಸಾಂಪ್ರದಾಯಿಕ ಶತ್ರುವಾದ ರಾಷ್ಟ್ರಕೂಟರೊಂದಿಗೆ ವೈವಾಹಿಕ ಒಪ್ಪಂದ ಮಾಡಿಕೊಳ್ಳಲಾಗಿ ಎರಡೂ ರಾಜ ಮನೆತನಗಳು ಒಂದಾಗಿ ಅನ್ಯುನ್ಯತೆಯಿಂದ ನಡೆದುಕೊಂಡು ಹೋಗುವಂತೆ ಮಾಡಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಭೂತಗನಿಗೆ "ಗಂಗ-ಗಂಗೇಯ, ಗಂಗ ನಾರಾಯಣ, ನನ್ನಿಯಗಂಗ ಇವೇ ಮೊದಲಾದ ಬಿರುದುಗಳಿದ್ದವು. ಒಟ್ಟಾರೆ ಹೇಳುವುದಾದರೆ ಗಂಗ ದೊರೆಗಳಲ್ಲೇ ಅದ್ವಿತೀಯ ಎನ್ನಬಹುದು.

ಮೂರನೇ ಮಾರಸಿಂಹ (ಕ್ರಿ.ಶ. 960-975)

ಈತನು ಗಂಗ ದೊರೆಗಳಲ್ಲೇ ಪರಾಕ್ರಮಿ, ರಾಜಕಾರಣ ಮತ್ಸದ್ಧಿ, ಸಾಹಿತ್ಯ ಪೋಷಕ, ಕಲಾ ಪೋಷಕನಾಗಿ ಇತಿಹಾಸದಲ್ಲಿ ಶಾಶ್ವತವಾದಸ್ಥಾನ ಮಾನವನ್ನು ಗಳಿಸಿದ್ದಾನೆ. ಆದರೆ ಇತಿಹಾಸಕಾರರು ಈತನ ಸಾಧನೆಯನ್ನು ಮರೆತಂತಿದೆ. ಗಂಗರ ಸಾಂಪ್ರದಾಯಿಕ ಶತ್ರುಗಳಾದ ರಾಷ್ಟ್ರಕೂಟರೊಂದಿಗೆ ಉತ್ತಮ ಭಾಂದವ್ಯವನ್ನು ಇಟ್ಟುಕೊಂಡು ರಾಜ್ಯದಲ್ಲಿ ಶಾಂತಿ ಸುಭಿಕ್ಷೆನೆಲೆಸುವಂತೆ ಮಾಡಿದ.

ಗುಜರಾತಿನ ಮೇಲೆ ದಾಳಿ : ಹಿಂದೊಮ್ಮೆ ಗಂಗರ ಸಹಾಯದಿಂದ ರಾಷ್ಟ್ರಕೂಟರು ಗುಜರಾತಿನವರೆವಿಗೂ ತಮ್ಮ ರಾಜ್ಯವನ್ನು ವಿಸ್ತರಿಸಿ ಅಲ್ಲಿಗೆ ಪಾರಾಮಾರ ಸೀಯಕ ಎಂಬುವವನನ್ನು ತಮ್ಮ ಪ್ರತಿನಿಧಿಯನ್ನಾಗಿ ನೇಮಿಸಿದ್ದರು. ರಾಷ್ಟ್ರಕೂಟದೊರೆ ಕೃಷ್ಣನು ವಯೋ ಸಹಜ ಖಾಯಿಲೆಗೆ ತುತ್ತಾಗಿ ಸೈನ್ಯ ಮತ್ತು ಆಡಳಿತದ ಮೇಲೆ ನಿಯಂತ್ರಣವನ್ನು ಕಳೆದುಕೊಂಡ ವಿಷಯ ತಿಳಿಯುತ್ತಲೆ ಅತ್ತ

ಗುಜರಾತಿನಲ್ಲಿದ್ದ ಪಾರಮಾರಸೀಯಕನು ಸ್ವತಂತ್ರ್ಯವನ್ನು ಘೋಷಿಸಿಕೊಂಡನು. ಇದರಿಂದ ಕೆರಳಿದ ರಾಷ್ಟ್ರಕೂಟ ದೊರೆ ಕೃಷ್ಣನು ತನ್ನ ಸಾಮಂತನಾಗಿದ್ದ ಪಾರಮಾರ ಸೀಯಕನನ್ನು ಶಿಕ್ಷಿಸುವಂತೆ ಗಂಗ ದೊರೆ ಮಾರಸಿಂಹನನ್ನು ಕೇಳಿಕೊಂಡನು. ಮಾರಸಿಂಹನು ಗಂಗರ ಹಾಗೂ ರಾಷ್ಟ್ರಕೂಟರ ಸಂಯುಕ್ತ ಸೈನ್ಯವನ್ನು ಗುಜರಾತ್ ಕಡೆಗೆ ನಡೆಸಿದನು. ಸಂಯುಕ್ತ ಸೈನ್ಯವನ್ನು ಕಂಡ ಪಾರಮಾರಸೀಯಕನು ಹೆದರಿದನು. ಮಾರಸಿಂಹನ ಸಂಯುಕ್ತ ಸೈನ್ಯ ಸೀಯಕನ ಸೇನೆಯನ್ನು ಸೋಲಿಸಿತು. ಸೀಯಕನು ವಿಧಿಯಿಲ್ಲದೆ ಶರಣಾಗತನಾಗ ಬೇಕಾಯ್ತು. ಗುಜರಾತನ ಉಜ್ಜ್ಯನಿಯಲ್ಲಿ ಕರ್ನಾಟಕದ ಧ್ವಜವನ್ನು ಹಾರಿಸಿದಕೀರ್ತಿ ಗಂಗ ದೊರೆ ಮಾರಸಿಂಹನಿಗೆ ಸಲ್ಲುತ್ತದೆ. ಈ ವಿಜಯದಿಂದ ಹರ್ಷಗೊಂಡ ರಾಷ್ಟ್ರಕೂಟ ದೊರೆ ಕೃಷ್ಣನುಗಂಗ ದೊರೆ ಮಾರಸಿಂಹನನ್ನು ಸತ್ಕರಿಸಿ ಚಿನ್ನದ ಛತ್ರಿಗೆ ವಜ್ರಗಳಿಂದ ಅಲಂಕೃತಗೊಂಡ ಸುಂದರವಾದ ಛತ್ರಿ, ಚಾಮರವನ್ನು ನೀಡಿ ಮಾರಸಿಂಹನಿಗೆ "ಗೂರ್ಜರ ರಾಜ" ಎಂಬ ಬಿರುದನ್ನು ನೀಡಿ ಗೌರವಿಸಿದನು.

ನೊಳಂಬರ ಅಂತ್ಯ ಕಾಣಿಸಿದ ಮಾರಸಿಂಹ : ರಾಷ್ಟ್ರಕೂಟರ ಮೂರನೆಯ ಕೃಷ್ಣನು ವೃದಾಪ್ಯದಿಂದ ಮರಣಹೊಂದಿದನು. ಆತನ ನಂತರ ಆತನ ಮಗನಾದ ಖೊಟ್ಟಿಗನು ಸಿಂಹಾಸನಕ್ಕೆ ಬಂದನು. ಆತ ಅಸಮರ್ಥನಾಗಿದ್ದನು. ಇಂತಹ ಸನ್ನಿವೇಶವನ್ನು ಉಪಯೋಗಿಸಿಕೊಂಡ ನೊಳಂಬರು ರಾಷ್ಟ್ರಕೂಟರ ಹಾಗೂ ಗಂಗರ ರಾಜ್ಯಗಳ ಮೇಲೆ ದಾಳಿ ಮಾಡಿದರು. ಈ ನಡುವೆ ಉತ್ತರ ಭಾಗಗಳಾದ ಗುಜರಾತ್ ಮತ್ತು ಉಜ್ಜ್ಯನಿಯ ದಾಳಿಯ ವಿಜಯವನ್ನು ಅನುಭವಿಸಿದ ಗಂಗರ ಸೈನ್ಯವು ಉನ್ಮಾದಗೊಂಡಿದ್ದರು, ಮಾರಸಿಂಹನು ನೊಳಂಬರನ್ನು ಸಂಪೂಣವಾಗಿ ಸದೆಬಡಿಯಲು ತೀರ್ಮಾನಿಸಿ ಬೃಹತ್ ಸೈನ್ಯದೊಂದಿಗೆ ನೊಳಂಬರ ವಿರುದ್ಧ ಸೈನ್ಯಾಚರಣೆ ನಡೆಸಿದನು. ಗಂಗರ ಸೈನ್ಯ "ಚಾವುಂಡರಾಯ" ಮತ್ತು ಅಮಾವಾಸ್ಯ ಎಂಬ ದಳಪತಿಗಳ ನೇತೃತ್ವದಲ್ಲಿ ನೊಳಂಬರ ಸೈನ್ಯವನ್ನು ಮಣ್ಣು ಮುಕ್ಕಿಸಿತು. ನೊಳಂಬರ ನಾಯಕರಲ್ಲಿ ಕೆಲವರು ಸೆರೆ ಸಿಕ್ಕರೆ ಮತ್ತೆ ಕೆಲವರು ರಣರಂಗದಲ್ಲಿ ಮಡಿದರು. ಮತ್ತೆ ಕೆಲವರು ರಣರಂಗದಿಂದ ತಲೆಮರೆಸಿಕೊಂಡು ಓಡಿ ಹೋದವರು ಇನ್ನೆಂದಿಗೂ ಗಂಗರ ಸಹವಾಸಕ್ಕೆ ಬರಲಿಲ್ಲ. ಒಟ್ಟಾರೆ ಹೇಳುವುದಾದರೆ ನೊಳಂಬರು ಸಂಪೂಣವಾಗಿ ವಿನಾಶ ಹೊಂದಿದರು. ಮಾರಸಿಂಹನು "ನೊಳಂಬಕುಲಾಂತಕ" ಎಂಬ ಬಿರುದು ಪಡೆದನು. ಮಾರಸಿಂಹನು ರಣರಂಗದಲ್ಲಿ ಶತ್ರುಗಳಿಗೆ ದೈತ್ಯ ಆನೆಯಾಗಿ ಹಾಗೂ ಕೆಲವರಿಗೆ ಸಿಂಹದಂತೆ ಘರ್ಜಿಸುತ್ತಾ ಮೇಲೆ ಬಿದ್ದು ಶತ್ರುಗಳ ರುಂಡವನ್ನು ಚಂಡಾಡಿದ ಎಂಬುದಾಗಿ ಕುಡಲೂರು ತಾಮ್ರ ಶಾಸನವು ತಿಳಿಸುತ್ತದೆ. (ಕುಡಲೂರು ತಾಮ್ರಶಾಸನ M.A.R – 1921 – para 50).

ಪಾರಮಾರ ಎರಡನೆ ಸಿಯಾಕನ ವಿರುದ್ದ ಯುದ್ಧ ಹಾಗೂ ರಾಷ್ಟ್ರಕೂಟರ ಅಂತ್ಯ

ಮಾರಸಿಂಹನು ತನ್ನ ರಾಜಧಾನಿಗೆ ಹಿಂತಿರುಗಿ ಬರುತ್ತಲೆ ರಾಷ್ಟ್ರಕೂಟರ ರಾಜ್ಯವಾದ ಮಾನ್ಯಖೇಟಕ್ಕೆ ಗುಜರಾತಿನಿಂದ ಪಾರಮಾರ ಎರಡನೆಸಿಯಕ ಹಾಗೂ ಆತನ ಸಾಮಂತರು ಸ್ನೇಹಿತರ ಸಂಯುಕ್ತ ದಾಳಿ ಮಾಡಿತು. ಮಾರಸಿಂಹನು ಸೇನಾ ಸಮೇತನಾಗಿ ಹೋಗಿ ರಾಷ್ಟ್ರಕೂಟ ರಕ್ಷಣೆಗೆನಿಂತನು. ರಾಷ್ಟ್ರಕೂಟ ದೊರೆ ಖೊಟ್ಟಿಗನು ಈ ಸಮಯದಲ್ಲಿ ಅಸುನೀಗಿದನು. ಮಾರಸಿಂಹನು ಎಂದಿನಂತೆ ಶತ್ರುಗಳನ್ನು ಹಿಮ್ಮೆಟ್ಟಿಸಿದನು. ಮಾರಸಿಂಹನು ತನ್ನ ರಾಜಧಾನಿಗೆ ವಾಪಸ್ಸು ಬಂದ ಬಳಿಕ ಅತ್ತ ರಾಷ್ಟ್ರಕೂಟರ ರಾಜವಂಶದಲ್ಲಿ ಸಿಂಹಾಸನಕ್ಕಾಗಿ ಒಳಜಗಳ ಪ್ರಾರಂಭವಾಯ್ತು. ಇದೇ ಸಮಯಕ್ಕೆ ಕಲ್ಯಾಣಿ ಚಾಲುಕ್ಯರ ತೈಲಪನು ರಾಷ್ಟ್ರಕೂಟರ ರಾಜಧಾನಿಯಾದ ಮಾನ್ಯಖೇಟವನ್ನು ವಶಪಡಿಸಿಕೊಂಡನು. ತನ್ನ ಕಣ್ಣೆದುರೇ ರಾಷ್ಟ್ರಕೂಟರು ವಿನಾಶ ಹೊಂದುವುದನ್ನು ಕಂಡು ಚಿಂತಾಕ್ರಾಂತನಾದನು.

ಮಾರಸಿಂಹನು ತನ್ನ ಜೀವಿತ ಕಾಲದ ಬಹು ಭಾಗವನ್ನು ರಣರಂಗದಲ್ಲೇ ಕಳೆಯಬೇಕಾಯ್ತು. ಸೋಲು, ಗೆಲವು, ಅತಾಶೆಯಿಂದ ಬಳಲಿದ ಮಾರಸಿಂಹನು ತನ್ನ ಅಳಿಯನೂ ಹಾಗೂ ಮುಮ್ಮಡಿ ಕೃಷ್ಣರಾಜನ ಮೊಮ್ಮಗನೂ ಆದ ಮೂರನೆ ಇಂದ್ರರಾಜನಿಗೆ ಪಟ್ಟಕಟ್ಟಿದನು. ತನ್ನ ಉಳಿದ ಕಾಲವನ್ನು ಜೈನ ಧರ್ಮ, ಬೌದ್ಧ ಧರ್ಮ, ಹಿಂದೂಧರ್ಮದ ಜಿನಾಲಯ, ಸ್ತೂಪ, ಚೈತ್ರ ದೇವಾಲಯಗಳಿಗೆ ಉದಾರವಾಗಿ ದಾನ ಧರ್ಮ ಮಾಡಿದ. ತನ್ನ ಕೊನೆಯ ಕಾಲವನ್ನು ಆಧ್ಯಾತ್ಮಿಕ ಜೀವನದಲ್ಲೇ ಕಳೆದು ಅಂತಿಮವಾಗಿ ಬಂಕಾಪುರಕ್ಕೆ ತೆರಳಿ ಅಲ್ಲಿದ್ದ ಅಜಿತಸೇನ ಭಟ್ಟಾರಕ ಮುನಿಯಿಂದ ಧೀಕ್ಷೆ ಪಡೆದು ಸಲ್ಲೇಖನ ವ್ರತವನ್ನಾಚರಿಸಿ ಕ್ರಿ.ಶ. 974 ರಲ್ಲಿ ಇಹಲೋಕ ತ್ಯಜಿಸಿದ.

ನಾಲ್ಕನೆಯ ರಾಜಮಲ್ಲ ಸತ್ಯವಾಕ್ಯ (ಕ್ರಿ.ಶ, 975–985)

ಈತ ಮಾರಸಿಂಹನಂತೆ ಪ್ರಬಲ ದೊರೆಯಲ್ಲದಿದ್ದರೂ ಈತನು ಮಾಡಿದ ಒಳ್ಳೆಯ ಕೆಲಸವೆಂದರೆ ಮಾರಸಿಂಹನ ಕಾಲದಲ್ಲಿ ದಂಡನಾಯಕನಾಗಿದ್ದ ಚಾವುಂಡರಾಯನನ್ನು ಮಂತ್ರಿಯಾನ್ನಾಗಿ ಮಾಡಿದ. ಚಾವುಂಡರಾಯನು ದಂಡನಾಯಕನಾಗಿ, ಮಂತ್ರಿಯಾಗಿ, ಧರ್ಮಬೀರುವಾಗಿದುದೇ ಅಲ್ಲದೆ ತನ್ನನ್ನು ದಂಡನಾಯಕನನ್ನಾಗಿ ನಂತರ ಮಂತ್ರಿಯನ್ನಾಗಿ ಮಾಡಿದ ತನ್ನ ಸ್ವಾಮಿ ಪ್ರಭು ರಾಜಮಲ್ಲನ ಹೆಸರನ್ನು ಶಾಶ್ವತವಾಗಿ ಉಳಿಸಬೇಕೆಂಬ ಉದ್ದೇಶದಿಂದ ಶ್ರವಣಬೆಳಗೂಳದಲ್ಲಿ "ಗೊಮ್ಮಟೇಶ್ವರನ" (57.5 ಅಡಿ) ಏಕಶಿಲಾ ವಿಗ್ರಹವನ್ನು ಕಡೆಸಿದನು. ಇದಕ್ಕೆ ತಗಲಿದ ಅಪಾರ ಧನದಾನ್ಯಗಳನ್ನು ಗಂಗರ ರಾಜಮಲ್ಲನು

ನೀಡಿ ಪೋಷಿಸಿದನು. (ಆದರೆ ಹೆಸರು ಬಂದದ್ದು ಚಾವುಂಡರಾಯನಿಗೆ) ಇತ್ತ ನಾಲ್ಕನೆಯ ರಾಜಮಲ್ಲನು ಕ್ರಿ.ಶ.985ರಲ್ಲಿ ಮೃತನಾದನು.

ಸಾಹಿತ್ಯ ಪೋಷಕನಾಗಿ ರಾಜಮಲ್ಲ

ರಾಜಮಲ್ಲನು ಸಾಹಿತ್ಯಾಭಿಮಾನಿಯು, ಸಾಹಿತ್ಯ ಪೋಷಕನೂ ಆಗಿದ್ದನು. ಈತನ ಆಸ್ಥಾನದಲ್ಲಿ ಕವಿಗಳಾದ ರನ್ನ, ಗುಣಭದ್ರ, ಕೇಶೀರಾಜ, ನಾಗವರ್ಮ, ಚಾವುಂಡರಾಯ, ಅಜಿತಸೇನ ಇವರೇ ಮುಂತಾದವರಿದ್ದರು. (History of the Western Gangas by Dr, Sheik Ali Page 153 PP 1).

ರಾಜಮಲ್ಲ ಮತ್ತು ಗೊಮ್ಮಟೇಶ್ವರ ವಿಗ್ರಹ ಮೂರ್ತಿ

ನಾಲ್ಕನೆಯ ರಾಜಮಲ್ಲನು ಶತ್ರುಗಳ ಬಾಧೆಯಿಂದ ರಾಜ್ಯವನ್ನು ಸಮರ್ಥವಾಗಿ ತಡೆದನು. ಈತನ ತಂದೆ ಮಾರಸಿಂಹನಂತೆ ಜೈನ ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದನು. ಜೈನ ಮುನಿ ಅಜಿತಸೇನ ಭಟ್ಟಾರಕ ಸ್ವಾಮೀಜಿಯ ಪ್ರಭಾವಕ್ಕೆ ಒಳಗಾದನು. ಜೈನ ಮುನಿಗಳ ಆದೇಶದಂತೆ ಬಾಹುಬಲಿಯ ದಿವ್ಯ ಮೂರ್ತಿಯನ್ನು ಕಡೆಸಲು ತೀರ್ಮಾನಿಸಿದನು. ಅದರಂತೆ ತನ್ನ ನೆಚ್ಚಿನ ಮಹಾ ಮಂತ್ರಿಯೊಂದಿಗೆ ದೀರ್ಘ ಸಮಾಲೋಚನೆ ನಡೆಸಿ ಅದಕ್ಕೆ ತಗುಲಬಹುದಾದ ಐವತ್ತು ಸಾವಿರ ಗದ್ಯಾಣವನ್ನು (ಅಂದಿನ ಕಾಲದ ಹಣ) ನೀಡಿದನು. ಇಡೀ ಜವಾಬ್ದಾರಿಯನ್ನು ಮಹಾಮಂತ್ರಿ ಚಾವುಂಡರಾಯನಿಗೆ ವಹಿಸಿದನು. ಆತ ಸ್ಥಪತಿಯೂ, ಶಿಲ್ಪಿಯೂ ಆದ "ಅರಿಷ್ಟನೇಮಿ"ಯನ್ನು ಈ ಕೆಲಸಕ್ಕೆ ನೇಮಿಸಿದನು. ಕೆಲವು ವರ್ಷಗಳ ತರುವಾಯ ಅಂದರೆ ಕ್ರಿ.ಶ.983ರಲ್ಲಿ ಶ್ರವಣಬೆಳಗೊಳದ ದೊಡ್ಡ ಬೆಟ್ಟದಲ್ಲಿ 57.5 ಅಡಿಗಳ ಮೂರ್ತಿಯು ಪ್ರತಿಷ್ಠಾಪನೆಗೊಂಡಿತು. (ಆದರೆ ಮೂರ್ತಿಯನ್ನು ಕಡೆಸಿದ ಕೀರ್ತಿಯು ಮಹಾ ಮಂತ್ರಿಯಾಗಿದ್ದ ಚಾವುಂಡರಾಯನಿಗೆ ಸಂದಿತು). ಆ ದಿವ್ಯ ಮೂರ್ತಿಯನ್ನು ನೋಡಲು ಹೊರ ರಾಜ್ಯಗಳಿಂದ ಭಕ್ತರು ಬರತೊಡಗಿದರು. ಅದರಲ್ಲಿ ದಿಗಂಬರರು (ದಿಕ್ಕುಗಳನ್ನು ಅಂಬರ (ವಸ್ತ್ರ) ವನ್ನಾಗಿಸಿಕೊಂಡವರು. ತೀರ್ಥಂಕರರು (ಜಿನ) ಕಂತಿ (ಪರವ್ರಾಜಕಿ/ಸನ್ಯಾಸಿನಿ) ಮಹಾಯತಿ (ಹಿರಿಯ ಮುನಿ) ಶ್ರವಣ (ಜೈನ ಮುನಿ) ಶ್ರಾವಕ (ಗೃಹಸ್ಥ) ಶ್ರಾವಕಿ (ಗೃಹಸ್ಥೆ) ಹೀಗೆ ಭಕ್ತಕೋಟಿಯೇ ವೈರಾಗ್ಯ ಮೂರ್ತಿಯನ್ನು ನೋಡಲು ಬರತೊಡಗಿದರು. ಗೊಮ್ಮಟೇಶ್ವರನನ್ನು ಕಡೆಸಿದ ಕೀರ್ತಿ ಗಂಗ ದೊರೆ ನಾಲ್ಕನೆಯ ರಾಜಮಲ್ಲನಿಗೆ ಸೇರುತ್ತದೆ.

ಒಟ್ಟಾರೆ ಹೇಳುವುದಾದರೆ 700 ವರ್ಷಗಳ ಕಾಲ ಸುದೀರ್ಘವಾಗಿ ಆಳಿದ ಕೀರ್ತಿ ಗಂಗರಿಗೆ ಸಲ್ಲುತ್ತದೆ. ಇವರು ಉತ್ತಮ ಆಡಳಿತಜ್ಞರಾಗಿ, ಕಲಾಬಿಜ್ಞರಾಗಿ, ಕಲೋಪಾಸಕರಾಗಿ, ಅನ್ಯಮತ ಸಹಿಷ್ಣುಗಳಾಗಿ ಈ ನಾಡಿಗೆ ಕೊಡುಗೆ ನೀಡಿದ್ದಾರೆ, ಶಾಶ್ವತವಾಗಿ ಉಳಿದಿರುವ ವಾಸ್ತುಶಿಲ್ಪವೆಂದರೆ ತಲಕಾಡಿನ ಪಂಚಲಿಂಗ ದೇಗುಲಗಳು

ಹಾಗೂ ವಿಶ್ವಪ್ರಸಿದ್ಧ ಶ್ರವಣಬೆಳಗೊಳದಲ್ಲಿರುವ ಗೊಮ್ಮಟೇಶ್ವರ ಏಕಶಿಲಾವಿಗ್ರಹ ಗಂಗರ ವಂಶಸ್ಥರಾದ "ಗಂಗಡಕಾರ ಒಕ್ಕಲಿಗರು" ಇಂದಿಗೂ ಅರ್ಥಿಕ, ಶೈಕ್ಷಣಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಡುಗೆ ನೀಡುತ್ತಾ ಬರುತ್ತಿದ್ದಾರೆ.

ಚವೂಂಡರಾಯ / ಚಾಮುಂಡರಾಯ

ಕ್ರಿ.ಶ.10 ಶತಮಾನದಲ್ಲಿ ಹುಟ್ಟಿದ ಚವೂಂಡರಾಯ / ಚಾಮುಂಡರಾಯನು ಯೋಧಾಗ್ರೇಸರನಾಗಿ, ಮಂತ್ರಿಯಾಗಿ, ಕವಿಯಾಗಿ, ಗೊಮ್ಮಟೇಶ್ವರ / ಬಾಹುಬಲಿ ಬೃಹತ್ ವಿಗ್ರಹ ಸ್ಥಾಪನೆಯ ಹೊಣೆ ಹೊತ್ತು ಪೂರ್ತಿಗೊಳಿಸುವ ಮೂಲಕ ಗಂಗ ದೊರೆಗಳಾದ ಮಾರಸಿಂಹ, ನಾಲ್ಕನೆ ರಾಕಮಲ್ಲ ಮತ್ತು ರಕ್ಕಸಗಂಗ ಹೀಗೆ ಮೂರು ಜನರ ಕಾಲದಲ್ಲಿ ದಂಡನಾಯಕನಾಗಿ ಮಂತ್ರಿಯಾಗಿ, ಮಹಾ ಮಂತ್ರಿಯಾಗಿ ಸೇವೆ ಸಲ್ಲಿಸಿದನು. ಬಹುಷ: ಚವುಂಡರಾಯನಿಲ್ಲದಿದ್ದರೆ ಕ್ರಿ.ಶ. ಹತ್ತನೆಯ ಶತಮಾನದಲ್ಲೇ ಗಂಗ ಸಾಮ್ರಾಜ್ಯವು ಕೊನೆಗೊಳ್ಳುತ್ತಿತ್ತೇನೂ ಅನ್ನುವಷ್ಟು ಇತಿಹಾಸದಲ್ಲಿ ಸ್ಥಾನ ಪಡೆದಿದ್ದಾನೆ. ಗಂಗರ ಸಾಂಪ್ರದಾಯಿಕ ಶತ್ರುಗಳಾದ ರಾಷ್ಟ್ರಕೂಟರ, ನೊಳಂಬರ, ಚೋಳರ ದಾಳಿಗಳನ್ನು ತಡೆದು ಗಂಗ ಸಾಮ್ರಾಜ್ಯದ ರಕ್ಷಣಾಗೋಡೆಯಂತೆ ಕೆಲಸ ಮಾಡಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಅನನ್ಯ ಜೈನಧರ್ಮೀಯನಾದ ಈತನ ಗುರು ಅಜಿತನಾಥ ಭಟ್ಟಾರಕ ಸ್ವಾಮೀಜಿ.

ಉಚ್ಚಂಗಿಯ ಪಾಂಡ್ಯ ರಾಜಾದಿತ್ಯನನ್ನು ಸೋಲಿಸಿ "ರಣರಂಗ ಸಿಂಹ" ಎಂಬ ಬಿರುದನ್ನು ನಾಲ್ಕನೆಯ ರಾಜಮಲ್ಲನ ಕಾಲದಲ್ಲಿ ಗೋವಿಂದರಸ, ಪಾಂಚಾಲ ರಾಜ ಮತ್ತು ಮಧುರಾಚಯ್ಯ ಇವರೇ ಮುಂತಾದ ಶತ್ರುಗಳು ನುಗ್ಗಿ ಬಂದಾಗ ಚಾವುಂಡರಾಯನು ಅವರ ವಿರುದ್ಧ ವೀರಾವೇಶದಿಂದ ಹೋರಾಡಿ ಶತ್ರುಗಳನ್ನು ಮಣಿಸಿ ಸಮರ ಪರಶುರಾಮ್, ವೈರಿಕುಲ ಕಾಲದಂಡ, ಇವೇ ಮುಂತಾದ ಬ ಬಿರುದುಗಳನ್ನು ಪಡೆದನು. 4ನೇ ರಾಜಮಲ್ಲ ಸತ್ಯವಾಕ್ಯ ದೊರೆಯು ಚವುಂಡರಾಯನಿಗೆ "ರಾಯ" ಎಂಬ ಬಿರುದನ್ನು ದಯಪಾಲಿಸಿದನು.

ಕನ್ನಡ ಸಾಹಿತ್ಯಕ್ಕೊ ತನ್ನದೇ ಆದ ಕೊಡುಗೆಯನ್ನು ಕೊಟ್ಟಿದ್ದಾನೆ. ವ್ಯಾಕರಣ, ತರ್ಕಶಾಸ್ತ್ರ, ವೇದ ವೇದಾಂತ, ಗಣಿತ ಶಾಸ್ತ್ರದಲ್ಲಿ ಪಾಂಡಿತ್ಯವನ್ನು ಹೊಂದಿದ್ದನು. **"ಚಾವುಂಡರಾಯ ಪುರಾಣ"** ಎಂಬ ಗ್ರಂಥವನ್ನು ಬರೆದನು. ನೇಮಿಚಂದ್ರ ಕವಿಯ **"ಗೊಮ್ಮಟಸಾರ"** ಎಂಬ ಗ್ರಂಥಕ್ಕೆ ಬಾಷ್ಯವನ್ನು ರಚಿಸಿದನು.

ಬಾಹುಬಲಿ / ಗೊಮ್ಮಟೇಶ್ವರ ವಿಗ್ರಹ ನಿರ್ಮಾಣ

ಗಂಗ ದೊರೆ ರಾಜಮಲ್ಲನ ಆದೇಶದಂತೆ ಶ್ರವಣಬೆಳಗೊಳದ ದೊಡ್ಡ ಬೆಟ್ಟದ ಮೇಲೆ 58 ಅಡಿ ಎತ್ತರದ ಬಾಹುಬಲಿ / ಗೊಮ್ಮಟೇಶ್ವರ ವಿಗ್ರಹವ ನ್ನು

ನಿರ್ಮಿಸುವ ಜವಾಬ್ದಾರಿಯುನ್ನು ಹೊತ್ತು ಅದನ್ನು ಯುಶಸ್ವಿಂಯಾಗಿ ಪೂರ್ಣಗೊಳಿಸುವ ಮೂಲಕ ಇತಿಹಾಸದಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದಿದ್ದಾನೆ. ಹೀಗೆ ರಣರಂಗದಲ್ಲಿ ಶತ್ರುಗಳ ಪಾಲಿಗೆ ರಣಚಂಡಿಯಾಗಿ, ಸಾಹಿತಿಗಳ ಪಾಲಿಗೆ ಉದ್ದಾಮ ಪಂಡಿತನಾಗಿ, ಜೈನ ಧರ್ಮೀಯರ ಪಾಲಿಗೆ ಧರ್ಮಬೀರುವಾಗಿ ಕಂಗೊಳಿಸಿದ ಚವುಂಡರಾಯನು ಕಿ.ಶ.990ರಲ್ಲಿ ವಿಧಿವಶನಾದನು. ಗಂಗರ ಶತ್ರುಗಳು ಗಂಗ ಸಾಮ್ರಾಜ್ಯವನ್ನು ಮುತ್ತಲು ಎಡೆತಾಕ ತೊಡಗಿದರು. ಗಂಗ ದೊರೆಗಳಲ್ಲಿ ರಕ್ಕಸಗಂಗನೇ ಕೊನೆಯ ಅರಸನೆಂದೇಳಬಹುದು.

ರಕ್ಕಸ ಗಂಗ (ಕ್ರಿ.ಶ.984–1024)

ಗಂಗರ ರಕ್ಕಸಗಂಗನುಸಿಂಹಾಸನಕ್ಕೆ ಬರುವ ವೇಳೆಗೆ ಇಡೀ ದಕ್ಷಿಣ ಭಾರತದಾದ್ಯಂತ ರಾಜಕೀಯ ಸಿತ್ಯಾಂತರಗಳು ನಡೆಯ ತೊಡಗಿದವು.ಉತ್ತರ ಕರ್ನಾಟಕದ ಭಾಗದಲ್ಲಿ ಕಲ್ಯಾಣಿ ಚಾಲುಕ್ಯರು ತಮಿಳುನಾಡು ಭಾಗದಲ್ಲಿ ಚೋಳರ ರಾಜ ರಾಜ ಚೋಳ ಹಾಗೂ ಆತನ ಮಗ ರಾಜೇಂದ್ರ ಚೋಳರು ಇಡೀ ದಕ್ಷಿಣ ಭಾರತವನ್ನೇ ಆಕ್ರಮಿಸಿಕೊಳ್ಳಲು ಶಪಥ ಮಾಡಿದರು."ತಕ್ಕೋಲಂ" ಯುದ್ಧದಲ್ಲಿ ಗಂಗರಿಂದಸೋತು ಶರಣಾಗತರಾಗಿದ್ದ ಚೋಳರು ಗಂಗರ ವಿರುದ್ದ ಸೇಡು ತೀರಿಸಿಕೊಳ್ಳಲು ಹಪಹಪಿಸುತ್ತಿದ್ದರು. ರಾಜರಾಜ ಚೋಳನ ದಕ್ಷ ಸೇನಾನಿಗಳು ಕ್ರಿ.ಶ.991ರ ಸಮಯದಲ್ಲಿ ಗಂಗರಿಗೆ ಸೇರಿದ್ದ ಕುವಲಳ (ಕೋಲಾರ) ಪ್ರದೇಶವನ್ನು ಗೆದ್ದುಕೊಂಡರು. ಕ್ರಿ.ಶ.997ರಲ್ಲಿ ಹೊಸಕೋಟೆಗೆ ಸೇರಿದಂತೆ ಇಂದಿನ ಬೆಂಗಳೂರಿಗೆ ಸೇರಿದ ಪ್ರದೇಶಗಳನ್ನು ಮುತ್ತಿಗೆ ಹಾಕಿ ವಶಪಡಿಸಿಕೊಂಡನು. ಚೋಳರ ಸೈನ್ಯವನ್ನು ತಡೆಯುವ ಶಕ್ತಿ ಗಂಗರ ರಕ್ಕಸಗಂಗನಿಗಿರಲಿಲ್ಲ. ಕೊನೆಗೆ ಕ್ರಿ.ಶ. 1004ರಲ್ಲಿ ಗಂಗರ ರಾಜಧಾನಿ ತಲಕಾಡನ್ನು ವಶಪಡಿಸಿಕೊಂಡರು. ಅದಕ್ಕೂ ಮೊದಲು ಚೋಳರ ಬೃಹತ್ ಸೈನ್ಯ ಇಂದಿನ ಬೆಂಗಳೂರಿಗೆ ಸಮೀಪವಿರುವ ಹೊಸಕೋಟೆಯ (35 ಕಿ.ಮೀ) ಬಳಿ ಬೀಡು ಬಿಟ್ಟಿದ್ದ ಬಗ್ಗೆ ಶಾಸನೊಕ್ತ ಆಧಾರಗಳಿವೆ. (ಹೊಸಕೋಟೆ 3–ಇ.ಸಿ.9) ಗಂಗರು ದುರ್ಬಲಗೊಳ್ಳುತ್ತಿದ್ದಂತೆ ಚೋಳರು ಅರಕಲಗೂಡು, ಶ್ರೀರಂಗಪಟ್ಟಣ, ನೆಲಮಂಗಲ, ನಿಡುಗಲ್ ಸೇರಿದಂತೆ ಗಂಗರ ಹಲವಾರು ಪ್ರದೇಶಗಳನ್ನು ಚೋಳರು ವಶಪಡಿಸಿಕೊಂಡರು. (ಕೋಲಾರ.ಇ.ಸಿ.10.ಪಿ.ವಿ.23–24) ಗಂಗರ ಕೊನೆಯ ದೊರೆ ರಕ್ಕಸಗಂಗನು ತಲಕಾಡಿನ ಪತನಾ ನಂತರವೂ ಹಲವು ಕಾಲ ಬದುಕಿದ್ದನು. "ಛಂದೋಬುದಿ" ಗ್ರಂಥದ ಪ್ರಕಾರ ಕ್ರಿ.ಶ. 1025ರ ತನಕ ಚೋಳರ ಸಾಮಂತನಾಗಿ ಆಳ್ವಿಕೆ ಮಾಡಿದ ಬಗ್ಗೆ ತಿಳಿಯುತ್ತದೆ. ಇಷ್ಟೇ ಅಲ್ಲದೆ ಶಾಸನೊಕ್ತ ಆಧಾರಗಳೂ ಸಿಕ್ಕಿವೆ. (ಶ್ರೀನಿವಾಸಪುರ, 59, ಇ.ಸಿ.10 ನರಸೀಪುರ 35, ಇ.ಸಿ. 8 ಪು. 136, ಎಂ.ಎ.ಆರ್. 1909–10, ಪ್ಯಾರ 62) ಗಂಗರ ಮುಖ್ಯ ಶಾಖೆಯು ರಕ್ಕಸಗಂಗನ ಕಾಲಕ್ಕೆ ಕೊನೆಗೊಂಡರು. ಗಂಗರ ಉಪ

ಶಾಖೆಗಳುಕಲ್ಯಾಣಿ ಚಾಲುಕ್ಯರ, ಹೊಯ್ಸಳರ, ವಿಜಯನಗರ ಸಾಮ್ರಾಟರ ಆಳ್ವಿಕೆಯ ಕಾಲದಲ್ಲಿ ಆಶ್ರಿತ ರಾಜರಾಗಿದ್ದರು. ವಿಜಯನಗರದ ಸಾಮ್ರಾಟ ಕೃಷ್ಣದೇವರಾಯನು ಉಮ್ಮತ್ತುರನ್ನು (ಶಿವಸಮುದ್ರ) ವಶಪಡಿಸಿಕೊಳ್ಳುವುದರೊಂದಿಗೆ ಅಂತ್ಯ ಕಂಡಿತು.

ಒಂದನೇ ಮಾರಸಿಂಹ ಎರೆಯಪ್ಪ (ಕ್ರಿ.ಶ.812–817)

ಈಗಾಗಲೆ ತಿಳಿಸಿರುವಂತೆ ಗಂಗರು ಮತ್ತು ರಾಷ್ಟ್ರಕೂಟರು ಬದ್ಧ ವೈರಿಗಳು. ಮಾರಸಿಂಹನ ತಂದೆ ಎರಡನೇ ಶಿವಮಾರನು ರಾಷ್ಟ್ರಕೂಟರ ವಿರುದ್ಧ ಹೋರಾಡಿ ಅವರ ಕೈಮೇಲಾಗಿ ಶತ್ರುಗಳಿಗೆ ಸೋತು ಸೆರೆವಾಸ ಅನುಭವಿಸಿದ. ಅಂತಹ ಸಂದರ್ಭದಲ್ಲಿ ಒಂದನೇ ಮಾರಸಿಂಹನು ಆಡಳಿತವನ್ನು ಸುಸೂತ್ರವಾಗಿ ನಡಸಿ ಗಂಗ ಸಾಮ್ರಾಜ್ಯವನ್ನು ಉಳಿಸಿದ ಕೀರ್ತಿ ಮಾರಸಿಂಹನಿಗೆ ಸಲ್ಲುತ್ತದೆ. ಎರಡನೇ ಶಿವಮಾರನ ಮತ್ತೊಬ್ಬ ಮಗನಾದ ಪೃಥ್ವಿಪತಿಯು ಪಲ್ಲವರ ಸ್ನೇಹ ಸಂಪಾದಿಸಿ ರಾಷ್ಟ್ರಕೂಟ, ತೆಲಗು ಚೋಡ ಮತ್ತು ಮೈದುಂಬ ಇವೇ ಮುಂತಾದ ರಾಜ ಮನೆತನಗಳೊಂದಿಗೆ ಯುದ್ಧ ಮಾಡಿದ. ಪೃಥ್ವಿಪತಿಯ ರಾಣಿಯೊಬ್ಬಳು ನಂದಿ ಬೆಟ್ಟದ ಬಳಿ ನಂದಿಕೇಶ್ವರ ದೇವಾಲಯಕ್ಕೆ ಸಾಕಷ್ಟು ದಾನದತ್ತಿಗಳನ್ನು ನೀಡಿದಳು. ಪೃಥ್ವಿಪತಿಯು ಮೂರನೇ ರಾಜಮಲ್ಲನ ಸಹಾಯದಿಂದ ರಾಜ್ಯವನ್ನು ರಕ್ಷಿಸಿಕೊಂಡನು.

ಒಂದನೇ ರಾಜಮಲ್ಲ ಸತ್ಯವಾಕ್ಯ (ಕ್ರಿ.ಶ.817–853)

ಮಾರಸಿಂಹನ ಮರಣಾನಂತರ ಅವನ ಚಿಕ್ಕಪ್ಪ ವಿಜಯಾದಿತ್ಯನು ರಾಜನಾಗಿ ಕೆಲವು ವರ್ಷಗಳ ಕಾಲ ಆಳ್ವಿಕೆ ಮಾಡಿದನು. ತಮ್ಮ ಸಾಂಪ್ರಾಯಿಕ ವೈರಿಯಾದ ರಾಷ್ಟ್ರಕೂಟರ ವಿರುದ್ದ ಸೆಣಸಿದನು. ರಾಷ್ಟ್ರಕೂಟರ ದಂಡನಾಯಕ ಬಂಕೇಶನು ಗಂಗರ ಕೆಲವಾರು ಪ್ರದೇಶಗಳನ್ನು ವಶಪಡಿಸಿಕೊಂಡನು. ಆತನು ರಾಷ್ಟ್ರಕೂಟರ ವಿರುದ್ದ ಹೋರಾಡಿ ಗಂಗವಾಡಿಯು ಕಳೆದು ಕೊಂಡಿದ್ದ ಕೆಲವು ಭಾಗಗಳನ್ನು ಮತ್ತೆ ಗಳಿಸಿದನು. ಅನ್ಯಮತ ಸಹಿಷ್ಣುಗಳಾದ ಗಂಗರಸರು ಹಿಂದೂ, ಜೈನ ಧರ್ಮಗಳಿಗೆ ಉದಾರವಾಗಿ ಧನಕನಕಗಳನ್ನು ನೀಡಿ ಪ್ರೋತ್ಸಾಹಿಸಿದನು. ಬ್ರಾಹ್ಮಣರಿಗೆ ಅಗ್ರಹಾರಗಳನ್ನು ಕಟ್ಟಿಸಿಕೊಟ್ಟನು. ಜೈನರಿಗೆ ಜಿನಾಲಯಗಳನ್ನು, ಗುಹಾಲಯಗಳನ್ನು ನಿರ್ಮಿಸಿಕೊಟ್ಟನು.

ನೀತಿ ಮಾರ್ಗ ಎರೆಗಂಗ (ಕ್ರಿ.ಶ.853–870)

ಎರೆಗಂಗನು ಅಧಿಕಾರಕ್ಕೆ ಬರುತ್ತಲೆ ತನ್ನ ಸೈನ್ಯವನ್ನು ಅದರಲ್ಲೂ ವಿಶೇಷವಾಗಿ ಗಜಪಡೆಯನ್ನು ಬಲಪಡಿಸಿದನು. ಇದೇ ವೇಳೆಗೆ ಬಾಣರ ದೊರೆ ವಿಜಯಾದಿತ್ಯನು ಗಂಗವಾಡಿಯ ಕೆಲವು ಗ್ರಾಮಗಳನ್ನು ಆಕ್ರಮಿಸಿದನು. ಎರೆಗಂಗನು ಬಾಣರನ್ನು ಸದೆಬಡಿದು ಹಿಂದಕ್ಕಟ್ಟಿದನು. ರಾಷ್ಟ್ರಕೂಟರ ಪ್ರಬಲ ದೊರೆಯಾಗಿದ್ದ ಅಮೋಘವರ್ಷ ನೃಪತುಂಗನು ಗಂಗರ ವಿರುದ್ದ ಪ್ರಬಲ ಸೈನ್ಯವನ್ನು ಕಳುಹಿಸಿದನು. ನೀತಿ ಮಾರ್ಗ

ಎರೆಗಂಗನು ರಾಷ್ಟ್ರಕೂಟರ ಸೈನ್ಯವನ್ನು ಕೋಲಾರ ಜಿಲ್ಲೆಯ ರಾಜರಮಡು (ರಾಜಮಡು) ಎಂಬಲ್ಲಿ ಎದುರಿಸಿ ಸಂಪೂಣವಾಗಿ ಸೋಲಿಸಿದನು. ನೃಪತುಂಗನು ತನ್ನ ಸಾಮ್ರಜ್ಯವನ್ನು ದಕ್ಷಿಣ ಭಾರತವೇ ಅಲ್ಲದೆ ಉತ್ತರ ಭಾರತಕ್ಕೂ ವಿಸ್ತರಿಸಲು ಅವಣಿಸುತ್ತಿದ್ದನು. ಹೀಗಾಗಿ ಗಂಗರ ನೀತಿ ಮಾರ್ಗನ ಶೌರ್ಯ, ಪ್ರತಾಪವನ್ನು ಕಂಡು ಮೆಚ್ಚಿದ ಅಮೋಘವರ್ಷ ನೃಪತುಂಗನು ನೀತಿಮಾರ್ಗ ಎರೆಗಂಗನ ಮಗನಾದ ಭೂತಗನಿಗೆ ತನ್ನ ಮಗಳಾದ ಚಂದ್ರೋಬಲಬ್ಬೆಯನ್ನು ಕೊಟ್ಟು ವಿವಾಹ ಮಾಡಿದನು. ಇದು ಗಂಗರಿಗೆ ಸಂದ ಗೌರವ ಎಂದೇಳಬಹುದು. ದಶಕಗಳಿಂದ ಗಂಗರು ಹಾಗೂ ರಾಷ್ಟ್ರಕೂಟರ ನಡುವಿನ ಹೋರಾಟಕ್ಕೆ ವಿರಾವು ದೊರೆತಂತಾಯಿತು. (ಯುದ್ದ ವಿರಾಮ) ಎರೆಗಂಗನು ಹಿಂದೂ ಧರ್ಮ ಜೈನ ಧರ್ಮಗಳಿಗೆ ಉದಾರವಾಗಿ ಸಹಾಯ ಮಾಡಿದನು.

ಎರಡನೇ ರಾಜಮಲ್ಲ ಸತ್ಯವಾಕ್ಯ (ಕ್ರಿ.ಶ.870–907)

ವೀರನೂ ಶೂರನೂ ಆದ ಸತ್ಯ ವಾಕ್ಯನು ಬಾಣ, ಚೋಳ, ವೆಂಗಿ, ಚಾಲುಕ್ಯರ ವಿರುದ್ದ ಯುದ್ದ ಮಾಡಿ ಗೆಲುವನ್ನು ಸಾಧಿಸಿದನು. ರಾಷ್ಟ್ರಕೂಟರ ನಡುವೆ ಮಧುರ ಬಾಂಧವ್ಯವನ್ನು ಹೊಂದಿದ್ದನು. ರಾಷ್ಟ್ರಕೂಟರ ಪರವಾಗಿ ವೆಂಗಿ ಚಾಲುಕ್ಯರ ಮೂರನೆಯ ವಿಜಯಾದಿತ್ಯನ ಮೇಲೆ ಯುದ್ದ ಮಾಡಿದನು. ಗಂಗ ಸಂತತಿಯ ಉಪಖಾಖೆಯ ದೊರೆ ಇಮ್ಮಡಿ ಪೃಥ್ವಿಪತಿಯು ಸತ್ಯವಾಕ್ಯನ ವಿರುದ್ದವೇ ತಿರುಗಿಬಿದ್ದಾಗ ಅವನನ್ನು ಯಶಸ್ವಿಯಾಗಿ ಸೋಲಿಸಿ ಹಿಂದಕ್ಕಟ್ಟಿದನು. ಈತನ ನಂತರ ಎರೆಯಪ್ಪನು ಅಧಿಕಾರಕ್ಕೆ ಬಂದನು.

ಎರಡನೇ ರಾಜಮಲ್ಲ ಎರೆಯಪ್ಪ (ಕ್ರಿ.ಶ.907)

ಈತನು ಸೌಮ್ಯ ಸ್ವಭಾವದವನಾಗಿದ್ದು ರಾಜ್ಯವನ್ನು ಶಾಂತಿ ಸುಭಿಕ್ಷೆಯಿಂದ ನಡೆದುಕೊಂಡು ಹೋಗುವಂತೆ ಮಾಡಿದನು. ಯುದ್ಧ ಪ್ರಿಯನಲ್ಲ ಶಾಂತಿಪ್ರಿಯ, ಅಷ್ಟೇ ಅಲ್ಲದೆ ಅನ್ಯಮತ ಹಾಗೂ ಅನ್ಯ ಧರ್ಮ ಸಹಿಷ್ಣುವಾಗಿದ್ದನು.

ಎರಡನೇ ನೀತಿ ಮಾರ್ಗ ಎರೆಯಪ್ಪ (ಕ್ರಿ.ಶ.907–920)

ಈತನು ಯುವರಾಜನಾಗಿ, ರಾಜನಾಗಿ 13 ವರ್ಷಗಳ ಕಾಲ ಆಳ್ವಿಕೆ ಮಾಡಿದನೊಳಂಬ ದೊರೆ ವೀರಮಹೇಂದ್ರನು ಗಂಗರ ಪ್ರದೇಶಗಳನ್ನು ಮುತ್ತಿಗೆ ಹಾಕಿದುದರಿಂದ ರಾಜ ಎರಿಯುಪ್ಪನುನೊಳಂಬರ ವಿರುದ್ದ ಹೋರಾಡಿ ಹಿಮ್ಮೆಟ್ಟಿಸಿನು. ಮತ್ತೊಮ್ಮೆ ನೊಳಂಬ ದೊರೆ ವೀರ ಮಹೇಂದ್ರನು ಬೆಂಗಳೂರಿನ– ವರೆವಿಗೂದಾವಿಸಿ ಬಂದು ಗಂಗರ ಪ್ರದೇಶವನ್ನು ವಶಪಡಿಸಿಕೊಂಡಿದ್ದನು. ದೊರೆ ರಾಜಮಲ್ಲನು ತನ್ನ ದಂಡನಾಯಕನಾಗಿದ್ದ ನಾಗತ್ತರ ಎಂಬುವನ ನೇತೃತ್ವದಲ್ಲಿ (ದಂಡನಾಯಕ) ನೊಳಂಬರನ್ನು ಎದುರಿಸಿದ. ದಂಡನಾಯಕನಾಗಿದ್ದ ನಾಗತರನು

ವೀರಾವೇಶದಿಂದ ಹೋರಾಡಿ ನೊಳಂಬರನ್ನು ಹಿಮ್ಮೆಟಿಸಿದ. ನಂತರ "ತುಂಬೆಪಾಡಿ" ಎಂಬಲ್ಲಿ ನಡೆದ ಯುದ್ಧದಲ್ಲಿ ರಣರಂಗದಲ್ಲೇ ಅಸುನೀಗಿದನು. ಎದೆಗುಂದದ ಎರೆಯಪ್ಪನು ನೊಳಂಬ ದೊರೆ ಮಹೇಂದ್ರನನ್ನು ಕೊಂದನು. ತನ್ನ ನೆಚ್ಚಿನ ದಂಡನಾಯಕ "ನಾಗತ್ತರ"ನ ನೆನಪಿಗಾಗಿ ಬೆಂಗಳೂರು ಬಳಿಯ ಬೇಗೂರಿನಲ್ಲಿ (ದೇವಸ್ಥಾನದ ಬಳಿ) ಒಂದು ವೀರಗಲ್ಲನ್ನು ಹಾಕಿಸಿದನು. ಹಾಗೂ ಆತನ ಮಗ ಇರುಗಪ್ಪನನ್ನು ದಂಡನಾಯಕನನ್ನಾಗಿ ಮಾಡಿದನು. ಈ ಶಾಸನದ ವಿಶೇಷವೆಂದರೆ ಕರ್ನಾಟಕದ ರಾಜಧಾನಿ "ಬೆಂಗಳೂರು" ಎಂಬ ಹೆಸರು ಕ್ರಿ.ಶ. 9–10ನೇ ಶತಮಾನದಲ್ಲೇ ಉಲ್ಲೇಖಗೊಂಡಿರುವುದು. ಕೆಲವರು ಹೇಳುವ ಪ್ರಕಾರ 'ಬೆಂದಕಾಳೂರು ಬೆಂಗಳೂರು' ಆಯಿತು ಎನ್ನುವುದು ತಪ್ಪು. ಅವನ ಮಂತ್ರಿಗಳು ಹಾಗೂ ಉನ್ನತಾಧಿಕಾರಿಗಳಾಗಿದ್ದ ನಾಗಮರ್ಮ, ಗೋವಿಂದ, ಧರಸೇನ ಇನ್ನೂ ಮೊದಲಾದವರ ಹೆಸರುಗಳು ಶಾಸದಲ್ಲಿ ಉಲ್ಲೇಖವಾಗಿದೆ.

ನರಸಿಂಹದೇವ (ಕ್ರಿ.ಶ.920–925)

ನೀತಿ ಮಾರ್ಗ ಎರೆಯಪ್ಪನ ನಂತರ ಸಿಂಹಾಸನಕ್ಕೆ ಬಂದನು ಸುಸಂಸ್ಕೃತನಾಗಿದ್ದ ನರಸಿಂಹದೇವನು ಐದು ವರ್ಷಗಳ ಕಾಲ ಆಳ್ವಿಕೆ ಮಾಡಿ ಕ್ರಿ.ಶ. 925ರಲ್ಲಿ ಆತನ ಆಳ್ವಿಕೆ ಕೊನೆಗೊಂಡಿತು.

ಮೂರನೆಯ ರಾಜಮಲ್ಲ ಸತ್ಯವಾಕ್ಯ (ಕ್ರಿ.ಶ.925–939)

ನರಸಿಂಹ ದೇವನ ನಂತರ ಆತನ ಸಹೋದರನಾದ ರಾಜಮಲ್ಲನು ಆಳ್ವಿಕೆ ಮಾಡಿದನು. ಈತನ ಕಿರಿಯ ತಮ್ಮ ಇಮ್ಮಡಿ ಭೂತಗನು ನೀತಿ ಮಾರ್ಗ ಎರೆಯಪ್ಪ ರಾಷ್ಟ್ರಕೂಟ ದೊರೆ ಮೂರನೆ ಅಮೋಘವರ್ಷ ನೃಪತುಂಗನ ಕುಮಾರಿ ದೇವಕನಿಮ್ಮಡಿಯನ್ನು ವಿವಾಹವಾದನು ಅಲ್ಲಿಂದ ಸಹೋದರರ ನಡುವೆ ಸಿಂಹಾಸನಕ್ಕಾಗಿ ಕಲಹಗಳು ನಡೆದವು. ರಾಷ್ಟ್ರಕೂಟರ ಕೃಷ್ಣನ ಸಹಾಯದಿಂದ ಭೂತಗನು ತನ್ನ ಸಹೋದರನಾದ ಸತ್ಯವಾಕ್ಯನನ್ನು ಕೊಂದು ಅಧಿಕಾರಕ್ಕೆ ಬಂದನು.

ಎರಡನೆ ಭೂತಗ (ಕ್ರಿ.ಶ.939–960)

ಗಂಗ ದೊರೆಗಳಲ್ಲಿ ಶ್ರೀಪುರುಷನ ನಂತರ ದಕ್ಷಿಣ ಭಾರತದಲ್ಲೇ ಧೀರನೂ, ಶೂರನೂ ಆಗಿ ಪ್ರಾಖ್ಯಾತಿಗಳಿಸಿದ ರಾಜನೆಂದರೆ ಗಂಗರ ಎರಡನೇ ಭೂತಗ. ಈತನ ತಂದೆ ಎರೆಯಪ್ಪ ಇವನಿಗೆ ನರಸಿಂಹ, ರಾಚಮಲ್ಲ ಮತ್ತು ಭೂತಗ ಎಂಬ ಮೂರು ಜನ ಮಕ್ಕಳಿದ್ದರು. ಭೂತಗನು ಕಿರಿಯವನಾದರೂ ಅಧಿಕಾರದ ದಾಹವಿದ್ದಿತು. ತನ್ನ ಸಹೋದರರನ್ನು ಮಣಿಸಿ ಸಿಂಹಾಸನಕ್ಕೆ ಬಂದ (ಗಳಿಸಿದ) ಭೂತಗನು ತಮ್ಮ ಸಾಂಪ್ರದಾಯಿಕ ಶತ್ರುಗಳಾದ ರಾಷ್ಟ್ರಕೂಟರೊಂದಿಗೆ ವೈವಾಹಿಕ ಸಂಬಂಧವನ್ನು ಏರ್ಪಡಿಸಿದನು. ಇದರ ಫಲವಾಗಿ ಎರಡು ಒಕ್ಕಲಿಗೆ

ರಾಜಮನೆತನಗಳೊಂದಿಗೆ ಉತ್ತಮ ಭಾಂದವ್ಯ ಬೆಳೆದುದೇ ಅಲ್ಲದೆ ರಾಷ್ಟ್ರಕೂಟರು ತಮಗೆ ಸೇರಿದ್ದು ಪುಲಿಗೆರೆ, ಬೆಳವೂಲ, ಕಿಸುಗಾಡು, ಬಾಗೆ ನಾಡು ಎಂಬ ಇವೇ ಮೊದಲಾದ ಪ್ರದೇಶಗಳನ್ನು ಬಳುವಳಿ (ವರದಕ್ಷಿಣೆ) ಯಾಗಿ ಭೂತಗನಿಗೆ ನೀಡಿದರು. ಇದರೊಂದಿಗೆ ಗಂಗರ ಸಾಮ್ರಾಜ್ಯವು ಹುಬ್ಬಳ್ಳಿ, ಧಾರಾವಾಡ, ಬೆಳಗಾವಿಯವರೆಗೂ ಸಾಮ್ರಾಜ್ಯವು ವಿಸ್ತರಣೆಗೊಂಡಿತು. ಹೀಗೆ ಕರ್ನಾಟಕ ರಾಜಮನೆತನಗಳು ಒಂದಾಗಿ ತಮಿಳುನಾಡಿನ ಚೋಳರ, ಚೇರರ ವಿರುದ್ದ ಯುದ್ಧ ಮಾಡಿ ತಮ್ಮ ಸಾಮ್ರಾಜ್ಯನ್ನು ತಮಿಳು ನಾಡು ಪ್ರದೇಶಗಳಲ್ಲೂ ವಿಸ್ತರಿಸಲು ಇದು ಸಾಧ್ಯವಾಯಿತು.

ರಾಷ್ಟ್ರಕೂಟ ದೊರೆ ಮೂರನೆ ಅಮೋಘವರ್ಷ ನೃಪತುಂಗನು ಮರಣವಾದ ಬಳಿಕ ಆತನ ಮಗ ಮುಮ್ಮಡಿ ಕೃಷ್ಣನು ಅಧಿಕಾರಕ್ಕೆ ಬಂದನು. ಆತ ಗಂಗರ ಭೂತಗನ ಭಾವಮೈದುನನಾಗಿದ್ದನು. ಮುಮ್ಮಡಿ ಕೃಷ್ಣನು ತನ್ನ ರಾಜಧಾನಿಯಿಂದ ಹೊರಗಿದ್ದು ಬೇರೆ ಬೇರೆ ರಾಜ್ಯಗಳ ಮೇಲೆ ದಂಡ ಯಾತ್ರೆಯನ್ನು ಕೈಗೊಂಡಿದ್ದ ಸಮಯದಲ್ಲಿ ಅಲ್ಲಯ್ಯ ಎಂಬ ಸಾಮಂತನು ತನ್ನ ರಾಜನು ರಾಜಧಾನಿಯಲ್ಲಿ ಇಲ್ಲದ ಸಮಯದಲ್ಲಿ ದಾಳಿ ಮಾಡಿದನು. ಈ ವಿಷಯವು ಭೂತಗನಿಗೆ ತಿಳಿಯುತ್ತಲೆ ಸೇನಾ ಸಮೇತನಾಗಿ ಬಂದು ಶತ್ರುವನ್ನು ಧಮನ ಮಾಡಿ ಆತನಿಂದ ಗಜ, ತುರಗ, ಬೆಳ್ಗೊಡೆಯನ್ನು ಆತನಿಂದ ಪಡೆದುಕೊಂಡು ರಾಜಧಾನಿಯನ್ನು ಶತ್ರುಗಳಿಂದ ಪಾರು ಮಾಡಿದನು, ಸ್ವಲ್ಪದಿನ ಕಳೆಯುತ್ತಲೆ ಚೋಳರ ದೊರೆ ಪಾರಾಂತಕ ಮತ್ತು ಆತನ ಮಗ ಆದಿತ್ಯನು ಸೇನಾ ಸಮೇತರಾಗಿ ಕರ್ನಾಟಕದ ಗಡಿಗಳನ್ನು ಮುತ್ತಿದರು. ಗಂಗರ ಹಾಗೂ ರಾಷ್ಟ್ರಕೂಟರ ಪ್ರದೇಶಗಳ ಮೇಲೆ ದಾಳಿ ನಡೆಸ ತೊಡಗಿದರು. ಗಂಗರ ಜೊತೆಗೆ ಮತ್ತು ರಾಷ್ಟ್ರಕೂಟರ ಮುಮ್ಮಡಿ ಕೃಷ್ಣರು ಸೇನಾ ಸಮೇತರಾಗಿ ಬಂದು ಚೋಳರ ಸೈನ್ಯವನ್ನು ಎದುರಿಸಿದರು. ಕ್ರಿ.ಶ.949ರಲ್ಲಿ "ತಕ್ಕೋಂ" ಎಂಬಲ್ಲಿ ಘೋರ ಕದನವಾಯಿತು. ಚೋಳರ ಸೈನ್ಯ ಗಂಗರ ಮತ್ತು ರಾಷ್ಟ್ರಕೂಟರ ಸಂಯುಕ್ತ ಸೈನ್ಯವನ್ನು ಒಗ್ಗೂಡಿಸಿ ಗಂಗರ ವಿರುದ್ದ ಹೋರಾಡಿದನು. ಭೂತಗನು ಆದಿತ್ಯನ ಸೈನ್ಯವನ್ನು ಸೋಲಿಸಿದುದೇ ಅಲ್ಲದೆ ಆದಿತ್ಯನನ್ನು ಕೊಂದು ಹಾಕಿದನು. ಈ ಸಂಯುಕ್ತ ಸೈನ್ಯ ಮುಂದುವರಿದು ತಮಿಳುನಾಡಿನ ಕಂಚಿಯನ್ನು ಆಕ್ರಮಿಸಿದರು. ಚೋಳರ ಪಾರಾಂತಕನು ತಲೆಮರೆಸಿಕೊಂಡು ಕಂಚಿಯನ್ನು ಬಿಟ್ಟು ಓಡಿ ಹೋದನು. ಗಂಗ ದೊರೆ ಭೂತಗನು ರಾಜಧಾನಿಯಿಂದ ಬಹಳ ಕಾಲ ಹೊರ ಭಾಗದಲ್ಲಿ ಇದ್ದ ಕಾರಣದಿಂದ ಸಾಮಂತರು ಹಾಗೂ ನೊಳಂಬರು ಸೈನ್ಯಾಚರಣೆ ಮಾಡತೊಡಗಿದರು. ರಾಜಧಾನಿಗೆ ಹಿಂತಿರುಗಿದ ಭೂತಗನು ಶತ್ರುಗಳಿಂದ ರಾಜಧಾನಿಯನ್ನು ಮುಕ್ತಗೊಳಿಸಿದನು.

ಹೀಗೆ ಗಂಗರಲ್ಲಿಯೇ ಪ್ರಬಲ ದೊರೆಗಳಾದ ಭೂತಗನು ದಕ್ಷಿಣ ಭಾರತದಾದ್ಯಂತ ಗಂಗರ ಲಾಂಛನವನ್ನು ಹಾರಿಸಿದನು. ಗಂಗರ ಸಾಂಪ್ರದಾಯಿಕ ಶತ್ರುವಾದ ರಾಷ್ಟ್ರಕೂಟರೊಂದಿಗೆ ವೈವಾಹಿಕ ಒಪ್ಪಂದ ಮಾಡಿಕೊಳ್ಳಲಾಗಿ ಎರಡೂ ರಾಜ ಮನೆತನಗಳು ಒಂದಾಗಿ ಅನ್ಯುನ್ಯತೆಯಿಂದ ನಡೆದುಕೊಂಡು ಹೋಗುವಂತೆ ಮಾಡಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಭೂತಗನಿಗೆ "ಗಂಗ-ಗಂಗೇಯ, ಗಂಗ ನಾರಾಯಣ, ನನ್ನೀಯ ಗಂಗ ಇವೇ ಮೊದಲಾದ ಬಿರುದುಗಳಿದ್ದವು. ಒಟ್ಟಾರೆ ಹೇಳುವುದಾದರೆ ಗಂಗ ದೊರೆಗಳಲ್ಲೇ ಅದ್ವಿತೀಯ ಎನ್ನಬಹುದು.

ಮೂರನೇ ಮಾರಸಿಂಹ (ಕ್ರಿ.ಶ.960–975)

ಈತನು ಗಂಗದೊರೆಗಳಲ್ಲೇ ಪರಾಕ್ರಮಿ, ರಾಜಕಾರಣ ಮತ್ಸದ್ಧಿ, ಸಾಹಿತ್ಯ ಪೋಷಕ, ಕಲಾ ಪೋಷಕನಾಗಿ ಇತಿಹಾಸದಲ್ಲಿ ಶಾಶ್ವತವಾದಸ್ಥಾನ ಮಾನವನ್ನು ಗಳಿಸಿದ್ದಾನೆ. ಆದರೆ ಇತಿಹಾಸಕಾರರು ಈತನ ಸಾಧನೆಯನ್ನು ಮರೆತಂತಿದೆ. ಗಂಗರ ಸಾಂಪ್ರದಾಯಿಕ ಶತ್ರುಗಳಾದ ರಾಷ್ಟ್ರಕೂಟರೊಂದಿಗೆ ಉತ್ತಮ ಭಾಂದವ್ಯವನ್ನು ಇಟ್ಟುಕೊಂಡು ರಾಜ್ಯದಲ್ಲಿ ಶಾಂತಿ ಸುಭಿಕ್ಷೆನೆಲೆಸುವಂತೆ ಮಾಡಿದ.

ಗುಜರಾತಿನ ಮೇಲೆ ದಾಳಿ : ಹಿಂದೊಮ್ಮೆ ಗಂಗರ ಸಹಾಯದಿಂದ ರಾಷ್ಟ್ರಕೂಟರು ಗುಜರಾತಿನವರೆವಿಗೂ ತಮ್ಮ ರಾಜ್ಯವನ್ನು ವಿಸ್ತರಿಸಿ ಅಲ್ಲಿಗೆ ಪಾರಾಮಾರ ಸೀಯಕ ಎಂಬುವವನನ್ನು ತಮ್ಮ ಪ್ರತಿನಿಧಿಯನ್ನಾಗಿ ನೇಮಿಸಿದ್ದರು. ರಾಷ್ಟ್ರಕೂಟ ದೊರೆ ಕೃಷ್ಣನು ವಯೋ ಸಹಜ ಖಾಯಿಲೆಗೆ ತುತ್ತಾಗಿ ಸೈನ್ಯ ಮತ್ತು ಆಡಳಿತದ ಮೇಲೆ ನಿಯಂತ್ರಣವನ್ನು ಕಳೆದುಕೊಂಡ ವಿಷಯ ತಿಳಿಯುತ್ತಲೆ ಅತ್ತ ಗುಜರಾತಿನಲ್ಲಿದ್ದ ಪಾರಮಾರಸೀಯಕನು ಸ್ವತಂತ್ರ್ಯವನ್ನು ಘೋಷಿಸಿಕೊಂಡನು. ಇದರಿಂದ ಕೆರಳಿದ ರಾಷ್ಟ್ರಕೂಟ ದೊರೆ ಕೃಷ್ಣನು ತನ್ನ ಸಾಮಂತನಾಗಿದ್ದ ಪಾರಮಾರ ಸೀಯಕನನ್ನು ಶಿಕ್ಷಿಸುವಂತೆ ಗಂಗ ದೊರೆ ಮಾರಸಿಂಹನನ್ನು ಕೇಳಿಕೊಂಡನು. ಮಾರಸಿಂಹನು ಗಂಗರ ಹಾಗೂ ರಾಷ್ಟ್ರಕೂಟರ ಸಂಯುಕ್ತ ಸೈನ್ಯವನ್ನು ಗುಜರಾತ್ ಕಡೆಗೆ ನಡೆಸಿದನು. ಸಂಯುಕ್ತ ಸೈನ್ಯವನ್ನು ಕಂಡ ಪಾರಮಾರ ಸೀಯಕನು ಹೆದರಿದನು. ಮಾರಸಿಂಹನ ಸಂಯುಕ್ತ ಸೈನ್ಯ ಸೀಯಕನ ಸೇನೆಯನ್ನು ಸೋಲಿಸಿತು. ಸೀಯಕನು ವಿಧಿಯಿಲ್ಲದೆ ಶರಣಾಗತನಾಗ ಬೇಕಾಯ್ತು. ಗುಜರಾತನ ಉಜ್ಜಯನಿಯಲ್ಲಿ ಕರ್ನಾಟಕದ ಧ್ವಜವನ್ನು ಹಾರಿಸಿದ ಕೀರ್ತಿ ಗಂಗ ದೊರೆ ಮಾರಸಿಂಹನಿಗೆ ಸಲ್ಲುತ್ತದೆ. ಈ ವಿಜಯದಿಂದ ಹರ್ಷಗೊಂಡ ರಾಷ್ಟ್ರಕೂಟ ದೊರೆ ಕೃಷ್ಣನುಗಂಗ ದೊರೆ ಮಾರಸಿಂಹನನ್ನು ಸತ್ಕರಿಸಿ ಚಿನ್ನದ ಛತ್ರಿಗೆ ವಜ್ರಗಳಿಂದ ಅಲಂಕೃತಗೊಂಡ ಸುಂದರವಾದ ಛತ್ರಿ, ಚಾಮರವನ್ನು ನೀಡಿ ಮಾರಸಿಂಹನಿಗೆ "ಗೂರ್ಜರ ರಾಜ" ಎಂಬ ಬಿರುದನ್ನು ನೀಡಿ ಗೌರವಿಸಿದನು.

ನೊಳಂಬರಅಂತ್ಯ ಕಾಣಿಸಿದ ಮಾರಸಿಂಹ : ರಾಷ್ಟ್ರಕೂಟರ ಮೂರನೆಯ ಕೃಷ್ಣನು ವೃದಾಪ್ಯದಿಂದ ಮರಣಹೊಂದಿದನು. ಆತನ ನಂತರ ಆತನ ಮಗನಾದ ಖೊಟ್ಟಿಗನು ಸಿಂಹಾಸನಕ್ಕೆ ಬಂದನು. ಆತ ಅಸಮರ್ಥನಾಗಿದ್ದನು. ಇಂತಹ ಸನ್ನಿವೇಶವನ್ನು ಉಪಯೋಗಿಸಿಕೊಂಡ ನೊಳಂಬರು ರಾಷ್ಟ್ರಕೂಟರ ಹಾಗೂ ಗಂಗರ ರಾಜ್ಯಗಳ ಮೇಲೆ ದಾಳಿ ಮಾಡಿದರು. ಈ ನಡುವೆ ಉತ್ತರ ಭಾಗಗಳಾದ ಗುಜರಾತ್ ಮತ್ತು ಉಜ್ಜಯನಿಯ ದಾಳಿಯ ವಿಜಯವನ್ನು ಅನುಭವಿಸಿದ ಗಂಗರ ಸೈನ್ಯವು ಉನ್ಮಾದಗೊಂಡಿದ್ದರು, ಮಾರಸಿಂಹನು ನೊಳಂಬರನ್ನು ಸಂಪೂಣವಾಗಿ ಸದೆಬಡಿಯಲು ತೀರ್ಮಾನಿಸಿ ಬೃಹತ್ ಸೈನ್ಯದೊಂದಿಗೆ ನೊಳಂಬರ ವಿರುದ್ದ ಸೈನ್ಯಾಚರಣೆ ನಡೆಸಿದನು. ಗಂಗರ ಸೈನ್ಯ "ಚಾವುಂಡರಾಯ" ಮತ್ತು ಅಮಾವಾಸ್ಯೆ ಎಂಬ ದಳಪತಿಗಳ ನೇತೃತ್ವದಲ್ಲಿ ನೊಳಂಬರ ಸೈನ್ಯವನ್ನು ಮಣ್ಣು ಮುಕ್ಕಿಸಿತು. ನೊಳಂಬರ ನಾಯಕರಲ್ಲಿ ಕೆಲವರು ಸೆರೆ ಸಿಕ್ಕರೆ ಮತ್ತೆ ಕೆಲವರು ರಣರಂಗದಲ್ಲಿ ಮಡಿದರು. ಮತ್ತೆ ಕೆಲವರು ರಣರಂಗದಿಂದ ತಲೆ ಮರೆಸಿಕೊಂಡು ಓಡಿ ಹೋದವರು. ಇನ್ನೆಂದಿಗೂ ಗಂಗರ ಸಹವಾಸಕ್ಕೆ ಬರಲಿಲ್ಲ. ಒಟ್ಟಾರೆ ಹೇಳುವುದಾದರೆ ನೊಳಂಬರು ಸಂಪೂಣವಾಗಿ ವಿನಾಶ ಹೊಂದಿದರು. ಮಾರಸಿಂಹನು "ನೊಳಂಬಕುಲಾಂತಕ" ಎಂಬ ಬಿರುದು ಪಡೆದನು. ಮಾರಸಿಂಹನು ರಣರಂಗದಲ್ಲಿ ಶತ್ರುಗಳಿಗೆ ದೈತ್ಯ ಆನೆಯಾಗಿ ಹಾಗೂ ಕೆಲವರಿಗೆ ಸಿಂಹದಂತೆ ಘರ್ಜಿಸುತ್ತಾ ಮೇಲೆ ಬಿದ್ದು ಶತ್ರುಗಳ ರುಂಡವನ್ನು ಚಂಡಾಡಿದ ಎಂಬುದಾಗಿ ಕುಡಲೂರು ತಾಮ್ರ ಶಾಸನವು ತಿಳಿಸುತ್ತದೆ. (ಕುಡಲೂರು ತಾಮ್ರ ಶಾಸನ M.A.R – 1921, para 50).

ಪಾರಮಾರ ಎರಡನೆ ಸಿಯಾಕನ ವಿರುದ್ದ ಯುದ್ಧ ಹಾಗೂ ರಾಷ್ಟ್ರಕೂಟರ ಅಂತ್ಯ

ಮಾರಸಿಂಹನು ತನ್ನ ರಾಜಧಾನಿಗೆ ಹಿಂತಿರುಗಿ ಬರುತ್ತಲೆ ರಾಷ್ಟ್ರಕೂಟರ ರಾಜ್ಯವಾದ ಮಾನ್ಯಖೇಟಕ್ಕೆ ಗುಜರಾತಿನಿಂದ ಪಾರಮಾರ ಎರಡನೆ ಸಿಯಕ ಹಾಗೂ ಆತನ ಸಾಮಂತರು ಸ್ನೇಹಿತರ ಸಂಯುಕ್ತ ದಾಳಿ ಮಾಡಿತು. ಮಾರಸಿಂಹನು ಸೇನಾ ಸಮೇತನಾಗಿ ಹೋಗಿ ರಾಷ್ಟ್ರಕೂಟ ರಕ್ಷಣೆಗೆ ನಿಂತನು. ರಾಷ್ಟ್ರಕೂಟ ದೊರೆ ಖೊಟ್ಟಿಗನು ಈ ಸಮಯದಲ್ಲಿ ಅಸುನೀಗಿದನು. ಮಾರಸಿಂಹನು ಎಂದಿನಂತೆ ಶತ್ರುಗಳನ್ನು ಹಿಮ್ಮೆಟ್ಟಿಸಿದನು. ಮಾರಸಿಂಹನು ತನ್ನ ರಾಜಧಾನಿಗೆ ವಾಪಸ್ಸು ಬಂದ ಬಳಿಕ ಅತ್ತ ರಾಷ್ಟ್ರಕೂಟರ ರಾಜವಂಶದಲ್ಲಿ ಸಿಂಹಾಸನಕ್ಕಾಗಿ ಒಳಜಗಳ ಪ್ರಾರಂಭವಾಯ್ತು. ಇದೇ ಸಮಯಕ್ಕೆ ಕಲ್ಯಾಣಿ ಚಾಲುಕ್ಯರ ತೈಲಪನು ರಾಷ್ಟ್ರಕೂಟರ ರಾಜಧಾನಿಯಾದ ಮಾನ್ಯಖೇಟವನ್ನು ವಶಪಡಿಸಿಕೊಂಡನು. ತನ್ನ ಕಣ್ಣೆದುರೇ ರಾಷ್ಟ್ರಕೂಟರು ವಿನಾಶ ಹೊಂದುವುದನ್ನು ಕಂಡು ಚಿಂತಾಕ್ರಾಂತನಾದನು.

ಮಾರಸಿಂಹನು ತನ್ನ ಜೀವಿತ ಕಾಲದ ಬಹು ಭಾಗವನ್ನು ರಣರಂಗದಲ್ಲೇ ಕಳೆಯಬೇಕಾಯ್ತು. ಸೋಲು, ಗೆಲವು, ಅತಾಶೆಯಿಂದ ಬಳಲಿದ ಮಾರಸಿಂಹನು ತನ್ನ ಅಳಿಯನೂ ಹಾಗೂ ಮುಮ್ಮಡಿ ಕೃಷ್ಣರಾಜನ ಮೊಮ್ಮಗನೂ ಆದ ಮೂರನೆ ಇಂದ್ರರಾಜನಿಗೆ ಪಟ್ಟಕಟ್ಟಿದನು. ತನ್ನ ಉಳಿದ ಕಾಲವನ್ನು ಜೈನ ಧರ್ಮ, ಬೌದ್ಧ ಧರ್ಮ, ಹಿಂದೂಧರ್ಮದ ಜಿನಾಲಯ, ಸ್ತೂಪ, ಚೈತ್ರ ದೇವಾಲಯಗಳಿಗೆ ಉದಾರವಾಗಿ ದಾನ ಧರ್ಮ ಮಾಡಿದ. ತನ್ನ ಕೊನೆಯ ಕಾಲವನ್ನು ಆಧ್ಯಾತ್ಮಿಕ ಜೀವನದಲ್ಲೇ ಕಳೆದು ಅಂತಿಮವಾಗಿ ಬಂಕಾಪುರಕ್ಕೆ ತೆರಳಿ ಅಲ್ಲಿದ್ದ ಅಜಿತಸೇನ ಭಟ್ಟಾರಕ ಮುನಿಯಿಂದ ಧೀಕ್ಷೆ ಪಡೆದು ಸಲ್ಲೇಖನ ವ್ರತವನ್ನಾಚರಿಸಿ ಕ್ರಿ.ಶ.974ರಲ್ಲಿ ಇಹಲೋಕ ತ್ಯಜಿಸಿದ.

ನಾಲ್ಕನೆಯ ರಾಜಮಲ್ಲ ಸತ್ಯವಾಕ್ಯ (ಕ್ರಿ.ಶ.975–985)

ಈತ ಮಾರಸಿಂಹನಂತೆ ಪ್ರಬಲ ದೊರೆಯಲ್ಲದಿದ್ದರೂ ಈತನು ಮಾಡಿದ ಒಳ್ಳೆಯ ಕೆಲಸವೆಂದರೆ ಮಾರಸಿಂಹನ ಕಾಲದಲ್ಲಿ ದಂಡ ನಾಯಕನಾಗಿದ್ದ ಚಾವುಂಡರಾಯನನ್ನು ಮಂತ್ರಿಯಾನ್ನಾಗಿ ಮಾಡಿದ. ಚಾವುಂಡ ಘಿರಾಯನು ದಂಡ ನಾಯಕನಾಗಿ, ಮಂತ್ರಿಯಾಗಿ, ಧರ್ಮಬೀರುವಾಗಿದುದೇ ಅಲ್ಲದೆ ತನ್ನನ್ನು ದಂಡನಾಯಕನನ್ನಾಗಿ ನಂತರ ಮಂತ್ರಿಯನ್ನಾಗಿ ಮಾಡಿದ ತನ್ನ ಸ್ವಾಮಿ ಪ್ರಭು ರಾಜಮಲ್ಲನ ಹೆಸರನ್ನು ಶಾಶ್ವತವಾಗಿ ಉಳಿಸಬೇಕೆಂಬ ಉದ್ದೇಶದಿಂದ ಶ್ರವಣಬೆಳಗೊಳದಲ್ಲಿ "ಗೊಮ್ಮಟೇಶ್ವರನ" (57.5 ಅಡಿ) ಏಕಶಿಲಾ ವಿಗ್ರಹವನ್ನು ಕಡೆಸಿದನು. ಇದಕ್ಕೆ ತಗಲಿದ ಅಪಾರ ಧನದಾನ್ಯಗಳನ್ನು ಗಂಗರ ರಾಜಮಲ್ಲನು ನೀಡಿ ಪೋಷಿಸಿದನು. (ಆದರೆ ಹೆಸರು ಬಂದದ್ದು ಚಾವುಂಡರಾಯನಿಗೆ) ಇತ್ತ ನಾಲ್ಕನೆಯ ರಾಜಮಲ್ಲನು ಕ್ರಿ.ಶ.985ರಲ್ಲಿ ಮೃತನಾದನು.

ಸಾಹಿತ್ಯ ಪೋಷಕನಾಗಿ ರಾಜಮಲ್ಲ

ರಾಜಮಲ್ಲನು ಸಾಹಿತ್ಯಾಭಿಮಾನಿಯು, ಸಾಹಿತ್ಯ ಪೋಷಕನೂ ಆಗಿದ್ದನು. ಈತನ ಆಸ್ಥಾನದಲ್ಲಿ ಕವಿಗಳಾದ ರನ್ನ, ಗುಣಭದ್ರ, ಕೇಶೀರಾಜ, ನಾಗವರ್ಮ, ಚಾವುಂಡರಾಯ, ಅಜಿತಸೇನ ಇವರೇ ಮುಂತಾದವರಿದ್ದರು. (History of the Western Gangas by Dr, Sheik Ali Page 153 PP 1).

ರಾಜಮಲ್ಲ ಮತ್ತು ಗೊಮ್ಮಟೇಶ್ವರ ವಿಗ್ರಹ ಮೂರ್ತಿ

ನಾಲ್ಕನೆಯ ರಾಜಮಲ್ಲನು ಶತ್ರುಗಳ ಬಾಧೆಯಿಂದ ರಾಜ್ಯವನ್ನು ಸಮರ್ಥವಾಗಿ ತಡೆದನು. ಈತನ ತಂದೆ ಮಾರಸಿಂಹನಂತೆ ಜೈನ ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದನು. ಜೈನ ಮುನಿ ಅಜಿತಸೇನ ಭಟ್ಟಾರಕ ಸ್ವಾಮೀಜಿಯ ಪ್ರಭಾವಕ್ಕೆ ಒಳಗಾದನು. ಜೈನ ಮುನಿಗಳ ಆದೇಶದಂತೆ ಬಾಹುಬಲಿಯ ದಿವ್ಯ

ಮೂರ್ತಿಯನ್ನು ಕಡೆಸಲು ತೀರ್ಮಾನಿಸಿದನು. ಅದರಂತೆ ತನ್ನ ನೆಚ್ಚಿನ ಮಹಾಮಂತ್ರಿಯೊಂದಿಗೆ ದೀರ್ಘ ಸಮಾಲೋಚನೆ ನಡೆಸಿ ಅದಕ್ಕೆ ತಗುಲಬಹುದಾದ ಐವತ್ತು ಸಾವಿರ ಗದ್ಯಾಣವನ್ನು (ಅಂದಿನ ಕಾಲದ ಹಣ) ನೀಡಿದನು. ಇಡೀ ಜವಾಬ್ದಾರಿಯನ್ನು ಮಹಾಮಂತ್ರಿ ಚಾವುಂಡರಾಯನಿಗೆ ವಹಿಸಿದನು. ಆತ ಸ್ಥಪತಿಯೂ, ಶಿಲ್ಪಿಯೂ ಆದ "ಅರಿಷ್ಟನೇಮಿ"ಯನ್ನು ಈ ಕೆಲಸಕ್ಕೆ ನೇಮಿಸಿದನು. ಕೆಲವು ವರ್ಷಗಳ ತರುವಾಯ ಅಂದರೆ ಕ್ರಿ.ಶ.983ರಲ್ಲಿ ಶ್ರವಣಬೆಳಗೊಳದ ದೊಡ್ಡ ಬೆಟ್ಟದಲ್ಲಿ 57.5 ಅಡಿಗಳ ಮೂರ್ತಿಯು ಪ್ರತಿಷ್ಠಾಪನೆಗೊಂಡಿತು. (ಆದರೆ ಮೂರ್ತಿಯನ್ನು ಕಡೆಸಿದ ಕೀರ್ತಿಯು ಮಹಾಮಂತ್ರಿಯಾಗಿದ್ದ ಚಾವುಂಡರಾಯನಿಗೆ ಸಂದಿತು). ಆ ದಿವ್ಯ ಮೂರ್ತಿಯನ್ನು ನೋಡಲು ಹೊರ ರಾಜ್ಯಗಳಿಂದ ಭಕ್ತರು ಬರತೊಡಗಿದರು. ಅದರಲ್ಲಿ ದಿಗಂಬರರು (ದಿಕ್ಕುಗಳನ್ನು ಅಂಬರ (ವಸ್ತ್ರ) ವನ್ನಾಗಿಸಿಕೊಂಡವರು. ತೀರ್ಥಂಕರರು (ಜಿನ) ಕಂತಿ (ಪರವ್ರಾಜಕಿ/ಸನ್ಯಾಸಿನಿ) ಮಹಾಯತಿ (ಹಿರಿಯ ಮುನಿ) ಶ್ರವಣ (ಜೈನ ಮುನಿ) ಶ್ರಾವಕ (ಗೃಹಸ್ಥ) ಶ್ರಾವಕಿ (ಗೃಹಸ್ಥೆ) ಹೀಗೆ ಭಕ್ತಕೋಟಿಯೇ ವೈರಾಗ್ಯ ಮೂರ್ತಿಯನ್ನು ನೋಡಲು ಬರತೊಡಗಿದರು. ಗೊಮ್ಮಟೇಶ್ವರನನ್ನು ಕಡೆಸಿದ ಕೀರ್ತಿ ಗಂಗ ದೊರೆ ನಾಲ್ಕನೆಯ ರಾಜಮಲ್ಲನಿಗೆ ಸೇರುತ್ತದೆ.

ಒಟ್ಟಾರೆ ಹೇಳುವುದಾದರೆ 700 ವರ್ಷಗಳ ಕಾಲ ಸುದೀರ್ಘವಾಗಿ ಆಳಿದ ಕೀರ್ತಿ ಗಂಗರಿಗೆ ಸಲ್ಲುತ್ತದೆ. ಇವರು ಉತ್ತಮ ಆಡಳಿತಜ್ಞರಾಗಿ, ಕಲಾಬಿಜ್ಞರಾಗಿ, ಕಲೋಪಾಸಕರಾಗಿ, ಅನ್ಯಮತ ಸಹಿಷ್ಣುಗಳಾಗಿ ಈ ನಾಡಿಗೆ ಕೊಡುಗೆ ನೀಡಿದ್ದಾರೆ, ಶಾಶ್ವತವಾಗಿ ಉಳಿದಿರುವ ವಾಸ್ತುಶಿಲ್ಪವೆಂದರೆ ತಲಕಾಡಿನ ಪಂಚಲಿಂಗ ದೇಗುಲಗಳು ಹಾಗೂ ವಿಶ್ವಪ್ರಸಿದ್ಧ ಶ್ರವಣಬೆಳಗೊಳದಲ್ಲಿರುವ ಗೊಮ್ಮಟೇಶ್ವರ ಏಕಶಿಲಾ ವಿಗ್ರಹ ಗಂಗರ ವಂಶಸ್ಥರಾದ "ಗಂಗಡಕಾರ ಒಕ್ಕಲಿಗರು" ಇಂದಿಗೂ ಅರ್ಥಿಕ, ಶೈಕ್ಷಣಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಡುಗೆ ನೀಡುತ್ತಾ ಬರುತ್ತಿದ್ದಾರೆ.

ಚವೂಂಡರಾಯ/ಚಾಮುಂಡರಾಯ

ಕಿ.ಶ.10 ಶತಮಾನದಲ್ಲಿ ಹುಟ್ಟಿದ ಚವೂಂಡರಾಯ/ಚಾಮುಂಡರಾಯನು ಯೋಧಾಗ್ರೇಸರನಾಗಿ, ಮಂತ್ರಿಯಾಗಿ, ಕವಿಯಾಗಿ, ಗೊಮ್ಮಟೇಶ್ವರ/ಬಾಹುಬಲಿ ಬೃಹತ್ ವಿಗ್ರಹ ಸ್ಥಾಪನೆಯ ಹೊಣೆ ಹೊತ್ತು ಪೂರ್ತಿಗೊಳಿಸುವ ಮೂಲಕ ಗಂಗ ದೊರೆಗಳಾದ ಮಾರಸಿಂಹ, ನಾಲ್ಕನೆ ರಾಕಮಲ್ಲ ಮತ್ತು ರಕ್ಕಸಗಂಗ ಹೀಗೆ ಮೂರು ಜನರ ಕಾಲದಲ್ಲಿ ದಂಡನಾಯಕನಾಗಿ ಮಂತ್ರಿಯಾಗಿ, ಮಹಾ ಮಂತ್ರಿಯಾಗಿ ಸೇವೆ ಸಲ್ಲಿಸಿದನು. ಬಹುಷ: ಚವುಂಡರಾಯ ನಿಲ್ಲದಿದ್ದರೆ ಕಿ.ಶ. ಹತ್ತನೆಯ ಶತಮಾನದಲ್ಲೇ ಗಂಗ ಸಾಮ್ರಾಜ್ಯವು ಕೊನೆಗೊಳ್ಳುತ್ತಿತ್ತೇನೂ ಅನ್ನುವಷ್ಟು ಇತಿಹಾಸದಲ್ಲಿ ಸ್ಥಾನ

ಪಡೆದಿದ್ದಾನೆ. ಗಂಗರ ಸಾಂಪ್ರದಾಯಿಕ ಶತ್ರುಗಳಾದ ರಾಷ್ಟ್ರಕೂಟರ, ನೊಳಂಬರ, ಚೋಳರ ದಾಳಿಗಳನ್ನು ತಡೆದು ಗಂಗ ಸಾಮ್ರಾಜ್ಯದ ರಕ್ಷಣಾಗೋಡೆಯಂತೆ ಕೆಲಸ ಮಾಡಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಅನನ್ಯ ಜೈನ ಧರ್ಮೀಯನಾದ ಈತನ ಗುರು ಅಜಿತನಾಥ ಭಟ್ಟಾರಕ ಸ್ವಾಮೀಜಿ.

ಉಚ್ಚಂಗಿಯ ಪಾಂಡ್ಯ ರಾಜಾದಿತ್ಯನನ್ನು ಸೋಲಿಸಿ "ರಣರಂಗ ಸಿಂಹ" ಎಂಬ ಬಿರುದನ್ನು ನಾಲ್ಕನೆಯ ರಾಜಮಲ್ಲನ ಕಾಲದಲ್ಲಿ ಗೋವಿಂದರಸ, ಪಾಂಚಾಲ ರಾಜ ಮತ್ತು ಮಧುರಾಚಯ್ಯ ಇವರೇ ಮುಂತಾದ ಶತ್ರುಗಳು ನುಗ್ಗಿ ಬಂದಾಗ ಚಾವುಂಡರಾಯನು ಅವರ ವಿರುದ್ದ ವೀರಾವೇಶದಿಂದ ಹೋರಾಡಿ ಶತ್ರುಗಳನ್ನು ಮಣಿಸಿ ಸಮರ ಪರಶುರಾಮ್, ವೈರಿಕುಲ ಕಾಲದಂಡ, ಇವೇ ಮುಂತಾದ ಬಿರುದುಗಳನ್ನು ಪಡೆದನು. 4ನೇ ರಾಜಮಲ್ಲ ಸತ್ಯವಾಕ್ಯ ದೊರೆಯು ಚವುಂಡ ರಾಯನಿಗೆ "ರಾಯ" ಎಂಬ ಬಿರುದನ್ನು ದಯಪಾಲಿಸಿದನು.

ಕನ್ನಡ ಸಾಹಿತ್ಯಕ್ಕೂ ತನ್ನದೇ ಆದ ಕೊಡುಗೆಯನ್ನು ಕೊಟ್ಟಿದ್ದಾನೆ. ವ್ಯಾಕರಣ, ತರ್ಕಶಾಸ್ತ್ರ, ವೇದ ವೇದಾಂತ, ಗಣಿತ ಶಾಸ್ತ್ರದಲ್ಲಿ ಪಾಂಡಿತ್ಯವನ್ನು ಹೊಂದಿದ್ದನು. "ಚಾವುಂಡ ರಾಯ ಪುರಾಣ" ಎಂಬ ಗ್ರಂಥವನ್ನು ಬರೆದನು. ನೇಮಿಚಂದ್ರ ಕವಿಯ "ಗೊಮ್ಮಟಸಾರ" ಎಂಬ ಗ್ರಂಥಕ್ಕೆ ಭಾಷ್ಯವನ್ನು ರಚಿಸಿದನು. ಬಾಹುಬಲಿ/ ಗೊಮ್ಮಟೇಶ್ವರ ವಿಗ್ರಹ ನಿರ್ಮಾಣ.

ಗಂಗ ದೊರೆ ರಾಜಮಲ್ಲನ ಆದೇಶದಂತೆ ಶ್ರವಣಬೆಳಗೊಳದ ದೊಡ್ಡ ಬೆಟ್ಟದ ಮೇಲೆ 58 ಅಡಿ ಎತ್ತರದ ಬಾಹುಬಲಿ/ಗೊಮ್ಮಟೇಶ್ವರ ವಿಗ್ರಹವನ್ನು ನಿರ್ಮಿಸುವ ಜವಾಬ್ದಾರಿಯನ್ನು ಹೊತ್ತು ಅದನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಮೂಲಕ ಇತಿಹಾಸದಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದಿದ್ದಾನೆ. ಹೀಗೆ ರಣರಂಗದಲ್ಲಿ ಶತ್ರುಗಳ ಪಾಲಿಗೆ ರಣಚಂಡಿಯಾಗಿ, ಸಾಹಿತಿಗಳ ಪಾಲಿಗೆ ಉದ್ದಾಮ ಪಂಡಿತನಾಗಿ, ಜೈನ ಧರ್ಮೀಯರ ಪಾಲಿಗೆ ಧರ್ಮಬೀರುವಾಗಿ ಕಂಗೊಳಿಸಿದ ಚವುಂಡರಾಯನು ಕಿ.ಶ. 990ರಲ್ಲಿ ವಿಧಿವಶನಾದನು. ಗಂಗರ ಶತ್ರುಗಳು ಗಂಗ ಸಾಮ್ರಾಜ್ಯವನ್ನು ಮುತ್ತಲು ಎಡೆತಾಕ ತೊಡಗಿದರು. ಗಂಗ ದೊರೆಗಳಲ್ಲಿ ರಕ್ಕಸಗಂಗನೇ ಕೊನೆಯ ಅರಸನೆಂದೇಳಬಹುದು.

ರಕ್ಕಸ ಗಂಗ (ಕ್ರಿ.ಶ.984–1024)

ಗಂಗರ ರಕ್ಕಸಗಂಗನು ಸಿಂಹಾಸನಕ್ಕೆ ಬರುವ ವೇಳೆಗೆ ಇಡೀ ದಕ್ಷಿಣ ಭಾರತದಾದ್ಯಂತ ರಾಜಕೀಯ ಸ್ಥಿತ್ಯಾಂತರಗಳು ನಡೆಯ ತೊಡಗಿದವು. ಉತ್ತರ ಕರ್ನಾಟಕದ ಭಾಗದಲ್ಲಿ ಕಲ್ಯಾಣಿ ಚಾಲುಕ್ಯರು ತಮಿಳುನಾಡು ಭಾಗದಲ್ಲಿ ಚೋಳರ

ರಾಜರಾಜಚೋಳ ಹಾಗೂ ಆತನ ಮಗ ರಾಜೇಂದ್ರ ಚೋಳರು ಇಡೀ ದಕ್ಷಿಣ ಭಾರತವನ್ನೇ ಆಕ್ರಮಿಸಿಕೊಳ್ಳಲು ಶಪಥ ಮಾಡಿದರು. "ತಕ್ಕೋಲಂ" ಯುದ್ಧದಲ್ಲಿ ಗಂಗರಿಂದ ಸೋತು ಶರಣಾಗತರಾಗಿದ್ದ ಚೋಳರು ಗಂಗರ ವಿರುದ್ದ ಸೇಡು ತೀರಿಸಿಕೊಳ್ಳಲು ಹಪಹಪಿಸುತ್ತಿದ್ದರು. ರಾಜರಾಜಚೋಳನ ದಕ್ಷ ಸೇನಾನಿಗಳು ಕ್ರಿ.ಶ. 991ರ ಸಮಯದಲ್ಲಿ ಗಂಗರಿಗೆ ಸೇರಿದ್ದ ಕುವಲಳ (ಕೋಲಾರ) ಪ್ರದೇಶವನ್ನು ಗೆದ್ದುಕೊಂಡರು. ಕ್ರಿ.ಶ.997ರಲ್ಲಿ ಹೊಸಕೋಟೆಗೆ ಸೇರಿದಂತೆ ಇಂದಿನ ಬೆಂಗಳೂರಿಗೆ ಸೇರಿದ ಪ್ರದೇಶಗಳನ್ನು ಮುತ್ತಿಗೆ ಹಾಕಿ ವಶಪಡಿಸಿಕೊಂಡನು. ಚೋಳರ ಸೈನ್ಯವನ್ನು ತಡೆಯುವ ಶಕ್ತಿ ಗಂಗರ ರಕ್ಕಸ ಗಂಗನಿಗಿರಲಿಲ್ಲ. ಕೊನೆಗೆ ಕ್ರಿ.ಶ.1004ರಲ್ಲಿ ಗಂಗರ ರಾಜಧಾನಿ ತಲಕಾಡನ್ನು ವಶಪಡಿಸಿಕೊಂಡರು. ಅದಕ್ಕೂ ಮೊದಲು ಚೋಳರ ಬೃಹತ್ ಸೈನ್ಯ ಇಂದಿನ ಬೆಂಗಳೂರಿಗೆ ಸಮೀಪವಿರುವ ಹೊಸಕೋಟೆಯ (35 ಕಿ.ಮೀ) ಬಳಿ ಬೀಡು ಬಿಟ್ಟಿದ್ದ ಬಗ್ಗೆ ಶಾಸನೊಕ್ತ ಆಧಾರಗಳಿವೆ. (ಹೊಸಕೋಟೆ 3-ಇ.ಸಿ.9) ಗಂಗರು ದುರ್ಬಲಗೊಳ್ಳುತ್ತಿದ್ದಂತೆ ಚೋಳರು ಅರಕಲಗೂಡು, ಶ್ರೀರಂಗಪಟ್ಟಣ, ನೆಲಮಂಗಲ, ನಿಡುಗಲ್ ಸೇರಿದಂತೆ ಗಂಗರ ಹಲವಾರು ಪ್ರದೇಶಗಳನ್ನು ಚೋಳರು ವಶಪಡಿಸಿಕೊಂಡರು. (ಕೋಲಾರ, ಇ.ಸಿ.10.ಪಿ.ವಿ.23-24) ಗಂಗರ ಕೊನೆಯ ದೊರೆ ರಕ್ಕಸಗಂಗನು ತಲಕಾಡಿನ ಪತನಾ ನಂತರವೂ ಹಲವು ಕಾಲ ಬದುಕಿದ್ದನು. "ಛಂದೋಬುದಿ" ಗ್ರಂಥದ ಪ್ರಕಾರ ಕ್ರಿ.ಶ.1025ರ ತನಕ ಚೋಳರ ಸಾಮಂತನಾಗಿ ಆಳ್ವಿಕೆ ಮಾಡಿದ ಬಗ್ಗೆ ತಿಳಿಯುತ್ತದೆ. ಇಷ್ಟೇ ಅಲ್ಲದೆ ಶಾಸನೊಕ್ತ ಆಧಾರಗಳೂ ಸಿಕ್ಕಿವೆ. (ಶ್ರೀನಿವಾಸಪುರ, 59, ಇ.ಸಿ.10 ನರಸೀಪುರ 35, ಇ.ಸಿ. 8 ಪು. 136, ಎಂ.ಎ.ಆರ್. 1909-10, ಪ್ಯಾರ 62) ಗಂಗರ ಮುಖ್ಯ ಶಾಖೆಯು ರಕ್ಕಸ ಗಂಗನ ಕಾಲಕ್ಕೆ ಕೊನೆಗೊಂಡರು. ಗಂಗರ ಉಪ ಶಾಖೆಗಳು ಕಲ್ಯಾಣಿ ಚಾಲುಕ್ಯರ, ಹೊಯ್ಸಳರ, ವಿಜಯನಗರ ಸಾಮ್ರಾಟರ ಆಳ್ವಿಕೆಯ ಕಾಲದಲ್ಲಿ ಆಶ್ರಿತ ರಾಜರಾಗಿದ್ದರು. ವಿಜಯನಗರದ ಸಾಮ್ರಾಟ ಕೃಷ್ಣದೇವರಾಯನು ಉಮ್ಮತ್ತೂರನ್ನು (ಶಿವಸಮುದ್ರ) ವಶಪಡಿಸಿಕೊಳ್ಳುವುದರೊಂದಿಗೆ ಅಂತ್ಯಕಂಡಿತು.

ತಲಕಾಡು ಗಂಗರ ವಂಶವೃಕ್ಷ

ದಡಿಗ (ಕೊಂಕಣಿವರ್ಮ ಮಾಧವ)

1ನೇ ಮಾಧವ (370–390)

ಹರಿವರ್ಮ (390–410)

|

ವಿಷ್ಣುಗೋಪ (410–430)

|

2ನೇ ಮಾಧವ (430–466)

|

ಅವನೀತ (466–495)

|

ದುರ್ವಿನೀತ (495–535)

|

ಮುಷ್ಕರ ವರ್ಮ (535–585)

|

ಶ್ರೀ ವಿಕ್ರಮ (585–633)

|

ಭೂ ವಿಕ್ರಮ (633–679)

|

ಶಿವಮಾರ (679–725)

|

ಶ್ರೀ ಪುರುಷ (725–788)

|

ಶಿವಮಾರ (788–817)

|

ರಾಜಮಲ್ಲ ಸತ್ಯಾಶ್ರಯ (817–853)

|

ನೀತಿಮಾರ್ಗ (853–869)

|

ರಾಜಮಲ್ಲ (870–907)

|

2ನೇ ಎರೆಯಪ್ಪ ನೀತಿಮಾರ್ಗ (907–919)

|

ನರಸಿಂಹದೇವ (919–925)

|

3ನೇ ರಾಜಮಲ್ಲ (925–935)

|

2ನೇ ಬೂತುಗ (935–960)

|

ಮರುಳದೇವ (960–963)

|

3ನೇ ಮಾರಸಿಂಹ (963–974)

|

ಪಂಚಲದೇವ (974–977)

|

4ನೇ ರಾಜಮಲ್ಲ (974–985)

|

ರಕ್ಕಸಗಂಗ (985–1024)

ಗಂಗಡಕಾರ ಒಕ್ಕಲಿಗರು

ಕರ್ನಾಟಕದಲ್ಲಿ ನೆಲೆಸಿರುವ ಒಕ್ಕಲಿಗರಲ್ಲಿ (ಎಲ್ಲಾ ಪಂಗಡಗಳು ಸೇರಿ) ನಾನಾ ಭಾಷೆಗಳನ್ನಾಡುತ್ತಾರೆ ಎಂದು ಈಗಾಗಲೇ ತಿಳಿಸಿದೆ. ಆದರೆ ಗಂಗಡಕಾರ ಒಕ್ಕಲಿಗರು ನೆಲೆಸಿರುವ ಮಂಡ್ಯ, ಮೈಸೂರು, ಹಾಸನ, ಚಿಕ್ಕಮಗಳೂರು, ತುಮಕೂರಿನ ಕೆಲವು ಭಾಗಗಳಲ್ಲಿ ಕನ್ನಡ ಭಾಷೆಯಲ್ಲದೆ ಬೇರೆ ಭಾಷೆ ಬರುವುದಿಲ್ಲ. ನಿಜಕ್ಕೂ ಅಚ್ಚ ಕನ್ನಡಿಗರು. ಕ್ರಿ.ಶ.4ನೇ ಶತಮಾನದಿಂದ (ಒಕ್ಕಲಿಗರಿಗೆ 1600 ವರ್ಷಗಳ ಇತಿಹಾಸವಿದೆ) ಕ್ರಿ.ಶ.11ನೇ ಶತಮಾನದವರೆಗೆ ಆಳ್ವಿಕೆ ಮಾಡಿದ ತಲಕಾಡು ಗಂಗರ ವಂಶಸ್ಥರೇ ಗಂಗಡಿಕಾರ ಒಕ್ಕಲಿಗರು ಎಂಬುದಾಗಿ ಇತಿಹಾಸಕಾರರಾದ ಜೇಮ್ಸ್ ಮ್ಯಾನರ್, ಇ. ಥರ್ಸ್ಟನ್, ಪ್ರೊ. ಬಿ. ಷೇಕ್ ಅಲಿ ಇವರೇ ಮುಂತಾದವರು ಸಾಬೀತು ಪಡಿಸಿದ್ದಾರೆ. ತಲಕಾಡು ಗಂಗರು ತಮ್ಮ ರಾಜ್ಯವನ್ನು "ಗಂಗವಾಡಿ ತೊಂಬತ್ತಾರು ಸಾವಿರ" ಎಂದು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಈ ರಾಜ್ಯದಲ್ಲಿ ವಾಸಿಸುತ್ತಿದ್ದ ಹಾಗೂ ವ್ಯವಸಾಯ ಮಾಡುತ್ತಿದ್ದ ಜನರನ್ನು 'ಗಂಗಡಕಾರರು" ಎಂದು ಇತಿಹಾಸಕಾರರಾದ ಅನಂತಕೃಷ್ಣ ಅಯ್ಯರ್ ಮತ್ತು ಥರ್ಸ್ಟನ್ ತಮ್ಮ ಸಂಶೋಧನೆಯಿಂದ ವ್ಯಕ್ತಪಡಿಸಿದ್ದಾರೆ. ಥರ್ಸ್ಟನ್‌ರವರು "Even today a large agricultural section of the population which inhabits around Mysore, Mandya, Hasan and Bangalore districts are known as Gaṇgadikaras,

a very important hint that the founders of the Gangas must have been agriculturists" ಎಂದಿದ್ದಾರೆ.

ಗಂಗಡಕಾರ ಒಕ್ಕಲಿಗರು ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿಯೇ ಅಲ್ಲದೆ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ.

ಗಂಗಡಕಾರ ಒಕ್ಕಲಿಗರು ಮೂಲತಹ ಕೃಷಿಕರು–ವ್ಯವಸಾಯ ಮತ್ತು ಪಶುಸಂಗೋಪನೆಯನ್ನೇ ತಮ್ಮ ಮುಖ್ಯ ಕಸುಬನ್ನಾಗಿಸಿಕೊಂಡಿರುವ ಇವರು ಹಿಂದೊಮ್ಮೆ ವ್ಯವಸಾಯದ ಜೊತೆ ಜೊತೆಗೆ ನಾಡಪ್ರಭುಗಳಾಗಿ, ಪಾಳೆಯಗಾರರಾಗಿ, ಸೈನಿಕರಾಗಿ, ಸೇನಾಧಿಕಾರಿಗಳಾಗಿ ತನ್ನ ನಾಡಿನ ರಕ್ಷಣೆಗೆ ದುಡಿದಿದ್ದಾರೆ. ಇವರನ್ನು ಕೃಷಿ ಕಡಣಾಯಕ (Agro martials) ಎನ್ನುತ್ತಿದ್ದರು ಎಂದು ನಾಡಿನಾದ್ಯಂತ ದೊರೆತ ಶಾಸನ ಮತ್ತು ವೀರಗಲ್ಲುಗಳಿಂದ ತಿಳಿಯುತ್ತದೆ. ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆಯ ಶಾಸನ (IV ಕೃ.ಪೆ. 25)ದಲ್ಲಿ ಗಂಗಡಕಾರ ಒಕ್ಕಲಿಗರವನು ಎಂದು ಉಲ್ಲೇಖಿಸಿದೆ.

ಹೀಗೆ ಐತಿಹಾಸಿಕ ನೆಲೆ ಹಿನ್ನೆಲೆಯುಳ್ಳ ಗಂಗಡಕಾರ ಒಕ್ಕಲಿಗರು ಇತಿಹಾಸದ ಕಾಲಘಟ್ಟದಲ್ಲಿ ನಡೆ, ನುಡಿ, ಆಚಾರ, ವಿಚಾರ, ಧರ್ಮವನ್ನು ಪಾಲಿಸಿದರು. ಜೈನ, ಶೈವ, ವೈಷ್ಣವ ಪಂಥ ಇಲ್ಲವೆ ಧರ್ಮಾಚರಣೆಗೆ ಮುಂದಾದರು. ಹಿಂದೊಮ್ಮೆ ಜೈನಧರ್ಮವು ನಮ್ಮ ರಾಜ್ಯದಲ್ಲಿ ಪ್ರಬಲವಾಗಿದ್ದಾಗ ಜೈನಧರ್ಮಕ್ಕೆ ಪ್ರೋತ್ಸಾಹ ಹಾಗೂ ಪ್ರಾಮುಖ್ಯತೆಯನ್ನು ನೀಡಿದ್ದರು. ಉದಾ: ಮೂರನೆ ರಾಚಮಲ್ಲನ ಕಾಲದಲ್ಲಿ ನಿರ್ಮಾಣವಾದ ವಿಶ್ವಪ್ರಸಿದ್ಧ ಗೊಮ್ಮಟೇಶ್ವರನ ಮತ್ಥಳಿ ಹಾಗೂ ನಾಡಿನಾದ್ಯಂತ ನಿರ್ಮಾಣವಾದ ಜೈನ ಬಸದಿಗಳು ತನ್ನ ಜೀವಿತದ ಕೊನೆಯ ಕಾಲವನ್ನು ಸಲ್ಲೇಖನ ವ್ರತದೊಂದಿಗೆ ಅಮರಳಾದ ಶಾಂತಲ, ನಂತರದ ಕಾಲದಲ್ಲಿ ಶೈವ ಮತ್ತು ವೈಷ್ಣವ ಧರ್ಮಾಚರಣೆಗೆ ನಿಂತರು. ಹಾಸನ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಗಂಗಡಕಾರ ಮೂಲದವರನ್ನು ಮೂಲ ಒಕ್ಕಲಿಗರು ಇಲ್ಲವೆ ಮುಳ್ಳು ಒಕ್ಕಲಿಗರೆನ್ನುತ್ತಾರೆ (ಮುಳ್ಳೊಕ್ಕಲಿಗರು). ಇವರು ಶೈವಧರ್ಮೀಯರು (ಚುಂಚನಗಿರಿಯ ಭೈರವೇಶ್ವರನಿಗೆ ನಡೆದುಕೊಳ್ಳುತ್ತಾರೆ). ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯಲ್ಲಿದ್ದ (ತೊಣ್ಣೂರು) ಶ್ರೀ ಶ್ರೀ ಶ್ರೀ ರಾಮಾನುಜಾಚಾರ್ಯರು ವೈಷ್ಣವ ಪಂಥವನ್ನು ಪ್ರಚಾರ ಮಾಡಿದರು. ಅವರ ಅನುಯಾಯಿಗಳಾದವರನ್ನು ದಾಸಜನ ಇಲ್ಲವೆ ದಾಸ ಒಕ್ಕಲಿಗರು (ದಾಸೊಕ್ಕಲಿಗರು) ಎಂದು ಕರೆಯಲಾಯ್ತು. ಇವರು ತಿರುಪತಿ ತಿಮ್ಮಪ್ಪನ ಭಕ್ತರು. ಹೀಗೆ ಹಾಸನ ಜಿಲ್ಲೆಯಲ್ಲೇ ಒಕ್ಕಲಿಗರಲ್ಲಿ ಎರಡು ಪಂಗಡಗಳಾಯಿತು. ಹಳೇ ತಲೆಮಾರಿನ ಜನ ಇಂದಿಗೂ ಈ ಎರಡು ಪಂಗಡಗಳ ನಡುವಿನ ವಿವಾಹ

ಭಾಂದವ್ಯಕ್ಕೆ ಅವಕಾಶ ನೀಡುತ್ತಿಲ್ಲ.

ಗಂಗಡಕಾರ ಒಕ್ಕಲಿಗರಲ್ಲಿಯೂ ಗೋತ್ರಗಳು ಇಲ್ಲವೆ ಬಳಿಗಳು ಇಲ್ಲವೆ ಸೂತ್ರಗಳು (ಬೆಡಗು) ಇವೆ. ಇವರಲ್ಲಿ ಪ್ರಧಾನವಾಗಿ ಎರಡು ಗುಂಪುಗಳಾಗಿ ವಿಂಗಡಿಸಿದ್ದಾರೆ. ಅವುಗಳೇ 1) ಪೆಟ್ಟಿಗೆಯವರು 2) ಬುಜ್ಜಣಿಗೆಯವರು ಎಂದು. ಗಂಗಡಕಾರ ಒಕ್ಕಲಿಗರಲ್ಲಿ ಬಹುತೇಕ ಜನರಿಗೆ ತಮ್ಮಲ್ಲಿ ಗೋತ್ರಗಳು ಇಲ್ಲವೆ ಬಳಿಗಳಿವೆ ಎಂದು ತಿಳಿದಿಲ್ಲ. ಆದರೆ ಮದುವೆ ಸಮಾರಂಭಗಳಲ್ಲಿ ಮಾತ್ರ ಗೋತ್ರಗಳು ಇಲ್ಲವೆ ಬಳಿಗಳನ್ನು ನೆನೆಪಿಸಿಕೊಳ್ಳುತ್ತಾರೆ (ಹಳೆಯ ತಲೆಮಾರಿನ ಜನ). ಇವರಲ್ಲಿ 1) ಧಾರೆಯವರು 2) ವೀಳ್ಯದವರು ಎಂದು ಎರಡು ಗುಂಪುಗಳು. ಪೆಟ್ಟಿಗೆ ಮತ್ತು ಬುಜ್ಜಣಿಗೆ ಇವೆರಡನ್ನೂ ಬಿದಿರಿನಿಂದ ಮಾಡಿದ ವಸ್ತುಗಳಾಗಿರುತ್ತದೆ. ಬಿದಿರನ್ನು ಪೆಟ್ಟಿಗೆಯ ಆಕಾರದಲ್ಲಿ ಮಾಡುವುದು. ಅದೇ ಬಿದಿರನ್ನು ಬುಟ್ಟಿಯ ಆಕಾರದಲ್ಲಿ ಹೆಣೆದರೆ ಅದೇ ಬುಜ್ಜಣಿಗೆ (ಬುಟ್ಟಿ / ಪುಟ್ಟಿ) ಮದುವೆಯ ದಿನ ಗಂಡಿನ (ವರ) ಕಡೆಯವರು ದಿಬ್ಬಣ ಬರುವಾಗ ತಾವು ನಂಬಿರುವ ಪೆಟ್ಟಿಗೆ ಇಲ್ಲವೆ ಬುಜ್ಜಣಿಗೆ (ಬುಟ್ಟಿ / ಪುಟ್ಟಿ) ತರುವುದರ ಮೂಲಕ ಅವರ ಮೂಲವನ್ನು ಗುರ್ತಿಸಬಹುದು. ಮುಳ್ಳು ಒಕ್ಕಲಿಗರು ಮತ್ತು ದಾಸ ಒಕ್ಕಲಿಗರು ಗಂಗಡಕಾರ ಮೂಲದಿಂದಲೇ ಬಂದವರು. ತಮ್ಮ ತಮ್ಮ ನಂಬಿಕೆ ಮತ್ತು ಸಂಪ್ರದಾಯದಂತೆ ಪೆಟ್ಟಿಗೆಯವರೇ ವೀಳ್ಯದವರು ಮತ್ತು ಬುಜ್ಜಣಿಗೆಯವರೆ ಧಾರೆಯವರು.

ಗಂಗಡಿಕಾರ ಒಕ್ಕಲಿಗರಲ್ಲಿರುವ ಗೋತ್ರಗಳು / ಬಳಿಗಳು

ಗಂಗಡಕಾರ ಒಕ್ಕಲಿಗರಲ್ಲಿರುವ ಎಲ್ಲಾ ವರ್ಗಗಳು ಉಪಪಂಗಡಗಳಲ್ಲಿ ಒಟ್ಟು 42 ಗೋತ್ರಗಳು / ಬಳಿಗಳಿವೆ. ಅವುಗಳೆಂದರೆ :

1. ಅಳವಿ	10. ಹೂವ್ವು	19. ತೆನೆ
2. ಆನೆ	11. ಕಳ್ಳಿ	20 ವಾಲೆ
3 ಆವಿ	12. ಕಸ್ತೂರಿ	21. ಅಂಚೆ
4. ಬಚ್ಚೆಹಳ	13. ಕೊಮ್ಮೆ	22. ಅಯ್ಯಲು
5. ಬೆಳ್ಳಿ	14. ಕೋವೆ	23. ಬಳಮೆ
6. ಚಿನ್ನದ	15. ಮಾಲೆ	24. ಬೆರಳು
7. ಎಮ್ಮೆ	16. ಮಣಿ	25. ಛತ್ರಿ
8. ಗುಡಿ	17. ಮುಚ್ಚಳ	26. ದಾಲಬಂದ್ರ
9. ಹೊಲೂರು	18. ಸಾಮೆ	27. ಏಣಿ

28. ಹಸುಬೆ	33. ಕೊತ್ತಿ	38. ಸಾವಂತಿ
29. ಹೊಂಗೆ	34. ಮದನ	39. ಚಂದ್ರ
30. ಕಜ್ಜಾಯ	35. ಮಲ್ಲಿಗೆ	40. ಉಮ್ಮಾರ
31. ಕಂಬ	36. ಮೋಟು	41. ವಲ್ಲಿ
32. ಕೋಲು	37. ಮುತ್ತು	42. ಅತ್ತಿ

ಇವೇ ಮುಂತಾದವು.

ಈ ಮೇಲಿನ 42 ಗೋತ್ರಗಳು ಇಲ್ಲವೆ ಬಳಿಗಳನ್ನು ಗಮನಿಸಿದರೆ ಜನಾಂಗದ ಹಿರಿಯರು ಸ್ವಗೋತ್ರದಲ್ಲಿ ಮದುವೆ ಮಾಡುವುದನ್ನು ತಪ್ಪಿಸುವ ಉದ್ದೇಶದಿಂದ ಹೀಗೆ ಗುರ್ತಿಸಿಕೊಂಡಿರಬಹುದು. ಈ ಗೋತ್ರಗಳು ಮರ, ಗಿಡ, ಹೂಬಳ್ಳಿ, ಲೋಹ ತಾವು ಬಳಸುತ್ತಿರುವ ವಸ್ತುಗಳು ಇವೇ ಮುಂತಾದವುಗಳನ್ನೇ ಬಳಿಗಳು ಎಂದು ಕರೆದುಕೊಂಡಿದ್ದಾರೆ. ಅನಂತಕೃಷ್ಣ ಅಯ್ಯರ್ ಮತ್ತು ಹೆಚ್.ವಿ. ನಂಜುಂಡಯ್ಯನವರ "ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್" ಗ್ರಂಥದಲ್ಲಿ ಬಳಿಗಳ ಬಗ್ಗೆ ಉಲ್ಲೇಖಿಸಿದ್ದಾರೆ.

ಒಕ್ಕಲಿಗರ ಉಪ ಪಂಗಡಗಳಾದ ಮೊರಸು ಒಕ್ಕಲಿಗರು, ರೆಡ್ಡಿಗಳು ಮತ್ತು ಕುಂಚಟಿಗರಲ್ಲಿ ಬಳಿಗಳು ಇಲ್ಲವೆ ಗೋತ್ರಗಳನ್ನು ದೇವಸ್ಥಾನಗಳಲ್ಲಿ ಅರ್ಚನೆ ಮಾಡಿಸುವಾಗ, ನಾಮಕರಣ, ಹುಟ್ಟಿದಹಬ್ಬ ಇವೇ ಮುಂತಾದ ಕಡೆ ಅತಿಯಾಗಿ ಬಳಸುತ್ತಾರೆ. ಆದರೆ ಗಂಗಡಕಾರ ಒಕ್ಕಲಿಗರಲ್ಲಿ ಬಹುತೇಕರಿಗೆ ಗೋತ್ರ ಇಲ್ಲವೆ ಬಳಿಗಳ ಬಗ್ಗೆ ಶೇ.99ರಷ್ಟು ಅರಿವಿಲ್ಲ ಹಾಗೂ ಬಳಕೆಯಲಿಲ್ಲ. ಅವರಿಗೆ ತಿಳಿದಿರುವುದು ಪೆಟ್ಟಿಗೆಯವರು ಹಾಗೂ ಬುಜ್ಜಣಿಗೆಯವರು ಎಂದು ಮಾತ್ರ. ಹಿಂದೊಮ್ಮೆ ಸಮಾರಂಭ ಒಂದರಲ್ಲಿ ನಮ್ಮ ಜನಾಂಗದ ಮೇರು ವ್ಯಕ್ತಿಯು, ಸಾಹಿತಿಯೂ ಆದ ಡಾ. ಹೆಚ್.ಎಲ್. ನಾಗೇಗೌಡರವರನ್ನು ಗಂಗಡಕಾರ ಒಕ್ಕಲಿಗರಲ್ಲಿ ಗೋತ್ರಗಳಿವೆ ಎಂದು ಯಾರೋ ಪ್ರಶ್ನೆ ಮಾಡಿದಾಗ ಆಶ್ಚರ್ಯ ವ್ಯಕ್ತಪಡಿಸಿದನ್ನು ಇಲ್ಲಿ ಉಲ್ಲೇಖಿಸಬಹುದು.

ನಮ್ಮ ಸಮುದಾಯದ ಹಿರಿಯರಿಗೆ ಒಕ್ಕಲಿಗರಲ್ಲಿ ನೂರಾರು ಪಂಗಡಗಳು ಉಪಪಂಗಡಗಳು ಇವೆ ಎಂದು ತಿಳಿದಿದ್ದರೂ ತಾವೆಲ್ಲರೂ ಒಂದೇ ಮೂಲ ಇಲ್ಲವೆ ಕುಲಕಸುಬಿಗೆ ಸೇರಿದವರು ಎಂದು ತಿಳಿದಿದ್ದರೂ ಮದುವೆ ಮುಂಜಿಯಂತಹ ಶಾಶ್ವತ ಭಾಂದವ್ಯ ಇಲ್ಲವೆ ಬೆಸುಗೆಗೆ ಅವಕಾಶ ನೀಡುತ್ತಿಲ್ಲ. ಬಹಳ ಹಿಂದೆ ಒಬ್ಬ ವ್ಯಕ್ತಿ ತನ್ನ ಮಗನಿಗೆ ತನ್ನ ಮಗಳ ಮಗಳನ್ನು ಇಲ್ಲವೆ ತಂಗಿಯ, ಅಕ್ಕನ ಮಗಳನ್ನು ಮದುವೆ ಮಾಡಿಸುವ ವಾಡಿಕೆ ಇದ್ದಿತು. ಕಾರಣವೇನೆಂದರೆ ತನ್ನ ಇಳಿವಯಸ್ಸಿನಲ್ಲಿ

ಬೇರೆಯ ಮನೆಯ ಹೆಣ್ಣುಮಗಳು ತಮ್ಮನ್ನು ಚೆನ್ನಾಗಿ ನೋಡಿ ಕೊಳ್ಳುವುದಿಲ್ಲ-ವೆಂಬುದು ಅವರ ಭಾವನೆ. ಇತ್ತೀಚೆಗೆ ಇದು ಸ್ವಲ್ಪ ಕಡಿಮೆ ಆಗಿದೆ. ಇಂದು ಪ್ರಾದೇಶಿಕವಾರು ಮದುವೆಗೆ ಒತ್ತುಕೊಡುತ್ತಿದ್ದಾರೆ. ಅದೇನೆಂದರೆ ಮೈಸೂರು ಪ್ರದೇಶದ ಇಲ್ಲವೆ ಕೋಲಾರ, ಮಂಗಳೂರು, ಕೊಡಗು, ಪುತ್ತೂರು ಹೀಗೆ ಆಯಾ ಪ್ರದೇಶದ ಹೆಣ್ಣು ಮಕ್ಕಳನ್ನು ಅದೇ ಪ್ರದೇಶದ ವರನಿಗೆ ಕೊಟ್ಟು ವಿವಾಹ ಮಾಡುವುದಾಗಿದೆ. ಆಯಾ ಪ್ರದೇಶಗಳಲ್ಲಿರುವವರು ಅಲ್ಲಿಯೇ ಸಂಬಂಧವನ್ನು ಕುದುರಿಸುತ್ತಾರೆ. ಇದಕ್ಕೆ ಕಾರಣವೇನೆಂದರೆ ಆಚಾರ, ವಿಚಾರ, ನಂಬಿಕೆ, ತಾವು ನಂಬಿರುವ ಮನೆದೇವರು, ಧರ್ಮ ಎಲ್ಲಕ್ಕಿಂತ ಮಿಗಿಲಾಗಿ ಭಾಷೆಯು ತಡೆಗೋಡೆಯಂತೆ ನಿಂತಿದೆ. ಮಂಗಳೂರಿನಲ್ಲಿ ತುಳು, ಕೊಂಕಣಿ, ಕೊಡಗು, ಪುತ್ತೂರು, ಸುಳ್ಯ ಭಾಗಗಳಲ್ಲಿ ಅರೆಭಾಷೆ, ಕೋಲಾರದಲ್ಲಿ ತೆಲುಗು, ಸತ್ಯಮಂಗಲ, ಊಟಿ, ಕೆ.ಆರ್.ನಗರ, ಗುಂಡ್ಲುಪೇಟೆ ಭಾಗಗಳಲ್ಲಿ ತಮಿಳು ಭಾಷೆಗಳು, ಇವುಗಳು ನಮ್ಮ ರಾಜ್ಯ ಹಾಗೂ ನೆರೆಹೊರೆಯ ರಾಜ್ಯಗಳಾದ ಆಂಧ್ರ, ತಮಿಳುನಾಡು, ಕೇರಳ ಇವೇ ಮೊದಲಾದ ದೂರದ ಪ್ರದೇಶಗಳೊಂದಿಗೆ ಒಕ್ಕಲಿಗರು ವೈವಾಹಿಕ ಭಾಂದವ್ಯ ಮೂಡಿಸಲು ಸಾಧ್ಯವಾಗುತ್ತಿಲ್ಲ. ತಮಿಳುನಾಡಿನ ಕೊಯಮತ್ತೂರು, ಕುಪ್ಪಂ, ಹೊಸೂರು, ಡೆಂಕಣಿಕೋಟೆ, ಊಟಿ, ಸತ್ಯಮಂಗಲ ಆಂಧ್ರದ ಹಿಂದೂಪುರ, ಅನಂತಪುರ, ಮದನಪಲ್ಲಿ ಹೀಗೆ ನೆರೆಹೊರೆಯ ರಾಜ್ಯಗಳಲ್ಲಿರುವ ಒಕ್ಕಲಿಗರಿಗೂ ನಮಗೂ ಸಂಬಂಧವಿಲ್ಲ ಎಂದು ತೀರ್ಮಾನಿಸಿದ್ದಾರೆ ಇದು ತಪ್ಪು. ಆದರೆ ಬ್ರಾಹ್ಮಣರೂ ಸೇರಿದಂತೆ ಬೇರೆ ಬೇರೆ ಸಮುದಾಯದವರು ಈ ತೆರನಾದ ಅಡೆತಡೆಗಳನ್ನು ದಾಟಿ ವಿವಾಹ ಭಾಂದವ್ಯವನ್ನು ಮೂಡಿಸುತ್ತಿದ್ದಾರೆ. ರಾಮನಗರದ ಬ್ರಾಹ್ಮಣ ಸ್ನೇಹಿತರೊಬ್ಬರು ತಮ್ಮ ಮಗಳನ್ನು ದೆಹಲಿಯಲ್ಲಿ ನೆಲೆಸಿರುವ ಪಂಜಾಬ್ ಮೂಲದ ವರನಿಗೆ ಕೊಟ್ಟು ಅವರ ಸಂಪ್ರದಾಯದಂತೆ ವಿವಾಹ ಮಾಡಿರುವ ಉದಾಹರಣೆ ಇದೆ. ಮುಂದೊಂದು ದಿನ ಮೈಸೂರಿನ ಒಕ್ಕಲಿಗ ವಧು ಇಲ್ಲವೆ ವರ ಹರಿಯಾಣದ ಪಾಟಿದಾರ್, ಪಟೇಲ್ ಇಲ್ಲವೆ ಕುರ್ಮಿ (ಇವರೆಲ್ಲಾ ಪಂಜಾಬ್, ಹರಿಯಾಣದ ಒಕ್ಕಲಿಗರು) ಮನೆತನದ ಸಂಬಂಧ ಹೊಂದಬೇಕು. ಆಗಾದಲ್ಲಿ ಮಾತ್ರ ಒಕ್ಕಲಿಗ ಸಮುದಾಯವು ದೇಶದಲ್ಲಿ ಪ್ರಬಲ ಸಮುದಾಯವಾಗಬಲ್ಲದು.

ದಾಸ ಒಕ್ಕಲಿಗರು (ಮೂಲ ಗಂಗಡಕಾರ ಒಕ್ಕಲಿಗರು)

ಹಳೇ ಮೈಸೂರು ಭಾಗವಾದ ಹಾಸನ-ಚಿಕ್ಕಮಗಳೂರು ಭಾಗಗಳಲ್ಲಿ ನೆಲೆಸಿರುವ ಗಂಗಡಕಾರ ಒಕ್ಕಲಿಗರ ಪಂಗಡದವರೇ ಆದ ಕೆಲವರು ಮುಳ್ಳು ಒಕ್ಕಲಿಗರು ಮತ್ತು ದಾಸ ಒಕ್ಕಲಿಗರು ಎಂದು ಎರಡು ಕವಲುಗಳಾಗಿ ಒಡೆದುಹೋಗಿದೆ. ಇವರಲ್ಲಿ ದಾಸ ಒಕ್ಕಲಿಗರ ಬಗ್ಗೆ ತಿಳಿಯೋಣ. ಈ ಮೇಲ್ಕಂಡ ಎರಡು ಪಂಗಡಗಳು ಇಲ್ಲವೆ ಗುಂಪುಗಳಲ್ಲಿ ಆಚರಣೆಯ ಹಿನ್ನೆಲೆಯಲ್ಲಿ ತಮ್ಮನ್ನು

ಮುಳ್ಳು ಹಾಗೂ ದಾಸ ಎಂದು ಗುರ್ತಿಸಿಕೊಂಡಿದ್ದಾರೆ. ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ತಮಿಳುನಾಡಿನಿಂದ ಕರ್ನಾಟಕದ ಹಾಸನಭಾಗದಲ್ಲಿ ಆಳ್ವಿಕೆ ಮಾಡುತ್ತಿದ್ದ ಹೊಯ್ಸಳ ದೊರೆಗಳ ಮೇಲೆ ಪ್ರಭಾವ ಬೀರಿದ ಶ್ರೀ ರಾಮಾನುಜಾಚಾರ್ಯರು ವೈಷ್ಣವ ಧರ್ಮಪ್ರಚಾರ ಮಾಡಿದರು. ಶ್ರೀಗಳ ಪ್ರಭಾವಕ್ಕೆ ಒಳಗಾದ, ಗಂಗಡಕಾರ ಒಕ್ಕಲಿಗರು ಶ್ರೀವೈಷ್ಣವ ಅಂದರೆ ವಿಷ್ಣುವನ್ನು ಪೂಜಿಸತೊಡಗಿದರು. ಆ ಭಾಗದ ಜನ ಕಾಲಾನಂತರ ವಿಷ್ಣು ಇಲ್ಲವೆ ತಿರುಪತಿ ತಿಮ್ಮಪ್ಪನಿಗೆ ನಡೆದುಕೊಳ್ಳತೊಡಗಿದರು. ಇವರನ್ನು ದಾಸ ಒಕ್ಕಲಿಗರೆಂದು ಕರೆಯಲಾಯಿತು. ಇವರು ಶ್ರದ್ಧಾಭಕ್ತಿಯಿಂದ ತಿರುಪತಿ ತಿಮ್ಮಪ್ಪನಿಗೆ ನಡೆದುಕೊಳ್ಳುತ್ತಾರೆ. ವರ್ಷಕ್ಕೆ ಒಮ್ಮೆಯಾದರೂ ದಾಸಯ್ಯನ ವೇಷಧರಿಸಿ ಮನೆಮನೆಗೆ ತೆರಳಿ ಭಿಕ್ಷೆ ಎತ್ತಿ ತಂದು ತಮ್ಮ ಮನೆದೇವರಾದ ತಿರುಪತಿ ತಿಮ್ಮಪ್ಪನನ್ನು ಪೂಜಿಸುತ್ತಿದ್ದರು. ಮದುವೆ, ನಾಮಕರಣ ಇವೇ ಮುಂತಾದ ಸಂದರ್ಭಗಳಲ್ಲಿ ಶಂಖ, ಜಾಗಟೆ, ಜೋಳಿಗೆ ಧಾರಿಯಾದ ದಾಸಯ್ಯನನ್ನು ಕರೆಸುವುದು ವಾಡಿಕೆಯಾಗಿ ಬಂದಿತು. ಇವರನ್ನು ದಾಸಗೌಡಾಸ್ ಇಲ್ಲವೆ ಡಿ ಗೌಡಾಸ್ ಎಂದು ಈಗಲು ತಮಾಷೆಗೆ ಕರೆಯುತ್ತಾರೆ. ಇವರು ಎಂದಿಗೂ ತಮ್ಮನ್ನು ಗಂಗಡಕಾರ ಮೂಲದವರೆಂದು ಒಪ್ಪುವುದಿಲ್ಲ ಇವರಲ್ಲೇ ಮತ್ತೆ ಕೆಲವರು ಒಪ್ಪುತ್ತಾರೆ. ಮುಳ್ಳು ಒಕ್ಕಲಿಗರೊಂದಿಗೆ ವೈವಾಹಿಕ ಭಾಂದವ್ಯಕ್ಕೂ ಮನಸ್ಸು ಕೊಡುವುದಿಲ್ಲ (ಹಿಂದೆ) ವಿಷ್ಣುವಿನ ಭಕ್ತರಾದ ತಾವೇ ಶ್ರೇಷ್ಠ ಎನ್ನುವ ಭಾವನೆ ಅವರಲ್ಲಿದೆ.

ಮುಳ್ಳು ಒಕ್ಕಲಿಗರು / ಮೂಲ ಒಕ್ಕಲಿಗರು

ಈಗಾಗಲೇ ತಿಳಿಸಿರುವಂತೆ ಗಂಗಡಕಾರ ಒಕ್ಕಲಿಗರಲ್ಲಿ ಮತಾಚರಣೆ ವ್ಯತ್ಯಯದಿಂದಾಗಿ ಎರಡು ಪ್ರಬೇಧಗಳಾಗಿವೆ. ಮುಳ್ಳು ಒಕ್ಕಲಿಗರು ಬೇರಾರು ಅಲ್ಲ ಹಾಸನ ಭಾಗದ ಜನ ಮತ್ತು ರಾಮಾನುಜಾಚಾರ್ಯರ ಪ್ರಭಾವಕ್ಕೆ ಒಳಗಾಗದೆ ತಮ್ಮತನವನ್ನು ಉಳಿಸಿಕೊಂಡವರೇ ಮೂಲ ಒಕ್ಕಲಿಗರು. ಕಾಲಾನಂತರ ಜನರ ಬಾಯಲ್ಲಿ ಮೂಲ ಹೋಗಿ ಮುಳ್ಳು ಆಯಿತು. ಇವರು ಶೈವಾರಾಧಕರು. ಶಿವನ ಆಯುಧ ತ್ರಿಶೂಲ ಇಲ್ಲವೆ ಮುಳ್ಳು ತ್ರಿಶೂಲವನ್ನು ಆರಾಧಿಸುತ್ತಿದ್ದರು. ಕಾಲಾನಂತರ ಭೈರವನ ಆರಾಧಕರಾದರು. ಆದಿಚುಂಚನಗಿರಿಯ ಕಾಲಭೈರವೇಶ್ವರನಿಗೆ ನಡೆದುಕೊಳ್ಳುತ್ತಾರೆ. ನಾಥಪಂಥದ ಪ್ರಕಾರ ಮಾಂಸಾಹಾರಿಗಳು ನಂತರ ಮದ್ಯಪಾನ ಮಾಡುವುದು ನಡೆದೇ ಇತ್ತು (ಇಂದು ಅತಿಯಾಗಿದೆ ಅದು ಬೇರೆ ಪ್ರಶ್ನೆ).

ಮುಳ್ಳು ಜನರೂ ಕೂಡ ತಮ್ಮತನವನ್ನು ಬಿಟ್ಟುಕೊಟ್ಟಿಲ್ಲ. ಹಿಂದೊಮ್ಮೆ ತಮ್ಮೊಂದಿಗೆ ಇದ್ದು ತಮ್ಮಿಂದ ಬೇರ್ಪಟ್ಟು ಹೋಗಿ ತಾವೇ ಶ್ರೇಷ್ಠ ಎನ್ನುವ ದಾಸ ಒಕ್ಕಲಿಗರೊಂದಿಗೆ ವೈವಾಹಿಕ ಭಾಂದವ್ಯಕ್ಕೆ ಓಗೊಡುತ್ತಿಲ್ಲ (ಹಿಂದೆ) ಅವರಿಗಿಂತ

ತಾವೇನೂ ಕಡಿಮೆ ಇಲ್ಲ ಎಂದು ದಾಸ ಒಕ್ಕಲಿಗರಿಗೆ ಸೆಡ್ಡು ಒಡೆಯುತ್ತಾರೆ. ಮತಾಚರಣೆಯಲ್ಲಿ ಇವರನ್ನು ಗುರ್ತಿಸಬಹುದು.

ಮೊರಸು ಒಕ್ಕಲಿಗರು ಹಾಗೂ ಯಲಹಂಕ ನಾಡಪ್ರಭುಗಳು

ಮೊರಸು ನಾಡಿನಲ್ಲಿ ವಾಸಿಸುತ್ತಿದ್ದ ಹಾಗೂ ಅಲ್ಲಿಂದ ಬಂದ ಜನರನ್ನು ಮೊರಸು ಒಕ್ಕಲಿಗರು ಎಂದು ಹೇಳಬಹುದು. ಮೊರಸು ಎಂಬ ಪದದ ಅರ್ಥ, ಮೂಲ ಹುಡುಕುತ್ತಾ ಹೋದರೆ ನಾನಾ ಅರ್ಥವನ್ನು, ಐತಿಹ್ಯವನ್ನು ಪೌರಾಣಿಕ ನೆಲೆಗಟ್ಟನ್ನು ಹೊಂದಿದೆ. ಮೊರಸು ನಾಡು ಎಂಬುದು ಬೆಂಗಳೂರು ನಿರ್ಮಾಪಕ ಕೆಂಪೇಗೌಡನ ಪೂರ್ವಿಕರು ಕಂಚಿ ಬಳಿಯಿರುವ ಯಣಮಂಜಿ ಪುತ್ತೂರು ಎಂಬಲ್ಲಿಂದ ಬಂದರು ಎಂತಲೂ ಆ ಪ್ರದೇಶವನ್ನು ಮೊರಸುನಾಡು ಹಾಗೂ ಆ ಪ್ರದೇಶದ ಜನರನ್ನು ಮೊರಸು ಒಕ್ಕಲಿಗರು ಎಂತಲೂ ಹಾಗೆ ಬಂದವರಲ್ಲಿ ಕೆಂಪೇಗೌಡನ ವಂಶಸ್ಥರು ಮೊರಸು ಒಕ್ಕಲಿಗರು ಇವೇ ಮೊದಲಾಗಿ ನಂಬಿದ್ದಾರೆ. ವಾಸ್ತವವಾಗಿ ಮುಳುಬಾಗಿಲು, ಶ್ರೀನಿವಾಸಪುರ, ಕೋಲಾರ, ಚಿಂತಾಮಣಿ ಇವೇ ಮೊದಲಾದ ಭಾಗಗಳೇ "ಮೊರಸುನಾಡು". ಕಾಲಬದಲಾದಂತೆ ಹಾಗೂ ಜನಸಂಖ್ಯೆ ಜಾಸ್ತಿಯಾದಂತೆಲ್ಲ ಈ ಮೇಲ್ಕಂಡ ಪ್ರದೇಶಗಳೇ ಅಲ್ಲದೆ ಚಿಕ್ಕಬಳ್ಳಾಪುರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಲವಾರು ಭಾಗಗಳಲ್ಲಿ ನೆಲೆಸಿದ್ದಾರೆ. ಇಂದು ಮೊರಸು ಒಕ್ಕಲಿಗರು ಕರ್ನಾಟಕವೇ ಅಲ್ಲದೆ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯದ ಕೆಲವು ಭಾಗಗಳಲ್ಲಿ ಹರಡಿಕೊಂಡಿದ್ದಾರೆ. ಇವರು ಮೂಲತಃ ಒಕ್ಕಲಿಗರೇ ಆಗಿದ್ದು ವ್ಯವಸಾಯ ಮತ್ತು ಪಶುಸಂಗೋಪನೆ ಇವರ ಮುಖ್ಯ ಕಸುಬಾಗಿದೆ. ಆಯಾಯ ಪ್ರಾದೇಶಿಕ ಭಾಷೆ ಇವರ ಮೇಲೆ ಪ್ರಭಾವ ಬೀರಿದೆ. ಇದರಿಂದಾಗಿ ಇವರಿಗೆ ಕನ್ನಡ, ತೆಲಗು, ತಮಿಳು ಸೇರಿದಂತೆ ಅಲ್ಲಿನ ಸ್ಥಳೀಯ ಭಾಷೆ ಬರುತ್ತದೆ. ಸಂಪ್ರದಾಯ ಮತ್ತು ನಡವಳಿಕೆ ಇವರ ಮೇಲೆ ದಟ್ಟವಾಗಿ ಪ್ರಭಾವ ಬೀರುತ್ತದೆ. ಇವರ ಸಂಪ್ರದಾಯದ ಆಚರಣೆಗೆ ತಕ್ಕಂತೆ ಹೊಸದೇವರ, ಬಂಡಿದೇವರ ಮತ್ತು ಬೆರಳುಕೊಡೋ ಒಕ್ಕಲಿಗರು ಎಂದು ಕರೆಯಲಾಗುತ್ತದೆ. ಆಂಧ್ರದಲ್ಲಿ ಮೊರಸುರೆಡ್ಡಿ, ಮೊರಸು ಕಾಪು, ವೆರಳು ಇಚ್ಚೇಕಾಪುಲು ಎಂತಲೂ ತಮಿಳುನಾಡಿನಲ್ಲಿ ಮೊರಸು ವೆಲ್ಲಾಳ, ಮೊರಸು ಗೌಂಡರ್ ಎಂತಲೂ ಕರೆಯುತ್ತಾರೆ. ನಿಜಕ್ಕೂ ಕಷ್ಟ ಸಹಿಷ್ಣುಗಳು, ನೇಗಿಲ ಯೋಗಿಗಳು ನಿಜವಾದ ಅರ್ಥದಲ್ಲಿ ಹೇಳುವುದಾದರೆ ಅನ್ನದಾತರು. ಧಾರ್ಮಿಕ ನಂಬಿಕೆ ಕಟ್ಟುಪಾಡುಗಳನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಈಗಾಗಲೆ ತಿಳಿಸಿರುವಂತೆ ಒಕ್ಕಲಿಗರು ಕೃಷಿಡಣಾಯಕರು (Agro martials) ಶಾಂತಿಕಾಲದಲ್ಲಿ ವ್ಯವಸಾಯ ಮತ್ತು ಪಶುಸಂಗೋಪನೆ ಮಾಡಿಕೊಂಡು ನೆಮ್ಮದಿಯಾಗಿ ಇರುತ್ತಿದ್ದರು.

ತಾವು ನೆಲೆಸಿರುವ ಪ್ರದೇಶಕ್ಕೆ ಶತ್ರುಗಳಿಂದ ತೊಂದರೆಯಾದರೆ ರಣೋತ್ಸಾಹಿಗಳಾಗಿ ನಾಡನ್ನು ರಕ್ಷಿಸಿದ್ದಾರೆ. ಪಾಳೆಯಗಾರರಾಗಿ, ನಾಡಪ್ರಭುಗಳಾಗಿ ದಂಡನಾಯಕರಾಗಿ ದುಡಿದಿದ್ದಾರೆ. ಆವತಿ, ಯಲಹಂಕ, ದೇವನಹಳ್ಳಿ, ಸುಗಟೂರು, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಹೊಸಕೋಟೆ ಇವೇ ಮುಂತಾದ ಪ್ರದೇಶಗಳ ಪಾಳೆಯಗಾರರಾಗಿ ನಾಡನ್ನು ಕಟ್ಟಿದುದೇ ಅಲ್ಲದೆ ಕೆರೆ, ಕಟ್ಟೆ, ಬಾವಿಯನ್ನು ತೋಡಿಸಿದುದೇ ಅಲ್ಲದೆ ಗುಡಿಗೋಪುರಗಳು, ದೇವಾಲಯಗಳನ್ನು ನಿರ್ಮಿಸಿದರು. ಉದ್ದಗಲದ ರಸ್ತೆಗಳು, ಸೇತುವೆ, ಕೋಟೆ-ಕೊತ್ತಲಗಳನ್ನು ನಿರ್ಮಿಸುವ ಮೂಲಕ ಜನರಿಗೆ ರಕ್ಷಣೆ ಮತ್ತು ನೆಮ್ಮದಿಯಾಗಿ ಬದುಕಲು ಅನುವು ಮಾಡಿಕೊಡುವುದರ ಮೂಲಕ ಇತಿಹಾಸದಲ್ಲಿ ಸ್ಥಾನ ಪಡೆದಿದ್ದಾರೆ ಎಂದೇಳಬಹುದು. ಈ ಮೊರಸು ಒಕ್ಕಲಿಗರು ಮೂಲದಲ್ಲಿ ಗಂಗಡಕಾರ ಒಕ್ಕಲಿಗರೆ ಆಗಿದ್ದರೆಂದು ಹೇಳಬಹುದು.

ಈಗಾಗಲೇ ತಿಳಿಸಿರುವಂತೆ ಅನನ್ಯ ಸಂಪ್ರದಾಯ ಶರಣರಾದ ಮೊರಸು ಒಕ್ಕಲಿಗರು ಶಿವಾರಾಧಕರು. ಸ್ಥಳೀಯವಾಗಿ ನೆಲೆನಿಂತಿರುವ ದೇವರುಗಳನ್ನು ಹಾಗೂ ಕೆಲವರು ತಿರುಪತಿ ತಿಮ್ಮಪ್ಪನ ಭಕ್ತರೂ ಆಗಿ ಆಯಾ ದೇವರುಗಳನ್ನು, ಮನೆದೇವರನ್ನು ಪೂಜಿಸುತ್ತಾರೆ. ಇವರಲ್ಲಿ ಬಳಿಗಳು ಇಲ್ಲವೆ ಗೋತ್ರಗಳು ಹೆಚ್ಚಾಗಿ ಬಳಕೆಯಲ್ಲಿದೆ (ಹಳೇ ಮೈಸೂರು ಭಾಗದ ಗಂಗಡಕಾರ ಒಕ್ಕಲಿಗರಲ್ಲಿ ಅಷ್ಟಾಗಿ ಬಳಕೆಯಲ್ಲಿಲ್ಲ) ಮೊರಸು ಒಕ್ಕಲಿಗರಲ್ಲಿ ಆಚರಣೆಯಲ್ಲಿರುವ ಗೋತ್ರಗಳು ಇಲ್ಲವೆ ಬಳಿಗಳು ಎಂದರೆ – "ರಾಗಿ" ಗೋತ್ರ (ರಾಗಿಯವರು) ತೆಲುಗಿನಲ್ಲಿ ರಾಗಲು ಗೋತ್ರಮು, ಬೇಳೆ ಗೋತ್ರ ತೆಲುಗಿನಲ್ಲಿ ಬ್ಯಾಳುಲು ಗೋತ್ರಮು, ಹಲಸಂದಿ ಗೋತ್ರ ತೆಲುಗಿನಲ್ಲಿ ಹಲಸಂದಲು ಗೋತ್ರಮು, ದಾಳಿಂಬೆ ಗೋತ್ರ ತೆಲುಗಿನಲ್ಲಿ ದಾನಿಂಬ ಗೋತ್ರಮು, ಆಲದ ಗೋತ್ರ ತೆಲುಗಿನಲ್ಲಿ ಮರಿಮಾನು ಗೋತ್ರಮು. ಹೀಗೆ ತಾವು ಬೆಳೆಯುವ ದವಸ ಧಾನ್ಯವೇ ಅಲ್ಲದೆ ತಾವು ಬಳಸುವ ಪದಾರ್ಥಗಳು ವ್ಯವಸಾಯದ ಪರಿಕರಗಳು ಇವೇ ಮುಂತಾದವುಗಳನ್ನು ಗೋತ್ರ ಇಲ್ಲವೆ ಬಳಿಗಳೆಂದು ಮಾಡಿಕೊಂಡಿದ್ದಾರೆ. ಆಯಾ ಗೋತ್ರದವರು ಅವುಗಳನ್ನು ಬಳಸುವುದು ನಿಷಿದ್ದ. ಇಷ್ಟೇ ಅಲ್ಲದೆ ಸ್ವಗೋತ್ರದಲ್ಲಿ ಮದುವೆ ಮುಂಜಿಗೆ ಒಪ್ಪುವುದಿಲ್ಲ. ದೇವಸ್ಥಾನದಲ್ಲಿ ಅರ್ಚನೆಯ ವೇಳೆಯಲ್ಲಿ ತಮ್ಮ ಗೋತ್ರವನ್ನು ತಪ್ಪದೇ ಅರ್ಚಕರಿಗೆ ಹೇಳುತ್ತಾರೆ. ಹೀಗಾಗಿ ತಮ್ಮ-ತಮ್ಮ ಗೋತ್ರದ ಅರಿವು ಮೂಡಿಸಲು ಇದು ನೆರವಾಗುತ್ತದೆ. (ಆದರೆ ಗಂಗಡಕಾರ ಒಕ್ಕಲಿಗರಲ್ಲಿ ಇದು ಇಲ್ಲವೇ ಇಲ್ಲ ಎಂದರೆ ತಪ್ಪಾಗಲಾರದು)

ಹೀಗೆ ಮೊರಸು ಒಕ್ಕಲಿಗರು ವ್ಯವಸಾಯ ಮತ್ತು ಪಶುಸಂಗೋಪನೆಯನ್ನು ತಮ್ಮ ಮುಖ್ಯ ಕಸುಬನ್ನಾಗಿ ಮಾಡಿಕೊಂಡು ಬದುಕನ್ನು ಪ್ರಾರಂಬಿಸಿ ಇತ್ತೀಚಿನ ದಿನಗಳಲ್ಲಿ ಶಿಕ್ಷಣ, ಉದ್ಯೋಗ, ಉದ್ಯಮ, ವ್ಯಾಪಾರ, ವಾಣಿಜ್ಯ, ರಾಜಕೀಯ

ಕ್ಷೇತ್ರವೇ ಅಲ್ಲದೆ ಹೊರರಾಜ್ಯಗಳಲ್ಲಿ, ಹೊರರಾಷ್ಟ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕದಲ್ಲಿ ಕನಿಷ್ಠವೆಂದರೂ ಹತ್ತು ಲಕ್ಷ ಜನರಿದ್ದಾರೆ.

ಮೊರಸುನಾಡು ಮತ್ತು ಮೊರಸು ಒಕ್ಕಲಿಗರ ಶಾಸನೋಕ್ತ ಚರಿತ್ರಿಕ ನೆಲೆ ಮತ್ತು ಹಿನ್ನೆಲೆ

ಒಕ್ಕಲಿಗರ ಪಂಗಡಗಳಲ್ಲಿ ಒಂದಾದ ಮೊರಸು ಒಕ್ಕಲಿಗರು ಮೊರಸು ನಾಡಿನಿಂದ ಬಂದವರು ಎನ್ನುತ್ತಾರೆ. ಹಾಗಾದರೆ ಮೊರಸುನಾಡು ಎಲ್ಲಿದೆ? ಹಾಗೂ ಮೊರಸು ಒಕ್ಕಲಿಗರು ಯಾರು? ಎಂಬ ಇತಿಹಾಸವನ್ನು ನೋಡೋಣ. ಇತಿಹಾಸಕಾರರಾದ ಪ್ರೊ. ಎಂ.ವಿ. ಕೃಷ್ಣರಾವ್‌ರವರು ಕ್ರಿ.ಶ. 14ನ ಶತಮಾನದಲ್ಲಿ ಕಂಚಿ(ತಮಿಳುನಾಡು)ಯ ಸಮೀಪದ ಯಣಮಂಚಿ ಪುತ್ತೂರಿನಿಂದ ಬಂದವರೆಂದು ಹೇಳುತ್ತಾರೆ. (ಎಂ.ವಿ. ಕೃಷ್ಣರಾವ್ ಕರ್ನಾಟಕ ಇತಿಹಾಸ ದರ್ಶನ., ಬೆಂಗಳೂರು, ಪು.460) ಪ್ರೊ॥ ದೇವರಕೊಂಡ ರೆಡ್ಡಿಯವರು ಇದನ್ನು ಅಲ್ಲಗಳೆಯುತ್ತಾರೆ. ಕೋಲಾರ, ಶ್ರೀನಿವಾಸಪುರ ಬಳಿಯ ಉತ್ತೂರು ವಿನಹ ಕಂಚಿಯ ಬಳಿಯ ಪುತ್ತೂರಲ್ಲ ಎಂದು ಹೇಳುತ್ತಾರೆ.

ಮೊರಸುನಾಡು ಎಂದರೆ ಕರ್ನಾಟಕದ ಗೌರಿಬಿದನೂರು, ಕೋಲಾರ, ಶ್ರೀನಿವಾಸಪುರ, ಚಿಂತಾಮಣಿ, ಆನೇಕಲ್ಲು ಇವೇ ಮುಂತಾದವು ಮೊರಸುನಾಡಿಗೆ ಸೇರಿದ ಭಾಗಗಳು ಎಂದು ಗುರುತಿಸಲಾಗಿದೆ. ಮೊರಸು ರೆಡ್ಡಿಗಳು ಹೆಚ್ಚಾಗಿ ಕೋಲಾರ, ಮಾಲೂರು, ಶ್ರೀನಿವಾಸಪುರ, ಚಿಂತಾಮಣಿ, ಆನೇಕಲ್, ಹೊಸಕೋಟೆ, ಚಿಂತಾಮಣಿಯಲ್ಲಿ ಮೊರಸಿ ರೆಡ್ಡಿಗಳ ಸಂಖ್ಯೆ ಹೆಚ್ಚಾಗಿದೆ. ಆದರೆ ಶ್ರೀನಿವಾಸಪುರದಲ್ಲಿ ಮೊರಸು ಒಕ್ಕಲಿಗರ ಸಂಖ್ಯೆ ಹೆಚ್ಚಾಗಿವೆ. ಚಿಂತಾಮಣಿಯಲ್ಲಿರುವ ಮೊರಸು ಹಾಗೂ ಮುಸುಕು ಒಕ್ಕಲಿಗರು, "ರೆಡ್ಡಿ" ಎಂಬ ಪದವನ್ನು ತಮ್ಮ ಹೆಸರುಗಳೊಂದಿಗೆ ಬಳಸುತ್ತಾರೆ. ಮುಸುಕು ರೆಡ್ಡಿಗಳು ತಾವೇ ಶ್ರೇಷ್ಠರು ಎಂದು ಹೇಳಿಕೊಳ್ಳುತ್ತಾರೆ.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ರೆಡ್ಡಿಗಳಲ್ಲಿ "ಮೊಸರು ರೆಡ್ಡಿ" ಗಳಿದ್ದಾರೆ. ಒಕ್ಕಲಿಗರಲ್ಲಿ "ಮೊರಸು ಒಕ್ಕಲಿಗ"ರಿದ್ದಾರೆ. ಆದ್ದರಿಂದ ತೆಲಗು ಭಾಷೆಯ ಕೃಷಿಕರನ್ನು ರೆಡ್ಡಿಗಳೆಂದೂ ಕನ್ನಡ ಮಾತನಾಡುವವರನ್ನು ಗೌಡ ಅಥವಾ ಒಕ್ಕಲಿಗರೆಂದು ವಿಂಗಡಿಸಬಹುದು. (ಡಾ॥ ಸಂಧ್ಯಾರೆಡ್ಡಿ ಕರ್ನಾಟಕದಲ್ಲಿ ರೆಡ್ಡಿ ಸಮುದಾಯ., ಪು.31–32). ಮೊರಸುನಾಡು ಮತ್ತು ಮೊರಸು ಒಕ್ಕಲಿಗರು ಗಂಗರ ಸಾಮಂತ ದೊರೆಗಳಾಗಿದ್ದರು. ಇಬ್ಬರ ನಡುವೆ ಅವಿನಾಭಾವ ಸಂಬಂಧವಿದ್ದಿತು. ಇದರಿಂದಾಗಿ ನೊಳಂಬರು, ಚೇರರು, ಚೋಳರು ಇವರೇ ಮೊದಲಾದ ಶತೃಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಾಗುತ್ತಿತ್ತು ಎಂದು ಶಾಸನೋಕ್ತ ಆಧಾರಗಳಿಂದ ದೃಢಪಡುತ್ತದೆ. 16 ಶಾಸನಗಳ್ಳು ಲಭ್ಯವಿದ್ದು ಅವುಗಳಲ್ಲಿ 6 ಶಾಸನಗಳು ಬೆಂಗಳೂರು ತಾಲ್ಲೂಕಿನಲ್ಲೂ

ಉಳಿದವು ಆನೇಕಲ್ಲು, ದೇವನಹಳ್ಳಿ ಹಾಗೂ ಮಾಲೂರು ತಾಲ್ಲೂಕುಗಳಲ್ಲೂ ದೊರಕಿವೆ. ಕ್ರಿ.ಶ. 1301ರ ವೀರಬಲ್ಲಾಳನ ಐದು ಶೈಸನಗಳಲ್ಲಿ ರಾಜನು ಮೊರಸು ನಾಡಿಗೆ ಸೇರಿದ ಕೋಲಾರ, ಮಾಲೂರು ಪ್ರದೇಶಗಳಿಗೆ ಸೇರಿದ ದೇವಾಲಯ ಹಾಗೂ ಮಠಪುರದ ಗ್ರಾಮಗಳ ತೆರಿಗೆಯನ್ನು ಮಾನ್ಯ ಮಾಡಿದ ವಿಷಯಕ್ಕೆ ಪ್ರಸ್ತಾಪವಾಗಿದೆ. (EC. IX Bn51, Bn65,, EC. XML) ಕ್ರಿ.ಶ. 800ರ ಗಂಗರ ಶಾಸನದಲ್ಲಿ ಮೊರಸುನಾಡಿನ ಮೊದಲ ಮಹಾರಾಜನು ಮೊರಸುನಾಡಿನ ಪುಸುರುಕೆರೆಯ ಕೆಳಗಿನ ಭೂಮಿಯನ್ನು ಒಬ್ಬ ಬ್ರಾಹ್ಮಣನಿಗೆ ದಾನಕೊಟ್ಟ ವಿವರವಿದೆ (MAR 1914, P.27) **ಗಂಗರ ಶಾಸನಗಳಲ್ಲಿ ಮೊರಸುನಾಡು ಗಂಗರ 6000 ಪ್ರದೇಶದ ಒಂದು ಭಾಗ ಎಂದು ಪ್ರಾಸ್ತಾಪಿಸಲಾಗಿದೆ.** ಕ್ರಿ.ಶ. 820ರ ಬೆಂಗಳೂರು ತಾಲ್ಲೂಕಿನ ವರ್ತೂರು ಗ್ರಾಮದಲ್ಲಿ ದೊರೆತಿರುವ ಶಾಸನವು ಮೊರಸುನಾಡನ್ನು ಕೆಲವು ಕಾಲ ನೊಳಂಬ ಶಿವಮಾರನು ಆಳುತ್ತಿದ್ದನೆಂದು ಹೇಳುತ್ತದೆ. ಕ್ರಿ.ಶ. 1110ರ ಬೆಂಗಳೂರಿನ ಮತ್ತೊಂದು ಶಾಸನದಲ್ಲಿ ಮೊರಸುನಾಡು ರಾಜೇಂದ್ರ ಚೋಳನ ಒಳನಾಡಿನ ಒಂದು ಭಾಗ ಎಂದು ಪ್ರಸ್ತಾಪಿಸಲಾಗಿದೆ (EC. IX Bn-85c) ಕ್ರಿ.ಶ. 10 ಮತ್ತು 11ನೇ ಶತಮಾನದಲ್ಲಿ ಗಂಗರು ಅವನತಿಯ ಹಾದಿಯನ್ನಿಡಿದಾಗ ಚೋಳರು ಮತ್ತು ಹೊಯ್ಸಳರು ಮೊರಸು ನಾಡನ್ನು ಒಳಗೊಂಡ ಗಂಗವಾಡಿಯನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ಕ್ರಿ.ಶ. 10 ಮತ್ತು 11ನೇ ಶತಮಾನದಲ್ಲಿ ಮೊರಸುನಾಡಿಗೆ ದಾಳಿಮಾಡಿದ ರಾಜರಾಜ ಚೋಳರು ಈ ಪ್ರದೇಶವನ್ನು ವಶಪಡಿಸಿಕೊಂಡನು. ಅವನ ಅಧಿಕಾರಿಗಳು ಈ ಪ್ರದೇಶಗಳಲ್ಲಿ ನೂತನ ಕಂದಾಯ ವ್ಯವಸ್ಥೆಯನ್ನು ಜಾರಿಗೆ ತಂದರು. (EC. X - Mb-49(a)) ಹಾಗೂ ಹಲವಾರು ದೇವಾಲಯಗಳನ್ನು ನಿರ್ಮಿಸಿದರು. ಇಂದಿಗೂ ಕೂಡ ಮೊರಸುನಾಡಿನ ಕೆಲವು ಕೃಷಿಕರು ತಮಿಳುನಾಡಿನೊಂದಿಗೆ ಸಾಂಸ್ಕೃತಿಕ ಸಂಬಂಧಗಳನ್ನು ಉಳಿಸಿಕೊಂಡಿದ್ದಾರೆ. ದೇವನಹಳ್ಳಿ ಪ್ರದೇಶದ ಮೊರಸು ಒಕ್ಕಲಿಗರು "ಕಂಚಿ" ಬಳಿಯ ದೇವಾಲಯಕ್ಕೆ ಭೇಟಿ ಕೊಡುತ್ತಾರೆ, ಹಾಗೆಯೇ ಮಾಲೂರು ತಾಲ್ಲೂಕಿನ "ಜಡಿಗೆಹಳ್ಳಿ"ಯ ಜಾತ್ರೆಗೆ ತಮಿಳುನಾಡಿನ ಭಕ್ತರು ಬಂದು ಸೇವೆ ಸಲ್ಲಿಸುತ್ತಾರೆ. ಕಾಲಾನಂತರ ವಿಜಯನಗರ ಆಳ್ವಿಕೆಗೆ ಒಳಪಟ್ಟ ಮೊರಸುನಾಡು ತೆಲಗು ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾಯಿತು.

ಮೊರಸು ಒಕ್ಕಲಿಗರ ಕೆಲವು ಸಂಪ್ರದಾಯಗಳು

ಮೊರಸು ಒಕ್ಕಲಿಗರು ತಮ್ಮದೇ ಆದ ಪಂಗಡಗಳನ್ನು ನೀತಿ ನಿರೂಪಣೆಗಳನ್ನು, ರೂಢಿ ಸಂಪ್ರದಾಯಗಳನ್ನು, ನಡವಳಿಕೆಗಳನ್ನು ಪರಂಪರಾನುಗತವಾಗಿ ಉಳಿಸಿಕೊಂಡು ಬಂದಿದ್ದಾರೆ. ಇವರ ಪಂಗಡಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. 1) ಹೊಸ ದೇವರ 2) ಬೆರಳು ಕೊಡೊ ಒಕ್ಕಲಿಗರು 3) ಸಾಲುಗಳು (ಕಾನುಸಾಲು-ದಿಣ್ಣೆಸಾಲು-ನೇರಳಘಟ್ಟದ ಸಾಲು- ಕೂಟೇರಿಸಾಲು)

ಹೊಸದೇವರ ಒಕ್ಕಲು – ಮೊರಸು ಒಕ್ಕಲಿಗರು ಮೂಲತಃ ಕೃಷಿಕರಾಗಿದ್ದು ಪ್ರಕೃತಿ ಆರಾಧಕರಾಗಿದ್ದಾರೆ. ಕೊಯ್ಲಿಗೆ ಬಂದ ಬೆಳೆಯನ್ನು ತಂದು ಶ್ರದ್ಧಾಭಕ್ತಿಯಿಂದ ಆರಾಧಿಸುವುದೇ ಹೊಸ ದೇವರ ಆಚರಣೆ. ಇಲ್ಲಿ **'ದೇವರ'** ಎಂಬ ಪದವು ಗ್ರಾಮ್ಯ ಭಾಷೆಯಲ್ಲಿ **'ದ್ಯಾವರ'** ಆಗಿದೆ ಅಷ್ಟೆ. ಕಾರ್ತಿಕ ಮಾಸದ ಮೊದಲ ಭಾನುವಾರ ಆಚರಿಸುತ್ತಾರೆ. ಮೊರಸು ಒಕ್ಕಲು ಮಕ್ಕಳ ಎಲ್ಲಾ ಕುಟುಂಬಗಳು ಸೇರಿ ಆಚರಿಸುತ್ತಾರೆ. ಒಂದು ರೀತಿಯ ಸಂಭ್ರಮ ಅವರಲ್ಲಿ ಮನೆ ಮಾಡಿರುತ್ತದೆ. ಕೆಲವು ಕುಟುಂಬಗಳು ವರ್ಷದಲ್ಲಿ ಎರಡು ಬಾರಿ ಆಚರಿಸುತ್ತವೆ. ಹಬ್ಬಕ್ಕೆ ಒಂದು ವಾರ ಮೊದಲೇ ದೇವರ ಮನೆಗೆ ಸುಣ್ಣಬಣ್ಣ ಬಳಿದು ಸಿಂಗರಿಸುತ್ತಾರೆ. ಸಂತೆಯಿಂದ ಹೊಸ ಮಡಿಕೆ, ಕರಗಗಳನ್ನು ತಂದು ಇಟ್ಟುಕೊಳ್ಳುತ್ತಾರೆ. ಈ ಹಬ್ಬದ ವಿಶೇಷವೆಂದರೆ ಆ ಮನೆಯ ಇಲ್ಲವೆ ಕುಟುಂಬದ ಹಿರಿಯ ಸ್ತ್ರೀಯೇ ಪ್ರಧಾನ. ಕುಟುಂಬದ ಹೆಣ್ಣುಮಕ್ಕಳು ವಿಶೇಷವಾಗಿ ಸಿಂಗರಿಸಿಕೊಂಡು ಆಚರಿಸುವ ಹಬ್ಬವಾಗಿದೆ. ಹಳೆ ಮೈಸೂರು ಭಾಗದಲ್ಲಿ ಭತ್ತ, ರಾಗಿ ಮುಂತಾದ ಧಾನ್ಯಗಳನ್ನು ಕಣದಲ್ಲಿ ಇಲ್ಲವೇ ಮನೆಗೆ ತಂದು ಪೂಜಿಸುವಂತೆ ಇಲ್ಲಿಯೂ ಪೂಜೆ ಸಲ್ಲಿಸುತ್ತಾರೆ.

ಬೆರಳು ಕೊಡೊ ಒಕ್ಕಲಿಗರು – (ವೇರಲು ಇಚ್ಚೆ ಕಾಪುಲು) ಪುರಾತನ ಕಾಲದಲ್ಲಿ ನರಬಲಿ ಕೊಡುವ ಕ್ರೂರ ಪದ್ಧತಿ ಇದ್ದಿತು. ನಂತರ ಮನೆಯ ಹಿರಿಯ ಸ್ತ್ರೀ ತನ್ನ ಬೆರಳನ್ನು ದೇವರಿಗೆ ಅರ್ಪಿಸುವ ಪದ್ಧತಿ ಇದ್ದಿತು. ಹಿರಿಯ ಕೆಂಪೇಗೌಡ ಈ ಪದ್ಧತಿಯನ್ನು ತೆಗೆದು ಹಾಕಿದನೆಂಬ ಪ್ರತೀತಿ ಇದೆ. ಬಂಡಿದೇವರ ಸಂದರ್ಭದಲ್ಲಿ ಸಾಂಕೇತಿಕವಾಗಿ ಬೆರಳಿನ ತುದಿಗೆ ಹೂವು, ವಿಳ್ಳೆಯದೆಲೆ ಇಲ್ಲವೆ ಬಾಳೆಹಣ್ಣನ್ನು ಕೈ ಬೆರಳಿಗೆ ಸಿಕ್ಕಿಸಿ ಸಾಂಕೇತಿಕವಾಗಿ ಕತ್ತರಿಸುವುದುಂಟು.

ಬಂಡಿದ್ಯಾವರ ಆಚರಣೆ – ಮೊರಸು ಒಕ್ಕಲಿಗರಿಗೆ ಬಹಳ ವಿಶೇಷವಾದ ಆಚರಣೆಯ ಬಂಡಿದ್ಯಾವರ (ಬಂಡ್ಯ್ಯಾವರ) ನಿಜಕ್ಕೂ ಇದು ವಿಶೇಷವೇ ಸರಿ. ಇದರ ಮೂಲ ನೆಲೆ ಕೋಲಾರ ಜಿಲ್ಲೆ. ಅದೇ ತಾಲ್ಲೂಕಿನ ವೇಮಗಲ್ಲು ಹೋಬಳಿಯಲ್ಲಿರುವ ಸೀತಿ, ಮತ್ತೊಂದು ಪ್ರದೇಶವೆಂದರೆ ಗುಡಿ ಮಾರಲಹಳ್ಳಿ. ಮೊರಸು ಒಕ್ಕಲಿಗರು ಮೂಲತಃ ಶೈವರು ಶಿವನ ಆರಾಧಕರು, ಕಾಳಭೈರವ (ಕಾಲಭೈರವ), ಶಿವ, ಭೈರವೇಶ್ವರನನ್ನು ಆರಾಧಿಸುತ್ತಾರೆ. ಬಂಡಿದೇವರ ಹಬ್ಬವನ್ನು ಆ ಊರಿನ ಕುಟುಂಬ ಒಂದರಲ್ಲಿ ಯಾವುದೇ ಸಾವುನೋವಿಲ್ಲದೆ ಸಂತೋಷ ಸಮೃದ್ಧವಾಗಿದ್ದ ಸಮಯದಲ್ಲಿ ಆಚರಿಸುತ್ತಾರೆ. ಇಡೀ ಊರಿಗೆ ಊರೆ ಸಂಭ್ರಮಿಸುತ್ತದೆ. ಆ ಊರಿನಲ್ಲಿ ಹುಟ್ಟಿದ ವ್ಯಕ್ತಿಯೊಬ್ಬನ ಜೀವಿತ ಕಾಲದಲ್ಲಿ ಒಂದು ಇಲ್ಲವೇ ಎರಡು ಬಾರಿ ಬಂದರೆ ಹೆಚ್ಚು ಎಂದೇಳಬಹುದು. ಇದನ್ನು ಬೆರಳು ಕೊಡೊ ಒಕ್ಕಲಿಗರು, ಹೊಸದ್ಯಾವರ ಒಕ್ಕಲಿಗರು ಹೀಗೆ ಎಲ್ಲರೂ ಭಕ್ತಿಯಿಂದ ಆಚರಿಸುತ್ತಾರೆ.

ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಇತಿಹಾಸಕಾರರು ಹೆಚ್ಚಿನ ಮಹತ್ವವನ್ನು ನೀಡುತ್ತಾರೆ. ಕಾರಣವೇನೆಂದರೆ ತಮ್ಮ ರಾಜ್ಯ ಅಥವಾ ಸಾಮ್ರಾಜ್ಯವನ್ನು ಶಾಂತಿ, ಸುಭಿಕ್ಷೆ ಮತ್ತು ನೆಮ್ಮದಿಯಿಂದ ನಡೆಸಿಕೊಂಡು ಹೋದ ಪರಿಣಾಮವಾಗಿ, ಅಂದು ಸಾಮಂತ ದೊರೆಗಳು ಸಣ್ಣಪುಟ್ಟ ಪಾಳಯ –ಪಟ್ಟುಗಳನ್ನು ಕಟ್ಟಿಕೊಂಡು ವಿಜಯನಗರದರಸರ ಅಪ್ಪಣೆ ಪಡೆದು ನೆಮ್ಮದಿಯಿಂದ ಇರುತ್ತಿದ್ದರಲ್ಲದೆ ತಮ್ಮ ಪ್ರಭುವಿಗೆ ಇಲ್ಲವೆ ವಿಜಯನಗರ ಸಾಮ್ರಾಜ್ಯಕ್ಕೆ ಶತ್ರುಬಾಧೆ ತಟ್ಟಿದರೆ ಅದನ್ನು ನಿವಾರಿಸಲು ಟೊಂಕ ಕಟ್ಟಿ ನಿಲ್ಲುತ್ತಿದ್ದರು. 1565ರಲ್ಲಿ ತಾಳಿಕೋಟೆ ಕದನವಾಗಿ ಸಾಮ್ರಾಜ್ಯ ಅವನತಿಯ ಹಾದಿಯನ್ನು ಹಿಡಿಯುವ ತನಕ ಈ ಪಾಳೆಯ ಪಟ್ಟುಗಳು ತಮ್ಮ ಪ್ರಭುಗಳಿಗೆ ವಿಧೇಯವಾಗಿದ್ದವು. ಇಂತಹ ಪಾಳೆಯಪಟ್ಟುಗಳಲ್ಲಿ ಪ್ರಬಲರೂ ಪ್ರಮುಖರೂ ಆದ ಪಾಳಯಪಟ್ಟು ಎಂದರೆ ಯಲಹಂಕ ನಾಡಪ್ರಭುಗಳದು. ಮೊದಲು ಯಲಹಂಕದಲ್ಲಿ ತಲೆ ಎತ್ತಿ ಕ್ರಮೇಣ ಬೆಂಗಳೂರು ಪಟ್ಟಣವನ್ನು ಕಟ್ಟಿ ಉಳಿಸಿ, ಬೆಳೆಸಿದ ಕೀರ್ತಿ ಈ ನಾಡಪ್ರಭುಗಳಿಗೆ ಸಲ್ಲುತ್ತದೆ. ಒಕ್ಕಲಿಗ ಜನಾಂಗದಲ್ಲಿ ಎರಡನೆಯ ದೊಡ್ಡ ಪಂಗಡವೆಂದರೆ ಮೊರಸು ಒಕ್ಕಲಿಗರು.

ಬೆಂಗಳೂರು ನಿರ್ಮಾಪಕ ಕೆಂಪೇಗೌಡನ ಪೂರ್ವಿಕರು ತಮಿಳುನಾಡಿನ ಕಂಚಿಪುರಂನಿಂದ ವಲಸೆ ಬಂದವರೆಂದು ಐತಿಹ್ಯಗಳಿವೆ. ಒಂದು ಲಾವಣಿಯ ಪ್ರಕಾರ ಕಂಚೀಪುರದ ಹತ್ತಿರದ ಒಂದು ಹಳ್ಳಿಯ ರಣಭೈರೇಗೌಡ ಮತ್ತು ಅವನ ಏಳು ಜನ ಸಹೋದರರು ಹಾಗೂ ಮೂರು ಮಕ್ಕಳು ಅಲ್ಲಿಂದ ಬೇರೆ ಸ್ಥಳಕ್ಕೆ ವಲಸೆ ಹೋಗಬೇಕಾಯಿತು. ಕಾರಣ ಕಂಚಿಪುರಂನ ಪಾಳೆಯಗಾರ ಸೆಲ್ವನಾಯಕನು ರಣಭೈರೇಗೌಡನ ಮಗಳನ್ನು ವರಿಸಲು ಇಚ್ಛೆಪಟ್ಟನು. ಇದಕ್ಕೆ ಒಪ್ಪದೆ ರಣಭೈರೇಗೌಡನು ಸಂಸಾರ ಸಮೇತನಾಗಿ ರಾತ್ರೋರಾತ್ರಿ ಈಗಿನ ಬೆಂಗಳೂರು ಗ್ರಾಮಾಂತರ ಜಿಲ್ಲೆ ಆವತಿ (ದೇವನಹಳ್ಳಿ ಸಮೀಪ) ಎಂಬಲ್ಲಿ ಬಂದು ನೆಲೆಸಿದರು. ಮೊರಸು ನಾಡು ಮತ್ತು ಮೊರಸು ಒಕ್ಕಲಿಗರು ಎಂಬ ಶಬ್ದದ ಮತ್ತು ಸ್ಥಳದ ಮೂಲ ಹುಡುಕುತ್ತಾ ಹೋದರೆ ಬಾರಾಮಹಲ್ ರೆಕಾರ್ಡ್ಸ್ ಸಂಗ್ರಹದಲ್ಲಿ ಈ ಮೇಲಿನ ಕಥೆಯ ಇನ್ನೊಂದು ರೂಪ ಸಿಗುತ್ತದೆ. ಅದರ ಪ್ರಕಾರ ಹೀಗೆ ಕಂಚೀಪುರಂನಿಂದ ಓಡಿಬಂದವರು ಪಾಲಾರ್ ನದಿಯನ್ನು ದಾಟಿ ಇಂದಿನ ಬೆಂಗಳೂರಿಗೆ ಸಮೀಪದಲ್ಲಿ ಬಂದು ನೆಲೆಸಿದರು ಎನ್ನಲಾಗಿದೆ. ಮೊರಸು ಎಂಬ ಹೆಸರು ಅವರು ನೆಲೆಸಿದ ಭಾಗಕ್ಕೆ ಮೊರ್ಸು ಎಂಬ ಹೆಸರಿನಿಂದ ಬಂದಿದೆ ಎಂದು ಹೇಳಲಾಗಿದೆ. *(E. Thurston, Castes and Tribes of Southern India Vol-V, Madras 1909. PP 73-75)* ಈ ಮೊರಸು ನಾಡು ಸಾಂಪ್ರದಾಯಿಕವಾಗಿ ಬೆಂಗಳೂರಿನ ದಕ್ಷಿಣ ಜಿಲ್ಲೆ, ಹೊಸಕೋಟೆ, ಆನೇಕಲ್, ಕೋಲಾರ ಜಿಲ್ಲೆಯ ಬಹುತೇಕ ಭಾಗಗಳು ಹೊಸೂರು, ಡಂಕಣಿಕೋಟೆ ತಾಲ್ಲೂಕು


ಭಾಗಗಳೆಂದು ಗುರ್ತಿಸಲಾಗಿದೆ. ಈ ಪ್ರದೇಶವನ್ನು ಮೊರಸು ನಾಡು ಎಂತಲೂ ಇಲ್ಲಿ ನೆಲೆಸಿರುವ ಒಕ್ಕಲಿಗ ಜನರನ್ನು ಮೊರಸು ಒಕ್ಕಲಿಗರೆಂದು ಕರೆಯುತ್ತಾರೆ. ಈ ಪ್ರದೇಶದಲ್ಲಿ ವಾಸಿಸುವ ಜನ ತೆಲುಗು, ಕನ್ನಡ ಎರಡೂ ಭಾಷೆಗಳನ್ನು ಬಳಸುತ್ತಾರೆ. ಕೆಂಪೇಗೌಡನ ಪೂರ್ವಜರ ಭಾಷೆಯೂ ಕನ್ನಡವೇ ಆಗಿದ್ದಿತು (ಕೆಂಪೇಗೌಡನ ಪೂರ್ವಿಕರು, ಗಂಗ ದೊರೆಗಳ ಅಧಿಕಾರಿಗಳಾಗಿ ತಮಿಳುನಾಡಿಗೆ ತೆರಳಿದ್ದಾಗಿ ಈಗಾಗಲೇ ತಿಳಿಸಿದೆ).

ಹೀಗೆ ಕಂಚೀಪುರಂನಿಂದ ಬಂದ ರಣಭೈರೇಗೌಡನು ಆವತಿಯಲ್ಲಿ ನೆಲೆಸಿದ ವಿಚಾರವನ್ನು ಈಗಾಗಲೇ ತಿಳಿಸಿದೆ. ಮತ್ತೊಂದು ಐತಿಹ್ಯದ ಪ್ರಕಾರ ರಣಭೈರೇಗೌಡನಿಗೆ ಕೆಂಪಮ್ಮ ಎಂಬ ಧರ್ಮಪತ್ನಿಯು ಸುಂದರಳಾದ ಮಗಳು ದೊಡ್ಡಮ್ಮ ಅಲ್ಲದೆ, ಮಲ್ಲಭೈರೇಗೌಡ, ಗಿಡ್ಡಪ್ಪಗೌಡ ಎಂಬ ಶೌರ್ಯ ಪರಾಕ್ರಮಗಳಿಗೆ ಹೆಸರಾದ ತಮ್ಮಂದಿರಿದ್ದರು. ಜಯಗೌಡ, ಸಣ್ಣಭೈರೇಗೌಡ, ಹಾವಳಿ ಭೈರೇಗೌಡ, ಮಲ್ಲಭೈರೇಗೌಡರೆಂಬ ಮಕ್ಕಳಿದ್ದರು. ಆವತಿಯನ್ನು ಅಭಿವೃದ್ಧಿಪಡಿಸುವ ಸಮಯದಲ್ಲಿ ಅಗೆಯುತ್ತಿರುವಾಗ ಸಾಕಷ್ಟು ಪ್ರಮಾಣದಲ್ಲಿ ಧನಕನಕ ಸಿಗಲು ಅಣ್ಣ ತಮ್ಮಂದಿರು ಅದನ್ನು ಹಂಚಿಕೊಂಡರು ಇತ್ಯಾದಿ. ಆವತಿಯು ಚಿಕ್ಕಪ್ರದೇಶವಾದುದರಿಂದ ನಾವು ಪ್ರತ್ಯೇಕವಾಗಿ ರಾಜ್ಯಕಟ್ಟುತ್ತೇವೆ ನಮ್ಮನ್ನು ಆಶೀರ್ವದಿಸಿ ಎಂದು ಅಲ್ಲಿಂದ ತೆರಳಿದ ರಣಭೈರೇಗೌಡನ ಸಹೋದರರು ಮುಂದೆ ದೇವನಹಳ್ಳಿ, ಚಿಕ್ಕಬಳ್ಳಾಪುರ, ಹೊಳವನಹಳ್ಳಿ, ಕೊರಟಗೆರೆ, ಶಾಂಪುರ ಮುಂತಾದ ಗ್ರಾಮಗಳನ್ನು ವಶಪಡಿಸಿಕೊಂಡು ಅಭಿವೃದ್ಧಿಪಡಿಸಿದರು. ಅಲ್ಲದೆ ದೇವರಾಯನದುರ್ಗ, ಚನ್ನರಾಯದುರ್ಗ, ಮಾಕಳಿದುರ್ಗ, ನಂದೀದುರ್ಗ ಮುಂತಾದ ದುರ್ಗಗಳನ್ನು ನಿರ್ಮಿಸುದುದೇ ಅಲ್ಲದೆ ಮದ್ದಗಿರಿ (ಮಧುಗಿರಿ) ಮಿಡಗೇಶಿ, ಹೆಬ್ಬೂರು, ಕುಣಿಗಲ್ಲು, ಗುಬ್ಬಿ, ಆನೇಕಲ್ಲು, ಸುಗಟೂರು, ಹೊಸಕೋಟೆ, ಹೊಸಹಳ್ಳಿ, ಅಬ್ಲೂಡು, ಶಿಡ್ಲಘಟ್ಟ, ಸರ್ಜಾಪುರ, ಶಿವನಸಮುದ್ರ ಇನ್ನೂ ಮುಂತಾದ ಊರುಗಳನ್ನು ಸ್ಥಾಪಿಸಿ ಆ ಪಾಳೆಯಗಳ ಗೌಡ ಪ್ರಭುಗಳಾಗಿ ಮೆರೆದರು.

ಇತ್ತ ರಣಭೈರೇಗೌಡನು ಭೂಮಿಯನ್ನು ಅಗೆಯುವಾಗ ಧನಕನಕಗಳ ಜೊತೆಯಲ್ಲಿ ದೊರೆತ ಚನ್ನಕೇಶವ ಮೂರ್ತಿಯ ಪ್ರಾಣಪ್ರತಿಷ್ಠಾಪನೆಯನ್ನು ಆವತಿಯಲ್ಲಿ ಮಾಡಿಸಿದನು. ರಣಭೈರೇಗೌಡನ ತರುವಾಯ ಆತನ ಜೇಷ್ಠಪುತ್ರನಾದ ಜಯಗೌಡನು ಆವತಿಯಿಂದ ತನ್ನ ಸಹೋದರರ ಸಹಾಯದಿಂದ ಯಲವಂಕ ಅರ್ಥಾತ್ ಇಂದಿನ ಯಲಹಂಕಕ್ಕೆ ಆಗಮಿಸಿದನು. ಹೊಯ್ಸಳರ ಕಾಲದಲ್ಲಿ ಇದನ್ನು ಯಲವಕ್ಕ ಎನ್ನುತ್ತಿದ್ದರು. ಯಲವಂಕವು ನಾಡಾಗಬೇಕಾದದ್ದು ಪುಂಡು ಪೋಕರಿಗಳಿಂದ ತುಂಬಿ ಕಾಡಾಗಿತ್ತು. ಮೊದಲು ದೊಡ್ಡಬೆಳವಂಗ್ಲಲಕ್ಕೆ ಆಗಮಿಸಿದ

ಈ ಸಹೋದರರು ಆ ಸ್ಥಳದಿಂದ ಕಾರ್ಯಭಾರ ಆರಂಭಿಸಿದರು. ಮುಂಡುಪೋಕರಿಗಳ ಹುಟ್ಟಡಗಿಸಿ ಯಲಹಂಕ ನಾಡನ್ನು ಕಟ್ಟಿ ವಿಜಯನಗರ ಸಾಮ್ರಾಜ್ಯದ ಸಾಮ್ರಾಟನಾಗಿದ್ದ ಪ್ರೌಢದೇವರಾಯನ ಬಳಿಗೆ ಬಂದು ಈ ವಿಷಯವನ್ನು ತಿಳಿಸಲು ಪ್ರೌಢದೇವರಾಯ (ಆಳ್ವಿಕೆಯ ಕಾಲ 1423–1446)ನು ಜಯಗೌಡನಿಗೆ ಯಲಹಂಕ ಭೂಪಾಲನೆಂಬ ಬಿರುದನ್ನು ದಯಪಾಲಿಸಿದನು. ಜಯಗೌಡನು 14 ವರ್ಷಗಳ ಕಾಲ ಯಲಹಂಕ ನಾಡನ್ನು ಆಳ್ವಿಕೆ ಮಾಡಿದನು. ನಂತರ ಗಿಡ್ಡೇಗೌಡ ಈತನ ನಂತರ ಕೆಂಪನಂಜೇಗೌಡ. ಈತನ ಮಗನೇ ಹೆಸರಾಂತ ಕೆಂಪೇಗೌಡ. ಬೆಂಗಳೂರು ನಿರ್ಮಾಪಕ ಒಂದನೇ ಕೆಂಪೇಗೌಡ ಹಾಗೂ ಮಾಗಡಿ ಕೆಂಪೇಗೌಡನ ತಂದೆ ಕೂಡ ಹೌದು. ಕೆಂಪೇಗೌಡನ ಬಗ್ಗೆ ಆತನ ಪೂರ್ವಿಕರ ಬಗ್ಗೆ ಐವತ್ತಕ್ಕೂ ಹೆಚ್ಚು ಶಾಸನಗಳು, ಲಾವಣಿಗಳಿವೆ. ವಿದೇಶಿಯುವರ ಬರವಣಿಗೆಯೇ ಅಲ್ಲದೆ, ಕೆಂಪೇಗೌಡ ಜಯಪ್ರಶಸ್ತಿ, ಏಕಾಂಬರ ದೀಕ್ಷಿತರ ವೀರಭದ್ರ ವಿಜಯ, ಕೆಂಪೇಗೌಡನ ಯಶಃ ಪ್ರತಾಪ ಕೀರ್ತನೆಗಳು ಇವೇ ಮುಂತಾದವು ಕೆಂಪೇಗೌಡನ ಚರಿತ್ರೆಯನ್ನು ತಿಳಿಯಲು ನಮ್ಮ ನೆರವಿಗೆ ಬರುತ್ತವೆ.

ಕೆಂಪೇಗೌಡನು ಯಲಹಂಕದಿಂದ ಹತ್ತು, ಹನ್ನೆರಡು ಮೈಲಿ ದೂರವಿರುವ ಇಂದಿನ ಬೆಂಗಳೂರಿಗೆ ತನ್ನ ಹಿತೈಷಿಯೂ, ಮಂತ್ರಿಯೂ ಆಗಿದ್ದ ಲಿಂಗಣ್ಣನೊಂದಿಗೆ ಬಂದು ನೋಡಿದನು. ಸಮತಟ್ಟಾದ ಫಲವತ್ತಾದ ಭೂಮಿ ಅಲ್ಲಲ್ಲಿ ಕೆರೆ, ಕುಂಟೆಗಳನ್ನು ಕಂಡು ಇಲ್ಲೊಂದು ಪಟ್ಟಣವನ್ನು ಕಟ್ಟಬೇಕೆಂದು ತೀರ್ಮಾನಿಸಿದನು. ಈ ನಗರ ಬೆಂಗಳೂರು, ಬೆಂದಕಾಳೂರು ಇತ್ಯಾದಿ ಹೆಸರಿನ ಬಗ್ಗೆ ಸಾಕಷ್ಟು ಅಭಿಪ್ರಾಯ



ಭೇದವಿದೆ. ಅವುಗಳನ್ನು ಬದಿಗಿಟ್ಟು ನಗರ ನಿರ್ಮಾಣವಾದ ಬಗ್ಗೆ ವಿವೇಚಿಸೋಣ. ಕ್ರಿ.ಶ. 16ನೇ ಶತಮಾನದಲ್ಲಿ (ಕ್ರಿ.ಶ. 1530ರಲ್ಲಿ ಆರಂಭ) ನಗರ ನಿರ್ಮಾಣ ಪ್ರಾರಂಭವಾಯಿತು. ಇಂದಿನ ಚಿಕ್ಕಪೇಟೆ ಚೌಕವೇ ಅಂದು ರಸ್ತೆಗಳ ನಿರ್ಮಾಣಕ್ಕೆ ಕೇಂದ್ರ ಬಿಂದುವಾಯಿತು. ಪೂರ್ವಕ್ಕೆ ಹಲಸೂರು ಹೆಬ್ಬಾಗಿಲು, ಪಶ್ಚಿಮಕ್ಕೆ ಸೊಂಡೇಕೊಪ್ಪ ಹೆಬ್ಬಾಗಿಲು, ಉತ್ತರಕ್ಕೆ ಯಲಹಂಕ ಹೆಬ್ಬಾಗಿಲು, ದಕ್ಷಿಣಕ್ಕೆ ದೆಹಲಿ ಹೆಬ್ಬಾಗಿಲು ಎಂಬುದಾಗಿ ಹೆಸರಿಸಿ ನಾಲ್ಕು ಹೆಬ್ಬಾಗಿಲುಗಳನ್ನು ನಿರ್ಮಿಸಲಾಯ್ತು. ಪ್ರಮುಖ ಬೀದಿಗಳನ್ನಾಗಿಸಿ ಒಂದೊಂದು ಬೀದಿಗೂ ಇಕ್ಕೆಲಗಳಲ್ಲಿ ಮಳಿಗೆಗಳು, ಮನೆಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿರ್ಮಿಸಿದ.

ಬೆಂಗಳೂರು ಪಟ್ಟಣದ ಎಂಟು ದಿಕ್ಕುಗಳಿಗೂ ಎಂಟು ಕಾವಲು ಗೋಪುರಗಳನ್ನು ನಿರ್ಮಿಸಿದನು. ಈ ಕಾವಲು ಗೋಪುರಗಳು ಇಂದಿಗೂ ಅಸ್ತಿತ್ವದಲ್ಲಿವೆ ಹಾಗೂ ಬೆಂಗಳೂರು ಮಹಾನಗರ ಪಾಲಿಕೆ ತನ್ನ ಚಿಹ್ನೆಯಲ್ಲಿ ಈ ಕಾವಲು ಗೋಪುರವನ್ನು ಬಳಸಿಕೊಂಡಿದೆ. ಇತ್ತೀಚೆಗೆ ಅದು ಕಾರ್ಪೊರೇಷನ್ ಸರ್ಕಲ್‌ನಲ್ಲಿ ಬಹಳ ಎತ್ತರದ ಕಂಬದ ಮೇಲೆ ಗೋಪುರ ನಿರ್ಮಿಸುವುದರ ಮೂಲಕ ಕೆಂಪೇಗೌಡನಿಗೆ ತನ್ನ ಕೃತಜ್ಞತೆ ಸಲ್ಲಿಸಿದೆ.

ಸಾಲುಮರಗಳ ಮಾರ್ಗ (ಇಂದಿನ ಅವಿನ್ಯೂ ರಸ್ತೆ / ಅವಿನ್ಯೂ ಎಂದರೆ ಸಾಲುಮರಗಳ ಮಾರ್ಗ ಎಂದರ್ಥ)ವನ್ನು ನಿರ್ಮಿಸಿದ ಕೆಂಪೇಗೌಡನು ತನ್ನ ಪ್ರಜೆಗಳ ಕಸುಬು, ವ್ಯಾಪಾರಿ ಸರಕುಗಳನ್ನಾಧರಿಸಿ, ಒಂದೊಂದು ವೃತ್ತಿಗೂ ಒಂದೊಂದು ಬೀದಿಯನ್ನು ಮಾಡಿ ಅಕ್ಕಪಕ್ಕದ ರಾಜ್ಯಗಳಿಂದ ವೃತ್ತಿಪರರು ಬಂದು ನೆಲೆಸಲು ಅನುಕೂಲ ಮಾಡಿಕೊಟ್ಟ. ಚಿಕ್ಕಪೇಟೆ, ದೊಡ್ಡಪೇಟೆ, ಕುಂಬಾರರಪೇಟೆ, ನಗರ್ತರ ಪೇಟೆ, ದೇಶದ ಪೇಟೆ, ಬಳೇಪೇಟೆ, ಹರಳೇಪೇಟೆ ಎಂಬ ಹೆಸರುಗಳನ್ನಿಟ್ಟ ಇಂದಿಗೂ ಇದೇ ಹೆಸರುಗಳನ್ನು ಉಳಿಸಿಕೊಂಡಿರುವುದು ಅಂದಿನ ಇತಿಹಾಸಕ್ಕೆ ಹಿಡಿದ ಕನ್ನಡಿಯಾಗಿದೆ. ಬೆಂಗಳೂರು ಪೌರರ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಧರ್ಮಾಂಬುದಿ ಕೆರೆ, ಸಂಪಂಗಿ ಕೆರೆಗಳನ್ನು ನಿರ್ಮಿಸಿದ. ವೃಷಭಾವತಿ ನದಿಗೆ ಅಡ್ಡಗಟ್ಟಿ ತಮ್ಮ ಮನೆದೇವರಾದ ಕೆಂಪಮ್ಮಳ ಹೆಸರಿನಲ್ಲಿ ಕೆಂಪಾಂಬುಧಿ ಕೆರೆ, ಪಟ್ಟಮಹಿಷಿ ಚನ್ನಮ್ಮಳ ಹೆಸರಿನಲ್ಲಿ ಚನ್ನಮ್ಮನ ಕೆರೆ, ತನ್ನ ಸಮೀಪ ಬಂಧು (ಚಿಕ್ಕಮ್ಮ) ಸಿದ್ದಮ್ಮಳ ಹೆಸರಿನಲ್ಲಿ ಸಿದ್ದಿಕಟ್ಟೆ (ಈಗಿನ ಸಿಟಿ ಮಾರ್ಕೆಟ್) ಕೆಂಪಾಪುರ ಅಗ್ರಹಾರದ ಕೆರೆ, ಮಾವಳ್ಳಿ ಕೆರೆ, ಜಕ್ಕರಾಯನ ಕೆರೆ, ಹಲಸೂರು ಕೆರೆ, ವೈಯ್ಯಾಲಿಕಾವಲಿನ ಕೆರೆ, ಯಡಿಯೂರು ಕೆರೆ ಇವೇ ಮುಂತಾದ ಕೆರೆಕುಂಟೆಗಳೇ ಅಲ್ಲದೆ ಕಲ್ಯಾಣಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ನಿರ್ಮಿಸಿದ. ಆದರೆ ಈ ಕಲ್ಯಾಣಿಗಳನ್ನು ಕ್ರಮೇಣ ಮುಚ್ಚಿ ನಗರ ನಿರ್ಮಿಸಿರುವುದನ್ನು ಕಾಣಬಹುದು.

ಕೆಲವಾರು ವರ್ಷಗಳ ಹಿಂದೆ ಗಂಗಾರಾಂ ಕಟ್ಟಡ ಬಿದ್ದು ಹೋದ ಜಾಗದಲ್ಲಿ ಕಲ್ಯಾಣಿ ಇತ್ತೆಂದು ಕಂಡುಬಂತು. ಈ ಮೇಲ್ಕಂಡ ಕೋಟೆಗಳನ್ನು ನಿರ್ಮಿಸಬೇಕಾದ ಸಮಯದಲ್ಲಿ ಕೋಟೆಯ ಬಾಗಿಲು ನಿಲ್ಲದೆ ಬೆಳಗಾಗುವಷ್ಟರಲ್ಲಿ ಬಿದ್ದು ಹೋಗುತ್ತಿರಲು ಇದಕ್ಕೆ ಕಾರಣವೇನೆಂದು ಕೇಳಲು ಒಬ್ಬ ಮಹಿಳೆಯ ಬಲಿ ಅಗತ್ಯವೆಂದು ತಿಳಿಯಿತು.

ಕೆಂಪೇಗೌಡನು ಬಲಿಕೊಟ್ಟು ಕೋಟೆ ಕಟ್ಟುವ ಜಾಯಮಾನದವನಲ್ಲ. ಕಾರಣವೇನೆಂದರೆ ಒಕ್ಕಲಿಗರ ಮತ್ತೊಂದು ಪಂಗಡವಾದ 'ಬೆರಳು ಕೊಡುವ ಒಕ್ಕಲಿಗರು' ಆತನ ಕಾಲದಲ್ಲಿ ಆ ಮನೆತನದ ಹಿರಿಯ ಮಗ ಇಲ್ಲವೇ ಮಗಳು ಬೆರಳನ್ನು ಕತ್ತರಿಸಿ ದೇವರಿಗೆ ಅರ್ಪಿಸುತ್ತಿದ್ದರಂತೆ. ಈ ಪದ್ಧತಿಯನ್ನು ಕೆಂಪೇಗೌಡನು ತಪ್ಪಿಸಿದನು. ಇಂದಿಗೂ ಈ ಪಂಗಡದವರು ಇಂದಿಗೂ ಬೆರಳಿನ ಬದಲು ಸಾಂಕೇತಿಕವಾಗಿ ಎಲೆ ಇಲ್ಲವೇ ಪತ್ರೆಯನ್ನು ದೇವರಿಗೆ ಅರ್ಪಿಸುತ್ತಾರೆ.

ಅಮಾಯಕ ಹೆಣ್ಣುಮಕ್ಕಳನ್ನು ಬಲಿಕೊಡುವುದು ತರವಲ್ಲವೆಂದು ತಿಳಿದ ಕೆಂಪೇಗೌಡನ ಸೊಸೆ ಲಕ್ಷ್ಮೀದೇವಿಯು ರಾತ್ರಿ ಯಾರಿಗೂ ತಿಳಿಯದಂತೆ ಮನೆಯಿಂದ ಹೊರಬಿದ್ದು ಕೋಟೆ ಬಾಗಿಲಿಗೆ ಬಂದು ಬಲಿಯಾದಳು. ಪ್ರೊ. ಎಂ.ವಿ. ಕೃಷ್ಣರಾವ್‌ರವರು ಹೀಗೆ ಉಲ್ಲೇಖಿಸುತ್ತಾರೆ: ಕೆಂಪೇಗೌಡನು ನಿರ್ಮಿಸಲು ಹೊರಟ ಕೋಟೆಯ ಬಾಗಿಲು ನಿಲ್ಲದಿದ್ದಾಗ ಆತನ ಸೊಸೆ ಲಕ್ಷ್ಮಮ್ಮನ ಸುಂದರವಾದ ವಿಗ್ರಹವೊಂದನ್ನು ಮಾಡಿಸಿ ಪ್ರತಿಷ್ಠಾಪನೆ ಮಾಡಿಸಿದ. ಕ್ರಮಾಗತವಾಗಿ ಅಲ್ಲಿ ಪೂಜಾದಿಗಳು ನಡೆಯುವಂತೆ ಏರ್ಪಾಡು ಮಾಡಿದ. (ಬೆಂಗಳೂರು ಕೆಂಪೇಗೌಡ 1964–ಪುಟ 187 – ಡಾ. ಎಂ.ವಿ. ಕೃಷ್ಣರಾವ್.)

ಈ ವಿಗ್ರಹವನ್ನು ಪರೀಕ್ಷಿಸಿದ ಡಾ. ದೇವರಕೊಂಡಾರೆಡ್ಡಿಯವರು, ಲಕ್ಷ್ಮೀ ವಿಗ್ರಹವು ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತು ನಾಲ್ಕು ಕೈಗಳನ್ನು ಹೊಂದಿದ್ದು, ಅಭಯ ವರದ, ಕಮಲದ ಮೊಗ್ಗುಗಳನ್ನು ಧರಿಸಿದೆ. ಇದನ್ನು ಕೆಂಪೇಗೌಡನ ಸೊಸೆ ಲಕ್ಷ್ಮಮ್ಮನ ಸಮಾಧಿಯ ಮೇಲೆ ಸ್ಥಾಪಿಸಿರುವ ಶಿಲ್ಪವೆಂದು ಹೇಳಲಾಗುತ್ತದೆ (ಬೆಂಗಳೂರು ಕೆಂಪೇಗೌಡ (ಸಂ.) ಪ್ರೊ. ಎಂ.ಹೆಚ್. ಕೃಷ್ಣಯ್ಯ – ಡಾ. ದೇವರ ಕೊಂಡಾರೆಡ್ಡಿ, ಬೆಂ., ಪುಟ 83).

ಗುಡಿಗೋಪುರಗಳು, ದೇವಾಲಯಗಳ ನಿರ್ಮಾಣ

ಬೆಂಗಳೂರು ನಿರ್ಮಾಪಕ ಕೆಂಪೇಗೌಡನ ನಂತರ ಮಾಗಡಿ ಕೆಂಪೇಗೌಡನು ಪ್ರಸ್ತುತ ಬೆಂಗಳೂರು ಜಿಲ್ಲೆಯಾದ್ಯಂತ ಹಲವಾರು ಗುಡಿಗೋಪುರ, ದೇವಾಲಯಗಳನ್ನು ನಿರ್ಮಾಣ ಮಾಡುವುದರ ಮೂಲಕ ಕಲೆ, ವಾಸ್ತುಶಿಲ್ಪಕ್ಕೆ ಹೆಚ್ಚಿನ ಮಹತ್ವ ನೀಡಿದನು. ಮೊದಲು ಆವತಿಯಲ್ಲಿ ತಿಮ್ಮರಾಯಸ್ವಾಮಿ, ಚನ್ನಕೆಸವ

ದೇವಾಲಯಗಳು, ದೇವನಹಳ್ಳಿಯ ಗೋಪಾಲಕೃಷ್ಣ ದೇವಾಲಯ, ಬೆಂಗಳೂರಿನಲ್ಲಿ ಗವಿ ಗಂಗಾಧರೇಶ್ವರ, ಬಸವನಗುಡಿಯ ಬಸವಣ್ಣ ದೇವಾಲಯ, ಹಲಸೂರಿನ ಸೋಮೇಶ್ವರ, ಬಳ್ಳಾಪುರ ಪೇಟೆ ರಂಗಸ್ವಾಮಿ, ಕೋಟೆ ರಂಗಸ್ವಾಮಿ, ಕೋಟೆ ವೆಂಕಟರಮಣ, ಮಾಗಡಿ ಸೋಮೇಶ್ವರ, ತಿರುಮಲೆ ರಂಗಸ್ವಾಮಿ, ಸಾವನದುರ್ಗದ ವೀರಭದ್ರಸ್ವಾಮಿ, ಚಿಕ್ಕಬಳ್ಳಾಪುರದ ರಂಗಸ್ವಾಮಿ, ಶಿವಗಂಗೆಯಲ್ಲಿ ಕೆಂಪೇಗೌಡ ಹಜಾರವನ್ನು ನಿರ್ಮಿಸಿದುದೇ ಅಲ್ಲದೆ ಹೊನ್ನಮ್ಮನ ಮಠ, ಉಜ್ಜನಿಮಠ, ಗುಮ್ಮಳಾಪುರದ ದೊಡ್ಡಮಠ ಇವೇ ಮುಂತಾದ ಮಠಗಳನ್ನು ಕಟ್ಟಿಸಿದನು.

ನಾಡಪ್ರಭು ಬೆಂಗಳೂರು ಕೆಂಪೇಗೌಡ ಮತ್ತು ಆತನ ವಂಶಸ್ಥರು

ಭಾರತದಲ್ಲಿ ದೆಹಲಿ, ಕಲ್ಕತ್ತ, ಮುಂಬೈ, ಮದ್ರಾಸ್, ಬೆಂಗಳೂರು ನಗರಗಳು ವಿಶ್ವವಿಖ್ಯಾತವಾಗಿವೆ. ಅದರಲ್ಲೂ ವಿಶೇಷವಾಗಿ 'ಬೆಂಗಳೂರು' ವಿಶ್ವದ ಮಾಹಿತಿ ತಂತ್ರಜ್ಞಾನ ಕೇಂದ್ರ, ಉದ್ಯಾನನಗರಿ, ಏರ್‌ಕಂಡೀಷನ್ ಸಿಟಿ ಇವೇ ಮುಂತಾದ ವಿಶೇಷಣಗಳೊಂದಿಗೆ ಕರೆಯುವುದುಂಟು. ಭಾರತದ ಈ ಮೇಲ್ಕಂಡ ಮೊದಲ ನಾಲ್ಕು ನಗರಗಳು ಬ್ರಿಟಿಷರಿಂದ ನಿರ್ಮಾಣವಾದವು. ಆದರೆ ಐದನೆಯ ನಗರವಾದ ನಮ್ಮ ಬೆಂಗಳೂರು ಧರ್ಮಪ್ರಭು ಕೆಂಪೇಗೌಡರಿಂದ ನಿರ್ಮಾಣವಾದ ನಗರವಾಗಿದೆ. ಕ್ರಿ.ಶ. 16ನೆ ಶತಮಾನದಲ್ಲಿ ಯೋಜಿತ ನಗರವನ್ನು ನಿರ್ಮಾಣಮಾಡಬೇಕೆಂದು ತೀರ್ಮಾನಿಸಿ ಮುಂದೆ ನಿರ್ಮಾಣವಾಗುವ ನಗರಕ್ಕೆ ಎತೇಚ್ಚವಾದ ಗಾಳಿ, ಬೆಳಕು, ಕುಡಿಯುವ ನೀರು ಇವೇ ಮುಂತಾದ ಮೂಲ ಸೌಕರ್ಯಗಳನ್ನು ಒದಗಿಸಿದ ಕೀರ್ತಿ ಮೊದಲನೆ (ಬೆಂಗಳೂರು ಕೆಂಪೇಗೌಡ) ಹಾಗೂ ಎರಡನೇ ಕೆಂಪೇಗೌಡ (ಮಾಗಡಿ ಕೆಂಪೇಗೌಡ) ರಿಗೆ ಸಲ್ಲುತ್ತದೆ. ಬೆಂಗಳೂರು ನಾಗರಿಕರ ಪಾಲಿಗೆ ಇವರು ಪ್ರಾತಃಸ್ಮರಣೀಯರು.

ಕೆಂಪೇಗೌಡನ ಮತ್ತು ಆತನ ವಂಶಸ್ಥರ ಬಗೆಗಿನ ಇತಿಹಾಸ ಇಂತಿದೆ. ರಣಭೈರೇಗೌಡನೆಂಬುವವನು ಇವರ ಮೂಲಪುರುಷ ಈತ ಕಂಚಿಯ ಬಳಿಯಿರುವ ಯಣಮಂಜಿ ಪುತ್ತೂರಿನಲ್ಲಿ ತನ್ನ ಏಳುಮಂದಿ ತಮ್ಮಂದಿರು ಹಾಗೂ ಮಕ್ಕಳೊಂದಿಗೆ ವಾಸವಾಗಿದ್ದ. ಆತನಿಗೆ ದೊಡ್ಡಮ್ಮ ಎಂಬ ರೂಪವತಿಯಾದ ಮಗಳಿದ್ದಳು. ಕೀಳುಜಾತಿಯವನು, ಕುರೂಪಿಯೂ ಆದ ಸೆಲ್ಪನಾಯಕನೆಂಬ ಪಾಳೇಗಾರನು ರಣಭೈರೇಗೌಡನ ಮಗಳಾದ ದೊಡ್ಡಮ್ಮಳನ್ನು ತನಗೆ ಕೊಟ್ಟು ವಿವಾಹ ಮಾಡಬೇಕೆಂತಲೂ ಇಲ್ಲವಾದರೆ ಯುದ್ದಮಾಡಬೇಕೆಂದು ಹೇಳಿ ಕಳುಹಿಸಿದ. ರಂಭೈರೇಗೌಡನು ಯುದ್ದ ಮಾಡಲು ತೀರ್ಮಾನಿಸಿದನು. ಆದರೆ ಮುಂದೆ ಯುದ್ಧವಾದರೆ ಸ್ಥಳೀಯರಾದ ಗ್ರಾಮಸ್ಥರು ಸಾವುನೋವನ್ನು ಅನುಭವಿಸಬೇಕಾಗುತ್ತದೆ ತಮಗಾಗಿ; ತಮ್ಮ ಸ್ವಾರ್ಥಕ್ಕಾಗಿ ಅಮಾಯಕ ಜನಗಳನ್ನು ಬಲಿಕೊಡಬೇಕಾಗುತ್ತದೆ ಎಂದರಿತ ಗೌಡನು ಅಲ್ಲಿಂದ ಬೇರೆಕಡೆಗೆ ಹೋಗಲು ತೀರ್ಮಾನಿಸಿದನು. ತನ್ನ ತಮ್ಮಂದಿರು ಹಾಗೂ ಅವರ

ಸಂಸಾರ, ತಾನು ಹಾಗೂ ತನ್ನ ಸಂಸಾರ ಒಟ್ಟು ಏಳು ಎತ್ತಿನ ಗಾಡಿಗಳನ್ನು ಮಾಡಿಕೊಂಡು ರಾತ್ರೋರಾತ್ರಿ ಅಲ್ಲಿಂದ ಹೊರಟರು ಮಾರ್ಗಮಧ್ಯದಲ್ಲಿ ಪಾಲಾರ್ ನದಿ ಸಿಗಲು ಗೌಡನ ಮಗಳಾದ ದೊಡ್ಡಮ್ಮಳು ತನ್ನಿಂದ ತನ್ನ, ವಂಶಸ್ಥರಿಗೆ ಈಗತಿ ಬಂತಲ್ಲಾ ಎಂದು ಮಮ್ಮಲ ಮರುಗಿದಳು. ಗಂಗಾಮಾತೆಗೆ ಹೀಗೆಂದು ಪ್ರಾರ್ಥಿಸಿದಳು. ತಾನು ತನ್ನ ವಂಶಸ್ಥರು ನದಿದಾಟಲು ಅನುವುಮಾಡಿಕೊಟ್ಟರೆ ತನ್ನ ಬೆರಳನ್ನು ಬಲಿಕೊಡುತ್ತೇನೆಂದು ಹೇಳಿ ತನ್ನ ಕಿರುಬೆರಳನ್ನು ನೀಡಿದಳು. ಶಾಂತಳಾದ ಗಂಗಾಮಾತೆಯನ್ನು ದಾಟಿ ಉತ್ತರಕ್ಕೆ ನಡೆದು ಇಂದಿನ ದೇವನಹಳ್ಳಿಗೆ ಹೋಗುವ ರಸ್ತೆಯಲ್ಲಿ ಸಿಗುವ 'ಆವತಿ' ಎಂಬ ಗ್ರಾಮದಲ್ಲಿ ಬಂದು ನೆಲೆಸಿದರು. ಇತ್ಯಾದಿ.

ಬಹುಷಃ ಇದು ಐತಿಹ್ಯವಾದರೂ ಒಕ್ಕಲಿಗರ ಸಮುದಾಯದಲ್ಲಿ ಪ್ರಮುಖ ಪಂಗಡಗಳಲ್ಲೊಂದಾದ ಮರಸು ಒಕ್ಕಲಿಗರಲ್ಲಿ ಬಹಳಕಾಲ ತಮ್ಮ ಹೆಣ್ಣುಮಕ್ಕಳ ಕಿರುಬೆರಳನ್ನು ಕತ್ತರಿಸುತ್ತಿದ್ದರಂತೆ ಆದರೆ ಕೆಂಪೇಗೌಡನು ಈ ಪದ್ಧತಿಯನ್ನು ತಡೆದನೆಂಬ ಪ್ರತೀತಿ ಇದೆ. ಇಂದಿಗೂ ಕೂಡ ಮೊರಸು ಒಕ್ಕಲಿಗರಲ್ಲಿ ಬೆರಳುಕೊಡೂ ಒಕ್ಕಲಿಗರು ಎಂಬ ಉಪಪಂಗಡವನ್ನು ಕಾಣಬಹುದು. ಏಳುಜನ ಸಹೋದರರು ಎತ್ತಿನಗಾಡಿಯಲ್ಲಿ 'ಆವತಿ'ಗೆ ಬಂದು ನೆಲೆಸಿದ್ದರಿಂದ ಇಂದಿಗೂ 'ಬಂಡಿಕಾಪಲು' ಬಂಡಿದ್ಯಾವ್ರ ಉತ್ಸವಜಾತ್ರೆ, ಹಬ್ಬವನ್ನು ಮಾಡುವ ವಾಡಿಕೆ ಇಂದಿಗೂ ಇದೆ.

ರಂಭೈರೇಗೌಡನು ತಮಿಳುನಾಡಿನ ಕಾಂಚಿಪುರಂನಿಂದ ಬಂದ ವಿಚಾರವನ್ನು ಇತ್ತೀಚಿನ ಕೆಲವು ಇತಿಹಾಸ ತಜ್ಞರು ಮತ್ತು ವಿದ್ವಾಂಸರು ಅಲ್ಲಗಳೆದು ಹೀಗೆ ಹೇಳು-ತ್ತಾರೆ. ರಣಭೈರೇಗೌಡರ ಕುಟುಂಬ ಕೋಲಾರ ಜಿಲ್ಲೆಯ ಆಸುಪಾಸಿನಲ್ಲೆ ವಾಸಿಸಿದ್ದಿರ-ಬೇಕು, ಅವುಗಳೆಂದರೆ ಕೋಲಾರ, ಹೊಸಕೋಟೆ, ಡಂಕಣಿಕೋಟೆ ಭಾಗವನ್ನು ಮರಸುನಾಡು ಎಂದು ಕರೆಯಲಾಗಿದೆ. ಈ ಭಾಗಗಳು ತೆಲುಗು ಭಾಷಾಪ್ರಭಾವಕ್ಕೆ ಒಳಗಾಗಿತ್ತು. ಹೀಗಾಗಿ ಕೆಂಪೇಗೌಡನ ವಂಶಸ್ಥರು ತೆಲುಗು ಭಾಷಿಕರು. ಈ ಮೇಲ್ಕಂಡ ಪ್ರದೇಶಗಳು ಒಮ್ಮೆ ತಲಕಾಡಿನ ಗಂಗರಿಗೆ ಸೇರಿತ್ತು. ಅಲ್ಲಿಗೆ ತಮ್ಮ ಮಾಂಡಲಿಕರನ್ನು ನೇಮಿಸಿದ್ದರು. ಕ್ರಿ.ಶ.10ನೇ ಶತಮಾನದಲ್ಲಿ ಚೋಳರು ಪ್ರಬಲರಾಗಿ ಗಂಗರ ಹಲವಾರು ಪ್ರದೇಶಗಳನ್ನು ಗೆದ್ದಕೊಂಡರು ಅದರಲ್ಲಿ ಈ ಪ್ರದೇಶವೂ ಒಂದು (ಚೋಳರು ತಲಕಾಡು ಗೊಂಡ ಎಂಬ ಬಿರುದನ್ನು ಪಡೆದರೆಂದು ಇಲ್ಲಿ ಸ್ಮರಿಸಬಹುದು). ಇದರಿಂದಾಗಿ ಈ ಪ್ರದೇಶವು ಒಮ್ಮೆ ಕಂಚಿಪ್ರಾಂತ್ಯಕ್ಕೆ ಸೇರಿರಬಹುದು.

ಆವತಿಯಲ್ಲಿ ರಣಭೈರೇಗೌಡರ ಕುಟುಂಬ

ಹಾವುಹತ್ತಿ ಕ್ರಮೇಣ 'ಆವತಿ' ಯಾಯಿತೆಂದು ಹೇಳುತ್ತಾರೆ. ರಣಭೈರೇಗೌಡನ ಆರುಮಂದಿ ಸಹೋದರರು ಮತ್ತು ನಾಲ್ಕುಜನ ಮಕ್ಕಳ ದೊಡ್ಡ ಕುಟುಂಬವೇ ಆಗಿತ್ತು. ಒಕ್ಕಲಿಗರ ಮುಖ್ಯ ಕಸುಬೇ ವ್ಯವಸಾಯ. ಹೀಗಾಗಿ ಸುತ್ತಮುತ್ತಲಿನ ಪ್ರದೇಶ

ಗಳಲ್ಲಿ ಬೆಳೆದಿದ್ದ ಮುಳುಗಂಟಿಯನ್ನು ಕಡಿದು ಹಸನುಗೊಳಿಸಿದರು. ಭೂಮಿ–ತಾಯಿಯ ಪೂಜೆಮಾಡಿ, ಎತ್ತುಗಳನ್ನು, ನೇಗಿಲನ್ನು ಶೃಂಗರಿಸಿ ಊರತುಂಬ ಮೆರವಣಿಗೆ ಮಾಡಿ ಉಳುಮೆಮಾಡಿದರು. ಕಾಲಕಾಲಕ್ಕೆ ಮಳೆ ಬೆಳೆಯಾಗುತ್ತಿದ್ದ ಕಾರಣದಿಂದ 'ಆವತಿ' ಊರು ಗೌಡರಿಗೆ ಒಲಿದು ಬಂತು. ಗೌಡರು ದಿನೇ ದಿನೇ ಪ್ರವರ್ದಮಾನಕ್ಕೆ ಬಂದರು. ಆವತಿಯಲ್ಲಿ ಚನ್ನಕೇಶವ ದೇವಾಲಯ ಮತ್ತು ತಿಮ್ಮರಾಯ ಸ್ವಾಮಿ ದೇವಾಲಯಗಳನ್ನು ಕಟ್ಟಿಸಿದ ರಣಭೈರೇಗೌಡನು ಪ್ರಬಲನಾ–ದಂತೆಲ್ಲ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶತ್ರುಗಳು ಹುಟ್ಟಿಕೊಂಡರು. ಅವರಲ್ಲಿ ಮಧುಗಿರಿ, ಮಿಡಿಗೇಶಿ, ದೊಡ್ಡಬಳ್ಳಾಪುರ ಇವೇ ಮುಂತಾದ ಪ್ರದೇಶಗಳು. ಮಧುಗಿರಿಯ ಮಾರನಾಯಕನು ದುಷ್ಟನೂ ಪ್ರಜಾಪೀಡಕನು ಆಗಿದ್ದನು. ಈತನಿಗೆ ಮಿಡಿಗೇಶಿಯ ನಾಯಕನ ಸಹಾಯ ಹಾಗೂ ಕುಮ್ಮಕ್ಕೂ ಇದ್ದಿತು. ಆಗಿಂದಾಗ್ಗೆ ಆವತಿಯ ಮೇಲೆ ಬಿದ್ದು ದಾಳಿಮಾಡುತ್ತಿದ್ದರು. ಬೇಸತ್ತ ರಣಭೈರೇಗೌಡ ತನ್ನ ಸಹೋದರರೊಂದಿಗೆ ಒಂದು ಕೈದಳ(ಪುಟ್ಟಸೈನ್ಯ)ದ ಸಹಾಯದಿಂದ ಮಾರನಾಯಕ –ನನ್ನು ಸೋಲಿಸಿದನು.

ರಣಭೈರೇಗೌಡನ ಸಹೋದರರು ಬಲಶಾಲಿಗಳಾದ್ದರಿಂದ ಅವರು ಸ್ವತಂತ್ರರಾಗಿ ತಲೆ ಎತ್ತಲಿ ಎಂಬ ಕಾರಣದಿಂದ ತಾನು ಗಳಿಸಿದ ಧನಕನಕಗಳನ್ನು ಅವರಿಗೆ ಹಂಚಿ, ಹರಿಸಿ, ಆರೈಸಿ ಆವತಿಯಂತೆ ಕೆಲವು ನಾಡುಗಳನ್ನು ಕಟ್ಟಿರೆಂದು ಬುದ್ಧಿವಾದ ಹೇಳಿ ಆವತಿಯಿಂದ ಅವರನ್ನು ಬೀಳ್ಕೊಟ್ಟನು. ಅವರುಗಳು ಮುಂದೆ ಈ ಕೆಳಕಂಡ ಪ್ರದೇಶಗಳಿಗೆ ತೆರಳಿ ಆ ಪ್ರದೇಶವನ್ನು ಅಭಿವೃದ್ಧಿಪಡಿಸಿ ನಾಡಪ್ರಭು–ಗಳಾದರು. ಅವುಗಳೆಂದರೆ.

1. ಭದ್ರೇಗೌಡ–ಮಿಡಿಗೇಶಿ	4. ಮುತ್ತೇಗೌಡ–ಸುಗಟೂರು
2. ವೀರಣ್ಣಗೌಡ–ಮಧುಗಿರಿ	5. ತಮ್ಮೇಗೌಡ–ಕುಣಿಗಲ್
3. ಗಿಡ್ಡೇಗೌಡ–ಮುಳಬಾಗಿಲು	6. ಸಿದ್ದೇಗೌಡ–ಕೊಲಾರ

ರಣಭೈರೇಗೌಡನು 'ಆವತಿ'ಯನ್ನು ಅಭಿವೃದ್ಧಿಪಡಿಸಿದನು ಧರ್ಮದಿಂದಲೂ, ದರ್ಪದಿಂದಲೂ ಆಳ್ವಿಕೆ ಮಾಡಿದನು. ರಣಭೈರೇಗೌಡನು ವಿಧಿವಶನಾಗಲು ಆತನ ಮಗ ಜಯಪ್ಪಗೌಡ ಅಥವ ಜಯಗೌಡ ಅಧಿಕಾರಕ್ಕೆ ಬಂದನು.

ಯಲಹಂಕ ಮತ್ತು ಜಯಗೌಡ

ರಣಭೈರೇಗೌಡನ ಮಗನಾದ ಜಯಗೌಡನು ವೀರನೂ, ಶೂರನೂ ಆಗಿದ್ದು ನಡನ್ನು ಕಟ್ಟುವ ಉತ್ಸಾಹದಲ್ಲಿದ್ದನು. ಆವತಿಯು ತನ್ನ ಸಾಮಥ್ಯಕ್ಕೆ ತಕ್ಕುದಲ್ಲವೆಂದು ಪರಿಗಣಿಸಿ ಅಲ್ಲಿಂದ ಮುಂದೆ ಇದ್ದ ಯಲಹಂಕಕ್ಕೆ ದಾಳಿಯಿಟ್ಟು ಅಲ್ಲಿದ್ದ ಪುಂಡಪೋಕರಿ

–ಗಳನ್ನು ದಮನಮಾಡಿ ಹೊಸನಾಡನ್ನು ಕಟ್ಟಿದನು. ಇಂದಿನ ಯಲಹಂಕ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಹೊಯ್ಸಳರ ಕಾಲದಲ್ಲಿ ಯಲಹಕ್ಕವಾಗಿ ಚೋಳರ ಕಾಲದಲ್ಲಿ ಸರ್ವಮಂಗಳ ವೇದಿ ಇಳೈವಪಕ್ಕ ಎಂದಾಗಿ ನಂತರ ಯಲವಂಕವಾಗಿ ಕೊನೆಗೆ ಯಲಹಂಕವಾಯ್ತು. ಯಲಹಂಕನಾಡನ್ನು ಅಭಿವೃದ್ಧಿ ಪಡಿಸಿ ಗುಡಿಗೋಪುರ –ಗಳನ್ನು ಕಟ್ಟಿಸಿದ ಜಯಗೌಡ/ಜಯಪ್ಪಗೌಡ, ವಿಜಯನಗರದ ಅರಸರ ಕೃಪೆಯಿಂದಾಗಿ 'ಯಲಹಂಕ ಭೂಪಾಲ' ಎಂಬ ಬಿರುದುಪಡೆದ. ಯಲಹಂಕದಲ್ಲಿ ದೇವರ ಉತ್ಸವಗಳು, ಜಾತ್ರೆಗಳು, ನಡೆಯುತ್ತಿದ್ದವು. ಯಲಹಂಕದ ಹತ್ತಿರವೇ ಇರುವ ಅಲ್ಲಾಳಸಂದ್ರದಲ್ಲಿ 'ಅಲ್ಲಾಳದೇವ' ಎಂಬ ದೇವಸ್ಥಾನವನ್ನು ಕಟ್ಟಿಸಿದ.

ಬೆಂಗಳೂರು ಕೆಂಪೇಗೌಡ

ಆವತಿಯ ನಂತರ ಯಲಹಂಕನಾಡು ಅಭಿವೃದ್ಧಿಗೊಂಡಿತು ಜಯಗೌಡ/ ಜಯಪ್ಪಗೌಡನ ವಂಶಸ್ಥರು ಆಳ್ವಿಕೆಗೆ ಬಂದರು. ಅವರುಗಳೆಂದರೆ ಜಯಗೌಡನ ನಂತರ ಗಿಡ್ಡೇಗೌಡನು ಯಲಹಂಕದ ಪ್ರಭುವಾದನು. ಗಿಡ್ಡೇಗೌಡನಿಗೆ ಗಂಡು ಮಕ್ಕಳಿಲ್ಲದಿದ್ದರಿಂದ ತಮ್ಮ ಮನೆ ದೇವರಾದ ಕೆಂಪಮ್ಮಳಿಗೆ ಗಿಡ್ಡೇಗೌಡ ದಂಪತಿಗಳು ಅರಕೆಹೊತ್ತರು. ಅದರ ಪ್ರಕಾರ ಮುಂದೆ ತಮಗೆ ಮಕ್ಕಳಾದರೆ ಅವರ ಹೆಸರಿನ ಮುಂದೆ ನಿನ್ನ ಹೆಸರನ್ನು ಸೇರಿಸುತ್ತೇನೆ ಎಂದು ಅರಿಕೆ ಮಾಡಿಕೊಂಡರು. ಅದರಂತೆ ಹೆಣ್ಣು ಮಕ್ಕಳಾದರೆ ಕೆಂಪಮ್ಮ, ಕೆಂಪಾದೇವಿ, ಕೆಂಪಿ ಎಂತಲೂ ಗಂಡುಮಕ್ಕಳಾದರೆ ಕೆಂಪೇಗೌಡ, ಕೆಂಪಭೂಪ, ಕೆಂಪರಾಜ ಎಂತಲೂ ತಮ್ಮ ಮತ್ತೊಂದು ಮನೆದೇವರಾದ ಭೈರವೇಶ್ವರನಿಗೆ ಅರಿಕೆಹೊತ್ತು ಮುಂದೆ ಹುಟ್ಟುವ ಮಕ್ಕಳಿಗೆ ಭೈರೇಗೌಡ, ಭೈರಮ್ಮ, ಭೈರಪ್ಪ ಎಂದು ಹೆಸರಿಡುವುದಾಗಿ ಅರಿಕೆಹೊತ್ತರು.

ಮುಮ್ಮಡಿ ಕೆಂಪವೀರಪ್ಪಗೌಡರ ಆಸ್ಥಾನ ಕವಿಯಾಗಿದ್ದ "ಏಕಾಂಬರ ದೀಕ್ಷಿತ"ರಿಂದ ರಚಿತವಾದ "ವೀರಭದ್ರವಿಜಯ್" ವೆಂಬ ಚಂಪೂಕಾವ್ಯದಲ್ಲಿನ ಯಲಹಂಕ ಪ್ರಭುಗಳ ವಂಶವೃಕ್ಷ ಈ ಕೆಳಕಂಡಂತಿದೆ.

ರಣಭೈರೇಗೌಡ

|

ಗಿಡ್ಡೇಗೌಡ

|

ಕೆಂಪನಾಚೇಗೌಡ

|

ಹಿರಿಯ ಕೆಂಪೇಗೌಡ

(ಬೆಂಗಳೂರು ನಿರ್ಮಾಪಕ ಜೀವಿತ ಕಾಲ ಕ್ರಿ.ಶ.1510–ಕ್ರಿ.ಶ.1608)

|

ಇಮ್ಮಡಿ ಕೆಂಪೇಗೌಡ (ಮಾಗದಿ ಕೆಂಪೇಗೌಡ)

|

ಮುಮ್ಮಡಿ ಕೆಂಪೇಗೌಡ

|

ಇಮ್ಮಡಿ ಹಿರಿಯ ಕೆಂಪೇಗೌಡ

|

ಇಮ್ಮಡಿ ಕೆಂಪವೀರಪ್ಪಗೌಡ

|

ದೊಡ್ಡವೀರಪ್ಪಗೌಡ

|

ಮುಮ್ಮಡಿ ಕೆಂಪವೀರಪ್ಪಗೌಡ
(ಶಿವೈಕ್ಯರಾದ ಕಾಲ ಕ್ರಿಶ. 1728)

ಕೆಂಪನಂಜೇಗೌಡನು ಯಲಹಂಕವನ್ನು ಆಳುತ್ತಿರಲು ಆತನ ಮಗನಾದ ಕೆಂಪೇಗೌಡನು ಒಮ್ಮೆ ವಿಹಾರಾರ್ಥ ದಕ್ಷಿಣಾಭಿಮುಖವಾಗಿ ಪರಿವಾರ ಸಮೇತ ತೆರಳಿದ. ಇಂದಿನ ಬೆಂಗಳೂರು ಅಂದು ಸಮತಟ್ಟಾದ ಪ್ರದೇಶವಾಗಿದ್ದು ಅಲ್ಲಲ್ಲಿ ಕೆರೆ, ಕಟ್ಟೆ, ನೀರಿನ ಸೆಲೆ ಇದ್ದುದು ಕಂಡುಬಂತು. ಅದನ್ನು ನೋಡಿದ ಕೆಂಪೇಗೌಡನು ಇಲ್ಲಯೇ ಒಂದು ಊರು ಕಟ್ಟಬಾರದೇಕೆ ಎಂದು ಯೋಚಿಸಿದನು. ಯಲಹಂಕ ಪಟ್ಟಣಕ್ಕಿಂತಲು ಸುಂದರವಾದ ಪಟ್ಟಣವನ್ನು ಕಟ್ಟಬೇಕೆಂದು ಕನಸುಕಂಡನು. ತನ್ನ ಉದ್ದೇಶವನ್ನು ತನ್ನ ತಾಯಿಗೆ ತನ್ನ ಪರಿವಾರ, ಮತ್ತು ಗುರುಹಿರಿಯರಿಗೂ ತಿಳಿಸಿದ ಎಲ್ಲರ ಆಶೀರ್ವಾದ ಪಡೆದು ಒಂದು ಶುಭ ಘಳಿಗೆ, ಶುಭ ಮುಹೂರ್ತದಲ್ಲಿ ಪಟ್ಟಣಕಟ್ಟಲು ತೀರ್ಮಾನಿಸಿದ.

ಬೆಂಗಳೂರು ನಗರನಿರ್ಮಾಣ

ಕೆಂಪೇಗೌಡನು ಅಪ್ಪಟ ರೈತಾಪಿ ಜನಾಂಗಕ್ಕೆ ಸೇರಿದುದರಿಂದ ನಾಲ್ಕುಜೊತೆ ಎತ್ತುಗಳನ್ನು ಹಾಗೂ ನೇಗಿಲನ್ನು ತರಿಸಿ ಅವುಗಳನ್ನು ಶಾಸ್ತ್ರೋಕ್ತವಾಗಿ ಪೂಜಾ ಕೈಂಕರ್ಯಗಳನ್ನು ಮಾಡಿ ಪಟ್ಟಣದ ನಕಾಶೆಯನ್ನು ತಯಾರಿಸಿದನು. ಮುಂಜಾನೆ ನಾಲ್ಕು ದಿಕ್ಕಿಗೂ ನೇಗಿಲಪಟ ಒಡೆಸಿದನು. ಇಂದಿನ ಚಿಕ್ಕಪೇಟೆ ವೃತ್ತವನ್ನು ಕೇಂದ್ರಬಿಂದುವನ್ನಾಗಿ ಮಾಡಿಕೊಂಡು ಅಲ್ಲಿಂದ ಪೂರ್ವದಿಕ್ಕಿಗೆ ಹಲಸೂರು ಪ್ರದೇಶದವರೆಗೆ, ಪಶ್ಚಿಮದಲ್ಲಿ ಸೊಂಡೇಕೊಪ್ಪದ ತೀರಕ್ಕೆ, ಇಂದಿನ ಮೈಸೂರು ವೃತ್ತ ಅಥವ ಸಿರ್ಸಿವೃತ್ತದವರೆಗೆ ಗೆರೆಗಳನ್ನು ಎಳೆದು ಮುಗಿಸಿದರು. ಅಲ್ಲಿದ್ದ ಗಿಡ,

ಗೆಂಟೆಗಳು, ಕುರುಚಲು ಗಿಡಗಳನ್ನು ಕಡಿದು, ತರಿದು ಸಮತಟ್ಟಾದ ಹಾಗೂ ವಾಸಯೋಗ್ಯವಾದ ತಾಣವನ್ನಾಗಿ ಮಾಡಿದರು (ಕ್ರಿ.ಶ.1527ರ ಸಂದರ್ಭದಲ್ಲಿ).

ವಿಸ್ತಾರವಾದ ಹಾಗೂ ವಾಸಯೋಗ್ಯ ನಿವೇಶನವನ್ನಾಗಿ ಮಾಡಿದ ತರುವಾಯ ಉದ್ದಗಲದರಸ್ತೆಗಳು, ಕೆರೆ, ಕಾಲುವೆಗಳಿಂದ ಪಟ್ಟಣಕ್ಕೆ ನೀರಿನ ವ್ಯವಸ್ಥೆ ಮಾಡಿದರು. ಪಟ್ಟಣದ ಸುತ್ತಲೂ ಮಣ್ಣಿನ ಗೋಡೆಯನ್ನು ನಿರ್ಮಿಸಿದರು. ಕೋಟೆಯಿಂದ ಹೊರಹೋಗಲು, ಬರಲು ದಿಡ್ಡೀಬಾಗಿಲುಗಳನ್ನು ನಿರ್ಮಿಸಿದರು. ಅವುಗಳೆಂದರೆ ಉತ್ತರಕ್ಕೆ ಯಲಹಂಕ ಬಾಗಿಲು/ದ್ವಾರ, ದಕ್ಷಿಣಕ್ಕೆ ಆನೆಕಲ್ ಬಾಗಿಲು (ಇಂದಿನ ಒಕ್ಕಲಿಗರ ಸಂಘ ಹತ್ತಿರ) ಪೂರ್ವಕ್ಕೆ ಹಲಸೂರು ಬಾಗಿಲು ಪಶ್ಚಿಮಕ್ಕೆ ಸೊಂಡೇಕೊಪ್ಪ ಬಾಗಿಲು ಎಂದು ನಾಮಕರಣಮಾಡಿದರು.

ಒಂದು ಬಲವಾದ ಐತಿಹ್ಯದ ಪ್ರಕಾರ. ಭದ್ರವಾದ ಕೋಟೆಯನ್ನೇನೊ ನಿರ್ಮಿಸಿದರು ಆದರೆ ಕೋಟೆಗೆ ಬಲವಾದ ಮುಖ್ಯ ಕೋಟೆಬಾಗಿಲನ್ನು ನಿರ್ಮಿಸಬೇಕಿತ್ತು. ಬಾಗಿಲನ್ನು ನಿಲ್ಲಿಸಿದ ಮೂರನೆಯ ದಿನವೇ ಕೋಟೆಬಾಗಿಲು ಬಿದ್ದುಹೋಗುತ್ತಿತ್ತು. ಪದೇ ಪದೇ ಹೀಗೆ ಆಗುತ್ತಿರಲು ಕೆಂಪೇಗೌಡನು ಪುರೋಹಿತರನ್ನು ಕೇಳಿದನು. ಪುರೋಹಿತರು ತುಂಬುಗರ್ಬಿಣಿಯು ಬಲಿನೀಡಿದರು ಕೋಟೆಯ ದಿಡ್ಡಿಬಾಗಿಲು ನಿಲ್ಲುತ್ತದೆ ಇಲ್ಲವಾದರೆ ಕಷ್ಟ ಎಂದು ತಿಳಿಸಿದ್ದರು. ಯಾರನ್ನು ನೋಯಿಸದ ಚಿಂತಾಕ್ರಾಂತನಾಗಿ ಕೆಲವು ಕಾಲ ಕೆಲಸವನ್ನು ಸ್ಥಗಿತಗೊಳಿಸಿದ. ಇದನ್ನು ಕಂಡು ಗೌಡನ ಸೊಸೆ ಲಕ್ಷ್ಮೀದೇವಿ ಗರ್ಭಿಣಿಯಾದ ತಾನೇ ಏಕೆ ಆತ್ಮಾರ್ಪಣೆ ಮಾಡಿಕೊಳ್ಳಬಾರದು ಎಂದು ತೀರ್ಮಾನಿಸಿ ಯಾರಿಗೂ ಹೇಳದೆ ಕೋಟೆಬಾಗಿಲಿಗೆ ಆತ್ಮಾರ್ಪಣೆಮಾಡಿಕೊಂಡಳು. ಈ ಸುದ್ದಿ ಕಾಳ್ಗಿಚ್ಚಿನಂತೆ ಸುತ್ತಿನ ತುಂಬೆಲ್ಲ ಹಬ್ಬಿತು. ಗೌಡನು ಚಿಂತಾಕ್ರಾಂತನಾದನು ಗುರುಹಿರಿಯರು ಕೆಂಪೇಗೌಡನನ್ನು ಸಮಾಧಾನಮಾಡಿ ಸಂತೋಷದಿಂದ ಹಿಡಿದ ಕೆಲಸ ಪೂರ್ತಿಮಾಡಿ ಸ್ವರ್ಗಸ್ಥಳಾದ ಲಕ್ಷ್ಮೀದೇವಮ್ಮಳ ಆತ್ಮವನ್ನು ಸಂತೋಷಗೊಳಿಸು ಇಲ್ಲವಾದರೆ ಅಪಚಾರವಾಗುತ್ತದೆ ಎಂದು ಎಚ್ಚರಿಸಿದರು. ಕೆಂಪೇಗೌಡನು ಆದರಂತೆ ಕೆಲಸ ಮುಂದುವರೆಸಿದ ಕೋಟೆಬಾಗಿಲು ನಿಂತಿತು. ನಾಲ್ಕು ದಿಕ್ಕಿಗೂ ದಿಡ್ಡಿಬಾಗಿಲುಗಳನ್ನು ನಿಲ್ಲಿಸಿದ.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕೋಟೆಬಾಗಿಲುಗಳಿಗೆ ಗೇಟ್ ಎಂದು ಕರೆಯುತ್ತಿದ್ದರು. ನಂತರ ಜನರ ಬಾಯಲ್ಲು ಈ ಗೇಟುಗಳು ಉಳಿದವು. ಕೆಂಗೇರಿ ಗೇಟು (ಕೆಂಗೇರಿ ಗೇಟ್ ಪೊಲೀಸ್ ಠಾಣೆ) ಹಲಸೂರು ಗೇಟು (ಹಲಸೂರು ಗೇಟ್ ಪೊಲೀಸ್ ಠಾಣೆ) ಇತ್ಯಾದಿ. ಯಶವಂತಪುರ ಹಾಗೂ ಯಲಹಂಕಬಾಗಿಲು ಇದ್ದ ಪ್ರದೇಶದಲ್ಲಿ ಇಂದು ಮೈಸೂರು ಬ್ಯಾಂಕ್ ಸ್ಥಾಪನೆಯಾಗಿದೆ.

ಯಶವಂತಪುರ ಬಾಗಿಲು ಇದ್ದ ಪ್ರದೇಶದಲ್ಲಿ ಈಗ ಉಪ್ಪಾರಪೇಟೆ ಪೊಲೀಸ್ ಸ್ಟೇಷನ್ ಇದೆ. ಆನೇಕಲ್ ಬಾಗಿಲು ಇದ್ದ ಸ್ಥಳದಲ್ಲಿ ಇಂದು ಕಲಾಸಿಪಾಳ್ಯ ಪೊಲೀಸ್ ಸ್ಟೇಷನ್ ಇದೆ. ಕಾನಕಾನಹಳ್ಳಿ ಬಾಗಿಲು(ಕನಕಪುರ) ಇದ್ದ ಸ್ಥಳದಲ್ಲಿ ಇಂದು ಒಕ್ಕಲಿಗರ ಸಂಘವಿದೆ. ದಾರಿಹೋಕರು ಯಾವ ಊರಿಗೆ ಹೊಗಬೇಕೂ ಆ ಊರಿನ ಹೆಸರಿನಲ್ಲೇ ಹೆಬ್ಬಾಗಿಲುಗಳನ್ನು ನಿರ್ಮಿಸುತ್ತಿದ್ದರು.

ಬೆಂಗಳೂರು ಹೆಸರಿನ ನಾಮಕರಣ

ಕೆಂಪೆಗೌಡನು ತನ್ನ ಕನಸಿನ ಪಟ್ಟಣಕ್ಕೆ ಸುಂದರವಾದ ಹೆಸರಿಡಲು ಬಯಸಿದನು. ಬೆಂಗಳೂರಿನ ಹೆಸರಿನ ಬಗ್ಗೆ ಕೆಲವಾರು ಊಹಾಪೋಹಗಳು. ಐತಿಹ್ಯಗಳು ಇವೆ. ಒಮ್ಮೆ ಹೊಯ್ಸಳ ವೀರಬಲ್ಲಾಳನು ಬೇಟೆ ಮಾಡುತ್ತಾ ದಾರಿತಪ್ಪಿ ಹಸಿವಿನಿಂದ ಕಂಗೆಟ್ಟು ಇಲ್ಲಿಗೆ ಬರಲು ಅಲ್ಲಿಯೇ ಚಿಕ್ಕಗುಡಿಸಲಿನಲ್ಲಿ ವಾಸವಾಗಿದ್ದ ಮುದುಕಿಯು ಬಂದಂತಹ ಅತಿಥಿಗೆ ಬೆಂದಕಾಳನ್ನು ನೀಡಿ ಉಪಚರಿಸಲಾಗಿ ಈ ಊರಿಗೆ ಬೆಂದಕಾಳೂರು ಎಂದು ಬಲ್ಲಾಳನು ನಾಮಕರಣ ಮಾಡಿದನೆಂತಲೂ ಅಲ್ಲಿಂದಾಗಿ ಬೆಂದಕಾಳೂರು ಕ್ರಮೇಣ ಬೆಂಗಳೂರು ಆಯಿತು ಇತ್ಯಾದಿಯಾಗಿ ಹೇಳುತ್ತಾರೆ. ಇದು ಐತಿಹ್ಯ, ಐತಿಹ್ಯವೆಂದರೆ ಇತಿಹಾಸವಲ್ಲದ್ದು ಇದೆಲ್ಲ ಊಹಾಪೋಹಗಳಾಗಿವೆ. "ಬೆಂಗಳೂರು" ಎಂಬ ಊರಿನ ಪದ ಕ್ರಿ.ಶ. 9ನೇ ಶತಮಾನದಲ್ಲಿ ಬಳಕೆಯಲ್ಲಿತ್ತೆಂದು ತಿಳಿದು ಬರುತ್ತದೆ. ಹೇಗೆಂದರೆ ಬೆಂಗಳೂರಿನ ದಕ್ಷಿಣಕ್ಕೆ ಹತ್ತು ಮೈಲಿ ದೂರದಲ್ಲಿ ಬೇಗೂರು ಎಂಬ ಗ್ರಾಮವಿದೆ. ಇಲ್ಲಿನ ನಾಗೇಶ್ವರ ದೇವಾಲಯದಲ್ಲಿ ಒಂದು ವೀರಗಲ್ಲು ದೊರೆತಿದೆ. ಈ ವೀರಗಲ್ಲಿನಲ್ಲಿ 'ಬೆಂಗಳೂರು' ಎಂಬ ಊರಿನ ಪದ ಬಳಕೆಯಾಗಿದೆ. ಇತಿಹಾಸ ತಜ್ಞರು ಸಂಶೋಧಕರು ಆದ ಆರ್. ನರಸಿಂಹಾಚಾರ್ ರವರು (ಎಂ.ಎ.ಆರ್ 1915) ಬೇಗೂರು ಶಾಸನವನ್ನು ಉಲ್ಲೇಖಿಸಿ ಬೆಂಗಳೂರು ಎಂಬ ಪದ ಕ್ರಿ.ಶ. 9ನೇ ಶತಮಾನದಲ್ಲಿಯೇ ಬಳಕೆಯಾಗಿರುವುದಾಗಿ ಪುರಾವೆ ನೀಡುತ್ತಾರೆ. ಆ ಶಾಸನಪಾಠ ಇಂತಿದೆ.

1. ಶ್ರೀಮತ್ ನಾಗತ
2. ರನಮನೆವನ
3. ತಿಪೆರ್ವ್ಬೆಶೆಟ್ಟಿ
4. ಬೆಂಗಳೂರ ಕಾಳ
5. ಗದೋಳ್ ನಾಗ
6. ತರನ ಮಗಂ ಬುಟ್ಟಣ
7. ಪತಿ ಸತ್ತಂ

ಈ ಮೇಲಿನ ಶಾಸನದ ನಾಲ್ಕನೆಯ ಸಾಲಿನಲ್ಲಿ 'ಬೆಂಗಳೂರು' ಎಂಬ ಪದ ಬಳಕೆಯಾಗಿರುವುದು ಕಂಡು ಬರುತ್ತದೆ. ಇಷ್ಟೇ ಅಲ್ಲದೆ ಯಲಹಂಕ ಪಟ್ಟಣ ಹಾಗೂ ಪ್ರಸ್ತುತ ಬೆಂಗಳೂರು ನಗರದ ನಡುವೆ ಕೊಡಿಗೇಹಳ್ಳಿ ಎಂಬ ಹಳ್ಳಿ ಇದೆ (ಇಂದು ನಗರೀ ಕರಣವಾಗಿದೆ) ಆ ಊರಿನ ದಕ್ಷಿಣ ಭಾಗವನ್ನು "ಬೆಂಗಳೂರು" ಎಂದು

ಕರೆಯುತ್ತಿದ್ದರು (ಪ್ರಸ್ತುತ ಬೆಂಗಳೂರು ನಗರ ನಿರ್ಮಾಣವಾದ ನಂತರ ಬೆಂಗಳೂರಿನ ಹಿರಿಯರು ಕೊಡಿಗೇಹಳ್ಳಿಯ ಬಳಿಯಿರುವ ಬೆಂಗಳೂರನ್ನು ಹಳೇ ಬೆಂಗಳೂರು ಎಂದು ಕರೆಯುತ್ತಿದ್ದರು) ಕೊಡಿಗೇಹಳ್ಳಿಯ ಬೆಂಗಳೂರು ಕೆಂಪೇಗೌಡನ ತಾಯಿಯ ತೌರು ಮನೆಯಾಗಿತ್ತೆಂತಲೂ (ಅರ್ಥಾತ್ ಅಜ್ಜಿ ಊರು) ಆ ಊರಿನ ಹೆಸರನ್ನೇ ಕೆಂಪೇಗೌಡನು ತಾನು ಕಟ್ಟಲು ಉದ್ದೇಶಿಸಿದ್ದ ಹಾಗೂ ಕಟ್ಟಿದ ಊರಿಗೆ "ಬೆಂಗಳೂರು" ಎಂದು ನಾಮಕರಣ ಮಾಡಿದ.

ನಗರ ನಿರ್ಮಾಣ

ಹೊಸ ನಗರವನ್ನು ವ್ಯವಸ್ಥಿತವಾಗಿ ಹಾಗೂ ಯೋಜನಾ ಬದ್ಧವಾಗಿರಲು ಮುಂದಾಲೋಚನೆ ಮಾಡಲಾಗಿತ್ತು. ಉದ್ದಗಲದ ರಸ್ತೆಗಳು ಮತ್ತು ಓಣಿಗಳನ್ನು ನಿರ್ಮಿಸಲಾಯ್ತು. ಕುಡಿಯುವ ನೀರಿಗಾಗಿ ಧರ್ಮಾಂಬುಧಿ ಕೆರೆ, ಕೆಂಪಾಂಬುಧಿ ಕೆರೆ, ಅಲಸೂರು ಕೆರೆ, ಕಾರಂಜಿ ಕೆರೆ, ಸಂಪಗೀರಾಮನಗರ ಕೆರೆಗಳನ್ನು ನಿರ್ಮಿಸ-ಲಾಯ್ತು. ಇಷ್ಟೇ ಅಲ್ಲದೆ ಅಲ್ಲಲ್ಲಿ ಕಲ್ಯಾಣಿಗಳನ್ನು ನಿರ್ಮಿಸಿದ ಕೆಲವು ದೇವಾಲಯ-ಗಳನ್ನು ದುರಸ್ಥಿ ಹಾಗೂ ಜೀರ್ಣೋದ್ಧಾರ ಮಾಡಿಸಿದನು. ಗವಿಗಂಗಾಧರೇಶ್ವರ ಸ್ವಾಮಿ, ಕಾಡು ಮಲ್ಲೇಶ್ವರ, ದೊಡ್ಡ ಬಸವಣ್ಣ, ಗವಿಪುರಂ ಗಂಗಾಧರೇಶ್ವರ ದೇವಾಲಯದ ಬಳಿ ಢಮರುಗ, ತ್ರಿಶೂಲ ಇವೇ ಮುಂತಾದವುಗಳನ್ನು ಏಕಶಿಲಾ ವಿಗ್ರಹಗಳಿಂದ ಕಡೆಸಿದ ಒಂದೊಂದು ಸುಮಾರು 30 ಅಡಿ ಎತ್ತರವಿದೆ. ಅದೇ ರೀತಿ ಶಿವಗಂಗೆಯ ಗಂಗಾಧರೇಶ್ವರ ದೇವಾಲಯದ ಪಕ್ಕದಲ್ಲಿ ಹಜಾರವನ್ನು ಕಟ್ಟಿಸಿದ ಇಂದಿಗೂ ಇದನ್ನು ಕೆಂಪೇಗೌಡ ಹಜಾರ ಎಂದು ಕರೆಯುತ್ತಾರೆ. ತನ್ನ ಸೊಸೆಯ ಸವಿನೆನಪಿಗಾಗಿ ಕೋರಮಂಗಲದಲ್ಲಿ ಲಕ್ಷ್ಮೀ ದೇವಾಲಯ ನಿರ್ಮಿಸಿದ. ಕೋಟೆ ಸೇರಿದಂತೆ ಕೆಲವು ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದ ನಗರದ ಸುತ್ತ ಮಣ್ಣಿನ ಕೋಟೆ ನಿರ್ಮಿಸಿದ ಡಾ.ಪ್ರಾನ್ಸಿಸ್ ಬುಕನಾನ್ ಎಂಬುವವನು ಕ್ರಿ.ಶ.1800ರಲ್ಲಿ ಬೆಂಗಳೂರಿಗೆ ಆಗಮಿಸಿ ಕ್ಷೇತ್ರಕಾರ್ಯ ನಡೆಸಿ "ಎ ಜರ್ನಿ ಫ್ರಂ ಮದ್ರಾಸ್ ಥ್ರೋ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ ಅಂಡ್ ಮಲಬಾರ್" ಎಂಬ ಬೃಹತ್ ಕೃತಿಗಳನ್ನು ರಚಿಸಿದ್ದಾನೆ. ಈ ಕೃತಿಯಲ್ಲಿ ಹೈದಾರಲಿಗಿಂತ ಮೊದಲು ಕೆಂಪೇಗೌಡ ಕಟ್ಟಿಸಿದ ಮಣ್ಣಿನ ಕೋಟೆ ಇತ್ತೆಂದು ತಿಳಿಸಿದ್ದಾನೆ.

ಸುಂದರ ನಗರವನ್ನು ನಿರ್ಮಿಸಿ ಆಯಾ ವಸ್ತುಗಳನ್ನು ಮಾರಾಟ ಮಾಡಲು ಆಯಾ ಜಾತಿಯಾ ಆಯಾ ವ್ಯಾಪಾರಿಗಳಿಗೆ ಅನುಕೂಲವಾಗುವಂತೆ ಪೇಟೆಗಳನ್ನಾಗಿ ಮಾಡಿದ. ಚಿಕ್ಕ ಪೇಟೆ (ಸಣ್ಣಪುಟ್ಟ ವಸ್ತುಗಳು ದೊರೆಯುವ ಸ್ಥಳ) ದೊಡ್ಡಪೇಟೆ (ಸಗಟು ವ್ಯಾಪಾರ) ಬಳೇಪೇಟೆ (ಅರಿಶಿನ, ಕುಂಕುಮ ಬಾಳೆ ವ್ಯಾಪಾರಿಗಳಿಗೆ) ಅರಳೇ ಪೇಟೆ (ಕಾಟನ್‌ಪೇಟೆ) ಇಲ್ಲಿ ಹತ್ತೀ ಬಟ್ಟೆ, ನೂಲಿನ ವಸ್ತುಗಳು ಸಿಗಲು, ಕುಂಬರಪೇಟೆ

(ಮಡಿಕೆ, ಕುಡಿಕೆ ಇತ್ಯಾದಿ ಮಣ್ಣಿನ ಪದಾರ್ಥಕ್ಕೆ) ನಗರ್ತರ ಪೇಟೆ (ಸಗಟು ವ್ಯಾಪಾರಕ್ಕೆ) ತರಗು ಪೇಟೆ, ರಾಗಿಪೇಟೆ, ಗಾಣಿಗರ ಬೀದಿ, ಸುಣ್ಣಕಟ್ಟು ಪೇಟೆ, ದರ್ಜಿ ಬೀದಿ, ತಲಾರಪೇಟೆ, ಸಣ್ಣ ಕಂಬಳಿ ಕುರುಬರಪೇಟೆ, ಗೊಲ್ಲರ ಬೀದಿ, ಅಂಚೇ ಪೇಟೆ, ಹಳೇ ಪಟ್ನೂಲುಪೇಟೆ, ಕುಂಚಟಿಗರ ಬೀದಿ, ಮಾಮೂಲ್ ಪೇಟೆ, ತೆಲಗುಪೇಟೆ, ಖತ್ರಿಪೇಟೆ, ಕೋಮಟಿಪೇಟೆ, ಮನವರ್ತನ ಪೇಟೆ, ಬಳ್ಳಾಪುರ ಪೇಟೆ, ಹುರಿಯೋ ಪೇಟೆ (ಕಡ್ಲೆಪುರಿ ಮಂಡಿಗಳು ಇದ್ದ ಸ್ಥಳ) ಇತ್ಯಾದಿ ಪೇಟೆಗಳನ್ನು ನಿರ್ಮಿಸಿದ. ಈ ಪ್ರದೇಶದಲ್ಲಿ ಆಯಾ ವಸ್ತುಗಳು ಒಂದೆಡೆ ಸಿಗುವಂತೆ ಮಾಡಿದ. ಯಲಹಂಕ ಸೇರಿದಂತೆ ಸುತ್ತಮುತ್ತಲಿನ ಊರು, ಕೇರಿಗಳಿಂದ ಜನರು ಬೆಂಗಳೂರಿಗೆ ಬಂದು ನೆಲೆಸ ತೊಡಗಿದರು. ಕೆಂಪೇಗೌಡನ ವಂಶಸ್ಥರು ಇಂದಿನ ಅವೆನ್ಯೂ ರಸ್ತೆಯ ಆಸುಪಾಸಿನಲ್ಲಿ ನೆಲೆಸಲು ಅನುವು ಮಾಡಿ ಕೊಟ್ಟನು ಈ ಪ್ರದೇಶವನ್ನು ನವನಗರವೆಂದು ಕರೆಯುತ್ತಿದ್ದರು. ಅಂದು ಇಂದಿನ ಸದಾಶಿವನಗರದಂತೆ ಪ್ರತಿಷ್ಠಿತ ಪ್ರದೇಶವಾಗಿತ್ತು.

ಅಂದು ಬೆಂಗಳೂರಿನಲ್ಲಿ ಉತ್ಸವ, ಜಾತ್ರೆ, ಪರಿಸೆ, (ಕಡ್ಲೆಕಾಯಿ ಪರಿಸೆ) ಧರ್ಮರಾಯಸ್ವಾಮಿ ಕರಗ, ನಾಡದೇವತೆ ಅಣ್ಣಮ್ಮನ ಜಾತ್ರೆ ನಡೆಯುತ್ತಿತ್ತು. ಅಷ್ಟೆ ಅಲ್ಲದೆ ಪ್ರತಿ ವರ್ಷ ಸಿಡಿ ನಡೆಯುತ್ತಿತ್ತು. ಸಿಡಿಯ ನೆನಪಿಗಾಗಿ ಕಲ್ಲನ್ನು ನೆಟ್ಟಿದ್ದರು. ಈ ನಾಲ್ಕು ಅಡಿ ಎತ್ತರದ ಗುಂಡಗಿನ ಕಲ್ಲು ಇಂದಿಗೂ ಮೆಜೆಸ್ಟಿಕ್ ವೃತ್ತದಲ್ಲಿ ಹಿಮಾಲಯ ಸಿನಿಮಾ ಮಂದಿರದ ಮುಂದೆ ಇದೆ. ಇಂದಿಗೂ ಬೆಂಗಳೂರಿನಲ್ಲಿ ಹಳೆಯ ಜಾತ್ರೆ ಉತ್ಸವಗಳಾದ ಕಡ್ಲೆಕಾಯಿ ಪರಿಸೆ, ಕರಗ, ನಗರದೇವತೆ ಅಣ್ಣಮ್ಮನ ಜಾತ್ರೆ ಹಬ್ಬವನ್ನು ಸಾಂಗವಾಗಿ ನೆರವೇರಿಸಿಕೊಂಡು ಹೋಗುತ್ತಿದ್ದಾರೆ.

ನಗರವನ್ನು ಶತ್ರು ಬಾಧೆಯಿಂದ ಮುಕ್ತವಾಗಿರಿಸಲು ಹಾಗೂ ನಗರ ಭಾಗದ ಗಡಿಗಳನ್ನು ಗುರ್ತಿಸಲು ನಗರದ ನಾಲ್ಕು ದಿಕ್ಕುಗಳಲ್ಲೂ ಕಾವಲು ಗೋಪುರವನ್ನು ನಿರ್ಮಿಸಿದರು. ಅವುಗಳಲ್ಲಿ ಕೆಲವನ್ನು ಇಂದಿಗೂ ನೋಡಬಹುದು, ಅವುಗಳು ಲಾಲ್‌ಬಾಗ್ ಕಲ್ಲು ಗುಡ್ಡದ ಮೇಲಿದೆ ಮತ್ತೊಂದು ಬಸವನಗುಡಿ ಬ್ಯೂಗಲ್ ರಾಕ್ ಎಂದೇ ಪ್ರಖ್ಯಾತವಾಗಿರುವ ಉದ್ಯಾನವನ(ಪಾರ್ಕ್)ದಲ್ಲಿದೆ ಇನ್ನೊಂದು ಸಂಪಂಗಿರಾಮ ನಗರದ ಎದುರುಗಡೆ ಸಂಪಂಗಿ ಟ್ಯಾಂಕ್ ಬಳಿಯಿದ್ದರೆ ಮತ್ತೊಂದು ಬಳ್ಳಾರಿ ರಸ್ತೆಯ ಸದಾಶಿವನಗರ ಬಡಾವಣೆಯ ಪಕ್ಕದಲ್ಲಿರುವ ರಮಣಮಹರ್ಷಿ ಉದ್ಯಾನವನ(ಪಾರ್ಕ್)ದಲ್ಲಿದೆ. ಇದು ನಗರವನ್ನು ಕಾಯುವ ಕಾವಲು ಗೋಪುರ (ವಾಚ್‌ಟವರ್) ವಾಗಿದ್ದರೆ. ದೂರದೃಷ್ಟಿಯುಳ್ಳ ಕೆಂಪೇಗೌಡನು ನಗರದ ಬೆಳವಣಿಗೆ-ಯನ್ನು ಇಷ್ಟೇ ಇರಬೇಕೆಂದು ಸೀಮಿತಗೊಳಿಸಿದ್ದನು. ಕಾರಣವೇನೆಂದರೆ ನಗರಕ್ಕೆ ಕುಡಿಯುವ ನೀರು ಸೇರಿದಂತೆ ನಾಗರೀಕ ಸೌಲಭ್ಯಗಳು ಸಿಗಬೇಕೆಂಬ ಉದ್ದೇಶದಿಂದ ನಾಲ್ಕು ದಿಕ್ಕುಗಳಲ್ಲು ಕಾವಲುಗೋಪುರಗಳನ್ನು ನಿರ್ಮಿಸಿದ. ಮಣ್ಣಿನ ಕೋಟೆ,

ಉದ್ಯಾನವನ, ಕೈತೋಟ ಇವೇ ಮುಂತಾದ ಮಣ್ಣಿನ ಕೆಲಸ ಹಾಗೂ ತೋಟಗಾರಿಕೆ ಕೆಲಸ ಮಾಡಲು ತಮಿಳುನಾಡು ಭಾಗದಿಂದ ತಿಗಳರು ಎಂಬ ಇನರನ್ನು ಕರೆಸಿಕೊಂಡು ಅವರಿಗಾಗಿ "ತಿಗಳರಪೇಟೆ" ಎಂಬ ಪೇಟೆಯನ್ನೇ ನಿರ್ಮಿಸಿದ. ಇವರು ತಮ್ಮನ್ನು ವಹ್ನಿಕುಲ ಕ್ಷತ್ರಿಯರು ಎಂದು ಕರೆದುಕೊಳ್ಳುತ್ತಾರೆ. ಇವರು ಹಿಂದೆ ಶ್ರೀರಾಮನ ಸೈನ್ಯದಲ್ಲಿ ಸೇವೆ ಸಲ್ಲಿಸಿದರೆಂಬ ಪ್ರತೀತಿ ಇದೆ. ಇವರು ಪಾಂಡವರ ಆರಾಧಕರಾಗಿದ್ದು ಧರ್ಮರಾಯನನ್ನು ಪೂಜಿಸುತ್ತಾರೆ. ಇಂದಿಗೂ ಧರ್ಮರಾಯ ಕರಗ ಎಂಬ ಉತ್ಸವ ಮಾಡುತ್ತಾರೆ(ಕರಗ ಉತ್ಸವ).

ಹೀಗೆ ಬೆಂಗಳೂರು ನಗರವು ಸುತ್ತಮುತ್ತಲಿನ ಪ್ರದೇಶಗಳಲ್ಲೇ ಉತ್ತಮ ನಗರವಾಗಿ ಮಾರ್ಪಟ್ಟಿತು. ಕೆಂಪೇಗೌಡನು ವಿಜಯನಗರದ ಸಾಮ್ರಾಟ ಅಚ್ಯುತ ದೇವರಾಯನ ಆಶೀರ್ವಾದ ಪಡೆದು ಬರಲು ಒಂದು ನಿಯೋಗವನ್ನು ಕಳುಯಿಸಿದ. ಸುಪ್ರೀತನಾದ ವಿಜಯನಗರದ ಅರಸರು ಕೆಂಪೇಗೌಡನಿಗೆ ವರಟೂರು (ವರ್ತೂರು) ಬೇವೂರು, ಹಲಸೂರು, ಕೆಂಗೇರಿ, ತಲಘಟ್ಟಪುರ, ಜಿಗಣಿ, ಕುಂಬಳ –ಗೂಡು, ಕಾವಳ್ಳಿ (ಕನ್ನಲಿ) ಬಾಣಾವಾರ, ಹೆಸರಘಟ್ಟ ಗ್ರಾಮಗಳಿಂದ ವಾರ್ಷಿಕ ಒಟ್ಟು ಮೂವತ್ತು ಸಾವಿರ ವರಹ ಆದಾಯ ಬರುವಂತೆ ಈ ಮೇಲ್ಕಂಡ ಗ್ರಾಮ –ಗಳನ್ನು ಹುಂಬಳಿಯಾಗಿ ನೀಡಿದರು.

ಕೆಂಪೇಗೌಡನ ಅಭಿವೃದ್ಧಿಯನ್ನು ಸಹಿಸದ ಅನೇಕ ಪಾಳೆಯಗಾರರು ಸುತ್ತಮುತ್ತಲ ಪ್ರದೇಶಗಳಲ್ಲಿದ್ದರು. ಇವರಿಂದ ಬೆಂಗಳೂರನ್ನು ರಕ್ಷಿಸುವ ಉದ್ದೇಶ –ದಿಂದ ಕೆಂಪೇಗೌಡನು ರಾಮನಗರದ ಬಳಿ ರಾಮದುರ್ಗ, ಉತ್ತರಿ ದುರ್ಗ, ಶಿವಗಿರಿ ದುರ್ಗ, ಆಗ್ನೇಯದಲ್ಲಿ ಸಿಡಿಲು ಕಲ್ಲು ಬೆಟ್ಟ, ನೈರುತ್ಯದಲ್ಲಿ ಐಜೂರು ಗುಡ್ಡ, ಅಚ್ಚಲು ದುರ್ಗ, ಹುಲಿಯೂರು ದುರ್ಗ ಇವೇ ಮುಂತಾದವುಗಳನ್ನು ನಿರ್ಮಿಸಿ ಸೈನಿಕರನ್ನು ಕಾವಲು ಹಾಕಿಸಿದ. ರಾಮಗಿರಿಗೆ ಏಳುಸುತ್ತಿನ ಕೋಟೆಯನ್ನು ಕಟ್ಟಿಸಿದ.

ಕೆಂಪೇಗೌಡನ ಕೊನೆಯ ದಿನಗಳು

ಧರ್ಮಪ್ರಭು ಕೆಂಪೇಗೌಡನು ಆಕ್ರಮಣ ಪ್ರವೃತ್ತಿಯವನಾಗಿರಲಿಲ್ಲ, ಶಾಂತಿಪ್ರಿಯನಾಗಿದ್ದ. ಆದರೆ ಶತ್ರುಗಳು ತಾವಾಗಿಯೇ ಮೈಮೇಲೆ ಬಿದ್ದರೆ ಹಿಮ್ಮೆಟ್ಟಿಸುತ್ತಿ –ದ್ದನು. ಈಗಾಗಲೇ ಈ ಹಿಂದೆ ತಿಳಿಸಿರುವಂತೆ ಕೆಂಪೇಗೌಡನು ಬೆಂಗಳೂರು ನಗರ –ವನ್ನು ಸುಂದರನಗರವನ್ನಾಗಿ ನಿರ್ಮಿಸಿದಂತೆಲ್ಲಾ ಸುತ್ತಮುತ್ತಲಿನ ಪಾಳೆಯಗಾರರು ಕೆಂಪೇಗೌಡನನ್ನು ಸದೆಬಡಿಯಲು ಯೋಚಿಸುತ್ತಿದ್ದರು. ಅದರಲ್ಲೂ ವಿಶೇಷವಾಗಿ ಚನ್ನಪಟ್ಟಣದ ಜಗದೇವರಾಯನು ಕೆಂಪೇಗೌಡನ ಅಭಿವೃದ್ಧಿಯನ್ನು ಸಹಿಸದೆ ಕೆಂಪೇಗೌಡನಿಗೆ ಸೇರಿದ ರಾಮದುರ್ಗ, ಉತ್ತರಿದುರ್ಗ, ಸಾವನದುರ್ಗದ ಸುತ್ತಮುತ್ತಲಿನ ಗ್ರಾಮಗಳ ಮೇಲೆ ದಾಳಿ ಮಾಡ ತೊಡಗಿದ. ಕೆಂಪೇಗೌಡನು ಸೇನಾ

ಸಮೇತನಾಗಿ ತೆರಳಿ ಜಗದೇವರಾಯನನ್ನು ಬಗ್ಗು ಬಡಿದನು. ಸೋತು ಹಿಮ್ಮೆಟ್ಟಿದ ಜಗದೇವರಾಯನು ವಿಜಯನಗರಕ್ಕೆ ತೆರಳಿ ಕೆಂಪೇಗೌಡನು ಸ್ವತಂತ್ರವಾಗಿ ಭೈರವ ಎಂಬ ನಾಣ್ಯವನ್ನು ಠಂಕಿಸುತ್ತಿದ್ದಾನೆ, ವಿಜಯನಗರದ/ಅರಸರ ವಿರುದ್ಧ ಪಿತೂರಿ ನಡೆಸುತ್ತಿದ್ದಾನೆ ಎಂದು, ಚಾಡಿ ಹೇಳಿದನು.

ವಿಜಯನಗರದ ಅರಸರು ಆತನ ಮಾತಿನಿಂದ ಕರಳಿ ಕೆಂಡವಾದರು. ಆ ಕೂಡಲೆ ದೂತರನ್ನು ಕಳುಹಿಸಿ ಕೆಂಪೇಗೌಡನನ್ನು ಹಂಪೆಗೆ ಕರೆಸಿಕೊಂಡು ವಿಚಾರಣೆ ಇಲ್ಲದೆ ಬಂದಿಸಿದರು. ನಂತರ ಕೆಂಪೇಗೌಡನ ಉತ್ತಮ ನಡವಳಿಕೆಗೊ ಇಲ್ಲವೇ ವಿಜಯನಗರದ ರಾಜಕೀಯ ಅಸ್ಥಿರತೆಯಿಂದಾಗಿಯೂ ಕೆಂಪೇಗೌಡನನ್ನು ಕಾರಾಗೃಹದಿಂದ ಬಿಡುಗಡೆ ಮಾಡಿದರು.

ಇದರಲ್ಲಿ ಸತ್ಯಾಂಶ ಎಷ್ಟಿದಿಯೋ ಏನೋ ತಿಳಿಯದು, ಕಾರಣವೇನೆಂದರೆ ಬುದ್ಧಿವಂತನೂ, ಮೇಧಾವಿಯೂ, ಮುಂದಾಲೋಚನೆಯುಳ್ಳ ಕೆಂಪೇಗೌಡನು ನಾಣ್ಯವನ್ನು ಠಂಕಿಸುವ ಮುನ್ನ ಕನಿಷ್ಟ ಸೌಜನ್ಯಕ್ಕಾದರೂ ಆಳರಸರ ಗಮನಕ್ಕೆ ತರಬೇಕೆಂಬುದು ಆತನಿಗೆ ತಿಳಿದಿರಲಿಲ್ಲವೆ? ಇಷ್ಟೇ ಅಲ್ಲದೆ ಬೆಂಗಳೂರಿನಲ್ಲಿ ರೋಂ ನಾಣ್ಯಗಳೂ ಸೇರಿದಂತೆ ದೇಶ ವಿದೇಶಗಳ ನಾಣ್ಯಗಳು ಸಿಕ್ಕಿವೆ ಭೈರವ ನಾಣ್ಯವನ್ನು ಅಚ್ಚು ಹಾಕಿಸಿದ್ದರೆ ಇದುವರೆಗೂ ಯಾರಿಗೂ ಏಕೆ ಸಿಕ್ಕಿಲ್ಲ? ಇವೇ ಮುಂತಾದ ಪ್ರಶ್ನೆಗಳು ತಲೆ ಎತ್ತುತ್ತವೆ.

ಅತ್ತ ಶತ್ರುಗಳ ರಾಜಕೀಯ ಷಡ್ಯಂತ್ರಕ್ಕೆ ಸಿಕ್ಕಿದ ಕೃಷ್ಣದೇವರಾಯನ ನಂತರ (1510–1529) ವಿಜಯನಗರ ರಾಜಕೀಯವಾಗಿ ಅಸ್ಥಿರವಾಗತೊಡಗಿತು. ಅಚ್ಯುತ –ರಾಯ, ಅಳಿಯ ರಾಮರಾಯರ ನಡುವೆ ತೆರೆಮರೆಯ ಗುದ್ದಾಟ ನಡೆಯುತ್ತಿತ್ತು. ಇಂತಹ ಸಂದರ್ಭದಲ್ಲಿ ಕೆಂಪೇಗೌಡನನ್ನು ಬಂಧಿಸಿ ಬಿಡುಗಡೆ ಮಾಡಿರಬಹುದು. ಹಂಪೆಯಿಂದ ಹಿಂತಿರುಗಿದ ಕೆಂಪೇಗೌಡನು ಇದೇ ಬಳ್ಳಾರಿರಸ್ತೆ ಮೂಲಕ ಬೆಂಗಳೂರಿಗೆ ಆಗಮಿಸಿದನೆಂತಲೂ ಇಂದಿನ ವೈಯಾಲಿಕಾವಲ್ ಪ್ರದೇಶದಲ್ಲಿ ಉಯ್ಯಾಲೆಯಲ್ಲಿ ಕೂರಿಸಿ ತೂಗಿ ಸಂತೋಷಪಟ್ಟ ಜನ ಸಂಭ್ರಮದಿಂದ ಕೆಂಪೇಗೌಡನನ್ನು ಬೆಂಗಳೂರಿಗೆ ಬರ ಮಾಡಿಕೊಂಡರು, ಹೀಗಾಗಿ ಆ ಪ್ರದೇಶಕ್ಕೆ ಉಯ್ಯಾಲೆ ಕಾಲುವೆ ಪ್ರದೇಶ–ವೈಯಾಲಿ ಕಾವಲ್ ಪ್ರದೇಶವಾಯಿತೆಂದು ಹೇಳುತ್ತಾರೆ.

ಒಟ್ಟಿನಲ್ಲಿ ಮನನೊಂದ ಕೆಂಪೇಗೌಡ ತನ್ನ ಕೊನೆಯ ಕಾಲವನ್ನು ಪವಿತ್ರವಾದ ಶಿವಗಂಗೆಯಲ್ಲಿ ಕಳೆದ. ಆತನು ಕಾಲ ಕಳೆಯುತ್ತಿದ್ದ ಜಾಗದಲ್ಲಿ ಆತನ ಮಗನಾದ ಇಮ್ಮಡಿ ಕೆಂಪೇಗೌಡನು ಒಂದು ಹಜಾರವನ್ನು ಕಟ್ಟಿಸಿದನು. ಇಂದಿಗೂ ಶಿವಗಂಗೆಯಲ್ಲಿ ಕೆಂಪೇಗೌಡ ಹಜಾರವನ್ನು ಕಾಣಬಹುದು.

ಕೆಂಪೇಗೌಡ ಮತ್ತು ಜಾತ್ಯಾತೀತತೆ

ಕೆಂಪೇಗೌಡನು ಎಂದೂ ಜಾತಿವಾದಿಯಾಗಿರಲಿಲ್ಲ, ಅನ್ಯಧರ್ಮ ಹಾಗೂ ಅನ್ಯಮತ ಸಹಿಷ್ಣುವಾಗಿದ್ದ, ಎಲ್ಲಾ ಜಾತಿಯ ಎಲ್ಲಾ ಧರ್ಮದ ಜನರನ್ನು ಸಮಾನವಾಗಿ ಪ್ರೀತಿಸುತ್ತಿದ್ದ. ಅವರಿಗಾಗಿ ಅಗ್ರಹಾರಗಳು, ಮಠ ಮಾನ್ಯಗಳು, ಪೇಟೆ, ಪೇಟೆ ಬೀದಿ –ಗಳನ್ನು ನಿರ್ಮಿಸಿದ್ದ, ನೆರೆಹೊರೆಯ ರಾಜ್ಯಗಳಿಂದ ಕುಲಕಸುಬು ಮಾಡುವವರನ್ನು ಕರೆಸಿ ಅವರಿಗೆ ತಾನು ಕಟ್ಟಿದ ಬೆಂಗಳೂರಿನಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದ. ಇದರಿಂದಾಗಿ ತಿಗಳರು ಎಂಬ ತೋಟಗಾರಿಕೆ/ಮಣ್ಣು ಕೆಲಸ ಮಾಡುವ ಜನರನ್ನು ಆಂಧ್ರ ಮತ್ತು ತಮಿಳುನಾಡಿನಿಂದ ಕರೆಸಿಕೊಂಡ, ನಗರ್ತರು, ಗುಡಿಕಾರರು ಮೇದರು ಹೀಗೆ ಬೇರೆ ಬೇರೆ ಜಾತಿಯ ಜನ ಬಂದು ನೆಲೆಸಲು ಅನುವುಮಾಡಿಕೊಟ್ಟ (ಇಂದಿಗೂ ಇದು ತಪ್ಪಿದ್ದಲ್ಲ) ಕ್ರಿ.ಶ. 16ನೇ ಶತಮಾನದಲ್ಲಿ 'ಐಹೊಳೆ ಐನೂರ್ವರ್' ಎಂಬ ವ್ಯಾಪಾರಿ ಸಂಘವು ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳೊಂದಿಗೆ ವ್ಯಾಪಾರ ವಹಿವಾಟನ್ನು ಹೊಂದಿತ್ತು ಎಂದು ಹೇಳಬಹುದು. ಈ ವರ್ತಕ ಸಂಘದಿಂದಾಗಿ ಬೆಂಗಳೂರು ಅಂದಿನ ಕಾಲದಲ್ಲೆ ದಕ್ಷಿಣ ಭಾರತದ ರಾಜ್ಯಗಳೊಂದಿಗೆ ವ್ಯಾಪಾರ ಸಂಪರ್ಕವನ್ನೊಂದಿತ್ತು ಸೈನ್ಯದಲ್ಲಿ ಪದಾತಿ. ಅಶ್ವದಳ ಪ್ರಮುಖವಾಗಿತ್ತು. ಗಜಪಡೆ ಕಡಿಮೆ ಇತ್ತು. ಸೈನ್ಯದಲ್ಲಿ ಕೂಡ ದಕ್ಷರಿಗೆ ಆದ್ಯತೆ ಜಾತಿಗಲ್ಲ. ಕೆಂಪೇಗೌಡನ ಸೈನ್ಯದಲ್ಲಿ ಗುರಿಕಾರ್ ಮಲ್ಲಪ್ಪ, ಬೇಟೆಗಾರ ರಾಮಪ್ಪ, ಕೊಳ್ಳಿನಾಗ, ಹಡಪದ ಬಲ್ಲುಗ, ದಿಂಡಿಯಲ್ಲಕ್ಕ, ದೇವಿಶೆಟ್ಟಿಲಿಂಗಪ್ಪ, ಮಾದಿಗರ ಹಂಪ, ಹೊಲೆಯರ ಹುಳ್ಯ, ಒಕ್ಕಲಿಗರ ನಾಗಣ್ಣ, ಬುಳ್ಳಯ್ಯ ಇವರೇ ಮುಂತಾದವರು ಇದ್ದರು. ಹೀಗಾಗಲೆ ತಿಳಿಸಿರುವಂತೆ ಧರ್ಮಪ್ರಭು ಕೆಂಪೇಗೌಡನು ಆಕ್ರಮಣ ಪ್ರವೃತ್ತಿಯವನಾಗಿರಲಿಲ್ಲ, ಸೌಮ್ಯ ಸ್ವಭಾವದವನಾದರೂ ದೂರದೃಷ್ಟಿಯುಳ್ಳವನೂ, ಅನ್ಯಮತ ಸಹಿಷ್ಣುವೂ, ಶಿವನ ಆರಾಧಕನಾಗಿದ್ದು ಶಿವೈಕ್ಯನಾದನು.

ಇಮ್ಮಡಿ ಕೆಂಪೇಗೌಡ/ ಮಾಗಡಿ ಕೆಂಪೇಗೌಡ

ಧರ್ಮಪ್ರಭು ಬೆಂಗಳೂರು ಕೆಂಪೇಗೌಡನ ಮಗನೇ ಇಮ್ಮಡಿ ಕೆಂಪೇಗೌಡ. ಈತ ಶೌರ್ಯ ಪರಾಕ್ರಮದಲ್ಲಿ ತಂದೆಗಿಂತಲೂ ಮಿಗಿಲಾದ ವ್ಯಕ್ತಿ. ಆದರೆ ಕರ್ನಾಟಕ ರಾಜ್ಯದಲ್ಲಿ ಆದ ರಾಜಕೀಯ ದೊಂಬರಾಟಕ್ಕೆ ಬಲಿಯಾದ. ತಂದೆಗೆ ತಕ್ಕ ಮಗನೆಂದರೆ ಇಮ್ಮಡಿ ಕೆಂಪೇಗೌಡ. ಬೆಂಗಳೂರು ಕೆಂಪೇಗೌಡ ಬೆಂಗಳೂರನ್ನು ಕಟ್ಟಿದರೆ ಈತ ಬೆಂಗಳೂಉರು ಮತ್ತು ಮಾಗಡಿಯನ್ನು ಅಭಿವೃದ್ಧಿಪಡಿಸಿ 6–7 ದಶಕಗಳ ಕಾಲ ಆಳ್ವಿಕೆ ಮಾಡಿದ. ಈತನಿಗೆ ಇಮ್ಮಡಿ ಕೆಂಪೇಗೌಡ, ಕೆಂಪಭೂಪ, ಮಾಗಡಿ ಕೆಂಪೇಗೌಡ ಎಂದೆಲ್ಲ ಬಿರುದುಗಳಿದ್ದವು.

ತನ್ನ ತಂದೆ ಕೆಂಪೇಗೌಡ ನಿರ್ಮಿಸಿದ ಬೆಂಗಳೂರನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಉದ್ಯುಕ್ತನಾದ. ಗಡಿಗೋಪುರಗಳನ್ನು ಮತ್ತಷ್ಟು ವಿಸ್ತರಿಸಿದ. ಕಾವಲು ಗೋಪುರಗಳು ಮೊದಲು ನಾಲ್ಕು ಮಾತ್ರ ಬೆಂಗಳೂರಿನಲ್ಲಿದ್ದವು. ಮಾಗಡಿ ಕೆಂಪೇಗೌಡ ಮತ್ತೆ ನಾಲ್ಕು ಕಾವಲು ಗೋಪುರಗಳನ್ನು ನಿರ್ಮಿಸಿ ನಗರವು ಬೆಳೆಯುವಂತೆ ಮಾಡಿದ.

ದೇವಾಲಯಗಳ ಬೀಡಾದ ಬೆಂಗಳೂರು

ಬೆಂಗಳೂರಿನ ಹೃದಯ ಭಾಗವಾದ ದೊಡ್ಡಪೇಟೆ ಮತ್ತು ಬಳೇಪೇಟೆಯ ಮಧ್ಯೆ ಇರುವ ಜಾಗದಲ್ಲಿ ರಂಗನಾಥಸ್ವಾಮಿ ದೇವಾಲಯ ನಿರ್ಮಿಸಿದ. ಗರ್ಭಗುಡಿ –ಯಲ್ಲಿ ಹಾವಿನ ಮೇಲೆ ಮಲಗಿರುವ ರಂಗನಾಥಸ್ವಾಮಿ ವಿಗ್ರಹವನ್ನು ಸುಂದರವಾಗಿ ಕಡೆಯಲಾಗಿದೆ. ನಗರದೇವತೆ ಅಣ್ಣಮ್ಮನ ದೇವಸ್ಥಾನವನ್ನು ನಿರ್ಮಿಸಿದ, ಇದರ ಕೆಲವೇ ಅಡಿ ಅಂತರದಲ್ಲಿ ಅಂದು ಜಾತ್ರೆ, ಸಿಡಿ ನಡೆಯುತ್ತಿತ್ತು. (ಇಂದಿನ ಮೆಜೆಸ್ಟಿಕ್ ಸರ್ಕಲ್ ಹಾಗೂ ಕೆಂಪೇಗೌಡ ರಸ್ತೆ ಅಂಗಳ) ಕೆಂಪಾಂಬುಧಿ ಕೆರೆ ಏರಿಯ ದಕ್ಷಿಣದ ಗುಡ್ಡದಲ್ಲಿ ಮಹಾಕಾಳಿ, ವೀರಭದ್ರ, ಆಂಜನೇಯ, ಮತ್ತು ಗಣಪತಿ ವಿಗ್ರಹಗಳನ್ನು ಕೆತ್ತಿಸಿದ. ಅದೇ ಸ್ಥಳದ ಉತ್ತರ ಭಾಗದಲ್ಲಿ ಕಾಲಭೈರವ ಮತ್ತು ಆಂಜನೇಯ ಮೂರ್ತಿಗಳನ್ನು ಕೆತ್ತಿಸಿ ಅಲ್ಲಿ ಅವುಗಳಿಗೆ ಗುಡಿಗಳನ್ನು ಕಟ್ಟಿಸಿದ. ಕಾಶಿವಿಶ್ವನಾಥ ದೇವಾಲಯ (ಚಾಮರಾಜಪೇಟೆ) ಕೋಟೆ ರಾಮೇಶ್ವರ ದೇವಾಲಯ, ಕಾಡು ಮಲ್ಲೇಶ್ವರ ದೇವಾಲಯದ ದುರಸ್ಥಿ (ಮಲ್ಲೇಶ್ವರ ಸಂಪಿಗೆ ರಸ್ತೆಯ ಪಕ್ಕ) ಮಾಡಿಸಿದ.

ಇಷ್ಟೇ ಅಲ್ಲದೆ ಬೆಂಗಳೂರಿನ ಹೊರಭಾಗದಲ್ಲಿ ದೇವಾಲಯಗಳು ನಿರ್ಮಾಣವಾದವು. ಮಾಗಡಿಯ ಬೈಜಾಪುರದಲ್ಲಿ ಕಂಚೀವರದಸ್ವಾಮಿ ದೇವಾಲಯ, ಸಾವನದುರ್ಗದಲ್ಲಿ ವೀರಭದ್ರಸ್ವಾಮಿ ದೇವಾಲಯ, ಚಿಕ್ಕಬಳ್ಳಾಪುರದಲ್ಲಿ ರಂಗಮಂಟಪ (ರಂಗಸ್ಥಳ ಎಂದೇ ಖ್ಯಾತಿ) ಹುತ್ತರೀದುರ್ಗದ ತಪ್ಪಲಿನಲ್ಲಿ ಆದಿನಾರಾಯಣ, ಶಿವಗಂಗೆಯ ಗಂಗಾಧರೇಶ್ವರ ದೇವಸ್ಥಾನ ಅದೇ ಶಿವಗಂಗೆಯಲ್ಲಿ ಕೆಂಪೇಗೌಡ ಹಜಾರವನ್ನು ನಿರ್ಮಿಸಿದ. ಹಲಸೂರು ಶ್ರೀ ಸೋಮೇಶ್ವರ ದೇವಾಲಯದ ದುರಸ್ಥಿ ಮಾಡಿಸಿದ, ಬ್ರಾಹ್ಮಣರಿಗೆ ಅಗ್ರಹಾರಗಳನ್ನು, ಲಿಂಗಾಯತರಿಗೆ ಮಠಮಾನ್ಯಗಳನ್ನು ಕಟ್ಟಿಸಿದುದೇ ಅಲ್ಲದೆ ಉಂಬಳಿಯನ್ನು ನೀಡಿದ. ಕೆಂಪಾಪುರ ಅಗ್ರಹಾರ, ಅಗ್ರಹಾರ ದಾಸರಹಳ್ಳಿಗಳನ್ನು ಬ್ರಾಹ್ಮಣರಿಗೆ ಕಟ್ಟಿಸಿಕೊಟ್ಟ. ಇಂದಿನ ಉಪ್ಪಾರ ಪೇಟೆ ಪೊಲೀಸ್ ಠಾಣೆ ಹಿಂಭಾಗದಲ್ಲಿರುವ ಸರ್ಪಭೂಷಣ ಮಠವನ್ನು ಲಿಂಗಾಯತರಿಗೆ ಕಟ್ಟಿಸಿಕೊಟ್ಟನೆಂಬ ಪ್ರತೀತಿ ಇದೆ. ಇಷ್ಟೇ ಅಲ್ಲದೆ ಬೆಂಗಳೂರು ನಗರ ಬೆಳೆದಂತೆಲ್ಲಾ ನೀರಿನ ಅವಶ್ಯಕತೆಯನ್ನು ಮನಗಂಡ ಕೆಂಪೇಗೌಡನು ಕಾರಂಜಿಕೆರೆ, ಕೆಂಪಾಂಬುಧಿ ಕೆರೆ, ಸಂಪಂಗಿ ಕೆರೆ, ಹಲಸೂರು ಕೆರೆ, ವೈಯಾಲಿಕಾವಲ್ ಕೆರೆ (ಇಂದಿನ ಸ್ಯಾಂಕಿ

ಟ್ಯಾಂಕ್) ಇತ್ತೀಚಿನ ದಿನಗಳಲ್ಲಿ ಇಂಗ್ಲೀಷ್‌ನಲ್ಲಿ ಹಲಸೂರು ಟ್ಯಾಂಕ್ ಎಂತಲೂ ಕೆರೆ ದಂಡೆಯನ್ನು ಟ್ಯಾಂಕ್‌ಬಂಡ್ ಎಂತಲೂ ಕರೆಯುವುದು ವಾಡಿಕೆಯಾಗಿದೆ. ವೃಷಭಾವತಿ ನದಿಗೆ ಒಡ್ಡು ಹಾಕಿಸಿದ. ರಾಜ ಮಾತೆ ಚನ್ನಮ್ಮಳ ಹೆಸರಿನಲ್ಲಿ ಚನ್ನಮ್ಮನ ಕೆರೆ, ತನ್ನ ಚಿಕ್ಕಮ್ಮ ಸಿದ್ದಮ್ಮಳ ಹೆಸರಿನಲ್ಲಿ ಸಿದ್ದಿಕಟ್ಟೆ (ಸಿಟಿ ಮಾರ್ಕೆಟ್ ಬಳಿ) ಮಾವಳ್ಳಿ –ಕೆರೆ, ಜಕ್ಕರಾಯನ ಕೆರೆ, ಕೆಂಪಾಪುರ ಅಗ್ರಹಾರ ಕೆರೆ ಇತ್ಯಾದಿ. ಕೆರೆಕುಂಟೆಕಾಲುವೆ ಮತ್ತು ಕಲ್ಯಾಣಿಗಳನ್ನು ನಿರ್ಮಿಸಿ ಧರ್ಮಪ್ರಭು ಎಂದೆನಿಸಿಕೊಂಡನು.

ರಾಜಕೀಯ ಚದುರಂಗದಾಟಕ್ಕೆ ಸಿಕ್ಕಿದ ಮಾಗಡಿ ಕೆಂಪೇಗೌಡ

ಎರಡನೇ ಕೆಂಪೇಗೌಡ ಅಥವಾ ಮಾಗಡಿ ಕೆಂಪೇಗೌಡನು ಅಧಿಕಾರಕ್ಕೆ ಬರುವಷ್ಟರಲ್ಲಿ ವಿಜಯನಗರ ಸಾಮ್ರಾಜ್ಯವು 1565ರಲ್ಲಿ ನಡೆದ ತಾಳಿಕೋಟೆ / ರಕ್ಕಸತಂಗಡಿ ಯುದ್ದದಲ್ಲಿ ಬಿಜಾಪುರದ ಸುಲ್ತಾನರಿಗೆ ಸೋತು ರಾಜಕೀಯವಾಗಿ ಅಧಃಪತನದ ಹಾದಿ ಹಿಡಿದರು. ರಾಜ್ಯದ ಉತ್ತರ ಭಾಗದಲ್ಲಿ ಷಾಹಿ ಸುಲ್ತಾನರು ಇಲ್ಲವೆ ಬಿಜಾಪುರ ಸುಲ್ತಾನರು ಪ್ರಬಲರಾದರು ದಕ್ಷಿಣದಲ್ಲಿ ಮೈಸೂರು ಅರಸರು ದಿನೇ ದಿನೇ ಪ್ರವರ್ಧಮಾನಕ್ಕೆ ಬರತೊಡಗಿದರು. ಇದರ ಜೊತೆಗೆ ಸ್ಥಳೀಯ ಪಾಳೆಯಗಾರರು ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು, ಅವರಲ್ಲಿ ಕೆಳದಿ ಮತ್ತು ಇಕ್ಕೇರಿ ಅರಸರು ಪ್ರಮುಖರು.

ಮಾಗಡಿ ಕೆಂಪೇಗೌಡನು ಬೆಂಗಳೂರು ಮತ್ತು ಮಾಗಡಿ ಎರಡನ್ನು ಅಳು –ತ್ತಿದ್ದನು. ಮಾಗಡಿ ಸುತ್ತಮುತ್ತಲಿನ ಪ್ರದೇಶವನ್ನು ಗೆದ್ದುಕೊಂಡಿದ್ದನು. ಕೆಂಪೇಗೌಡನ ಸೈನ್ಯ, ಮತ್ತು ರಾಜ್ಯ ವಿಸ್ತರಣೆಯನ್ನು ಕೆಂಪೇಗೌಡನ "ಜಯಪ್ರಶಸ್ತಿಯು" ಹೀಗೆ ತಿಳಿಸುತ್ತದೆ. ಮುನ್ನೂರು ಮದ್ದಾನೆಗಳ ಒಂಭತ್ತು ಸಾವಿರ ಕುದುರೆಗಳ ಹಲವಾರು ಸಾವಿರ ಕಾಲಾಳುಗಳ ಬಲಿಷ್ಠ ಸೈನ್ಯವಿತ್ತೆಂದು ತಿಳಿಸುತ್ತದೆ. ಮಾಗಡಿ ಕೆಂಪೇಗೌಡನ ಪರಾಕ್ರಮಕ್ಕೆ ಹೆದರಿದ ತಿಮ್ಮರಾಜ, ರಂಗಪತಿ ರಾಜ, ಮಾಕರಾಜ, ನಂದ್ಯಾಲ, ವೆಂಕಪ್ಪರಾಜ, ರಂಗಪತಿರಾಜ, ದಳವಾಯಿ ಪಾಪಯ್ಯ, ಪವಡದ (ಪಾವುಗಡ) ಕಷ್ಟಪ್ಪ, ಚನ್ನಪಟ್ಟಣದ ಜಗದೇವರಾಯ, ಚಿಕ್ಕರಾಯ, ತಮ್ಮಯ್ಯಗೌಡ ಇವರೇ ಮುಂತಾದವರು ಆತನ ಅಣತಿಯಂತೆ ನಡೆಯುತ್ತಿದ್ದರು ಎಂದು ಉಲ್ಲೇಖಿಸಿದೆ.

ಮಾಗಡಿ ಕೆಂಪೇಗೌಡನು ಎಷ್ಟೇ ಪ್ರಬಲನಾಗಿದ್ದರೂ ವಿಜಯನಗರದ ಅರಸರು ತಾಳಿಕೋಟೆ ಯುದ್ದದಲ್ಲಿ ಸೋತು ಸೊರಗಿ ಹಂಪೆಯನ್ನು ಬಿಟ್ಟು ಓಡಿ ಹೋಗಿ ಪೆನುಗೊಂಡದಲ್ಲಿದ್ದರೂ ಕೂಡ ಅವರಿಗೆ ವಿಧೇಯನಾಗಿದ್ದನೆಂದು ದಾಖಲೆಗಳಿವೆ. ಏಕಾಂಬರ ದೀಕ್ಷಿತರ 'ವೀರಭದ್ರವಿಜಯ' ಎಂಬ ಕಾವ್ಯದಲ್ಲಿ ಕೆಂಪೇಗೌಡನು ಶ್ರೀರಂಗಪಟ್ಟಣದ ಶ್ರೀರಂಗರಾಯನ ಮೇಲೆ ಯುದ್ಧ ಮಾಡಿ ಜಯಭೇರಿ ಭಾರಿಸಿದನೆಂದು ತಿಳಿಸುತ್ತದೆ. ಈ ವಿಜಯವನ್ನು ಕೆಂಪೇಗೌಡನ 'ಜಯ

ಪ್ರಶಸ್ತಿಯು' ತಿಳಿಸುತ್ತದೆ. ಪೆನುಗೊಂಡದಲ್ಲಿದ್ದ ವೆಂಕಟಪತಿರಾಜನ ಆಣತಿಯ ಮೇರೆಗೆ ಹೊಸಕೋಟೆ (ಬೆಂಗಳೂರಿನ ಬಳಿಯಿದೆ) ಪಾಳೆಯಗಾರನಾದ ಚಿಕ್ಕರಾಯನ ಪಾಳೆಯಪಟ್ಟನ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡು ಚಿಕ್ಕರಾಯನು ವಿಜಯನಗರದರಸರಿಗೆ ವಿಧೇಯನಾಗಿರುವಂತೆ ಮಾಡಿದುದೇ ಅಲ್ಲದೆ ಅವರಿಗೆ ಕಪ್ಪ ಕಾಣಿಕೆ ನೀಡುವಂತೆ ಮಾಡಿದ. ವಿಜಯನಗರದ ಅರಸರು ಮಾಗಡಿ ಕೆಂಪೇಗೌಡನಿಗೆ ವಿಜಯನಗರದ ರಕ್ಷಕನೆಂಬ ಬಿರುದನ್ನು ನೀಡಿದರು.

ಮಾಗಡಿ ಕೆಂಪೇಗೌಡನ ರಾಜ್ಯ ವಿಸ್ತರಣೆ

ಗುಡೇಮಾರನಹಳ್ಳಿ ತಳವಾರ ಗಂಗನು ಸಾವನದುರ್ಗಕ್ಕೆ ಸೇರಿದ ಹಲವಾರು ಗ್ರಾಮಗಳನ್ನು ಗೆದ್ದು ತನ್ನ ವಶದಲ್ಲಿರಿಸಿಕೊಂಡಿದ್ದನು. ಬೆಂಗಳೂರಿನ ಸುತ್ತಮುತ್ತ ಶತ್ರುಗಳಿದ್ದುದರಿಂದ ಅನಿವಾರ್ಯವಾಗಿ ರಾಜ್ಯವನ್ನು ವಿಸ್ತರಿಸಬೇಕಾಯಿತು ಪ್ರಾಚೀನ ರಾಜನೀತಿ ಶಾಸ್ತ್ರಜ್ಞರಾದ ಕೌಟಿಲ್ಯ ಮತ್ತು ಶುಕ್ರಾಚಾರ್ಯರ ಪ್ರಕಾರ ರಾಜನಿಗೆ ಸಪ್ತಾಂಗಗಳ ಅಗತ್ಯವಿದ್ದಿತು, ಸಪ್ತಾಂಗಗಳೆಂದರೆ ಸ್ವಾಮಿ (ಪ್ರಭು), ಅಮಾತ್ಯ (ಮಂತ್ರಿ), ರಾಷ್ಟ್ರ (ರಾಜ್ಯ), ದುರ್ಗ (ಕೋಟೆ), ಕೋಶ (ಖಜಾನೆ/ಹಣ) ಸೈನ್ಯ ಮತ್ತು ನಂಬಿಕೆಗೆ ಅರ್ಹವಾದ ಮಿತ್ರ ರಾಜ್ಯ, ರಾಜ್ಯ ರಕ್ಷಣೆಯಲ್ಲಿ ವಿಸ್ತರಣೆಯಲ್ಲಿ ದುರ್ಗಗಳ ಪಾತ್ರ ಹಿರಿದಾದುದು. ದುರ್ಗಗಳನ್ನು ಕಾಯುವ ಅಧಿಕಾರಿಗೆ ದುರ್ಗಪಾಲಕ/ದುರ್ಗಪ್ಪ/ ದುರ್ಗದ ಪೌಜುದಾರ ಎಂದೆಲ್ಲ ಕರೆಯುತ್ತಿದ್ದರು, ರಾಜ ನೀತಿ ಶಾಸ್ತ್ರಜ್ಞರು ಕೆಲವು ಪ್ರಕಾರದ ಕೋಟೆಗಳನ್ನು ಹೆಸರಿಸಿದ್ದಾರೆ. ಅವುಗಳೆಂದರೆ– ನೆಲದುರ್ಗ, ಜಲದುರ್ಗ, ಗಿರಿದುರ್ಗ, ಮಹೀದುರ್ಗ, ದನುದುರ್ಗಗಳು. ರಾಮನಗರದಿಂದ ಮಾಗಡಿಗೆ ಹೋಗುವ ಮಾರ್ಗದಲ್ಲಿ ಸಾವನದುರ್ಗವಿದೆ. ಬೆಟ್ಟದ ಮೇಲೆ ಕರೀಬೆಟ್ಟ, ಬಿಳೀಬೆಟ್ಟವೆಂದು ಕರೆಯುತ್ತಾರೆ. ಹಿಂದೊಮ್ಮೆ ಸಾಮಂತರಾಯ ಅಥವಾ ಸಾವಂದರಾಯನೆಂಬುವವನು ಆಳುತ್ತಿದ್ದನು. ಇದರಿಂದಾಗಿಯೇ ಈ ದುರ್ಗಕ್ಕೆ ಸಾವನದುರ್ಗವೆಂದು ಹೆಸರು ಬರಲು ಕಾರಣ. ಸಾವಂತರಾಯ ಹಾಗೂ ಆತನ ಮಗ ಸಂಪರಾಯ ಸುಮಾರು ಹದಿನೈದು ವರ್ಷಗಳ ಕಾಲ ಆಳ್ವಿಕೆ ಮಾಡಿದರು. ಮಾಗಡಿ ಕೆಂಪೇಗೌಡನು ತನ್ನ ಪ್ರಬಲ ಸೈನ್ಯದೊಡನೆ ಬಂದು ಸಾವನದುರ್ಗ, ಗುಡೇಮಾರನಹಳ್ಳಿ, ಮಾಗಡಿ ಸೇರಿದಂತೆ ಆ ಸುತ್ತಮುತ್ತಲಿನ ಪ್ರದೇಶಗಳನ್ನು ವಸಪಡಿಸಿಕೊಂಡು ಪ್ರಬಲವಾದ ಕೋಟೆ ಕೊತ್ತಲಗಳನ್ನು ಕಟ್ಟಿಸಿದನು. 10 ಚದುರ ಕಿಲೋ ಮೀಟರ್ ವಿಸ್ತಾರವಾದ ನೆಲಪಟ್ಟಣವನ್ನು ನಿರ್ಮಿಸಿದ. ಹಲವಾರು ವರ್ಷಗಳ ಕಾಲ ಈ ನೆಲಪಟ್ಟವು ಮಾಗಡಿ ಸೀಮೆಯನ್ನಾಳಿದ ಯಲಹಂಕ ಪ್ರಭುಗಳ ರಾಜಧಾನಿ ಮತ್ತು ಪ್ರಮುಖ ಸೈನಿಕ ನೆಲೆಯಾಗಿತ್ತು. ಕುಣಿಗಲ್ ತಾಲ್ಲೂಕಿನಲ್ಲಿರುವ ಹುತ್ತರೀದುರ್ಗವು ಸುತ್ತಿನ ತುಂಬೆಲ್ಲ ಪ್ರಸಿದ್ಧವಾದುದು. ಕೋಟೆಯನ್ನು ಶತ್ರುಗಳು

ಇಲ್ಲವೆ ಆಗಂತುಕರು ಸುಲಭವಾಗಿ ಪ್ರವೇಶಿಸಲು ಸಾಧ್ಯವಿಲ್ಲ ಬೆಟ್ಟದ ತಪ್ಪಲಿನಿಂದ ಬೆಟ್ಟದ ತುದಿಯವರೆಗೆ ಏಳು ದ್ವಾರಗಳಿವೆ. ದ್ವಾರದ ಎರಡೂಕಡೆ ಮೂವತ್ತು ಅಡಿ ಎತ್ತರದ ಕಲ್ಲಿನ ಕೋಟೆಯಿದೆ. ಕೋಟೆಯು ಹೆಬ್ಬಾಗಿಲು ಬಹಳ ಗಟ್ಟಿಮುಟ್ಟಾಗಿರುವುದಾಗಿ ಕಂಡುಬರುತ್ತದೆ. ಶತ್ರುಗಳು ಗುಂಡು (ಕಾಡು ತೋಪು) ಹಾರಿಸಿರುವ ಚಿಹ್ನೆಗಳಿವೆ. ಮಾಗಡಿ ಕೆಂಪೇಗೌಡನು ಈ ಕೋಟೆಯುನ್ನು ಅಭಿವೃದ್ಧಿಪಡಿಸಿದನು. ಬೆಟ್ಟಕ್ಕೆ ಹೋಗುವ ದಾರಿಯಲ್ಲಿ ದೇವರಿಗೆ ಕೈ ಮುಗಿದು ಹೋಗಲಿ ಎಂತಲೂ ದುರ್ಗವನ್ನು ದೇವರು ರಕ್ಷಣೆ ಮಾಡಲಿ ಎಂತಲೂ ಅಲ್ಲಿ ವೀರಭದ್ರಸ್ವಾಮಿ ದೇವಾಲಯವನ್ನು ನಿರ್ಮಿಸಿದನು. ಬೆಟ್ಟದ ಮೇಲೆ ಅರಮನೆ (ಈಗ ಶಿಥಿಲವಾಗಿದೆ) ಖಜಾನೆ, ಮದ್ದಿನ ಮನೆ ಮತ್ತು ಸೈನಿಕರ ನಿವೇಶನಗಳನ್ನು ನಿರ್ಮಿಸಿದ್ದರು (ಈಗ ಎಲ್ಲವೂ ಪಾಳು ಬಿದ್ದಿವೆ). ರಾಮಗಿರಿ ಬೆಟ್ಟವು ರಾಮನಗರದಿಂದ ಸರಿ ಸುಮಾರು ಮೂರು ಮೈಲಿ ದೂರದಲ್ಲಿದೆ. ಅರ್ಕಾವತಿ ನದಿ ದಂಡೆಯಲ್ಲಿಯೇ ಕೋಟೆಯ ಮೊದಲನೆ ಪ್ರವೇಶ ದ್ವಾರವಿದೆ. ಬೆಟ್ಟದ ಮೇಲೆ ಆಂಜನೇಯ, ಗಣಪತಿ, ಪಾರ್ವತಿಯರ ವಿಗ್ರಹಗಳನ್ನು ಕೆತ್ತಿದ್ದಾರೆ. ಈ ಗುಡಿಗಳನ್ನು ಕೆಂಪೇಗೌಡನ ರಾಣಿ ವಾಸದವರು ಜೀರ್ಣೋದ್ಧಾರ ಮಾಡಿಸಿರುವುದಾಗಿ ದಾಖಲೆಗಳಿವೆ. ಕೋಟೆಯ ಒಳಭಾಗದಲ್ಲಿ ಒಂದು ಸುತ್ತಿನ ಸಾಧಾರಣ ಕೋಟೆಯಿದೆ. ದುರ್ಗದ ಮೇಲ್ಭಾಗದಲ್ಲಿ ನೀರಿನ ಹೊಂಡವಿದೆ. ಹಿಂದೆ ಇದನ್ನು ಕುದುರೆ ಹೊಂಡವೆಂದು ಕರೆಯುತ್ತಿದ್ದರು (ಈಗ ಕೊಳಕು ನೀರು ತುಂಬಿದೆ) ಕೊಳದ ಹತ್ತಿರದಲ್ಲಿ ಮದ್ದಿನ ಮನೆ, ಕಾವಲುಗೋಪುರ, ಕಹಳೆ ಬಂಡೆ ಇವೇ ಮುಂತಾದವುಗಳು ಇದ್ದ ಕುರುಹುಗಳಿವೆ.

ಕುಣಿಗಲ್ ತಾಲ್ಲೂಕಿನಲ್ಲಿರುವ ಮತ್ತೊಂದು ದುರ್ಗವೆಂದರೆ "ಹುಲಿಯೂರು ದುರ್ಗ" ಸ್ಥಳೀಯ ಪಾಳೆಯಗಾರರು ಇದನ್ನು ತಮ್ಮ ಭದ್ರಕೋಟೆಯನ್ನಾಗಿ ಮಾಡಿಕೊಂಡಿದ್ದರು. ಕೆಂಪೇಗೌಡನ ವಂಶಸ್ಥರು ಇಲ್ಲಿದ್ದ ಪಾಳೆಯಗಾರರನ್ನು ಸದೆ ಬಡಿದು ಈ ಕೋಟೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಹುಲಿಯೂರು ದುರ್ಗವು ಸೈನಿಕರ ತಾಣವಾಗಿತ್ತು. 15 ಅಡಿ ಎತ್ತರದ ಕಲ್ಲಿನ ಗೋಡೆಯಿದೆ. ಈ ಗೋಡೆಯು 200 ಅಡಿ ಉದ್ದವಿದೆ. ದುರ್ಗದ ಒಳಗೆ ಗಣೇಶ, ಪಾರ್ವತಿ, ನಂದಿ, ಆಂಜನೇಯ ಗುಡಿಗಳಿವೆ. ಕೋಟೆಯ ಒಳ ಭಾಗದಲ್ಲಿ ನೀರಿನ ಹೊಂಡವಿದೆ. ಕೋಟೆಯ ಒಳಗೆ ಯುದ್ಧಕ್ಕೆ ಬೇಕಾಗುವ ಮುದ್ದುಗುಂಡುಗಳನ್ನು ಇಲ್ಲಿ ತಯಾರಿಸಿ ಸಂಗ್ರಹಿಸಿಡುತ್ತಿದ್ದರು. ಇಂದಿಗೂ ಇದನ್ನು "ಮದ್ದಿನ ಮನೆ" ಎಂದು ಕರೆಯುತ್ತಾರೆ.

ಮಾಗಡಿ ಕೆಂಪೇಗೌಡನು ರಾಮದುರ್ಗ, ಮಾಗಡಿ, ಉತ್ತರೀದುರ್ಗ, ಹುಲಿಯೂರು ದುರ್ಗ, ಸಾವನದುರ್ಗ, ರಾಮಗಿರಿ ಸೇರಿದಂತೆ ಹಲವಾರು ಕೋಟೆ ಕೊತ್ತಲಗಳು ಹಾಗೂ ದುರ್ಗಗಳನ್ನು ನಿರ್ಮಿಸುವ ಮೂಲಕ ರಾಜ್ಯವನ್ನು

ವಿಸ್ತರಿಸಿದನು. ಬೆಂಗಳೂರು ನಗರದಿಂದ ಹತ್ತಾರು ಚದರ ಮೈಲಿ ದೂರದವರೆವಿಗೂ ತನ್ನ ರಾಜ್ಯವನ್ನು ವಿಸ್ತರಿಸಿದನು. ತನ್ನ ರಾಜ್ಯವನ್ನು ವಿಸ್ತರಿಸಿದಂತೆಲ್ಲಾ ಶತ್ರುಗಳನ್ನು ಗಳಿಸಿಕೊಂಡ ಎಂದರೆ ತಪ್ಪಾಗಲಾರದು.

ಬೆಂಗಳೂರಿನ ಮುತ್ತಿಗೆ

ಈ ಮೇಲೆ ತಿಳಿಸಿರುವಂತೆ ಮಾಗಡಿ ಕೆಂಪೇಗೌಡನು ರಾಜ್ಯವನ್ನು ವಿಸ್ತರಿಸಿದಂತೆಲ್ಲಾ ಶತ್ರುಗಳನ್ನು ಗಳಿಸಿದನು. ಹಗೆತನ ಹೆಚ್ಚಾಗತೊಡಗಿತು. ಕೆಂಪೇಗೌಡನ ಕೀರ್ತಿಯನ್ನು ಸಹಿಸದ ಸುಮಕಿ, ಬೇಗೂರು, ಚನ್ನಪಟ್ಟಣ, ಬಸವಾಪಟ್ಟಣ, ಇಕ್ಕೇರಿ, ಸೋಲೂರು, ಕುಣಿಗಲ್‌ನ ಪಾಳೆಯಗಾರರು ಮಾಗಡಿ ಕೆಂಪೇಗೌಡನನ್ನು ಸದೆ ಬಡಿಯಲು ಹೊಂಚುಹಾಕುತ್ತಿದ್ದರು. ಉತ್ತರ ಕರ್ನಾಟಕದಲ್ಲೆಲ್ಲಾ ವಿಜಯನಗರದ ಆಳರಸರು ಅಧಃಪತನಗೊಂಡು ಆ ಜಾಗಕ್ಕೆ ಬಿಜಾಪುರದ ಸುಲ್ತಾನರು ಬಂದರು. ವಿಧರ್ಮೀಯರಾದ ಸುಲ್ತಾನರು ಹಿಂದೂ ರಾಜ ಮಹಾರಾಜರನ್ನು ಸದೆ ಬಡಿಯಲು ಹವಣಿಸುತ್ತಿದ್ದರು. ಇದರ ಜೊತೆಗೆ ದಕ್ಷಿಣ ಭಾಗದಲ್ಲಿ ಮೈಸೂರು ಒಡೆಯರು ದಿನೇ ದಿನೇ ಪ್ರವರ್ಧಮಾನಕ್ಕೆ ಬರತೊಡಗಿದರು. ಇದರಿಂದಾಗಿ ಬೆಂಗಳೂರು ಶತ್ರುಗಳ ಬಾದೆಗೆ ಒಳಗಾಗಬೇಕಾಯ್ತು.

ಬಿಜಾಪುರದ ಸುಲ್ತಾನರನ್ನು ಕೈಬೀಸಿ ಕರೆದ ಶತ್ರುಗಳು

ಸುಮತಿ ಬೇಗೂರಿನ ಪಾಳೆಯಗಾರ, ನಾಗಮಂಗಲದ ಚನ್ನಯ್ಯ, ಬಸವಾಪಟ್ಟಣದ ಹನುಮಪ್ಪನಾಯಕ ಇವರೇ ಮುಂತಾದವರು ಬಿಜಾಪುರಕ್ಕೆ ಧಾವಿಸಿ ಬಿಜಾಪುರದ ಸುಲ್ತಾನನಾಗಿದ್ದ ಆಲಿ ಆದಿಲ್‌ಷಹಾನನ್ನು ಭೇಟಿ ಮಾಡಿ ಕೆಂಪೇಗೌಡನನ್ನು ಸದೆ ಬಡಿಯುವುದಾದರೆ ತಮ್ಮ ಸಹಕಾರವಿದೆ ಎಂದು ಒಳ ಒಪ್ಪಂದ ಮಾಡಿಕೊಂಡರು. ಬೆಂಗಳೂರು ನಗರದ ಬಗ್ಗೆ ಕೇಳಿ ತಿಳಿದುಕೊಂಡ ಸುಲ್ತಾನನು ತನ್ನ ನಂಬಿಕಸ್ತ ಹಾಗೂ ಪ್ರಾಮಾಣಿಕರೂ ದಕ್ಷರೂ ಆದ ರಣದುಲ್ಲಾಖಾನ್ ಮತ್ತು ಷಹಜಿ ಬೋಂಸ್ಲೆ/ಭೋನ್ಸ್ಲೆಯನ್ನು ದಕ್ಷಿಣದ ಕಡೆಗೆ ಪ್ರಬಲವಾದ ಸೈನ್ಯವನ್ನು ಈ ಇಬ್ಬರು ದಂಡನಾಯಕರ ನೇತೃತ್ವದಲ್ಲಿ ದಕ್ಷಿಣಕ್ಕೆ ಕಳುಹಿಸಿದನು. ಈ ದಂಡನಾಯಕದ್ವಯರು ದಕ್ಷಿಣದ ಭಾಗದ ಮೇಲೆ ಅವ್ಯಾಹತವಾಗಿ ದಾಳಿ ಮಾಡುತ್ತಾ ಬಂದರು. ಬಿಜಾಪುರದ ಸೈನ್ಯದಲ್ಲಿ ಉಜ್ಜಿನಿ, ರಾಮದುರ್ಗ, ಸಂಡೂರು, ಹರಪ್ಪನಹಳ್ಳಿ, ಇವೇ ಮುಂತಾದ ಪ್ರದೇಶಗಳ ಪಾಳೆಯಗಾರರು ಬಿಜಾಪುರದ ಸೇನಾನಿಗೆ ನೆರವಾದರೆಂದು ಗೋವಿಂದ ವೈದ್ಯನ "ಕಂಠೀರವ ನರಸರಾಜಃ ವಿಜಯ" ಕೃತಿಯಲ್ಲಿ ಹೆಸರಿಸಿದೆ. ಸ್ಥಳೀಯ ಪಾಳೆಯಗಾರರ ಸಹಾಯದಿಂದ ಕೆಂಪೇಗೌಡನನ್ನು ಸೋಲಿಸುವ ಅಗತ್ಯವಿರಲಿಲ್ಲ. ಆಲಿ ಆದಿಲ್ ಷಹಾನೇ ಪ್ರಬಲನಾಗಿದ್ದನು. ಬಹುರ್ಷ

ತನ್ನ ದೊರೆಯಾದ ಕಂಠೀರವ ನರಸರಾಜನನ್ನು ಮೆಚ್ಚಿಸಲು ಈ ರೀತಿ ತನ್ನ ಕೃತಿಯಲ್ಲಿ ತಿಳಿಸಿರಬಹುದೆಂದು ಗುಮಾನಿ ಬರುತ್ತದೆ. ರಣದುಲ್ಲಾಖಾನ್ ಮತ್ತು ಷಹಜಿ ಬೋಂಸ್ಲೆಯರು ತಮ್ಮ ಪ್ರಬಲ ಸೈನ್ಯದೊಂದಿಗೆ ಬೆಂಗಳೂರನ್ನು 1639ರಲ್ಲಿ ಮುತ್ತಿದರು.

ಸೇನಾನಿ ರಣದುಲ್ಲಾ ಖಾನ್ ಮತ್ತು ಷಹಜೀ ಬೋಂಸ್ಲೆಯರು ಬೆಂಗಳೂರನ್ನು ಆಕ್ರಮಣ ಮಾಡಿ ಇಮ್ಮಡಿ ಕೆಂಪೇಗೌಡನನ್ನು ಸೋಲಿಸಿದ ವಿಚಾರವನ್ನು ಗೋವಿಂದ ವೈದ್ಯನ "ಕಂಠೀರವ ನರಸರಾಜ ವಿಜಯ" ಎಂಬ ಗ್ರಂಥದ ಸಂಧಿ ಎರಡರಲ್ಲಿ ತಿಳಿಯಬಹುದು.

ಮೊರಸು ರಾಜ್ಯದ ಹೊಕ್ಕು ತರುವನು ಸೆರೆವಿಡಿ
ದಿರದೆ ಜನರ ಕಂಗೆಡಿಸಿ ।
ಶರಣು ಹೊಕ್ಕರಿಗೆ ನಂಬುಗೆ ಕೊಟ್ಟು ಮುಂದಕ್ಕೆ
ತೆರಳಿದನಾ ಖಾನವಾಗ ॥

ಬೆಂಗಳೂರವನ ಪರಾಕ್ರಮವನು ಬೇಗ
ಬಂದಿಸಿ ಬಿಡುವೆನೆಂದನುತ
ಹಿಂಗದೆ ತಳತಂತ್ರ ಸಹಿತೈದಿ ನೆರೆ ಶಿವ
ಗಂಗೆಯೊಳಗೆ ಬೀಡ ಬಿಟ್ಟ
ಕೇಳಿದನಾಗ ಖಾನನ ದಾಳಿಯಬ್ಬರ
ದೇಳಿಗೆಯನು "ಬೆಂಗಳೂರು"
ಭೂಲೋಲ ದಳದ ಮೇಳೈಸಿಕೊಂಡನು, ನೆರೆ
ಕಾಳಗವನು ಮಾಳ್ವೆನೆಂದು

ಹೀಗೆ ಏಕಾಏಕಿ ದೊಡ್ಡ ಸೈನ್ಯದೊಂದಿಗೆ ಬಂದ ರಣದುಲ್ಲಾ ಖಾನನ ಆಕ್ರಮಣವನ್ನು ಎದುರಿಸಲಾಗದೆ ಸೋತು ಕಂಗೆಟ್ಟನು ಇಮ್ಮಡಿ ಕೆಂಪೇಗೌಡನು. ಕೆಂಪೇಗೌಡನಿಗೆ ಅಧೀನರಾಗಿದ್ದ ಬಳ್ಳಾಪುರ, ಬಾವಲೂರು, ಕಗ್ಗುಂದಿ, ದೇವಂಡಪುರ, ಸೂಲಿಬೆಲೆ, ಶಿಡ್ಲಘಟ್ಟ, ಹೊಳವನಹಳ್ಳಿ, ಕುವಳಾಲ ಇವೇ ಮುಂತಾದ ಪಾಳೆಯಗಾರರು ರಣದುಲ್ಲಾ ಖಾನನಿಗೆ ಅಧೀನರಾದರು. ಇದರೊಂದಿಗೆ ಒಂದೇ ಕಲ್ಲಿಗೆ ಎರಡು ಹಕ್ಕಿ ಹೊಡೆದಂತೆ ಕೆಂಪೇಗೌಡ ಹಾಗೂ ಆತನ ಅಧೀನದಲ್ಲಿದ್ದ ಅರಸರು ಖಾನನಿಗೆ ಸುಲಭವಾಗಿ ಶರಣಾಗತರಾದರು. ಸುಂದರವಾದ ಬೆಂಗಳೂರನ್ನು ನೋಡಿದ ಖಾನನು ಧರ್ಮಪ್ರಭು ಒಂದನೆಯ ಕೆಂಪೇಗೌಡ ಹಾಗೂ ಇಮ್ಮಡಿ ಕೆಂಪೇಗೌಡರ ಧರ್ಮಕಾರ್ಯ ಮತ್ತು ಜನಪ್ರಿಯತೆಯನ್ನು ಕಂಡು ಕೇಳಿದ ಖಾನ್ ಮತ್ತು 'ಷಹಜಿ ಬೋಂಸ್ಲೆಯರು ಕೆಂಪೇಗೌಡನನ್ನು ಗೌರವಯುತವಾಗಿ ನಡೆಸಿಕೊಂಡರಲ್ಲದೆ ಮಾಗಡಿಯನ್ನು ತಮ್ಮ ರಾಜ್ಯವನ್ನು ಮಾಡಿಕೊಳ್ಳುವುದಾರೆ ನಮ್ಮ

ಅಭ್ಯಂತರವಿಲ್ಲವೆಂದು ಹೇಳಿ ಇಮ್ಮಡಿ ಕೆಂಪೇಗೌಡನಿಗೆ ಮಾಗಡಿಯನ್ನು ನೀಡಿದರು. ಅಲ್ಲಿಂದಾಗಿ ಇಮ್ಮಡಿ ಕೆಂಪೇಗೌಡ ಮಾಗಡಿ ಕೆಂಪೇಗೌಡನಾದನು.

ರಣದುಲ್ಲಾ ಖಾನ್ ಹಾಗೂ ಷಹಜಿ ಬೋಂಸ್ಲೆಯರು ಬೆಂಗಳೂರಿಗೆ ದಾಳಿ–ಯಿಡಲು ಬರುವಾಗಲೇ ತುಮಕೂರಿನ ಸಿರಾ, ಪಾವಗಡ ಇವೇ ಮುಂತಾದ ಪ್ರದೇಶ–ಗಳನ್ನು ಗೆದ್ದು ಬೆಂಗಳೂರನ್ನು ಮುತ್ತಿಗೆ ಹಾಕಿ ತಮ್ಮ ವಶಕ್ಕೆ ತೆಗೆದುಕೊಂಡಿದ್ದರು.

ಮಾಗಡಿ ಕೆಂಪೇಗೌಡನ ಮೇಲೆ ಆಲಿ ಆದಿಲ್ ಷಾ ದಾಳಿ ಮಾಡಿಸಲು ಕಾರಣವೇನೆಂದರೆ, ಗೌಡನು ಹಿಂದೂ ಹಾಗೂ ವಿಜಯನಗರದಸಸರಿಗೆ ವಿಧೇಯನಾಗಿದ್ದುದು ಮತ್ತು ಗೌಡನ ವಿರೋಧಿಗಳ ಒಳ ಸಂಚಿಕೆ ಕೆಂಪೇಗೌಡನು ಬಲಿಪಶುವಾದನು. ವಿಜಯನಗರದರಸರ ವಿಜಯನಗರವನ್ನು ದೂಳಿಪಟ ಮಾಡಿದ ಬಿಜಾಪುರ ಸುಲ್ತಾನರ ಬಗ್ಗೆ ಕೆಂಪೇಗೌಡನು ಹೀಗಾಗಲೆ ತಿಳಿದಿದ್ದನು. ಬಿಜಾಪುರ ಸೈನ್ಯವು ಸಿರಾ ಸೇರಿದಂತೆ ಹಲವಾರು ಪ್ರದೇಶಗಳನ್ನು ವಶಪಡಿಸಿಕೊಂಡ ವಿಚಾರ ತಿಳಿಯುತ್ತಲೇ ಶೂರನಾದ ಗೌಡನು ಖಾನನ ಸೈನ್ಯವನ್ನು ಎದುರು ಹಾಕಿಕೊಳ್ಳಲು ಇಚ್ಚೆಪಡಲಿಲ್ಲ. ಕೆಂಪೇಗೌಡನಿಗೆ ಮಾಗಡಿಯನ್ನು ಖಾನನು ನೀಡಿದನೆಂದು ಈ ಮೊದಲೇ ತಿಳಿಸಿದೆ. ಬಿಜಾಪುರದ ಸುಲ್ತಾನನಿಗೆ ಬೆಂಗಳೂರು, ಹೊಸಕೋಟೆ, ಕೋಲಾರ, ಸಿರಾ ಇವೇ ಮುಂತಾದ ಪ್ರದೇಶಗಳು ಸೇರಿದವು. ಖಾನನಿಗೆ ಸಹಾಯ ಮಾಡಿದ ಪುಂಗನೂರು ಹಾಗೂ ಆನೇಕಲ್ ಪಾಳೆಯಗಾರರಿಗೆ ಕ್ರಮವಾಗಿ ಅವರವರ ಪ್ರದೇಶಗಳನ್ನು ನೀಡಿದನು.

ದಕ್ಷಿಣ ಭಾಗದ ಈ ದಿಗ್ವಿಜಯದ ವಿಚಾರ ಬಿಜಾಪುರದ ಸುಲ್ತಾನರಿಗೆ ತಿಳಿಯು ತ್ತಲೇ ಸಂತೋಷ ಭರಿತನಾದ ಸುಲ್ತಾನನು ತನ್ನ ನೆಚ್ಚಿನ ಸೇನಾನಿಯು ಸ್ವಾಮಿ ನಿಷ್ಟನೂ ಆದ ಷಹಜಿ ಬೋಂಸ್ಲೆಗೆ (ಶಿವಾಜಿ ತಂದೆ) ಬೆಂಗಳೂರು ಮತ್ತು ಸಿರಾ ಪ್ರದೇಶಗಳನ್ನು ಉಂಬಳಿಯಾಗಿ (ಬಳುವಳಿ) ನೀಡಿದನು. ಈ ವಿಚಾರವನ್ನು ಗೋವಿಂದ ವೈದ್ಯನು ತನ್ನ ಕಂಠೀರವ ನರಸರಾಜ ವಿಜಯ ಕೃತಿಯಲ್ಲಿ ಹೀಗೆ ತಿಳಿಸಿದ್ದಾನೆ.

ದಿಲ್ಕರನ ಸಾಹೇಬು ಅಬುತುಮೆ ಜಾನ್‌ಪರ್
(ಕಿಲ್ಕಿ) ಅಸಲೀ ಚೋಡ್ಕೆ ॥
ಡಲ್ಕ ತಲವಾರಿವೆ ಮರಗಯೇ ತೋಹಮೇ ॥
ಹಲ್ಕ ಹೋ ಜಾಯೇರಿಗೇ ರಾಜಾಕು ॥
ಬಳಿಕತ್ತ ಪಾತ್ಶ್ಯಾವು ವಿನಪ್ಪಣೆಯಿಂದ
ತಳುವದೆಯಾ ಬೆಂಗಳೂರ ।
ಗಳಿಲನೆ ಷಹಜಿಗೆ ಕೊಟ್ಟಾಗ ಖಾನಮುಂ
ದಳಿಸಿದ ರಾಜಕಾರಿಯವ ॥

ತನ್ನ ಪೂರ್ವಿಕರು ಗಳಿಸಿದ ಬೆಂಗಳೂರನ್ನು ಷಹಜಿಗೆ ಬಿಟ್ಟು ಕೊಡುವ ಸಂದರ್ಭದಲ್ಲಿ ಕೆಂಪೇಗೌಡನು ಕೋಪ ಮತ್ತು ದುಃಖಃದಿಂದ ಹತಾಶನಾದನು. ಮನಸ್ಸಿಲ್ಲದ ಮನಸ್ಸಿನಿಂದ ಮಾಗಡಿಗೆ ತೆರಳಬೇಕಾಯ್ತು. ಮಾಗಡಿಯನ್ನು ತನ್ನ ಕೇಂದ್ರ ಸ್ಥಾನವನ್ನಾಗಿಸಿಕೊಂಡು ಆಳಲು ತೀರ್ಮಾನಿಸಿದ ಗೌಡನು ಮಾಗಡಿಯನ್ನು ಬೆಂಗಳೂರಿನಂತೆ ಸುಂದರ ನಗರವನ್ನಾಗಿ ಮಾಡಲು ಮುಂದಾದನು. ಮಾಗಡಿಯಲ್ಲಿ ಬಲವಾದ ಕೋಟೆ ಕೊತ್ತಲ, ದೇವಾಲಯಗಳನ್ನು ಕಟ್ಟಲು ಮುಂದಾದನು. ಸಾವನದುರ್ಗ, ಉತ್ತರಿದುರ್ಗ, ಹುಲಿಕಲ್ಲು, ನೆಲಪಟ್ಟಣ, ಹುಲಿಯೂರುದುರ್ಗ ಹಾಗೂ ಕುಣಿಗಲ್ ಇವೇ ಮುಂತಾದ ಪ್ರದೇಶಗಳಲ್ಲಿ ಮೆರೆಯುತ್ತಿದ್ದ ಪಾಳೆಯಗಾರರನ್ನು ಸದೆಬಡಿದನು. ಮಾಗಡಿ ಪ್ರಾಂತ್ಯವನ್ನಾಗಿ ಮಾಡಿ ಅವರುಗಳನ್ನು ಕಂದಾಯ ವಸೂಲು ಮಾಡುವ ಅಧಿಕಾರಿಗಳನ್ನಾಗಿ ಮಾಡಿದನು.

ಹೀಗೆ ಇಮ್ಮಡಿ ಕೆಂಪೇಗೌಡ ಅಥವಾ ಮಾಗಡಿ ಕೆಂಪೇಗೌಡನು ಮಾಗಡಿ, ನೆಲಪಟ್ಟಣ, ರಾಮದುರ್ಗ ಇವೇ ಮುಂತಾದ ಪ್ರದೇಶಗಳನ್ನು ಅಭಿವೃದ್ಧಿಪಡಿಸಿದನು. ಧರ್ಮಪ್ರಭುಗಳಾದ ಕೆಂಪೇಗೌಡನ ವಂಶಸ್ಥರು ಮಾಗಡಿ ಸೀಮೆಯ ಸುತ್ತಣ ಪ್ರದೇಶದಲ್ಲಿ ಕುಡಿಯುವ ನೀರಿಗೆ ತೊಂದರೆ ಆಗದಿರಲೆಂದು ಕೆರೆ, ಕುಂಟೆ, ಕಾಲುವೆಗಳನ್ನು ತೋಡಿಸಿದನು ಹಾಗೂ ಕೃಷಿ ಭೂಮಿಯನ್ನಾಗಿ ಮಾಡಲು ನೀರಾವರಿ ವ್ಯವಸ್ಥೆ ಮಾಡಿದನು. ಮಾಗಡಿ ಕೆಂಪೇಗೌಡನ ಸೊಸೆ ವೆಂಕಟಕೃಷ್ಣಾಜಮ್ಮ ತನ್ನ ಮಾವನಾದ ಮಾಗಡಿ ಕೆಂಪೇಗೌಡನ ಹೆಸರು ಶಾಶ್ವತವಾಗಿ ಉಳಿಯಲೆಂದು ವೆಂಕಟಕೃಷ್ಣಸಾಗರ ಅಗ್ರಹಾರವನ್ನು ಸ್ಥಾಪಿಸಿ ಹತ್ತೊಂಭತ್ತು ವೃತ್ತಿಗಳಾಗಿ ವಿಂಗಡಿಸಿ ಹದಿನೇಳು ಜನ ಬ್ರಾಹ್ಮಣರಿಗೆ ಬೆಂಗಳೂರಿನ ಬಳಿಯಲ್ಲಿ ಕೆಂಪಾಪುರ ಆಗ್ರಹಾರವನ್ನು (ಹೆಬ್ಬಾಳ ಮೇಲು ಸೇತುವೆ ಬಳಿ ಹಾಗೂ ಕೊಲಂಬಿಯಾ ಏಷಿಯಾ ಆಸ್ಪತ್ರೆಯ ಹಿಂಭಾಗ) ದಾನ ಕೊಟ್ಟಿರುವ ಉದಾಹರಣೆ ಇದೆ. ಅದೇ ರೀತಿ ಹಲಸೂರಿಗೆ 12 ಕಿಲೋ ಮೀಟರು ದುರದ ಐವರಖಂಡಪುರ ಆಗ್ರಹಾರಕ್ಕೂ ದಾನ ಕೊಟ್ಟ ಉದಾಹರಣೆ ಇದೆ. ಮೈಸೂರು ಜಿಲ್ಲೆಯ ಸೋಸಲೆಯ ವ್ಯಾಸರಾಯ ಮಠಕ್ಕೆ ಸೊಂಡೆಕೊಪ್ಪದ ಸಮೀಪ ಐದು ಹಳ್ಳಿಗಳನ್ನು ದಾನಕೊಟ್ಟಿರುತ್ತಾರೆ. ವ್ಯಾಸರಾಯನ ಹೆಸರಿನಲ್ಲಿ ವ್ಯಾಸರಾಯ ಸಮುದ್ರವೆಂಬ ಕೆರೆಯನ್ನು ಕಟ್ಟಿಸಿದರು. ಮಾಗಡಿ ಬಳಿಯಿರುವ ಕಲ್ಯ ಎಂಬಲ್ಲಿ "ಕಾಳಿನಾಥ" ದೇವಾಲಯಕ್ಕೆ ಸಾಕಷ್ಟು ದಾನ ಧರ್ಮ ಮಾಡಲಾಗಿದೆ. ಮಾಗಡಿಯ ರಾಮೇಶ್ವರ ದೇವಾಲಯಕ್ಕೆ ಹೇರಳವಾಗಿ ಧನಕನಕ ನೀಡಿರುವ ಉದಾಹರಣೆ ಇದೆ. ಇಮ್ಮಡಿ ಕೆಂಪೇಗೌಡ ಹಾಗೂ ಆತನ ನಂತರದ ಆತನ ವಂಶಸ್ಥರು ಮಾಗಡಿ ಕೆಂಪೇಗೌಡನ ವಂಶಸ್ಥರು ಎಂದೇ ಖ್ಯಾತನಾಮರಾಗಿ –ದ್ದಾರೆ. ಸಾಹಿತಿಯೂ ಆಗಿದ್ದ ಮಾಗಡಿ ಕೆಂಪೇಗೌಡನು "ಗಂಗಾಗೌರಿ ವಿಲಾಸಮು"

ಎಂಬ ಕೃತಿಯನ್ನು ತೆಲಗು ಭಾಷೆಯಲ್ಲಿ ಬರೆದಿದ್ದಾನೆ. ಗೌಡನ ಆಸ್ತಾನ ಕವಿಯಾಗಿದ್ದ ಏಕಾಂಬರ ದೀಕ್ಷಿತರು 'ವೀರಭದ್ರ ವಿಜಯ' ಎಂಬ ಕೃತಿಯನ್ನು ರಚಿಸಿದನು.

ಗಂಗಾಗೌರಿ ವಿಲಾಸಮು ಕೃತಿಯಿಂದಾಗಿ ಮಾಗಡಿ ಕೆಂಪೇಗೌಡನ ಹಾಗೂ ಆತನ ಸಾಧನೆಯ ಬಗ್ಗೆ ಕೆಲವಾರು ಮಾಹಿತಿಗಳನ್ನು ತಿಳಿಯಬಹುದು. ಮಾಗಡಿ ಕೆಂಪೇಗೌಡನ ನಂತರ ಆತನ ಮಗನಾದ ಮುಮ್ಮಡಿ ಕೆಂಪೇಗೌಡನು ಅಧಿಕಾರಕ್ಕೆ ಬಂದನು.

ಮುಮ್ಮಡಿ ಕೆಂಪೇಗೌಡ

ಮಾಗಡಿ ಕೆಂಪೇಗೌಡನ ನಂತರ ಅಧಿಕಾರಕ್ಕೆ ಬಂದವನೆಂದರೆ ಮುಮ್ಮಡಿ ಕೆಂಪೇಗೌಡ. ಈತನನ್ನು ಮಳೆಕಂಪರಾಯನೆಂದು ಕರೆಯುತ್ತಾರೆ. ಹೇಗೆಂದರೆ ತನ್ನ ಮಾಗಡಿ ಸೀಮೆಯಲ್ಲಿ ಮಳೆ ಬೆಳೆಯಾಗದೆ ಕ್ಷಾಮ ತಲೆದೋರಿದಾಗ ತನ್ನ ಕುಲದೇವತೆ -ಯಾದ ಕೆಂಪಮ್ಮ ಮತ್ತು ಭೈರೇದೇವರನ್ನು ಭಕ್ತಿಯಿಂದ ಪೂಜಿಸಿದನೆಂತಲೂ ಆತನ ಭಕ್ತಿಯಿಂದಾಗಿ ಮಾಗಡಿ ಪ್ರಾಂತ್ಯದಾದ್ಯಂತ ಮಳೆ ಬೆಳೆಯಾದ ಕಾರಣ ಮುಮ್ಮಡಿ ಕೆಂಪೇಗೌಡನನ್ನು ಮಳೆ ಕೆಂಪರಾಯನೆಂದು ಕರೆಯುತ್ತಿದ್ದರು. ಏಕಾಂಬರ ದೀಕ್ಷಿತರ "ವೀರಭದ್ರ ವಿಜಯ" ಎಂಬ ಕೃತಿಯಲ್ಲಿ ಮುಮ್ಮಡಿ ಕೆಂಪೇಗೌಡನ ಶೌರ್ಯ ಪರಾಕ್ರಮ -ವನ್ನು ಕವಿಯು ಕೊಂಡಾಡಿದ್ದಾನೆ. ವಿಜಯನಗರದ ಅರಸರು ನೆಲೆ ಕಳೆದುಕೊಂಡು ದೇಶಭ್ರಷ್ಟರಾಗಿದ್ದರೂ ಕೂಡ ವಿಜಯನಗರದರಸರ ಸಾಮಂತರೆಂದೇ ಕೆಂಪೇಗೌಡನ ವಂಶಸ್ಥರು ತಮ್ಮನ್ನು ಶಾಸನಗಳಲ್ಲಿ ಕರೆದುಕೊಂಡಿದ್ದಾರೆ. ಮುಮ್ಮಡಿ ಕೆಂಪೇಗೌಡನು ವಿಜಯನಗರ-ದರಸರಿಗೆ ವಿದೇಯರಾಗಿ ನಡೆದುಕೊಳ್ಳದ ಪಾಳೆಯಗಾರರನ್ನು ಸದೆಬಡಿದು ಆಳರಸರಿಂದ "ಸ್ವಾಮಿ ದ್ರೋಹರಗಂಡ" ಎಂಬ ಬಿರುದನ್ನು ಗಳಿಸಿದ.

ಮಳೇಕೆಂಪರಾಯನು ವಾರಣಾಸಿ(ಕಾಶಿ)ಯಲ್ಲಿ ತಮ್ಮ ತಾಯಿಯವರ ಕೋರಿಕೆಯಂತೆ ಒಂದು ಮಠವನ್ನು ಸ್ಥಾಪಿಸಿ ಅಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿದನೆಂದು 1667ರ ಅರಕುಪ್ಪೆಶಾಸನವು ತಿಳಿಸುತ್ತದೆ. ಮಾಗಡಿ ಬಳಿಯ ಕಲ್ಯಾದ ಬಳಿಯಿರುವ ಹಾಲಶೆಟ್ಟಿಹಳ್ಳಿ ಎಂಬ ಪ್ರದೇಶದಲ್ಲಿ ಎಂಬ ಪ್ರದೇಶದಲ್ಲಿ ಕೃಷಿ ಜನ, ಜಾನುವಾರು-ಗಳಿಗೆ ಅನುಕೂಲವಾಗಲೆಂದು 'ಕೆಂಪಸಾಗರ' ಎಂಬ ದೊಡ್ಡ ಕೆರೆಯನ್ನು ನಿರ್ಮಿಸಿದ ಬಗ್ಗೆ ಹಾಲಶೆಟ್ಟಿಹಳ್ಳಿ ಶಾಸನವು ತಿಳಿಸುತ್ತದೆ.

ಮಾಗಡಿ ಸೀಮೆಯ ಹಾಲಶೆಟ್ಟಿಹಳ್ಳಿ ಕೆರೆಯ ಬಳಿ ಇರುವ ಗಣಪತಿ ದೇವಸ್ಥಾನಕ್ಕೆ ಹತ್ತಾರು ಖಂಡುಗ ಭತ್ತ, ರಾಗಿ ಇವೇ ಮುಂತಾದ ದವಸಧಾನ್ಯ ಬೆಳೆಯುವ ಭೂಮಿಯನ್ನು ಧಾನಕೊಟ್ಟ ಬಗ್ಗೆ ದೇವಸ್ಥಾನದ ಬಳಿಯಿರುವ ಶಾಸನದಿಂದ ತಿಳಿದುಬರುತ್ತದೆ.

ಮುಮ್ಮಡಿ ಕೆಂಪೇಗೌಡನು ತನ್ನ ಪೂರ್ವಿಕರು ಕಟ್ಟಿ ಬೆಳೆಸಿದ ಬೆಂಗಳೂರನ್ನು ಹಿಂಪಡೆಯಲು ಹಗಲಿರುಳು ಶ್ರಮಿಸುತ್ತಿದ್ದನು. ಒಂದು ಕಡೆ ಮೈಸೂರಿನ ಅರಸರು ರಾಜ್ಯವಿಸ್ತಾರ ಮಾಡಲು ಹವಣಿಸುತ್ತಿದ್ದರು. ಮತ್ತೊಂದೆಡೆ ಬೆಂಗಳೂರನ್ನು ಮಾರಾಠರು ಆಳ್ವಿಕೆ ಮಾಡತೊಡಗಿದರು ಹೇಗೆಂದರೆ ಷಹಜಿ ಬೋಂಸ್ಲೆಗೆ ಇಬ್ಬರು ಹೆಂಡತಿಯರು ಮತ್ತು ಇಬ್ಬರು ಮಕ್ಕಳಿದ್ದರು. ತಾರಾಬಾಯಿ ಮತ್ತು ಆಕೆಯ ಮಗ ಶಿವಾಜಿಯು ಪೂನಾದ ಬಳಿಯಿರುವ ಸತಾರದಲ್ಲಿ ನೆಲೆಸಿದರೆ ಇತ್ತ ಷಹಜಿ ಬೋಂಸ್ಲೆಗೆ ತನ್ನ ಮತ್ತೊಬ್ಬ ಹೆಂಡತಿ ಯುಕಾಬಾಯಿ ಮತ್ತು ಮಗ ಏಕೋಜಿಯೊಡನೆ ಬೆಂಗಳೂರಿನಲ್ಲಿ ನೆಲೆಸಿದರು. ಷಹಜಿಯು ಬಿಜಾಪುರದಲ್ಲಿ ನೆಲೆಸಿದ್ದರೆ ಕೆಂಪೇಗೌಡನು ಬೆಂಗಳೂರನ್ನು ವಶಪಡಿಸಿಕೊಳ್ಳಬಹುದಿತ್ತೇನೊ ಆದರೆ ಅದು ಹಾಗೆ ಆಗದೆ ಬೆಂಗಳೂರಿನ ಆಳರಸನಂತೆ "ಗೌರಿಮಹಲ್" ಎಂಬ ಅರಮನೆಯನ್ನು (ಇಂದಿನ ಚಿಕ್ಕಪೇಟೆ ಬಳಿ) ಕಟ್ಟಿಸಿಕೊಂಡು ಇಲ್ಲಿಯೇ ನೆಲೆಸಿದ್ದ.

ಮುಮ್ಮಡಿ ಕೆಂಪೇಗೌಡನ ಸ್ಥಿತಿ ಅತ್ತ ದರಿ ಇತ್ತ ಪುಲಿ ಎಂಬಂತಾಯ್ತು ಅತ್ತ ಪುನಾದಲ್ಲಿದ್ದ ಶಿವಾಜಿಯು ದಕ್ಷಿಣದತ್ತ ದಂಡೆತ್ತಿ ಬಂದು ಬಿಜಾಪುರದ ಸುಲ್ತಾನರಿಗೆ ಸೇರಿದ ಪ್ರದೇಶಗಳನ್ನು ವಶಪಡಿಸಿಕೊಳ್ಳಲಾಗಿ ಬಿಜಾಪುರದ ಸುಲ್ತಾನರು ಶಿವಾಜಿಯನ್ನು ತಣ್ಣಗಾಗಿಸಲು ಆತನ ತಂದೆಯಾದ ಷಹಜಿಯನ್ನು ಬಿಜಾಪುರಕ್ಕೆ ಕರೆಸಿಕೊಂಡು ಬಂಧನದಲ್ಲಿರಿಸಿದರು. ಇದೇ ಸಮಯಕ್ಕಾಗಿ ಕಾಯುತ್ತಿದ್ದ 1ನೇ ರಣಧೀರ ನರಸರುರಾಜಒಡೆಯ (1638–59) ಮಾಗಡಿ ಕೆಂಪೇಗೌಡನಿಗೆ ಸೇರಿದ ಮಾಗಡಿ, ಸಾವನದುರ್ಗ, ಉತರೀದುರ್ಗವನ್ನು ಮುತ್ತಿದ್ದ. ಶತ್ರುವಿನ ಶತ್ರು ಮಿತ್ರ ಎನ್ನುವಂತೆ ಮಾಗಡಿಯನ್ನು ರಕ್ಷಣೆ ಮಾಡಿಕೊಳ್ಳಲು ಬೆಂಗಳೂರಿನಲ್ಲಿದ್ದ ಮರಾಠರ ಸಹಾಯುವನ್ನು ಕೆಂಪೇಗೌಡನು ಯಾಚಿಸಿದನು ಆದರೆ ಷಹಜಿಯು ಅಸಹಾಯಕನಾಗಿದ್ದುದರಿಂದ ಮರಾಠ ಸೈನ್ಯ ಕೆಂಪೇಗೌಡನ ನೆರವಿಗೆ ಬರಲಾಗಲಿಲ್ಲ ಸೊತ ಕೆಂಪೇಗೌಡನು ಮೈಸೂರರಸರಿಗೆ ಕಪ್ಪ ಕಾಣಿಕೆ ಕೊಡಲು ಒಪ್ಪಿದ ಇವೇ ಮುಂತಾದ ವಿಚಾರಗಳು "ಗೋವಿಂದ ವೈದ್ಯನ" 'ಕಂಠೀರವ ನರಸರಾಜ ವಿಜಯ' ವೆಂಬ ಸಾಂಗತ್ಯದಿಂದ ತಿಳಿದು ಬರುತ್ತವೆ. ಈ ಸಾಂಗತ್ಯದ ಕಥಾವಸ್ತು ಕಂಠೀರವ ನರಸರಾಜ ಒಡೆಯ. ಬೆಂಗಳೂರಿಗೆ ಹಿಂತಿರುಗಿ ಷಹಜಿಯು ಬಿಜಾಪುರದ ಸೇನಾನಿ ಬಹ್ಲೂಲ್ಲಾಖಾನ್ ಹಾಗೂ ಸಿರಾದ ನವಾಬರನ್ನು ಸೇರಿಸಿಕೊಂಡು ಮೈಸೂರಿನ ಒಡೆಯನಾದ ಕಂಠೀರವ ನರಸರಾಜನ ವಿರುದ್ಧ ಸೇನಾಚರಣೆ ನಡೆಸಿದನು. ಕಂಠೀರವನು ಸೋತು ಕಪ್ಪ ಕಾಣಿಕೆ ಕೊಡಲು ಒಪ್ಪಿಕೊಂಡನು. ಇನ್ನೂ ಮುಂದುವರಿದ ಷಹಜಿ ಕೆಳದಿಯನ್ನು ಮುತ್ತಿದನು. ತಾನು ಗೆದ್ದ ಕೆಳದಿ, ಇಕ್ಕೇರಿಗಳ ಮೇಲಿನ ಕಂದಾಯ ವಸೂಲಿಮಾಡವ ಸಂದರ್ಭದಲ್ಲಿ ಅಸುನೀಗಿದ (ಕ್ರಿ.ಶ.1664).

ಷಹಜಿಯ ಸಾವಿನಿಂದ ಕಂಗೆಟ್ಟ ಏಕೋಜಿಯು ಸೈನ್ಯವನ್ನು ಒಗ್ಗೂಡಿಸಿ 1675ರಲ್ಲಿ ತಮಿಳುನಾಡು ರಾಜ್ಯದ ತಂಜಾವೂರನ್ನು ಗೆದ್ದುಕೊಂಡನು. ಈ ನಡುವೆ ಬಿಜಾಪುರದ ಸುಲ್ತಾನರು ಆದಃಪತನದ ಹಾದಿಹಿಡಿದರು. ಇಷ್ಟೇ ಅಲ್ಲದೆ ಮೈಸೂರಿನ ಒಡೆಯರು ಮತ್ತು ಸ್ಥಳೀಯ ಪಾಳೆಯಗಾರರು ಬೆಂಗಳೂರನ್ನು ಮುತ್ತಿ ಮರಾಠರನ್ನು ಅಲ್ಲಿಂದ ಕಾಲ್ಕೀಳಿಸಲು ಯತ್ನಿಸುತ್ತಿದ್ದರು. ದಿನೇ ದಿನೇ ಬೆಂಗಳೂರಿನ ಮೇಲಿನ ಹಿಡಿತ ಏಕೋಜಿಗೆ ಕಡಿಮೆಯಾಗತೊಡಗಿತು. ಮೈಸೂರಿನ ಸಿಂಹಾಸನಕ್ಕೆ ಬಂದ ಚಿಕ್ಕದೇವರಾಯ ಒಡೆಯರು ಶೌರ್ಯ, ಪರಾಕ್ರಮವನ್ನು ಮೆರೆದನು. ಮಾಗಡಿ, ರಾಮದುರ್ಗಗಳ ಮೇಲೆ ದಾಳಿಮಾಡಿದರು. ಕೇತಸಮುದ್ರ, ಕಂದೀಕೆರೆ, ಹಂದಲಿಗೆರೆ, ಹೊನ್ನವಳ್ಳಿ, ಗೂಳೂರು, ತುಮಕೂರಿನ ಕೆಲವಾರು ಪ್ರದೇಶಗಳನ್ನು ವಶಪಡಿಸಿಕೊಂಡರು. ಏಕೋಜಿಯನ್ನು ಎದುರುಹಾಕಿಕೊಂಡರೆ ಮರಾಠರು ಮತ್ತು ಬಿಜಾಪುರದ ಸುಲ್ತಾನರನ್ನು ಎದುರುಹಾಕಿಕೊಳ್ಳಬೇಕಾಗುತ್ತದೆ ಎಂದರಿತ ಚಿಕ್ಕದೇವರಾಜ ಒಡೆಯರು. ಬೆಂಗಳೂರನ್ನು ಏಕೋಜಿಯಿಂದ ಮೂರು ಲಕ್ಷ ವರಹಗಳಿಗೆ ಕೊಂಡುಕೊಳ್ಳಲು ಯೋಚಿಸಿದರು. ಏಕೋಜಿಯು ಅದಕೊಪ್ಪಿದ. ಆದರೆ ಉತ್ತರದ ಮೊಗಲರ ದಂಡನಾಯಕ ಖಾಸಿಂಖಾನ್ ಬೆಂಗಳೂರನ್ನು ಮುತ್ತಿಗೆ ಹಾಕಿ ವಶಪಡಿಸಿಕೊಂಡ. ಬೆಂಗಳೂರು ಮರಾಠರ ಏಕೋಜಿಯು ಕೈತಪ್ಪಿ ಖಾಸಿಂಖಾನ್‌ಗೆ ಜಾರಿತು. ಚಿಕ್ಕದೇವರಾಜ ಒಡೆಯರು 1687ರಲ್ಲಿ ಬೆಂಗಳೂರನ್ನು ಮೂರುಲಕ್ಷ ವರಹಗಳನ್ನು ಕೊಟ್ಟು ಕೊಂಡುಕೊಂಡರು.

ಮೈಸೂರಿನ ಒಡೆಯರಾದ ಚಿಕ್ಕದೇವರಾಯನಿಗೆ ಬೆಂಗಳೂರು ನಗರ ಸೇರುವ ಮೂಲಕ ಶಾಶ್ವತವಾಗಿ ಕೆಂಪೇಗೌಡರ ವಂಶಸ್ಥರ ಕೈಯಿಂದ ಬೆಂಗಳೂರು ಜಾರಿತು. ಮುಮ್ಮಡಿ ಕೆಂಪೇಗೌಡನ ನಂತರ ಆತನ ಮಗನಾದ ದೊಡ್ಡವೀರಪ್ಪಗೌಡ, ಕೆಂಪವೀರಪ್ಪಗೌಡ, ಇವರೇ ಮುಂತಾದವರು ಮಾಗಡಿ ಸೀಮೆಯನ್ನು ಆಳ್ವಿಕೆ ಮಾಡಿದರು. ರಾಜಕೀಯ ಕಾಲಘಟ್ಟದ ತಿರುವುಗಳಿಗೆ ಸಿಕ್ಕಿದ ಕೆಂಪೇಗೌಡನ ವಂಶಸ್ಥರು ಮಾಗಡಿ, ರಾಮದುರ್ಗ, ನೆಲಪಟ್ಟಣ, ಉತ್ತರಿದುರ್ಗ ಇವೇ ಮುಂತಾದ ಪ್ರದೇಶಗಳಲ್ಲಿ ಕೆಲವು ಕಾಲ ಮಾಂಡಲಿಕರಾಗಿ ಉಳಿಯಬೇಕಾಯ್ತು. ರಾಜಕೀಯವಾಗಿ ನಿತ್ರಾಣ–ರಾದರೂ ಕೂಡ ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಸುರತ್ರಾಣರಾಗಿ ಉಳಿದಿದ್ದಾರೆ.

ನಾಡಪ್ರಭು ಕೆಂಪೇಗೌಡನ ವಂಶಸ್ಥರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳು

ನಾಡಪ್ರಭು ಕೆಂಪೇಗೌಡನು ಬೆಂಗಳೂರನ್ನು ನಿರ್ಮಿಸುವ ಮೂಲಕ ಲೋಕ ಪ್ರಸಿದ್ಧನಾದನು. ಅದೇರೀತಿ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಚಾರಗಳಲ್ಲಿ ಹಿಂದೆ ಬೀಳಲಿಲ್ಲ. ಇವರು ತಮ್ಮದೇ ಆದ ಕೊಡುಗೆಯನ್ನು

ಕೊಟ್ಟಿದ್ದಾರೆ. ಮರಸು ಒಕ್ಕಲಿಗರು ಇವರು ತಮಿಳುನಾಡಿನ ಕಂಚಿಯಿಂದ ಬಂದವರು ಇತ್ಯಾದಿಯಾಗಿ ಹೇಳುತ್ತಾರೆ. ಆದರೆ ಇತ್ತೀಚಿನ ಸಂಶೋಧನೆಗಳ ಪ್ರಕಾರ ಕೋಲಾರ ಜಿಲ್ಲೆ ಮುಳಬಾಗಿಲು, ಹೊಸೂರು, ಡಂಕಣಿಕೋಟೆ ಇವೇ ಮುಂತಾದ ಪ್ರದೇಶಗಳನ್ನು **'ಮೊರಸುನಾಡು'** ಎನ್ನುತ್ತಿದ್ದರು. ಒಮ್ಮೆ ತಮಿಳುನಾಡಿನ ಭಾಗವಾಗಿದ್ದು ಕ್ರಮೇಣ ಕರ್ನಾಟಕಕ್ಕೆ ಸೇರಿತು. ಇತಿಹಾಸ ಕಾಲಘಟ್ಟದಿಂದಾಗಿ ಅಲ್ಲಿಂದ ಆವತಿಗೆ ನಂತರ, ಯಲಹಂಕಕ್ಕೆ ವಲಸೆ ಬಂದಿರುವರೆಂದು ಸಂಶೋಧಕರು ಮತ್ತು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ.

ಈಗಾಗಲೆ ತಿಳಿಸಿರುವಂತೆ ಯಣಮಂಜಿ ಪುತ್ತೂರಿನಿಂದ ಆವತಿನಾಡಿಗೆ ಬಂದಿದ್ದು ಇತಿಹಾಸವೊ ಐತಿಹ್ಯವೊ ತಿಳಿಯದು ಆದರೆ ಮರಸು ಒಕ್ಕಲಿಗರಲ್ಲಿ ಬಂಡಿದ್ಯಾವ್ರ ಹಬ್ಬವನ್ನು ಆಚರಿಸುತ್ತಾರೆ. ಬಂಡಿಕಾಪುಲು ಎನ್ನುತ್ತಾರೆ. ಅದೇ ರೀತಿ ನದಿ ಶಾಂತವಾಗಲಾಗಿ ರಣಭೈರೇಗೌಡನ ಮಗಳು ತನ್ನ ಬೆರಳುಕೊಟ್ಟಳು ಅಂದಿನಿಂದ ಪ್ರತೀಕುಟುಂಬದ ಹೆಣ್ಣುಮಕ್ಕಳು ಬಹಳಷ್ಟುಕಾಲ ತಮ್ಮ ಕಿರುಬೇರಳನ್ನು ಮದುವೆಗೂ ಮುನ್ನ ದೇವರಿಗೆ ಅರ್ಪಿಸುತ್ತಿದ್ದರಂತೆ ಈ ಅನಿಷ್ಟ ಪದ್ಧತಿಯನ್ನು ಕೆಂಪೇಗೌಡನು ತಪ್ಪಿಸಿದನಂತೆ. ಇಂದು ಸಾಂಕೇತಿವಾಗಿ ಕಿರುಬೆರಳಿಗೆ ವೀಳ್ಯೆಯಬೆಲೆಯನ್ನು ಸುತ್ತಿ ಅದನ್ನು ದೇವರಿಗೆ ಅರ್ಪಿಸುತ್ತಾರೆ. ಇದನ್ನು "ವೇರಲುಇಚ್ಚೆಕಾಪಲು" ಎಂದರೆ ಬೆರಳುಕೊಡುವ ಪದ್ಧತಿ ಎಂದು ಕರೆಯುತ್ತಾರೆ.

ಕೆಂಪೇಗೌಡರ ವಂಶಸ್ಥರು ಶಿವ ಅರ್ಥಾತ್ ಭೈರವನನ್ನು ಆರಾಧಿಸುತ್ತಾರೆ.. 'ಸೀತಿ'ಬೆಟ್ಟ ಕೋಲಾರ ತಾಲ್ಲೂಕಿನ ವೇಮಗಲ್ ಪ್ರದೇಶದಲ್ಲಿದೆ. ಈ ಸೀತಿಬೆಟ್ಟ ಪವಿತ್ರವಾದದ್ದು. ಕೃಷಿಕರಾದ ಇವರು ಬೆಳೆಗಳು ಕೊಯ್ಲಿಗೆ ಬಂದಾಗ ಅವುಗಳನ್ನು ಕಟಾವುಮಾಡಿ ತಂದು ಧಾನ್ಯಲಕ್ಷ್ಮಿಯನ್ನು ಮನೆತುಂಬಿಸಿಕೊಂಡು ಆಕೆಯನ್ನು ಪೂಜಿಸುವುದೇ 'ಹೊಸದ್ಯಾವರ' ಇದನ್ನು ಬೆಳೆಬಂದಾಗ ಅಂದರೆ ವರ್ಷದಲ್ಲಿ ಒಮ್ಮೆಮಾತ್ರ ಆಚರಿಸುತ್ತಾರೆ. ಆ ದಿನ ಬಂಧುಬಳಗ ನೆಂಟರಿಷ್ಟರು ಒಂದೆಡೆ ಸೆರುತ್ತಾರೆ. ಸಿಹಿತಿಂಡಿ ಸೇರಿದಂತೆ ವಿಶೇಷ ಅಡುಗೆ ಮಾಡಿ ಊಟಮಾಡಿ ಹಬ್ಬ ಆಚರಿಸುತ್ತಾರೆ.

ಸಮಾಜದ ಎಲ್ಲಾ ಜನಗಳಿಗೂ ಅನುಕೂಲವಾಗಲೆಂದು ಬೆಂಗಳೂರು ನಗರವನ್ನು ಕಟ್ಟುವಾಗ ಮಾರಾಟಗಾರರಿಗೆ ಹಾಗೂ ಕೊಳ್ಳುವವರಿಗೆ ಅನುಕೂಲವಾಗ –ಲೆಂದು ಹಲವಾರು ಪೇಟೆಗಳನ್ನು, ಬೀದಿಗಳನ್ನು ನಿರ್ಮಿಸಿದ ಬಗ್ಗೆ ಈಗಾಗಲೆ ತಿಳಿಸಿದೆ ಉದ್ದಗಲದ ರಸ್ತೆಗಳು, ರಸ್ತೆಗಳ ಎರಡೂ ಬದಿಗಳಲ್ಲಿ ಅಥವಾ ಪ್ರಯಾಣಿಕರಿಗೆ ಅನುಕೂಲವಾಗಲೆಂದು ಸಾಲುಮರಗಳನ್ನು ನೆಡಿಸಿದ್ದರು,. ಉದಾ:– ಪ್ರಸ್ತುತ ಅವೆನ್ಯು ರಸ್ತೆ ಇಂಗ್ಲೀಷ್‌ನಲ್ಲಿ ಅವಿನ್ಯೂ ಎಂದರೆ ಸಾಲುಮರದ, ದೊಡ್ಡ ರಸ್ತೆ ಎಂದರ್ಥ ಇಂತಹ ಸಾಲುಮರಗಳನ್ನು ಊರಿನಿಂದ ಊರಿಗೆ ಹೋಗುವ ರಸ್ತೆಗಳಲ್ಲಿ

ಮರಗಿಡಗಳನ್ನು ಅದರಲ್ಲೂ ವಿಶೇಷವಾಗಿ ಹೊಂಗೆ ಸಸಿಗಳನ್ನು ನೆಡುತ್ತಿದ್ದರು. ಇದು ದಾರಿಹೋಕರಿಗೆ ನೆರಳನ್ನು ಕೊಡುವುದರ ಜೊತೆಗೆ ಎಣ್ಣೆಯನ್ನು ತಯಾರಿಸಲು ಇದರ ಬೀಜವನ್ನು ಬಳಸುತ್ತಿದ್ದರು. ಅಲ್ಲಲ್ಲಿ ಅರವಟಿಕೆಗಳು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು ದಾರಿಹೋಕರಲ್ಲಿ ಯಾರಾದರು ತಮ್ಮ ತಲೆಯ ಮೇಲೆ ಏನಾದರು ತೂಕವಾದ ಹೊರೆ ಹೊತ್ತುಕೊಂಡು ಹೋಗುತ್ತಿದ್ದರೆ ಈ ಮಧ್ಯೆ ದಣಿವಾರಿಸಿಕೊಂಡು ತಮ್ಮ ಹೊರೆಯನ್ನು ಯಾರ ಸಹಾಯವೂ ಇಲ್ಲದೆ ಹೊತ್ತುಕೊಳ್ಳಲು ಹೊರೆಕಲ್ಲುಗಳನ್ನು ನೆಡಿಸಿದ್ದರು.

ಕೆರೆ, ಕುಂಟೆ, ಕಾಲುವೆಗಳ ನಿರ್ಮಾಣ

ಕೆಂಪೇಗೌಡನ ವಂಶಸ್ಥರು ತಮ್ಮ ರಾಜ್ಯದಾದ್ಯಂತ ಹೇರಳವಾಗಿ ಕೆರೆ, ಕುಂಟೆ, ಕಾಲುವೆ, ಕಲ್ಯಾಣಿಗಳನ್ನು ನಿರ್ಮಿಸಿದ್ದರು. ಅವುಗಳೆಂದರೆ.

1. **ಧರ್ಮಾಂಬುಧಿ ಕೆರೆ:** ಕೆಂಪೇಗೌಡ ನಿರ್ಮಿಸಿದ ಪಟ್ಟಣದ ಹೊರಭಾಗವು ಹಳ್ಳದಿಂದ ಕೂಡಿದ್ದು ಆ ಜಾಗದಲ್ಲಿ ಮಳೆನೀರು ನಿಲ್ಲುವಂತೆ ಮಾಡಿ ದೊಡ್ಡಕೆರೆಯನ್ನು ನಿರ್ಮಿಸಿದ್ದರು. ಇಂದು ಕೆಂಪೇಗೌಡ ಬಸ್ ನಿಲ್ದಾಣದಿಂದ ಹಿಡಿದು ಗಾಂಧಿನಗರದವರೆವಿಗೂ ವಿಸ್ತರಿಸಿತ್ತು ಜನ ಜಾನುವಾರುಗಳಿಗೆ ಈ ನೀರನ್ನೇ ಬಳಸುತ್ತಿದ್ದರು.
2. **ಸಂಪಂಗಿ ಕೆರೆ :** ಪ್ರಸ್ತುತ ಸಂಪಂಗಿ ರಾಮನಗರದ ಎದುರು ಹಾಗೂ ಮಲ್ಯ ಆಸ್ಪತ್ರೆಯ ಎದುರುಗಡೆ ಇರುವ ಸಂಪಂಗಿಕೆರೆಯಾಗಿತ್ತು. ಈ ಜಾಗ ಇಂದು ಕಂಠೀರವ ಕ್ರೀಡಾಂಗಣವಾಗಿದೆ. ಕೆಲವು ವರ್ಷಗಳ ಹಿಂದೆಯು ಇಲ್ಲಿ ನೀರು ನಿಲ್ಲುತ್ತಿತ್ತು. ಬೆಂಗಳೂರು ಕಾರ್ಪೊರೇಷನ್ ವತಿಯಿಂದೊಮ್ಮೆ ಕಾರಂಜಿಯನ್ನು ನಿರ್ಮಿಸಿದ್ದರು.
3. **ಕೆಂಪಾಂಬುಧಿ ಕೆರೆ :-** ಮನೆದೇವರಾದ ಕೆಂಪಮ್ಮಳ ಹೆಸರಿನಲ್ಲಿ ಕೆಂಪಾಂಬುಧಿ ಕೆರೆ ಎಂಬ ಕೆರೆಯನ್ನು ನಿರ್ಮಿಸಿದ್ದರು. ಇಂದಿನ ಗವೀಪುರಂ ಬಳಿ ತಗ್ಗು ಪ್ರದೇಶದಲ್ಲಿ ದೊಡ್ಡಕೆರೆಯನ್ನು ನಿರ್ಮಿಸಿದ್ದರು.
4. **ಕೆಂಪಾಪುರ ಅಗ್ರಹಾರ ಕೆರೆ :-** ನಗರದಿಂದ ಹೊರಭಾಗದಲ್ಲಿರುವ ರೈತರಿಗೆ ಅನುಕೂಲವಾಗಲೆಂದು ಅಲ್ಲೊಂದು ದೊಡ್ಡದಾದ ಕೆರೆಯನ್ನು ನಿರ್ಮಿಸಿದ್ದರು. ಅದು ಇಂದಿನ ಬಿನ್ನಿಮಿಲ್ ಹಿಂಭಾಗದಲ್ಲಿದೆ. ಬಹಳ ವರ್ಷಗಳ ಕಾಲ ಕೊಳಕು ನೀರು ತುಂಬಿಕೊಂಡಿತ್ತು. ಆ ಜಾಗವನ್ನು ಮುಚ್ಚಿ ಮಳಿಗೆಗಳನ್ನು ಕಟ್ಟಿದರು. ನೀರಿನ ತೇವಾಂಶದಿಂದಾಗಿ ಹಾಗೇ ಉಳಿದಿದೆ. ಈಗಲು ಅಲ್ಲಿ ನೀರು ತುಂಬಿದೆ(ಕೊಳಕು ನೀರು)

5. **ಜಕ್ಕರಾಯನ ಕೆರೆ :**– ಬೆಂಗಳೂರು ಕೋಟೆಯ ಪಕ್ಕದಲ್ಲಿ ಜಕ್ಕರಾಯನ ಕೆರೆಯನ್ನು ಕಟ್ಟಿಸಿದರು ಇದು ಜನಜಾನುವಾರುಗಳಿಗೆ ನೀರು ಸದಾಕಾಲವು ದೊರೆಯುತ್ತಿತ್ತು.

6. **ಸಿದ್ದಾಪುರ ಕೆರೆ :**– ಲಾಲ್‌ಬಾಗ್ ಕೆರೆ ಹಾಗೂ ಇಂದಿನ ಲಾಲ್‌ಬಾಗ್ ಪ್ರದೇಶವು ತಗ್ಗು ಪ್ರದೇಶವಾಗಿದ್ದು ಲಾಲ್‌ಬಾಗ್‌ನ ಮೇಲಿರುವ ಕಲ್ಲುಗುಡ್ಡವು ಎತ್ತರವಾದ ಪ್ರದೇಶವಾಗಿದ್ದು ಅಲ್ಲಿಂದ ನೀರು ಹರಿದು ಬಂದು ಸಿದ್ದಾಪುರ ಕೆರೆಗೆ ಸೇರುತಿತ್ತು ಹೈದಾರಲಿ, ಟಿಪ್ಪುಸುಲ್ತಾನ್, ಕ್ಯಾಮರಾನ್, ಕ್ರುಂಬಿಗಲ್ ಹಾಗೂ ಹೆಚ್.ಸಿ.ಜವರಾಯ(ಮೊದಲ ಭಾರತೀಯ ಲಾಲ್‌ಬಾಗ್ ನಿರ್ದೇಶಕರು) ರವರ ಕಾಲದಂತು ಲಾಲ್‌ಬಾಗ್ ಕೆರೆಯ ನೀರನ್ನು ಬಳಸಿಕೊಂಡು ಅಲ್ಲಿನ ಗಿಡಮರಗಳನ್ನು ಅಭಿವೃದ್ಧಿ ಪಡಿಸಿದರು. ಇಂದಿಗೂ ಜಯನಗರದ ಅಶೋಕಪಿಲ್ಲರ್ ಸುತ್ತಮುತ್ತಲಿನ ಸ್ಥಳವನ್ನು ಸಿದ್ದಾಪುರ ಎಂದೇ ಕರೆಯುತ್ತಾರೆ.

7. **ಸಿದ್ದಿಕಟ್ಟೆ :**– ಕೆಂಪೇಗೌಡನ ಚಿಕ್ಕಮ್ಮಳಾದ ಸಿದ್ದಮ್ಮಳ ಹೆಸರಿಗಾಗಿ ಸಿದ್ದಿಕಟ್ಟೆ ಎಂಬ ಕೆರೆಯನ್ನು ಕಟ್ಟಿದರು. ಇದು ಇಂದಿನ ಕೆ.ಆರ್.ಮಾರುಕಟ್ಟೆ ಪ್ರದೇಶಗಳಲ್ಲಿ ಬರುತ್ತದೆ. ಈ ನೀರನ್ನು ಅಂದು ಬೆಂಗಳೂರು ನಗರಕ್ಕೆ ಸರಬರಾಜು ಮಾಡಲಾಗುತ್ತಿತ್ತು. ಇಂದು ಯಾವುದೇ ಕಾರಣದಿಂದ ಕುರುಹು ಸಿಗದಂತೆ ನಗರ ಬೆಳೆದಿದೆ.

8. **ಹೆಬ್ಬಾಳ ಕೆರೆ :**– ಹಳೇ ಬೆಂಗಳೂರು ಮತ್ತು ಹೊಸ ಬೆಂಗಳೂರನ್ನು ವಿಭಾಗಿಸುವುದೇ ಈ ಕೆರೆ ಅರ್ಥಾತ್ ಕೊಡಿಗೆಹಳ್ಳಿ ಮತ್ತು ಚೋಳನಾಯಕನ –ಹಳ್ಳಿ ಮಧ್ಯ ಇರುವ ಕೆರೆ, ಇಂದಿಗೂ ಹೆಬ್ಬಾಳಕೆರೆ ಅಸ್ಥಿತ್ವದಲ್ಲಿದೆ.

9. **ಕಾರಂಜಿ ಕೆರೆ :**– ಇಂದಿನ ಒಕ್ಕಲಿಗರ ಸಂಘ ಜಾಗದಲ್ಲಿ ಅಂದು ಕಾರಂಜಿಕೆರೆ ಇದ್ದಿತು. ಈ ಕೆರೆಯ ನೀರು ಶುದ್ದವಾಗಿದ್ದ ಬೆಂಗಳೂರು ಜನರಿಗೆ ಕುಡಿಯುವ ನೀರಿನ ಸೌಲಭ್ಯಮಾಡಿದ್ದರು. ಇಲ್ಲಿ ಜಲ ಉತ್ಪತ್ತಿಯಾಗುತ್ತಿತ್ತೆಂಬ ಪ್ರತೀತಿ ಇದೆ. ಸ್ವಲ್ಪ ದೂರದಲ್ಲಿ ಜಲಕಂಠೇಶ್ವರ ದೇವಾಲವನ್ನು ನಿರ್ಮಿಸಿದರು. ಇಂದಿಗೂ ಈ ದೇವಾಲಯವು ಪ್ರಾಚೀನ ದೇವಾಲಯವಾಗಿದೆ. ಇಂದು ಕೊಡಗಿನ ತಲಕಾವೇರಿ ತೀರ್ಥೋದ್ಭವ ಸಂದರ್ಭದಲ್ಲಿ ಪೂಜೆ ಮಾಡುವಂತೆ ಅಂದು ಪೂಜೆ ಪುರಸ್ಕಾರ ಮಾಡುತ್ತಿದ್ದರು. ಕೆರೆಯಿಂದ ಒಂದು ಮೈಲಿದೂರದಲ್ಲಿ ಕಾಶಿವಿಶ್ವೇಶ್ವರ ದೇವಾಲಯವಿದೆ. (ಇಂದು ಚಾಮರಾಜಪೇಟೆಯಲ್ಲಿದೆ).

10. **ಹಲಸೂರು ಕೆರೆ :**– ಹಲಸೂರು ಸೋಮೇಶ್ವರ ದೇವಾಲಯ ಹಾಗೂ ಹಲಸೂರು ಪಟ್ಟಣವು ಚೋಳರ ಕಾಲದಿಂದಲೂ ಸುಪ್ರಸಿದ್ದವಾಗಿತ್ತು.

ಹಲಸೂರು ಕೆರೆಯನ್ನು ಇಮ್ಮಡಿ ಕೆಂಪೇಗೌಡನು ಅಭಿವೃದ್ಧಿಪಡಿಸಿದನು ಇಂದು ಕೆರೆಯು ಸೇನಾಪಡೆಗೆ ಸೇರಿದೆ.

11. **ಎಡೆಯೂರು ಕೆರೆ :–** ಜೆ.ಪಿ.ನಗರಕ್ಕೆ ಸಾಗುವ ರಸ್ತೆಯ ಪಕ್ಕದಲ್ಲಿ ಹಾಗೂ ಎಡೆಯೂರು ಎಂಬ ಊರಿನ ಮುಖ್ಯ ಕೆರೆಯೆ ಎಡೆಯೂರು ಕೆರೆ ಇದು ತಗ್ಗು ಪ್ರದೇಶವಾಗಿದ್ದು ವ್ಯವಸಾಯಕ್ಕೆ ಅಂದು ನೀರು ಸರಬರಾಜಾಗುತ್ತಿತ್ತು. ಇಂದಿಗೂ ಈ ಕೆರೆಯನ್ನು ಅಭಿವೃದ್ಧಿಪಡಿಸಿ ವಿಹಾರಕ್ಕೆ ಬಳಸಿಕೊಂಡಿದ್ದರು.

12. **ಕೊಡಿಗೆಹಳ್ಳಿ ಕೆರೆ :–** ಇಂದಿನ ಕೊಡಿಗೆಹಳ್ಳಿ ಹಾಗೂ ಸುತ್ತಲಿನ ಪ್ರದೇಶವನ್ನು ಹಳೇ ಬೆಂಗಳೂರು ಎನ್ನುತ್ತಿದ್ದರು. ಈ ಪ್ರದೇಶದ ಜನರು ವ್ಯವಸಾಯ ಪಸುಸಂಗೋಪನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

13. **ವಯ್ಯಾಲಿಕಾವಲು ಕೆರೆ :–** ಸದಾಶಿವ ನಗರ ಮತ್ತು ಮಲ್ಲೇಶ್ವರಂ ಬಡಾವಣೆಗಳನ್ನು ವಿಭಾಗಿಸುವ ಈ ಕೆರೆ ಇಂದು ಸ್ಯಾಂಕಿಟ್ಯಾಂಕ್ ಎಂದು ಕರೆಯಲಾಗುತ್ತದೆ. ಈ ಕೆರೆಯು ಅಂದು ಕೆರೆತುಂಬಿದ ಬಳಿಕ ಇಂದಿನ ಪಿಟೀಲು ಚೌಡಯ್ಯ ಭವನದ ಮುಂದಿನಿಂದ ಹರಿದು ಮಲ್ಲೇಶ್ವರಂ, ಕಾಡುಮಲ್ಲೇಶ್ವರ ದೇವಸ್ಥಾನದ ಮುಂದೆ ಹರಿಯುತ್ತಿತ್ತು. ಅಲ್ಲಿ ವ್ಯವಸಾಯ ಪಶುಸಂಗೋಪನೆ ಮಾಡುತ್ತಿದ್ದರು.

ಇಷ್ಟೇ ಅಲ್ಲದೆ ಚಳ್ಳಘಟ್ಟದಕೆರೆ, ಯಮಲೂರು ಕೆರೆ, ಚನ್ನಮ್ಮನ ಕೆರೆ, ಬೆಳಂದೂರು ಕೆರೆ, ವರ್ತೂರು ಕೆರೆ, ತಾವರೆಕೆರೆ, ಅಗರಂಕೆರೆ, ಮಡಿವಾಳ ಕೆರೆ, ಕಾಮಾಕ್ಷಿಪಾಳ್ಯದ ಕೆರೆ, ಭೈರಸಂದ್ರಕೆರೆ, ನಾಗಸಂದ್ರ ಕೆರೆಗಳು.

14. **ಅಮೃತಹಳ್ಳಿ ಕೆರೆ :–** ಇಂದು ಕೊಡಿಗೆಹಳ್ಳಿ ಸಮೀಪವೇ ಇರುವ ಅಮೃತಹಳ್ಳಿಗೆ ಸೇರಿದ ಪ್ರದೇಶದಲ್ಲಿ ಕೆರೆ ಇದ್ದಿತು (ಈಗಲೂ ಪಳಿಯುಳಿಕೆಯಾಗಿ ಉಳಿದಿದೆ) ಇದು ಇಡೀ ಗ್ರಾಮಕ್ಕೆ ನೀರನ್ನು ಒದಗಿಸುತ್ತಿತ್ತು.

15. **ಕೆಂಗೇರಿ ಕೆರೆ :–** ಕೆಂಗೇರಿ ಪ್ರದೇಶಗಳಿಗೆ ನೀರುಣಿಸುತಿತ್ತು. ವ್ಯವಸಾಯ ಪಶುಸಂಗೋಪನೆ ಬರದಿಂದ ಸಾಗುತ್ತಿತ್ತು. ವೃಷಭಾವತಿ ನದಿಯು ಇಂದಿನ ದೊಡ್ಡ ಬಸವಣ್ಣನಗುಡಿ ಪ್ರದೇಶದಲ್ಲಿ ಹುಟ್ಟಿ ಹಲವಾರು ಕೆರೆ, ಕಟ್ಟೆ, ಕುಂಟೆಗಳಿಗೆ ತುಂಬಿ ಕಾಲುವೆಯಾಗಿ ಹರಿಯುತ್ತಿತ್ತು. ಅಲ್ಲಲ್ಲಿ ರಾಜಕಾಲುವೆಗಳಿದ್ದವು.

ನಾಗಸಂದ್ರಕೆರೆ, ಹೊಸಕೆರೆಹಳ್ಳಿಕೆರೆ, ಜರಗನಹಳ್ಳಿಕೆರೆ, ಕರಿಹೋಬನಹಳ್ಳಿಕೆರೆ, ನಾಯಂಡಹಳ್ಳಿ ಕೆರೆಗಳು ಪ್ರಮುಖವಾದವುಗಳು. ಮುಮ್ಮಡಿ ಕೆಂಪೇಗೌಡನು ಹಾಲಶೆಟ್ಟಿಹಳ್ಳಿಯ ಬಳಿ 'ಕೆಂಪಸಾಗರ' ಎಂಬ ದೊಡ್ಡ ಕೆರೆಯೊಂದನ್ನು ನಿರ್ಮಿಸಿದನು. ಅರ್ಕಾವತಿನದಿಗೆ ಒಡ್ಡುಹಾಕಿಸಿ 'ಶಿವನಸಮುದ್ರ' ಎಂಬ ಜಲಾಶಯವನ್ನು ನಿರ್ಮಿಸಿದ್ದರು. ಹುಲಿಯೂರು ಮಾರ್ಗದ ಬಳಿ ಕೆಂಪೇಗೌಡನ

ಸೇನಾದಿಪತಿಯಾದ ಕೋನಯ್ಯ ಕೆರೆ ನಿರ್ಮಿಸಿದ ಇಂದು ಕೋನಯ್ಯನ ಕೆರೆ ಎಂದೆ ಪ್ರಖ್ಯಾತಿಯಾಗಿದೆ ಹಾಗೂ ಸುಸ್ಥಿಯಲ್ಲಿದ್ದು ಇದರ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಆನೆಕಲ್ ಬಳಿಯಿರುವ ಜಕ್ಕೂರು, ಜಿಗಣಿ, ಮಾಯಸಂದ್ರ ಸೇರಿದಂತೆ ಕೆಲವಾರು ಕಡೆ ಕೆಂಪೇಗೌಡನ ಬಂಧುಗಳು, ಅಧಿಕಾರಿಗಳು ಕೆರಗಳನ್ನು ನಿರ್ಮಿಸಿರುವ ಉದಾಹರಣೆಗಳಿವೆ.

ಮಳೆಯನೀರು ವ್ಯರ್ಥವಾಗದಂತೆ ಅಲ್ಲಲ್ಲಿ ಒಡ್ಡುಗಳನ್ನು ಹಾಕಿಸುತ್ತಿದ್ದರು. ಹಾಗೂ ಕೆರೆಕುಂಟೆಗಳನ್ನು ನಿರ್ಮಿಸುತ್ತಿದ್ದರು. ಕೆರೆ ತುಂಬಿ ಕೋಡಿ ಬಿದ್ದರೆ ಅದು ಕೆರೆಗೆ ಹರಿಯುವಂತೆ ವ್ಯವಸ್ಥೆ ಮಾಡುತ್ತಿದ್ದರು. ಕಾಲಕಾಲಕ್ಕೆ ಮಳೆ, ಬೆಳೆಯಾಗುತ್ತಿತ್ತು. ಗಟ್ಟಿಮುಟ್ಟಾದ ರೈತರನ್ನು ಸೇನೆಗೆ ಸೇರಿಸಿಕೊಳ್ಳುತ್ತಿದ್ದರು. ಯುದ್ಧಸಂಭವಿಸದೆ ಇದ್ದ ಶಾಂತಿಯ ಕಾಲದಲ್ಲಿ ವ್ಯವಸಾಯ, ಪಸುಸಂಗೋಪನೆ ಮಾಡಿಕೊಂಡಿರುತ್ತಿದ್ದರು. ಇವರನ್ನು ಇಂಗ್ಲೀಷ್ ಭಾಷೆಯಲ್ಲಿ ಆಗ್ರೊಮಾರ್ಷಲ್ (Agro Marstial) ಎನ್ನುತ್ತಾರೆ. ಕನ್ನಡದಲ್ಲಿ 'ಕೃಷಿಕಯೋಧ' ಎಂದರ್ಥ. ನಾಡನ್ನು ಕಟ್ಟಿದ ಜನ ಇವರು.

ಕೆಂಪೇಗೌಡನ ವಂಶಸ್ಥರ ಕಾಲದಲ್ಲಿ ಬೆಂಗಳೂರು ಸುತ್ತಮುತ್ತಲಿನ ಕೆರೆ, ಕುಂಟೆಗಳು ತುಂಬಿ ಕೆಲವಾರು ನದಿಗಳು ಹರಿಯುತ್ತಿದ್ದವು. ಅವುಗಳೆಂದರೆ ಅರ್ಕಾವತಿ, ವೃಷಬಾವತಿ, ಪಿನಾಕಿನಿ, ಪೆನ್ನಾರ್ ಇವೇ ಮುಂತಾದ ನದಿಗಳು ಮಳೆಗಾಲದಲ್ಲಿ ತುಂಬಿ ಹರಿಯುತ್ತಿದ್ದವು. ಅಲ್ಲದೆ ಕಾಲ ಕಾಲಕ್ಕೆ ಮಳೆ ಬೆಳೆಯಾಗುತ್ತಿದ್ದುದರಿಂದ ಎಲ್ಲೆಡೆ ಪಚ್ಚೆಪೈರು ಕಂಡು ಬರುತಿತ್ತು. ಅಂದಿನ ಶಾಸನಗಳಿಂದ ಅವರ ವ್ಯವಸಾಯ ಪದ್ಧತಿಯನ್ನು ಮೂರು ವಿಧಗಳಾಗಿ ವಿಂಗಡಿಸಿದ್ದರು.

1. ಕಾಡಾರಂಭ (ಒಣ ಬೇಸಾಯ ಪದ್ಧತಿ ಖುಷ್ಕಿ ಜಮೀನು)
2. ನೀರಾರಂಭ (ನೀರಿನ ಆಸರೆಯ ಭೂಮಿ/ತರಿ ಜಮೀನು)
3. ತೋಟಾರಂಭ (ತೋಟಗಾರಿಕೆ ಮತ್ತು ತೋಟಕ್ಕೆ ತಕ್ಕುವಾದ ಭೂಮಿ)

ಕೋಲಾರ ಶಿಡ್ಲಘಟ್ಟದ ಒಣಭೂಮಿಯು ಕೆಲವು ಭಾಗಗಳಲ್ಲಿ ಕಡ್ಲೆಕಾಯಿ ಸೇರಿದಂತೆ ಧಾನ್ಯಗಳನ್ನು ಬೆಳೆಯುತ್ತಿದ್ದರು. ನೀರಿನ ಆಸರೆಯಿಂದ ಕೆಲವಾರು ಪ್ರದೇಶಗಳಲ್ಲಿ ಹೇರಳವಾಗಿ ಭತ್ತ ಕಬ್ಬನ್ನು ಬೆಳೆಯುತ್ತಿದ್ದರು. ಈಗಾಗಲೆ ತಿಳಿಸಿರುವಂತೆ ಬೆಂಗಳೂರಿನ ಸುತ್ತಮುತ್ತ ಕೆರೆ, ಕುಂಟೆಗಳಿದುದ್ದರಿಂದ ವ್ಯವಸಾಯ ಪಶುಸಂಗೋಪನೆ ಬಿರುಸಿನಿಂದ ನಡೆಯುತ್ತಿತ್ತು. ಅದೇ ರೀತಿ ತೋಟಗಾರಿಕೆ ಪ್ರದೇಶಗಳು ಸಾಕಷ್ಟಿದ್ದವು. ಮಾವು, ಹಲಸು, ತೆಂಗು, ಸಪೋಟ, ಚಕೋತ ಇವೇ ಮುಂತಾದ ಹಣ್ಣು ಹೂವುಗಳನ್ನು ಯತೇಚ್ಛವಾಗಿ ಬೆಳೆಯುತ್ತಿದ್ದರು. ಮಾವಿನ ತೋಟಗಳು ಸಾಕಷ್ಟಿದ್ದವು ಹಾಗೂ ಮಾವಿನ ಬೆಳೆ ತೆಗೆಯುವ ಹಳ್ಳಿ ಮಾವಿನಹಳ್ಳಿ ಎಂಬ ಗ್ರಾಮವು ಪ್ರಖ್ಯಾತವಾಗಿತ್ತು ಕಡೆಗೆ ಅದು ಮಾವಳ್ಳಿಯಾಯ್ತು. ಕಸಿ

ಗಿಡಗಳನ್ನು ಬೆಳೆಸುವ ಕ್ರಮ ಕಾಲಾನಂತರ ಬಂದಿತ್ತು. ಭೂಮಿಯ ಫಲವತ್ತತೆಯ ಆಧಾರದ ಮೇಲೆ ಹಣ್ಣಿನ ರುಚಿಯೂ ಹೆಚ್ಚುತಿತ್ತು. ಹುಳಿಮಾವಿನ ಹಣ್ಣು ಬೆಳೆಯುತ್ತಿದ್ದ ಹಳ್ಳಿಗೆ ಹುಳಿಮಾವು ಎನ್ನುವ ಹೆಸರು ಬಂದಿದೆ. ಇಂದಿಗೂ ಇಲ್ಲಿನ ಮಾವಿನ ಹಣ್ಣು ದೇಶ ವಿದೇಶಗಳಿಗೆ ರಫ್ತಾಗುತ್ತಿದೆ. (ಉದಾ:- ಶ್ರೀನಿವಾಸಪುರ ಕೆಂಪೇಗೌಡನ ಕಾಲದಿಂದಲೂ ತೋಟಗಾರಿಕೆಗೆ ನೀಡಿದ ಬೆಂಬಲದ ಫಲವಾಗಿದೆ) ಬೆಳೆಗೆ ತಕ್ಕ ಕಂದಾಯವನ್ನು ನೀಡಬೇಕಿತ್ತು. ಇದರಿಂದಾಗಿ ಕೆಂಪೇಗೌಡನ ವಂಶಸ್ಥರಿಗೆ ಸಾಕಷ್ಟು ವರಮಾನ ಬರುತ್ತಿತ್ತು.

ನಾಡಪ್ರಭುಗಳ ಕೊನೆಯ ಕಾಲ

ಬೆಂಗಳೂರು ನಿರ್ಮಾಪಕ ಕೆಂಪೇಗೌಡನ ವಂಶಸ್ಥರಲ್ಲಿಯೇ ಕೊನೆಯದೊರೆ ದೊಡ್ಡವೀರಪ್ಪಗೌಡನ ನಂತರ ಮುಮ್ಮಡಿ ಕೆಂಪವೀರಪ್ಪಗೌಡ ಅಧಿಕಾರಕ್ಕೆ ಬಂದನು. (ಕ್ರಿ.ಶ.ವರ್ಷ 1710–1728) ಈತನ ಆಳ್ವಿಕೆಯ ಕಾಲಕ್ಕಾಗಲೆ ಮಾಗಡಿ ಸಂಸ್ಥಾನವು ಕ್ಷೀಣಿಸಿತ್ತು. ಬೆಂಗಳೂರನ್ನು ಮರಾಠರು(ಷಹಜಿ) ಆಳ್ವಿಕೆ ಮಾಡುತ್ತಿದ್ದರು. ಮೈಸೂರಿನಲ್ಲಿ ಮೈಸೂರು ಒಡೆಯರು ಪ್ರಬಲರಾದ ದಳವಾಯಿಗಳಿಂದಾಗಿ ತಮ್ಮ ರಾಜ್ಯವನ್ನು ವಿಸ್ತರಿಸುತ್ತಿದ್ದರು. ಇತ್ತ ವಿಜಯನಗರದರಸರು ಹೇಳ ಹೆಸರಿಲ್ಲದಂತಾದರು. ಕೆಂಪೇಗೌಡನ ವಂಶಸ್ಥರಿಗೆ ರಾಜಕೀಯವಾಗಿ ನೆರವಾಗುತ್ತಿದ್ದ ದಾತರು ಅವರ ಪಾಲಿಗೆ ಇಲ್ಲವಾದರು. ಸುತ್ತಮುತ್ತಲಿನ ಪಾಳೆಯಗಾರರಲ್ಲಿ ಐಕ್ಯಮತ್ಯವಿರಲಿಲ್ಲ ಇಂತಹ ಸಂದರ್ಭದಲ್ಲಿ ರಾಜ್ಯಭಾರಮಾಡುವುದು ರಾಜ್ಯವನ್ನು ಉಳಿಸಿಕೊಳ್ಳುವುದು ದೊರೆ ಕೆಂಪವೀರಪ್ಪಗೌಡರಿಗೆ ಅಸಾಧ್ಯವಾಯ್ತು.

ಇಂತಹ ಸಂದರ್ಭದಲ್ಲಿ ಕೆಂಪವೀರಪ್ಪಗೌಡನು ದಾನ, ಧರ್ಮ ಮಾಡುವುದನ್ನು ಬಿಡಲಿಲ್ಲ. ಮಾಗಡಿಯ ಸೋಮೇಶ್ವರ ದೇವಾಲಯಕ್ಕೆ ಬೆಟ್ಟನಹಳ್ಳಿಯ ಒಟ್ಟು ಕಂದಾಯ ಸಲ್ಲುವಂತೆ ಮಾಡಿದ. ಶಿವಗಂಗೆಯ ಗಂಗಾಧರೇಶ್ವರ ದೇವಾಲಯಕ್ಕೆ ಉದ್ದೂರಲ ಹಳ್ಳಿಯನ್ನು ಕೊಡುಗೆಯನ್ನಾಗಿ ನೀಡಿದ ದಾಖಲೆಗಳಿವೆ ಅದೇರೀತಿ ಬೆಟ್ಟಹಳ್ಳಿ ಮಠ, ಜಡದೇವರ ಮಠ, ಊರಿಗದ್ದಿಗೇಶ್ವರ ಮಠಗಳಿಗೆ ದೇವಾಲಯಗಳಿಗೆ ದಾನದತ್ತಿ ನೀಡಿದ ಉದಾಹರಣಗಳಿವೆ. ಇಂತಹ ಧರ್ಮಪ್ರಭು ತನ್ನ ಆಸ್ಥಾನದ ಕೆಲವು ಅಧಿಕಾರಿಗಳ ಒಳಸಂಚು ಮತ್ತು ಪಿತೂರಿಗೆ ಒಳಗಾಗಬೇಕಾಯ್ತು. ಕೆಂಪವೀರಪ್ಪಗೌಡನ ಮಂತ್ರಿ (ಕುತಂತ್ರಿ)ಯಾಗಿದ್ದ 'ಅಣ್ಣಾಜಯ್ಯನು' ಮೈಸೂರು ಒಡೆಯರು ಮತ್ತು ಕೆಂಪವೀರಪ್ಪಗೌಡನ ನಡುವೆ ಶ್ವೇತವರ್ಣದ ಆನೆಯ ಸಂಬಂಧದಲ್ಲಿ ಪತ್ರ ವ್ಯವಹಾರ ನಡೆಯುತ್ತಿತ್ತು. ಈ ಸಂದರ್ಭವನ್ನು ಬಳಸಿಕೊಂಡ ಮಂತ್ರಿಯು 'ಮೈಸೂರು ಒಡೆಯರು ಕುಂಬಾರರು' ಎಂಬ ಅರ್ಥಬರುವಂತೆ ಕೆಂಪವೀರಪ್ಪಗೌಡನ ಪತ್ರವನ್ನು ತಿದ್ದಿದನು. ಈ ಪತ್ರವನ್ನು ಓದಿಸಿ ಕೇಳಿದ ಮೈಸೂರ ಅರಸ ದೊಡ್ಡಕೃಷ್ಣರಾಜ

ಒಡೆಯನು ಕೆರಳಿಕೆಂಡವಾದನು. ಕೆಂಪವೀರಪ್ಪಗೌಡನನ್ನು ಶಿಕ್ಷಿಸಲು ತೀರ್ಮಾನಿಸಿದನು. ಆ ಕೂಡಲೆ ದಳವಾಯಿ ದೇವರಾಜಯ್ಯನ ನೇತೃತ್ವದಲ್ಲಿ ಒಂದು ಸೈನ್ಯವನ್ನು ಸಜ್ಜುಮಾಡಿ ಮಾಗಡಿಯ ವಿರುದ್ಧ ಕಳುಯಿಸಿದನು. ಮೈಸೂರು ಸೈನ್ಯವು ಮಾಗಡಿ ಮತ್ತು ಸಾವನದುರ್ಗವನ್ನು ಮುತ್ತಿಗೆ ಹಾಕಿತು. ಈ ಒಳಸಂಚನ್ನು ಅರಿಯದ ಗೌಡನು ವಿಧಿ ಇಲ್ಲದೆ ಯುದ್ಧಕ್ಕೆ ಸಜ್ಜಾದನು. ಗೌಡನ ನಿಷ್ಠಾವಂತ ಸೇನಾಪತಿಯಾದ ವೀರಭದ್ರನಾಯಕನು ದುರ್ಗವನ್ನು ರಕ್ಷಿಸಲು ದುಡಿಯುತ್ತಿದ್ದನು. ಸಾಗರೋಪಾದಿ-ಯಲ್ಲಿ ನುಗ್ಗುತ್ತಿದ್ದ ಮೈಸೂರಿನ ಸೈನ್ಯವನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ.

ಮೈಸೂರು ಸೈನ್ಯಕ್ಕೆ ವೀರಭದ್ರನಾಯಕ ಕೈಸೆರೆಯಾದ. ಮಾಗಡಿಯು ತಮ್ಮ ರಾಜಧಾನಿಯಾಗಿದ್ದುದರಿಂದ ಕೆಂಪವೀರಪ್ಪಗೌಡನು ಮಾಗಡಿಯ ರಕ್ಷಣೆಯಲ್ಲಿದ್ದನು. ದಂಡನಾಯಕ ವೀರಭದ್ರನಾಯಕನು ಸೆರೆಸಿಕ್ಕ ಕೆಟ್ಟಸುದ್ದಿ ತಿಳಿಯುತ್ತಲೆ ಗೌಡನು ಮಾಗಡಿಗಿಂತಲೂ ನೆಲಪಟ್ಟಣದಲ್ಲಿದ್ದ ಮೈಸೂರು ಸೈನ್ಯಕ್ಕೆ ಸಿಕ್ಕಿಬಿದ್ದ ಕೆಂಪವೀರಪ್ಪಗೌಡ.

ನಾಡಪ್ರಭು ಕೆಂಪಗೌಡನ ಕೊನೆಯಕುಡಿ ಮುಮ್ಮಡಿ ಕೆಂಪವೀರಪ್ಪಗೌಡನನ್ನು ಸೆರೆಯಾಳಾಗಿ ಗಾಡಿಯಲ್ಲಿ ಬಿಗಿಬಂಧೂಬಸ್ತಿನಲ್ಲಿ ಮೈಸೂರಿನ ಸೈನ್ಯವು ವಡವಾಟುಹಳ್ಳಿ(ಇಂದಿನ ರಾಮನಗರ ಜಿಲ್ಲೆ ಲಕ್ಷ್ಮೀಪುರ)ಯ ಮೂಲಕ ಕ್ರಿ.ಶ.1728ರಲ್ಲಿ ಸಾಗಿಸುತ್ತಿದ್ದರು ಸೋಲು ಮತ್ತು ಹತಾಶೆಯಿಂದ ನೊಂದುಹೋದ ಗೌಡನು ದಣಿವಾರಿದ. ವಡವಾಟುಗ್ರಾಮದಲ್ಲಿ ಇಳಿದು ಅಲ್ಲಿಯ ಕೆರೆಯ ನೀರನ್ನು ಕೊನೆಯಬಾರಿಗೆ ಕುಡಿದನಂತೆ ಕಾರಣವೇನೆಂದರೆ ವಡವಾಟು ಹಳ್ಳಿಯ ಮುದ್ದುಗುಂಡು ಸೇರಿದಂತೆ ಸೈನ್ಯಕ್ಕೆ ಬೇಕಾದ ಶಸ್ತ್ರಾಸ್ತ್ರಗಳನ್ನು ತಯಾರು ಮಾಡುವ ಕೇಂದ್ರವಾಗಿತ್ತು ಅದಕ್ಕಿಂತಲೂ ಹೆಚ್ಚಾಗಿ ತನ್ನ ತಾಯಿ ಮುದ್ದು ವೀರಮಾಂಬೆಗೆ ಇಲ್ಲವೇ ತನ್ನ ಮಗಳಾದ ಮುದ್ದುವೀರಮ್ಮಾಜಿಗೆ ಗೌಡನು ಹರಿಶಿನ ಕುಂಕುಮಕ್ಕೆಂದು ನೀಡಿದ ಗ್ರಾಮವೆಂಬುದು ಪ್ರತೀತಿ. ತಂದೆಗೆ ಬಂದ ದುರ್ಗತಿಯನ್ನು ಕಂಡು ಕೇಳಿದ ಮಗಳು ಮುದ್ದು ವೀರಮ್ಮಾಜಿ ಇನ್ನು ತಾನು ಬದುಕಿರಬಾರದು ಎಂದು ಹೇಳಿ ಆತ್ಮಾರ್ಪಣೆ ಮಾಡಿಕೊಂಡಳೆಂತಲೂ ಆ ನೆಲೆಯೇ ಇಂದು "ಶಿರಸ್ತಮ್ಮ" ನೆಲೆಯಾಗಿದೆ ಎಂದು ಹೇಳುತ್ತಾರೆ. ಶ್ರೀರಂಗಪಟ್ಟಣದ ಬಂದೀಖಾನೆಯಲ್ಲಿ ತನ್ನ ಕೊನೆಯ ಕಾಲವನ್ನು ಸವೆಸಿದ ಧರ್ಮಪ್ರಭು ಮುಮ್ಮಡಿ ಕೆಂಪವೀರಪ್ಪಗೌಡ ಒಂದು ದಿನ ಶಿವೈಕ್ಯನಾದ.

ಹೀಗೆ ಯಲಹಂಕ ನಾಡಪ್ರಭುಗಳಿಂದ ಯಲಹಂಕ ಪ್ರದೇಶವೂ. ಬೆಂಗಳೂರು ನಿರ್ಮಾಪಕ ಕೆಂಪೇಗೌಡನಿಂದ ಬೆಂಗಳೂರು ನಗರ ಹಾಗೂ ಅವನ ಮಗ ಮಾಗಡಿ ಕೆಂಪೇಗೌಡನಿಂದ ಮಾಗಡಿ ಸೀಮೆಯು ಅಭಿವೃದ್ಧಿಯಾಗಿ ರಾಜಕೀಯ ಕಾಲ ಚಕ್ರಕ್ಕೆ ಸಿಕ್ಕ ನಾಡಪ್ರಭು ಕೆಂಪೇಗೌಡನವಂಶಸ್ಥರು ನಾಡನ್ನೇ ಬಿಟ್ಟುಹೋದರು. ಆದರೆ ಅವರು ಕಟ್ಟಿದ ಕೋಟೆ ಅಳಿದಿರಬಹುದು ಆದರೆ ಅವರು ಕಟ್ಟಿದ ನಾಡು 'ಬೆಂಗಳೂರು'

ಇಂದು ವಿಶ್ವವಿಖ್ಯಾತವಾಗಿದೆ. ಈ ನಾಡಪ್ರಭು ಕೆಂಪೇಗೌಡನ ಹೆಸರು 'ಬೆಂಗಳೂರು ನಗರ' ಇರುವ ತನಕ ಶಾಶ್ವತವಾಗಿರುತ್ತದೆ.

ರೆಡ್ಡಿ ಒಕ್ಕಲಿಗರು/ ರೆಡ್ಡಿಗಳು

ಒಕ್ಕಲಿಗರಲ್ಲಿ ನೂರಾರು ಉಪಜಾತಿಗಳು, ಪಂಗಡಗಳು, ಉಪ ಪಂಗಡಗಳು ಇರುವುದನ್ನು ಈ ಮೊದಲೆ ತಿಳಿಸಿದೆ. ಕರ್ನಾಟಕದ ಒಕ್ಕಲಿಗರು ಕನ್ನಡ, ತೆಲುಗು, ತುಳು, ಮಲಯಾಳಂ, ತಮಿಳು, ಅರೆಭಾಷೆ ಹೀಗೆ ಆಯಾ ಪ್ರದೇಶಗಳಲ್ಲಿ ಮಾತನಾಡುವ ಭಾಷೆ, ನಡೆ, ನುಡಿ, ಆಚಾರ, ವಿಚಾರಗಳನ್ನು ಮೈಗೂಡಿಸಿ ಕೊಂಡಿದ್ದಾರೆ. ಇಲ್ಲಿ ರೆಡ್ಡಿಗಳು ತೆಲುಗು ಭಾಷೆ ಮಾತನಾಡುತ್ತಾರೆ. ಇವರಿಗೆ ಕನ್ನಡ ಭಾಷೆಯೂ ಅಷ್ಟೇ ಚೆನ್ನಾಗಿ ಗೊತ್ತಿದೆ. 'ರೆಡ್ಡಿ' ಎಂಬ ಜಾತಿ ಸೂಚಕ ಪದ ಎಲ್ಲಿಂದ ಬಂತು ಎಂಬುದು ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಇವರು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಪಾಂಡಿಚೆರಿ ಸೇರಿದಂತೆ ದಕ್ಷಿಣ ಭಾರತದ ನಾನಾ ಕಡೆ ನೆಲೆಸಿದ್ದಾರೆ. ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ ಹಾಗೂ ನೀಡುತ್ತಿದ್ದಾರೆ. ಇತಿಹಾಸದಲ್ಲಿ ನಾಡಪ್ರಭುಗಳಾಗಿ, ಪಾಳಯಗಾರರಾಗಿ, ಸೇನಾದಂಡನಾಯಕರಾಗಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಆಂಧ್ರದ ಕೊಂಡವೀಡು, ರಾಜಮಹೇಂದ್ರಿಗಳಲ್ಲಿ ಆಳ್ವಿಕೆ ಮಾಡಿದುದೆ ಅಲ್ಲದೆ ಸುಗುಟೂರು ಸೇರಿದಂತೆ ಕೆಲವು ಕಡೆ ಪಾಳೆಯಪಟ್ಟುಗಳನ್ನು ಕಟ್ಟಿಕೊಂಡು ಪಾಳೆಯಗಾರರಾಗಿ ಆಳ್ವಿಕೆ ಮಾಡಿದುದು ಇತಿಹಾಸದಿಂದ ತಿಳಿಯುತ್ತದೆ. ಇತಿಹಾಸಕಾರರಾದ ಅನಂತಕೃಷ್ಣ ಅಯ್ಯರ್‌ರವರು ತಮ್ಮ "Mysore Tribes and Castes" ಎಂಬ ಸಂಶೋಧನಾತ್ಮಕ ಕೃತಿಯಲ್ಲಿ ಕರ್ನಾಟಕದ ಉತ್ತರ ಭಾಗದಲ್ಲಿ (ಗುಲ್ಬರ್ಗದ–ಮಾನ್ಯಖೇಟ) ಆಳ್ವಿಕೆ ಮಾಡಿದ ರಾಷ್ಟ್ರಕೂಟರೇ ರೆಡ್ಡಿಗಳು. ಇರೆಡ್ಡಿ, ರೆಡ್ಡಿ, ರಾಥೋರ್ ಮತ್ತು ರಾಷ್ಟ್ರಕ, ರಾಷ್ಟ್ರಕೂಟ ಎಂಬ ಪದದಿಂದ ಬಂದಿದೆ ಎಂದು ಹೇಳುತ್ತಾರೆ. ಮತ್ತೊಬ್ಬ ಇತಿಹಾಸಕಾರರಾದ ಆರ್.ಜಿ. ಭಂಡಾರ್ಕರ್ ರವರು ರಾಷ್ಟ್ರಕೂಟ ವಂಶಸ್ಥರು ಕ್ಷತ್ರಿಯರು ಇವರ ರಾಜಲಾಂಛನ "ನೇಗಿಲು" ಇವರ ವಂಶಸ್ಥರೇ ರೆಡ್ಡಿಗಳು ಎಂದು ಹೇಳುತ್ತಾರೆ. ಕೆಲವು ವಿದ್ವಾಂಸರು ರೆಡ್ಡಿಗಳು ಕರ್ನಾಟಕದ ಉತ್ತರಭಾಗದಿಂದ (ಗುಲ್ಬರ್ಗ) ಇಲ್ಲವೆ ಆಂಧ್ರದಿಂದ ಬಂದರೆಂದು ಹೇಳುತ್ತಾರೆ. ಆಂಧ್ರದಲ್ಲಿ ಕಾಪು ಮತ್ತು ಕಮ್ಮ ಎಂಬ ಎರಡು ಪಂಗಡಗಳಿವೆ. ಇವರ ನಡುವೆ ವೈವಾಹಿಕ ಭಾಂದವ್ಯವಿರುವುದಿಲ್ಲ. ಇವುಗಳನ್ನು ಪ್ರತ್ಯೇಕ ಜಾತಿಗಳೆಂದು ವಿಭಜಿಸುತ್ತಾರೆ. ಕಾಪು ಎಂದರೆ ಕಾಪಾಡುವವ, ರೈತ, ಕೃಷಿಕ, ಬೇಸಾಯಗಾರ ಎಂಬ ಅರ್ಥ ಕೊಡುತ್ತದೆ. ಕಾಪು ಎಂಬ ಪದ ರೆಡ್ಡಿ ಎಂಬುದಕ್ಕೆ ಸಮಾನಾರ್ಥವಾಗಿ ಬಳಕೆಯಾಗಿದೆ. ರಾಯಲ್ ಸೀಮಾಪ್ರದೇಶದ ಕಾಪು ಕುಲದವರು ತಮ್ಮ ಹೆಸರಿನ ಮುಂದೆ ರೆಡ್ಡಿ ಎಂಬ ಜಾತಿಸೂಚಕ ಪದವನ್ನು ಇಟ್ಟುಕೊಳ್ಳುವುದು ರೂಢಿಯಲ್ಲಿದೆ.

ಕಮ್ಮ ಎಂಬುದು ಮತ್ತೊಂದು ಪಂಗಡ. ಕಮ್ಮ ಎಂದರೆ ತೆಲುಗಿನಲ್ಲಿ ಕಿವಿಆಭರಣ ಎಂಬ ಅರ್ಥ ನೀಡುತ್ತದೆ. ಕಮ್ಮಗಳು ವೃತ್ತಿಯಲ್ಲಿ ಸೈನಿಕರು. ಆದರೆ ಅವರ ಮುಖ್ಯ ಕಸುಬು ವ್ಯವಸಾಯ. ಇವರು ತಮ್ಮನ್ನು ಕಮ್ಮನಯನವಾರು, ಕಮ್ಮೆದೊರಲು ಅಥವಾ ಕಮ್ಮಬಿಡ್ಡಲು ಎಂದು ತಮ್ಮನ್ನು ಕರೆದುಕೊಳ್ಳುತ್ತಾರೆ. ಗಂಗಡರೆಡ್ಡಿ ಮುಂತಾದ ಪದಗಳನ್ನು ತಮ್ಮ ಜಾತಿಯೊಂದಿಗೆ ಕರೆದುಕೊಳ್ಳುತ್ತಾರೆ. (ಕರ್ನಾಟಕದಲ್ಲಿ ರೆಡ್ಡಿ ಸಮುದಾಯ – ಡಾ. ಸಂಧ್ಯಾ ರೆಡ್ಡಿ)

ಕರ್ನಾಟಕದ ರೆಡ್ಡಿ ಒಕ್ಕಲಿಗರು : ಇತಿಹಾಸಕಾರರಾದ ಅನಂತಕೃಷ್ಣ ಅಯ್ಯರ್‌ರವರು ತಮ್ಮ "Mysore Tribes and Castes" ಎಂಬ ಕೃತಿಯಲ್ಲಿ ಕರ್ನಾಟಕದ ರೆಡ್ಡಿಗಳನ್ನು ಲಿಂಗಾಯಿತರೆಡ್ಡಿಗಳು ಮತ್ತು ಲಿಂಗಾಯಿತರಲ್ಲದ ರೆಡ್ಡಿಗಳು ಎಂದು ವಿಂಗಡಣೆ ಮಾಡುತ್ತಾರೆ. ರೆಡ್ಡಿಗಳು ಕರ್ನಾಟಕದಲ್ಲಿ ಆಳಿ ಅಳಿದ ಮಾನ್ಯಖೇಟದ ರಾಷ್ಟ್ರಕೂಟರ ಕಾಲದಿಂದಲೂ (ಕ್ರಿ.ಶ. 7ನೇ ಶತಮಾನದಿಂದ 10ನೇ ಶತಮಾನ) ಇದ್ದರೆಂದು ತಿಳಿಯುತ್ತದೆ. ರಾಷ್ಟ್ರಕೂಟರು ಮೂಲತಃ ಒಕ್ಕಲಿಗರೆಂತಲೂ ಅಚ್ಚ ಕನ್ನಡಿಗರೆಂತಲೂ ಅವರ ರಾಜಲಾಂಛನ "ನೇಗಿಲು" ಆಗಿದ್ದಿತು. ಸುವರ್ಣ ಗರುಡ ಅವರ ರಾಜಮುದ್ರೆ ಮತ್ತು ಪಾಲಿಧ್ವಜ ಅವರ ರಾಷ್ಟ್ರಧ್ವಜವಾಗಿದ್ದಿತೆಂದು ಶಾಸನಗಳಿಂದಲೂ, ಸಮಕಾಲೀನ ಕಾವ್ಯ, ಗ್ರಂಥಗಳಿಂದಲೂ ತಿಳಿದುಬರುತ್ತದೆ (ಮಾನ್ಯಖೇಟದ ರಾಷ್ಟ್ರಕೂಟರು – ಡಾ॥ ಶ್ಯಾಮಲ ರತ್ನಕುಮಾರಿ) ರಾಷ್ಟ್ರಕೂಟರ ಮೂರನೆಯ ಗೋವಿಂದನ ಕಾಲದಲ್ಲಿ (ಕ್ರಿ.ಶ. 713–814) ಉತ್ತರ ಕರ್ನಾಟಕ ಹಾಗೂ ಆಂಧ್ರದ ಬಹುಭಾಗಗಳನ್ನು ಕೈವಶಕ್ಕೆ ಪಡೆದಿದ್ದನು. ಹೀಗಾಗಿ ರೆಡ್ಡಿಗಳು ಸಾಮಾಜಿಕವಾಗಿ, ರಾಜಕೀಯವಾಗಿ ಪ್ರಬಲರಾದರು ಎಂದೇಳಬಹುದು.

ಕರ್ನಾಟಕದಲ್ಲಿರುವ ರೆಡ್ಡಿಗಳನ್ನು ಉತ್ತರ ಕರ್ನಾಟಕದ ರೆಡ್ಡಿಗಳು ಮತ್ತು ದಕ್ಷಿಣಭಾಗದ ರೆಡ್ಡಿಗಳೆಂದು ವಿಭಾಗಿಸಬಹುದು.

ಉತ್ತರ ಕರ್ನಾಟಕ ಭಾಗದ ರೆಡ್ಡಿಗಳು : ಬಹುಷಃ ರಾಷ್ಟ್ರಕೂಟರು ಉತ್ತರ ಭಾಗದಿಂದ ಆಳ್ವಿಕೆ ಮಾಡಿದುದರಿಂದ ಗದಗ, ಧಾರವಾಡ, ಬೆಳಗಾಂ, ಬಾಗಲಕೋಟೆ, ಬಿಜಾಪುರ ಇವೇ ಮುಂತಾದ ಕಡೆ ರೆಡ್ಡಿ ಸಮುದಾಯದವರು ನೆಲೆಸಿದ್ದಾರೆ. ಇವರ ನಡೆ, ನುಡಿ, ಆಚಾರ, ವಿಚಾರ, ನಡವಳಿಕೆ, ಭಾಷೆ (ಕನ್ನಡ) ದಕ್ಷಿಣ ಭಾಗದ ಕರ್ನಾಟಕದವರಿಗಿಂತ ಭಿನ್ನವಾಗಿದೆ. ಇವರು "ಹೇಮರೆಡ್ಡಿ ಮಲ್ಲಮ್ಮನ" ಹೆಸರಿನಲ್ಲಿ ಸಂಘಟಿತರಾಗಿದ್ದಾರೆ. ಕ್ರಿ.ಶ. 12ನೇ ಶತಮಾನದಲ್ಲಿ ಭಕ್ತಿಭಂಡಾರಿ ಬಸವಣ್ಣನವರಿಂದಾಗಿ ವೀರಶೈವರ ಪ್ರಭಾವಕ್ಕೆ ಒಳಗಾಗಿದ್ದಾರೆ. ಇವರ ಮತಾಚಾರವನ್ನು ವೀರಶೈವ ಮಠದಯ್ಯಗಳು ನಡೆಸಿಕೊಡುತ್ತಾರೆ. ದಕ್ಷಿಣಭಾಗದ ರೆಡ್ಡಿಗಳು ತಮ್ಮ ಹೆಸರಿನ ಮುಂದೆ ರೆಡ್ಡಿ ಎಂದು ಸೇರಿಸಿಕೊಂಡರೆ ಉತ್ತರಕರ್ನಾಟಕ ಭಾಗದ ರೆಡ್ಡಿ ಒಕ್ಕಲಿಗರು ಪಾಟೀಲ್,

ಗೌಡ, ದೇಸಾಯಿ, ಬಿರಾದರ್ ಇವೇ ಮುಂತಾದವುಗಳನ್ನು ತಮ್ಮ ಹೆಸರಿನ ಮುಂದೆ ಸೇರಿಸಿಕೊಳ್ಳುತ್ತಾರೆ. ಮತ್ತೆ ಕೆಲವರು ಶಿರೂರು, ಮಾಗಡಿ, ದುಮ್ಮದ್ರಿ, ಟಿಕನಾಳ ಇವೇ ಮುಂತಾದ ತಮ್ಮ ಹುಟ್ಟಿದೂರಿನ ಹೆಸರನ್ನು ತಮ್ಮ ಹೆಸರಿನ ಮುಂದೆ ಸೇರಿಸಿಕೊಳ್ಳುತ್ತಾರೆ. (ಡಾ. ಸಂಧ್ಯಾರೆಡ್ಡಿ, ಕರ್ನಾಟಕದಲ್ಲಿ ರೆಡ್ಡಿ ಸಮುದಾಯ)

ಉತ್ತರ ಕರ್ನಾಟಕದ ಭಾಗಗಳಾದ ರಾಯಚೂರು, ಗುಲ್ಬರ್ಗಾ, ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ ಇವೇ ಮುಂತಾದ ಪ್ರದೇಶಗಳಲ್ಲಿ ಕೆಲವಾರು ರೆಡ್ಡಿ ಧೀಮಂತ ವ್ಯಕ್ತಿಗಳು ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದುದೇ ಅಲ್ಲದೆ ಕರ್ನಾಟಕ ಏಕೀಕರಣಕ್ಕಾಗಿ ಶಾಲೆ, ಕಾಲೇಜುಗಳು, ಆಸ್ಪತ್ರೆ ಇವೇ ಮುಂತಾದ ಲೋಕಕಲ್ಯಾಣ ಕಾರ್ಯಗಳನ್ನು ಮಾಡಿದ್ದಾರೆ. ಹಾಗೂ ಸಾರ್ವತ್ರಿಕ ಚುನಾವಣೆಯಲ್ಲಿ ಗೆದ್ದು ಶಾಸಕರಾಗಿ, ಮಂತ್ರಿಗಳಾಗಿ, ವಿಧಾನಸಭಾ ಉಪ ಸಭಾಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಬ್ರಿಟೀಷ್ ಸರ್ಕಾರವು 1935ರಲ್ಲಿ ಸ್ಥಳೀಯ ಸರ್ಕಾರಕ್ಕೆ ಒತ್ತುಕೊಟ್ಟಿತು. **1935ರಿಂದ 1946ರ** ತನಕ ಬಾಂಬೆ ಕರ್ನಾಟಕಕ್ಕೆ ಸೇರಿದ್ದ ಭಾಗಗಳಲ್ಲಿ ನಡೆದ ಚುನಾವಣೆಯಲ್ಲಿ ಗೆದ್ದು ಬಿ.ಎಲ್.ಎ. (ಬಾಂಬೆ ಲೆಜೆಸ್ಲೇಟೀವ್ ಅಸೆಂಬ್ಲಿ) ಸದಸ್ಯರಾಗಿ ರೆಡ್ಡಿಗಳ ಪತಾಕೆಯನ್ನು ಬಾಂಬೆ ಷಹರಿನಲ್ಲಿ ಎತ್ತಿ ಹಿಡಿದರು. ಅಷ್ಟೇ ಅಲ್ಲ 1947ರ ನಂತರ ಕರ್ನಾಟಕ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಗೆದ್ದು ಶಾಸಕರಾಗಿ, ಮಂತ್ರಿಗಳಾಗಿ, ಉಪಸಭಾಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಅವರುಗಳೆಂದರೆ :

1. ಬೆಳಗಾವಿ – ಹೂಡಿ ವೆಂಕಟರೆಡ್ಡಿ
2. ಗೋಕಾಕ್ – ಪಿ.ವೈ. ಮುಂಬಾರೆಡ್ಡಿ
3. ಬಾಗಲಕೋಟೆ – ಬಿ.ಟಿ. ಮುರನಾಳ
4. ಬಾದಾಮಿ – ವೈ.ಹೆಚ್. ಪಾಟೀಲ್
5. ಶಿರಹಟ್ಟಿ – ವೆಂಕಟೇಶ ಮಾಗಡಿ
6. ರೋಣ – ಅಂದಾನಪ್ಪ ದೊಡ್ಡಮೇಟಿ
7. ನವಲಗುಂದ – ಆರ್.ಎಂ. ಪಾಟೀಲ್ (ಮಾಜಿ ಆರೋಗ್ಯ ಸಚಿವರು ಹಾಗೂ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆ ಸ್ಥಾಪಕರು)
8. ಬಳ್ಳಾರಿ – ಸೀತಾರಾಮರೆಡ್ಡಿ
9. ರಾಯಚೂರು – ಬಸಪ್ಪಣ್ಣ ಭೂಮಿರೆಡ್ಡಿ
10. ರಾಯಚೂರು (ಮಾಸ್ಕಿ) ಬಸವರಾಜೇಶ್ವರಿ
11. ಗದಗ – ಕೆ.ಹೆಚ್. ಪಾಟೀಲ್

ದಕ್ಷಿಣ ಕರ್ನಾಟಕ ಭಾಗದ ರೆಡ್ಡಿಗಳು : ಕರ್ನಾಟಕದ ದಕ್ಷಿಣ ಭಾಗದಲ್ಲಿ ಸಾಕಷ್ಟು ಪ್ರಮಾಣದಲ್ಲಿ ರೆಡ್ಡಿ ಒಕ್ಕಲಿಗರು ನೆಲೆಸಿದ್ದಾರೆ. ವಿಶೇಷವಾಗಿ ಕೋಲಾರ, ಬಂಗಾರಪೇಟೆ, ಚಿಂತಾಮಣಿ ಸೇರಿದಂತೆ ಕೆಲವೆಡೆ ದಟ್ಟವಾಗಿ ನೆಲೆಸಿದ್ದಾರೆ. ಇವರು ಶೈವಾರಾಧಕರು, ತಿರುಪತಿ ತಿಮ್ಮಪ್ಪನಿಗೆ ನಡೆದುಕೊಳ್ಳುತ್ತಾರೆ. ತಮ್ಮ ಹೆಸರಿನ ಮುಂದೆ "ರೆಡ್ಡಿ" ಎಂಬ ಜಾತಿ ಸೂಚಕ ಪದವನ್ನು ಬಳಸುತ್ತಾರೆ. ಯೋಗಿ ವೇಮನನ ಹೆಸರಿನಲ್ಲಿ ಸಂಘಟಿತರಾಗಿದ್ದಾರೆ. ಇವರ ಮೇಲೆ ವೀರಶೈವರ ಪ್ರಭಾವವಿರುವುದಿಲ್ಲ. ಕಂದಿಮನೆತನ, ಪಟ್ಲಾಪಾಟಿ ಇವೇ ಕೆಲವು ಗುಂಪಿನವರಿಗೆ ದೊಣತಿಮ್ಮರಾಯನು ಮನೆದೇವರು, ಮಾವ್ವಗುಂಪಿನವರಿಗೆ ಊರವಕೊಂಡದ ಲಕ್ಷ್ಮೀನರಸಿಂಹಸ್ವಾಮಿ ಮನೆ ದೇವರು. ಕೋಲಾರದ ಪಡೆಕಂಟಿ ಪಂಗಡದವರಿಗೆ "ಓಬಲೇಶ್ವರ" ಮನೆದೇವರು.

ಒಟ್ಟಾರೆ ರೆಡ್ಡಿಗಳಲ್ಲಿ ವೆಲನಾಟಿರೆಡ್ಡಿ, ಪಾಕಿನಾಟರೆಡ್ಡಿ, ಪೋಟಾಟಿ ರೆಡ್ಡಿ, ಪೆಡಕಂಟಿರೆಡ್ಡಿ, ಕೊಡತಿರೆಡ್ಡಿ, ನೆರಾಟೆರೆಡ್ಡಿ, ಪಂಟರೆಡ್ಡಿ, ಲಿಂಗಾಯಿತ ರೆಡ್ಡಿ, ಕಮ್ಮರೆಡ್ಡಿ, ಇವೇ ಮುಂತಾದ ಪಂಗಡಗಳು ಹಾಗೂ ಉಪಪಂಗಡಗಳಿವೆ, ವಿದ್ವಾಂಸರು ಪ್ರಮುಖವಾಗಿ 14 ಪಂಗಡಗಳು ಮಾತ್ರ ಎಂದಿದ್ದಾರೆ.

ಪಾಕನಾಟಿ / ಪಾಕನಾಟರೆಡ್ಡಿಗಳು : ಸಮುದ್ರ ತೀರಪ್ರದೇಶ ಅಥವಾ ಕರಾವಳಿ ಪ್ರದೇಶವನ್ನು "ಪಾಕನಾಡು" ಎನ್ನುತ್ತಿದ್ದರು. ಈ ಪ್ರದೇಶದಲ್ಲಿ ನೆಲೆಸಿರುವ ಜನರನ್ನು/ಸಮುದಾಯವನ್ನು ಪಾಕನಾಟರೆಡ್ಡಿಗಳು ಎಂದು ಕರೆಯಲ್ಪಟ್ಟರು. ಆಂಧ್ರದ ನೆಲ್ಲೂರು ಜಿಲ್ಲೆಯಲ್ಲಿ ಹರಿಯುವ ಪೆನ್ನಾ ನದಿಯ ಮುಖಜ ಭೂಮಿ ಹಾಗೂ ಅದರ ದಕ್ಷಿಣ ಕಡೆಗಿರುವ ಪ್ರದೇಶವನ್ನು ಪಾಕನಾಡು ಎಂದು ಕರೆಯುತ್ತಾರೆ. ಇವರು ಗುಲ್ಬರ್ಗ, ಚಿತ್ತಾಪುರ, ಯಾದಗಿರಿ, ಸುರಪುರ, ಶಹಾಪುರ ತಾಲ್ಲೂಕುಗಳಲ್ಲಿ ದಟ್ಟವಾಗಿ ನೆಲೆಸಿದ್ದಾರೆ. ಬಿಜಾಪುರ, ಮುದ್ದೇಬಿಹಾಳ, ಹಾವೇರಿ, ರಾಯಚೂರು, ಜಮುಖಂಡಿ ಸೇರಿದಂತೆ ಉತ್ತರಭಾಗದ ನಾನಾಕಡೆ ಆಂಧ್ರ ಕರ್ನಾಟಕ ಗಡಿಭಾಗದಲ್ಲಿ ಹಾಗೂ ಆಂಧ್ರದ ಬಹುಭಾಗಗಳಲ್ಲಿ ನೆಲೆಸಿದ್ದಾರೆ. ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಭಕ್ತಿಭಂಡಾರಿ ಬಸವಣ್ಣನ ಪ್ರಭಾವದಿಂದ ಕೆಲವರು ವೀರಶೈವ ಧರ್ಮಕ್ಕೆ ಸೇರಿದರು. ಪಾಕನಾಟಗಳಲ್ಲಿ ವೀರಶೈವ ಪಾಕನಾಟಗಳೂ ಮತ್ತು ವೀರಶೈವರಲ್ಲದ ಪಾಕನಾಟಗಳು ಎಂಬ ಎರಡು ಗುಂಪುಗಳಿವೆ. ಇದರ ಒಂದು ಗುಂಪು ಚಿತ್ರದುರ್ಗದ ಚಳ್ಳಕೆರೆಯಲ್ಲಿ ನೆಲೆಸಿರುವವರನ್ನು "ಬಾಳೆಕಾಯಿ"ಯವರು ಎನ್ನುತ್ತಾರೆ. ಇವರು ಶುದ್ಧ ಸಸ್ಯಾಹಾರಿಗಳು. ಇಷ್ಟೇ ಅಲ್ಲದೆ ತಮ್ಮ ಮನೆಯ ಮದುವೆ ಸಮಾರಂಭಗಳಲ್ಲಿಬಸವಣ್ಣನ ವಚನಗಳನ್ನು ಜಪಿಸುತ್ತಾರೆ. ಇದನ್ನು ನೋಡಿದಾಗ ಇವರು ಲಿಂಗಾಯಿತರೇನು ಅನ್ನಿಸುತ್ತದೆ. ಬಡಗನಾಡು

(ಗಿರಿಯಪುರ) ಭಾಗದ ಪಾಕನಾಕ ರೆಡ್ಡಿಗಳಲ್ಲಿ ತಿರುಪತಿ–ತಿಮ್ಮಪ್ಪ, ಹಿರಿಮೈಲಾರ, ಕಿರಿ ಮೈಲಾರ, ಕೊಟ್ಟೂರು ಬಸವೇಶ್ವರ, ನಂಜುಂಡೇಶ್ವರ ಇವೇ ಮುಂತಾದ ದೇವರುಗಳ ಹೆಸರಿನಲ್ಲಿ ಒಕ್ಕಲುಗಳು ಇಲ್ಲವೆ ಪಂಗಡಗಳಿವೆ. ವೀರಶೈವ ಮಠದ ಗುರುಗಳನ್ನೇ ತಮ್ಮ ಗುರುಗಳು ಎಂದು ಕಂಡುಕೊಂಡಿದ್ದಾರೆ. ಮದುವೆ, ಮುಂಜಿ, ನಾಮಕರಣ, ಗೃಹಪ್ರವೇಶ ಇವೇ ಮುಂತಾದ ಶುಭಸಮಾರಂಭಗಳಲ್ಲಿ ಲಿಂಗಾಯಿತ ಮಠಗಳ ಅಯ್ಯಗಳ ಆಶೀರ್ವಾದ ಪಡೆಯುತ್ತಾರೆ. ಹೇಮರೆಡ್ಡಿ ಮಲ್ಲಮ್ಮನ ವಂಶಸ್ಥರು ಎಂದು ಹೇಳಿಕೊಳ್ಳುತ್ತಾರೆ. ಲಿಂಗಾಯಿತರಲ್ಲದ ಪಾಕನಾಟ ರೆಡ್ಡಿಗಳಲ್ಲಿ ಐದು ಕಟ್ಟೆಮನೆಗಳಿವೆ. 1) ಮುರಡಿ 2) ತಾಡಚೇರ್ಲ (ರಾಯದುರ್ಗ) 3) ನಲ್ಲರಳ್ಳು (ತಿರುಮಲಾಪುರ – ಚಳ್ಳಕೆರೆ) 4) ಪೆರೂರು (ಕಲ್ಯಾಣದುರ್ಗ) 5) ಮೇಟಕುರ್ಕೆ (ಹಿರಿಯೂರು).

ರೆಡ್ಡಿ ಸಮುದಾಯದಲ್ಲಿ ಕೆಲವು ಪ್ರಮುಖರು ಶಿಕ್ಷಣ, ಸಾಹಿತ್ಯ, ಸಂಸ್ಕೃತಿಯೇ ಅಲ್ಲದೆ ಸ್ವಾತಂತ್ರ್ಯ ಹೋರಾಟದಲ್ಲೂ ಭಾಗವಹಿಸಿ ಚಿರಸ್ಥಾಯಿಯಾಗಿದ್ದಾರೆ. ಅವರುಗಳೆಂದರೆ ಕೆ.ಸಿ. ರೆಡ್ಡಿ (ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿ), ಡಾ॥ ಸಿ.ಆರ್. ರೆಡ್ಡಿ (ಶಿಕ್ಷಣ ತಜ್ಞರು ಹಾಗೂ ಹಿಂದುಳಿದ ವರ್ಗಗಳ ಹೋರಾಟಕ್ಕೆ ಭಾಷ್ಯ ಬರೆದವರು), ಹೆಚ್.ಸಿ. ಲಿಂಗಾರೆಡ್ಡಿ (ಸ್ವಾತಂತ್ರ್ಯ ಹೋರಾಟಗಾರರು), ಬಿ.ಎ. ನಾರಾಯಣರೆಡ್ಡಿ (ಬ್ಯಾಂಕಿಂಗ್ ಕ್ಷೇತ್ರ), ಟಿ.ವಿ. ರೆಡ್ಡಿ (ಆಡಳಿತ), ಸಿ.ಜಿ.ಕೆ. ರೆಡ್ಡಿ (ಪತ್ರಿಕೋದ್ಯಮ), ಹೆಚ್.ಆರ್. ಗುರುವಾರೆಡ್ಡಿ (ನ್ಯಾಯವಾದಿಗಳು), ಮುಲ್ಕ ಗೋವಿಂದರೆಡ್ಡಿ (ರಾಜಕಾರಣ), ಮುಲಂಗಿ ಗೋವಿಂದರೆಡ್ಡಿ (ಸಮಾಜಸೇವೆ), ಅಗರಂ ಸುಬ್ಬರಾಯಲು ರೆಡ್ಡಿಯಾರು (ಸ್ವಾತಂತ್ರ್ಯಪೂರ್ವದ ಮದ್ರಾಸ್ ಪ್ರೆಸಿಡೆನ್ಸಿಯ ಮುಖ್ಯಮಂತ್ರಿಗಳು), ನೀಲಂ ಸಂಜೀವರೆಡ್ಡಿ (ಆಂಧ್ರದ ಮುಖ್ಯಮಂತ್ರಿಯಾಗಿ ಹಾಗೂ ಭಾರತದ ರಾಷ್ಟ್ರಪತಿಯಾಗಿ), ವಿ. ವೆಂಕಟಸುಬ್ಬಾರೆಡ್ಡಿಯಾರ್ (ಪಾಂಡಿಚೆರಿ ಮುಖ್ಯಮಂತ್ರಿಯಾಗಿ) ಹೀಗೆ ರೆಡ್ಡಿ ಒಕ್ಕಲಿಗರು ಇಡೀ ದಕ್ಷಿಣ ಭಾರತದ ಉದ್ದಗಲಕ್ಕೂ ನೆಲೆಸಿದ್ದಾರೆ ಹಾಗೂ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಹಾಗೂ ನೀಡುತ್ತಿದ್ದಾರೆ.

ಕುಂಚಟಿಗರು ಹಾಗೂ ಮಧುಗಿರಿಯ ಮಹಾನಾಡ ಪ್ರಭುಗಳು

ಒಕ್ಕಲಿಗ ಸಮುದಾಯದ ಪ್ರಮುಖ ಉಪಜಾತಿ, ಇಲ್ಲವೆ ಪಂಗಡಗಳಲ್ಲಿ ಒಂದು ಎಂದರೆ ಕುಂಚಟಿಗರು. ಇವರ ಮುಖ್ಯ ಕಸುಬು ವ್ಯವಸಾಯ ಮತ್ತು ಪಶುಸಂಗೋಪನೆ. ಕಾಲಾ ನಂತರ ಕೃಷಿಯೇ ಅಲ್ಲದೆ ಉತ್ತಮ ಶಿಕ್ಷಣ ಪಡೆದು ಉದ್ಯೋಗ, ಉದ್ಯಮ, ವ್ಯಾಪಾರ, ವಾಣಿಜ್ಯ ಇವೇ ಮುಂತಾದ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ. ಇಂದು ಇವರು ಕರ್ನಾಟಕದ ತುಮಕೂರು, ಸಿರ, ಹಿರಿಯೂರು, ಹೊಳಲ್ಕೆರೆ, ಚಿತ್ರದುರ್ಗ, ಮಧುಗಿರಿ, ಪಾವಗಡ, ಮಡಕಶಿರ

ಸೇರಿದಂತೆ ಹಲವಾರು ಭಾಗಗಳಲ್ಲಿ ದಟ್ಟವಾಗಿ ನೆಲೆಸಿದ್ದಾರೆ.ಆಂಧ್ರಪ್ರದೇಶದ ಹಿಂದೂಪುರ, ಅನಂತಪುರು, ತಾಡಪತ್ರಿ, ಶ್ರೀ ಕಾಕುಲಂ, ಕಡಪ, ಕರ್ನೂಲು, ಚಿತ್ತೂರು ಸೇರಿದಂತೆ ಹಲವಾರು ಕಡೆ ನೆಲೆಸಿದ್ದಾರೆ.ತಮಿಳುನಾಡಿನ ಮಧುರೈ ಜಿಲ್ಲೆಯ ನೂರಾರು ಹಳ್ಳಿಗಳಲ್ಲಿ, ಕೊಯಮುತ್ತೂರು, ಸೇಲಂ, ಊಟಿ, ಪಳನಿ, ಕಂಬಂ, ಧರ್ಮಪುರಿ, ಪೆರಿಯಕುಲಂ ಇವೇ ಮುಂತಾದ ಕಡೆ ನೆಲೆಸಿದ್ದಾರೆ.

ಕುಂಚಟಿಗ ಎಂಬ ಹೆಸರು ಕುಂಚ ಬಳಸುವ, ವ್ಯವಸಾಯ ಮಾಡುವಾಗ ತೊಗರಿಬೇಳೆಯನ್ನು ಬೆಳೆಯುವವ ಕುಂಚ, ಕುಂಚಿಗೆ ಎಂಬ ಪದಗಳ ಬಳಕೆಯಾಗಿದೆ. ಕ್ರಿ.ಶ.12 ಮತ್ತು 13ನೇ ಶತಮಾನದ ಆನೆಗುಂದಿ ಶಾಸನದಲ್ಲಿ (ಕ್ರಿ.ಶ. 1149 ಶಾಲಿವಾಹನ ಶಖ 1227) ಕುಂಚಟಿಗರು, ಕುಡಿ ಒಕ್ಕಲಿಗರು ಎಂಬ ಪದಗಳ ಬಳಕೆಯಾಗಿದೆ.ನಂತರ ಕ್ರಿ.ಶ.1856ರ ಕರಿಘಟ್ಟ ಶಾಸನದಲ್ಲಿ (ಶ್ರೀರಂಗಪಟ್ಟಣ ತಾಲ್ಲೂಕು) ಕುಂಚಿಗ ಎಂಬ ಪದ ಪ್ರಯೋಗವಾಗಿದೆ. 1927ರಲ್ಲಿ ಸಿ. ಹಯವದನರಾವ್‌ರವರ ಮೈಸೂರು ಗೆಜೆಟಿಯರ್‌ನ ಮೊದಲ ಸಂಪುಟದಲ್ಲಿ ಕುಂಚಿಗಾಸ, ಕುಂಚಿಟಿಗಾಸ, ಕುಂಚಟಿಗ ಒಕ್ಕಲಿಗರು ಎಂದು ನಮೂದಿಸಿದ್ದಾರೆ.

ಇವರ ಕುಲಕಸುಬು ವ್ಯವಸಾಯ ಮತ್ತು ಪಶುಸಂಗೋಪನೆಯಾದ್ದರಿಂದ ಇವರ ಬೆಡಗುಗಳಲ್ಲಿ ದವಸ–ಧಾನ್ಯಗಳ, ಪಶು–ಪಕ್ಷಿಗಳ ಹೆಸರನ್ನು ಕಾಣಬಹುದು ಎರಡು–ಮೂರು ಇಲ್ಲವೆ ನಾಲ್ಕು ಬೆಡಗುಗಳನ್ನು ಅಣ್ಣ–ತಮ್ಮಂದಿರು ಎಂದು ಒಂದೊಂದು ಗುಂಪುಗಳಾಗಿ ಮತ್ತೆ ವಿಂಗಡಿಸಬಹುದು. ಇಂತಹ ಸಗೋತ್ರ ಮತ್ತು ಸೊದರ ಗೋತ್ರಗಳವರು ಅಣ್ಣ–ತಮ್ಮಂದಿರು ಎಂದು ಪರಿಗಣಿಸಿ ಅವರಲ್ಲಿ ಪರಸ್ಪರ ವಿವಾಹ ಸಂಬಂಧವನ್ನು ನಿಷೇಧಿಸಲಾಗಿದೆ. ಒಂದು ವಿಧದಲ್ಲಿ ಸಂಪ್ರದಾಯ ಶರಣರು ಎಂದರೆ ತಪ್ಪಾಗಲಾರದು. ಇವರಲ್ಲಿರುವ ಬೆಡಗುಗಳೆಂದರೆ

ಪ್ರಚಲಿತದಲ್ಲಿರುವ ಬೆಡಗುಗಳು ಈ ಕೆಳಕಂಡಂತಿವೆ –

1. ಅಂಡೇನವರು
2. ಅಟ್ಟೇನವರು
3. ಅಷ್ಟೇನವರು
4. ಅರಸನವರು
5. ಅಲ್ಪೇನವರು
6. ಅರಳೇನವರು
7. ಅಳುವನವರು
8. ಉಂಡೇನವರು
9. ಎರಡುಕೆರೆಯವರು
10. ಕರಡೇನವರು
11. ಕರಿಕೇನವರು
12. ಕಂಬಳಿಯವರು
13. ಕಕ್ಕೇನವರು
14. ಕಠಾರದವರು
15. ಕಾಗೇನವರು
16. ಕೊಗ್ಗೇನವರು

17. ಗಾಳೇನವರು
18. ಗುಡಿಯವರು
19. ಗೋಣೇನವರು
20. ಜಲಧೇನವರು
21. ಜರಿಯವರು
22. ಜಾನಕಲ್ಲುನವರು
23. ಜೀರಿಗೆಯವರು
24. ದಮಗುತ್ತಿಯವರು
25. ಧಾನ್ಯದವರು
26. ದಸಲೇನವರು
27. ಬಸಲೇನವರು
28. ಬಡವನವರು
29. ಬೆಳ್ಳೇನವರು
30. ಮಾಣಸೇನವರು
31. ಮಾಯಿನವರು
32. ಮೀಸ್ಲೇನವರು
33. ಯಮ್ಮೇನವರು
34. ರಾಗೇನವರು
35. ರಾವುತದವರು
36. ವನುಮನವರು
37. ವಳಕಲ್ಲಿನವರು
38. ಹುಳ್ಳೇನವರು
39. ಶೆಟ್ಟಿನವರು
40. ಸಹಸ್ರದವರು
41. ಸಾರಂಗದವರು
42. ಸೂರೇನವರು
43. ಹಾಲೇನವರು
44. ಹಾವಿನವರು
45. ಹುಳಿಯಾರರು
46. ಹುತ್ತದವರು
47. ಯಲೆಯವರು
48. ಯರ್ರೇನವರು

ಈ ನಮ್ಮ ಸಮುದಾಯದಲ್ಲಿ ಹುಟ್ಟಿದ ಡಿ. ಬಮಮಯ್ಯ, ರಾಗಿಮಂಡಿ ಚೌಡಯ್ಯ, ಸಿರಾದ ಈರಪ್ಪ, ಡಬ್ಲ್ಯು.ಹೆಚ್. ಹನುಮಂತಪ್ಪ, ಜಿ.ಪಿ. ರಂಗಪ್ಪಗೌಡ, ಮಾಲಿಮರಿಯಪ್ಪ, ಡೊಡ್ಡಬಳ್ಳಾಪುರದ ಮರಳೇನಹಳ್ಳಿಯ ಪಟೇಲ್ ಹನುಮೇಗೌಡ ಹೊಸದುರ್ಗದ ಪಟೇಲ್ ಬಸವೇಗೌಡ, ಹರಿಹರ ತಾಲ್ಲೂಕು ಕೊಪ್ಪದ ಕೆ. ಕೆಂಚಪ್ಪ, ಬಿ.ಎಲ್. ಗೌಡ, ಇವರೇ ಮುಂತಾದವರು ಪ್ರಾತಃ ಸ್ಮರಣೀಯರು ಎಂದೇಳಬಹುದು.

ಕುಂಚದ ಸಹಾಯದಿಂದ ಕಂಬಳಿ ನೆಯ್ಯುತ್ತಿದ್ದ ಕುರುಬರಲ್ಲಿ ಕೆಲವರು ಯಾವುದೋ ಒಂದು ಕಾಲಘಟ್ಟದಲ್ಲಿ ಆ ವೃತ್ತಿಯುನ್ನು ತೊರೆದು ವ್ಯವಸಾಯಕ್ಕಿಳಿದರು ಹೀಗೆ ವ್ಯವಸಾಯಕ್ಕಿಳಿದ ಕುರುಬರೇ ಕುಂಚಟಿಗರು. ತಮ್ಮ ಪೂರ್ವಾಶ್ರಮದಲ್ಲಿ ಬಳಸುತ್ತಿದ್ದ "ಕುಂಚ"ದಿಂದಾಗಿ ಕುಂಚಟಿಗರು ಎಂಬ ಹೆಸರು ಬಂದಿದೆ ಎಂಬುದಾಗಿ ಇತಿಹಾಸಕಾರರಾದ ಡಾ. ಯು. ಸೂರ್ಯನಾಥಕಾಮತರು ಹಾಗೂ ಪ್ರೊ. ಹೆಚ್.ಆರ್. ದಾಸೇಗೌಡರು ಪ್ರತಿಪಾದಿಸುತ್ತಾರೆ.

ಇವರಲ್ಲಿ 48 ಬೆಡಗುಗಳಿವೆ. ಅವುಗಳಲ್ಲಿ ಅರಸನವರು, ಅಲ್ಬೇನವರು, ಆಳುವನವರು, ಎರಡು ಕೆರೆಯವರು, ಕಠಾರದವರು ಇವೇ ಮುಂತಾದ ಬೆಡಗುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವರ ರಾಜಕೀಯ ಸಂಬಂಧಗಳು, ಹೋರಾಟದ ಹಿನ್ನೆಲೆಯನ್ನು ನೋಡಿದರೆ ಅವರಲ್ಲಿ ಕ್ಷಾತ್ರಗುಣಗಳು ಇರುವುದು ತಿಳಿಯುತ್ತದೆ. ಕುಂಚಟಿಗರಲ್ಲಿ ಕೆಲವರು ನಾಡಗೌಡರಾಗಿ, ಪಾಳೇಯಗಾರರಾಗಿ, ನಾಡಪ್ರಭುಗಳಾಗಿ ಕರ್ನಾಟಕದ ಹಲವಾರು ಭಾಗಗಳನ್ನು ಆಳಿದವರಾಗಿದ್ದಾರೆ. ಅವುಗಳೆಂದರೆ –

ಅವರುಗಳೆಂದರೆ:

1. ಮಧುಗಿರಿಯ ಮಹಾನಾಡ ಪ್ರಭುಗಳು
2. ಮಿಡಿಗೇಶಿಯ ಪಾಳೇಗಾರರು
3. ನಿಡಗಲ್‌ದುರ್ಗದ ಪಾಳೇಗಾರರು
4. ಕೊರಟಗೆರೆಯ ಪಾಳೇಗಾರರು
5. ರತ್ನಗಿರಿಯ ಪಾಳೇಗಾರರು
6. ರಾಜವಂತಿಪುರದ ನಾಡಗೌಡರು
7. ರಾಜಬಂಡೆ ಪಾಳೇಗಾರರು
8. ಸುಂಕರಕಲ್ಲು ದುರ್ಗದ ಪಾಳೇಗಾರರು
9. ಹೊಳವನಹಳ್ಳಿಯ ಪಾಳೇಗಾರರು
10. ಹೇಮಾವತಿಯ ಅರಸರು
11. ಪಾವಗಡದ ಪಾಳೇಗಾರರು
12. ಚನ್ನರಾಯದುರ್ಗದ ಪಾಳೇಗಾರರು
13. ಮಧುರೈ ಪಾಳೇಗಾರರು
14. ಕೋಂಬೆ ಪಾಳೇಗಾರರು
15. ಅಂಬತ್ತೂರು ಪಾಳೇಗಾರರು
16. ಕೊಯಮತ್ತೂರು ಪಾಳೇಗಾರರು
17. ಪಳನಿಯ ಪಾಳೇಗಾರರು
18. ದಿಂಡಿಗಲ್ ಪಾಳೇಗಾರರು
19. ಪೆರಿಯಾಕುಲಂ ಪಾಳೇಗಾರರು
20. ನೀಲಿಕೊಟ್ಟಾಯಂ ಪಾಳೇಗಾರರು
21. ಗುಡೂರು ಪಾಳೇಗಾರರು

ಹಳ್ಳಿಕಾರ ಒಕ್ಕಲಿಗರು

ಒಕ್ಕಲಿಗರ ಉಪಪಂಗಡಗಳಲ್ಲಿ ಹಳ್ಳಿಕಾರ ಒಕ್ಕಲಿಗರು ಒಂದು ಪಂಗಡ. ಗ್ರಾಮಗಳಲ್ಲಿ ಇವರನ್ನು ಹಳ್ಳಿಕಾರ್ರು, ಹಳ್ಳರು ಎಂದೆಲ್ಲ ಕರೆಯುತ್ತಾರೆ. ಈಗಾಗಲೇ ತಿಳಿಸಿರುವಂತೆ ಒಕ್ಕಲಿಗರ ಮುಖ್ಯ ಕಸುಬು ವ್ಯವಸಾಯ ಮತ್ತು ಪಶುಸಂಗೋಪನೆ. ಒಕ್ಕಲಿಗನಾದವನಿಗೆ ಕೃಷಿ ಇಲ್ಲವೆ ವ್ಯವಸಾಯ ಮುಖ್ಯ ಕಸುಬಾದರೆ ಪಶುಸಂಗೋಪನೆ ಉಪಕಸುಬು ಹಾಗೂ ಕೃಷಿಗೆ ಪೂರಕವಾಗಿ ನಿಲ್ಲುವುದೇ ಪಶುಸಂಗೋಪನೆ. ಹಿಂದಿನ ಕಾಲದಲ್ಲಿ ದನಗಳ ಸಹಾಯವಿಲ್ಲದೆ ಉಳಲು, ತಾವು ಬೆಳೆದ ಬೆಳೆ ಇಲ್ಲವೆ ಇತರ ವಸ್ತುಗಳನ್ನು ಸಾಗಿಸಲು ದನಗಳ ಅವಶ್ಯಕತೆ ಇತ್ತು. ಇಷ್ಟೇ ಅಲ್ಲದೆ ಹಸು ಕರುಗಳು

ಹಾಲು ಮೊಸರಿಗೆ ಮೂಲವಾಗಿತ್ತು. ಹಿಂದೆ ದೊಡ್ಡ ರೈತರು ಇಲ್ಲವೆ ಜಮೀನ್ದಾರರ ಮನೆಗಳಲ್ಲಿ ದನ, ಕುರಿ, ಹಂದಿ, ಕೋಳಿಗಳನ್ನು ಸಾಕುತ್ತಿದ್ದರು. ಇವು ಇಲ್ಲದವನು ರೈತನೇ ಅಲ್ಲ ಅನ್ನುವ ಪರಿಸ್ಥಿತಿಯೊಂದಿತ್ತು. ಇವುಗಳ ಸಗಣಿಯಿಂದ ಬೆರಣಿ, ಕೊಟ್ಟಿಗೆ ಗೊಬ್ಬರ ದೊರೆಯುತ್ತಿತ್ತು. ಒಕ್ಕಲಿಗರ ಉಪಪಗಂಡವಾದ ಹಳ್ಳಿಕಾರರು ಆಯ್ಕೆ ಮಾಡಿಕೊಂಡದ್ದು ಪಶುಸಂಗೋಪನೆಯನ್ನು. ಪಶುಪಾಲಕರಾಗಿ ತಮ್ಮನ್ನು ಗುರ್ತಿಸಿಕೊಳ್ಳಲಾಗಿ ಇಂದಿನ ಸಮಾಜದಲ್ಲಿ ಮುಖ್ಯವಾಹಿನಿಗೆ ಸೇರಲು ಬಹಳಷ್ಟು ಸಮಯ ಬೇಕಾಯಿತು ಎಂದರೆ ತಪ್ಪಾಗಲಾದುದು.

ಹಳ್ಳಿಕಾರರು ಹೆಚ್ಚಾಗಿ ತುಮಕೂರು, ಹಾಸನ, ಚಿತ್ರದುರ್ಗ, ಬೆಂಗಳೂರು ಇವೇ ಮುಂತಾದ ಪ್ರದೇಶಗಳಲ್ಲಿ ಹರಡಿದ್ದಾರೆ. ತುಮಕೂರು ಜಿಲ್ಲೆಯ ಸಿರ, ಪಾವಗಡ, ಗುಬ್ಬಿ, ಮಧುಗಿರಿ, ಚಿಕ್ಕನಾಯಕನಹಳ್ಳಿ ಇವೇ ಮುಂತಾದ ಪ್ರದೇಶಗಳಲ್ಲಿ ದಟ್ಟವಾಗಿ ನೆಲೆಸಿದ್ದಾರೆ. ಇವರು ತಮ್ಮನ್ನು ಸರ್ವೇಗಾರರು ಎಂದು ಕರೆದುಕೊಂಡಿದ್ದಾರೆ. ಸರ್ವೇಗಾರರು ಎಂದರೆ ಊರಿನ ಮುಖ್ಯಸ್ಥರು ಇಲ್ಲವೆ ಕುಲಸ್ಥರು, ಕುಲದ ಮುಖ್ಯಸ್ಥರು ಎಂಬ ಅರ್ಥ ನೀಡುವುದು. ತಮ್ಮ ಹೆಸರಿನೊಂದಿಗೆ ಗೌಡ ಇಲ್ಲವೆ ನಾಯಕ್ ಎಂಬ ಅಧಿಕಾರಷಾಯಿ ಇಲ್ಲವೆ ಉನ್ನತಶ್ರೇಣಿ (Rank / Designation) ಇಲ್ಲವೆ ಸ್ಥಾನಮಾನವನ್ನು ತಮ್ಮ ಹೆಸರಿನೊಂದಿಗೆ ಗುರ್ತಿಸಿಕೊಂಡಿದ್ದಾರೆ. ಆದರೆ 1891ರ ಜನಗಣತಿಯಲ್ಲಿ ಕಾಡುಗೊಲ್ಲರು ಇಲ್ಲವೆ ಕಾಡುಕುರುಬರೊಂದಿಗೆ ಸಂಬಂಧಬೆಸೆದುಕೊಂಡಿದೆ ಎಂದು ತಪ್ಪಾಗಿ ಗುರ್ತಿಸಲಾಗಿದೆ. ಇವರ ಮೂಲದ ವೃತ್ತಾಂತವನ್ನು ನೋಡುವುದಾದರೆ ದಿಮ್ಮಿ ದೊಡ್ಡನಾಯ್ಕ ಮತ್ತು ಚಲ್ಲೆ ತಿಮ್ಮನಾಯ್ಕ ಎಂಬ ಶೂರ, ಧೀರರು ವಿಜಯನಗರದರಸರ ಕಾಲದಲ್ಲಿ ಅವರ ಸೈನ್ಯದಲ್ಲಿ ಆಡಳಿತ ಹಾಗೂ ಪಶುಸಂಗೋಪನೆ ಇವೇ ಮುಂತಾದ ಜವಾಬ್ದಾರಿಯುತ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇವರ ಪ್ರಾಮಾಣಿಕತೆಯನ್ನು ಕಂಡ ವಿಜಯನಗರದರಸರು ಐದು ಗ್ರಾಮಗಳನ್ನು ಉಂಬಳಿಯಾಗಿ ನೀಡಿದರು. ಆ ಗ್ರಾಮಗಳು ಇಂದಿನ ತುಮಕೂರು ಜಿಲ್ಲೆ ಕೊರಟಗೆರೆ ತಾಲೂಕಿನ ಮಲ್ಲೆಕಾವು, ಜೋನಿಗರಹಳ್ಳಿ, ಬೀರದೇವನಹಳ್ಳಿ, ಸಿದ್ದರಬೆಟ್ಟ ಹಾಗೂ ಹಂಚಿಮಾರನಹಳ್ಳಿ ಎಂಬ ಐದು ಗ್ರಾಮಗಳಾಗಿವೆ. ಇಂದು ಈ ಗ್ರಾಮಗಳು ಈ ವಂಶಸ್ಥರ ಕೈತಪ್ಪಿ ಹೋಗಿದೆ. ಆದರೆ ಇಂದಿಗೂ ಈ ಮನೆತನದವರನ್ನು ಇಲ್ಲವೆ ಇವರ ಮನೆತನದ ಹಿರಿಯರಾದ ದಿಮ್ಮಿ ದೊಡ್ಡನಾಯ್ಕ ಮತ್ತು ಚಲ್ಲೇ ತಿಮ್ಮನಾಯ್ಕರನ್ನು ಸ್ಮರಿಸಿಕೊಳ್ಳುತ್ತಾರೆ.

ವಿಜಯನಗರದ ಕಾಲಾನಂತರ ಮೈಸೂರು ಅರಸರ ಕಾಲದಲ್ಲಿ ಅದರಲ್ಲೂ ವಿಶೇಷವಾಗಿ ಚಿಕ್ಕದೇವರಾಯನ ಕಾಲದಲ್ಲಿ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಪಶುಸಂಗೋಪನೆಗೆ ಹೆಚ್ಚಿನ ಮಹತ್ವ ನೀಡಿದ್ದರು. ಚಿಕ್ಕದೇವರಾಯನ

ಕಾಲದಲ್ಲಿ ಹಸುಕರುಗಳನ್ನು ಹಾಲುಮೊಸರಿಗೆ ಬಳಸಿಕೊಂಡರೆ ದನಗಳನ್ನು ಸೈನ್ಯಕ್ಕೆ, ಸಾಗಾಣಿಕೆಗೆ (ಇಂದಿನಂತೆ ಮೋಟಾರು ವಾಹನಗಳಿರಲಿಲ್ಲ) ರೈತರು ಉಳುಮೆ ಮಾಡಲು ಹಾಗೂ ತಾವು ಬೆಳೆದ ಬೆಳೆಯನ್ನು ಸಾಗಿಸಲು ದನಗಳನ್ನು ಬಳಸಿಕೊಳ್ಳುತ್ತಿದ್ದರು. ದನಕರುಗಳನ್ನು ಆ ವ್ಯಕ್ತಿಯ ಸಂಪತ್ತೆಂದೆ ಪರಿಗಣಿಸುತ್ತಿದ್ದರು. ನಾಲ್ವಡಿ ಕೃಷ್ಣರಾಜರು ಅಠಾರ ಕಛೇರಿಯನ್ನು ಅಸ್ತಿತ್ವಕ್ಕೆ ತಂದರು. ಈ ಹದಿನೆಂಟು ಕಛೇರಿಗಳಲ್ಲಿ "ಬೆಣ್ಣೆಚಾವಡಿ"ಯೂ ಒಂದು. ಪ್ರಸ್ತುತ ನಮ್ಮಲ್ಲಿರುವ ಕರ್ನಾಟಕ ಹಾಲು ಒಕ್ಕೂಟದಂತೆ ಕಾರ್ಯನಿರ್ವಹಿಸುತ್ತಿತ್ತು. ಪಶುಸಂಗೋಪನೆ ಹಾಗೂ ದನಕರುಗಳ ಮಹತ್ವವನ್ನರಿತಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು "ಅಮೃತಮಹಲ್" ತಳಿಗಳನ್ನು ಹಾಗೂ ಅಮೃತಮಹಲ್ ಕಾವಲುಗಳನ್ನು ಅಭಿವೃದ್ಧಿಪಡಿಸಿದರು. ಹಳೇ ಮೈಸೂರು ಭಾಗದ 9 ಜಿಲ್ಲೆಗಳ ಹುಲ್ಲುಗಾವಲುಗಳನ್ನು ಅಭಿವೃದ್ಧಿಪಡಿಸಿದರು. ಹಳೇ ಮೈಸೂರು ಭಾಗದ 9 ಜಿಲ್ಲೆಗಳ ಹುಲ್ಲುಗಾವಲು ಅಥವಾ ಗೋಮಾಳವನ್ನು ಅಮೃತಮಹಲ್ ಕಾವಲುಗಳೆಂದು ಸಾವಿರಾರು ಎಕರೆ ಪ್ರದೇಶವನ್ನು ಪಶುಸಂಗೋಪನೆಗೆ ಒತ್ತುಕೊಟ್ಟರು. (ಡಾ॥ ಪುಟ್ಟರಾಜು ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಅಮೃತಮಹಲ್ ತಳಿ ಕುರಿತು ಅಧ್ಯಯನ – ಅಪ್ರಕಟಿತ ಪ್ರೌಢ ಪ್ರಬಂಧ).

ಈ ತೆರನಾದ ಅಮೃತಮಹಲ್ ಕಾವಲುಗಳಿಗೆ ಈಗಾಗಲೇ ಪಶುಸಂಗೋಪನೆ –ಯಲ್ಲಿ ಹೆಸರು ಮಾಡಿದ್ದ ಹಟ್ಟಿಕಾರರು ಇಲ್ಲವೆ ಹಳ್ಳಿಕಾರರನ್ನು ನೇಮಿಸಿದರು ಹಾಗೂ ಮೈಸೂರು ಅರಮನೆಯ ಹಾಲು ಬೆಣ್ಣೆ ಚಾವಡಿಗೆ 'ದರೋಗ' (Superintendent) ಆಗಿ ನೇಮಿಸಿದ ಉದಾಹರಣೆ ಇದೆ. ಈ ಹಳ್ಳಿಕಾರರು ಅಮೃತಮಹಲ್ ಕಾವಲಿನ ದನಗಳನ್ನು ಬಳಸಿಕೊಂಡು ಹಳ್ಳಿಕಾರ ದನಗಳೆಂಬ ರಾಸುಗಳನ್ನು ಅಭಿವೃದ್ಧಿಪಡಿಸಿ –ದರು. ಇವು ಇಂದಿಗೂ ದೇಶಿತಳಿಗಳಲ್ಲೇ ಅತ್ಯುತ್ತಮ ತಳಿಗಳಾಗಿವೆ. ಈ ಹಿರಿಮೆಗರಿಮೆ ಹಳ್ಳಿಕಾರರಿಗೆ ಸಲ್ಲಬೇಕು.

ದೇವರು, ಕುಲ, ಗೋತ್ರ, ಬಳಿ ಇತ್ಯಾದಿ :

ಈಗಾಗಲೇ ತಿಳಿಸಿರುವಂತೆ ದೊಡ್ಡ ದುಮ್ಮಿನಾಯ್ಕ ಮತ್ತು ಸೇಲ್ವಂ ತಿಮ್ಮನಾಯಕರು ಇವರ ಮೂಲಪುರುಷರು ಇವರನ್ನು ಸ್ಮರಿಸದೇ ಇರಲಾರರು. ಶಿವ, ವಿಷ್ಣು, ತಿರುಪತಿ ತಿಮ್ಮಪ್ಪ, ಹುಚ್ಚಮ್ಮ, ಮಾಸ್ತಮ್ಮ ಇವೇ ಮುಂತಾದ ದೇವಾನುದೇವತೆಗಳನ್ನು ಪೂಜಿಸುತ್ತಾರೆ.

ಇವರಲ್ಲಿ ಇವೇ 101 ಕುಲ ಇಲ್ಲವೆ ಬಳಿ ಇಲ್ಲವೆ ಗೋತ್ರಗಳಿವೆ. ಇವರಲ್ಲಿ ಹಳೆಯ ಹಾಗೂ ಹೊಸಹಳ್ಳಿಕಾರರು ಎಂದು ಎರಡು ವರ್ಗಗಳಿವೆ. 50 ಮತ್ತು 51 ಎಂಬ ಎರಡು ವಿಧಗಳಿವೆ. ಅಜ್ಜನ, ಆಲದ, ಬೆಟ್ಟ, ಗುಡ್ಡ, ಜೋಗಿ, ಹಾವು ಇವೇ ಮೊದಲಾದ ಪ್ರಕೃತಿಯಲ್ಲಿರುವ ಹಾಗೂ ತಮ್ಮ ನೆರವಿಗೆ ಬರುವ ವಸ್ತುಗಳನ್ನು

ತಮ್ಮ ಬಳಿಗಳು ಇಲ್ಲವೆ ಗೋತ್ರವೆಂದು ಗುರ್ತಿಸಿಕೊಂಡಿದ್ದಾರೆ. ಸ್ವಗೋತ್ರದಲ್ಲಿ ವಿವಾಹ ನಿಷಿದ್ಧ. ಕೊಳ್ಳಾಲುಕರು, ಕೆಂಪನುಲ್ಲುಕರು, ಕೊಟ್ಟೆಯುಲ್ಲುಕರು ಇತ್ಯಾದಿ ಹೊರಬಾಂಧವ್ಯದ ವಿವಾಹ ಬೆಡಗುಗಳು ಇವೆ.

ಪಾಲು ಮುಖಂಡತ್ವ, ಕಟ್ಟೆಮನೆ ಇತ್ಯಾದಿ :

ಕರ್ನಾಟಕದಲ್ಲಿ ಇಂದು ಲಕ್ಷಾಂತರ ಮಂದಿ ಹಳ್ಳಿಕಾರರು ವಾಸ ಮಾಡುತ್ತಿದ್ದಾರೆ. ಅಂದು ತಮ್ಮ ಜನರ ಸುಖ, ಶಾಂತಿ, ನೆಮ್ಮದಿಗಾಗಿ ಪಾಲು ಮುಖಂಡತ್ವ, ಕಟ್ಟೆಮನೆಗಳನ್ನು ರಚಿಸಿಕೊಂಡಿದ್ದರು. ದೊಡ್ಡೇರಿ (ಮಧುಗಿರಿ), ಬಸವನಹಳ್ಳಿ, ಚಿನ್ನಕೋಟೆ, ಗೊಲ್ಲಹಳ್ಳಿ (ನೆಲಮಂಗಲ), ಕಡಬ, ಕಡೂರು, ಕಿಕ್ಕೇರಿ, ಕೋಡಿಹಳ್ಳಿ ಇವೇ ಮುಂತಾದ ಪ್ರದೇಶಗಳಲ್ಲಿ ಕಟ್ಟೆಮನೆ ಅಸ್ತಿತ್ವದಲ್ಲಿದ್ದಿತು.

ಸಾವಿರಾರು ವರ್ಷಗಳ ಹಿಂದೆ ಬೇಟೆಗಾರರಾಗಿ, ಪಶುಸಂಗೋಪನಾ–ಕಾರರಾಗಿ, ಕೃಷಿ ಇಲ್ಲವೆ ವ್ಯವಸಾಯಗಾರರಾಗಿ ಕಾಲಕ್ರಮೇಣ ಶಿಕ್ಷಣ, ಉದ್ಯೋಗ, ವಾಣಿಜ್ಯ, ವ್ಯಾಪಾರ ಇವೇ ಮುಂತಾದ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜದ ಮುಖ್ಯವಾಹಿನಿಯಲ್ಲಿ ಒಂದಾಗಿದ್ದಾರೆ. ಈ ಸಮುದಾಯದ ಕೆಲವು ಸಾಧಕ ಪ್ರಮುಖ ವ್ಯಕ್ತಿಗಳನ್ನು ಹೆಸರಿಸುವುದಾದರೆ ನ್ಯಾಯವಾದಿಗಳಾಗಿ, ಶಾಸಕರಾಗಿ, ಮಂತ್ರಿಯಾಗಿ, ಶಿಕ್ಷಣ ದಾಸೋಹಿಯಾಗಿ ಇಡೀ ಕರ್ನಾಟಕದ ಮೇರು ವ್ಯಕ್ತಿಯಾಗಿ ಬೋರೇಗೌಡ (ದಯಾನಂದಸಾಗರ್) ಉದ್ಯಮಿಯಾಗಿ, ವಾಣಿಜ್ಯೋದ್ಯಮಿಯಾಗಿ, ಶಾಸಕರಾಗಿ ಸೇವೆ ಸಲ್ಲಿಸಿದರೆ ಹೇಮಚಂದ್ರಸಾಗರ್ ಹಾಗೂ ಪ್ರೇಮಚಂದ್ರಸಾಗರ್ ಅವರೂ ಕೂಡ ಉದ್ಯಮಿಯಾಗಿ, ಶಾಸಕರಾಗಿ ಜನಪ್ರಿಯರಾಗಿದ್ದಾರೆ. ಇಷ್ಟೇ ಅಲ್ಲದೆ ಸುಪ್ರಸಿದ್ಧ ಹಾಗೂ ಪ್ರತಿಭಾನ್ವಿತ ನಟ ವಜ್ರಮುನಿ ಇವರೇ ಮುಂತಾದವರು ಮುಕುಟ ಪ್ರಾಯದಲ್ಲಿದ್ದಾರೆ.

ಗೊಂಡಒಕ್ಕಲಿಗರು / ಗೊಂಡ್ಕೊಲಿಗರು

ಉತ್ತರಕನ್ನಡ ಭಾಗಗಳಾದ ಶಿರಸಿ, ಸಿದ್ದಾಪುರ, ಅಂಕೋಲ, ಕುಮುಟ ಇವೇ ಮುಂತಾದ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ, ಇವರಲ್ಲಿ ಬಹಳಷ್ಟು ಜನ ಗೇಣಿದಾರರಾಗಿ, ಕೃಷಿ ಕಾರ್ಮಿಕರಾಗಿ (ಇಂದು ಕಾಲ ಬದಲಾಗಿದೆ) ಸೇವೆ ಸಲ್ಲಿಸುತ್ತಿ–ದ್ದಾರೆ. ಮತ್ತೆ ಕೆಲವರು ಭೂ–ಒಡೆಯರಾಗಿ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಇದಕ್ಕೆಲ್ಲ ಕಾರಣ ಬಡತನ, ನಿರುದ್ಯೋಗ, ಸಾಕ್ಷರತೆಯ ಕೊರತೆ ಇವೇ ಮುಂತಾದ ಕಾರಣಗಳು. ಉತ್ತರ ಕರ್ನಾಟಕ ಭಾಗದೊಂದಿಗೆ ಹಳೇ ಮೈಸೂರು ಪ್ರಾಂತ್ಯವು ಹೆಚ್ಚು ಸಂಪರ್ಕಕ್ಕೆ ಬಾರದೆ ಇದ್ದದ್ದು ಮತ್ತೊಂದು ಕಾರಣ. ಕಾಲ ಬದಲಾದಂತೆ ಇಂದಿನ ಕಾಮಗೊಂಡ, ಜನಗೊಂಡ, ಮುಡಗೊಂಡ, ಗೌರಗೊಂಡ, ಯಲಗೊಂಡ, ಜಯಗೊಂಡ, ಬೀರಗೊಂಡ, ಚನಗೊಂಡ, ಗಂಗರಗೊಂಡ ಗೊಂಡ ಒಕ್ಕಲು ಆಗಿವೆ.

ಇವರು ಧರ್ಮಸ್ಥಳದ ಮಂಜುನಾಥೇಶ್ವರ, ಶ್ರಿಂಗೇರಿ ತಿರುಪತಿಯ ತಿಮ್ಮಪ್ಪ ಇವೇ ಮುಂತಾದ ದೇವರುಗಳೇ ಅಲ್ಲದೆ ಭೂತಾರಾಧನೆ ಸೇರಿದಂತೆ ಪ್ರಕೃತಿ ದೇವತೆಗಳನ್ನು ಆರಾಧಿಸುತ್ತಾರೆ. ಇವರಲ್ಲಿ ಬಳಿಗಳು ಇಲ್ಲವೆ ಗೋತ್ರಗಳ ಬಗ್ಗೆ ನಂಬಿಕೆಯಿದೆ. ಇವರಲ್ಲಿ –

1. ಹೊನ್ನ ಬಳಿ
2. ದೈವ್ಕರ ಬಳಿ
3. ಆನ್ಬಳಿ
4. ಅಜ್ರುಬಳಿ
5. ಸಿರಿನಬಳಿ
6. ಕಾಯ್‌ಬಳಿ
7. ಹಾಲ್‌ಬಳಿ
8. ಮಲ್ಲಗೆಬಳಿ
9. ಹೊಲಿಬಳಿ
10. ದೇವನಬಳಿ

ಇವೇ ಮುಂತಾದವು. ಈ ಬಳಿಗಳು ಇಲ್ಲವೆ ಗೋತ್ರಗಳು ಪ್ರಕೃತಿ, ಪ್ರಾಣಿ-ಪಕ್ಷಿ, ವ್ಯವಸಾಯದ ಉಪಕರಣಗಳು ಸೇರಿದಂತೆ ತಮ್ಮ ನಂಬಿಕೆಯ ದೇವರು ಹಾಗೂ ಪ್ರಕೃತಿಯೇ ಆಗಿರುತ್ತದೆ. ಕಾಲ ಬದಲಾದಂತೆ ಶಿಕ್ಷಣ ಪಡೆದು ದೂರದ ಊರುಗಳಲ್ಲಿ ಸ್ವಂತ ಉದ್ಯಮ, ಉದ್ಯೋಗ ಮಾಡುವ ಮೂಲಕ ಬಹುಕು ಕಟ್ಟಿಕೊಂಡಿದ್ದಾರೆ.

ನಾಡವರು

ಇವರು ಮಂಗಳೂರು, ಕಾರವಾರ, ಅಂಕೋಲಾ, ಕುಮುಟಾ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ದಾಪುರ ಇವೇ ಮುಂತಾದ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಡಾ. ಗುರುರಾಜ ಭಟ್ಟರು ನಾಡವ ಎನ್ನುವ ಶಬ್ದವು ರಾಷ್ಟ್ರಿಕ ಅಥವಾ ನಡವರ್ಗಗಳು ಎನ್ನುವುದರ ಸಮಾನವಾದ ಕನ್ನಡ ಪದ ಎನ್ನುತ್ತಾರೆ. ನಾಡವ ಶಬ್ದದ ಮೂಲ ನಡು-ನಡುವವರು ನಾಡವರು, ಎಂದರೆ ಕೃಷಿ ಮಾಡುವವರು. ಒಕ್ಕಲುತನ (ತುಳುವಿನಲ್ಲಿ-ಒಕ್ಕೆಲ್ಮೆ ಎನ್ನುವರು) ಮಾಡುವವರು ತರಿಜಮೀನನ್ನು ಹೊಂಡದ ಗದ್ದೆ ಎಂತಲೂ ಬರಡು ಗದ್ದೆ / ಬಂಜರು ಜಮೀನನನ್ನು ಮಕ್ಕಿ ಗದ್ದೆ ಎಂದು ಕರೆಯುತ್ತಾರೆ. ಕಾರು ಬೆಳೆ ಬಂದ ಮೇಲೆ ಅದನ್ನು ಮನೆಗೆ ತಂದು ಹಾಕಿ ಒಳ್ಳೆಯ ದಿನವನನ್ನು ನೋಡಿ ನೇಗಿಲ ಪೂಜೆಯನ್ನು ಮಾಡಿ ಆರ್‌ಕಟ್ಟಿ ನೇಗಿಲ ಹೂಡಲು ಪ್ರಾರಂಭಿಸುತ್ತಾರೆ. ವ್ಯವಸಾಯ ಮಾಡುವುದರಲ್ಲೂ ಗಟ್ಟಿಗರು. ನಾಡವರು ತಾವು ಒಕ್ಕಲಿಗರು ಎಂದು ಹೇಳಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ ಕ್ಷತ್ರಿಯರು ಎಂದು ಹೇಳಿಕೊಳ್ಳಲು ಇಚ್ಚೆ ಪಡುತ್ತಾರೆ. (ಇದು ಎಲ್ಲಾ ಜಾತಿ, ಉಪಜಾತಿ, ಧರ್ಮದಲ್ಲೂ ಇದ್ದದ್ದೆ). ಮಂಗಳೂರು, ಪುತ್ತೂರು ಇವೇ ಮುಂತಾದ ಉತ್ತರ ಭಾಗದ ಬಂಟರೂ ಕೂಡ ತಮ್ಮನ್ನು ನಾಡವರು ಎಂದು ಕರೆದುಕೊಳ್ಳಲು ಇಚ್ಚಿಸುತ್ತಾರೆ. ಆಧುನಿಕ ಜಗತ್ತಿಗೆ ತೆರೆದುಕೊಂಡಂತೆ ವ್ಯವಸಾಯ, ಪಶುಸಂಗೋಪನೆಯನ್ನು ಬದಿಗಿಟ್ಟು ವ್ಯಾಪಾರ, ವಾಣಿಜ್ಯ, ಸ್ವಂತ ಉದ್ಯಮ, ಸರ್ಕಾರಿ ಹಾಗೂ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಅರಸಿ ಹೊರರಾಜ್ಯಗಳಲ್ಲಿ ಹೊರ ರಾಷ್ಟ್ರಗಳಲ್ಲಿ ಬದುಕು ಕಟ್ಟಿಕೊಂಡಿದ್ದಾರೆ.

ಇವರಲ್ಲಿ ಗೋತ್ರ, ಸೂತ್ರ, ಬಳಿಗಳ ಬಗ್ಗೆ ನಂಬಿಕೆಯಿದೆ ಸ್ವಗೋತ್ರದಲ್ಲಿ ವಿವಾಹ ಮಾಡಿಕೊಳ್ಳಲು ಒಪ್ಪುವುದಿಲ್ಲ. ಇವರಲ್ಲಿರುವ ಬಳಿಗಳೆಂದರೆ –

1. ಆನೆ ಬಳಿ	2. ತೊಳೀರ (ತೋಳಾರ) ಬಳಿ,	
3. ರಾಣಿ ಬಳಿ	4. ಅಜ್ಜಿ ಬಳಿ	5. ಕುಜ್ಜೀ ಬಳಿ
6. ಶೆಟ್ಟಿ ಬಳಿ	7. ಕ್ಯಾಂದಗಿ ಬಳಿ	8. ಸೇಗಿಬಳಿ
9. ಹೋಳಿ ಬಳಿ	10. ದಾನಿಬಳಿ	11. ಬೆಂದಿಬಳಿ

12. ದಾನಿಬಳಿ – ಇವೇ ಮುಂತಾದವುಗಳು. ಈ ಬಳಿಗಳಲ್ಲಿ ನಂಬಿಕೆಯಿದೆ ಹಾಗೂ ಆಚರಿಸುತ್ತಾರೆ. ಅದೇ ರೀತಿ ಮನೆತನಗಳ ಹೆಸರನ್ನು ಮಾತ್ರ ಪ್ರಧಾನಕ್ಕೆ ಗೌರವ ನೀಡುತ್ತಾರೆ. ಉದಾ. ಅಮ್ಮಜಿ ಮನೆ, ತಿಲಕಜ್ಜಿ ಮನೆ, ಗಂಗಜ್ಜಿ ಮನೆ, ಬೊಮ್ಮಜ್ಜಿ ಮನೆ, ಸೀತೆಮನೆ ಇವೇ ಮುಂತಾದವು.

ದೇವರು ಮತ್ತು ದೇವತೆಗಳ ಬಗ್ಗೆ ಅಪಾರ ನಂಬಿಕೆ ಮತ್ತು ವಿಶ್ವಾಸ. ಭೂತ ಪಿಶಾಚಿಗಳ ಕೇಡಿನ ಭಯದಿಂದ ಆರಾಧಿಸುತ್ತಾರೆ. ಅದನ್ನು ಹೊರತು ಪಡಿಸಿ ಭೂ ಮಾಯಿ, ಬೊಮ್ಮಯ್ಯ, ಜೈನ ಬೀರ, ತಿರುಪತಿ ವೆಂಕಟರಮಣ ಇವೇ ಮುಂತಾದ ದೇವತೆಗಳನ್ನು ಆರಾಧಿಸುತ್ತಾರೆ. ವೆಂಕಟರಮಣನಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ದೇವತಾಕಾರ್ಯವನ್ನು "ಮಾಟ್ಜು" ಇಲ್ಲವೆ "ಹರಿದಿನ"ವೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಮನೆಗಳ ಅಂಗಳದಲ್ಲಿ ತುಳಸಿ ಕಟ್ಟೆ ಇರುತ್ತದೆ. ಕಾರಣವೇನೆಂದರೆ ಇದು ತಿಮ್ಮಪ್ಪನ ಆವಾಸ ಸ್ಥಳವೆಂಬ ನಂಬಿಕೆ.

ಹೀಗೆ ನಾಡವರು ರೈತಾಪಿ ಜನ, ಅಚ್ಚ ಕನ್ನಡಿಗರು ಹಾಗೂ ಕನ್ನಡ ಮಾತನಾಡುವವರು. ಈ ಸಮುದಾಯದ ಮೇರು ವ್ಯಕ್ತಿಗಳೆಂದರೆ ಸುಪ್ರಿಂಕೋರ್ಟ್ ನ್ಯಾಯಮೂರ್ತಿಗಳು ಹಾಗೂ ಪಾರ್ಲಿಮೆಂಟ್ ಸ್ಪೀಕರ್ ಆಗಿದ್ದ ಕೆ.ಎಸ್. ಹೆಗ್ಗಡೆ, ಲೋಕಾಯುಕ್ತರಾಗಿದ್ದ ಸಂತೋಷ್ ಹೆಗ್ಗಡೆ, ವಿನಯ್ ಹೆಗ್ಗಡೆ ಇವರೇ ಮುಂತಾದವರು.

ಮಡಿ ಒಕ್ಕಲಿಗರು

ಹಾಸನ ಜಿಲ್ಲೆಯ ಬೇಲೂರು, ಸಕಲೇಶಪುರ, ಹಳೇಬೀಡು ಹಾಗೂ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಕೊಪ್ಪಳ, ಶೃಂಗೇರಿ, ಕಳಸ ಇಷ್ಟೇ ಅಲ್ಲದೆ ಕೊಡುಗು ಜಿಲ್ಲೆಯ ಸೋಮವಾರಪೇಟೆ, ಕುಲಾಶನಗರ ಹಾಗೂ ಉದ್ಯೋಗ ಉದ್ಯಮಗಳ ನಿಮಿತ್ತ ಮೈಸೂರು, ಬೆಂಗಳೂರು ಸೇರಿದಂತೆ ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ **"ಮಡಿ ಒಕ್ಕಲಿಗರು"** ನೆಲೆಸಿದ್ದಾರೆ. ಇವರು ನೂರಕ್ಕೆ ನೂರು ಪಾಲು ಒಕ್ಕಲಿಗರು ಹಾಗೂ ಭೈರವೇಶ್ವರನ ಅನನ್ಯ ಭಕ್ತರೂ ಕೂಡ.

ಇವರು ಸುದೀರ್ಘವಾದ ಹಾಗೂ ರೋಚಕ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದಾರೆ. ಹೇಗೆಂದರೆ - ನಾಡಿನ ಶ್ರೇಷ್ಠ ಇತಿಹಾಸಕಾರರು ಪ್ರಖಾಂಡ ಪಂಡಿತರಾಗಿದ್ದ ಡಾ॥ ಸೂರ್ಯನಾಥ ಯು. ಕಾಮತ್‌ರವರು ತಮ್ಮ ಕೃತಿಯಲ್ಲಿ **"ಮಡಿ ಒಕ್ಕಲಿಗರು"** ಎಂದು ಕರೆಯಲಾಗುವ ಒಂದು ಸಮುದಾಯ (ಒಕ್ಕಲಿಗರ ಒಳಪಂಗಡ)ವಿದೆ. ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಚಿಕ್ಕನೆಟ್ಟಕುಂಟೆಯ ಕ್ರಿ.ಶ. 1125ರ ಶಾಸನದಲ್ಲಿ "ಬೀರಗೌವುಂಡ" (ಬೀರೇಗೌಡ) ಎಂಬ ವೀರನ ಉಲ್ಲೇಖವಿದೆ. ಸುಲ್ಲಗೆರೆ 'ಮಾರ'ನೆಂಬಾತ ಮಡಿಯರ ಕುಲತಿಲಕ ಬೀರಗವುಂಡನ ಮಗ ಹಾಗೂ ಸೆಟ್ಟಿಗವುಂಡನ ತಮ್ಮ ಸೊಲ್ಲಗೆರೆ ಮಾರನ ತುರುಗಳ ಮಗಳ್ಚಿ (ಊರ ದನ-ಕರುಗಳನ್ನು ಅಪಹರಿಸಿದವರನ್ನು ಸೋಲಿಸಿ) ಆ ತುರುಗೋಳ್ ಕಾಳಗದಲ್ಲಿ ಹತನಾಗಲು ಅವನ ಹೆಸರಿನಲ್ಲಿ ವೀರಗಲ್ಲು ನೆಟ್ಟನು. (ಗುಬ್ಬಿ-1) (ಡಾ॥ ಸೂರ್ಯನಾಥ ಯು. ಕಾಮತ್ ಒಕ್ಕಲುತನ ಮತ್ತು ಒಕ್ಕಲಿಗರು., ಪು. 106-107)

ಬಹುಷಃ ತುಮಕೂರು ಜಿಲ್ಲೆ ಗುಬ್ಬಿ ಇವೇ ಮುಂತಾದ ಕಡೆಗಳಿಂದ ಕಾಲಾನಂತರ ಹಾಸನ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಿಗೆ ವಲಸೆ ಹೋಗಿ ನೆಲೆಸಿರಬಹುದು. ಇಷ್ಟೇ ಅಲ್ಲದೆ ಟಿಪ್ಪು ಸುಲ್ತಾನನ ಕಾಲದಲ್ಲಿ ಪಾಳೆಯಗಾರನಾಗಿದ್ದ ಕೃಷ್ಣಪ್ಪ ನಾಯಕರು ಹೊರಡಿಸಿದ್ದ ನಿರೂಪದಲ್ಲಿ (10.11.1796) ಮಡಿ ಒಕ್ಕಲಿಗರ ಪ್ರಸ್ತಾಪವಿದೆ. 1938ರ ಸ್ಥಳೀಯ ಲಗ್ನಪತ್ರಿಕೆಯಲ್ಲಿ **"ಮಡಿ ಒಕ್ಕಲಿಗರ"** ವಧುವಿಗೆ ಎಂದು ಉಲ್ಲೇಖಿಸಲಾಗಿದೆ. 1950ನೇ ಇಸವಿಯಲ್ಲಿ ಪ್ರಕಟವಾದ ಮೈಸೂರು ಗೆಜೆಟ್‌ನಲ್ಲಿಯೂ ಮಡಿ ಒಕ್ಕಲಿಗರ ಪ್ರಸ್ತಾಪವಿದೆ. 1950-51ರ ಜನಗಣತಿ ಮತ್ತು ಜಾತಿಗಣತಿಯಲ್ಲಿಯೂ ಇವರನ್ನು ಒಕ್ಕಲಿಗ ಸಮುದಾಯದಲ್ಲಿ ಗುರ್ತಿಸಲಾಗಿದೆ.

ಇಂತಹ ಐತಿಹಾಸಿಕ ಹಿನ್ನೆಲೆಯುಳ್ಳ ನಮ್ಮ ಸಮುದಾಯದ ಒಳಪಂಗಡದ ಮಡಿ ಒಕ್ಕಲಿಗರು ಕಾಲಘಟ್ಟ ಬದಲಾದಂತೆ ಉದಾಹರಣೆಗೆ - ಹಳೇ ಮೈಸೂರು ಭಾಗದಲ್ಲಿ ಮೈಸೂರು ಒಡೆಯರ ಅಭಿವೃದ್ಧಿ ಕಾರ್ಯಗಳು, ಬ್ರಿಟಿಷರ ಕಾಲದಲ್ಲಾದ ಶಿಕ್ಷಣ, ಉದ್ಯೋಗ, ಉದ್ಯಮ ಇವೇ ಮುಂತಾದ ಪ್ರಗತಿಪರ ಸಾಧನೆಗಳ ಹಾಗೂ ಸ್ವಾತಂತ್ರ್ಯನಂತರ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಹಳೇಮೈಸೂರು ಭಾಗದ ಒಕ್ಕಲಿಗರು ಶಿಕ್ಷಣ, ಉದ್ಯೋಗ, ಉದ್ಯಮ ಆಸ್ತಿಪಾಸ್ತಿಗಳಿಸಿ ಮೇಲ್ವರ್ಗಕ್ಕೆ ಸೇರಿದವರು ಎಂಬ ಹಣೆಪಟ್ಟಿ ಕಟ್ಟಿಕೊಂಡರು. ಉತ್ತರ ಕನ್ನಡ, ಮಲೆನಾಡು, ಅರೆಮಲೆನಾಡು ಭಾಗಗಳೊಂದಿಗೆ ವೈವಾಹಿಕ ಬಾಂಧವ್ಯ ಇವೇ ಮುಂತಾದ ಕೊಂಡಿಕಳಚಿತು. ಮಡಿ ಒಕ್ಕಲಿಗರಲ್ಲಿ ಕೀಳರಿಮೆ ಪ್ರಾರಂಭವಾಯ್ತು. ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನೆಲೆಸಿದ್ದ ಮಡಿ ಒಕ್ಕಲಿಗರು ದಿನಾಂಕ 2.4.1951ರಲ್ಲಿ ಶೃಂಗೇರಿ ಜಗದ್ಗುರುಗಳನ್ನು ಭೇಟಿ ಮಾಡಿ ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಬೇಕೆಂತಲೂ

ತಮ್ಮ ಮಠಕ್ಕೆ ನಡೆದುಕೊಳ್ಳುತ್ತೇವೆ ಎಂದು ಬಿನ್ನವಿಸಿಕೊಂಡರು. ಗುರುಗಳು **"ಚಂದ್ರಮೌಳೇಶ್ವರ"**ನು ಕುಲದೇವರೆಂತಲೂ ಶೃಂಗೇರಿ ಜಗದ್ಗುರುಗಳು ಕುಲಗುರುಗಳು ಹಾಗೂ ಶ್ರೀಮಠಕ್ಕೆ ಕಪ್ಪಕಾಣಿಕೆ ಸಲ್ಲಿಸಬೇಕೆಂದು ಆದೇಶಿಸಿದರು.

ಕೆಲವು ಕಾಲ ನಿಷ್ಠೆಯಿಂದ ನಡೆದುಕೊಂಡು (ಈಗಲು ಕೆಲವರು ನಂಬಿಕೆ ಇಟ್ಟಿದ್ದಾರೆ) ಕಾಲಾನಂತರ ಯುವಕರು ನಮ್ಮ ಜನಾಂಗದ ಜಗದ್ಗುರುಗಳೇ ಇರುವಾಗ ಬೇರೆ ಮಠಗಳಿಗೆ ಹಾಗೂ ಗುರುಗಳಿಗೆ ನಡೆದುಕೊಳ್ಳುವುದು ಸರಿಯಲ್ಲ ಎಂದು ತೀರ್ಮಾನಿಸಿದರು. ರೈತ ಸಂಘದ ಮುಖಂಡರೂ ಹಾಗೂ ಮಾಜಿ ಶಾಸಕರಾದ ಶ್ರೀ ಹೆಚ್.ಎಂ. ವಿಶ್ವನಾಥರವರ ನೇತೃತ್ವದಲ್ಲಿ ದಿನಾಂಕ 28.5.1995 ರಂದು ಶ್ರೀಕ್ಷೇತ್ರದ ಪೀಠಾಧಿಪತಿಗಳು ಭೈರವೈಕ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳನ್ನು ಭೇಟಿ ಮಾಡಿ ತಮ್ಮ ಮನವಿಯನ್ನು ಸಲ್ಲಿಸಿದರು.

ಮಹಾಸ್ವಾಮಿಗಳು **"ಮಡಿ ಒಕ್ಕಲಿಗರು"** ಒಕ್ಕಲಿಗರ ಉಪಜಾತಿಗಳಲ್ಲೊಂದು ಎಂದು **"ನಿರೂಪ"** ಹೊರಡಿಸಿದರು. ಅಂದಿನಿಂದ ಅವರಲಿದ್ದ ದುಗುಡ ಮಾಯ –ವಾಯಿತು. ಇಂದು ಒಕ್ಕಲಿಗರ ಉಪಪಂಗಡಗಳಲ್ಲಿ ಪ್ರಮುಖ ಉಪಪಂಗಡವಾಗಿದೆ.

ಇವರ ಮನೆದೇವರು ಕಾಲಭೈರವೇಶ್ವರ ಹಾಗೂ ಭೈರವನ ಭಕ್ತರು. ಮೂಡಿಗೆರೆ ತಾಲ್ಲೂಕು ಗುತ್ತಿಯಲ್ಲಿರುವ "ದೇವರ ಮನೆ" ಎಂಬ ಕುಗ್ರಾಮದಲ್ಲಿರುವ ಭೈರವೇಶ್ವರ ಗುಡಿಗೆ ಹೋಗಿ ಪೂಜೆಸಲ್ಲಿಸುತ್ತಾರೆ. ಸಕಲೇಶಪುರ, ಮೂಡಿಗೆರೆ ಇವೇ ಮುಂತಾದ ಭಾಗಗಳಲ್ಲಿ ನಾಣ್ಯ ಭೈರವ, ಗುಡ್ಡದ ಭೈರವ ಇವೇ ಮುಂತಾದ ಐದು ಭೈರವನ ಗುಡಿಗಳಿವೆ. ಇಲ್ಲಿಗೆ ಚಾಚೂ ತಪ್ಪದೆ ಹೋಗಿ ಬರುತ್ತಾರೆ. ಕಷ್ಟ ಸುಖ ಬಂದಾಗ ಹರಕೆ ಹೊತ್ತುಕೊಳ್ಳುವುದು, ಮಕ್ಕಳಿಗೆ ಮುಡಿಕೊಡುವುದು, ವಿಶೇಷ ಪೂಜೆ ಪುರಸ್ಕಾರ –ಗಳನ್ನು ಇಲ್ಲಿಯೇ ನಡೆಸುತ್ತಾರೆ. ಇಷ್ಟೇ ಅಲ್ಲದೆ ರೈತರು ತಾವು ಬೆಳೆದ ಬೆಳೆಯನ್ನು ಇಲ್ಲಿ ತಂದು ದೇವರಿಗೆ ಸಮರ್ಪಿಸಿ ಇಡೀ ಕುಟುಂಬ ಇಲ್ಲಿಗೆ ಬಂದು ಹೊಸಬೆಳೆಯಲ್ಲಿ ಅಡುಗೆ ಮಾಡಿ ದೇವರಿಗೆ ನೈವೇದ್ಯ ಮಾಡಿ ಬಡಿಸಿ ತಾವೂ ಊಟ ಮಾಡಿ ಆನಂದಿಸು –ತ್ತಾರೆ. ಇತ್ತಿಚಿನ ದಿನಗಳಲ್ಲಿ ಒಕ್ಕಲಿಗರ ಎಲ್ಲಾ ಸಮುದಾಯಗಳೊಂದಿಗೂ ವೈವಾಹಿಕ ಸಂಬಂಧವನ್ನು ಹೊಂದುತ್ತಿದ್ದಾರೆ. ಇಂದು ಬೇರೆ ಬೇರೆ ತಾಲ್ಲೂಕು, ಜಿಲ್ಲೆಗಳಲ್ಲಿ ನೆಲೆಸಿರುವವರ ಸಂಖ್ಯೆ ಎರಡು ಲಕ್ಷ ಮೀರುತ್ತದೆ. ಸಾಕಷ್ಟು ಶಿಕ್ಷಣ ಪಡೆದು ಉದ್ಯೋಗದಲ್ಲಿದ್ದಾರೆ.

ದೇವರ ಮಕ್ಕಳು (ಕ್ಷತ್ರಿಯ ಒಕ್ಕಲು ದೇವರ ಮಕ್ಕಳು)

ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಎಡಕೆರೆ, ಕಾಗನೂರು, ಸಿಗ್ಗಾವಾರ, ಕುಂಬರಹಳ್ಳಿ, ಶೃಂಗೇರಿ, ಕೊಪ್ಪ ಇವೇ ಮುಂತಾದ ಪ್ರದೇಶಗಳಲ್ಲಿರುವ ಒಕ್ಕಲಿಗರ ಉಪಪಂಗಡವಾದ 'ದೇವರ ಮಕ್ಕಳು' ಇಲ್ಲವೆ "ಕ್ಷತ್ರಿಯ ಒಕ್ಕಲು ದೇವರ ಮಕ್ಕಳು"

ಇಂದು ಸಾಮಾಜಿಕವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದುವರಿದಿದ್ದಾರೆ. ಈ ಮೇಲ್ಕಂಡ ಪ್ರದೇಶಗಳಲ್ಲಿ ಹತ್ತಾರು ಸಾವಿರ ಸಂಖ್ಯೆಯಲ್ಲಿ ಹಾಣಸಿಗುತ್ತಾರೆ. ಅರೆಮನೆನಾಡು ಪ್ರದೇಶವಾದ ಈ ಪ್ರದೇಶಗಳ ನಮ್ಮ ಈ ಉಪಪಂಗಡದೊಂದಿಗೆ ಹಳೇ ಮೈಸೂರು ಭಾಗದ ಒಕ್ಕಲಿಗರು ವೈವಾಹಿಕ ಬಾಂಧವ್ಯ ಸೇರಿದಂತೆ ಕೊಡುಕೊಳ್ಳುವ ಸಂಪರ್ಕವನ್ನು ಹೊಂದಿರಲಿಲ್ಲ. ಆದಕಾರಣ ಇಂದಿಗೂ ನೂರಿನ್ನೂರು ವರ್ಷಗಳ ಹಿಂದೆ ಶೃಂದೇರಿ ಜಗದ್ಗುರುಗಳನ್ನು (ಸಚ್ಚಿತಾನಂದ ಶಿವಾಭಿನವ ಭಾರತಿ 1879-1912) ಭೇಟಿ ಮಾಡಿ ತಮ್ಮ ಅಹವಾಲನ್ನು ಸಲ್ಲಿಸಲಾಗಿ ಅಲ್ಲಿನ ಗುರುಗಳು ಇನ್ನು ಮುಂದೆ ನೀವು "ಕ್ಷತ್ರಿಯ ಒಕ್ಕಲು ದೇವರ ಮಕ್ಕಳು" ಎಂದು ಕರೆಯಲಾಗಿ ಅಂದಿನಿಂದ ಈ ನಮ್ಮ ಉಪಪಂಗಡವು "ದೇವರ ಮಕ್ಕಳು" ಎಂದು ಕರೆಯಲ್ಪಟ್ಟರು. ಶೃಂಗೇರಿ ಪೀಠವು ಕೆಲವಾರು ಕಟ್ಟುಪಾಡುಗಳನ್ನು ಹಾಗೂ ಷರತ್ತುಗಳನ್ನು ವಿಧಿಸಿದ್ದರು.

ಕಾಲಾನಂತರ ಈ ನಮ್ಮ ಪಂಗಡದವರಿಗೆ ವಿದ್ಯೆ ಬುದ್ಧಿ ಬರಲಾಗಿ ಮಠವು ವಿಧಿಸಿದ್ಧ ಕಟ್ಟುಪಾಡುಗನ್ನು, ಷರತ್ತುಗಳನ್ನು ಅಲ್ಲಗೆಳೆಯತೊಡಗಿದರು. ಇದೇ ಸಮಯಕ್ಕೆ ಶ್ರೀ ಆದಿಚುಂಚನಗಿರಿಯ ಭೈರವೈಕ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಸನ್ನಿಧಿಗೆ ಬಂದು ಕೇಳಿಕೊಳ್ಳಲಾಗಿ ಸ್ವಾಮಿಗಳು ಆಶೀರ್ವದಿಸಿ ನೀವು ಕೂಡ ಒಕ್ಕಲಿಗರ ಒಂದು ಪಂಗಡ ನಿಮ್ಮಲ್ಲಿ ಕೀಳರಿಮೆ ಕೊಡದು ಎಂದು ಧೈರ್ಯ ತುಂಬಿದರು ಎಂದು ಪ್ರತೀತಿ. ಅಂದಿನಿಂದ ಈ ನಮ್ಮ ಉಪಪಂಗಡದಲ್ಲಿ ಜಾಗೃತಿ ಮೂಡಿ ಸಾಮಾಜಿಕವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದುವರಿದರು. ಇವರಲ್ಲಿ ಶ್ರೀ ವೈ.ಕೆ. ಪುಟ್ಟಸ್ವಾಮಿ ಗೌಡರು, ಶ್ರೀ ವೈ.ಕೆ. ಮುದ್ದುಕೃಷ್ಣ ಇವರೇ ಮುಂತಾದವರು ಇಡೀ ರಾಜ್ಯದಲ್ಲಿ ಹೆಸರು ವಾಸಿಯಾಗಿದ್ದಾರೆ.

ಈ ನಮ್ಮ ಉಪಪಂಗಡದಲ್ಲಿ ಕೆಲವರು ತಿರುಪತಿ ತಿಮ್ಮಪ್ಪನನ್ನು ಪೂಜಿಸಿದರೆ ಮತ್ತೆ ಕೆಲವರು ಶಿವನನ್ನು, ಭೈರವೇಶ್ವರನನ್ನು ಪೂಜಿಸುತ್ತಾರೆ. ದೇವರು ಒಂದೇ ನಾಮಹಲವು ಅಷ್ಟೆ ಅಲ್ಲವೆ.

ಕರೆ ಒಕ್ಕಲಿಗರು

ಒಕ್ಕಲಿಗರ ಉಪ ಪಂಗಡಗಳಲ್ಲಿ ಕರೆ ಒಕ್ಕಲಿಗರ ಪಂಗಡವೂ ಒಂದು. ಹೆಸರೇ ಸೂಚಿಸುವಂತೆ, ಕರೆ, ಕರಿ, ಕಪ್ಪು ಬಣ್ಣದ, ಬಿಳುಪಿಲ್ಲದ ಎಂಬ ಅರ್ಥಕೊಡುತ್ತದೆ. ಖರೆ = ನಿಜ, ಸತ್ಯ, ದಿಟ ಎಂಬ ಅರ್ಥಕೊಡುತ್ತದೆ. ಇವರು ಮಲೆನಾಡಿನ ಸೊರಬ, ಸಾಗರ, ತೀರ್ಥಹಳ್ಳಿ ಹಾಗೂ ಉತ್ತರ ಕನ್ನಡ ಭಾಗಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದಾರೆ. ಇವರ ಭಾಷೆ ಕನ್ನಡ, ತುಳು ಮತ್ತು ಕೊಂಕಣಿ. ಇವರ ಮುಖ್ಯಕಸಬು ವ್ಯಾವಸಾಯ, ಪಶುಸಂಗೋಪನೆ, ಕುರಿ, ಕೋಳಿ ಸಾಕಾಣಿಕೆ. ಇವರಲ್ಲಿ ಕೆಲವರು ಭೂ ಒಡೆಯರಾಗಿ

ಮತ್ತೆ ಕೆಲವರು ಗೇಣಿದಾರರಾಗಿ ಕೂಲಿ ಕಾರ್ಮಿಕರಾಗಿ ಸಾಗುವಳಿ ಮಾಡುತ್ತಾರೆ. ಆರ್ಥಿಕವಾಗಿ ಅಷ್ಟೇನು ಸಬಲರಲ್ಲ ತಮ್ಮದೇ ಆದ ಸಂಪ್ರದಾಯಕ್ಕೆ ಕಟ್ಟು ಬಿದ್ದಿದ್ದಾರೆ. ಇವರಲ್ಲಿ ಗೋತ್ರಗಳು ಇಲ್ಲವೆ ಬಳಿಗಳಿವೆ. ಅವುಗಳಲ್ಲಿ ಕೆಲವನ್ನು ಹೆಸರಿಸುವುದಾದರೆ ಅರಿಶಿನ ಬಳಿ, ಚೆಂಡಿ ಬಳಿ, ಹೊನ್ನೆ ಬಳಿ, ಶೆಟ್ಟಿ ಬಳಿ, ಮಿಗಬಳಿ, ವಡಕನ ಬಳಿ ಹೀಗೆ ತಾವು ಬಳಸುವ ವಸ್ತುಗಳು ಗಿಡಮರ ಬಳ್ಳಿಗಳನ್ನು ಗೋತ್ರಗಳನ್ನಾಗಿರಿಸಿ ಕೊಂಡಿದ್ದಾರೆ. ಸ್ವಗೊತ್ರದಲ್ಲಿ ಮದುವೆ ಮುಂಜಿಗೆ ಅವಕಾಶವಿರುವುದಿಲ್ಲ. ಇದೇ ಮಲೆನಾಡು ಪ್ರದೇಶದಲ್ಲಿರುವ ಅಟ್ಟೆ ಒಕ್ಕಲಿಗರಿಗಿಂತಲೂ ಪ್ರಾಬಲ್ಯದಲ್ಲಿ ಕಮ್ಮಿ ಎಂದೇಳಬಹುದು. ಭೂತಾರಾಧನ, ಶಕ್ತಿದೇವತೆಗಳು ಹಾಗೂ ಶಕ್ತಿ ಅಧಿದೇವತೆಗಳನ್ನು ಅಂದರೆ ಭದ್ರಕಾಳಿ, ದುರ್ಗೆ, ಮಹಾಕಾಳಿಯನ್ನು ಪೂಜಿಸುತ್ತಾರೆ.

ಸಂಘ ಜೀವಿಗಳಾದ ಕರೆ ಒಕ್ಕಲಿಗರಲ್ಲಿಯೂ ತಂಟೆ, ತಕರಾರು, ಭೂ ಒತ್ತುವರಿ, ಕಳ್ಳತನ, ಕೊಲೆ ಸುಲಿಗೆ, ಗೋಗ್ರಹಣ ಇವೇ ಮುಂತಾದ ಸಮಸ್ಯೆಗಳು ಎದುರಾದರೆ ಅವುಗಳನ್ನು ಬಗೆಹರಿಸಲು ಕಟ್ಟೆಮನೆಗಳಿವೆ. ಇವರಲ್ಲಿ ಮಾರುಕಟ್ಟೆ ಮನೆಗಳಿವೆ. 1. ಗುಟ್ಟೆ ಸೀಮೆಕಟ್ಟೆ; 2. ಸೊರಬ ಸೀಮೆಕಟ್ಟೆ; 3. ಬಲಿಜ ಸೀಮೆಕಟ್ಟೆ.

ಪ್ರತಿ ಕಟ್ಟೆ ಮನೆಯು "ಗೌಡ" ಎಂಬ ಪದನಾಮ ಹೊಂದಿರುವವನ ಅಧ್ಯಕ್ಷತೆಯಲ್ಲಿ ನ್ಯಾಯ ತೀರ್ಮಾನವಾಗುತ್ತಿತ್ತು. ಪ್ರತಿ ಹಳ್ಳಿಗಳ ಯಜಮಾನನನ್ನು "ಬುಧವಂತ" ಎಂಬ ಪದನಾಮವನ್ನು ಹೊಂದಿದ ವ್ಯಕ್ತಿಯು ಹಳ್ಳಿಯ ಹಾಗೂ ಹೋಗುಗಳನ್ನು ತಂಟೆ ತಕರಾರುಗಳನ್ನು ಪರಿಹರಿಸುತ್ತಿದ್ದನು. ಜಟಿಲವಾಗಿದ್ದರೆ ತನ್ನ ಮೇಲಧಿಕಾರಿಯಾದ ಗೌಡನಿಗೆ ತಿಳಿಸುತ್ತಿದ್ದನು. ಅನಗತ್ಯವಾಗಿ ಇಂದಿನಂತೆ ಕೋರ್ಟು, ಕಛೇರಿಗಳಿಗೆ ಎಡೆ ತಾಕುತ್ತಿರಲಿಲ್ಲ (ಇಂದು ಶಿಕ್ಷಣ, ನಾಗರಿಕತೆ, ಆರ್ಥಿಕವಾಗಿ ಮುಂದುವರಿದಿರುವುದರಿಂದ ಇಂದು ಮೇಲಿನದೆಲ್ಲ ಗೌಣವಾಗಿದೆ. ಹಿಂದೆ ಮಲೆನಾಡು ಪ್ರದೇಶದಲ್ಲಿ ಅತ್ಯಧಿಕ ಮಳೆ, ಉತ್ತಮವಾದ ರಸ್ತೆಗಳ ಕೊರತೆ, ಸರ್ಕಾರಿ ಶಾಲಾ ಕಾಲೇಜುಗಳ ಅಲಭ್ಯತೆಯಿಂದಾಗಿ ಶಿಕ್ಷಣಕ್ಕಿದ್ದ ಕೊರತೆ ಇದ್ದಿತು. ಇಂದು ಕಾಲ ಬದಲಾಗಿದೆ. ಇವರಲ್ಲಿ ಸಾಕಷ್ಟು ಜನ ತಮ್ಮ ಹಳ್ಳಿಯ ಪರಂಪರೆಯನ್ನು ಗಾಳಿಗೆ ತೂರಿದ್ದಾರೆ. ಎಲ್ಲಕಡೆ ಬದಲಾವಣೆಯ ಗಾಳಿ ಬೀಸುತ್ತಿದೆ. ಮೇಲಿನದೆಲ್ಲ ಇಂದು ಇತಿಹಾಸವಾಗಿದೆ.

ಕೊಟ್ಟೆ ಒಕ್ಕಲಿಗರು

ಶಿವಮೊಗ್ಗ ಜಿಲ್ಲೆಯ ಸೊರಬ, ಸಾಗರ, ಶಿವಮೊಗ್ಗ ಪ್ರದೇಶಗಳಲ್ಲಿ ಹೆಚ್ಚಾಗಿ ಹವ್ಯಕರು, ದೀವರು (ಈಡಿಗ) ಸಮುದಾಯದಜನರು ವಾಸಿಸುತ್ತಿರುವ ಪ್ರದೇಶ. ಇಲ್ಲಿ 15 ರಿಂದ 20 ಸಾವಿರ ಜನಸಂಖ್ಯೆ ಇರುವ ಕೊಟ್ಟೆ ಒಕ್ಕಲಿಗರು ಇಲ್ಲಿ ಅಲ್ಪಸಂಖ್ಯಾತರಾಗಿ ನೆಲೆಸಿದ್ದಾರೆ. 1935ರಲ್ಲಿ ಸಂಶೋಧಕರಾದ ಅನಂತಕೃಷ್ಣ ಅಯ್ಯರ್

ಮತ್ತು ಶ್ರೀನಿವಾಸಮೂರ್ತಿರವರು ತಮ್ಮ "Mysore tribes and castes" ಎಂಬ ಸಂಶೋಧನಾತ್ಮಕ ಕೃತಿಯಲ್ಲಿ ಕೊಟ್ಟೆ ಒಕ್ಕಲಿಗರು ಮತ್ತು ಕರೆ ಒಕ್ಕಲಿಗರು ಅಡಿಕೆ ಗೊನೆಗಳಿಗೆ ಬರುವ ಕೊಳೆರೋಗ ಬರದಂತೆ ಮಾಡಲು ಅಡಿಕೆ ಮರದ ಹಾಳೆಯನ್ನು ಕೊಟ್ಟೆಯನ್ನಾಗಿ ಮಾಡಿ ಅಡಿಕೆಗೊನೆಗಳಿಗೆ ಕಟ್ಟುವ ಕಾಯಕ ಮಾಡುತ್ತಿದ್ದ ಕಾರಣ ಇವರನ್ನು ಕೊಟ್ಟೆಯವರು, ಕೊಟ್ಟೆ ಕಟ್ಟುವವರು, ಕೊಟ್ಟೆ ಒಕ್ಕಲಿಗರು ಎಂದು ಕರೆದಿರಬಹುದು ಎಂದು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಶಿರ್ಸಿ, ಸಿದ್ಧಾಪುರಗಳಲ್ಲಿ ನೆಲೆಸಿರುವ ಕೊಟ್ಟೆ ಒಕ್ಕಲಿಗರಾದ ಇವರು ತಾವು ಕರಾವಳಿ ಪ್ರದೇಶದಿಂದ ಮಲೆನಾಡಿನ ಪ್ರದೇಶಕ್ಕೆ ಬಂದ ಗ್ರಾಮ ಒಕ್ಕಲಿಗರೆಂದು ಹೇಳಿಕೊಳ್ಳುತ್ತಾರೆ.

ಇಂದು ಪ್ರಮುಖವಾಗಿ ಮೇಲೆ ಹೇಳಿದ ಎರಡು ತಾಲ್ಲೂಕುಗಳಲ್ಲಿ ಸರಿ ಸುಮಾರು 15 ರಿಂದ 20 ಸಾವಿರ ಜನಸಂಖ್ಯೆಯಿದೆ. ಇವರ ಪೂರ್ವೋತಿಹಾಸವನ್ನು ನೋಡುವುದಾದರೆ ಕೆಳದಿಯ ಸಂಸ್ಥಾಪನದ ಮೂಲ ಪುರುಷ ಚೌಡಗೌಡನು ಕೊಟ್ಟೆ ಒಕ್ಕಲಿಗನಾಗಿದ್ದ ಎಂದು ಹೇಳುತ್ತಾರೆ. ಈ ಸಮುದಾಯದ ಜನ ಹಿಂದೊಮ್ಮೆ ಅವಿಭಕ್ತ ಕುಟುಂಬಗಳು ಹೆಚ್ಚಾಗಿದ್ದು ಸಾಕಷ್ಟು ಆಸ್ತಿ-ಪಾಸ್ತಿ ಇದ್ದಿತು. ಬದಲಾದ ಪರಿಸ್ಥಿತಿಯಿಂದಾಗಿ ಅವರಲ್ಲಿ ಕೆಲವರು ಭೂಮಾಲಿಕರಾಗಿ, ಗೇಣಿದಾರರಾಗಿ, ಕೃಷಿ ಕಾರ್ಮಿಕರಾಗಿ, ವ್ಯಾಪಾರ ವಾಣಿಜ್ಯ, ಸರ್ಕಾರಿ ಇಲ್ಲವೆ ಖಾಸಗಿ ಕಂಪನಿಗಳಲ್ಲಿ ಉದ್ಯೋಗ, ಉದ್ಯಮ ಮಾಡುತ್ತಿದ್ದಾರೆ. ಹಿಂದೊಮ್ಮೆ ಅನುಕೂಲಸ್ಥರಾದ ಇವರಲ್ಲಿ ಅಪ್ಪಣ್ಣಗೌಡ (ಮತ್ತಿಬಾವಿಯ) ಎಂಬುವವರು ಈಶ್ವರ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದರು. ಸಂಪೇಕೈರಾಮಗೌಡರು 10 ಗುಂಟೆ ತೋಟವನ್ನು ಹೆಗ್ಗೋಡು ಗಣಪತಿ ದೇಗುಲಕ್ಕೆ ದೇಣಿಯಾಗಿ ಕೊಟ್ಟಿದ್ದು, ತುಂಬೆಯ ಗಣಪಗೌಡರು ಒಂದು ಎಕರೆ ತರಿ ಜಮೀನನ್ನು ಹಾಗೂ ಅಡ್ಡೇರಿಯ ಮಾಣಿಗೌಡರು ಒಂದು ಎಕರೆ ತರಿ ಜಮೀನನ್ನು ತಮ್ಮ ಊರಿನ ಶಾಲೆಗಳಿಗೆ ಭೂದಾನ ಮಾಡಿದ್ದನ್ನು ಮತ್ತೆ ಜಿಗಳೇ ಮನೆ ದ್ಯಾವೇಗೌಡರು ನಾರುಗೋಡು – ಕೊಪ್ಪಕ್ಕೆ ಹೋಗುವ ರಸ್ತೆಗಾಗಿ ಒಂದು ಎಕರೆ ಜಮೀನನ್ನು ಉಚಿತವಾಗಿ ನೀಡಿದ ಬಗ್ಗೆ ಇಲ್ಲಿ ನೆನೆಯಬಹುದು.

ಕೊಟ್ಟೆ ಒಕ್ಕಲಿಗರು ಇಲ್ಲವೆ ಕೊಟ್ಟೆ ಗೌಡ್ರು ಬಲು ಸಂಪ್ರದಾಯಸ್ಥರು. ಹಿಂದೂ ಧರ್ಮದ ಕಟ್ಟು ಕಟ್ಟಳೆ, ನೀತಿ ನಡಾವಳಿಕೆಗಳನ್ನು ಚಾಚು ತಪ್ಪದೆ ಪಾಲಿಸುತ್ತಾರೆ. ಇವರಲ್ಲಿ ಗೋತ್ರಗಳು ಇಲ್ಲವೆ ಬಳಿಗಳು ಬಳಕೆಯಲ್ಲಿವೆ. ಅವುಗಳಲ್ಲಿ – ತೋಳನಬಳಿ, ಹಡಲಗಿಬಳಿ, ವಜ್ರಬಳಿ, ಬಾಳೆ ಬಳಿ, ಅರಿಶಿನ ಬಳಿ, ಹೊನ್ನೆ ಬಳಿ, ಶೆಟ್ಟಿ ಬಳಿ, ಹೊಳೆ ಬಳಿ, ಚಂದಿರನ ಬಳಿ ಇವೇ ಮುಂತಾದವು. ಈ ಮೇಲ್ಕಂಡ ಬಳಿಗಳು ತಾವು ಬಳಸುತ್ತಿರುವ ದವಸ ದಾನ್ಯ, ಪ್ರಕೃತಿ, ಪ್ರಾಣಿ, ಪಕ್ಷಿ ಇವೇ ಮುಂತಾದವು. ಸ್ವಗೋತ್ರ ಹಾಗೂ ಸೋದರಗೋತ್ರದಲ್ಲಿ ಮದುವೆ ನಿಷಿದ್ದ. ಧರ್ಮಸ್ಥಳದ ಶ್ರೀ

ಮಂಜುನಾಥಸ್ವಾಮಿ, ಶಿಕಾರಿಪುರದ ಹುಚ್ಚರಾಯ ಸ್ವಾಮಿ (ಆಂಜನೇಯ) ಹೊಸನಗರದ–ಅಮ್ಮನಘಟ್ಟದ ಜೇನುಕಲ್ಲಮ್ಮ ಇವೇ ಮುಂತಾದ ದೇವರುಗಳೇ ಅಲ್ಲದೆ ಭೂತ, ಚೌಡಿ, ಯಕ್ಷಿ, ಜಟ್ಟಿಗ ಹುಲಿದೇವರು ನಾಗರಕಲ್ಲನ್ನೂ ಕೂಡ ಪೂಜಿಸುತ್ತಾರೆ. ಉಳಿದಂತೆ ಹಿಂದೂ ಹಬ್ಬ–ಹರಿದಿನಗಳಾದ ದೀಪಾವಳಿ, ಶಿವರಾತ್ರಿ, ಸಂಕ್ರಾಂತಿ ಆಚರಿಸುತ್ತಾರೆ. ಈ ಹಬ್ಬಗಳೇ ಅಲ್ಲದೆ ವಿಶೇಷವಾಗಿ ಗೌರಿಹಬ್ಬವನ್ನು ಆಚರಿಸಿ ಸಂಭ್ರಮಿಸುತ್ತಾರೆ. ಆ ದಿನ ಪಿತೃಗಳಿಗೆ ತರ್ಪಣ ನೀಡುವುದು ಎಡೆ ಇಡುವುದು ಮಾಡುತ್ತಾರೆ. ಕೊಟ್ಟೆ ಒಕ್ಕಲಿಗರಿಗೂ ತುಳಸಿಕಟ್ಟೆಗೂ ಅವಿನಾಭಾವ ಸಂಬಂಧವಿದೆ. ಇವರ ಪ್ರತಿಯೊಂದು ಮನೆಯಲ್ಲೂ ತುಳಸಿ ಕಟ್ಟೆ ಇರುತ್ತದೆ. ಕುಟುಂಬದ ಸದಸ್ಯರು ಬೆಳಿಗ್ಗೆ ಏಳುತ್ತಲೆ ಕೈಕಾಲು–ಮುಖ ತೊಳೆದು ತುಳಸಿಗೆ ನೀರು ಹಾಕಿ ಕೈಮುಗಿದು ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಅರಿದ್ರೆ ಮಳೆ ಹಬ್ಬ, ಗದ್ದೆ ಕೊಯ್ಲಿನ ನಂತರ ಹೊಸ ಅಕ್ಕಿ ಹಬ್ಬ, ಕಣದ ಹಬ್ಬ, ಹೊಳೆ ಹಬ್ಬ, ಮಾರೀ ಹಬ್ಬವನ್ನು ಆಚರಿಸುತ್ತಾರೆ. ಇವರ ಮದುವೆಯ ಒಂದು ವಿಶೇಷವೆಂದರೆ ಧಾರೆಯ ಸಮಯದಲ್ಲಿ ಗಂಡಿನ ತಾಯಿ ಮಗನ ಮದುವೆಯನ್ನು ನೋಡುವುದು ನಿಷಿದ್ದ. ತಾಯಿಯು ಮಗನ ಮದುವೆಯ ದಿಬ್ಬಣದೊಡನೆ ಬಾರದೇ ಮನೆಯಲ್ಲಿಯೇ ಇರುತ್ತಾಳೆ. (ಬಹುಷಃ ಇದು ಬೇರೆಡೆ ಇಲ್ಲವೆಂದು ಭಾವಿಸಿದ್ದೇನೆ). ಹಿಂದೊಮ್ಮೆ ಮದುವೆಗೆ ವಧು ದೊರಕದೆ ಇದ್ದ ಕಾರಣವೇನೂ ವಧುದಕ್ಷಿಣೆ ನೀಡುತ್ತಿದ್ದ ಉದಾಹರಣೆ ಇದೆ. ಇಂದಿಗೂ ಶಾಸ್ತ್ರಕ್ಕೆ ವಧುವಿಗೆ ತೆರ (ಕನ್ಯಾ ಶುಲ್ಕ) ನೀಡುತ್ತಾರೆ. ಇಷ್ಟೇ ಅಲ್ಲದೆ ಮತ್ತೊಂದು ವಿಶೇಷವೆಂದರೆ ತಾವು ಸಾಕಿದ ಹಂದಿಯನ್ನು ಇಲ್ಲವೆ ಊರ ಹಂದಿಯ ಮಾಂಸವನ್ನು ತಿನ್ನುವುದು ನಿಷೇದವಿದೆ. ಶನಿವಾರ, ಸೋಮವಾರ ಮಾಂಸ ಮಾಡಿ ತಿನ್ನುವುದಿಲ್ಲ.

ಸ್ವಾತಂತ್ರ್ಯನಂತರ ಭೂಸುಧಾರಣೆ, ಉಳುವವನಿಗೆ ಭೂಮಿ ಇವೇ ಮುಂತಾದ ಕಾನೂನುಗಳಿಂದಾಗಿ ಕೆಲವಾರು ಜಮೀನ್ದಾರರು ಭೂಮಿಯನ್ನು ಕಳೆದುಕೊಂಡರು. ಸಣ್ಣ ಹಿಡುವಳಿದಾರರಾಗ ಬೇಕಾಯಿತು. ಇಂದು ಸಾಕಷ್ಟು ಜನ ಸಣ್ಣ ಇಡುವಳಿದಾರರಾಗಿ, ಗೇಣಿದಾರರಾಗಿ, ಕೂಲಿ ಕಾರ್ಮಿಕರಾಗಿ ಜೀವನ ಸಾಗಿಸುತ್ತಿದ್ದಾರೆ. ಸರ್ಕಾರವು ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಲಿಂಗಮನಕ್ಕಿಯಲ್ಲಿ ಪ್ರಾರಂಭಿಸಿತು. ಹಲವಾರು ಜನ ರೈತರು ತಮ್ಮ ಹೊಲ ಮನೆಗಳನ್ನು ಕಳೆದು ಕೊಂಡರು. ಪುನರ್ವಸತಿಯ ಹೆಸರಿನಲ್ಲಿ ಸರ್ಕಾರವು ಕೊಟ್ಟ ಹಣದಿಂದ ಮನೆಕಟ್ಟಿಕೊಳ್ಳಲು ವ್ಯಯವಾಯಿತು. ಸರ್ಕಾರ ಕೊಟ್ಟ ಬರಡು ಭೂಮಿಯನ್ನು ಹಸನುಮಾಡುವಲ್ಲಿ ಕೆಲ ರೈತರು ತಮ್ಮ ಕೈಲಿದ್ದ ಹಣವನ್ನು ಖರ್ಚುಮಾಡಿ ಬರಿಕೈ ಮಾಡಿಕೊಂಡರು. ಆದಿ ಚುಂಚನಗಿರಿಯ ಶ್ರೀ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮಿಗಳು ಈ ಸಮಾಜವನ್ನು ಉದ್ಧರಿಸಲು ಸಾಕಷ್ಟು ಶ್ರಮಿಸುತ್ತಿದ್ದಾರೆ.

ಜನಸಂಖ್ಯೆಯಲ್ಲಿ ಅಲ್ಪಸಂಖ್ಯಾತರಾದ ಇವರು ತಮ್ಮತನವನ್ನು ಉಳಿಸಿಕೊಳ್ಳ –ಬೇಕೆಂಬ ಕಾರಣದಿಂದ 1980ರಲ್ಲಿ ಮತ್ತಿ ಬಾವಿ ಶ್ರೀ ವೆಂಕಪ್ಪಗೌಡರ ನೇತೃತ್ವದ ಹತ್ತು ಮಂದಿ ಸ್ನೇಹಿತರು ಸೇರಿ "ಸಾಗರ ಪ್ರಾಂತ್ಯ ಒಕ್ಕಲಿಗರ ಸಂಘ" ಎಂಬ ಸಂಘ ಸ್ಥಾಪಿಸಿ 1995ರ ತನಕ ಕಾರ್ಯನಿರ್ವಹಿಸಿದರು. ಆ ನಂತರ ಕಡೆಮನೆ ರಾಮಚಂದ್ರರವರು ಸಂಘವನ್ನು ಅಭಿವೃದ್ಧಿ ಪಥದತ್ತ ಕೊಂಡ್ಯೈದರು. 1995ರಿಂದ ಇಲ್ಲಿಯ ತನಕ ಶ್ರೀಗುಂಡಪ್ಪ ಗೌಡರು ಗೌರವ ಅಧ್ಯಕ್ಷರಾಗಿಯು ಶ್ರೀ ಬಸವರಾಜ್ –ರವರು ಗೌ॥ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನಿವೃತ್ತ ಹೊಸನಗರದ ನಿವಾಸಿಗಳಾದ ಸಹಾಯಕ ಕೃಷಿ ಅಧಿಕಾರಿ ಹ. ಮಹಾಬಲರವರು ನಾನು ಕ್ಷೇತ್ರಕಾರ್ಯ ಮಾಡಿದಾಗ ಈ ಎಲ್ಲಾ ಮಾಹಿತಿ ನೀಡಿದರು. ಶ್ರೀಯುತರು ಇಂದಿಗೆ ಸುಮಾರು 27 ವರ್ಷಗಳ ಹಿಂದೆ (1995) ಹೊಸನಗರದಲ್ಲಿ ನಡೆದ "ಒಕ್ಕಲಿಗರ ಭವನ" ಉದ್ಘಾಟನೆಯ ಬೃಹತ್ ಸಭೆಯಲ್ಲಿ ಕೊಟ್ಟೆ ಒಕ್ಕಲಿಗರ ಸಂಕ್ಷಿಪ. ಇತಿಹಾಸವನ್ನು ಸಂಶೋಧನೆ ಮಾಡಿ ಮಂಡಿಸಿದ ಲೇಖನವನ್ನು ನನಗೆ ನೀಡಿದರು. ನಾನು ಶ್ರೀ ಹ. ಮಹಾಬಲರವರಿಗೆ ಅಭಾರಿಯಾಗಿದ್ದೇನೆ.

ನಾಡಗೌಡ / ನಾಡಗೌಡರು

ಒಕ್ಕಲಿಗರ ಉಪ ಪಂಗಡಗಳಲ್ಲಿ ಒಂದಾದ ನಾಡಗೌಡರು **ಮಲೆನಾಡಿನ ಶಿವಮೊಗ್ಗ, ತೀರ್ಥಹಳ್ಳಿ, ಕೊಪ್ಪ ಶೃಂಗೇರಿ** ಸೇರಿದಂತೆ ಕರಾವಳಿ ತೀರದವರೆಗೂ ನೆಲೆಸಿದ್ದಾರೆ. ಈ ಪಂಗಡದ ಹೆಸರಿನಲ್ಲೆ ಒಂದು ವಿಧವಾದ ಅಧಿಕಾರಷಾಹಿ ಇಲ್ಲವೆ ಹಂತಸ್ತಿನ ಗಮ್ಮತ್ತು ಇದೆ. ಬಹುಷಃ ಈ ನಾಡಗೌಡರು ವಿಜಯನಗರ ಕಾಲದಲ್ಲಿ ಊರಿನ ಅಧಿಕಾರಿ ಇಲ್ಲವೆ ಆಡಳಿತಾಧಿಕಾರಿಯಾಗಿದ್ದಿರಬಹುದು. ಈ ಪಂಗಡದವರು ತಮ್ಮ ಹೆಸರಿನ ಮುಂದೆ 'ಗೌಡ' ಎಂದು ಸೇರಿಸಿಕೊಂಡಿರುತ್ತಾರೆ. ವ್ಯವಸಾಯ ಮತ್ತು ಪಶುಸಂಗೋಪನೆಯೇ ಇವರ ಮುಖ್ಯಕಸುಬಾಗಿತ್ತು. ಇವರಲ್ಲಿ ಕೆಲವರು ಭೂ ಒಡೆಯರಾಗಿ ಮತ್ತೆ ಕೆಲವರು ಗೇಣಿದಾರರಾಗಿ ಮತ್ತೆ ಕೆಲವರು ಶಿಕ್ಷಣ ಪಡೆದು ಉದ್ಯೋಗ, ಉದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಂದಿಗೂ ತಮ್ಮ ಗತ್ತು ಗಮ್ಮತ್ತನ್ನು ಹೊಂದಿದ್ದಾರೆ.

ಇವರು ಸ್ಥಳೀಯ ಭಾಷೆ ತುಳು, ಕನ್ನಡ, ಅರೆಭಾಷೆ ಮಾತನಾಡುತ್ತಾರೆ. ಇವರಲ್ಲಿ ಹಿಂದೆ ಅಳಿಯ ಸಂತಾನ ರೂಢಿಯಲ್ಲಿತ್ತು ಕ್ರಮೇಣ ಕಡಿಮೆಯಾಗಿದೆ. ಬಹಳ ವರ್ಷಗಳ ಹಿಂದೆ ಬಾಲ್ಯವಿವಾಹ, ಶಿಕ್ಷಣಕ್ಕೆ ಒತ್ತು ಕೊಡದಿರುವುದು ಹೇರಳವಾಗಿತ್ತು. ಕಾಲಸರಿದಂತೆ ಇವು ಕಡಿಮೆಯಾಗಿದೆ. ಇವರಲ್ಲಿ 20 ಬೆಡಗುಗಳು ಇಲ್ಲವೆ ಗೋತ್ರಗಳು ಅಥವಾ ಬಳಿಗಳಿವೆ. ಅವುಗಳಲ್ಲಿ ಬಂಗಾರನ್ನಾಯ, ಉಪ್ಪರನ್ನಯ, ಸಾಲಬನ್ನಯ್ಯ, ತಲರ ಬನ್ನಯ್ಯ, ಇವೇ ಮುಂತಾದವುಗಳು. ಸ್ವಗೋತ್ರದಲ್ಲಿ ವಿವಾಹ

ನಿಷಿದ್ದ. ಸ್ವಗೋತ್ರ ಮತ್ತು ಸೋದರ ಗೋತ್ರಕ್ಕೆ ಮಾನ್ಯತೆ ನೀಡುತ್ತಾರೆ. ಬಲು ಸಂಪ್ರದಾಯಸ್ಥರು. ಮನೆ ಮಗ ಸಾಮಾನ್ಯವಾಗಿ ತನ್ನ ತಾಯಿಯ ಗೋತ್ರವನ್ನು ಅನುಸರಿಸುತ್ತಾನೆ. ತಂದೆಯ ಗೋತ್ರವನ್ನಲ್ಲ. ಇದರ ಮೇಲೆ ಕೇರಳದ ನಾಯರ್‌ಗಳ (ಕೇರಳದ ಒಕ್ಕಲಿಗರು) ಸಂಪ್ರದಾಯ, ನಡವಳಿಕೆ ಪ್ರಭಾವ ಬೀರಿದೆ. ಆಧುನಿಕ ಶಿಕ್ಷಣ, ನಾಗರಿಕತೆಯ ಪ್ರಭಾವ ಬೀರಲಾಗಿದೆ. ಇವರಲ್ಲಿ ಸಾಕಷ್ಟು ಜನ ಉತ್ತಮ ಶಿಕ್ಷಣ ಪಡೆದು ಮೈಸೂರು, ಬೆಂಗಳೂರು, ಮಂಗಳೂರು ಸೇರಿದಂತೆ ಬೇರೆ ಬೇರೆ ರಾಜ್ಯಗಳಲ್ಲಿ ಹೊರ ರಾಷ್ಟ್ರಗಳಲ್ಲಿ ಉದ್ಯೋಗ ಹಾಗೂ ಉದ್ಯಮ ನಡೆಸುತ್ತಿದ್ದಾರೆ. ನಾಡುಗೌಡ ಎಂಬ ಈ ಸಮುದಾಯವನ್ನು ನಾಡವರೂ ಎಂತಲೂ ಕರೆಯುತ್ತಾರೆ. ನಾಡಗೌಡರು ನಾಡವ ಸಮುದಾಯದ ಉಪಜಾತಿಯೇ ಆಗಿದ್ದಾರೆ. (ಎಚ್.ವಿ. ನಂಜುಂಡಯ್ಯ ಮೈಸುರು ಟ್ರೈಬ್ಸ್ ಅಂಡ್ ಕ್ಯಾಸ್ಟ್) ದಕ್ಷಿಣ ಕನ್ನಡದ 'ಬಂಟ'ರೆಲ್ಲ ನಾಡವರೇ. ಕ್ರಿ.ಶ.16ನೇ ಶತಮಾನದಲ್ಲಿ ಆಳುತ್ತಿದ್ದ ವೆಂಕಟಪ್ಪ ನಾಯಕನಿಗೆ ಸೇನಾನಾಯಕರಾಗಿದ್ದರು. ರಾಜನ ನಂಬುಗೆಯ ಬಂಟರಾಗಿದ್ದರು (Souvenir of the Bunts) ಎಂದು ಇತಿಹಾಸ ತಿಳಿಸುತ್ತದೆ.

ಹಾಲಕ್ಕಿ ಒಕ್ಕಲಿಗರು

ಒಕ್ಕಲಿಗರ ಉಪಪಂಗಡಗಳಲ್ಲಿ ಒಂದಾದ ಜಾತಿ ಇಲ್ಲವೆ ಸಮುದಾಯ–ವೆಂದರೆ ಹಾಲಕ್ಕಿ ಒಕ್ಕಲಿಗರು.ಇವರು ಕುಮುಟ, ಅಂಕೋಲ, ಸಿರಸಿ, ಸಿದ್ದಾಪುರ –ದಿಂದ ಹಿಡಿದು ದಕ್ಷಿಣದ ಕಾರವಾರ ಕಡಲ ತೀರದವರೆಗೆ ನೆಲೆಸಿದ್ದಾರೆ. ಇವರ ಮುಖ್ಯ ಕಸುಬು ವ್ಯವಸಾಯ."ಹಾಲಕ್ಕಿ" ಎಂಬ ಹೆಸರಿನ ನೆಲೆ ಮತ್ತು ಹಿನ್ನೆಲೆಯನ್ನು ನೋಡುವುದಾದರೆ. ಶಿವನು ಬಂದು ಭಿಕ್ಷೆ ಕೇಳಿದಾಗ ಅವನಿಗೆ ಹಾಲು ಮತ್ತು ಅಕ್ಕಿಯನ್ನು ನೀಡಲಾಗಿ ಇವರಿಗೆ ಹಾಲಕ್ಕಿ ಒಕ್ಕಲಿಗರು ಎಂದು ಹೆಸರು ಬಂತೆಂದು ಪೌರಾಣಿಕ ಕಥೆಯನ್ನು ಹೇಳುತ್ತಾರೆ. ದಕ್ಷಿಣ ಭಾಗದ ಹವ್ಯಾಕ ಬ್ರಾಹ್ಮಣರ ಮದುವೆ, ಮುಂಜಿ ಇವೇ ಮುಂತಾದ ಶುಭ ಸಮಾರಂಭಗಳಲ್ಲಿ ಹಾಲು ಮತ್ತು ಅಕ್ಕಿಯನ್ನು ಎರಚಿ ಶುಭ ಕೋರುತ್ತಿದ್ದ ಕಾರಣ ಇವರಿಗೆ "ಹಾಲಕ್ಕಿ ಒಕ್ಕಲಿಗರು" ಎಂಬ ಹೆಸರು ಬಂತೆಂದು ಮತ್ತೊಂದು ಪ್ರತೀತಿ. ಈ ಜನರು ಚಿಕ್ಕ ಬಾಲಕರಂತೆ ಮುಗ್ದರು ವಿದ್ಯೆಗೆ ವಿಮುಖರಾಗಿ ಕಾಯಕದಲ್ಲೇ ಕೈಲಾಸ ಕಾಣುತ್ತಾರೆ. ಪ್ರಕೃತಿಯೊಂದಿಗೆ ಹೆಚ್ಚು ಒಡನಾಟವಿದೆ. ಕಾಡಿನ ಮಂಗಗಳು, ತೋಳ, ಕುರಿ, ಕೋಳಿ, ಹಂದಿಗಳೊಂದಿಗೆ ಇವರು ಸಹಬಾಳ್ವೆ ನಡೆಸುತ್ತಾರೆ. ವಂಚನೆ, ಮೋಸ, ಕಪಟವಿಲ್ಲ. ಇವರು ಬೇಸಾಯಗಾರರಾದರೂ ಕೂಡ ಬಹಳ ಹಿಂದೆ ಕುಂಬ್ರಿ ಬೇಸಾಯ ಮಾಡುತ್ತಿದ್ದರು. ಕುಂಬ್ರಿ ಬೇಸಾಯ ಎಂದರೆ ಕಾಡಿನಲ್ಲಿರುವ ಮರಗಿಡಗಳನ್ನು ಕತ್ತರಿಸಿ ಭೂಮಿಯನ್ನು ಉತ್ತು, ಕಡಿದ ಗಿಡಮರಗಳನ್ನು ಹೂತು ಹಾಕಿ ನಂತರ ಬೇಸಾಯ ಮಾಡುವುದು. ಮಳೆಯ ಸಹಾಯದಿಂದಲೇ ಭತ್ತ ಬೆಳೆಯುತ್ತಿದ್ದರು. ಮೂರು–ನಾಲ್ಕು ವರ್ಷ ಬೆಳೆ

ತೆಗೆದ ನಂತರ ಭೂಮಿ ಬರಡಾಯಿತು ಎಂದು ಹೇಳಿ ಮತ್ತೊಂದು ಕಡೆಗೆ ವಲಸೆ ಹೋಗಿ ಮತ್ತೆ ಅಲ್ಲಿಯೂ ಮರಗಿಡಗಳನ್ನು ಕತ್ತರಿಸುತ್ತಿದ್ದರು. 1885ರಲ್ಲಿ ಬ್ರಿಟೀಷರು ಇವರ ಕುಂಬ್ರಿ ಬೇಸಾಯವನ್ನು ನಿಷೇದಿಸಿದರು. ಕಾರಣವೇನೆಂದರೆ ಕಾಡು ಹಾಗೂ ಪರಿಸರ ನಾಶವಾಗುತ್ತದೆ ಎಂದು. ಆನಂತರದ ಕಾಲದಲ್ಲಿ ಸಮುದ್ರ ತೀರದ ಪ್ರದೇಶದಲ್ಲಿ ನೆಲೆನಿಂತು ಭೂ ಒಡೆಯರ ಒಕ್ಕಲಾಗಿ ನಿಂತರು. ಭತ್ತ ಬೆಳೆಯುವುದರಲ್ಲಿ ನಿಸ್ಸೀಮರು. 1872ರ ಜನಗಣತಿಯ ಪ್ರಕಾರ ಕೇವಲ 26 ಸಾವಿರ, 1975ರ ಹಿಂದುಳಿದ ವರ್ಗಗಳ ಆಯೋಗದ ಪ್ರಕಾರ 45 ಸಾವಿರ, ಇವರ ನಾಯಕ ಕೆ.ಜಿ. ಗೌಡರ ಪ್ರಕಾರ 68 ಸಾವಿರಕ್ಕೂ ಅಧಿಕ. ಕಟ್ಟು ಮಸ್ತಾದ ಜನ ಇವರು, ಖಾಯಿಲೆ ಕಸಾಲೆಗಳಿಂದ ದೂರ. ಇವರಲ್ಲಿ ಕೆಲವರು ಕಾಡಿನಲ್ಲಿ ಸಿಗುವ ಗೆಡ್ಡೆ, ಗೆಣಸು, ಪತ್ರೆ, ನಾರು, ಬೇರುಗಳಿಂದು ನಾಟಿ ಔಷದಿ ತಯಾರಿಸುತ್ತಾರೆ. ಇವರು ತಯಾರಿಸಿ ನೀಡಿದ ಕೆಲವು ಔಷಧಿಗಳು ಕೆಲವು ಪೂರಕ ರೋಗಗಳನ್ನು ವಾಸಿ ಮಾಡಲಾಗಿ ಕೆಲವು ವರ್ಷಗಳ ಹಿಂದೆ ಐರ್ಲೆಂಡಿನ ತಜ್ಞ ವೈದ್ಯರ ತಂಡ ಇವರಲ್ಲಿಗೆ ಬಂದು ಅಧ್ಯಯನ ನಡೆಸಿದ ಬಗ್ಗೆ ಇಂದು ಇತಿಹಾಸವಾಗಿದೆ. ಹಾಲಕ್ಕಿಗಳು ಯಾವುದೇ ಕಾರಣದಿಂದ ಆಧುನಿಕ ಔಷಧಿ (ಇಂಗ್ಲೀಷ್ ಮೆಡಿಸನ್) ತೆಗೆದುಕೊಳ್ಳುವುದಿಲ್ಲ. ಈಗಾಗಲೆ ತಿಳಿಸಿರುವಂತೆ ಹಾಲಕ್ಕಿಗಳು ನವನಾಗರಿಕತೆಗೆ ವಿಮುಖರಾಗಿದ್ದಾರೆ. ಪೊಲೀಸ್ ಠಾಣೆ, ಕೋರ್ಟು, ಕಛೇರಿ ಇವೇ ಮುಂತಾದವುಗಳಿಗೆ ಎಡೆ ತಾಕುವುದಿಲ್ಲ. ಇವರು ತಮ್ಮದೇ ಆದ ನೀತಿ, ನಿಯಮ, ನಡವಳಿಕೆ, ಕಟ್ಟುಪಾಡು, ಸಂಪ್ರದಾಯಗಳನ್ನು ಪಾಲಿಸುತ್ತಾರೆ. ಹಾಲಕ್ಕಿಗಳು ತಾವಿರುವ ಪ್ರದೇಶಗಳನ್ನು ಕೊಪ್ಪ (ಊರು) ಹಾಗೂ ಸೀಮೆಗಳಾಗಿ ವಿಂಗಡಿಸಿಕೊಂಡಿದ್ದಾರೆ. ಮುಂಬಯಿ ಗೆಝೆಟಿಯರಿನಲ್ಲಿ ಇವರ ಐದು ಸೀಮೆಗಳನ್ನು ಗುರುತಿಸಿದ್ದಾರೆ. 1) ಕಾರವಾರ 2) ನಾಡ್ಗೇರಿ 3) ಹೆಬ್ಬಾನಕೇರಿ 4) ಅಂಕೋಲಾ 5) ಚಂದಾವರ ಎಂಬುದಾಗಿ. ಜನಸಂಖ್ಯೆ ಹೆಚ್ಚಾದಂತೆ ಇಂದು ಏಳು ಸೀಮೆಗಳಾಗಿದೆ. ಇವರ ಸಮಾಜದ ಸ್ವಾಸ್ತ್ಯವನ್ನು ಕಾಪಾಡಲು ಇವರೇ ರಚಿಸಿಕೊಂಡಿರುವ ಆಡಳಿತಾಧಿಕಾರಿಗಳಿದ್ದಾರೆ. / ಇದ್ದರು, ಅವರುಗಳು ಗೌಡ, ಬುದವಂತ, ಅರಸುಗೌಡ, ಗುರುಗೌಡಾದಿಗಳು. ಇವರಲ್ಲಿ ಊರು ಹಾಗೂ ಸೀಮೆಗೆ ಪ್ರತ್ಯೇಕವಾದ ಆಡಳಿತ ವ್ಯವಸ್ಥೆಯಿರುತ್ತದೆ. ಗ್ರಾಮವನ್ನು ಇವರು ಕೊಪ್ಪ ಎನ್ನುತ್ತಾರೆ. ಕೊಪ್ಪಕ್ಕೆ ಗೌಡನಿರುತ್ತಾನೆ. ಅವನಿಗೆ ಬುದುವಂತ, ಕೋಲ್ಕಾರರು, ಸಹಾಯಕರು. ಅಂಕೋಲಾ, ಕಡವಾಡ ಸೀಮೆಗಳಲ್ಲಿ ಕೆಲವುಕಡೆ ಊರುಗೌಡನಿಗೆ 'ಗಾಂವ್ಕರ' ಎಂದೂ ಕರೆಯುತ್ತಾರೆ. ಬಹುಷಃ ಇದು ಮರಾಠರ ಪ್ರಭಾವ ಇರಬಹುದು. ಇವರಲ್ಲಿ ಕಟ್ಟೆಮನೆಗಳಿವೆ. ಸೀಮಾಡಳಿತದ ವ್ಯವಸ್ಥೆ ಇದೆ. ಅವರ ಅಧಿಕಾರಿಗಳೆಂದರೆ ಅರಸುಗೌಡ, ಗುರುಗೌಡ, ಪರ್ಧಾನಿಗೌಡ, ಸೀಮೆಯ ಬುದುವಂತ, ಮಾನಾಡಗೌಡ, ಮಾಲುಗೌಡ, ಜನಮನೆಗೌಡ, ಕಟ್ಟೆಮನೆಗೌಡ, ಸೀಮೆಯ ಕೋಲ್ಕಾರ ಇದೇ ಮುಂತಾದವು.

ಬುಡಕಟ್ಟಿನ ಒಕ್ಕಲಿಗರಾದ ಇವರು ಸಾವಿರಾರು ವರ್ಷಗಳಿಂದ ಬುಡಕಟ್ಟು ಸ್ಥಿತಿಯಲ್ಲಿಯೇ ಬದುಕುತ್ತಿದ್ದಾರೆ. ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸರ್ಕಾರಿ ಉದ್ಯೋಗದಿಂದ ವಂಚಿತರಾಗಿದ್ದಾರೆ. ಕಾಡಿನ ಹಾಗೂ ಕಾಡಂಚಿನಲ್ಲಿ ಅಲೆಮಾರಿಗಳಂತೆ ಜೀವನ ಸಾಗಿಸುತ್ತಿದ್ದಾರೆ. ಸಾಂಸ್ಕೃತಿಕವಾಗಿ ಶ್ರೀಮಂತರು ಕರಾವಳಿ ಘಟ್ಟ ಪ್ರದೇಶದಲ್ಲಿ ಹಾಲಕ್ಕಿ ಒಕ್ಕಲಿಗರು, ಕರೆ ಒಕ್ಕಲಿಗರು, ಕೊಟ್ಟೆ ಒಕ್ಕಲಿಗರು, ಗಾಮ ಒಕ್ಕಲಿಗರು, ಗೌಂಡ ಒಕ್ಕಲಿಗರು ಇವರೇ ಮುಂತಾದವರು ಬುಡಕಟ್ಟುಸ್ತರಕ್ಕೆ ಸೇರುತ್ತಾರೆ. ಇವರುಗಳಿಗೆ ಯಾವುದೇ ಶಿಷ್ಟ ಧರ್ಮಗಳ ದೀಕ್ಷೆ ಇಲ್ಲ. ಗುರುವಿಲ್ಲ, ಗುರುಪೀಠವಿಲ್ಲ, ಲಾಂಛನವಿಲ್ಲ. ಆದರೆ ತಮ್ಮದೇ ಆದ ಬುಡಕಟ್ಟು, ದೇವರುಗಳನ್ನು, ನಿಸರ್ಗದೇವರನ್ನು ಪೂಜಿಸುತ್ತಾರೆ. ಪ್ರಕೃತಿಯಲ್ಲಿರುವ ಸೂರ್ಯ, ಚಂದ್ರ, ಮಳೆ (ಇಂದ್ರ/ವರುಣ) ಇಳೆ (ಭೂಮಿ) ಮರಗಿಡಗಳನ್ನು ಪೂಜಿಸುತ್ತಾರೆ. ಕೆಲವರು ಭೂತಾರಾಧನೆ ಮಾಡುತ್ತಾರೆ. ಊಟಿಯಲ್ಲಿರುವ ತೋಡಗಳ ಸಂಬಂಧಿಕರೇನೋ ಎನ್ನಿಸುತ್ತದೆ.

ನಶಿಸಿ ಹೋಗುತ್ತಿರುವ ಜಾನಪದ ಕಥೆಗಳು, ಜಾನಪದ ಗೀತೆಗಳು ಪ್ರಾಚೀನ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸಲು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ ಹಾಗೂ ನೀಡುತ್ತಿದ್ದಾರೆ. ಕೋಲಾಟ, ದೊಳ್ಳುಕುಣಿತ, ಯಕ್ಷಗಾನ, ಗುಮಟೆ ಭಾರಿಸುವುದು ಇವೇ ಮುಂತಾದ ಜಾನಪದ ಸಂಸ್ಕೃತಿಯ ತವರೂರಾಗಿದೆ. ಹಾಲಕ್ಕಿ ಒಕ್ಕಲಿಗರಿಗೆ ವಿಶ್ವಮಾನ್ಯತೆ ತಂದುಕೊಟ್ಟ ಕೆಲವರನ್ನು ಇಲ್ಲಿ ತಿಳಿಸುವುದು ಅತ್ಯಾವಶ್ಯಕ. ಅವರುಗಳೆಂದರೆ ಶ್ರೀಮತಿ ಸುಕ್ರಿ ಬೊಮ್ಮಗೌಡ, ಶ್ರೀಮತಿ ತುಳಸಿಗೌಡ, ಹನುಮಂತಗೌಡ, ಎನ್.ಎಚ್. ಗೌಡ, ಕೆ.ಹೆಚ್. ಗೌಡ ಇವರೇ ಮುಂತಾದವರು ಪ್ರಮುಖರು.

ಶ್ರೀಮತಿ ಸುಕ್ರಿಬೊಮ್ಮಗೌಡ : ಇವರನ್ನು ಹಾಲಕ್ಕಿ ಒಕ್ಕಲಿಗರ "ನೈಟಿಂಗ್‌ಹೇಲ್" ಎಂದು ಕರೆಯುತ್ತಾರೆ. ಜಾನಪದ ಗೀತೆ, ಜಾನಪದ ಕಥೆ ಹಾಗೂ ಲಾವಣಿಗಳನ್ನು ಹಾಡುವುದು ಪ್ರಾಚೀನ ಹಾಗೂ ಪಾರಂಪರಿಕ ಸಂಗೀತ ವಾದ್ಯಗಳನ್ನು ನುಡಿಸುವುದನ್ನು ಕಲಿತು ಹಾಡಿ ತಮ್ಮ ಜನಾಂಗಕ್ಕೆ ಹೇಳಿ ಕೊಡುವುದರ ಮುಖೇನ ಪರಂಪರೆಯನ್ನು ಜೀವಂತ ಉಳಿಸಿದ್ದಾರೆ. ಹಾಡಿನ ಹಕ್ಕಿಯಂತೆ ಹಾಡುತ್ತಾ ತಮಗರಿವಿಲ್ಲದಂತೆ ಕಲೆಯನ್ನು ಉಳಿಸಿ ಬೆಳೆಸುತ್ತಿದ್ದಾರೆ. ಇಷ್ಟೇ ಅಲ್ಲದೆ ತಮ್ಮ ಜನಾಂಗದಲ್ಲಿರುವ (ಇಂದು ಎಲ್ಲಾ ಜನಾಂಗದಲ್ಲೂ ಇದೆ) ಕುಡಿತದ ಚಟ ಬಿಡಿಸಲು ಹೋರಾಡಿದ್ದಾರೆ ಹಾಗೂ ಹೋರಾಡುತ್ತಿದ್ದಾರೆ. ಶ್ರೀಯುತರಿಗೆ "ಕರ್ನಾಟಕ ಜಾನಪದ ಅಕಾಡೆಮಿ" ಪ್ರಶಸ್ತಿ, ಹಂಪಿ ವಿಶ್ವವಿದ್ಯಾಲಯದಿಂದ "ನಾಡೋಜ" ಪ್ರಶಸ್ತಿ ಹಾಗೂ ಭಾರತದ ಅತ್ಯುನ್ನತ ಪ್ರಶಸ್ತಿಯಾದ "ಪದ್ಮಶ್ರೀ" ಪ್ರಶಸ್ತಿಯನ್ನು 2017ರಲ್ಲಿ ನೀಡಿ ಗೌರವಿಸಿತು.

ಶ್ರೀಮತಿ ತುಳಸಿಗೌಡ : ಭಾರತದ ಶ್ರೇಷ್ಠ ಪರಿಸರವಾದಿ, ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಹೊನ್ನಳ್ಳಿ ಗ್ರಾಮದಲ್ಲಿ ಹುಟ್ಟಿ ಬೆಳೆದ ನಿಸರ್ಗ ಮಾತೆಯ ಮಗಳು. ಅರಣ್ಯ ಇಲಾಖೆಯವರು ಮಾಡಬೇಕಾದ ಕೆಲಸವನ್ನು ಶ್ರೀಮತಿ ತುಳಸಿಗೌಡ ಮಾಡಿ ಸೈ ಎನಿಸಿಕೊಂಡಿದ್ದಾರೆ. ದಿನ ಬೆಳಗಾದರೆ ವೃಕ್ಷಗಳ ಕೆಳಗೆ ಬಿದ್ದಿರುವ ಬೀಜಗಳನ್ನು ಸಂಗ್ರಹಿಸಿ ಅವುಗಳನ್ನು ಬಿತ್ತಿ ಸಸಿಗಳನ್ನು ಕಾಡಿನಲ್ಲಿ ಬೆಳೆಸುವ ಕಾಯಕ ಮಾಡತೊಡಗಿದರು. ಮೂರು ದಶಕಗಳಿಗೂ ಹೆಚ್ಚು ಕಾಲ ದುಡಿದು ಮೂವತ್ತು ಸಾವಿರಕ್ಕೂ ಹೆಚ್ಚು ಸಸಿಗಳನ್ನು ನೆಟ್ಟು ವೃಕ್ಷಮಾತೆಯಾಗಿದ್ದಾರೆ. 1986ರಲ್ಲಿ ಇಂದಿರಾ ಪ್ರಿಯದರ್ಶಿನಿ "ವೃಕ್ಷ ಮಿತ್ರ" ಪ್ರಶಸ್ತಿ, ಕೇಂದ್ರ ಪರಿಸರ ಮಿತ್ರ ಪ್ರಶಸ್ತಿ, 1999ರಲ್ಲಿ "ಕರ್ನಾಟಕ ರಾಜ್ಯೋತ್ಸವ" ಪ್ರಶಸ್ತಿ ಹಾಗೂ 2020-21ರಲ್ಲಿ ಭಾರತದ ಪ್ರತಿಷ್ಠಿತ "ಪದ್ಮಶ್ರೀ" ಪ್ರಶಸ್ತಿ ಲಭಿಸಿತು. ಈ ಮೂಲಕ ಹಾಲಕ್ಕಿ ಒಕ್ಕಲಿಗರು ಇಡೀ ಕರ್ನಾಟಕದ ಜನರ ಕಣ್ಣು ತೆರೆಸಿದ್ದಾರೆ.

ಈ ಸಮಾಜದ ಮತ್ತೊಬ್ಬ ವ್ಯಕ್ತಿ ಎಂದರೆ ಹನುಮಂತಗೌಡ ಎಂಬುವವರು ಪಾರ್ಶ್ವವಾಯುವಿಗೆ ಔಷಧವನ್ನು ಕಂಡು ಹಿಡಿದಿದ್ದಾರೆ. ಉತ್ತರ ಕನ್ನಡ ಭಾಗವಾದ ಶಿರಸಿ, ಸಿದ್ದಾಪುರ, ಕುಮುಟ, ಅಂಕೋಲ ಇವೇ ಮುಂತಾದ ಕಡೆ ನೆಲೆಸಿರುವ ನಮ್ಮ ಸಮುದಾಯದ ಉಪಪಂಗಡಗಳಾದ ಗ್ರಾಮ ಒಕ್ಕಲಿಗರು, ಹಾಲಕ್ಕಿ ಒಕ್ಕಲಿಗರು, ಶೀಲ ಒಕ್ಕಲಿಗರು ಇವರೇ ಮುಂತಾದವರು ಒಂದಾಗಿ 1984ರ ಸಾರ್ವಾತ್ರಿಕ ಚುನಾವಣೆಯಲ್ಲಿ "ಕುಮುಟ ಕ್ಷೇತ್ರ"ದಿಂದ ಸ್ಪರ್ಧಿಸಿದ್ದ ಶಿಕ್ಷಕ ಎನ್.ಎಚ್. ಗೌಡರವರನ್ನು ಹಾಗೂ "ಅಂಕೋಲ ವಿಧಾನ ಸಭಾ" ಕ್ಷೇತ್ರದಿಂದ ಸ್ಪರ್ಧಿಸಿದ್ದ ಕೆ.ಹೆಚ್. ಗೌಡರು ಎರಡನೆ ಬಾರಿಗೆ ಶಾಸಕರಾಗಿ ಆಯ್ಕೆಯಾಗಿ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿದ್ದಾರೆ. ಹೀಗೇ ಮುಂದುವರಿಯಬೇಕೆನ್ನುವುದು ನಮ್ಮೆಲ್ಲರ ಆಶಯ.

ತೀರ ಹಿಂದುಳಿದಿರುವ ನಮ್ಮ ಸಮುದಾಯದ ಈ ಮೇಲ್ಕಂಡ ಉಪ ಪಂಗಡಗಳನ್ನು ಒಗ್ಗೂಡಿಸುವುದೇ ಅಲ್ಲದೆ ಸಮಾಜದ ಮುಖ್ಯವಾಹಿನಿಗೆ ತರಲು ಆದಿಚುಂಚನಗಿರಿಯ ಅಂದಿನ ಪೀಠಾಧ್ಯಕ್ಷರಾಗಿದ್ದ ಭೈರವೈಕ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು ಹಾಗೂ ಇಂದಿನ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮಿಗಳು ಹಾಗೂ ಶ್ರೀ ಶ್ರೀ ಪ್ರಸನ್ನನಾಥ ಮಹಾಸ್ವಾಮಿಗಳ ಪ್ರಯತ್ನದಿಂದಾಗಿ ಉತ್ತರ ಕನ್ನಡ ಭಾಗದಲ್ಲಿ ಅದರಲ್ಲೂ ವಿಶೇಷವಾಗಿ ಕುಮುಟ, ಬಂಟ್ವಾಳ ಪ್ರದೇಶಗಳಲ್ಲಿ (ಕುಮುಟಾದ ಮಿರ್ಜಾನ್) ಸಮುದಾಯ ಭವನ, ಶಾಲಾ ಕಾಲೇಜುಗಳು, ವಿದ್ಯಾರ್ಥಿ ನಿಲಯಗಳು ಇವೇ ಮುಂತಾದವುಗಳನ್ನು ಸ್ಥಾಪಿಸಿದ್ದಾರೆ. ಹೊನ್ನಾವರದಲ್ಲಿ ಬೃಹತ್ ಸಭಾಭವನ, ಗ್ರಾಮ ಒಕ್ಕಲಿಗರ ನೌಕರರ ಸಭಾ ಭವನ, ಅಘನಾಶಿನಿ ಬಳಿಯ "ನೀವಣಿ" ಎಂಬಲ್ಲಿ

ಹಾಲಕ್ಕಿ ಒಕ್ಕಲಿಗರ ಸಾಭಭವನ ಇವೇ ಮುಂತಾದವುಗಳನ್ನು ಪರಮಪೂಜ್ಯರು ಕಾಲದಿಂದಲೂ ತಮ್ಮ ಕೊಡುಗೆಯನ್ನು ಕೊಟ್ಟಿದ್ದಾರೆ. ಇವುಗಳನ್ನು ರಾಜ್ಯ ಒಕ್ಕಲಿಗರ ಸಂಘವಾಗಲಿ ರಾಜ್ಯ ಸರ್ಕಾರವಾಗಲಿ ಮುಂದೆನಿಂತು ಮಾಡಬೇಕಿತ್ತು ಅಲ್ಲವೆ?

ನಶಿಸಿ ಹೋಗುತ್ತಿರುವ ಜಾನಪದ ಕಥೆ, ಜಾನಪದ ಗೀತೆ, ಸಂಸ್ಕೃತಿಯನ್ನು ಉಳಿಸಲು ಇವರು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ ಹಾಗೂ ನೀಡುತ್ತಿದ್ದಾರೆ. ಕೋಲಾಟ, ಡೊಳ್ಳು ಕುಣಿತ, ಯಕ್ಷಗಾನ, ಗುಮಟೆ ಬಾರಿಸುವಿಕೆ, ಜಾನಪದ ಗೀತೆಯ ತವರೂರಾಗಿದೆ. ಹಾಲಕ್ಕಿಯ ನೈಟಿಂಗ್‌ಹೇಲ್ ಎಂದೇ ಖ್ಯಾತರಾಗಿರುವ ಸುಕ್ರಿಬೊಮ್ಮಗೌಡ ಇವರು ಜಾನಪದ ಕಲೆಗೆ ನೀಡಿದ ಅಮೂಲ್ಯ ಕೊಡುಗೆಗಾಗಿ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ, ಹಂಪಿ ವಿಶ್ವವಿದ್ಯಾಲಯವು 'ನಾಡೋಜ ಪ್ರಶಸ್ತಿ', 2017ರಲ್ಲಿ ಭಾರತ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಪದ್ಮಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ತಮ್ಮ ಜನ ಮದ್ಯಪಾನ ಸೇವನೆಯನ್ನು ಬಿಡಲು ಶ್ರಮಿಸಿದ್ದಾರೆ. ಈ ಸಮಾಜದ ಮತ್ತೊಬ್ಬ ವ್ಯಕ್ತಿ ಹನುಮಂತಗೌಡ ಎಂಬುವವರು ಪಾರ್ಶ್ವವಾಯುವಿಗೆ ಔಷಧವನ್ನು ಕಂಡು ಹಿಡಿದಿದ್ದಾರೆ. ಉತ್ತರ ಕರ್ನಾಟಕ ಭಾಗದ ಹೀಗೆ ಹಿಂದುಳಿದ ನಮ್ಮ ಸಮುದಾಯವು ಲಕ್ಷಾಂತರ ಮಂದಿ ವಾಸಿಸುತ್ತಿದ್ದಾರೆ. ಇವರ ಅಭಿವೃದ್ಧಿಗಾಗಿ ಆದಿಚುಂಚನಗಿರಿ ಮಠದ ಭೈರವೈಕ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು, ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಹಾಗೂ ಶ್ರೀ ಶ್ರೀ ಶ್ರೀ ಪ್ರಸನ್ನನಾಥ ಮಹಾಸ್ವಾಮಿಗಳ ಪ್ರಯತ್ನದಿಂದ ಕುಮುಟ, ಹೊನ್ನಾವರ, ಶಿರಸಿ, ಸಿದ್ದಾಪುರ ಇವೇ ಮುಂತಾದ ಕಡೆ ನೆಲೆಸಿರುವ ಹಾಲಕ್ಕಿ ಒಕ್ಕಲಿಗರು, ಗ್ರಾಮ ಒಕ್ಕಲಿಗರು, ಶೀಲ ಒಕ್ಕಲಿಗರು, ಪಟಗಾರರು, ಕರೆ ಒಕ್ಕಲಿಗರು, ಕೊಟ್ಟೆ ಒಕ್ಕಲಿಗರು ಇನ್ನೂ ಮುಂತಾದ ನಮ್ಮ ಸಮುದಾಯದ ಉಪಪಂಗಡಗಳು ಒಂದಾಗಿ 1984ರ ಸಾರ್ವತಿಕ ಚುನಾವಣೆಯಲ್ಲಿ ಕುಮುಟ ಚುನಾವಣ ಕ್ಷೇತ್ರದಿಂದ ಸ್ಪರ್ಧಿಸಿದ್ದ ಶಿಕ್ಷಕ ಎನ್.ಎಚ್. ಗೌಡರವರನ್ನು, ಅಂಕೋಲದಲ್ಲಿ ಸ್ಪರ್ದಿಸಿದ್ದ ಕೆ.ಹೆಚ್. ಗೌಡರು ಎರಡನೆಯ ಬಾರಿಗೆ ಶಾಸಕರಾಗಿ ಆಯ್ಕೆಯಾಗಿ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿದ್ದಾರೆ. ಕುಮುಟ ವಿಧಾನ ಸಭೆಯನ್ನು ಪ್ರತಿನಿಧಿಸುತ್ತಿರುವ ಶ್ರೀ ಆರ್.ವಿ. ದೇಶಪಾಂಡೆ ಬದುಕಿರುವ ತನಕ ನಮ್ಮ ಸಮುದಾಯದವರಿಗೆ ಅವಕಾಶ ಸಿಗದು. ಒಡೆದು ಆಳುವ ನೀತಿಯನ್ನು ಅನುಸರಿಸಿ ನಮ್ಮ ಸಮುದಾಯದವರು ಗೆಲ್ಲದಂತೆ ನೋಡಿಕೊಳ್ಳುತ್ತಿದ್ದಾರೆ.

ತೀರ ಹಿಂದುಳಿದಿರುವ ನಮ್ಮ ಸಮುದಾಯವನ್ನು ಮುಖ್ಯವಾಹಿನಿಗೆ ತರಲು ಆದಿಚುಂಚನಗಿರಿ ಶ್ರೀಕ್ಷೇತ್ರದ ಭೈರವೈಕ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿಗಳು ಇಂದು ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಮತ್ತು ಶ್ರೀ ಶ್ರೀ ಶ್ರೀ

ಪ್ರಸನ್ನನಾಥ ಮಹಾಸ್ವಾಮಿಗಳ ಪ್ರಯತ್ನದಿಂದ ಈ ಭಾಗಗಳಲ್ಲಿ ಶಾಲಾ ಕಾಲೇಜುಗಳು, ಸಮುದಾಯ ಭಾವನಗಳು. ಕುಮುಟಾದ ಮಿರ್ಜಾನ್‌ನಲ್ಲಿ ಶಾಲಾ ಕಟ್ಟಡ ಸ್ಥಾಪಿಸಿದರು ಇಂದು ಇಲ್ಲಿ ಎಲ್ಲಾ ಜಾತಿಯ, ಧರ್ಮದ ವಿದ್ಯಾರ್ಥಿಗಳು ಸಹಸ್ರಾರು ಜನ ವ್ಯಾಸಂಗ ಮಾಡುತ್ತಿದ್ದಾರೆ. ಹೊನ್ನಾವರದಲ್ಲಿ ಬೃಹತ್ **ಸಭಾಭವನ, ಗ್ರಾಮ ಒಕ್ಕಲಿಗರ ನೌಕರರ ಸಭಾ ಭವನ** ಹಾಗೂ ಅಘನಾಶಿನಿ ನದಿಯ ತಟದಲ್ಲಿ ನೀವಣಿ ಬಳಿ **"ಹಾಲಕ್ಕಿ ಒಕ್ಕಲಿಗರ ಸಭಾಭವನ"** ನಿರ್ಮಾಣಕ್ಕೆ ಶ್ರೀಕ್ಷೇತ್ರವು ಶ್ರಮಿಸಿದೆ. ಈ ಕೆಲಸವನ್ನು ರಾಜ್ಯ ಒಕ್ಕಲಿಗರ ಸಂಘವಾಗಲಿ ರಾಜ್ಯಸರ್ಕಾರವಾಗಲಿ ಮಾಡಬೇಕಲ್ಲವೆ?

ನೊಣಬ ಒಕ್ಕಲಿಗರು

ಗಂಗಡಕಾರ ಒಕ್ಕಲಿಗರು ತಲಕಾಡಿನ ಗಂಗರು ತಮ್ಮ ಪೂರ್ವಿಕರು ರಾಜರು ಎಂದು ಹೇಳುವಂತೆ ನೊಣಬರು ಗುಬ್ಬಿ ಹೊಸಹಳ್ಳಿ ಪ್ರಭುಗಳ ಮೂಲಕ್ಕೆ ಸೇರಿದವರು. ನೊಳಂಬರು ಮಹಾನಾಡ ಪ್ರಭುಗಳು, ಏಳುನಾಡು ಪ್ರಭುಗಳು ಮೂರು ಸಾವಿರ ಸೀಮೆ ಎಂದು ಕರೆಯಲ್ಪಟ್ಟರು. ನೊಣಬರು ನೊಳಂಬವಾಡಿ ಮೂವತ್ತೆರೆಡು ಸಾವಿರ ಎಂಬ ರಾಜ್ಯವನ್ನು ಆಳ್ವಿಕೆ ಮಾಡಿದರು. ಕಾಲಚಕ್ರಕ್ಕೆ ಸಿಲುಕಿ (ತಲಕಾಡಿನ ಗಂಗರ ಪ್ರಭಾವ) ನೊಳಂಬವಾಡಿ ನಾಶವಾದ ಮೇಲೆ ಮತ್ತೆ ತಮ್ಮ ರಾಜ್ಯಕೋಶವನ್ನು ಪಡೆಯಲು ನೊಳಂಬ ರಾಜ ಮನೆತನಕ್ಕೆ ಸೇರಿದ ಏಳು ಜನ ಸಹೋದರರು ರಾಜಕೀಯವಾಗಿ ಪ್ರವರ್ದಮಾನಕ್ಕೆ ಬಂದರು.

ಏಳು ಜನ ಸಹೋದರರು ವಿಜಯನಗರದರಸ ಹರಿಹರನಿಗೆ ಸೈನಿಕ ಸಹಾಯ ಮಾಡಿ "ಮಹಾನಾಡ ಪ್ರಭುಗಳು" ಎಂಬ ಬಿರುದನ್ನು ಪಡೆದರು. ಹಿರಿಯಣ್ಣನಾದ ಮಾರೇಗೌಂಡನು ಕುಂಚಟಿಗರ ನಾಯಕನಾದ ಚಳ್ಳಗರು ಮಾರೇಗೌಂಡನ ಸಹಾಯದಿಂದ "ಮುಮ್ಮಡಿ ಪಟ್ಟಣ" ಎಂಬ ರಾಜ್ಯವನ್ನು ಸ್ಥಾಪಿಸಿದನು, ಎರಡನೆಯವನಾದ ಕಾಳಣ್ಣ ಗೌಂಡನು ಕೋರಾ ಪಟ್ಟಣವನ್ನು, ಮೂರನೆಯವನಾದ ಸಂಗಪ್ಪಗೌಂಡನು ಚೇಳೂರನ್ನು, ನಾಲ್ಕನೆಯವನಾದ ಕಾಳಚಿಕ್ಕಪ್ಪ ಗೌಂಡನು ಗುಬ್ಬಿಹೊಸಹಳ್ಳಿಯನ್ನು, ಐದನೆಯವನಾದ ರಾಮಪ್ಪ ಗೌಂಡನು ದೊಡ್ಡ ಎಣ್ಣೆಗೆರೆಯನ್ನು, ಆರನೆಯವನಾದ ಚಿಕ್ಕಪ್ಪ ಗೌಂಡನು ಬಿದರೆ ಮತ್ತು ಏಳನೆಯವನಾದ ಚನ್ನಪ್ಪ ಗೌಂಡನು ತೆರೆಯೂರಿನಲ್ಲಿ ನೆಲೆನಿಂತು ರಾಜ್ಯಗಳನ್ನು ಸ್ಥಾಪಿಸಿದರು. ಹೀಗಾಗಿ ಇವರನ್ನು ಏಳುನಾಡು ಪ್ರಭುಗಳು ಎಂದು ಕರೆಯುತ್ತಾರೆ. ನೊಳಂಬರು ಶ್ರೀಗುರು ಸಿದ್ದರಾಮೇಶ್ವರರನ್ನು ತಮ್ಮ ಗುರುವಾಗಿ ಸ್ವೀಕರಿಸಿದರು.

ಹೀಗೆ ನಾಡಪ್ರಭುಗಳ ಹಿನ್ನೆಲೆಯನ್ನು ಒಳಗೊಂಡ ನೊಣಬರು ಕಾಲಚಕ್ರಕ್ಕೆ ಸಿಲುಕಿ ವ್ಯವಸಾಯ ಮತ್ತು ಪಶುಸಂಗೋಪನೆಯನ್ನು ತಮ್ಮ ಪ್ರಧಾನ ಕಸುಬನ್ನಾಗಿ ಮಾಡಿಕೊಂಡರು. ಇವರು ಸುವ್ಯವಸ್ಥಿತವಾದ ಹಾಗೂ ಸುಸಂಘಟಿತ ಸಾಮಾಜಿಕ

ಆಡಳಿತ ವ್ಯವಸ್ಥೆಯ ಅಸ್ಥಿತ್ವದಲ್ಲಿತ್ತು. ಮೇಲ್ಮಟ್ಟದಲ್ಲಿ "ದೇಶ" ಎಂತಲೂ ದೇಶಕ್ಕೆ ದೇಶಗೌಡ ಇಲ್ಲವೆ ದೇಸಾಯಿಗೌಡರು ಎಂತಲೂ ನಂತರ "ನಾಡು"ಗಳ ವ್ಯವಸ್ಥೆ ಇದ್ದು ನಾಡುಗಳಿಗೆ ನಾಡಗೌಡರುಎಂತಲೂ ಕೊನೆಯ ಆಡಳಿತ ಸ್ತರದಲ್ಲಿ "ಕಟ್ಟೆಮನೆ"ಗಳು ಇದ್ದು "ಯಜಮಾನರು" ಅದರ ಮುಖ್ಯಸ್ಥರಾಗಿದ್ದರು. ಈ ಆಂತರಿಕ ವ್ಯವಸ್ಥೆಯಲ್ಲಿ ಕುಟುಂಬದೊಳಗಿನ ಸಣ್ಣ-ಪುಟ್ಟ ಜಗಳ ಮನಸ್ತಾಪ, ನೆರೆಹೊರೆಯವರ ವ್ಯಾಜ್ಯ, ಆಸ್ತಿ ಪರಬಾರೆ, ಮೋಸ, ದಗ, ವಂಚನೆ, ಒತ್ತುವರಿ, ಕೊಲೆ, ಸುಲಿಗೆ, ವಂಚನೆ, ಗೋಗ್ರಹಣ ಇವೇ ಮುಂತಾದ ತಂಟೆ-ತಕರಾರುಗಳನ್ನು ಈ ಮೇಲ್ಕಂಡ ಮುಖ್ಯಸ್ಥರು ಪರಿಹರಿಸುತ್ತಿದ್ದರು. ತಪ್ಪಿತಸ್ಥರಿಗೆ ಜುಲ್ಮಾನೆ, ಶಿಕ್ಷೆ, ದಂಡ, ಬಹಿಷ್ಕಾರ ಹಾಕುತ್ತಿದ್ದರು. (ಗುಬ್ಬಿ ಹೊಸಹಳ್ಳಿ - ಪ್ರಭುಗಳು - ಎಂ.ಹೆಚ್. ನಾಗರಾಜು). ನೊಳಂಬ ಸಮಾಜದ ಹಿತಚಿಂತಕರೆಂದರೆ ದಾನಶೂರ ಕಂಬಿ ಸಿದ್ದರಾಮಣ್ಣನವರು. ಇವರು ಬೆಂಗಳೂರಿನ ಮಾಮೂಲ್ ಪೇಟೆಯಲ್ಲಿ ಅಡಕೆ, ಹೊಗೆ ಸೊಪ್ಪು, ನೆಶ್ಯಾ ಸೇರಿದಂತೆ ತಂಬಾಕು ವ್ಯಾಪಾರಿಗಳು ತಮ್ಮ ವ್ಯಾಪಾರ ವಹಿವಾಟಿನಿಂದಾಗಿ ಶ್ರೀಮಂತರಾಗಿದ್ದರು. ಶ್ರೀ ಶೈಲದ ಮಲ್ಲಿಕಾರ್ಜುನನಿಗೆ ಪ್ರತಿವರ್ಷ ಕಂಬಿ ಹೊತ್ತು ಸೇವೆ ಸಲ್ಲಿಸುವ ಮೂಲಕ ಕಂಬಿ ಸಿದ್ದರಾಮಣ್ಣನೆಂದೇ ಹೆಸರುವಾಸಿಯಾದರು. ಒಮ್ಮೆ "ಸಿರಾ" ಪ್ರದೇಶದಲ್ಲಿ ಬೆಳೆದಿರುವ ತಂಬಾಕು ಸಗಟು ಕೊಳ್ಳಲು ಹೋಗಿದ್ದರು. ಅಲ್ಲಿನ ಬಾಲಕನೊಬ್ಬ ಬೆಂಗಳೂರಿನಲ್ಲಿ ಓದಲು ಕಳುಯಿಸಲು ತನ್ನ ತಂದೆಯನ್ನು ಕೇಳಿಕೊಳ್ಳಲಾಗಿ ಆತನ ತಂದೆ ಅಷ್ಟು ಹಣ ತೆರಲು ಸಾಧ್ಯವಿಲ್ಲ ಆಗದು ಎಂದು ಬಾಲಕನ ಇಚ್ಚೆಯನ್ನು ತಿರಸ್ಕರಿಸಿದ. ಬಾಲಕನ ಇಚ್ಚೆಯನ್ನರಿತ ಕಂಬಿ ಸಿದ್ದರಾಮಣ್ಣ ಬಾಲಕನನ್ನು ಬೆಂಗಳೂರಿಗೆ ತಂದು ತಮ್ಮ ಮನೆಯಲ್ಲೇ ಇರಿಸಿಕೊಂಡು ಓದಿಸಿದ. ಗ್ರಾಮಗಳಲ್ಲಿರುವ ಬಡತನವನ್ನರಿತ ಕಂಬಿ ಸಿದ್ದರಾಮಣ್ಣ ಬೇರೆ-ಬೇರೆ ಕಡೆಗಳಲ್ಲಿರುವ ಓದಲು ಆಸಕ್ತಿ ಇರುವ 25ಕ್ಕೂ ಹೆಚ್ಚು ಬಾಲಕರನ್ನು ಬೆಂಗಳೂರಿಗೆ ಕರೆ ತಂದು ತಮ್ಮ ಮನೆಯಲ್ಲಿಯೇ ಊಟ, ತಿಂಡಿ, ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಟ್ಟರು. ವಿದ್ಯಾರ್ಥಿಗಳ ಸಂಖ್ಯೆ ಮತ್ತಷ್ಟು ಹೆಚ್ಚಾದ ಕಾರಣ ತಮ್ಮ ಮನೆಯನ್ನೇ ವಿದ್ಯಾರ್ಥಿನಿಲಯವನ್ನಾಗಿ ಪರಿವರ್ತಿಸಿ ತಾವು ಬೇರೆ ಕಡೆ ವಾಸ್ತವ್ಯ ಹೂಡಿದರು. 1906ರಲ್ಲಿ **'ಕಂಬಿ ಸಿದ್ದರಾಮಣ್ಣ ಉಚಿತ ವಿದ್ಯಾರ್ಥಿ ನಿಲಯು'** ಎಂಬುದಾಗಿ ಪರಿವರ್ತಿಸಿದರು ಶಿಕ್ಷಣ ದಾಸೋಹಿ ಕಂಬಿ ಸಿದ್ದರಾಮಣ್ಣನವರು. 1906ರಲ್ಲಿ ಒಕ್ಕಲಿಗರ ಸಂಘ ಅಸ್ಥಿತ್ವಕ್ಕೆ ಬಂದು ಉಚಿತ ವಿದ್ಯಾರ್ಥಿನಿಲಯ ಪ್ರಾರಂಭಗೊಳ್ಳುವ ಮೊದಲು ಚಿಕ್ಕಪ್ರಮಾಣದಲ್ಲಿ ಪ್ರಾರಂಭಿಸಿದರು. ಹಲವಾರು ಮಠದ ಮರಿಸ್ವಾಮಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟರು. ಕೇವಲ ಬೆಂಗಳೂರಿಗೆ ಮಾತ್ರ ಸೀಮಿತಗೊಳಿಸದೆ ತಿಪಟೂರಿನ ಗುರುಕುಲಾನಂದಾಶ್ರಮ, ಹಾಸನದ ಬಸವ ರಾಜೇಂದ್ರ ವಿದ್ಯಾರ್ಥಿನಿಲಯ, ಎಲೆಗುಂದ, ಚಿಲ್ಕೂರು, ಹಲಗೆ ವೊಡೆಯರ, ಹಳ್ಳಿಯೇ ಅಲ್ಲದೆ ಹಲವಾರು

ಕಡೆಗಳಲ್ಲಿರುವ ಮಠಗಳಿಗೆ ವಿದ್ಯಾರ್ಥಿ ನಿಲಯಗಳಿಗೆ ಸಹಾಯ ಮಾಡಿದರು. ವೀರಶೈವ ವಿದ್ಯಾಭಿವೃದ್ಧಿ ಸಂಘವು ಇಂದಿನ "ನೊಳಂಬರ ವೀರಶೈವ ಸಂಘ"ವಾಗಿ ಮಾರ್ಪಟ್ಟಿದೆ. ಕಂಬಿ ಸಿದ್ದರಾಮಣ್ಣನವರು ತಮ್ಮ ಆಸ್ತಿಪಾಸ್ತಿಯನ್ನು ಸಾರ್ವಜನಿಕರ ಶಿಕ್ಷಣಕ್ಕೆ ವಿನಿಯೋಗಿಸಿದರು. ಚಿಕ್ಕಪೇಟೆಯಲ್ಲಿ ಎಂ. ಕಂಬಿ ಸಿದ್ದರಾಮಣ್ಣ ಕಾಂಪ್ಲೆಕ್ಸ್ ಕಟ್ಟಿಸಿ ಅದನ್ನು ಬಾಡಿಗೆಗೆ ನೀಡಿ ಅದರಿಂದ ಬರುವ ಆದಾಯದಿಂದ ಬಸವೇಶ್ವರ ನಗರದಲ್ಲಿ ವಿದ್ಯಾರ್ಥಿನಿಲಯ ನಡೆಯುತ್ತಿದ್ದು ನೂರೈವತ್ತು ವಿದ್ಯಾರ್ಥಿಗಳು ಅನುಕೂಲ ಪಡೆದು ಕೊಂಡಿದ್ದಾರೆ. ಇದು ನೊಳಂಬ ಸಮುದಾಯಕ್ಕೆ ಸಂದ ಗೌರವ ಹಾಗೂ ಆ ಸಮುದಾಯವು ಸಾರ್ವಜನಿಕರಿಗೆ ನೀಡಿದ ಕೊಡುಗೆ ಎಂದೇಳಬಹುದು.

ಮತಾಂತರ ಹಾಗೂ ಸ್ಥಿತ್ಯಾಂತರ : ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದ ಉತ್ತರ ಭಾಗದಲ್ಲಿ ಭಕ್ತಿಬಂಡಾರಿ ಬಸವಣ್ಣನವರ ಪ್ರಭಾವದಿಂದಾಗಿ ಸಾಕಷ್ಟು ಜನ ಒಕ್ಕಲಿಗರು ಹಾಗೂ ಬೇರೆ ಬೇರೆ ಜಾತಿಂಯ ಜನ ಮತಾಂತರಗೊಂಡರು. ನಂತರ ಕ್ರಿ.ಶ.14 ಮತ್ತು 15ನೇ ಶತಮಾನದಲ್ಲಿ ಶ್ರೀ ಯಡೆಯೂರು ಸಿದ್ದಲಿಂಗೇಶ್ವರ, ಶ್ರೀ ಅಟವೀ ಸ್ವಾಮಿಗಳು, ಗೋಸಲ ಶ್ರೀ ಸಿದ್ದೇಶ್ವರ ಸ್ವಾಮಿಗಳು, ಗೋಸಲ ಚನ್ನಬಸವೇಶ್ವರ ಸ್ವಾಮಿಗಳು ಇವರೇ ಮುಂತಾದವರ ಪ್ರಭಾವದಿಂದ ನೊಣಬ ಒಕ್ಕಲಿಗರನ್ನು ಭಾರಿ ಸಂಖ್ಯೆಯಲ್ಲಿ ಅಂದರೆ ಶೇ.80ರಷ್ಟು ಜನ ಲಿಂಗಾಯಿತರಾಗಿ ಮತಾಂತರಗೊಳಿಸಿದರು. ನೊಳಂಬ ಸಮಾಜದ ಶ್ರೀ ಮಠಗಳು ಶಿಡ್ಲೇಹಳ್ಳಿ (ತಿಪಟೂರು) ಬಳ್ಳೆಕಟ್ಟೆ (ತಿಪಟೂರು) ಪರದೇಶಿ ಮಠ (ತಿಪಟೂರು) ತಮ್ಮಡಿಹಳ್ಳಿ (ಚಿಕ್ಕನಾಯಕನಹಳ್ಳಿ) ನಂದಿಗುಡಿ (ಹರಿಹರ) ಕರಡಿಗವಿಮಠ (ಚಿಕ್ಕಮಗಳೂರು) ಕೋಳಗುಂದ (ಅರಸೀಕೆರೆ) ಏಳುನಾಡು (ಕಡೂರು) ಪುಷ್ಪಗಿರಿ (ಬೇಲೂರು) ಇವೇ ಮುಂತಾದವು. ಇಂದು ಶೇ.20ರಷ್ಟು ಜನ ಲಿಂಗಾಯಿತರಾಗಿ ಮತಾಂತರಗೊಳ್ಳದೆ ಒಕ್ಕಲಿಗರಾಗಿ ಮುಂದುವರಿದಿದ್ದಾರೆ. ಇಂದು ಮುಂದುವರಿದ ವೀರಶೈವರಾಗಲಿ ಒಕ್ಕಲಿಗರಾಗಲಿ ಈ ಶೇ.20ರಷ್ಟು ಜನ ನೊಣಬ ಒಕ್ಕಲಿಗರನ್ನು ಕೈಹಿಡಿದು ನಡೆಸುತ್ತಿಲ್ಲ. ಇದು ಇಂದು ತೀರ ಅವಶ್ಯವು, ಅನಿವಾರ್ಯವೂ ಆಗಿದೆ ಎಂದೇಳಬಹುದು.

ಚೋಳ / ಚೇಳ ಒಕ್ಕಲಿಗರು

ತುಮಕೂರು ಜಿಲ್ಲೆ ಚಿಕ್ಕನಾಯಕನ ಹಳ್ಳಿಯ ದೊಡ್ಡಹುಳ್ಳೇನಹಳ್ಳಿ, ಬಲ್ಲೇನಹಳ್ಳಿ ಅದೇ ರೀತಿ ಮಧುಗಿರಿಯ ಬಸವನಹಳ್ಳಿ, ದೊಡ್ಡೆರಿ, ಸಾದರಹಳ್ಳಿ ಇವೇ ಮುಂತಾದ ಪ್ರದೇಶಗಳಲ್ಲಿ ಚೋಳ ಇಲ್ಲವೆ ಚೇಳ ಒಕ್ಕಲಿಗರು ನೆಲೆಸಿದ್ದಾರೆ. ಆಧುನಿಕ ಕಾಲಘಟ್ಟದಲ್ಲಿ ತಮ್ಮನ್ನು ಒಕ್ಕಲಿಗರು ಎಂದಷ್ಟೆ ಕರೆದುಕೊಳ್ಳಲು ಇಚ್ಚಿಸುತ್ತಾರೆ. ಹಿಂದೆ ಈ ಹೆಸರು ಬರಲು ಕಾರಣವೇನೆಂದರೆ ಮಾಕೋನಹಳ್ಳಿ ದೊಡ್ಡಪ್ಪಗೌಡರ ಪ್ರಕಾರ. ಶತಮಾನ

ಹತ್ತನೆಯ ಶತಮಾನದಲ್ಲಿ ಗಂಗರಸರು ಜೈನ ಮತವನ್ನು ಸ್ವೀಕರಿಸಿದರು. ಆದ ಕಾರಣದಿಂದ ಆದಿಚುಂಚನಗಿರಿ ಸಂಸ್ಥಾನಕ್ಕೆ ಜೈನ ಆಚಾರ್ಯರನ್ನು ಮಠಾಧೀಶ್ವರನನ್ನಾಗಿ ನೇಮಿಸಲಾಗಿ ಅದನ್ನು ವಿರೋಧಿಸಿದ ಒಕ್ಕಲಿಗರ ಒಂದು ತಂಡವು ಚೋಳರು ಪ್ರಾಬಲ್ಯಕ್ಕೆ ಬಂದ ಸಂದರ್ಭದಲ್ಲಿ ಚೋಳರ ಸಹಾಯ ಪಡೆದು ಗಂಗರಸರನ್ನು ಸೋಲಿಸಿ ನಾಥ ಪಂಥದ ಅವಧೂತ ಯೋಗಿಗಳನ್ನು ನೇಮಿಸಿದರು ಎಂತಲೂ ಹೀಗಾಗಿ ಒಕ್ಕಲಿಗರ ಈ ಪಂಗಡಕ್ಕೆ ಚೋಳ ಒಕ್ಕಲಿಗರು ಎಂದು ಕರೆದರು ಎಂದು ತಮ್ಮ 'ಒಕ್ಕಲಿಗರು' ಎಂಬ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ಮತ್ತೊಂದು ಮಾಹಿತಿಯ ಪ್ರಕಾರ ಕ್ರಿ.ಶ. 11 ಮತ್ತು 12ನೇ ಶತಮಾನದಲ್ಲಿ ಕರ್ನಾಟಕಾದಾದ್ಯಂತ ಚೋಳರ ಪ್ರಾಬಲ್ಯ ಜಾಸ್ತಿಯಾಗಲಾಗಿ ಚೋಳರ ಸೈನ್ಯದ ಪರ ಈ ಪಂಗಡವು ನಿಂತಿತು. ಹೀಗಾಗಿ ಈ ಪಂಗಡ ಇಲ್ಲವೆ ಕುಲವನ್ನು ಚೋಳ ಇಲ್ಲವೆ ಚೇಳ ಒಕ್ಕಲಿಗರು ಎಂದು ಕರೆಯಲಾಯಿತು ಎಂಬುದೂ ಇದೆ.

ಚೋಳ ಒಕ್ಕಲಿಗರು ತಿರುಪತಿ ತಿಮ್ಮಪ್ಪ, ಧರ್ಮಸ್ಥಳದ ಮಂಜುನಾಥ, ಆದಿಚುಂಚನಗಿರಿ ಭೈರವೇಶ್ವರ ಹೀಗೆ ನಾನಾ ದೇವರುಗಳನ್ನು ಪೂಜಿಸುತ್ತಾರೆ. ಒಕ್ಕಲಿಗರು ಆಚರಿಸುವ ಎಲ್ಲಾ ರೂಢಿ, ಸಂಪ್ರದಾಯಗಳನ್ನು ಆಚರಿಸುತ್ತಾರೆ. ಇವರ ಮುಖ್ಯ ಕಸುಬು ವ್ಯವಸಾಯ ಮತ್ತು ಪಶುಸಂಗೋಪನೆ. ಕಾಲ ಬದಲಾದಂತೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಮುಂದುವರಿದು ಸರ್ಕಾರಿ, ಖಾಸಗಿ ಉದ್ಯೋಗ ಉದ್ಯಮದೊಂದಿಗೆ ತಮ್ಮ ಬದುಕು ಕಟ್ಟಿಕೊಂಡಿದ್ದಾರೆ. ಇವರ ಸಾಮಾಜಿಕ ಸ್ಥಿತಿಗಳು ಬದಲಾವಣೆಗೊಂಡಂತೆಲ್ಲ ಗಂಗಡಕಾರರು, ಕುಂಚಟಿಗರು, ಮೊರಸು ಒಕ್ಕಲಿಗರು ಸೇರಿದಂತೆ ಎಲ್ಲಾ ಒಕ್ಕಲಿಗ ಪಂಗಡಗಳೊಂದಿಗೆ ವೈವಾಹಿಕ ಬಾಂಧವ್ಯ ಬೆಳೆಸಿಕೊಂಡಿದ್ದಾರೆ. ಒಂದು ದುರಂತದ ಸಂಗತಿ ಎಂದರೆ 1980ರ ದಶಕದಲ್ಲಿ ಚೇಳರು, ಸೋಮಲಾಪುರ ಇವೇ ಕೆಲವು ಭಾಗಗಳಲ್ಲಿದ್ದ ಸರಿಸುಮಾರು ಇಪತ್ತು ಸಾವಿರಜನ ಚೋಳ ಒಕ್ಕಲಿಗರು ಲಿಂಗದೀಕ್ಷೆ ಪಡೆದು ಲಿಂಗಾಯಿತರಾಗಿ ಮತಾಂತರಗೊಂಡಿದ್ದು ಖೇದದ ಸಂಗತಿ. ಕಾರಣ ತಮಗೆ ಸರ್ಕಾರ ನೀಡುವ 2ಎ ಸಿಗುತ್ತದೆ ಎಂತಲೂ, ಮಾಂಸಾಹಾರ ತ್ಯಜಿಸಿದರೆ ಬ್ರಾಹ್ಮಣರಿಗೆ ಸರಿಸಮ ಎಂಬ ಭ್ರಮೆಯಿಂದಾಗಿಯೂ ಎಂದೇಳಬಹುದು. ಮತ್ತಷ್ಟು ಜನ ಚೋಳ ಒಕ್ಕಲಿಗರು ಮತಾಂತರ ಗೊಳ್ಳುತ್ತಿದ್ದರೊ ಏನೂ ಎಚ್ಚೆತ್ತುಕೊಂಡ ಆದಿಚುಂಚನಗಿರಿಯ ಅಂದಿನ ಪೀಠಾಧ್ಯಕ್ಷರಾದ ಭೈರವೈಕ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಶ್ರೀ ಹೆಚ್.ಡಿ. ದೇವೇಗೌಡರನ್ನು ಕರೆದುಕೊಂಡು ಹೋಗಿ ಮತಾಂತರವನ್ನು ತಪ್ಪಿಸಿದರು. (ಒಕ್ಕಲಿಗರು ಒಕ್ಕಲಿಗರ ಪ್ರಭೇದಗಳು – ಸ್ಥಿತ್ಯಂತರ – ಲೇ.: ಎಂ.ಎಚ್. ನಾಗರಾಜು)

ಗಾಮ ಒಕ್ಕಲಿಗರು / ಗ್ರಾಮ ಒಕ್ಕಲಿಗರು

ಹಳ್ಳಿ ಇಲ್ಲವೆ ಗ್ರಾಮಗಳಲ್ಲಿ ನೆಲೆಸಿ ವ್ಯವಸಾಯ, ಪಶುಸಂಗೋಪನೆ ಸೇರಿದಂತೆ ಎಲ್ಲಾ ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಇವರನ್ನು ಗ್ರಾಮ ಒಕ್ಕಲಿಗರು, ಗಾಮ ಒಕ್ಕಲಿಗರು, ಕಾಮೊಕ್ಕಲು ಇವೇ ಮುಂತಾದ ಹೆಸರಿನಿಂದ ಕರೆಯುತ್ತಾರೆ. ಇವರು ತಮ್ಮ ಹೆಸರಿನ ಮುಂದೆ ಅಧಿಕಾರ ಇಲ್ಲವೆ ಅಂತಸ್ತಿನ ಸಂಕೇತ ವಾದ ಗೌಡ, ನಾಯಕ, ಗೌಡ್ರು ಇವೇ ಮುಂತಾದವನ್ನು ಹೊಂದಿರುತ್ತಾರೆ. ಬಿ.ಎಲ್. ರೈಸ್ ರವರು "ಕಾಮೊಕ್ಕಲು" ಎಂದು ಕರೆದಿದ್ದಾರೆ. ಗ್ರಾಮ ನಿರ್ಮಾಣ, ಗ್ರಾಮಗಳಿಗೆ ರಕ್ಷಣೆ ಇಲ್ಲವೆ ಕಾಯುವ ಕೆಲಸ, ಗೋಗ್ರಹಣವಾದರೆ ಗೋರಕ್ಷಣೆ, ಶತ್ರುಭಾದೆಯಿಂದ ಗ್ರಾಮ ರಕ್ಷಣೆ ಇವೇ ಮುಂತಾದ ಜವಾಬ್ದಾರಿಯುತ ಕೆಲಸವನ್ನು ನಿರ್ವಹಿಸುತ್ತಿದುದ್ದರಿಂದಾಗಿ ಇವರಿಗೆ ಗಾಮ (ಗ್ರಾಮ) ಒಕ್ಕಲಿಗರೆಂದು ಕರೆಯುತ್ತಾರೆ. ಗೋರಕ್ಷಣೆಯ ಕಾಲದಲ್ಲಿ ಶತ್ರುಗಳ ಇಲ್ಲವೆ ಕಳ್ಳಕಾಕರ ವಿರುದ್ಧ ಹೋರಾಡಿ ಮರಣ ಹೊಂದಿದಾಗ ಇವರಿಗೆ ಮಾಸ್ತಿ, ಕೆಂಡಮಾಸ್ತಿ, ಚೌಲದ ಮಾಸ್ತಿ, ರಣದೇವಿ, ಹೊನ್ನಮ್ಮದೇವಿ, ಚಂದ್ರಶಾಲಿ, ಜಟ್ಟಿ ಇವೇ ಮೊದಲಾದ ವೀರಪರಂಪರೆಯ ಚಿಹ್ನೆಗಳು ಲಭಿಸುತ್ತಿದ್ದವು. ಇವರ ಸಮುದಾಯದಲ್ಲಿ ತಮ್ಮ ವಂಶವಾಹಿನಿಗಳ ಮೂಲವನ್ನು "ಬುಡ"ಗಳೆಂಬ ಪರಿಕಲ್ಪನೆಗಳ ಮೂಲಕ ತಮ್ಮ ಸಮಾಜದಲ್ಲಿ ಗುರ್ತಿಸಿಕೊಂಡಿದ್ದಾರೆ. ಉದಾ: ಜಟ್ಟಿಗನ ಬುಡ, ಮಲ್ಲಮಾಸ್ತಿಬುಡ, ಬೋಳಜುಬುಡ, ಬಿಡದಾರಿ ಬುಡ, ಮೊಳಗೇರಿ ಬುಡ, ಹೊನ್ನಮಾಸ್ತಿಬುಡ, ಇವೇ ಮುಂತಾದವು. ಇವುಗಳು ಗ್ರಾಮ ಒಕ್ಕಲಿಗರ ಬುಡಕಟ್ಟು, ತಲಕಟ್ಟಿನ ಮೂಲವನ್ನು ಸಾಧನೆಯನ್ನು ತಿಳಿಸುತ್ತದೆ.

ಗ್ರಾಮ ಒಕ್ಕಲಿಗರು ಹೊನ್ನಾವರ, ಕುಮುಟ, ಗೋಕರ್ಣ, ಹಿರೇಗುತ್ತಿ, ಅಂಕೋಲ, ಭಟ್ಕಳ, ಕದ್ರಿ ಇವೇ ಮುಂತಾದ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಪ್ರಾರಂಭದಲ್ಲಿ ಪಶುಸಂಗೋಪನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ನಂತರ ಕೃಷಿಕರಾಗಿ ಬದಲಾದರು. ಇವರಲ್ಲಿ ಕೆಲವರು ಭೂ-ಒಡೆಯರಾಗಿದ್ದರೆ ಸಾಕಷ್ಟು ಮಂದಿ ಗೇಣಿದಾರರಾಗಿ, ಕೃಷಿ ಕಾರ್ಮಿಕರಾಗಿ, ಅಡಿಕೆ ಕೀಳುವ, ಅಡಿಕೆ ಹದಗೊಳಿಸುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಅಷ್ಟೇನು ಬಲಾಢ್ಯರಾಗಿಲ್ಲ. ಇವರಲ್ಲಿ ಅವಿಭಕ್ತ ಕುಟುಂಬ, ವಿಭಕ್ತ ಕುಟುಂಬಗಳ ವ್ಯವಸ್ಥೆ ಇದೆ. ಪುರುಷ ಪ್ರಧಾನ ಸಮಾಜವಾಗಿದೆ. ಇವರಲ್ಲೂ ಹಲವಾರು ಗೋತ್ರಗಳಿವೆ. ಪಶು, ಪಕ್ಷಿ, ಪ್ರಕೃತಿಯಲ್ಲಿರುವ ಭೂಮಿ, ಬೆಟ್ಟ ಗುಡ್ಡ, ಜಲ, ಆಕಾಶವೇ ಅಲ್ಲದೆ ದೇವಾನುದೇವತೆಗಳು ಹಾಗೂ ಶಕ್ತಿಯ ಆರಾಧಕರೂ ಆಗಿದ್ದಾರೆ. ಆನೆಬಳಿ, ಕಡಿನಬಳಿ, ಚೆಂಡಿಬಳಿ, ನೇರಲಬಳಿ, ಹೀರೆಬಳಿ, ಅರಸಿನಬಳಿ, ಸೀಗೆಬಳಿ ಇವೇ ಮುಂತಾದವುಗಳು. ಒಂದೇ ಬಳಿ ಇಲ್ಲವೆ ಗೋತ್ರಗಳಲ್ಲಿ ಹೆಣ್ಣು

ಕೊಡುವುದು ತರುವುದು ನಿಷಿದ್ಧ. ಸ್ವಗೋತ್ರದಲ್ಲಿ ಮದುವೆ ಆಗುವುದಿಲ್ಲ. ಕುಲ ಚಿಹ್ನೆಯನ್ನು ತಮ್ಮ ದೇವತೆಗಳೆನ್ನುತ್ತಾರೆ.

ಇಷ್ಟೇ ಅಲ್ಲದೆ ಇವರ ಧಾರ್ಮಿಕ ಆಚರಣೆಯಲ್ಲಿ ತುಳಸಿ ಕಟ್ಟೆಯನ್ನು ಪೂಜಿಸುವುದು ಇಲ್ಲವೆ "ತುಳಸಿ ಪೂಜೆ" ಇವರ ಜೀವನದ ಅವಿಭಾಜ್ಯ ಅಂಗವಾಗಿದೆ. ಪ್ರತಿ ಮನೆಯಲ್ಲೂ ತುಳಸಿಕಟ್ಟೆಯನ್ನು ನಿರ್ಮಿಸಿಕೊಂಡಿರುತ್ತದೆ. ತುಳಸಿ ಪೂಜಿಸದೆ ಊಟವನ್ನು ಮಾಡುತ್ತಿರಲಿಲ್ಲ (ಕಾಲ ಬದಲಾಗಿದೆ) ಹಿಂದೊಮ್ಮೆ ಮಣ್ಣಿನಿಂದ ಮಾಡಿದ ಕಾಲ ಬದಲಾದಂತೆ ಸಿಮೆಂಟ್‌ನಿಂದ ಮಾಡಿದ ತುಳಸಿ ಕಟ್ಟೆಯನ್ನು ಪೂಜಿಸುತ್ತಾರೆ. ತುಳಸಿಕಟ್ಟೆಯ ಮುಂದೆ ತೆಂಗಿನ ಕಾಯಿಯನ್ನಿಟ್ಟು ಪೂಜಿಸುತ್ತಾರೆ ಆ ತೆಂಗಿನ ಕಾಯಿಯನ್ನು ಅಮ್ಮನ (ದೇವಿಯ) ಕಾಯಿ ಎಂದು ಕರೆಯುತ್ತಾರೆ. ತೆಂಗಿನ ಕಾಯಿಗೆ ತೆಂಗಿನ ಮರಕ್ಕೆ ವಿಶೇಷ ಗೌರವ ಹಾಗೂ ಸ್ಥಾನಮಾನವನ್ನು ಕೊಡುತ್ತಾರೆ. ತೆಂಗಿನ ತೋಟ ಹೊಂದಿರುವವರು ಹಾಗೂ ಕಾಯಿ ಕೊಯ್ಯುವವರು ಅಮವಾಸ್ಯೆ, ಹುಣ್ಣಿಮೆ, ಭಾನುವಾರ ಹೀಗೆ ಇವೇ ಮುಂತಾದ ದಿನಗಳಲ್ಲಿ ತೆಂಗಿನ ಮರದಿಂದ ಕಾಯಿ ಕುಯ್ಯುವುದಿಲ್ಲ. ಶ್ರಾವಣ ಸೋಮವಾರ ಮತ್ತು ವೈಶಾಕ ಶನಿವಾರ ಇವರಿಗೆ ಶ್ರೇಷ್ಠವಾದದ್ದು. ತಿರುಪತಿ ತಿಮ್ಮಪ್ಪ ಇವರಿಗೆ ದೊಡ್ಡದೇವರು. ಧರ್ಮಸ್ಥಳ ಮಂಜುನಾಥ ಸಣ್ಣದೇವರು. ತಮ್ಮ ಶಕ್ತ್ಯಾನುಸಾರ ಧರ್ಮಸ್ಥಳ ಇಲ್ಲವೆ ತಿರುಪತಿ ತಿಮ್ಮಪ್ಪನಿಗೆ ಹರಕೆ ಹೊತ್ತು ಕೊಳ್ಳುತ್ತಾರೆ. ಹಿಂದೊಮ್ಮೆ ತಿರುಪತಿಗೆ ಹೋಗಿ ಬಂದರೆ ತಾವು ಕೃತಾರ್ಥರಾದಂತೆ ಎಂದು ಭಾವಿಸುತ್ತಿದ್ದರು. ಕೃಷಿ ಆಧಾರಿತ ಹಾಗೂ ಕೃಷಿ ಸಂಬಂಧಿ ಹಬ್ಬಗಳನ್ನು ನಿಷ್ಠೆಯಿಂದ ಆಚರಿಸುತ್ತಾರೆ. ಸಂಕ್ರಾಂತಿಯು ಜನ, ಜಾನುವಾರುಗಳಿಗೆ ವಿಶೇಷವಾದ ದಿನವಾಗಿದೆ. ಹೀಗಾಗಿ ಸಂಕ್ರಾಂತಿಯನ್ನು ವಿಶೇಷವಾಗಿ ಆಚರಿಸುತ್ತಾರೆ. ಅದೇ ರೀತಿ ರೈತರು ತಮ್ಮ ಹೊಲಗದ್ದೆಗಳಲ್ಲಿ ಬೆಳೆದ ಬೆಳೆಯ ಕೊಯ್ಲಿಗೆ ಮೊದಲು "ಕದಿರುಹಸ್ತ" ಎಂಬ ಹಬ್ಬವನ್ನು ಆಚರಿಸುತ್ತಾರೆ. ದೀಪಾವಳಿಯು ಗ್ರಾಮ ಒಕ್ಕಲಿಗರಿಗೆ ವಿಶೇಷ ಹಾಗೂ ದೊಡ್ಡ ಹಬ್ಬವಾಗಿದೆ. ಇದನ್ನು ಬಲೀಂದ್ರ ಪೂಜೆ ಎಂದು ಕರೆಯುತ್ತಾರೆ. ಕಾರ್ತಿಕ ಮಾಸದಲ್ಲಿ ಬರುವ ಹುಣ್ಣಿಮೆಯನ್ನು "ತುಳಸಿ ಹುಣ್ಣಿಮೆ" ಎಂದು ಹಬ್ಬವನ್ನು ಆಚರಿಸುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಗಾಮ ಒಕ್ಕಲಿಗರು ಇಲ್ಲವೆ ಗ್ರಾಮ ಒಕ್ಕಲಿಗರು ಕೃಷಿ ಕಾಯಕದಲ್ಲೇ ದೇವರನ್ನು ಕಾಣುತ್ತಾರೆ ಹಾಗೂ ಹಬ್ಬ ಹರಿದಿನಗಳನ್ನು ಆಚರಿಸಿ ಸಮತೋಷದಿಂದ ಕಾಲ ಕಳೆಯುತ್ತಾರೆ.

ಗ್ರಾಮ ಒಕ್ಕಲಿಗರು ಇಲ್ಲವೆ ಗ್ರಾಮ ಒಕ್ಕಲಿಗರು ಉತ್ತರ ಕನ್ನಡ ಭಾಗದಲ್ಲಿ ಅಲ್ಪಸಂಖ್ಯಾತರಾಗಿದ್ದ ಕಾರಣ ತಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದರು. ಅವರ ಸಮಾಜದಲ್ಲಿ ಇಲ್ಲವೆ ಕುಟುಂಬದಲ್ಲಾಗುವ ತಗಾದೆ, ವ್ಯಾಜ್ಯ, ಜಗಳ, ಭೂ ಒತ್ತುವರಿ, ವೈಮನಸ್ಯ, ಕೊಲೆ, ಸುಲಿಗೆ, ಕಳ್ಳತನ ಇವೇ ಮುಂತಾದವುಗಳನ್ನು

ಬಗೆಹರಿಸಿಕೊಳ್ಳಲು ವ್ಯವಸ್ಥೆ ಇದ್ದಿತು. ಇದರಲ್ಲಿ ವೈದ್ಯ, ಬುಧವಂತ, ಕೋಲ್ಕಾರ, ಪಟಗಾರ, ಮಣಿಗಾರ ಇವೇ ಮೊದಲಾದ ಆಡಳಿತಾತ್ಮಕ ಹುದ್ದೆಗಳು ವಂಶಪಾರಂಪರ್ಯವಾಗಿ ಬರುತ್ತಿತ್ತು. ಬುದ್ಧಿವಂತನ ನೇತೃತ್ವದಲ್ಲಿ ಸಭೆಯಲ್ಲಿ ನಿರ್ಣಯವಾಗಬೇಕಿತ್ತು. ಸಭೆ ನಡೆಯುವ ಮೊದಲೇ ಯಾವ ವಿಷಯವನ್ನು ಚರ್ಚಿಸಬೇಕೆಂದು ಕೋಲ್ಕಾರ ಅಥವಾ ಮಣಿಗಾರ ಹಾಗೂ ಬುಧವಂತರು ಮಾತನಾಡಿಕೊಂಡು ಸಂಬಂಧಿಸಿದ ವಿಷಯ ಮತ್ತು ದಿನಾಂಕವನ್ನು ಗೊತ್ತುಪಡಿಸುತ್ತಿದ್ದರು. ಪ್ರತಿಮನೆಗೂ ವಿಷಯವನ್ನು ಮುಟ್ಟಿಸುವ ಜವಾಬ್ದಾರಿಯನ್ನು ಕೊಲ್ಕಾರನು ಒತ್ತಿದ್ದನು. ಒಮ್ಮೆ ಸಭೆಯು ತೀರ್ಮಾನ ತೆಗೆದುಕೊಂಡರೆ ಅದನ್ನು ಯಾರೂ ವಿರೋಧಿಸುತ್ತಿರಲಿಲ್ಲ. ಆದರೆ ಇತ್ತೀಚೆಗೆ ಶಿಕ್ಷಣ, ಸಂಸ್ಕೃತಿ, ನಾಗರಿಕತೆ ಬೆಳೆಯಿತು ಹಾಗೂ ನ್ಯಾಯ ತೀರ್ಮಾನ ಮಾಡುವ ಬುಧವಂತ ಇಲ್ಲವೆ ಕೋಲ್ಕಾರನು ಸ್ವಜನ ಪಕ್ಷಪಾತ, ಲಂಚಗೂಳಿತನ, ಸ್ವಹಿತಾಸಕ್ತಿಯಿಂದ ಅವರ ತೀರ್ಮಾನವನ್ನು ಪ್ರಶ್ನಿಸತೊಡಗಿದರು. ಪೊಲೀಸ್ ಠಾಣೆ, ಕೋರ್ಟುಗಳಿಗೆ ಎಡೆತಾಕಿದರು. ಹಿಂದಿದ್ದ ನಂಬಿಕೆ, ಪ್ರಾಮಾಣಿಕತೆ ಕಣ್ಮರೆಯಾಗುತ್ತಾ ಬಂದಿತು. ಸಾಮಾಜಿಕ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಹಿಂದುಳಿದ ಇವರು ಕ್ರಮೇಣ ಒಕ್ಕಲಿಗರ ಸಂಘ, ಸಂಸ್ಥೆಗಳ ಮೂಲಕ ತಮ್ಮನ್ನು ಗುರ್ತಿಸಿಕೊಳ್ಳತೊಡಗಿದರು. ಮುಂದುವರಿದ ಒಕ್ಕಲಿಗ ಸಮುದಾಯದವರ ನಿರ್ಲಕ್ಷ್ಯ, ಮಠಮಾನ್ಯಗಳ ಪ್ರಭಾವ ಕಡಿಮೆ ಇದ್ದುದರಿಂದ ಸಮಾಜದ ಮುಖ್ಯವಾಹಿನಿಗೆ ಸೇರುವಲ್ಲಿ ಬಹಳ ತಡವಾಯಿತು ಎಂದೇಳಬಹುದು. ಕಾಲಘಟ್ಟದಲ್ಲಾದ ಬದಲಾವಣೆ ಇವರನ್ನು ಮೇಲಕ್ಕೆತ್ತಿತು. 1975ರಲ್ಲಿ "ಉಳುವವನೇ ಭೂ–ಒಡೆಯ" ಎಂಬ ಕಾನೂನು ಗ್ರಾಮ ಒಕ್ಕಲಿಗರಲ್ಲಿ ಸಾಕಷ್ಟು ಮಂದಿ ಗೇಣಿದಾರರು ಭೂ–ಒಡೆಯರಾದರು. ಆದಿಚುಂಚನಗಿರಿಯ ಅಂದಿನ ಪೀಠಾಧ್ಯಕ್ಷರಾಗಿದ್ದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಜಿಯವರು, ಆನಂತರ ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಸ್ವಾಮಿಗಳ ದೂರದೃಷ್ಟಿಯಿಂದಾಗಿ ಅಲ್ಲಲ್ಲಿ ಶಾಲಾ, ಕಾಲೇಜುಗಳು ಸ್ಥಾಪನೆಯಾದವು. ಒಕ್ಕಲಿಗ ವಿದ್ಯಾರ್ಥಿಗಳಿಗೆ ವಸತಿ ನಿಲಯ ಸ್ಥಾಪನೆ ಮಾಡಿದರು. ಶಾಖಾಮಠದ ಅಧ್ಯಕ್ಷರಾದ ಶ್ರೀ ಶ್ರೀ ಶ್ರೀ ಪ್ರಸನ್ನನಾಥಸ್ವಾಮಿಗಳು ಗ್ರಾಮ ಒಕ್ಕಲಿಗರ ಏಳ್ಗೆಗಾಗಿ ಶ್ರಮಿಸಿದರು. ಹೀಗಾಗಿ ಗಾಮ ಒಕ್ಕಲಿಗರು ಇಂದು ಪ್ರವರ್ಧಮಾನಕ್ಕೆ ಬರತೊಡಗಿದ್ದಾರೆ. (ಡಾ॥ ಗಣಪತಿ ಗೌಡ – ಗಾಮ ಒಕ್ಕಲಿಗರು / ಗ್ರಾಮ ಒಕ್ಕಲಿಗರು ಒಂದು ಅಧ್ಯಯನ ಕೃತಿಯಿಂದ)

ಬಹಳ ಹಿಂದೆ ಭೂ ಒಡೆಯರು, ಭೂ ಮಾಲೀಕರಾದ ಇವರು ಕಾಲಚಕ್ರಕ್ಕೆ ಸಿಲುಕಿ, ಯಾವುದೋ ಆಳರಸರ ಕಾಲದಲ್ಲಿ ಗೇಣಿದಾರರಾಗಿ ಮಾರ್ಪಟ್ಟಿರಬೇಕು. ಅಘನಾಶಿನಿ ನದಿಯ ತೀರಪ್ರದೇಶದಲ್ಲಿ ತಮ್ಮ ನೆಲೆ ಕಂಡು ಕೊಂಡಿದ್ದ ಗ್ರಾಮ ಒಕ್ಕಲ ಪಟಗಾರರು ಈಗಲೂ ಸಹ ಈ ಭಾಗದಲ್ಲಿ ಇರುವಂತಹ "ಗಜನಿ" ಭೂಮಿಯ

ಮೇಲ್ವಿಚಾರಕರು. ತಮಗೆ ದೊರೆತ ಭೂಮಿಯನ್ನು ಸಾಗುವಳಿ ಯೋಗ್ಯ ಭೂಮಿಯನ್ನಾಗಿ ಮಾಡಿ ಭತ್ತ ಬೆಳೆಯುತ್ತಾರೆ. (ದಪ್ಪನೆಯ ಭತ್ತ ಇದನ್ನು ಸ್ಥಳೀಯವಾಗಿ ಕಗ್ಗ ಭತ್ತ ಎನ್ನುತ್ತಾರೆ)

ಆರ್ಥಿಕವಾಗಿ ಅನುಕೂಲತೆ ಪಡೆದ ಮೇಲೆ ಇವರಲ್ಲಿ ಶಿಕ್ಷಣ, ಉದ್ಯೂಗ, ಸರ್ಕಾರಿ ಉದ್ಯೋಗ, ಉದ್ಯಮ, ರಾಜಕೀಯವಾಗಿ ಮೇಲೆ ಬರತೊಡಗಿದರು. ಸರ್ಕಾರದ ಉನ್ನತ ಉದ್ದೆಯನ್ನು ಅಲಂಕರಿಸಿದರು. ತಮ್ಮ ಜನರನ್ನು ಒಗ್ಗೂಡಿಸ –ಬೇಕೆಂಬ ಉದ್ದೇಶದಿಂದ ಹಿಂದೆ ಜಿ.ಎನ್. ಪಟಗಾರ್‌ರವರು ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘವನ್ನು ಕಟ್ಟಿದರು. ನಂತರ ವಿ.ಯು. ಪಟಗಾರ್, ಜಿಲ್ಲಾ ಪಂಚಾಯ್ತಿ ಸದಸ್ಯ ಲಲಿತಾ ಪಟಾಗಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷ ಮಂಜುನಾಥ ಪಟಾಗಾರ್, ಉದ್ದಿಮೆದಾರ ವಿಷ್ಣು ಪಟಗಾರ್, ಜೆ.ಡಿ.ಎಸ್.ನ ಮಾಜಿ ಜಿಲ್ಲಾಧ್ಯಕ್ಷ ಗಣಪಯ್ಯಗೌಡ ಹೀಗೆ ಗ್ರಾಮ ಒಕ್ಕಲಿಗ ಸಮಾಜದ ಇವರು ತಮ್ಮ ಪ್ರಾಬಲ್ಯವನ್ನು ಮೆರೆದಿದ್ದಾರೆ.

ಪಟಗಾರರು

ಗ್ರಾಮ ಒಕ್ಕಲಿಗರಲ್ಲಿ ಘಟ್ಟದ ಮೇಲಿನ ಒಕ್ಕಲಿಗ ಅವಿಭಕ್ತ ಕುಟುಂಬದ ವ್ಯವಸ್ಥೆಯಲ್ಲಿ ಆಸ್ತಿಯ ಅಧಿಕಾರ ಮತ್ತು ನ್ಯಾಯಾಧಿಕಾರವನ್ನು ವಯಸ್ಸಿನಲ್ಲಿ ಹಿರಿಯವನಾದವನು ನೋಡಿಕೊಳ್ಳಬೇಕಾಗಿತ್ತು. ಇವನು "ಪಟ್ಟೆದಾರ" ಎಂದು ಕರೆಯುತ್ತಿದ್ದರು. ಬಹುಷಃ ಗ್ರಾಮ ಒಕ್ಕಲಿಗರಲ್ಲಿ ಪಟಗಾರರೆಂದು ಕರೆಯಲ್ಪಡುವರು. ಘಟ್ಟದ ಮೇಲಿನ ಒಕ್ಕಲಿಗರಲ್ಲಿ ಕರೆಯಲ್ಪಟ್ಟ ಪಟ್ಟೆದಾರನಾಗಿರಲೂ ಬಹುದು ಅಥವಾ ನದಿಯ ನೀರಿನಿಂದ ಬಂದ ಹೂಳಿನಿಂದ ನಿರ್ಮಾಣವಾಗುವ ದಿಬ್ಬಕ್ಕೆ ಪಟ, ಪಾಟು (ಬಾಟು) ಎಂದು ಕರೆಯಲಾಗುತ್ತದೆ. ಇಂತಹ ಪಟ ಪ್ರದೇಶವನ್ನು ಸಾಗುವಳಿ ಯೋಗ್ಯ ಜಮೀನನ್ನಾಗಿ ಮಾಡಿ ಅಲ್ಲಿ ಭತ್ತ (ದಪ್ಪನೆಯ ಭತ್ತಕ್ಕೆ ಇಲ್ಲಿ ಕಗ್ಗ ಭತ್ತ ಎನ್ನುತ್ತಾರೆ) ಇಂದಿಗೂ ಈ ಭಾಗದಲ್ಲಿರುವ ಇರುವಂತಹ ಗಜನಿ ಭೂಮಿಯ ಮೇಲ್ವಿಚಾರಕರು. (ಗ್ರಾಮ ಒಕ್ಕಲಿಗರ ಸಾಂಸ್ಕೃತಿಕ ಅನನ್ಯತೆ ಮತ್ತು ಸಮುಕಾಲೀನ ಸಂದರ್ಭಗಳು – ಡಾ. ಗಣಪತಿಗೌಡ., ಪು.12).

ಇವರು ತಮ್ಮ ಹೆಸರಿನ ಮುಂದೆ ಪಟಗಾರ, ಗೌಡ ಇವೇ ಮುಂತಾದ ಗೌರವ ಸೂಚಕ ಹುದ್ದೆ ಇಲ್ಲವೆ ಅಂತಸ್ತನ್ನು ಸೋತಿರುವ ಹೆಸರನ್ನು ಇಟ್ಟುಕೊಂಡಿದ್ದಾರೆ. ಇವರಲ್ಲಿ ಕೋಲ್ಕಾರ, ಬುಧವಂತ, ವೈದ್ಯ, ಮಣಿಗಾರ, ಪಟಗಾರ ಇವೇ ಮುಂತಾದವು ಆಡಳಿತಾತ್ಮಕ ಹುದ್ದೆಗಳಾಗಿವೆ. ಇವರು ತಮ್ಮ ಸಮಾಜದ ನೀತಿ, ನಿಯಮ, ಕಟ್ಟುಪಾಡುಗಳಿಗೆ ಬದ್ದರಾಗಿದ್ದಾರೆ. ಇವರಲ್ಲೂ ಕಟ್ಟೆ ಮನೆಗಳಿವೆ. ಈ ಕಟ್ಟೆ ಮನೆಗಳು ನ್ಯಾಯಪೀಠವಾಗಿ ಕೆಲಸ ಮಾಡಿತ್ತು. ಇವರಲ್ಲೂ ಬಳಿಗಳು/ಗೋತ್ರಗಳಿವೆ. ಹೊನ್ನೆಬಳಿ,

ಚೆಂಡಿಬಳಿ, ನೇರಲಬಳಿ, ಹೀರಬಳಿ, ಆನೆಬಳಿ, ನೇಗೆಬಳಿ ಇವೇ ಮುಂತಾದವುಗಳು ಇವರು ಹಿಂದಿನಿಂದಲೂ ಭೂ ಒಡೆಯರಾಗಿ, ಗೇಣಿದಾರರಾಗಿ, ಕೃಷಿ ಕಾರ್ಮಿಕರಾಗಿ, ಉತ್ತಮ ಶಿಕ್ಷಣ ಪಡೆದು, ಖಾಸಗಿ, ಸಾರ್ಕಾರಿ ಉದ್ಯೋಗಿಗಳಾಗಿ, ಉದ್ಯಮಿಗಳಾಗಿ, ವ್ಯಾಪಾರ, ವಾಣಿಜ್ಯ, ವೈದ್ಯಕೀಯ ಇವೇ ಮುಂತಾದ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ರಾಜಕೀಯವಾಗಿಯೂ ತಲೆ ಎತ್ತಿ ತಮ್ಮ ಸಮಾಜದ ಸಮುದಾಯದ ಶ್ರೇಯಸ್ಸಿಗಾಗಿ ದುಡಿದಿದ್ದಾರೆ ಹಾಗೂ ದುಡಿಯುತ್ತಿದ್ದಾರೆ. ರಾಜಕೀಯವಾಗಿಯೂ ತಲೆ ಎತ್ತಿ ತಮ್ಮ ಸಮಾಜದ ಸಮುದಾಯದ ಶ್ರೇಯಸ್ಸಿಗಾಗಿ ದುಡಿದಿದ್ದಾರೆ ಹಾಗೂ ದುಡಿಯುತ್ತಿದ್ದಾರೆ. ತಮ್ಮ ಜನರನ್ನು ಒಗ್ಗೂಡಿಸಬೇಕೆಂದು ಉದ್ದೇಶದಿಂದ ಹಿಂದೆ ಜೆ.ಎನ್. ಪಟಗಾರ್‌ರವರು "ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ"ವನ್ನು ಜಿಲ್ಲಾ ಗ್ರಾಮ ಒಕ್ಕಲಿಗ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ, ವಿ.ಯು. ಪಟೆಗಾರ್ ಜಿಲ್ಲಾ ಪಂಚಾಯಿತಿ ಸದಸ್ಯ ಲಲಿತಾ ಪಟಗಾರ್, ತಾಲ್ಲೂಕು ಪಂಚಾಯಿತಿ ಉಪಾಧ್ಯಕ್ಷ ಈಶ್ವರ ನಾಯ್ಕ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಗೋವಿಂದ ಪಟಗಾರ್ ಹಿರಿಯರಾದ ಜಿ.ಕೆ. ಪಟಗಾರ್, ಜಯಶ್ರೀ ಪಟಗಾರ್, ಶಿವಪ್ಪ ಪಟಾಗಾರ್, ಶಂಭುಗೌಡ, ಜೆ.ಡಿ.ಎಸ್. ಮಾಜಿ ಜಿಲ್ಲಾಧ್ಯಕ್ಷ ಗಣಪಯ್ಯಗೌಡ, ಜಿಲ್ಲಾ ಪಂಚಾಯಿತಿ ಸದಸ್ಯ ಪ್ರದೀಪನಾಯಕ ಇನ್ನೂ ಮುಂತಾದವರು ಎಲ್ಲಾ ಕ್ಷೇತ್ರಗಳಲ್ಲೂ ಮುಂಚುಣಿಯಲ್ಲಿದ್ದಾರೆ.

ಆದಿಚುಂಚನಗಿರಿ ಶ್ರೀಕ್ಷೇತ್ರದ ಕೊಡುಗೆ : ನಮಗೆ ಸ್ವಾತಂತ್ರ್ಯ ಬಂಧು ಏಳೆಂಟು ದಶಕಗಳೇ ಕಳೆದರೂ ಯಾವುದೇ ಸರ್ಕಾರವಾಗಲಿ ಬೆಂಗಳೂರಿನಲ್ಲಿರುವ ರಾಜ್ಯ ಒಕ್ಕಲಿಗರ ಸಂಘವಾಗಲಿ ನಮ್ಮ ಸಮುದಾಯದ ಹಿಂದುಳಿದಿರುವ ಉಪಪಂಗಡಗಳನ್ನು ಮೇಲೆತ್ತಿ ಸಮಾಜದ ಮುಖ್ಯವಾಹಿನಿಗೆ ಕರೆತರುವಲ್ಲಿ ವಿಫಲವಾಗಿದೆ ಎಂದು ಹೇಳಲು ವಿಷಾದವಾಗುತ್ತದೆ. ಆದರೆ ಆದಿಚುಂಚನಗಿರಿ ಶ್ರೀಕ್ಷೇತ್ರದ ಅಂದಿನ ಪೀಠಾಧ್ಯಕ್ಷರಾಗಿದ್ದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು, ಇಂದಿನ ಪೀಠಾಧ್ಯಕ್ಷರಾಗಿರುವ ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳು ಹಾಗೂ ದಕ್ಷಿಣ ಕನ್ನಡ ಭಾಗದ ರಾಯಭಾರಿಯಂತೆ ಕೆಲಸ ಮಾಡಿ ಹಿಂದುಳಿದಿರುವ ನಮ್ಮ ಸಮುದಾಯವನ್ನು ಸಮಾಜದ ಮುಖ್ಯವಾಹಿನಿಗೆ ಕರೆತರಲು ಶ್ರಮಿಸಿರುವ ಹಾಗೂ ಶ್ರಮಿಸುತ್ತಿರುವ ಶ್ರೀ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮೀಜಿಗಳು ಈ ಪ್ರದೇಶದಲ್ಲಿ ಶಾಲಾ–ಕಾಲೇಜು, ಸಮುದಾಯ ಭವನವನ್ನು ನಿರ್ಮಿಸಿದ್ದಾರೆ. ಹಾಗೂ ಶ್ರಮಿಸುತ್ತಿದ್ದಾರೆ. ಕುಮುಟಾದಲ್ಲಿ ಒಕ್ಕಲಿಗರ ಭವನ ತಲೆ ಎತ್ತಲು ಶ್ರೀಮಠವು ಶ್ರಮಿಸಿತು. ಕುಮುಟಾದ ದೇವಸ್ಥಾನದ ಸಮೀಪ 25 ಗುಂಟೆ ನಿವೇಶನದಲ್ಲಿ ನಿರ್ಮಾಣವಾಗಿರುವ **"ಸಮುದಾಯ ಭವನ"** ಎಲೆ ಎತ್ತಲು ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಹಾಗೂ ಶ್ರೀ ಪ್ರಸನ್ನನಾಥ ಸ್ವಾಮಿಗಳು ಎಂ.ಡಿ. ಪಟಗಾರ್, ಜಿ.ಕೆ. ಪಟಗಾರ್, ಜಿ.ಜಿ. ಪಟಗಾರು ರಾಮಚಂದ್ರ ಪಟಗಾರ್

ಬಾಡ ಇವರೇ ಮುಂತಾದವರು ಶ್ರಮಿಸುತ್ತಿದ್ದಾರೆ. ಶ್ರೀಕ್ಷೇತ್ರವು ಕುಮುಟ ತಾಲ್ಲೂಕಿನ ಮಿರ್ಜಾನದಲ್ಲಿ ಬೃಹತ್ ಬಿ.ಜಿ.ಎಸ್. ವಿದ್ಯಾಲಯವನ್ನು ಸ್ಥಾಪಿಸಲಾಗಿ ಸಾವಿರಾರು ಮಂದಿ ಮಕ್ಕಳು ಇಲ್ಲಿ ಕಲಿತಿದ್ದಾರೆ. ಹಾಗೂ ಕಲಿಯುತ್ತಿದ್ದಾರೆ. ಶ್ರೀಕ್ಷೇತ್ರದ ಪ್ರಭಾವದಿಂದಾಗಿ ಈ ಭಾಗದಲ್ಲಿ ಯೋಗ, ಭಜನೆ, ಸತ್ಸಂಗ, ಪ್ರಕೃತಿ ಚಿಕಿತ್ಸೆ, ಪ್ರಾರ್ಥನೆ, ಮಹಿಳಾ ಜಾಗೃತಿ ಶಿಬಿರ ಇವೇ ಮುಂತಾದವು ನಡೆಯುತ್ತಿದೆ.

ಕುಡು ಒಕ್ಕಲಿಗರು (ಉತ್ತರ ಕರ್ನಾಟಕ ಭಾಗ)

ಕುಡು, ಕುಡಿ, ಕೂಡು ಎಂದು ಕರೆಯಲ್ಪಡುವ ಒಕ್ಕಲಿಗರ ಒಳಪಂಗಡಗಳಲ್ಲಿ ಒಂದು ಎಂದೇಳಬಹುದು.ಕುಡು ಕೊಡು, ದಾನವಮಾಡು ಎಂಬುದಕ್ಕೆ ಶಬ್ದಮಂಜರಿಯಲ್ಲಿ ಕುಡು ಕೊಂಕುವಕ್ಕು ಎಂದು ಅರ್ಥೈಸುತ್ತದೆ. ಕುಡಿ ಎಂಬುದು ಚಿಗುರು ಎಂಬ ಅರ್ಥನೀಡುತ್ತದೆ. ಕುಡು + ಒಕ್ಕಲಿಗ = ಕುಡು ಒಕ್ಕಲಿಗ ಆಗಿದೆ. ಪಂಪ ಭಾರತದಲ್ಲಿ ಕುಡುವವನ, ಕುಡುಪೇಳ್ವನ .... ಎಂಬ ಸಾಲುಗಳು ಕುಡು ಎಂದರೆ ಕೊಡು, ದಾನ ಮಾಡು ಎಂಬ ಅರ್ಥ ಬರುತ್ತದೆ. ಈ ಜನಾಂಗದವರು ನಿಸ್ವಾರ್ಥ ಹಾಗೂ ಪ್ರಾಮಾಣಿಕತೆಗೆ ಹೆಸರಾಗಿರುವರು, ಮುಗ್ದರು. ಇಂತಹ ಕೊಡುವ ಗುಣವೇ ಮುಂದೆ ಶರಣರ ಕಾಲಕ್ಕೆ ದಾಸೋಹವಾಗಿ ಮಾರ್ಪಟ್ಟಿರುವುದನ್ನು ಗಮನಿಸಬಹುದಾಗಿದೆ. ಇಂತಹ ದಾಸೋಹ ಸಂಸ್ಕೃತಿಗೆ ಕೃಷಿ ಸಂಸ್ಕೃತಿಯೇ ಮೂಲವಾಗಿದೆ ಎಂದೇಳಬಹುದು. ಇಂದು ಬಿಜಾಪುರ, ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಗುಲ್ಬರ್ಗ, ಇಂಡಿ, ಅಥಣಿ, ಗೊದಿಬನ್ನೂರ, ಐನಾಪುರ, ಬೀದರ್, ಸೋಲಾಪುರ, ಮಂಗಳವೇಡ ಇವೇ ಮುಂತಾದ ಕಡೆ ನೆಲೆಸಿದ್ದಾರೆ. ಈ ಜನರ ಬಣ್ಣ ತುಸು ಕಪ್ಪು. ಬೆಳಗ್ಗೆ ಸುರದ್ರೂಪಿಗಳಾಗಿದ್ದರೆ ಅವರನ್ನು ಬಿಳ್ಳನವರ್ ಉಪಜಾತಿಯವರು ಎನ್ನುತ್ತಾರೆ. ಇವರು ತಾವು ಶ್ರೇಷ್ಠ ಎಂದು ತಿಳಿದಿದ್ದಾರೆ. ಕುಡು ಒಕ್ಕಲಿಗರ ಮೂಲ ವೃತ್ತಿ ವ್ಯವಸಾಯ ಮತ್ತು ಪಶುಸಂಗೋಪನೆ. ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ಕೊಟ್ಟಿಲ್ಲ ಹಾಗೂ ನವನಾಗರಿಕತೆಗೆ ಸ್ವಲ್ಪ ವಿಮುಖರಾಗಿದ್ದಾರೆ. ಕುಡು ಒಕ್ಕಲಿಗರು ಮತ್ತು ಕುರುಬರು ಒಂದೇ ಮರದ ಟೊಂಗೆಗಳು ಎಂದರೆ ತಪ್ಪಾಗಲಾರದು. ಕರ್ನಾಟಕದ ಕುಡು ಒಕ್ಕಲಿಗರನ್ನು ಮಹಾರಾಷ್ಟ್ರದಲ್ಲಿ "ಶೇತ್ಕರಿ ಧನಗರ್" (ಕೃಷಿ ಮಾಡುವ ಕುರುಬರು) ಎನ್ನುತ್ತಾರೆ. ಧೈರ್ಯ ಮತ್ತು ಶೌರ್ಯಕ್ಕೆ ಹೆಸರುವಾಸಿಯಾದ ಇವರು ಹಿಂದೊಮ್ಮೆ ರಾಜರ ಸೈನ್ಯಕ್ಕೆ ಸೇರಿ ಹಾಗೂ ಆಡಳಿತದಲ್ಲಿ ಪಾಲ್ಗೊಂಡು ಗೌಡ, ಗೌಂಡ, ನಾಡಗೌಡ, ಸರದೇಸಾಯಿ, ದೇಸಾಯಿ ಇವೇ ಮುಂತಾದ ಪದವಿ ಹಾಗೂ ಸ್ಥಾನಮಾನವನ್ನು ಪಡೆದಿದ್ದರು.

ಕುಡು ಒಕ್ಕಲಿಗ ಸಮುದಾಯದಲ್ಲಿ ಆರು ಉಪಜಾತಿಗಳು ಇರುವುದನ್ನು ಗಮನಿಸಬಹುದು. (1) ಕರಂಡೋತಿ ಅಥವಾ ದಂಡಾವತಿ (2) ಮಿಣಿಗಡಿಕರು

(3) ತದ್ದೋಡಿಗಳು (4) ಎತ್ತಿರಿಕರು (5) ಬೆಳ್ಳನವರು (6) ಹುಗ್ಗೆನವರ್ ಎಂಬುದಾಗಿ. ಮೂಲತಃ ಕೃಷಿ ಮೂಲದವರಾದ ಇವರು ಕಾಲ ಮತ್ತು ಸಂದರ್ಭಗಳಿಗೆ ತಕ್ಕಂತೆ ತಮ್ಮ ವೃತ್ತಿ ಧರ್ಮಗಳನ್ನು ಬದಲಿಸಿ ಕೊಂಡಿರಬಹುದು. ಉದಾ: ಕರಂಡೋತಿ ಅಥವಾ ದಂಡಾವತಿ ಎಂಬ ನಮ್ಮ ಸಮುದಾಯವು ಸೈನ್ಯದಲ್ಲಿದ್ದು ಕೋಲು ಇಲ್ಲವೆ ಅಧಿಕಾರದ ದಂಡ ಹಿಡಿದಿರಬಹುದು. ಸಂಪ್ರದಾಯಸ್ಥರಾದ ಇವರು ಮದುವೆಯ ಸಂದರ್ಭದಲ್ಲಿ ಲಗ್ನ ಮಾಡುವ ಮೊದಲು ಅಂದರೆ ಅಕ್ಕಿಕಾಳು ಹಾಕುವುದಕ್ಕಿಂತ ಮೊದಲು 'ಹಿರೇಕೆಂಚಕ್ಕ', 'ಕರಿಸಿದ್ದ' ಎಂಬ ಎರಡು ವಿಶೇಷ ಆಚರಣೆಗಳನ್ನು ಪೂರೈಸಬೇಕಾಗುತ್ತದೆ. ಇದು ಇವರಲ್ಲಿ ವಿಶೇಷ. ಕುಡು ಒಕ್ಕಲಿಗರಲ್ಲಿ ಸೊನ್ನಲಿಗೆಯ ಸಿದ್ದರಾಮ, ಮುಚ್ಚಂಡಿ, ಧರೆಪ್ಪ, ಇಂಗಳೇಶ್ವರದ ಭೀಮಪ್ಪ ಮುತ್ಯಾ, ಸಾವಳಗಿಯ ಭೀಮರಾಯ ಮುತ್ಯಾ ಇವರೇ ಮುಂತಾದವರು ಜನಿಸಿ ಸಾಧನೆ ಮಾಡಿದ್ದಾರೆ. ಕುಡು ಒಕ್ಕಲಿಗ ಸಮುದಾಯಕ್ಕೆ ಸೇರಿದ ಶ್ರೀ ಸಿದ್ದರಾಮನಿಗೆ ಹಾಲುಮತದ ಪೂಜಾರಿಗಳಿರುವುದು ವಿಶೇಷ. ಈ ಎರಡೂ ಮತದವರ ಮಧ್ಯೆ ಇರುವ ಬಾಂಧವ್ಯವು ಬಹಳ ಮುಖ್ಯವಾದುದು.

ನಾಡಪ್ರಭುಗಳಾಗಿ ಕುಡು ಒಕ್ಕಲಿ` ು : ಬಿಜಾಪುರದ ಸುಲ್ತಾನ ಇಬ್ರಾಹಿಂ ಆದಿಲ್ ಷಾಹನನೆರವಿಗೆ ನಿಂತ ವಿಠಪ್ಪಗ ಡನು ತನ್ನ ಶೌರ್ಯ ಪರಾಕ್ರಮದಿಂದಾಗಿ ಸಾವಿರ ಕುದುರೆ ಸರದಾರನಾದನು. ನಂತರದ ಕಾಲದಲ್ಲಿ **"ಕೊಕಟನೂರ ಪರಗಣೆ"**ಯ ಒಡೆತನವನ್ನು ಪಡೆದನು. ಮುಂದೆ ಈ ಕೊಕಟನೂರ ಪರಗಣ, ಕಿಲ್ಲಾ ತೂರಗಲ್ ಮತ್ತು ನವಲಗುಂದ ಸಂಸ್ಥಾನಗಳನ್ನು

1. ಚಂದ ಗೌಂಡ (1590–1620)
2. ಜಯ ಗೌಂಡ (1638)
3. ಕುಡ ಗೌಂಡ (1638–1641)
4. ಲಖ ಗೌಂಡ (1651–1660)
5. ಲಿಂಗ ಗೌಂಡ (1660–6716)

ಇವರೇ ಮುಂತಾದವರು ನಾಡಪ್ರಭುಗಳಾಗಿ ಆಳ್ವಿಕೆ ಮಾಡಿದರು.

ಕುಡು ಒಕ್ಕಲಿಗರ ಸ್ಥಿತ್ಯಾಂತರ ಮತ್ತು ಪ್ರಸ್ತುತತೆ –

ಈಗಾಗಲೆ ತಿಳಿಸಿರುವಂತೆ ಒಕ್ಕಲಿಗರಲ್ಲಿ ನೂರಕ್ಕೂ ಹೆಚ್ಚು ಒಳ ಪಂಗಡಗಳಿವೆ ಹಳೇ ಮೈಸೂರು ಭಾಗದ ಜನ ಮೈಸೂರು ಒಡೆಯರ ಅತ್ಯುತ್ತಮವಾದ ಆಳ್ವಿಕೆ –ಯಿಂದಾಗಿ ಒಕ್ಕಲಿಗರು ಸೇರಿದಂತೆ ಹಿಂದುಳಿದ ಸಮುದಾಯಗಳು ಅಭಿವೃದ್ಧಿ ಹೊಂದಿದ್ದವು. ಇಷ್ಟೇ ಅಲ್ಲದೆ 1917–1918ರ ಸಮಯದಲ್ಲಿ ಜಸ್ಟೀಸ್ ಲೆಸ್ಲೆಮಿಲ್ಲರ್ –ರವರ ಆಯೋಗವು ವೃದ್ಧಿಗೆ ಆದ್ಯತೆ ನೀಡಿದರು, ಆದರೆ ಉತ್ತರ ಕರ್ನಾಟಕ ಭಾಗದ ಒಕ್ಕಲಿಗರ ಸಮುದಾಯದ ಉಪಜಾತಿ ಇಲ್ಲವೆ ಉಪಪಂಗಡವಾದ ಕುಡು

ಒಕ್ಕಲಿಗರನ್ನು ಮುಂದುವರಿದ ಹಳೇ ಮೈಸೂರು ಭಾಗದ ಒಕ್ಕಲಿಗರು ಕೈಹಿಡಿದು ನಡೆಸದೇ ಹೋದಾಗ ವಿಧಿಯಿಲ್ಲದೆ ಕುಡು ಒಕ್ಕಲಿಗರಲ್ಲಿ ಶೇ.50ಕ್ಕೂ ಹೆಚ್ಚು ಮಂದಿ ಲಿಂಗಾಯತ ಧರ್ಮಕ್ಕೆ ಮತಾಂತರಗೊಂಡರು. ಇದನ್ನು ಮತಾಂತರ ವೆಂದಾಗಲಿ, ಅಪ್ಪುಗೆ ಎಂದಾಗಲಿ, ಒಳಪಡುವಿಕೆ ಎಂತಲೂ ಒಟ್ಟಾರೆ ಹೇಳುವುದಾದರೆ ಶಿಕ್ಷಣ, ಉದ್ಯೋಗ, ಆರ್ಥಿಕ ಹಾಗೂ ಸಾಮಾಜಿಕ ಹಿಂದುಳಿದ ಕುಡು ಒಕ್ಕಲಿಗರನ್ನು ಕೈಹಿಡಿದು ನಡೆಸಲು ಮುಂದೆ ಬಂದಿದ್ದು ವೀರಶೈವರು. ಹಾಗಂದಾಗ ಈ ಅಪ್ಪುಗೆ ತಪ್ಪೆ? ಕುಡು ಒಕ್ಕಲಿಗರಲ್ಲಿ ತಾವು ಲಿಂಗಾಯಿತರು ಸಸ್ಯಾಹಾರಿಗಳು ತಾವೇ ಶ್ರೇಷ್ಠ ಎಂಬ ಭಾವನೆಯಿದೆ. ಶೇ.70ರಷ್ಟು ಜನ ಲಿಂಗಾಯಿತ ಧರ್ಮವನ್ನು ಒಪ್ಪಿಕೊಳ್ಳದವರು ಸಸ್ಯಾಹಾರಿಗಳಾಗಿ ಮುಂದುವರಿಯುತ್ತಿದ್ದಾರೆ.ಇತ್ತೀಚೆಗೆ ಶ್ರೀ ಶ್ರೀ ಶ್ರೀ ಸ್ವರೂಪಾನಂದ ಸ್ವಾಮಿಗಳು ಬಿಜಾಪುರ ಜಿಲ್ಲೆಯ ಇಂಡಿಯ ಬಳಿ ಮಠವನ್ನು ಸ್ಥಾಪಿಸಿದ್ದಾರೆ. ಕುಡು ಒಕ್ಕಲಿಗರನ್ನು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮುಂದೆ ತರಲು ಪ್ರಯತ್ನಿಸುತ್ತಿರುವುದು ಆಶಾದಾಯಕವಾಗಿದೆ.

ಇತ್ತೀಚಿನ ದಿನಮಾನಗಳಲ್ಲಿ ನಮ್ಮ ಕುಡು ಒಕ್ಕಲಿಗ ಯುವಕರಲ್ಲಿ ಹೊಸ ಹುರುಪು ಹಾಗೂ ಪ್ರಜ್ಞೆ ಬಂದಿದೆ. ಕಾರಣವೇನೆಂದರೆ ತಮ್ಮ ಪೂರ್ವಿಕರು ನಿರಕ್ಷಕರಾಗಿದ್ದ ಸಂದರ್ಭದಲ್ಲಿ ಲಿಂಗಾಯತರು ನಮ್ಮ ಪೂರ್ವಿಕರಿಗೆ ಬಲವಂತವಾಗಿ ಲಿಂಗಧಾರಣೆ ಮಾಡಿಸಿ ನೀವು ಲಿಂಗಾಯಿತ / ವೀರಶೈವರು ಇಲ್ಲವೆ ಪಂಚಮ ಸಾಲಿಗಳು ಎಂಬ ಪಟ್ಟಕಟ್ಟಿದರು. ಇತ್ತೀಚೆಗೆ ಶ್ರೀಯುತರುಗಳಾದ ಶಿವರಾಜ ಪಾಟೀಲ್ ಕಲಗುರ್ತಿ, ಮಲ್ಲಣ್ಣಗೌಡ, ಬಿ. ಪಾಟೀಲ್, ಶಿವಯೋಗಪ್ಪ ಗುಂಡಗುರ್ತಿ, ನಾಗಣ್ಣಗೌಡ ಬಿ. ಪಾಟೀಲ್ ಇವರೇ ಮುಂತಾದವರು ಅಖಿಲ ಕರ್ನಾಟಕ ಒಕ್ಕಲಿಗರ ಒಕ್ಕೂಟದ ಅಧ್ಯಕ್ಷರಾದ ನಾಗಣ್ಣ ಬಾಣಸವಾಡಿಯವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ (2013) ಶ್ರೀ ಶಂಕ್ರಪ್ಪನವರ ಆಯೋಗದ ಮುಂದೆ ತಾವುಗಳು ಲಿಂಗಾಯಿತ ಧರ್ಮಕ್ಕೆ ಸೇರಿದವರಲ್ಲ "ಒಕ್ಕಲಿಗ ಗೌಡರು" ಎಂದು ಮನವರಿಕೆ ಮಾಡಿಕೊಟ್ಟಿದ್ದಾರ. ಹೀಗಾಗಿ ಕುಡು ಒಕ್ಕಲಿಗರ ಗೌಡರು ಪ್ರವರ್ಗ "3–ಎ"ಗೆ ಬರುತ್ತಾರೆ. ಕುಡು ಒಕ್ಕಲಿಗ ವೀರಶೈವ / ಲಿಂಗಾಯಿತ / ಪಂಚಮಸಾಲಿಗಳ ಗುಂಪಿಗೆ ಸೇರಿದರೆ ಪ್ರವರ್ಗ '3–ಬಿ'ಗೆ ಬರುತ್ತಾರೆ.

ನಾಮಧಾರಿ ಗೌಡರು

ಹಳೇ ಮೈಸೂರು, ಕೊಡಗು, ಮಲೆನಾಡು ಭಾಗಗಳಲ್ಲಿ ನಾಮಧಾರಿ ಒಕ್ಕಲಿಗರು, ನಾಮಧಾರಿ ಗೌಡರು, ನಾಮಧಾರಿ ನಗರ್ತರು, ನಾಮಧಾರಿ ದೇವರು, ನಾಮಧಾರಿ ಲಿಂಗಾಯತರು ಇವೇ ಮುಂತಾದ ಉಪಜಾತಿಗಳನ್ನು ಕಾಣಬಹುದು.

ಇವರಲ್ಲಿ ನಾಮಧಾರಿ ಗೌಡರು ಹಿಂದೊಮ್ಮೆ ಹಳೇ ಮೈಸೂರು ಭಾಗದಲ್ಲಿ (ಪಾಂಡವಪುರದ ಮೇಲುಕೋಟೆ ಹಾಗೂ ನೆಲೆಸಿದ್ದ ಶ್ರೀರಾಮಾನುಜಾಚಾರ್ಯರ ಪ್ರಭಾವಕ್ಕೆ ಒಳಗಾಗಿ ನಾಮಧಾರಣೆ ಮಾಡಿಕೊಂಡು "ನಾಮಧಾರಿ ಗೌಡರು" ಎಂದು ಕರೆಯಲ್ಪಟ್ಟರು. ಸ್ವಾಮಿಗಳಿಗೆ ನಿಷ್ಠೆ ಮತ್ತು ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತಾ ಸಸ್ಯಾಹಾರಿಗಳಾದರು. (ಈಗ ಸ್ವಲ್ಪ ಬದಲಾವಣೆಯಾಗಿದೆ) ಇವರು ನಾಮಧಾರಿ ಒಕ್ಕಲಿಗರಿಗಿಂತ ಭಿನ್ನವಾಗಿದ್ದಾರೆ. ಇವರು ಮೈಸೂರು, ಹುಣಸೂರು, ಕೆ.ಆರ್.ನಗರ, ಪಿರಿಯಾಪಟ್ಟಣ, ಕೊಡಗು, ಮಂಡ್ಯದ ಪಾಂಡವಪುರ, ಕೆ.ಆರ್.ಪೇಟೆ, ಸೇರಿದಂತೆ ಹಳೇ ಮೈಸೂರು ಕೊಡಗು ಭಾಗಗಳಲ್ಲಿ ನೆಲೆಸಿದ್ದಾರೆ. ಇವರು ಅಲ್ಪಸಂಖ್ಯಾತರಾದರೂ ಕೂಡ ಈ ಮೇಲ್ಕಂಡ ಪ್ರದೇಶಗಳಲ್ಲಿ ಕಟ್ಟೆಮನೆಯ ಯಜಮಾನರಾಗಿ ಕೈಕೆಳಗೆ ಪಟೇಲರು, ಶಾನುಭೋಗರು, ಊರಗೌಡರು, ನಾಡಗೌಡರು ಹಾಗೂ ಸೀಮೆಗೌಡರು ಬರುತ್ತಿದ್ದರು. ನಾಮಧಾರಿ ಗೌಡರ ಸಮುದಾಯದಲ್ಲಿ ಗುಡಿಗಟ್ಟಿ ಲಿಂಗಾರಾಜಯ್ಯನವರು 1942ರ ಚಲೇಜಾವ್ ಚಳವಳಿಯಲ್ಲಿ ಭಾಗವಹಿಸಿದ್ದರು. ನಂತರದ ಕಾಲದಲ್ಲಿ ಎನ್.ಟಿ. ಸುಂದರದಾಸ್, ಪಟೇಲ್ ಹುಚ್ಚೇಗೌಡರು, ಚಟಾರೆ ಹುಂಡಿ ದಾಸಪ್ಪನವರು ಹಾಗೂ ಹೆಚ್. ಪುಟ್ಟಸ್ವಾಮಿಯವರು ಇವರೇ ಮುಂತಾದವರು ಅಂದಿನ ಪ್ರಜಾಪ್ರತಿನಿಧಿ ಸದಸ್ಯರಾಗಿ ದುಡಿದಿದ್ದಾರೆ ಹಾಗೂ ನಾಮಧಾರಿ ಗೌಡ ಸಮುದಾಯಕ್ಕೆ ಒಳ್ಳೆಯ ಮಾನ್ಯತೆಯನ್ನು ಗಳಿಸಿಕೊಟ್ಟಿದ್ದಾರೆ. ಇವರ ಕುಲಕಸುಬು ವ್ಯವಸಾಯ ಮತ್ತು ಪಶುಸಂಗೋಪನೆ. ಆಚಾರ, ವಿಚಾರ, ಮದುವೆ ಮುಂಜಿ ಇವೇ ಮುಂತಾದ ಸಂಪ್ರದಾಯಗಳು ಒಕ್ಕಲಿಗರ ಸಂಪ್ರದಾಯವೇ ಆಗಿದೆ.

ಈ ಮೇಲ್ಕಂಡ ನಮ್ಮ ಒಕ್ಕಲಿಗ ಉಪಪಂಗಡವು "ನಾಮಧಾರಿಗೌಡ ಸಂಘ (ರಿ.)"ವನ್ನು ಹುಟ್ಟುಹಾಕಿ ಅಲ್ಲಲ್ಲಿ ನೆಲೆಸಿರುವ ನಮ್ಮ ಕುಲಬಾಂಧವರನ್ನು ಒಗ್ಗೂಡಿಸುವಲ್ಲಿ ಫಲಪ್ರದರಾಗಿದ್ದಾರೆ. ಸಾಹಿತ್ಯ ಮತ್ತು ಚಲನಚಿತ್ರ ರಂಗದಲ್ಲಿ ಹೆಸರುಗಳಿಸಿದ್ದ ಶ್ರೀಕೃಷ್ಣ ಆಲನಹಳ್ಳಿ ಇವರೇ ಸಾಹಿತಿಗಳಾದ ಪ್ರೊ॥ ಲೋಹಿತಾಶ್ವ ಇವರೇ ಮುಂತಾದವರು ಈ ನಮ್ಮ ಒಕ್ಕಲಿಗ ಉಪಪಂಗಡವಾದ ನಾಮಧಾರಿಗೌಡ ಸಮುದಾಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಬೆಂಗಳೂರು
ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2015

ಅನುಬಂಧ–3 'A' ಪ್ರವರ್ಗ–III (ಎ)

	ಜಾತಿ	ಸಂಕೇತ ಸಂಖ್ಯೆ (Code No.)
1.	ಅಟ್ಟಿ ಒಕ್ಕಲು	0062
2.	ಬೆಳ್ಳಾಳ ಒಕ್ಕಲಿಗ	0147
3.	ಬಂಟ್ (Bunt)	0211
4.	ಚೇಳರು ಒಕ್ಕಲಿಗ	0237
5.	ದಾಸ ಒಕ್ಕಲಿಗ	0267
6.	ದಾಸ ಕುಂಚಟಿಗ	0269
7.	ಗಾಮ ಒಕ್ಕಲ್	0320
8.	ಗಾಮ್‌ಗವಡ / ಗೌಡ	0322
9.	ಗಂಗಡಕಾರ್ ಒಕ್ಕಲಿಗ	0326
10.	ಗೌಡ ಒಕ್ಕಲಿಗ	0393
11.	ಗ್ರಾಮ ಒಕ್ಕಲು	0400
12.	ಹಾಲಕ್ಕಿ ಒಕ್ಕಲು	0417
13.	ಹಳ್ಳಿಕಾರ್ ಒಕ್ಕಲು	0422
14.	ಹಿಂದೂ ಸಾದರು	0447
15.	ಕಮ್ಮಾರೆಡ್ಡಿ	0544
16.	ಕುಡು ಒಕ್ಕಲಿಗ	0679
17.	ಕುಂಚಟಿಗ	0701
18.	ಕುಂಚಟಿಗ ಒಕ್ಕಲಿಗ	0702
19.	ಕುಂಚಟಿಗ ರೆಡ್ಡಿ	0706
20.	ಕುರ್ಮಿ	0711
21.	ಮೊರಸು ಒಕ್ಕಲಿಗ	0843

22.	ಮುಸುಕು ಒಕ್ಕಲಿಗ	0863
23.	ನಾಡವರ್	0885
24.	ನಾಮಧಾರಿ ಒಕ್ಕಲಿಗ	0903
25.	ನೊಣಬ ಒಕ್ಕಲಿಗರು	0940
26.	ಪಟೇಗಾರ್	0998
27.	ರೆಡ್ಡಿ ಒಕ್ಕಲಿಗ	1065
28.	ಸಾದರ ಗೌಡ	1069
29.	ಸಲುಪ ಒಕ್ಕಲಿಗ	1083
30.	ತೆಲಗು ಗೌಡ	1217
31.	ಉಪ್ಪಿನ ಕೊಳಗ ಒಕ್ಕ	1274
32.	ಒಕ್ಕಲಿಗ	1335

ಸರ್ಕಾರಿ ಆದೇಶ ಸಂಖ್ಯೆ: ಸಕ.ಇ.225 ಬಿ.ಸಿ.ಎ. 2000 ಬೆಂಗಳೂರು 30ನೇ ಮಾರ್ಚ್ 2002

ಅನುಬಂಧ–1; ಪ್ರವರ್ಗ–1

	ಜಾತಿ	ಸಂಕೇತ ಸಂಖ್ಯೆ (Code No.)
1.	ಗ್ರಾಮ ಒಕ್ಕಲು	25 (a)
2.	ಹಾಲಕ್ಕಿ	25 (b)
3.	ಕರೆ ಒಕ್ಕಲು	25 (c)
4.	ಅಟ್ಟೆ ಒಕ್ಕಲು	23 (c)
5.	ಕುರ್ಮಿ	49 (e)
6.	ನಾಡವರ್	72 (b)
7.	ಪಟ್ಟೇಗಾರ್	77 (c)

ಸರ್ಕಾರಿ ಆದೇಶ ದಿನಾಂಕ: 17.09.1994ರಲ್ಲಿ ಸರ್ಕಾರವು ಪರಿಶಿಷ್ಟ ಜಾತಿಗಳು ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ 1994–95ನೇ ಸಾಲಿನಲ್ಲಿ ವೃತ್ತಿಪರ ಶಿಕ್ಷಣಕ್ಕಾಗಿ ಪ್ರವೇಶ ಪಡೆಯಲು ಈ ಕೆಳಗಿನಂತೆ ಮೀಸಲಾತಿ ನಿಗದಿಪಡಿಸಲಾಗಿತ್ತು.

ಪ್ರವರ್ಗ–I	4%
ಪ್ರವರ್ಗ–II (ಎ)	15%
ಪ್ರವರ್ಗ–II (ಬಿ)	4%
ಪ್ರವರ್ಗ–III (ಎ)	4%
ಪ್ರವರ್ಗ–III (ಬಿ)	5%
ಪರಿಶಿಷ್ಟ ಜಾತಿಗಳು	15%
ಪರಿಶಿಷ್ಟ ಪಂಗಡಗಳು	13%

ಕುಂಚಟಿಗ ಸಮುದಾಯಗ ಹಾಗೂ ಮಧುಗಿರಿಯ ಮಹಾನಾಡ ಪ್ರಭುಗಳು

ಒಕ್ಕಲಿಗರ ಒಳಪಂಗಡವಾದ "ಕುಂಚಟಿಗ" ಜನಾಂಗದಿಂದ ಮೂಡಿಬಂದ ವಿಜಯನಗರ ಕಾಲದ ಸ್ಥಾನಿಕ ಪ್ರಭುಗಳಲ್ಲಿ ಬಿಜ್ಜಾವರ ಅಥವಾ ಮಧುಗಿರಿಯ ಮಹಾನಾಡಪ್ರಭುಗಳು / ಪಾಳೇಗಾರರು ಪ್ರಮುಖರಾಗಿದ್ದಾರೆ. ಇವರು ಕ್ರಿ.ಶ. 14ನೇ ಶತಮಾನದಿಂದ 17ನೇ ಶತಮಾನದವರೆಗೆ ಕ್ರಮವಾಗಿ ಮಮ್ಮಡಿ ಪಟ್ಟಣ, ಬಿಜ್ಜಾವರ, ಮಧುಗಿರಿ ಪಟ್ಟಣಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮಹಾನಾಡನ್ನು ಆಳ್ವಿಕೆ ಮಾಡಿದರು. ಇವರ ಆಳ್ವಿಕೆಗೆ ಒಳಪಟ್ಟ ಪಾಳೆಪಟ್ಟು ಅಂದು ಮಹಾನಾಡು ಎಂಬ ಹೆಸರನ್ನು ಪಡೆದಿತ್ತು. ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಬಿಜ್ಜಾವರ ಪುರವರಾಧೀಶ್ವರರು – ಮಹಾನಾಡಪ್ರಭುಗಳು ಮುಮ್ಮಡಿ ಪ್ರಭುಗಳು ಎಂದು ಕರೆಸಿಕೊಂಡು ಆಳ್ವಿಕೆ ಮಾಡಿದರು. ಇವರು ಸ್ಥಳೀಯ ನಾಡು ನುಡಿಗೆ, ಧರ್ಮ, ಕಲೆ, ಸಾಹಿತ್ಯ ಮೊದಲಾದ ಸಾಂಸ್ಕೃತಿಕ ಕ್ಷೇತ್ರಕ್ಕೆ ಅಪಾರ ಪ್ರೋತ್ಸಾಹ ನೀಡಿದರು. ಹಿಂದೂ ಹಾಗೂ ವೀರಶೈವ ಧರ್ಮಕ್ಕೆ ಇವರು ನೀಡಿದ ಕೊಡುಗೆ ಚಿರಸ್ಮರಣೀಯವಾಗಿದೆ.

ಮಧುಗಿರಿ ಪಾಳೇಗಾರರ ಮೂಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯ–ಗಳಿದ್ದರೂ ಕೃಷಿಕ / ಒಕ್ಕಲಿಗರಾಗಿದ್ದರು ಎಂಬುದರಲ್ಲಿ ಒಮ್ಮತದ ಅಭಿಪ್ರಾಯವಿದೆ. ಒಕ್ಕಲಿಗರ ಒಳ ಪಂಗಡವಾದ **ಕುಂಚಿಟಿಗ** ಜನಾಂಗದ ಬಡವನಾಡು ಗೋತ್ರಕ್ಕೆ ಸೇರಿದ ತಿಮ್ಮಣ್ಣರಾಯನ ವಂಶಸ್ಥರಾಗಿದ್ದು ಮಧುಗಿರಿ ತಾಲ್ಲೂಕಿನ ಕೊಂಡವಾಡಿ ಅವರ ಮೂಲ ನೆಲೆ. ಅಲ್ಲಿನ ಚೌಡೇಶ್ವರಿ ಅಥವಾ ಬನಶಂಕರಿ ಅಮ್ಮ ಅವರ ಮನೆದೇವರು.

ಈ ಮನೆತನದ ಸ್ಥಾಪಕ **'ಮಾರೇಗೌಡ'**. ಇವನು ಜಮೀನ್ದಾರ್ ಚಿಕ್ಕಪ್ಪಗೌಡನ ಏಳು ಜನ ಮಕ್ಕಳಲ್ಲಿ ಹಿರಿಯ ಮಗ. ಅಪ್ರತಿಮ ವೀರನೂ, ಧೈರ್ಯಶಾಲಿಯೂ

ಆಗಿದ್ದ ಮಾರೇಗೌಡ ತನ್ನ ಸಹೋದರರಾದ ಕಾಳಣ್ಣಗೌಡ, ಚಿನ್ನಪ್ಪಗೌಡ, ಕಾಳ ಚಿಕ್ಕಪ್ಪಗೌಡ, ರಾಮಪ್ಪಗೌಡ, ಸಂಗಪ್ಪಗೌಡ ಮತ್ತು ಹಿರೇಚಿಕ್ಕಪ್ಪಗೌಡರೊಡಗೂಡಿ ವಿಜಯನಗರದ ಸೈನ್ಯವನ್ನು ಸೇರಿ ಶತ್ರುಗಳ ವಿರುದ್ಧ ಹೋರಾಡಿ ವಿಜಯನಗರದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ. ಈ ಸಹೋದರರೆಲ್ಲರೂ ಶೌರ್ಯ ಸಾಹಸಗಳನ್ನು ಪ್ರದರ್ಶಿಸಿ ವಿಜಯನಗರ ದೊರೆಗಳ ಕೃಪೆಗೆ ಪಾತ್ರರಾದರು. ತಮ್ಮದೆ ಆದ ರಾಜ್ಯವನ್ನು ನಿರ್ಮಿಸಿಕೊಂಡು ಸಾಮಂತರಾಗಿ ಆಳ್ವಿಕೆ ಮಾಡಿಕೊಂಡಿರುವಂತೆ ಅನುಮತಿ ಪಡೆದರು. ಆ ಪ್ರಕಾರ ಸುಮಾರು ಕ್ರಿ.ಶ. 1399ರಲ್ಲಿ ಮಾರೇಗೌಡನು ಮಧುಗಿರಿ ಪ್ರದೇಶದಲ್ಲಿ ತನ್ನ ಪಾಳೇಪಟ್ಟನ್ನು ಸ್ಥಾಪಿಸಿದನು. ಜಯಮಂಗಲಿ ನದಿ ಮತ್ತು ಕೊಂಡವಾಡಿಗಳ ನಡುವೆ ಮುಮ್ಮಡಿ ಪಟ್ಟಣ ಎಂಬ ನೂತನ ನಗರವನ್ನು ಕಟ್ಟಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು.

ಹೀಗೆ ಸ್ಥಾಪಕ ದೊರೆಯಾದ ಮಾರೇಗೌಡನು ರಾಜಧಾನಿಯ ಸುತ್ತಲೂ ಕೋಟೆ ನಿರ್ಮಿಸಿ ತನ್ನ ಆಳ್ವಿಕೆಯನ್ನು ಭದ್ರಪಡಿಸಿಕೊಂಡನು. ಉತ್ತಮ ಆಡಳಿತ ನೀಡುವುದರ ಜೊತೆಗೆ ಧರ್ಮ ಮತ್ತು ಕಲೆಗೂ ಪ್ರೋತ್ಸಾಹ ನೀಡಿದನು. ರಾಜಧಾನಿಯಲ್ಲಿ ತನ್ನ ಮನೆದೇವರಾದ ಚೌಡೇಶ್ವರಿ, ರಾಮಲಿಂಗೇಶ್ವರ ಮತ್ತು ವೀರಭದ್ರ ದೇವಾಲಯಗಳನ್ನು ಕಟ್ಟಿಸಿದನು.

ಮಾರೇಗೌಡನ ನಂತರ ವೀರೇಗೌಡ, ದೊಡ್ಡೇಗೌಡ ಆಳ್ವಿಕೆ ಮಾಡಿದರು. ಪ್ರಗತಿಪರ ದೊರೆಯಾಗಿದ್ದ ದೊಡ್ಡೇಗೌಡ ಸಮಾಜದ ಅನಿಷ್ಠಗಳಾದ ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆಗಳನ್ನು ತೊಡೆದುಹಾಕಲು ಪ್ರಯತ್ನಿಸಿದನು. ವೀರಶೈವ ಗುರುಗಳಾದ ಸಿದ್ದಪ್ಪದೇವರು (ಬಹುಶಃ ತೋಂಟದ ಸಿದ್ದಲಿಂಗ ಯತಿಗಳು) ಎಂಬುವವರಿಗೆ ಆಶ್ರಯ ನೀಡಿದನು. ಅವರ ಪ್ರಭಾವಕ್ಕೆ ಒಳಗಾಗಿ ವೀರಶೈವ ಮತ ಸ್ವೀಕರಿಸಿದನು. ದೊಡ್ಡೇಗೌಡನ ಲಿಂಗಧಾರಣೆಯಿಂದ ಇಡೀ ರಾಜಮನೆತನ ಬಂಧು–ಬಳಗದವರು ವೀರಶೈವ ಧರ್ಮ ಸ್ವೀಕರಿಸಿದರು. ಇದರಿಂದಾಗಿ ಶೈವರಾಗಿದ್ದ ಕುಂಚಿಟಿಗರು ಅದರ ಮುಂದುವರೆದ ಭಾಗವಾದ ವೀರಶೈವ ಧರ್ಮಕ್ಕೆ ಮತಾಂತರವಾದರು. ಈ ಧರ್ಮಕ್ಕೆ ದೊರೆತ ಪ್ರೋತ್ಸಾಹದಿಂದಾಗಿ ಈ ಪ್ರದೇಶದಲ್ಲಿ ಅಂದು ವೀರಶೈವ ಧರ್ಮ ಹೆಚ್ಚು ಪ್ರಭಾವಕ್ಕೆ ಬಂದಿತು. ಪ್ರಭುವನ್ನೇ ಅನುಸರಿಸಿ ಬಹುತೇಕ ಕುಂಚಿಟಿಗರು ಲಿಂಗಾಯಿತ ಧರ್ಮ ಸ್ವೀಕರಿಸಿದರು. ಇಂದಿಗೂ ಈ ಪ್ರದೇಶದ ಲಿಂಗಾಯಿತ ಧರ್ಮಕ್ಕೆ ಮತಾಂತರಗೊಂಡ, ಕುಂಚಿಟಿಗರನ್ನು ಕುಂಚಲಿಂಗಾಯಿತ ಎಂಬ ಹೆಸರಿನಿಂದ ಕರೆಯುತ್ತಾರೆ. ಈ ನಡುವೆ ದೊಡ್ಡೇಗೌಡ ಯುದ್ಧವೊಂದರಲ್ಲಿ ಮರಣ ಹೊಂದಿದನು. ಮುಮ್ಮಡಿ ಪಟ್ಟಣವು ಶತ್ರುಗಳ ದಾಳಿಯಿಂದ ನಾಶವಾಯಿತು. ಸಂಸ್ಥಾನ ಸಂಕಷ್ಟಕ್ಕೆ ಸಿಲುಕಿತು. ಇಂತಹ ವಿಷಮ

ಪರಿಸ್ಥಿತಿಯಲ್ಲಿ ತುಂಗವಟಿಯ ಕುಂಚಿಟಿಗ ಗೌಡನೊಬ್ಬನ ಬೆಂಬಲ ಮತ್ತು ರಕ್ಷಣೆಯಿಂದಾಗಿ ಸುಮಾರು ಕ್ರಿ.ಶ. 1524ರಲ್ಲಿ ದೊಡ್ಡೇಗೌಡನ ಹಿರಿಯಮಗ ಹಿರೇಚಿಕ್ಕಪ್ಪಗೌಡ ಅಧಿಕಾರಕ್ಕೆ ಬಂದನು. ಹಿರೇಚಿಕ್ಕಪ್ಪಗೌಡನು ಬಿಜ್ಜಾವರ ಎಂಬ ಮತ್ತೊಂದು ನಗರವನ್ನು ಸ್ಥಾಪಿಸಿ ಅದನ್ನು ರಾಜಧಾನಿಯಾಗಿ ಮಾಡಿಕೊಂಡನು. ನೂತನ ರಾಜಧಾನಿಯ ಸುತ್ತಲೂ ಭದ್ರವಾದ ಕೋಟೆಯನ್ನು ಕಟ್ಟಿಸಿ ರಾಜಧಾನಿಯನ್ನು ಸುಭದ್ರಪಡಿಸಿದನು. ಆ ಮೂಲಕ ರಾಜಕೀಯ ಅಸ್ಥಿರತೆಯನ್ನು ಹೋಗಲಾಡಿಸಿ ರಾಜ್ಯವನ್ನು ಪುನಃ ಸಂಘಟಿಸಿದನು. ವೀರಭದ್ರೇಶ್ವರ ದೇವಾಲಯ, ಬಿಜ್ಜಲಾದೇವಿಯ ದೇವಾಲಯಗಳನ್ನು ನಿರ್ಮಿಸಿದನು. ಬಿಜ್ಜಲಾದೇವಿಯೇ ಮುಂದೆ ದಂಡಿನ ಮಾರಮ್ಮ ಎಂದು ಪ್ರಸಿದ್ಧಳಾಗಿ ಭಕ್ತರ ಅಭೀಷ್ಟಗಳನ್ನು ಈಡೇರಿಸುವ ಮಧುಗಿರಿಯ ಮಾತೆಯಾದಳು. ಇಂದಿಗೂ ದಂಡಿನ ಮಾರಮ್ಮನ ವಾರ್ಷಿಕ ಉತ್ಸವ ಜಾತ್ರೆ ನಡೆಯುತ್ತದೆ. ರಥೋತ್ಸವವನ್ನು ಒಳಗೊಂಡ ಧಾರ್ಮಿಕ ಉತ್ಸವಗಳು ನಡೆಯುತ್ತವೆ. ಈ ಪ್ರದೇಶದ ವಾರ್ಷಿಕ ದೊಡ್ಡ ದನಗಳ ಜಾತ್ರೆಯು ಒಂದು ತಿಂಗಳಿಗೂ ಹೆಚ್ಚು ಕಾಲ ನಡೆಯುತ್ತದೆ. ಇದು ಈ ಭಾಗದ ಪ್ರಸಿದ್ಧವಾದ ಜಾತ್ರೆಯಾಗಿದೆ.

ಇವನ ನಂತರ ಕರಿತಿಮ್ಮರಾಯಚಿಕ್ಕಪ್ಪಗೌಡ ಸಿಂಹಾಸನವನ್ನೇರಿದನು. ಈ ವೇಳೆಗೆ ಅತ್ತ ವಿಜಯನಗರ ಸಾಮ್ರಾಜ್ಯ 1565 ತಾಳಿಕೋಟೆ ಕದನದಲ್ಲಿ ಮುಸ್ಲಿಂ ಶಾಹಿ ದೊರೆಗಳಿಗೆ ಸೋತು ಅವರ ದಾಳಿಗೆ ಸಿಲುಕಿತು. ಹೀಗೆ ವಿಜಯನಗರ ಅವನತಿಯತ್ತ ಸಾಗಿತು. ರಾಜ್ಯದ ಕೇಂದ್ರ ಅಧಿಕಾರವು ದುರ್ಬಲಗೊಂಡಿತು. ಪೆನುಗೊಂಡೆಯಲ್ಲಿ ಅರವೀಡು ಮನೆತನದ ಆಳ್ವಿಕೆ ಆರಂಭವಾಯಿತು.

ಇಂತಹ ಸಂದರ್ಭದಲ್ಲಿ ವಿಜ್ಜಾವರದ ನಾಡಪ್ರಭುಗಳು ಸ್ವಾತಂತ್ರ್ಯ ಘೋಷಿಸಿಕೊಂಡು ಸ್ಥಾನಿಕ / ಸಾಮಂತ ಪ್ರಭುತ್ವದಿಂದ ಹೊರಬಂದರು. ಇಲ್ಲಿಂದ ನಂತರದ ರಾಜರುಗಳು **'ಬಿಜ್ಜಾವರ ಮಹನಾಡ ಪ್ರಭುಗಳೆಂದು'** ಹೆಸರಾದರು.

ಇಮ್ಮಡಿ ಚಿಕ್ಕಪ್ಪಗೌಡನ ಸಾಧನೆಗಳು

ಹಿರೇಚಿಕ್ಕಪ್ಪಗೌಡನ ನಂತರ ಇಮ್ಮಡಿ ಚಿಕ್ಕಪ್ಪಗೌಡ ಸಿಂಹಾಸನವನ್ನೇರಿದನು. ಮಹನಾಡ ಪ್ರಭುಗಳಲ್ಲಿ ಸುಪ್ರಸಿದ್ಧ ರಾಜನೆಂದರೆ ಇಮ್ಮಡಿ ಚಿಕ್ಕಪ್ಪಗೌಡ. ಇವನು ಇಮ್ಮಡಿ ಚಿಕ್ಕಭೂಪಾಲನೆಂದು ಬಿರುದಾಂಕಿತನಾಗಿದ್ದಾನೆ. ಸಮರ್ಥ ಯೋಧನೂ ದಕ್ಷ ಆಡಳಿತಗಾರನೂ ಆಗಿದ್ದ ಇಮ್ಮಡಿ ಚಿಕ್ಕಭೂಪಾಲನು ಬಹುಮುಖ ಪ್ರತಿಭೆಯ ರಾಜನಾಗಿದ್ದ.

ಪೆನುಗೊಂಡೆಯುಲ್ಲಿ ವಿಜಯುನಗರದ ರಾಜ ಶ್ರೀರಂಗರಾಯುನ ಸಮಕಾಲೀನನಾಗಿದ್ದ ಇವನು ಕ್ರಿ.ಶ. 1577ರಲ್ಲಿ ದಂಡೆತ್ತಿ ಬಂದ ಬಿಜಾಪುರದ

ಆದಿಲ್‌ಷಾಹಿ ಸೈನ್ಯವನ್ನು ಹಿಮ್ಮೆಟ್ಟಿಸುವಲ್ಲಿ ಶ್ರೀರಂಗರಾಯನಿಗೆ ಸಹಾಯ ನೀಡಿದನು. ಶ್ರೀರಂಗರಾಯನು ಚಿಕ್ಕಪ್ಪಗೌಡನಿಗೆ **'ಭೂಪಾಲ'** ಎಂಬ ಬಿರುದು ಪಡೆದನು.

ನಂತರದಲ್ಲಿ ಮಹತ್ವಾಕಾಂಕ್ಷೆಯಾಗಿದ್ದ ಇಮ್ಮಡಿ ಚಿಕ್ಕಪ್ಪಗೌಡನು ತನ್ನ ಪಾಳೆಯಪಟ್ಟನ್ನು ವಿಸ್ತರಿಸಲು ತನ್ನ ಶತ್ರುಗಳು ಮತ್ತು ನೆರೆಯ ಪಾಳೆಯಗಾರ-ರೊಂದಿಗೆ ಹೋರಾಟಕ್ಕಿಳಿದನು. ಪದೇ ಪದೇ ಕಿರುಕುಳ ನೀಡುತ್ತಿದ್ದ ಮಿಡಿಗೇಶಿಯ ಪಾಳೆಯುಗಾರ ನಾಗರೆಡ್ಡಿಯುನ್ನು, ಹೊಳವನಹಳ್ಳಿಯು ಪಾಳೆಯುಗಾರ ರಣಭೈರೇಗೌಡನನ್ನು ಸೋಲಿಸಿದನು. ಚಿಕ್ಕಬಳ್ಳಾಪುರದ ಪಾಳೆಯಗಾರನಾದ ಹಾವಳಿ ಭೈರೇಗೌಡನೊಂದಿಗೆ ಹರಿತಿಕೋಟೆಯ ಯುದ್ಧದಲ್ಲಿ ಸೋಲಿಸಿದನು. ಈ ಕದನದಲ್ಲಿ ಚಿಕ್ಕಪ್ಪಗೌಡನ ಮಗ ತೋಟೇಂದ್ರ ಸಾವನ್ನಪ್ಪಿದರೂ ಗೆಲುವು ಮಹನಾಡಿನದಾಯಿತು. ಹೀಗೆ ಯಶಸ್ವಿ ಯುದ್ಧಗಳಿಂದ ಮಧುಗಿರಿ ರಾಜ್ಯವನ್ನು ವಿಸ್ತರಿಸಿದನು. ಇಮ್ಮಡಿ ಚಿಕ್ಕಪ್ಪಗೌಡನ ವಿಸ್ತರಣಾ ನೀತಿಯನ್ನು ವಿರೋಧಿಸಿದ ಪೆನುಗೊಂಡೆಯ ವೆಂಕಟಪತಿರಾಯ ಅವನನ್ನು ಮಟ್ಟಹಾಕಲು ಸೈನ್ಯವನ್ನು ಕಳುಹಿಸಿದನು. ಆದರೆ ಆ ಸೈನ್ಯ ಸೋತು ದಿಕ್ಕಾಪಾಲಾಗಿ ಓಡಿಹೋಯಿತು. ಪೆನುಗೊಂಡೆರಾಯನ ಸಹಾಯಕ್ಕೆ ಬಂದ ಚನ್ನಪಟ್ಟಣದ ಪಾಳೆಯಗಾರ ಜಗದೇವರಾಯನು ಸೋತು ಪಲಾಯನ ಮಾಡಿದನು.

ಹೀಗೆ ತನ್ನ ಶತ್ರುಗಳನ್ನು ಸೋಲಿಸಿ ಅಪಾರ ಕೀರ್ತಿ, ಪ್ರತಿಷ್ಠೆ, ಸಂಪತ್ತನ್ನು ಗಳಿಸಿದನು. ತನ್ನ ರಾಜ್ಯವನ್ನು ಉತ್ತರದಲ್ಲಿ ಮಡಕಶಿರಾದಿಂದ ದಕ್ಷಿಣದಲ್ಲಿ ಕೊರಟಗೆರೆಯವರೆಗೆ ಪೂರ್ವದಲ್ಲಿ ಜಯಮಂಗಲಿ ನದಿಯಿಂದ ಪಶ್ಚಿಮದಲ್ಲಿ ದೊಡ್ಡೇರಿ ದಂಡಿನ ದಿಬ್ಬದವರೆಗೆ ವಿಸ್ತರಿಸಿದನು.

ಜನಮೆಚ್ಚಿದ ದೊರೆಯಾಗಿದ್ದ ಇಮ್ಮಡಿ ಚಿಕ್ಕಪ್ಪಗೌಡನು ಉತ್ತಮ ಆಡಳಿತಗಾರನಾಗಿದ್ದು, ಸಾಂಸ್ಕೃತಿಕ ಪೋಷಕನೂ ಆಗಿದ್ದಾನೆ. ಆಸ್ಥಾನ ಗುರುಗಳಾಗಿದ್ದ ಸಿದ್ದಪ್ಪದೇವರ ಹೆಸರಿನಲ್ಲಿ **'ಸಿದ್ದಾಪುರ'** ಎಂಬ ಪಟ್ಟಣವನ್ನು ನಿರ್ಮಿಸಿದನು. ಅಕಾಲ ಮರಣಕ್ಕೆ ತುತ್ತಾಗಿದ್ದ ತನ್ನ ಎರಡನೆ ಮಗ ಚನ್ನಪ್ಪಗೌಡನ ಸ್ಮರಣೆಗಾಗಿ ಚನ್ನರಾಯನದುರ್ಗದಲ್ಲಿ ಕೋಟೆ ಕಟ್ಟಿ ಅಲ್ಲೊಂದು ಚನ್ನಕೇಶವ ದೇವಾಲಯವನ್ನು ಕಟ್ಟಿಸಿ ದಾನದತ್ತಿಗಳನ್ನು ಕೊಟ್ಟನು. ಮಧುಗಿರಿಯ ಕೋಟೆಯನ್ನು ಪುನರ್ ನಿರ್ಮಿಸಿದನು. ಕೋಟೆಯ ಒಳಗೆ ಗೋಪಾಲಕೃಷ್ಣದೇವಾಲಯ ಹಾಗೂ ಬೆಟ್ಟದ ತಪ್ಪಲಿನಲ್ಲಿ ಪಟ್ಟಣವನ್ನು ನಿರ್ಮಿಸಿದನು.

ಇಮ್ಮಡಿ ಚಿಕ್ಕಪ್ಪಗೌಡನು ಬಡವನಹಳ್ಳಿಯ ಚೌಡಯ್ಯ ಮಲ್ಲಿಕಾರ್ಜುನ, ಬಂಗಾರ ದೊಡ್ಡರಾಯ, ವಿರಕ್ತ ತೋಂಟದಾರ್ಯ, ದೇವರಹಳ್ಳಿಯ ಮಲ್ಲಣ

ಮೊದಲಾದ ಕವಿ, ಕಲಾವಿದರಿಗೆ, ಧರ್ಮದರ್ಶಿಗಳಿಗೆ ಆಶ್ರಯ ನೀಡಿದನು. ಹೀಗೆ ಹಲವು ಸ್ಮರಣೀಯ ಸಾಧನೆಗಳನ್ನು ಸಾಧಿಸಿ ಮಹನಾಡಪ್ರಭುಗಳಲ್ಲಿ ಖ್ಯಾತ ದೊರೆಯೆನಿಸಿದನು.

ಇಮ್ಮಡಿ ಚಿಕ್ಕಪ್ಪಗೌಡನ ಮರಣಾನಂತರ ಆತನ ಮೂರನೇ ಮಗ ಸಪ್ಪೇಂದ್ರನು ಮುಮ್ಮಡಿ ಚಿಕ್ಕಪ್ಪಗೌಡ ಎಂಬ ಹೆಸರಿನೊಂದಿಗೆ ಸಿಂಹಾಸನವನ್ನೇರಿದನು. ಇವನು ಸ್ವತಃ ಕವಿಯಾಗಿದ್ದು, **"ಅಭಿನವ ಭರತ ಸಾರಸಂಗ್ರಹ"** ಎಂಬ ಸಂಸ್ಕೃತ ಗ್ರಂಥ ರಚಿಸಿದ್ದಾನೆ. ಇವನ ನಂತರ ಸಿಂಹಾಸನಕ್ಕಾಗಿ ಮಕ್ಕಳಾದ ರಾಮಪ್ಪಗೌಡ ಮತ್ತು ತಿಮ್ಮಪ್ಪಗೌಡರಲ್ಲಿ ಜಗಳ ಪ್ರಾರಂಭವಾಯಿತು. ಇಂತಹ ಸಂದರ್ಭದಲ್ಲಿ ಈ ಪಾಳಿಪಟ್ಟು ಚಿಕ್ಕದೇವರಾಜ ಒಡೆಯರ ಆಳ್ವಿಕೆಯಲ್ಲಿ ಮೈಸೂರು ಸಂಸ್ಥಾನದ ವಶವಾಯಿತು. ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಮರುಆಕ್ರಮಣಕ್ಕೆ ಒಳಗಾಯಿತು. ಈ ವಂಶದ ಅರಸರು ಟಿಪ್ಪು ವಿರುದ್ಧ ಬ್ರಿಟಿಷರಿಗೆ ಸಹಾಯ ಮಾಡಿದರು. ಆದರೆ ಬ್ರಿಟಿಷರು ಟಿಪ್ಪುವಿನ ನಂತರ ಮಧುಗಿರಿಯ ಅರಸರಿಗೆ ಆಳ್ವಿಕೆ ಹಕ್ಕು ಕೊಡದೆ ಬ್ರಿಟಿಷರು ಮೈಸೂರು ಸಂಸ್ಥಾನಕ್ಕೆ ಸೇರಿಸಿದರು.

ಕುಂಚಟಿಗ ಪಾಳೇಯಗಾರರ ಇತರೆ ಶಾಖೆಗಳು

ವಿಜಯನಗರ ಸಾಮ್ರಾಜ್ಯದಲ್ಲಿ ಸಾಮಂತರ ಅಥವಾ ಸ್ಥಾನಿಕ ಪ್ರಭುಗಳಾಗಿದ್ದ 1565ರ ತಾಳಿಕೋಟೆ ಕದನಾನಂತರ ದಕ್ಷಿಣ ಭಾರತದಲ್ಲಿ ಸ್ವಾತಂತ್ರ್ಯ ಘೋಷಿಸಿಕೊಂಡ ಇತರೇ ಕುಂಚಟಿಗ ಜನಾಂಗಕ್ಕೆ ಸೇರಿದ ಪಾಳೇಗಾರರು ಅಥವಾ ನಾಡಪ್ರಭುಗಳೆಂದರೆ,

1) **ಮಿಡಿಗೇಶಿಯ ಪಾಳೇಗಾರರು:** ಕುಂಚಿಟಿಗ ಜನಾಂಗಕ್ಕೆ ಸೇರಿದ ನಾಗರೆಡ್ಡಿ, ಮಿಡಿಗೇಶಿ ಆಡಳಿತಗಾರರಲ್ಲಿ ಪ್ರಸಿದ್ಧ ಪಾಳೇಗಾರ. ಕ್ರಿ.ಶ. 1626ರ ಸುಮಾರಿನಲ್ಲಿ ದಕ್ಷ ಆಡಳಿತಗಾರನಾಗಿದ್ದ ನಾಗರೆಡ್ಡಿಯು ಮಿಡಿಗೇಶಿ ಬೆಟ್ಟದ ಸುತ್ತಲು ಏಳುಸುತ್ತಿನ ಕೋಟೆಯನ್ನು, ಗುಡಿಗೋಪುರಗಳನ್ನು ಕಟ್ಟಿಸಿದನು.

2) **ಹೇಮಾವತಿಯ ಅರಸರು:** ಪ್ರಾಚೀನ ಕರ್ನಾಟಕದ ರಾಜಧಾನಿಗಳಲ್ಲಿ ಒಂದಾಗಿರುವ ಹೇಮಾವತಿ ಮಡಕಶಿರಾ ತಾಲ್ಲೂಕಿನಲ್ಲಿದೆ. ಇದರ ಮತ್ತೊಂದು ಹೆಸರು ಹೆಂಜೇರು. ಇಲ್ಲಿನ ಆರಾಧ್ಯದೈವ ಹೆಂಜೇರಪ್ಪ ಅಥವಾ ಸಿದ್ದೇಶ್ವರಸ್ವಾಮಿ, ಸ್ಥಳೀಯ ಜನರ ಆರಾಧ್ಯದೈವ. ನೊಳಂಬರು, ಚೋಳರ ಆಳ್ವಿಕೆಗೆ ಒಳಪಟ್ಟ ಈ ಪ್ರದೇಶದಲ್ಲಿ ಕುಂಚಿಟಿಗ ರಾಜರು, ನಾಡಗೌಡರು ಆಳ್ವಿಕೆ ನಡೆಸಿದ್ದಾರೆ. ಈ ಪ್ರದೇಶ ಅಪ್ಪಟ ಕುಂಚಿಟಿಗ ಪ್ರದೇಶವಾಗಿದೆ. 3) ನಿಡಗಲ್ಲು ದುರ್ಗದ ಪಾಳೆಯಗಾರರು, 4) ಕೊರಟಗೆರೆಯ ಪಾಳೆಯಗಾರರು, 5) ರತ್ನಗಿರಿ ಪಾಳೆಯಗಾರರು, 6) ರಾಜವಂತಿಪುರದ ನಾಡಗೌಡರು, 7) ರಾಜಬಂಡೆಪಾಳೆಯಗಾರರು, 8)

ಹೊಳವನಹಳ್ಳಿಯ ಪಾಳೆಯಗಾರರು: (ಹೊಳವನಹಳ್ಳಿಯ ಪಾಳೆಯಪಟ್ಟನ್ನು ಮೊರಸು ಒಕ್ಕಲಿಗ ಜನಾಂಗಕ್ಕೆ ಸೇರಿದ ಯಲಹಂಕ ಪ್ರಭುಗಳ ವಂಶಸ್ಥ ರಣಭೈರೇಗೌಡ ಆಳ್ವಿಕೆ ನಡೆಸಿದನು.) 9) ಪಾವಗಡದ ಪಾಳೆಯಗಾರರು ಹಾಗೂ ತಮಿಳುನಾಡು ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಮಧುರೈ ಪಾಳೆಯಗಾರರು, (ಕೊಂಬೆ, ಅಂಬತ್ತೂರು, ಪಳಿನಿ, ದಿಂಡಿಗಲ್, ಗೂಡೂರ್, ಪೆರೆಯಾಕುಲಂ, ನೀಲಿಕೊಟ್ಟಾಯಂ ಪಾಳೆಯಗಾರರು ಪ್ರಮುಖರಾಗಿದ್ದಾರೆ.), 10) ನೀಲಗಿರಿ ಪಾಳೆಯಗಾರರು, 11) ಸೇಲಂ ಪಾಳೆಯಗಾರರು, 12) ಕೊಯಮತ್ತೂರು ಪಾಳೆಯಗಾರರು.

(ಇಂದಿಗೂ ದಕ್ಷಿಣ ಭಾರತದ ಹಲವಾರು ಕಡೆ ಒಕ್ಕಲಿಗ ಸಮುದಾಯದ ಹಲವಾರು ಪಂಗಡಗಳು ಹರಡಿವೆ. ಸಂಶೋಧಕರು ಸಮಗ್ರ ಅಧ್ಯಯನ ಮಾಡುವುದು ಅವಶ್ಯಕವಿದೆ).

ಬಂಟರು ಯಾನೆ ನಾಡವರು

ಒಕ್ಕಲಿಗರ ಪಂಗಡಗಳಲ್ಲಿ ಮಂಗಳೂರಿನ ಕುಂದಾಪುರ, ಕಾರ್ಕಳ, ಪುತ್ತೂರು ಇನ್ನೂ ಮುಂತಾದ ಊರುಗಳು ಇರುವ ಕರಾವಳಿ ಪ್ರದೇಶದಲ್ಲಿ ದಟ್ಟವಾಗಿ ಹರಡಿರುವ ಬಂಟರು ಯಾನೆ ನಾಡವರು ಸುದೀರ್ಘ ಇತಿಹಾಸವನ್ನು ಹೊಂದಿದ್ದಾರೆ. ಇವರು ಮೈಸೂರು ಸಂಸ್ಥಾನದ ಒಕ್ಕಲಿಗರಿಂದ ದೂರ ಉಳಿಯಲು ಕೆಲವಾರು ಕಾರಣಗಳಿವೆ. ಮೊದಲನೆಯದಾಗಿ ಹಳೆ ಮೈಸೂರು ಪ್ರಾಂತ್ಯವನ್ನು ಬಯಲುಸೀಮೆ ಎಂದು ಕರೆದರೆ ಪ್ರಸ್ತುತ ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಕರಾವಳಿ ಪ್ರದೇಶವೆಂದು ಕರೆಯುತ್ತಾರೆ. ಈ ಮೇಲ್ಕಂಡ ಎರಡು ಪ್ರದೇಶಗಳನ್ನು ಚಾರ್ಮುಡಿ ಬೆಟ್ಟಪ್ರದೇಶವು (ಚಾರ್ಮುಡಿ ಘಾಟ್) ವಿಂಗಡಿಸುತ್ತದೆ. ಎರಡನೆಯದಾಗಿ, ಕದಂಬರ ಕಾಲದಲ್ಲಿ ಅಳುಪರೆಂಬ ಹೆಸರಿನಲ್ಲಿ ಆಳರಸರಾಗಿ, ಪಾಳೆಯಗಾರರಾಗಿ, ಗುತ್ತುಗಳ ಅಧಿಕಾರಸ್ಥರಾಗಿ, ಗ್ರಾಮೀಣ ಹಂತದಿಂದಲೇ ಆಡಳಿತಾಧಿಕಾರಿಗಳಾಗಿ ಮೆರೆದ ಇವರು, ಕದಂಬರು, ಗಂಗರು, ಪ್ರವರ್ಧಮಾನಕ್ಕೆ ಬಂದಂತೆಲ್ಲಾ ಹಿಂದೆ ಸರಿದರು. ಮೂರನೆಯದಾಗಿ ಮಾದರಿ ಸಂಸ್ಥಾನವಾಗಿದ್ದ ಮೈಸೂರರಸರ ಸಖ್ಯ ದೊರೆಯದೆ ಇದ್ದುದು. 1799ರಲ್ಲಿ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧಾನಂತರ ಮೈಸೂರು ರಾಜ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿ ಮಂಗಳೂರು ಪ್ರಾಂತ್ಯವು ಬ್ರಿಟಿಷರ ಕೈ ಸೇರಿತು. ಇದರಿಂದಾಗಿ ಬಂಟರು ಸ್ವಾತಂತ್ರ್ಯ ಚಳವಳಿಯಲ್ಲಿ ಮೈಸೂರಿಗರೊಂದಿಗೆ ಬೆರೆಯಲು ಸಾಧ್ಯವಾಗಲೇ ಇಲ್ಲ. ಆದರೆ ಪ್ರತ್ಯೇಕವಾಗಿ ಸ್ವಾತಂತ್ರ್ಯಕ್ಕೆ ಹೋರಾಡಿದರು. ಕೊನೆಯದಾಗಿ ಬಂಟರ ಯಾನೆ ನಾಡವರ ಭಾಷೆ (ತುಳು), ಆಚಾರ, ವಿಚಾರ, ಸಂಪ್ರದಾಯ, (ಅಳಿಯ ಸಂತಾನ) ಇನ್ನೂ ಮುಂತಾದವು ಬಯಲುಸೀಮೆಯ ಒಕ್ಕಲಿಗರಿಂದ ದೂರ ಸರಿಯಲು ಬಲವಾದ ಕಾರಣಗಳಾಗಿವೆ.

ಒಮ್ಮೆ ಆಳರಸರಾಗಿ, ಜಮೀನ್ದಾರರಾಗಿ ಮೆರೆದ ಬಂಟರಿಗೆ ಸ್ವಾತಂತ್ರ್ಯಾನಂತರ ರೂಪುಗೊಂಡ ರಾಜ್ಯ ಸರ್ಕಾರ ಸಹಾಯ, ಸಹಕಾರ ನೀಡಲಿಲ್ಲ. ಇಷ್ಟಾದರೂ ಯಕ್ಷಗಾನ, ಕಂಬಳ, ಭೂತಾರಾಧನೆ, ಇವೇ ಮುಂತಾದ ಜನಪದ ಕಲೆಗೆ ತಮ್ಮ ಕೊಡುಗೆಯನ್ನು ಕೊಟ್ಟಿದ್ದಾರೆ. 'ಅವಶ್ಯಕತೆಯೇ ಸಂಶೋಧನೆಯ ಮೂಲ' ಎಂಬ ವಾಣಿಯಂತೆ ಸರ್ಕಾರದ ಭೂ ಸ್ವಾಧೀನ ಕಾಯ್ದೆಯಿಂದಾಗಿ ದೊಡ್ಡ ಜಮೀನ್ದಾರರು ಕಾಲ ಕ್ರಮೇಣ ಸಣ್ಣ ಇಳುವರಿದಾರರಾಗಿ, ಗೇಣಿದಾರರಾಗಿ ಕೊನೆಗೆ ನಿರುದ್ಯೋಗಿಗಳಾದರು. (1962ರ ಅಳಿಯ ಸಂತಾನ ನಿಷೇಧ ಮತ್ತು ಭೂ ಸ್ವಾಧೀನ ಕಾಯ್ದೆ) ಕಾಲಕ್ರಮೇಣ ಇವರು ವಿಧಿ ಇಲ್ಲದೆ ವ್ಯಾಪಾರೋದ್ಯಮ, ಶಿಕ್ಷಣ, ಸಾರಿಗೆ, ಸಿನಿಮಾರಂಗ ಇನ್ನೂ ಮುಂತಾದ ರಂಗಗಳಲ್ಲಿ ಖ್ಯಾತನಾಮರಾದರು.

ಈಗಾಗಲೇ ತಿಳಿಸಿರುವಂತೆ ಬಂಟರು ಯಾನೆ ನಾಡವರು ಮಂಗಳೂರಿನ ಕರಾವಳಿ ತೀರಪ್ರದೇಶದಿಂದ ಹಿಡಿದು ಮಲೆನಾಡು ಪ್ರದೇಶವಾದ ಶಿವಮೊಗ್ಗದ-ವರೆವಿಗೂ ವ್ಯಾಪಿಸಿರುವರು. ಈ ಜನ ಸ್ಪುರದ್ರೂಪಿಗಳು, ಉತ್ತಮ ದೇಹದಾರ್ಢ್ಯವನ್ನು ಹೊಂದಿದವರಾಗಿದ್ದು ತಮ್ಮದೇ ಆದ ಇತಿಹಾಸವನ್ನು ಹೊಂದಿದ್ದಾರೆ. ಇವರ ಇತಿಹಾಸವು ಅಸ್ಪಷ್ಟವಾಗಿದ್ದರೂ ಗಂಗರ, ಚಾಲುಕ್ಯರ, ಹೊಯ್ಸಳರ, ವಿಜಯನಗರ-ದರಸರ ಸಮಕಾಲೀನರಾಗಿ ಅವರು ತಮ್ಮನ್ನು ಇತಿಹಾಸದೊಂದಿಗೆ ಗುರುತಿಸಿ-ಕೊಂಡಿದ್ದಾರೆ.

ಬಂಟ ಪದದ ನಿಷ್ಪತ್ತಿ

ಬಂಟರಲ್ಲಿ ಅನೇಕರು ಕಾಲಾಂತರದಲ್ಲಿ ಸೈನಿಕ ವೃತ್ತಿಯನ್ನು ಕೈಗೊಂಡಿದ್ದರು. ಅಂತಹ ಜನರಿಗೆ ಬಂಟರೆಂಬ ಹೆಸರು ಬಂದಿತು (ಬಂಟ ಅಂದರೆ ಭಟ, ಅರ್ಥಾತ್ ಸೈನಿಕ). ಒಂದು ಕಾಲದಲ್ಲಿ ರೈತರು ಇಲ್ಲವೆ ಕೃಷಿಕರು ಕೃಷಿ ಕಾಯಕದಲ್ಲಿ ತೊಡಗಿಸಿಕೊಂಡಿದ್ದುದರ ಜೊತೆ ಜೊತೆಗೆ ರಾಜನಿಗೆ ಇಲ್ಲವೆ ರಾಜ್ಯಕ್ಕೆ ಆಂತರಿಕವಾಗಿ ವಿಪತ್ತು ಬಂದಾಗ ರಾಜ್ಯ ರಕ್ಷಣೆಗೆ ಅವಶ್ಯಕವಾಗಿ ನಿಲ್ಲಬೇಕಾಗಿತ್ತು. ಇವರನ್ನು ಅಪ್ಪಟ *Martial* ಎಂದು ಕರೆಯುತ್ತಿದ್ದರೆಂದು ಈ ಮೊದಲೇ ತಿಳಿಸಿದೆ. ಒಕ್ಕಲಿಗ ಅನ್ನುವ ಬದಲಿಗೆ ತಾನು ಬಂಟ / ಸೈನಿಕ ಎಂದು ಕರೆದುಕೊಳ್ಳಲು ಅಂದು ಆ ಪರಿಸರದ ಜನ ಇಚ್ಛೆಪಟ್ಟ ಕಾರಣದಿಂದ ತಾವು ಒಕ್ಕಲಿಗರು ಎಂದು ಹೇಳಿಕೊಳ್ಳುವುದಕ್ಕಿಂತಲೂ ಬಂಟರು ಎಂದು ಕರೆದುಕೊಂಡ ಪರಿಣಾಮವಾಗಿ ಬಂಟ ಎಂಬುದು ರೂಢನಾಮವಾಯಿತು (ಸೇಡಿಯಾಪು ಕೃಷ್ಣಭಟ್ಟ: ತಥ್ಯದರ್ಶನ-1991, ಪುಟ-22)

ಬಂಟರು ಸ್ವಜನ ರಕ್ಷಣೆ ಹಾಗೂ ಸ್ವರಕ್ಷಣೆಗಾಗಿ ಯುದ್ಧ ತರಬೇತಿ ಕೇಂದ್ರಗಳನ್ನು ಹೊಂದಿದ್ದರು. ಈ ತರಬೇತಿ ಕೇಂದ್ರಗಳನ್ನು ಗರಡಿಮನೆಗಳೆಂದು ಕರೆಯುತ್ತಾರೆ. ಪ್ರತಿ ಸೀಮೆಗೆ ಒಂದರಂತೆ ಗರಡಿ ಮನೆಗಳು ಇವೆ. ಉಡುಪಿಯ

ನಾನಯರ ಗರಡಿ, ಸವಣೂರುಗುತ್ತಿನಲ್ಲಿ ಪಾಳುಬಿದ್ದ ಕಲೇರಿ ಚಾವಡಿ, ವಂಡಾರಬೀಡು ಇನ್ನೂ ಮುಂತಾದ ಕಡೆ ಗರಡಿಗಳು ಇದ್ದವು (ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ – ಇಂದಿರಾ ಹೆಗ್ಗಡೆ–ಬೆಂಗಳೂರು–2004)

ಬಂಟರು ಯಾನೆ ನಾಡವರು ಪದದ ಹಿನ್ನೆಲೆ

ಬಂಟರ ಬಗ್ಗೆ ಈ ಮೇಲೆ ತಿಳಿಸಲಾಗಿದೆ. ನಾಡವರು ಎಂದರೆ ನಾಡಿನ ಜನ, ನಾಡನ್ನು ಆಳಿದ ಜನ, ಮುಖಂಡರು ಎಂದು ಅರ್ಥ. ಇತಿಹಾಸಕಾರರಾದ ಥರ್ಸ್ಟನ್‌ರವರು ನಾಡವರು ಬಂಟರ ಒಂದು ಶಾಖೆ ಎಂದು ಅರ್ಥ ಬರುವಂತೆ ಹೀಗೆ ಉಲ್ಲೇಖಿಸಿದ್ದಾರೆ. "*The Name Nadava or Nadavaru means people of the made the country its one of the sub divisions of the Bunts*". ಆದರೆ ಇದನ್ನು ಒಪ್ಪದೆ ಬಂಟರು ನಾಡವರ ಶಾಖೆ ಎಂದು ಕರೆಯುವುದೇ ಸೂಕ್ತ ಎನ್ನುತ್ತಾರೆ. ಕಾರಣವೇನೆಂದರೆ ನಾಡವರು ಎನ್ನುವ ಹೆಸರೇ ಅತ್ಯಂತ ಪ್ರಾಚೀನವಾಗಿದ್ದು ಇವರು ಕ್ಷಾತ್ರ ವೃತ್ತಿಯನ್ನೇ ಪ್ರಮುಖವಾಗಿ ಆಶ್ರಯಿಸಿದ ಮೇಲೆ ಬಂಟರೆಂದು ಪ್ರಸಿದ್ಧರಾದರು (ನಾಯಕ ಎನ್.ಆರ್. ಉತ್ತರ ಕನ್ನಡ ಜಿಲ್ಲೆಯ ನಾಡವರು–ಹಸ್ತಪ್ರತಿ)

ಹೆಸರಾಂತ ಇತಿಹಾಸಕಾರರಾದ ಡಾ. ಸೂರ್ಯನಾಥ ಕಾಮತರು ಹೀಗೆ ಹೇಳುತ್ತಾರೆ. ಪಶ್ಚಿಮ ಕರಾವಳಿಯ ಒಂದು ಕೃಷಿಕ ವರ್ಗದವರು ಬಂಟರು ಯಾನೆ ನಾಡವರು ಎಂದು ತಮ್ಮನ್ನು ಕರೆದುಕೊಳ್ಳುತ್ತಾರೆ. ಬಂಟರು ತುಳು ಭಾಷಿಕರು, ನಾಡವರು ಕನ್ನಡ ಭಾಷಿಕರು. ಕುಂದಾಪುರ ಪರಿಸರದಲ್ಲೂ ಉತ್ತರ ಕನ್ನಡ ಅಂಕೋಲ ಪರಿಸರದಲ್ಲೂ, ತೀರ್ಥಹಳ್ಳಿ, ಶೃಂಗೇರಿ ಸುತ್ತಮುತ್ತ ನಾಡವರಿದ್ದು ತೀರ್ಥಹಳ್ಳಿ ಕಡೆಯ ನಾಡವರನ್ನು ನಾಮಧಾರಿಗಳೆಂದು ಕರೆಯುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ನಾಡವರು ಹಿಂದೆ ಕೆಲವು ಶತಮಾನಗಳ ಕಾಲ ಜೈನರಾಗಿದ್ದು ನಂತರದ ಕಾಲದಲ್ಲಿ ವೈಷ್ಣವರಾದರು. ತೀರ್ಥಹಳ್ಳಿ ಪರಿಸರದ ನಾಡವರು ಹಿಂದೆ ಜೈನರಾಗಿದ್ದು ನಂತರ ವೈಷ್ಣವರಾಗಿ ನಾಮಧಾರಿಗಳೆಂದು ಹೆಸರು ಪಡೆದರು. ಇವರಲ್ಲಿ ಕುಂದಾಪುರ ಪರಿಸರದಿಂದ ವಲಸೆ ಬಂದವರು ಭಾರೀ ಪ್ರಮಾಣದಲ್ಲಿ ಇದ್ದು ಕುಂದಾಪುರದವರಂತೆ ಇವರೂ ಅಳಿಯ ಸಂತಾನ ಪದ್ಧತಿ ಅನುಸರಿಸುತ್ತಿದ್ದರೆಂದು ಹಲವಾರು ಶಾಸನಗಳಿಂದ ಸ್ಪಷ್ಟವಾಗಿದೆ. ಆದರೆ ಕುಂದಾಪುರ ಕಡೆಯವರು ನಾಡವರೆಂದೇ ಪರಿಚಿತರು, ನಾಮಧಾರಿಗಳೆಂದಲ್ಲ. ತೀರ್ಥಹಳ್ಳಿ ಹಾಗೂ ಕರಾವಳಿ ಪ್ರದೇಶದ ನಾಡವರು ಕೆಳದಿ ಮತ್ತು ಸೋದೆ ನಾಯಕರ ಸೇನೆಯಲ್ಲಿ ಇದ್ದು ಸೋದೆ ನಾಯಕರ ಸೈನ್ಯದಲ್ಲಿ ಇದ್ದವರು ಅಂಕೋಲ, ಕುಮುಟ, ಪ್ರದೇಶದಲ್ಲಿ ನೆಲೆನಿಂತರು. ಇವರಲ್ಲಿ ಊರಿನ ಮುಖ್ಯಸ್ಥರಿಗೆ ಆಂವ್‌ಕರ್ ಎಂಬ ಹೆಸರು ಬಂದಿದೆ. ಈ ಮೂರು ನಾಡವರ ಗುಂಪುಗಳು ಮತ್ತು

ಬಂಟರು ಎಂದರೆ ತುಳುವಿನ ಒಕ್ಕೆಲ್ಮೆ ಒಂದೇ ಮೂಲದವರು. ಹಿಂದೆ ಅಳಿಯಸಂತಾನ ಪದ್ಧತಿಯನ್ನು ಅನುಸರಿಸುತ್ತಿದ್ದರು. (ಡಾ. ಸೂರ್ಯನಾಥ್ ಕಾಮತ್, ಒಕ್ಕಲಿಗರ ಅಧ್ಯಯನ ಹಸ್ತಪ್ರತಿ – ಅ.ತಿ.ಪು. 16)

ಶಿವಮೊಗ್ಗ ಜಿಲ್ಲೆಯಲ್ಲಿ ನಾಡವರಿದ್ದ ದಾಖಲೆಗಳಿವೆ. ಇವರನ್ನು ನಾಮಧಾರಿ ಗೌಡರು ಯಾನೆ ನಾಡವರು ಎಂದು ಕರೆಯುತ್ತಿದ್ದರು. ಈಗ ಇವರು ಗೌಡರೆಂದೇ ಹೆಸರಾಗಿದ್ದಾರೆ. ಆದರೆ ಹಳೇ ಪೈಕ, ದೀವ ಇವರಿಗಿಂತಲೂ ಭಿನ್ನರು. ಆದರೆ ಈಗ ನಾಮಧಾರಿಗೌಡರು ತಮ್ಮನ್ನು ನಾಡವರೆಂದು ಕರೆದುಕೊಳ್ಳುವುದು ಕಡಿಮೆಯಾಗಿದೆ. ದಕ್ಷಿಣ ಕನ್ನಡದಲ್ಲಿ ಕಲ್ಯಾಣಪುರ ಹೊಳೆಯ ಉತ್ತರಕ್ಕಿರುವ ಕನ್ನಡ ಮಾತನಾಡುವ ನಾಡವರು ತಮ್ಮನ್ನು ಬಂಟರು ಯಾನೆ ನಾಡವರು ಎಂದು ಕರೆದುಕೊಳ್ಳಲು ಇಚ್ಛೆಪಡುತ್ತಾರೆ.

ಕ್ರಿ.ಶ. 1800ರಲ್ಲಿ ದಕ್ಷಿಣ ಭಾರತದ ಬಹುಭಾಗಗಳನ್ನು ಕ್ಷೇತ್ರಕಾರ್ಯ ಮಾಡಿ ವರದಿಯನ್ನು ಸಂಪುಟ ರೂಪದಲ್ಲಿ ಹೊರತಂದ ಫ್ರಾನ್ಸಿಸ್ ಬುಕನಾನ್ ಎಂಬ ಅಧಿಕಾರಿಯು ಹೀಗೆ ಹೇಳಿದ್ದಾನೆ: ತುಳುನಾಡಿನ ಜಮೀನುಗಳು ಮಲಬಾರಿಗಿಂತ ಹುಲುಸಾಗಿವೆ..... ಇತ್ಯಾದಿ. ಈ ಕೃಷಿಕರಲ್ಲೂ ಶ್ರೀಮಂತ ವರ್ಗವೆಂದರೆ ಬಂಟರು ಯಾನೆ ನಾಡವರು. ಸ್ಫುರದ್ರೂಪಿಗಳಾದ ಇವರು ಕಷ್ಟಪಟ್ಟು ದುಡಿಯುತ್ತಾರೆ. ಇವರು ತುಳುನಾಡಿನ ಒಕ್ಕಲಿಗರು (ಒಕ್ಕೆಲ್). ಇವರು ಕೇರಳದ ನಾಯರ್ ಜನರನ್ನು ಹೋಲುತ್ತಾರೆ ಎಂದೆಲ್ಲ ವಿವರಣೆ ನೀಡಿದ್ದಾನೆ.

ವ್ಯಾಪಾರೋದ್ಯಮ ಕ್ಷೇತ್ರದಲ್ಲಿ ಬಂಟರು

ಕರ್ನಾಟಕ ರಾಜ್ಯ ಮಾತ್ರವೇ ಅಲ್ಲ ಭಾರತದ ಎಲ್ಲಾ ಕಡೆ, ಅಷ್ಟೇ ಏಕೆ ಕಡಲಾಚೆಗೂ ಬಂಟರು ತಮ್ಮ ವ್ಯಾಪಾರ ವಾಣಿಜ್ಯವನ್ನು ವಿಸ್ತರಿಸಿರುತ್ತಾರೆ ಹಾಗೂ ಕರ್ನಾಟಕದ ಪತಾಕೆಯನ್ನು ಹಾರಿಸಿರುತ್ತಾರೆ. ಇದರಲ್ಲಿ ಉತ್ತಮವಾದ ಉದಾಹರಣೆಯೆಂದರೆ 1907–08ರ ಸಮಯದಲ್ಲಿ ಹಿಂದುಳಿದ ವರ್ಗಗಳ ಅನುಕೂಲಕ್ಕಾಗಿ ಎ.ಬಿ. ಶೆಟ್ಟಿಯವರ ಪರಿಶ್ರಮದಿಂದಾಗಿ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ನಿಲಯವನ್ನು ಮೊದಲು ಮಂಗಳೂರಿನಲ್ಲಿ ಪ್ರಾರಂಭಿಸಿ ಬೆಂಗಳೂರು, ಹೈದರಾಬಾದ್ ಸೇರಿದಂತೆ ದೂರದ ಮುಂಬೈಯಲ್ಲಿಯೂ ಶಾಖೋಪಶಾಖೆ ಗಳನ್ನು ತೆರೆದು ಶಿಕ್ಷಣ ಪ್ರಸರಣಕ್ಕೆ ಅನುವು ಮಾಡಿಕೊಟ್ಟಿರುವುದು. ಈ ವಿಷಯವನ್ನು ಸವಿಸ್ತಾರವಾಗಿ ತಿಳಿಸಲಾಗಿದೆ. ಬಹುಶಃ ಆಳರಸರು, ಬ್ರಿಟಿಷರು ಮಾಡಬೇಕಾದ ಕೆಲಸವನ್ನು ಬಂಟರು ಸಂಘಟನೆಯ ಮೂಲಕ ಸಾಧಿಸಿರುವುದರಿಂದ ಎಲ್ಲರೂ ಹುಬ್ಬೇರಿಸುವಂತೆ ಆಗಿದೆ.

ಬಂಟರು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉತ್ತಮವಾದ ಕೊಡುಗೆಯನ್ನು ಕೊಟ್ಟಿರು–ತ್ತಾರೆ. ಜನಾಂಗದ ಬಡ ವಿದ್ಯಾರ್ಥಿಗಳಿಗೆ ಸ್ಥಾಪಿಸಲ್ಪಟ್ಟ ರಾಮಕೃಷ್ಣ ವಿದ್ಯಾರ್ಥಿನಿಲಯದ

ಸ್ಫೂರ್ತಿಯ ಫಲವಾಗಿ 1931ರಲ್ಲಿ ಮಂಗಳೂರಿನಲ್ಲಿ 'ವಿಜಯಾ ಬ್ಯಾಂಕ್' ಅನ್ನು ಸ್ಥಾಪಿಸಿದರು. ಕ್ರಮೇಣ ಮಂಗಳೂರಿನಲ್ಲಿ ಎರಡು ಶಾಖೆಗಳು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾರ್ಕಳ, ಪುತ್ತೂರು, ಬೆಂಗಳೂರು ಸೇರಿದಂತೆ ರಾಷ್ಟ್ರದ ನಾನಾ ಕಡೆಗಳಲ್ಲಿ ಶಾಖೋಪಶಾಖೆಗಳನ್ನು ತೆರೆದು ಕೋಟ್ಯಂತರ ರೂಪಾಯಿ ವ್ಯವಹಾರವನ್ನು ನಡೆಸುತ್ತಿದ್ದು ತಾವು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗಟ್ಟಿಗರು ಎಂದು ತೋರಿಸಿಕೊಟ್ಟಿದ್ದಾರೆ. ಹೋಟೆಲ್ ಉದ್ಯಮದಲ್ಲಿ ಸಿದ್ಧಹಸ್ತರು. ಕರ್ನಾಟಕ ಮಾತ್ರವಲ್ಲ ದೂರದ ಮುಂಬೈನಲ್ಲೂ ಸಾಕಷ್ಟು ಪ್ರಮಾಣದಲ್ಲಿ ಹೋಟೆಲ್‌ಗಳನ್ನು ತೆರೆದಿದ್ದಾರೆ. ಅದೇರೀತಿ ವಾಣಿಜ್ಯ ಉದ್ಯಮವನ್ನು ಹೊರನಾಡಿಗೂ ವಿಸ್ತರಿಸಿದ್ದಾರೆ. ದೂರದ ದುಬೈನಲ್ಲಿ ಬಿ.ಆರ್. ಶೆಟ್ಟಿ, ಆರ್.ಎನ್. ಶೆಟ್ಟಿ ಇವರೇ ಮುಂತಾದವರು. ಇಷ್ಟೇ ಅಲ್ಲದೆ ಚಲನ ಚಿತ್ರರಂಗದಲ್ಲೂ ತಾವೇನೂ ಕಡಿಮೆ ಇಲ್ಲವೆಂದು ತೋರಿಸಿಕೊಟ್ಟಿದ್ದಾರೆ. ಬಾಲಿವುಡ್‌ನಲ್ಲಿರುವ ಬಹುತೇಕ ನಟ, ನಟಿಯರು ಹಾಗೂ ಚಲನಚಿತ್ರದ ನೇಪಥ್ಯದಲ್ಲಿ ದುಡಿಯುತ್ತಿರುವವರು ಬಂಟ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

ಉಪ್ಪಿನ ಕೊಳಗ ಒಕ್ಕಲಿಗರು

ಒಕ್ಕಲಿಗರ ಒಳಪಂಗಡಗಳಲ್ಲಿ ಉಪ್ಪಿನ ಕೊಳಗ ಒಕ್ಕಲಿಗರು ಪ್ರಮುಖ ಪಂಗಡಗಳಲ್ಲೊಂದಾಗಿದ್ದಾರೆ. ಇವರು ತುಮಕೂರು ಜಿಲ್ಲೆಯ ಕೊರಟಗೆರೆ, ಶಿರಾ, ಮಧುಗಿರಿ, ಪಾವಗಡ, ಕುಣಿಗಲ್ ಊರ್ಡಿಗೆರೆ, ಚನ್ನರಾಯದುರ್ಗ, ಕೋರ, ಮಿಡದೇಶಿ, ದೊಡ್ಡೇರ ಸೇರಿದಂತೆ ಒಟ್ಟು 185 ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ತಮಕೂರು ತಾಲ್ಲೂಕು ಲಿಂಗಾಪುರದಲ್ಲಿ ಕೊಳಗಲಕ್ಷ್ಮಿ ಎಂದು ಪೂಜಿಸಲ್ಪಡುವ ಧಾನ್ಯ ಅಳೆಯುವ ಕೊಳಗವೇ ಈ ಸಮುದಾಯದ ಹೆಸರಿಗೆ ಮೂಲ ಕಾರಣ ಎಂದು ನಂಬಲಾಗಿದೆ. ಉಪ್ಪಿನ ಕೊಳಗದ ಒಕ್ಕಲಿಗರು ಎಂದು ಹೆಸರು ಬರಲು ಕಾರಣವೇನು? ಒಂದು ಕರಾರುವಕ್ಕಾದ ಕಾರಣ ತಿಳಿದು ಬಂದಿಲ್ಲ. ಸಮುದ್ರ ತೀರದಲ್ಲಿ ಉಪ್ಪನ್ನು ತಯಾರಿಸುವುದನ್ನು, ಅಳೆಯುವುದನ್ನು ಕಾಣಬಹುದು. ಆದರೆ ಒಳನಾಡಿನಲ್ಲಿ ಉಪ್ಪನ್ನು ತಯಾರಿಸುವುದನ್ನು ನೋಡಲು ಸಾಧ್ಯವಿಲ್ಲ. ಬಹುಶಃ ಇವರು ಸಮುದ್ರದ ತಟದಿಂದ ಬಂದಿರಬಹುದೇ ಎಂಬ ಸಂಶಯ ಮೂಡುತ್ತದೆ. ಇವರ ಮೂಲದ ಬಗ್ಗೆ ಉಪ್ಪಿನಕೊಳಗದ ಒಕ್ಕಲಿಗರೇ ಹೇಳುವಂತೆ ತಾವು ಉತ್ತರ ಭಾರತರಿಂದ ಬಂದವರೆಂತಲೂ, ರಾಜಾಸ್ಥಾನದ ಅಜ್ಮೀರ್ ಮೂಲದವರೆಂದು ಹೇಳಿಕೊಳ್ಳುತ್ತಾರೆ. ಆದರೆ ಅದು ಐತಿಹ್ಯವೇ ಸರಿ.

ಈ ಮೇಲೆ ತಿಳಿಸಿರುವ ಕೊಳಗ ಲಕ್ಷ್ಮಿಯ ಬಳಿಯಿರುವ ಕೊಳಗವನ್ನು ಉಪ್ಪಾರಕೊಳಗ ಎಂದು ಕರೆಯುತ್ತಿದ್ದು ಕಾಲಾನಂತರ ಉಪ್ಪಾರ ಸಮುದಾಯದವರು ಸಂಘಟಿತರಾಗಿ ಬಂದು, ಕೊಳಗವನ್ನು ಬಲವಂತದಿಂದ

ಪಡೆದು ಹೋಗಿ ಉಪ್ಪನ್ನು ಅಳೆಯುತ್ತಿದ್ದರೆಂತಲೂ ನಂತರ ಉಪ್ಪಿನ ಕೊಳಗದ ಒಕ್ಕಲಿಗರು ಒಗ್ಗಟ್ಟಾಗಿ ಹೋಗಿ ಪಡೆದುದರಿಂದ ಉಪ್ಪಿನ ಕೊಳಗವೆಂದು ಹೆಸರಾಯಿತು ಎಂದು ಕೆಲವರು ಹೇಳುತ್ತಾರೆ.

ಉಪ್ಪಿನ ಕೊಳಗದ ಒಕ್ಕಲಿಗರು 78 ಬೆಡಗುಗಳನ್ನು ಹೊಂದಿದ್ದು ವಿಜಯನಗರ ಅರಸರು ಪ್ರತಿಯೊಂದು ಬೆಡಗಿನವರಿಗೂ ಒಂದು ಇಲ್ಲವೆ ಎರಡು ಗ್ರಾಮಗಳನ್ನು ನೀಡಿ, ಅವುಗಳ ಗೌಡಿಕೆಯನ್ನು ನೀಡಿದರೆಂದು ಪ್ರತೀತಿ.

ಈ ಸಮುದಾಯದ ಜನರಲ್ಲಿ ತಂಟೆ, ತಕರಾರು, ಕೊಲೆ ಸುಲಿಗೆ ಭೂ ಒತ್ತುವರಿ ಇವೇ ಮುಂತಾದ ವ್ಯಾಜ್ಯಗಳು ಬಂದರೆ ಅವುಗಳನ್ನು ನಿವಾರಿಸಿಕೊಳ್ಳಲು ಕಟ್ಟೆ ಮನೆ ಎಂಬ ಹಿರಿಯರ ಪಂಚಾಯ್ತಿ ಕಟ್ಟೆಯನ್ನು ಹೊಂದಿದ್ದರು. ಈ ಸಮುದಾಯವರು ಹೊಂದಿದ್ದ ಆ ಕಟ್ಟೆ ಮನೆಗಳು ಈ ಕೆಳಕಂಡಂತಿವೆ.

1) ಪೀಣ್ಯ ಕಟ್ಟೆಮನೆ 2) ತರಿದಾಳು ಕಟ್ಟೆಮನೆ 3) ದಾಮೇಗೌಡನ ದೊಡ್ಡಿ ಕಟ್ಟೆಮನೆ 4) ಲಿಂಗಾಪುರ ಕಟ್ಟೆಮನೆ 5) ನಾಗಾರ್ಜುನಹಳ್ಳಿ ಕಟ್ಟೆಮನೆ 6) ಕನ್ನಮೆಡಿ ಕಟ್ಟೆಮನೆ ಇವೇ ಮುಂತಾದ ಕಟ್ಟೆ ಮನೆಗಳಿವೆ. ಈ ಸಮುದಾಯದಲ್ಲಿ 78 ಬೆಡಗುಗಳಿದ್ದು ಅವುಗಳು ಈ ಐದು ಕಟ್ಟೆ ಮನೆಗಳಲ್ಲಿ ಹಂಚಲ್ಪಟ್ಟಿವೆ. ಆಯಾ ಬೆಡಗಿನವರು ತಮ್ಮ ತಮ್ಮ ಕಟ್ಟೆ ಮನೆಗಳಿಗೆ ಭಯ, ಭಕ್ತಿ, ಗೌರವಗಳಿಂದ ನಡೆದುಕೊಳ್ಳುತ್ತಿದ್ದರು. ಇಂದು ಕಾಲ ಬದಲಾಗಲಾಗಿ ಕೋರ್ಟು ಕಛೇರಿಗಳಿಗೆ ಹೋಗಿ ನ್ಯಾಯ ಪಡೆಯುವ ಪರಿಸ್ಥಿತಿ ಬಂದಿದೆ. ಇದು ಶಿಕ್ಷಣ ಮತ್ತು ನಾಗರೀಕತೆಯ ಪ್ರಭಾವವೇ ಸರಿ.

ಸರ್ಪ ಒಕ್ಕಲಿಗರು

ಒಕ್ಕಲಿಗರ ನಾನಾ ಉಪಪಂಗಡಗಳಲ್ಲಿ ಸರ್ಪ ಒಕ್ಕಲಿಗರು ಒಂದು ಪ್ರಮುಖವಾದುದು. ಇವರನ್ನು ಸರ್ಪ, ಸಲಪ, ಸಲಹುರ ಇವೇ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇವರ ಮೂಲ ತುಮಕೂರಿನ ಶಿರಾ ತಾಲ್ಲೂಕಿನ 'ಮೊದ್ಲರು' ಎಂಬ ಗ್ರಾಮ. ಇಲ್ಲಿಂದಾಗಿ ಕ್ರಮೇಣ ತುಮಕೂರು ಜಿಲ್ಲೆಯ ಹಲವಾರು ಕಡೆ ಹರಡಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ 'ತೇಪಲವಟ್ಟ', 'ಬುಕ್ಕಸಾಗರ', ಚಿಕ್ಕನಾಯಕನಹಳ್ಳಿ, ಬೋರಾಪುರ ಇವೇ ಮುಂತಾದ ಕಡೆಗಳೇ ಅಲ್ಲದೆ ಕರ್ನಾಟಕದ ತುಮಕೂರು, ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ಬಳ್ಳಾರಿ, ಶಿವಮೊಗ್ಗ ಜಿಲ್ಲೆಗಳಲ್ಲಿ ಹರಡಿದ್ದಾರೆ.

ಹಿಂದೆ ಇಂದಿನಂತೆ ಆಧುನಿಕ ಶಸ್ತ್ರಾಸ್ತ್ರಗಳು ಇರಲಿಲ್ಲ. ಕೇವಲ ಕತ್ತಿ ಗುರಾಣಿ, ಭರ್ಜಿ ಇವೇ ಮುಂತಾದವು ಇಂತಹ ಶಸ್ತ್ರಾಸ್ತ್ರಗಳನ್ನು ತಯಾರು ಮಾಡುತ್ತಿದ್ದರು. ಇವುಗಳ ಸಹಾಯದಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುತ್ತಿದ್ದರು. ಹಾಗೂ ರಾಜ ಮಹಾ

ರಾಜರಿಗೆ, ಪಾಳೇಗಾರರಿಗೆ ಮಾರಾಟ ಮಾಡಿ ಹಣ ಗಳಿಸುತ್ತಿದ್ದರೆಂದು ತಿಳಿದು ಬರುತ್ತದೆ.

ಇವರ ಸಂಪ್ರದಾಯವನ್ನು ನೋಡುವುದಾದರೆ 'ಸರ್ಪ' ಇವರ ಲಾಂಛನ. ವ್ಯವಸಾಯವೇ ಇವರ ಮುಖ್ಯ ಕಸುಬು. ಆದರೆ ಬಿಡುವಿನ ವೇಳೆಯಲ್ಲಿ ಉಪಕಸು–ಬಾಗಿ ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿದ್ದರು ಎಂದು ತಿಳಿದು ಬರುತ್ತದೆ. ಸಂಸಾರ, ಸಮಾಜ ಎಂದ ಮೇಲೆ ನ್ಯಾಯ ಪಂಚಾಯ್ತಿ ಜಗಳ, ತಂಟೆ, ತಕರಾರು ಇದ್ದೇ ಇರುತ್ತದೆ. ಅಂತಹ ಸಂದರ್ಭದಲ್ಲಿ ಅವುಗಳನ್ನು ನಿವಾರಿಸಿಕೊಳ್ಳಲು 'ಕಟ್ಟೆ ಮನೆ' ಎಂಬ ಪಂಚಾಯ್ತಿ ಕಟ್ಟೆಯನ್ನು ರಚಿಸಿಕೊಂಡಿದ್ದಾರೆ. ಅಲ್ಲಿ ಇವರ ನ್ಯಾಯ ಪಂಚಾಯ್ತಿ ತೀರ್ಮಾನವಾಗುತ್ತದೆ. ಅವರ ಸಮಾಜದಲ್ಲಿ ಹಿರಿಯನಾದ ವ್ಯಕ್ತಿಯೊಬ್ಬನಿರುತ್ತಾನೆ. ಆತ ತಮ್ಮ ಸಮುದಾಯದ ರಕ್ಷಣೆಗಾಗಿ ಟೊಂಕಕಟ್ಟಿ ನಿಂತಿರುತ್ತಾನೆ. ಕಾಲ ಬದಲಾದಂತೆ ಈ ಸಮುದಾಯದ ಜನ ಶಿಕ್ಷಣ ಉದ್ಯೋಗ ಪಡೆದು ಸಮಾಜದ ಮುಖ್ಯವಾಹಿನಿಗೆ ಸೇರಿದ್ದಾರೆ ಹಾಗೂ ಸೇರುತ್ತಿದ್ದಾರೆ.

ಸಾದರು

ಒಕ್ಕಲಿಗರ ಉಪ ಪಂಗಡದಲ್ಲಿ ಸಾದರು ಇಂದು ತುಂಬಾ ಅಲ್ಪಸಂಖ್ಯಾತ–ರಾಗಿದ್ದಾರೆ. ಚಿತ್ರದುರ್ಗ, ದಾವಣಗೆರೆ, ಗುಲ್ಬರ್ಗಾಗಳಲ್ಲಿ ಹೆಚ್ಚಾಗಿ ವಾಸಿಸುತ್ತಿರುವ ಇವರು. ಹಿಂದೊಮ್ಮೆ ಒಕ್ಕಲಿಗರ ಸಮುದಾಯದವರ ಹಾಗೂ ಒಕ್ಕಲಿಗ–ಗುರುಮಠದ ಪ್ರಭಾವವಿಲ್ಲದೆ ನಿರ್ಲಕ್ಷ್ಯಕ್ಕೆ ಒಳಗಾದ ಈ ಜನ ವೀರಶೈವ ಇಲ್ಲವೆ ಲಿಂಗಾಯಿತ ಧರ್ಮಕ್ಕೆ ಸಾಮೂಹಿಕವಾಗಿ ಮತಾಂತರವಾದ ಉದಾಹರಣೆ ಇದೆ. ಸಸ್ಯಹಾರಿಗಳಾದ ಇವರು ನಿಜಕ್ಕೂ ಸಾಧುಗಳು. ಮೊದಲು ಜೈನಧರ್ಮಕ್ಕೆ ಸೇರಿದರು. ಕಾರಣವೇನೆಂದರೆ ಹಿಂದೊಮ್ಮೆ ಜೈನ ಧರ್ಮವು ಪ್ರಖರವಾಗಿದ್ದಿತು. ಸಾದರ ಪ್ರಮುಖ ವ್ಯಕ್ತಿಗಳು ಜೈನ ದೀಕ್ಷೆಯನ್ನು ಪಡೆದರು. ಇವರು ಸಸ್ಯಹಾರಿಗಳಾಗಿರುವುದರಿಂದ ಜೈನಧರ್ಮಕ್ಕೆ ಸರಿ ಹೊಂದಿತು.

ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಪ್ರಭಾವ ಹಾಗೂ ನಂತರದಲ್ಲಿ ಅವರ ಅನುಯಾಯಿಗಳ ಪ್ರಭಾವದಿಂದಾಗಿ ವಿಧಿಯಿಲ್ಲದೆ ವೀರಶೈವ ಧರ್ಮಕ್ಕೆ ಮತಾಂತರಗೊಂಡರು. ಮೂಲತಃ ಒಕ್ಕಲಿಗ ಸಮುದಾಯಕ್ಕೆ ಸೇರಿದ ಕಾರಣ ವೀರಶೈವರು ಇವರಿಗೆ ಅಷ್ಟಾಗಿ ಸ್ಥಾನಮಾನ ನೀಡಿಲ್ಲವಾದರು ತಮ್ಮ ಪೂರ್ವಾಶ್ರಮವನ್ನು ಮರೆತಿದ್ದಾರೆ. ಇಂದಿಗೂ ಸಾದ ಲಿಂಗಾಯತರಲ್ಲಿ ಹಲವಾರು ಜನ ತಮ್ಮ ಹೆಸರಿನ ಮುಂದೆ ಗೌಡ ಎಂದು ಸೇರಿಸಿಕೊಂಡಿದ್ದಾರೆ. ವೀರಶೈವ ಮಠಗಳ ಪ್ರಭಾವ ಮತ್ತು ವ್ಯಕ್ತಿಗತವಾಗಿ ಪಡೆದ ಶಿಕ್ಷಣ, ಉದ್ಯೋಗ ಇವೇ ಮುಂತಾದವುಗಳಿಂದಾಗಿ ಸಮಾಜದಲ್ಲಿ ಗೌರವಾದ ಸ್ಥಾನಮಾನ ಪಡೆದಿದ್ದಾರೆ.

ಚಿತ್ರದುರ್ಗದ 'ಸಿರಿಗೆರೆ' ಮಠ ಇವರ ಕೇಂದ್ರವಾಗಿದೆ. ಸಾದರಲ್ಲಿ ಕೆಲವರು ಅತ್ತ ಜೈನ ಧರ್ಮಕ್ಕೆ ಇಲ್ಲವೆ ವೀರಶೈವ ಧರ್ಮಕ್ಕೆ ಸೇರದೆ ಸಾದ ಗೌಡರು, ಸಾದುಗೌಡರು, ಸಾದಗೌಡ ಮನೆ ಲಿಂಗಾಯತರು ಎಂಬಿತ್ಯಾದಿಯಾಗಿ ತಮ್ಮನ್ನು ಕರೆದುಕೊಳ್ಳುತ್ತಿದ್ದಾರೆ. ಹಳೇ ಮೈಸೂರು ಭಾಗದ ಜನರೊಂದಿಗೆ ಕೊಡುವುದು ತರುವುದು ಇಲ್ಲವಾಗಿದೆ. ಇತ್ತೀಚೆಗೆ ಇವರಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ.

ಕೊಡಗು ಗೌಡ ಸಮುದಾಯ ಹಾಗೂ ಅರೆ ಭಾಷಿಕ ಗೌಡರು

ಕೊಡಗು, ಮಡಿಕೇರಿ, ಕೂರ್ಗ್ ಎಂದು ಕರೆಯುವ ಕರ್ನಾಟಕದ ಕಾಶ್ಮೀರವೇಂದೇ ಪ್ರಖ್ಯಾತ, ಕೂರ್ಗ್ ಇಲ್ಲವೆ ಮಡಿಕೇರಿ ಎಂದ ಕೂಡಲೆ ಅಲ್ಲಿ ಕೊಡವರೇ ತುಂಬಿರುವ ಜಿಲ್ಲೆ ಎಂದು ಭಾಸವಾಗುತ್ತದೆ. ಪುಟ್ಟ ಜಿಲ್ಲೆ ಕೊಡಗಿನ ಒಂದು ಅಂಕಿ-ಅಂಶದ ಪ್ರಕಾರ ಕೊಡವರು ಮತ್ತು ಒಕ್ಕಲಿಗರು ಒಂದು ಲಕ್ಷದ ಇಪ್ಪತ್ತು ಸಾವಿರಜನ ಸಂಖ್ಯೆ ಇದ್ದರೆ ಒಕ್ಕಲಿಗರು ಯಾನೆ ಅರೆಭಾಷಿಕ ಗೌಡರು ಒಂದು ಲಕ್ಷದ ಎಂಬತ್ತು ಸಾವಿರ ಜನ ಇದ್ದಾರೆ. ಉಳಿದ ಸಮುದಾಯವು ಇಲ್ಲಿ ನೆಲೆಸಿದ್ದಾರೆ. ಕೊಡಗಿನಲ್ಲಿ ಒಕ್ಕಲಿಗರು ಬಂದು ನೆಲೆಸಲು ರೋಚಕವಾದ ಇತಿಹಾಸವಿದೆ.

ಅದೇನೆಂದರೆ ಕ್ರಿ.ಶ ಏಳನೆಯ ಶತಮಾನದಲ್ಲಿ ತಲಕಾಡಿನ ಗಂಗರ ದೊರೆ ಶಿವಮಾರನ ನಂತರ ಶ್ರೀ ಪುರುಷನ ಕಾಲದಲ್ಲಿ ರಾಜ್ಯ ವಿಸ್ತರಿಸಿ ಕೊಡಗು ಪ್ರವೇಶವನ್ನು ವಶಪಡಿಸಿಕೊಂಡಿದ್ದನು. ಇವನಿಗೆ 'ರಾಚಿಕೇಸರಿ' ಎಂಬ ಬಿರುದಿದ್ದಿತು. ಅಂದು ಕೊಡಗಿನಲ್ಲಿ ಅತ್ಯಂತ ಕಡಿಮೆ ಜನಸಂಖ್ಯೆ ಇದ್ದಿತು. ಈತನ ನಂತರ ಇವನ ಮಗ ಶಿವಮಾರನು ಆಳ್ವಿಕೆ ಮಾಡಿದನು. ಒಟ್ಟಾರೆ ಹೇಳುವುದಾದರೆ ಒಕ್ಕಲಿಗರ ರಾಜ್ಯವಾಗಿತ್ತು. ಬೆಟ್ಟಗುಡ್ಡಗಳ ದಟ್ಟ ಅರಣ್ಯವಾಗಿದ್ದ ಕೊಡಗಿನ ಬಗ್ಗೆ ಗಂಗರು ಅಷ್ಟಾಗಿ ತಲೆಕೆಡಿಸಿಕೊಳ್ಳಲಿಲ್ಲ. ಕಾಲಾನಂತರ ಗಂಗರ ಕೈಯಿಂದ ಕೊಡಗು ಕೈತಪ್ಪಿತು. ಮೈಸೂರು ಅರಸರು ಪ್ರಬಲರಾಗಿದ್ದ ಸಮಯದಲ್ಲಿ ಕೊಡಗಿನ ಹಾಲೇರಿ ಮನೆತನದ ದೊಡ್ಡವೀರ ರಾಜೇಂದ್ರರು ಆಳ್ವಿಕೆ ಮಾಡುತ್ತಿದ್ದರು. ಕಾಲಘಟ್ಟದಲ್ಲಿ ಸಾಕಷ್ಟು ಬದಲಾವಣೆಗಳಾದವು. ಮೈಸೂರು ಸಂಸ್ಥಾನದಲ್ಲಿ ಹೈದರಾಲಿ ತಲೆ ಎತ್ತಿದ. ಹೈದರಾಲಿ ಈತನ ಮಗ ಟಿಪ್ಪು ಸುಲ್ತಾನ್ ನಿರಂಕುಶ ಪ್ರಭುವಂತೆ ವರ್ತಿಸತೊಡಗಿದ. ಕೊಡಗಿನ ಮೇಲೆ ದಾಳಿ ಮಾಡಿ ದೊಡ್ಡವೀರರಾಜೇಂದ್ರನನ್ನು ಸೋಲಿಸಿದನು. ಸೆರೆ ಸಿಕ್ಕ ಅಲ್ಲಿನ ಸೈನಿಕರನ್ನು, ನಾಗರಿಕರನ್ನು ಮತಾಂತರಗೊಳಿಸಿದ ಹಾಗೂ ತನ್ನ ಸೈನ್ಯಕ್ಕೆ ಸೇರಿಸಿಕೊಂಡು ದೊಡ್ಡವೀರರಾಜೇಂದ್ರನಿಂದ ಕಪ್ಪ ಕಾಣಿಕೆ ಪಡೆದು ಮೈಸೂರಿಗೆ ಹಿಂತೆರಳಿದ.

ಇತ್ತ ಕೊಡಗಿನಲ್ಲಿ ವ್ಯವಸಾಯ ಮಾಡಲು ಜನರಿಲ್ಲದೆ ಭೂಮಿ ಬರಡು ಬಿದ್ದಿತು ಹಾಗೂ ಸೈನ್ಯಕ್ಕೆ ಸೇರಲು ಯುವಕರು ಹಿಂಜರಿದರು. ಅಂತಹ ಸಂದಿಗ್ಧ

ಪರಿಸ್ಥಿತಿಯಲ್ಲಿ ಪುತ್ತೂರು ಅಮರಸುಳ್ಯ, ಹಾಸನ ಸೇರಿದಂತೆ ನಾನಾ ಕಡೆಗಳಿಂದ ಜನರು ಮಡಿಕೇರಿಗೆ ಬಂದು ನೆಲೆಸಿದರೆ ಜಮ್ಮ ಅಥವಾ ಉಂಬಳಿಯಾಗಿ ಭೂಮಿಯನ್ನು ನೀಡುವುದಾಗಿ ಹೇಳಿದನು. ಕಾಲಾನಂತರ ಶೌರ್ಯಪರಾಕ್ರಮಕ್ಕೆ ಹೆಸರಾದ ಒಕ್ಕಲಿಗರು ಕೊಡಗಿನ ಭಾಗಮಂಡಲ, ನಾಪೋಕ್ಲು, ಗಾಳಿಬೀಡು, ವೀರಾಜಪೇಟೆ, ಸೋಮವಾರಪೇಟೆ, ಸುಂಟಿಕೊಪ್ಪ ಹೀಗೆ ಕೊಡಗಿನ ನಾನಾ ಭಾಗಗಳಲ್ಲಿ ಬಂದು ನೆಲೆಸಿದರು. ತಾನು ಮಾತು ಕೊಟ್ಟಂತೆ ದೊಡ್ಡರಾಜೇಂದ್ರನು ಹೀಗೆ ಬಂದಂತಹ ಒಕ್ಕಲಿಗ ಯಾನೆ ಗೌಡರಿಗೆ ಜಮ್ಮ, ಜಹಗೀರು, ಉಂಬಳಿಯನ್ನು ನೀಡಿದುದೇ ಅಲ್ಲದೆ ರಕ್ಷಣೆ ನೀಡಿದ. ಈತನ ನಂತರ ಕೊಡಗಿನ ರಾಜನಾದ ಚಿಕ್ಕವೀರರಾಜೇಂದ್ರನೂ ಮುಂದುವರಿಸಿ-ಕೊಂಡು ಹೋದನು. ಹೀಗಾಗಿ ಕೊಡಗಿನಲ್ಲಿ ಒಕ್ಕಲಿಗರ ಸಂಖ್ಯೆ ದಿನೇದಿನೇ ವೃದ್ಧಿಯಾಯಿತು.

ಕೊಡಗಿನ ಮೂಲ ನಿವಾಸಿಗಳಾದ ಮಲೆಕುಡಿಯರು, ಜೇನುಕುರುಬರು, ಬೆಟ್ಟಕುರುಬರು ಇವರು ನವನಾಗರಿಕತೆಗೆ ಬೆನ್ನು ಮಾಡಿದ ಜನ. ಕೊಡಗಿನ ತುಂಬೆಲ್ಲ ನೆಲೆಸಿದ ಗೌಡರು ತಮ್ಮ ಮೂಲ ನೆಲೆ ಸುಳ್ಯ ಇಲ್ಲವೆ ಅಮರ ಸುಳ್ಯದಲ್ಲಿದ್ದ ಅವಿಭಕ್ತ ಕುಟುಂಬಕ್ಕೆ ರೂಢಿ ಸಂಪ್ರದಾಯಕ್ಕೆ ಒತ್ತುಕೊಟ್ಟರು. ಒಂದೊಂದು ಮೂಲ ಮನೆಯನ್ನು ಹೊಂದಿದವು. ಮೂಲ ಮನೆಯನ್ನು ಐನುಮನೆ ಎಂದು 'ಬಲ್ಯ ಮನೆ' ಎಂದೂ ಕರೆಯುತ್ತಾರೆ. ಬಳಿ ಅಥವಾ ಗೋತ್ರಗಳು ಸುಳ್ಯ ಪ್ರದೇಶದ ಒಕ್ಕಲಿಗರಲ್ಲಿ ರೂಢಿಯಲ್ಲಿತ್ತು. ಅದನ್ನೇ ಮುಂದುವರಿಸಿದ ಇಲ್ಲಿನ ಒಕ್ಕಲಿಗರಲ್ಲಿ 18 ಬಳಿಗಳಿವೆ. "ಹತ್ತು ಕುಟುಂಬ ಹದಿನೆಂಟು ಗೋತ್ರ" ಎಂಬ ನುಡಿಗಟ್ಟು ಇಂದಿಗೂ ಹಿರಿಯರಲ್ಲಿ ಚಾಲ್ತಿಯಲ್ಲಿದೆ. ಕೊಡಗಿನಲ್ಲಿ ನೆಲೆಸಿರುವ ಕೊಡವರು ತಮಿಳು, ಮಲೆಯಾಳಂ, ಕನ್ನಡ ಭಾಷೆಗಳ ಸಮಿಶ್ರಣಗೊಂಡ ಭಾಷೆ, ಕೊಡವ ಭಾಷೆಯನ್ನು ಮಾತನಾಡುತ್ತಾರೆ. ಕೊಡಗು ಗೌಡರು 'ಅರೆಭಾಷೆ' ಅಥವಾ 'ಗೌಡ ಕನ್ನಡ'ವೆಂಬ ಕನ್ನಡ ಉಪಭಾಷೆಯನ್ನು ಮಾತನಾಡುತ್ತಾರೆ. ಇದರಿಂದಾಗಿ ಕ್ರಮೇಣ ಇವರು ಅರೆಭಾಷಿಕರು ಇಲ್ಲವೆ ಅರೆಭಾಷೆ ಗೌಡರೆಂದು ಗುರ್ತಿಸಲ್ಪಡುತ್ತಾರೆ.

ಹೀಗೆ ಬಂದು ನೆಲೆಸಿದ ಗೌಡರು ಯಾನೆ ಅರೆಭಾಷೆ ಗೌಡರು ಕೊಡಗಿನ ರಾಜರಿಗೆ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಪ್ರಾಣವನ್ನೇ ಕೊಟ್ಟರು ಎಂಬುದಕ್ಕೆ ಇಲ್ಲೊಂದು ಮನ ಮಿಡಿಯುವ ದೃಷ್ಟಾಂತವನ್ನು ನೋಡುವುದಾದರೆ- ಕೊಡಗಿನ ರಾಜ ದೊಡ್ಡವೀರರಾಜೇಂದ್ರನು ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಉಪಟಳದಿಂದ ಬೇಸತ್ತು ಬ್ರಿಟಿಷರ ಸಹಾಯವನ್ನು ಪಡೆದನು. ಬೆಂಕಿಯಿಂದ ತೆಗೆದು ಬಾಣಲೆಗೆ ಹಾಕಿದರು ಎನ್ನುವಂತೆ ಬ್ರಿಟಿಷರು ಟಿಪ್ಪುವನ್ನು 1799ರಲ್ಲಿ ಸದೆಬಡಿದ ನಂತರ ಮೈಸೂರು ಸಂಸ್ಥಾನವನ್ನು ನಾಲ್ಕು ಭಾಗವಾಗಿ ವಿಂಗಡಿಸಿದ್ದರು.

ಸ್ವತಂತ್ರವಾಗಿದ್ದ ಕೊಡಗನ್ನು ವಶಪಡಿಸಿಕೊಳ್ಳಲು ಹಾತೊರೆಯುತ್ತಿದ್ದರು. ಚಿಕ್ಕವೀರರಾಜೇಂದ್ರನನ್ನು ತೀರ್ಥ ಯಾತ್ರೆಯ ನೆಪದಲ್ಲಿ ಕಾಶಿಯಾತ್ರೆಗೆ ಕಳುಹಿಸಿದರು. ಕೊಡಗು ನಾಯಕನಿಲ್ಲದ ರಾಜ್ಯವಾಯಿತು. ಚಿಕ್ಕವೀರರಾಜೇಂದ್ರನ ಅನುಪಸ್ಥಿತಿಯಲ್ಲಿ ಕೆಲವು ಚೇಲಗಳು ಬ್ರಿಟಿಷರ ಬಾಲಬಡುಕರಾದರು.

ಇತ್ತ ಸ್ವಾಮಿ ನಿಷ್ಠರಾದ ಕೆದಂಬಾಡಿ ರಾಮೇಗೌಡ, ಗುಡ್ಡೆಮನೆ ಅಪ್ಪಯ್ಯಗೌಡ, ಅಡಕ್ಕಾರು ಅಣ್ಣೇಗೌಡ, ಹುಲಿಕೊಂದ ನಂಜಯ್ಯ ಇವರೇ ಮುಂತಾದವರು ಪುಟ್ಟಬಸವರಾಜು ಬಿನ್ 'ಕಲ್ಯಾಣ ಸ್ವಾಮಿ.' ಎಂಬ ಚಿಕ್ಕವೀರ ರಾಜೇಂದ್ರನ ಮಂತ್ರಿಯನ್ನು ಕೊಡಗಿನ ಉಸ್ತುವಾರಿ ರಾಜನನ್ನಾಗಿ ಪಟ್ಟಾಭಿಷೇಕ ಮಾಡಿದರು. ಆತನ ನೇತೃತ್ವದಲ್ಲಿ ಎಲ್ಲರೂ ಒಂದಾದರು. ಕಲ್ಯಾಣ ಸ್ವಾಮಿಯು ಸುಳ್ಯ, ಪುತ್ತೂರು ಭಾಗಕ್ಕೆ ಕೆದಂಬಾಡಿ ರಾಮೇಗೌಡರನ್ನು ದಂಡ ನಾಯಕರನ್ನಾಗಿ ನೇಮಿಸಿದರೆ ಗುಡ್ಡೆ ಮನೆ ಅಪ್ಪಯ್ಯ ಗೌಡರನ್ನು ಕೊಡಗಿನ ದಂಡನಾಯಕನನ್ನಾಗಿ ನೇಮಿಸಿದರು.

ಸುಬೇದಾರ್ ಗುಡ್ಡೆ ಮನೆ ಅಪ್ಪಯ್ಯಗೌಡ (1792–1837)

ಕನ್ನಡ ನಾಡಿನ ಸ್ವಾತಂತ್ರಕ್ಕೆ ಧಕ್ಕೆಯಾದಾಗ ಕಿತ್ತೂರು ರಾಣಿಚೆನ್ನಮ್ಮ, ಒನಕೆ ಓಬವ್ವ, ಅಬ್ಬಕರಾಣಿ, ಸಂಗೊಳ್ಳಿ ರಾಯಣ್ಣ. ಸ್ವಾಮಿ ಅಪರಂಪ, ಕನ್ನೇಶ್ವರರಾಮ ಬ್ರಿಟಿಷ್ ಅಧಿಕಾರಿ ಆರ್ಥರ್ ವೆಲ್ಲೆಸ್ಲಿಯ ಜಂಘಬಲವನ್ನು ಹುದುಗಿಸಿದರು. ದೊಂಡಿಯವಾಘರ ಸಾಲಿಗೆ ಸೇರುವ ಹುತಾತ್ಮ ಸುಬೇದಾರ ಗುಡ್ಡೆಮನೆ ಅಪ್ಪಯ್ಯಗೌಡರ ಸಾಹಸದ ಯಶೋಗಾಥೆ ರೋಚಕವಾದದು. ಇವರು ಬದುಕಿದ್ದಾಗಲೇ ದಂತಕತೆಯಾಗಿದ್ದರು. ಕೊಡಗಿನ ಮೇಲೆ ಬ್ರಿಟಿಷರು ತಮ್ಮ ಹಿಡಿತ ಸಾಧಿಸುತ್ತಾ ನಡೆದಂತೆಲ್ಲ ಕೆದಂಬಾಡಿ ರಾಮೇಗೌಡರು, ಹುಲಿಕೊಂದ ನಂಜಯ್ಯ ಸುಬೇದಾರ್. ಗುಡ್ಡೆಮನೆ ಅಪ್ಪಯ್ಯ ಗೌಡರು, ಸಮಾನ ಮನಸ್ಕ ದೇಶ ಭಕ್ತ ಯುವಕರನ್ನು ಒಗ್ಗೂಡಿಸಿ ಒಂದು ಸುಸಜ್ಜಿತ ಸೈನ್ಯವನ್ನು ಕಟ್ಟಿದರು.

ಕೊಡಗಿನ ಬಲಮುರಿ ಗ್ರಾಮದ ಗುಡ್ಡೆಮನೆ ಸುಬ್ಬಪ್ಪನವರ ಹಿರಿಯ ಮಗನೆ ಕನ್ನಡನಾಡಿನ ಭಗತ್‌ಸಿಂಗ್ ಸುಬೇದಾರ್ ಗುಡ್ಡಮನೆಯ ಅಪ್ಪಯ್ಯ ಗೌಡ.

ಕೊಡಗಿನ ದೊರೆ ಲಿಂಗರಾಜರ ಅಚ್ಚುಮೆಚ್ಚಿನ ಅಧಿಕಾರಿಯಾಗಿದ್ದ ಅಪ್ಪಯ್ಯ ಗೌಡರನ್ನು ಜಮೇದಾರ್ ಹುದ್ದೆಯಿಂದ ಸುಬೇದಾರ ಹುದ್ದೆಗೆ ಬಡ್ತಿ ನೀಡಿದರು. ಈಗಾಗಲೇ ತಿಳಿಸಿರುವಂತೆ ಬ್ರಿಟಿಷರ ದಬ್ಬಾಳಿಕೆ ನಡೆಯುತ್ತಿತ್ತು. ಒಂದೆಡೆ ಕೆದಂಬಾಡಿ ರಾಮೇಗೌಡರು ಸೈನ್ಯ ಕಟ್ಟಿ ಬ್ರಿಟಿಷರಿಂದ ಒಂದೊಂದೆ ಪ್ರದೇಶವನ್ನು ವಶಪಡಿಸಿಕೊಳ್ಳತೊಡಗಿದರು. ಈ ಮೊದಲು ರೈತರು ಧಾನ್ಯದ ರೂಪದಲ್ಲಿ ತೆರಿಗೆ ನೀಡುತ್ತಿದ್ದರು. ಬ್ರಿಟಷ್ ಅಧಿಕಾರಿಗಳು ಧಾನ್ಯ ಬೇಡ ಹಣದ ರೂಪದಲ್ಲಿ ತೆರಿಗೆ

ಪಾವತಿಸಿರಿ ಎಂದು ಕಟ್ಟಪ್ಪಣೆ ಮಾಡಿದರು. ರೈತರು ದಿವಾಳಿಯಾದರು. ಇದರಿಂದ ಕೆರಳಿದ ಅಪ್ಪಯ್ಯಗೌಡರು ದುರಾಗ್ರಹಿಗಳಾದ ಬ್ರಿಟಿಷರ ವಿರುದ್ಧ ಸಮರ ಸಾರಿದರು. ಕೊಡಗಿನಲ್ಲಿದ್ದ ಬ್ರಿಟಿಷರ ಕೋಟೆಯನ್ನು ಮುತ್ತಲು ಸಜ್ಜಾಗುತ್ತಾರೆ. ಇದನ್ನರಿತ ಬ್ರಿಟಿಷ್ ಕ್ಯಾಪ್ಟನ್ ಲೀಹಾರ್ಡಿ ಆಧುನಿಕ ಬಂದೂಕಗಳ ಸಹಾಯದಿಂದ ಅಪ್ಪಯ್ಯಗೌಡರ ಸೈನ್ಯವನ್ನು ಎದುರಿಸುತ್ತಾರೆ. ಎಷ್ಟೇ ವೀರಾವೇಶ ದಿಂದ ಹೋರಾಡಿದರು. ಬ್ರಿಟಿಷರ ಆಧುನಿಕ ತಂತ್ರಜ್ಞಾನ ಹಾಗೂ ನಾಡಿನ ದೇಶದ್ರೋಹಿಗಳ ಎದುರು ನಿಲ್ಲಲಾಗಲಿಲ್ಲ. ಅಪ್ಪಯ್ಯ ಗೌಡರ ಸೈನ್ಯವನ್ನು ಸುತ್ತುವರಿದ ಬ್ರಿಟಿಷ್ ಸೈನ್ಯವು ಕೃಷ್ಣಯ್ಯ, ಶಾಂತಮಲ್ಲಯ್ಯ, ಚೆಟ್ಟಿಕುಡಿಯ ಮತ್ತು ಅಪ್ಪಯ್ಯಗೌಡರನ್ನು ಸೆರೆಹಿಡಿಯುತ್ತದೆ. ಪಿತೂರಿ, ದಂಗೆ ಲೂಟಿ ಇವೇ ಮುಂತಾದ ಸುಳ್ಳು ಅಪಾದನೆ ಹೊರಿಸುತ್ತದೆ. ಅಪ್ಪಯ್ಯ ಗೌಡನೇ ಈ ಎಲ್ಲ ಅವಘಡಗಳಿಗೆ ಕಾರಣ ಎಂದು ಆಪಾದನೆ ಹೊರಿಸಿ 1837 ಅಕ್ಟೋಬರ್ 31ರಂದು ಬೆಳಿಗ್ಗೆ 10 ಗಂಟೆಗೆ ಮಡಿಕೇರಿಯ ಕೋಟೆಯ ಮುಂಭಾಗ ಸಾರ್ವಜನಿಕರೆದುರು ಗಲ್ಲು ಗಂಬಕ್ಕೇರಿಸುತ್ತಾರೆ. ಕಾರಣವೇನೆಂದರೆ ಸ್ಥಳೀಯರು ಇನ್ನು ಮುಂದೆ ತಮ್ಮ ವಿರುದ್ಧ ಬಂಡೇಳದೆ ವಿಧೇಯರಾಗಿರಲೆಂದು.

ಹೀಗೆ ಒಕ್ಕಲಿಗ ಸಮುದಾಯಕ್ಕೆ ಸೇರಿದ ಸ್ವಾತಂತ್ರ್ಯ ಹೋರಾಟಗಾರ ವೀರ ಸುಬೇದಾರ್ ಅಪ್ಪಯ್ಯ ಗೌಡರು ಹುತಾತ್ಮರಾದರು. ಈ ನಾಡಿನ ದುರಂತವೆಂದರೆ ವೀರಸಾರ್ವಕರ್, ಸಂಗೊಳ್ಳಿರಾಯಣ್ಣ, ಕಿತ್ತೂರುರಾಣಿ ಚೆನ್ನಮ್ಮರಿಗೆ ಸಿಕ್ಕ ಸ್ಥಾನ ಗುಡ್ಡೆಮನೆ ಅಪ್ಪಯ್ಯ ಗೌಡರಿಗೆ ಸಿಗದಿರುವುದು. ಅಪ್ಪಯ್ಯ ಗೌಡರು ನಿಜವಾದ ಭಾರತದ ರತ್ನ.

ನಾಮಧಾರಿ ಗೌಡರು

ಈಗಾಗಲೇ ತಿಳಿಸಿರುವಂತೆ ಪ್ರಾದೇಶಿಕ ಭಿನ್ನತೆಯ ಕಾರಣದಿಂದ ಮಲೆನಾಡು ಪ್ರದೇಶದಲ್ಲಿ ನೆಲೆಸಿದ ನಾಮಧಾರಿಗೌಡರು ಸುಸಂಸ್ಕೃತರು, ಉತ್ತಮವಾದ ಮೈಕಟ್ಟಿನ ಸ್ಪುರದ್ರೂಪಿಗಳು. ಇವರ ಮೂಲ ವೃತ್ತಿ ವ್ಯವಸಾಯ ಮತ್ತು ಪಶುಸಂಗೋಪನೆ.

ಶಿವಮೊಗ್ಗ ಜಿಲ್ಲೆಯ ಮಲೆನಾಡು ಭಾಗವಾದ ತೀರ್ಥಹಳ್ಳಿ, ಹೊಸನಗರ, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ನರಸಿಂಹರಾಜಪುರ ಮತ್ತು ಶೃಂಗೇರಿ ಇವೇ ಮುಂತಾದ ಪ್ರದೇಶಗಳಿರುವ ಭಾಗವನ್ನು ಮಲೆನಾಡು ಪ್ರದೇಶವೆಂದು ಕರೆಯಲಾಗುತ್ತದೆ. ವರ್ಷದಲ್ಲಿ ಸರಿಸುಮಾರು ಇನ್ನೂರರಿಂದ ಮುನ್ನೂರು ಮಿ.ಮಿ. ಮಳೆ ಸುರಿಯುವ ಈ ಪ್ರದೇಶವು ದಟ್ಟಕಾಡಿನಿಂದ ಆವೃತವಾಗಿದೆ. ಒಮ್ಮೆ ಇಂಥ ಕಾಡುಪ್ರದೇಶದಲ್ಲಿ ವಾಸಮಾಡಲು ಬಯಸದೆ ಜನಸಂಖ್ಯೆ ಬಹಳಷ್ಟು ಕಡಿಮೆ ಇದ್ದಿತು. ಮಲೇರಿಯ ಇವೇ ಮುಂತಾದ ರೋಗರುಜಿನಗಳ ತಾಣವಾಗಿತ್ತು.

ವೈದ್ಯಕೀಯ ಸೌಲಭ್ಯ, ಶಾಲಾಕಾಲೇಜುಗಳಿಲ್ಲದೆ, ಉತ್ತಮ ರಸ್ತೆಗಳೂ ಇಲ್ಲದೆ ಇದ್ದಂತಹ ಕಾಲವೊಂದಿತ್ತು.

ಇವರ ಆಚಾರ ವಿಚಾರ, ಸಂಪ್ರದಾಯ ನಡವಳಿಕೆಗಳಲ್ಲಿ ಅತಿ ಹೆಚ್ಚಿನ ಭಿನ್ನತೆ-ಯನ್ನು ಕಾಣಲಾಗದು. ಬಹಳ ಹಿಂದಿನಿಂದಲೂ ನಮ್ಮ ರಾಜ್ಯದ ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ ಹಿರಿಯ ಚೇತನಗಳ ದೊಡ್ಡ ಪಟ್ಟಿಯೇ ಇದೆ. ಅಂತಹವರಲ್ಲಿ ದೇವಂಗಿರಾಮಣ್ಣ ಗೌಡರು (ಶ್ರೀ ಕುವೆಂಪುರವರ ಮಾವನವರು) ನಾಲೂರು ಗಿರಿಯಪ್ಪಗೌಡರು, ಕಣಿಗಲುಕೊಪ್ಪಾದ ಮಂಜಪ್ಪಗೌಡರು, ಕುಡುಮಲ್ಲಿಗೆ ದುಗ್ಗಪ್ಪಗೌಡರಿಂದ ಹಿಡಿದು ರಾಷ್ಟ್ರಕವಿ ಕುವೆಂಪು, ಕಡಿದಾಳ್ ಮಂಜಪ್ಪ, ಶಾಂತವೇರಿ ಗೋಪಾಲಗೌಡ, ಹಾ.ಮಾ. ನಾಯಕ, ಪೂರ್ಣಚಂದ್ರ ತೇಜಸ್ವಿಯವರು ಹೀಗೆ ಹೇಳುತ್ತಾ ಹೋದರೆ ದೊಡ್ಡಪಟ್ಟಿಯೇ ಬೆಳೆಯುತ್ತದೆ.ಈ ನಾಮಧಾರಿ ಗೌಡರ ಬಗ್ಗೆ ತಿಳಿದುಕೊಳ್ಳುವುದು ಅವಶ್ಯವಾಗಿದೆ.

ಕರ್ನಾಟಕ ರಾಜ್ಯದಲ್ಲಿ ಬಹುದೊಡ್ಡ ಜನಾಂಗವಾಗಿ ಕಂಡು ಬರುವ ಒಕ್ಕಲಿಗರಲ್ಲಿ ಪ್ರಾದೇಶಿಕ ಭಿನ್ನತೆಯ ಕಾರಣದಿಂದ ಅಲ್ಲಲ್ಲಿಯ ಆಚರಣೆಗಳು, ಸಂಪ್ರದಾಯಗಳು ಇತರರಿಗೆ ವಿಚಿತ್ರವಾಗಿ ಕಾಣುತ್ತದೆ. ಒಕ್ಕಲಿಗರಲ್ಲಿ ಅನೇಕ ಪಂಗಡಗಳಿರುವುದು ಕಾಣುತ್ತದೆ. ಗಂಗಡಿಕಾರ ಒಕ್ಕಲಿಗ, ಕುಂಚಿಟಿಗ ಒಕ್ಕಲಿಗ, ಮೊರಸು ಒಕ್ಕಲಿಗ, ರೆಡ್ಡಿ ಒಕ್ಕಲಿಗ, ಹಾಲಕ್ಕಿ ಒಕ್ಕಲಿಗ ಪಂಗಡಗಳು ಇವೆ. ಮಲೆನಾಡು ಪ್ರದೇಶದ ಒಕ್ಕಲಿಗರಲ್ಲಿ ಮುಖ್ಯವಾಗಿ ನಾಮಧಾರಿ ಒಕ್ಕಲಿಗ, ಶೈವ ಒಕ್ಕಲಿಗ ಎಂಬ ಎರಡು ಪಂಗಡಗಳಿವೆ. ಚಿಕ್ಕಮಗಳುರು ಜಿಲ್ಲೆಯ ಬಹುಭಾಗ, ಮೂಡಿಗೆರೆ ತಾಲ್ಲೂಕು, ಕೊಡಗು ಈ ಭಾಗದ ಒಕ್ಕಲಿಗರೆಲ್ಲಾ ಶೈವ ಒಕ್ಕಲಿಗರು. ಇವರು ಹಣೆ ಮೇಲೆ ವಿಭೂತಿ ಧರಿಸುತ್ತಾರೆ. ತಮ್ಮ ಶೈವ ಸಂಪ್ರದಾಯಗಳ ಬಗ್ಗೆ ಆಚಾರ ವಿಚಾರ, ವಿವಾಹ, ಹುಟ್ಟು ಸಾವು ಇತ್ಯಾದಿಗಳ ಬಗ್ಗೆ ಪುಸ್ತಕಗಳನ್ನು ಬರೆದಿರುತ್ತಾರೆ. ಮಲೆನಾಡಿನ ಕೆಲವು ಭಾಗಗಳಾದ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕು, ತೀರ್ಥಹಳ್ಳಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಭಾಗವಾದ ಕೊಪ್ಪ, ನರಸಿಂಹರಾಜಪುರ ಮತ್ತು ಶೃಂಗೇರಿ ತಾಲ್ಲೂಕಿನ ಬಹುಭಾಗದಲ್ಲಿ ವಾಸಿಸುವ ಈ ಒಕ್ಕಲಿಗರನ್ನು ನಾಮಧಾರಿ ಒಕ್ಕಲಿಗರು ಇಲ್ಲವೆ ಶ್ರೀ ವೈಷ್ಣವನಾಮಧಾರಿ ಗೌಡರು ಎಂದು ಕರೆಯುತ್ತಾರೆ. ಈ ಹಿನ್ನೆಲೆಯಲ್ಲಿ ಗೌಡ ಜನಾಂಗದ ಶ್ರೀ ವೈಷ್ಣವರು, ಇವರಿಗೆ ಹತ್ತು ಹಲವು ಸಂಪ್ರದಾಯಗಳು, ಸಮಾಜ, ಧಾರ್ಮಿಕ ನಂಬಿಕೆ, ದೇವತಾ ಕಾರ್ಯ, ಆಚಾರ-ವ್ಯವಹಾರ, ಮದುವೆ, ಹುಟ್ಟು ಮರಣ ಹೀಗೆ ಎಲ್ಲಾ ವಿಚಾರಗಳನ್ನೂ ತಮ್ಮ ವೃತ್ತಿಧರ್ಮ ಮತ್ತು ಜೀವನಕ್ಕೆ ಸಂಬಂಧಿಸಿ -ದಂತೆ ನಾನಾ ಬಗೆಯ ಆಚಾರಗಳನ್ನೂ ಅತ್ಯಂತ ವಿಶಿಷ್ಟವಾದ ರೀತಿಯಲ್ಲಿ ಅಂದಿನ ರೀತಿ ನೀತಿಗಳಿಗೆ ಅನುಗುಣವಾಗಿ ಆಚರಿಸಿ ಕೊಂಡು ಬರುತ್ತಿರುವುದು ಸ್ಪಷ್ಟವಾಗಿ

ಗೊತ್ತಾಗುತ್ತದೆ. ದೇವತಾ ಕಾರ್ಯದಲ್ಲಿ ತನಗೆ ಕಷ್ಟ ಬಂದಾಗ ಪರಿಹರಿಸಿಕೊಳ್ಳಲು ತಮ್ಮ ಇಷ್ಟದೇವತೆಗಳನ್ನು ಇಲ್ಲವೇ ಮನೆದೇವರನ್ನು ಪ್ರಾರ್ಥಿಸಿಕೊಳ್ಳುವುದು, ಅವುಗಳ ಪರಿಹಾರಾರ್ಥವಾಗಿ ವಿವಿಧ ರೀತಿಯ ಪೂಜೆ ಪುನಸ್ಕಾರಗಳನ್ನು ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ತಮ್ಮ ಕಷ್ಟ ಪರಿಹಾರಾರ್ಥವಾಗಿ ಮೂಢನಂಬಿಕೆ-ಗಳಿಗೊಳಗಾಗುತ್ತಾರೆ. ಜಾನಪದ ರೀತಿಯಲ್ಲಿ ಮದುವೆ ಮುಂತಾದ ಶುಭಕಾರ್ಯ-ಗಳನ್ನು ಹಿರಿಯರು ಅನುಸರಿಸಿದಂತೆ ಸಂಪ್ರದಾಯಬದ್ಧವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಈ ಗೌಡ ಶಬ್ದ ಗ್ರಾಮ ಮುಖಂಡ ಎಂಬ ಅರ್ಥ ಕೊಡುತ್ತದೆ. ಒಕ್ಕಲಿಗ ಅಂದರೆ ಕೃಷಿಕ, 'ಗೌಡ' ಜಾತಿಯ ಸೂಚಕವಾಗಿದೆ.

ನಾಮಧಾರಿ ಗೌಡರು ಮೊದಲು ಜೈನಧರ್ಮೀಯರಾಗಿದ್ದರು. ಒಂದು ದಾಖಲೆಯ ಪ್ರಕಾರ ಶ್ರೀ ವೈಷ್ಣವ ಮತ ಸ್ಥಾಪಕರಾದ ಶ್ರೀ ರಾಮಾನುಜಾಚಾರ್ಯರು (12ನೇ ಶತಮಾನ) ತಮಿಳುನಾಡಿನ ಶ್ರೀರಂಗವನ್ನು ತ್ಯಜಿಸಿ ಮೈಸೂರಿಗೆ ಬಂದು, ಶೈವಧರ್ಮಕ್ಕೆ ಆಶ್ರಯದಾತರಾದ ಚೋಳರಾಜನ ಕಿರುಕುಳ ಸಹಿಸಲಾರದೆ ಹೊಯ್ಸಳರ ಆಶ್ರಯದಲ್ಲಿ ಮೇಲುಕೋಟೆಯಲ್ಲಿ ತಮ್ಮ ಮಠವನ್ನು ಸ್ಥಾಪಿಸಿ ಶ್ರೀವೈಷ್ಣವ ಪಂಥವನ್ನು ಸ್ಥಾಪಿಸಿದರು. ಇವರ ಪ್ರಭಾವಕ್ಕೆ ಒಳಗಾಗಿ ಶ್ರೀ ವೈಷ್ಣವ ನಾಮಧಾರಿ ಗೌಡರಾದರೆಂದು ಹೇಳುತ್ತಾರೆ. ಇದಕ್ಕೆ ಆಧಾರ ನಾಮಧಾರಿ ಗೌಡರ ಮನೆಗಳಲ್ಲಿ ಪಿತೃಗಳಿಗೆ ಎಡೆ ಹಾಕುವಾಗ 'ಜೈನ ಎಡೆ' ಎಂದು ಪ್ರತ್ಯೇಕವಾಗಿ ಎರಡು ಎಡೆಗಳನ್ನು ಇಂದಿಗೂ ಇಡುವ ಪದ್ಧತಿ ಇದೆ. ಈ ಎಡೆಗಳಿಗೆ ಮಾಂಸದ ಆಹಾರವನ್ನು ಬಡಿಸುವುದಿಲ್ಲ. ಇನ್ನು ಈ ತಾಲ್ಲೂಕುಗಳಲ್ಲಿ ಅನೇಕ ಕಡೆ ಪಾಳುಬಿದ್ದ ಜೈನ ಬಸದಿಗಳು ಇಂದೂ ನೋಡಸಿಗುತ್ತವೆ. ಅದೇ ರೀತಿ ಕೆಲವು ಶೈವ ಸಂಪ್ರದಾಯದ ಒಕ್ಕಲಿಗರು ಶ್ರೀರಾಮಾನುಜಾಚಾರ್ಯರ ಪ್ರಭಾವಕ್ಕೆ ಒಳಗಾಗಿ ಶೈವ ಸಂಪ್ರದಾಯವನ್ನು ಬಿಟ್ಟು ಶ್ರೀ ವೈಷ್ಣವ ನಾಮಧಾರಿಗಳಾದರೆಂದು ಹೇಳುತ್ತಾರೆ.

ಶ್ರೀ ರಾಮಾನುಜಾಚಾರ್ಯರು ಮೂರು ನಾಮ ಹಣೆಯ ಮೇಲೆ ಧರಿಸುವ ಸಂಪ್ರದಾಯಸ್ಥರು, ಹಣೆಯ ಮೇಲೆ ಆಚೀಚೆಗೆ ನೆಟ್ಟಗೆ ಬಿಳಿ ನಾಮದ ಪಟ್ಟಿ ಎಳೆದು ಮಧ್ಯೆ ಒಂದು ಕೆಂಪು ನಾಮದ ಪಟ್ಟಿ ಎಳೆದುಕೊಳ್ಳುತ್ತಿದ್ದರು. ಗೌಡರಿಗೆ ಅವರು ಗುರುಗಳಾಗಿದ್ದರಿಂದ ಈ ಶಿಷ್ಯರೂ ಸಹ ಹಣೆಯ ಮೇಲೆ ನೆಟ್ಟಗೆ ಒಂದು ಕೆಂಪು ನಾಮ ಧರಿಸಲು ಶುರು ಮಾಡಿದರು. ಆದ್ದರಿಂದ ಇವರಿಗೆ ನಾಮಧಾರಿ ಗೌಡರೆಂಬ ಹೆಸರು ಬಂತು. ಇವರು ಶ್ರೀ ವಿಷ್ಣುಭಕ್ತರಾದ ಕಾರಣ ತಿರುಪತಿ ವೆಂಕಟರಮಣ ದೇವರನ್ನು ತಮ್ಮ ಕುಲದೇವರನ್ನಾಗಿ ಮಾಡಿಕೊಂಡರು. ತಿರುಪತಿಗೆ ಹೋಗಿ ಬಂದ ಗೌಡರು ಗುರುಗಳಂತೆ ಹಣೆಯ ಮೇಲೆ ಮೂರು ನಾಮ ಧರಿಸಲು ಪ್ರಾರಂಭಿಸಿದರು; ನಾಮಧಾರಿ ಶ್ರೀ ವಿಷ್ಣುಭಕ್ತರೆಂದು ಹೇಳಿಕೊಳ್ಳಲು ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು.

ನಾಮಧಾರಿಗೌಡರಲ್ಲಿ ಉಪನಾಮಗಳನ್ನು ಧರಿಸುವುದು ವಾಡಿಕೆಯಾಯಿತು. ಗೌಡ, ನಾಯ್ಕ, ಹೆಗ್ಗಡೆ ಎಂಬ ಹೆಸರು ಬರಲು ಕಾರಣ ವಿಜಯನಗರದ ಅರಸರ ಕಾಲದಲ್ಲಿ ಅವರ ಆಸ್ಥಾನದಲ್ಲಿ ಆಡಳಿತವನ್ನು ನೋಡಿಕೊಳ್ಳುತ್ತಿದ್ದವನಿಗೆ ಗೌಡ ಎಂತಲೂ, ಸೈನ್ಯಾಧಿಕಾರಿ ಆಗಿದ್ದವರಿಗೆ ನಾಯ್ಕ ಎಂತಲೂ (ಉದಾಹರಣೆಗೆ ಹಾ.ಮಾ. ನಾಯಕ ನ್ಯಾಯಾಂಗವನ್ನು ನೋಡಿಕೊಳ್ಳುತ್ತಿದ್ದವರಿಗೆ ಹೆಗ್ಗಡೆ ಎಂತಲೂ ಆಯಾಯ ಸ್ಥಾನಗಳಿಗೆ ಕೊಟ್ಟ ಹೆಸರುಗಳೆಂದು ತಿಳಿಯುತ್ತದೆ. ಯುದ್ಧಕಾಲದಲ್ಲಿ ಇವರುಗಳು ಈ ಭಾಗಕ್ಕೆ ಬಂದವರು. ಕೆಲವರು ಇಲ್ಲಿ ಉಳಿದರು. ಇವರು ಬೇರೆ ಬೇರೆ ಜನಾಂಗದವರಿರಬಹುದು. ಲಿಂಗಾಯಿತರಿರ ಬಹುದು, ಕ್ಷತ್ರಿಯರಿರಬಹುದು, ಆದರೆ ಅವರು ವಾಪಸ್ಸು ಹೋಗಲಿಲ್ಲ. ಅವರ ಜನಾಂಗದವರು ಇಲ್ಲಿ ಇಲ್ಲದ ಕಾರಣ ಅಲ್ಪ ಸಂಖ್ಯಾತರಾದರು. ಆದ್ದರಿಂದ ಇಲ್ಲಿಯ ಶ್ರೀ ವೈಷ್ಣವ ಸಂಪ್ರದಾಯದ ನಾಮಧಾರಿ ಗೌಡರೊಂದಿಗೆ ಸಂಬಂಧ ಬೆಳೆಸಿ ಶ್ರೀ ವೈಷ್ಣವ ಸಂಪ್ರದಾಯಕ್ಕೆ ಒಳಗಾದರೆಂದು ಐತಿಹ್ಯವಿದೆ. ಆದರೂ ಹೆಗ್ಗಡೆ, ನಾಯ್ಕ ಎಂಬ ಹೆಸರನ್ನು ಹಾಗೇ ಉಳಿಸಿಕೊಂಡರು. ಇವರ ಆಚಾರ ವಿಚಾರ ಸಂಪ್ರದಾಯಗಳು ಎಲ್ಲವು ಒಂದೇ ಆಗಿವೆ. ಎಲ್ಲರೂ ತಮ್ಮ ತಮ್ಮ ಮನೆಗಳ ಮುಂದೆ ಬೃಂದಾವನ ಕಟ್ಟೆ ಮಾಡಿಸಿರುತ್ತಾರೆ. ಇವರಿಗೆ ದೇವರು ದಿಂಡರುಗಳಲ್ಲಿ ನಂಬಿಕೆ ಇದೆ. ದೇವಾಲಯಗಳಿಗೆ ಜಮೀನನ್ನು ದಾನ ದತ್ತಿಯಾಗಿ ಕೊಡುತ್ತಿದ್ದರು. ಬ್ರಾಹ್ಮಣರಿಗೆ, ಗುರುಗಳಿಗೆ ನಿಷ್ಠೆಯನ್ನು ತೋರಿಸುತ್ತಿದ್ದರು. ಇವರಿಗೂ ಗುರುಮಠ ಇದ್ದುದರಿಂದ ಜಾತಿಯ ಕಟ್ಟುಪಾಡುಗಳು, ಕುಲಗೋತ್ರ ತುಂಬಾ ಹೆಚ್ಚು. ದೈವ, ಭೂತ, ಚೌಡಿ, ರಣ ಮುಂತಾದವುಗಳಲ್ಲಿ ನಂಬಿಕೆ ಹೆಚ್ಚು. ಇವುಗಳಿಗೆ ಪ್ರಾಣಿ ಬಲಿಕೊಟ್ಟು ಪೂಜಿಸುತ್ತಿದ್ದರು. ಗ್ರಾಮದೇವತೆಯನ್ನು ಪೂಜಿಸುತ್ತಿದ್ದರು. ಅಮ್ಮನವರ ದೇವಾಲಯಗಳೆಲ್ಲಾ ಗೌಡರ ಆಡಳಿತದಲ್ಲಿ ಇದ್ದವು. ಇವರು ಅನ್ನದಾನಕ್ಕೆ ಎತ್ತಿದ ಕೈ, ದುಂದುಗಾರಿಕೆಗೆ ಇತಿಮಿತಿ ಇಲ್ಲ. ಭೂಮಿ ವಿಸ್ತರಿಸುವುದು ಇವರ ಪ್ರಬಲವಾದ ಹವ್ಯಾಸ. ಇವರಿಗೆ ವ್ಯವಸಾಯ, ಪಶುಪಾಲನೆ ಮುಖ್ಯ ವೃತ್ತಿ. ಆದ್ದರಿಂದಲೇ ಇವರಿಗೆ ಒಕ್ಕಲಿಗ / ಗೌಡ ಎಂಬ ಹೆಸರು ಬಂತು.

ಇಂತಹ ಮಲೆನಾಡು ಪ್ರದೇಶದಲ್ಲಿ ಈ ಜನಾಂಗ ಹೇಗೆ ಅಭಿವೃದ್ಧಿ ಹೊಂದಿದರು, ಭೂಮಾಲೀಕರಾದರು, ತಮ್ಮ ಜನಾಂಗ ವ್ಯಾಪ್ತಿಯಲ್ಲಿ ತಮ್ಮ ಅಧಿಕಾರವನ್ನು ಹೇಗೆ ನಿರ್ವಹಿಸುತ್ತಿದ್ದರು? ಊರಿಗೆ ಒಬ್ಬ ಗೌಡ, ದೇಶಕ್ಕೆ ಒಬ್ಬ ದೊರೆ ಎಂಬುದು ನಾಣ್ಣುಡಿ. ಇದು ಗ್ರಾಮಾಡಳಿತದ ಅಧಿಕೃತ ಹೆಸರಿಗಾಗಿ ಬಳಕೆಯಲ್ಲಿತ್ತು. ಇವರು ಗೇಣು ಭೂಮಿಗಾಗಿ ಸರ್ವಸ್ವವನ್ನೂ ಬಲಿಕೊಡುವ ಹಠಮಾತಿಗಳು. ಹಾಗೆಯೇ ಸಾಹಸಿಗಳೂ ಹೌದು, ಮುಂದುವರಿದ ಜನಾಂಗದವರ ಶೋಷಣೆಗೆ ಹೆಚ್ಚಾಗಿ ಗುರಿಯಾದವರು. ಇವರು ಎಲ್ಲಾ ಶಾಸ್ತ್ರಗಳಿಗೂ ಓಗೊಟ್ಟು, ಎಲ್ಲ ದೇವತೆಗಳಿಗೂ ಕೈಮುಗಿಯುತ್ತಾರೆ. ಇವರಲ್ಲಿ ಮೂಢನಂಬಿಕೆಗಳು ಗಣನೀಯವಾಗಿ

ಮನೆ ಮಾಡಿವೆ. ಈ ಜನಾಂಗದ ಮದುವೆ ಶುಭಕಾರ್ಯಕ್ಕೆ ಬಿರುದಾವಳಿಗಳಾಗಿ ಛತ್ರಿ, ಪಲ್ಲಕ್ಕಿ, ಮುಖತೋರಣ, ದೀವಟಿಗೆ ಇವೇ ಮುಂತಾದವುಗಳನ್ನು ಕೆಳದಿಯ ಇಕ್ಕೇರಿ ಅರಸು ಬಸಪ್ಪ ನಾಯ್ಕನ ಸಂಸ್ಥಾನದಿಂದ ದಯಪಾಲಿಸಲಾಗಿದ್ದಾಗಿ ತಿಳಿದು ಬರುತ್ತದೆ. ಅಂದು ತಮ್ಮ ಹೆಸರುಗಳ ಮುಂದೆ ಗೌಡ, ನಾಯ್ಕ, ಹೆಗ್ಗಡೆ ಎಂದು ಹಾಕಿಕೊಳ್ಳುತ್ತಿದ್ದರು. ಇಂದಿಗೂ ಕೂಡ ಇದು ತಮ್ಮ ಜನಾಂಗದ ಹೆಮ್ಮೆಯ ಸಂಕೇತವಾಗಿತ್ತು. ಈ ಶ್ರೀ ವೈಷ್ಣವ ಸಂಪ್ರದಾಯಕ್ಕೆ ಒಳಪಟ್ಟ ಮಲೆನಾಡು ಪ್ರಾಂತ್ಯದ ತಾಲ್ಲೂಕು ಗಳಿಗೆ ಅನುಕೂಲವಾಗುವಂತೆ ಮಠಗಳನ್ನು ಸ್ಥಪಿಸಿದರು. ಉದಾಹರಣೆಗೆ ಚಿಕ್ಕಮಗಳೂರು ಜಿಲ್ಲೆ ಕೊಪ್ಪದಲ್ಲಿ ಶ್ರೀ ವೈಷ್ಣವ ಮಠವನ್ನು ಮೇಲುಕೋಟೆಯವರು ಸ್ಥಾಪನೆ ಮಾಡಿದರು. ಈ ಮಠದ ಹೆಸರು ಶ್ರೀ ಅನ್ನರಾಯ ಒಡೆಯರ ಶ್ರೀಮಠ. ಇಲ್ಲಿಬ್ಬರು ಗುರುಗಳನ್ನು ಸಹ ನೇಮಿಸಿದರು. ಈ ಭಾಗದ ಐದು ತಾಲ್ಲೂಕುಗಳ ಗೌಡರೆಲ್ಲರೂ ಈ ಮಠಕ್ಕೆ ಶಿಷ್ಯರಾಗಿ ನಡೆದುಕೊಳ್ಳುತ್ತಿದ್ದರು.

ಸ್ಥಳೀಯ ಆಡಳಿತ ಇಲ್ಲವೆ ಸೀಮೆಯ ಮುಖಂಡತ್ವ

ಈ ನಾಮಧಾರಿ ಗೌಡರು ಹಿಂದೆ ಒಂದು ತಾಲ್ಲೂಕಿನ, ಜನಾಂಗದ ತಮ್ಮ ಆಡಳಿತಕ್ಕೆ ಅನುಕೂಲವಾಗುವಂತೆ ಹೋಬಳಿವಾರವಾಗಿ ವಿಂಗಡಿಸಿಕೊಂಡು ಆ ಭಾಗಗಳಿಗೆ ಸೀಮೆಗಳೆಂದು ಹೆಸರನ್ನು ಇಟ್ಟುಕೊಂಡಿದ್ದರು. ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಸೀಮೆಗಳ ಹೆಸರುಗಳು ಈ ರೀತಿ ಇವೆ. ಮುತ್ತೂರು ಹೋಬಳಿ ಇದನ್ನು ಮುತ್ತೂರು ಸೀಮೆ, ಮುಂಡಕಾರುಸೀಮ, ಮಂಡಗದ್ದೆ ಹೋಬಳಿಯನ್ನು ಮಂಡಗದ್ದೆ ಸೀಮೆ, ವಾಳೂರು ಸೀಮೆ, ಅಗ್ರಹಾರದ ಹೋಬಳಿಯನ್ನು ಅರಗದ ಸೀಮೆ, ಸಾಲೂರು ಸೀಮೆ, ಕಸಬಾ ಹೋಬಳಿಯನ್ನು ಶೀತೂರು ಸೀಮೆ, ಅಲ್ಮನೆ ಸೀಮೆ, ಆಗುಂಬೆ ಹೋಬಳಿಯನ್ನು ಆಗುಂಬೆ ಸೀಮೆ, ಹೀಗೆ ಸೀಮೆಗಳನ್ನಾಗಿ ಮಾಡಿಕೊಂಡಿದ್ದರು. ಈ ಸೀಮೆಗೆ ಒಬ್ಬೊಬ್ಬರು ಮುಖಂಡರುಗಳಿದ್ದರು.

ಪಾಲು ಮುಖಂಡರು ಮಾಡಿದ ತೀರ್ಮಾನಗಳು ತಪ್ಪಿದ್ದಲ್ಲಿ ಅಥವಾ ಕಕ್ಷಿದಾರರು ತಿರಸ್ಕರಿಸಿದಾಗ ಅಂತಹ ಸಮಸ್ಯೆಯನ್ನು ಸೀಮೆ ಮುಖಂಡರ ಗಮನಕ್ಕೆ ತರಲಾಗುತ್ತಿತ್ತು. ಆಗ ಸೀಮೆ ಮುಖಂಡರು ಮತ್ತು ಪಾಲು ಮುಖಂಡರು ಸೇರಿ ತೀರ್ಮಾನ ಮಾಡುತ್ತಿದ್ದರು. ಸೀಮೆಯ ಆಳತೆಯಲ್ಲಿ ಸೀಮೆಯ ಮುಖಂಡರು ಜನಾಂಗದ ಆಡಳಿತ ವ್ಯವಹಾರವನ್ನು ನಿರ್ವಹಿಸುತ್ತಿದ್ದರು. ಸೀಮೆಯ ಮುಖ್ಯಸ್ಥನ ತೀರ್ಮಾನವನ್ನು ಮಾನ್ಯ ಮಾಡುವ ಪದ್ಧತಿ ಆಗ ಚಾಲ್ತಿಯಲ್ಲಿ ಇತ್ತು. ಇದರಲ್ಲಿ ಪ್ರಮುಖವಾದ ತೀರ್ಮಾನವನ್ನು ಎಲ್ಲಾ ಸೀಮೆಯ ಮತ್ತು ಪಾಲಿನ ಮುಖಂಡರುಗಳಿಗೆ ಪತ್ರ ಮುಖೇನ ತಿಳಿಸುತ್ತಿದ್ದರು.

ಪಾಲು ಮುಖಂಡತ್ವ

ನಾಲ್ಕಾರು ಗ್ರಾಮಗಳನ್ನೊಳಗೊಂಡ ಪ್ರದೇಶಕ್ಕೆ ಒಂದು ಪಾಲೆಂದು ಹೆಸರು. ಈ ಪಾಲಿಗೆ ಒಬ್ಬ ಮುಖಂಡ. ಒಂದೊಂದು ಪಾಲಿಗೂ ಒಂದೊಂದು ಹೆಸರನ್ನು ಇಟ್ಟುಕೊಂಡಿದ್ದರು. ಹಳವಾನಿ ಪಾಲು, ಹರಳಿಪಾಲು, ಮೇಲು ಪಾಲು, ಕೆಳಪಾಲು, ಹೀಗೆ ಈ ಒಂದು ಪಾಲಿಗೆ ಒಬ್ಬ ಮುಖಂಡನಿರುತ್ತಿದ್ದನು. ಈ ಮುಖಂಡ ತನ್ನ ಪಾಲಿಗೆ ಸೇರಿದ ಗ್ರಾಮಗಳಿಗೆ ಒಬ್ಬರು ಇಲ್ಲವೆ ಇಬ್ಬರು ಸದಸ್ಯರನ್ನು ನೇಮಕ ಮಾಡಿಕೊಳ್ಳುತ್ತಿದ್ದನು. ಪಾಲು ಮುಖಂಡರು ತಮ್ಮ ಪಾಲಿನ ಮತ ಸಂಬಂಧವಾದ ವಿಚಾರವೇ ಆಗಲಿ, ಇತರೆ ಸಮಸ್ಯೆಗಳ ವಿಚಾರವೇ ಆಗಲಿ ಎಲ್ಲಾ ವ್ಯವಹಾರವನ್ನು ತಮ್ಮ ಪಾಲಿನ ಸದಸ್ಯರನ್ನು ಇಟ್ಟುಕೊಂಡು ತೀರ್ಮಾನಿಸುತ್ತಿದ್ದರು. ತಪ್ಪಿತಸ್ಥರಿಗೆ ದಂಡ ವಿಧಿಸುವುದು ಬಹಿಷ್ಕಾರ ಹಾಕಿ ಜಾತಿಯಿಂದ ಹೊರ ಹಾಕುವುದು ಇದನ್ನೆಲ್ಲಾ ಪಾಲು ಮುಖಂಡರ ಮುಂದಾಳತ್ವದಲ್ಲಿ ನಡೆಸುತ್ತಿದ್ದರು. ಈ ಪಾಲು ಮುಖಂಡರ ತೀರ್ಮಾನ ತಪ್ಪಿದ್ದಲ್ಲಿ, ಸೀಮೆ ಮುಖಂಡರಿಗೆ ಅಪೀಲು ಮಾಡಿ ಇತ್ಯರ್ಥ ಪಡಿಸುತ್ತಿದ್ದರು. ಇನ್ನು ಗುರುಮಠಕ್ಕೆ ಸಂಬಂಧಪಟ್ಟ ತಮ್ಮ ಪಾಲಿನ ಕಾಣಿಕೆ ವಸೂಲು ಮಾಡಿಸಿ ಕಳಿಸುವುದು, ಕೆಲವು ಪಂಚಾಯ್ತಿ ತೀರ್ಮಾನಗಳನ್ನು ಗುರುಗಳ ಮುಖಾಂತರ ತೀರ್ಮಾನಿಸುತ್ತಿದ್ದರು.

ಪಾಲು ಮುಖಂಡರು ಅವರವರ ಪಾಲಿನಲ್ಲಿ ಎಲ್ಲಿ ಮದುವೆ ನಡೆದರೂ ಅವರಾಗಲೀ, ಅವರ ಪ್ರತಿನಿಧಿಗಳಾಗಲೀ ಹಾಜರಿದ್ದು ಹೆಣ್ಣಿನ ಮನೆಯಲ್ಲಿ ಚಪ್ಪರದ ಹಣ ನಾಲ್ಕು ರೂಪಾಯಿಗಳನ್ನು ವಸೂಲು ಮಾಡಿಕೊಂಡು ಮುಖಂಡರ ಅಪ್ಪಣೆ ಪಡೆದು ವೀಳ್ಯಾ ತಿದ್ದುವ ಶಾಸ್ತ್ರ ಪ್ರಾರಂಭಿಸುತ್ತಿದ್ದರು. ಬಂದಂತಹ ನೆಂಟರಿಷ್ಟರಿಗೆ ತೆಂಗಿನಕಾಯಿ, ವೀಳ್ಯೆದೆಲೆ, ಅಡಿಕೆಯನ್ನು ಕೊಡುವುದು ಆಗಿನ ಪದ್ದತಿ. ಆಗ ಮದುವೆಗಳಲ್ಲಿ ವೀಳ್ಯೆ ತಿದ್ದುವ ಒಂದು ವಿಶಿಷ್ಟ ಪದ್ಧತಿ ಇತ್ತು. ಇದು ಹೆಣ್ಣಿನ ಮನೆಯಲ್ಲಿ ನಡೆಯುವ ಕಾರ್ಯಕ್ರಮ. ಎರಡೂ ಕಡೆಯವರು ವೀಳ್ಯೆದೆಲೆ ಅಷ್ಟು, ಅಡಿಕೆ ಸೇರಿಸಿಕೊಂಡು ವೀಳೆಯ ತಿದ್ದುವುದು (ಹಂಚುವುದು). ಹಂಚುವವರು ತಲೆಗೆ ಮುಂಡಾಸು ಸುತ್ತಿಕೊಂಡು ಸೊಂಟಕ್ಕೆ ಬಟ್ಟೆಯ ದಟ್ಟಿಕಟ್ಟಿಕೊಂಡು ಪಾಲು ಮುಖಂಡರಿಗೆ ಕೈ ಮುಗಿದು ವೀಳ್ಯೆ ತಿದ್ದುವುದಕ್ಕೆ ಅಪ್ಪಣೆ ಪಡೆದುಕೊಂಡು ಮದುವೆಯಲ್ಲಿ ಭಾಗವಹಿಸಿದ ಎಲ್ಲಾ ಗಂಡಸರು, ಹೆಂಗಸರು, ಮಕ್ಕಳಿಗೂ ಹರಿವಾಣದಲ್ಲಿ (ತಟ್ಟೆ) ಎರಡು ವೀಳ್ಯೆದೆಲೆ, ಎರಡು ಅಡಿಕೆ ಇಟ್ಟು ಕೊಡುತ್ತಿದ್ದರು. ಕೆಲವರು ಇದರೊಂದಿಗೆ ತೆಂಗಿನಕಾಯಿಯನ್ನು ಇಟ್ಟು ಕೊಡುತ್ತಿದ್ದರು. ಇದಕ್ಕೆ ವೀಳ್ಯೆ ತಿದ್ದುವ ಶಾಸ್ತ್ರವೆಂದು ಹೆಸರು. ಈ ರೀತಿ ಬಂದಂತಹ ಅತಿಥಿಗಳಿಗೆ ಗೌರವಿಸುವುದು ರೂಢಿಯಲ್ಲಿತ್ತು. ಇವೇ ಮುಂತಾದ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದರು.

ಸಮಾಜ ಸುಧಾರಣೆಯ ನಿಟ್ಟಿನಲ್ಲಿ

ಈಗಾಗಲೇ ತಿಳಿಸಿರುವಂತೆ ಮಲೆನಾಡು ಪ್ರದೇಶವು ಹಳೇ ಮೈಸೂರು ಪ್ರಾಂತ್ಯಕ್ಕೆ ಸೇರಿದ್ದರೂ ಶಿಕ್ಷಣ, ವೈದ್ಯಕೀಯ, ಕುಡಿಯುವ ನೀರು, ರಸ್ತೆ ಇವೇ ಮುಂತಾದ ಮೂಲಸೌಕರ್ಯಗಳಿಂದ ವಂಚಿತವಾಗಿತ್ತು. ಈ ಜನಾಂಗದಲ್ಲಿ ಕೆಲವು ಸಮಾಜ ಸುಧಾರಕರು ತಲೆ ಎತ್ತಿ ಸಮಾಜವನ್ನು ಸುಧಾರಿಸಿ ಮೇಲಕ್ಕೆತ್ತಿದರು. ಶಾಲಾ ಕಾಲೇಜುಗಳ ಕೊರತೆಯಿಂದಾಗಿ ವಿದ್ಯಾವಂತರು ಕಡಿಮೆ ಇದ್ದರು. ಆದರೆ ಬುದ್ಧಿವಂತರಿಗೆ ಕೊರತೆಯಿರಲಿಲ್ಲ. ಅವರಲ್ಲಿ ವಿದ್ಯಾದಾಹ ಎಷ್ಟಿತ್ತೆಂದರೆ 1870ನೆಯ ಇಸವಿಯ ಆಸುಪಾಸಿನಲ್ಲಿ ತೀರ್ಥಹಳ್ಳಿ ತಾಲ್ಲೂಕಿಗೆ ಕ್ರೈಸ್ತಧರ್ಮ ಪ್ರಚಾರಕರು ಭೇಟಿ ನೀಡಿ, ಕ್ರೈಸ್ತ ತತ್ವಗಳನ್ನು ಬೋಧಿಸಿ ನಾವು ನಿಮಗೆ ಉತ್ತಮ ಶಿಕ್ಷಣ, ಉದ್ಯೋಗ, ವೈದ್ಯಕೀಯ ಸೌಲಭ್ಯ ಇವೇ ಮುಂತಾವುಗಳನ್ನು ನೀಡುತ್ತೇವೆ. ನೀವು ನಮ್ಮ ಧರ್ಮಕ್ಕೆ ಸೇರಿ ಎಂದು ಪ್ರಲೋಭನೆ ಮಾಡತೊಡಗಿದ್ದನ್ನು ಕಂಡ ಅಲ್ಲಿನ ಜನ ಆ ಕ್ರೈಸ್ತ ಪಾದ್ರಿಗಳಿಗೆ ಕಲ್ಲು ಹೊಡೆದು ಓಡಿಸಿದರು. ನಂತರ ಆ ಕ್ರೈಸ್ತ ಪಾದ್ರಿಗಳು, ಶಿವಮೊಗ್ಗ ಪಟ್ಟಣದಲ್ಲಿ ನೆಲೆಸಿದರು. ಈ ನಡುವೆ ಆ ಕ್ರೈಸ್ತ ಪಾದ್ರಿಗಳ ಪ್ರಭಾವಕ್ಕೊಳಗಾದ ನಾಲೂರು ಗಿರಿಯಪ್ಪಗೌಡರು ಪ್ರಾಪ್ತವಯಸ್ಸಿಗೆ ಬರುತ್ತಲೆ ಇಂಗ್ಲೀಷ್ ಶಾಲೆಯಲ್ಲಿ ಓದಿ ಇಂಗ್ಲೀಷ್ ಕಲಿಯಬೇಕೆಂಬ ಹಂಬಲದಿಂದ ಶಿವಮೊಗ್ಗಕ್ಕೆ ತೆರಳಿ ಕ್ರೈಸ್ತಪಾದ್ರಿಗಳು ನಡೆಸುತ್ತಿದ್ದ ಇಂಗ್ಲೀಷ್ ಶಾಲೆಯಲ್ಲಿ ವ್ಯಾಸಂಗ ಮಾಡಿ ಊರಿಗೆ ಬಂದಾಗ ಅವರ ಧಿರಿಸು, ನಡೆ, ನುಡಿ, ಆಚಾರ, ವಿಚಾರ, ಭಾಷೆ, ಚಿಂತನೆಗಳನ್ನು ನೋಡಿದ ಗ್ರಾಮಸ್ಥರು ಅವರಿಗೆ ಗೌರವ ನೀಡುತ್ತಿದ್ದರು. ಅವರು ಮಯಸೂರಿನ ವೆಸ್ಲಿಯನ್ ಮಿಶನರಿಗಳು ಪ್ರಕಟಿಸುತ್ತಿದ್ದ ವೃತ್ತಪತ್ರಿಕೆಗಳನ್ನು ತರಿಸಿ ಅದರಲ್ಲಿ ಬ್ರಾಹ್ಮಣರು ಹೇಗೆ ಇತರ ವರ್ಗದವರಿಗೆ ವಿದ್ಯೆ ಕಲಿಯಲು ಪ್ರೋತ್ಸಾಹಿಸುತ್ತಿಲ್ಲವೆಂದು ಪ್ರಕಟಿಸಿದ್ದನ್ನು ತಮ್ಮ ಜನರಿಗೆ ಓದಿ ತಿಳಿಸುತ್ತಿದ್ದರು.

ನಾಲೂರು ಗಿರಿಯಪ್ಪಗೌಡರು ಮಲೆನಾಡು ಸೀಮೆಯಲ್ಲಿ ಸುದ್ದಿಯಾದರು. ಅವರ ಮಾತಿಗೆ ಒಂದು ಬೆಲೆಯಿರುತ್ತಿತ್ತು. ಮುಂದೆ ಗಿರಿಯಪ್ಪಗೌಡರು ಮತ್ತು ಅವರ ಸಮಾನಮನಸ್ಕರಾದ ದೇವಂಗಿ ರಾಮಣ್ಣಗೌಡರು (ಕುವೆಂಪುರವರ ಮಾವನವರು) ಸೇರಿಕೊಂಡು ತಮ್ಮ ಪ್ರಾಂತ್ಯದ ಒಕ್ಕಲಿಗರನ್ನು 'ಆರಗ' ಎಂಬಲ್ಲಿ ಮೇ 5ನೇ ತಾರೀಖು 5, 1901 ರಂದು ಸಭೆ ಸೇರಿಸಿ 'ನಾಮಧಾರಿ ಅನ್ಯೂನ್ಯಾಭಿವೃದ್ಧಿ ಸಭಾ' ಎಂಬ ಸಂಘವನ್ನು ಸ್ಥಾಪಿಸಿದರು. ಈ ಸಂಘದ ಕಾರ್ಯ ಚಟುವಟಿಕೆ ಅಂದು ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ ಇನ್ನೂ ಮುಂತಾದ ಪ್ರದೇಶಗಳನ್ನೊಳಗೊಂಡಿತ್ತು. ಬಹುಶಃ ಈ ಸಂಘವು 1906ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಯಾದ ರಾಜ್ಯ ಒಕ್ಕಲಿಗರ ಸಂಘ ಸ್ಥಾಪನೆಗೆ ಐದು ವರ್ಷಗಳ ಮೊದಲೇ ಸ್ಥಾಪನೆಯಾಗಿ ತಮ್ಮ

ಜನಗಳ ಸಮಾಜಾಭಿವೃದ್ಧಿಗೆ ಶ್ರಮಿಸಿತು. ಎನ್ನುವುದು ಇಲ್ಲಿ ಬಹಳ ಮುಖ್ಯ ಹಾಗೂ ದಾಖಲೆಯ ಮೈಲಿಗಲ್ಲು ಕೂಡ ಆಗಿದೆ.

ಗಿರಿಯಪ್ಪಗೌಡರು ಮತ್ತು ದೇವಂಗಿ ರಾಮಣ್ಣಗೌಡರು ಕ್ರೈಸ್ತರ ಮತ್ತು ತಾವು ಓದಿದ ಮೈಸೂರಿನ ವೆಸ್ಲಿಯನ್ ಮಿಷನರಿ ಶಾಲೆಯೊಂದಿಗೆ ನಂಟು ಬಿಡಲಿಲ್ಲ. ತಮ್ಮ ಮಲೆನಾಡಿನ ಹಳ್ಳಿಗಳಲ್ಲಿ ಶಾಲೆಗಳಿಲ್ಲವೆಂತಲೂ, ತೆರೆಯಲು ಮುಂದೆ ಬಂದರೆ ತಾವು ಮಿಷನರಿಗಳ ನೆರವಿಗೆ ಬರುವುದಾಗಿಯೂ ತಿಳಿಸಿದರು. ಕ್ರೈಸ್ತಮಿಷನರಿಗಳು ಮಲೆನಾಡಿನ ಹಳ್ಳಿಗಳಲ್ಲಿ ಶಾಲೆ ತೆರೆಯುವ ನೆಪದಲ್ಲಿ ಧರ್ಮ ಪ್ರಚಾರ ಮಾಡಲು ಇಷ್ಟು ಸಾಕಾಗಿತ್ತು. ಶಾಲೆ ತೆರೆಯಲು ನಾಲೂರಿನಲ್ಲಿ ಗಿರಿಯಪ್ಪಗೌಡರು ಜಾಗ ಒದಗಿಸಿದರು. ದೇವಂಗಿ ರಾಮಣ್ಣಗೌಡರು ಕಟ್ಟಡಕ್ಕೆ ಬೇಕಾದ ಸಾಮಾನು ಸರಂಜಾಮು ಇವೇ ಮುಂತದ ಅಗತ್ಯ ನೆರವುಗಳನ್ನು ನೀಡಿದರು. ಒಂದಾದ ಮೇಲೆ ಒಂದರಂತೆ ಹಳ್ಳಿಹಳ್ಳಿಗಳಲ್ಲಿ ಶಾಲೆಗಳು ಪ್ರಾರಂಭವಾದವು. ಇಷ್ಟೇ ಅಲ್ಲದೆ ಮಂಡಗದ್ದೆ ಸಿಂಧುವಾಡಿ ಚನ್ನಪ್ಪಗೌಡರ ಮುಂದಾಳತ್ವದಲ್ಲಿ ಆಸ್ಪತ್ರೆ ತೆರೆದರು. ಸುಪ್ರೀತರಾದ ಮೈಸೂರಿನ ವೆಸ್ಲಿಯನ್ ಮಿಷನರಿಯವರು ಮಲೆನಾಡಿನ ಶಾಲೆಗಳಲ್ಲಿ ಓದಿ ಪಾಸು ಮಾಡಿ ಬಂದ ವಿದ್ಯಾರ್ಥಿಗಳಿಗೆ ಮೈಸೂರಿನ ಹಾರ್ಡ್‌ವಿಕ್ ಕಾಲೇಜಿನಲ್ಲಿ ಇಂಗ್ಲೀಷ್ ಶಿಕ್ಷಣವನ್ನು ಪಡೆಯಲು ಉಚಿತ ಊಟ, ವಸತಿಯ ಅವಕಾಶ ಕಲ್ಪಿಸಿದರು. ಕ್ರೈಸ್ತ ಮಿಷನರಿಗಳ ಪ್ರಭಾವ ನಾಮಧಾರಿ ಗೌಡರ ಮೇಲೆ ದಿನೇ ದಿನೇ ಆಗತೊಡಗಿತು. 1902ರ ಹೊತ್ತಿಗೆ ಗಿರಿಯಪ್ಪಗೌಡರು ತಮಗರಿವಿಲ್ಲದಂತೆ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರು. ದೇವಂಗಿ ರಾಮಣ್ಣನವರೂ ಕ್ರೈಸ್ತ ಧರ್ಮಕ್ಕೆ ಸೇರ ಹೊರಟು ಮನೆಯವರ ತೀವ್ರ ಪ್ರತಿಭಟನೆಯಿಂದಾಗಿ ಸುಮ್ಮನಾದರು (ಕುವೆಂಪು 'ನೆನಪಿನ ದೋಣಿಯಲಿ' ಮೈಸೂರು, ಪುಟ-350). ಕೆಲವರು ಗಿರಿಯಪ್ಪಗೌಡರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದರೆ ಮತ್ತೆ ಕೆಲವರು ಶಹಭಾಸ್‌ಗಿರಿ ನೀಡಿದರು. ಒಟ್ಟಾರೆ ಹೇಳುವುದಾದರೆ ಒಂದು ಸಮುದಾಯಕ್ಕೆ ಯುರೋಪಿಯನ್ ಮಾದರಿಯ ಶಿಕ್ಷಣ ಇಲ್ಲವೆ ಆಧುನಿಕ ಶಿಕ್ಷಣವನ್ನು ಕೊಡಿಸಲು ಶ್ರಮಿಸಿದ ಹಿರಿಯಚೇತನ 1907ರಲ್ಲಿ ಇನ್ನಿಲ್ಲವಾದರು. ಹೀಗೆ ಮಲೆನಾಡಿನ ನಾಮಧಾರಿ ಗೌಡರು ಸರ್ಕಾರ ಮಾಡಬೇಕಾದ ಕೆಲಸವನ್ನು ತಾವೇ ತಮಗೆ ಸಿಕ್ಕಿದ ಅತ್ಯಲ್ಪ ಅವಕಾಶದಲ್ಲಿ ಆಸ್ಪತ್ರೆ, ಶಾಲೆ, ಕಾಲೇಜುಗಳನ್ನು ಸ್ಥಾಪಿಸುವುದರ ಮೂಲಕ ಮಲೆನಾಡಿನ ಹಳ್ಳಿಗಳಲ್ಲಿ ಶಿಕ್ಷಣ ಪಡೆದು ಆಳರಸರ ಸಂಸ್ಥಾನದಲ್ಲಿ ಶಿಕ್ಷಣ ಪಡೆದ ಒಕ್ಕಲಿಗರಿಗಿಂತಲೂ ಒಂದು ಹೆಜ್ಜೆ ಮುಂದಿದ್ದು ಎಲ್ಲರೂ ಮೆಚ್ಚುವಂತದ್ದೇ ಸರಿ.

ಹೀಗೆ ಒಕ್ಕಲಿಗರು ಇಂದಿಗೆ ಒಂದು ಸಾವಿರದ ಆರುನೂರು ವರ್ಷಗಳ ಸುದೀರ್ಘ ಇತಿಹಾಸವನ್ನೊಳಗೊಂಡಿದ್ದಾರೆ. ರಾಜ್ಯ ನಿರ್ಮಾಪಕರಾಗಿ, ನಾಡಪ್ರಭು-ಗಳಾಗಿ, ಪಾಳೆಯಗಾರರಾಗಿ, ಸೈನ್ಯಾಧಿಕಾರಿಗಳಾಗಿ, ಗ್ರಾಮ ಮುಖಂಡರಾಗಿ ಮೆರೆದಿದ್ದಾರೆ. ಆಡಳಿತ, ಸಾಹಿತ್ಯ, ನಾಡು ನುಡಿ, ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಶಾಸನಗಳು ಮತ್ತು ವೀರಗಲ್ಲುಗಳಲ್ಲಿ ಒಕ್ಕಲಿಗರು

ನಮ್ಮ ದೇಶದಾದ್ಯಂತ ಸಾವಿರಾರು ವೀರಗಲ್ಲುಗಳು, ಶಾಸನಗಳು, ತಾಮ್ರ ಪತ್ರಗಳು, ತಾಳೆಗರಿ, ಕೈಫಿಯತ್ತುಗಳು ಹೀಗೆ ನಾನಾ ಬಗೆಯ ಆಕರಗಳು ಸಿಕ್ಕಿವೆ. ಕೆಲವು ಇನ್ನೂ ಗೌಪ್ಯವಾಗಿ ಕಾಲಗರ್ಭದಲ್ಲಿ ಹುದುಗಿವೆ. ಶಾಸನಗಳನ್ನು ಪರಿಶೀಲಿಸಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತಿ ಬಿ. ಲೂಯಿಸ್ ರೈಸ್‌ರಿಗೆ ಸಲ್ಲುತ್ತದೆ. ಇಲ್ಲಿ ಒಕ್ಕಲಿಗರನ್ನು ಶೂದ್ರರು ಎಂದು ಕರೆಯುವುದು ತಪ್ಪು. ರಾಜ, ಮಹಾರಾಜರಾಗಿ, ಸಾಮಂತ ದೊರೆಗಳಾಗಿ ಪಾಳೆಯ ಪಟ್ಟುಗಳನ್ನು ಕಟ್ಟಿ ಆಳಿದ ಪಾಳೆಯಗಾರರಾಗಿ ಊರಿನ ಗಾವುಂಡ, ಗೌಡರಾಗಿ ನಾಡಗೌಡರಾಗಿ ಆಳಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಯುದ್ಧದ ಕಾಲದಲ್ಲಿ ಕತ್ತಿ ಹಿಡಿದು ಹೋರಾಡಿದ ಶಾಂತಿಯ ಕಾಲದಲ್ಲಿ ಉಳುಮೆ ಮಾಡಿ ವ್ಯವಸಾಯ, ವ್ಯಾಪಾರ ವಾಣಿಜ್ಯ ಮಾಡಿದ ಉದಾಹರಣೆಗಳಿವೆ. ಇತಿಹಾಸಕಾರರಾದ ಡಾ॥ ಸಾಲೆತೂರ್‌ರವರು ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಆಂಧ್ರದ ರೆಡ್ಡಿಗಳು ಒರಿಸ್ಸಾ ಮತ್ತು ತಮಿಳುನಾಡುಗಳಲ್ಲಿ ಅವನ ಆಳ್ವಿಕೆ ದೃಢಗೊಳ್ಳಲು ನೆರವಾಗುತ್ತಾರೆ ಎಂದು ಉಲ್ಲೇಖಿಸಿದ್ದಾರೆ. ರಾಜ ಮಹಾರಾಜರು ಬದಲಾದರೂ, ಯುದ್ಧದಲ್ಲಿಸೋತು ಇಲ್ಲವೆ ಮಡಿದರೂ ಸ್ಥಳೀಯ ಗ್ರಾಮ, ನಾಡು ಮತ್ತು ಮಹಾನಾಡುಗಳ ಆಡಳಿತ ಗಾವುಂಡಗಳ ಕೈಯಲ್ಲೆ ಇರುತ್ತಿತ್ತು. ಊರ ಗಾವುಂಡಗಳ ನಾಡು ಗಾವುಂಡಗಳ ಚಟುವಟಿಕೆಗಳನ್ನು ಕುರಿತು ಸಾವಿರಾರು ಶಾಸನಗಳಲ್ಲಿ ಉಲ್ಲೇಖಿಸಿರುವುದನ್ನು ನೋಡಬಹುದು ಎಂದು ಡಾ. ಕೆ.ವಿ. ರಮೇಶ್‌ರವರು ತಿಳಿಸುತ್ತಾರೆ. ಹಿಂದಿನ ಕಾಲದಲ್ಲಿ ಗೌಡ, ಪಟೇಲ್, ಗಾವುಂಡರನ್ನು ಅಂದಿನ ರಾಜಮಹಾರಾಜರು ಬದಲಿಸುತ್ತಿರಲಿಲ್ಲ. ಊರ ಗೌಡ ಇಲ್ಲವೆ ಪಟೇಲ್‌ನ ಸ್ಥಾನವು ವಂಶ ಪಾರಂಪರ್ಯವಾಗಿತ್ತು. ಕಾರಣ ಇಷ್ಟೇ ಊರಿನಲ್ಲಿ ಇಲ್ಲವೆ ನಾಡು ಮಹಾನಾಡು –ಗಳ ಶಾಂತಿ ಸೌಹಾರ್ದತೆ ಕಾಪಾಡುವುದು, ಕಂದಾಯ ವಸೂಲಿಯಂತಹ ಕೆಲಸ ಮಾಡಲು ಅವರು ಅಗತ್ಯವಾಗಿ ಬೇಕಾಗಿದ್ದರು.

ಒಕ್ಕಲಿಗರು ಸೈನಿಕರಾಗಿ, ಸೈನಾಧಿಕಾರಿಗಳಾಗಿ ಶಾಂತಿ ಸಮಯದಲ್ಲಿ ವ್ಯವಸಾಯ ಮಾಡುತ್ತಿದ್ದುದರಿಂದ ಇವರನ್ನು 'ರೈತ ಡಣಾಯಕರು' (Agro Martial) ಎಂದು ಕರೆಯಲಾಗಿದೆ. ಹಿಂದೆ ವೆಲ್ಲಾಳರು, ಪಟೇಲರು, ಗೌಡರು, ತಮಿಳುನಾಡಿನಲ್ಲಿ ಮವೆಲ್ಲಾಳರು, ಪಂಜಾಬ್ ಮತ್ತು ಹರಿಯಾಣದಲ್ಲಿ ಜಾಟರು ಪ್ರಭಾವಶಾಲಿಗಳಾಗಿದ್ದರು. ಕರ್ನಾಟಕದ ಬಹುತೇಕ ರಾಜಮನೆತನಗಳು ಒಕ್ಕಲು ಮಕ್ಕಳಾಗಿದ್ದಾರೆ. ರಾಜ ಮಹಾರಾಜರಾದ ತರುವಾಯ ತಾವು ಸೂರ್ಯ ವಂಶಸ್ಥರು ಇಲ್ಲವೆ ಚಂದ್ರವಂಶಸ್ಥರು, ಇಕ್ಷ್ವಾಕು ಕುಲದವರು ಎಂಬಿತ್ಯಾದಿಯಾಗಿ ಶಾಸನಗಳಲ್ಲಿ ಇಲ್ಲವೆ ತಾಮ್ರಪಟಗಳಲ್ಲಿ ದಾಖಲಿಸಿಕೊಳ್ಳುತ್ತಾರೆ.

ಒಕ್ಕಲಿಗರು ಇಲ್ಲವೆ ಗೌಡ ಪ್ರಭುಗಳು ತ್ಯಾಗ, ಬಲಿದಾನ, ದಾನ, ಧರ್ಮ, ಪೌರುಷ, ಆಡಳಿತ ಇವೇ ಮುಂತಾದವುಗಳಲ್ಲಿ ಮೆರೆದಿದ್ದಾರೆ. ಇದಕ್ಕೆ ನಮಗೆ ದೊರೆತಿರುವ ವೀರಗಲ್ಲುಗಳು, ಶಾಸನಗಳು ಸಾಕ್ಷಿಯಾಗಿವೆ. ವೈರಿಗಳು ದಾಳಿಮಾಡಿದಾಗ, ದರೋಡೆಕೋರರು ಸಮಾಜ ದ್ರೋಹಿಗಳು ಊರಿಗೆ ನುಗ್ಗಿ ಸ್ತ್ರೀಯರ ಮಾನಹರಣ ಮಾಡಲು ಯತ್ನಿಸಿದಾಗ, ಗೋಗ್ರಹಣ ಮಾಡಿದಾಗ ಅವರ ವಿರುದ್ಧ ಹೋರಾಡಿ ಗೆದ್ದು ವೀರ ಮರಣವನ್ನಪ್ಪಿದ ಗಾವುಂಡರ ಪ್ರಸಂಗಗಳನ್ನು ತಿಳಿಸುವ ನೂರಾರು ಶಾಸನಗಳು ವೀರಗಲ್ಲುಗಳು ನಮಗೆ ಲಭ್ಯವಾಗಿವೆ.

ಶಾಸನಗಳಲ್ಲಿ ಒಕ್ಕಲಿಗರು

ಕೃಷ್ಣರಾಜಪೇಟೆಯ ಶಾಸನ (EC Vol-III NEWJ-283 (New Ed) 1972) ಪೆರ್ಗಡೆ ಗೌಡನ ಶೌರ್ಯ ಪರಾಕ್ರಮವನ್ನು ಈ ರೀತಿ ಉಲ್ಲೇಖಿಸಿದೆ.

E.C.Vol-XIII

2ನೇ ಮಾಧವನ ಕಾಲದಲ್ಲಿ ಕೃಷಿ ಭೂಮಿಯನ್ನು ತರಿ, ಖುಷ್ಕಿ, ಸರ್ಕಾರಿ ಜಮೀನು ಎಂದು ವಿಂಗಡಿಸಲಾಗಿತ್ತು. ಆ ವರ್ಷದಲ್ಲಿ ಒಂದು ಬೆಳೆ ತೆಗೆಯುವ, ವರ್ಷದಲ್ಲಿ ಎರಡು ಬೆಳೆ ತೆಗೆಯುವ ಭೂಮಿಯಾಗಿ ವಿಂಗಡಿಸಿದ್ದರು. ಇದರಲ್ಲಿ 3ನೇ ಮಾಧವನು ವರ್ಷದಲ್ಲಿ ಎರಡು ಬೆಳೆತೆಗೆಯುವ ಫಲವತ್ತಾದ ಕೃಷಿ ಭೂಮಿಯನ್ನು ದಾನ ಮಾಡಿದ ವಿವರಣೆ ಇದೆ.

1. Nj.122.E.C.Vol.3 A.D. 355

ಈ ಶಾಸನದಲ್ಲಿ ಗಂಗ ದೊರೆ ಒಂದನೆ ಮಾಧವನು ಕ್ರಿ.ಶ.350 ರಿಂದ 370ರ ಸಂದರ್ಭದಲ್ಲಿ ಬಾಣರು ನೆಲೆಸಿದ್ದ ಕುವಲಳ ಅಥವಾ ಕೋಲಾರವನ್ನು ಮುತ್ತಿಗೆ ಹಾಕಿ ಅವರನ್ನು ಸೋಲಿಸಿ ಅಲ್ಲಿಂದ ಕಾಲ್ಕೀಳುವಂತೆ ಮಾಡಿದ ಎಂದು ಉಲ್ಲೇಖಿಸು –ತ್ತದೆ. ಈ ಶಾಸನವು ಹೇಗೆ ಗಂಗರು ರಾಜ್ಯವನ್ನು ಸ್ಥಾಪಿಸಿದರು ತಲಕಾಡು ಪ್ರದೇಶದಲ್ಲಿ ನೆಲೆಸುವ ಮೊದಲು ಎಲ್ಲಿ ತಳವೂರಿದರು ಎಂಬಿತ್ಯಾದಿ ಮಾಹಿತಿಯನ್ನು ನೀಡುತ್ತದೆ.

2. **M.A.R.-1925 A.D. 375**

ಗಂಗ ಸಾಮ್ರಾಜ್ಯದ ಸ್ಥಾಪಕ ಕೊಂಗಣಿವರ್ಮನು ಕೊಯಮತ್ತೂರಿನ ಬಳಿಯ ಪೆರೂರು ಎಂಬಲ್ಲಿ ತಮ್ಮ ರಾಜಧಾನಿಯನ್ನು ಸ್ಥಾಪಿಸಿದ.

3. **M.A.R.-1925, P.85**

ಕೊಂಗಣಿ ವರ್ಮನಿಗೆ ಗಂಡು ಮಕ್ಕಳಿಲ್ಲದ ಪ್ರಯುಕ್ತ ಆತನ ಅಣ್ಣನಾದ ದಡಿಗನ ಮಗ ಕಿರಿಯ ಮಾಧವನನ್ನು ಕ್ರಿ.ಶ.370ರಲ್ಲಿ ಸಿಂಹಾಸನಕ್ಕೆ ತರಲಾಯಿತು.

4. **E.C.Vol-p.50 A.D.940**

ಎರಡನೆ ಬೂತಗನ ಕಾಲದ ಆತಗೂರು ಶಾಸನವು ಹಲವಾರು ಗ್ರಾಮಗಳ ಕಂದಾಯವನ್ನು ಬ್ರಾಹ್ಮಣರಿಗೆ ನೀಡಿದ ವಿಷಯವನ್ನು ತಿಳಿಸುತ್ತದೆ.

5. **Srinispur-59 E.C.X A.D.990**

ರಕ್ಕಸಗಂಗನ ಆಳ್ವಿಕೆಯ ಕಾಲದಲ್ಲಿ ಗಂಗರು ಅಳಿವಿನಂಚಿನಲ್ಲಿದ್ದರು ನಾಲ್ಕನೆಯ ರಾಚಮಲ್ಲನ ಸೈನ್ಯದಲ್ಲಿ ಸೇನಾದಂಡ ನಾಯಕನಾಗಿದ್ದನು. ಅಣ್ಣನ ಬಂಟ ಎಂದು ಕರೆಯಲಾಗುತ್ತಿತ್ತು. ಕೊಡಗಿನ (ಕೂರ್ಗ್) ಬಳಿಯ ಪೆದ್ದೂರು ನದಿ ಬಳಿಯ ಜಿಲ್ಲೆಯಲ್ಲಿ ರಾಜ್ಯಪಾಲನಾಗಿದ್ದನು. ಈತನು ಸೈನ್ಯಾಡಳಿತ ಮತ್ತು ಆಡಳಿತ ಚತುರನಾಗಿದ್ದನು. ಚೋಳರ ಉಪಟಳವನ್ನು ತಡೆಯುವ ಶಕ್ತಿಹೊಂದಿದ್ದನು.

6. **Db.67.E.C.Vol. 1X A.D. 380**

ಕರ್ನಾಟಕದಲ್ಲಿ ಬಾಣರು, ಕದಂಬರು ಮತ್ತು ಪಲ್ಲವರು ರಾಜಕೀಯ ಔನತ್ಯ ಪಡದಿದ್ದರು. ಕೊಂಗಣಿ ವರ್ಮ ಮಾಧವನು ತನ್ನ ಕೌರ್ಯ ಪರಾಕ್ರಮಗಳಿಂದ ಬಾಣರನ್ನು ಸದೆಬಡಿದು ನಂತರ ಕದಂಬರನ್ನು ನಿಯಂತ್ರಣಕ್ಕೆ ತೆಗೆದುಕೊಂಡನು. ಕ್ರಿ.ಶ.ನಾಲ್ಕನೆಯ ಶತಮಾನದಲ್ಲಿ ಇಡೀ ಕರ್ನಾಟಕವು ಕುರುಚಲು ಗಿಡಮರಗಳಿಂದ ಕೂಡಿತ್ತು. ಜನವಸತಿ ವಿರಳವಾಗಿತ್ತು. ಗಂಗದೊರೆ ಮಾಧವನು ದಿನೇ ದಿನೆ ಪ್ರವರ್ದಮಾನಕ್ಕೆ ಬರುತ್ತಿರುವುದನ್ನು ಕಂಡ ಪಲ್ಲವರು ಮಾಧವನೊಂದಿಗೆ ಸ್ನೇಹ ಹಸ್ತ ಚಾಚಿದರು ಎಂದು ಈ ಮೇಲ್ಕಂಡ ಶಾಸನ ತಿಳಿಸುತ್ತದೆ.

7. **Nj.122 E.C.Vol. 1 A.D. 395**

ಗಂಗದೊರೆ ಹರಿವರ್ಮನು ತನ್ನ ಶೌರ್ಯ ಪರಾಕ್ರಮಗಳಿಂದ ಬಾಣರು, ಕದಂಬರು ಪಲ್ಲವರನ್ನು ಸದೆ ಬಡಿದಿದ್ದನು. ತನ್ನ ರಾಜ್ಯವನ್ನು ಹಂತ ಹಂತವಾಗಿ ವಿಸ್ತರಿಸಿದನು ಗುಡಿಗೋಪುರಗಳನ್ನು ನಿರ್ಮಿಸಿದನು ಕರ್ನಾಟಕದ ಬಹು ಭಾಗಗಳನ್ನು ಹಾಗೂ ತಮಿಳುನಾಡಿನ ಹಲವಾರು ಭಾಗಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದನು. ಹರಿವರ್ಮನ ಕೀರ್ತಿಯು ನಾಲ್ಕು ಸಮುದ್ರಗಳನ್ನು ದಾಟಿತ್ತು ಎಂದು ಈ ಮೇಲ್ಕಂಡ ಶಾಸನವು ತಿಳಿಸುತ್ತದೆ.

8. **Kolar, E.C.Vol X.P.24**

ಕ್ರಿ.ಶ. 992ರ ಸಮಯಕ್ಕಾಗಲೆ ರಾಜರಾಜ ಚೋಳನ ಸೈನ್ಯವು ಗಂಗರ ಕೆಲವಾರು ಪ್ರದೇಶಗಳನ್ನು ವಶಪಡಿಸಿಕೊಂಡರು. ನೊಳಂಬ ರಾಜನು ಚೋಳರ ಪರವಯಿಸ ತೊಡಗಿದನು. ಗಂಗರ ವಶದಲ್ಲಿದ್ದ ಕೊಡಗು ಮತ್ತು ಪಶ್ಚಿಮ ಘಟ್ಟಗಳತ್ತ ತಮ್ಮ ಗಮನ ಹರಿಸಿದ ಬಗ್ಗೆ ಈ ಶಾಸನದಿಂದ ತಿಳಿಯುತ್ತದೆ.

9. **E.C. XVII 329**

ಈ ಶಾಸನವು ಗಂಗದೊರೆ ದುರ್ವಿನೀತ (ಕ್ರಿ.ಸ. 495–535) ನಿಗೆ ಸೇರಿದ್ದು. ದುರ್ವಿನೀತನು ದಿನೇ ದಿನೆ ಪ್ರಬಲನಾಗುತ್ತಿರುವುದನ್ನು ಸಹಿಸದ ಪಲ್ಲವರು, ಕದಂಬರು, ಗಂಗಸಾಮಂತರು ಒಗ್ಗಟ್ಟಾಗಿ ಸೋಲಿಸಲು ಪ್ರಯತ್ನ ಮಾಡಿದರು ಶೂರನಾದ ದುರ್ವಿನೀತನು ಕೊಯಮತ್ತೂರು ಜಿಲ್ಲೆಯ ಆಲತ್ತೂರು, ಚೆಂಗಲ್‌ಪೇಟೆ ಜಿಲ್ಲೆಯ ಪೂರಲಾರೆ, ಸೇಲಂ ಜಿಲ್ಲೆಯ ಪೆನ್ನಾಗರ ಇವೇ ಮುಂತಾದ ಕಡೆ ಶತ್ರುಗಳನ್ನು ಸೋಲಿಸುವ ಮೂಲಕ ರಾಜ್ಯ ವಿಸ್ತರಿಸಿದನು. ಕದಂಬ ದೊರೆ ಕೃಷ್ಣವರ್ಮನ ಮಕ್ಕಳಾದ ಅಜವರ್ಮ ಮತ್ತು ಭೂಗವರ್ಮರನ್ನು ಸೋಲಿಸಿದನು ರಣಕಲಿಯಂತೆ ರಣರಂಗದಲ್ಲಿ ಹೋರಾಡುತ್ತಿದ್ದನೆಂದು ಶಾನನವು ಉಲ್ಲೇಖಿಸುತ್ತದೆ.

10. **M.A.R.-1924, No 79**

ದುರ್ವಿನೀತನು ಮೈಸೂರಿನ ಹೆಗ್ಗಡ ದೇವನಕೋಟೆ ತಾಲ್ಲೂಕಿನ ಕಿತ್ತೂರು ಪುನ್ನಾಟ ಅಥವಾ ಪಾಣ್ಣಡ ಹೆಸರಿನ ಪ್ರದೇಶವು ಕಪಿನಿ, ಕಾವೇರಿ ನದಿಗಳ ತೀರಪ್ರದೇಶ ಇದನ್ನು ದುರ್ವಿನೀತನು ಪುನ್ನಾಟ ಪ್ರದೇಶದ ರಾಜನಾದ ಸ್ಕಾಂದ ವರ್ಮನಿಂದ ಪಡೆದುಕೊಂಡನು.

11. **E.C. VII, PP,22-23 / Mb,228, E C X**

ಗಂಗರಾಜ ವಂಶಸ್ಥರಾದ ರಾಜಕುಮಾರ ಪೃಥ್ವಿ ಮತ್ತು ರಾಜಕುಮಾರ ರಾಚಮಲ್ಲರ ನಡುವೆ ಸಿಂಹಾಸನಕ್ಕಾಗಿ ನಾಗರಿಕ ಯುದ್ಧಗಳಾದವು. ಈ ಸಂದರ್ಭದಲ್ಲಿ ಸಣ್ಣಪುಟ್ಟ ಪಾಳೆಯಗಾರರು, ಅಧಿಅರಸರು ಈ ರಾಜಕುಮಾರನ ಪರ ವಿರೋಧ ಪಕ್ಷಗಳಿಗೆ ಸೇರಿದರು. ಈ ದ್ವೇಷ ಅಸೂಯೆಯ ಲಾಭವನ್ನು ಅಧಿ ಅರಸರು ಪಡೆದುಕೊಂಡರು. ಈ ಕದನವು ಮಾಂಡವು, ಮದುಮದುರ್ಗ, ಮನ್ನೆ, ಮಂಗಲೆ ಮತ್ತು ಸೂರಿಮತಿ ಪ್ರದೇಶಗಳಲ್ಲಿ ನಡೆಯಿತು.

E. **I.V1,p.46 A.D. 860**

ನೊಳಂಬ ದೊರೆ ಮಹೇಂದ್ರನು ಯುದ್ದೊನ್ಮಾದದಿಂದ ಬಾಣರನ್ನು ಸದೆ ಬಡಿದನು ಹೀಗೆ ಮುಂದುವರಿದ ಮಹೇಂದ್ರನು ಗಂಗದೊರೆ ನೀತಿಮಾರ್ಗನ ಸೇನಾದಂಡನಾಯಕನಾದ ಅಯ್ಯಪ್ಪನನ್ನು ಯುದ್ಧದಲ್ಲಿ ಕೊಂದು ಹಾಕಿದನು. ಹೀಗೆ

ಸರಣಿ ಯುದ್ಧಗಳಲ್ಲಿ ಗೆದ್ದ ಮಹೇಂದ್ರನು ಗಂಗದೊರೆ ನೀತಿಮಾರ್ಗನ ಮೇಲೆ ಯುದ್ಧ ಮಾಡಿದನು. ಗಂಗದೊರೆ ನೀತಿಮಾರ್ಗನು ನೊಳಂಬದೊರೆ ಮಹೇಂದ್ರನನ್ನು ರಣರಂಗದಲ್ಲಿ ಕೊಂದುಹಾಕಿದನು. ಇದರ ಪರಿಣಾಮವಾಗಿ "ಮಹೇಂದ್ರತಕ" ಎಂಬ ಬಿರುದನ್ನು ಪಡೆದ ಬಗ್ಗೆ ಈ ಶಾಸನವು ಉಲ್ಲೇಖಿಸುತ್ತದೆ.

EC1X, Bangalore, 141;EC X11, Madagiri 110 A.D. 496

ಗಂಗದೊರೆ ದುರ್ವಿನೀತನು ಅವನೀತನ ಮಗನಾಗಿದ್ದನು. ಆತ ಅವನೀತನ ಜೇಷ್ಠ ಪುತ್ರನಾಗಿದ್ದರೂ ಅಷ್ಟು ಸುಲಬವಾಗಿ ಸಿಂಹಾಸನ ಲಭಿಸಲಿಲ್ಲ ಅಂತಿಮವಾಗಿ ಲಭಿಸಿತು. ಈ ಶಾಸನದಲ್ಲಿ ತಂದೆಯು ಎರಡನೆ ಮಗನಿಗೆ ಕೊಟ್ಟಿದ್ದ ರಾಜ್ಯಲಕ್ಷ್ಮಿಯು ತಾನೇ ದುರ್ವಿನೀತನ ವಿಪುಲ ವೃಕ್ಷಸ್ಥಳದಲ್ಲಿ ನೆಲೆಸಿದಳು. ಎಂತಲೂ ಮಲತಮ್ಮನ ತೋಳುಗಳಿಂದ ಗಾಢವಾಗಿ ಅಪ್ಪಿಕೊಳ್ಳಲ್ಪಟ್ಟಿದ್ದ ರಾಜ್ಯಲಕ್ಷ್ಮಿಯನ್ನು ತನ್ನ ಭುಜಬಲ ಪರಾಕ್ರಮದಿಂದ ಹಿಡಿದು ಎಳೆದುತಂದು ತನ್ನ ವಿಪುಲ ವೃಕ್ಷ ಸ್ಥಳದಲ್ಲಿ ಶಾಶ್ವತ ಸುಖದಿಂದ ಇರುವಂತೆ ಮಾಡಿದನು ಎಂದು ದೊರೆ ದುರ್ವಿನೀತನನ್ನು ಕುರಿತು ಈ ಶಾಸನವು ನಮಗೆ ವೇದ್ಯ ಮಾಡುತ್ತದೆ.

EC.XV11 (sup.ins) mb 329

ಪರಾಕ್ರಮಿಯಾದ ಗಂಗದೊರೆ ದುರ್ವಿನೀತನನ್ನು ನಿಯಂತ್ರಿಸಲು ಪಲ್ಲವರು, ಕದಂಬರು ಹಾಗೂ ರಟ್ಟರು ಸಂಯುಕ್ತ ಸೈನ್ಯವನ್ನು ಸಜ್ಜುಗೊಳಿಸಿ ಯುದ್ದಮಾಡಿದರು. ದುರ್ವಿನೀತನು ಈ ಮೇಲ್ಕಂಡ ಸಂಯುಕ್ತ ಸೈನ್ಯವನ್ನು ಕೊಯಮತ್ತೂರು ಜಿಲ್ಲೆಯ ಆಲತ್ತೂರು, ಚಂಗಲ್ಪಟಿ ಜಿಲ್ಲೆಯ ಪೊರಲಾರೆ, ಸೇಲಂ ಜಿಲ್ಲೆಯ ಪೆನ್ನಾಗರ ಇವೇ ಮುಂತಾದ ಸ್ಥಳಗಳಲ್ಲಿ ಪಲ್ಲವರ ನೇತೃತ್ವದ ಸೈನ್ಯವನ್ನು ಸೋಲಿಸಿದ ಬಗ್ಗೆ ಶಾಸನವು ವಿವರಣೆಯನ್ನು ನೀಡುತ್ತದೆ.

Sp.30, E.C.X;cm129, E.C.V1

ನೊಳಂಬ ದೊರೆ ಮಹೇಂದ್ರನು ಹಿಂದೊಮ್ಮೆ ಗಂಗ ಸಾಮ್ರಾಜ್ಯದ ಅಧೀನ ಅರಸನಾಗಿದ್ದುದು ಸರಿಯಷ್ಟೆ. ಕಾಲಾನಂತರ ಗಂಗರ ಅಧಿಕಾರದ ನೊಗವನ್ನು ಕಿತ್ತೊಗೆದು ಸ್ವತಂತ್ರನಾಗಲು ಹವಣಿಸಿದನು. ನೀತಿಮಾರ್ಗ(ಗಂಗದೊರೆ)ನು ಉನ್ಮಾದ ಸ್ಥಿತಿಯಲ್ಲಿದ್ದ ನೊಳಂಬ ದೊರೆಯನ್ನು ಯುದ್ದದಲ್ಲಿ ಸೋಲಿಸುವ ಮೂಲಕ ಅವನ ಕನಸನ್ನು ಭಗ್ನಗೊಳಿಸಿದ ಬಗ್ಗೆ ಈ ಶಾಸನ ಉಲ್ಲೇಖಿಸುತ್ತದೆ.

Manne Grant M.A.R.1910, p.24. ಪ್ರಸಿದ್ಧ ಕುಣಿಗಲ್ ಕೆರೆ ನಿರ್ಮಾಣ

ದುರ್ವಿನೀತನು ಕದಂಬರ ರಾಜ್ಯವನ್ನು ಪಲ್ಲವರ ದಾಳಿಯಿಂದ ಕಾಪಾಡಿದನು. ಪಲ್ಲವರು ಬನವಸಿಯಲ್ಲಿ ತಲೆ ಎತ್ತದರೆ ತನ್ನ ರಾಜ್ಯಕ್ಕೆ ಅಪಾಯ ತಪ್ಪಿದಲ್ಲ ಎಂದು

ಯೋಚಿಸಿದನ್ನು. ಇದರ ಪರಿಣಾಮವಾಗಿ ಕದಂಬರು ದುರ್ವಿನೀತನನ್ನು ಯುಧಿಷ್ಠರನೆಂದು ಹಾಡಿ ಹೊಗಳಿದೆ.

Hunsur tq. No92, E.C.V.P.92

ಗಂಗದೊರೆ ಬೂತಗನು ಕೊಂಗುದೊರೆ ಪೆರಮಾಡಿಯನ್ನು ಹಾಗೂ ಪಾಂಡ್ಯರ ಸಂಯುಕ್ತ ಸೈನ್ಯವನ್ನು ಕುಣಿಗಲ್ ಬಳಿ ಸೋಲಿಸಿ ಹಿಮ್ಮೆಟ್ಟಿಸಿದನು. ಕುಣಿಗಲ್ ಪ್ರದೇಶವು ಅಂದು ವ್ಯಾಪಾರ ವಾಣಿಜ್ಯದ ಕೇಂದ್ರವಾಗಿದ್ದು ಅಲ್ಲಿಗೆ ತನ್ನ ಪಟ್ಟದರಸಿ 'ಪರಮಬ್ಬೆ'ಯನ್ನು ಕುಣಿಗಲ್‌ನ ಆಡಳಿತಾಧಿಕಾರಿಯನ್ನಾಗಿ ನೇಮಿಸಿದನು. ಅಂದು ರಾಣಿವಾಸದವರಿಗೂ ಆಡಳಿತಾಧಿಕಾರಿಯನ್ನಾಗಿ ನೇಮಿಸುತ್ತಿದ್ದರು. ಪರಮಬ್ಬೆಯು **ಕುಣಿಗಲ್ ಕೆರೆ**ಯನ್ನು ಕಟ್ಟಿಸಿದಳು.

Plate XX1 No3, M.A.R.1930, page 113.

ತಡಗಲ ಮಾದವನು ಹಲವಾರು ಯುದ್ಧಗಳಲ್ಲಿ ಗೆದ್ದು ಬಂದ ನೆನಪಿಗಾಗಿ ಹಲವು ಬ್ರಾಹ್ಮಣರಿಗೆ ದಾನದತ್ತಿ ನಿಡಿದನು. ತ್ರಿಯಂಬಕ(ಶಿವ) ದೇವಾಲಯವನ್ನು ನಿರ್ಮಿಸಿದನು.

Mallahalli plates, M.A.R.1916-pp.34-35

ಅವನೀತನು ವಿದ್ಯುಕ್ತವಾಗಿ ಕಿರೀಟದಾರಿಯಾದನು ಎಂದು ತಿಳಿಸುತ್ತದೆ.

Db,68,E.C.1X

ಪುನ್ನಾಟದ ದೊರೆ ಸ್ಕಂದವರ್ಮನ ಮಗಳನ್ನು ಅವನೀತ ವಿವಾಹವಾದನೆಂದು ಈ ಶಾಸನವು ತಿಳಿಸುತ್ತದೆ. ಇದರಿಂದಾಗಿ ತಲಕಾಡು ಗಂಗರ ಹಾಗೂ ಪುನ್ನಾಟ ರಾಜ್ಯ ನಡುವೆ ಬೆಸುಗೆಯಾಯಿತು ಎಂದು ತಿಳಿಯುತ್ತದೆ.

M.A.R 1911, para 73, p.36.

ಅವನೀತನ ರಾಜ್ಯವು ಕದಂಬರ ರಾಜ್ಯಗಡಿ ಇತ್ತ ಸೇಲಂ ವರೆವಿಗೂ ವಿಸ್ತರಿಸಿತ್ತು ಎಂದು ತಿಳಿಸುತ್ತದೆ.

Cg.2.E.C.1, P.59.

ನೊಳಂಬರು ತಲಕಾಡು ಗಂಗರಿಗೆ ಅಧೀನ ಅರಸರಾಗಿದ್ದರು ಕಾಲಾನಂತರ ಗಂಗದೊರೆ 2ನೇ ರಾಜಮಲ್ಲನ ಮಗಳನ್ನು ನೊಳಂಬರ ರಾಜಕುಮಾರನಿಗೆ ಕೊಟ್ಟು ವಿವಾಹ ಮಾಡಿಕೊಡುವುದರ ಮೂಲಕ ಎರಡೂ ರಾಜಮನೆತನಗಳ ನಡುವೆ ವೈವಾಹಿಕ ಬಾಂಧವ್ಯ ಮೂಡಿತು. ಗಂಗರು ಕರ್ನಾಟಕದಲ್ಲಿ ಪ್ರಬಲ ರಾಜಮನೆತನವಾಗಿ ಹೊರಹೊಮ್ಮಿತು ಎಂದು ಈ ಶಾಸನವು ತಿಳಿಸುತ್ತದೆ.

Malur 35, 72, E.C.X

ಅವನೀತನು ಜೈನ ಗುರು ವಿಜಯಕೀರ್ತಿಯ ಕೋರಿಕೆಯನ್ನು ಮನ್ನಿಸಿ ತನ್ನ ಸಾಮ್ರಾಜ್ಯದಲ್ಲಿ ಜಿನಾಲಯವನ್ನು ನಿರ್ಮಿಸಿದನು.

B,67, E.C;1X

ಅವನೀತನು ತನ್ನ ಸಾಮ್ರಾಜ್ಯದ ತುಂಬೆಲ್ಲ ದೇವಾಲಯ, ಜಿನಾಲಯ ಚೈತ್ಯಾಲಯಗಳನ್ನು ಹಲವಾರು ವಿಹಾರಗಳನ್ನು ನಿರ್ಮಿಸಿದನು. ಎಲ್ಲಾ ಧರ್ಮಿ–ಯರಿಗೂ ದಾನ ಧರ್ಮಗಳನ್ನು ನೀಡಿ ಗೌರವಿಸುವ ಮೂಲಕ ಅನ್ಯಮತ ಸಹಿಷ್ಣು ದೊರೆ ಎನಿಸಿಕೊಂಡನು.

Nagara 35, E.C, V111

ಈ ಶಾಸನದಲ್ಲಿ ಶೂರನಾದ ಅವನೀತನು ಶತ್ರುಗಳಿಗೆ ಪ್ರಳಯ ರುದ್ರನಂತೆ ಗೋಚರಿಸುತ್ತಿದ್ದನು. ಅವನೀತ ಎಂಬ ಆತ ಹೆಸರನ್ನು ಅಗ್ನಿಯ ಮೇಲೆ ಸವಾರಿ ಮಾಡುವ ಭೂಪ ಎಂದು ತಿಳಿಸುತ್ತದೆ.

Cm,50, E.C.V1,P.40

ದುರ್ವಿನೀತನು ಪ್ರಬಲನಾದಂತೆಲ್ಲ ಕದಂಬರು ಈತನೊಂದಿಗೆ ವೈವಾಹಿಕ ಬಾಂದವ್ಯಕ್ಕೆ ಮುಂದಾದರು ನಂತರ ಈತನಿಗೆ ಜನಿಸಿದ ಮಗನೇ 'ನಿರ್ವಿನಿತ' ಎಂದು ತಿಳಿಯುತ್ತದೆ.

K1.90, E.C.X; Nj.269(supplement E.C.1V)

ಗಂಗ ಸಾಮ್ರಾಟ ನೀತಿಮಾರ್ಗನು ಪ್ರಬಲ ದೊರೆಯಾಗಿದ್ದನು ಉತ್ತರ ಕರ್ನಾಟಕ ಭಾಗದಿಂದ ದಂಡೆತ್ತಿ ಬಂದ ರಾಷ್ಟ್ರಕೂಟರು ಗಂಗರ ಮೇಲೆ ದಾಳಿ ಮಾಡಿ–ದರು. ದೊರೆ ನೀತಿಮಾರ್ಗನು ಸೇನ ಸಮೇತನಾಗಿ ಹೋಗಿ ಕೋಲಾರದ ಬಳಿ ರಾಷ್ಟ್ರಕೂಟರ ವಿರುದ್ದ ಸೆಣಸಿ ಅವರನ್ನು ಹಿಂದಕ್ಕಟ್ಟಿದ ಬಗ್ಗೆ ಈ ಮೇಲ್ಕಂಡ ಶಾಸನ ತಿಳಿಸುತ್ತದೆ.

Nj,269, (supplement) E.C.111

ಗಂಗದೊರೆ ಬೂತಗನು ದಕ್ಷಿಣ ಭಾರತದಲ್ಲಿ ಪ್ರಬಲ ದೊರೆಯಾಗಿದ್ದನು (870–907) ಚೋಳದೊರೆ ರಾಜರಾಜ ಚೋಳನು ಗಂಗರ ಸಾಮ್ರಾಜ್ಯದ ಮೇಲೆ ದಾಳಿಮಾಡಿದಾಗ ಪ್ರಬಲನಾದ ದೊರೆ ಬೂತಗನು ರಾಜರಾಜ ಚೋಳನನ್ನು ಸೋಲಿಸಿ ಹಿಮ್ಮೆಟಿಸಿದನು ಚೋಳರ ಪ್ರಾಬಲ್ಯ ಮುರಿದು ಬಿದ್ದಂತಾಯ್ತು. ಬೂತಗನು ದಕ್ಷಿಣ ಭಾರತದಲ್ಲೇ ಪ್ರಬಲ ದೊರೆಯಾಗಿ ಹೊರ ಹೊಮ್ಮಿದನು.

Md.41, E.C.III, P,42

ಬೂತುಗನ(935–960) ವಿರುದ್ದ ಚೋಳರು ದಂಡೆತ್ತಿ ಬಂದಾಗ ಗಂಗದೊರೆ ಬೂತಗನು ಚೋಳರ ವಿರುದ್ದ ತನ್ನ ಪರಾಕ್ರಮವನ್ನು ಮೆರೆದನು. ಚೋಳರ ಉಪಟಳವನ್ನು ತಡೆದುದೇ ಅಲ್ಲದೆ ಅವರನ್ನು ಅಣ್ಣುಗಾಯಿ ನೀರುಗಾಯಿ ಮಾಡಿ ಹಿಂದಕಟ್ಟಿದನು.

E. C.II PP.167-69 (ಆತ್ಕೂರ್ ಶಿಲಾಶಾಸನ)

ಇಮ್ಮಡಿ ಬೂತುಗನು ರಾಜಾದಿತ್ಯನನ್ನು ಕೊಂದು ಆತನ ಬಳಿಯಿದ್ದ ಅಶ್ವಸೇನೆ, ಗಜಸೇನೆ, ಕಾಲ್ದಳವನ್ನು ವಶಕ್ಕೆ ಪಡೆದನು.

Nr.35, E.C.VII, P-133

ಗಂಗರ ಬೂತಗನು ಚೋಳರಿಗೆ ಯಮ ಸ್ವರೂಪಿಯಾಗಿ ಕಾಡಿದನು. ತಮಿಳುನಾಡಿನ ರಾಮೇಶ್ವರದವರವಿಗೆ ಅಟ್ಟಿಸಿಕೊಂಡು ಹೋಗಿದ್ದನು.

E.C.XI, (Altekar, Rastrakutas and Theirtime, P-121)

ಗಂಗದೊರೆ ಮಾರಸಿಂಹನು ರಾಷ್ಟ್ರಕೂಟರ ಕೃಷ್ಣನನ್ನು ಯುದ್ಧದಲ್ಲಿ ಸೋಲಿಸಿ ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಾನ್ಯಕೇಟದ ವರೆವಿಗೂ ಸೈನ್ಯವನ್ನು ನುಗ್ಗಿಸಿದ್ದನು.

E.C.IX ಬೆಂಗಳೂರು.57, (ಕೆ.ಆರ್.ಪುರ–ಹೋಬಳಿ, ದಾಸರಹಳ್ಳಿ, ಪುಟ–24, ಭಾಷೆ–ಕನ್ನಡ, ಕಾಲ–ಕ್ರಿ.ಶ.1532)

ವಿಜಯನಗರದ ಸಾಮ್ರಾಟ ಶ್ರೀ ಕೃಷ್ಣದೇವರಾಯನ ಕಾಲಾನಂತರ ಅಚ್ಯುತರಾಯನು ಸಿಂಹಾಸನಾರೋಡನಾದನು. ಆತನ ಆಳ್ವಿಕೆಯ ಕಾಲದಲ್ಲಿ ಬೆಂಗಳೂರು ಕೆಂಪೇಗೌಡನಿಗೆ **'ಅಮರನಾಯಕ'** ಪಟ್ಟಕೊಟ್ಟ ಸಂಗತಿಯು ಈ ಶಾಸನದಿಂದ ತಿಳಿಯುತ್ತದೆ. ಈ ಶಾಸನದ ಪ್ರಕಾರ ಕೆಂಪೇಗೌಡನನ್ನು 'ಕೆಂಪದೇವರಸಗೌಡ' ಎಂದು ಕರೆದಿರುವುದು ತಿಳಿದು ಬರುತ್ತದೆ. ಕೆಂಪೇಗೌಡರಿಗೆ ಸಾಮಂತ ಅರಸರ ಪಟ್ಟ ಲಭಿಸಿರುವುದು ಗಮನಾರ್ಹ ಸಂಗತಿಯಾಗಿದೆ.

ನಾಡಪ್ರಭು ಕೆಂಪೇಗೌಡ ಹಾಗೂ ಅಚ್ಯುತರಾಯನ ನಡುವೆ ಇದ್ದ ಸಂಬಂಧವನ್ನು ನೋಡುವುದಾದರೆ ಕೆಂಪೇಗೌಡನು ತನ್ನ ನಾಯಕ ಅಚ್ಯುತರಾಯನಿಗೆ ಒಳ್ಳೆಯದಾಗಲಿ ಎಂಬ ಉದ್ದೇಶದಿಂದ ಶಿವನ ಸಮುದ್ರ (ಇಂದಿನ ಹೆಸರು ಘಟ್ಟ) ಸೀಮೆಯೊಳಗಿನ "ಚೊಕ್ಕನಹಳ್ಳಿ" ಎಂಬ ಗ್ರಾಮವನ್ನು ಭೈರವನ(ಈಗ ಚೌಡೇಶ್ವರ ದೇವಾಲಯವಾಗಿದೆ) ದೇವಾಲಯದ ಅಂಗಭೋಗ, ರಂಗಭೋಗಕ್ಕೆಂದು ದಾನವಾಗಿ ನೀಡಿದ ಬಗ್ಗೆ ಈ ಶಾಸನದಲ್ಲಿದೆ.

E.C.IX ಮಾಗಡಿ 35, ಸಾತನೂರು ಹೋಬಳಿ ಪುಟ–113, ಮುಮ್ಮಡಿ ಕೆಂಪೇಗೌಡರ ಅಳಲಕುಪ್ಪೆ ಶಿಲಾಶಾಸನ. ಭಾಷೆ–ಕನ್ನಡ, ಕ್ರಿ.ಶ.1658ರ ಶಾಸನ.

ಯಲಹಂಕ ನಾಡಪ್ರಭು ಹಿರಿಯ ಕೆಂಪೇಗೌಡರ ಮೊಮ್ಮಗ ಇಮ್ಮಡಿ ಕೆಂಪೇಗೌಡರ ಮಗ ಮುಮ್ಮಡಿ ಕೆಂಪೇಗೌಡರು ಕಾಶಿಯಲ್ಲಿ ಒಂದು ಮಠವನ್ನು ಕಟ್ಟಿಸಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಕಾಶಿಯ ಮಠಕ್ಕೆ "ಅಳಲು ಕುಪ್ಪೆ" ಎಂಬ ಗ್ರಾಮವನ್ನು ದಾನವಾಗಿ ಕೊಟ್ಟವೆಂದು ಈ ಶಾಸನವು ತಿಳಿಸುತ್ತದೆ.

E.C.IX ಅನುಬಂಧ ಸಂ.ಬೆಂ.170, ಪುಟ–26

ವಿ.ಸೂ:– ಈ ಶಾಸನದ ವಿಶೇಷವೆಂದರೆ ರಾಜ ಮಹಾರಾಜರು ಬ್ರಾಹ್ಮಣರಿಗೆ ಧಾನ ಕೊಟ್ಟ ಶಾಸನಗಳು ಸರ್ವೇ ಸಾಮಾನ್ಯ ಆದರೆ ಈ ಶಾಸನದಲ್ಲಿ ಒಬ್ಬ ಮಡಿವಾಳ (ಅಗಸ)ನಿಗೆ ಕೊಡುಗೆ ನೀಡಿದ ಬಗ್ಗೆ ತಿಳಿಸುತ್ತದೆ.

ಕೆಂಪೇಗೌಡರ ಶಿವಗಂಗೆಯ ಘಂಟೆ ಶಾಸನ

ಶಿವಗಂಗೆಯ ಗಂಗಾಧರೇಶ್ವರ ದೇವಾಲಯದಲ್ಲಿರುವ ಕಂಚಿನ ಘಂಟೆಯ ಮೇಲಿರುವ ಶಾಸನ ಶಾಲೀವಾಹನ ಶಕವರ್ಷ 1510 ಎಂದಿದೆ ಅಂದರೆ 1588 ಮಾರ್ಚಿ 28ಕ್ಕೆ ಸರಿಹೊಂದುತ್ತದೆ.

ಯಲಹಂಕನಾಡು ಕೆಂಪನಂಜೇಗೌಡರ ಮಗ ಕೆಂಪೇಗೌಡನು ತನಗೆ ಪುತ್ರ ಪೌತ್ರ ಪರಂಪರೆಯಾಗಿ ಅಭಿವೃದ್ಧಿಯಾಗಲಿ ಎಂದು ಹಾಗೂ ತಮ್ಮ ಮಾತಾಪಿತೃಗಳಿಗೆ ಮೋಕ್ಷ ಲಭಿಸಲಿ ಎಂದು ದಕ್ಷಿಣ ವಾರಣಾಸಿಯೆಂದೇ ಪ್ರಸಿದ್ಧವಾದ ಶಿವಗಂಗೆಯ ಗಂಗಾಧರೇಶ್ವರ ಸ್ವಾಮಿಗೆ ಒಂದು ದೊಡ್ಡ ಘಂಟೆಯನ್ನು ಸಮರ್ಪಿಸಿದ ಬಗ್ಗೆ ತಿಳಿಸುತ್ತದೆ. (ಘಂಟೆಯು ಸುಮಾರು 800 ಕೆ.ಜಿ. ತೂಗುತ್ತದೆ)

E.C.IX ನೆಲಮಂಗಲ 52, ಬೇಗೂರು ಹೋಬಳಿ, ತ್ಯಾಮಗೊಂಡ್ಲು, ಪುಟ–73

ಕೆಂಪರಾಯನಿಗೆ (ನಾಡಪ್ರಭು ಕೆಂಪೇಗೌಡ) ಧರ್ಮವಾಗಲಿ ಎಂದು ಕಾಳಿನಾಯಕನು ತೇಮಗೊಡ್ಲ (ಇಂದಿನ ತ್ಯಾಮಗೊಂಡ್ಲು) ಚೆಲುವ ವೆಂಕಟೇಶ್ವರ ದೇವಾಲಯದ ವೈಭೋಗಕೆಂದು 71ಗಟ್ಟಿ ವರಹವನ್ನು ದಾನವಾಗಿ ಕೊಟ್ಟ ಬಗ್ಗೆ ಶಾಸನ ತಿಳಿಸುತ್ತದೆ.

E.C.IX (ಅನುಬಂಧ ಸಂಪುಟ) ನೆಲಮಂಗಲ, 107 ಶಿವಗಂಗೆ, ಪುಟ–119.

ಕೆಂಪನಾಚಯಗೌಡ (ಕೆಂಪನಂಜೇಗೌಡ) ಪುತ್ರನಾದ ಕೆಂಪೇಗೌಡ (ಬೆಂಗಳೂರು ಕೆಂಪೇಗೌಡನು ಗಂಗಾಧರ ಸ್ವಾಮಿಯ ಪಾದಕ್ಕೆ ಸದಾ ನಮಸ್ಕಾರ

ಮಾಡುತ್ತಾನೆ ಎಂಬ ವಿವರಣೆ ಇದೆ. ಅಂದರೆ 1608ರ ಕಾಲಘಟ್ಟದಲ್ಲಿ ಹಿರಿಯ ಕೆಂಪೇಗೌಡ (ಬೆಂಗಳೂರು ಕೆಂಪೇಗೌಡ) ಬದುಕಿದ್ದನೆಂದು ಸ್ಪಷ್ಟವಾಗಿ ತಿಳಿಯುತ್ತದೆ.

E.C.XII ತುಮಕೂರು ಜಿಲ್ಲೆ–29, ಕುಣಿಗಲ್. 29 ಹುಲಿಯೂರು ದುರ್ಗ ಹೋಬಳಿ, ಪುಟ–95.

ಯಲಹಂಕ ನಾಡಪ್ರಭು ಹಿರಿಯ ಕೆಂಪೇಗೌಡರ ಉಪಪತ್ನಿ ಪಟ್ಟದ ನಾಟಕ ಶಾಲೆಯ ಶೃಂಗಾರಮ್ಮ ಎಂಬುವವಳು ಶೃಂಗಾರಸಾಗರ ಎಂಬ ಅಗ್ರಹಾರವನ್ನು ನಿರ್ಮಿಸಿದ ಬಗ್ಗೆ ಈ ಶಾಸನವು ತಿಳಿಸುತ್ತದೆ.

E.C.XII ಕುಣಿಗಲ್ 12, ಕೃಷ್ಣಸಾಗರ ಪುಟ–90.

ಕನ್ನಡ ಭಾಷೆಯಲ್ಲಿರುವ 1599ರ ಕಾಲದಲ್ಲಿ ರಚನೆಯಾದ ಶಾಸನ. ಇಮ್ಮಡಿ ಕೆಂಪೇಗೌಡ(ಮಾಗಡಿ ಕೆಂಪೇಗೌಡ)ರ ಪಟ್ಟದರಸಿಯಾದ ವೆಂಕಟಕೃಷ್ಣಾಜಮ್ಮ ಎಂಬುವವರು ಕುಣಿಗಲ್‌ಗೆ ಪಶ್ಚಿಮ ದಿಕ್ಕಿನಲ್ಲಿದ್ದ ವೆಂಕಟಕೃಷ್ಣಸಾಗರ ಗ್ರಾಮವನ್ನು ಅಗ್ರಹಾರವನ್ನಾಗಿಸಿ 30 ಖಂಡುಗ ಬೀಜವರಿ ಗದ್ದೆಯನ್ನು 19 ವೃತ್ತಿಯನ್ನಾಗಿ ಮಾಡಿ ತಮ್ಮ ಮಾವನವರಾದ ಇಮ್ಮಡಿ ಕೆಂಪೇಗೌಡರಿಗೂ ಹಾಗೂ ಅತ್ತೆಯವ–ರಾದ ಲಿಂಗಾಜಮ್ಮನವರಿಗೂ ಪುಣ್ಯವಾಗಲಿ ಎಂದು ಬ್ರಾಹ್ಮಣರಿಗೆ ದಾನವಾಗಿಕೊಟ್ಟ ವಿವರಗಳಿವೆ. ಶಾಸನದ ಕಡೆಯ ಭಾಗದಲ್ಲಿ ದಾನವನ್ನು ಪಡೆದ ಬ್ರಾಹ್ಮಣರ ವಿವರಗಳಿವೆ.

ವಿ.ಸೂ:– ಬಹುಷಃ ತಮ್ಮ ಅತ್ತೆ ಮತ್ತು ಮಾವನವರಿಗೆ ಒಳ್ಳೆಯವನ್ನು ಬಯಸಿ ದಾನ ಮಾಡಿದ ಅಪರೂಪದ ದಾನ ಶಾಸನ ಇದಾಗಿದೆ.

E.C.IX (ಅನುಬಂಧ ಸಂಪುಟ) ನೆಲಮಂಗಲ, 111 ಪುಟ–120

ನಾಡಪ್ರಭು ಕೆಂಪೇಗೌಡರ ವಂಶಸ್ಥರಾದ ಜಟ್ಟನಹಳ್ಳಿಯ ಗಿರಿಯಪ್ಪಗೌಡರ ಮಗ ಚಿಕ್ಕ ಹೊನ್ನೇಗೌಡರ ಪತ್ನಿ ಅಣ್ಣಾಜಮ್ಮನು ಶಿವಗಂಗೆಯ ಗಂಗಾಧರೇಶ್ವರನಿಗೆ ಒಂದು ಘಂಟೆಯನ್ನು ಮಾಡಿಸಿ ಸಮರ್ಪಿಸಿದಳು ಎಂದು ಈ ಶಾಸನವು ತಿಳಿಸುತ್ತದೆ.

E.C.IX ಬೆಂಗಳೂರು–1 ಪುಟ–1, 1628 ಫೆಬ್ರವರಿ 7, ಭಾಷೆ–ತೆಲಗು.

ತೆಲಗು ಭಾಷೆಯಲ್ಲಿರುವ ಈ ಮೇಲ್ಕಂಡ ಶಾಸನವು ಬೆಂಗಳೂರು ಕೆಂಪೇಗೌಡನ ಪುತ್ರ ಇಮ್ಮಡಿ ಕೆಂಪೇಗೌಡ (ಮಾಗಡಿ ಕೆಂಪೇಗೌಡ)ನಿಗೆ ಸಂಬಂಧಿಸಿದ್ದು. 1628 (17ನೇ ಶತಮಾನ) ಆ ವೇಳೆಗಾಗಲೆ ಬೆಂಗಳೂರು ಪಟ್ಟಣವು ದಕ್ಷಿಣ ಭಾರತದಲ್ಲಿ ಹೆಸರು ವಾಸಿಯಾಗಿತ್ತು. ದಕ್ಷಿಣ ಭಾರತದ ಹೆಸರಾಂತ ವರ್ತಕ ಸಂಘವಾಗಿದ್ದ "ಅಯ್ಯಹೊಳೆ ಅಯ್ಯನೂರ್‌ವರ್" ಸಂಘವು ಬೆಂಗಳೂರಿನೊಡನೆ ಸಂಬಂಧವನ್ನು ಹೊಂದಿತ್ತೆಂದು ತಿಳಿದುಬರುತ್ತದೆ. ಈ ವರ್ತಕದಲ್ಲಿ ಇಂದಿನ ಆಂಧ್ರದ

ಪೆನುಗೊಂಡ, ತಾಡಪತ್ರಿ, ಚಂದ್ರಗಿರಿ, ರಾಯಕೋಟೆ, ತಮಿಳುನಾಡಿನ ಕಾವೇರಿ ಪಟ್ಟಣ, ಕೊಯಮತ್ತೂರು, ಸೇಲಂ, ಮದುರೈ ಇವೇ ಮುಂತಾದ ಊರುಗಳ ವರ್ತಕರು ಬೆಂಗಳೂರಿನೊಡನೆ ವಾಣಿಜ್ಯ ಸಂಬಂಧವನ್ನು ಹೊಂದಿದ್ದ ಬಗ್ಗೆ ಈ ಶಾಸನವು ತಿಳಿಸುತ್ತದೆ.

E.C.IX ಮಾಗಡಿ 108, ಕೆಂಪನಂಜೇಗೌಡ ಕಲ್ಯ ಶಿಲಾಶಾಸನ. ಕ್ರಿ.ಶ.1512ರ ಶಾಸನ

ವಿಜಯನಗರದ ಸಾಮ್ರಾಟ ಶ್ರೀ ಕೃಷ್ಣದೇವರಾಯನ ಆಳ್ವಿಕೆ ಕಾಲ ಯಲಹಂಕ ನಾಡಿನ ಪ್ರಭು ಅಮರನಾಯಕ ಕೆಂಪನಂಜೇಗೌಡರು ಕಲ್ಯದ ಕಲಿನಾಥ ದೇವರ ಅಂಗಭೋಗ, ರಂಗಭೋಗಕ್ಕೆಂದು ಮಾನ್ಯವಾಗಿ ಹೊಲಗದ್ದೆಗಳನ್ನು ದಾನವಾಗಿ ಕೊಟ್ಟ ವಿವರವಿದೆ.

ಬೆಂಗಳೂರು ನಿರ್ಮಾಪಕ ಕೆಂಪೇಗೌಡರ ತಂದೆ ಕೆಂಪನಂಜೇಗೌಡರಿಗೆ ಕೃಷ್ಣದೇವರಾಯನು "ಅಮರನಾಯಕ" ಎಂಬ ಬಿರುದನ್ನು ನೀಡಿದ್ದನೆಂತಲೂ ಯಲಹಂಕನಾಡನ್ನು ಅಭಿವೃದ್ಧಿ ಪಡಿಸಿ ಆಳ್ವಿಕೆ ಮಾಡುತ್ತಿದ್ದನೆಂಬ ಮಹತ್ವದ ಐತಿಹಾಸಿಕ ಸಂಗಾತಿ ಈ ಶಾಸನದಿಂದ ತಿಳಿದುಬರುತ್ತದೆ. ದಕ್ಷಿಣ ಭಾರತದ ಅಧೀನ ಅರಸರಿಗೆ ನೀಡುತ್ತಿದ್ದ ಅತ್ಯಂತ ಹೆಚ್ಚಿನ ಗೌರವ ಸೂಚಕ ಬಿರುದು ಹಾಗೂ ಸ್ಥಾನಮಾನವೆಂದು ಹೇಳಬಹುದು.

(ವಿ.ಸೂ.:– ಕೆಂಪನಂಜೇಗೌಡರಿಗೆ ಅಮರನಾಯಕ ಬಿರುದು ಹಾಗೂ ಸ್ಥಾನಮಾನ ನೀಡುತ್ತಿರುವ ಉಬ್ಬು ಶಿಲ್ಪವನ್ನು ಹಂಪೆಯ ಮಹಾನವಭ ದಿಬ್ಬದ ಬಿತ್ತಿಯಲ್ಲಿ ಕಾಣಬಹುದು)

ಹೊಯ್ಸಳ ವೀರಬಲ್ಲಾಳನ ಆಳ್ವಿಕೆಯಲ್ಲಿ ಎರಡನೆ ಬಲ್ಲಾಳನು 'ಬೆಳವಲ' ವನ್ನು ಗೆದ್ದಾಗ ದಂಡನಾಯಕ ಬಿಟ್ಟಿಮಯನ ನೇತೃತ್ವದಲ್ಲಿ ಮಾಂಡಳಿಕರಾದ ಹೆಣರದ ಬೂತಗೌಡ, ಬೆನಗನಹಳ್ಳಿಯ ಹರದಗೌಡ, ಒರಿಕೋಡಿನ ಸೆಟ್ಟಿಗೌಂಡ, ಓಜಮಂಗಲದ ಬೊಪ್ಪಗೌಂಡ, ಮೈಸೂರ ಹೊಯ್ಸಳಗೌಂಡ........ ಇನ್ನು ಮೊದಲಾದ 'ಗೌಡಪ್ರಭು'ಗಳನ್ನು ಸತ್ಕರಿಸಿದ ಹಾಗೂ ಬಳುವಳಿ ನೀಡಿದ ಬಗ್ಗೆ ಶಾಸನ ಉಲ್ಲೇಖಿಸುತ್ತದೆ. (ಈ ಶಾಸನದಲ್ಲಿ ಗೌಡ ಪ್ರಭುಗಳು ಎಂದು ಉಲ್ಲೇಖಿಸಿದೆ).

EC Vol-VI -74 (111 ಶ್ರೀ.ಪ. 144) ಮೈಸೂರು ಜಿಲ್ಲೆ ಶ್ರೀರಂಗಪಟ್ಟಣದ ಈ ಶಾಸನದಲ್ಲಿ ನಾಡಿನ ಗೌಡರು ಮಾಡಿದ ಸೇವೆಗೆ ರಾಮೇಗೌಡ, ನಂಬುವಗೌಡ, ಮಾದೇಗೌಡ ಇವರುಗಳನ್ನು ಗೌಡುಡ ಕುಲತಿಲಕರಂ (ಗೌಡ ಕುಲತಿಲಕರು) ಎಂದಿದೆ.

EC Vol-VI KRP.66 (New Ed) 1977 ಮೈಸೂರು ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಈ ಶಾಸನವು ಗಾವುಂಡನೊಬ್ಬನ ಶೌರ್ಯವನ್ನು ಈ ರೀತಿ ವರ್ಣಿಸಿದೆ.

"ಮಾರಗೊಂಡನ ಪುತ್ರ ಪಯಿತ್ರ ಗೋತ್ರ ಚಿಂತಾಮಣಿ
ನೆರೆಯದ ಗಂಡಂ ಎರಿದುಂ ಕಾಯಿದುರದೆ ಹೊರಗೆ
ಹಳಿವರ ಗಂಡಂ ಮನ್ನೆಯ ಬೇಂಟೆಕಾರ ಚಲಕ್ಕೆ ಬಲುವಡೆ
ವೀರ ಕೈವಿಳಪವನೆ ಗುಡ್ಡಂ ರಣರಂಗ ಧೀರ" ಎಂದಿದೆ.

ಸಾಮಾಜಿಕ ಮತ್ತು ಧಾರ್ಮಿಕ ಕೆಲಸ ಕಾರ್ಯಗಳಲ್ಲಿ

ಸಮಾಜಕ್ಕೆ ಕಷ್ಟ–ನಷ್ಟ ಉಂಟಾದಾಗ ತಮ್ಮ ತನು–ಮನ–ಧನವನ್ನರ್ಪಿಸಿದ ಹಲವಾರು ಉದಾಹರಣೆಗಳಿವೆ. ಒಕ್ಕಲಿಗರು ಯಾವುದೇ ಒಂದು ದೇವರನ್ನು ಒಂದು ಪಂಗಡವನ್ನು ಪೋಷಿಸುತ್ತಾ ಬಂದಿಲ್ಲ. ಒಕ್ಕಲಿಗರು ನಿಜವಾಗಲು ಅನ್ಯಮತ ಸಹಿಷ್ಣುಗಳು ಜಾತ್ಯಾತೀತವಾದಿಗಳು ಎಂದರೆ ತಪ್ಪಾಗಲಾರದು. ಒಕ್ಕಲಿಗರ ಅತಿ ಹಿಂದಿನ ಇತಿಹಾಸವನ್ನು ಒಳಹೊಕ್ಕಿ ನೋಡಿದಾಗ ಜೈನಧರ್ಮ, ಬೌದ್ಧ ಧರ್ಮ, ವೀರಶೈವ ಮತ ಧರ್ಮಗಳನ್ನು ಪೋಷಿಸುತ್ತಾ ಬಂದಿರುವುದನ್ನು ನೋಡಬಹುದು. ಹಿಂದೂ ಧರ್ಮದಲ್ಲಿ ಶೈವ, ವೈಷ್ಣವ, ನಾಥ ಪಂಥಗಳನ್ನು ಮತಮಾನ್ಯಗಳನ್ನು ಪೋಷಿಸಿದ ಉದಾಹರಣೆ ಹೆಚ್ಚು.

EC Vol-VI (New) ಮೈಸೂರು ಜಿಲ್ಲೆ (ಮಂಡ್ಯ ಜಿಲ್ಲೆ) ಪಾಂಡವಪುರ

23 (IV ಕೃ.ಪೆ–25) ಕನ್ನಂಬಾಡಿ

ಪಾಂಡವಪುರ ತಾಲ್ಲೂಕು ಕನ್ನಂಬಾಡಿ ಊರಿನ ಜನ ಯಾವುದೋ ಒಂದು ರೀತಿಯ ಖಾಯಿಲೆಗೆ ತುತ್ತಾಗಿ ಅನೇಕ ಜನ ಅಸುನೀಗಿದಾಗ ಆ ರೋಗ ನಿವಾರಣೆಗೆ ಬೋಗೇಗೌಡನು ಗ್ರಾಮದ ಒಳಿತಿಗಾಗಿ ಮಹಾಲಕ್ಷ್ಮೀ, ಮಹಾಕಾಳಿ, ಸರಸ್ವತಿ ದೇವಾಲಯಗಳನ್ನು ಕಟ್ಟಿಸಿದ ಈತ **'ಗಂಗಡಿಕಾರ ಒಕ್ಕಲಿಗ'**ರವನು ಎಂದು ಉಲ್ಲೇಖಿಸಿದೆ.

.... ವಾಂತಿ ಭ್ರಾಂತಿ
ತಿಯಾಗಿ ಜನರು ಮೃತವಾಗುತ್ತ
ಯಿದ್ದಲ್ಲು ಈ ವುತ್ಪಾತ ರೋಗ ನಿ
ವತ್ಯರ್ಥವಾಗಿ ಕಣ್ವವು
ರೀಕ್ಷೇತ್ರದಲ್ಲಿ ಇದ್ದಂಥಾ ನಾಲ್ಕನೇ
ವರ್ನದಲ್ಲಿ ಗಂಗಡಿಕಾರಲ್ಲಿ ಜನಿ
ಸಿದ ಬೋಗಗಭಡನ ಪೌತ್ರನಾದ
ಮರಿನಂಜೇಗೌಡನ ಪೌತ್ರನಾದ

...

ವಿ.ಸೂ.: ಬಹುಷಃ ಡಾ॥ ಬಿ. ಷೆಕಾಲಿಯವರು ಪ್ರಸ್ತುತ ಗಂಗಡಿಕಾರ ಒಕ್ಕಲಿಗರೇ ಗಂಗರ ವಂಶಜರು ಎಂದು ಹೇಳಿದ ನೂರಾರು ವರ್ಷಗಳ ಮೊದಲೇ ಈ ಶಾಸನದಲ್ಲಿ ಉಲ್ಲೇಖಿಸಿರುವುದ ಒಂದು ವಿಶೇಷ.

EC Vol-VI ನಾಗಮಂಗಲ 119 (IV ನಾ.ಮ. 69)

ಈ ಶಾಸನದಲ್ಲಿ ಅಸವನಗೌಡ, ಚೌಡೇಗೌಡರಿಗೆ ಅವರು ಮಾಡಿದ ಸೇವೆಗೆ ಊರಿನ ಜನ ಕೊಡುಗೆಯಾಗಿ ನೀಡಿದ ಜಮೀನು ವಿವರ ಈ ಶಾಸನದಲ್ಲಿದೆ.

EC Vol-VI-52 (111 ಮ.ನ. 60) ಧನಗೂರು

ಮಂಡ್ಯ ಜಿಲ್ಲೆ ಧನಗೂರು ಈ ಊರಿನಲ್ಲಿ ದೇವಾಲಯ ನಿರ್ಮಾಣ, ಊರಿನ ಅಭಿವೃದ್ಧಿಗೆ ಮಾಡಿದ ಸಾರ್ವಜನಿಕ ಕೆಲಸಕ್ಕಾಗಿ ಭೂಮಿ ನೀಡಿದ ರಾಮಗ ಉಂಡನ (ರಾಮೇಗೌಡನ) ಮಗ ಸೋಮಕಗ ಉಂಡಂಗೆ (ಸೋಮೇಗೌಡನಿಗೆ) ಸಾರ್ವಜನಿಕ ಸತ್ಕಾರ ಮಾಡಿದ ಉದಾಹರಣೆಯನ್ನು ನೋಡಬಹುದು.

EC Vol-VI-64 (V– ಹಾ 96) ಬಲ್ಲೇನಹಳ್ಳಿ

ಹಲಗೇಗೌಡ ಕೊಂಡಜಿ ಮಲಿಯಣಗೌಡನ ಮಗ ಕರಿಯಣ್ಣನಿಗೆ ಗೌಡಿಕೆ ನೀಡಿದ ಬಗ್ಗೆ, ಈ ಗೌಡಿಕೆ ಎಂಬುದು ಪ್ರಮುಖವಾದುದು.

EC Vol-VI (New Ed) 66 (IV ಕೃ.ಪೇ. 68)

ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕು ಮಾಳಗೂರು ಕೆರೆ ಹಿಂದೆ ಈಶ್ವರ ದೇವಸ್ಥಾನಕ್ಕೆ ದಕ್ಷಿಣದಲ್ಲಿರುವ ಕಲ್ಲು. ಈ ಶಾಸನದಲ್ಲಿ ಹೊಯ್ಸಳ ವಿಷ್ಣು ವರ್ಧನನ ಪಟ್ಟದರಸಿ ಶಾಂತಲಾದೇವಿಯ ಮೈದುನನಾದ, ಬಲ್ಲನಾಯಕನು ಮಾಳಗೂರುವನ್ನು ಆಳುತ್ತಿದ್ದ ಕಾಲದಲ್ಲಿ ಊರಿನ ಮುಖಂಡನು ಒಬ್ಬ ಗೌರವಾನ್ವಿತ ಗೌಡನಾಗಿದ್ದ-ನೆಂದು ಶಾಸನವು ತಿಳಿಸುತ್ತದೆ.

ವೀರಗಲ್ಲುಗಳಲ್ಲಿ ಒಕ್ಕಲಿಗರು

ಈಗಾಗಲೇ ತಿಳಿಸಿರುವಂತೆ ಕೃಷಿಡಣಾಯಕ (Agro Martials) ರುಗಳಾದ ಒಕ್ಕಲಿಗರು ಶಾಂತಿ ಸಮಯದಲ್ಲಿ ಕೃಷಿಯನ್ನು ಹಾಗೂ ಯುದ್ಧದ ಸಮಯದಲ್ಲಿ ಸೈನಿಕರಾಗಿ ಸೇವೆ ಸಲ್ಲಿಸುತ್ತಿದ್ದರು. ಇಷ್ಟೇ ಅಲ್ಲದೆ ಶತೃಗಳು ಗೋಗ್ರಹಣ ಮಾಡಿದಾಗ ಇಲ್ಲವೆ ನಾಡಿಗೆ ಅತಿಕ್ರಮಣ ಪ್ರವೇಶಮಾಡಿದಾಗ ಅವರ ವಿರುದ್ದ ಸೆಣಸಿ ಶತ್ರುಗಳಿಂದ ತಮ್ಮ ಗೋವುಗಳನ್ನು ಮತ್ತು ತಮ್ಮ ನಾಡನ್ನು ಸಂರಕ್ಷಿಸುವ ಈ ಮಹತ್ಕಾರ್ಯದಲ್ಲಿ ಅಸುನೀಗಿದರೆ ಅಂತಹ ಹುತಾತ್ಮರಿಗೆ ನೆತ್ತರ ಕೊಡಿಗೆ, ಬಾಳ್ಗಚ್ಚು, ವೀರಸೇನೆ, ವೀರಕೊಡಿಗೆ, ವೀರದತ್ತಿ, ಡಿಂಗರಿಗ ವೃತ್ತಿ, ರಕ್ತ ಕೊಡಿಗೆ ಇವೇ ಮುಂತಾದ ಹೆಸರಿನಲ್ಲಿ

ಉಂಬಳಿ, ಕೊಡುಗೆ ಇಲ್ಲವೇ ಇನಾಮನ್ನು ನೀಡುತ್ತಿದ್ದರು.ಇದರ ಬಗ್ಗೆ ಶಾಸನೋಕ್ತ ಆಧಾರ ಈ ಕೆಳಕಂಡಂತಿದೆ.

1. E.C. VIII Sb. 176.

ಕ್ರಿ.ಶ. 1156ರ ಕುರುಗೋಡು ಶಾಸನದಲ್ಲಿ ಬಾವಗಾವುಂಡನೆಂಬುವನ ಮಕ್ಕಳಾದ ದೇವಗಾವುಂಡ ಮತ್ತು ಮಲ್ಲಗಾವುಂಡ ರೆಂಬುವರು ಶತೃಗಳಿಂದ ತಮ್ಮ ಊರಿನ ತುರುಗಳನ್ನು (ದನಕರುಗಳು) ರಕ್ಷಿಸಿ ವೀರ ಮರಣವನ್ನಪ್ಪಿದ ನೆನಪಿಗಾಗಿ ಸೋದರ ಬೊಮ್ಮಗಾವುಂಡನು ವೀರಗಲ್ಲನ್ನು ನೆಡಿಸಿದನು.

2. E.C. V Bi. 307.

ಹೊಯ್ಸಳ ವೀರ ಬಲ್ಲಾಳನ ದಂಡನಾಯಕನಾದ ಲಕ್ಷ್ಮೀಧರನು ನಾಡಿಗೆ ಶತೃಭಾದೆಯುಂಟಾದಾಗ ಬಲ್ಲಗವುಡನು ಹೋರಾಡಿ ಮಡಿದ ನೆನಪಿಗಾಗಿ ವೀರಗಲ್ಲನ್ನು ನೆಟ್ಟು ಆತನ ಕುಟುಂಬಕ್ಕೆ ನೆತ್ತರಕೊಡುಗೆ ನೀಡಿದುದಾಗಿ ವಿವರಣೆ ಇದೆ.

3. E.C. VI Tk.14.

ಕೆಂಕೆರೆಯ ತುರುಗಳನ್ನು ಪರಊರಿನ ಕಳ್ಳರು ಕದ್ದೊಯ್ಯುತ್ತಿರುವುದನ್ನು ಕಂಡ ಜನ ಕಾಳಗಕ್ಕಿಳಿದರು ಇವರಲ್ಲಿ ಚಲಗವುಡ (ಚಲುವಗೌಡ) ಎಂಬುವವನು ಹೋರಾಡಿ ಮಡಿದ ನೆನಪಿಗಾಗಿ ವೀರಗಲ್ಲನ್ನು ನೆಟ್ಟು ಆತನಿಗೆ ಜಮೀನನ್ನು ಉಂಬಳಿಯಾಗಿ ನೀಡಿದ್ದಾರೆ.

4. E.C. VII Sk. 83.

ಕ್ರಿ.ಶ. 1058ರಲ್ಲಿ ಸೆಟ್ಟಿಗಾವುಂಡನು ಗೌಡತನ ಮಾಡುತ್ತಿರುವ ಸಂದರ್ಭದಲ್ಲಿ ಜಗದೇವರಸನೆಂಬ ಶತೃವು ತುರುಗಳನ್ನು ಕದಿಯಲು ಬಂದಾಗ ಆತನ ವಿರುದ್ದ ಹೋರಾಡಿ ಮಡಿದ ಸೆಟ್ಟಿಗಾವುಂಡನ ಆತ್ಮಕ್ಕೆ ಶಾಂತಿಸಿಗಲೆಂದು ಆತನಿಗೆ ವೀರಗಲ್ಲನ್ನು ನೆಟ್ಟು ವೀರದತ್ತಿ ನಿಡಿದ ಬಗ್ಗೆ ವಿವರಣೆ ಇದೆ.

5. E.C. VI Cm. 157.

ಕ್ರಿ.ಶ. 1195ರಲ್ಲಿ ಚಿಕ್ಕಮಗಳೂರಿನ ಶಾಸನ ಒಂದರಲ್ಲಿ ಊರಿನ ಧೈರ್ಯಶಾಲಿ ವ್ಯಕ್ತಿಯಾದ ಜಕಗೌಡನೆಂಬುವವನು ತುರುಗಳ್ಳರೊಡನೆ ಹೋರಡಿ ಮಡಿದನು.ಆ ಊರಿನ ಮಹಾ ಜನಗಳು ಆತನಿಗೆ ಕೊಡೆ, ಕುದುರೆ, ಕತ್ತಿ ಸೇರಿದಂತೆ ವೀರರಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸಿ ವೀರಗಲ್ಲನ್ನು ನೆಟ್ಟಿರುತ್ತಾರೆ.

6. M.A.R. 1927, 23.

ಹಾಸನ ಜಿಲ್ಲೆಯ ದೊಡ್ಡಗದ್ದವಳ್ಳಿ ಎಂಬಲ್ಲಿ ಮಾಚಗೌಡ ನೆಂಬುವನು

ಹೊಯ್ಸಳ ಬಲ್ಲಾಳ ಹಾಗೂ ಆತನ ಮಗ ಎರೆಯಂಗ ಸೇರಿದಂತೆ ಊರಿನ ಮಹಾಜನಗಳು ವೀರ ಯೋಧ ಮಾಚಗೌಡನ ನೆನಪಿಗಾಗಿ ವೀರಗಲ್ಲನ್ನು ನೆಟ್ಟು ಆತನ ಕುಟುಂಬಕ್ಕೆ "ವೀರದತ್ತಿ"ಯನ್ನು ಬಿಟ್ಟ ಬಗ್ಗೆ ತಿಳಿಸುತ್ತದೆ.

7. E.C. IX Hk. 11.

ಕ್ರಿ.ಶ. 1041ರ ಹೆಗ್ಗಡದೇವನ ಕೋಟೆಯ "ಸರಸನುರು" ಎಂಬ ಗ್ರಾಮದ ತುರುಗಳನ್ನು ಕಳ್ಳರು ಅಪಹರಿಸಿದಾಗ ಊರಿನ ಧೈರ್ಯಶಾಲಿ ವ್ಯಕ್ತಿಯಾದ "ಮಾಚಿಗಾವುಂಡ" ಹಾಗೂ ಆತನ ವೀರ ಪುತ್ರಿ ಲಕ್ಷ್ಮಮ್ಮಗಾವುಣ್ಡೀಯು ಹೋರಾಡಿ ಮಡಿದುದರ ನೆನಪಿಗಾಗಿ ವೀರಗಲ್ಲನ್ನು ನೆಟ್ಟು ಕೊಡುಗೆಯನ್ನು ನೀಡಿದ ಬಗ್ಗೆ ತಿಳಿಸುತ್ತದೆ.

8. E.C. IX Ht. 150, 1618 A.D.

ಸುಗಟೂರಿನ ಇಮ್ಮಡಿ ಚಿಕ್ಕರಾಯ ತಮ್ಮೇಗೌಡನಿಗೆ ಕಾಳಾಯುಕ್ತ ಸಂವತ್ಸರದಲ್ಲಿ ಅಗ್ರಹಾರದ ಮಹಾಜನಗಳು ಸೇರಿ ನೀಡಿದ ರಕ್ತಕೊಡಿಗಿ.ಇದು ಚಿಕ್ಕರಯ ತಮ್ಮೇಗೌಡನ ಶೌರ್ಯ ಮತ್ತು ಧೈರ್ಯವಾಗಿ ಶತೃಗಳ ವಿರುದ್ದ ಹೋರಾಡಿದುದರಿಂದ ರಕ್ತಕೊಡಿಗೆ ನೀಡಿದುದರ ಬಗ್ಗೆ ತಿಳಿಸುತ್ತದೆ.

9. E.C. VII Cl. 65. 1100 A.D.

ಈ ಮೇಲ್ಕಂಡ ಶಾಸನವು ನಾಗಯಗೌವುಂಡನು ತುರುಗಳ್ಳರ ವಿರುದ್ದ ಹೋರಾಡಿ ಮಡಿದುದರ ನೆನಪಿಗಾಗಿ ನೀಡಿದ ರಕ್ತಕೊಡುಗೆಯನ್ನು ತಿಳಿಸುತ್ತದೆ.

10. M.A.R. 1927. 23-12c A.D.

ಮಾಚಗೌಡ ನೆಂಬುವವನು ಊರಿಗೆ ಲೂಟಿಕೋರರು ಮುತ್ತಿಗೆ ಹಾಕಿದಾಗ ಅವರ ವಿರುದ್ದ ಹೋರಾಡಿ ಮಡಿದನು. ಹೊಯ್ಸಳ ದೊರೆ ಬಲ್ಲಾಳ ಹಾಗೂ ಆತನ ಮಗ ಎರೆಯಣ್ಣನು ಸೇರಿದಂತೆ ಊರಿನ ಮಹಾ ಜನಗಳು ಮಾಚಗೌಡನ ಮಕ್ಕಳಿಗೆ ವೀರದತ್ತಿಯನ್ನು ಬಿಡುತ್ತಾರೆ. ಇದನ್ನು "ವೀರಸೇನೆ" ಎಂದು ಕರೆದಿದ್ದಾರೆ.

11. E.C. V.Bi.92, 1152 A.D.

ತುರುಗಳ್ಳರು ಕುಪ್ಪಟೂರಿನ ತುರುಗಳನ್ನು ಸೆರೆಹಿಡಿದು ತಮ್ಮ ಊರಿಗೆ ಸಾಗಿಸುತ್ತಿರುವುದನ್ನು ಕಂಡ ಗ್ರಾಮಸ್ಥರು ಧೈರ್ಯಶಾಲಿಯಾದ ಹತಗವುಡ ಎಂಬುವವನನ್ನು ರಕ್ಷಿಸು ಎಂದು ಕೇಳಿಕೊಳ್ಳಲಾಗಿ ಆತ ಶತೃಗಳನ್ನು ಸೋಲಿಸಿ ಹಿಂದಕ್ಕಟ್ಟಿದ ಆಗ ಈ ಕಾಳಗದಲ್ಲಿ ಹತನಾದನು.ಆತನ ನೆನಪಿಗಾಗಿ ಅಲ್ಲಿ ವೀರಗಲ್ಲನ್ನು ನೆಡಿಸಿದರು.

12. E.C. VI Cm. 158, 157, 1195 A.D.

ಊರಿನ ಹುಲ್ಲುಗಾವಲಿನಲ್ಲಿ ಮೇಯುತ್ತಿದ್ದ ದನ-ಕರುಗಳನ್ನು ಕಳ್ಳರು ಅಪಹರಿಸುತ್ತಿರುವುದನ್ನು ಕಂಡು ಮರಿಯಗಾವುಂಡ ಮತ್ತು ಮಾದಿಗೌಡರೆಂಬ ಸಹೋದರರು ಕಳ್ಳರ ವಿರುದ್ದ ಹೋರಾಡಿ ಮಡಿದರು.ಅವರ ಸ್ಮರಣೆಗಾಗಿ ಅಲ್ಲಿ ವೀರಗಲ್ಲನ್ನು ನೆಡಿಸಿದರು.ಎಂದು ಶಾಸನವು ತಿಳಿಸುತ್ತದೆ.

ಗಂಗ ಮಹಾರಾಜ ಶ್ರೀ ಪುರುಷನ ಹಲ್ಕೂರು ಶಾಸನ

1. E.C. Tumkur (Supl.) ಶಿರ 123.

ಗಂಗರ ಶ್ರೀ ಪುರುಷನು ಪಲ್ಲವರನ್ನು ಹಾಗೂ ರಾಷ್ಟ್ರಕೂಟರ ಒಂದನೇ ಕೃಷ್ಣನೊಡನೆ ಅನೇಕ ಸಂಗ್ರಾಮಗಳನ್ನು ನಡೆಸಿದನು.ರಾಷ್ಟ್ರಕೂಟರನ್ನು ಕಂಪ್ಲಿಯವರೆಗೆ ಅಟ್ಟಿದನು ಎಂದು ಶಾಸನವು ತಿಳಿಸುತ್ತದೆ.

2. E.C. XII ಪಾವಗಡ 74. ಕಾಲ ಕ್ರಿ.ಶ. 1354

ಬುಕ್ಕರಾಯನು ಕುಂದರ್ಪಿ ರಾಜ್ಯದಲ್ಲಿ ಅಚ್ಯುತ ಭದ್ರಂ ಪಲ್ಲೆಯ ಗೌಡಿಕೆಯನ್ನು ಆ ಗ್ರಾಮದ ಕುಂಚಕಾಪು ಲಿಂಗನಗೌಡನಿಗೆ ಗೌಡಿಕೆಯನ್ನು ನೀಡಿದ ಬಗ್ಗೆ ತಿಳಿಸುತ್ತದೆ.

3. E.C. XII (ಪಾವಗಡ) 38

ನಿಡಗಲ್ಲು ಪಾಳೆಯಗಾರನು ತಿಮ್ಮಣ್ಣನಾಯಕರು ಅರಸೀಕೆರೆಯ ಆಗಿನವರ ಸೆಟೆಗೊಂಡಗೌಡನಿಗೆ ಅರಸಿಕೆರೆಯ ಗೌಡಿಕೆಯನ್ನು ಕೊಟ್ಟ ಬಗ್ಗೆ ಇದೆ.ಕೆರೆಯ ಹಿಂದಿನ ತರಿಜಮೀನಾಗಿದ್ದು ತೆರಿಗೆ ಮುಕ್ತವಾಗಿ ಅನುಭವಿಸಲು ಅವಕಾಶ ನೀಡಲಾಗಿತ್ತು.

4. E.C. XII ಶಿರಾ ಕಾಲ ಕ್ರಿ.ಶ. 1536

ವಿಜಯ ನಗರದ ಅಚ್ಯುತದೇವರಾಯನ ಕಾಲ. ಊರ ಕೆರೆಯು ಒಡೆದುಹೋಗಲಾಗಿ ಆ ಊರಿನ ಕುಂಚಟಿಗರೆಲ್ಲ ಸೇರಿ ಅದನ್ನು ದುರಸ್ತಿಮಾಡಿ ಕೆರೆಯ ಏರಿಯ ಮೇಲೆ ಹನುಮಂತನ ದೇವಸ್ಥಾನವನ್ನು ಕಟ್ಟಿಸಿದ ಬಗ್ಗೆ.

5. E.C. 7 Myn. Doddagarudanahalli A.D. 1275

ಸಂತೆಯಕರದ ಮಂಚಗೌಡನ ಪುತ್ರ ಬಯಲು ಮಾರ್ತಾಂಡ ರಣರಂಗಕೇಸರಿ ಬಿರುದಾಂಕಿತ ಚೋಳಗೌಂಡನು ಭೈರಕಂಬೆಯ ಕಾಡು ವಿಟ್ಟಿಯನ್ನು ಗೆದ್ದು ವೈರಿಸಂಹಾರ ಮಾಡಿದನು.ಎಂದು ಈ ಶಾಸನವು ಉಲ್ಲೇಖಿಸುತ್ತದೆ.

6. E.C. VI Pandavapura 20 Malavanahalli. A.D. 1176

ಚಾಕಗಾವುಂಡನ ಮಗ ಹರದಗಾವುಂಡನು ಊರ ತೆಂಕಣ ಭಾಗದಲ್ಲಿ ಹರದ ಸಮುದ್ರವೆಂಬ ಕೆರೆಯನ್ನು, ಹಾಗೂ ಹರದೇಶ್ವರ ದೇವಾಲಯವನ್ನು ನಿರ್ಮಿಸಿ ಅದರ ನಿರ್ವಹಣೆಗಾಗಿ ಗದ್ದೆ-ಬಯಲನ್ನು ದತ್ತಿಗೆ ಬಿಡುತ್ತಾನೆ.

7. E.C. VII Myn. Pandavapura (pp) Kottati. A.D. 1178

ಕೊರಕಗೌಡ, ಕಾಳಗೌಡ ಎಂಬ ಸಹೋದರರು ಕೆರೆಯನ್ನು ಕಟ್ಟಿಸಿ ಮಲ್ಲೇಶ್ವರ ದೇವಾಲಯವನ್ನು ಕಟ್ಟಿಸಿ ದೇವಾಲಯದ ನಿರ್ವಹಣೆಗೆ ಗದ್ದೆಯನ್ನು ದತ್ತಿಗೆ ಬಿಟ್ಟ ಬಗ್ಗೆ.

8. E.C. VII Myn. – 25 Doddagarudanahalli. A.D. 1275

ಸಂತೆಯ ಕರದ ಮಿಂಚಗವುಂಡನ ಪುತ್ರ ಚೋಳಗವುಂಡನು ಕಾಳಗದಲ್ಲಿ ಶತೃಗಳನ್ನು ಸದೆಬಡಿದು ತಮ್ಮ ಊರನ್ನು ಶತೃಭಾದೆಯಿಂದ ಮುಕ್ತಿಗೊಳಿಸಿದುದಕ್ಕೆ ಹೊಯ್ಸಳ ವೀರ ನರಸಿಂಹನು ಗರುಡನ ಹಳ್ಳಿಯನ್ನು ದತ್ತಿನೀಡಿದ ಬಗ್ಗೆ ಈ ಶಾಸನವು ತಿಳಿಸುತ್ತದೆ.

9. E.C. VII Myn. – Maddur. A.D. 1278

ಮಾದಣ್ಣಗೌಡನು ಗಂಗವಾಡಿ ನಾಡಿನ ಅಧಿಕಾರಿಯಾಗಿದ್ದನು.ತನ್ನ ಪ್ರದೇಶ ಕರ, ತೆರಿಗೆಯನ್ನು ವಸೂಲಿಮಾಡಿ ರಾಜನಿಗೆ ತಲುಪಿಸುವುದೇ ಅಲ್ಲದೆ ಶಾಂತಿ ಸುಭೀಕ್ಷೆ ನೆಲೆಸುವಂತೆ ಮಾಡಿದ ಕಾರಣದಿಂದ ಹೊಯ್ಸಳ ದೊರೆ ವೀರ ನರಸಿಂಹನು ಎರಡು ಗ್ರಾಮಗಳನ್ನು ದತ್ತಿಯಾಗಿ ನಿಡಿದ ಬಗ್ಗೆ.

ಹೀಗೆ ಒಕ್ಕಲಿಗರು ರಾಜ ಮಹಾರಾಜರಾಗಿ, ಮಂಡಲಾಧೀಶರಾಗಿ, ನಾಡ ಪ್ರಭುಗಳಾಗಿ ನಾಡಗೌಡರು, ಪಟೇಲರು ಅಥವಾ ಊರಿನ ಗೌಡರಾಗಿ ಆಡಳಿತದಲ್ಲಿ ಸೇವೆ ಮಾಡಿದ್ದಾರೆ. ಅಂದಿನ ಸಮಾಜದಲ್ಲಿ ಹಾಸುಹೊಕ್ಕಾಗಿದ್ದ ಒಕ್ಕಲಿಗರು ದಾನಧರ್ಮ ಮಾಡಿದ, ಊರಿನ ಹಿತ ಕಾಪಾಡಿದ ಸ್ತ್ರೀಯರ ಮಕ್ಕಳ ಮಾನ ಪ್ರಾಣವನ್ನು ಕಾಪಾಡಿದ, ಶತ್ರುಗಳಿಂದ ನಾಡನ್ನು ರಕ್ಷಿಸಿದ ಕೀರ್ತಿ ಒಕ್ಕಲಿಗರಿಗಿದೆ. ಸಾಂಸ್ಕೃತಿಕ ರಂಗದಲ್ಲೂ ಒಕ್ಕಲಿಗರು ಹಿಂದೆ ಬಿದ್ದಿಲ್ಲ. ನಾಡಿನ ಉದ್ದಗಲಕ್ಕೂ ಸಿಕ್ಕಿರುವ ವೀರಗಲ್ಲುಗಳು, ಶಾಸನಗಳು ಅಂದಿನ ಹಲವಾರು ವಿದ್ಯಾಮಾನಗಳನ್ನು ಸಾಕ್ಷೀಕರಿಸಿವೆ.

□

ಒಕ್ಕಲಿಗರ ಸಂಘದ ಹುಟ್ಟು ಮತ್ತು ಬೆಳವಣಿಗೆ

ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಖಾಸಗಿ ಸಂಘ ಸಂಸ್ಥೆಗಳು ಅಲ್ಲಿನ ಸಮಾಜ ಮತ್ತು ರಾಷ್ಟ್ರವನ್ನು ಕಟ್ಟುವ ನಿಟ್ಟಿನಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ಅದೇ ರೀತಿ ಭಾರತದಲ್ಲಿಯೂ ಸಂಘ-ಸಂಸ್ಥೆಗಳು ನಮ್ಮ ಸಮಾಜವನ್ನು ರಾಷ್ಟ್ರದ ಮುಖ್ಯವಾಹಿನಿಗೆ ಕೊಂಡೊಯ್ಯುವಲ್ಲಿ ಸಫಲವಾಗಿವೆ. ಈ ತೆರನಾದ ಸಂಘ ಸಂಸ್ಥೆಗಳು ವಿಶೇಷವಾಗಿ ವಸಾಹತು ಆಳ್ವಿಕೆಯಲ್ಲಿ ರೂಪುಗೊಂಡವು ಎಂದರೆ ತಪ್ಪಾಗಲಾರದು. ಸಂಘ ಸಂಸ್ಥೆಗಳ ಧ್ಯೇಯೋದ್ದೇಶಗಳು ಮತ್ತು ಚಟುವಟಿಕೆಗಳಲ್ಲಿ ಒಂದಕ್ಕೊಂದು ವ್ಯತ್ಯಾಸವಿರುವುದನ್ನು ಕಾಣಬಹುದು. ಅವುಗಳಲ್ಲಿ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಶೈಕ್ಷಣಿಕ ಎಂದು ಹಲಬಗೆಯ ಸಂಘ ಸಂಸ್ಥೆಗಳಿರುತ್ತವೆ. ಆಧುನಿಕ ಭಾರತದಲ್ಲಿ ಜಾತಿ ಆಧಾರಿತ ಸಂಘ ಸಂಸ್ಥೆಗಳೂ ಹುಟ್ಟಿಕೊಂಡಿತು. ಈ ರೀತಿಯ ಜಾತಿ ಆಧಾರಿತ ಸಂಘ ಸಂಸ್ಥೆಗಳಲ್ಲಿ 'ಒಕ್ಕಲಿಗರ ಸಂಘ' 1906ರಲ್ಲಿ ಜನ್ಮ ತಳೆದು ರಾಜ್ಯದಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ.

ಕ್ರಿ.ಶ. 12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಜಗಜ್ಯೋತಿ ಬಸವೇಶ್ವರರು ಜನಿಸಿ ಜಾತ್ಯತೀತ ಸಮಾಜವನ್ನು ಕಟ್ಟಲು ಪಣತೊಟ್ಟರು. ಬಸವಣ್ಣನವರನ್ನು ರಾಷ್ಟ್ರದ ಹಿಂದುಳಿದ ವರ್ಗಗಳ ಆಂದೋಲನದ ಪ್ರಥಮ ನೇತಾರನೆಂದರೆ ತಪ್ಪಾಗಲಾರದು. ಈ ಆಂದೋಲನದಿಂದಾಗಿ ಅಲ್ಪಸಂಖ್ಯಾತರು, ಹಿಂದುಳಿದ ಮತ್ತು ಶೋಷಿತ ವರ್ಗಗಳ ಜನರು ಸ್ಫೂರ್ತಿಗೊಂಡರು. ಆದರೆ ಆಂದೋಲನವು ಕಾಲ ಕ್ರಮೇಣ ಹಿನ್ನಡೆಯಿತು. ನಂತರದ ಕಾಲದಲ್ಲಿ ದಾಸ ಸಾಹಿತ್ಯವು ತನ್ನ ಸರಳಭಾಷೆಯಿಂದಾಗಿ ಜನಸಾಮಾನ್ಯರನ್ನು ಆಕರ್ಷಿಸಿತು. ಕ್ರಿ.ಶ. 19ನೇ ಶತಮಾನದಲ್ಲಿ ಇಂಗ್ಲಿಷ್ ಶಿಕ್ಷಣ ಅಥವಾ ಪಾಶ್ಚಿಮಾತ್ಯ ಶಿಕ್ಷಣ ಭಾರತದಲ್ಲಿ ತಲೆ ಎತ್ತಲಾಗಿ ಅಂದಿನ ಸಮಾಜದ ಮೇಲ್ವರ್ಗದ ಜನರಾದ ಬ್ರಾಹ್ಮಣರು ಅಲ್ಪಸಂಖ್ಯಾತರಾಗಿದ್ದರೂ ಇಂಗ್ಲಿಷ್ ಶಿಕ್ಷಣವನ್ನು ಪಡೆದು ಸುಶೀಕ್ಷಿತರಾದುದೇ ಅಲ್ಲದೆ ಸಮಾಜ ಮತ್ತು ಸರ್ಕಾರದ ಉನ್ನತ ಪದವಿಗಳನ್ನು ಅಲಂಕರಿಸಿದರು.

ಮಹಾರಾಜರ ಆಳ್ವಿಕೆಯ ಕಾಲದಲ್ಲಿ ದಿವಾನರಿಂದ ಹಿಡಿದು ಜವಾನ ಹುದ್ದೆಯವರೆಗೆ ಪ್ರತಿಯೊಂದು ಹುದ್ದೆಯೂ ಬ್ರಾಹ್ಮಣರ ಪಾಲಾಯಿತು. ಅವರಲ್ಲೂ ಮದ್ರಾಸ್ ಬ್ರಾಹ್ಮಣರು ಮತ್ತು ಮೈಸೂರು ಬ್ರಾಹ್ಮಣರೆಂದು ಎರಡು ಬಣಗಳಿದ್ದವು.

ಕ್ರಿ.ಶ. 19–20ನೇ ಶತಮಾನದಲ್ಲಿ ನಾಡಿನಾದ್ಯಂತ ಬ್ರಿಟಿಷರು ಮತ್ತು ಆಳರಸರು ಹಲವಾರು ಶಾಲಾ ಕಾಲೇಜುಗಳನ್ನು ಸ್ಥಾಪಿಸಿದರು. ಒಡೆಯರ ಕೇಂದ್ರ ಸ್ಥಾನವಾಗಿದ್ದ ಮೈಸೂರು ಮತ್ತು ಬ್ರಿಟಿಷರ ದಂಡು ಪ್ರದೇಶವಾಗಿದ್ದ ಬೆಂಗಳೂರು, ಶಿಕ್ಷಣ ಕೇಂದ್ರಗಳಾಗಿ ಬೆಳೆಯತೊಡಗಿದವು. ಶಿಕ್ಷಣ ಕ್ಷೇತ್ರವು ಕ್ರಮೇಣ ಬ್ರಾಹ್ಮಣರ ಮತ್ತು ಉಳ್ಳವರ ಪಾಲಾಗತೊಡಗಿತು. ಒಂದು ಅಂಕಿ ಅಂಶದ ಪ್ರಕಾರ (Report on the Administration of Mysore – 1906-07 Chapter VII) 1906–07ರ ಸಮಯದಲ್ಲಿ ಮೈಸೂರಿನಲ್ಲಿ ಒಟ್ಟು 24 ವಿದ್ಯಾರ್ಥಿನಿಲಯಗಳು ಅಸ್ತಿತ್ವದಲ್ಲಿದ್ದವು. ಇವುಗಳಲ್ಲಿ 10 ಸರ್ಕಾರಿ ವಿದ್ಯಾರ್ಥಿನಿಲಯಗಳಾಗಿದ್ದರೆ, 2 ಅನುದಾನ ಪಡೆಯುತ್ತಿದ್ದವು. 12 ಅನುದಾನ ರಹಿತ ವಿದ್ಯಾರ್ಥಿನಿಲಯಗಳು ಅಸ್ತಿತ್ವದಲ್ಲಿದ್ದವು. ವಿದ್ಯಾರ್ಥಿನಿಲಯಗಳ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 1232.

ಕ್ರಿ.ಶ. 19 ಮತ್ತು 20ನೇ ಶತಮಾನದಲ್ಲಿ ಶಿಕ್ಷಣ ಪ್ರಸರಣ ಮತ್ತು ಪ್ರಭಾವ ನಾಡಿನಾದ್ಯಂತ ಪಸರಿಸಿತು. ಅದರಲ್ಲೂ ವಿಶೇಷವಾಗಿ ಮೈಸೂರಿನ ಆಳರಸರು ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟರು. ಇಡೀ ರಾಷ್ಟ್ರದಲ್ಲೇ ಮೈಸೂರು ಸಂಸ್ಥಾನವು ಮಾದರಿ ಸಂಸ್ಥಾನವೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಆದರೆ ಹಿಂದುಳಿದ ಹಾಗೂ ಕೃಷಿಯನ್ನೇ ಅವಲಂಬಿಸಿದ್ದ ಒಕ್ಕಲು ಮಕ್ಕಳು ಬೆಂಗಳೂರಿನಂತಹ ಶಿಕ್ಷಣ ಕೇಂದ್ರ ಹಾಗೂ ದೊಡ್ಡ ಷಹರಿನಲ್ಲಿ ವ್ಯಾಸಂಗ ಮಾಡುವುದು ದುಸ್ತರವಾಗಿತ್ತು. ಈ ಮೇಲೆ ಹೇಳಿದಂತೆ ಶಿಕ್ಷಣವು ಮೊದಲೇ ಬ್ರಾಹ್ಮಣರ ಮತ್ತು ಉಳ್ಳವರ ಪಾಲಾಗಿತ್ತು. ಅಂತಹ ಸನ್ನಿವೇಶದಲ್ಲಿ ಕೆಲವು ಗಣ್ಯ ಒಕ್ಕಲಿಗರು ತಮ್ಮ ಮಕ್ಕಳಿಗೆ ಸರಿಯಾದ ಶಿಕ್ಷಣವನ್ನು ನೀಡಿದುದರ ಫಲವಾಗಿ ಕೆ.ಹೆಚ್. ರಾಮಯ್ಯ, ಬಿ. ಪುಟ್ಟಯ್ಯ, ಪ್ಲೀಡರ್ ಕೆಂಪಣ್ಣನವರಂತಹ ಮೇರು ವ್ಯಕ್ತಿಗಳು ತಲೆ ಎತ್ತಿದರು. ಮುಂದೆ ಒಕ್ಕಲು ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕೆಂಬ ಉನ್ನತ ಧ್ಯೇಯೋದ್ದೇಶದಿಂದ ಬೆಂಗಳೂರಿನಲ್ಲಿ ಕ್ರಿ.ಶ. 20ನೇ ಶತಮಾನದ ಪೂರ್ವದಲ್ಲಿ (1906) ಸಂಘವನ್ನು ಸ್ಥಾಪಿಸಿದರು. ಅದೇ ಹೆಸರಾಂತ 'ಒಕ್ಕಲಿಗರ ಸಂಘ'. ಪ್ರಸ್ತುತ ಒಕ್ಕಲಿಗರ ಸಂಘ ಸ್ಥಾಪನೆಯಾಗುವ ಒಂದು ವರ್ಷ ಮೊದಲೇ ಎಂದರೆ 1905ರಲ್ಲಿ 'ಮೈಸೂರು ಲಿಂಗಾಯಿತ ವಿದ್ಯಾ ಶ್ರೇಯೋಭಿವೃದ್ಧಿ ಸಂಘ' ಎಂಬ ಸಂಘವು ಸ್ಥಾಪಿತವಾಯಿತು. ಹೀಗೆ ಶಿಕ್ಷಣ ಪ್ರಸರಣಕ್ಕೆ ಅನುವು ಮಾಡಿಕೊಡಲು ಎರಡು ಸಂಘಗಳು ಬೆಂಗಳೂರಿನಲ್ಲಿ ಜನ್ಮ ತಳೆದವು.

ಸಂಘ ಸ್ಥಾಪನೆ

ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರ-ರೆಂಬ ಭಾವನೆ ಅತಿಯಾಗಿತ್ತು. ಶಿಕ್ಷಣ, ಉದ್ಯೋಗ ಸೇರಿದಂತೆ ನಾನಾ ರಂಗಗಳಲ್ಲಿ ಒಕ್ಕಲಿಗರು ಹಿಂದುಳಿದಿದ್ದರು. ಬೆರಳೆಣಿಕೆಯಷ್ಟು ಜನ ಒಕ್ಕಲಿಗರು ಸಮಾಜ ಮತ್ತು ಸರ್ಕಾರದಲ್ಲಿ ಒಳ್ಳೆಯ ಸ್ಥಾನಮಾನವನ್ನು ಹೊಂದಿದ್ದರು. ಶ್ರೀ ಬಿ. ನಾಗಪ್ಪನವರು ಇಂಗ್ಲೆಂಡಿಗೆ ತೆರಳಿ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಆಗತಾನೇ ಇಂಗ್ಲೆಂಡಿ-ನಿಂದ ಹಿಂತಿರುಗಿ ಬಂದು ಬೆಂಗಳೂರಿನಲ್ಲಿ ತಮ್ಮ ವಕೀಲಿ ವೃತ್ತಿಯನ್ನು ಪ್ರಾರಂಭಿಸಿ-ದರು. ಒಮ್ಮೆ ಅಮಲ್ದಾರ್ ಬಿ.ಎನ್. ಚನ್ನಿಗಪ್ಪನವರು ಮತ್ತು ಬ್ಯಾರಿಸ್ಟರ್ ನಾಗಪ್ಪನವರು ತಮ್ಮ ಮನೆಯಲ್ಲಿ ಲೋಕಾಭಿರಾಮವಾಗಿ ಮಾತನಾಡುತ್ತಾ ಮುಂದುವರಿದ ಇಂಗ್ಲೆಂಡಿನ ಹಾಗೂ ಹಿಂದುಳಿದಿರುವ ನಮ್ಮ ದೇಶದ ಜನರ, ಜಾತಿ ಮತ್ತು ಜನಾಂಗದ ಸ್ಥಿತಿಗತಿಗಳನ್ನು ಮಾತನಾಡುತ್ತಾ ಹೋಲಿಕೆ ವ್ಯತ್ಯಾಸಗಳನ್ನು ಇಲ್ಲಿನ ಆಗು ಹೋಗು-ಗಳನ್ನು ಪರಸ್ಪರ ಮಾತನಾಡುವ ಸಮಯದಲ್ಲಿ ಒಕ್ಕಲಿಗ ಜನಾಂಗ ಬಹಳ ಹಿಂದುಳಿದಿದೆ. ನಮ್ಮ ಜನಾಂಗದವರು ಶಿಕ್ಷಣ, ಉದ್ಯೋಗದಂತಹ ವಿಷಯಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುವುದಿಲ್ಲ. ಆದ ಕಾರಣ ನಮ್ಮಂತಹವರು ಏಕೆ ಒಂದು ಸಂಘ-ವನ್ನು ಸ್ಥಾಪಿಸಬಾರದು ಎಂದು ಆಲೋಚಿಸಿದರು. ಇದೇ ಸಮಯಕ್ಕೆ ಅಮಲ್ದಾರ-ರಾಗಿದ್ದ ಚನ್ನಿಗಪ್ಪನವರು ಒಕ್ಕಲಿಗರು ಎಂಬ ಕಾರಣದಿಂದ ಸರ್ಕಾರದಿಂದ ಬಡ್ತಿ ಸೇರಿದಂತೆ ಯಾವುದೇ ಸೌಲಭ್ಯಗಳಿಲ್ಲದೆ ವಂಚಿತರಾಗಿದ್ದರು. ನಮ್ಮಂತಹವರಿಗೇ ಇಂತಹ ಸ್ಥಿತಿ ಬಂದಿರಬೇಕಾದರೆ ಶ್ರೀಸಾಮಾನ್ಯರ ಪಾಡೇನು? ಎಂದು ಯೋಚಿಸಿ ಸಂಘ ಸ್ಥಾಪನೆಗೆ ಮುಂದಾದರು. ಆ ಯೋಜನೆ ತಮ್ಮ ತಲೆಗೆ ಬಂದ ಕೂಡಲೆ ನಾಗಪ್ಪನವರ ಮಾವಂದಿರಾದ ಶ್ರೀ ಟಿ. ಬೈಯ್ಯಣ್ಣನವರಲ್ಲಿಗೆ ಚನ್ನಿಗಪ್ಪ ಮತ್ತು ನಾಗಪ್ಪ-ನವರು ಹೋಗಿ ಅವರನ್ನು ಭೇಟಿ ಮಾಡಿ ತಮ್ಮ ಉದ್ದೇಶವನ್ನು ಹೇಳಿ-ಕೊಂಡರು. ಯೋಜನೆಯನ್ನು ಒಪ್ಪಿದ ಬೈಯಣ್ಣನವರು ತಮ್ಮ ಕೈಲಾದ ಸಹಾಯವನ್ನು ಮಾಡುವುದಾಗಿ ಅಭಯಹಸ್ತ ನೀಡಿದರು. ಇದರಿಂದ ಸ್ಫೂರ್ತಿಗೊಂಡ ಚನ್ನಿಗಪ್ಪ ಮತ್ತು ನಾಗಪ್ಪನವರು ಹಾಗೂ ಇತರೇ ಒಕ್ಕಲಿಗ ಗಣ್ಯ ವ್ಯಕ್ತಿಗಳಾದ ಎಂ. ಸುಬ್ಬಯ್ಯ, ಬಿ. ಕೆಂಪಣ್ಣ, ಎಂ.ಎಲ್. ಶ್ಯಾಮಗೌಡ, ಎಸ್. ಪುಟ್ಟಣ್ಣ, ಕೆ.ಹೆಚ್. ರಾಮಯ್ಯ, ಸಿ. ಲಕ್ಷ್ಮಣಗೌಡ, ಬಿ.ಎಸ್. ಮಾರಪ್ಪ, ಬಿ.ಎಸ್. ಮುನಿಸ್ವಾಮಪ್ಪ ಇನ್ನೂ ಮುಂತಾದವರಿಗೆ ತಮ್ಮ ಉದ್ದೇಶವನ್ನು ತಿಳಿಸಿ ಅವರ ನೆರವನ್ನು ಕೋರಿದರು. (ಬಿ.ಪಿ. ರಾಧಾಕೃಷ್ಣ, ನನ್ನ ತಂದೆ-1951 ಬೆಂ. ಪುಟ-19).

ಸುದಿನ

ಈ ಮೇಲ್ಕಂಡ ಒಂಬತ್ತು ಜನ 1906 ಏಪ್ರಿಲ್ 1ನೇ ತಾರೀಖು ಲಾಲ್‌ಬಾಗ್ ರಸ್ತೆಯಲ್ಲಿದ್ದ ಎಂ. ಸುಬ್ಬಯ್ಯನವರ ತೋಟದಲ್ಲಿ ಒಂದು ಸಭೆಯನ್ನು

ನಡೆಸಿದರು. ಈ ಒಂಬತ್ತು ಜನ ಕೂಡಿ ಜನಾಂಗದ ಆಗು ಹೋಗುಗಳ ಬಗ್ಗೆ ಮಾತನಾಡಿ ಒಕ್ಕಲಿಗರ ಸಂಘ ಸ್ಥಾಪನೆಗೆ ಒಕ್ಕೊರಲಿನಿಂದ ತಮ್ಮ ಸಮ್ಮತಿ ಸೂಚಿಸಿದುದೇ ಅಲ್ಲದೆ ಸಂಘಕ್ಕಾಗಿ, ಜನಾಂಗಕ್ಕಾಗಿ ದುಡಿಯಲು ಪಣ ತೊಟ್ಟರು.

1906 ಏಪ್ರಿಲ್ 15ನೇ ತಾರೀಖು 3 ಗಂಟೆಗೆ ಬೆಂಗಳೂರಿನ ಕೋಟೆಯ ಬಾಗಿಲ ಬಳಿ ಇರುವ ಸಾಹುಕಾರ್ ಶ್ರೀ ದೊಡ್ಡಣ್ಣನವರ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ಧರ್ಮಶಾಲೆಯಲ್ಲಿ ಮೊದಲ ಸಭೆ ನಡೆಯಿತು. ಈ ಸಭೆಯು ಮಹತ್ವ ಪೂರ್ಣವಾದ ಸಭೆಯಾಗಿದ್ದು ಸಂಘ ಸ್ಥಾಪನೆಯ ವಿಚಾರವಾಗಿ ಗಂಭೀರವಾದ ಚರ್ಚೆಗಳಾದವು. ಈ ಸಭೆಯಲ್ಲಿ ಒಂದು ಕಾರ್ಯಕಾರಿ ಸಮಿತಿ ಏರ್ಪಟ್ಟು ಶ್ರೀ ಬಿ. ಕೆಂಪಣ್ಣನವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಕೆ.ಹೆಚ್. ರಾಮಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ ನೇಮಿಸಿದರು. ಉಪಸಮಿತಿಗೆ 49 ಮಂದಿ ಸ್ಥಳೀಯ ಮಹನೀಯರನ್ನು ಸದಸ್ಯರನ್ನಾಗಿಯೂ ಆಯ್ಕೆ ಮಾಡಿಕೊಂಡರು. ತಮ್ಮ ಘನ ಉದ್ದೇಶವನ್ನು ಬೆಂಗಳೂರು ಸುತ್ತಮುತ್ತ ಇರುವ ಗ್ರಾಮೀಣ ಪ್ರದೇಶಗಳಲ್ಲಿ ಸಭೆ ಸಮಾರಂಭಗಳನ್ನು ನಡೆಸಿ ಗ್ರಾಮಗಳಲ್ಲಿದ್ದ ಒಕ್ಕಲಿಗರನ್ನು ಬರಮಾಡಿಕೊಂಡು ಇನ್ನು 15 ದಿನಗಳಲ್ಲಿ ಮತ್ತೊಂದು ಸಭೆ ನಡೆಸಬೇಕೆಂದು ತೀರ್ಮಾನಿಸಿದರು.

1906 ಏಪ್ರಿಲ್ 29 ಭಾನುವಾರ ಸಂಜೆ 3 ಗಂಟೆಗೆ ಅದೇ ದೊಡ್ಡಣ್ಣನವರ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಧರ್ಮಶಾಲೆಯಲ್ಲಿ ಸಭೆ ಸೇರಿ ಒಕ್ಕಲಿಗ ಜನಾಂಗವನ್ನು ಒಗ್ಗೂಡಿಸಲು ಒಂದು ವಿನಂತಿ ಪತ್ರವನ್ನು ರಚಿಸಿದರು. ಅದರ ಒಕ್ಕಣೆ ಹೀಗಿತ್ತು:

ಒಕ್ಕಲಿಗ ಬಂಧುಗಳೇ,

ನಮ್ಮ ದೇಶದಲ್ಲಿ ವ್ಯವಸಾಯದಿಂದಲೇ ಮುಖ್ಯವಾಗಿ ಜೀವಿಸುತ್ತಿರುವ ಮಂದಿಯು ಇತರ ವರ್ಗದವರಿಗಿಂತಲೂ ಅಧಿಕ ಸಂಖ್ಯೆಯುಳ್ಳದ್ದಾಗಿದ್ದರೂ, ವಿದ್ಯಾವಿಹೀನತೆಯಿಂದ ಏಳಿಗೆಗೆ ಬಾರದೆ ಇರುವುದು ತಮಗೆ ತಿಳಿದೇ ಇದೆ.

ಪ್ರಸ್ತುತ ಈ ಅವಸ್ಥೆಯನ್ನು ಹೋಗಲಾಡಿಸಿ ನಮ್ಮವರನ್ನು ಉನ್ನತ ಸ್ಥಿತಿಗೆ ತರಲೋಸುಗ ಈ ಸಂಘವು ಉದ್ದೇಶಿಸಲ್ಪಟ್ಟಿದೆ. ತದನುಸಾರವಾಗಿ, 1906 ಏಪ್ರಿಲ್ 1 ಮತ್ತು 8ನೇ ತಾರೀಖುಗಳಲ್ಲಿಯೂ, ಮತ್ತೆ 1906 ಏಪ್ರಿಲ್ 15 ಹಾಗೂ 29ನೇ ತಾರೀಖುಗಳಲ್ಲಿಯೂ ನಮ್ಮ ಜಾತಿಯವರ ಪೈಕಿ ಬೆಂಗಳೂರಿನಲ್ಲಿರುವ ಕೆಲವರು ದೊಡ್ಡ ಮನುಷ್ಯರನ್ನು ಸೇರಿಸಿಕೊಂಡು ಯೋಚನೆ ಮಾಡಿದ್ದರಲ್ಲಿ, ಶ್ರೀ ಬಿ. ಕೆಂಪಣ್ಣನವರ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿಯನ್ನು ನೇಮಿಸಲಾಯಿತು.

ಈಗ ಒಕ್ಕಲಿಗರ ಮೊದಲನೆಯ ಮಹಾ ಸಭೆಯನ್ನು 1906 ಅಕ್ಟೋಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆಸುವಂತೆ ನಿರ್ಧರಿಸಲಾಗಿದೆ. ಈ ಮಹಾಸಭೆಗೆ

ಸಮಸ್ತ ಒಕ್ಕಲಿಗ ಮಹನೀಯರೂ ದಯಮಾಡಿಸಬೇಕೆಂದು ವಿನಂತಿ.

ಕೆ.ಹೆಚ್. ರಾಮಯ್ಯ,
ಕಾರ್ಯದರ್ಶಿ

ಈ ಭಿತ್ತಿಪತ್ರಗಳನ್ನು ಇಂದಿನ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಹೊರ ಜಿಲ್ಲೆಯಾದ್ಯಂತ ವಿತರಿಸುವ ಮೂಲಕ ಒಕ್ಕಲಿಗರ ಜನಾಂಗದ ಗಮನಕ್ಕೆ ತಮ್ಮ ಉದ್ದೇಶವನ್ನು ತಿಳಿಸಿದರು.

ಈ ಮೇಲ್ಕಂಡ ಸಭೆಗಳಲ್ಲಿ ಸೇರಿದ್ದ ಒಕ್ಕಲಿಗ ಕುಲಪುತ್ರರು ತಮ್ಮ ತಮ್ಮ ತನು, ಮನ, ಧನಗಳನ್ನು ಅರ್ಪಿಸಿ ಸಂಘ ಸ್ಥಾಪನೆಗೆ ಕಾರಣರಾದರು. ಸಂಘ ಸ್ಥಾಪನೆಗೆ ಕಾಯಾ ವಾಚಾ ಮನಸಾ ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಶ್ರೀ ಎಂ. ಸುಬ್ಬಯ್ಯನವರು ಲಾಲ್‌ಬಾಗ್ ರಸ್ತೆಯಲ್ಲಿದ್ದ ತಮ್ಮ ಚಾಮುಂಡೇಶ್ವರಿ ಮುದ್ರಣಾಲಯದಲ್ಲಿ ಸಂಘಕ್ಕೆ ಸಂಬಂಧಿಸಿದ್ದನ್ನು ಉಚಿತವಾಗಿ ಮುದ್ರಿಸಿಕೊಟ್ಟರು ಮತ್ತು ಸಂಘದ ವಿಚಾರವಾಗಿ ಸಭೆ ಸಮಾರಂಭವನ್ನು ನಡೆಸಲು ತಮ್ಮ ಖಾಸಗಿ ಬಂಗಲೆಯಲ್ಲಿ ಸ್ಥಳಾವಕಾಶವನ್ನು ನೀಡಿದರು. ಸ್ವಲ್ಪ ದಿನಗಳು ಕಳೆದ ನಂತರ ಬ್ಯಾರಿಸ್ಟರ್ ಬಿ. ನಾಗಪ್ಪನವರು ದಿವಾನ್ ವಿ.ಪಿ. ಮಾಧವರಾಯರನ್ನು ಕಂಡು ತಮ್ಮ ಧ್ಯೇಯೋದ್ದೇಶಗಳನ್ನು ಹೇಳಿಕೊಳ್ಳಲಾಗಿ ದಿವಾನರು ಒಂದು ಮನವಿ ಪತ್ರವನ್ನು ತಯಾರಿಸಿಕೊಡುವಂತೆ ಕೇಳಿದರು. ಸಂಘದ ಕಟ್ಟಡಗಳನ್ನು ಕಟ್ಟುವುದಕ್ಕೆ ಬೆಂಗಳೂರಿನಲ್ಲಿ ಒಂದು ವಿಸ್ತಾರವಾದ ಜಾಗವನ್ನು ಕೇಳಿಕೊಂಡರು. ಮನವಿ ಪತ್ರವನ್ನು ಓದಿದ ದಿವಾನರು ಸಹಾನುಭೂತಿಯಿಂದ ಪರೀಶೀಲಿಸುವುದಾಗಿ ಹೇಳಿದರು. ಸ್ವಲ್ಪ ದಿನ ಕಳೆದ ಮೇಲೆ ಸರ್ ಪುಟ್ಟಣ್ಣಚಟ್ಟಿಯವರೊಡನೆ ಒಕ್ಕಲಿಗ ನಾಯಕರು ಸಮಾಲೋಚಿಸಿ ದಿವಾನರನ್ನು ಅವರೆಲ್ಲರೂ ಭೇಟಿ ಮಾಡಿ ಒಕ್ಕಲಿಗರ ಸಂಘದ ಪ್ರಥಮ ಮಹಾಸಭೆಗೆ ದಯಮಾಡಿಸಬೇಕೆಂದು ಕೇಳಿಕೊಂಡರು ಹಾಗೂ ಒಪ್ಪಿಸಿಯೇ ಬಿಟ್ಟರು. ಇದೇ ತಂಡ ಅಂದು ಬ್ರಿಟಿಷ್ ರೆಸಿಡೆಂಟರಾಗಿದ್ದ ಫ್ರೇಜರ್ ಅವರನ್ನು ಕಂಡು ಅವರ ಸಹಾಯ ಸಹಾನುಭೂತಿಯನ್ನೂ ಪಡೆಯಿತು.

ಸಂಘವೆಂಬ ರಥಕ್ಕೆ ರಾಮಯ್ಯ–ಪುಟ್ಟಯ್ಯ ಎಂಬ ಜೋಡಿ ಚಕ್ರಗಳು

ಒಕ್ಕಲಿಗರ ಸಂಘದ ಸ್ಥಾಪನೆಗೆ ಮತ್ತು ಒಕ್ಕಲಿಗರ ಜನಾಂಗದಲ್ಲಿ ತಿಳುವಳಿಕೆ ಮೂಡಿಸಲು ಕೆ.ಹೆಚ್. ರಾಮಯ್ಯನವರನ್ನು ಜನಾಂಗದ ಹಿರಿಯರು ನೇಮಿಸಿದರು. ರಾಮಯ್ಯನವರು ಮಳೆ ಬಿಸಿಲೆನ್ನದೆ ಬೆಂಗಳೂರು ಗ್ರಾಮಾಂತರ ಪ್ರದೇಶವೇ ಅಲ್ಲದೆ ನಾಡಿನ ಉದ್ದಗಲಕ್ಕೂ ಎಲ್ಲಾ ಪ್ರದೇಶಗಳಲ್ಲೂ ಜನರನ್ನು ಉದ್ದೇಶಿಸಿ ಆಡು ಭಾಷೆಯಲ್ಲಿ ಭಾಷಣ ಮಾಡಿ ಎಲ್ಲರ ಮನಗೆದ್ದರು. ಅವರ ಭಾಷಣ ಕೇಳಿದ ಬಹಳಷ್ಟು ಜನ ಸ್ಫೂರ್ತಿಗೊಂಡರು. ರಾಮಯ್ಯನವರನ್ನು ಅವತಾರ ಪುರುಷ ಒಕ್ಕಲಿಗ ಕುಲಪುತ್ರನೆಂದು

ಹೊಗಳಿದರು. ಆಗಿನ ಎಂಟು ಜಿಲ್ಲೆಗಳ ಎಲ್ಲಾ ತಾಲ್ಲೂಕು, ಗ್ರಾಮಗಳಲ್ಲಿ ಸಂಚಾರ ಮಾಡಿ ಜನಾಂಗವನ್ನು ಜಾಗೃತಗೊಳಿಸಿದರು. ದಿವಾನ್ ಮಾಧವರಾಯರು ಜಿಲ್ಲೆಯ ಎಲ್ಲಾ ಅಮಲ್ದಾರರಿಗೆ ಅಧೀನ ಅಧಿಕಾರಿಗಳಿಗೆ ಸುತ್ತೋಲೆಯನ್ನು ಕಳುಹಿಸಿದ್ದರಲ್ಲದೆ ರಾಮಯ್ಯನವರಿಗೆ ಅಧಿಕೃತ ಪತ್ರವನ್ನು ನೀಡಿದರು. ಹೀಗೆ ದಿವಾನರು ಪ್ರತ್ಯೇಕವಾಗಿ, ಪರೋಕ್ಷವಾಗಿ ಸಂಘದ ಸ್ಥಾಪನೆಗೆ ನೆರವಾದರು. ರಾಮಯ್ಯನವರು ತಾವು ಉದ್ದಾಮ ಪಂಡಿತರೆಂದಾಗಲೀ, ಸರ್ಕಾರಿ ನೌಕರನ ಗತ್ತು ಗಮ್ಮತ್ತುತನವನ್ನಾಗಲೀ ತೋರಿಸದೆ ಆಡು ಭಾಷೆ ಮತ್ತು ತಿಳಿಹಾಸ್ಯದೊಂದಿಗೆ ಜನರ ಮನಸ್ಸನ್ನು ಗೆದ್ದರು. ಅವರ ಭಾಷಣದ ದಾಟಿ ಹೀಗಿತ್ತು. 'ನಮ್ಮ ಒಕ್ಕಲಿಗರು ನೇಗಿಲನ್ನು ಹೆಗಲ ಮೇಲೆ ಹೊತ್ತು ಮುಂದೆ ಎಳೆಯುತ್ತಿರುವ ಎರಡು ಎತ್ತುಗಳಂತೆಯೇ ಹಿಂದೆ ಮುಂದೆ ಹಿಡಿದು ಉಳುತ್ತಿರುವ ರೈತನೂ ಮೂರ್ಖನಾಗಿದ್ದಾನೆ.' ಎಂಬಿತ್ಯಾದಿ ಮಾತುಗಳಿಂದ ವಾಸ್ತವ ಸಂಗತಿಗಳನ್ನು ಮನ ಮುಟ್ಟುವಂತೆ ಹೇಳುತ್ತಿದ್ದರು. ರಾಮಯ್ಯನವರು ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ ಜನಾಂಗದ ಅಭಿವೃದ್ಧಿಯ ಕೆಲಸಕ್ಕೆ ನಿಂತರು.

ಒಕ್ಕಲಿಗರ ಸಂಘ ಸ್ಥಾಪನೆಯ ಭಿತ್ತಿ ಪತ್ರ ಎಲ್ಲಿವರೆಗೆ ತಲುಪಿತೆಂದರೆ ಚಿತ್ರದುರ್ಗದ ಅಮಲ್ದಾರರ ಕಛೇರಿಯಲ್ಲಿ ನೌಕರಿಯಲ್ಲಿದ್ದ ಬಿ. ಪುಟ್ಟಯ್ಯನವರಿಗೂ ತಲುಪಿತು. ಭಿತ್ತಿಪತ್ರವನ್ನು ಓದಿದ ಪುಟ್ಟಯ್ಯನವರು ಪುಲಕಿತರಾದರು. ಆ ಕೂಡಲೆ ರಾಮಯ್ಯವನರನ್ನು ಭೇಟಿ ಮಾಡಿ ವಿಚಾರ ತಿಳಿದುಕೊಂಡರು. ರಾಮಯ್ಯನವರು ಮತ್ತು ಪುಟ್ಟಯ್ಯನವರು ಕೇವಲ ಸ್ನೇಹಿತರು ಮಾತ್ರವಲ್ಲ ಬಂಧುಗಳೂ ಆಗಿದ್ದರು. ರಾಮಯ್ಯನವರು ಪುಟ್ಟಯ್ಯನವರನ್ನು ಜನಾಂಗದ ಅಭಿವೃದ್ಧಿಗೆ ದುಡಿಯಬೇಕೆಂದು ಕೇಳಿಕೊಳ್ಳಲಾಗಿ ಪುಟ್ಟಯ್ಯನವರು ಅಗತ್ಯವಾಗಿ ಒಪ್ಪಿದರು.

ಒಕ್ಕಲಿಗರ ಸಂಘದ ಮೊದಲನೆಯ ಮಹಾಸಭೆ 1906 (ವಾರ್ಷಿಕ ಸಭೆ)

ಶ್ರೀ ರಾಮಯ್ಯನವರು, ಬ್ಯಾರಿಸ್ಟರ್ ನಾಗಪ್ಪನವರು ಸೇರಿ ಪಟ್ಟಣ, ಗ್ರಾಮವೆನ್ನದೆ ಎಲ್ಲೆಡೆಗಳಿಂದ ಜನಾಂಗದ ಮಹನೀಯರು ಬೆಂಗಳೂರಿನಲ್ಲಿ ನಡೆಯುವ ಮಹಾಸಭೆಗೆ ಬರುವ ವ್ಯವಸ್ಥೆಯನ್ನು ಮಾಡಿದ್ದರು. 1906 ಅಕ್ಟೋಬರ್ 8 ಮತ್ತು 9ನೇ ತಾರೀಖು-ಗಳಲ್ಲಿ ಒಕ್ಕಲಿಗರ ಮಹಾಸಭೆಯನ್ನು ಜರುಗಿಸಿದರು. ಈ ಸಭೆಗೆ ಮಂಡ್ಯದ ನಾಗಮಂಗಲ ಭಾಗದ ಗಣ್ಯವ್ಯಕ್ತಿಗಳು, ಕುಣಿಗಲ್ ಪ್ರಾಂತದ ಆಜಾನುಬಾಹುಗಳಾದ ಗೌಡರು, ಶಿವಮೊಗ್ಗದ ಸುತ್ತಮುತ್ತಲಿನ ಪ್ರಾಂತ್ಯದ ಚಟುವಟಿಕೆಯುಳ್ಳ ನಾಮಧಾರಿ ಗೌಡರು, ಮಂಜರಾಬಾದ್ ಸೀಮೆಯ ನಾಡಗೌಡರು, ಕೋಲಾರ ಜಿಲ್ಲೆಯ ರೆಡ್ಡಿ ಒಕ್ಕಲಿಗರು, ತೆಲುಗು ರೆಡ್ಡಿಗೌಡರು, ಬೆಂಗಳೂರಿನ ನಿವಾಸಿಗಳು ತಂಡೋಪತಂಡ-ವಾಗಿ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದರು. ಇವರ ಉತ್ಸಾಹ ಹೇಳತೀರದು. ಈ ಸಭೆಯಲ್ಲಿ ಪಾಲ್ಗೊಂಡವರಲ್ಲಿ ಅನೇಕರು ರೋಮಾಂಚನಗೊಂಡರು.

ಸಂತೋಷಾಭಿಮಾನಗಳಿಂದ ಬೀಗಿದರು. ರಾಮಯ್ಯನವರು, ಬ್ಯಾರಿಸ್ಟರ್ ನಾಗಪ್ಪನವರು, ಶ್ರೀ ಟಿ. ಬಯ್ಯಣ್ಣನವರು ಇನ್ನೂ ಮುಂತಾದವರು ಬಹಳ ಉತ್ಸಾಹದಿಂದ ಪಾಲ್ಗೊಂಡುದುದೇ ಅಲ್ಲದೆ ಬಂದ ಹಾಗೂ ಬರುತ್ತಿದ್ದ ಅತಿಥಿಗಳನ್ನು ಯೋಗ್ಯ ರೀತಿಯಲ್ಲಿ ಬರಮಾಡಿಕೊಳ್ಳುತ್ತಿದ್ದರು. ಎಲ್ಲೆಲ್ಲೂ ಸಂತೋಷ ಸಡಗರದಿಂದ ಬೀಗುವವರೇ ಹೆಚ್ಚು ಮಂದಿಯಿದ್ದರು. ಅದುವರೆವಿಗೂ ಒಕ್ಕಲಿಗ ಎಂದೆನಿಸಿಕೊಳ್ಳುವುದೇ ಅವಮಾನವೆಂದು ತಿಳಿದುಕೊಂಡಿದ್ದವರಿಗೆ ಒಕ್ಕಲಿಗ ಜನಾಂಗ ಅಥವಾ ಜಾತಿ ಎಂದು ಕರೆದುಕೊಳ್ಳಲು ಅಭಿಮಾನ ಹುಟ್ಟಿತು.

ದಿವಾನ್ ವಿ.ಪಿ. ಮಾಧವರಾಯರು ಅನಿವಾರ್ಯ ಕಾರಣಗಳಿಂದ ಹಾಗೂ ಕೆಲಸದ ಒತ್ತಡದಿಂದ ಮಹಾಸಭೆಗೆ ಬರಲಾಗದೆ ಅಂಡರ್ ಸೆಕ್ರೆಟರಿ ರಾವ್ ಬಹದ್ದೂರ್ ಎಂ. ಶ್ಯಾಮರಾಯರ ಕೈಯಲ್ಲಿ ತಾವು ಸಿದ್ಧಪಡಿಸಿದ ಭಾಷಣವನ್ನು ಸಭೆಯಲ್ಲಿ ಓದಲು ತಿಳಿಸಿದ್ದರು. ಅದರಂತೆ ಎಂ. ಶ್ಯಾಮರಾಯರು ದಿವಾನರ ಭಾಷಣ –ವನ್ನು ಮಹಾಸಭೆಗೆ ಓದಿ ತಿಳಿಸಿದರು. ದಿವಾನರು ಜನಾಂಗದ ಹಾಗೂ ಸಂಘದ ಮೇಲೆ ಇಟ್ಟಿರುವ ಆದರಾಭಿಮಾನಗಳನ್ನು ಈ ಭಾಷಣದ ಮೂಲಕ ತಿಳಿದುಕೊಂಡ ಸಭೆಯು ದೀರ್ಘ ಕರತಾಡನಗಳನ್ನು ಹಾಕುವುದರ ಮೂಲಕ ಸ್ವಾಗತಿಸಿತು. ಇದೇ ಸಂದರ್ಭದಲ್ಲಿ ನಾಡಿನ ಶ್ರೀಮಂತ ಗುತ್ತಿಗೆದಾರರೆಂದೇ ಖ್ಯಾತರಾಗಿದ್ದ ಶ್ರೀಯುತ ಬಿ.ಎಸ್. ಮಾರಪ್ಪ ಮತ್ತು ಅವರ ಸಹೋದರ ಶ್ರೀಯುತ ಬಿ.ಎಸ್. ಮುನಿಸ್ವಾಮಪ್ಪ –ನವರು ವಿದ್ಯಾರ್ಥಿನಿಲಯದ ಕಟ್ಟಡ ಕಟ್ಟಿಸಲು 30 ಸಾವಿರ ರೂಪಾಯಿಗಳನ್ನು ಕೊಡುವುದಾಗಿ ತಿಳಿಸಿದರು. ಮಹಾಸಭೆಯು ಮಾರಪ್ಪ ಮತ್ತು ಮುನಿಸ್ವಾಮಪ್ಪನವರ ಉದಾರತನವನ್ನು ಕೊಂಡಾಡಿತು. (30 ಸಾವಿರವೆಂದರೆ ಅಂದು ರಾಜಾಜಿನಗರ ಅಥವಾ ಮಲ್ಲೇಶ್ವರದಂತಹ ಬಡಾವಣೆಗಳಲ್ಲಿ ಹತ್ತಾರು ಎಕರೆ ಭೂಮಿಯನ್ನು ಕೊಳ್ಳಬಹುದಾಗಿತ್ತು. ಇಂದು ಆ ಹಣಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ)

ಒಕ್ಕಲಿಗರ ಸಂಘದ ಎರಡನೆಯ ಮಹಾಸಭೆ 1907

1906ರಲ್ಲಿ ನಡೆದ ಮಹಾಸಭೆಯ ಸುದ್ದಿಯನ್ನು 1907 ಮಾರ್ಚಿ 15ರಂದು ಪ್ರಾರಂಭವಾದ ಒಕ್ಕಲಿಗರ ಪತ್ರಿಕೆಯು ಪುಂಖಾನುಪುಂಖವಾಗಿ ವರದಿ ಮಾಡಿತು. ಒಕ್ಕಲಿಗರ ಪತ್ರಿಕೆಯ ಚಂದಾದಾರರಾಗಲು ಎಷ್ಟೋ ಮಂದಿ ಜನಾಂಗದ ಮಹನೀಯರು ಮುಂದೆ ಬಂದು ಚಂದಾದಾರರಾದರು. ಪತ್ರಿಕೆಯು ದಿವಾನರ ಮತ್ತು ಮೈಸೂರಿನ ಪ್ರಭುಗಳ ಕೈಸೇರದೇ ಇರಲಿಲ್ಲ. ಮೊದಲನೆಯ ಮಹಾಸಭೆಯ ಯಶಸ್ಸಿನ ಗುಂಗಿನಲ್ಲಿದ್ದ ರಾಮಯ್ಯನವರು, ನಾಗಪ್ಪನವರು, ಬೈಯ್ಯಣ್ಣನವರು ಸುಮ್ಮನೇ ಕೈಕಟ್ಟಿ ಕೂರಲಿಲ್ಲ. ಎರಡನೆಯ ಮಹಾಸಭೆಯನ್ನು ಮತ್ತಷ್ಟು ಯಶಸ್ವಿಗೊಳಿಸಲು ಯೋಜನೆಯೊಂದನ್ನು ರೂಪಿಸಿದರು. ಆ ಯೋಜನೆಯ ಪ್ರಕಾರ

ಯದುಕುಲ ಸಾರ್ವಭೌಮರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರನ್ನು (1902–1940) ಮಹಾಸಭೆಗೆ ಅಧ್ಯಕ್ಷತೆ ವಹಿಸುವಂತೆ ಮಾಡುವುದಾಗಿತ್ತು.

ಅದರಂತೆ 1907 ಅಕ್ಟೋಬರ್ 17ರಂದು ಮೈಸೂರಿನಲ್ಲಿ ಬ್ಯಾರಿಸ್ಟರ್ ಬಿ. ನಾಗಪ್ಪನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಮನ್ಮಹಾರಾಜರು ದಯಮಾಡಿಸಿ ಎರಡನೆಯ ಮಹಾಸಭೆಯನ್ನು ತಮ್ಮ ಅಮೃತಹಸ್ತದಿಂದ ಉದ್ಘಾಟಿಸಿದರು. ಜನಾಂಗದ ಜನರ ಉತ್ಸಾಹ, ಶಿಸ್ತು, ಸಂಯಮ, ಸ್ವಾಮಿಭಕ್ತಿಯನ್ನು ಕಂಡು ಅರಸರು ಸುಪ್ರೀತರಾದರು. ಈ ಸಭೆಯಲ್ಲಿ ಅಳರಸರು ಕುಳಿತುಕೊಳ್ಳುವ ದಿವ್ಯವಾದ ಕುರ್ಚಿಯನ್ನು ಹೆಸರಾಂತ ಗುತ್ತಿಗೆದಾರರಾಗಿದ್ದ ಶ್ರೀ ಹುಚ್ಚಪ್ಪನವರು ತಮ್ಮ ಸ್ವಂತ ಖರ್ಚಿನಿಂದ ಮಾಡಿಸಿಕೊಟ್ಟರು ಹಾಗೂ ಸಭೆಯ ನಂತರ ಅದನ್ನು ಅರಮನೆಗೆ ಒಪ್ಪಿಸಿದರು. ಮೈಸೂರಿನ ಸಭೆಗೂ ನಾಡಿನ ಮೂಲೆ ಮೂಲೆಗಳಿಂದ ಜನಾಂಗದ ಗಣ್ಯವ್ಯಕ್ತಿಗಳು ಧಾವಿಸಿ ಸಭೆಯು ಯಶಸ್ವಿಯಾಗುವಂತೆ ಮಾಡಿದರು. ಈ ಮಹಾಸಭೆ ಯಶಸ್ವಿಯಾದ ವಿಚಾರವು 'ಒಕ್ಕಲಿಗರ ಪತ್ರಿಕೆ'ಯೇ ಅಲ್ಲದೆ ನಾಡಿನ ಬೇರೆ ಬೇರೆ ಪತ್ರಿಕೆಗಳ ಮುಖ ಪುಟಗಳಲ್ಲಿ ರಾರಾಜಿಸಿತು.

1906ರಲ್ಲಿ ಪ್ರಾರಂಭಗೊಂಡ ಒಕ್ಕಲಿಗರ ಸಂಘವು ಜನಾಂಗದ ಗಣ್ಯವ್ಯಕ್ತಿಗಳ ಶ್ರಮದ ಫಲವಾಗಿ 1907 ಸೆಪ್ಟೆಂಬರ್ 9ನೇ ತಾರೀಖು ರಿಜಿಸ್ಟ್ರರ್ ಕಛೇರಿಯಲ್ಲಿ ಅಧಿಕೃತವಾಗಿ 'ಒಕ್ಕಲಿಗರ ಸಂಘ'ವೆಂಬ ತನ್ನ ಹೆಸರನ್ನು ನೋಂದಾಯಿಸಿತು. ಸಂಘವು ರೈತರ ಹಾಗೂ ರೈತ ಮಕ್ಕಳ ಶಿಕ್ಷಣಕ್ಕಾಗಿ ವಿದ್ಯಾರ್ಥಿನಿಲಯವನ್ನು ಸ್ಥಾಪನೆ ಮಾಡಿ ಒಕ್ಕಲುತನವನ್ನೇ ನಂಬಿರುವ ಗ್ರಾಮೀಣ ಭಾಗದ ಒಕ್ಕಲಿಗರ ಮತ್ತು ತನ್ನ ಒಳಪಂಗಡಗಳ ವಿದ್ಯಾರ್ಥಿಗಳಿಗೆ ಆಶ್ರಯ ನೀಡಲು ತೀರ್ಮಾನಿಸಿತು. ಅದಕ್ಕಾಗಿ ತನ್ನದೇ ಆದ ನಿವೇಶನವನ್ನೂ ಪಡೆದು ಆ ನಿವೇಶನದಲ್ಲಿ ಸ್ವಂತ ಕಟ್ಟಡವನ್ನು ಕಟ್ಟಿಸಲು ತೀರ್ಮಾನಿಸಿತು. ಬೆಂಗಳೂರು ಪಟ್ಟಣದಲ್ಲಿ ವಾಸಯೋಗ್ಯ ನಿವೇಶನವನ್ನು ಅಳರಸರಿಂದ ಪಡೆದುಕೊಂಡಿತು. ನಂತರ ಜನಾಂಗದ ಉದಾರಿಗಳಿಂದ ಸಹಾಯ ಪಡೆದು ಕಟ್ಟಡ ಕಟ್ಟಲು ತೀರ್ಮಾನಿಸಿತು. ಸಂಘವು ತನ್ನ ಕಾರ್ಯಚಟುವಟಿಕೆಗಳನ್ನು ಸಾಂಗವಾಗಿ ನೆರವೇರಿಸಿಕೊಂಡು ಹೋಗಲು ದ್ವಿಮುಖ ಆಡಳಿತ ಕ್ರಮವನ್ನು 1907 ರಿಂದ 1935ರವರೆಗೆ ಅನುಸರಿಸಿತು. ಎಕ್ಸಿಕ್ಯುಟಿವ್ ಕೌನ್ಸಿಲ್ (ಕಾರ್ಯಕಾರಿ ಸಮಿತಿ) ಎಂದರೆ ಸಂಘದ ಪ್ರಮುಖ ಆಡಳಿತವನ್ನು, ಅಭಿವೃದ್ಧಿಕಾರ್ಯ, ಲೆಕ್ಕಪತ್ರ ಇತ್ಯಾದಿ ವ್ಯವಹಾರಗಳನ್ನು ನೋಡಿಕೊಳ್ಳುವ ಒಂದು ಸಮಿತಿ. ಜನರಲ್ ಕೌನ್ಸಿಲ್ (ಸಾಮಾನ್ಯ ಆಡಳಿತ) ಒಕ್ಕಲಿಗರ ಸಂಘದ ಒಳಾಡಳಿತ ಎಂದರೆ ಸಂಘದ ವಿದ್ಯಾರ್ಥಿನಿಲಯ, ಕಟ್ಟಡ ಕಟ್ಟಿಸುವಿಕೆ, ಮುದ್ರಣಾಲಯ ಇತ್ಯಾದಿ ನೋಡಿಕೊಳ್ಳಲು ತೀರ್ಮಾನಿಸಿತು. (ಈ ಪಟ್ಟಿಯನ್ನು ಮುಂದೆ ನೀಡಲಾಗಿದೆ.)

1907ರಿಂದ 1935ರವರೆಗೆ ಅಸ್ತಿತ್ವದಲ್ಲಿದ್ದ ದ್ವಿಮುಖ ಆಡಳಿತ ಕ್ರಮ ಮತ್ತು ಪದಾಧಿಕಾರಿಗಳ ಪಟ್ಟಿ ಈ ಕೆಳಕಂಡಂತಿದೆ

ಎಕ್ಸಿಕ್ಯುಟಿವ್ ಕೌನ್ಸಿಲ್

ಕಾಲ	ಅಧ್ಯಕ್ಷರು ಸರ್ವಶ್ರೀ	ಉಪಾಧ್ಯಕ್ಷರು ಸರ್ವಶ್ರೀ	ಪ್ರಧಾನ ಕಾರ್ಯದರ್ಶಿ ಸರ್ವಶ್ರೀ	ಉಪ ಕಾರ್ಯದರ್ಶಿ ಸರ್ವಶ್ರೀ	ಕೋಶಾಧಿಕಾರಿ ಸರ್ವಶ್ರೀ
1907–09	ಉರಿಗದ ಟಿ.ಬೈಯಣ್ಣನವರು	ಬಿ.ನಾಗಪ್ಪನವರು	ಕೆ.ಹೆಚ್. ರಾಮಯ್ಯನವರು	ಬಿ.ಪುಟ್ಟಯ್ಯನವರು	ಎಂ.ಎಲ್. ಶ್ಯಾಮಗೌಡರು
1909–19	ಬಿ.ಎಸ್. ಮಾರಪ್ಪನವರು	ಬಿ.ಎಸ್. ಮುನಿಸ್ವಾಮಪ್ಪನವರು	ಸದರಿ	ಸದರಿ	ಸದರಿ
1919–24	ಬಿ. ನಾಗಪ್ಪನವರು	ಬಿ. ಕೆಂಪಣ್ಣನವರು	ಎಂ. ಸುಬ್ಬಯ್ಯನವರು	---	ಬಿ. ಪುಟ್ಟಯ್ಯನವರು
1924–27	ಬಿ. ಕೆಂಪಣ್ಣನವರು	ಎಂ. ಮುನಿಸ್ವಾಮಪ್ಪ ನವರು	ಎಂ. ಎಲ್. ಶ್ಯಾಮಗೌಡರು	---	ರೈಸ್‌ಮಿಲ್ ಪುಟ್ಟಯ್ಯನವರು
1927–34	ಬಿ. ನಾಗಪ್ಪನವರು	ಸದರಿ	ಸಿ. ಲಕ್ಷ್ಮಣಗೌಡರು	---	ಸದರಿ
1934–35	ರಾವ್ ಸಾಹೇಬ್ ಎಚ್. ಚನ್ನಯ್ಯನವರು	ಸದರಿ	ಸದರಿ	---	ಸದರಿ

ಜನರಲ್ ಕೌನ್ಸಿಲ್

ಕಾಲ	ಅಧ್ಯಕ್ಷರು ಸರ್ವಶ್ರೀ	ಉಪಾಧ್ಯಕ್ಷರು ಸರ್ವಶ್ರೀ	ಪ್ರಧಾನ ಕಾರ್ಯದರ್ಶಿ ಸರ್ವಶ್ರೀ	ಉಪ ಕಾರ್ಯದರ್ಶಿ ಸರ್ವಶ್ರೀ	ಕೋಶಾಧಿಕಾರಿ ಸರ್ವಶ್ರೀ
1					
1907–09	ಬಿ.ಎಸ್. ಮಾರಪ್ಪ ನವರು	ಸದರಿ	ಎಂ. ಸುಬ್ಬಯ್ಯ ನವರು	ಸದರಿ	ಎಂ.ಎಲ್. ಶ್ಯಾಮಗೌಡರು
1909–29	ನೀಲಗಿರಿ ಸಿ. ರಂಗಯ್ಯಗೌಡರು	ಸದರಿ	ಸದರಿ	ಸದರಿ	ಸದರಿ
1929–34	ರಾವ್ ಸಾಹೇಬ್ ಎಚ್. ಚನ್ನಯ್ಯನವರು	ಸದರಿ	ಎಂ.ಸಿ. ಲಿಂಗೇಗೌಡರು	ಸದರಿ	ಬಿ. ಪುಟ್ಟಯ್ಯನವರು

ಆಳರಸರ ಮತ್ತು ದಿವಾನರ ಕೃಪಾಕಟಾಕ್ಷದಲ್ಲಿ ಸಂಘ

ಅಂದು ದಿವಾನರೆಂದರೆ ಸಮಸ್ತ ರಾಜ್ಯದ ಸರ್ವಾಧಿಕಾರಿ ಅಥವಾ ಇಂದಿನ ಮುಖ್ಯಮಂತ್ರಿಯಂತೆ ಅಧಿಕಾರ ಅಂತಸ್ತನ್ನು ಹೊಂದಿದ್ದರು. ಅಂದು ದಿವಾನರಾಗಿದ್ದ ಶ್ರೀ ವಿ.ಪಿ. ಮಾಧವರಾವ್ (ವಿಶ್ವನಾಥ ಪಟಾಣಕರ್ ಮಾಧವರಾವ್ 1906–1909) ರವರು ಉದಾರಿಗಳಾಗಿದ್ದರು. ಸಂಘಕ್ಕೆ ತಾವು ಅಧಿಕಾರದಲ್ಲಿರುವ ತನಕ ಉದಾರವಾಗಿ ಆಡಳಿತಾತ್ಮಕ ಸಹಾಯವನ್ನು ಮಾಡುತ್ತಿದ್ದರು. ಒಕ್ಕಲಿಗರ ಸಂಘಕ್ಕೆ ದಿವಾನರು ಬಹಳಷ್ಟು ನಿಕಟವಾಗಲು ಕಾರಣವೇನೆಂದರೆ ಸಂಘ ಮತ್ತು ಅದರ ಸದಸ್ಯರಲ್ಲಿ ಅನೇಕರು ದಿವಾನರು ಮತ್ತು ರಾಜರ ಮೇಲಿಟ್ಟಿದ್ದ ಗೌರವ, ಸ್ವಾಮಿನಿಷ್ಠೆ ಮತ್ತು ರಾಜಭಕ್ತಿಗಳು ಎಂದರೆ ತಪ್ಪಾಗಲಾರದು. ದಿವಾನರು ಸಂಘಕ್ಕೆ ಯೋಗ್ಯ ಸ್ಥಳದಲ್ಲಿ ಉಚಿತವಾಗಿ ನಿವೇಶನವನ್ನು ಕೊಡಿಸಲು ತೀರ್ಮಾನಕ್ಕೆ ಬಂದರು. ಸಂಘದ ಪದಾಧಿಕಾರಿಗಳು ಪ್ರಸ್ತುತ ಸಂಘವಿರುವ ನಿವೇಶನವನ್ನು ದಿವಾನರ ಗಮನಕ್ಕೆ ತಂದರು. ದಿವಾನರು ಆಡಳಿತಾತ್ಮಕ ಎಡರು ತೊಡರುಗಳನ್ನು ತಪ್ಪಿಸಿ ಸಂಘಕ್ಕೆ ಶೀಘ್ರವಾಗಿ ನಿವೇಶನ ತಲುಪಲೆಂದು ಬೆಂಗಳೂರು ಜಿಲ್ಲಾಧಿಕಾರಿಗಳಿಗೆ ಹುಕುಂ ನೀಡಿ ಯಾವುದೇ ತಗಾದೆ ಮಾಡದೆ ನಿವೇಶನ ನೀಡುವಂತೆ ವ್ಯವಸ್ಥೆ ಮಾಡಿದರು. ಅದರಂತೆ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಮಂಜೂರು ಮಾಡಲು ಕರಡು ಪ್ರತಿ ತಯಾರಿಸಿದರು. ಅದರ ಆಧಾರದ ಮೇಲೆ ಹಿಂದುಳಿದ ವರ್ಗಗಳಿಗೆ ನ್ಯಾಯ ಒದಗಿಸುವ ಉದ್ದೇಶದಿಂದ ಅಂದಿನ ಸರ್ಕಾರವು ಸಂಘದ ವಿದ್ಯಾರ್ಥಿನಿಲಯ, ಪ್ರಿಂಟಿಂಗ್ ಪ್ರೆಸ್ ಮತ್ತು ಸಂಘದ ಕಟ್ಟಡ ಕಟ್ಟಲು 12 ಎಕರೆ 16 ಗುಂಟೆ ಜಮೀನನ್ನು ಎಂದರೆ ದಕ್ಷಿಣೋತ್ತರ ಇಂದಿನ ವಿ.ವಿ.ಪುರಂ ಕಲಾ ಕಾಲೇಜು ಹಾಗೂ ಹಿಂದಿನ ಸಂಜಯ ಚಿತ್ರ ಮಂದಿರ ಹಾಗೂ ಇಂದಿನ ಕುವೆಂಪು ರಂಗಮಂದಿರ, ಪೂರ್ವ ಪಶ್ಚಿಮಕ್ಕೆ ಅಂದಿನ ಕೊರಚರ ಪಾಳ್ಯ, ಈಗಿನ ಪಾರ್ವತಿಪುರ ಮತ್ತು ಇಂದಿನ ಕೃಷ್ಣರಾಜೇಂದ್ರ ರಸ್ತೆವರೆಗಿನ ಸವಿಸ್ತಾರವಾದ ನಿವೇಶನವನ್ನು ಸಂಘಕ್ಕೆ ನೀಡಿದರು. (ದಾಖಲೆ ಪತ್ರದ ಪ್ರತಿಯನ್ನು ಮುಂದಿನ ಪುಟದಲ್ಲಿ ನೀಡಲಾಗಿದೆ.)

ಆಳರಸರು ನಿವೇಶನವನ್ನು ನೀಡಿದ್ದರಿಂದ ಒಕ್ಕಲಿಗರ ಸಂಘ ಮತ್ತು ಜನಾಂಗ ಸುಪ್ರೀತವಾಯಿತು. ಆಳರಸರ ಮತ್ತು ದಿವಾನರ ಬಗ್ಗೆ ಮತ್ತಷ್ಟು ಸ್ವಾಮಿನಿಷ್ಠೆ ಮತ್ತು ಗೌರವ ಇದರಿಂದ ಹೆಚ್ಚಾಯಿತು. ಸಂಘವು ಆಳರಸರಾಗಿದ್ದ ಶ್ರೀ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು, ಯುವರಾಜ ಶ್ರೀ ಶ್ರೀ ಕಂಠೀರವ ನರಸರಾಜ ಒಡೆಯರನ್ನು ಸಂಘದ ಪೋಷಕರನ್ನಾಗಿಯೂ ಉಪಪೋಷಕರನ್ನಾಗಿ ದಿವಾನ್ ಶ್ರೀ ವಿ.ಪಿ. ಮಾಧವರಾಯ–ರನ್ನು ಮಾಡಿಕೊಂಡಿತ್ತು. ಶ್ರೀ ವಿ.ಪಿ. ಮಾಧವರಾಯರು 1909ರವರೆವಿಗೂ ಮೈಸೂರಿನ ದಿವಾನರಾಗಿದ್ದು ನಂತರ ಎಂದರೆ 1910 ರಿಂದ 1913ರವರೆವಿಗೆ ಗುಜರಾತಿನ ಬರೋಡ ಸಂಸ್ಥಾನದ ದಿವಾನರಾಗಿ ಸೇವೆ ಸಲ್ಲಿಸುತ್ತಿದ್ದರೂ ಕೂಡ, ಅವರು ಬದುಕಿರುವ ತನಕ ಅವರ ಮೇಲೆ ಸಂಘವು ಇಟ್ಟಿದ್ದ ಅಪಾರ ಗೌರವದ ಸಂಕೇತವಾಗಿ

ಮಾಧವರಾಯರ ಹೆಸರನ್ನು ಸಂಘವು ತನ್ನ ಲೆಟರ್‌ಹೆಡ್‌ನಲ್ಲಿ ಉಪಪೋಷಕರೆಂದೇ ಮುದ್ರಿಸಿ ಪತ್ರ ವ್ಯವಹಾರ ಮಾಡುತ್ತಿದ್ದಿತು. (1913ರ ಲೆಟರ್‌ಹೆಡ್ ಅನ್ನು ಲಗತ್ತಿಸ -ಲಾಗಿದೆ) ಕಾಲಾನಂತರ ಯುವರಾಜರಾಗಿದ್ದ ಶ್ರೀ ಶ್ರೀ ಕಂಠೀರವ ನರಸರಾಜ ಒಡೆಯರು ಶ್ರೀ ಕೆ.ಹೆಚ್. ರಾಮಯ್ಯನವರ ಆತ್ಮೀಯರಾದಂತೆಲ್ಲ ಸಂಘಕ್ಕೆ ಅಧಿಕವಾಗಿ ಲಾಭವಾಯಿತೇ ಹೊರತು ನಷ್ಟವಾಗಲಿಲ್ಲ. ರಾಜಮನೆತನ ಮತ್ತು ಸಂಘದ ನಡುವೆ ರಾಮಯ್ಯನವರು ಕೊಂಡಿಯಂತೆ ಬೆಸೆದರು. ರಾಜರ ಸಖ್ಯದಿಂದಾಗಿ ಮೈಸೂರು ಆಳರಸರ ಸರ್ಕಾರದ ದಿವಾನರುಗಳು ಸಂಘಕ್ಕೆ ಹತ್ತಿರವಾಗತೊಡಗಿದರು. ಸಂಘಕ್ಕೆ ಇದು ಆಧಾರ ಸ್ತಂಭವಾಯಿತು. ಅರಮನೆಯ ಪೋಷಣೆ ಮತ್ತು ನೆರಳಿನಲ್ಲಿ ಸಂಘ ಬೆಳೆಯಿತು ಎಂದರೆ ತಪ್ಪಾಗಲಾರದು.

ಸಂಘದ ಮೂರನೆಯ ಸಭೆ-1908

ಸಂಘವು ಪ್ರತಿ ವರ್ಷವೂ ಮಹಾಸಭೆಯನ್ನು ನಡೆಸಿ ಆಯಾ ವರ್ಷದ ಲೆಕ್ಕಪತ್ರ, ಅಭಿವೃದ್ಧಿ ಕಾರ್ಯಗಳನ್ನು ತನ್ನ ಸದಸ್ಯರಿಗೆ ಸಭೆಯಲ್ಲಿ ತಿಳಿಸುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಮೂರನೆಯ ಮಹಾಸಭೆಗೆ ಅಂದಿನ ದಿವಾನರಾಗಿದ್ದ ಶ್ರೀ ವಿ.ಪಿ. ಮಾಧವರಾಯರನ್ನು ಪ್ರಾರಂಭೋತ್ಸವವನ್ನು ನೆರವೇರಿಸಲು ಕೇಳಿಕೊಂಡಿತು. 28, ಏಪ್ರಿಲ್ 1908ರಂದು ಮೂರನೆಯ ಮಹಾಸಭೆ ಜರುಗಿತು. ದಿವಾನರು ಸಭೆಯಲ್ಲಿ ಅಗ್ರಸ್ಥಾನವನ್ನು ವಹಿಸಿದರು. ಸಂಘದ ಅಧ್ಯಕ್ಷರಾಗಿದ್ದ ಟಿ. ಬಯ್ಯಣ್ಣನವರು, ನೀಲಗಿರಿಯ ಕಾಫಿ ಎಸ್ಟೇಟಿನ ಮಾಲೀಕರಾಗಿದ್ದ ಶ್ರೀಯುತರಾದ ಸಿ. ರಂಗೇಗೌಡರು, ಮಾರಪ್ಪ, ಮುನಿಸ್ವಾಮಪ್ಪ, ಕೆ.ಹೆಚ್. ರಾಮಯ್ಯ, ಬಿ. ಪುಟ್ಟಯ್ಯನವರು ಸಭೆಯನ್ನು ಯಶಸ್ವಿಗೊಳಿಸಿದರು. ನೀಲಗಿರಿಯ ರಂಗೇಗೌಡರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಸಂಘದ ಅಭಿವೃದ್ಧಿಗೆ ಶ್ರಮಿಸಲು ಎಲ್ಲರೂ ಪಣ ತೊಟ್ಟರು. ದಿವಾನರು ಸಂಘಕ್ಕೆ ಉಚಿತವಾಗಿ ನಿವೇಶನವನ್ನು ನೀಡುವುದೇ ಅಲ್ಲದೆ ಕಟ್ಟಡ ಕಟ್ಟಲು ಸರ್ಕಾರದಿಂದ ದೊರಕಬಹುದಾದ ಸಹಾಯವನ್ನು ಮಂಜೂರು ಮಾಡಿದರು. ಒಕ್ಕಲಿಗರ ಸಂಘದ ಕಛೇರಿಗೆ ಮತ್ತು ಪತ್ರಿಕೆಯ ಮುದ್ರಣಕ್ಕೆ ಸ್ವಂತ ಕಟ್ಟಡವಿಲ್ಲ-ದಿದ್ದರಿಂದ ಶ್ರೀ ಟಿ. ಬಯ್ಯಣ್ಣನವರು ಅರಳೇಪೇಟೆಯ ಸ್ವಗೃಹದಲ್ಲಿ ಸಂಘ ಮತ್ತು ಮುದ್ರಣಾಲಯದ ಚಟುವಟಿಕೆಗೆ ಅವಕಾಶ ನೀಡಿದರು. ನೀಲಗಿರಿಯ ಸಾಹುಕಾರ್ ಸಿ. ರಂಗೇಗೌಡರು ಸಂಘಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ನೀಡಿದರು. ಅಲ್ಲದೆ ಸಂಘದ ವತಿಯಿಂದ ಪ್ರಾರಂಭಗೊಂಡ ಒಕ್ಕಲಿಗರ ಪತ್ರಿಕೆಗೆ ತುರ್ತಾಗಿ ಹಣ ಬೇಕಾಗಿದ್ದರಿಂದ ಮೂರು ಸಾವಿರ ರೂಪಾಯಿಗಳನ್ನು ನೀಡಿದರು. ಹೀಗೆ ಪ್ರತಿ ಸಭೆಯಲ್ಲೂ ಜನಾಂಗದ ಶ್ರೀಮಂತರು, ದಾನಿಗಳು, ಉಳ್ಳವರು ಉದಾರವಾಗಿ ಸಂಘಕ್ಕೆ ಹಣ ನೀಡುತ್ತಾ ಬಂದರು.

ಒಕ್ಕಲಿಗರ ಸಂಘದ ಲೆಟರ್‌ಹೆಡ್–18ನೇ ಆಗಸ್ಟ್ 1913

DIARY No. 1246 / 05

SECTION
FILE No.

PATRONS:
His Highness
Maharaja of Mysore
His Highness
Yuvaraja of Mysore
VICE-PATRON:
Madhava Row Esq.,
B.A., C.I.E.

The Vokkaligara Sangha
53, Cottonpet, Bangalore City.

18th Aug 1913.

G.M 135-13-3

K. R. Srinivasa Iyengar Esq. M.A.,
Secretary to Government,
General & Revenue Department,
Bangalore.

Sir,

I have the honor to state that I have been the Editor of the "Vokkaligara Patrike" since the past many years, and that I have now resigned my editorship, as I have decided to proceed to England on the 13th of next month. The Executive Council of the Vokkaligara Sangha have, accordingly, resolved at the meeting held in the Sangha's premises, on Sunday the 17th Aug 1913, that Mr S. V. Venkataramiah who is the Offg. Asst. General Secretary ~~and the~~ of the Sangha and the Sub-Editor of the Patrike be appointed the Editor of the Patrike in place of Mr Ramayya, resigned, and that the same may be intimated to Government, at an early date, for getting the necessary sanction. Mr Venkataramiah was editing the "Vivekodaya", a monthly magazine, for about eight years at Seringapatam and was taken to this office as the Sub. Editor of the Patrike. He has discharged his duties as Sub. Editor, to the entire satisfaction of the members of the Sangha.

I request you, therefore, to be so good as to place the resolution of the Sangha before the Government and obtain for us, as early as

ಒಕ್ಕಲಿಗರ ಸಂಘಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳು
ಮೈಸೂರು ಮಹಾರಾಜರ ಸನ್ನದು

Submitted to His Highness

I submit herewith a recommendation received from the Deputy Commissioner of Bangalore for the free grant to the Vokkaligar Sangha, for the purpose of establishing a Printing Press, and erecting a hostel for students and other buildings, a piece of land measuring 12 acres and 16 guntas, to the east of the main Fort Road to Basavangudi.

The land consists of the following:-

1 acre and 29 guntas of Government waste, the estimated value of which is Rs.518,

4 acres and 32 guntas out of the bed of the breached Karanji tank, estimated value Rs.240, and

5 acres and 35 guntas of private hittal land (with buildings) belonging to the hamlet of Koracharpalya; estimated cost of acquisition Rs.3,542.

The First Councillor says that a school and hostel for boys of the Vokkaligar community is a public purpose for which the land required may be acquired under the Land Acquisition Regulation (The Government Advocate also has expressed a similar opinion). He recommends that the Deputy Commissioner may be authorised to acquire the private lands and suggests that the question on what terms it should be given to the Sangha may be decided later on.

I am however of opinion that the private lands may be acquired at the cost of the Government and the whole site including the lands at the disposal of the Government may be given to the Vokkaliga

Sangha. The cost of acquisition which will have to be paid by Government is Rs.3,542. and may be provided in the next year's budget.

The value of the grant is not to be measured by the money value of the land proposed to be given. The situation possesses advantages of its own and the site is excellently adapted for the purposes of the headquarters of the Vokkaligar Sangha, with a Printing Press and Hostel attached to it. The Sangha has shown great public spirit, and its organised efforts to secure the social, moral, and material advancement of the community are worthy of every encouragement. Although the money value of the grant involved in acquiring the private lands and giving Government land free of cost may be small , and although if Government insisted upon the whole or part of the cost being paid by the Sangha they would be prepared to pay it, a free grant of a site will have a great moral value as indicating the earnest desire of the Government to encourage the Sangha in its endeavours to educate the rising generation and to promote the well-being of such an important community as that of the Vokkaligars.

The Sangha has been assured that in consideration of their putting up valuable buildings on this land the space to the north of the grant, comprising the Fort glacis and the area that will be added to it by demolishing the Fort wall and filling in the Fort ditch (including the site of the Fort wall) will be kept open as a play ground and recreation ground both for the Vokkaligar Sangha boys and the student population of the City.

At one time there was an idea of giving the bed of the Karanji tank for purposes of a Farm for the

3

Vokkaligar Sangha. I have explained to them that it is undesirable to carry on any cultural operations in the bed of the Tank, which it is now proposed to lay out as a park. Land for teaching Farming may be assigned in some other locality, not at a prohibitive distance from the headquarters of the Sangha.

3

Proceedings of the Government of His Highness the Maharaja of Mysore.

Read-

Government Order No.G.2915/G.M.97-08-115 dated 13th November 1908, according permission, under Section 2 of the Newspapers Regulation III of 1908, to Mr.T.Byannah,President of the Vokkaligara Sangha,Bangalore City, to edit,print and publish the "Vokkaligara Patrike", a Kanarese Weekly Newspaper conducted by the Vokkaligara Sangha.

(2) Letter dated 5th October 1909, from Mr.K.H.Ramayya,General Secretary of the Vokkaligara Sangha, requesting that, as the said Mr.T.Byanna died on the 4th October 1909, he may be provisionally permitted to edit,print and publish the "Vokkaligara Patrike" in his capacity as General Secretary, till the vacancy is filled up at a meeting of the Executive Council of the Sangha.

Order thereon No. G.2192-4 / G.M. 7-09-13 Dated Bangalore the 11th October 1909.

In the circumstances represented,Government are pleased to permit Mr.K.H.Ramayya to edit,print and publish the Kanarese Newspaper"The Vokkaligara Patrike" until further orders.

C S Balasundarayya
Per Secretary to Govt.

To

Mr.K.H.Ramayya,General Secretary,Vokkaligara Sangha.
The District Magistrate,Bangalore District.
The Inspector General of Police in Mysore.

SRN

ಒಕ್ಕಲಿಗರ ಸಂಘದ ವಿಹಂಗಮ ನೋಟ



ಕೇಂದ್ರ ಮಂತ್ರಿಗಳಾಗಿದ್ದ ಶ್ರೀ ಎಂ. ವಿ. ಕೃಷ್ಣಪ್ಪ, ಸಂಘದ ಅಧ್ಯಕ್ಷರಾಗಿದ್ದ ಶ್ರೀ ವಿಜಯದೇವ್, ಶ್ರೀ ಕೆ. ರಾಮೇಗೌಡ ಮತ್ತು ಇತರರು

ಬೆಂಗಳೂರು ಸೇರಿದಂತೆ ರಾಜ್ಯದ ಇತರ ಕಡೆ ಶಾಲಾ-ಕಾಲೇಜುಗಳು, ವಿದ್ಯಾರ್ಥಿ ನಿಲಯಗಳ ಸ್ಥಾಪನೆಯಾಗಲು ಶ್ರಮಿಸಿದ ಕೆಲವು ನಾಯಕರು



ಶ್ರೀ ಟಿ. ಬೈಯಣ್ಣ



ಶ್ರೀ ಕೆ.ಹೆಚ್. ರಾಮಯ್ಯ



ಶ್ರೀ ಬಿ. ನಾಗಪ್ಪ



ಶ್ರೀ ಬಿ. ಪುಟ್ಟಯ್ಯ



ಶ್ರೀ ಬಿ.ಎಸ್. ಮಾರಪ್ಪ




ಶ್ರೀ ಬಿ.ಎಸ್. ಮುನಿಸ್ವಾಮಪ್ಪ

ಬೆಂಗಳೂರು ಸೇರಿದಂತೆ ರಾಜ್ಯದ ಇತರ ಕಡೆ ಶಾಲಾ–ಕಾಲೇಜುಗಳು, ವಿದ್ಯಾರ್ಥಿ ನಿಲಯಗಳ ಸ್ಥಾಪನೆಯಾಗಲು ಶ್ರಮಿಸಿದ ಕೆಲವು ನಾಯಕರು



ಶ್ರೀ ಬಿ.ಎನ್. ಚನ್ನಿಗಪ್ಪ



ಶ್ರೀ ಬಿ. ಕೆಂಪಣ್ಣ



ಶ್ರೀ ಸಿ. ರಂಗೇಗೌಡ



ಶ್ರೀ ಎಂ.ಎಲ್. ಶಾಮಗೌಡ



ಶ್ರೀ ಎಂ. ಸುಬ್ಬಯ್ಯ




ಶ್ರೀ ಹೆಚ್. ಚನ್ನಯ್ಯ

ಬೆಂಗಳೂರು ಸೇರಿದಂತೆ ರಾಜ್ಯದ ಇತರ ಕಡೆ ಶಾಲಾ–ಕಾಲೇಜುಗಳು, ವಿದ್ಯಾರ್ಥಿ ನಿಲಯಗಳ ಸ್ಥಾಪನೆಯಾಗಲು ಶ್ರಮಿಸಿದ ಕೆಲವು ನಾಯಕರು



ಶ್ರೀ ಎಂ. ನಂಜಪ್ಪ



ಶ್ರೀ ಸಿ. ಲಕ್ಷ್ಮಣಗೌಡ



ಶ್ರೀ ಕೆ.ಸಿ. ಲಿಂಗೇಗೌಡ



ಶ್ರೀ ಎಸ್.ಕೆ. ನರಸಿಂಹಯ್ಯ



ಶ್ರೀ ಚನ್ನಮಾರಗೌಡ (ಅಡಕಮಾರನಹಳ್ಳಿ)



ಶ್ರೀ ವೀರಸಂಜೀವಗೌಡ (ಬೈರಮಂಗಲ)

ಬೆಂಗಳೂರು ಸೇರಿದಂತೆ ರಾಜ್ಯದ ಇತರ ಕಡೆ ಶಾಲಾ–ಕಾಲೇಜುಗಳು, ವಿದ್ಯಾರ್ಥಿ ನಿಲಯಗಳ ಸ್ಥಾಪನೆಯಾಗಲು ಶ್ರಮಿಸಿದ ಕೆಲವು ನಾಯಕರು



ಶ್ರೀ ನಾರಾಯಣಗೌಡ



ಶ್ರೀ ಬಿ. ಅಪ್ಪಣ್ಣ



ಶ್ರೀ ಎಂ.ಸಿ. ಲಿಂಗೇಗೌಡ



ಶ್ರೀ ನಾಗತಿಹಳ್ಳಿ ತಿಮ್ಮೇಗೌಡ



ಶ್ರೀ ಎನ್.ಜಿ. ಗುಜ್ಜೇಗೌಡ



ಶ್ರೀ ವಿ. ವೆಂಕಟಪ್ಪ (ತಿಟ್ಟಮಾರನಹಳ್ಳಿ)


ಬೆಂಗಳೂರು ಸೇರಿದಂತೆ ರಾಜ್ಯದ ಇತರ ಕಡೆ ಶಾಲಾ–ಕಾಲೇಜುಗಳು, ವಿದ್ಯಾರ್ಥಿ ನಿಲಯಗಳ ಸ್ಥಾಪನೆಯಾಗಲು ಶ್ರಮಿಸಿದ ಕೆಲವು ನಾಯಕರು



ಶ್ರೀ ಎಂ.ಎಲ್. ಶಾಮಗೌಡ



ಶ್ರೀ ಎಂ. ಮುನಿಶಾಮಪ್ಪ



ಶ್ರೀ ತಮ್ಮಯ್ಯಗೌಡ (ಶೀಲನೆರೆ ಕೆ.ಆರ್.ಪೇಟೆ)



ಶ್ರೀ ಪಟೇಲ್ ಲಿಂಗೇಗೌಡ




ಶ್ರೀ ಬಿ. ಲಿಂಗೇಗೌಡ



ಶ್ರೀ ಶಿವನಂಜೇಗೌಡ


ಬೆಂಗಳೂರು ಸೇರಿದಂತೆ ರಾಜ್ಯದ ಇತರ ಕಡೆ ಶಾಲಾ–ಕಾಲೇಜುಗಳು, ವಿದ್ಯಾರ್ಥಿ ನಿಲಯಗಳ ಸ್ಥಾಪನೆಯಾಗಲು ಶ್ರಮಿಸಿದ ಕೆಲವು ನಾಯಕರು



ಶ್ರೀ ಬಾಗೆಮನೆ ಸುಬ್ಬೇಗೌಡ



ಶ್ರೀ ಬಾಗೆಮನೆ ಬಸವೇಗೌಡ



ಶ್ರೀ ಬಾಗೆಮನೆ ಚನ್ನೇಗೌಡ



ಶ್ರೀ ಸುಬ್ಬಣ್ಣ ನಾಯಕ




ಶ್ರೀ ಎಂ. ಮುನಿಸ್ವಾಮಪ್ಪ




ಶ್ರೀ ಬಿ.ಕೆ. ಚಿಕ್ಕವೀರಪ್ಪ


ಬೆಂಗಳೂರು ಸೇರಿದಂತೆ ರಾಜ್ಯದ ಇತರ ಕಡೆ ಶಾಲಾ–ಕಾಲೇಜುಗಳು, ವಿದ್ಯಾರ್ಥಿ ನಿಲಯಗಳ ಸ್ಥಾಪನೆಯಾಗಲು ಶ್ರಮಿಸಿದ ಕೆಲವು ನಾಯಕರು



ಶ್ರೀ ಎಸ್. ಕರಿಯಪ್ಪ, ಕನಕಪುರ



ಶ್ರೀ ಅತ್ತಾವರ ಬಾಲಕೃಷ್ಣಶೆಟ್ಟಿ ಮಂ.,



ಶ್ರೀ ಕೆ.ವಿ. ಶಂಕರೇಗೌಡ



ಶ್ರೀ ಎಂ.ಬಿ. ಬಸವಯ್ಯ




ಶ್ರೀ ದೇವಂಗಿ ರಾಮಣ್ಣಗೌಡ
(ಕುವೆಂಪುರವರ ಮಾವ)




ಶ್ರೀ ಮಾಲಿ ಮರಿಯಪ್ಪ

ಬೆಂಗಳೂರು ಸೇರಿದಂತೆ ರಾಜ್ಯದ ಇತರ ಕಡೆ ಶಾಲಾ-ಕಾಲೇಜುಗಳು, ವಿದ್ಯಾರ್ಥಿ ನಿಲಯಗಳ ಸ್ಥಾಪನೆಯಾಗಲು ಶ್ರಮಿಸಿದ ಕೆಲವು ನಾಯಕರು



ಶ್ರೀ ಮರುದೇವೇಗೌಡ



ಶ್ರೀ ಎಂ.ಹೆಚ್. ಮರಿಗೌಡ



ಶ್ರೀ ಸಿಂಗಾರಿಗೌಡ




ಶ್ರೀ ಹೆಚ್.ಕೆ. ವೀರಣ್ಣಗೌಡ



ಶ್ರೀ ಡಿ. ಬಸುಮಯ್ಯ (ಮೈಸೂರು)



ಶ್ರೀ ನೀಲಗಿರಿ ಚಿಕ್ಕಪ್ಪಣ್ಣ



ಒಕ್ಕಲಿಗರ ಸಂಘವು ಪ್ರಾರಂಭಗೊಂಡ ಉದ್ದೇಶವೇನೆಂದರೆ ಒಕ್ಕಲು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿನಿಲಯವನ್ನು ಸ್ಥಾಪನೆ ಮಾಡಿ ಅವರಿಗೆ ಆಶ್ರಯ ನೀಡುವುದು ಮತ್ತು ಒಕ್ಕಲಿಗರ ಪತ್ರಿಕೆಯ ಮೂಲಕ ಜನಾಂಗದಲ್ಲಿ ಜಾಗೃತಿ ಮೂಡಿಸುವುದಾಗಿತ್ತು. (ಒಕ್ಕಲಿಗರ ಪತ್ರಿಕೆಯ ಬಗ್ಗೆ ಈಗಾಗಲೇ ತಿಳಿಸಿದೆ) ವಿದ್ಯಾರ್ಥಿನಿಲಯದ ಕಟ್ಟಡ ಕಟ್ಟಲು ಮೊದಲ ಸಭೆಯಲ್ಲೇ ಬಿ.ಎಸ್. ಮಾರಪ್ಪ ಮತ್ತು ಬಿ.ಎಸ್. ಮುನಿಸ್ವಾಮಪ್ಪನವರು ವಿದ್ಯಾರ್ಥಿನಿಲಯ ಸ್ಥಾಪನೆಗೆ ಮೂವತ್ತು ಸಾವಿರ ರೂಪಾಯಿಗಳನ್ನು ಕೊಡುವುದಾಗಿ ತಿಳಿಸಿದ್ದರು. ನಿವೇಶನ ಮಂಜೂರಾಗಿ ನಂತರ ಕಟ್ಟಡವನ್ನು ಕಟ್ಟಿ ಎಲ್ಲಾ ಸಲಕರಣೆಗಳನ್ನು ತಂದು ಪ್ರಾರಂಭಿಸುವುದು ತಡವಾಗುತ್ತದೆ ಎಂದು ವಿದ್ಯಾರ್ಥಿನಿಲಯವನ್ನು ಸಂಘವು ಪ್ರಾರಂಭಿಸಿಯೇ ಬಿಟ್ಟಿತು. ಕಟ್ಟಡವು ಮೊದಲು ಪ್ರಾರಂಭಗೊಂಡಾಗ ಪ್ರಸ್ತುತ ಒಕ್ಕಲಿಗರ ಸಂಘದ ನಿವೇಶನದಲ್ಲಿ ಕಟ್ಟಡ ತಲೆ ಎತ್ತುವ ಮೊದಲೇ ಸಂಘದ ಅಧ್ಯಕ್ಷರಾಗಿದ್ದ ಉರಿಗದ ಟಿ. ಬಯ್ಯಣ್ಣನವರ ಮತ್ತೊಂದು ಗೃಹ ಅರಳೇಪೇಟೆಯಲ್ಲಿದ್ದಿತು. ಆ ವಿಸ್ತಾರವಾದ ಮನೆಯನ್ನು ವಿದ್ಯಾರ್ಥಿನಿಲಯಕ್ಕಾಗಿ ಬಿಟ್ಟುಕೊಟ್ಟರು. ವಿದ್ಯಾರ್ಥಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾದಂತೆಲ್ಲ ಕೆಲವು ಕಾಲ ಚಾಮರಾಜಪೇಟೆಯ ಮಂಡಿ ವರ್ತಕರಾಗಿದ್ದ ಎಸ್.ಕೆ. ನರಸಿಂಹಯ್ಯನವರ ಸ್ವಗೃಹದಲ್ಲಿ ಸ್ಥಳಾವಕಾಶ ಮಾಡಿಕೊಟ್ಟು ಜನಾಂಗದ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿದರು. ನಂತರ ನರಸಿಂಹಯ್ಯನವರ ಅಳಿಯಂದಿರಾದ ಶ್ರೀ ಎಸ್.ಕೆ. ಗೌಡರು ಎರಡು ವರ್ಷಗಳ ಕಾಲ ಸ್ವಂತ ಖರ್ಚಿನಿಂದ ವಿದ್ಯಾರ್ಥಿನಿಲಯವನ್ನು ನಡೆಸಿಕೊಟ್ಟರು.

1909ರಂದು ಸಂಘದ ಅಧ್ಯಕ್ಷರಾಗಿದ್ದ ಜನಾನುರಾಗಿ ಟಿ. ಬಯ್ಯಣ್ಣನವರು ವಿಧಿವಶರಾದ ಮೇಲೆ ಎಕ್ಸಿಕ್ಯುಟಿವ್ ಕೌನ್ಸಿಲ್‌ನ ಅಧ್ಯಕ್ಷರಾಗಿ ಬಿ.ಎಸ್. ಮಾರಪ್ಪನವರು ಮತ್ತು ಜನರಲ್ ಕೌನ್ಸಿಲ್ ಅಧ್ಯಕ್ಷ ಸ್ಥಾನಕ್ಕೆ ನೀಲಗಿರಿಯ ಶ್ರೀ ಸಿ. ರಂಗೇಗೌಡರು ಆಯ್ಕೆಯಾದರು. ಅದೇ ಸಮಯಕ್ಕೆ ಸಂಘಕ್ಕೆ ನಿವೇಶನ ಮಂಜೂರಾಗಿತ್ತು. ವಿಶಾಲವಾದ ನಿವೇಶನದಲ್ಲಿ ಸಂಘದ ಕಛೇರಿ, ವಿದ್ಯಾರ್ಥಿ ನಿಲಯ, ಪಾಕಶಾಲೆ, ಇತ್ಯಾದಿ ಕಟ್ಟಡಗಳು ನಿರ್ಮಾಣ ಮಾಡುವ ಯೋಜನೆ ಪೂರ್ಣಗೊಂಡಿತು. ಮಾರಪ್ಪ ಮತ್ತು ಮುನಿಸ್ವಾಮಪ್ಪನವರು ತಾವು ವಾಗ್ದಾನಮಾಡಿದಂತೆ ಮೂವತ್ತು ಸಾವಿರ ರೂಗಳನ್ನು ಖರ್ಚುಮಾಡಿದರು. 1910ರಂದು ಕಟ್ಟಡ ಶಂಕುಸ್ಥಾಪನೆಯನ್ನು ಯುವರಾಜ ಶ್ರೀ ಶ್ರೀ ಕಂಠೀರವ ನರಸರಾಜ ಒಡೆಯರು ಮಾಡಿದರು ಹಾಗೂ ಸಂಘಕ್ಕೆ ಉದಾರವಾಗಿ ಎರಡು ಸಾವಿರ ರೂಪಾಯಿಗಳನ್ನು ನೀಡಿದರು. ಆ ಹಣವನ್ನು ಸಂಘದ ಮೂಲ ಧನಕ್ಕೆ ಸೇರಿಸಿದರು.

ಕಟ್ಟಡದ ಕೆಲಸ ಬಿರುಸಿನಿಂದ ಸಾಗಿತು. ಮಾರಪ್ಪ ಮತ್ತು ಮುನಿಸ್ವಾಮಪ್ಪ –ನವರೇ ಅದರ ಮೇಲ್ವಿಚಾರಣೆಗೆ ನಿಂತರು. ಎರಡು ಸಾಲುಗಳುಳ್ಳ 18 ಮತ್ತು 19 ಕೊಠಡಿಗಳು ತಲೆ ಎತ್ತಿದವು. ಹೆಂಚಿನ ಮನೆಯಾದರೂ ಗಟ್ಟಿಮುಟ್ಟಾದ ಕಟ್ಟಡವು ತಲೆ ಎತ್ತಿತು. ಅದು 1980ರವರೆವಿಗೂ ಉತ್ತಮ ಸ್ಥಿತಿಯಲ್ಲಿತ್ತು ಎಂದರೆ ಸುಮಾರು 70–80 ವರ್ಷಗಳ ಕಾಲ ಭದ್ರವಾಗಿತ್ತು. ಸಂಘಕ್ಕೆ ಸೇರಿದ ವಿಶಾಲವಾದ ನಿವೇಶನದಲ್ಲಿ ಸಂಘದ ಆಡಳಿತ ಕಛೇರಿ, ವಿದ್ಯಾರ್ಥಿಗಳಿಗೆ ವಾಸಯೋಗ್ಯವಾದ ಕಟ್ಟಡ, ಪಾಕಶಾಲೆ, ಸ್ನಾನಗೃಹ, ಶೌಚಾಲಯ ಇತ್ಯಾದಿ ಕಟ್ಟಡಗಳು ತಲೆ ಎತ್ತಬೇಕಾದರೆ ಸುಮಾರು 10 ವರ್ಷಗಳಾದವು. ಇಷ್ಟಾದರೂ ಕಟ್ಟಡ ಕಟ್ಟಲು ಹಣದ ಕೊರತೆ ಎದ್ದು ಕಾಣುತ್ತಿದ್ದಿತು. ಕೆಲವು ಕಟ್ಟಡಗಳು ಅಪೂರ್ಣಗೊಂಡವು. ಪೂರ್ತಿ ಮಾಡಲು ಸರ್ಕಾರದ ಸಹಾಯಕ್ಕಾಗಿ ಕೈ ಚಾಚಿದರು. ದಿವಾನ್ ಶ್ರೀ ಕಾಂತರಾಜ ಅರಸರು (1918–22) ತಮ್ಮ ಕೈಲಾದಷ್ಟು ಸಹಾಯ ಮಾಡಿದರು.

ಶ್ರೀ ಬಿ.ಎಸ್. ಮಾರಪ್ಪನವರ ನಂತರ 1919ರಲ್ಲಿ ಬಿ. ನಾಗಪ್ಪನವರು ಸಂಘದ ಅಧ್ಯಕ್ಷರಾದರು. ಅವರ ಅವಧಿಯಲ್ಲಿ ಹಣದ ಕೊರತೆ ತಾರಕಕ್ಕೇರಿತು. ಅಂದಿನ ದಿವಾನರಾಗಿದ್ದ ಆಲ್ಬಿಯನ್ ಬ್ಯಾನರ್ಜಿ (1922–26)ಯವರನ್ನು ಬಿ. ನಾಗಪ್ಪನವರು ಭೇಟಿಮಾಡಿ ಸಂಘದ ಪೂರ್ವ ವೃತ್ತಾಂತವನ್ನು ತಿಳಿಸಿ ಸಂಘಕ್ಕೆ ಸರ್ಕಾರದಿಂದ ಧನ ಸಹಾಯಕ್ಕಾಗಿ ಒತ್ತಾಯಿಸಿದರು ಹಾಗೂ ಅವರನ್ನು ಸಂಘದ ಗೌರವ ಉಪಾಧ್ಯಕ್ಷರನ್ನಾಗಿ ಮಾಡಿಕೊಂಡರು. ಸುಪ್ರೀತರಾದ ದಿವಾನರು ಸರ್ಕಾರದಿಂದ 'ಮ್ಯಾಚಿಂಗ್ ಗ್ರಾಂಟ್' ಕೊಡಿಸುತ್ತೇನೆಂದು ಭರವಸೆ ನೀಡಿದರು. ಮ್ಯಾಚಿಂಗ್ ಗ್ರಾಂಟ್ ಎಂದರೆ ಸಂಘ ಅಥವಾ ಸಂಸ್ಥೆಯವರು ಸಂಘದ

ಅಭಿವೃದ್ಧಿಗಾಗಿ ಸಾರ್ವಜನಿಕರು / ಚಂದಾದಾರರಿಂದ ಹಣವನ್ನು ಸಂಗ್ರಹಿಸಿ ಎಷ್ಟು ಚಂದಾ ಹಣವನ್ನು ಶೇಖರಿಸುವರೋ ಅಷ್ಟೇ ಮೊತ್ತದ ಹಣವನ್ನು ಸರ್ಕಾರ ಕೊಡಲು ಒಪ್ಪಿಗೆ ನೀಡಿತು. ಸಂಘದ ಸಭಾ ಭವನ, ಮುದ್ರಣಾಲಯ ಹಾಗೂ ಅಡುಗೆ ಮನೆ ಇತ್ಯಾದಿ ಕಟ್ಟಡ ನಿರ್ಮಾಣಕ್ಕೆ 40,000 ರೂಪಾಯಿಗಳನ್ನು ಚಂದಾ ಮೂಲಕ ಶೇಖರಿಸಬೇಕೆಂದು ಸಂಘವು ನಿಶ್ಚಯಿಸಿತು. ಅದಕ್ಕಾಗಿ ಬಿ. ಕೆಂಪಣ್ಣ, ರಾವ್ ಸಾಹೇಬ್ ಎಚ್. ಚನ್ನಯ್ಯ, ಕಾಂತರಾಜಪುರದ ಎಂ. ನಂಜಪ್ಪ ಹೀಗೆ ಇನ್ನೂ ಮುಂತಾದ ಶ್ರೀಮಂತರು ಮತ್ತು ಉದಾರಿಗಳನ್ನು ಕಂಡು ಸಂಘದ ಪರಿಸ್ಥಿತಿಯನ್ನು, ಸರ್ಕಾರದ ನಿಲುವನ್ನು ತಿಳಿಸಿ ಉದಾರವಾಗಿ ಸಹಾಯ ಮಾಡಬೇಕೆಂದು ಕೇಳಿಕೊಂಡರು. ಇದರ ಜೊತೆಗೆ ಒಂದು ತಿಂಗಳಲ್ಲಿ 20 ಸಾವಿರ ರೂಪಾಯಿ ಹಣವನ್ನು ಹೊಂದಿಸಬೇಕಾಗಿದ್ದಿತು. ಉದಾರಿಗಳಾದ ಒಕ್ಕಲಿಗ ಮುಖಂಡರುಗಳು ವಿಶೇಷವಾಗಿ ಕಾಂತರಾಜಪುರದ ನಂಜಪ್ಪ, ಬಿ. ಕೆಂಪಣ್ಣನವರು ಉತ್ಸಾಹದಿಂದ ಓಡಾಡಿ ಒಂದು ತಿಂಗಳೊಳಗಾಗಿ 20 ಸಾವಿರ ರೂ.ಗಳನ್ನು ಕಲೆಹಾಕಿ ಮೈಸೂರು ಬ್ಯಾಂಕ್‌ನಲ್ಲಿ ಪಾವತಿ ಮಾಡಿ ಆ ರಶೀತಿಯನ್ನು ದಿವಾನರಿಗೆ ತೋರಿಸಲಾಗಿ ಆ ಆಧಾರದ ಮೇಲೆ ಸರ್ಕಾರವು ತನ್ನ ಖಾತೆಯಿಂದ 20 ಸಾವಿರ ರೂಪಾಯಿಗಳನ್ನು ಸಂಘಕ್ಕೆ ನೀಡಿತು. ಅದೂ ಸಾಲದೆ ಬಂದಾಗ ವಿಶ್ವಾಸ-ಪೂರ್ವಕವಾಗಿ ಬಿ. ನಾಗಪ್ಪನವರು ಮುಫತ್ತಾಗಿ 5 ಸಾವಿರ ರೂ.ಗಳನ್ನು ಸಂಘಕ್ಕೆ ನೀಡಿ ಸಂಘದ ಕಟ್ಟಡಗಳು ಪೂರ್ಣಗೊಳ್ಳಲು ಸಹಾಯ ಮಾಡಿದರು.

ವಿದ್ಯಾರ್ಥಿ ನಿಲಯದಲ್ಲಿ ಒಂದು ಪಾರ್ಶ್ವದಲ್ಲಿ 18 ಮತ್ತೊಂದು ಪಾರ್ಶ್ವದಲ್ಲಿ 19 ಒಟ್ಟು 37 ಕೊಠಡಿಗಳ ಎರಡು ಸಾಲು ಸಿದ್ಧವಾದವು. ಅದಕ್ಕೆ ಹೊಂದಿಕೊಂಡಂತೆ ಅಡುಗೆ ಮನೆ, ಸ್ನಾನಗೃಹ, ಶೌಚಗೃಹಗಳು, ಸಂಘದ ಆಡಳಿತ ಕಛೇರಿ, ಸಭಾಭವನ, ಒಕ್ಕಲಿಗರ ಪತ್ರಿಕೆಯ ಮುದ್ರಣಾಲಯ ಹೀಗೆ ಕಟ್ಟಡಗಳ ಸಮುಚ್ಚಾಲಯವೇ ತಲೆ ಎತ್ತಿತು. ವಿದ್ಯಾರ್ಥಿಗಳ ಕೊಠಡಿಗಳಿಗೆ ಸಾಹುಕಾರ್ ಬಿ.ಕೆ. ಚಿಕ್ಕವೀರಪ್ಪನವರು ವಿದ್ಯುತ್ (ತಮ್ಮ ಸ್ವಂತ ಖರ್ಚಿನಿಂದ) ಒದಗಿಸಿದರು.

ವಿದ್ಯಾರ್ಥಿನಿಲಯವನ್ನು ಸಂಘಕ್ಕೆ ಸಂಬಂಧಿಸಿದ ಹೊಸ ಕಟ್ಟಡಕ್ಕೆ ಬದಲಾಯಿಸಿದ ಮೇಲೆ ಬೆಂಗಳೂರಿನ ಅಕ್ಕಿಪೇಟೆಯ ನೆಶ್ಯದ ಅಂಗಡಿ ಸಾಹುಕಾರ್ ಶ್ರೀ ಬಿ. ತಿಮ್ಮೇಗೌಡರವರು ಸಂಘದ, ವಿದ್ಯಾರ್ಥಿನಿಲಯದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದರು. ನಂತರ ಶ್ರೀ ಬಿ. ಪುಟ್ಟಯ್ಯನವರು ಮೇಲ್ವಿಚಾರಣೆ ನೋಡಿಕೊಳ್ಳುವ ವೇಳೆ ಒಂದು ಪುಸ್ತಕ ಭಂಡಾರ, ವಾಚನಾಲಯ, ಇತ್ಯಾದಿ ಕಟ್ಟಡಗಳು ತಲೆ ಎತ್ತಿದವು. ನಂತರ ಬಿ.ಎಸ್. ಮಾರಪ್ಪ, ಮುನಿಸ್ವಾಮಪ್ಪನವರು, ರಾವ್ ಸಾಹೇಬ್ ಚನ್ನಯ್ಯನವರು, ಬಿ.ಹೆಚ್. ಸಂಜೀವಪ್ಪನವರು

ಸೂಪರಿಂಡೆಂಟರಾಗಿ ಸುಮಾರು ಆರು ವರ್ಷ ನೋಡಿಕೊಂಡರು. ಶಿಕ್ಷಣದ ಬಗ್ಗೆ ಸಂಘಕ್ಕೆ ತಿಳುವಳಿಕೆ ಹೇಳಲು ಎಜುಕೇಷನಲ್ ಸೂಪರ್‌ವೈಸರ್ ಎಂಬ ಒಬ್ಬರು ತಜ್ಞರನ್ನು ನೇಮಿಸಿದರು. ಬೆಂಗಳೂರಿನಲ್ಲಿ ಜನಾಂಗದ ವಿದ್ಯಾರ್ಥಿನಿಲಯ ಪ್ರಾರಂಭಗೊಳ್ಳುತ್ತಿದ್ದ ವಿಷಯ ಬೇರೆ ಕಡೆ ಪ್ರಚಾರಕ್ಕೆ ಬಂದು, ವಿದ್ಯಾರ್ಥಿಗಳು ತಂಡೋಪತಂಡವಾಗಿ ಬರಲಾರಂಭಿಸಿದರು. ಅಂತಹ ಸಮಯದಲ್ಲಿ ಸಂಘವು ಅತಿಯಾಗಿ ಜಾತಿ, ಮತ, ಪಂಗಡ ಇತ್ಯಾದಿಗಳನ್ನು ಕೂಲಂಕಷವಾಗಿ ಪರೀಶೀಲಿಸದೆ ಉದಾರವಾಗಿ ವಿದ್ಯಾರ್ಥಿನಿಲಯದಲ್ಲಿ ಅವಕಾಶ ನೀಡುತ್ತಿದ್ದಿತು. ನಾನು ಸಂದರ್ಶನ ಮಾಡಿದ ಒಕ್ಕಲಿಗ ಜಾತಿಗೆ ಸೇರದ ಎಷ್ಟೋ ಮಂದಿ ಫಲಾನುಭವಿಗಳು ತಾವು ಒಕ್ಕಲಿಗರಲ್ಲದಿದ್ದರೂ ಅನುಕೂಲ ಪಡೆದು ಸಂಘದ ಉದಾರತನವನ್ನು ಕೊಂಡಾಡಿದ್ದಾರೆ.

ವಿದ್ಯಾರ್ಥಿನಿಲಯಕ್ಕೆ ಸೇರಿದ ವಿದ್ಯಾರ್ಥಿಗಳು ಯಾವ ಪಂಗಡಕ್ಕೇ ಸೇರಿರಲಿ ಅವರಲ್ಲಿ ಭೇದ ಭಾವವಿರಲಿಲ್ಲ. ನಾವೆಲ್ಲ ಒಂದೇ ಎಂಬ ಭಾವನೆ ಇದ್ದಿತು ಹಾಗೂ ಸೋದರತಾ ಭಾವವಿದ್ದಿತು. ನಿಲಯವನ್ನು ನೋಡಿಕೊಳ್ಳಲು ಹಾಸ್ಟೆಲ್ ಮ್ಯಾನೇಜರ್ ಇರುತ್ತಿದ್ದರು. ವಿದ್ಯಾರ್ಥಿಗಳು ಆಟಪಾಠಗಳೇ ಅಲ್ಲದೆ ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ವಿದ್ಯಾರ್ಥಿನಿಲಯಕ್ಕೆ ಹಲವಾರು ಜನ ಪ್ರತಿಭಾನ್ವಿತ -ರನ್ನು ಕರೆಸಿ ಅವರಿಂದ ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗುತ್ತಿತ್ತು. ಅಂತಹ ಸಭೆ ಸಮಾರಂಭಗಳಿಗೆ ಜಸ್ಟೀಸ್ ಹೊಂಬೇಗೌಡ, ಆರ್.ಆರ್. ದಿವಾಕರ್-ರವರಂತಹ ಹಿರಿಯರು ಬಂದು ಉಪನ್ಯಾಸವನ್ನು ಕೊಡುತ್ತಿದ್ದರು.

ನಾಡಿನ ದಕ್ಷ ಆಡಳಿತಗಾರರೆಂದೇ ಹೆಸರುವಾಸಿಯಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ (1952-1956) ಜಾತಿ ಮತ ಭೇದವಿಲ್ಲದೆ ಬಡ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನಾಡಿನಾದ್ಯಂತ 'ಸಾರ್ವಜನಿಕ ವಿದ್ಯಾರ್ಥಿನಿಲಯ' ಗಳನ್ನು ತೆರೆಯಲು ವ್ಯವಸ್ಥೆ ಮಾಡಿದರು. ಅದರಂತೆ ಒಕ್ಕಲಿಗರ ಸಂಘಕ್ಕೂ ಸರ್ಕಾರದಿಂದ ಪತ್ರವೊಂದು ತಲುಪಿ ಖಾಲಿನಿವೇಶನದಲ್ಲಿ ಕಟ್ಟಡವನ್ನು ಕಟ್ಟಿಸಿಕೊಡುವುದಾಗಿ ತಿಳಿಸಿತು. ಸಂಘವು ಸರ್ಕಾರದ ಆ ಆದೇಶವನ್ನು ಸ್ವಾಗತಿಸಿ ವಿದ್ಯಾರ್ಥಿ ನಿಲಯದ ಕಟ್ಟಡ ಕಟ್ಟಲು ಜಾಗವನ್ನು ಕೊಟ್ಟಿತು. 1962ರಲ್ಲಿ ಸರ್ಕಾರದ ವೆಚ್ಚದಲ್ಲಿ ಕಟ್ಟಡ ಕಟ್ಟಲ್ಪಟ್ಟಿತು. 30.1.1964ರಂದು ಅಂದಿನ ಮುಖ್ಯಮಂತ್ರಿಗಳಾಗಿದ್ದ ಎಸ್. ನಿಜಲಿಂಗಪ್ಪನವರು ಉದ್ಘಾಟಿಸಿದರೆ ರಾಜ್ಯದ ಕಂದಾಯ ಸಚಿವರಾಗಿದ್ದ ಶ್ರೀ ಎಂ.ವಿ. ಕೃಷ್ಣಪ್ಪನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮುಂದೆ ಈ ವಿದ್ಯಾರ್ಥಿನಿಲಯವನ್ನು ಒಕ್ಕಲಿಗ ಸಂಘದ ಆಡಳಿತಕ್ಕೆ ವಹಿಸುವಾಗ ಅದಕ್ಕೆ ಸಂಬಂಧಪಟ್ಟ ಕಟ್ಟಡದ ವೆಚ್ಚವನ್ನು ಸರ್ಕಾರಕ್ಕೆ

ಕಟ್ಟಬೇಕಾಗಿತ್ತು. ಸಂಘ ಆರ್ಥಿಕವಾಗಿ ತೊಂದರೆಗೆ ಸಿಲುಕ್ಕಿದ್ದರಿಂದ ಎಂ.ವಿ. ಕೃಷ್ಣಪ್ಪನವರು ಅದನ್ನು ತಪ್ಪಿಸಿ ಸಂಘವು ಒಂದು ಬಿಡಿಗಾಸನ್ನೂ ಸರ್ಕಾರಕ್ಕೆ ಕಟ್ಟದಂತೆ ಮಾಡಿ ಸಂಘದ ಕೆಲಸ ಮಾಡಿಸಿಕೊಟ್ಟರು.

ದಿನದಿಂದ ದಿನಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗತೊಡಗಿತು. ಎಲ್ಲರಿಗೂ ಹಾಸ್ಟೆಲ್‌ನಲ್ಲಿ ಜಾಗ ಒದಗಿಸುವುದು ದುಸ್ತರವಾಯಿತು. ವಸತಿ ಸಾಲದೇ ಬಂದಾಗ ಸಂಘವು ಸಾಲಸೋಲ ಮಾಡಿ ವಿದ್ಯಾರ್ಥಿನಿಲಯದ ಮೇಲ್ಭಾಗದಲ್ಲಿ ಎಂದರೆ ಮೊದಲ ಮಹಡಿಯನ್ನು ಕಟ್ಟಿಸಿ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಮಾಡಿಕೊಟ್ಟಿತು. ಆದರೂ ಕೂಡ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾದಂತೆಲ್ಲ ಸಂಘ ತನ್ನ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆಯನ್ನು ನೀಡಿ ನಂತರ ಉಳಿದವರಿಗೆ ಅವಕಾಶ ಮಾಡಿಕೊಟ್ಟಿತು. ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ನೀಡಲು ಸಂಘಕ್ಕೆ ಬಹಳಷ್ಟು ಕಷ್ಟವಾಯಿತು. 1976 ರಿಂದ 1980ರ ಸಾಲಿನ ವರ್ಷಗಳಲ್ಲಿ ಉಚಿತ ವಸತಿಯನ್ನು ನೀಡಿ ಊಟ, ತಿಂಡಿಗೆ ಹಣ ಪಾವತಿಸುವ ವ್ಯವಸ್ಥೆಯನ್ನು ಮಾಡಿತು. 1980ರ ನಂತರ ವಿದ್ಯಾರ್ಥಿನಿಲಯವು ಅವ್ಯವಸ್ಥೆಯ ಆಗರವಾಗಿದ್ದರಿಂದ ಸಂಘವು ವಿದ್ಯಾರ್ಥಿ ನಿಲಯವನ್ನು ಅನಿವಾರ್ಯ ಕಾರಣಗಳಿಂದ ಮುಚ್ಚಬೇಕಾಯಿತು. ಆದರೆ ಇಂದು ತಾಂತ್ರಿಕ, ವೈದ್ಯಕೀಯ ಇನ್ನೂ ಮುಂತಾದ ಶಿಕ್ಷಣಾರ್ಥಿಗಳಿಗೆ ಅನುಕೂಲವಾಗುವಂತೆ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಹಾಸ್ಟಲ್‌ಗಳನ್ನು ನಡೆಸುತ್ತಿದೆ.

ವಿದ್ಯಾರ್ಥಿ ನಿಲಯಗಳ ಪಟ್ಟಿ

1. 1920 – ಒಕ್ಕಲಿಗ ಸಂಘದ ವಿದ್ಯಾರ್ಥಿ ನಿಲಯ
2. 1962 – ಸಾರ್ವಜನಿಕ ವಿದ್ಯಾರ್ಥಿ ನಿಲಯ
3. 1980 – ಬಿ.ಐ.ಟಿ. ವಿದ್ಯಾರ್ಥಿ ನಿಲಯ
4. 1982 – ವೈದ್ಯಕೀಯ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಪ್ರತ್ಯೇಕ ನಿಲಯಗಳು.

ಬೆಂಗಳೂರು ಮತ್ತು ಹೊರಭಾಗದಲ್ಲಿ ಒಕ್ಕಲಿಗರ ಸಂಘ ಮತ್ತು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪನೆ ಮಾಡಿದ ಕೆಲವು ಮಹಾನ್ ವ್ಯಕ್ತಿಗಳ ವ್ಯಕ್ತಿ ಚಿತ್ರಣ

ಒಕ್ಕಲಿಗರ ಸಂಘವು ಇಂದಿಗೆ ನೂರು ವರ್ಷಗಳ ಹಿಂದೆ ಎಂದರೆ 1906ರಲ್ಲಿ ಬೆಂಗಳೂರಿನಲ್ಲಿ ಬಿ.ಎನ್. ಚನ್ನಿಗಪ್ಪ ಬಿ. ಕೆಂಪಣ್ಣ, ಕೆ.ಹೆಚ್. ರಾಮಯ್ಯ, ಬಿ. ಪುಟ್ಟಯ್ಯ, ಮಾರಪ್ಪ, ಮುನಿಸ್ವಾಮಪ್ಪ ಇನ್ನೂ ಮುಂತಾದ ಗಣ್ಯವ್ಯಕ್ತಿಗಳಿಂದ ಸ್ಥಾಪಿಸಲ್ಪಟ್ಟಿತು. ಈ ಸಂಘವು ಜನಾಂಗದ ಬಡವಿದ್ಯಾರ್ಥಿಗಳ ಶಿಕ್ಷಣ ದಾಸೋಹಕ್ಕಾಗಿ ಟೊಂಕ ಕಟ್ಟಿ ನಿಂತಿತು. ಈ ಸಂಘವು ನಂತರದ ದಿನಗಳಲ್ಲಿ ಅನ್ಯಜಾತಿಯ ಬಡ ವಿದ್ಯಾರ್ಥಿಗಳನ್ನೂ ಪೋಷಿಸತೊಡಗಿತು. ಜನಾಂಗದ ತವನಿಧಿ ಕೆ.ಹೆಚ್.

ರಾಮಯ್ಯನರು ಮತ್ತು ಬಿ. ಪುಟ್ಟಯ್ಯನವರು ನಾಡಿನಾದ್ಯಂತ ಹಿಂದುಳಿದವರ್ಗಗಳ ಜನರು ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡಲು ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಬೇಕೆಂಬ ಭಾಷಣ ಮತ್ತು ಕರಪತ್ರಗಳು ಹಿಂದುಳಿದ ಜನರಲ್ಲಿ ಜಾಗೃತಿ ಮೂಡಿಸಲು ಇದು ಬಹು ನೆರವಾಯಿತು. ಇದೇ ರೀತಿ ಮಂಗಳೂರಿನಲ್ಲಿ ಒಕ್ಕಲಿಗ ಜನಾಂಗ ಉಪಜಾತಿಯಾದ ಬಂಟರು ಯಾನೆ ನಾಡವರು ಕೂಡ ಬಡಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಮುಂದೆ ಬೆಂಗಳೂರಿನಲ್ಲಿ ಸ್ಥಾಪನೆಯಾದ ಒಕ್ಕಲಿಗರ ಸಂಘವು ಜನಾಂಗದ ಆಶಾಕಿರಣವಾಗಿ, ಎಲ್ಲಾ ಉಪಜಾತಿಗಳನ್ನು ಬೆಸೆಯುವ ಕೊಂಡಿಯಾಗಿ, ಎಲ್ಲಾ ಹಿಂದುಳಿದ ಜಾತಿಗಳಿಗೆ ಮೇಲ್ಪಂಕ್ತಿಯಾಗಿ, ಮಾದರಿ ಸಂಸ್ಥೆಯಾಗಿ ಕಂಗೊಳಿಸಿತು. ಈ ನೂರುವರ್ಷಗಳಲ್ಲಿ ನೂರಾರು ಕಷ್ಟಕಾರ್ಪಣ್ಯಗಳನ್ನು ಅನುಭವಿಸಿತು. ಸಾಹುಕಾರ್ ಚನ್ನಯ್ಯ, ಡಿ. ಬನುಮಯ್ಯನವರಂತಹ ಶ್ರೀಮಂತರು ಕೊಡುಗೈ ದಾನಿಗಳು ಮುಂದೆ ಬಂದರೆ, ಕಾಂತರಾಜಪುರದ ಎಂ. ನಂಜಪ್ಪನವರಂತಹ ದಾನಿಗಳು ಎಲೆ ಮರೆಕಾಯಿಯಂತೆ ಜನಾಂಗದ ಶಿಕ್ಷಣ ದಾಸೋಹದ ನೆರವಿಗೆ ನಿಂತರು. ಇಂತಹ ಪ್ರಾತಃ ಸ್ಮರಣೀಯರನ್ನು ನಾವು ನೆನೆಯೋಣ.

ಉರಿಗದ ಟಿ ಬೈಯಣ್ಣ



ಬ್ರಿಟಿಷರ ಕಾಲದಲ್ಲಿ ಗುತ್ತಿಗೆ ಅಥವಾ ಕಂಟ್ರಾಕ್ಟರ್ ಮಾಡುವುದು ಸುಲಭದ ವಿಚಾರವಾಗಿರಲಿಲ್ಲ. ಅವರು ಶಿಸ್ತು. ಕೋಪ ತಾಪವನ್ನು ಸಹಿಸಬೇಕಿತ್ತು. ಉರಿಗದ ಚಿನ್ನದ ಗಣಿಯ ಕಂಟ್ರಾಕ್ಟ್ ತೆಗೆದುಕೊಂಡು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಟಿ. ಬೈಯಣ್ಣನವರು ಆಗಿನ ಕಾಲದಲ್ಲಿ ಶ್ರೀಮಂತರು ಹಾಗೂ ಇಂಗ್ಲಿಷ್ ಭಾಷೆ ಬಲ್ಲ ಬುದ್ಧಿವಂತರೂ ಆಗಿದ್ದರು. ಒಕ್ಕಲಿಗ ಜನಾಂಗದ ಬಗ್ಗೆ ಉದಾರವಾಗಿದ್ದರು. 1906ರ ಸಂದರ್ಭದಲ್ಲಿ ಒಮ್ಮೆ ಅಮಲ್ದಾರ್ ಚನ್ನಿಗಪ್ಪನವರು ಬ್ಯಾರಿಸ್ಟರ್ ನಾಗಪ್ಪನವರು ಲೋಕಾಭಿರಾಮವಾಗಿ ಮಾತನಾಡುತ್ತಾ ಒಕ್ಕಲಿಗ ಜನಾಂಗದ ಮಕ್ಕಳಿಗೆ ಅನುಕೂಲವಾಗುವಂತೆ ಒಂದು ಹಾಸ್ಟೆಲ್ ತೆರೆಯುವುದು, ಶಾಲಾ-ಕಾಲೇಜು ತೆರೆದು ಹಿಂದುಳಿದ ನಮ್ಮ ಜನಾಂಗದ ಮಕ್ಕಳನ್ನು ಮೇಲಕ್ಕೆ ತರಲು 'ಒಕ್ಕಲಿಗರ ಸಂಘ' ಸ್ಥಾಪನೆ ಮಾಡಿದರೆ ಹೇಗೆ? ಎಂದು ಯೋಚಿಸಿದರು. ಆ ಕೂಡಲೇ ಅವರಿಗೆ ನೆನಪಿಗೆ ಬಂದದ್ದು ಬ್ಯಾರಿಸ್ಟರ್ ನಾಗಪ್ಪನವರ ಮಾವನವರಾದ ಟಿ. ಬೈಯ್ಯಣ್ಣನವರು ಆ ಕೂಡಲೆ ಅವರ ಮನೆಗೆ ತೆರಳಿ ವಿಷಯವನ್ನು ತಿಳಿಸಿದರು. ಬೈಯ್ಯಣ್ಣನವವರು 10,000/- ರೂಪಾಯಿಗಳನ್ನು ದೇಣಿಗೆಯಾಗಿ ನೀಡಿದರು.

ಬೈಯ್ಯಣ್ಣನವರು ಹಣವಂತರು, ಮಾತ್ರವಲ್ಲ ಬೆಂಗಳೂರು ನಗರದ ಪ್ರತಿಷ್ಠಿತ ವ್ಯಕ್ತಿಗಳು, ಅಧಿಕಾರಿಗಳು, ಬ್ರಿಟಿಷ್ ಅಧಿಕಾರಿಗಳನ್ನು ಬಲ್ಲವರಾಗಿದ್ದರು.

ಉರಿಗದ ಟಿ. ಬೈಯ್ಯಣ್ಣನವರು 1906 ರಿಂದ 1909ರ ತನಕ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ದುಡಿದರು. ಅಂದು ಇಂದಿನಂತೆ ಹಣದ ಹೊಳೆ ಹರಿಯುತ್ತಿರಲಿಲ್ಲ. ಸಂಘದ ಪದಾಧಿಕಾರಿಗಳಾಗಲು ಹಿಂಜರಿಯುತ್ತಿದ್ದರು. ಕಾರಣವೇನೆಂದರೆ ತಮ್ಮ ಕೈಲಿದ್ದ ಹಣವನ್ನು ನೀಡಿ ಸಂಘವನ್ನು ಕಟ್ಟಬೇಕಾದ ಅನಿವಾರ್ಯ ಪರಿಸ್ಥಿತಿ ಇತ್ತು. ತಾವು ವಾಗ್ದಾನ ಮಾಡಿದ್ದಂತೆ ಹತ್ತು ಸಾವಿರ ರೂಪಾಯಿ ಹಣ ನೀಡಿ ಪ್ರೋತ್ಸಾಹಿಸಿದರು. ಅರಳೇಪೇಟೆಯಲ್ಲಿದ್ದ ತಮ್ಮ ವಿಶಾಲವಾದ ಮನೆಯನ್ನು ಸಂಘದ ಆಡಳಿತ ಕಛೇರಿಯಾಗಿಸಿಕೊಳ್ಳಲು ನೀಡಿದ್ದರು.

ಒಕ್ಕಲಿಗರ ಪತ್ರಿಕೆಯ ಸ್ಥಾಪಕರು

ಒಕ್ಕಲಿಗರ ಸಂಘವು 1906ರಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಸಂಘದ ಹಾಗೂ ರೈತರ ಅನುಕೂಲಕ್ಕಾಗಿ ನಮ್ಮದೇ ಆದ ಪತ್ರಿಕೆ ಮತ್ತು ಮುದ್ರಣಾಲಯವಿರಬೇಕೆಂದು ಕೆ.ಹೆಚ್. ರಾಮಯ್ಯ, ಬಿ. ಪುಟ್ಟಯ್ಯ, ಬ್ಯಾರಿಸ್ಟಾರ್ ನಾಗಪ್ಪ ಇವರೇ ಮುಂತಾದವರು ಟಿ. ಬೈಯ್ಯಣ್ಣನವರನ್ನು ಕೇಳಿಕೊಳ್ಳಲಾಗಿ, ಬೈಯ್ಯಣ್ಣನವರು ಉದಾರವಾಗಿ ಹತ್ತು ಸಾವಿರ ರೂಪಾಯಿ ನೀಡಿ ಮುದ್ರಣ ಯಂತ್ರಗಳನ್ನು ಖರೀದಿಸಲು ನೆರವಾದರು. ಇಷ್ಟೇ ಅಲ್ಲದೆ ಅದಕ್ಕೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಿದರು. ಅರಳೇಪೇಟೆಯ ತಮ್ಮ ದೊಡ್ಡ ಮನೆಯನ್ನು ನೀಡಿದರು. ನಂತರ ಸಿ. ರಂಗೇಗೌಡರು ಉದಾರವಾಗಿ ಹಣ ನೀಡಲಾಗಿ 15.3.1907ರಲ್ಲಿ ಬೈಯ್ಯಣ್ಣನವರ ಅರಳೇಪೇಟೆ ಮನೆಯಲ್ಲಿ ಮುದ್ರಣಾಲಯ ಸ್ಥಾಪನೆಯಾಯಿತು. ಅಂದಿನ ದಿವಾನ್ ಶ್ರೀ ವಿ.ಪಿ. ಮಾಧವರಾಯರು ಉದ್ಘಾಟಿಸಿದರು. ಸರ್ಕಾರಿ ಮುದ್ರಣಾಲಯದ ಮುಖ್ಯಸ್ಥರಾಗಿದ್ದ ಮಿ॥ ಏಟ್‌ರವರು ಸಲಹೆ ಸೂಚನೆ ನೀಡುತ್ತಿದ್ದರು.

ಬ್ಯಾರಿಸ್ಟರ್ ಬಿ. ನಾಗಪ್ಪ



ಬಿ. ನಾಗಪ್ಪನವರು ಈಗಾಗಲೇ ತಿಳಿಸಿರುವಂತೆ ಒಕ್ಕಲಿಗ ಸಮುದಾಯದಲ್ಲಿ ಕೆಲವೇ ಕೆಲವು ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಒಬ್ಬರು. ಬಾಲ್ಯದಿಂದಲೂ ಬುದ್ಧಿವಂತರಾಗಿದ್ದ ಬಿ. ನಾಗಪ್ಪನವರು ಪೂನಾದ ಫರ್ಗುಸನ್ ಕಾಲೇಜಿನಲ್ಲಿ ಕಾನೂನು ವ್ಯಾಸಂಗ ಮಾಡಿ ಪದವಿ ಪಡೆದವರು. ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ತೆರಳಿ ಇಲ್ಲಿ ಬಾರ್‌ಆಟ್‌ಲಾ ಪದವಿಯನ್ನು ಪಡೆದರು. ಭಾರತಕ್ಕೆ ಮರಳಿದ

ನಾಗಪ್ಪನವರು ದೆಹಲಿಯಲ್ಲಿ ನೆಲೆಸಿ ಲಕ್ಷಾಂತರ ರೂಪಾಯಿ ಹಣ ಸಂಪಾದಿಸಬಹುದಿತ್ತು. ಆದರೆ ಆಗರ್ಭ ಶ್ರೀಮಂತರಾದ ನಾಗಪ್ಪನವರು ಬೆಂಗಳೂರಿಗೆ ಬಂದು ನ್ಯಾಯವಾದಿಗಳಾಗಿ ಸೇವೆ ಸಲ್ಲಿಸತೊಡಗಿದರು. ಇವರು ಉರಿಗದ ಟಿ. ಬೈಯಣ್ಣನವರ ಅಳಿಯಂದಿರು.

ಈಗಾಗಲೇ ತಿಳಿಸಿರುವಂತೆ ಒಮ್ಮೆ ಅಮಲ್ದಾರ್ ಚನ್ನಿಗಪ್ಪನವರು ಹಾಗೂ ಬಿ. ನಾಗಪ್ಪನವರು ಇಂಗ್ಲೆಂಡಿನ ರೈತರ ಹಾಗೂ ಭಾರತದ ರೈತರ ಬಗ್ಗೆ ಮಾತನಾಡುತ್ತಾ ಭಾರತದ ರೈತರ ದುಸ್ಥಿತಿಯ ಬಗ್ಗೆ ಚರ್ಚಿಸಿದರು. ನಾವು ಒಕ್ಕಲಿಗರು ದೇವರ ಆಶೀರ್ವಾದದಿಂದ ನಾವು ಅನುಕೂಲವಾಗಿದ್ದೇವೆ. ಕೃಷಿಯನ್ನೇ ನಂಬಿರುವ ನಮ್ಮ ರೈತರ ಸ್ಥಿತಿ ಅಯೋಮಯವಾಗಿದೆ. ನಮ್ಮ ರೈತ ಮಕ್ಕಳಿಗೆ ಅನುಕೂಲವಾಗಲು ಶಾಲಾ-ಕಾಲೇಜು ಮತ್ತು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವ ಅಗತ್ಯದ ಬಗ್ಗೆ ಚರ್ಚಿಸಿ ಆ ಕೂಡಲೇ ತಮ್ಮ ಮಾವನವರಾದ ಉರಿಗದ ಬೈಯ್ಯಣ್ಣನವರನ್ನು ಭೇಟಿ ಮಾಡಿ ಚರ್ಚಿಸಿ ಒಕ್ಕಲಿಗರ ಸಂಘದ ಅಸ್ಥಿತ್ವಕ್ಕೆ ಬ್ಯಾರಿಸ್ಟರ್ ಬಿ. ನಾಗಪ್ಪನವರು ಆದ್ಯ ಪ್ರವರ್ತಕರು.

ಬಿ.ಎಸ್. ಮಾರಪ್ಪನವರ ನಂತರ 1919 ರಿಂದ 1924ರ ವರೆಗೆ ನಂತರ 1927 ರಿಂದ 1934ರ ವರೆಗೆ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ದುಡಿದರು. ಬ್ಯಾರಿಸ್ಟರ್ ನಾಗಪ್ಪನವರು ಸಂಘದ ಅಧ್ಯಕ್ಷರಾಗಿ ಒಕ್ಕಲಿಗರ ಸಂಘದ ಘನತೆ ಗೌರವ ಹೆಚ್ಚಿತು.

ಬ್ರಿಟಿಷ್ ರೆಸಿಡೆಂಟ್‌ರಾಗಿದ್ದ ಮೆ॥ ಫ್ರೇಜರ್‌ರವರು ಸೇರಿದಂತೆ ಸರ್ಕಾರದ ಅಧಿಕಾರಿಗಳಿಂದ ಸಂಘಕ್ಕೆ ಅನುಕೂಲವಾಗುವಂತೆ ಮಾಡಿದರು. ಸಂಘದ ಬೈಲಾದ ರೂಪುರೇಷೆಗಳನ್ನು ಹಾಕಿಕೊಟ್ಟರು. ಸಂಘದಲ್ಲಿ ನಡೆಯುತ್ತಿದ್ದ ಕಾಮಗಾರಿ ಕೆಲಸಗಳಿಗೆ ಹಣ ಸಾಲದೇ ಬಂದಾಗಲೆಲ್ಲ ತಾವುಗಳಿಸಿದ ಹಣವನ್ನು ನೀಡಿ ಕಾಮಗಾರಿಯನ್ನು ಪೂರ್ತಿಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಎಂ. ಸುಬ್ಬಯ್ಯ



ಎಂ. ಸುಬ್ಬಯ್ಯನವರು ಆಗಿನ ಕಾಲದಲ್ಲೇ ಬಿ.ಎ. ಪದವೀಧರರಾಗಿದ್ದ ಇವರು ನಮ್ಮ ಜನಾಂಗದ ಪ್ರತಿಷ್ಠಿತ ಹಾಗೂ ಜನಾನುರಾಗಿಯಾದ ವ್ಯಕ್ತಿಯಾಗಿದ್ದರು. ಒಕ್ಕಲಿಗರ ಸಂಘಕ್ಕೆ ಶಕ್ತಿಯಾದರು. ಬೆಂಗಳೂರಿನ ಪ್ರಮುಖ ಪ್ರದೇಶವಾದ ಲಾಲ್‌ಬಾಗ್ ಮತ್ತು ಮಾವಳ್ಳಿ ಪ್ರದೇಶದಲ್ಲಿ ಇವರ ಪೂರ್ವಿಕರಿಗೆ ಸೇರಿದ್ದ ಸಾಕಷ್ಟು ಭೂಮಿ ಇತ್ತು. ಮೆಸರ್ಸ್ ಎಂ. ರುದ್ರಪ್ಪ

ಅಂಡ ಸನ್ಸ್ ಎಂಬ ಅತ್ಯುತ್ತಮವಾದ ತೋಟದ ಆವರಣವು ಬೆಂಗಳೂರಿನ ಪ್ರತಿಷ್ಠಿತ ವ್ಯಕ್ತಿಗಳ ಅಧಿಕಾರಿಗಳ ನೆಚ್ಚಿನ ತಾಣವಾಗಿತ್ತು. ಸುಬ್ಬಯ್ಯನವರ ಆತಿಥ್ಯ ಸ್ವೀಕರಿಸದವರೆ ಇಲ್ಲ. ಕೆ.ಹೆಚ್. ರಾಮಯ್ಯ, ಬಿ. ಪುಟ್ಟಯ್ಯ, ಉರಿಗದ ಬೈಯ್ಯಣ್ಣ ಇವರೇ ಮುಂತಾದವರ ಪ್ರಭಾವದಿಂದ ಒಕ್ಕಲಿಗರ ಸಂಘ ಸ್ಥಾಪನೆಗೆ 'ಟೊಂಕ ಕಟ್ಟಿ' ನಿಂತರು. 1919–24ರ ಸಂದರ್ಭದಲ್ಲಿ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ದುಡಿದರು. ಒಕ್ಕಲಿಗರ ಸಂಘ ಸ್ಥಾಪನೆಯಾಗುವ ಮೊದಲು ಸಂಘದ ಸಭೆ ಸಮಾರಂಭಗಳನ್ನು ತಮ್ಮ ಮನೆ ಇಲ್ಲವೆ ತೋಟದಲ್ಲಿ ನಡೆಯಲು ಅನುವು ಮಾಡಿಕೊಡುತ್ತಿದ್ದರು. ಒಕ್ಕಲಿಗರ ವಿದ್ಯಾರ್ಥಿನಿಲಯ ಸ್ಥಾಪನೆಯಾಗುವ ಸಂದರ್ಭದಲ್ಲಿ ಅಹರ್ನಿಶಿ ದುಡಿದರು. ಬಡ ವಿದ್ಯಾರ್ಥಿಗಳಿಗೆ ವಾರನ್ನವನ್ನು ತಮ್ಮ ಮನೆಯಲ್ಲಿ ಏರ್ಪಡಿಸುತ್ತಿದ್ದರು. ನಮ್ಮ ಸಮುದಾಯದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ತಮ್ಮ ಪ್ರಭಾವ ಬಳಸಿ ಅವರಿಗೆ ವಿದ್ಯಾರ್ಥಿ ವೇತನ ದೊರೆಯುವಂತೆ ಮಾಡುತ್ತಿದ್ದರು. ಈಗಾಗಲೇ ತಿಳಿಸಿರುವಂತೆ ಎಂ. ಸುಬ್ಬಯ್ಯನವರಿಗೆ ಸರ್ಕಾರದ ಉನ್ನತಾಧಿಕಾರಿಗಳ ಪರಿಚಯವಿದ್ದಿತು.

ಒಕ್ಕಲಿಗರ ಪತ್ರಿಕೆಗೆ ಸಹಾಯ

ಪ್ರಾರಂಭದಲ್ಲಿ ಒಕ್ಕಲಿಗರ ಪತ್ರಿಕೆಯು ಲಾಭದಾಯಕವಾಗಿರಲಿಲ್ಲ. ಒಮ್ಮೆ ಮುದ್ರಣಾಲಯದ ನೌಕರರಿಗೆ ಸರಿಯಾಗಿ ಸಂಬಳ ದೊರೆಯದೆ ಕೆಲಸಕ್ಕೆ ಬಾರದಿರುವುದು ಹಾಗೂ ಕೆಲಸ ಬಿಟ್ಟು ಹೋಗುತ್ತಿರುವ ವಿಚಾರ ಸುಬ್ಬಯ್ಯನವರ ಗಮನಕ್ಕೆ ಬಂದ ಕೂಡಲೇ ನೌಕರರಿಗೆ ತಾವೇ ಸಂಬಳ ನೀಡಿ ಪ್ರೆಸ್‌ಗೆ ಲಾಭ ಬಂದಾಗ ಹಣವನ್ನು ಹಿಂಪಡೆಯುತ್ತಿದ್ದರು. ಹೆಚ್. ಗಿರಿಯಪ್ಪಗೌಡರ ನಂತರ ಒಕ್ಕಲಿಗರ ಪತ್ರಿಕೆಯ ಪ್ರಧಾನ ಸಂಪಾದಕರಾದರು. ಬಿ.ಎ. ಪದವಿಧರರಾದ ಸುಬ್ಬಯ್ಯನವರು ಒಕ್ಕಲಿಗರ ಪತ್ರಿಕೆಗೆ ಅಗ್ರ ಲೇಖನಗಳನ್ನು ಬರೆಯುತ್ತಿದ್ದರು. ಒಕ್ಕಲಿಗರ ಜನಾಂಗ ಹಾಗೂ ಒಕ್ಕಲಿಗರ ಸಂಘ ಸರ್ವತೋಮುಖವಾಗಿ ಬೆಳೆಯಲು ಕಾರಣಕರ್ತರಾದರು. ಯುವಕರಾಗಿದ್ದ ಡಿ.ಆರ್. ರಾಮಯ್ಯನವರು ಪತ್ರಿಕೆಗೆ ಲೇಖನಗಳನ್ನು ಬರೆಯುವಂತೆ ಹಾಗೂ ಬರೆದಿರುವ ಲೇಖನಗಳನ್ನು ಪರಿಶೀಲಿಸುವಂತೆ ಹೇಳುತ್ತಿದ್ದರು. ಸಂಘದ ಅಭಿವೃದ್ಧಿಯ ಹರಿಕಾರರಾದ ಎಂ. ಸುಬ್ಬಯ್ಯನವರು 1923ರಲ್ಲಿ ದೈವಾಧೀನರಾದರು.



ಬಿ. ಪುಟ್ಟಯ್ಯ

ಇಂದು ರಾಜ್ಯ ಒಕ್ಕಲಿಗರ ಸಂಘ ಈ ಪರಿ ಬೆಳೆಯಬೇಕಾದರೆ ತನು ಮನ ಧನವನರ್ಪಿಸಿದ ಕೆ.ಹೆಚ್. ರಾಮಯ್ಯ, ಬಿ. ಪುಟ್ಟಯ್ಯ, ಮಾರಪ್ಪ,

ಮುನಿಸ್ವಾಮಪ್ಪನವರಂತಹ ಪ್ರಾತಃಸ್ಮರಣೀಯರನ್ನು ಎಂದಿಗೂ ಮರೆಯುವಂತಿಲ್ಲ. ಬಿ. ಪುಟ್ಟಯ್ಯನವರು ಜನಾಂಗದ ಏಕೈಕ ಸಂಘ ತಲೆ ಎತ್ತುತ್ತಿರುವುದನ್ನು ಕಂಡು ಸಂತೋಷದಿಂದ ಅದರ ಉದ್ಧಾರಕ್ಕಾಗಿ ಶ್ರಮಿಸಿದ ಮಹಾನ್ ವ್ಯಕ್ತಿ.

ಶ್ರೀಮತಿ ತಿಮ್ಮಮ್ಮ ಮತ್ತು ಮರಿಚನ್ನಪ್ಪನವರು ಬಿ. ಪುಟ್ಟಯ್ಯನವರ ಮಾತಾಪಿತೃಗಳು. ಇವರು 1879ರಲ್ಲಿ ಜನಿಸಿದರು.

ಬಿ.ಬಿ.ಎಂ.ಪಿ.ಯ ಅಂದಿನ ಪ್ರಥಮ ಮೇಯರ್ ಆಗಿ ಆಯ್ಕೆಯಾದ ಬಿ. ಇಂದಿರಮ್ಮ ಇವರ ಸಹೋದರಿಯಲ್ಲೊಬ್ಬರು. ಸ್ವಾತಂತ್ರ್ಯಪೂರ್ವದಲ್ಲಿ ಬಡತನ ಎಂಬುದು ಸರ್ವೇಸಾಮಾನ್ಯವಾಗಿತ್ತು. ಬಾಲ್ಯದಿಂದಲೂ ಬುದ್ಧಿವಂತರಾದ ಪುಟ್ಟಯ್ಯನವರು ಅರಳೇಪೇಟೆಯ ಶಾಲೆ ನಂತರ ಲಂಡನ್ ಮಿಷನ್ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡಿದರು. 1902ರಲ್ಲಿ ಬಿ.ಎ. ಪದವಿಧರರಾದವರು.

ಪೊಲೀಸ್ ಇಲಾಖೆಯಲ್ಲಿ ಗುಮಾಸ್ತರಾಗಿ ನಂತರ ಮುಖ್ಯ ಗುಮಾಸ್ತರಾಗಿ ಸೇವೆಸಲ್ಲಿಸಿದರು. ಚಿತ್ರದುರ್ಗಕ್ಕೆ ವರ್ಗವಾಗಿ ಅಲ್ಲಿ ಸೇವೆ ಸಲ್ಲಿಸುತ್ತಿದ್ದ ವೇಳೆಯಲ್ಲಿ ಒಕ್ಕಲಿಗರ ಸಂಘ ಸ್ಥಾಪನೆಯ ವಿಷಯ ಕಿವಿಗೆ ಬೀಳುತ್ತಲೇ ಸಂತೋಷ ಭರಿತರಾದರು. ಸಂಘ ಸ್ಥಾಪನೆಗೆ ಸಂಚಾಲಕರಾಗಿ ಚಟುವಟಿಕೆಯಿಂದ ಊರಿಂದ ಊರಿಗೆ ಸುತ್ತಿ ಜನರಿಗೆ ಉತ್ಸಾಹ ತುಂಬುತ್ತಿದ್ದ ತಮ್ಮ ಬಂಧು ಕೆ.ಹೆಚ್. ರಾಮಯ್ಯನವರನ್ನು ಬಿ. ಪುಟ್ಟಯ್ಯನವರು ಕೂಡಿಕೊಂಡು ಸಂಘದ ಬೆಳವಣಿಗೆಗೆ ರೂಪುರೇಷೆಯನ್ನು ಸಿದ್ಧಗೊಳಿಸಿದರು.

ಬಹಳ ಬುದ್ಧಿವಂತರಾದ ಪುಟ್ಟಯ್ಯನವರು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಸರ್ಕಾರಿ ಮುದ್ರಣ ಇಲಾಖೆಯಲ್ಲಿ ಪ್ರೊಬೇಷನರಾಗಿ ನೇಮಕಗೊಂಡರು. ಅಂದಿನ ಬ್ರಿಟಿಷ್ ಸರ್ಕಾರ ಬಿ. ಪುಟ್ಟಯ್ಯನವರನ್ನು ಮುದ್ರಣ ತಂತ್ರಜ್ಞಾನವನ್ನು ಮತ್ತಷ್ಟು ಪಡೆಯಲು ಲಂಡನ್‌ಗೆ ಕಳುಯಿಸಿತು. ತರಬೇತಿ ಪಡೆದು ಹಿಂತಿರುಗಿದ ಪುಟ್ಟಯ್ಯನವರು ಕೆಲವೇ ಕಾಲದಲ್ಲಿ ಮುದ್ರಣ ಇಲಾಖೆಯ ನಿರ್ದೇಶಕರಾಗಿ 1923ರಲ್ಲಿ ಬಡ್ತಿ ಪಡೆದರು. 1923 ರಿಂದ 1934ರ ವರೆಗೆ ನಿರ್ದೇಶಕರಾಗಿ ದುಡಿದು ಸರ್ಕಾರಿ ಮುದ್ರಣ ಇಲಾಖೆಗೆ ಕಾಯಕಲ್ಪ ನೀಡಿದರು.

ಒಕ್ಕಲಿಗರ ಸಂಘಕ್ಕೆ ದುಡಿದ ಪುಟ್ಟಯ್ಯನವರು

ಈಗಾಗಲೇ ತಿಳಿಸಿರುವಂತೆ ಕೆ.ಹೆಚ್. ರಾಮಯ್ಯನವರು ಮತ್ತು ಬಿ. ಪುಟ್ಟಯ್ಯನವರು ಬಂಧುಗಳಾಗಿದ್ದರು. ಅವರೇ ತಿಳಿಸಿರುವಂತೆ ಒಕ್ಕಲಿಗರ ಸಂಘವೆಂಬ ರಥಕ್ಕೆ ಜೋಡಿ ಎತ್ತುಗಳು. ಸರ್ಕಾರಿ ಕೆಲಸದಲ್ಲಿ ಎಷ್ಟೇ ದುಡಿದರು ನಮ್ಮನ್ನು ಯಾರೂ ಸ್ಮರಿಸುವುದಿಲ್ಲ. ಜನರಿಗೆ ಉಪಕಾರ ಸ್ಮರಣೆ ಇಲ್ಲ. ಅದೇ ನಮ್ಮ ಸಮುದಾಯದ "ಒಕ್ಕಲಿಗರ ಸಂಘ"ಕ್ಕೆ ಹಾಗೂ ನಮ್ಮ ಸಮುದಾಯದ ಮಕ್ಕಳ ಶ್ರೇಯೋಭಿವೃದ್ಧಿಗೆ

ನೆರವಾದಂತಾಗುತ್ತದೆ ಎಂದರು. ಸ್ವಲ್ಪ ಯೋಚಿಸಿದ ಪುಟ್ಟಯ್ಯನವರು ಅದಕ್ಕೆ ಸಮ್ಮತಿ ಸೂಚಿಸಿ ನನಗೆ ಸಂಬಳರಹಿತ ರಜೆ ನೀಡಿದರೆ ಬೆಂಗಳೂರಿಗೆ ಬಂದು ಸಂಘಕ್ಕಾಗಿ ದುಡಿಯುವೆ ಎಂದೇ ಬಿಟ್ಟರು. ಕೆ.ಹೆಚ್. ರಾಮಯ್ಯನವರು ಅಂದೇ ಮೈಸೂರು ದಿವಾನರಾಗಿದ್ದ ವಿ.ಪಿ. ಮಾಧವರಾಯರನ್ನು ಭೇಟಿ ಮಾಡಿ ಎರಡು ವರ್ಷಗಳ ಕಾಲ ಸಂಬಳ ರಹಿತ ರಜೆಗೆ ಅನುವು ಮಾಡಿಕೊಟ್ಟರು. ಪುಟ್ಟಯ್ಯನವರು ಸಂಘದ ಹಣಕಾಸಿನ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರು. ಒಕ್ಕಲಿಗರ ಸಂಘದಿಂದ 1907ರಲ್ಲಿ "ಒಕ್ಕಲಿಗರ ಪತ್ರಿಕೆ"ಯು ಹೊರ ಬರಬೇಕಾದರೆ ಬಿ. ಪುಟ್ಟಯ್ಯನವರ ಪಾತ್ರ ಅತಿಮುಖ್ಯವಾದುದು ಕಾರಣವೇನೆಂದರೆ ಮುದ್ರಣ ತಂತ್ರಜ್ಞಾನದಲ್ಲಿ ಬಿ. ಪುಟ್ಟಯ್ಯನವರು ಸಿದ್ಧ ಹಸ್ತರಾಗಿದ್ದರು. ನಂತರ 1908ರಲ್ಲಿ ಸ್ವತಂತ್ರವಾಗಿ ಮುದ್ರಣಾಲಯ ಪ್ರಾರಂಭಗೊಂಡಿತು. ಇದಕ್ಕೇ ಪ್ರೇರಣ ಶಕ್ತಿ ಎಂದರೆ ಬಿ. ಪುಟ್ಟಯ್ಯನವರು. (ಹೆಚ್ಚಿನ ವಿವರಣೆಗಳಿಗೆ 'ಒಕ್ಕಲಿಗರ ಪತ್ರಿಕೆ' ಅಧ್ಯಾಯವನ್ನು ನೋಡಿ) ಸರ್ಕಾರದಿಂದ ಬರುತ್ತಿದ್ದ ಸಂಬಳವನ್ನು ಬಿಟ್ಟು ಅಲ್ಲೂ ಸಂಬಳವಿಲ್ಲದೆ ಇಲ್ಲೂ ಸಂಬಳವಿಲ್ಲದೆ ನಮ್ಮ ಸಮುದಾಯಕ್ಕಾಗಿ ದುಡಿದ ಮಹಾನ್ ವ್ಯಕ್ತಿ.

ಬಿ. ಪುಟ್ಟಯ್ಯನವರು ಬಹಳ ಬುದ್ಧಿವಂತರು ಸಚ್ಚಾರಿತ್ರರಾಗಿದ್ದರು. ಬ್ರಹ್ಮ ಸಮಾಜ, ಆರ್ಯ ಸಮಾಜ, ಮಿಥಿಕ್ ಸೊಸೈಟಿ, ಕನ್ನಡ ಸಾಹಿತ್ಯ ಪರಿಷತ್‌ನಂತಹ ವಿದ್ವತ್ ಸಂಘ-ಸಂಸ್ಥೆಗಳೊಂದಿಗೆ ಕೈ ಜೋಡಿಸಿದರು. 1918 ರಿಂದ 1944ರ ತನಕ ಬೆಂಗಳೂರಿನ ಸಿವಿಲ್ ಅಂಡ್ ಸೋಷಿಯಲ್ ಪ್ರೋಗ್ರೆಸ್ ಅಸೋಸಿಯೇಷನ್ ಎಂಬ ಸಿವಿಲ್ ಸೊಸೈಟಿಯ ಗೌರವ ಕಾರ್ಯದರ್ಶಿಯಾಗಿ ದುಡಿದರು. ಪ್ರೊ. ಸಿ.ಆರ್. ರೆಡ್ಡಿ, ಡಿ.ವಿ. ಗುಂಡಪ್ಪ, ಬಿ.ಎಂ.ಶ್ರೀಕಂಠಯ್ಯ, ಪುಟ್ಟಣ್ಣಚೆಟ್ಟಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರಂತಹ ಮೇಧಾವಿಗಳೊಂದಿಗೆ ಒಡನಾಟವನ್ನೊಂದಿದ್ದರು. ಅತಿಥಿ ಸತ್ಕಾರದಲ್ಲಿ ಎತ್ತಿದ್ದ ಕೈ. ಪುಟ್ಟಪ್ಪನವರು ಮುದ್ರಣ ತಂತ್ರಜ್ಞಾನವನ್ನು ಬಲ್ಲವರಾದ್ದರಿಂದ ಅವರ ಸಹಾಯದಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಬಿ.ಎಂ. ಶ್ರೀ.ಯವರು ಪರಿಷತ್ತಿನಲ್ಲಿ 'ಅಚ್ಚುಕೂಟ'ವು ಸ್ಥಾಪನೆಯಾಯಿತು. ಇವರ ಕಾಲದಲ್ಲೇ ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನುಡಿ' ಎಂಬ ಪತ್ರಿಕೆಯ ಮೊದಲ ಸಂಚಿಕೆ ಹೊರ ಬಂದದ್ದು. ಮೇಧಾವಿಗಳೇ ತುಂಬಿದ್ದ ಮಿಥಿಕ್ ಸೊಸೈಟಿಯ ವಿಚಾರ ಸಂಕಿರಣದಲ್ಲಿ "ಬೆಂಗಳೂರಿನ ಕೆಂಪೇಗೌಡ" ಮತ್ತು ಅವರ ವಂಶಸ್ಥರು "ಚಿಕ್ಕದೇವರಾಯ ಒಡೆಯರ ಆಳ್ವಿಕೆಯಲ್ಲಿ ಮೈಸೂರು, "ಮೈಸೂರು ರತ್ನ ಸಿಂಹಾಸನ" ಇವೇ ಮುಂತಾದ ಸಂಶೋಧನಾತ್ಮಕ ಪ್ರಬಂಧಗಳನ್ನು ಮಂಡಿಸಿದರು.

ಹೀಗೆ ಬಿ. ಪುಟ್ಟಯ್ಯನವರು ನಮ್ಮ ಜನಾಂಗದ ಮೇರು ವ್ಯಕ್ತಿಯಾಗಿ ನಮ್ಮ ಸಂಘಕ್ಕೆ ಒಂದು ಶಕ್ತಿಯಾಗಿ ದುಡಿದರು. ಇವರ ಪುತ್ರ ಪದ್ಮಶ್ರೀ ಪ್ರಶಸ್ತಿ ವಿಜೇತ

ಬಿ.ಪಿ. ರಾಧಾಕೃಷ್ಣರವರು ಶ್ರೇಷ್ಠ ಭೂಗರ್ಭಶಾಸ್ತ್ರಜ್ಞರಾಗಿ ದುಡಿದರು. ಕನ್ನಡ ಸಾಹಿತ್ಯಕ್ಕೂ ಅಪಾರ ಕೊಡುಗೆಯನ್ನು ನೀಡಿದ್ದಾರೆ. (ನೋಡಿ ಬಿ.ಪಿ. ರಾಧಾಕೃಷ್ಣ ಅಧ್ಯಾಯವನ್ನು).

ಶ್ರೀ ಕೆ.ಹೆಚ್. ರಾಮಯ್ಯ



ಒಕ್ಕಲಿಗ ಜನಾಂಗದ ಕುಲಪುತ್ರನೆಂದೇ ಹೆಸರು ವಾಸಿಯಾಗಿರುವ ಕಲ್ಲುದೇವರಹಳ್ಳಿ ಹನುಮಯ್ಯ ರಾಮಯ್ಯನವರು. ಹನುಮಯ್ಯ ಮತ್ತು ನಂಜಮ್ಮ ದಂಪತಿಗಳಿಗೆ ಜನಿಸಿದರು. ರಾಮಯ್ಯನವರು ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯನ್ನು ಗಳಿಸಿ ಅಂದಿನ ಲಂಡನ್ ಮಿಷನ್ ಸ್ಕೂಲ್‌ನಲ್ಲಿ ಪ್ರೌಢ ಶಿಕ್ಷಣವನ್ನು ಪಡೆದು ನಂತರ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಮೊದಲ ದರ್ಜೆಗಳಿಸಿ ಸೆಂಟ್ರಲ್ ಕಾಲೇಜಿನಲ್ಲಿ ಎಫ್.ಎ.ಯನ್ನು 1899ರಲ್ಲಿ ಮುಗಿಸಿದರು.

ಅಂದು ನಮ್ಮ ರಾಜ್ಯದಲ್ಲಿ ವಿಶ್ವವಿದ್ಯಾನಿಲಯವಿಲ್ಲದಿದ್ದುದರ ಕಾರಣ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ. ವ್ಯಾಸಂಗಕ್ಕೆ ಸೇರಿ 1903ರಲ್ಲಿ ಬಿ.ಎ. ಪದವೀಧರರಾಗಿ ಬಿ.ಎಲ್. ಪದವಿಗೆ ಮದ್ರಾಸಿನಲ್ಲೇ ಸೇರಿದರು. ಆದರೆ ಮದ್ರಾಸಿಗೆ ಭೇಟಿ ನೀಡಿದ್ದ ಸ್ವಾಮಿ ವಿವೇಕಾನಂದರ ಪ್ರಭಾವಕ್ಕೊಳಗಾದ ರಾಮಯ್ಯನವರ ಮನಸ್ಸು ದೀನ ದಲಿತರಿಗೆ ಸಹಾಯ ಮಾಡಲು ಹಾತೊರೆಯುತ್ತಿತ್ತು. ಪಾರಮಾರ್ಥಿಕದೆಡೆಗೆ ತಿರುಗಿದ ಮನಸ್ಸಿನಿಂದಾಗಿ ವಿದ್ಯಾರ್ಜನೆಯು ಕುಂಠಿತಗೊಂಡಿತು. ಕಾನೂನು ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಕೊನೆಗೆ ಖಾಸಗಿಯಾಗಿ ಕಾನೂನು ಪರೀಕ್ಷೆ ತೆಗೆದುಕೊಂಡು ತೇರ್ಗಡೆಯಾದರು.

ಮದ್ರಾಸ್‌ನಿಂದ ಬೆಂಗಳೂರಿಗೆ ಹಿಂತಿರುಗಿದ ರಾಮಯ್ಯನವರು, ಸರ್ಕಾರಿ ಕೆಲಸಕ್ಕೆ ಸೇರಿದರು. ರಾಮಯ್ಯನವರ ಶಿಸ್ತು, ದಕ್ಷತೆ, ಪ್ರಾಮಾಣಿಕತೆಗಳು ಹಿರಿಯ ಅಧಿಕಾರಿಗಳ ಮನಸ್ಸನ್ನು ಸೂರೆಗೊಂಡಿತು. ಅಷ್ಟೇ ಅಲ್ಲ ದಿವಾನರಾಗಿದ್ದ ವಿ.ಪಿ. ಮಾಧವರಾಯರ ಗಮನಕ್ಕೆ ಬಂದು ಮಾಧವರಾಯರು ರಾಮಯ್ಯನವರನ್ನು ಮೈಸೂರು ಪ್ರಾಂತ್ಯದ ಗ್ರಾಮಾಂತರ ಪ್ರದೇಶಗಳಿಗೆ ಶಿಕ್ಷಣ ಮಹತ್ವವನ್ನು ಕುರಿತು ಸಲಹೆ ಸೂಚನೆಗಳನ್ನು ನೀಡಲು ಗ್ರಾಮಾಂತರ ಪ್ರದೇಶಗಳಿಗೆ ಪ್ರವಾಸ ಮಾಡಲು ಕಳುಹಿಸಿದರು. ರಾಮಯ್ಯನವರು ತಮಗೆ ವಹಿಸಿದ ಕೆಲಸವನ್ನು ಯಶಸ್ವಿಯಾಗಿ ನೆರವೇರಿಸಿದರು. ಸುಪ್ರೀತರಾದ ದಿವಾನರು ರಾಮಯ್ಯನವರನ್ನು ನಾಲ್ವಡಿ ಕೃಷ್ಣರಾಜ

ಒಡೆಯರಿಗೂ, ಯುವರಾಜ ಕಂಠೀರವ ನರಸರಾಜ ಒಡೆಯರಿಗೂ ಪರಿಚಯಿಸಿದರು. ಯುವರಾಜ ಕಂಠೀರವ ನರಸರಾಜ ಒಡೆಯರು, ರಾಮಯ್ಯನವರ ಕೊನೆಯುಸಿರು ಇರುವ ತನಕ ಆಪ್ತಮಿತ್ರರಾದರು. ಇದರಿಂದಾಗಿ ಅವರಿಗೆ ಅರಮನೆಯ ಜೊತೆ ಒಳ್ಳೆಯ ಸಖ್ಯ ಬೆಳೆಯಿತು.

1906ರಲ್ಲಿ ಅಮಲ್ದಾರ್ ಬಿ.ಎನ್. ಚನ್ನಿಗಪ್ಪ, ಪ್ಲೀಡರ್ ಬಿ. ಕೆಂಪಣ್ಣ, ಬಿ.ಎಸ್. ಮಾರಪ್ಪ, ಬಿ.ಎಸ್. ಮುನಿಸ್ವಾಮಪ್ಪ ಇನ್ನೂ ಮುಂತಾದ ಜನಾಂಗದ ಮಹನೀಯರು ಒಕ್ಕಲಿಗ ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ ವ್ಯಾಸಂಗ ಮಾಡಲು ಅನುಕೂಲವಾಗುವಂತೆ ಒಕ್ಕಲಿಗರ ಸಂಘವನ್ನು ಪ್ರಾರಂಭಿಸಲು ತೀರ್ಮಾನಿಸಿದ್ದರು. ಶಿಕ್ಷಣ ಪ್ರಸರಣ ಮಾಡಲು ಹಿಂದುಳಿದಿದ್ದ ಒಕ್ಕಲಿಗ ಜನಾಂಗದ ಜನಗಳಲ್ಲಿ ಶಿಕ್ಷಣಾಸಕ್ತಿ ಮೂಡಿಸಲು ರಾಮಯ್ಯನವರ ಸೇವೆಯನ್ನು ಎರವಲಾಗಿ ಕೊಡಬೇಕೆಂದು ದಿವಾನರನ್ನೂ, ಮೈಸೂರಿನ ಆಳರಸರನ್ನೂ ಜನಾಂಗದ ಮುಖಂಡರು ಕೇಳಿಕೊಂಡರು. ಸರ್ಕಾರ ಮಾಡಬೇಕಾದ ಕೆಲಸವನ್ನು ಸಾರ್ವಜನಿಕರಿಂದಲೇ ಆಗುವುದಾದರೆ ಆಗಲಿ ಎಂದು ತೀರ್ಮಾನಿಸಿದ ಅಂದಿನ ಸರ್ಕಾರ ರಾಮಯ್ಯನವರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಿದುದೇ ಅಲ್ಲದೆ ಒಕ್ಕಲಿಗರ ಸಂಘದ ಅಭಿವೃದ್ಧಿಗೆ ದುಡಿಯಲು ಅವಕಾಶ ಮಾಡಿಕೊಟ್ಟಿತು. ರಾಮಯ್ಯನವರು ಒಕ್ಕಲಿಗರ ಸಂಘವನ್ನು ಕಟ್ಟಲು ಪ್ರಾರಂಭಿಸಿದಂತೆಲ್ಲಾ ಸಂಘ ಮತ್ತು ಅರಮನೆಯ ನಡುವೆ ರಾಮಯ್ಯನವರು ಸೇತುವೆಯಂತೆ, ಬಿಗಿಕೊಂಡಿಯಂತೆ ಕೆಲಸ ಮಾಡಿದರು. ಪ್ರಸ್ತುತವಿರುವ ಸಂಘದ ನಿವೇಶನ ಸರ್ಕಾರದಿಂದ ಸಂಘಕ್ಕೆ ದಕ್ಕ ಬೇಕಾದರೆ ರಾಮಯ್ಯನವರು ಬಹುವಾಗಿ ಶ್ರಮಿಸಿದರು.

ಬೆಂಗಳೂರು, ಮೈಸೂರು, ಮೇಲುಕೋಟೆ ಇನ್ನೂ ಮುಂತಾದ ಕಡೆ ರೈತ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಉಚಿತ ವಿದ್ಯಾರ್ಥಿ ನಿಲಯಗಳು ಪ್ರಾರಂಭವಾಗಲು, ಸರ್ಕಾರದ ಉದಾರ ನೆರವು ಸಿಗಲು, ಬೆಂಗಳೂರಿನ ಒಕ್ಕಲಿಗರ ಸಂಘ ಸ್ಥಾಪನೆ, ಮುದ್ರಣಾಲಯ, ಒಕ್ಕಲಿಗರ ಪತ್ರಿಕೆಯು ಹೊರಬರಲು ರಾಮಯ್ಯನವರೇ ಪ್ರಮುಖ ಕಾರಣಕರ್ತರು.

ದೀನ ದಲಿತರ ಬಗ್ಗೆ ದಯೆ, ಕರುಣೆಯಿದ್ದ ರಾಮಯ್ಯನವರನ್ನು ಸರ್ಕಾರವು ಡಿಪ್ರೆಸ್ಡ್ ಕ್ಲಾಸ್ ಆಫೀಸರ್ (ನಿಮ್ನ ವರ್ಗದ ಅಧಿಕಾರಿಯನ್ನಾಗಿ) ನೇಮಿಸಿತು. ಶ್ರೀಯುತರು ರಾಜ್ಯದಲ್ಲಿ ಆದಿ ಕರ್ನಾಟಕ ಸಂಸ್ಥೆಯನ್ನು ಪ್ರಾರಂಭಿಸಿದರು. ಸವರ್ಣೀಯರು ರಾಮಯ್ಯನವರನ್ನು ಪಂಚಮರ ಅಧಿಕಾರಿಯೆಂದು ಕರೆಯುತ್ತಿದ್ದರು. ರಾಮಯ್ಯನವರ ನಿಷ್ಕಾಮ ಸೇವೆಯನ್ನು ಮನಗಂಡು ಸರ್ಕಾರವು 1913ರಲ್ಲಿ ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಿಕೊಟ್ಟಿತು. 1917ರಲ್ಲಿ ಬ್ಯಾರಿಸ್ಟರ್

ಪದವಿಯೊಂದಿಗೆ ತಾಯ್ನಾಡಿಗೆ ಮರಳಿದರು. ಉನ್ನತ ವ್ಯಾಸಂಗ ಮಾಡಿ ವಿದೇಶದಿಂದ ಮರಳಿದ ರಾಮಯ್ಯನವರಿಗೆ ಅಂದಿನ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರನ್ನಾಗಿ ನೇಮಿಸಲಾಯಿತು. ನಂತರ ಉಪನಿರ್ದೇಶಕರಾಗಿ ಬಡ್ತಿ ಪಡೆದರು. ದಕ್ಷತೆ, ಪ್ರಾಮಾಣಿಕತೆಗೆ, ಹೆಸರಾದ ಇವರನ್ನು 1922ರಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರರ್ ಆಗಿ ನೇಮಿಸಿದರು. ಶ್ರೀಯುತರು ಪ್ರಸ್ತುತ ಹಿರಿಯ ಐ.ಎ.ಎಸ್. ಅಧಿಕಾರಿಗಳ ಮಟ್ಟಕ್ಕೇರಿದ್ದರು. ಸಹಕಾರಿ ಆಂದೋಲನದ ಹರಿಕಾರರಾಗಿ ಕೆಲಸ ಮಾಡಿದರು. ಸರ್ಕಾರವು ಸಹಕಾರಿ ಖಾತೆಯ ಜೊತೆಗೆ ಮುಜರಾಯಿ ಖಾತೆಯನ್ನು ಅವರಿಗೆ ವಹಿಸಿತು. ಮುಜರಾಯಿ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದ ರಾಮಯ್ಯನವರಿಗೆ ಧರ್ಮದತ್ತಿ ಸಂಸ್ಥೆಗಳಲ್ಲಿ ತಲೆದೋರುತ್ತಿದ್ದ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಬೇಕಾಗಿತ್ತು. ಇಂತಹ ಸಮಯದಲ್ಲಿ ಶ್ರವಣಬೆಳಗೊಳದ ಜೈನಪೀಠ, ಆದಿಚುಂಚನಗಿರಿ ಮಠದ ಪೀಠಾಧಿಕಾರಿಯ ಆಯ್ಕೆ ಇನ್ನೂ ಮುಂತಾದ ಸಮಸ್ಯೆಗಳು ಎದುರಾದಾಗ ರಾಮಯ್ಯನವರು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಿದರು.

ರಾಮಯ್ಯನವರ ದಕ್ಷತೆ, ಕೀರ್ತಿ ಹೆಚ್ಚಾದಂತೆಲ್ಲ ಯುವರಾಜ ಶ್ರೀಕಂಠೀರವ ನರಸರಾಜ ಒಡೆಯರ ನಡುವೆ ಮೈತ್ರಿಯೂ ಹೆಚ್ಚಾಯಿತು. ಯುವರಾಜರು ರಾಮಯ್ಯನವರನ್ನು ಎಷ್ಟೋ ಸಲ ನನ್ನ ಆಪ್ತಮಿತ್ರ, ದಾರ್ಶನಿಕ ಎಂದೆಲ್ಲ ಹೇಳಿದ್ದುಂಟು. 1933 ಮಾರ್ಚಿಯಲ್ಲಿ ರಾಮಯ್ಯನವರು ಯುವರಾಜರೊಂದಿಗೆ ಯೂರೋಪ್ ಪ್ರವಾಸವನ್ನು ಯಶಸ್ವಿಯಾಗಿ ಕೈಗೊಂಡು ವಾಪಸ್ಸಾದರು. ರಾಮಯ್ಯನವರ ಅರಮನೆಯೊಂದಿಗಿನ ಸಂಬಂಧ ಗಾಢವಾದಂತೆಲ್ಲಾ ಒಕ್ಕಲಿಗರ ಸಂಘಕ್ಕೆ ಲಾಭವಾಗುತ್ತಿತ್ತೇ ವಿನಹ ನಷ್ಟವಾಗಲಿಲ್ಲ.

1933 ಅಕ್ಟೋಬರ್ 3 ರಿಂದ 7ನೇ ತಾರೀಖಿನವರೆಗೆ ವಿದೇಶದ ಪ್ರವಾಸದ ಅನುಭವವನ್ನು ತಿಳಿಸಲು ಮೈಸೂರಿನ ಪುರಭವನದಲ್ಲಿ ಸಾರ್ವಜನಿಕ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಶ್ರೀಯುತರು ಭಾಷಣ ಮಾಡಿದರು. ಭಾಷಣದ ನಡುವೆ ಆಯಾಸವಾಗಿ ಕುಳಿತು ಬಿಟ್ಟರು. ಸಭೆ ಮುಗಿಯುತ್ತಲೇ ತಮ್ಮ ಅಳಿಯ ಎಚ್.ಸಿ. ದಾಸಪ್ಪನವರ ಮನೆಗೆ ತೆರಳಿದರು. ಲಘು ಹೃದಯಾಘಾತವಾಯಿತು. ಮಾರನೆಯ ದಿನ ಚೇತರಿಸಿಕೊಂಡರು. ಮಾರನೆಯ ದಿನ ಆಳರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರನ್ನು ಭೇಟಿ ಮಾಡಿಬಂದರು. 1933 ಅಕ್ಟೋಬರ್ 5 ಗುರುವಾರ ಮತ್ತೊಮ್ಮೆ ಹೃದಯಾಘಾತವಾಗಿ ಇಹಲೋಕ ತ್ಯಜಿಸಿದರು. ಹಿಂದಿನ ದಿನ ರಾಜರ ಜೊತೆ ಸಮಾಲೋಚನೆಯ ಉದ್ದೇಶವೇನೆಂದರೆ ರಾಮಯ್ಯನವರನ್ನು ಮೈಸೂರಿನ ದಿವಾನರನ್ನಾಗಿ ಮಾಡುವುದಕ್ಕೆ ಸಂಬಂಧಿಸಿದ್ದು. ಜನಾಂಗದ ಮೇರು ವ್ಯಕ್ತಿಗೆ

ಸಲ್ಲಬೇಕಾಗಿದ್ದ ಹುದ್ದೆ ಅದೊಂದೆ. ಒಕ್ಕಲಿಗ ಜನಾಂಗದ ಕುಲಪುತ್ರನೊಬ್ಬನಿಗೆ ದಿವಾನ್ ಹುದ್ದೆ ಕೈತಪ್ಪಿತು.

ರಾಮಯ್ಯನವರು ರಾಜಮನೆತನದೊಂದಿಗೆ ಎಷ್ಟು ಗಾಢ ಸ್ನೇಹವನ್ನು ಹೊಂದಿದ್ದರು ಎಂದರೆ ರಾಮಯ್ಯನವರ ಪಾರ್ಥೀವ ಶರೀರವನ್ನು ಮೈಸೂರಿನ ರಾಜ ವಂಶಸ್ಥರಿಗೆ ಮೀಸಲಾದ ರುದ್ರಭೂಮಿಯಲ್ಲಿ ಸಂಸ್ಕಾರ ಮಾಡಿಸಿದುದೇ ಅಲ್ಲದೆ ಯುವರಾಜ ಕಂಠೀರವ ನರಸರಾಜ ಒಡೆಯರು ಸಮಾಧಿಯ ಮೇಲೆ ಮಂಟಪ ಕಟ್ಟಿಸಿ ರಾಮಯ್ಯನವರ ಗುಣಗಾನ ಮಾಡುವ ಶಾಸನವನ್ನು ಬರೆಸಿದ್ದಾರೆ. ಬಹುಶಃ ದಿವಾನ್‌ಗಿರಿಗಿಂತಲೂ ಹೆಚ್ಚಿನ ಸ್ಥಾನಮಾನವನ್ನು ತಮ್ಮ ಹೃದಯಾಂತರಾಳದಲ್ಲಿ ಆಳರಸರು ರಾಮಯ್ಯನವರಿಗೆ ನೀಡಿದುದು ಬಹುಶಃ ಒಕ್ಕಲಿಗ ಕುಲಪುತ್ರನೊಬ್ಬನಿಗೆ ನೀಡಿದ ಮಹತ್ವಪೂರ್ಣ ಗೌರವ ಎಂದು ಹೇಳಬಹುದು.

ಶ್ರೀ ಬಿ.ಎಸ್. ಮಾರಪ್ಪ ಮತ್ತು ಶ್ರೀ ಬಿ.ಎಸ್. ಮುನಿಸ್ವಾಮಪ್ಪ





ರಾಜ್ಯ ಒಕ್ಕಲಿಗರ ಸಂಘ ಎಂದ ಕೂಡಲೆ ನೆನಪಿಗೆ ಬರುವುದು ಸಂಘದ ನಿರ್ಮಾಪಕರು ಮತ್ತು ಸ್ಥಾಪಕರು. ಸ್ಥಾಪಕರಲ್ಲಿ ಪ್ರಮುಖರಾಗಿ 1909 ರಿಂದ 1919ರ ವರೆಗೆ ಸುಮಾರು ಹತ್ತು ವರ್ಷಗಳ ಕಾಲ ಸಂಘದ ಅಧ್ಯಕ್ಷರಾಗಿ ದುಡಿದ ಅಪೂರ್ವ ಜೋಡಿ ಜೀವಗಳೆಂದರೆ ಮಾರಪ್ಪ ಮತ್ತು ಮುನಿಸ್ವಾಮಪ್ಪನವರು.

ಮಾರಪ್ಪ ಮತ್ತು ಮುನಿಸ್ವಾಮಪ್ಪನವರು ಬೂದಿಗೆರೆ ಸಿದ್ದಪ್ಪನವರ ಜೇಷ್ಠ ಪುತ್ರರು. ಇವರು ಬೆಂಗಳೂರಿಗೆ ಸೇರಿದ ಹಲಸೂರಿನಲ್ಲಿ ಜನಿಸಿದರು. ಇವರಿಬ್ಬರೂ ಹೆಚ್ಚಿನ ಶಿಕ್ಷಣವನ್ನು ಪಡೆಯಲಾಗದೆ ಅರ್ಧಕ್ಕೆ ತಮ್ಮ ಶಿಕ್ಷಣವನ್ನು ನಿಲ್ಲಿಸಬೇಕಾಯಿತು. ಸಹೋದರರಿಬ್ಬರೂ ತಮ್ಮ 18–20ರ ತಾರುಣ್ಯದಲ್ಲೇ ಸಣ್ಣಪುಟ್ಟ ಕಂಟ್ರಾಕ್ಟ್ ಕೆಲಸಕ್ಕೆ ಕೈಹಾಕಿದರು. ಅದರ ಪರಿಣಾಮವಾಗಿ ನಗರದಲ್ಲಿ ಬಹು ದೊಡ್ಡ ಕಂಟ್ರಾಕ್ಟರ್ ಆದರು, ಮುಂದೆ ಹೆಸರುಘಟ್ಟದಿಂದ ಬೆಂಗಳೂರಿಗೆ ನೀರು ಸರಬರಾಜು ಮಾಡುವ ಗುತ್ತಿಗೆ ಹಿಡಿದರು. ಕೋಲಾರದ ಉರಿಗಾಂ ಚಿನ್ನದ ಗಣಿಯ ಕಟ್ಟಡ ನಿರ್ಮಾಣ ಕಾರ್ಯದ ಗುತ್ತಿಗೆಯನ್ನು ಸುಮಾರು 12 ವರ್ಷಗಳ ಕಾಲ ನಿರ್ವಹಿಸಿದರು. ಸೋದರರಿಬ್ಬರೂ

ಕೂಡಿ ಶ್ರದ್ಧೆ ಮತ್ತು ಪ್ರಾಮಾಣಿಕವಾಗಿ ದುಡಿದು ನಾಡಿನ ಹೆಸರಾಂತ ಗುತ್ತಿಗೆದಾರರಾದರು. ಕ್ರಮೇಣ ಸೇಲಂ ಮತ್ತು ಮದ್ರಾಸ್ ನಂತಹ ಪಟ್ಟಣಗಳಲ್ಲೂ ಗುತ್ತಿಗೆ ಹಿಡಿದು ಹೆಸರಾಂತ ಗುತ್ತಿಗೆದಾರರೆಂಬ ಕೀರ್ತಿಗೆ ಭಾಜನರಾದರು. ಇದೇ ಕಾರಣದಿಂದಾಗಿ ಇವರ ಮನೆಯಲ್ಲಿ ಲಕ್ಷ್ಮೀ ತಾಂಡವವಾಡತೊಡಗಿದಳು.

ಕೆಲವರಿಗೆ ಹಣ, ಐಶ್ವರ್ಯ ಬಂದಂತೆಲ್ಲ ಲೋಭ, ಮದ, ಮತ್ಸರಗಳೂ ಜೊತೆಯಲ್ಲಿಯೇ ಬರುತ್ತವೆ. ಆದರೆ ಅದಕ್ಕೆ ಹೊರತಾಗಿ ಈ ಸಹೋದರರಿಗೆ ಸಹೃದಯ, ವಿನಯ, ದಯೆ, ಧರ್ಮಗಳು ನೆಲಸಿದವು.

ಬೆಂಗಳೂರು ನಿರ್ಮಾಪಕ ಕೆಂಪೇಗೌಡನ ಕಾಲದಲ್ಲಿ ನಿರ್ಮಾಣಗೊಂಡ ಹೆಸರಾಂತ ದೇವಾಲಯ ಹಲಸೂರಿನ ಸೋಮೇಶ್ವರ ದೇವಾಲಯ ಶಿಥಿಲಾವಸ್ಥೆಗೆ ತಲುಪಿದಾಗ ದೇವಾಲಯದ ದುರಸ್ಥಿಯನ್ನು ಮಾಡಿಸಿ, ಕ್ರಮವಾಗಿ ಪೂಜೆ, ಪುರಸ್ಕಾರ-ಗಳು, ದಾನ, ಧರ್ಮ, ನೈವೇದ್ಯಗಳು ಯಥಾ ಪ್ರಕಾರ ನಡೆಯುವಂತೆ ಮಾಡಿದರು.

1906ರ ಸಮಯದಲ್ಲಿ ಬಿ.ಎನ್. ಚನ್ನಿಗಪ್ಪನವರು, ಬ್ಯಾರಿಸ್ಟರ್ ಬಿ. ನಾಗಪ್ಪ, ಬಯ್ಯಣ್ಣ, ಬಿ. ಕೆಂಪಣ್ಣ ಇನ್ನೂ ಮುಂತಾದವರು ಸೇರಿ ಒಕ್ಕಲಿಗರ ಸಂಘದ ಸ್ಥಾಪನೆಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಮಹಾಶಯರು ತಮ್ಮಲ್ಲೇ ಮಾತನಾಡಿಕೊಂಡು ತಮ್ಮ ಜನಾಂಗದವರೂ, ಉದಾರಿಗಳೂ ಆದ ಬಿ.ಎಸ್. ಮಾರಪ್ಪ ಮತ್ತು ಮುನಿಸ್ವಾಮಪ್ಪ ಸಹೋದರರನ್ನು ಒಂದು ದಿನ ಭೇಟಿ ಮಾಡಿ ಒಕ್ಕಲಿಗ ವಿದ್ಯಾರ್ಥಿಗಳಿಗೆ ಬೆಂಗಳೂರು ಷಹರಿನಲ್ಲಿ ವ್ಯಾಸಂಗ ಮಾಡಲು ನೀರು, ನೆರಳು, ಸೂರು ಬೇಕೆಂತಲೂ ಅದಕ್ಕಾಗಿ ತಾವು ಸಹಾಯಹಸ್ತ ನೀಡಬೇಕೆಂದೂ ಕೇಳಿಕೊಂಡ ಕೂಡಲೇ ಸಂತೋಷಭರಿತರಾದ ಸಹೋದರರು ಸಂಘದ ವಿದ್ಯಾರ್ಥಿನಿಲಯದ ಕಟ್ಟಡಕ್ಕೆ ಆಗಿನ ಕಾಲಕ್ಕೇ 30 ಸಾವಿರ ರೂಪಾಯಿಗಳನ್ನು ನೀಡುವುದಾಗಿ ಘೋಷಿಸಿಯೇ ಬಿಟ್ಟರು. ಸಹೋದರರು ತಾವು ವಾಗ್ದಾನ ಮಾಡಿದಂತೆ 30 ಸಾವಿರಕ್ಕೂ ಹೆಚ್ಚು ಬೆಲೆಬಾಳುವ 20+19 ಒಟ್ಟು 39 ಸಾಲು ಮನೆ (ಹೆಂಚಿನ ಮನೆ)ಗಳನ್ನು (ಒಂದು ಕೊಠಡಿಯಲ್ಲಿ ನಾಲ್ಕರಿಂದ ಐದು ಜನ ವಾಸ ಮಾಡಲು ಅನುಕೂಲತೆ ಇದ್ದಿತು) ಕಟ್ಟಿಸಿಕೊಟ್ಟರು. ಹೀಗೆ ವಿದ್ಯಾರ್ಥಿನಿಲಯವು ತಲೆ ಎತ್ತಲು ಕಾರಣಕರ್ತರಾದರು. ಇಷ್ಟೇ ಅಲ್ಲದೆ ಅನೇಕ ಸ್ಥಳಗಳಲ್ಲಿ ನಡೆದ ಒಕ್ಕಲಿಗರ ಸಂಘದ ಸಭೆಗಳಲ್ಲಿ ಭಾಗವಹಿಸಿ ಜನಾಂಗದ ಜನರನ್ನು ಪ್ರೋತ್ಸಾಹಿಸಿದರು.

ಇವರ ಹಿರಿಯ ಸಹೋದರಿಯಾಗಿದ್ದ ಶ್ರೀಮತಿ ದೊಡ್ಡಮ್ಮನವರ ಹೆಸರಿನಲ್ಲಿ ಇವರುಗಳೂ ಕಟ್ಟಿದ ಅಲಸೂರಿನ ಕೇಂಬ್ರಿಡ್ಜ್ ರಸ್ತೆಯಲ್ಲಿರುವ ಹೆರಿಗೆ ಆಸ್ಪತ್ರೆಯು ಇಂದಿಗೂ ದೊಡ್ಡಮ್ಮನವರ ಹೆಸರನ್ನು ಹೇಳುತ್ತದೆ. ಧರ್ಮಕಾರ್ಯ ನಿರತರಾಗಿದ್ದ ಸಹೋದರರು ಮೈಸೂರಿನ ಮಂಡಿ ಮೊಹಲ್ಲಾದಲ್ಲಿ ಒಂದು ಬಡ ವಿದ್ಯಾರ್ಥಿನಿಲಯ,

ಬೆಂಗಳೂರು ಕಾಟನ್‌ಪೇಟೆಯಲ್ಲಿ ಒಂದು ಬಡ ವಿದ್ಯಾರ್ಥಿನಿಲಯವನ್ನು ಕಟ್ಟಿಸಿಕೊಟ್ಟರು. ಹಲಸೂರು ರಾಮಕೃಷ್ಣ ಮಠಕ್ಕೆ ಉದಾರವಾಗಿ ನಿವೇಶನ ನೀಡಿದರು. ಹಳೆಯ ಮದ್ರಾಸ್ ರಸ್ತೆಯಲ್ಲಿ ಅವರ ತಾಯಿಯ ಹೆಸರಿನಲ್ಲಿ ಒಂದು ವಿದ್ಯಾಪೀಠವನ್ನು ನಿರ್ಮಿಸಿದರು. ಅಲಸೂರಿನ ಸೋಮೇಶ್ವರ ದೇವಾಲಯ ಮತ್ತು ನಂದಿ ಬೆಟ್ಟದ ತಪ್ಪಲಿನಲ್ಲಿರುವ ಭೋಗನಂದೀಶ್ವರ ರಥಗಳ ನಿರ್ಮಾಣ ಮಾಡಿಸಿಕೊಟ್ಟರು. ತಾವು ಸೇಲಂ ಮತ್ತು ಮದ್ರಾಸ್ ಪಟ್ಟಣಗಳಲ್ಲಿ ಗುತ್ತಿಗೆ ಹಿಡಿದಿದ್ದಾಗ ತಮಿಳುನಾಡಿನ ಧರ್ಮಪುರಿಯಲ್ಲಿ ಕೆರೆಯನ್ನು ಕಟ್ಟಿಸಿ ದಣಿವಾರಿದ ದೇಹಗಳ ದಾಹವನ್ನು ಹಿಂಗಿಸುವ ಧರ್ಮಕಾರ್ಯದಲ್ಲಿ ನಿರತರಾಗಿದ್ದರು.

ಇಂತಹ ದಾನಶೀಲರಾದ ಮಾರಪ್ಪನವರು ಹಠಾತ್ತಾಗಿ ತಮ್ಮ 56ನೆಯ ವಯಸ್ಸಿನಲ್ಲಿ ಅಂದರೆ 1.5.1925ರಲ್ಲಿ ಇಹ ಲೋಕ ತ್ಯಜಿಸಿದರು. ವಿಸ್ಮಯವೆಂಬಂತೆ ಶ್ರೀ. ಬಿ.ಎಸ್. ಮಾರಪ್ಪನವರು ಸತ್ತ 23 ದಿನಗಳಲ್ಲಿ ಅವರ ಸಹೋದರ ತನ್ನ ಪ್ರೀತಿಯ ಅಣ್ಣನ ಹೆಜ್ಜೆಯ ಗುರುತುಗಳನ್ನೇ ಅನುಸರಿಸಿ ಅಮರರಾದರು.

ಶ್ರೀ ಬಿ.ಎನ್. ಚೆನ್ನಿಗಪ್ಪನವರು



ಚೆನ್ನಿಗಪ್ಪನವರು ಹುಟ್ಟಿದುದು 1875ನೇ ಇಸವಿಯಲ್ಲಿ. ಲೋವರ್ ಸೆಕೆಂಡರಿ ಪರೀಕ್ಷೆ ಮೊದಲು–ಗೊಂಡು ಕೊನೆಯ ಪರೀಕ್ಷೆ ಬಿ.ಎ.ವರೆಗೂ ಪ್ರತಿ–ಯೊಂದರಲ್ಲೂ ಮೊದಲು ತರಗತಿಯಲ್ಲಿ, ಅದರಲ್ಲೂ ಮೈಸೂರು ಸಂಸ್ಥಾನದಲ್ಲಿ ಉತ್ತೀರ್ಣರಾದ ಎಲ್ಲ ವಿದ್ಯಾರ್ಥಿಗಳಿಗೂ ಮೊದಲನೆಯವರಾಗಿದ್ದರು. 20 ವರ್ಷ ವಯಸ್ಸಿನಲ್ಲಿಯೇ ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಕಾಲೇಜಿನ ಪ್ರಿನ್ಸಿಪಾಲರಾದ ಟೇಟ್ ಅವರಿಗೆ ಇವರ ಇಂಗ್ಲೀಷು ಪಾಂಡಿತ್ಯ, ಆಟಪಾಠದಲ್ಲಿ ನಿಪುಣತೆ ಕಂಡು ವಿಶೇಷ ಮಮತೆ. ಒಕ್ಕಲಿಗರಿಗೆ ರತ್ನಪ್ರಾಯರಾಗಿದ್ದರು.

ಇಷ್ಟು ಪ್ರತಿಭಾಶಾಲಿಗಳಾದವರು ಮುಂದೆಯೂ ಸರಕಾರದಲ್ಲಿ ಉನ್ನತ ಅಧಿಕಾರಿಗಳಾಗುವರೆಂದೂ ಅಮೂಲ್ಯವಾದ ಸೇವೆ ಸಲ್ಲಿಸುವರೆಂದೂ ಎಲ್ಲರ ನಂಬಿಕೆಯಾಗಿತ್ತು. ಆದರೆ ದುರ್ದೈವದಿಂದ ಹಾಗಾಗದೆ ಹೋಯಿತು. ಬಿ.ಎ. ಪರೀಕ್ಷೆ ಮುಗಿದ ಕೂಡಲೆ ತಾವು ಒಕ್ಕಲಿಗರಲ್ಲಿ ಮೊದಲನೆಯ ಪದವೀಧರರೆಂದೂ, ಬಹು ಯಶಸ್ವಿಯಾಗಿ ತೇರ್ಗಡೆ ಹೊಂದಿದವರೆಂದೂ, ಆಟಪಾಠ ವ್ಯಾಯಾಮಗಳಲ್ಲಿ ತುಂಬ ಪರಿಶ್ರಮಿಗಳೆಂದೂ ಮುಂತಾಗಿ ಅರ್ಜಿ ಬರೆದುಕೊಂಡು ತಮ್ಮ ಹಿತಚಿಂತಕರಾದ ಟೇಟ್ ಮತ್ತು ಕುಕ್ ಸಾಹೇಬರುಗಳಿಂದ ಶಿಫಾರಸು ಪತ್ರಗಳನ್ನು ಅದಕ್ಕೆ ಸೇರಿಸಿ,

ಸರ್ಕಾರಕ್ಕೆ ಕಳುಹಿಸಿ ದಿವಾನರ, ಕೌನ್ಸಿಲರುಗಳ ಮನೆ ಬಾಗಿಲು ಕಾಯಲು ಆರಂಭಿಸಿದರು.

ತಾವು ಪಡೆದುಕೊಂಡ ಪ್ರಶಸ್ತಿಗೆ ತಕ್ಕಂತೆ 50 ರೂಪಾಯಿ ರೆವಿನ್ಯೂ ಪ್ರೊಬೇಷನರ ಕೆಲಸ ದೊರೆತರೆ ತಾವು ತೃಪ್ತರಾಗುವುದಾಗಿ ಬೇಡಿದರು. ಒಂದು ವರ್ಷಕ್ಕಾದರೂ ಇವರು ಬೇಡಿದ ಕೆಲಸ ಹೋಗಲಿ ಬೇರೆ ಯಾವ ಕೆಲಸವೂ ಸಿಗದೆ ಹೋಯಿತು. ಹೇಳಿಕೊಂಡುದೆಲ್ಲ ಅರಣ್ಯರೋದನವಾಯಿತು. ತಮ್ಮ ಗುರುಗಳ ಶಿಫಾರಸು ಪತ್ರವಲ್ಲದೆ ಅವರಿಗೆ ಬೇರೆ ಯಾರ ಸಹಾಯವೂ ಇರಲಿಲ್ಲ. ಅಧಿಕಾರಿಗಳ ಮನೆ ಕಾದು ಕಾದು ಬೇಸತ್ತರು. ಆಗ ಕೌನ್ಸಿಲರಾಗಿದ್ದ ಟಿ.ಆರ್.ಎ. ತಂಬುಚೆಟ್ಟಿಯವರು ಇವರಿಗೆ ಸಮಾಧಾನ ಹೇಳಿ ಸಹಾಯ ಮಾಡಲಾನುವಾದರು. ಇಷ್ಟು ದೊಡ್ಡ ಅಧಿಕಾರಿಗಳ ಬೆಂಬಲ ದೊರೆತರೂ ಅವರು ಅತಿಯಾಗಿ ಮೋಹಿಸುತ್ತಿದ್ದ ರೆವಿನ್ಯೂ ಪ್ರೊಬೇಷನರ ಕೆಲಸ ದೊರೆಯದೆ ಹೋಯಿತು. ಅದಕ್ಕೆ ಬದಲು ಮೈಸೂರು ಮಹಾರಾಜ ಕಾಲೇಜಿನಲ್ಲಿ ಐವತ್ತು ರೂಪಾಯಿ ಸಂಬಳದ ಮೇಲೆ ಉಪನ್ಯಾಸಕ ಹುದ್ದೆ ದೊರೆಯಿತು.

ಕಾಲೇಜಿನಲ್ಲಿ ಒಳ್ಳೆಯ ವಾತಾವರಣದಲ್ಲಿ ಕೆಲಸಮಾಡುತ್ತಿದ್ದರೂ ಸಹ ರೆವಿನ್ಯೂ ಪ್ರೊಬೇಷನರ ಕೆಲಸದ ಮೇಲಿನ ಹಂಬಲ ಅವರಿಗೆ ಹೋಗಲಿಲ್ಲ. ಅದಕ್ಕೆ ಪಡುವ ಪ್ರಯತ್ನ ಅವರು ನಿಲ್ಲಿಸಲಿಲ್ಲ. ಕೊನೆಗೆ 1900ರಲ್ಲಿ ಅವರ ಇಷ್ಟಾರ್ಥ ನೆರವೇರಿತು. ಡೆಪ್ಯೂಟಿ ಅಮಲ್ದಾರರಾಗಿ ಅದೇ ವರ್ಷದ ಕೊನೆಯಲ್ಲಿ ನೇಮಕವಾಯಿತು. ಅಮಲ್ದಾರ ವೃತ್ತಿಯಲ್ಲಿ ನಿರ್ಭಯವಾಗಿ ಕಾರ್ಯ ನಡೆಸಿದರು. ಅಧಿಕಾರ ನಡೆಸುವ ವೇಳೆಯಲ್ಲಿ ಕೆಲವು ಅವಿಚಾರಗಳೂ ನಡೆದುಹೋದವು. ತಪ್ಪೊಪ್ಪಿಕೊಂಡು ತಗ್ಗಿ ನಡೆಯುವವರು ಚೆನ್ನಿಗಪ್ಪನವರಲ್ಲ. 1907ರಲ್ಲಿ ಅಮಲ್ದಾರರುಗಳಿಗೆ ಅಸಿಸ್ಟೆಂಟ್ ಕಮೀಷನರ ಪದವಿಗೆ ಬಡ್ತಿ ದೊರೆತಾಗ ಇವರನಂತರ ಕೆಲಸಕ್ಕೆ ಸೇರಿದವರಿಗೂ ಪದವಿ ದೊರೆತು ಇವರಿಗೆ ಮಾತ್ರ ದೊರೆಯದೆ ಹೋಯಿತು. ಕೆಲಸದಲ್ಲಿ ಎಷ್ಟು ಗಟ್ಟಿಗರಾದರೂ ಅವರ ಮಾತು ನಡತೆಗಳಿಂದ ಅವರಿಗೇ ಅಪಚಾರವಾಯಿತು. ತಮಗೆ ಸರಕಾರ ದೊಡ್ಡ ಅನ್ಯಾಯ ಮಾಡಿತೆಂದು ತಿಳಿದರು. ಮೇಲಿನ ಅಧಿಕಾರಿಗಳನ್ನು ಕಂಡರು, ಅರ್ಜಿ ಸಲ್ಲಿಸಿದರು. ಟೇಟ್ ಸಾಹೇಬರು ಮುಂತಾದ ಹಿತೈಷಿಗಳಿಂದ ಸರಕಾರಕ್ಕೆ ಹೇಳಿಸಿದರು. ಏನು ಮಾಡಿದರೂ ಪರಿಹಾರ ಒದಗದೆ ಹೋಗಿ, ಕೆಲಸದ ಮೇಲೆ ಮನಸ್ಸಿಲ್ಲದೆ ರಜೆ ಪಡೆದು ಊರಿಗೆ ಬಂದುಬಿಟ್ಟರು. ಹಿತಚಿಂತಕರು ಆಗಿ ಹೋದುದನ್ನು ಮರೆತು ಕೆಲಸಕ್ಕೆ ಸೇರು ಎಂದು ಎಷ್ಟು ಬುದ್ಧಿ ಹೇಳಿದರೂ ಕೇಳದೆ, ನನಗಾಗಿರುವ ಅನ್ಯಾಯ ಸರಿಪಡಿಸುವವರೆಗೂ ನಾನು ಕೆಲಸದ ಮೇಲೆ ಹೋಗುವುದಿಲ್ಲ ಎಂದು ಹಠತೊಟ್ಟು ಕೊನೆಗೆ ಪದವಿಗೆ ರಾಜೀನಾಮೆ ಕೊಟ್ಟರು. ತಮಗಾದ ಅನ್ಯಾಯವೇ ಮನಸ್ಸನ್ನು ಕೊರೆಯುತ್ತಿದ್ದುದರಿಂದ ಅವರಿಗೆ ಬುದ್ಧಿಯ ಸ್ವಾಧೀನವೂ ತಪ್ಪಿಹೋಗುತ್ತ ಬಂತು.

ಹೀಗೆ ಚೆನ್ನಿಗಪ್ಪನವರ ಬಾಳು ವ್ಯರ್ಥವಾಗಿ ಹೋಯಿತು. ತಮ್ಮ ಎಲ್ಲ ಪ್ರಯತ್ನ ವಿಫಲವಾದುದನ್ನು ಕಂಡು ಅವರಿಗೆ ಒಂದು ಯೋಚನೆ ಹೊಳೆಯಿತು. ಒಬ್ಬರೇ ನಿಂತು ಹೋರಾಡಿ ಸಾರ್ಥಕವಾಗಲಿಲ್ಲವಾದುದರಿಂದ ಒಕ್ಕಲಿಗ ಜನಾಂಗದ ಬೆಂಬಲ –ವನ್ನು ಪಡೆದು ಹೋರಾಡಿದರೆ ಗೆಲುವು ಖಂಡಿತವೆಂದು ತೋರಿತು. ಆಗ ಅವರು ಒಕ್ಕಲಿಗರ ಸಂಘವೊಂದನ್ನು ಸ್ಥಾಪಿಸಿ, ಒಕ್ಕಲಿಗರೆನ್ನಲ್ಲಾ ಆ ಸಂಘದ ಮೂಲಕ ಒಟ್ಟು –ಗೂಡಿಸಿ, ಸಂಘದ ಪ್ರತಿನಿಧಿಗಳನ್ನು ಮುಂದೆ ಮಾಡಿಕೊಂಡು ಅವರ ಬೆಂಬಲದಿಂದ ತಮ್ಮ ಆಸೆಯನ್ನು ನೆರವೇರಿಸಿಕೊಳ್ಳಬೇಕೆಂದು ಸಂಕಲ್ಪ ಮಾಡಿಕೊಂಡು ಸಂಘವನ್ನು ಸ್ಥಾಪಿಸುವ ವಿಚಾರವನ್ನು ಕುರಿತು ಪ್ಲೀಡರ್ ಬಿ. ಕೆಂಪಣ್ಣ, ಲಾಲ್ ಬಾಗ್ ಸುಬ್ಬಯ್ಯ ಇವರುಗಳಲ್ಲಿ ಪ್ರಸ್ತಾಪಮಾಡಿದರು. ಸಂಘದ ಸ್ಥಾಪನೆಯ ಸೂಚನೆ ಥಟ್ಟನೆ ಎಲ್ಲರ ಮನಸ್ಸಿಗೂ ಹಿಡಿಯಿತು. ಈ ಮಹನೀಯರೆಲ್ಲ ಸೇರಿ ಐಶ್ವರ್ಯವಂತರಾಗಿದ್ದ ಉರಿಗದ ಬಯ್ಯಣ್ಣನವರು, ಹಲಸೂರು ಮಾರಪ್ಪನವರು, ಮುನಿಸ್ವಾಮಪ್ಪನವರು ಇವರನ್ನೆಲ್ಲ ಸೇರಿಸಿಕೊಂಡು 1906ನೇ ಏಪ್ರಿಲ್ ತಿಂಗಳಲ್ಲಿ ಒಕ್ಕಲಿಗರ ಸಂಘವನ್ನು ಸ್ಥಾಪಿಸಿದರು. ಹೀಗೆ ಒಕ್ಕಲಿಗರ ಸಂಘ ಚೆನ್ನಿಗಪ್ಪನವರ ಮನಸ್ಸಿನಲ್ಲಿ ರೂಪು ಹೊಂದಿ ಅವರ ಕಷ್ಟಕಾಲ –ದಲ್ಲಿ ಶಿಶುವಾಗಿ ಜನ್ಮ ತಾಳಿತು. (ಬಿ.ಪಿ. ರಾಧಾಕೃಷ್ಣ, ನನ್ನ ತಂದೆ, 1949, ಬೆಂ., ಪು.21)

ಧರ್ಮಪ್ರಕಾಶ ಶ್ರೀ ಡಿ. ಬನುಮಯ್ಯ



ಧರ್ಮಪ್ರಕಾಶ ರಾವ್ ಬಹದ್ದೂರ್ ಬನುಮಯ್ಯ–ನವರು 1890ರಲ್ಲಿ ನಂಜನಗೂಡು ತಾಲ್ಲೂಕು ತುಂಬು–ನೇರಳೆ ಗ್ರಾಮದಲ್ಲಿ ದೊಡ್ಡಯ್ಯ ಮತ್ತು ಮಲ್ಲಮ್ಮನವರ ಮಗನಾಗಿ ಜನಿಸಿದರು. ಪ್ರಾಪ್ತ ವಯಸ್ಸಿಗೆ ಬರುತ್ತಲೆ ಉದ್ಯೋಗ ಅರಸಿ ಮೈಸೂರು ಪಟ್ಟಣಕ್ಕೆ ಬಂದರು. ಅಷ್ಟೇನು ವಿದ್ಯಾವಂತರಲ್ಲದ ಬನುಮಯ್ಯ ಹೊಟ್ಟೆಪಾಡಿಗಾಗಿ ಮೈಸೂರಿನ ಸಂತೆಪೇಟೆಯಲ್ಲಿ ಕೂಲಿನಾಲಿ ಮಾಡಿ ಜೀವನ ಮಾಡುತ್ತಾ ಅವಕಾಶಕ್ಕಾಗಿ ಕಾಯುತ್ತಿದ್ದರು. ಸತತ ಪರಿಶ್ರಮ ಮತ್ತು ಅದೃಷ್ಟದಿಂದಾಗಿ ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಂಡರು. ಸಂತೇಪೇಟೆಯ ವ್ಯಾಪಾರ, ವಹಿವಾಟನ್ನು ನೋಡಿದ ಬನುಮಯ್ಯ ಚಿಕ್ಕಪುಟ್ಟ ವ್ಯಾಪಾರ ಮಾಡಿ ಮೇಲೆ ಬಂದರು. ಶ್ರೀಮಂತಿಕೆಯು ಅವರನ್ನು ಅರಸುತ್ತಾ ಬಂದಿತು. ಮಂಡಿ ವ್ಯಾಪಾರಸ್ಥರಾದರು. ವ್ಯಾಪಾರ, ವ್ಯವಹಾರ ಕುದುರಿದಂತೆಲ್ಲ ಸಾಹುಕಾರ್ ಬನುಮಯ್ಯನವರೆಂದೇ ಹೆಸರು ವಾಸಿಯಾದರು. ಸುಮಾರು ಇಪ್ಪತ್ತು ವರ್ಷಗಳ ಕಾಲ ಮೈಸೂರು ವರ್ತಕರ ಕ್ಷೇತ್ರದಿಂದ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಸಭಾಸದರಾಗಿ, ವರ್ತಕರ ಪ್ರತಿನಿಧಿಯಾಗಿ ಹೆಸರುವಾಸಿ–ಯಾದರು. ಅರಮನೆಯ ಆಡಳಿತ ವರ್ಗದಲ್ಲಿದ್ದ ಜನ, ದಿವಾನರು, ಆಳರಸರು, ಬನುಮಯ್ಯನವರನ್ನು ಗುರುತಿಸಿದರು.

ಬನುಮಯ್ಯನವರ ಶ್ರೀಮಂತಿಕೆ ನಿಂತ ನೀರಾಗದೆ, ಅವರು ಸಮಾಜದ ಬೆಳವಣಿಗೆಗೆ ಸಹಕಾರಿಯಾಗಿ ನಿಂತರು. ಮೈಸೂರು ನಗರ ನಿರ್ಮಾಣಕ್ಕೆ ತಮ್ಮ ಕೊಡುಗೆಯನ್ನು ನೀಡಿದರು. ಮೈಸೂರಿನ ಹೃದಯ ಭಾಗದಲ್ಲಿ ಉಚಿತ ವಿದ್ಯಾರ್ಥಿ ನಿಲಯವನ್ನೂ, ಶಾಲೆಗಳನ್ನೂ ಪ್ರಾರಂಭಿಸಿದರು. ಸಾಹುಕಾರ್ ಚನ್ನಯ್ಯ, ಎಂ. ಬಸವಯ್ಯ ಮತ್ತು ಮಹಮದ್ ಸೇಠ್‌ರನ್ನೊಳಗೊಂಡ ಧರ್ಮದರ್ಶಿ ಸಮಿತಿಯನ್ನು ರಚಿಸಿ ಅದರ ಅಧ್ಯಕ್ಷರಾದರು. ರೈತರ ಮತ್ತು ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಸಾಕಷ್ಟು ನೆರವು ನೀಡಿದರು. ಸುಸಂಸ್ಕೃತರಾದ ಬನುಮಯ್ಯನವರು ಅಂದು ಹಂಪೆಯ ನಿರಂಜನರಾಜ್ ಅರಸರ ರತ್ನಾವಳಿ ನಾಟಕ ಕಂಪನಿಯು ನೆಲಕಚ್ಚಿದಾಗ ಅದನ್ನು ಮೇಲೆತ್ತಲು ಸಹಕರಿಸಿದರು. ಅರಮನೆಯ ಆಸ್ಥಾನ ವಿದ್ವಾನ್ ವಾಸುದೇವಾಚಾರ್ ರವರು ವಾಸಯೋಗ್ಯ ಮನೆಗಾಗಿ ಬನುಮಯ್ಯನವರಲ್ಲಿಗೆ ಬಂದು ಕೇಳಿಕೊಂಡಾಗ ಸಂತೆ ಪೇಟೆ ವರ್ತಕರಿಂದ ಹಣಸಂಗ್ರಹಿಸಿ ಉಳಿದ ಹಣವನ್ನು ತಾವೇ ಹಾಕಿ ಮೈಸೂರಿ-ನಲ್ಲಿ ವಾಸಯೋಗ್ಯ ಮನೆಕಟ್ಟಿಸಿ ಕೊಡುವ ಮೂಲಕ ಸಂಗೀತಗಾರರನ್ನು ಪ್ರೋತ್ಸಾಹಿಸಿದರು. ಮೈಸೂರು ಅರಮನೆಯ ಎದುರು ಬನುಮಯ್ಯನವರ ಕಾಲೇಜು ಅವರ ಹೆಸರನ್ನು ಹೇಳುತ್ತಿದೆ.

1927ರಲ್ಲಿ ಮಹಾತ್ಮಗಾಂಧೀಜಿಯವರು ಮೈಸೂರು ನಗರಕ್ಕೂ ಭೇಟಿ ನೀಡಿ-ದ್ದಾಗ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಮಹಾತ್ಮರನ್ನು ಮೈಸೂರಿಗೆ ಬರಮಾಡಿ ಕೊಂಡರು. ಗಾಂಧೀಜಿಯವರ ಪ್ರಭಾವಕ್ಕೊಳಗಾದ ಬನುಮಯ್ಯನವರು, ಮಹಾ ರಾಜರ ಆಪ್ತವಲಯದಲ್ಲಿದ್ದರೂ ಸ್ವಾತಂತ್ರ್ಯ ಹೋರಾಟಕ್ಕೆ ಉದಾರವಾಗಿ ಧನಸಹಾಯ ಮಾಡುತ್ತಿದ್ದರು. ತಗಡೂರು ರಾಮಚಂದ್ರರಾಯ, ಎಂ.ಎನ್.ಜೋಯಿಸ್, ಮೈಸೂರಿನ ತಾತಯ್ಯನವರುಗಳಿಗೆ ಹಣದ ಖಜಾನೆಯಾಗಿ ರೂಪುಗೊಂಡರು. ಸ್ವಾತಂತ್ರ್ಯ ಚಳುವಳಿಯು ಆಳರಸರ ಬುಡದಲ್ಲಿ ಚಿಗುರೊಡೆಯಲು ಪರೋಕ್ಷವಾಗಿ ಸಹಾಯ ಮಾಡುತ್ತಿದ್ದರು. ಬನುಮಯ್ಯನವರ ಉದಾರತೆ, ಧರ್ಮಕಾರ್ಯಗಳನ್ನು ಕಂಡ ಮೈಸೂರಿನ ಅರಸರು ಅವರನ್ನು ತಮ್ಮ ಆಪ್ತವಲಯದಲ್ಲಿ ಒಬ್ಬರಾಗಿ ಇರಿಸಿ ಕೊಂಡಿ-ದ್ದರು. ಅಷ್ಟೇ ಅಲ್ಲ ಅರಮನೆಯ ರಾಜಪರಿವಾರದವರಿಗೆ ಮಾತ್ರ ಮೀಸಲಾಗಿದ್ದ ಮರಣ ಸಮಯದ ಗೌರವ ರಕ್ಷೆಯನ್ನು ಧರ್ಮಪ್ರಕಾಶ ರಾವ್ ಬಹದ್ದೂರ್ ಬನುಮಯ್ಯನವರಿಗೆ ನೀಡಿ ಗೌರವಿಸಿದರು.



ಅತ್ತಾವರ ಶ್ರೀ ಬಾಲಕೃಷ್ಣ ಶೆಟ್ಟಿ

ಬಹುಶಃ ಬಯಲು ಸೀಮೆಯ ಬಹಳಷ್ಟು ಜನರಿಗೆ ಪರಿಚಯವಿರದ ಬಂಟ ಸಮಾಜದ ಮಂಗಳೂರಿನ ಅಸಾಧಾರಣ ವ್ಯಕ್ತಿಯೇ ಅತ್ತಾವರ ಬಾಲಕೃಷ್ಣ ಶೆಟ್ಟಿ. ಮಂಗಳೂರು ನಗರದ ದಕ್ಷಿಣ

ದಿಕ್ಕಿನಲ್ಲಿರುವ ಅತ್ತಾವರ ಬಂಟರ ಸಮಾಜದ ಕುಲೀನ ಕುಟುಂಬದಲ್ಲಿ ಎ.ಬಿ. ಶೆಟ್ಟಿಯವರು ಜನಿಸಿದರು. ಶೆಟ್ಟರ ಅಜ್ಜ ತಿಮ್ಮಪ್ಪ ಪೂಂಜರಿಗೆ ನಾಲ್ವರು ಪುತ್ರರು, ಒಬ್ಬ ಪುತ್ರಿ. ಇವರಿಗೆ (ಎ.ಬಿ. ಶೆಟ್ಟರ ತಾಯಿ) ಮೂಲ್ಕಿ ದೊಡ್ಡಮನೆ ಕಾಳಪ್ಪ ಶೆಟ್ಟರೊಂದಿಗೆ ವಿವಾಹವಾಯಿತು. ಕಾಳಪ್ಪ ಶೆಟ್ಟರು ಆಗರ್ಭ ಶ್ರೀಮಂತರು. ಕಾಳಪ್ಪ ಶೆಟ್ಟಿ ದಂಪತಿಗಳಿಗೆ ಸೀತಾರಾಮ ಶೆಟ್ಟಿ, ಬಾಲಕೃಷ್ಣ ಶೆಟ್ಟಿ, ಭಾಗೀರಥಿ ಎಂಬ ಮೂವರು ಮಕ್ಕಳು. ಮುಂದೆ ಎ.ಬಿ. ಶೆಟ್ಟಿ ಎಂದೇ ಖ್ಯಾತರಾದ ಬಾಲಕೃಷ್ಣ ಶೆಟ್ಟರು 1877 ನವಂಬರ್ 15ರಂದು ಜನಿಸಿದರು. ತಂದೆ ಕಾಳಪ್ಪ ಶೆಟ್ಟರ ನಿಧನಾನಂತರ ಅಳಿಯ ಸಂತಾನದ ಪ್ರಕಾರ ಅತ್ತಾವರಕ್ಕೆ ಬಂದು ತಂದೆ ಕೊಟ್ಟ ಐಶ್ವರ್ಯದ ಜೊತೆಗೆ ಅತ್ತಾವರ ಕುಟುಂಬದ ಶ್ರೀಮಂತಿಕೆಯೂ ಸೇರಿ ಎ.ಬಿ. ಶೆಟ್ಟರು ಆಗರ್ಭ ಶ್ರೀಮಂತರಾದರು. ಬಾಲಕೃಷ್ಣರು ಇಂಟರ್ ಮೀಡಿಯಟ್‌ವರೆಗೆ ಓದಿದರೆ ಅಣ್ಣ ಸೀತಾರಾಮ ಶೆಟ್ಟರು ಆಗಿನ ಕಾಲದಲ್ಲಿ ಬಿ.ಎ. ಪದವೀಧರರಾದರು. ಸಾಮಾನ್ಯವಾಗಿ ಶ್ರೀಮಂತರು ಲೋಭಿಗಳಾಗಿರುವುದನ್ನು ಕೇಳಿದ್ದೇವೆ. ಆದರೆ ಉದಾರಗುಣದ ಈ ಸಹೋದರರಿಬ್ಬರು 1908–09ರಲ್ಲಿ ಮಂಗಳೂರಿನಲ್ಲಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನವನ್ನು ಕಟ್ಟಿಸಿ ಬಡಮಕ್ಕಳಿಗೆ ಉಚಿತ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿಯೇ ಬಿಟ್ಟರು. ಕಾಲಾನಂತರ ಕಾರ್ಕಳ, ಉಡುಪಿ, ಕುಂದಾಪುರ ಇನ್ನೂ ಮುಂತಾದ ಕಡೆಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು.

ಸ್ವಾತಂತ್ರ್ಯ ಚಳವಳಿಯಲ್ಲಿ ಎ.ಬಿ. ಶೆಟ್ಟರು : ಆ ದಿನಗಳಲ್ಲಿ ಸಾಮಾನ್ಯವಾಗಿ ಶ್ರೀಮಂತರು ತಮ್ಮ ಆಸ್ತಿಪಾಸ್ತಿಯ ರಕ್ಷಣೆಗಾಗಿ ಬ್ರಿಟಿಷರ ಪರ ವಹಿಸಿದನ್ನು ನೋಡಿದ್ದೇವೆ. ಆದರೆ ಗಾಂಧೀಜಿಯವರ ಹಿಂಬಾಲಕರಾದ ಬಾಲಕೃಷ್ಣರು ಯಾವುದನ್ನೂ ಲೆಕ್ಕಿಸದೆ 1920ರ ಅಸಹಕಾರ ಆಂದೋಲನ, 1931ರ ಉಪ್ಪಿನ ಸತ್ಯಾಗ್ರಹ, 1940ರ ವೈಯುಕ್ತಿಕ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಅಂದು ಮಂಗಳೂರು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿತ್ತು. ಬ್ರಿಟಿಷರ ದಬ್ಬಾಳಿಕೆಯನ್ನು ಲೆಕ್ಕಿಸದೆ 1940ರಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದುದೇ ಅಲ್ಲದೆ ಚಳವಳಿಯನ್ನು ಎಲ್ಲೆಡೆ ಹಬ್ಬಿಸಿದರು. ಬ್ರಿಟಿಷರು ಇವರನ್ನು ಬಂಧಿಸಿ 9 ತಿಂಗಳು ತಿರುಚನಾಪಳ್ಳಿ ಸೆರೆಮನೆಗಟ್ಟಿದರು.


ವಿಜಯ ಬ್ಯಾಂಕ್ ಸ್ಥಾಪನೆ : ಇಡೀ ರಾಜ್ಯದಲ್ಲಿ ದಕ್ಷಿಣ ಕನ್ನಡದ ಜನ ಹಲವಾರು ಬ್ಯಾಂಕುಗಳನ್ನು ಸ್ಥಾಪಿಸಿ ಯಶಸ್ವಿಯಾಗಿದ್ದಾರೆ. ಅದೇ ರೀತಿ ಎ.ಬಿ. ಶೆಟ್ಟರು ವಿಜಯ ಬ್ಯಾಂಕನ್ನು ಸ್ಥಾಪಿಸಿದರು. ಪ್ರಾರಂಭದಲ್ಲಿ ತಾವೇ ಅಧ್ಯಕ್ಷರಾಗಿದ್ದು ಮೇಲಕ್ಕೆ ತಂದರು. ಇಂದು ಈ ಬ್ಯಾಂಕು ರಾಷ್ಟ್ರಾದ್ಯಂತ ನೂರಾರು ಸಾವಿರಾರು ಶಾಖೋಪಶಾಖೆಗಳು ಕೆಲಸ ಮಾಡುತ್ತಿವೆ. ಕೋಟ್ಯಂತರ ರೂಪಾಯಿ ವಹಿವಾಟು

ನಡೆಸುತ್ತಿದೆ. ಒಕ್ಕಲಿಗ ಜನಾಂಗದವರು ಪ್ರಾರಂಭಿಸಿ ಯಶಸ್ವಿಯಾಗಿ ನಡೆಯುತ್ತಿರುವ ಏಕೈಕ ಬ್ಯಾಂಕ್ ಇದಾಗಿದೆ.

ಪತ್ರಕರ್ತರಾಗಿ ಎ.ಬಿ. ಶೆಟ್ಟರು : ಬಾಲಕೃಷ್ಣಶೆಟ್ಟರು ಪತ್ರಿಕಾರಂಗಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ. 1948ರ ಆಸುಪಾಸಿನಲ್ಲಿ 'ನವಯುಗ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ಸಮಾಜದ, ರಾಷ್ಟ್ರದ ಉದ್ಧಾರಕ್ಕೆ ತಮ್ಮ ಕೊಡುಗೆಯನ್ನು ಕೊಟ್ಟಿದ್ದಾರೆ.

ರಾಜಕೀಯಕ್ಕೆ : ಈಗಾಗಲೇ ತಿಳಿಸಿರುವಂತೆ ಅಂದು ಮಂಗಳೂರು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿತ್ತು. 1937 ರಿಂದ 1947ರವರೆಗೆ ಕಾಂಗ್ರೆಸ್ ಪಕ್ಷದಿಂದ ಜಯಗಳಿಸಿ ಮದ್ರಾಸ್ ಮಂತ್ರಿಮಂಡಲದಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದರು. ರಾಜಕೀಯವಾಗಿ ಉನ್ನತ ಸ್ಥಾನದಲ್ಲಿದ್ದರೂ 1940ರಲ್ಲಿ ವೈಯುಕ್ತಿಕ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಸೆರೆವಾಸ ಅನುಭವಿಸಿದರು. ಸ್ವಾತಂತ್ರ್ಯಾನಂತರ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿ ವಿಜಯಿಗಳಾಗಿ ಮದ್ರಾಸ್ ಸರ್ಕಾರದ ಮಂತ್ರಿಮಂಡಲದಲ್ಲಿ ಆರೋಗ್ಯ ಮಂತ್ರಿಗಳಾದರು. ಮದ್ರಾಸ್ ಸರ್ಕಾರದ ಕುಮಾರಸ್ವಾಮಿ ಮಂತ್ರಿ ಮಂಡಲದಲ್ಲಿ ಕೃಷಿ ಸಚಿವರಾಗಿ, ಶಿಕ್ಷಣ ಸಚಿವರಾಗಿ, ವಿತ್ತ ಸಚಿವರಾಗಿ ಸೇವೆ ಸಲ್ಲಿಸಿದರು. ಕರ್ನಾಟಕ ಏಕೀಕರಣಗೊಂಡು ಮಂಗಳೂರು ಮದ್ರಾಸ್‌ನ ಹಿಡಿತದಿಂದ ಕೈಜಾರಿದ ಮೇಲೆ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಆರೋಗ್ಯ ಸಚಿವರಾಗಿ ಸೇವೆ ಸಲ್ಲಿಸಿದರು. 1957ರಲ್ಲಿ ತಾವೇ ರಾಜಕೀಯದಿಂದ ದೂರ ಉಳಿದರು. ಈ ನಾಡಿನ ಧೀಮಂತ ವ್ಯಕ್ತಿ 1960 ಜನವರಿ 12ನೇ ತಾರೀಖು ಬದುಕಿಗೆ ವಿದಾಯ ಹೇಳಿದರು.

ದೇವಂಗಿ ರಾಮಣ್ಣ ಗೌಡರು



ಹಿಂದೊಮ್ಮೆ ಶೈಕ್ಷಣಿಕವಾಗಿ ಸಾಂಸ್ಕೃತಿಕವಾಗಿ ಹಿಂದುಳಿದ ಪ್ರದೇಶದಲ್ಲಿ ಹೊಸ ಬೆಳಕನ್ನು ತಂದ ಹೆಮ್ಮೆಯ ಪುತ್ರನೇ ದೇವಂಗಿ ರಾಮಣ್ಣ ಗೌಡರು. ಇವರು ಮತ್ತಾರು ಅಲ್ಲ ರಾಷ್ಟ್ರಕವಿ ಕುವೆಂಪುರವರ ಮಾವನವರು ಹಾಗೂ ವ್ಯವಸಾಯ ಮತ್ತು ಕೃಷಿಯಲ್ಲಿ ದೊಡ್ಡ ಸಾಧನೆ ಮಾಡಿದ ಮಹಾನ್ ಸಾಧಕರು. ಡಿ.ಆರ್. ಪ್ರಫುಲ್ಲಚಂದ್ರರವರ ತಂದೆಯವರು. ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ದೂರದ ಮಲೆನಾಡಿನಲ್ಲಿ ತಲೆ ಎತ್ತಿದ ಉದಯರವಿ ಎಂದರೆ ತಪ್ಪಾಗಲಾರದು. ಕ್ರಿ.ಶ. 19 ಮತ್ತು 20ನೇ ಶತಮಾನದ ಪೂರ್ವದಲ್ಲಿ ಮಲೆನಾಡು ಭಾಗದಲ್ಲಿ ಇಂದಿನಂತೆ ಉತ್ತಮವಾದ ರಸ್ತೆ, ಕುಡಿಯುವ ನೀರು, ಶಾಲಾ ಕಾಲೇಜುಗಳಲಿಲ್ಲದೆ ನಾಗರೀಕ

ಸೌಲಭ್ಯಗಳಿಂದ ವಂಚಿತವಾಗಿದ್ದ ಜಿಲ್ಲೆಯಾಗಿತ್ತು. ಅಲ್ಲಿ ತಣ್ಣನೆ ಆದಂತಹ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ರಾಂತಿಯ ಹರಿಕಾರನ ದೇವಂಗಿ ರಾಮಣ್ಣ ಗೌಡರು.

ದೇವಂಗಿಯ ಇಂಗ್ಲಾದಿ ವೆಂಕಟಯ್ಯ ಗೌಡರ ಮೊದಲನೆಯ ಮಗ ಈಗಾಗಲೇ ತಿಳಿಸಿರುವಂತೆ 19ನೇ ಶತಮಾನದಲ್ಲಿ ಉತ್ತಮವಾದ ಶಿಕ್ಷಣ ಪಡೆಯಲು ದುಸ್ತರವಾಗಿದ್ದ ಕಾಲ ಹಾಗೂ ಸನ್ನಿವೇಶ. ರಾಮಣ್ಣ ಗೌಡರು ಕಲಿತದ್ದು ಕೇವಲ ನಾಲ್ಕನೆಯ ತರಗತಿ ಮಾತ್ರ. ಮೈಸೂರು ಪ್ರಾಂತ್ಯಕ್ಕೆ ಸೇರಿದಂತೆ ಎಲ್ಲೆಡೆ ಬ್ರಿಟಿಷ್ ಆಳ್ವಿಕೆ ಇದ್ದ ಕಾಲವದು. ಕ್ರೈಸ್ತಪಾದ್ರಿಗಳು ಮತ್ತು ಮಿಷನರಿಗಳು ಧರ್ಮ ಪ್ರಚಾರಕ್ಕಾಗಿ ಹವಣಿಸುತ್ತಿದ್ದರು. ಶಿವಮೊಗ್ಗ, ಸಾಗರ, ಸೊರಬ ಇವೇ ಮುಂತಾದ ಪ್ರದೇಶಗಳಲ್ಲಿ ನಾಮಧಾರಿ ಒಕ್ಕಲಿಗರು ಅಂದು ದಟ್ಟವಾಗಿದ್ದರು. ಈ ಪ್ರದೇಶದಲ್ಲಿ ಕ್ರೈಸ್ತ ಮಿಷನರಿಗಳು ವೆಸ್ಲಿಯನ್ ಮಿಷನ್‌ರವರಿಂದ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಕೊಡಿಸುವ ನೆಪದಲ್ಲಿ ಮಲೆನಾಡಿನ ಪ್ರದೇಶಕ್ಕೆ ಬಂದರು. ಶಾಲಾ ಕಾಲೇಜುಗಳನ್ನು ಸ್ಥಾಪಿಸಿ ಉತ್ತಮ ಶಿಕ್ಷಣ ನೀಡಿ ಉದ್ಯೋಗ ಕೊಡಿಸುವುದಾಗಿ ಭರವಸೆ ನೀಡಿದರು. ಈಗಾಗಲೇ ತಿಳಿಸಿರುವಂತೆ ನಾಗರಿಕ ಸೌಲಭ್ಯಗಳಿಂದ ವಂಚಿತರಾಗಿದ್ದ ಅಲ್ಲಿನ ಜನ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳಲು ತೀರ್ಮಾನಿಸಿದರು. ದೇವಂಗಿ ರಾಮಣ್ಣ ಗೌಡರು ಮತಾಂತರಕ್ಕೆ ತಮ್ಮ ಸಮ್ಮತಿ ಸೂಚಿಸಿಯೇ ಬಿಟ್ಟರು. ಇದೇ ಸಮಯಕ್ಕೆ ಆಗುಂಬೆ ಬಳಿಯ ನಾಲೂರಿನ ರಾಮಣ್ಣ ಗೌಡರ ಮಗ ಗಿರಿಯಪ್ಪ ಗೌಡರು ಶಿವಮೊಗ್ಗದಲ್ಲಿ ಕ್ರೈಸ್ತ ಮಿಷನರಿಗಳು ನಡೆಸುತ್ತಿದ್ದ ಇಂಗ್ಲಿಷ್ ಶಾಲೆಯಲ್ಲಿ ಕಲಿತು ಕ್ರೈಸ್ತ ಧರ್ಮದ ಬಗ್ಗೆ ಆಸಕ್ತಿ ತಳೆದಿದ್ದರು. ಮುಂದೆ ತಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣ. ಉದ್ಯೋಗ ಸಿಗುತ್ತದೆ ಎಂದು ಉದ್ದೇಶದಿಂದ ಒಂದು ಸಮಿತಿಯನ್ನು ರಚಿಸಿಯೇ ಬಿಟ್ಟರು. ಆ ಸಮಿತಿಗೆ ಅರಿಗೆಯ ಗಣಪ್ಪ ಗೌಡರು ಅಧ್ಯಕ್ಷರಾಗಿಯು, ಗಿರಿಯಪ್ಪ ಗೌಡರು ಕಾರ್ಯದರ್ಶಿಯಾಗಿ ಹಾಗೂ ದೇವಂಗಿ ರಾಮಣ್ಣ ಗೌಡರು ಖಜಾಂಚಿಯಾಗಿ ಆಯ್ಕೆಯಾದರು. (ಈ ವಿಚಾರ ಕುವೆಂಪುರವರು ತಮ್ಮ ನೆನಪಿನ ದೋಣಿಯಲ್ಲಿ ಎಂಬ ಆತ್ಮ ಕಥೆನದಲ್ಲಿ ತಿಳಿಸಿದ್ದಾರೆ.)


ಇಲ್ಲಿ ದೇವಂಗಿ ರಾಮಣ್ಣ ಗೌಡರ ಮತ್ತು ಗಿರಿಯಪ್ಪ ಗೌಡರ ಉದ್ದೇಶವೇನೆಂದರೆ ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಮತ್ತು ಉದ್ಯೋಗವನ್ನು ಕೊಡಿಸಿ ಸಮಾಜದಲ್ಲಿ ಒಳ್ಳೆಯ ಸತ್ಪ್ರಜೆಗಳನ್ನಾಗಿಸುವುದು. ಆದರೆ ಕ್ರೈಸ್ತ ಮಿಷನರಿಗಳ ಉದ್ದೇಶ ಶಿಕ್ಷಣ ನೀಡುವ ಜೊತೆ ಜೊತೆಗೆ ಮಲೆನಾಡ ಒಕ್ಕಲಿಗರನ್ನು ಕ್ರೈಸ್ತರನ್ನಾಗಿ ಮತಾಂತರಗೊಳಿಸುವುದಾಗಿತ್ತು. ಶಿವಮೊಗ್ಗ ಸುತ್ತಲಿನ ವಿದ್ಯಾರ್ಥಿಗಳಿಗೆ ಮೈಸೂರಿನ ಹಾರ್ಡ್‌ವಿಕ್ ಹೈಸ್ಕೂಲಿನಲ್ಲಿ ಉಚಿತ ಊಟ ವಸತಿ ಕಲ್ಪಿಸಿದರು. ಕಾಲಾನಂತರ ಕುವೆಂಪುರವರು ಮೈಸೂರಿಗೆ ಬಂದು ಅಲ್ಲಿನ ಹಾರ್ಡ್‌ವಿಕ್ ವಸತಿ ಶಾಲೆಯಲ್ಲಿ

ಕಲಿತರೆಂಬುದನ್ನು ಇಲ್ಲಿ ಸ್ಮರಿಸಬಹುದು. ಕುವೆಂಪುರವರ ಪ್ರಾಥಮಿಕ ಶಾಲಾ ಶಿಕ್ಷಕರು 'ಮೋಸಸ್' ಎಂಬ ಕ್ರೈಸ್ತರು.

ಕ್ರೈಸ್ತ ಮಿಷನರಿಗಳು ಶಿವಮೊಗ್ಗ ಸೇರಿದಂತೆ ಮಲೆನಾಡು ಪ್ರದೇಶದಲ್ಲಿ ಶಾಲಾ ಕಾಲೇಜುಗಳನ್ನು ಸ್ಥಾಪಿಸಿ ಮಲೆನಾಡು ಒಕ್ಕಲಿಗರನ್ನು ಮತಾಂತರ ಗೊಳಿಸುವ ಆಸೆಯನ್ನು ಕೈ ಬಿಟ್ಟರು. ಇದಕ್ಕೆ ಕಾರಣವೇನೆಂದರೆ 1906ರಲ್ಲಿ ದೂರದ ಬೆಂಗಳೂರಿನಲ್ಲಿ ಸ್ಥಾಪನೆಯಾದ ರಾಜ್ಯ ಒಕ್ಕಲಿಗರ ಸಂಘ, 1907ರಲ್ಲಿ ಮಲೆನಾಡ ಒಕ್ಕಲಿಗರು ಮತ್ತು ಮೈಸೂರಿನ ಕ್ರೈಸ್ತ ಮಿಷನರಿಗಳೊಂದಿಗೆ ಸಂಪರ್ಕ ಸೇತುವಾಗಿದ್ದ ಗಿರಿಯಪ್ಪಗೌಡರ ನಿಧನ ಹಾಗೂ ಮಲೆನಾಡು ಪ್ರದೇಶದಲ್ಲಿ ಜಾಗೃತಿ ಉಂಟಾಗಿ "ನಾಮಧಾರಿ ಅನ್ಯೋನಾಭಿವೃದ್ಧಿ ಸಂಘ" ಎಂಬ ಸಂಸ್ಥೆಯನ್ನು ಸ್ಥಾಪಿಸಿಕೊಂಡದ್ದು ಕ್ರೈಸ್ತ ಮಿಷನರಿಗಳಿಗೆ ಹಿನ್ನಡೆಯಾಯ್ತು. ಮೂಡಿಗೆರೆಯ ತಾಲ್ಲೂಕಿನ ನಂದೀಪುರದ ಕಲ್ಲೇಗೌಡರು, ಮೆಡ್ಡಿಕೆರೆಯ ಈರೇಗೌಡರು, ದೇವಂಗಿ ರಾಮಣ್ಣಗೌಡರು ಮತ್ತಿತರರು 1912ರಲ್ಲಿ ಸಭೆ ಸೇರಿ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದು, ಮದುವೆ ಮುಂಜಿಗೆ ದುಂದು ವೆಚ್ಚ ಮಾಡದಿರುವುದು. ಮಧ್ಯಪಾನ ನಿಷೇಧಿಸುವುದು. ಹೆಂಡದ ಹರಾಜಿನಲ್ಲಿ ಭಾಗವಹಿಸದಿರುವುದು ಇವೇ ಮುಂತಾದ ನಿರ್ಣಯಗಳನ್ನು ಕೈಗೊಂಡರು. ರಾಮಣ್ಣ ಗೌಡರು ದೀನದಲಿತರಿಗೆ ಸಹಾಯ ಮಾಡತೊಡಗಿದರು. ದೇವಂಗಿಯಲ್ಲಿ ಸಾರ್ವಜನಿಕ ಛತ್ರ ಕಟ್ಟಿಸಿದರು. ಸರ್ಕಾರ ಶಾಲೆಯನ್ನು ಸ್ಥಾಪಿಸಲು ಮುಂದೆ ಬಂದಾಗ ತಮ್ಮ ಛತ್ರವನ್ನು ನೀಡಿದರು.

ಹೀಗೆ ದೇವಂಗಿ ರಾಮಣ್ಣ ಗೌಡರು ಶಿವಮೊಗ್ಗ, ಸಾಗರ, ಹೊಸನಗರ ಭಾಗಗಳಾದ ಮಲೆನಾಡು ಪ್ರದೇಶದಲ್ಲಿ ಕ್ರಿ.ಶ. 19 ಮತ್ತು 20ನೇ ಶತಮಾನದ ಪೂರ್ವಭಾಗದಲ್ಲಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ರಾಂತಿ ಉಂಟು ಮಾಡಿ ಅಲ್ಲಿನ ಜನಗಳ ಬಾಯಲ್ಲಿ ಪ್ರಾತಃಸ್ಮರಣೀಯರಾಗಿದ್ದ ವ್ಯಕ್ತಿ.

ಶ್ರೀ ಎಸ್. ಕರಿಯಪ್ಪ



ಇಂದಿಗೆ 70 ವರ್ಷಗಳ ಹಿಂದೆ ಹಿಂದುಳಿದ ತಾಲ್ಲೂಕು ಆಗಿದ್ದ ಕನಕಪುರವನ್ನು ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ಶ್ರಮಿಸಿದ ಖ್ಯಾತ ಸಮಾಜ ಸುಧಾರಕರೇ ಸೋರೆಕಾಯಿ ದೊಡ್ಡಿ ಕರಿಯಪ್ಪನವರು.

ಹಿಂದೊಮ್ಮೆ ಕಾನಕಾನಹಳ್ಳಿ ಸ್ಕೂಲ್ ಎಂದೇ ಪ್ರಖ್ಯಾತವಾಗಿದ್ದ ವಸತಿ ಶಾಲೆಯು ಬಹಳ ಜನಪ್ರಿಯವಾಗಿತ್ತು. ಆ ಶಾಲೆಯ ಸಂಸ್ಥಾಪಕರೇ

ಸೋರೆಕಾಯಿ ದೊಡ್ಡಿ ಕರಿಯಪ್ಪ. ಇವರು ಪುಟ್ಟೇಗೌಡ ಮತ್ತು ತಾಯಿ ಶ್ರೀಮತಿ ದಂಪತಿಗಳಿಗೆ 1900ರಲ್ಲಿ ಜನಿಸಿದರು. ಪುಟ್ಟೇಗೌಡರ ಪೂರ್ವಿಕರು ಕಟ್ಟೆ ಮನೆ ನಾಡಗೌಡರು ಎಂದೇ ಪ್ರಖ್ಯಾತರಾಗಿದ್ದರು.

ಈ ಮನೆತನದವರು ಅತಿ ಶ್ರೀಮಂತರಲ್ಲದಿದ್ದರೂ, ವ್ಯವಸಾಯ, ಪಶುಸಂಗೋಪನೆ ಇವೇ ಮುಂತಾದ ಕೃಷಿ ಚಟುವಟಿಕೆಗಳಲ್ಲಿ ಹೆಸರುವಾಸಿ-ಯಾಗಿದ್ದರು. ಇವುಗಳು ಬಾಲ ಕರಿಯಪ್ಪನವರ ಮೇಲೆ ಪ್ರಭಾವ ಬೀರಿದವು. ಬಾಲಕ ಕರಿಯಪ್ಪನವರು ಬೆಳೆದಂತೆಲ್ಲಾ ಸ್ವಾಮಿವಿವೇಕಾನಂದ, ರಾಜರಾಮ ಮೋಹನ-ರಾಯ್, ಹಾಗೂ ದಯಾನಂದ ಸರಸ್ವತಿಯವರು ನಡೆಸಿದ 19-20ನೇ ಶತಮಾನದ ಸಮಾಜೋಧಾರ್ಮಿಕ ಸುಧಾರಣಾ ಚಳವಳಿಯ ಪ್ರಭಾವಕ್ಕೆ ಒಳಗಾದರು. ಆರ್ಯಸಮಾಜದ ಸ್ಥಾಪಕರಾದ ದಯಾನಂದರ ತತ್ವಗಳಿಗೆ ಮಾರುಹೋಗಿ ಅವರ ಶಿಷ್ಯರಾದರು. ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ನಂತರ ಮಾಧ್ಯಮಿಕ ಶಾಲಾ ಪರೀಕ್ಷೆಯನ್ನು ಖಾಸಗಿಯಾಗಿಯೇ ಬರೆದು ಉತ್ತೀರ್ಣರಾದರು. ಮನೆಯಲ್ಲೇ ಕುಳಿತು ಅಭ್ಯಾಸಮಾಡಿದ ಕರಿಯಪ್ಪ ಎಲ್.ಎಸ್. ಪರೀಕ್ಷೆ ಅಂದರೆ ಲೋಯರ್ ಸೆಕೆಂಡರಿ ಪರೀಕ್ಷೆಯನ್ನು ಶಾಲೆಯಲ್ಲಿ ಬರೆದು ಉತ್ತೀರ್ಣರಾದರು.

ಚನ್ನಪಟ್ಟಣದಲ್ಲಿ ಪ್ರೌಢಶಾಲಾ ವ್ಯಾಸಂಗವನ್ನು ಮುಂದುವರೆಸಿದರು. ಇಲ್ಲಿ ಕರಿಯಪ್ಪನವರಿಗೆ ಹೆಚ್.ಕೆ. ವೀರಣ್ಣಗೌಡ, ಎ.ಜಿ. ಬಂದೀಗೌಡ, ಎಂ.ಹೆಚ್. ಮಂಚಿಗಯ್ಯನವರು, ಬೇಲೂರಿನ ಬಿ.ಸಿ. ಬೋರಣ್ಣಗೌಡರು ಪರಿಚಯವಾಯಿತು. ಇಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿ ಮೈಸೂರು ಮಹಾರಾಜ ಕಾಲೇಜ್ ಸೇರಿದರು. ಇಲ್ಲಿ ಎ.ಆರ್. ವಾಡಿಯ, ಟಿ.ಎಸ್. ವೆಂಕಣ್ಣಯ್ಯ ಇನ್ನೂ ಮುಂತಾದವರ ಬೋಧನೆ ಇವರ ಮೇಲೆ ಪ್ರಭಾವ ಬೀರಿತು. 1929ರಲ್ಲಿ ಕರಿಯಪ್ಪನವರು ಬಿ.ಎ. ಪದವೀಧರರಾದರು. ಇವರ ಜೊತೆಯಲ್ಲಿ ಪದವಿಯನ್ನು ಮುಗಿಸಿದ ವಿ.ಸಿ. ಮುನಿದೇವಯ್ಯ, ಬಿ.ಎ. ರಾಮಯ್ಯ, ಇನ್ನೂ ಮುಂತಾದವರು ಸರ್ಕಾರಿ ಹುದ್ದೆಗೆ ಸೇರಿದರು. ಆದರೆ ಕರಿಯಪ್ಪನವರು ಸರ್ಕಾರಿ ಹುದ್ದೆಗೆ ಹೋಗಲಿಲ್ಲ. ಒಮ್ಮೆ ಗೌರ್ನಮೆಂಟ್ ಪ್ಲೀಡರ್ ಆಗುವ ನಿರ್ಧಾರ ಮಾಡಿ ಪ್ಲೀಡರ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಕರಿಯಪ್ಪನವರು ಪ್ಲೀಡರ್ ವೃತ್ತಿಯನ್ನು ಕೈಗೊಂಡು ಕೆಲಕಾಲ ಕ್ಲೋಸ್ ಪೇಟೆಯ (ರಾಮನಗರ) ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಗೌರ್ನಮೆಂಟ್ ಪ್ಲೀಡರ್ ಆಗಿ ದುಡಿದರು. ಉನ್ನತ ಆದರ್ಶಗಳನ್ನು ರೂಢಿಸಿಕೊಂಡಿದ್ದ ಕರಿಯಪ್ಪನವರು ಕೊನೆಯವರೆಗೆ ಬ್ರಹ್ಮಚಾರಿಗಳಾಗಿ ಉಳಿದರು. ಅಂದಿನ ಕಾಲದಲ್ಲಿ ಇಂದಿನಂತೆ ಊರಿಗೊಂದು ಬೀದಿಗೊಂದು ಶಾಲಾ ಕಾಲೇಜ್‌ಗಳು ಇರಲಿಲ್ಲ. ಇಷ್ಟೇ ಅಲ್ಲದೆ ಬಡತನದ ಬೇಗೆಯಿಂದ ಬೇಯುತ್ತಿದ್ದ ತನ್ನ ಊರಿನ ಜನರನ್ನು ಕಂಡು ಮರುಗಿದರು. ಕರಿಯಪ್ಪನವರು ಕಾನಕಾನಹಳ್ಳಿಯಲ್ಲಿ ನೆಲೆಸಿ ಪ್ಲೀಡರ್ ಮತ್ತು


ಗುತ್ತಿಗೆದಾರರಾಗಿ ಕೆಲಸ ಮಾಡುತ್ತಿದ್ದರಿಂದ ಜನಸಂಪರ್ಕ ಬೆಳೆಯಿತು. ಇದೇ ಸಮಯಕ್ಕೆ ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಿದ್ದು, ಭಾರತೀಯರನ್ನೆಲ್ಲ ಸಂಘಟಿಸುತ್ತಿದ್ದರು. ಕರಿಯಪ್ಪನವರು ಕ್ರಮೇಣ ಇವರ ಅನುಯಾಯಿಗಳಾದರು. ಪ್ಲೀಡರ್ ಹುದ್ದೆಗೆ ತಿಲಾಂಜಲಿ ನೀಡಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಮೈಸೂರು ಪ್ರಾಂತ್ಯದಲ್ಲಿ ನಡೆದ ಶಿವಪುರ ಧ್ವಜ ಸತ್ಯಾಗ್ರಹ (1938) ಮತ್ತು ವಿದುರಾಶ್ವತ್ಥ ದುರಂತದ ಚಳವಳಿ ಘಟನೆಗಳಲ್ಲಿ ಭಾಗವಹಿಸಿ ಬ್ರಿಟೀಷರು ಮತ್ತು ಮಹಾರಾಜರ ವಿರುದ್ಧ ಜನ ಸಂಘಟನೆಯಲ್ಲಿ ತೊಡಗಿಸಿಕೊಂಡರು. ಹೀಗೆ ಸ್ವಾತಂತ್ರ್ಯ ಚಳವಳಿ ಉದ್ದಕ್ಕೂ ಸಕ್ರಿಯವಾಗಿ ತೊಡಗಿಸಿಕೊಂಡು ಆ ಭಾಗದ ಜನಪ್ರಿಯ ಹೋರಾಟಗಾರರಾದರು.

ಶಿಕ್ಷಣ ಸುಧಾರಕರಾಗಿ : ಕರಿಯಪ್ಪನವರು ಬಡತನದ ಬೇಗೆಯಿಂದ ಬೇಯುತ್ತಿದ್ದ ತಮ್ಮ ಜನರಿಗೆ ಶಿಕ್ಷಣ ದೊರಕಿಸಿಕೊಡಲು ತೀರ್ಮಾನಿಸಿದರು. ಕರಿಯಪ್ಪನವರು ತಮ್ಮ ಊರಿನ ಗಣ್ಯವ್ಯಕ್ತಿಯಾದ ಸುಬ್ಬರಾಯರನ್ನು ಕಂಡು ವಿದ್ಯಾರ್ಥಿನಿಲಯವನ್ನು ಶಾಲೆಯನ್ನು ಪ್ರಾರಂಭಿಸುವುದಾಗಿ ತಮ್ಮ ಉದ್ದೇಶವನ್ನು ತಿಳಿಸಿದರು. ಕೆಲವಾರು ಜನ ಊರಿನ ಗಣ್ಯವ್ಯಕ್ತಿಗಳನ್ನು ಸೇರಿಸಿದರು. ಗುರಿಕಾರ್ ರಂಗೇಗೌಡ್ರು, ಗುರಿಕಾರ್ ವೆಂಕಟರಮಣಗೌಡ್ರು, ಕೆ. ಸುಬ್ಬರಾಯರು, ಎಂ. ಲಿಂಗೇಗೌಡ್ರು, ಡಿ.ವಿ. ಸುಬ್ರಮಣ್ಯ ಅಯ್ಯರ್, ರಾಮಯ್ಯನವರು, ಬ್ಯಾನಪ್ಪನವರು, ವೆಂಕಟಚಲಪತಿ ಶೆಟ್ಟರು ಹಾಗೂ ಹಾರೋಹಳ್ಳಿ ಶಿವಣ್ಣ, ಇನ್ನೂ ಮುಂತಾದವರು ಪ್ರಾರಂಭದ ಹಂತದ ಮತ್ತು ವಿದ್ಯಾರ್ಥಿನಿಲಯ ಬೆಂಬಲಕ್ಕೆ ನಿಂತರು. ಇವುಗಳೆಲ್ಲದರ ಪರಿಣಾಮವಾಗಿ ಕರಿಯಪ್ಪನವರು ಕನಕಪುರದಲ್ಲಿ 1932ರಲ್ಲಿ ದಯಾನಂದ ವಸತಿ ನಿಲಯ 1938ರಲ್ಲಿ ದಯಾನಂದ ವಿದ್ಯಾಲಯ (ಮಾಧ್ಯಮಿಕ ಶಾಲೆ), 1941ರಲ್ಲಿ ಗ್ರಾಮೀಣ ಶಿಕ್ಷಣ ಸಂಸ್ಥೆ ಹುಟ್ಟು ಹಾಕಿದರು. ಇಷ್ಟಕ್ಕೇ ತೃಪ್ತಿಯಾಗದೆ ಕರಿಯಪ್ಪನವರು ದಾನಿಗಳ ಸಹಾಯದಿಂದ ಕನಕಪುರ ಗ್ರಾಮೀಣ ಪ್ರೌಢಶಾಲೆ (1942), ಹಾರೋಹಳ್ಳಿ ಬಳಿ ಗಾಂಧಿ ಪ್ರೌಢಶಾಲೆ (1947), ಕನಕಪುರದಲ್ಲಿ ಪದವಿಪೂರ್ವ ಕಾಲೇಜ್ ಮತ್ತು ಪದವಿ ಕಾಲೇಜ್ (ಕನಕಪುರ ರೂರಲ್ ಕಾಲೇಜ್ (1957), ಹಾರೋಹಳ್ಳಿ ಪ್ರೌಢಶಾಲೆ (1958), ಕನಕಪುರದಲ್ಲಿ ಹಳ್ಳಿ ಮಕ್ಕಳ ಪ್ರೌಢಶಾಲೆ (1963), ಸಾತನೂರಿನಲ್ಲಿ ಪ್ರೌಢಶಾಲೆ (1963), ಕನಕಪುರದಲ್ಲಿ ಸಂಜೆ ಕಾಲೇಜ್ (1963) ಹೀಗೆ ಹಲವಾರು ಶಾಲಾ ಕಾಲೇಜುಗಳನ್ನು ತಾಲ್ಲೂಕಿನಾದ್ಯಂತ ಹುಟ್ಟು ಹಾಕಿದರು.

ರಾಜ್ಯ ರಾಜಕೀಯಕ್ಕೆ ಕರಿಯಪ್ಪನವರು : ಸುಶಿಕ್ಷಿತರು, ಸಮಾಜ ಸುಧಾರಕರಾದ ಕರಿಯಪ್ಪನವರು 1937 ರಿಂದ 1947ರವರೆಗೆ ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿ ಆಯ್ಕೆಯಾದರು. 1952ರಲ್ಲಿ ವಿಧಾನ ಸಭಾ ಸದಸ್ಯರಾಗಿ ಆಯ್ಕೆಯಾದರು. 1957ರಲ್ಲಿ ವಿಧಾನ ಸಭಾ ಕ್ಷೇತ್ರದಿಂದ ಪುನರ್ ಆಯ್ಕೆಯಾದರು. 1962ರಲ್ಲಿ ಕನಕಪುರ

ಕ್ಷೇತ್ರದಿಂದ ಬಂಡಾಯ ಅಭ್ಯರ್ಥಿಯಾಗಿ ವಿಧಾನಸಭೆಗೆ ಆಯ್ಕೆಯಾದರು. 1972ರಲ್ಲಿ ಕನಕಪುರ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದರು. ಕರಿಯಪ್ಪನವರ ಸಾಧನೆ ಮತ್ತು ಹಿರಿತನವನ್ನು ಗುರುತಿಸಿದ ಅಂದಿನ ಸರ್ಕಾರವು ಶಿಕ್ಷಣ ಮಂತ್ರಿಯಾಗಲು ಆಹ್ವಾನಿಸಿತು. ಆದರೆ ಕರಿಯಪ್ಪನವರು ಅದನ್ನು ನಯವಾಗಿ ತಿರಸ್ಕರಿಸಿದರು. ಸರಳ ಸಭ್ಯತೆಯ ತ್ಯಾಗಮಯಿ ಹಾಗೂ ಶಿಕ್ಷಣ ಸುಧಾರಕ ಎಸ್. ಕರಿಯಪ್ಪ ನವರು 23-03-1980ರಲ್ಲಿ ಇನ್ನಿಲ್ಲವಾದರು.

ಕಾಂತರಾಜಪುರದ ಶ್ರೀ ಎಂ. ನಂಜಪ್ಪ



ಒಕ್ಕಲಿಗರ ಸಂಘ ರಾಜ್ಯದ ಹೆಮ್ಮೆಯ ಹಾಗೂ ಪ್ರತಿಷ್ಠಿತ ಸಂಘವಾಗಿ ರೂಪುಗೊಳ್ಳಲು ಹಲವು ಹತ್ತು ಮಂದಿ ದುಡಿದಿದ್ದಾರೆ. ಕಾಂತರಾಜಪುರದ ನಂಜಪ್ಪನವರ ವಿಶೇಷವೇನೆಂದರೆ ರಾಜ್ಯದಾದ್ಯಂತ ನೆಲೆಸಿರುವ ಒಕ್ಕಲು ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಜನಾಂಗದ ಒಳಿತಿಗಾಗಿ ಶ್ರಮಿಸಿ ಹಳೇ ಮೈಸೂರು ಪ್ರಾಂತ್ಯದಲ್ಲಿ ಒಕ್ಕಲಿಗರ ವಿದ್ಯಾರ್ಥಿ ನಿಲಯಗಳು ಸ್ಥಾಪನೆಯಾಗಲು ಶ್ರಮಿಸಿದ್ದು. ತಾನು ಹುಟ್ಟಿ ಬೆಳೆದ ಹಳ್ಳಿಯನ್ನು ಮಾದರಿ ಪಟ್ಟಣವನ್ನಾಗಿಸಿದ ಕೀರ್ತಿ ನಂಜಪ್ಪನವರಿಗೆ ಸಲ್ಲುತ್ತದೆ.

ನಂಜಪ್ಪನವರು ಅತೀ ಶ್ರೀಮಂತರೇನಲ್ಲ. ಜಮೀನ್ದಾರರು. ಆದರೆ ಹೃದಯ ಶ್ರೀಮಂತಿಕೆ ಹೊಂದಿದ್ದ ಧೀಮಂತ ವ್ಯಕ್ತಿ. 1906ರಲ್ಲಿ ಬೆಂಗಳೂರಿನಲ್ಲಿ ಒಕ್ಕಲಿಗರ ಸಂಘ ಸ್ಥಾಪನೆಯಾದ ವಿಚಾರ ತಿಳಿಯುತ್ತಲೇ ಕಾರ್ಯಪ್ರವೃತ್ತರಾದರು. ಒಕ್ಕಲಿಗ ವಿದ್ಯಾರ್ಥಿಗಳಿಗೆ, ಜನಾಂಗಕ್ಕೆ ದುಡಿಯಲು ಪಣ ತೊಟ್ಟರು. ಚನ್ನರಾಯಪಟ್ಟಣ, ಬಾಗೂರು, ಅರಸೀಕೆರೆ, ಗಂಡಸಿ, ತಿಪಟೂರು ತಾಲ್ಲೂಕಿನ ಗಂಗನ ಘಟ್ಟ ಸೇರಿದಂತೆ ಹಲವಾರು ಪ್ರದೇಶಗಳಲ್ಲಿ ಸಭೆಗಳನ್ನು ನಡೆಸಿ ಏಕೈಕ ಒಕ್ಕಲಿಗರ ಸಂಘವಾದ ರಾಜ್ಯ ಒಕ್ಕಲಿಗರ ಸಂಘಕ್ಕೆ ಉದಾರ ಧನಸಹಾಯವನ್ನು ಪಡೆದು ಒಕ್ಕಲಿಗರ ಸಂಘಕ್ಕೆ ಒಪ್ಪಿಸಿದರು. ಬೆಂಗಳೂರಿನಲ್ಲಿ ಒಕ್ಕಲಿಗರ ಸಂಘದ ಭವನವನ್ನು ನಿರ್ಮಿಸಿದಾಗ ಉದಾರವಾದ ಧನ ಸಹಾಯವನ್ನು ಮಾಡಿದರು. ಶ್ರೀಯುತರು ಮೈಸೂರು, ಮಳವಳ್ಳಿ, ಮದ್ದೂರು, ಕಾಂತರಾಜಪುರ, ತುಮಕೂರು, ನಾಗಮಂಗಲ, ಕೃಷ್ಣರಾಜಪೇಟೆ, ಇನ್ನೂ ಮುಂತಾದ ಕಡೆ ವಿದ್ಯಾರ್ಥಿ ನಿಲಯಗಳು ಸ್ಥಾಪಿತವಾದ ಕಡೆಯಲ್ಲೆಲ್ಲ ತಮ್ಮ ಸ್ವಂತ ಖರ್ಚಿನಲ್ಲಿ ಅವುಗಳಿಗೆ ಬೇಕಾದ ಪಾತ್ರೆ, ಪಡಗಗಳನ್ನು ಮಾಡಿಸಿಕೊಡುತ್ತಿದ್ದರು. 1927ರಲ್ಲಿ ಎಚ್.ಕೆ. ವೀರಣ್ಣಗೌಡರು ಒಕ್ಕಲಿಗರ ಪತ್ರಿಕೆಗೆ ಸಂಪಾದಕರಾಗಿ ಆಯ್ಕೆಯಾದರು. ಆದರೆ ಅದುವರೆವಿಗೂ ಶಾಲಾ ಮಾಸ್ತರರಾಗಿ

ಸೇವೆ ಸಲ್ಲಿಸಿದ್ದ ಒಂಭತ್ತು ತಿಂಗಳ ಬಾಕಿಯನ್ನು ಸರ್ಕಾರಕ್ಕೆ ಚುಕ್ತಮಾಡಿ ಕೆಲಸ ಬಿಡಬಹುದು ಎಂದಾಗ, ವೀರಣ್ಣ ಗೌಡರು ಬಿಕ್ಕಟ್ಟಿನಲ್ಲಿದಾಗ ಮುಂದೆ ಬಂದ ನಂಜಪ್ಪನವರು ಆ ಹಣವನ್ನು ತಮ್ಮ ಕೈಯಿಂದಲೇ ನೀಡಿ ಅವರ ಸಮಸ್ಯೆಯನ್ನು ಬಗೆಹರಿಸಿದರು. ಇಲ್ಲದಿದ್ದಲ್ಲಿ ಒಕ್ಕಲಿಗ ಜನಾಂಗವು ವೀರಣ್ಣಗೌಡರಂತಹ ಶ್ರೇಷ್ಠ ಪತ್ರಿಕೋದ್ಯಮಿ ಹಾಗೂ ರಾಜಕಾರಣಿಯನ್ನು ಕಳೆದುಕೊಳ್ಳಬೇಕಾಗುತ್ತಿತ್ತು.

ಹಿಂದಲಹಳ್ಳಿ ಎಂದು ಕರೆಯುತ್ತಿದ್ದ ತಮ್ಮ ಊರಿನಲ್ಲಿ ಪ್ರತ್ಯೇಕವಾದ ಹೆಣ್ಣು ಮಕ್ಕಳ ಶಾಲೆಯನ್ನೂ, ಬಾವಿ, ಛತ್ರ, ದೇವಸ್ಥಾನ, ಬಡ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿ ನಿಲಯ, ಬ್ಯಾಂಕು, ಇನ್ನೂ ಮುಂತಾದ ಸವಲತ್ತುಗಳನ್ನು ಒದಗಿಸಿ ಹಿಂದಲ ಹಳ್ಳಿಯನ್ನು ಪಟ್ಟಣವನ್ನಾಗಿಸಿದರು. ಅಭಿವೃದ್ಧಿ ಹೊಂದಿದ ತಮ್ಮ ಗ್ರಾಮಕ್ಕಿದ್ದ ಹೆಸರು ಅಸಹಜವೆಂದು ತಿಳಿದ ನಂಜಪ್ಪನವರು, ತಾವು ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ಕಟ್ಟಿಸಿದ್ದ ಹೆಣ್ಣುಮಕ್ಕಳ ಶಾಲೆಯನ್ನು ಉದ್ಘಾಟಿಸುವುದು, ಊರಿನ ಹೆಸರನ್ನು **'ಕಾಂತರಾಜಪುರ'**ವೆಂದು ನಾಮಕರಣ ಮಾಡಿಸುವ ಉದ್ದೇಶವನ್ನು ಇಟ್ಟುಕೊಂಡು ಊರಿನಲ್ಲಿ ಸಾಹುಕಾರ್ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಬೃಹತ್ ಸಭೆಯನ್ನೇರ್ಪಡಿಸಿ ಅಂದಿನ ದಿವಾನರಾಗಿದ್ದ ಸರ್. ಎಂ. ಕಾಂತರಾಜ ಅರಸರನ್ನು ಆದರದಿಂದ ಬರಮಾಡಿಕೊಂಡು ಅವರಿಂದ ಶಾಲೆಯನ್ನು ಉದ್ಘಾಟಿಸಿದುದೇ ಅಲ್ಲದೆ ಊರಿನ ಹೆಸರನ್ನು 'ಕಾಂತರಾಜಪುರ' ವೆಂದು ನಾಮಕರಣ ಮಾಡಿಸಿದರು. ವಿದ್ಯಾಭಿಮಾನಿಯಾದ ನಂಜಪ್ಪನವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹತ್ತು ಸಾವಿರ ರೂಪಾಯಿ ದೇಣಿಗೆಯನ್ನು ನೀಡಿ ಅದರಿಂದ ಬರುವ ಬಡ್ಡಿಯನ್ನು ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಬರುವಂತೆ ಮಾಡಿದರು. ಒಕ್ಕಲಿಗರಲ್ಲಿ ಭಿನ್ನಾಭಿಪ್ರಾಯ ಮೂಡಿದರೆ ಅದನ್ನು ಕೂಡಲೆ ಪರಿಹರಿಸುತ್ತಿದ್ದರು. ಒಕ್ಕಲಿಗರು ಮದುವೆ ಮುಂಜಿಗೆಂದು ಅಪಾರವಾಗಿ ಹಣ ಖರ್ಚು ಮಾಡುತ್ತಿರುವ ವಿಚಾರ ಅವರ ಗಮನಕ್ಕೆ ಬರುತ್ತಲೇ ಅದರ ವಿರುದ್ಧ ಚಳುವಳಿ ಮಾಡಿ ಜನಾಂಗದಲ್ಲಿ ಜಾಗೃತಿ ಮೂಡಿಸಿದರು. ಮೈಸೂರು ಪ್ರಜಾಪ್ರತಿನಿಧಿಯಾಗಿ ದುಡಿದ ಶ್ರೀಯುತರು ಹಗಲಿರುಳು ಜನಾಂಗದ ಶ್ರೇಯಸ್ಸನ್ನು ಬಯಸುತ್ತಿದ್ದ ನಂಜಪ್ಪನವರು 12-2-1963ರಲ್ಲಿ ವಿಧಿವಶರಾದರು.



ಶ್ರೀ ಎನ್.ಜಿ. ಗುಜ್ಜೇಗೌಡ

ಇಂದು ಅಧಿಕಾರಶಾಹಿಗಳು, ಹಣವಂತರು, ಪರೋಪಕಾರ ಮಾಡುವ ವಿಷಯದಲ್ಲಿ ದಟ್ಟದರಿದ್ರ-ರಾಗಿದ್ದಾರೆ. ಮನಸ್ಸೊಂದಿದ್ದರೆ ಹಣ, ಐಶ್ವರ್ಯ, ಅಧಿಕಾರ ಯಾವುದೂ ಬೇಕಿಲ್ಲ ಎನ್ನುವುದಕ್ಕೆ

ಉತ್ತಮವಾದ ಉದಾಹರಣೆ ಎಂದರೆ ನುಗ್ಗೇಹಳ್ಳಿ ಎನ್.ಜಿ. ಗುಜ್ಜೇಗೌಡರವರು. 15–3–1906ರಲ್ಲಿ ದೊಡ್ಡಗುಜ್ಜೇಗೌಡ ಮತ್ತು ಸಾವಿತ್ರಮ್ಮ ದಂಪತಿಗಳಿಗೆ ಜನಿಸಿದ ಮಗುವೇ ಮುಂದೆ ಜನಾಂಗದ ಉದ್ಧಾರಕ್ಕೆ ನಿಂತ ಗುಜ್ಜೇಗೌಡ. ಅಂದೇ (1906) ಬೆಂಗಳೂರಿನಲ್ಲಿ ರಾಜ್ಯ ಒಕ್ಕಲಿಗರ ಸಂಘ ಸ್ಥಾಪನೆಯಾದ ಕಾಲ. ಇವರು ಬಾಲ್ಯಾವಸ್ಥೆಯಲ್ಲಿರುವಾಗಲೇ ತಾಯಿಯನ್ನು ಕಳೆದುಕೊಂಡ ದುರ್ದೈವಿ. ಧೃತಿಗೆಡದೆ ಭಾವೀ ಭವಿಷ್ಯದೊಂದಿಗೆ ಮುಂದಡಿಯಿಟ್ಟ ಬಾಲಕ ಹಾಸನದಲ್ಲಿ 1920ರಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. 1922ರಲ್ಲಿ ಪ್ರೌಢಶಾಲೆ ವ್ಯಾಸಂಗ ಮುಗಿಸಿದ ಈ ಯುವಕನ ಉನ್ನತ ಶಿಕ್ಷಣದ ನೆರವಿಗೆ ಬಂದವರು ಕಾಂತರಾಜಪುರದ ಎಂ. ನಂಜಪ್ಪನವರು. ಬೆಂಗಳೂರಿನ ಬಿ.ಕೆ. ಮರಿಯಪ್ಪ ವಿದ್ಯಾರ್ಥಿನಿಲಯದಲ್ಲಿ ಉಚಿತ ಊಟ ಮತ್ತು ವಸತಿಯ ವ್ಯವಸ್ಥೆ ಮಾಡಿಕೊಟ್ಟರು. ಬೆಂಗಳೂರಿನಲ್ಲಿದ್ದಾಗ ಕೆ.ಹೆಚ್. ರಾಮಯ್ಯ, ಹೆಚ್.ಸಿ. ದಾಸಪ್ಪ, ಹೆಚ್.ಕೆ. ವೀರಣ್ಣಗೌಡ, ಶ್ರೀ ಹೆಚ್. ಹೊಂಬೇಗೌಡ ಇನ್ನು ಮುಂತಾದ ಗಣ್ಯರ ಮಾರ್ಗದರ್ಶನದಲ್ಲಿ ಬೆಳೆದ ಗುಜ್ಜೇಗೌಡರು ಇಂಟರ್ ಮೀಡಿಯಟ್ ಅನ್ನು ಸೆಂಟ್ರಲ್ ಕಾಲೇಜಿನಲ್ಲಿ ಓದಿ ಮುಗಿಸಿ ಬಿ.ಎ. ವ್ಯಾಸಂಗ ಮಾಡಲು ಮೈಸೂರಿಗೆ ತೆರಳಿದರು ಮತ್ತೆ ಎಂ. ನಂಜಪ್ಪನವರನ್ನು ಎಡೆ ತಾಕಿದರು. ಎಂ. ನಂಜಪ್ಪನವರು ಚಾಮರಾಜಪುರಂನಲ್ಲಿ ನಡೆಸುತ್ತಿದ್ದ ಒಕ್ಕಲಿಗರ ವಿದ್ಯಾರ್ಥಿನಿಲಯಕ್ಕೆ ಸೇರಿದರು. ಮೈಸೂರು ಹೊಸ ಭಾಗವಾದ್ದರಿಂದ ಜನಾಂಗದ ಮುಖಂಡರ ಪರಿಚಯ ಮಾಡಿಕೊಂಡರು. ನಂಜಪ್ಪನವರು ಕೆಲವು ಒಕ್ಕಲಿಗ ವಿದ್ಯಾರ್ಥಿಗಳಿಗೆ ಹಣ ಸಹಾಯ ಮಾಡುತ್ತಿದ್ದರು. ಕೆಲವು ಶ್ರೀಮಂತ ವಿದ್ಯಾರ್ಥಿಗಳು ಬಡವಿದ್ಯಾರ್ಥಿಗಳಂತೆ ಸೋಗುಹಾಕಿ ಅವರಿಂದ ಹಣ ಪಡೆದು ವಿಲಾಸಿ ಜೀವನ ನಡೆಸುತ್ತಿದ್ದರು. ಹೀಗಾಗಿ ಶ್ರೀ ನಂಜಪ್ಪನವರು ತಮ್ಮ ಊರಿನವರೇ ಆದ ಗುಜ್ಜೇಗೌಡರಿಗೆ ವಿದ್ಯಾರ್ಥಿ ವೇತನ ಹಂಚುವ ಜವಾಬ್ದಾರಿಯನ್ನು ನೀಡಿದ್ದರು. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ತಮ್ಮ ಶಿಸ್ತು ಮತ್ತು ದಕ್ಷತೆಯನ್ನು ಮೆರೆದರು.

ಸಂಘಟನಾ ಚತುರರಾದ ಗೌಡರು 1926–27ರಲ್ಲಿ ಶ್ರೀ ಕೆಂಗಲ್ ಹನುಮಂತಯ್ಯ, ಶ್ರೀ ಕುವೆಂಪು, ಡಾ॥ ಚನ್ನೇಗೌಡ, ಎಂ. ಲಿಂಗಯ್ಯನವರನ್ನೊಳ –ಗೊಂಡ **'ಸೇವಕ ಸೈನ್ಯ'** ಎಂಬ ಸಂಘವನ್ನು ಸ್ಥಾಪಿಸಿದರು. ಜನಸಾಮಾನ್ಯರಿಗೆ ಜ್ಞಾನ ಪ್ರಸಾರ ಮಾಡುವುದು, ಜನಾಂಗದ ಬಡವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ನೆರವಾಗುವುದು ಇವೇ ಮುಂತಾದ ಸಮಾಜ ಸುಧಾರಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕೆಂಗಲ್‌ರ 'ನಾವೇಕೆ ಕಂದಾಯ ಕೊಡಬೇಕು' ಎಂಬ ಕೈಪಿಡಿಯನ್ನು ಜನರಿಗೆ ಹಂಚಿ ಜನರಲ್ಲಿ ಸಾಮಾಜಿಕ ಹಾಗು ರಾಜಕೀಯ ಪ್ರಜ್ಞೆ ಮೂಡಿಸಿದರು. 1931ರಲ್ಲಿ ಬಿ.ಎ. ಪದವಿ ಗಳಿಸಿದರು. ಗೌಡರ ಸ್ನೇಹಿತರು ಹಾಗೂ

ಹಿತೈಷಿಗಳು ಕಂದಾಯ ಇಲಾಖೆಯಂತಹ ಅಧಿಕಾರ ಇಲ್ಲವೆ ಹಣದ ಥೈಲಿ ಸಿಗುವ ಇಲಾಖೆಗೆ ಸೇರಲು ಒತ್ತಾಯಿಸುತ್ತಿದ್ದರೂ ಇದ್ಯಾವುದಕ್ಕೂ ಮನಸ್ಸು ಕೊಡದೆ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿದ್ದ ಪ್ರೊ|| ಜೆ.ಸಿ. ರಾಲೋರವರ ಸಲಹೆಯಂತೆ ಮೈಸೂರು ವಿಶ್ವವಿದ್ಯಾಲಯದ ಗುಮಾಸ್ತ ಹುದ್ದೆಗೆ ಸೇರಿದರು. ಶಿಸ್ತು ಮತ್ತು ದಕ್ಷತೆಗೆ ಹೆಸರಾದ ಗೌಡರು ಕೆಲಸಕ್ಕೆ ಎಂದೂ ದ್ರೋಹ ಮಾಡುತ್ತಿರಲಿಲ್ಲ. ಜನಾಂಗದ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಿಸುವುದು, ಜನಾಂಗದ ಶ್ರೀಮಂತರ ಮನೆಯ ಬಾಗಿಲಿಗೆ ಹೋಗಿ ಅವರ ಸಹಾಯದಿಂದ ವಿದ್ಯಾರ್ಥಿಗಳ ನೆರವಿಗೆ ನಿಲ್ಲುವುದು ಇದು ಅವರ ಪ್ರವೃತ್ತಿಯಾಗಿತ್ತು.

ವಿದ್ಯಾರ್ಥಿನಿಲಯಗಳ ಸ್ಥಾಪಕ : ಗುಜ್ಜೇಗೌಡರು ನೋಡಲು ತುಸು ಕಪ್ಪು ಬಣ್ಣ, ಮಾಲುಗಣ್ಣು, ಸ್ವಲ್ಪ ಕುಂಟುತ್ತಾ ನಡೆಯುವ ಪೇಟಧಾರಿಯಾದ ಇವರ ಒಂದು ಕಣ್ಣು ತನ್ನ ಬಳಿಗೆ ಸಹಾಯ ಕೇಳಿ ಬಂದ ವ್ಯಕ್ತಿಯನ್ನು ನೋಡುತ್ತಿದ್ದರೆ ಮತ್ತೊಂದು ಕಣ್ಣು ಯಾವ ರೀತಿ ಸಹಾಯ ಮಾಡಬಹುದು ಎಂದು ಯೋಚಿಸುತ್ತಿತ್ತು. ಸದಾ ಕಾಲವೂ ಜನಾಂಗದ ಬಡ ವಿದ್ಯಾರ್ಥಿಗಳಿಗಾಗಿ ತಮ್ಮ ಸೇವೆಯನ್ನು ಮುಡುಪಿಡುತ್ತಿದ್ದರು. ಇಂದಿಗೆ 80–90 ವರ್ಷಗಳ ಹಿಂದೆ ಜನಾಂಗದ ಶಿಕ್ಷಣವಾಗಲಿ, ಆರ್ಥಿಕ ಮಟ್ಟವಾಗಲಿ ಸುಧಾರಿಸಿರಲಿಲ್ಲ. ಮೈಸೂರಿನಲ್ಲಿ ಒಕ್ಕಲಿಗರ ವಿದ್ಯಾರ್ಥಿ ನಿಲಯ ಅಸ್ತಿತ್ವದಲ್ಲಿತ್ತು. ಆದರೆ ಆದಕ್ಕೆ ಸ್ವಂತ ಕಟ್ಟಡವಿರಲಿಲ್ಲ. (ಸ್ವಂತ ನಿವೇಶನವನ್ನು ಒದಗಿಸಿಕೊಡಬೇಕೆಂದು ಗೌಡರ ಮನಸ್ಸು ತುಡಿಯುತ್ತಿತ್ತು). ಕೆ.ಹೆಚ್. ರಾಮಯ್ಯನವರ ಅಧ್ಯಕ್ಷತೆಯಲ್ಲಿ ಜನಾಂಗದ ಹಲವಾರು ಪ್ರಮುಖರನ್ನು ಸೇರಿಸಿದರು. ಬಡವಿದ್ಯಾರ್ಥಿಗಳ ವಿದ್ಯಾರ್ಥಿನಿಲಯು ಸ್ಥಾಪಿಸಲು ಒಂದು ನಿವೇಶನಕ್ಕಾಗಿ ಅರ್ಜಿ ಸಲ್ಲಿಸಲಾಯ್ತು. ಎಲ್ಲರ ಪ್ರಯತ್ನದಿಂದಾಗಿ ಸರಸ್ವತಿಪುರಂನ ಇಂದಿನ ಮುಸ್ಲಿಂ ಹಾಸ್ಟಲ್, ವಿದ್ಯಾಶ್ರಮ ಮತ್ತು ಉಪ್ಪಾರ ಹಾಸ್ಟಲ್ ಬಳಿಯಲ್ಲಿ ದೊಡ್ಡದಾದ ನಿವೇಶನವೊಂದು ಮಂಜೂರಾಯಿತು. ಆದರೆ ಆ ಕೂಡಲೆ ಕಟ್ಟಡ ಕಟ್ಟದಿದ್ದರಿಂದ ಅಷ್ಟು ದೊಡ್ಡ ನಿವೇಶನವನ್ನು ಮುಸ್ಲಿಮರು ಸೇರಿದಂತೆ ಇತರರಿಗೆ ಸರ್ಕಾರ ಹಂಚಿ ಇಂದಿನ ವಿದ್ಯಾಶ್ರಮವಿರುವ ಜಾಗವನ್ನು ಉಳಿಸಿಕೊಟ್ಟಿತು.

ಸ್ವಂತ ಕಟ್ಟಡದಲ್ಲಿ ವಿದ್ಯಾರ್ಥಿನಿಲಯವನ್ನು ನಡೆಸಬೇಕೆಂದು ತೀರ್ಮಾನಿಸಿ –ದರು. ಅಂದು ನಜರಬಾದಿನ ನವಾಬರೆಂದೇ ಕರೆಯುತ್ತಿದ್ದ ಸಾಹುಕಾರ್ ಚನ್ನಯ್ಯನವರು ಕೇವಲ ಶ್ರೀಮಂತರು ಮಾತ್ರವಲ್ಲ ಕೊಡುಗೈ ದಾನಿಗಳಾಗಿದ್ದರು. ಗೌಡರು ಅವರಲ್ಲಿಗೆ ಹೋಗಿ ಅವರ ಮನೆಯ ಪಕ್ಕದಲ್ಲೇ ಇದ್ದ ಅವರ ಮತ್ತೊಂದು ಬಂಗಲೆಯನ್ನು ಹಾಸ್ಟಲ್‌ಗೆ ದಾನ ನೀಡಬೇಕೆಂದು ಕೇಳಿಕೊಂಡರು. ಚನ್ನಯ್ಯನವರು ಹಿಂದು ಮುಂದೆ ನೋಡದೆ ಬಡವಿದ್ಯಾರ್ಥಿಗಳ ಹಾಸ್ಟೆಲ್‌ಗಾಗಿ ತಮಗೆ ಸೇರಿದ್ದ

ಮನೆಯನ್ನು ದಾನವಾಗಿ ನೀಡಿಯೇ ಬಿಟ್ಟರು. ಈ ಹಾಸ್ಟಲ್‌ನಲ್ಲಿ ಓದುವ ವಿದ್ಯಾರ್ಥಿಗಳು ಊಟ ಮತ್ತು ವಸತಿ ಸೇರಿ ತಿಂಗಳಿಗೆ ಇಂತಿಷ್ಟು ಹಣ ನೀಡಬೇಕೆಂದು ನಿಗದಿ ಮಾಡಿ ಖರ್ಚು ಕಳೆದು ಬಂದ ಹಣವನ್ನು ಚನ್ನಯ್ಯನವರ ತಂದೆ ಸಿದ್ದಯ್ಯ –ನವರ ಹೆಸರಿನಲ್ಲಿ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡತೊಡಗಿದರು.

ಒಂಟಿಕೊಪ್ಪಲಿನಲ್ಲಿ ಒಕ್ಕಲಿಗರ ಅನಾಥಾಲಯವೆಂಬ ಹೆಸರಿನಲ್ಲಿ ಪುಕ್ಕಟ್ಟೆಯಾಗಿ ವ್ಯಾಸಂಗ ಮಾಡಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಸಾಹುಕಾರ ಚನ್ನಯ್ಯ, ಹೆಚ್.ಸಿ. ದಾಸಪ್ಪ, ಕದಿರಮ್ಮ, ಬಸವೇಗೌಡರ ಮುಖಂಡತ್ವದಲ್ಲಿ ಸಮಿತಿಯನ್ನು ರಚಿಸಿದರು. ಹೊಂಬೇಗೌಡರು ಅದಕ್ಕೆ ಚಂದಾ ವಸೂಲಿ ಮಾಡುವ ಉದ್ದೇಶದಿಂದ ಟಿ. ಚೌಡಯ್ಯನವರಿಂದ ಪೀಟೀಲುವಾದನ, ನಾಟಕ ತಂಡದಿಂದ ನಾಟಕ ಮಾಡಿಸಿ ಚಂದಾ ವಸೂಲಿ ಮಾಡಿಕೊಟ್ಟರು. ಏನೆಲ್ಲಾ ಮಾಡಿದರೂ ಕಟ್ಟಡ ಕೊಳ್ಳುವಷ್ಟು ಹಣ ಸಾಕಾಗದಿದ್ದಾಗ ಮತ್ತೆ ಸಾಹುಕಾರ್ ಚನ್ನಯ್ಯನವರಿಗೆ ದುಂಬಾಲು ಬಿದ್ದರು. ಚನ್ನಯ್ಯನವರು ಒಂಟಿಕೊಪ್ಪಲಿನಲ್ಲಿದ್ದ ತಮ್ಮ ಮತ್ತೊಂದು ಮನೆಯನ್ನು ಬಿಟ್ಟುಕೊಟ್ಟರು. 1937ರಲ್ಲಿ **'ಒಕ್ಕಲಿಗ ಅನಾಥಾಲಯ'** ಅಸ್ತಿತ್ವಕ್ಕೆ ಬಂತು. 1933ರಲ್ಲಿ ಜನಾಂಗದ ಮೇರು ವ್ಯಕ್ತಿ ಕೆ.ಹೆಚ್. ರಾಮಯ್ಯವನರು ಮೃತರಾದುದರಿಂದಾಗಿ ಆ ಹಾಸ್ಟೆಲ್‌ಅನ್ನು **ಕೆ.ಹೆಚ್. ರಾಮಯ್ಯ ವಿದ್ಯಾರ್ಥಿ ನಿಲಯ**ವೆಂದು ಕರೆಯಲಾಯಿತು.

ಛಲ ಬಿಡದ ವಿಕ್ರಮಾದಿತ್ಯ ಗುಜ್ಜೇಗೌಡರು ಸ್ವಾಮಿ ವಿವೇಕಾನಂದ ವಿದ್ಯಾರ್ಥಿನಿಲಯವನ್ನು ಸರಸ್ವತಿಪುರಂನ ಖಾಲಿ ನಿವೇಶನದಲ್ಲಿ **'ವಿದ್ಯಾಶ್ರಮ'** ಎಂಬ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ದೇವರಲ್ಲಿ ತನಗಾಗಿ ಏನನ್ನೂ ಕೇಳಿಕೊಳ್ಳದ ಗೌಡರು ಕೊನೆಯ ಪಕ್ಷ ಆಯುಸ್ಸನ್ನಾದರೂ ಕೇಳಿಕೊಳ್ಳಬಹುದಿತ್ತು. ಆದರೆ ಅದನ್ನೂ ಕೇಳಿಕೊಳ್ಳದ ಫಲವಾಗಿ 1945ರಲ್ಲಿ ತಮ್ಮ 39ನೆಯ ವಯಸ್ಸಿನಲ್ಲಿ ಅಸುನೀಗಿದರು.

ಡಾ॥ ಎಂ.ಹೆಚ್. ಮರೀಗೌಡ



ಡಾ॥ ಎಂ.ಹೆಚ್. ಮರೀಗೌಡರು ಆಧುನಿಕ ಕರ್ನಾಟಕದ ತೋಟಗಾರಿಕೆಯ ಜನಕರೆಂದು ಖ್ಯಾತರಾದವರು. ಮೈಸೂರು ಪ್ರದೇಶದ ಟಿ. ನರಸೀಪುರ ತಾಲ್ಲೂಕು ಮಾರಗೊಂಡನಹಳ್ಳಿ ಹೊಂಬೇಗೌಡ ವಂಶದ ಒಕ್ಕಲಿಗ ಅನರ್ಘ್ಯ ರತ್ನಗಳಲ್ಲಿ ಇವರು ಒಬ್ಬರಾಗಿದ್ದಾರೆ. ಎಂ.ಹೆಚ್. ಮರೀಗೌಡರು ಆಗಸ್ಟ್ 8, 1916ರಲ್ಲಿ ಹೊಂಬೇಗೌಡ ಮತ್ತು ನಿಂಗಮ್ಮನವರ ನಾಲ್ಕನೆಯ ಪುತ್ರರಾಗಿ ಜನಿಸಿದರು. ಮಾರಗೊಂಡನಹಳ್ಳಿ ಹೊಂಬೇಗೌಡರ ಕುಟುಂಬ ಮಂಡ್ಯ, ನರಸೀಪುರದಲ್ಲಿ, ಮೈಸೂರು ಪ್ರದೇಶದ

ಒಕ್ಕಲಿಗರಲ್ಲೇ ಖ್ಯಾತಿಗಳಿಸಿದೆ. ಇದೇ ಕುಟುಂಬದ ಮರೀಗೌಡರ ಸಹೋದರರಾದ ಎಂ. ಮಂಚೆಗಯ್ಯ ಒಕ್ಕಲಿಗ ಜನಾಂಗ ಮೊದಲ ಇಂಜಿನಿಯರಿಂಗ್ ಪದವೀಧರರು. ಹೆಚ್. ಹೊಂಬೇಗೌಡರು ಕರ್ನಾಟಕದ ಉಚ್ಚ ನ್ಯಾಯಲಯದ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ಇಂತಹ ಗೌರವಾನ್ವಿತ ಒಕ್ಕಲುತನ ಮೂಲದ ಮರೀಗೌಡರು ಕರ್ನಾಟಕದಲ್ಲಿ ತೋಟಗಾರಿಕೆಗೆ ಹೊಸ ಕಾಯಕಲ್ಪವನ್ನು ನೀಡಿದರು ಹಾಗೂ ಒಕ್ಕಲಿಗರ ಸಂಘವನ್ನು ಇಡೀ ರಾಜ್ಯದಲ್ಲೇ ಒಂದು ಪ್ರಬಲ ಸಂಸ್ಥೆಯಾಗಿ ಮಾರ್ಪಡಿಸಿದರು. ಆಧುನಿಕ ಕರ್ನಾಟಕದ ಕೃಷಿ ಮತ್ತು ತೋಟಗಾರಿಕೆ ಅಭಿವೃದ್ಧಿಗೆ ಪ್ರಮುಖ ಕಾರಣರಾಗಿದ್ದಾರೆ. ಕುಟುಂಬ ಪ್ರಭಾವದಿಂದ ಶಿಕ್ಷಣ ಕಲಿಕೆ ಆರಂಭಿಸಿದ ಮರೀಗೌಡರು ಹನುಮನಹಳ್ಳಿ ಮತ್ತು ಬನ್ನೂರಿನಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಪಡೆದು ನಂತರ ಮೈಸೂರಿನ ಮಹಾರಾಜ ಹೈಸ್ಕೂಲಿನಲ್ಲಿ ಇಂಟರ್ ಮೀಡಿಯಟ್ ಶಿಕ್ಷಣ ಪಡೆದರು. ಮೈಸೂರಿನ ರಾಮಕೃಷ್ಣ ಆಶ್ರಮ ಸೇರಿ ಮರೀಗೌಡರು ಅಲ್ಲಿಯೇ ಇದ್ದ ಮಹಾಕವಿ ಕುವೆಂಪುರವರ ಪ್ರಭಾವಕ್ಕೆ ಒಳಗಾದರು. ಅವರ ಶಿಷ್ಯರಾಗಿ, ಸಹಪಾಠಿಯಾಗಿ, ಶಿಕ್ಷಣ ಪಡೆದ ಗೌಡರು ಕುವೆಂಪುರವರ ಜೊತೆ ತಮ್ಮ ಒಡನಾಟವನ್ನು ತಮ್ಮ ಜೀವಿತದವರೆಗೂ ಇಟ್ಟುಕೊಂಡಿದ್ದರು.

ಕುವೆಂಪುರವರ ತಮ್ಮ ಆತ್ಮ ಚರಿತ್ರೆ 'ನೆನಪಿನ ದೋಣಿಯಲಿ' ಇವರ ನೆನಪಾಗಿ ಉಳಿದಿರುವುದು ನೋಡಿದರೆ ಈ ಇಬ್ಬರ ಸ್ನೇಹಪರತೆ ಎಷ್ಟಿತೆಂಬುದನ್ನು ಊಹಿಸಲು ಸಾಧ್ಯ. ಇಂಟರ್ ಮೀಡಿಯೆಟ್ ಪೂರೈಸಿದ ನಂತರ ಉನ್ನತ ಶಿಕ್ಷಣಕ್ಕಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಸೇರಿದರು. ಅಲ್ಲಿ ಬಿ.ಎಸ್ಸಿ ಪದವಿ ಪೂರೈಸಿದ ನಂತರ ಉತ್ತರ ಪ್ರದೇಶದ ಲಕ್ನೋ ಕೃಷಿ ವಿಶ್ವವಿದ್ಯಾಲಯ ಸಸ್ಯಶಾಸ್ತ್ರದಲ್ಲಿ ಎಂ.ಎಸ್ಸಿ. ಪದವಿಯನ್ನು ಪಡೆದರು. ವಿಶ್ವವಿದ್ಯಾಲಯದಲ್ಲಿದ್ದಾಗಲೇ ಖ್ಯಾತ ಸಸ್ಯ ವಿಜ್ಞಾನಿ ಪ್ರೊ. ಬೀರ್‌ಬಲ್ ಸಹಾನಿ ಅಡಿಯಲ್ಲಿ ಸಂಶೋಧನೆಯನ್ನು ಮೈಗೂಡಿಸಿಕೊಂಡರು. 1942ರಲ್ಲಿ ಅವರು ಸರ್ಕಾರಿ ಸೇವೆಗೆ ಸೇರಿ ತೋಟಗಾರಿಕೆ ವಿಭಾಗದ ಸಹ ನಿರ್ದೇಶಕರಾಗಿ ನೇಮಕಗೊಂಡರು. 1947ರಲ್ಲಿ ಲಂಡನ್ನಿನ ಕ್ಯೂ ರಾಯಲ್ ಬಟಾನಿಕಲ್ ಗಾರ್ಡನ್‌ಗೆ (Kew Royal Botanic Garden) ವಿಶೇಷ ಶಿಕ್ಷಣಕ್ಕಾಗಿ ಇವರನ್ನು ಕಳುಹಿಸಿ ಕೊಡಲಾಯಿತು. 1951ರಲ್ಲಿ ಇವರು ಅಮೇರಿಕಾದ ಹಾರ್ವರ್ಡ್ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರದಲ್ಲಿ ಪಿಹೆಚ್.ಡಿ. ಪದವಿಯನ್ನು ಗಳಿಸಿದರು. ಅದೇ ವರ್ಷ ಅಲ್ಲಿಂದ ಬಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರಾಗಿ ನೇಮಿತರಾಗಿ ಸರ್ಕಾರಿ ತೋಟಗಳ ಮೇಲುಸ್ತುವಾರಿಯ ಜವಾಬ್ದಾರಿ ವಹಿಸಿಕೊಂಡರು.

1951ರಲ್ಲಿ ತೋಟಗಾರಿಕೆ ಇಲಾಖೆಯ ಸೂಪರಿಂಟೆಂಡೆಂಟ್‌ರಾಗಿ ನೇಮಕ–ಗೊಂಡರು. ಬೆಂಗಳೂರಿನ ಶ್ವಾಸನಾಳಗಳಾದ ಕಬ್ಬನ್‌ಪಾರ್ಕ್, ಲಾಲ್‌ಬಾಗ್ ಉದ್ಯಾನ –ವನಗಳನ್ನು ಮಾದರಿ ತೋಟಗಾರಿಕಾ ಕ್ಷೇತ್ರಗಳಾಗಿ ಅಭಿವೃದ್ಧಿಪಡಿಸಿದರು. ಅಲ್ಲದೆ

ಮೈಸೂರು ರಾಜ್ಯ 9 ಜಿಲ್ಲೆಗಳಲ್ಲಿ ತೋಟಗಾರಿಕಾ ಇಲಾಖೆಗಳನ್ನು ತೆರೆದು ರಾಜ್ಯದಾ–ದ್ಯಂತ ತೋಟಗಾರಿಕಾ ಚಟುವಟಿಕೆಯನ್ನು ವಿಸ್ತರಿಸಿದರು. 1956ರಲ್ಲಿ ಕರ್ನಾಟಕ ಏಕೀಕರಣಗೊಂಡನಂತರ ಇಡೀ ರಾಜ್ಯದಾದ್ಯಂತ, ಜಿಲ್ಲಾವಾರು, ತೋಟಗಾರಿಕಾ ಕೇಂದ್ರಗಳನ್ನು ತೆರೆದು ತೋಟಗಾರಿಕ ಚಟುವಟಿಕೆಯನ್ನು ಜನಪ್ರಿಯಗೊಳಿಸಿದರು. 1963ರಲ್ಲಿ ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯ ನಿರ್ದೇಶಕರಾದರು.

'4 ನಿಯಮಿತ ಮಾದರಿ (ಸಸ್ಯಲೋಕ) ತೋಟಗಾರಿಕೆ' (4–Limbed model of Horticulture) ಎಂಬ ವಿಶಿಷ್ಟವಾದ ಮಾರ್ಗಸೂಚಿಯನ್ನು ಮರೀಗೌಡರು ತೋಟಗಾರಿಕಾ ಅಭಿವೃದ್ಧಿಯಲ್ಲಿ ಅಳವಡಿಸಿದರು. ಅದರ ಪ್ರಕಾರ ಅವರು ತೋಟಗಾರಿಕೆ ಉತ್ಪನ್ನಗಳ ಸಹಕಾರ ಮಾರಾಟ ಮಂಡಳಿಯನ್ನು ಹುಟ್ಟುಹಾಕಿದರು (ಹಾಪ್ಕಾಮ್ಸ್) ಇದರ ಅಭಿವೃದ್ಧಿ ಮತ್ತು ಪ್ರಚಾರಕ್ಕಾಗಿ ಶ್ರೀಯುತರು ಕನ್ನಡದಲ್ಲಿ ತೋಟಗಾರಿಕೆ ಹಾಗೂ ಇಂಗ್ಲೀಷ್‌ನಲ್ಲಿ **'ದಿ ಲಾಲ್‌ಬಾಗ್'** ಎಂಬ ಪತ್ರಿಕೆಗಳನ್ನು ಪ್ರಕಟಿಸತೊಡಗಿದರು.

ಅವರು ತೋಟಗಾರಿಕೆಯ ಮುಖ್ಯಸ್ಥರಾಗಿದ್ದಾಗ ಸುಮಾರು 380 ಫಾರಂಗಳು ಮತ್ತು ನರ್ಸರಿಗಳನ್ನು ರಾಜ್ಯದಾದ್ಯಂತ ನಿರ್ಮಿಸಿದರು. ರಾಜ್ಯದಾದ್ಯಂತ ತೆಂಗು–ಅಡಿಕೆ, ದ್ರಾಕ್ಷಿ–ಗೋಡಂಬಿ, ಕಾಫಿ–ಟೀ, ಮೊದಲಾದ ಸಸ್ಯ ತೋಟಗಳ ಅಭಿವೃದ್ಧಿಗಾಗಿ ರಾಜ್ಯದಾದ್ಯಂತ ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡು ಅಭಿವೃದ್ಧಿ ಪಡಿಸಿದರು. ಪ್ರಚಾರಕ್ಕೆ ತಂದರು. ಕೃಷಿ ಇಲಾಖೆಗೆ ಸಮನಾಗಿ ತೋಟಗಾರಿಕೆ ಇಲಾಖೆಯನ್ನು ಜನಪರಗೊಳಿಸಿದರು. ಹಾಗೇನೆ ಇವರ ಮತ್ತೊಂದು ಕೊಡುಗೆ ಒಣ ಬೇಸಾಯದ ಜಾರಿ. ಕೃಷಿಯಲ್ಲಿ ಒಣಬೇಸಾಯದ ಮೂಲಕ ತೋಟಗಾರಿಕೆ–ಯನ್ನು ಅಭಿವೃದ್ಧಿಪಡಿಸಲು ಯತ್ನಿಸಿದರು. ತೋಟಗಾರಿಕೆ ಮೂಲಕ ಕರ್ನಾಟಕಕ್ಕೆ ಅಂತರರಾಷ್ಟ್ರೀಯ ಮನ್ನಣೆ ತಂದುಕೊಟ್ಟ ಕೆಲಸ. 1965ರಲ್ಲಿ ಇಂಡೋ ಅಮೇರಿಕನ್ ಹೈಬ್ರೀಡ್ ಸೀಡ್ಸ್ ಕಂಪನಿಯ ಸ್ಥಾಪನೆ. ಈ ಸಂಸ್ಥೆಯ ಮೂಲಕ ವಿದೇಶಗಳಿಗೆ ಪುಷ್ಪ ಮತ್ತು ಸಸ್ಯ ಬೀಜನಗಳನ್ನು ರಫ್ತು ಮಾಡಿ ವಾಣಿಜ್ಯ ವ್ಯಾಪಾರವನ್ನು ಅಭಿವೃದ್ಧಿಪಡಿಸಿದರು. ತೋಟಗಾರಿಕೆ ಮೂಲಕ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಶ್ರಮಿಸಿದ ಮರೀಗೌಡರು ನೂರಾರು ರೈತರ ಜೀವನ ದಾರೀದೀಪವಾದರು. ನೂರಾರು ಮಂದಿಗೆ ಉದ್ಯೋಗ ನೀಡಿದರು. ಇವರ ಸೇವೆ ಕಂಡ ಜಾಕಿರ್ ಹುಸೇನರು ಮೊರಾರ್ಜಿ ದೇಸಾಯಿ, ಇಂದಿರಾಗಾಂಧಿ, ಎಸ್. ನಿಜಲಿಂಗಪ್ಪ ಮೊದಲಾದ ರಾಷ್ಟ್ರದ ಹಿರಿಯ ಚೇತನಗಳು ಬೆನ್ನು ತಟ್ಟಿ ಗೌರವಿಸಿದ್ದಾರೆ.

ಸರ್ಕಾರಿ ಸೇವೆಯಿಂದ ನಿವೃತ್ತರಾದ ಮೇಲೆ ಮರೀಗೌಡರು ತಮ್ಮ ಸಮಾಜದ ಒಕ್ಕಲಿಗರ ಉದ್ಧಾರಕ್ಕೆ ಬಹಳವಾಗಿ ಶ್ರಮಿಸಿದರು. ಒಕ್ಕಲಿಗರ ಸಂಘದ

ಅಧ್ಯಕ್ಷರಾದ ಮೇಲೆ ಅದನ್ನು ಒಂದು ಉತ್ತಮ ಸಂಸ್ಥೆಯನ್ನಾಗಿ ಮಾಡಲು ಶ್ರಮಿಸಿದರು. ಮಲಗಿದ್ದ ಸಂಘವನ್ನು ಕ್ರಿಯಾಶೀಲ ಸಂಘವನ್ನಾಗಿಸಿದರು. ಜೊತೆಗೆ ಅದನ್ನು ರಾಜ್ಯದಲ್ಲಿಯೇ ಗೌರವಾನ್ವಿತ ಸ್ಥಾನಕ್ಕೆ ಏರಿಸಿದರು. ಅನೇಕ ಉನ್ನತ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಶ್ರಮಿಸಿದರು. ಅವುಗಳಲ್ಲಿ ಪ್ರಮುಖವಾದವೆಂದರೆ ಕೆಂಪೇಗೌಡ ಮೆಡಿಕಲ್ ಕಾಲೇಜ್ ಮತ್ತು ಬೆಂಗಳೂರು ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ. ಮರೀಗೌಡರು ಎಂದಿಗೂ ತಮ್ಮ ಕೆಲಸದ ವೈಭವೀಕರಣಕ್ಕಾಗಲೀ, ಹೆಸರಿಗಾಗಲೀ, ಹಂಬಲಿಸಿದವರೇ ಅಲ್ಲ. ಎಲ್ಲಾ ಕೆಲಸವೂ ದೇವರ ಕೆಲಸ ಎಂದು ನಂಬಿದ್ದರು. ಅದರಂತೆ ಮಾಡಿ ತೋರಿಸಿದರು. 1994ರಲ್ಲಿ ಇಹಲೋಕ ತ್ಯಜಿಸಿದರು. ಎಲ್ಲರೂ ಅನುಸರಿಸಬಹುದಾದ ಸಾಧನೆ ಹಾಗೂ ಯಶಸ್ಸನ್ನು ಅವರು ನಮಗೆ ಬಿಟ್ಟು ಹೋಗಿದ್ದಾರೆ. ನಮ್ಮ ಜನ ಹೆಮ್ಮೆ ಪಡುವ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ.

1935ರ ನಂತರದ ಒಕ್ಕಲಿಗರ ಸಂಘ

ಒಕ್ಕಲಿಗರ ಸಂಘವು 1935ರವರೆವಿಗೂ ದ್ವಿಮುಖ ಆಡಳಿತ ಕ್ರಮವನ್ನು ಹೊಂದಿದ್ದು ಅದನ್ನು ಎಕ್ಸಿಕ್ಯುಟಿವ್ ಕೌನ್ಸಿಲ್ ಮತ್ತು ಜನರಲ್ ಕೌನ್ಸಿಲ್ ಎಂದು ವಿಭಾಗಿಸಿ ಸಂಘ ಆಡಳಿತವನ್ನು 1906ರಿಂದ 1935ರವರೆವಿಗೆ ನೋಡಿಕೊಳ್ಳುತ್ತಿದ್ದಿತು. 1936ರಿಂದ ಸಂಘವು ದ್ವಿಮುಖ ಆಡಳಿತ ಕ್ರಮವನ್ನು ತೆಗೆದು ಹಾಕಿ ಒಂದಾಗಿಸಿತು. ಅದು ಅಲ್ಲಿಂದ ಇಂದಿನವರೆಗೂ ಅನೂಚಾನವಾಗಿ ನಡೆದುಕೊಂಡು ಬರುತ್ತಿದೆ. 1936 ರಿಂದ 1982ರವರೆಗಿನ ಪಟ್ಟಿ ಈ ಕೆಳಕಂಡಂತಿದೆ.



ಜಸ್ಟಿಸ್ ಚಿನ್ನಪ್ಪ ರೆಡ್ಡಿ ವರದಿ ವಿರೋಧಿಸಿ 1994ರಲ್ಲಿ ಒಕ್ಕಲಿಗರು ಭಾರಿ ಪ್ರತಿಭಟನೆ ನಡೆಸಿದ ದೃಶ್ಯ

1936 ರಿಂದ ಜಾರಿಗೆ ಬಂದ ಏಕೀಕೃತ ಆಡಳಿತ ಆಡಳಿತ ಪದ್ಧತಿ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಗಳು

ವರ್ಷ	ಅಧ್ಯಕ್ಷರು	ಉಪಾಧ್ಯಕ್ಷರು	ಪ್ರಧಾನ ಕಾರ್ಯದರ್ಶಿ	ಸಹಾಯಕ ಕಾರ್ಯದರ್ಶಿ	ಕೋಶಾಧಿಕಾರಿ
1936–43	ಸಿ.ಲಕ್ಷ್ಮಣಗೌಡ	ಎಂ.ಮುನಿಸ್ವಾಮಪ್ಪ	ಬಿ.ಆರ್.ನರಸಿಂಹಯ್ಯ	---	ರೈಸ್‌ಮಿಲ್ ಪುಟ್ಟಯ್ಯ
1943–47	ಬಿ.ಟಿ.ರಾಮಯ್ಯ	ಎಂ.ಸಿ.ಲಿಂಗೇಗೌಡ	ಎಸ್.ಸಿ.ಮಲ್ಲಯ್ಯ ವೀರಸಂಜೀವೇಗೌಡ	ಬಿ.ಸಿ.ಹನುಮಯ್ಯ	ಎಂ.ಸಿ.ಮರಿನಂಜುಂಡಯ್ಯ
1947–49	ಎಸ್.ವೆಂಕಟಪ್ಪ	ಮರಿನಂಜುಂಡಯ್ಯ ವೀರಸಂಜೀವೇಗೌಡ ಎಸ್.ತಮ್ಮಯ್ಯಗೌಡ	ಕೆ.ಪಿ.ಮುದ್ದಪ್ಪ	---	ರೈಸ್‌ಮಿಲ್ ಪುಟ್ಟಯ್ಯ
1949–58	ಬಿ.ಎನ್.ವಿಜಯದೇವ	ಜಿ. ಅಪ್ಪಾಜಿಗೌಡ ವೀರಸಂಜೀವೇಗೌಡ	ಕೆ.ಪಿ.ಮುದ್ದಪ್ಪ	ಎ.ಬಿ.ಹನುಮಂತರಾಯಪ್ಪ ಎಂ.ಚಿನ್ನಾರೆಡ್ಡಿ	ಹೆಚ್.ಎನ್.ಮುನಿಸ್ವಾಮಿ ಜಿ.ಶ್ರೀನಿವಾಸನ್
1958–63	ಎಂ.ಸಿ.ಲಿಂಗೇಗೌಡ	ಬಿ.ಎಚ್.ಸಂಜೀವಗೌಡ ಎಂ. ನಾರಾಯಣಗೌಡ	ಕೆ.ಪಿ.ಮುದ್ದಪ್ಪ ಸಿ.ಕೆಂಪಯ್ಯ	ಕೆ.ಎನ್.ತಮ್ಮಯ್ಯ ಕೆ.ರಾಮಚಂದ್ರ	ಬಿ.ಸಿ.ಹನುಮಯ್ಯ ಬಿ.ಟಿ.ಕೆಂಪಣ್ಣ
1963–72	ಹೆಚ್.ಕೆ.ವೀರಣ್ಣಗೌಡ	ವಿ. ವೆಂಕಟಪ್ಪ ಎಲ್.ಶಿವಲಿಂಗಯ್ಯ ಎಂ.ನಾರಾಯಣಗೌಡ	ಎಂ.ಚಿನ್ನಸ್ವಾಮಿ ಎಂ.ಎಲ್.ಮಲ್ಲಿಕಾರ್ಜುನ	ಸಿ.ಪುಟ್ಟಸ್ವಾಮಿ	ಎಸ್.ವೀರಪ್ಪ ಜಿ.ಶ್ರೀನಿವಾಸನ್ ಬಿ.ಇಂದಿರಮ್ಮ

1972–79	ಕೆ.ಆರ್.ಮರುದೇವಗೌಡ	ಟಿ.ಕೆ.ತಿಮ್ಮರಾಯಗೌಡ ಎಂ.ಎಚ್.ಮರೀಗೌಡರು ಲಿಂಗಯ್ಯ, ಚನ್ನಬೈರೇಗೌಡ	ಗುತ್ತಲಗೌಡ	---	ಎಂ.ಎಲ್.ಸುಬ್ಬಣ್ಣ
1979–84	ಡಾ॥ಎಂ.ಎಚ್.ಮರೀಗೌಡ	ಜೆ.ಲಿಂಗಯ್ಯ ಬಿ.ಚನ್ನಭೈರೇಗೌಡ ಪ್ರೊ॥ ಟಿ. ರಮೇಶನ್	ಗುತ್ತಲಗೌಡ	---	ಟಿ.ಎಸ್.ವೆಂಕಟಪ್ಪಗೌಡ
1984–87	ಡಾ॥ಕೆ.ಎಸ್.ರಾಮೇಗೌಡ	ಗುತ್ತಲಗೌಡ ಪಿಳ್ಳಪ್ಪ	ಪಿಳ್ಳಾ ಬೈರಪ್ಪ	---	ಡಾ.ಹೊ.ಶ್ರೀನಿವಾಸಯ್ಯ
1987–92	ಡಾ॥ಎಂ.ಹೆಚ್.ಮರಿಗೌಡ	ಬಿ.ಟಿ. ಪಾರ್ಥಸಾರಥಿ, ಅನಂತಪ್ಪ	ಗುತ್ತಲಗೌಡ, ಬಿ.ಗಂಗಾಧರ್, ಸಿ.ಕೆಂಪಯ್ಯ	ಡಿ.ಬಿ.ಬಸವೇಗೌಡ ಎಂ.ಮಂಜು, ಕೆ. ರಾಮಚಂದ್ರ	ಡಾ.ಹೊ.ಶ್ರೀನಿವಾಸಯ್ಯ ಬಿ.ಎಸ್.ಸಿದ್ದಲಿಂಗೇಗೌಡ ಬಿ.ಟಿ.ಕೆಂಪಣ್ಣ
17–02–92 10–12–92	ಗುತ್ತಲಗೌಡ	ಪಾರ್ಥಸಾರಥಿ, ಅನಂತಪ್ಪ	ಬಿ.ಗಂಗಾಧರ್	ಎಂ.ಮಂಜು	ಬಿ.ಎಸ್.ಸಿದ್ದಲಿಂಗೇಗೌಡ
1992–96	ಗುತ್ತಲಗೌಡ	ಸದರಿ	ಬಿ.ಗಂಗಾಧರ್	ಎಸ್.ಟಿ.ನಾರಾಯಣಗೌಡ	ಸಿದ್ದಲಿಂಗೇಗೌಡ
1996,97 98–2000	ಡಾ ಸಿ. .ವಿಠಲ್	ಹೆಚ್.ಟಿ.ಕೃಷ್ಣೇಗೌಡ ಎಸ್.ಟಿ.ನಾರಾಯಣಗೌಡ	ಆರ್. ನಂಜುಂಡೇಗೌಡ, ಬಿ.ಕೆಂಚಪ್ಪ	ಬಿ.ಹೆಚ್.ಜಗದೀಶ್	ವಿ.ಪಾಪಣ್ಣ ಎಂ.ಶ್ರೀನಿವಾಸ್

2002	ಡಿ.ಬಿ.ಬಸವೇಗೌಡ	ಬಿ.ಗಂಗಾಧರ್	ಬಿ.ಕೆಂಚಪ್ಪಗೌಡ	ಬಿ.ಹೆಚ್.ಜಗದೀಶ್	ಎಂ.ಎ.ಆನಂದ್
2002–03	ಡಾ. ಸಿ. ವಿಠಲ್	ಬಿ.ಎಲ್.ಗೋಪಾಲಗೌಡ	ಹೆಚ್.ಕೆ.ರಮೇಶ್	ಬಿ.ಹೆಚ್.ಜಗದೀಶ್	ಸದಾಶಿವರೆಡ್ಡಿ
2003–05	ಕೆ.ವೆಂಕಟಗಿರಿಗೌಡ	ಎಸ್.ಟಿ.ನಾರಾಯಣಗೌಡ ಎಂ.ಆನಂತಪ್ಪ	ಬಿ.ಕೆಂಚಪ್ಪಗೌಡ	ಹನುಮೇಗೌಡ	ಆಡಿಟಲ್ ನಾಗರಾಜ್ ಯಲಚವಾಡಿ
2005–08	ಡಾ. ಸಿ. ವಿಠಲ್	ಎಸ್.ಟಿ.ನಾರಾಯಣಗೌಡ ಬಿ.ಗಂಗಾಧರ್	ಹೆಚ್.ಕೆ.ರಮೇಶ್	ಅ.ದೇವೇಗೌಡ	ಸದಾಶಿವರೆಡ್ಡಿ

ವರ್ಷ	ಅಧ್ಯಕ್ಷರು	ಕಾರ್ಯಾಧ್ಯಕ್ಷರು	ಉಪಾಧ್ಯಕ್ಷರು	ಪ್ರಧಾನ ಕಾರ್ಯದರ್ಶಿ	ಸಹಾಯಕ ಕಾರ್ಯದರ್ಶಿ	ಕೋಶಾಧಿಕಾರಿ
2008–13	ಬಿ.ಕೆಂಚಪ್ಪಗೌಡ	ಎಂ.ಎ.ಆನಂದ್	ಕೆ.ಮಲ್ಲಯ್ಯ ಹೆಚ್.ಎಲ್.ಶಿವಣ್ಣ	ಡಾ.ಕೆ.ಮಹಾದೇವ್	ಆಡಿಟರ್ ನಾಗರಾಜ್ ಯಲಚವಾಡಿ	ಎಸ್.ರಮೇಶ್ ಎಲುವಳ್ಳಿ
2013–15	ಡಾ.ಅಪ್ಪಾಜಿಗೌಡ	ಎಂ.ಎ.ಆನಂದ್	ಡಾ.ಶಿವಲಿಂಗಯ್ಯ ಅ.ದೇವೇಗೌಡ	ಸಿ.ಎಸ್.ಬಾಲಕೃಷ್ಣ	ಶಶಿಕಿರಣ್	ಉಲ್ಲೂರು ಮಂಜುನಾಥ
2015–17	ಡಾ.ಅಪ್ಪಾಜಿಗೌಡ	ಸಿ.ಎಸ್.ಬಾಲಕೃಷ್ಣ	ಎಸ್.ಪ್ರಸನ್ನಕುಮಾರ್ ಶಶಿಕಿರಣ್	ಉಲ್ಲೂರು ಮಂಜುನಾಥ	ಹೆಚ್.ಎ.ನಾರಾಯಣ ಮೂರ್ತಿ	ಡಿ.ಸಿ.ಕೆ. ಕಾಳೇಗೌಡ

ಒಕ್ಕಲಿಗರ ಸಂಘವು ಇಂದಿನಂತೆ ಅಂದು ಆರ್ಥಿಕವಾಗಿ ಬಲಿಷ್ಠವಾಗಿರಲಿಲ್ಲ. ಹಣಕ್ಕಾಗಿ ಜನಾಂಗದ ಉದಾರಿಗಳ ಇಲ್ಲವೆ ಸರ್ಕಾರದ ಎಡೆತಾಕುತ್ತಿದ್ದಿತು. 1935ರಲ್ಲಿ ಸಂಘದ ಅಧ್ಯಕ್ಷರಾಗಿದ್ದ ರಾವ್ ಸಾಹೇಬ್ ಚನ್ನಯ್ಯನವರು, ಕಾರ್ಯದರ್ಶಿಗಳಾಗಿದ್ದ ಎಂ.ಸಿ. ಲಿಂಗೇಗೌಡರೇ ಅಲ್ಲದೆ ಕೆ.ಹೆಚ್. ರಾಮಯ್ಯನವರು, ಬಿ. ಪುಟ್ಟಯ್ಯನವರು, ಸಿ. ಲಕ್ಷ್ಮಣಗೌಡರು ಇನ್ನೂ ಮುಂತಾದ ಸಂಘದ ಮುಖ್ಯ ವ್ಯಕ್ತಿಗಳು ಅಂದಿನ ದಿವಾನ –ರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ (1926–41), ಮೈಸೂರಿನ ಒಡೆಯರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಯುವರಾಜ ಕಂಠೀರವ ನರಸರಾಜ ಒಡೆಯರನ್ನು ಕಂಡು ಸಂಘಕ್ಕಾಗಿ ಸಹಾಯ ಬೇಡಿತು. ಅಂದಿನ ಸರ್ಕಾರವು ಸಂಘಕ್ಕೆ 1935ರಲ್ಲಿ ನೀಡಿದ ಒಂದು ಎಕರೆಗೂ ಸ್ವಲ್ಪ ಹೆಚ್ಚಿನ ಜಮೀನನ್ನು ಬೂಲ್‌ವಾ ತೋಟಕ್ಕಾಗಿ ಸಂಘವು ಸ್ವೀಕರಿಸಿತು. ನಂತರ ಸಂಘ ಒಪ್ಪದಿದ್ದಾಗ ಅದಕ್ಕೆ ಬದಲಾಗಿ ಸಂಘಕ್ಕೆ ಹೊಸ ಜಮೀನನ್ನು ಸಂಘದ ಎದುರುಗಿರುವ ಸ್ಕೌಟ್ ಕಛೇರಿಯ ಮುಂಭಾಗದಲ್ಲಿ ದಯಪಾಲಿಸಿತು. ಇಷ್ಟೇ ಅಲ್ಲದೆ ಸಂಘದ ಮಹಾಮಂದಿರಕ್ಕೆ ಇಪ್ಪತ್ತು ಸಾವಿರ ರೂಪಾಯಿಗಳನ್ನು, ವಿದ್ಯಾರ್ಥಿನಿಲಯಕ್ಕೆ 15 ಸಾವಿರ ರೂಪಾಯಿಗಳನ್ನು ಉದಾರವಾಗಿ ಸರ್ಕಾರವು ನೀಡಿತು. ಮಹಾಮಂದಿರದ ಶಂಕು ಸ್ಥಾಪನೆಯನ್ನು ಯುವರಾಜ ಶ್ರೀ ಕಂಠೀರವ ನರಸರಾಜ ಒಡೆಯರು ಮಾಡಿದುದೇ ಅಲ್ಲದೆ ಆ ಸಂದರ್ಭದಲ್ಲಿ ಸಂಘಕ್ಕೆ 2 ಸಾವಿರ ರೂಪಾಯಿಗಳನ್ನು ಮೂಲಧನವನ್ನಾಗಿ ನೀಡಿದರು. ಸಂಘವು ಆ ಹಣವನ್ನು ವಿದ್ಯಾರ್ಥಿವೇತನದ ನಿಧಿಯಾಗಿ ಬ್ಯಾಂಕಿನಲ್ಲಿ ಠೇವಣಿಯಾಗಿರಿಸಿತು.

ಸಂಘವು ಪ್ರಾರಂಭದಿಂದಲೂ ಹಣದ ಕೊರತೆಯನ್ನು ಎದುರಿಸುತ್ತಾ ಬಂದಿತು. 1907ರಲ್ಲಿ ಪ್ರಾರಂಭಿಸಿದ ಒಕ್ಕಲಿಗರ ಪತ್ರಿಕೆಯನ್ನು 1933ರಲ್ಲಿ ಮೈಸೂರು ಸರ್ಕಾರದ ಪ್ರಿನ್ಸಿಪಲ್ ಇನ್‌ಫರ್‌ಮೇಷನ್ ಆಫೀಸರ್ ಆಗಿ ನಿವೃತ್ತರಾಗಿದ್ದ ಶ್ರೀ ಡಿ.ಆರ್. ರಾಮಯ್ಯನವರಿಗೆ ತಿಂಗಳೊಂದಕ್ಕೆ 120 ರೂಪಾಯಿಗಳ ಗುತ್ತಿಗೆಗೆ ನೀಡಿತು. ಸಂಘದ ಮುಂಭಾಗದ ಮೇಲ್ಮಹಡಿಯನ್ನು ಕೆಲವು ಕಾಲ ಬೆಂಗಳೂರು ಜಿಲ್ಲಾ ಬೋರ್ಡಿಗೆ ಬಾಡಿಗೆ ರೂಪದಲ್ಲಿ ನೀಡಿತು. ನಂತರ ಸರ್ಕಾರದ ಆಹಾರ ಸಾಮಗ್ರಿಗಳ ಉಗ್ರಾಣಕ್ಕಾಗಿ ನೀಡಿತು. ನಂತರ ಶಾರದ ಟಾಕೀಸ್ ಸಿನಿಮಾ ಮಂದಿರಕ್ಕೆ ಬಾಡಿಗೆಗೆ ನೀಡಿತು. ಆನಂತರ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ಬಾಡಿಗೆಗೆ ಕೊಡಲಾಯಿತು. ಈ ರೀತಿಯ ಧನಾಭಾವವು ಮುಂದುವರೆಯಿತು. ಎಚ್.ಕೆ. ವೀರಣ್ಣಗೌಡರು ಸಂಘದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ (1963–72) ಹಾಗೂ ಎಂ.ಸಿ. ಲಿಂಗೇಗೌಡರ ಮಕ್ಕಳಾದ ಎಂ.ಎಲ್. ಮಲ್ಲಿಕಾರ್ಜುನರವರು ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ (1963–72) 27–11–1965ರಲ್ಲಿ ಸಂಜಯ ಚಿತ್ರಮಂದಿರದ ಮಾಲೀಕರಾಗಿದ್ದ ಎನ್.ಕೆ. ಗೋಪಾಲ ಕೃಷ್ಣರವರಿಗೆ 20 ವರ್ಷಗಳ ಗುತ್ತಿಗೆ ಆಧಾರದ

ಮೇಲೆ ಸಂಘದ ನಿವೇಶನದ ಉತ್ತರಭಾಗದಲ್ಲಿ ಇಂದು ಕುವೆಂಪು ರಂಗಮಂದಿರ–ವಿರುವ ಜಾಗ ಹಾಗೂ ಅಂದು ಸಂಘದ ಮಹಾಮಂದಿರವಿದ್ದ ಜಾಗವನ್ನು ಚಿತ್ರ ಮಂದಿರ ನಿರ್ಮಾಣಕ್ಕೆ 20 ವರ್ಷಗಳ ಗುತ್ತಿಗೆಗೆ ನೀಡಿತು. ಇದರ ಫಲವಾಗಿ ಚಿತ್ರ–ಮಂದಿರ ಮಾಲೀಕರು ಸಂಘಕ್ಕೆ ಒಂದು ಲಕ್ಷರೂ. ಮುಂಗಡವಾಗಿ ನೀಡಬೇಕೆಂತಲೂ ತಿಂಗಳೊಂದಕ್ಕೆ ಕರಾರಿನ ಪ್ರಕಾರ ಬಾಡಿಗೆ ಸಲ್ಲಿಸಬೇಕೆಂದು ಕರಾರು ಮಾಡಿಕೊಂಡಿತು. (ಕರಾರಿನಂತೆ ಸಂಘವು 1985ರಲ್ಲಿ ಅದನ್ನು ತನ್ನ ವಶಕ್ಕೆ ತೆಗೆದುಕೊಂಡಿತು.)

ಬಂದ ಈ ಭಾರಿ ಮೊತ್ತದ ಹಣದಿಂದಾಗಿ ಸಂಘವು ಚೇತರಿಸಿಕೊಂಡಿತು. ದಕ್ಷರಾಗಿದ್ದ ಹೆಚ್.ಕೆ. ವೀರಣ್ಣಗೌಡರು ಮತ್ತು ಎಮ್.ಎಲ್. ಮಲ್ಲಿಕಾರ್ಜುನರವರು ಸಂಘವನ್ನು ಮುನ್ನಡೆಸಿದರು. ನಂತರ ಕೆ.ಹೆಚ್. ರಾಮಯ್ಯನವರ ಜೇಷ್ಠಪುತ್ರರಾದ ಕೆ.ಆರ್. ಮರುದೇವೇಗೌಡರು ಅಧ್ಯಕ್ಷರಾದ ಅವಧಿಯಲ್ಲಿ (1972–79) ಸಂಘವು ಮತ್ತಷ್ಟು ಮುನ್ನಡೆಯಿತು. ಮರುದೇವೇಗೌಡರ ನಂತರ ಡಾ॥ ಎಂ.ಎಚ್. ಮರೀ–ಗೌಡರು ಸಂಘದ ಅಧ್ಯಕ್ಷರಾದ ಮೇಲೆ ಸಂಘವು ದಷ್ಟಪುಷ್ಟವಾಗಿ ಬೆಳೆದು ತನ್ನ ನಿವೇಶನದಲ್ಲಿ ಹಲವಾರು ಶಾಲಾ, ಕಾಲೇಜುಗಳನ್ನು ಪ್ರಾರಂಭಿಸುವ ಮೂಲಕ ಹಣದ ಅಭಾವವನ್ನು ನೀಗಿಸಿದುದೇ ಅಲ್ಲದೆ ರಾಜ್ಯದಲ್ಲಿ ಬಲಿಷ್ಠವಾದ ಸಂಸ್ಥೆಯಾಯಿತು.

1981ರಂದು ಸಂಘವು ತನ್ನ ವಜ್ರಮಹೂತ್ಸವವನ್ನು ಆಚರಿಸಿಕೊಂಡ ಸಂದರ್ಭದಲ್ಲಿ ಆ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಬಂದಿದ್ದ ಅಂದಿನ ಮುಖ್ಯಮಂತ್ರಿಯಾಗಿದ್ದ ಶ್ರೀ ಆರ್. ಗುಂಡೂರಾವ್‌ರವರು ಕೆಂಪೇಗೌಡ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಬನಶಂಕರಿಯಲ್ಲಿ ಎಂಟು ಎಕರೆ ಅಮೂಲ್ಯವಾದ ಭೂಮಿಯನ್ನು ನೀಡಿದರು. ಬಹುಶಃ ಸಂಘವು ಶ್ರೀ ಗುಂಡೂರಾಯರಿಗೆ ಚಿರಋಣಿಯಾಗಿರಬೇಕಾದುದೇ ಸರಿ. ಡಾ॥ ವಿಠಲ್‌ರವರ ನೇತೃತ್ವದ ಆಡಳಿತ ಮಂಡಳಿಯು 2007ರಲ್ಲಿ ಅದೇ ಜಾಗದಲ್ಲಿ (ತಡವಾದರು) ಭವ್ಯವಾದ ಕೆಂಪೇಗೌಡ ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಮೂಲಕ ಮೌನಕ್ರಾಂತಿ ಮಾಡಿದ್ದಾರೆ. ಇಂದು ಈ ಕಾಲೇಜು ರಾಷ್ಟ್ರದ ಕೆಲವೇ ಉತ್ತಮ ವೈದ್ಯಕೀಯ ಕಾಲೇಜುಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಒಕ್ಕಲಿಗರ ಸಂಘದ ಪ್ರಭಾವದಿಂದಾಗಿ ನಾಡಿನ ಇತರೆಡೆ ಸ್ಥಾಪನೆಯಾದ ಸಂಘ ಸಂಸ್ಥೆಗಳು ಹಾಗೂ ಜನಾಂಗದ ಶಿಕ್ಷಣ ಸಂಸ್ಥೆಗಳು

1906ರಲ್ಲಿ ಬೆಂಗಳೂರಿನಲ್ಲಿ ಒಕ್ಕಲಿಗರ ಸಂಘ ಸ್ಥಾಪನೆಯಾಗಿ ಯಶಸ್ವಿಯಾದ ಬಳಿಕ ನಾಡಿನ ಇತರೆಡೆಗಳಲ್ಲಿ ಮೊದಲು ವಿದ್ಯಾರ್ಥಿ ನಿಲಯಗಳು ತಲೆ ಎತ್ತಿ ನಂತರ ತನ್ನ ನಿವೇಶನಗಳಲ್ಲಿ ವಿದ್ಯಾ ಸಂಸ್ಥೆಗಳು ಎಂದರೆ ಶಾಲಾ ಕಾಲೇಜುಗಳು ಸ್ಥಾಪನೆಯಾಗತೊಡಗಿದವು. ಒಕ್ಕಲಿಗರ ಸಂಘ ಸ್ಥಾಪನೆಯಾದ ಸಮಯದಲ್ಲೇ

ವೀರಶೈವರ ವಿದ್ಯಾರ್ಥಿ ನಿಲಯಗಳು ಮತ್ತು ಶಾಲೆ ಕಾಲೇಜುಗಳನ್ನು ರಾಜ್ಯದಾದ್ಯಂತ ಸ್ಥಾಪಿಸಿದರು. ವೀರಶೈವ ಮಠ ಮಾನ್ಯಗಳು ಜಾತಿ ಸಂಘಟನೆಗಳು ಓತ ಪ್ರೋತವಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುತ್ತಾ ಬಂದರು. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಹಲವಾರು ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿದರು. ವೀರಶೈವ ಶಿಕ್ಷಣ ಸಂಸ್ಥೆಗಳಿಗೆ ಹೋಲಿಸಿದರೆ ಇದುವರೆಗೂ ಸ್ಥಾಪಿತವಾಗಿರುವ ಒಕ್ಕಲಿಗ ಜನಾಂಗದ ವಿದ್ಯಾರ್ಥಿ ನಿಲಯಗಳು ಮತ್ತು ವಿದ್ಯಾ ಸಂಸ್ಥೆಗಳು ಅತ್ಯಲ್ಪ ಎನ್ನಬಹುದು.

ಕರ್ನಾಟಕ ರಾಜ್ಯದಲ್ಲಿರುವ ಒಕ್ಕಲಿಗರ ಸಂಘ ಸಂಸ್ಥೆಗಳು

1. ಒಕ್ಕಲಿಗರ ಸಂಘ, ಮಂಡ್ಯ
2. ಒಕ್ಕಲಿಗರ ಸಂಘ, ಚಿಕ್ಕಬಳ್ಳಾಪುರ
3. ಒಕ್ಕಲಿಗರ ಸಂಘ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ
4. ಒಕ್ಕಲಿಗರ ಸಂಘ, ನಾಗಮಂಗಲ ಟೌನ್, ಮಂಡ್ಯ ಜಿಲ್ಲೆ
5. ಒಕ್ಕಲಿಗರ ಸಂಘ, ಮಾಗಡಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ
6. ಒಕ್ಕಲಿಗರ ಸಂಘ, ಸಾರ್ವಜನಿಕ ಹಾಸ್ಟೆಲ್, ಚನ್ನಪಟ್ಟಣ, ಬೆಂಗಳೂರು ಗ್ರಾಮಾಂತರ ಜಿಲ್ಲೆ
7. ಚನ್ನಭೈರೇಗೌಡ ಒಕ್ಕಲಿಗರ ಹಾಸ್ಟೆಲ್, ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ
8. ಒಕ್ಕಲಿಗರ ಸಂಘ, ಕೆ.ಆರ್.ನಗರ, ಮೈಸೂರು ಜಿಲ್ಲೆ
9. ಒಕ್ಕಲಿಗರ ಸಂಘ, ಸೋಮೇಶ್ವರಪುರ ಬಡಾವಣೆ, ತುಮಕೂರು
10. ಒಕ್ಕಲಿಗರ ಸಂಘ, ಕೋಲಾರ
11. ಒಕ್ಕಲಿಗರ ಸಂಘ, ವಿರಾಜಪೇಟೆ, ಕೊಡಗು
12. ಭಾಗಮಂಗಲ ನಾಡಗೌಡ ಸಮಾಜ, ಕುಶಾಲನಗರ, ಕೊಡಗು ಜಿಲ್ಲೆ
13. ಒಕ್ಕಲಿಗರ ವಿದ್ಯಾವರ್ಧಕ ಸಂಘ, ದಾವಣಗೆರೆ ಜಿಲ್ಲೆ
14. ಒಕ್ಕಲಿಗರ ಸಂಘ, ಬಿ.ಹೆಚ್. ರಸ್ತೆ, ಹಾಸನ ಜಿಲ್ಲೆ
15. ಒಕ್ಕಲಿಗರ ಸಂಘ, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ
16. ಒಕ್ಕಲಿಗರ ಸಂಘ, ಭದ್ರಾವತಿ
17. ಒಕ್ಕಲಿಗರ ಸಂಘ, ಶಿವಮೊಗ್ಗ
18. ಒಕ್ಕಲಿಗರ ಸಂಘ, ರಿಪ್ಪನ್‌ಪೇಟೆ, ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
19. ಒಕ್ಕಲಿಗರ ಸಂಘ, ಚಿತ್ರದುರ್ಗ
20. ಮುಳಬಾಗಿಲು ತಾಲ್ಲೂಕು ಒಕ್ಕಲಿಗರ ಸಂಘ

21. ಒಕ್ಕಲಿಗರ ಅಭಿವೃದ್ಧಿ ನಿಗಮ ಫೌಂಡೇಶನ್, ಕೋಲಾರ
22. ಒಕ್ಕಲಿಗರ ಸಂಘ ಟ್ರಸ್ಟ್, ಹೊಳೆನರಸೀಪುರ, ಹಾಸನ ಜಿಲ್ಲೆ
23. ಒಕ್ಕಲಿಗರ ಸಂಘ, ಎನ್.ಆರ್. ಮೊಹಲ್ಲಾ, ಮೈಸೂರು
24. ಒಕ್ಕಲಿಗರ ಸಂಘ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ
25. ಒಕ್ಕಲಿಗರ ಸಂಘ, ತಿಪಟೂರು, ತುಮಕೂರು ಜಿಲ್ಲೆ
26. ಒಕ್ಕಲಿಗರ ಸಂಘ, ಗುಬ್ಬಿ, ತುಮಕೂರು ಜಿಲ್ಲೆ
27. ಒಕ್ಕಲಿಗರ ಸಂಘ, ಕೊರಟಗೆರೆ, ತುಮಕೂರು ಜಿಲ್ಲೆ
28. ಒಕ್ಕಲಿಗರ ಸಂಘ, ಚಿಕ್ಕಮಗಳೂರು
29. ಒಕ್ಕಲಿಗರ ಸಂಘ, ವಿದ್ಯಾರಣ್ಯಪುರ, ಮೈಸೂರು
30. ಒಕ್ಕಲಿಗರ ಸಂಘ, ಉತ್ತರ ಕನ್ನಡ ಜಿಲ್ಲಾ, ಕುಮುಟ, ಕೂಜುಹಳ್ಳಿ, ಉತ್ತರ ಕನ್ನಡ ಜಿಲ್ಲೆ
31. ಒಕ್ಕಲಿಗರ ಸಂಘ, ಬಂಗಾರ ಪೇಟೆ, ಕೋಲಾರ ಜಿಲ್ಲೆ
32. ಒಕ್ಕಲಿಗರ ಸಂಘ, ಸಮುದಾಯ ಭವನ, ಕೂಡಿ ಗ್ರಾಮ, ಸೋಮವಾರ ಪೇಟೆ
33. ಒಕ್ಕಲಿಗರ ಸಂಘ, ಹುಣಸೂರು, ಮೈಸೂರು ಜಿಲ್ಲೆ
34. ಒಕ್ಕಲಿಗರ ಸಂಘ, ಸಕಲೇಶಪುರ, ಹಾಸನ ಜಿಲ್ಲೆ
35. ಒಕ್ಕಲಿಗರ ಯಾನೆಗೌಡರ ಸೇವಾ ಸಂಘ, ಮಂಗಳೂರು
36. ಒಕ್ಕಲಿಗರ ಗೌಡ ಸೇವಾ ಸಂಘ (ರಿ), ಕೊಂಜಿಟ್ಟು, ಪುತ್ತೂರು (ದ.ಕ)
37. ಒಕ್ಕಲಿಗರ ಯಾನೆ ಗೌಡ ಸೇವಾ ಸಂಘ, ಬೆಳ್ತಂಗಡಿ
38. ಮಹಿಳಾ ಸಮಿತಿ, ಒಕ್ಕಲಿಗರ ಗೌಡ ಸೇವಾ ಸಂಘ, ಪುತ್ತೂರು (ದ.ಕ.)
39. ಗೌಡರ ಯುವ ಸಂಘ, ಸುಳ್ಯ, ದ.ಕ.
40. ಒಕ್ಕಲಿಗರ ಸಂಘ, ಉಡುಪಿ
41. ಒಕ್ಕಲಿಗರ ಸಂಘ, ಕಾರ್ಕಳ
42. ಗೌಡರ ಯಾನೆ ಒಕ್ಕಲಿಗರ ಸಂಘ, ಬಂಟ್ವಾಳ ಅಂಚೆ, ವಿಟ್ಲ
43. ಗೌಡ ವಿದ್ಯಾ ಸಂಘ, ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ
44. ಗೌಡ ಸಮಾಜ, ಸೋಮವಾರಪೇಟೆ, ಕೊಡಗು
45. ಗೌಡ ಸಮಾಜ, ಮಡಕೇರಿ
46. ಮೂರುನಾಡ ಗೌಡ ಸಮಾಜ, ಮೂರುನಾಡು, ಕೊಡಗು
47. ಒಕ್ಕಲಿರ ಸಂಘ, ಕನಕಪುರ

ಬೆಂಗಳೂರು ನಗರದ ಒಕ್ಕಲಿಗರ ಸಂಘಗಳು

1. ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘ, ವಿಶ್ವೇಶ್ವರಪುರಂ
2. ಬೆಂಗಳೂರು ನಿರ್ಮಾಪಕ ಕೆಂಪೇಗೌಡ ಕೇಂದ್ರ ಸಮಿತಿ, ವಿ.ವಿ. ಪುರಂ
3. ರಾಜಾಜಿನಗರ ಒಕ್ಕಲಿಗರ ಹಿತರಕ್ಷಣಾ ವೇದಿಕೆ, ರಾಜಾಜಿನಗರ
4. ಕೊಡಗು ಮತ್ತು ದಕ್ಷಿಣ ಕನ್ನಡಗೌಡ ಸಮಾಜ (ರಿ), ಗಂಗಾನಗರ
5. ಹೆಚ್.ಎಂ.ಟಿ. ಕೆಂಪೇಗೌಡ ಸಮಿತಿ, ಜಾಲಹಳ್ಳಿ
6. ಐ.ಟಿ.ಐ. ಕಾರ್ಖಾನೆ ಶ್ರೀ ಹೊಂಬೇಗೌಡ ಸೇವಾ ಸಮಿತಿ, ಬೆಂಗಳೂರು
7. ಕೆ.ಎಂ.ಎಫ್. ಕೆಂಪೇಗೌಡ ವೇದಿಕೆ, ಹೊಸೂರು ರಸ್ತೆ
8. ಎನ್.ಜಿ.ಇ.ಎಫ್. ಮಾಗಡಿ ಕೆಂಪೇಗೌಡ ಸಮಿತಿ, ಬೈಯ್ಯಪ್ಪನಹಳ್ಳಿ, ಬೆಂಗಳೂರು
9. ನಾಡಪ್ರಭು ಕೆಂಪೇಗೌಡ ಒಕ್ಕಲಿಗರ ಸಂಘ, ಹನುಮಂತನಗರ, ಬೆಂಗಳೂರು.
10. ಬಿ.ಇ.ಎಲ್. ಕೆಂಪೇಗೌಡ ಸಮಿತಿ, ಜಾಲಹಳ್ಳಿ
11. ಕರ್ನಾಟಕ ಸಾಬೂನು ಕಾರ್ಖಾನೆ ಕೆಂಪೇಗೌಡ ಒಕ್ಕಲಿಗರ ಸಂಘ, ರಾಜಾಜಿನಗರ
12. ಮೈಕೋ ಒಕ್ಕಲಿಗರ ಕ್ರಿಯಾ ಸಮಿತಿ, ಹೊಸೂರು ರಸ್ತೆ, ಆಡುಗೋಡಿ
13. ಮೈಸೂರು ಲ್ಯಾಂಪ್ಸ್ ಒಕ್ಕಲಿಗರ ಹಿತರಕ್ಷಣಾ ಸಮಿತಿ, ಮಲ್ಲೇಶ್ವರಂ ಪಶ್ಚಿಮ
14. ಶ್ರೀ ವಿವೇಕಾನಂದ ವೆಲ್‌ಫೇರ್ ಅಸೋಸಿಯೇಷನ್, ಬಸವೇಶ್ವರ ನಗರ
15. ಶೇಷಾದ್ರಿಪುರಂ ಒಕ್ಕಲಿಗರ ಹಿತರಕ್ಷಣಾ ವೇದಿಕೆ, ಶೇಷಾದ್ರಿಪುರಂ
16. ಒಕ್ಕಲಿಗರ ಕ್ಷೇಮಭಿವೃದ್ಧಿ ಸಂಘ, ಸಹಕಾರ ನಗರ
17. ಜಸ್ಟೀಸ್ ಹೊಂಬೇಗೌಡ ಒಕ್ಕಲಿಗರ ಸಂಘ, ನ್ಯಾಯಾಂಗ ಬಡಾವಣೆ.

ಕರ್ನಾಟಕ ರಾಜ್ಯದಲ್ಲಿರುವ ಒಕ್ಕಲಿಗರ ಮಹಿಳಾ ಸಂಘಗಳು

1. ಆದಿ ಚುಂಚನಗಿರಿ ಮಹಿಳಾ ಸಾಂಸ್ಕೃತಿಕ ಸಂಘ, ವಿಜಯನಗರ
2. ಸಿರಿಗಂಧ ಒಕ್ಕಲಿಗರ ಮಹಿಳಾ ಸಂಘ, ರಾಜಾಜಿನಗರ
3. ಕರ್ನಾಟಕ ಸ್ತ್ರೀಶಕ್ತಿ ಮಹಿಳಾ ಒಕ್ಕಲಿಗರ ಸಂಘ, ಬಸವೇಶ್ವರ ನಗರ
4. ಗೌಡತಿಯರ ಸಂಘ, ಜಯನಗರ
5. ಭುವನೇಶ್ವರಿ ಒಕ್ಕಲಿಗರ ಮಹಿಳಾ ಸಂಘ, ಬನಶಂಕರಿ, ಬೆಂಗಳೂರು

ಕರ್ನಾಟಕದಾದ್ಯಂತ ಸ್ಥಾಪನೆಗೊಂಡಿರುವ ಒಕ್ಕಲಿಗರ ಶಿಕ್ಷಣ ಸಂಸ್ಥೆಗಳು

ಬಂಟರು ಯಾನೆ ನಾಡವರ ಸಂಘದ ವಿದ್ಯಾರ್ಥಿ ನಿಲಯ ಮತ್ತು ಶಿಕ್ಷಣ ಸಂಸ್ಥೆ , ಮಂಗಳೂರು, (1908)

ಈಗಾಗಲೇ ತಿಳಿಸಿರುವಂತೆ ದಕ್ಷಿಣ ಕನ್ನಡದ ಒಕ್ಕಲಿಗರಾದ ಬಂಟರು ಯಾನೆ ನಾಡವರು, ದಕ್ಷಿಣ ಕನ್ನಡ ಎಂದರೆ ಪುತ್ತೂರು, ಮಂಗಳೂರು, ಪ್ರಾಂತ್ಯದಲ್ಲಿ 1908ರಲ್ಲಿ ಬಂಟರು ಯಾನೆ ನಾಡವರ ಸಂಘವೆಂಬ ಸಂಘ ಅಥವಾ ಸಂಸ್ಥೆಯನ್ನು ಮಂಗಳೂರು ಸಹಕಾರ ಸಂಘಗಳ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಾಯಿಸಿದರು. ಇದರ ಉದ್ದೇಶ –ವೇನೆಂದರೆ ಗ್ರಾಮಗಳಿಂದ ಬರುವ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲು ಹಾಗೂ ಊಟ, ವಸತಿಯನ್ನೊದಗಿಸುವ ಕೇಂದ್ರವನ್ನು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನವೆಂಬ ಹೆಸರಿನಲ್ಲಿ ವಿದ್ಯಾರ್ಥಿ ನಿಲಯವನ್ನು ಮಂಗಳೂರಿನಲ್ಲಿ ಸ್ಥಾಪಿಸುವು –ದಾಗಿತ್ತು. ಬೆಂಗಳೂರಿನ ಒಕ್ಕಲಿಗರ ಸಂಘ ಸ್ಥಾಪನೆಯಾದ ಬಳಿಕ ಸ್ಥಾಪನೆಯಾದ ಹಳೆಯ ವಿದ್ಯಾರ್ಥಿನಿಲಯವೆಂದರೆ ದಕ್ಷಿಣ ಕನ್ನಡದ ಬಂಟರ ವಿದ್ಯಾರ್ಥಿನಿಲಯ.

ಸಮಾಜದಿಂದ ಉತ್ತಮವಾದ ಪ್ರತಿಕ್ರಿಯೆ ಬಂದ ನಂತರ ಹೆಣ್ಣು ಮಕ್ಕಳಿಗೆ ಅನುಕೂಲವಾಗಲೆಂದು ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನವೆಂಬ ಪ್ರತ್ಯೇಕ ವಿದ್ಯಾರ್ಥಿನಿಯರ ನಿಲಯವನ್ನು ಸ್ಥಾಪಿಸಿದರು. ಕಾಲಾನಂತರ ವಿದ್ಯಾರ್ಥಿನಿಲಯದ ನಿವೇಶನದಲ್ಲಿ ಶಾಲಾ ಕಾಲೇಜುಗಳು ಸ್ಥಾಪನೆಯಾದವು. ಮಂಗಳೂರಿನಲ್ಲಿ ಬಂಟರ ವಿದ್ಯಾರ್ಥಿನಿಲಯಗಳು ಮತ್ತು ಶಾಲಾ ಕಾಲೇಜುಗಳು ಯಶಸ್ವಿಯಾದಂತೆಲ್ಲಾ ದೂರದ ಮುಂಬಯಿ, ಮದ್ರಾಸ್, ಬೆಂಗಳೂರು ಇನ್ನೂ ಮುಂತಾದ ಕಡೆ ಬಂಟರ ಸಂಘ, ಸಂಸ್ಥೆಗಳು, ವಿದ್ಯಾರ್ಥಿನಿಲಯಗಳು ಸೇರಿದಂತೆ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭಗೊಂಡವು.

ಇವರ ಮಹಾನ್ ಸಾಧನೆ ಎಂದರೆ, ದೂರದ ಮುಂಬಯಿಯಲ್ಲಿ 1927ರಲ್ಲಿ ಸಂಘ ಸ್ಥಾಪನೆ ಮಾಡಿದುದು. ಇಂದು 30,000ಕ್ಕೂ ಹೆಚ್ಚು ಸಾಮಾನ್ಯ ಸದಸ್ಯರು ಮತ್ತು 3000ಕ್ಕೂ ಹೆಚ್ಚು ಆಜೀವ ಸದಸ್ಯರನ್ನೊಳಗೊಂಡ ಹೆಸರಾಂತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. 1952ರಲ್ಲಿ ಬೆಳ್ಳಿಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿತು. ಮುಂಬಯಿ ಸರ್ಕಾರದ ಮಂಜೂರಾತಿ ಪಡೆದು ಕರ್ನಾಟಕ ಫ್ರೀ ನೈಟ್ ಹೈಸ್ಕೂಲ್ ಎಂಬ ಪ್ರೌಢಶಾಲೆಯನ್ನು ಪ್ರಾರಂಭಿಸಿತು. ಮುಂಬೈ ನಗರದಾದ್ಯಂತ ಇಂಥಹ ಹಲವಾರು ಶಾಖೆಗಳನ್ನು ತೆರೆದು ಇಂದು ಸಾವಿರಾರು ಮಂದಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಸಂಘವು ಸ್ಕಾಲರ್ಶಿಪ್,

ಫ್ರೀ ಷಿಪ್‌ಗಳನ್ನು ನೀಡುವುದರ ಮೂಲಕ ತನ್ನ ಜನಾಂಗದ ಅಭಿವೃದ್ಧಿಗೆ ಈ ಸಂಘ ಕಂಕಣಬದ್ಧವಾಗಿದೆ.

ಕೊಡಗುಗೌಡ ವಿದ್ಯಾಭಿವೃದ್ಧಿ ಸಂಘ – ಮಡಿಕೇರಿ (1908)

ಡಿ. ಬನುಮಯ್ಯನವರ ವಿದ್ಯಾರ್ಥಿ ನಿಲಯ ಮತ್ತು ಶಿಕ್ಷಣ ಸಂಸ್ಥೆ (ಮೈಸೂರು)

1917–18ನೇ ಇಸವಿಯಲ್ಲಿ ಮೈಸೂರಿನಲ್ಲಿ ಓರ್ವ ಆಗರ್ಭ ಶ್ರೀಮಂತ ಹಾಗೂ ಶಿಕ್ಷಣ ಪೋಷಕ ಧರ್ಮ ಪ್ರಕಾಶ ರಾವಬಹದ್ದೂರ್ ಬನುಮಯ್ಯನವರು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೊದಲು ವಿದ್ಯಾರ್ಥಿ ನಿಲಯವನ್ನು ಕಾಲಾನಂತರ ತಮ್ಮ ಸ್ವಂತ ಖರ್ಚಿನಲ್ಲಿ ಶಾಲಾ ಕಾಲೇಜು, ವಸತಿ ಶಾಲೆಗಳನ್ನು ತೆರೆಯುವುದರ ಮೂಲಕ ಶಿಕ್ಷಣ ಪೋಷಕರಾದರು. ಮೈಸೂರಿನಲ್ಲಿ ಇಂದಿಗೂ ಬನುಮಯ್ಯ ಕಲೆ, ವಾಣಿಜ್ಯ ಕಾಲೇಜು ಮೈಸೂರು ನಗರದ ಹೃದಯಭಾಗದಲ್ಲಿರುವುದು ಒಕ್ಕಲಿಗ ಜನಾಂಗದ ಶೈಕ್ಷಣಿಕ ಪ್ರಜ್ಞೆಯ ದ್ಯೋತಕವಾಗಿದೆ. ಮೈಸೂರಿನ ಹಳೆಯ ಶಿಕ್ಷಣ ಸಂಸ್ಥೆಗಳಲ್ಲೊಂದಾದ ಬನುಮಯ್ಯ ಕಾಲೇಜು ಇಂದಿಗೂ ತನ್ನ ಹೆಸರನ್ನು ಉಳಿಸಿಕೊಂಡಿದೆ.

ಸೋಮನಹಳ್ಳಿ ವಿದ್ಯಾರ್ಥಿ ನಿಲಯ ಹಾಗೂ ಶಿಕ್ಷಣ ಸಂಸ್ಥೆ (ಮದ್ದೂರು)

1930ರ ಸಮಯದಲ್ಲಿ ಮಂಡ್ಯ ಜಿಲ್ಲೆ ಮದ್ದೂರ್ ತಾಲ್ಲೂಕು ಸೋಮನಹಳ್ಳಿ –ಯಲ್ಲಿ ಎಸ್.ಸಿ. ಮಲ್ಲಯ್ಯ, ಪಟೇಲ್ ಎಸ್.ಸಿ. ಕೆಂಚೇಗೌಡ ಮತ್ತು ಎಂ.ಸಿ. ಲಿಂಗೇಗೌಡರ ನೇತೃತ್ವದಲ್ಲಿ ಬಡವಿದ್ಯಾರ್ಥಿನಿಲಯ ಸ್ಥಾಪನೆಯಾಯಿತು. ಮಹಾತ್ಮ ಗಾಂಧಿಯವರು ಭೇಟಿ ನೀಡಿದ್ದರು.

ಚನ್ನಪಟ್ಟಣ ಒಕ್ಕಲಿಗರ ಸಂಘ ಮತ್ತು ವಿದ್ಯಾರ್ಥಿ ನಿಲಯ, (ಚನ್ನಪಟ್ಟಣ, ಬೆಂಗಳೂರು ಗ್ರಾಮಾಂತರ ಜಿಲ್ಲೆ)

ಶ್ರೀ ಹೆಚ್.ಕೆ. ವೀರಣ್ಣ ಗೌಡ ಮತ್ತು ಶ್ರೀ ವಿ. ವೆಂಕಟಪ್ಪ ಇನ್ನೂ ಮುಂತಾದವರು ಸೇರಿ ಚನ್ನಪಟ್ಟಣದಲ್ಲಿ 'ಒಕ್ಕಲಿಗರ ಸಂಘ'ವನ್ನೂ ಹಾಗೂ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯವನ್ನೂ 1932ರಲ್ಲಿ ಪ್ರಾರಂಭಿಸಿದರು.

ಕಾನಕಾನಹಳ್ಳಿ ವಸತಿ ಶಾಲೆ (ಕನಕಪುರ)

1935ರ ಸಮಯದಲ್ಲಿ ಕನಕಪುರದಲ್ಲಿ ಕರಿಯಪ್ಪನವರ ನೇತೃತ್ವದಲ್ಲಿ ಕಾನಕಾನಹಳ್ಳಿ ಸ್ಕೂಲ್ ಎಂಬ ವಸತಿ ಶಾಲೆ ಒಮ್ಮೆ ಪ್ರಸಿದ್ದಿಯನ್ನು ಪಡೆದಿತ್ತು. ಅದು ಇಂದು ಕನಕಪುರ ರೂರಲ್ ಕಾಲೇಜ್ ಎಂದೇ ಪ್ರಸಿದ್ದಿಯಾಗಿದೆ. (ಹೆಚ್ಚಿನ ವಿವರಗಳಿಗೆ ಎಸ್. ಕರಿಯಪ್ಪ ವ್ಯಕ್ತಿ ಚಿತ್ರಣವನ್ನು ನೋಡಿ)

ವಿಲ್ಸನ್ ಗಾರ್ಡನ್ ಎಜುಕೇಷನ್ ಸೊಸೈಟಿ/ಹೊಂಬೇಗೌಡ ಶಾಲಾ ಕಾಲೇಜುಗಳು, ಬೆಂಗಳೂರು

ಮುಖ್ಯನ್ಯಾಯಾಧೀಶರಾಗಿದ್ದ ಜಸ್ಟೀಸ್ ಹೊಂಬೇಗೌಡರವರು ಈ ಸಂಸ್ಥೆಯನ್ನು 1951–52ರಲ್ಲಿ ಸ್ಥಾಪಿಸಿದರು. ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪ್ರಾರಂಭವಾಗಿ ಇಂದು ಸಂಯುಕ್ತ ಪದವಿಪೂರ್ವ ಕಾಲೇಜನ್ನು ಕೂಡ ಈ ಸಂಸ್ಥೆ ನಡೆಸುತ್ತಿದೆ. ಇಲ್ಲಿ ಒಟ್ಟಾರೆ 2,000 ಮಂದಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ.

ಸರ್ವೋದಯ ಎಜುಕೇಷನ್ ಸೊಸೈಟಿ (ವಿವೇಕಾನಂದ ಶಾಲೆ, ಜಯನಗರ, ಬೆಂಗಳೂರು)

ಮಹಾತ್ಮಾ ಗಾಂಧೀಜಿರವರ ತತ್ವ ಆದರ್ಶಗಳಲ್ಲಿ ಒಂದಾದ ಸರ್ವೋದಯ ಎಂಬ ಹೆಸರಿನಲ್ಲಿ ಕೆ.ಹೆಚ್. ರಾಮಯ್ಯನವರ ಮಗಳಾದ ಶ್ರೀಮತಿ ಜಯಲಕ್ಷ್ಮಿ ಸಿದ್ದಯ್ಯನವರು 1960ರಲ್ಲಿ ಜಯನಗರ ಬಡಾವಣೆಯಲ್ಲಿ ಸ್ಥಾಪಿಸಿದರು. ಹಿಂದುಳಿದ ಹಾಗೂ ಬಡಮಕ್ಕಳಿಗೆ ಶಿಕ್ಷಣ ನೀಡುವುದೇ ಈ ಶಾಲೆಯ ಉದ್ದೇಶವಾಗಿದೆ. ಕಾಲಾನಂತರದಲ್ಲಿ ವಿವೇಕಾನಂದ ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮಗಳಲ್ಲಿ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳು ಆರಂಭಗೊಂಡು ಜಯನಗರದಲ್ಲಿ ಜನಪ್ರಿಯವಾದ ಸಂಸ್ಥೆಯಾಗಿದೆ.

ದಯಾನಂದ ಸಾಗರ್ ವಿದ್ಯಾ ಸಂಸ್ಥೆಗಳು – ಬೆಂಗಳೂರು

ದಯಾನಂದ ಸಾಗರ್‌ರವರು ಬೆಂಗಳೂರಿನ ಹಾಗೂ ಪ್ರಸಿದ್ಧ ವಕೀಲರು ಆಗರ್ಭ ಶ್ರೀಮಂತರಾದ ಇವರು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದರು. ರಾಜಕೀಯ ಕ್ಷೇತ್ರದಲ್ಲೂ ಜನಪ್ರಿಯ ರಾಜಕಾರಣಿಯಾಗಿ ಮಿಂಚಿದರು. ಗಾಂಧೀಜಿಯವರ ತತ್ವದಲ್ಲಿ ನಿಷ್ಠೆಯುಳ್ಳವರಾದ ಶ್ರೀಯುತರು ಮಹಾತ್ಮಗಾಂಧಿ ವಿದ್ಯಾಪೀಠ ಟ್ರಸ್ಟ್ ಎಂಬ ಹೆಸರಿನಲ್ಲಿ ಹಲವು ಹತ್ತು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ.

1962–63ರ ಶೈಕ್ಷಣಿಕ ವರ್ಷದಲ್ಲಿ ಈ ವಿದ್ಯಾಪೀಠವು ನರ್ಸರಿ ಶಾಲೆಯನ್ನು ಆರಂಭಿಸಿತು. ಅನಂತರ ಬಾಲಕಿಯರ ಪ್ರೌಢಶಾಲೆಯನ್ನು ತೆರೆಯಿತು. ಶ್ರೀ ದಯಾನಂದಸಾಗರ್ ವಿದ್ಯಾ ಸಂಸ್ಥೆಗಳು ಕುಮಾರಸ್ವಾಮಿ ಬಡಾವಣೆಯ ಶಾವಿಗೆ ಮಲ್ಲೇಶ್ವರ ಬೆಟ್ಟಕ್ಕೆ ಹೊಂದಿಕೊಂಡಂತೆ ಇವೆ. 1961ರಲ್ಲಿ ಪದವಿ ಪೂರ್ವ ಕಾಲೇಜನ್ನು ನಂತರ, 1978–79ರ ಶೈಕ್ಷಣಿಕ ಸಾಲಿನಲ್ಲಿ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜ್ ಸ್ಥಾಪಿಸಲಾಯಿತು.

ಆ ಜಾಗದಲ್ಲಿ ದಯಾನಂದಸಾಗರ್‌ರವರ ಶಿಕ್ಷಣ ಸಂಸ್ಥೆಗಳು ಜನಪ್ರಿಯ –ಗೊಂಡಂತೆಲ್ಲಾ 20ಕ್ಕೂ ಹೆಚ್ಚು ಶಾಲೆ ಕಾಲೇಜ್‌ಗಳು ತಲೆ ಎತ್ತಿದವು. ದಯಾನಂದ

ಸಾಗರ್ ಮೇನೇಜ್‌ಮೆಂಟ್ ಅಂಡ್ ಇನ್‌ಫರ್ಮೇಶನ್ ಟೆಕ್ನಾಲಜಿ ಕಾಲೇಜ್ (1988–99), ದಯಾನಂದ ಸಾಗರ್ ಬಯಲಾಜಿಕಲ್ ಸೈನ್ಸ್ ಕಾಲೇಜ್ (1999–2000), ದಯಾನಂದ ಸಾಗರ್ ಸಂಜೆ ಕಾಲೇಜ್ (1972–73), ದಯಾನಂದ ಸಾಗರ್ ಕಾಲೇಜ್ ಆಫ್ ಇಂಜಿನಿಯರಿಂಗ್ (1979–80), ದಯಾನಂದ ಸಾಗರ್ ಡಿ.ಫಾರ್ಮ ಕಾಲೇಜ್ (1984–85), ದಯಾನಂದ ಸಾಗರ್ ಪಾಲಿಟೆಕ್ನಿಕ್ ಕಾಲೇಜ್ (1980–81), ದಯಾನಂದ ಸಾಗರ್ ನರ್ಸಿಂಗ್ ಕಾಲೇಜ್ (2002–03), ದಯಾನಂದ ಸಾಗರ್ ಡಿಪ್ಲಮೊ ಕಾಲೇಜ್, ಪ್ಯಾರಾಮೆಡಿಕಲ್ ಎಜುಕೇಷನ್, ಟೀಚರ್ಸ್ ಟ್ರೈನಿಂಗ್, ಬಿ.ಎಡ್. ಕಾಲೇಜ್ (2002–03), ಫ್ಯಾಷನ್ ಡಿಸೈನ್ ಟೆಕ್ನಾಲಜಿ ಮುಂತಾದವು.

ಕುವೆಂಪು ವಿದ್ಯಾವರ್ಧಕ ಟ್ರಸ್ಟ್ – ಮೈಸೂರು

ನಾಡೋಜ ದೇಜಗೌರವರು ಕುವೆಂಪುರವರ ಹೆಸರನ್ನು ಶಾಶ್ವತವಾಗಿರಿಸಲು 1964ರಲ್ಲಿ ಮೈಸೂರಿನಲ್ಲಿ ದತ್ತಿ ಟ್ರಸ್ಟ್ ಸ್ಥಾಪಿಸಿದರು. ಇದು ಶಿಕ್ಷಣ, ಸಂಶೋಧನ, ಪ್ರಕಟಣಾ ಜ್ಞಾನ ಪ್ರಸಾರ ವಿಭಾಗಗಳನ್ನೊಂದಿದೆ. ಬೃಂದಾವನ ಪ್ರೌಢಶಾಲೆ (1975), ಕುವೆಂಪು ಪ್ರೌಢಶಾಲೆ (1980), ವಿವೇಕಾನಂದ ಪ್ರೌಢಶಾಲೆ (1981), ವಿವೇಕಾನಂದ ಪದವಿ ಪೂರ್ವ ಕಾಲೇಜು (1990), ವಿಶ್ವಕವಿ ಕುವೆಂಪು ಪದವಿ ಕಾಲೇಜು (1996) ಇವೇ ಮುಂತಾದ ಶಾಲಾ ಕಾಲೇಜುಗಳು ಮೈಸೂರಿನ ಜಯಲಕ್ಷ್ಮೀಪುರಂ ಬಡಾವಣೆಯಲ್ಲಿವೆ.

ಕರೀಗೌಡ ಕಾಲೇಜು – ಹಾಸನ

ಹಾಸನ ನಗರದ ಹೃದಯ ಭಾಗದಲ್ಲಿ ದಾನಿಗಳಾದ ಕರೀಗೌಡರ ಹೆಸರಿನಲ್ಲಿ ಶಾಲಾ ಕಾಲೇಜುಗಳು ಪ್ರಾರಂಭವಾದವು. ಇಂದು ಕರೀಗೌಡ ಪದವಿ ಪೂರ್ವ ಕಾಲೇಜು ಹಾಗೂ ಪದವಿ ಕಾಲೇಜು ಬಹುದೊಡ್ಡ ಕಾಲೇಜಾಗಿ ತಲೆ ಎತ್ತಿದೆ. ಇಲ್ಲಿ 2,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ವಿದ್ಯಾವರ್ಧಕ ಸಂಘ – ಮೈಸೂರು

ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಧಾರವಾಡದಲ್ಲಿ ಪ್ರಾರಂಭವಾದ ದೇಶೀಯ ಶಾಲೆಯ ಹೆಸರಾದ ವಿದ್ಯಾವರ್ಧಕ ಸಂಘದ ಹೆಸರನ್ನೇ ತಮ್ಮ ಸಂಸ್ಥೆಗೆ ಬಳಸಿಕೊಂಡು ವಿದ್ಯಾವರ್ಧಕ ಸಂಘ ಎಂಬ ಹೆಸರನ್ನಿಟ್ಟರು. 1964ರಲ್ಲಿ ಮೈಸೂರಿನ ಸಾಹುಕಾರ್ ಚನ್ನಯ್ಯ, ಕೆ. ಪುಟ್ಟಸ್ವಾಮಿ, ಆರ್. ನಂಜಯ್ಯ, ಮೈಸೂರಿನ ಹೆಸರಾಂತ ಗುತ್ತಿಗೆದಾರರಾದ ಬೋರಯ್ಯ, ಬಸವಯ್ಯ ಸೇರಿದಂತೆ ಇನ್ನೂ ಮುಂತಾದ ಮಹನೀಯರು 1964ರಲ್ಲಿ ವಿದ್ಯಾವರ್ಧಕ ಸಂಘ ಎಂಬ ಸಂಸ್ಥೆಯನ್ನು ಮೈಸೂರಿನಲ್ಲಿ ಸ್ಥಾಪಿಸಿದರು. ಮೊದಲು ಪ್ರಾಥಮಿಕ, ಪ್ರೌಢಶಾಲೆ, ಪ್ರಾರಂಭ–ಗೊಂಡು 1974ರಲ್ಲಿ ಕಾನೂನು ಕಾಲೇಜು, ಪದವಿ ಕಾಲೇಜುಗಳು ಸ್ಥಾಪನೆ–

ಯಾದವು. 1998ರಲ್ಲಿ ತಾಂತ್ರಿಕ ಕಾಲೇಜು ಪ್ರಾರಂಭಗೊಂಡಿತು. ಇಂದು ಇದು ಮೈಸೂರಿನಲ್ಲಿ ಪ್ರತಿಷ್ಠಿತ ಸಂಸ್ಥೆಯಾಗಿದೆ.

ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜ್ (ಮಂಡ್ಯ)

1962ರಲ್ಲಿ ಶ್ರೀ ಕೆ.ವಿ. ಶಂಕರಗೌಡರಿಂದ ಪ್ರಾರಂಭವಾದ ಕಾಲೇಜು ಇಂದು ಇಪತ್ತಕ್ಕೂ ಹೆಚ್ಚು ಕಾಲೇಜುಗಳಿವೆ.

ಬಾಪು ಎಜುಕೇಷನಲ್ ಅಸೋಸಿಯೇಷನ್/ಬಾಪು ವಿದ್ಯಾ ಸಂಸ್ಥೆ (ಯಶವಂತಪುರ, ಬೆಂಗಳೂರು)

ಶ್ರೀ ಟಿ.ವಿ. ಶ್ರೀರಾಮರೆಡ್ಡಿಯವರು ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಉದ್ದೇಶ-ದಿಂದ 1968ರಲ್ಲಿ ಬೆಂಗಳೂರಿನ ಯಶವಂತಪುರದಲ್ಲಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸ-ಕ್ಕಾಗಿ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭಿಸಿದರು. 1994ರಲ್ಲಿ ಬಾಪು ಸಂಯುಕ್ತ ಪದವಿಪೂರ್ವ ಕಾಲೇಜ್ ಅನ್ನು ಪ್ರಾರಂಭಿಸಿದರು. 2004ರಂದು ಡಿ.ಎಡ್., ಬಿ.ಎಡ್., ಮತ್ತು ಪದವಿ ಕಾಲೇಜ್ ಅನ್ನು ಸ್ಥಾಪಿಸಿದರು. ಸುಮಾರು 1500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

ಭಾರತಿ ಎಜುಕೇಷನ್ ಸೊಸೈಟಿ (ಕೆ.ಎಂ.ದೊಡ್ಡಿ)

1970ರಲ್ಲಿ ಶಾಲಾ ಕಾಲೇಜುಗಳನ್ನು ಜಿ. ಮಾದೇಗೌಡರು ಪ್ರಾರಂಭಿಸಿದರು.

ಭಾರತ್ ವಿದ್ಯಾಸಂಸ್ಥೆ (ಜಯನಗರ, ಬೆಂಗಳೂರು)

ಬೆಂಗಳೂರು ಹೃದಯಭಾಗವಾದ ಜಯನಗರದ ಐದನೇ ಬ್ಲಾಕ್‌ನಲ್ಲಿ ಭಾರತ ವಿದ್ಯಾ ಸಂಸ್ಥೆಯು 1971ರಲ್ಲಿ ತಲೆ ಎತ್ತಿತು. ಅಂದಿನ ಜಿಲ್ಲಾಧಿಕಾರಿಗಳಾದ ಶ್ರೀ ಬಿ.ಎಲ್. ಲಕ್ಕೇಗೌಡರವರು ಈ ಸಂಸ್ಥೆಗೆ ಕಾಯಕಲ್ಪ ನೀಡಿದರು. ಇಂದು ಬಿ.ಇ.ಎಸ್. ಪದವಿಪೂರ್ವ ಕಾಲೇಜು, ಪದವಿ ಕಾಲೇಜು, ಡಿ.ಎಡ್, ಬಿ.ಎಡ್. ಕಾಲೇಜು, ಫಾರ್ಮಸಿ ಕಾಲೇಜು ಇನ್ನೂ ಮುಂತಾದ ಶಾಲಾ ಕಾಲೇಜುಗಳ ಕೇಂದ್ರವಾಗಿದೆ. ಇಷ್ಟೇ ಅಲ್ಲದೆ ಹೆಣ್ಣು ಮಕ್ಕಳ ವಸತಿಗೃಹವನ್ನೂ ಸಹ ಸ್ಥಾಪಿಸಲಾಗಿದೆ.

ಜನತಾ ಶಿಕ್ಷಣ ಸಂಸ್ಥೆ (ವಿವೇಕಾನಂದ ಶಾಲಾ ಕಾಲೇಜುಗಳು, ಬೆಂಗಳೂರು)

1972ರಂದು ರಾಜಾಜಿನಗರ 2ನೇ ಹಂತದಲ್ಲಿ 165 ಆಜೀವ ಸದಸ್ಯರಿಂದ ಪ್ರಾರಂಭವಾದ ಈ ಸಂಸ್ಥೆಯು ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪದವಿ ಪೂರ್ವ ಕಾಲೇಜ್, ಪದವಿ ಕಾಲೇಜ್, ಬಿ.ಎಡ್. ಕಾಲೇಜ್, ಕಾನೂನು, ಸ್ನಾತಕೋತ್ತರ, ಫಾರ್ಮಸಿ ಹಾಗೂ ಇಂಜಿನಿಯರಿಂಗ್ ಕಾಲೇಜ್‌ಗಳನ್ನು ಹೊಂದಿದೆ. ಇಲ್ಲಿ ಒಟ್ಟಾರೆ ಸುಮಾರು 6000 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಕುರಂಜಿ ವೆಂಕಟ್ರಮಣಗೌಡ ಶಿಕ್ಷಣ ಸಂಸ್ಥೆಗಳು (ಪುತ್ತೂರು, ಸೂಳ್ಯ)

ಕುರಂಜಿ ವೆಂಕಟರಮಣಗೌಡರು ದಕ್ಷಿಣ ಕನ್ನಡ ಜಿಲ್ಲೆ ಸೂಳ್ಯದಲ್ಲಿ ತಮ್ಮ ಸ್ವಂತ ಪರಿಶ್ರಮದಿಂದ ಈ ಕೆಳಕಂಡ ಶಾಲಾ ಕಾಲೇಜನ್ನು ಸ್ಥಾಪಿಸಿದರು. ನೆಹರು ಮೆಮೊರಿಯಲ್ ಪದವಿ ಕಾಲೇಜು (1976), ನೆಹರು ಮೆಮೊರಿಯಲ್ ಪದವಿ ಪೂರ್ವ ಕಾಲೇಜು (1978), ಕೆ.ವಿ.ಜೆ. ಕಾನೂನು ಕಾಲೇಜು, ಸೂಳ್ಯ (1990), ಕೆ.ವಿ.ಜೆ. ಪಾಲಿಟೆಕ್ನಿಕ್ ಕಾಲೇಜ್, ಸೂಳ್ಯ (1984), ಕೆ.ವಿ.ಜೆ. ಐ.ಟಿ.ಐ. ಕಾಲೇಜು (1986), ಕೆ.ವಿ.ಜೆ. ತಾಂತ್ರಿಕ ಕಾಲೇಜು ಸೂಳ್ಯ (1986), ಕೆ.ವಿ.ಜೆ. ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಎನ್.ಎಸ್.ವಿ.ಕೆ. ಶ್ರೀ ವೆಂಕಟೇಶ್ವರ ಪಾಲಿಟೆಕ್ನಿಕ್ ಕಾಲೇಜು (ಬೆಂಗಳೂರು), ಕೆ.ವಿ.ಜೆ. ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆ, ಸೂಳ್ಯ, (1991), ಕೆ.ವಿ.ಜೆ. ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ, ಸೂಳ್ಯ (1996), ಎನ್.ಎಸ್.ವಿ.ಕೆ. ಶ್ರೀ ವೆಂಕಟೇಶ್ವರ ಡೆಂಟಲ್ ಕಾಲೇಜು (ಬೆಂಗಳೂರು–1992), ಎನ್.ಎಸ್.ವಿ.ಕೆ. ಟ್ರಸ್ಟ್ ವೆಂಕಟೇಶ್ವರ ಪಾಲಿಟೆಕ್ನಿಕ್, ಬೆಂಗಳೂರು (1985–86), ಕೆ.ವಿ.ಜಿ. ಪದವಿ ಕಾಲೇಜು, ಭಾಗಮಂಡಲ, ಕೊಡಗು (1996–97), ಕೆ.ವಿ.ಜಿ. ಇಂಗ್ಲೀಷ್ ಮಾಧ್ಯಮ ಪ್ರೌಢಶಾಲೆ, ಸೂಳ್ಯ, (1991). ಇಂದು ಈ ಶಾಲಾ ಕಾಲೇಜುಗಳಿಂದಾಗಿ ಪುತ್ತೂರ ತಾಲ್ಲೂಕು ಜ್ಞಾನ ದಾಸೋಹದ ಕೇಂದ್ರವಾಗಿದೆ.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ (ಶೇಷಾದ್ರಿಪುರಂ, ಬೆಂಗಳೂರು)

ಸುಬ್ಬಣ್ಣ ಎಂಬ ಶಾಲಾ ಮಾಸ್ತರರಿಂದ 1962ರಲ್ಲಿ ಪ್ರಾರಂಭವಾದ ಈ ಸಂಸ್ಥೆಯು ಈಗ ಪ್ರಾಥಮಿಕ, ಪ್ರೌಢ, ಪದವಿಪೂರ್ವ ಮತ್ತು ಪದವಿ ಕಾಲೇಜುಗಳನ್ನು ಸ್ಥಾಪಿಸಲಾಗಿದೆ. ಅದೇ ರೀತಿ ಯಲಹಂಕದಲ್ಲಿಯೂ ಕೂಡ ಶೇಷಾದ್ರಿಪುರ ಶಾಲಾ ಕಾಲೇಜುಗಳು ಹಾಗೂ ಮಾಗಡಿ ರಸ್ತೆಯಲ್ಲಿಯೂ ಕೂಡ ಈ ಸಂಸ್ಥೆಯ ಶಾಲಾ ಕಾಲೇಜುಗಳು ಸ್ಥಾಪಿಸಲ್ಪಟ್ಟಿವೆ.

ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ ಶಾಲಾ ಕಾಲೇಜುಗಳು

ಆದಿಚುಂಚನಗಿರಿ ಶ್ರೀ ಕ್ಷೇತ್ರದ ಪೀಠಾಧ್ಯಕ್ಷರಾದ ಶ್ರಿ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಆಶ್ರಯದಿಂದಾಗಿ ನಗರ ಕೇಂದ್ರ ಭಾಗವಾದ ವಿಜಯನಗರ (ಹೊಸಹಳ್ಳಿ)ದಲ್ಲಿ 1985ರಲ್ಲಿ ಆದಿಚುಂಚನಗಿರಿ ಇಂಗ್ಲಿಷ್ ಶಾಲೆ, ಪದವಿ ಕಾಲೇಜ್, ಶ್ರೀ ಕಾಲಭೈರವೇಶ್ವರ ಆಯುರ್ವೇದ, ತಾಂತ್ರಿಕ, ವೈದ್ಯಕೀಯ ಕಾಲೇಜ್, ನರ್ಸಿಂಗ್ ಕಾಲೇಜ್ ಮತ್ತು ಇಷ್ಟೇ ಅಲ್ಲದೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕುಂಬಳಗೋಡಿನಲ್ಲಿ ಬಿ.ಜಿ.ಎಸ್. ಅಂತರರಾಷ್ಟ್ರೀಯ ವಸತಿ ಶಾಲೆ, ಗ್ರಾಮಾಂತರ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ಸ್ಥಾಪಿಸಲಾಗಿದೆ. ಮಂಡ್ಯದ ಬಳಿ ಸಾತನೂರು (ಕೊಮ್ಮೇರಹಳ್ಳಿ) ವಿಶ್ವಮಾನವ ವಸತಿಶಾಲಾ, ಕಾಲೇಜುಗಳು ಇತ್ಯಾದಿ.

ಆದಿಚುಂಚನಗಿರಿ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ಇತರೆ ಸಂಸ್ಥೆಗಳು

1975ರಲ್ಲಿ ಮಾಗಡಿ ತಾಲ್ಲೂಕಿನ ಜಾಣಗೆರೆ ಎಂಬಲ್ಲಿ ಗ್ರಾಮಸೇವಾ ನಿವಾಸಿತ ಪ್ರೌಢಶಾಲೆ ಶ್ರೀ ಜಗದ್ಗುರು ಚಂದ್ರಶೇಖರನಾಥ ಸ್ವಾಮೀಜಿ ಕೈಗಾರಿಕಾ ತರಬೇತಿ ಕೇಂದ್ರ, ನೆಲಮಂಗಲ, ಅಂಧರ ಉಚಿತ ವಸತಿ ಶಾಲೆ, ಅರ್ಚಕರಹಳ್ಳಿ ರಾಮನಗರ ತಾಲ್ಲೂಕು, ಶ್ರೀ ರಂಗನಾಥಸ್ವಾಮಿ ಪ್ರೌಢಶಾಲೆ, ಮಾಗಡಿ, ಶ್ರೀ ಭಾಗ್ಯ ಭೈರವೇಶ್ವರ ಬಾಲಿಕಾ ಪ್ರೌಢಶಾಲೆ, ಬಿ.ಜಿ.ಎಸ್. ಪ್ರಾಥಮಿಕ ಬಾಲಕಾ ಪ್ರೌಢಶಾಲೆ, ಬಾಣದೂರು, ಬಿಡದಿ ಹೋಬಳಿ, ಶ್ರೀ ರಾಘವೇಂದ್ರ ಪ್ರಾಥಮಿಕ ಮತ್ತು ಪ್ರೌಢಶಾಲೆ, ಕನಕಪುರ, ಶ್ರೀ ಜಗದ್ಗುರು ಚಂದ್ರಶೇಖರನಾಥ ಸ್ವಾಮೀಜಿ ಪ್ರಾಥಮಿಕ ಮತ್ತು ಪ್ರೌಢಶಾಲೆ, ಮೇಲುಕೋಟೆ, ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀ ವಾಡೆ ಮಲ್ಲೇಶ್ವರ ಸ್ವತಂತ್ರ ಪದವಿ ಪೂರ್ವ ಕಾಲೇಜ್ ಮತ್ತು ಬಿ.ಜಿ.ಎಸ್. ಗಾರ್ಡನ್ ಸ್ಕೂಲ್, ಜಿ. ಬ್ಯಾಡರಹಳ್ಳಿ, ಚನ್ನಪಟ್ಟಣ ತಾಲ್ಲೂಕು ಇನ್ನೂ ಮುಂತಾದ ಶಾಲಾ ಕಾಲೇಜುಗಳನ್ನು ಹಾಗೂ ವಸತಿ ಶಾಲೆಗಳನ್ನು ನಿರ್ಮಿಸುವುದರ ಮೂಲಕ ಗ್ರಾಮಾಂತರ ಜನರಿಗೆ ಶಿಕ್ಷಣ ಒದಗಿಸಲು ಶ್ರೀ ಕ್ಷೇತ್ರ ಯಶಸ್ವಿಯಾಗಿದೆ.

ಕರ್ನಾಟಕ ರೆಡ್ಡಿ ಜನಸಂಘ, ಬೆಂಗಳೂರು

1976ರಲ್ಲಿ ರೆಡ್ಡಿ ಜನಸಂಘ ಎಂಬ ಸಂಸ್ಥೆಯನ್ನು ಬೆಂಗಳೂರಿನ ಕೋರಮಂಗಲದಲ್ಲಿ ಸ್ಥಾಪಿಸಿ ಗ್ರಾಮಾಂತರ ಕಾಲೇಜುಗಳನ್ನು ತೆರೆಯಲಾಯಿತು. 1985ರಲ್ಲಿ ಆರ್.ಜೆ.ಎಸ್. ಪಾಲಿಟೆಕ್ನಿಕ್ ಮತ್ತು ಕೈಗಾರಿಕಾ ತರಬೇತಿ ಕಾಲೇಜು, ಕೋರಮಂಗಲ, ಆರ್.ಜೆ.ಎಸ್. ಪದವಿಪೂರ್ವ ಕಾಲೇಜು, ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸ್ಥಾಪಿಸಿದುದೇ ಅಲ್ಲದೆ ಮಾರತ್‌ಹಳ್ಳಿಯಲ್ಲಿ 2002ರಲ್ಲಿ ಪದವಿ ಕಾಲೇಜನ್ನು ಸ್ಥಾಪಿಸಲಾಗಿದೆ.

ಬಿ.ಟಿ.ಎಲ್. ಶಿಕ್ಷಣ ಟ್ರಸ್ಟ್, ಬೆಂಗಳೂರು

ಅಮೆರಿಕಾದಲ್ಲಿ ನೆಲೆಸಿರುವ ಶ್ರೀ ಬಿ.ಟಿ. ಲಕ್ಷ್ಮಣ್‌ರವರು ಗ್ರಾಮೀಣ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಹೊಸೂರು ರಸ್ತೆ ಬೊಮ್ಮನಹಳ್ಳಿಯಲ್ಲಿ ಬಿ.ಟಿ.ಎಲ್. ಫೌಂಡೇಶನ್ ಫಾರ್ ಇಂಟರ್‌ನ್ಯಾಷನಲ್ ಸರ್ವೀಸಸ್ ಮತ್ತು ರೂರಲ್ ಡೆವೆಲಪ್‌ಮೆಂಟ್ ಎಂಬ ಹೆಸರಿನಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. 1981ರಲ್ಲಿ ಪದವಿಪೂರ್ವ ಕಾಲೇಜು, ನರ್ಸಿಂಗ್ ಕಾಲೇಜು, ಬಿ.ಟಿ.ಎಲ್. ಇಂಜಿನಿಯರಿಂಗ್ ಕಾಲೇಜು (ಬೊಮ್ಮಸಂದ್ರ) ಇವೇ ಮುಂತಾದ ಶಾಲಾ ಕಾಲೇಜುಗಳನ್ನು ಸ್ಥಾಪಿಸಲಾಗಿದೆ.

ಶಾಂತಿ ಕಾಲೇಜು (ಕೆ.ಎಂ.ದೊಡ್ಡಿ)

1982ರಲ್ಲಿ ಶ್ರೀ ಕೆ.ಎನ್. ನಾಗೇಗೌಡರಿಂದ ಪ್ರಾರಂಭವಾಯಿತು.

ಶ್ರೀ ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ, ಬೆಂಗಳೂರು

1988ರಲ್ಲಿ ಅಂದು ಶಿಕ್ಷಣ ಸಚಿವರಾಗಿದ್ದ ಎಂ. ಚಂದ್ರಶೇಖರ್‌ರವರು ಬೆಂಗಳೂರು ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ಎಂಬಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಹೆಸರಿನಲ್ಲಿ ಶ್ರೀ ರಾಮಕೃಷ್ಣ ಶಿಕ್ಷಣ ಸಂಸ್ಥೆಯನ್ನು ಹುಟ್ಟು ಹಾಕಿದರು. ಅಲ್ಲಿ ಪ್ರಾಥಮಿಕ, ಪ್ರೌಢಶಾಲೆಗಳನ್ನು ತೆರೆದು ಬಡಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದೆ.

ಸಿ.ಎಂ.ಆರ್. ಸಮೂಹ ವಿದ್ಯಾ ಸಂಸ್ಥೆ, ಬೆಂಗಳೂರು

ಚಿಕ್ಕಮುನಿಯಪ್ಪ ರೆಡ್ಡಿಯವರು ಈ ಶಿಕ್ಷಣ ಸಂಸ್ಥೆಯ ಸ್ಥಾಪಕರು. ಶ್ರೀಮತಿ ಡಾ. ಸಬಿತಾ ಮತ್ತು ಕೆ.ಸಿ. ರಾಮಮೂರ್ತಿಯವರ ಮಾರ್ಗದರ್ಶನದಲ್ಲಿ ಈ ಸಂಸ್ಥೆಯು ಈಗ ಪ್ರತಿಷ್ಠಿತ ಸಂಸ್ಥೆಯಾಗಿದೆ. ಬಾಣಸವಾಡಿ, ಹೆಣ್ಣೂರು, ಕಲ್ಯಾಣ ನಗರದಲ್ಲಿ ತಲೆ ಎತ್ತಿರುವ ಈ ಶಿಕ್ಷಣ ಸಂಸ್ಥೆಯ ವತಿಯಿಂದ ಸಿ.ಎಂ.ಆರ್. ನ್ಯಾಷನಲ್ ಪಬ್ಲಿಕ್ ಸ್ಕೂಲ್, ಸಿ.ಎಂ.ಆರ್. ಪದವಿಪೂರ್ವ ಕಾಲೇಜು, ಮ್ಯಾನೇಜ್‌ಮೆಂಟ್ ಕಾಲೇಜು, ಕಾನೂನು ಕಾಲೇಜು, ಶಿಕ್ಷಣ ಕಾಲೇಜು, ಮೆಡಿಕಲ್ ಮತ್ತು ಲ್ಯಾಬರೇಟರಿ ಟೆಕ್ನಾಲಜಿ ಕಾಲೇಜು ಇವೇ ಮುಂತಾದವುಗಳನ್ನು ಸ್ಥಾಪಿಸಲಾಗಿದೆ.

ಇಂಡಿಯನ್ ಎಜುಕೇಷನ್ ಸೊಸೈಟಿ, ಬೆಂಗಳೂರು

ಶ್ರೀ ಎಂ.ಎ. ಆನಂದ್‌ರವರು 1978ರಲ್ಲಿ ಬಸವೇಶ್ವರ ನಗರದಲ್ಲಿ ಈ ಸಂಸ್ಥೆ-ಯನ್ನು ಸ್ಥಾಪಿಸಿದರು. ಏಳಕ್ಕೂ ಹೆಚ್ಚು ಪ್ರಾಥಮಿಕ, ಪ್ರೌಢಶಾಲೆಗಳು ಈ ಸಂಸ್ಥೆಯ ವತಿಯಿಂದ ನಡೆಯುತ್ತಿವೆ.

ಹೊಂಬೇಗೌಡ ಶಿಕ್ಷಣ ಟ್ರಸ್ಟ್
(ಕೆಂಗಲ್, ಚನ್ನಪಟ್ಟಣ)

ಜಮೀನ್ದಾರರು, ದಾನಿಗಳು ಆದ ಎಲ್.ಎಸ್. ರಾಮಲಿಂಗಯ್ಯನವರು ಗ್ರಾಮಾಂತರ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೈಸೂರು ಬೆಂಗಳೂರು ರಸ್ತೆಯಲ್ಲಿ ಹೊಂಬೇಗೌಡ ಶಿಕ್ಷಣ ಟ್ರಸ್ಟ್‌ಅನ್ನು ಸ್ಥಾಪಿಸಿದ್ದಾರೆ. ಈ ಟ್ರಸ್ಟ್ ವತಿಯಿಂದ ಹತ್ತರಿಂದ ಹನ್ನೆರಡಕ್ಕೂ ಹೆಚ್ಚು ಶಾಲಾ ಕಾಲೇಜುಗಳು ನಡೆಯುತ್ತಿವೆ.

1973ರಲ್ಲಿ ರಾಷ್ಟ್ರಕವಿ ಕುವೆಂಪುರವರ ಹೆಸರಿನಲ್ಲಿ ಕುವೆಂಪು ಪದವಿ ಕಾಲೇಜು, ಪದವಿಪೂರ್ವ ಕಾಲೇಜು, ವೃತ್ತಿ ಶಿಕ್ಷಣ ಕಾಲೇಜು, ಸ್ನಾತಕೋತ್ತರ ಕಾಲೇಜು, ಮ್ಯಾನೇಜ್‌ಮೆಂಟ್ ಕೋರ್ಸ್, ಸ್ನಾತಕೋತ್ತರ ಪದವಿಗಳನ್ನು ತೆರೆಯಲಾಯಿತು. ಇಷ್ಟೇ ಅಲ್ಲದೆ ಜಸ್ಟೀಸ್ ಹೊಂಬೇಗೌಡ ಕೈಗಾರಿಕಾ ತರಬೇತಿ ಕೇಂದ್ರ ಹಾಗೂ ಗಂಗರಸ ಶಿಲ್ಪ ಕಲಾ ಕೇಂದ್ರವನ್ನು ಸಹ ಪ್ರಾರಂಭಿಸಿದ್ದಾರೆ. ಈ ಶಾಲಾ ಕಾಲೇಜುಗಳಲ್ಲಿ ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಗೋಲ್ಡನ್ ವ್ಯಾಲಿ ಶಿಕ್ಷಣ ಸಮೂಹ (ಕೆ.ಜಿ.ಎಫ್., ಕೋಲಾರ ಜಿಲ್ಲೆ)

1973–74ರ ಸಾಲಿನಲ್ಲಿ ಟಿ. ತಿಮ್ಮಯ್ಯ, ಐ.ಎ.ಎಸ್.ರವರ ನಿರ್ದೇಶನದಂತೆ ಕೆ.ಜಿ.ಎಫ್.ನಲ್ಲಿ ಶಾಲಾ ಕಾಲೇಜುಗಳನ್ನು ಸ್ಥಾಪಿಸಲಾಯಿತು. ಇಂದು ಇದು ಪದವಿ ಪೂರ್ವ ಕಾಲೇಜು, ಪದವಿ ಕಾಲೇಜು, ಸೇರಿದಂತೆ ಸಾಕಷ್ಟು ಶಾಲಾ ಕಾಲೇಜುಗಳ ಕೇಂದ್ರವಾಗಿದೆ. ಇಲ್ಲಿ ಐದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಮರಿಯಪ್ಪ ಮೆಮೋರಿಯಲ್ ಟ್ರಸ್ಟ್/ಹೊಂಬೇಗೌಡ ಕಾಲೇಜು, ಬೆಂಗಳೂರು

ರಾಜಾಜಿನಗರ ಮತ್ತು ಮಲ್ಲೇಶ್ವರಂ ನಡುವೆ ಇರುವ ಮರಿಯಪ್ಪನ ಪಾಳ್ಯ ಎಂಬಲ್ಲಿ 1990ರಲ್ಲಿ ಶ್ರೀ ಕೆ.ಬಿ. ಲೋಕೇಶ್‌ರವರಿಂದ ಪದವಿಪೂರ್ವ ಕಾಲೇಜು, 1993–94ರಲ್ಲಿ ಪದವಿ ಕಾಲೇಜು ಪ್ರಾರಂಭಗೊಂಡಿತು. ನಂತರ ಸಂಜೆ ಕಾಲೇಜು ಸ್ಥಾಪನೆಯಾಯಿತು. ಇಂದು ಆರು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಕೃಷಿಕ್ ಸರ್ವೋದಯ ಫೌಂಡೇಶನ್, ಬೆಂಗಳೂರು

ರಾಜ್ಯ ಮತ್ತು ರಾಷ್ಟ್ರಮಟ್ಟದ ಆಡಳಿತಾಧಿಕಾರಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರು ಮಾಡಲು ತರಬೇತಿ ನೀಡುವ ಶಿಕ್ಷಣ ಸಂಸ್ಥೆ ಕೃಷಿಕ್ ಸರ್ವೋದಯ ಫೌಂಡೇಶನ್ ಸಂಸ್ಥೆ ಎಂಬ ಹೆಸರಿನಿಂದ ತಲೆ ಎತ್ತಿದೆ. ಈ ಸಂಸ್ಥೆಯು 1992ರಲ್ಲಿ ಶ್ರೀ ವೈ.ಕೆ. ಪುಟ್ಟಸೋಮೇಗೌಡ ಐ.ಎ.ಎಸ್ (ನಿವೃತ್ತ) (ಅಧ್ಯಕ್ಷರು), ಟಿ. ತಿಮ್ಮೇಗೌಡ ಐ.ಎ.ಎಸ್. ಮತ್ತು ಎಸ್.ಎನ್. ನಾಗರಾಜ್ ಕೆ.ಎ.ಎಸ್. (ಹಿರಿಯ ಶ್ರೇಣಿ) ಇವರೇ ಮುಂತಾದವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಈ ಸಂಸ್ಥೆಯ ಸ್ಥಾಪನೆಯಾಯಿತು. ಇಲ್ಲಿಯ ತನಕ ಸಾವಿರಾರು ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ. ನೂರಾರು ಜನ ಐ.ಎ.ಎಸ್., ಐ.ಎ.ಎಸ್. (ವಿದೇಶಾಂಗ ಸೇವೆ), ಐ.ಪಿ.ಎಸ್., ಕೆ.ಎ.ಎಸ್. ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಸಂಸ್ಥೆಯು ಇಂದು ಬೃಹದಾಕಾರವಾಗಿ ಬೆಳೆದು ಮೈಸೂರು, ಹಾಸನ, ಚಿಕ್ಕಮಗಳೂರು, ತುಮಕೂರು, ಮಡಿಕೇರಿ, ಕೋಲಾರ, ಮಂಗಳೂರು, ಚಿಕ್ಕಬಳ್ಳಾಪುರ ಇನ್ನೂ ಮುಂತಾದ ಕಡೆ ಶಾಖೆಗಳನ್ನು ಸ್ಥಾಪಿಸಿ ಕಾರ್ಯನಿರ್ವಹಿಸುತ್ತಿದೆ.

ಆಳ್ವ ಶಿಕ್ಷಣ ಸಂಸ್ಥೆ ಗಳು, ಮೂಡಬಿದ್ರೆ (1999)

ಪದವಿಪೂರ್ವ ಕಾಲೇಜು, ಆಯುರ್ವೇದ ಕಾಲೇಜು, ಹೋಮಿಯೋಪಥಿ ಕಾಲೇಜು, ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನ ಕಾಲೇಜು, ಫಿಸಿಯೋಥೆರಪಿ ಕಾಲೇಜು, ನರ್ಸಿಂಗ್ ಕಾಲೇಜು, ದೈಹಿಕ ಶಿಕ್ಷಣ ಕಾಲೇಜು, ಹೋಟೆಲ್

ಮ್ಯಾನೇಜ್‌ಮೆಂಟ್ ಕಾಲೇಜ್, ಮಾನವ ಸಂಪನ್ಮೂಲ ಅಭಿವೃದ್ಧಿ ತರಗತಿಗಳು, ಶಿಕ್ಷಣ ಕಾಲೇಜು (ಡಿ.ಎಡ್. ಮತ್ತು ಬಿ.ಎಡ್. ತರಗತಿಗಳು), ಆಹಾರ ಮತ್ತು ನ್ಯೂಟ್ರಿಷನ್ ತರಗತಿ, ಇನ್ನೂ ಮುಂತಾದವುಗಳನ್ನು ಈ ಸಂಸ್ಥೆಗಳು ನಡೆಸುತ್ತಿವೆ.

ಡಾನ್ ಬಾಸ್ಕೊ ವಿದ್ಯಾಸಂಸ್ಥೆಗಳು (1999), ಬೆಂಗಳೂರು

1999ರಲ್ಲಿ ಕೈಗಾರಿಕೋದ್ಯಮಿಗಳಾದ ಶ್ರೀ ಬೈಲಪ್ಪನವರು ವಿದೇಶದಿಂದ ಕಲಿತು ಬಂದು ಶಿಕ್ಷಣಕ್ಕೆ ಒತ್ತು ನೀಡಬೇಕೆಂಬ ಉದ್ದೇಶದಿಂದ ಬೆಂಗಳೂರು ಮೈಸೂರು ಹೆದ್ದಾರಿಯಾದ ಕೆಂಗೇರಿ ಹೋಬಳಿಗೆ ಸೇರಿದ ಕುಂಬಳಗೂಡಿನ ದೊಡ್ಡ ಜಾಗದಲ್ಲಿ ಡಾನ್ ಬಾಸ್ಕೊ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಡಾನ್ ಬಾಸ್ಕೊ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜೀಸ್ ಅನ್ನು, ನಂತರ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜ್ (ಬೊಮ್ಮನಹಳ್ಳಿ) ಅನ್ನು ಸ್ಥಾಪಿಸಿದರು. ಇದಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆ ಬರಲಾಗಿ ಡಾನ್ ಬಾಸ್ಕೊ ಇನ್‌ಸ್ಟಿಟ್ಯೂಟ್ ಆಫ್ ಬಯೋಟೆಕ್ನಾಲಜೀಸ್ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. 1500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇವರ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಿದ್ದಾರೆ.

ವಿದ್ಯಾವರ್ಧಕ ಸಂಘ, ಮೈಸೂರು

ಕಲಾ, ವಾಣಿಜ್ಯ, ವಿಜ್ಞಾನ, ಕಾನೂನು ಕಾಲೇಜುಗಳು ನಡೆಯುತ್ತಿವೆ.

ವಿದ್ಯಾ ವಿಕಾಸ್ ಇನ್ಸಿಟೆಟ್ಯುಟ್ಸ್, 2007

ಇಲ್ಲಿ ಶಾಲಾ, ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳಿವೆ. ಶ್ರೀ ವಾಸು ಈ ಸಂಸ್ಥೆಯ ಸಂಸ್ಥಾಪಕರು.

ಒಕ್ಕಲಿಗರ ಸಂಘದ ಪ್ರಭಾವ ಮತ್ತು ಶೈಕ್ಷಣಿಕ ಪ್ರಗತಿ

ಭಾರತೀಯರಿಗೆ ಶಿಕ್ಷಣ ಪದ್ಧತಿಯು ಬಹಳ ಕಾಲದಿಂದ ಗೊತ್ತಿದ್ದಿತು. ರಾಜಮಹಾರಾಜರಿಂದ ಹಿಡಿದು ಸಾಮಾನ್ಯ ವ್ಯಕ್ತಿಗಳು ಕೂಡ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿದ್ದರು. ಅದಕ್ಕಾಗಿ ಹಿಂದೆ ಗುರುಕುಲಗಳು, ಘಟಿಕಾಸ್ಥಾನಗಳು ಇರುತ್ತಿದ್ದವು. ಬಡಮಕ್ಕಳಿಗೆ ಕೂಲೀಮಠಗಳು ಇರುತ್ತಿದ್ದವು. ಇಂದಿನಂತೆ ಶಿಕ್ಷಣಕ್ಕೆ ಅಷ್ಟೊಂದು ಆದ್ಯತೆ ಕೊಡದಿದ್ದರೂ ಓದು, ಬರೆಯಲು ಕಲಿಸುತ್ತಿದ್ದರು. ಬ್ರಾಹ್ಮಣರು ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಿದ್ದರೆ ಬ್ರಾಹ್ಮಣೇತರರು ಅಷ್ಟಾಗಿ ಪ್ರಾಮುಖ್ಯತೆಯನ್ನು ನೀಡುತ್ತಿರಲಿಲ್ಲ. ಬ್ರಾಹ್ಮಣೇತರರಲ್ಲಿ ಕೆಲವು ಬುದ್ಧಿವಂತರು ತಾವಂತು ಕಲಿಯಲಿಲ್ಲ ತಮ್ಮ ಮಕ್ಕಳಾದರೂ ಕಲಿಯಲಿ ಎಂದು ಶಾಲೆಗೆ ಕಳುಹಿಸುತ್ತಿದ್ದರು. ಆದರೆ ಬಹುತೇಕರು ಶಿಕ್ಷಣಕ್ಕೆ ಆದ್ಯತೆ ನೀಡುತ್ತಿರಲಿಲ್ಲ. ಕಾರಣವೇನೆಂದರೆ ಅನುಕೂಲಸ್ಥರು (ಜಮೀನ್ದಾರರು) ಸಂಬಳಕ್ಕೆ ಕೈಯೊಡ್ಡುವುದು

ಅಗತ್ಯವಿಲ್ಲವೆಂದು ಮತ್ತೆ ಕೆಲವರು ಬಡತನ ಇವೇ ಮುಂತಾದ ಕಾರಣದಿಂದ ಶಿಕ್ಷಣಕ್ಕೆ ಆದ್ಯತೆ ನೀಡಲಿಲ್ಲ.

19ನೇ ಶತಮಾನದ ಕೊನೆಯ ದಶಕದಲ್ಲಿ ಬ್ರಾಹ್ಮಣೇತರರು ಮತ್ತು ಕೆಳ ಜಾತಿಯವರು ಹೆಚ್ಚು ಕ್ರಿಯಾಶಾಲಿಗಳಾದರು. ಇದಕ್ಕೆ ಕಾರಣವೇನೆಂದರೆ ಶೂದ್ರ ಶಕ್ತಿಯ ನೇತಾರರಾಗಿ ಹಿಂದೂ ಧರ್ಮ, ಸಂಸ್ಕೃತಿ, ವೇದಾಂತದ ಪ್ರತಿಪಾದಕರಾಗಿ ಸುಪ್ರಸಿದ್ಧರಾಗಿದ್ದ ಸ್ವಾಮಿ ವಿವೇಕಾನಂದರು ಮುಖ್ಯ ಕಾರಣ. 1890ರ ದಶಕದಲ್ಲಿ ವಿವೇಕಾನಂದರು ದಕ್ಷಿಣ ಭಾರತದ ಉದ್ದಗಲಕ್ಕೂ ಸಂಚರಿಸಿದರು ಹಾಗೂ ಜಾತಿ ಪದ್ಧತಿಯನ್ನು ಖಂಡಿಸಿದರು. ಶಿಕ್ಷಣವನ್ನು ಉತ್ತೇಜಿಸಿದರು. ಮಹಾರಾಷ್ಟ್ರದ ಜ್ಯೋತಿರಾವ್ ಪುಲೆಯುವರಷ್ಟೇ ಪ್ರಖರವಾಗಿ ಜಾತೀಯತೆಯಿಂದಾಗುವ ಅಸಮಾನತೆ, ಅಸ್ಪೃಶ್ಯತೆಯ ಪಿಡುಗನ್ನು ನಿವಾರಿಸಲು ಪ್ರಯತ್ನಿಸಿದರು. ಈ ನಡುವೆ ಬ್ರಾಹ್ಮಣರು ಹಾಗೂ ಬನಿಯಾ ಜನಾಂಗದವರು ಅನುಭವಿಸುತ್ತಿರುವ ಗೌರವ ಪ್ರತಿಷ್ಠೆ ಇವೇ ಮುಂತಾದವುಗಳ ವಿರುದ್ಧ ಸಿಡಿದೆದ್ದರು. (ಇಂಡಿಯನ್ ಸೋಷಿಯಲ್ ಫಾರ್ಮನಲ್ಲಿ ಉಲ್ಲೇಖಿಸಿದ ಪ್ರಬುದ್ಧ ಭಾರತ–27) ಹೀಗೆ ದಕ್ಷಿಣ ಭಾರತದ ಕೇಂದ್ರವೆನಿಸಿದ್ದ ಮದ್ರಾಸ್‌ನಲ್ಲಿ ನಡೆದ ಬ್ರಾಹ್ಮಣೇತರ ಚಳುವಳಿಯ ಪ್ರಭಾವದಿಂದಾಗಿ ಎನ್ನುವಂತೆ ಅಂದು ಮೈಸೂರು ಸಂಸ್ಥಾನವು ಎಲ್ಲಾ ವಿಷಯುಗಳಲ್ಲೂ ಪ್ರಗತಿಯ ದಾಪುಗಾಲನ್ನು ಹಾಕುತ್ತಿದ್ದಿತು. 1833ರಲ್ಲಿ ಆಳರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ತೆರೆದ ಇಂಗ್ಲಿಷ್ ಶಾಲೆಯಿಂದಾಗಿ ಇಂಗ್ಲಿಷ್ ವಿದ್ಯಾಭ್ಯಾಸವು ಪ್ರಾರಂಭಗೊಂಡಿತು.

ಹೀಗೆ ದಕ್ಷಿಣ ಭಾರತದ ಇಂಗ್ಲಿಷ್ ಶಿಕ್ಷಣ ಪಡೆದ ಮೊದಲ ತಲೆಮಾರಿನವರ ಮುಖ್ಯ ಲಕ್ಷಣವೆಂದರೆ ಸರ್ಕಾರಕ್ಕೆ (ರಾಜರಿಗೆ) ಅವರ ನಿಷ್ಠೆ. ಕ್ರೈಸ್ತ ಮಿಷನರಿಗಳು ಅದಕ್ಕೆ ಹಿಂದೆ ಬೀಳಲಿಲ್ಲ. 1840 ರಿಂದ 1854ರ ಅವಧಿಯಲ್ಲಿ ವೆಸ್ಲಿಯನ್ ಮಿಷನ್ ಸಂಸ್ಥೆಯು ಮೈಸೂರು ಸಂಸ್ಥಾನದ ಕೆಲವು ಜಿಲ್ಲಾ ಕೇಂದ್ರಗಳಲ್ಲಿ ಇಂಗ್ಲಿಷ್ ಶಾಲೆಗಳನ್ನು ಸ್ಥಾಪಿಸಿತು. 1858ರಲ್ಲಿ ಬೆಂಗಳೂರಿನಲ್ಲಿ ಒಂದು ಸರ್ಕಾರಿ ಪ್ರೌಢಶಾಲೆ ಸ್ಥಾಪನೆ–ಯಾಯಿತು. ಅನಂತರ ಅದೇ ಸೆಂಟ್ರಲ್ ಕಾಲೇಜಾಯಿತು. ತುಮಕೂರು, ಶಿವಮೊಗ್ಗ, ಮೈಸೂರು ಮತ್ತು ಹಾಸನಗಳಲ್ಲಿದ್ದ ಮಿಶನರಿ ಶಾಲೆಗಳನ್ನು ಸರ್ಕಾರ ವಹಿಸಿ–ಕೊಂಡಿತು. 1861ರಲ್ಲಿ ಬೆಂಗಳೂರಿನಲ್ಲಿ ಒಂದು ನಾರ್ಮಲ್ ಸ್ಕೂಲ್ ಸ್ಥಾಪನೆ–ಯಾಯಿತು. ಬೆಂಗಳೂರಿನಲ್ಲಿದ್ದ ಸೆಂಟ್ರಲ್ ಹೈಸ್ಕೂಲು 1875ರಲ್ಲಿ ಸೆಂಟ್ರಲ್ ಕಾಲೇಜ್ ಎಂದು ಕರೆಯಲ್ಪಟ್ಟು ಮದ್ರಾಸ್ ವಿಶ್ವವಿದ್ಯಾಲಯದ ಮನ್ನಣೆ ಪಡೆಯಿತು. ಶಿವಮೊಗ್ಗ ಮತ್ತು ಮೈಸೂರಿನಲ್ಲಿದ್ದ ಶಾಲೆಗಳಲ್ಲಿ ಎಫ್.ಎ. ಮಟ್ಟದವರೆಗೆ ಬೋಧನೆ ನಡೆಯುತ್ತಿತ್ತು.

1881–82ರ ಅವಧಿಯಲ್ಲಿದ್ದ ಶಾಲೆಗಳು ಮತ್ತು ವಿದ್ಯಾರ್ಥಿಗಳ ಪಟ್ಟಿ ಈ ಕೆಳಕಂಡಂತಿದೆ :

	ಸರ್ಕಾರಿ	ಅನುದಾನಿತ ಶಾಲೆಗಳು	ಅನುದಾನ ರಹಿತ	ಒಟ್ಟು
ಶಾಲೆಗಳ ಸಂಖ್ಯೆ	**899**	**188**	**1,000**	**2,087**
ವಿದ್ಯಾರ್ಥಿಗಳ ಸಂಖ್ಯೆ	**33,287**	**9,370**	**15,000**	**57,657**

1886ರಲ್ಲಿ ಶ್ರೀ ಶೇಷಾದ್ರಿ ಐಯ್ಯರ್‌ರವರು ದಿವಾನ್ ಹುದ್ದೆಗೇರಿದಾಗ ಶಿಕ್ಷಣ ಪ್ರಸರಣಕ್ಕೆ ಒತ್ತುಕೊಟ್ಟರು. ಮೈಸೂರಿನ ಸಂಸ್ಕೃತ ಕಾಲೇಜನ್ನು ಅಭಿವೃದ್ಧಿಗೊಳಿಸ –ಲಾಯಿತು. ಮೈಸೂರರಸರ ಪ್ರಯತ್ನದಿಂದಾಗಿ ಮಹಿಳೆಯರಿಗೆ ಪ್ರತ್ಯೇಕ ಪ್ರೌಢಶಾಲೆ –ಯನ್ನು ತೆರೆಯುವ ಉದ್ದೇಶದಿಂದ ಮಹಾರಾಣಿ ಗರ್ಲ್ಸ್ ಹೈಸ್ಕೂಲು ಅನ್ನು ತೆರೆಯುವ ಮೂಲಕ, ಇಡೀ ದಕ್ಷಿಣ ಭಾರತದಲ್ಲೇ ಅದು ಪ್ರಥಮ ಪ್ರತ್ಯೇಕ ಮಹಿಳಾ ಶಾಲೆಯೆಂದೆನಿಸಿತು. 1890–95ರ ಅವಧಿಯಲ್ಲಿ ಮಹಾರಾಜ ಕಾಲೇಜನ್ನು ಪ್ರಥಮ ದರ್ಜೆ ಕಾಲೇಜನ್ನಾಗಿ ಪರಿವರ್ತಿಸಲಾಯಿತು. ಮೈಸೂರು, ಚಿತ್ರದುರ್ಗ, ಕೋಲಾರ –ಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು. 1877ರ ಬರಗಾಲದಲ್ಲಿ ರದ್ದು ಮಾಡಿದ್ದ ನಾರ್ಮಲ್ ಸ್ಕೂಲ್‌ಗಳನ್ನು ಮೈಸೂರು, ಶಿವಮೊಗ್ಗ, ಕೋಲಾರಗಳಲ್ಲಿ ಪ್ರಾರಂಭಿಸಿದರು. ಸರ್ ಎಂ. ವಿಶ್ವೇಶ್ವರಯ್ಯನವರ ದೊಡ್ಡ ಕೊಡುಗೆ ಎಂದರೆ 1916ರಲ್ಲಿ ಮೈಸೂರು ವಿಶ್ವ ವಿದ್ಯಾಲಯವನ್ನು ಸ್ಥಾಪಿಸುವುದರ ಮೂಲಕ ಉನ್ನತ ಶಿಕ್ಷಣವನ್ನು ಮದ್ರಾಸ್ ವಿವಿ.ಯಿಂದ ಪ್ರತ್ಯೇಕಿಸಿದ್ದು, ಹಾಗೂ ಮಹಿಳೆಯರ ಶಿಕ್ಷಣಕ್ಕೂ ಪ್ರಾಶಸ್ತ್ಯ ನೀಡಿದ್ದು. 1911 ರಿಂದ 16ರವರಗೆ ನಡೆದ ಗಮನಾರ್ಹ ಅಭಿವೃದ್ಧಿ ಕಾರ್ಯಗಳೆಂದರೆ ಎಸ್.ಎಸ್.ಎಲ್.ಸಿ. ಏರ್ಪಾಟನ್ನು ಜಾರಿಗೆ ತಂದದ್ದು, ಏಳು ಕನ್ನಡ ಶಾಲೆಗಳನ್ನು ತೆರೆದದ್ದು. ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದು ಎಲಿಮೆಂಟರಿ ವಿದ್ಯಾಭ್ಯಾಸವನ್ನು ಜಾರಿಗೆ ತಂದದ್ದು.

ವಿದ್ಯಾಭ್ಯಾಸದಲ್ಲಿ ಸಾಧಿಸಬೇಕಾದ ಮುಂದಿನ ಪ್ರಗತಿಯನ್ನು ಗುರ್ತಿಸುವು –ದಕ್ಕಾಗಿ ಸರ್ಕಾರವು 1921ರಲ್ಲಿ ವ್ಯಾಪಕವಾದ ಒಂದು ಠರಾವನ್ನು ಅಂಗೀಕರಿಸಿತು. ಸರ್ಕಾರಿ ಅನುದಾನವನ್ನು ಪಡೆಯುತ್ತಿದ್ದ ಶಾಲೆಗಳನ್ನು (ಖಾಸಗಿ ಶಾಲೆ) ಸರ್ಕಾರಿ ಶಾಲೆಗಳಾಗಿ ಪರಿವರ್ತಿಸಿ ಅರ್ಹ ಸಿಬ್ಬಂದಿಯನ್ನು ಹಾಗೂ ಸಾಕಷ್ಟು ಸಲಕರಣೆಗಳನ್ನು ಒದಗಿಸಲಾಯಿತು. ಶಿಕ್ಷಕರ ತರಬೇತಿಗೆ ಸಾಕಷ್ಟು ಅವಕಾಶ ಮಾಡಿಕೊಡಲಾಯಿತು. 1915–16ರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ವೆಚ್ಚ ರೂ.6,37,814ರಷ್ಟಿದ್ದು 1921–22ರಲ್ಲಿ ರೂ.13,37,856ಕ್ಕೇರಿತು.

1893 ರಿಂದ 1928ರವರೆಗೆ ಸ್ಥಳೀಯ ನೆರವನ್ನು ಒದಗಿಸಿಕೊಳ್ಳುವ ಮತ್ತು ಸರ್ಕಾರಿ ನೆರವು ಪಡೆಯುವ ಶಾಲೆಗಳಿಗೆ ಉತ್ತೇಜನ ಕೊಟ್ಟು ರಾಜ್ಯದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಲು ವ್ಯವಸ್ಥೆ ಮಾಡಿದರು. 1913ರಲ್ಲಿ ಮೂಲ ಶಿಕ್ಷಣ ನಿಧಿ (elementary education act)ಯಂತೆ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಲು ಆಲೋಚಿಸಿ ಶಾಲಾ ಸಮಿತಿಗಳನ್ನು ನೇಮಿಸಲಾಯಿತು. 1941ರಲ್ಲಿ ಕಡ್ಡಾಯ ಹಾಜರಾತಿ ಪದ್ಧತಿಯನ್ನು ಜಾರಿಗೆ ತರಲಾಯಿತು. ಇದರಿಂದ ತಂದೆ ತಾಯಿಗಳು ಒಮ್ಮೆ ಶಾಲೆಗೆ ಸೇರಿಸಿದ ಮಗುವನ್ನು 12 ವರ್ಷವಯಸ್ಸಿಗೆ ಬರುವ ತನಕ ಶಾಲೆ ಬಿಡಿಸದೆ ಕಡ್ಡಾಯವಾಗಿ ಮಗುವನ್ನು ಶಾಲೆಗೆ ಕಳುಹಿಸುವಂತಾಯಿತು. ಕಾಲಾನಂತರ ಎಂದರೆ 1950ರಲ್ಲಿ ಈ ಯೋಜನೆಯನ್ನು ಕೈಬಿಡಲಾಯಿತು. 1948–49ರಲ್ಲಿ ಒಂದನೆ ತರಗತಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಲ್ಲಿ ಶೇ.33 ವಿದ್ಯಾರ್ಥಿಗಳು ನಾಲ್ಕನೆಯ ತರಗತಿಯನ್ನು ಮುಟ್ಟಿದರು. ಜೊತೆಗೆ ಅವು ಏಕೋಪಾಧ್ಯಾಯ ಶಾಲೆಗಳಾಗಿದ್ದವು.

1905ಕ್ಕೆ ಮೊದಲೇ ವಯಸ್ಕರಿಗೆ ರಾತ್ರಿ ಶಾಲೆಗಳ ಮೂಲಕ ವಯಸ್ಕರ ಶಿಕ್ಷಣ ಪದ್ಧತಿ ಜಾರಿಗೆ ಬಂದಿತು. 1941ರಲ್ಲಿ ಮೈಸೂರು ಪ್ರಾಂತ್ಯ ವಯಸ್ಕರ ಶಿಕ್ಷಣ ಸಮಿತಿ ರೂಪಿತವಾಯಿತು. ನಂತರ ಇದನ್ನು ಮೈಸೂರು ರಾಜ್ಯದ ವಯಸ್ಕರ ಶಿಕ್ಷಣ ಸಮಿತಿ ಎಂದು ಕರೆಯಲಾಯಿತು. ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣ ಪ್ರಸರಣಕ್ಕೆ ಸರ್ಕಾರ ಒತ್ತು ಕೊಡತೊಡಗಿತು. 1935ರಲ್ಲಿ ಗ್ರಾಮಾಂತರ ಪ್ರದೇಶಗಳ ಜನರ ಇಂಗ್ಲಿಷ್ ವಿದ್ಯಾಭ್ಯಾಸದ ವ್ಯಾಪಕವಾದ ಬೇಡಿಕೆಯನ್ನು ಪೂರೈಸಲು ಹೊಸ ಮಾದರಿಯ ಮಾಧ್ಯಮಿಕ ಶಾಲೆಗಳನ್ನು ತೆರೆಯಲಾಯಿತು. ಮುಂದೆ ಇದೇ ಮಾದರಿ ಮಾಧ್ಯಮಿಕ ಶಾಲೆ (ನ್ಯೂ ಮಿಡ್ಲ್ ಸ್ಕೂಲ್) ಆಯಿತು. ಇದರ ವಿಶೇಷವೆಂದರೆ ಪ್ರಾಥಮಿಕ ಶಾಲೆಗಳಿಗೆ ಒಬ್ಬ ಇಂಗ್ಲಿಷ್ ಅಧ್ಯಾಪಕನನ್ನು ಒದಗಿಸಿಕೊಟ್ಟು ಮಾಧ್ಯಮಿಕ ಶಾಲೆಯ ತರಗತಿಗಳನ್ನು ಆರಂಭಿಸುವುದು. ಕ್ರಮೇಣ ಇವು ಪರಿಪೂರ್ಣ ಮಾಧ್ಯಮಿಕ ಶಾಲೆಗಳಾಗಿ ಅಭಿವೃದ್ಧಿಗೊಂಡವು.

ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾಗಿದ್ದ ವೇಳೆಯಲ್ಲಿ (1912–18) ಪ್ರಾಥಮಿಕ ಅದರಲ್ಲೂ ಮಹಿಳಾ ಶಿಕ್ಷಣಕ್ಕೆ ಒತ್ತು ಕೊಟ್ಟರು ಹಾಗೂ ಪ್ರಪ್ರಥಮ ಬಾರಿಗೆ 1916ರಲ್ಲಿ ಮೈಸೂರು ರಾಜ್ಯವು ತನ್ನದೆ ಆದ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿಕೊಳ್ಳಲು ಶ್ರಮಿಸಿದರು. 1916ರಲ್ಲಿ ದೇಶೀಯ ಸಂಸ್ಥಾನಗಳಲ್ಲೇ ಪ್ರಪ್ರಥಮವಾಗಿ ಸ್ಥಾಪಿಸಲ್ಪಟ್ಟ ಈ ವಿಶ್ವವಿದ್ಯಾಲಯದ ಪ್ರಥಮ ಉಪಕುಲಪತಿಗಳು ರಾಜಮಂತ್ರ ಪ್ರವೀಣ ಎಚ್.ವಿ. ನಂಜುಂಡಯ್ಯ (1916–20)ನವರು. ಸ್ಥಾಪನೆಯಾದ ಎರಡೇ ವರ್ಷದಲ್ಲಿ ನಡೆದ ಮೊಟ್ಟ ಮೊದಲನೆಯ ಘಟಿಕೋತ್ಸವದಲ್ಲಿ (convocation) ಪದವಿ ಪ್ರದಾನ ಮಾಡಲು ಆಗಮಿಸಿದ್ದ

ಮೈಸೂರು ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಕುಲಪತಿ ಸ್ಥಾನದಲ್ಲಿ ನಿಂತು ಪದವಿಪತ್ರಗಳನ್ನು ವಿತರಣೆ ಮಾಡಿದ ನಂತರ ತಮ್ಮ ಘಟಿಕೋತ್ಸವದ ಭಾಷಣದಲ್ಲಿ ವಿಶ್ವವಿದ್ಯಾಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗಳಿಗೂ ಪ್ರಸರಿಸಿ ಸಮಸ್ತ ಜನರ ಹೃದಯವನ್ನು ಬೆಳಗಿಸಿ ಪ್ರಜ್ಞಾವಂತರಾಗಲು ಕಾರಣವಾಗಬೇಕು ಎಂದು ಹೇಳಿದರು. ಅವರ ಅರ್ಥಗರ್ಭಿತವಾದ ಮಾತು ಗ್ರಾಮೀಣ ಜನಗಳ ಬಗ್ಗೆ ಅವರಿಗೆ ಇದ್ದ ಔದಾರ್ಯವನ್ನು ತೋರಿಸುತ್ತದೆ. 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿ ಅಲ್ಲಿಯವರೆಗೆ ಮದರಾಸು ವಿಶ್ವವಿದ್ಯಾನಿಲಯದ ಮನ್ನಣೆ ಪಡೆದು ಅದಕ್ಕೆ ಸೇರಿದ್ದ ಕಾಲೇಜುಗಳನ್ನು ಮೈಸೂರು ವಿಶ್ವವಿದ್ಯಾನಿಲಯ ವಹಿಸಿಕೊಂಡಿತು. 1919ರಲ್ಲಿ ವಿಶ್ವವಿದ್ಯಾನಿಲಯದ ಎಂಟ್ರೆನ್ಸ್ ತರಗತಿಯೂ ಅನಂತರ ಮೂರು ವರ್ಷಗಳ ಪದವಿ ಶಿಕ್ಷಣವೂ ಆರಂಭವಾಯಿತು. ಆ ಉದ್ದೇಶದಿಂದ ಕೆಲವು ಪ್ರೌಢಶಾಲೆಗಳನ್ನು ಉನ್ನತಗೊಳಿಸಲಾಯಿತು. 1939ರಲ್ಲಿ ಮಾಡಿದ ಕಾಯಿದೆಯ ತಿದ್ದುಪಡಿಯಿಂದಾಗಿ ರಾಜ್ಯದೊಳಗಿನ ಸಂಸ್ಥೆಗಳನ್ನು ತನ್ನ ಅಧಿಕಾರ ವ್ಯಾಪ್ತಿಗೊಳಪಡಿಸಿಕೊಳ್ಳಲಾಯಿತು.

ಇದರಿಂದಾಗಿ ಬೆಂಗಳೂರಿನ ಕಂಟೋನ್ಮೆಂಟಿನ ಕಾಲೇಜುಗಳು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರುವಂತಾಯಿತು. 20ನೆಯ ಶತಮಾನದ ಪ್ರಾರಂಭದಲ್ಲಿ ಅಂದರೆ 1904–05ರ ಸಮಯದಲ್ಲಿ ಪ್ರಾಥಮಿಕ ಶಾಲೆಗಳಿಂದ ಹಿಡಿದು ಕಾಲೇಜು ಹಂತದವರೆಗಿನ ವಿದ್ಯಾ ಕೇಂದ್ರಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ.

ಶಾಲಾ/ಕಾಲೇಜುಗಳು	ವಿದ್ಯಾರ್ಥಿಗಳ	ವಿದ್ಯಾರ್ಥಿನಿಯರ	ಒಟ್ಟು
	ಸಂಖ್ಯೆ	ಸಂಖ್ಯೆ	
ಪ್ರಾಥಮಿಕ ಶಾಲೆಗಳು	1689	711	2,400
ಮಾಧ್ಯಮಿಕ ಶಾಲೆಗಳು	213	217	430
ಪ್ರೌಢ ಶಾಲೆಗಳು	13	14	27
ಮಹಾ ವಿದ್ಯಾಲಯ (ಕಾಲೇಜುಗಳು)	7	6	13

ಈ ಮೇಲ್ಕಂಡ ವರ್ಷದಲ್ಲಿ ಮೈಸೂರು ಪ್ರಾಂತ್ಯದಲ್ಲಿ ಅತ್ಯಂತ ಹೆಚ್ಚು ಶಾಲೆಗಳು ಎಂದರೆ 382 ಶಾಲೆಗಳಿದ್ದವು. ಬೆಂಗಳೂರಿನಲ್ಲಿ 350 ಶಾಲೆಗಳಿದ್ದವು. ಕೋಲಾರದಲ್ಲಿ 283. ತುಮಕೂರಿನಲ್ಲಿ 267 ಶಾಲೆಗಳಿದ್ದವು. 1906–07ರಲ್ಲಿ

ಸಾರ್ವಜನಿಕ ಶಾಲೆಗಳು 2271 ರಿಂದ 2279ಕ್ಕೇರಿದವು. ಆದರೆ ಶಾಲೆಗೆ ಸೇರಿದ ಮಕ್ಕಳು ಶಾಲೆ ಬಿಡಲು ಪ್ರಾರಂಭಿಸಲಾಗಿ ಅದೇ ವರ್ಷ 1,00,655 ರಿಂದ 98,209ಕ್ಕಿಳಿಯಿತು. ಅದೇ ರೀತಿ ಖಾಸಗಿ ಶಾಲೆಗಳ ಸಂಖ್ಯೆ 1822ರಿಂದ 1645ಕ್ಕಿಳಿಯಿತು. ರಾತ್ರಿ ಶಾಲೆಗಳು, ನಾರ್ಮಲ್ ಶಾಲೆಗಳು, ಶಿಕ್ಷಕರ ತರಬೇತಿ ಶಾಲೆಗಳು, ಮಿಷನರಿ ಶಾಲೆಗಳು ಪ್ರಾರಂಭವಾದವು. 1906-07ರಲ್ಲಿ 24 ವಿದ್ಯಾರ್ಥಿ ನಿಲಯಗಳಿದ್ದು ಅವುಗಳಲ್ಲಿ 10 ಸರ್ಕಾರದ ನಿಯಂತ್ರಣದಲ್ಲಿದ್ದವು. 2 ಅನುದಾನ-ಗೊಂಡಿದ್ದವು. 12 ಖಾಸಗಿ ಅನುದಾನರಹಿತ ವಿದ್ಯಾರ್ಥಿನಿಲಯಗಳಾಗಿದ್ದವು.

ಮೈಸೂರು, ಆಳರಸರ ಕೇಂದ್ರ ಸ್ಥಾನವು ರಾಜಧಾನಿಯಾಗಿದ್ದರೆ, ಬೆಂಗಳೂರು ಬ್ರಿಟೀಷರ ದಂಡು ಪ್ರದೇಶವಾಗಿತ್ತೆಂದು ಈ ಮೊದಲೇ ತಿಳಿಸಲಾಗಿದೆ. ಬೆಂಗಳೂರಿನ ಹಲಸೂರು ಸಮೀಪ ದಕ್ಷಿಣ ಭಾರತದಲ್ಲಿಯೇ ದೊಡ್ಡದಾದ ದಂಡು ಪ್ರದೇಶವನ್ನು 1809ರಲ್ಲಿ ಬ್ರಿಟಿಷರು ಸ್ಥಾಪಿಸಿದರು. ಕ್ರಿಶ್ಚಿಯನ್ ಮಿಷನರಿಗಳು, ಕೆಲವು ಸಂಘ ಸಂಸ್ಥೆಗಳು, ಅಂದಿನ ಸರ್ಕಾರವು ಕೆಲವಾರು ಶಾಲಾಕಾಲೇಜುಗಳನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದವು. ಅವುಗಳಲ್ಲಿ ಗುಡ್ ಷಪರ್ಡ್ ಸ್ಕೂಲ್ ಫಾರ್ ಗರ್ಲ್ಸ್ 1855, ಸೇಂಟ್ ಜಾನ್ ಸ್ಕೂಲ್ 1856, ಸೆಂಟ್ರಲ್ ಕಾಲೇಜು 1858, ಬಿಷಪ್ ಕಾಟನ್ ಬಾಲಕರ ಶಾಲೆ 1868, ಬಾಲ್ಡ್‌ವಿನ್ ಬಾಲಕರ ಶಾಲೆ 1880, ಸೆಂಟ್ ಜೋಸಫ್ ಪ್ರೌಢಶಾಲೆ 1880, ಆರ್.ಬಿ.ಎ.ಎನ್.ಎಂ.ಎಸ್. ಹೈಸ್ಕೂಲು 1872, ಫೋರ್ಟ್‌ಸ್ಕೂಲ್ 1905, ನ್ಯಾಷನಲ್ ಹೈಸ್ಕೂಲು 1917 ಇನ್ನೂ ಮುಂತಾದವು.

ಒಕ್ಕಲಿಗ ಜನಾಂಗ ಮತ್ತು ಶಿಕ್ಷಣ

ಒಂದು ನೂರು ವರ್ಷಗಳ ಹಿಂದೆ ಮೈಸೂರು ಸಂಸ್ಥಾನದಲ್ಲಿ ಒಕ್ಕಲಿಗರು ಬಹುಸಂಖ್ಯಾತರಾಗಿದ್ದರೂ ಕೂಡ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಿರಲಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಅವುಗಳೆಂದರೆ ಬಡತನ, ನಿರುದ್ಯೋಗ, ಅಂಧಕಾರ ಅಥವಾ ಅಜ್ಞಾನ ಮತ್ತು ಸಮಾಜದ ಮೇಲ್ವರ್ಗದ ಜನರ ತಾತ್ಸಾರ ಇವೇ ಮುಂತಾದವು.

ಅ) ಬಡತನ : ಒಕ್ಕಲುತನವನ್ನೇ ನಂಬಿದ್ದ ಈ ಜನ ತಿಳುವಳಿಕೆಯ ಕೊರತೆ ಮತ್ತು ಹೊರಜಗತ್ತಿನ ಅರಿವಿಲ್ಲದೆ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿರಲಿಲ್ಲ. ಈ ಮೇಲೆ ತಿಳಿಸಿರುವಂತೆ ಆಳರಸರು, ಬ್ರಿಟಿಷರು, ಕ್ರೈಸ್ತ ಮಿಷನರಿಗಳು, ಸಂಘ ಸಂಸ್ಥೆಗಳು ಎಷ್ಟೋ ಶಾಲೆ ಕಾಲೇಜುಗಳನ್ನು ತೆಗೆದರು. ಆ ದಿನಗಳಲ್ಲಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟು ಹೊಡೆಯುತ್ತಿದ್ದ ಕಾರಣವೇನೆಂದರೆ ಬಡತನ. ಎಮ್ಮೆ, ಕುರಿ, ದನ ಕಾಯ್ದು ಬಂದರೆ ಅದೇ ತಮ್ಮ ದಿನದ ಸಂಪಾದನೆ.

ಶಾಲೆಗೆ ಕಳುಹಿಸುವುದರಿಂದ ತಮ್ಮ ಹೊಲ, ಗದ್ದೆಯಲ್ಲಿ ಕೆಲಸ ಮಾಡಲು, ದನ ಕಾಯಲು ಯಾರೂ ಸಿಗುವುದಿಲ್ಲವೆಂದು ಇದ್ದಿತು. ಉದಾ: ದೇ. ಜವರೇಗೌಡರವರ ಸಹಾಯಕ್ಕೆ ಹೆಚ್. ಕೆ. ವೀರಣ್ಣಗೌಡರು ಬರದಿದ್ದರೆ ಜನಾಂಗ ಒಂದು ಅಮೂಲ್ಯ ರತ್ನವನ್ನು ಕಳೆದುಕೊಳ್ಳುತ್ತಿತ್ತು. (ಚಿತ್ರಗುಪ್ತ ಸ್ಮರಣ ಸಂಚಿಕೆ). ಇಷ್ಟೇ ಅಲ್ಲದೆ ಅಂದಿನ ಕಾಲದಲ್ಲಿ ಬಡತನವೆಷ್ಟಿತ್ತೆಂದರೆ ಶಾಲೆ ಫೀಜು ಕೊಡಲು ಸಾಧ್ಯವಾಗದೆ ಹಾಗೂ ಪರೀಕ್ಷೆಗೆ ಹಣ ಕಟ್ಟಲು ಸಾಧ್ಯವಾಗದೆ ಬವಣೆ ಪಡುತ್ತಿದ್ದುದನ್ನು ನಾವು ಕಾಣಬಹುದು. ಉದಾಹರಣೆಗೆ ಬಿ. ಪುಟ್ಟಯ್ಯನಂತಹವರು ಪರೀಕ್ಷೆಗೆ ಹಣ ಕಟ್ಟಲಾಗದೆ ಬವಣೆ ಪಟ್ಟಿದ್ದನ್ನು ನೋಡಿದರೆ (ಡಾ॥ ಬಿ.ಪಿ. ರಾಧಾಕೃಷ್ಣ ನನ್ನ ತಂದೆ, ಪುಟ–132) ಅಂದು ಶ್ರೀ ಸಾಮಾನ್ಯನ ಗತಿ ಹೇಗಿರಬೇಡ?

ಆ) ನಿರುದ್ಯೋಗ : ಒಂದೆಡೆ ಬ್ರಿಟಿಷರ, ಮತ್ತೊಂದೆಡೆ ಆಳರಸರ ಹಾಗೂ ಬ್ರಾಹ್ಮಣರ ಉಪಟಳದಿಂದ ಅಲ್ಪ ಸ್ವಲ್ಪ ಓದಿದ ಒಕ್ಕಲು ಮಕ್ಕಳಿಗೆ ಉದ್ಯೋಗ ಸಿಗುವ ಭರವಸೆಯಿರಲಿಲ್ಲ. ಸಿಕ್ಕಿದರೂ ಅವರ ವಿದ್ಯೆಗೆ ತಕ್ಕ ಉದ್ಯೋಗ ಸಿಗುತ್ತಿರಲಿಲ್ಲ. ಉದಾಹರಣೆಗೆ ಚನ್ನಿಗಪ್ಪನವರಿಗಾದ ಅನ್ಯಾಯ (ನನ್ನ ತಂದೆ – ಬಿ.ಪಿ.ರಾಧಾಕೃಷ್ಣ)

ಇ) ಅಂಧಕಾರ ಅಥವಾ ಅಜ್ಞಾನ : ಓದಿ ಏನಾಗಬೇಕು? ಕಾಲ ಕಾಲಕ್ಕೆ ಮಳೆ ಬೆಳೆ ಆದರೆ ಸಾಕು. ಸರ್ಕಾರದಲ್ಲಿ ಜವಾನ್ ಚಾಕರಿಗೆ ಹೋಗಬೇಕೆ? ಎಂಬಿತ್ಯಾದಿ ಕುಹಕದ ಮಾತನ್ನಾಡುತ್ತಿದ್ದರು.

ಈ) ಮೇಲ್ವರ್ಗದವರ ತಾತ್ಸಾರ ಹಾಗೂ ಬ್ರಾಹ್ಮಣರ ಉಪಟಳ : ಅಂದು ಜವಾನನ ಚಾಕರಿಯಿಂದ ದಿವಾನನ ಚಾಕರಿಯವರೆಗೂ ಸರ್ಕಾರದ ಎಲ್ಲಾ ರಂಗಗಳಲ್ಲೂ ತುಂಬಿದ್ದ ಬ್ರಾಹ್ಮಣರು ಸುಶೀಕ್ಷಿತ ಬ್ರಾಹ್ಮಣೇತರರಿಗೆ ಅವಕಾಶವನ್ನು ನೀಡುತ್ತಿರಲಿಲ್ಲ. ಉದಾಹರಣೆಗೆ 1881ರಲ್ಲಿ ಮೈಸೂರಿನ ದರ್ಬಾರ್ ಬಕ್ಷಿಯಾಗಿದ್ದ ನರಸಿಂಹ ಅಯ್ಯಂಗಾರ್ ಎಂಬುವವರು ಮೇಲ್ಜಾತಿಯವರ ಹೆಣ್ಣು ಮಕ್ಕಳಿಗೆ ಅನುಕೂಲವಾಗಲೆಂದು ಮೈಸೂರಿನಲ್ಲಿ ಒಂದು ಬಾಲಕಿಯರ ಶಾಲೆಯನ್ನು ತೆರೆದರು. ಇದು ಬ್ರಾಹ್ಮಣೇತರರ ವಿರೋಧಕ್ಕೆ ಗುರಿಯಾಯಿತು. ಹೀಗೆ ಇವೇ ಮುಂತಾದ ಕಾರಣಗಳಿಂದಾಗಿ ಒಕ್ಕಲಿಗ ಜನಾಂಗದಲ್ಲಿ ಹಿಂದೆ ಶಿಕ್ಷಣಕ್ಕೆ ಮಹತ್ವ ಕೊಡುತ್ತಿರಲಿಲ್ಲ. ಇದರ ಜೊತೆಗೆ ಅಂದು ತಂದೆ ತಾಯಿಯರಿಗೆ 10ರಿಂದ 12 ಜನ ಮಕ್ಕಳಿರುತ್ತಿದ್ದರು. ಅಲ್ಲದೆ ಅವಿಭಕ್ತ ಕುಟುಂಬಗಳ ವ್ಯವಸ್ಥೆ ಸರ್ವೇ ಸಾಮಾನ್ಯ–ವಾಗಿದ್ದಿತು. ಒಟ್ಟು ಕುಟುಂಬದಲ್ಲಿ ಒಬ್ಬರಿಗೆ ಶಿಕ್ಷಣ ಕೊಡಿಸುವುದು ಮತ್ತೊಬ್ಬರಿಗೆ ಕೊಡಿಸದಿರುವುದು ಪಕ್ಷಪಾತವಾದೀತೆಂಬ ಭಯ ಕೂಡ ಅವರನ್ನು ಕಾಡುತ್ತಿದ್ದಿತು. ಇಷ್ಟೇ ಅಲ್ಲದೆ ಶಾಲಾ ಕಾಲೇಜುಗಳು ಇಂದಿನಂತೆ ಮನೆಯ ಹತ್ತಿರವೇ ಇರುತ್ತಿರಲಿಲ್ಲ. ಬಹಳ ದೂರದ ಊರುಗಳಿಗೆ ಹೋಗಿ ಕಲಿತು ಬರಬೇಕಾಗಿದ್ದಿತು.

ಇಂತಹ ಪರ್ವಕಾಲದಲ್ಲಿ ಬೆಂಗಳೂರಿನಂತಹ ದೊಡ್ಡ ಪಟ್ಟಣದಲ್ಲಿ ಒಕ್ಕಲು ಮಕ್ಕಳು ವ್ಯಾಸಂಗ ಮಾಡಲು ಅನುಕೂಲವಾದ ವಿದ್ಯಾರ್ಥಿ ನಿಲಯಗಳಿರಲಿಲ್ಲ. ಅಂತಹ ಸಮಯದಲ್ಲಿ ಎಂದರೆ 1906ರಲ್ಲಿ ಒಕ್ಕಲಿಗರ ವಿದ್ಯಾರ್ಥಿನಿಲಯ ಬೆಂಗಳೂರಿನಲ್ಲಿ ಪ್ರಾರಂಭಗೊಂಡಿದ್ದರಿಂದ ಬೆಂಗಳೂರಿನಂತಹ ಪಟ್ಟಣದಲ್ಲಿ ಉಳಿದುಕೊಳ್ಳಲು ಸಹಾಯವಾಯಿತು. ಸುಮಾರು 60 ವರ್ಷಗಳ ಕಾಲ ಸಂಘವು ವಿದ್ಯಾರ್ಥಿ ನಿಲಯ ಮತ್ತು ಒಕ್ಕಲಿಗರ ಪತ್ರಿಕೆಯನ್ನು ನೋಡಿಕೊಳ್ಳುತ್ತಿದ್ದಿತು. ಕಾಲಾನಂತರ ತನ್ನ ನಿವೇಶನದಲ್ಲಿ ಒಂದೊಂದಾಗಿ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸತೊಡಗಿತು. 1966ರಲ್ಲಿ ಪ್ರಥಮ ಬಾರಿಗೆ ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಕಾಲೇಜು ಪ್ರಾರಂಭಗೊಂಡಿತು. ನಂತರ ಹಲವಾರು ಶಾಲಾ ಕಾಲೇಜುಗಳ ಸಮೂಹವಾಗಿ ಮಾರ್ಪಟ್ಟಿತು. ಇಂದು ಒಂದು ಸ್ವತಂತ್ರ ವಿಶ್ವವಿದ್ಯಾಲಯವಾಗಲು ಅರ್ಹವಾಗಿದ್ದು ಸಂಘವು ಸ್ಥಾಪಿಸಿದ ಶಾಲಾ ಕಾಲೇಜುಗಳ ಪಟ್ಟಿ ಈ ಕೆಳಕಂಡಂತಿದೆ:

ಹೀಗೆ ಒಕ್ಕಲಿಗರ ಸಂಘವು ಇಂದಿಗೆ 100 ವರ್ಷಗಳ ಹಿಂದೆ ಎಂದರೆ 1906ರಲ್ಲಿ ಸ್ಥಾಪನೆಯಾಗಿ ಒಕ್ಕಲಿಗ ಸಮುದಾಯ ಮಾತ್ರವೇ ಅಲ್ಲ ಹಿಂದುಳಿದ ವರ್ಗಗಳ ಏಳಿಗೆಗೆ ಅದರಲ್ಲೂ ವಿಶೇಷವಾಗಿ ಶಿಕ್ಷಣ ದಾಸೋಹಕ್ಕೆ ಸಾಕಷ್ಟು ಕೊಡುಗೆ ನೀಡಿದೆ. ಇದರ ಪ್ರಭಾವದಿಂದಾಗಿ ನಾಡಿನಾದ್ಯಂತ ಒಕ್ಕಲಿಗರ ಸಮುದಾಯದ ಸಂಘ-ಸಂಸ್ಥೆಗಳು, ಶಿಕ್ಷಣ-ಸಂಸ್ಥೆಗಳು, ವಿದ್ಯಾರ್ಥಿನಿಲಯಗಳು ತಲೆ ಎತ್ತಲಾಗಿ ಹಿಂದುಳಿದ ವರ್ಗಗಳು ಸಾಮಾಜಿಕ-ರಾಜಕೀಯವಾಗಿ, ಸಾಂಸ್ಕೃತಿಕವಾಗಿ ತಲೆ ಎತ್ತಲು ಕಾರಣವಾಯಿತು. ಈ ಜನಾಂಗ ಸಮಾಜದ ಮುಖ್ಯವಾಹಿನಿಗೆ ಸೇರಲು ಇದು ಬಹಳಷ್ಟು ನೆರವಾಯಿತು.

□

ಒಕ್ಕಲಿಗರ ಪತ್ರಿಕೆ, ಹುಟ್ಟು ಮತ್ತು ಬೆಳವಣಿಗೆ

ಭಾರತದಲ್ಲಿ ಪತ್ರಿಕೋದ್ಯಮ ರೋಚಕವಾದ ಇತಿಹಾಸವನ್ನೊಳಗೊಂಡಿದೆ. ಬ್ರಿಟಿಷ್ ಪತ್ರಿಕೋದ್ಯಮಿಗಳಾದ ಜೇಮ್ಸ್ ಅಗಸ್ಟ್ ಹಿಕಿ, ಡ್ಯುಯನ್ ಮತ್ತು ಬಕ್ಕಿಂಗ ಹ್ಯಾಮ್ ಇನ್ನೂ ಮುಂತಾದವರು ಭಾರತಕ್ಕೆ ಬಂದು ಪತ್ರಿಕೋದ್ಯಮಕ್ಕೆ ಭದ್ರವಾದ ಬುನಾದಿಯನ್ನು ಹಾಕಿದರು. ಕಾಲಾನಂತರ ಭಾರತೀಯ ಭಾಷಾ ಪತ್ರಿಕೆಗಳು ತಲೆ ಎತ್ತಿದವು. ಈ ನಿಟ್ಟಿನಲ್ಲಿ ಕರ್ನಾಟಕವು ಹಿಂದೆ ಬೀಳಲಿಲ್ಲ. ಕನ್ನಡ ಭಾಷೆಯಲ್ಲಿ ಪತ್ರಿಕೆಗಳು ಹೊರಬಂದವು. ಅವುಗಳಲ್ಲಿ ಪ್ರಪ್ರಥಮ ಕನ್ನಡ ಪತ್ರಿಕೆ ಎಂದರೆ ಬಾಸಲ್ ಮಿಷನ್‌ನ ಮೊಗ್ಲಿಂಗ್ ಸಂಪಾದಕತ್ವದ **"ಮಂಗಳೂರು ಸಮಾಚಾರ ಪತ್ರಿಕೆ"** (ಪಾಕ್ಷಿಕ). ಈ ಪತ್ರಿಕೆಯು 1843-44ರಲ್ಲಿ ಹೊರಬಿದ್ದಿತು. ನಂತರ 1844ರಲ್ಲಿ ಬಳ್ಳಾರಿಯಿಂದ **"ಕನ್ನಡಸಮಾಚಾರ"**, ಬೆಂಗಳೂರಿನಿಂದ **"ಅರುಣೋದಯ"**, **"ಮೈಸೂರು ವೃತ್ತಾಂತ ಬೋಧಿನಿ"**, **"ವಿದ್ಯಾವಾಹಿನಿ"** ಇನ್ನೂ ಮುಂತಾದ ಪತ್ರಿಕೆಗಳು ತಲೆ ಎತ್ತಿದೆವು.

ಪತ್ರಿಕೆಗಳು ಅಂದಿನ ಸಮಾಜ, ಸರ್ಕಾರವನ್ನು ಪ್ರತಿಬಿಂಗಿಸುವ ಪ್ರಚಾರ ಮಾಧ್ಯಮವಾಗಿದ್ದುದರಿಂದ ತಮ್ಮ ಜನಾಂಗದ ಜನರನ್ನು ಪ್ರೋತ್ಸಾಹಿಸುವ ಹಾಗೂ ತಮ್ಮ ಧ್ಯೇಯೋದ್ದೇಶಗಳನ್ನು ಸಮಾಜಕ್ಕೂ, ಸರ್ಕಾರಕ್ಕೂ ತಿಳಿಸುವ ಉದ್ದೇಶದಿಂದ ತಮ್ಮದೇ ಆದ ಪತ್ರಿಕೆಯೊಂದಿದ್ದರೆ ಹೇಗೆ ಎಂದು ಕೆ.ಹೆಚ್. ರಾಮಯ್ಯನವರು ಮತ್ತು ಬಿ. ಪುಟ್ಟಯ್ಯನವರು ಯೋಚಿಸಿದರು. ರಾಮಯ್ಯ ಮತ್ತು ಪುಟ್ಟಯ್ಯನವರು ಕೇವಲ ಸ್ನೇಹಿತರು ಮಾತ್ರವಲ್ಲ ಸಂಬಂಧಿಕರೂ ಆಗಿದ್ದರು. ಇವರು ಒಮ್ಮೆ "ನಮ್ಮ ಜನಾಂಗದವರು ಒಕ್ಕಲುತನವನ್ನೇ ನಂಬಿರುವ ಜನ ಆದುದರಿಂದ ವ್ಯವಸಾಯ, ಪಶುಸಂಗೋಪನೆ, ಕೃಷಿಗೆ ಸಂಬಂಧಿಸಿದ ಮಾಹಿತಿ ನೀಡುವುದು, ನಮ್ಮ ಸಮಾಜವನ್ನು ಎಚ್ಚರಿಸುವುದು ಹಾಗೂ ಸರ್ಕಾರಕ್ಕೆ ರೈತರ ಕಷ್ಟಸುಖಗಳನ್ನು ಸಿಳಿಸಲು ನಮ್ಮ ಸಂಘದ ವತಿಯಿಂದ **"ಒಕ್ಕಲಿಗೆ ಪತ್ರಿಕೆ"** ಎಂಬ ಪತ್ರಿಕೆಯನ್ನು ಪ್ರಾರಂಭಿಸೋಣ" ಎಂದು ತೀರ್ಮಾನಿಸಿದರು. ಅಂದು ತಮ್ಮ ಪತ್ರಿಕೆಗೆ ಒಕ್ಕಲಿಗರ

ಪತ್ರಿಕೆ ಎಂಬ ಹೆಸರಿಡಲು ಕಾರಣವೇನೆಂದರೆ ಒಕ್ಕಲುತನ ಮಾಡುವ ಸಮಸ್ತ ಜನಗಳಿಗೆ ಅನುಕೂಲವಾಗಲೆಂದೇ ವಿನಃ ಜಾತಿ ಸೂಚಕ ಪತ್ರಿಕೆಯನ್ನು ಹೊರತರುವ ಉದ್ದೇಶದಿಂದಲ್ಲ.

ರಾಮಯ್ಯನವರು ಪುಟ್ಟಯ್ಯನವರನ್ನು ಕುರಿತು "ಏನಯ್ಯ ನಾನು ಉತ್ಸವ ಮೂರ್ತಿಯಾದರೆ ನೀನು ಪೂಜಾ ಮೂರ್ತಿ. ಒಂದಿಲ್ಲದಿದ್ದರೆ ಮತ್ತೊಂದು ಶೋಭಿಸುವುದಿಲ್ಲ, ಸಂಘ ಉದ್ದಾರವಾಗಬೇಕಾದರೆ ಎರಡೂ ಇರಬೇಕು. ನಾವಂತು ಒಕ್ಕಲಿಗೆ ಪತ್ರಿಕೆಯನ್ನು ಹೊರಡಿಸಬೇಕೆಂದಿದ್ದೇವೆ. ನೀನು ಪತ್ರಿಕೆ ಕೆಲಸವನ್ನೂ ಹಾಗೂ ಸಂಘದ ಕೆಲಸವನ್ನೂ ವಹಿಸಿಕೊಂಡುಬಿಡು. ಸರ್ಕಾರಿ ನೌಕರಿ ನಿನ್ನ ಯೋಗ್ಯತೆಗೆ ತಕ್ಕಂತೆ ಸಿಗುವುದಿಲ್ಲ. ಸಂಘದಲ್ಲಿ ದುಡಿದರೆ ಹಾಗೂ ಕುಲಜನರ ಸೇವೆ ಮಾಡಿದರೆ ಆತ್ಮ ಸಂತೋಷ ಉಂಟಾಗುತ್ತದೆ" ಎಂದು ಹೇಳಿದರು. ಇದಕ್ಕೆ ಸಹಮತ ಸೂಚಿಸಿದ ಪುಟ್ಟಯ್ಯನವರು ಸಂಘದ ಹಾಗೂ ಪತ್ರಿಕೆಯ ಜವಾಬ್ದಾರಿ ಹೊರಲು ಯೋಜನೆಯನ್ನು ರೂಪಿಸಿದರು. ಪತ್ರಿಕೆಯ ಪ್ರಕಟಣೆಗೆ ಎಲ್ಲ ಸಜ್ಜಾಯಿತು.

ಒಕ್ಕಲಿಗರ ಪತ್ರಿಕೆಯ ಮೊದಲನೆಯ ಸಂಚಿಕೆ 1907 ಮಾರ್ಚಿ 15 ರಂದು ಯುಗಾದಿ ಹಬ್ಬದ ದಿನ ಅರಳೇಪೇಟೆಯಿಂದ ಪ್ರಕಟವಾಯಿತು. ಒಕ್ಕಲಿಗರ ಪತ್ರಿಕೆಯನ್ನು ಆಗಿನ ಬೆಂಗಳೂರಿನ ಕೋಟೆಯಲ್ಲಿ 'ಸ್ಟಾಂಡರ್ಡ್' ಮತ್ತು 'ನಡೆಗನ್ನಡಿ' ಎಂಬ ಪತ್ರಿಕೆಗಳನ್ನು ಪ್ರಕಟಿಸುತ್ತಿದ್ದ ಶ್ರೀನಿವಾಸ ಅಯ್ಯಂಗಾರ್ ಮುದ್ರಣಾಲಯದಲ್ಲಿ ಅಚ್ಚು ಹಾಕಿಸಲು ಏರ್ಪಾಡು ಮಾಡಿದರು. ಸುಮಾರು ಒಂದೂವರೆ ವರ್ಷ ಬಿ. ಪುಟ್ಟಯ್ಯನವರು ಪತ್ರಿಕೆಯ ವಿಷಯಗಳನ್ನೆಲ್ಲ ತಾವೇ ಬರೆದು, ಅಚ್ಚು ಹಾಕಿಸಿ ಅದಕ್ಕೆ ಸಂಬಂಧಪಟ್ಟ ಪತ್ರ ವ್ಯವಹಾರಗಳು ಇತ್ಯಾದಿ ಸಮಸ್ತ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು.

ಪತ್ರಿಕೆಯು ದಿನಕಳೆದಂತೆ ಉಯೋನ್ಮುಖ ಸೂರ್ಯನಂತೆ ಪ್ರಕಾಶಮಾನ-ವಾಗಿ ಬೆಳಗತೊಡಗಿತು. ಸ್ವತಂತ್ರವಾಗಿ ಪತ್ರಿಕೆಯನ್ನು ಹೊರಡಿಸಲು ಸಕಲ ಸಿದ್ಧತೆಯನ್ನು ಮಾಡಿಕೊಂಡರು. ಉರಿಗದ ಬೈಯಣ್ಣನವರು ಮತ್ತು ನೀಲಗಿರಿ ರಂಗೇಗೌಡರ ಪರಿಶ್ರಮ ಮತ್ತು ಉದಾರ ಮನೋಭಾವದಿಂದಾಗಿ ಮುದ್ರಣಾಲಯದ ಸ್ಥಾಪನೆಯ ಮಹೋತ್ಸವವು 15-03-1907 ರಂದು ದಿವಾನ್ ಶ್ರೀ ವಿ.ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಬೈಯಣ್ಣನವರ ಅರಳೇಪೇಟೆಯ ಮನೆಯಲ್ಲಿ ನೆರವೇರಿತು. ಮುದ್ರಣಾಲಯವನ್ನು ಸ್ಥಾಪಿಸುವ ವಿಚಾರದಲ್ಲಿ ಬೈಯಣ್ಣನವರು ಆಗಿನ ಸರ್ಕಾರಿ ಮುದ್ರಣಾಲಯದ ಸೂಪರಿಂಡೆಂಟರಾಗಿದ್ದ ಮಿ. ಏಟ್ಸರವರ ಮನೆಗೆ ಹೋಗಿ ಅವರಿಂದ ಅನೇಕ ಸಲಹೆ ಸೂಚನೆಗಳನ್ನು ಪಡೆದು ಉತ್ತಮವಾದ ಮುದ್ರಣ ಸಾಮಾಗ್ರಿಗಳನ್ನು ತರಿಸಿಕೊಟ್ಟರು.

ಕೆಲವು ವರ್ಷಗಳ ನಂತರ 1923ರಲ್ಲಿ ಪತ್ರಿಕಾ ಕಾರ್ಯಾಲಯವು ವಿಶ್ವೇಶ್ವರಪುರದ ಒಕ್ಕಲಿಗರ ಸಂಘದ ಮುದ್ರಣಾಲಯಕ್ಕೆ ಸ್ಥಳಾಂತರಗೊಂಡಿತು. ಮೊದಲು ನಾಲ್ಕು ಪುಟಗಳ ಅಗಲ ಹಾಗೂ ಉದ್ದನೆಯ ಕಪ್ಪು ಬಿಳುಪಿನಿಂದ ಕೂಡಿದ ಒಕ್ಕಲಿಗರ ಪತ್ರಿಕೆಯು ವಾರಪತ್ರಿಕೆಯಾಗಿ ಹೊರಹೊಮ್ಮಿ ಜನರ ಕೈಸೇರುತ್ತಿತ್ತು. ಪತ್ರಿಕೆಯು ನಾಡಿನ ಪ್ರಬಲ ಕೋಮಿನ ಪತ್ರಿಕೆಯಾದ್ದರಿಂದ ಹೆಚ್ಚಜನ ಕೊಂಡು ಓದುತ್ತಿದ್ದರು. ಅಂದಿನ ಕಾಲದಲ್ಲಿ ಹಲವಾರು ಪತ್ರಿಕೆಗಳು ತಮ್ಮ ತಮ್ಮ ಜಾತಿಯ, ಕೋಮಿನ, ಧರ್ಮಕ್ಕೆ ಸಂಬಂಧಿಸಿದ ಪತ್ರಿಕೆಗಳಾಗಿದ್ದರೂ ನೇರವಾಗಿ ಜಾತಿ ಇಲ್ಲವೆ ಜನಾಂಗದ ಹೆಸರನ್ನು ಹೊಂದಿರಲಿಲ್ಲ. ಆದರೆ ತೆರೆಯಮರೆಯಲ್ಲಿ ತಮ್ಮ ಹಿತಾಸಕ್ತಿಗಳನ್ನು ನೆರವೇರಿಸಿಕೊಳ್ಳುತ್ತಿದ್ದವು. ಆದರೆ ಒಕ್ಕಲಿಗರ ಪತ್ರಿಕೆಯು ಒಂದು ಜಾತಿ ಅಥವಾ ಜನಾಂಗದ ಹೆಸರನ್ನು ನೇರವಾಗಿ ಹೊಂದಿದ್ದರೂ ಕೇವಲ ಜಾತಿಯ ಇಲ್ಲವೇ ಜನಾಂಗದ ವಿಷಯವನ್ನು ಮುಖವಾಣಿಯಾಗಿ ಹೊಂದಿರಲಿಲ್ಲ. ಪತ್ರಿಕೆಯು ಸಮಾಜ ಮತ್ತು ಸರ್ಕಾರವನ್ನು ಪ್ರತಿನಿಧಿಸುತ್ತಿತ್ತು. ಸಮಾಜದ ಮುಖ್ಯವಾಹಿನಿಯಲ್ಲಿ ಒಂದಾಗಿದ್ದಿತು. ಪತ್ರಿಕೆಯು ರಾಜ್ಯದ, ರಾಷ್ಟ್ರದ ಆಗುಹೋಗುಗಳನ್ನು, ರಾಜ್ಯ ಇಲ್ಲವೆ ರಾಷ್ಟ್ರಕ್ಕೆ ಬಂದೊದಗಿದ್ದ ಕಷ್ಟನಷ್ಟಗಳನ್ನು ಸಾರ್ವಜನಿಕರಿಗೆ, ತಮ್ಮ ಜನಾಂಗಕ್ಕೆ ತಿಳಿಯಪಡಿಸಿರುವ ಉದಾಹರಣೆಯಿದೆ. ನೆರೆಯ ರಾಷ್ಟ್ರವಾದ ಪಾಕಿಸ್ತಾನವು ಭಾರತದ ಮೇಲೆ ಆಕ್ರಮಣ ಮಾಡಿದಂತಹ ಸಮಯದಲ್ಲಿ ಪತ್ರಿಕೆಯು ತನ್ನ ಮುಖಪುಟದಲ್ಲಿ ರಾಷ್ಟ್ರರಕ್ಷಣೆಗೆ ಒಕ್ಕಲಿಗ ಜನಾಂಗವು ಉದಾರವಾಗಿ ಧನಸಹಾಯ ಮಾಡಬೇಕು ಎಂದು ಮನವಿ ಮಾಡಿತು. ಜನಾಂಗದ ರಾಜಕೀಯ ಧುರೀಣರಾದ ಹೆಚ್.ಕೆ. ವೀರಣ್ಣಗೌಡರು ಮತ್ತು ಅವರ ಪತ್ನಿಯವರಾದ ಶ್ರೀಮತಿ ತಾಯಮ್ಮ ವೀರಣ್ಣಗೌಡರು ತಮ್ಮ ಚಿನ್ನದ ಬಳೆಯನ್ನು ದಾನಮಾಡಿದರು. ಇವೇ ಮುಂತಾದ ವಿಷಯವನ್ನು ತನ್ನ ಜನಾಂಗ ಮತ್ತು ಸಾರ್ವಜನಿಕರನ್ನು ರಾಷ್ಟ್ರರಕ್ಷಣೆಗೆ ಪ್ರೇರೇಪಿಸಲು ಪತ್ರಿಕೆ ತನ್ನ ಮುಖ ಪುಟದಲ್ಲಿ ಮುಖ್ಯವಿಷಯವಾಗಿ ಪ್ರಕಟಿಸಿತು (ಒಕ್ಕಲಿಗರ ಪತ್ರಿಕೆ–1962).

ಒಕ್ಕಲಿಗರ ಪತ್ರಿಕೆಯು ಸುಮಾರು 65 ರಿಂದ 70 ವರ್ಷಗಳ ಸುದೀರ್ಘ ಇತಿಹಾಸವನ್ನೊಳಗೊಂಡಿದೆ. ಕಾಲಾನಂತರ ಪತ್ರಿಕೆಯ ಬೆಲೆ ಪ್ರತಿಯೊಂದಕ್ಕೆ ಒಂದು ಆಣೆಯಿಂದ, ಹತ್ತುಪೈಸೆಗೇರಿತು. ಪತ್ರಿಕೆಯ ಮೇಲ್ಭಾಗದಲ್ಲಿ ಒಕ್ಕಲಿಗರ ಪತ್ರಿಕೆ ಎಂದು ದಪ್ಪ ಅಕ್ಷರಗಳಿಂದ ಕೂಡಿತ್ತು. ಅದರ ನಡುವೆ ದಕ್ಷಿಣ ಭಾರತದ ನಕ್ಷೆಯ ಚಿತ್ರ, ದಕ್ಷಿಣ ಭಾರತದ ನಕ್ಷೆಯ ಮೇಲ್ಭಾಗದಲ್ಲಿ ಉದಿಸುತ್ತಿರುವ ಸೂರ್ಯನನ್ನು ಹೊಂದಿತ್ತು. ಇದು ದಕ್ಷಿಣ ಭಾರತಾದ್ಯಂತ ಹರಡಿರುವ ಒಕ್ಕಲು ಜನಾಂಗದ ಸಂಕೇತವಾಗಿತ್ತು. ಅದರ ಮೇಲ್ಭಾಗದಲ್ಲಿ ಚಿಕ್ಕದಾಗಿ ಪತ್ರಿಕಾಲಯ / ದೂರವಾಣಿ ಸಂಖ್ಯೆ, ಸ್ಥಾಪನೆ, ನೋಂದಣಿ ಸಂಖ್ಯೆಯನ್ನು ಅಚ್ಚು ಹಾಕಿಸುತ್ತಿತ್ತು. ಈ ಪತ್ರಿಕೆಯು

ಶ್ರೀ ಆದಿ ಚುಂಚನಗಿರಿ ಜಗದ್ಗುರುಗಳ ಆಗಮನದ ವಿಶೇಷ ಸಂಚಿಕೆ

ಸೋಮವಾರ 17-6-1968

PHONE No. 72319 ಸ್ಥಾಪನೆ 1907 Regd. B. C. 99

ಒಕ್ಕಲಿಗರ ಪತ್ರಿಕೆ

ಅಂಚೆ ವೆಚ್ಚ ಸೇರಿ
ವಾರ್ಷಿಕ ಚಂದಾ 8 ರೂ.

PROGRESSIVE KANNADA WEEKLY

ಬಿಡಿ ಪ್ರತಿಗೆ 10 ಪೈಸೆ
ಪುಟಗಳು 4

ಜಗದ್ಗುರು ಶ್ರೀ ಶ್ರೀ ಶ್ರೀ ರಾಮಾನಂದನಾಥ ಸ್ವಾಮಿಗಳವರು



ಜಗದ್ಗುರುಗಳಿಗೆ ಸುಸ್ವಾಗತ

ತನ್ನ ಹೆಸರಿನ ಕೆಳಭಾಗದಲ್ಲಿ ವಾರ್ಷಿಕ ಚಂದ ಎಷ್ಟು ಎಂತಲೂ ಅದರ ಪಕ್ಕದಲ್ಲಿ ಸಂಪಾದಕರ ಹೆಸರು, ಅದರ ಕೆಳಭಾಗದಲ್ಲಿ ಬೆಂಗಳೂರು ಒಕ್ಕಲಿಗರ ಸಂಘದಿಂದ ಹೊರಡುವ ಪ್ರಗತಿಪರ ಕನ್ನಡ ವಾರಪತ್ರಿಕೆಎಂದು ಅದರ ಪಕ್ಕದಲ್ಲಿ ಪುಟಗಳ ಸಂಖ್ಯೆ ಅದರ ಕೆಳಗೆ ಬಿಡಿಪ್ರತಿಯ ಬೆಲೆ ಇತ್ಯಾದಿಯನ್ನು ಪ್ರಕಟಿಸುತ್ತಿತ್ತು. ಅದರ ಕೆಳಭಾಗದಲ್ಲಿ ಸಂಪು ಸಂಖ್ಯೆ ಅದರ ಪಕ್ಕದಲ್ಲಿ ಬೆಂಗಳೂರು, ದಿನ, ವಾರ, ವರ್ಷ, ಸಂಚಿಕೆಯ ಸಂಖ್ಯೆಯನ್ನು ನಮೂದಿಸುತ್ತಿತ್ತು. (ಪತ್ರಿಕೆಯ ಪ್ರತಿಯನ್ನು ಒದಗಿಸಲಾಗಿದೆ) ಪತ್ರಿಕೆಗಾಗಿ, ಪತ್ರಿಕೆಯ ಅಭಿವೃದ್ಧಿಗಾಗಿ ಹಲವು ಹತ್ತು ಪ್ರತಿಭಾನ್ವಿತ ಒಕ್ಕಲಿಗ ಮಹಾಶಯರು ಸಂಪಾದಕರಾಗಿ ದುಡಿದಿದ್ದುಇಲ್ಲಿ ಒಂದು ಪಟ್ಟಿಯನ್ನೇ ಕೊಡಬಹುದು. ಅದು ಈ ಕೆಳಕಂಡಂತಿದೆ.

ಒಕ್ಕಲಿಗರ ಪತ್ರಿಕೆಗೆ ಸಂಪಾದಕರಾಗಿ ದುಡಿದ ಮಹಾಶಯರುಗಳು

1. ಶ್ರೀ ಲಕ್ಷ್ಮಣಗೌಡ, ಬಿ.ಎ., ಬಿ.ಎಲ್.
2. ಶ್ರೀ ಬಿ. ಪುಟ್ಟಯ್ಯ, ಬಿ.ಎ.
3. ಶ್ರೀ ಎಸ್.ವಿ. ವೆಂಕಟರಾಮಯ್ಯ
4. ಶ್ರೀ ಹೆಚ್. ಗಿರಿಯಪ್ಪಗೌಡ. ಬಿ.ಎ.
5. ಶ್ರೀ ಎಮ್. ಸುಬ್ಬಯ್ಯ. ಬಿ.ಎ.
6. ಶ್ರೀ ಬಿ. ಹನುಮಂತಯ್ಯ ಗೌಡ
7. ಶ್ರೀ ಹೆಚ್.ಕೆ. ವೀರಣ್ಣಗೌಡ
8. ಶ್ರೀ ಬಿ. ಪುಟ್ಟಸ್ವಾಮಯ್ಯ
9. ಶ್ರೀ ಬಿ.ಆರ್. ನರಸಿಂಹಯ್ಯ
10. ಶ್ರೀ ಡಿ.ಆರ್. ರಾಮಯ್ಯ, ಬಿ.ಎ.
11. ಶ್ರೀ ಬಿ.ಸಿ. ಹನುಮಯ್ಯ
12. ಶ್ರೀ ಸಿ.ಆರ್. ಕಾಮತ್, ಬಿ.ಎ.
13. ಶ್ರೀ ಕೆ.ಪಿ. ಮುದ್ದಪ್ಪ, ಬಿ.ಎ., ಬಿ.ಎಲ್.
14. ಶ್ರೀ ದೇಶಬಂಧು ಎಂ. ಶಂಕರಲಿಂಗೇಗೌಡ
15. ಶ್ರೀ ಎನ್.ಸಿ. ಅಣ್ಣಯ್ಯ, ಬಿ.ಎ.ಬಿ.ಟಿ.
16. ಶ್ರೀ ಬಿ.ಸಿ. ಹನುಮಯ್ಯ (ಎರಡು ಬಾರಿ)
17. ಶ್ರೀ ಎಂ.ಕೆ. ತಿಮ್ಮೇಶಪ್ರಭು, ಬಿ.ಎ., ಬಿ.ಎಲ್.

ಜನಪ್ರಿಯತೆಯ ಪರ್ವಕಾಲ

1907ರಲ್ಲಿ ಪ್ರಾರಂಭಗೊಂಡ ಪತ್ರಿಕೆಯು 1928ರ ಹೊತ್ತಿಗೆ ನಿಧಾನಗತಿಯಿಂದ ಮೇಲೇರುತ್ತಾ, ತನ್ನ ಪ್ರಸಾರವನ್ನು ಹೆಚ್ಚಿಸಿಕೊಳ್ಳುತ್ತಾ ಬಂದಿತು. 1928ರಲ್ಲಿ ಸಂಘವು ತನ್ನ ಪತ್ರಿಕೆಗೆ ಸಂಪಾದಕನ ಹುದ್ದೆಯು ಖಾಲಿಯಿರುವುದಾಗಿಯೂ, ಅರ್ಹ ಅಭ್ಯರ್ಥಿಗಳು ಅರ್ಜಿ ಹಾಕಿಕೊಳ್ಳಬಹುದೆಂದು ತಿಳಿಸಿತು. ಅರ್ಜಿ ಹಾಕಿಕೊಂಡ ಹೆಚ್.ಕೆ. ವೀರಣ್ಣಗೌಡರ ಅರ್ಜಿಯೊಂದಿಗೆ ಕಳುಹಿಸಿದ್ದ ಅವರ ಕೃತಿಗಳು ಮತ್ತು ಅವರ ಸಾಧನೆಯನ್ನು ಮನಗಂಡ ಸಂಘವು 1927 ಜನವರಿ 1 ರಂದು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಅವರಿಗೆ ಸಮಸ್ಯೆಯೊಂದು ಎದುರಾಯಿತು. ಅದೇನೆಂದರೆ ಅಲ್ಲಿಯ ತನಕ ವೀರಣ್ಣಗೌಡರು ಕೈಚೆಲ್ಲಿ ಕುಳಿತಿರುವ ಸಂದರ್ಭದಲ್ಲಿ ಜನಾಂಗದ ಉದಾರವ್ಯಕ್ತಿಯಾದ ಕಾಂತರಾಜಪುರದ ಎಂ. ನಂಜಪ್ಪನವರು ವೀರಣ್ಣಗೌಡರು ಕೊಡಬೇಕಿದ್ದ ಎಲ್ಲಾ ಹಣವನ್ನು ತಮ್ಮ ಕೈಯಿಂದ ಸರ್ಕಾರಕ್ಕೆ ಕೊಟ್ಟು ವೀರಣ್ಣಗೌಡರಿಗೆ ಬಂದೊದಗಿದ್ದ ಸಮಸ್ಯೆಯನ್ನು ಸುಲಭವಾಗಿ ಪಾರು ಮಾಡಿದರು. ಅಂದು ಒಕ್ಕಲಿಗರ ಸಂಘದ ಅಧ್ಯಕ್ಷರಾಗಿದ್ದ ಬಿ. ಕೆಂಪಣ್ಣನವರ ಮಗ ಬಿ.ಕೆ. ಶಾಮಣ್ಣನವರು ಪ್ರಸಿದ್ಧ ನ್ಯಾಯವಾದಿಗಳಾಗಿದ್ದರು. ಇವರು ಒಕ್ಕಲಿಗರ ಪತ್ರಿಕೆಗೆ ಇಂಗ್ಲಿಷ್ ಲೇಖನಗಳನ್ನು ಬರೆಯುತ್ತಿದ್ದರು. ವೀರಣ್ಣಗೌಡರು ಶಾಮಣ್ಣನವರ ಬಗ್ಗೆ 'ಅವರ ಇಂಗ್ಲಿಷ್ ಬರವಣಿಗೆ ಹಾಗೂ ಅವರು ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದುದು ಥೇಟ್ ಇಂಗ್ಲೀಷಿನವರ ತರಹ' ಹೀಗೆ ಹೇಳಿದ್ದಾರೆ. (ಬದುಕು ಮೆಲುಕು – ಹೆಚ್.ಕೆ. ವೀರಣ್ಣಗೌಡ) ವೀರಣ್ಣಗೌಡರು ಬಂದಕೂಡಲೆ ಪತ್ರಿಕೆಯನ್ನು ಜನಪ್ರಿಯಗೊಳಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಪ್ರತಿವಾರವೂ ಎರಡು ಉಪಸಂಪಾದಕೀಯ ಲೇಖನಗಳನ್ನು ಕನ್ನಡದಲ್ಲಿ ಬರೆದು ಪ್ರಕಟಿಸುತ್ತಿದ್ದರು. ಇದಾದ ನಂತರ 'ಬೀದಿಮಾತು', 'ಮಾತುಗಾರ ಮಲ್ಲನಿಂದ' ಎಂಬ ಲೇಖನಮಾಲೆಯನ್ನು ಪ್ರಕಟಿಸಲು ಆರಂಭಿಸಿದರು. ಇದರಲ್ಲಿ ಪ್ರಸ್ತುತ ಸಮಾಜದಲ್ಲಿ ರಾಜಕೀಯದಲ್ಲಿ ನಡೆಯುತ್ತಿರುವ ವಿಚಾರಗಳನ್ನು ತಮ್ಮ ಮೊನಚಾದ ಬರವಣಿಗೆಯಿಂದ ಪ್ರಕಟಿಸುತ್ತಿದ್ದರು. ಅದರಲ್ಲಿನ ತಾಜಾ ಉದಾಹರಣೆ ಎಂದರೆ – ಅಂದು ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳು ಬೆಂಗಳೂರಿಗೆ ಆಗಮಿಸಿದ ವೇಳೆಯಲ್ಲಿ ಅಂದಿನ ದಿವಾನರಾಗಿದ್ದ ದಿವಾನ್ ಮಿರ್ಜಾ ಇಸ್ಮಾಯಿಲ್‌ರವರು, ಉನ್ನತಾಧಿಕಾರಿಗಳು, ಪುರಪ್ರಮುಖರು ನೆರೆದಿದ್ದರು. ಜನರನ್ನು ಆಕರ್ಷಿಸುವ ಭರದಲ್ಲಿ ಸಿಂಗರಿಸಿಕೊಂಡ ಸೊಬಗಿನ ವೇಶ್ಯೆಯರನ್ನು ಸ್ವಾಮಿಗಳ ಅಡ್ಡಪಲ್ಲಕ್ಕಿಯ ಮುಂದೆ ನರ್ತಿಸಲು ಕರೆತಂದಿದ್ದರು. ವೇಶ್ಯೆಯರ ನರ್ತನದೊಂದಿಗೆ ಹೋಗುತ್ತದೆ ಮೆರವಣಿಗೆಯನ್ನು ನೋಡಲು (ಸ್ವಾಮಿಗಳನ್ನಲ್ಲ) ಜನ ಮುಗಿಬಿದ್ದರು. ಈ ನೂಕುನುಗ್ಗಲಿನಲ್ಲಿ ಜನ ಮೋರಿಗೆ ಬಿದ್ದು ಕೈಕಾಲುಗಳ ಮೂಳೆ ಮುರಿಸಿಕೊಂಡ ವಿಚಾರವನ್ನು ಹಾಗೂ ಅಂದು ಹೇಗೆ ಧರ್ಮವು ಪಾರಮಾರ್ಥಿಕದಿಂದ ಲೌಕಿಕಕ್ಕೆ

ಜಾರಿಬಿತ್ತು ಎಂಬುದನ್ನು ಕಣ್ಣಿಗೆ ಕಟ್ಟಿದಂತೆ ಬರೆದು ಧೈರ್ಯವಾಗಿ ಪ್ರಕಟಿಸಿದನ್ನು ಓದಿದ ಸಾರ್ವಜನಿಕರು ಬೆಕ್ಕಸಬೆರಗಾದರು. ಪತ್ರಿಕೆಯ ಪ್ರಸಾರ ಹೆಚ್ಚಾಯಿತು, ಗೌಡರು ಸದಾ ಪತ್ರಿಕೆಯ ಬಗ್ಗೆ ಚಿಂತಿಸುತ್ತಿದ್ದರು. ಪತ್ರಿಕೆಯ ಪ್ರಸಾರವನ್ನು ಮತ್ತಷ್ಟು ಹೆಚ್ಚಿಸಲು 'ವಾರ್ಷಿಕ ಸಂಚಿಕೆ' ಎಂಬ ಹೊಸ ನಮೂನೆಯ ಸಂಚಿಕೆಯೊಂದನ್ನು 1928ನೇ ಫೆಬ್ರವರಿ ತಿಂಗಳಿನಲ್ಲಿ ಹೊರತಂದರು. ಬಹುಶಃ ಕನ್ನಡ ಪತ್ರಿಕಾ ಇತಿಹಾಸದಲ್ಲಿಯೇ ದಾಖಲೆ ಎಂದರೆ ಪ್ರಪ್ರಥಮ ಬಾರಿಗೆ 'ವಾರ್ಷಿಕ ಸಂಚಿಕೆ'ಯನ್ನು ಹೊರತಂದ ಪತ್ರಿಕೆ ಎಂದರೆ 'ಒಕ್ಕಲಿಗರ ಪತ್ರಿಕೆ'. ಈ ವಾರ್ಷಿಕ ಪತ್ರಿಕೆಯು ಒಟ್ಟು 18 ಪುಟಗಳ ಪತ್ರಿಕೆಯಾಗಿದ್ದು ಹೊರಮೈ ರಟ್ಟಿನಂತಹ ಗಟ್ಟಿಯಾದ ಹೊದಿಕೆಯಿದ್ದು. ಒಕ್ಕಲಿಗರ ಪತ್ರಿಕೆಯ ವಾರ್ಷಿಕ ಸಂಚಿಕೆ ಸಂಪಾದಕರು ಹೊಸಹಳ್ಳಿ ಕೆ. ವೀರಣ್ಣಗೌಡ ಎಂಬುದಾಗಿದೆ. ಒಳಪುಟದ ಮೊದಲ ಪುಟದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ನಿಂತಿರುವ ಭಂಗಿಯಲ್ಲಿರುವ ಛಾಯಾಚಿತ್ರವಿದ್ದು, ಒಳಭಾಗದಲ್ಲಿ ಕುವೆಂಪು, ಪಂಡಿತ ತಾರಾನಾಥ, ದತ್ತಾತ್ರೇಯ ಕೃಷ್ಣ ಭಾರದ್ವಾಜ, ತೀ.ನಂ.ಶ್ರೀ, ದೇವುಡು, ತಿ.ತಾ. ಶರ್ಮರ ಲೇಖನಗಳಿವೆ. ಚುಂಚನಗಿರಿ ಮಠಾದಿಪತಿಗಳಾಗಿದ್ದ ಶ್ರೀಶ್ರೀಶ್ರೀ ಭಕ್ತನಾಥ ಸ್ವಾಮಿಗಳ ಭಾವಚಿತ್ರವನ್ನೂ, ಒಕ್ಕಲಿಗರ ಸಂಘಕ್ಕೆ ದುಡಿದ ಮಹನೀಯರ ಭಾವಚಿತ್ರ ಮತ್ತು ಕಿರುಪರಿಚಯ ಇನ್ನೂ ಮುಂತಾದವನ್ನು ಪ್ರಕಟಿಸಿದರು (ಇಂದಿಗೂ ಇದನ್ನು ರಾಜ್ಯ ಪತ್ರಾಗಾರದಲ್ಲಿ ಸಂಗ್ರಹಿಸಿಡಲಾಗಿದೆ). ವಾರ್ಷಿಕ ಸಂಚಿಕೆಯು ಒಂದೆರಡು ದಿನಗಳಲ್ಲಿ ಸಂಪೂರ್ಣವಾಗಿ ಖಾಲಿಯಾಯಿತು. ಪತ್ರಿಕೆಯು ನಾಡಿನ ತುಂಬೆಲ್ಲ ಪ್ರಸಿದ್ಧಿ ಪಡೆದಿತ್ತು ಎಂಬುದಕ್ಕೆ ತಾಜಾ ಉದಾಹರಣೆ ಎಂದರೆ, 'ನೀನಾಸಂ' ಎಂಬ ಸಂಸ್ಥೆಯ ಅಧ್ಯಕ್ಷರಾದ ಸುಬ್ಬಣ್ಣನವರ ಬರೆದ 'ಕುವೆಂಪುಗೊಂದು ಪುಟ್ಟ ಕನ್ನಡಿ' ಎಂಬ ಕೃತಿಯಲ್ಲಿ ಶ್ರೀಯುತರು ಒಕ್ಕಲಿಗರ ಪತ್ರಿಕೆಯ ಜನಪ್ರಿಯತೆಯ ಬಗ್ಗೆ ಈ ಕೆಳಕಂಡಂತೆ ಬರೆದಿದ್ದಾರೆ. "ಪತ್ರಿಕೆಯಲ್ಲಿ ಮೊದಲ ಪುಟ ಪ್ರಚಲಿತ ವಿದ್ಯಮಾನಗಳು, ರಾಜ್ಯ, ರಾಷ್ಟ್ರಕ್ಕೆ ಸಂಬಂಧಿಸಿದ ವಿಚಾರ, ರೈತರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು, ಸಲಹೆ ಸೂಚನೆಗಳು, ಗ್ರಾಮಾಂತರ ಸ್ಥಳಗಳ ಪರಿಚಯ, ಸಣ್ಣಕತೆಗಳು, ಧಾರವಾಹಿ 'ಗೌಡನ ದಫ್ತರ' ಎಂಬ ಕೃಷಿಕರ ಇಲ್ಲವೆ ಜನಾಂಗದ ಜನರ ಭವಣೆಯ ಪ್ರಸಂಗಗಳು, ಸಮಸ್ಯೆಗಳು, ಧಾನ್ಯಧಾರಣೆ, ವಿವಾಹಗಳು, ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ವಿಷಯಗಳು, ಜನಾಂಗದ ಗಣ್ಯವ್ಯಕ್ತಿಗಳ ಬಗ್ಗೆ ಹೀಗೆ ನಾನಾ ವಿಚಾರಗಳನ್ನು ಹೊತ್ತು ತರುವ ಜನಪ್ರಿಯ ಪತ್ರಿಕೆಯಾಗಿತ್ತು." (ಕುವೆಂಪುಗೊಂದು ಪುಟ್ಟಕನ್ನಡಿ – ಕೆ.ವಿ. ಸುಬ್ಬಣ್ಣ, ಪುಟ 16). ಒಕ್ಕಲಿಗೆ ಪತ್ರಿಕೆಯ ಜನಪ್ರಿಯತೆಯಿಂದಾಗಿ 'ಮೈಸೂರು ಸ್ಟಾರ್' ಪತ್ರಿಕೆ, 'ಅರ್ಥಸಾಧಕ' ಪತ್ರಿಕೆ 'ವೃತ್ತಾಂತ ಪತ್ರಿಕೆ'ಗಳು ತಮ್ಮ ಜನಪ್ರಿಯತೆಯನ್ನು ಕಳೆದುಕೊಂಡವು. ಒಂದು ವರ್ಷದ ಕಾಲ ಪತ್ರಿಕೆಗಾಗಿ ದುಡಿದ ಗೌಡರು ಅನಿವಾರ್ಯ ಕಾರಣದಿಂದ ಸಂಪಾದಕತ್ವ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ವೀರಣ್ಣಗೌಡರ ನಂತರ ಜನಾಂಗದ ಮತ್ತೊಬ್ಬ ಮೇರು ವ್ಯಕ್ತಿ ಬಿ. ಪುಟ್ಟಸ್ವಾಮಯ್ಯ ಮತ್ತು ಬಿ.ಆರ್. ನರಸಿಂಹಯ್ಯನವರು ಪತ್ರಿಕೆಯ ಸಂಪಾದಕರಾಗಿ ದುಡಿದರು. ಜನಾಂಗದ ಬುದ್ಧಿವಂತ ಹಾಗೂ ಸಾಹಿತಿ ಡಿ.ಆರ್. ರಾಮಯ್ಯನವರು ಪತ್ರಿಕೆಯ ಸಂಪಾದಕರಾದರು (1932–33). ಸಂಘವು ರಾಮಯ್ಯನವರನ್ನು ಸಂಪಾದಕರನ್ನಾಗಿ ನೇಮಿಸಿಕೊಂಡು ಸಂಬಳ ನೀಡುತ್ತಿತ್ತು. ನಂತರ ತಿಂಗಳಿಗೆ ಒಂದು ನೂಉ ರೂಪಾಯಿಗಳನ್ನು ಸಂಘಕ್ಕೆ ನೀಡಿ ಗುತ್ತಿಗೆ ಆಧಾರದ ಮೇಲೆ ಪತ್ರಿಕೆಯ ಚಟುವಟಿಕೆಗಳನ್ನು ನೋಡಿಕೊಳ್ಳಬೇಕೆಂದು ರಾಮಯ್ಯನವರೊಂದಿಗೆ ಕರಾರು ಮಾಡಿಕೊಂಡಿತು. ರಾಮಯ್ಯನವರು ನಾಲ್ಕುಪುಟಗಳ ಪತ್ರಕೆಯನ್ನು ಎಂಟು ಪುಟಗಳನ್ನಾಗಿ ಮಾರ್ಪಡಿಸಿದರು. ವಿಶ್ವಕರ್ನಾಟಕ ಪತ್ರಿಕೆಯು ಪ್ರತಿಸ್ಪರ್ಧೆಯನ್ನು ಎದುರಿಸಬೇಕಾಗಿಯಿತು. ಪತ್ರಿಕೆಗೆ ಹಸಿರುಬಣ್ಣದ ಕವಚನವನ್ನು ನೀಡಿ ಪತ್ರಿಕೆಯು ಆಕರ್ಷಣೀಯವಾಗಿ ಕಾಣುವಂತೆ ಮಾಡಿದ ಕೀರ್ತಿ ರಾಮಯ್ಯನವರಿಗೆ ಸಲ್ಲುತ್ತದೆ. ಇವರ ನಂತರ ಶ್ರೀ ಎಂ.ಕೆ. ತಿಮ್ಮೇಶಪ್ರಭುಗಳು 1963–64 ರ ಸಮಯದಲ್ಲಿ ಪತ್ರಿಕೆಯ ಸಂಪಾದಕರಾಗಿದ್ದುಕೊಂಡು ಕೆಲವಾರು ವರ್ಷ ಪತ್ರಿಕೆಗಾಗಿ ದುಡಿದರು. ಅವರ ಕಾಲದಲ್ಲಿ ಸಂಪಾದಕರಾಗಿದ್ದುಕೊಂಡು ಕೆಲವಾರು ವರ್ಷ ಪತ್ರಿಕೆಗಾಗಿ ದುಡಿದರು. ಅವರ ಕಾಲದಲ್ಲಿ ಎಂಟುಪುಟಗಳ ಬಿಡಿ ಪ್ರತಿ ಹತ್ತು ಪೈಸೆಯಂತೆ ಮಾರಾಟವಾಗುತ್ತಿತ್ತು.

ಆಗಿನ ಮೈಸೂರು ಸಂಸ್ಥಾನದಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆ ಹೊತ್ತಿಗೆ ಕಾಣಿಸಿಕೊಂಡ ಮದರಾಸಿ ವಿರೋಧಿ ಭಾವನೆ, 1910 ರಿಂದ 1928ರ ವರೆಗೆ ಜಾಗೃತವಾಗಿದ್ದ ಬ್ರಾಹ್ಮಣೇತರ ಚಳವಳಿ ಮತ್ತು 1924–1947ರ ವರೆಗೆ ಭುಗಿಲೆದ್ದ ಸ್ವಾತಂತ್ರ್ಯ ಚಳವಳಿಗಳು ಈ ಪ್ರದೇಶದಲ್ಲಿ ಪತ್ರಿಕೆಗಳು ಹುಲುಸಾಗಿ ಬೆಳೆಯಲು ಮುಖ್ಯ ಕಾರಣವಾದವು. ಆಂದೋಳನ, ಘರ್ಷಣೆ ಮತ್ತು ಸಾಮಾಜಿಕ ಚಳವಳಿಗಳು ಯಾವಾಗಲೂ ಎಲ್ಲಾ ಕಡೆಯೂ ಪತ್ರಿಕೆಗಳ ಹುಲುಸು ಬೆಳೆಗೆ ಉತ್ತಮ ವಾತಾವರಣವನ್ನು ಒದಗಿಸುತ್ತವೆ. ರಾಜಕೀಯ ಮತ್ತು ಸಾಮಾಜಿಕ ಪರಿವರ್ತನೆಯ ಹೊಸ್ತಿಲ ಮೇಲಿಂದ ಮೈಸೂರು ಸಂಸ್ಥಾನದಲ್ಲಿ ಪ್ರತಿಯೊಂದ ಪತ್ರಿಕೆಯು ಒಂದಲ್ಲ ಒಂದು ಚಳವಳಿ, ಆಂದೋಲನ ಮತ್ತು ಬದಲಾವಣೆಯ ಜೊತೆಗೆ ತನ್ನನ್ನು ತಾನು ಗುರುತಿಸಿಕೊಂಡಿತು. ಮೈಸೂರು ಸ್ಟಾರ್, ವಿಶ್ವ ಕರ್ನಾಟಕ, ಒಕ್ಕಲಿಗರ ಪತ್ರಿಕೆ, ಪ್ರಜಾಮತ, ಮೊದಲಾದ ಮುಖ್ಯ ವಾರಪತ್ರಿಕೆಗಳೆಲ್ಲವೂ ಈ ಉದ್ದೇಶ್ಯಗಳಿಗಾಗಿಯೇ ಆರಂಭವಾದವುಗಳು ಎನ್ನುವುದು ಗಮನಿಸಬೇಕಾದ ಅಂಶ. ತಮ್ಮ ನಿರ್ಭೀತ ಬರವಣಿಗೆಯಿಂದ ವ್ಯಕ್ತಿ ಸ್ವಾತಂತ್ರ್ಯಗಳೆರಡನ್ನೂ ಎತ್ತಿ ಹಿಡಿಯುವುದರಲ್ಲಿ ಅವು ತೋರಿದ ದಿಟ್ಟತನ ಸರ್ವಕಾಲಕ್ಕೂ ಅನುಕರಣೀಯ.

ಜನಾಂಗದ ಮೇಲೆ 'ಒಕ್ಕಲಿಗರ ಪತ್ರಿಕೆ'ಯ ಪ್ರಭಾವ

1907ರಲ್ಲಿ ಪ್ರಾರಂಭವಾದ ಒಕ್ಕಲಿಗರ ಪತ್ರಿಕೆಯು ತನ್ನ ಪ್ರಭಾವದಿಂದ ಒಕ್ಕಲಿಗ ಜನಾಂಗದ ಕೆಲವಾರು ಪ್ರಮುಖ ವ್ಯಕ್ತಿಗಳು, ತಮ್ಮ ತಮ್ಮ ಪ್ರದೇಶಗಳಲ್ಲಿ ಪ್ರಾದೇಶಿಕ ಪತ್ರಿಕೆಗಳು ತಲೆ ಎತ್ತುವಂತೆ ಮಾಡಿತ್ತು. ಆಶ್ಚರ್ಯವೆಂದರೆ ಜನಾಂಗದ ಮೇರು ವ್ಯಕ್ತಿಯಾದ ಶ್ರೀ ಎಂ.ಎಲ್. ಶ್ರೀಕಂಠೇಶ ಗೌಡರು ಸಾಹಿತ್ಯ ಮಾತ್ರವಲ್ಲ ಪತ್ರಿಕಾರಂಗದಲ್ಲೂ ಛಾಪು ಮೂಡಿಸಿರುವುದು ಒಂದು ವಿಶೇಷ.

ನಾಡಿನ ಪತ್ರಿಕೋದ್ಯಮಕ್ಕೆ ಒಕ್ಕಲಿಗ ಜನಾಂಗವು ಸಾಕಷ್ಟು ಕೊಡುಗೆಯನ್ನು ನೀಡಿದೆ. ಹೀಗೆ ದುಡಿದ ಕೆಲವು ಪತ್ರಿಕೋದ್ಯಮಿಗಳು ಮತ್ತು ಪತ್ರಿಕೆಗಳ ಹೆಸರುಗಳು ಈ ಕೆಳಕಂಡಂತಿವೆ.

ಶ್ರೀ ಎಂ.ಎಲ್. ಶ್ರೀಕಂಠೇಶಗೌಡ

ರಾಷ್ಟ್ರಕವಿ ಕುವೆಂಪುರವರಿಗಿಂತಲೂ ಮೊದಲೇ ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆಯನ್ನು ನೀಡಿದವರಲ್ಲಿ ಪ್ರಮುಖರೆಂದರೆ ಶ್ರೀ ಎಂ.ಎಲ್ ಶ್ರೀಕಂಠೇಶ ಗೌಡರು. ಇವರು 1907ರಲ್ಲಿ "ಒಕ್ಕಲಿಗರ ಪತ್ರಿಕೆ" ಪ್ರಾರಂಭವಾಗುವ ಮೊದಲೇ 1896ರಲ್ಲಿ "ಸುರಭಿ" ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಯಲ್ಲಿ ತಾವೇ ಬರೆದ ಕೆಲವು ಕೃತಿಗಳನ್ನು ಪ್ರಕಟಿಸುತ್ತಿದ್ದರಲ್ಲದೆ ಪ್ರಸಿದ್ಧ ಲೇಖಕರ, ಸಾಹಿತಿಗಳ ಲೇಖನಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಅಂದು ಸುರಭಿ ಪತ್ರಿಕೆಯು ನಾಡಿನ ಜನಪ್ರಿಯ ಪತ್ರಿಕೆಯಾಗಿದ್ದಿತು. ನಂತರದ ದಿನಗಳಲ್ಲಿ "ವಿದ್ಯಾದಾಯಿನಿ" ಎಂಬ ಮಾಸಪತ್ರಿಕೆಯನ್ನೂ ಪ್ರಾರಂಭಿಸಿದರು.

ಶ್ರೀ ಎಚ್.ಕೆ. ವೀರಣ್ಣಗೌಡ

ವರ್ಣಮಯ ಬದುಕನ್ನು ನಡೆಸಿದ ವೀರಣ್ಣಗೌಡರು ಒಕ್ಕಲಿಗ ಜನಾಂಗವನ್ನು ಕಂಡರೆ ಅತೀವವಾಗಿ ಪ್ರೀತಿಸುತ್ತಿದ್ದರು. ಬಾಲ್ಯದಿಂದಲೂ ಪತ್ರಿಕೆಗಳೇ ಇವರ ಗೆಳೆಯರಾಗಿದ್ದವು. ಅವರ ತಂದೆಯವರು ತಮ್ಮ ಮನೆಗೆ ಹಲವಾರು ಪತ್ರಿಕೆಗಳನ್ನು ತರಿಸುತ್ತಿದ್ದರು ಹಾಗೂ ಆ ಪತ್ರಿಕೆಗಳನ್ನು ಓದಿ ಸಾರಾಂಶವನ್ನು ಬರೆಯಬೇಕೆಂದು ತಂದೆಯವರು ಗೌಡರಿಗೆ ತಾಕೀತು ಮಾಡುತ್ತಿದ್ದರಿಂದ ಪತ್ರಿಕೆಗಳ ಬಗ್ಗೆ ಗೌಡರಿಗೆ ಆಸಕ್ತಿ ಹೆಚ್ಚಿತು. ಅವರ ವೈವಿಧ್ಯಮಯ ಜೀವನದಲ್ಲಿ ಪತ್ರಿಕೋಧ್ಯಮವೂ ಒಂದು. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ 'ಕರ್ನಾಟಕ ವಿದ್ಯಾರ್ಥಿ' ಎಂಬ ದ್ವೈಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿ ವಿದ್ಯಾರ್ಥಿಗಳ ಜೀವನ, ಶಿಕ್ಷಣದ ವ್ಯವಸ್ಥೆ, ಅದರ ಆಗುಹೋಗು ಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಪ್ರಾಪ್ತವಯಸ್ಸಿಗೆ ಬರುತ್ತಲೇ ಪ್ರಸಿದ್ಧ ವಾರಪತ್ರಿಕೆ ಮತ್ತು ಮಾಸಪತ್ರಿಕೆಯಲ್ಲಿ 'ನಾಟಕದಲ್ಲಿ ಸಂಗೀತದ ಅವಶ್ಯಕತೆ ಇದೆಯೇ' ಎಂಬ ಲೇಖನವನ್ನೂ 'ಬುದದೇವ' ಎಂಬ ಸಣ್ಣಗದ್ಯ ನಾಟಕವನ್ನೂ

ಬರೆದು ಪ್ರಕಟಿಸಿದರು. 1927ರಲ್ಲಿ (01-01-1927) 'ಒಕ್ಕಲಿಗರ ಪತ್ರಿಕೆ'ಯ ಮುಖ್ಯ ಸಂಪಾದಕರಾಗಿ ನೇಮಕಗೊಂಡರು. ಪತ್ರಿಕೆಯು ಜನಪ್ರಿಯಗೊಳ್ಳಲು ಸಾಕಷ್ಟು ಶ್ರಮಿಸಿದರು. 1928ರಲ್ಲಿ ವಿಶೇಷ ವಾರ್ಷಿಕ ಸಂಚಿಕೆಯನ್ನು ಹೊರತಂದರು. ಅನಿವಾರ್ಯಕಾರಣಗಳಿಂದಾಗಿ ಒಕ್ಕಲಿಗರ ಪತ್ರಿಕೆಯ ಸಂಪಾದಕತ್ವಕ್ಕೆ ರಾಜೀನಾಮೆ ನೀಡಿ 'ಚಿತ್ರಗುಪ್ತ' ಎಂಬ ಪತ್ರಿಕೆಯನ್ನು 1928 ಡಿಸೆಂಬರ್ ಮಾಹೆಯಂದು ತಮ್ಮ ಗ್ರಾಮಸೇವಾ ಪ್ರೆಸ್‌ನಲ್ಲಿ ಸಂಪಾದಿಸಿ ಮುದ್ರಿಸುತ್ತಿದ್ದರು. ಪತ್ರಿಕೋದ್ಯಮದಲ್ಲೇ ಹೊಸ ಛಾಪು ಮೂಡಿಸಿದ ವೀರಣ್ಣಗೌಡರ ಪತ್ರಿಕೆ 'ಚಿತ್ರಗುಪ್ತ' ಬಹು ಜನಪ್ರಿಯ ಪತ್ರಿಕೆಯಾಯಿತು. ಅವರ ಪತ್ರಿಕೆಯು ಅಂದಿನ ಸರ್ಕಾರವನ್ನು ತುದಿಗಾಲ ಮೇಲೆ ನಿಲ್ಲುವಂತೆ ಮಾಡಿತು. ಗೌಡರಿಗೆ ಹೆಸರು ತಂದುಕೊಟ್ಟಿತು. ಆದರೆ 1931ನೆಯ ಇಸವಿಯಲ್ಲಿ ಪತ್ರಿಕೆಯು ನೈಸರ್ಗಿಕ ಸಾವನ್ನಪ್ಪಿತು. ನಂತರ 'ವಾರ್ತಾ' ಎಂಬ ದಿನಪತ್ರಿಕೆಯನ್ನು ಶ್ರೀ ಎಂ. ರಾಮಮೂರ್ತಿಯರೊಡನೆ ಸೇರಿ ಹೊರತಂದರು. ಹೀಗೆ ಪತ್ರಿಕೋದ್ಯಮಕ್ಕೆ ವೀರಣ್ಣಗೌಡರು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಶ್ರೀ ಡಿ.ಆರ್. ರಾಮಯ್ಯನವರು

ಇವರು ಒಕ್ಕಲಿಗರ ಪತ್ರಿಕೆಯ ಹತ್ತನೆಯ ಸಂಪಾದಕರಾಗಿ ನೇಮಕ ಗೊಂಡರು. ಕೊಡಗಿನಲ್ಲಿ ನ್ಯಾಯಾಧೀಶರಾಗಿದ್ದ ಹಿರೇಹಳ್ಳಿ ಚನ್ನಯ್ಯನವರ ಅಳಿಯಂದಿರಾದ ರಾಮಯ್ಯನವರು ವೃತ್ತಿಯಲ್ಲಿ ಸರ್ಕಾರಿ ಅಧಿಕಾರಿ, ಪ್ರವೃತ್ತಿಯಲ್ಲಿ ಸಾಹಿತಿಯಾಗಿದ್ದರು. ಒಕ್ಕಲಿಗರ ಸಂಘವು ಇಂತಹ ಸಾಹಿತಿಯೊಬ್ಬರನ್ನು ತನ್ನ ಪತ್ರಿಕೆಗೆ 1933ರಲ್ಲಿ ಸಂಪಾದಕರನ್ನಾಗಿ ನೇಮಕಮಾಡಿಕೊಂಡಿತು. ಒಂದೆರಡು ವರ್ಷಕಾಲ ಪತ್ರಿಕೆಯ ಸಂಪಾದಕರಾಗಿ ದುಡಿದರು. ನಂತರ ಲೀಸ್ ಆಧಾರದ ಮೇಲೆ ಒಕ್ಕಲಿಗೆ ಪತ್ರಿಕೆ ನಡೆಸುತ್ತಿದ್ದರು. 1961-62ರಲ್ಲಿ ಒಕ್ಕಲಿಗರ ಸಂಘದ ಸುವರ್ಣ ಮಹೋತ್ಸವದ ಸಮಯದಲ್ಲಿ 'ಸುವರ್ಣ ಸಂಪುಟ' ತರುವುದರಲ್ಲಿಯೂ ಯಶಸ್ವಿಯಾದರು.

ಶ್ರೀ ಎ. ರಾಮಣ್ಣ

ಪತ್ರಿಕೋದ್ಯಮ ಕೇವಲ ರಾಜ್ಯದ ರಾಜಧಾನಿ ಬೆಂಗಳೂರಿಗೆ ಮಾತ್ರ ಸೀಮಿತ -ವಾಗಲು ಬಿಡದೆ ತಮ್ಮ ತಮ್ಮ ಪ್ರದೇಶಗಳಲ್ಲಿ ಪತ್ರಿಕೆಗಳನ್ನು ಪ್ರಾರಂಭಿಸಿದವರಲ್ಲಿ ಎ. ರಾಮಣ್ಣನವರೂ ಒಬ್ಬರು. ಇವರು ಮೈಸೂರಿನ 'ವಿಜಯ ಪತ್ರಿಕೆ' ಎಂಬ ಪತ್ರಿಕೆಯ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ಮೈಸೂರಿನಲ್ಲಿ ಈಗಾಗಲೇ ಅಸ್ತಿತ್ವದಲ್ಲಿದ್ದ 'ಮೈಸೂರು ಸ್ಟಾರ್ ಪತ್ರಿಕೆ' ಪ್ರಬಲ ಪೈಪೋಟಿ ನೀಡಿದುದೇ ಅಲ್ಲದೆ ಸಂಜೆ ಪತ್ರಿಕೆಯಾಗಿ ಮಾರ್ಪಡಿಸಿದ ಕೀರ್ತಿ ರಾಮಣ್ಣನವರದಾಗಿದೆ. 15-8-1947ರಲ್ಲಿ ಪ್ರಾರಂಭಿಸಿದ ಪತ್ರಿಕೆ ಪ್ರಚಲಿತ ರಾಜಕೀಯ ವಿಷಯವನ್ನು ಪುಂಖಾನುಪುಂಖವಾಗಿ ಹೊರತರುತ್ತಿದ್ದ-ರಲ್ಲದೆ ರಾಜಕೀಯದಲ್ಲಿರುವ ಭ್ರಷ್ಟಾಚಾರವನ್ನು ನಿರ್ದಾಕ್ಷಿಣ್ಯವಾಗಿ ಹೊರಗೆಡು-

ಹುತ್ತಿದ್ದರು. ನಿಷ್ಪಕ್ಷಪಾತವಾದ, ಪ್ರಾಮಾಣಿಕ ನಿಲುವನ್ನು ತಳೆಯುತ್ತಿದ್ದರು. ಸ್ವಾತಂತ್ರ್ಯ ಹೋರಾಟದ ಹಾಗೂ ಅರಮನೆ ಚಳವಳಿಯ ವಿಷಯವನ್ನು ಪ್ರಕಟಿಸಿ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಕೊಡುಗೆಯನ್ನು ಕೊಟ್ಟಿದ್ದಾರೆ.

ನೆಲಮನೆ ಶ್ರೀ ಚನ್ನೇಗೌಡ

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ನೆಲಮನೆ ಇವರ ಹುಟ್ಟೂರು (ಹೆಚ್.ಬಿ. ಗುಂಡಪ್ಪಗೌಡರ ಅಳಿಯಂದಿರು). ಸಮಾಜ ಸೇವಕರಾದ ಇವರು ರೈತರ ಬಗ್ಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದರು. 1947–48ರಲ್ಲಿ **'ರೈತ'** ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಯಲ್ಲಿ ರೈತರಿಗೆ ಸಲಹೆ, ಆಧುನಿಕ ಕೃಷಿಯ ಬಗ್ಗೆ ಅರಿವು ಮೂಡಿಸುವುದು, ರೈತರ ಕಷ್ಟ ಕಾರ್ಪಣ್ಯಗಳನ್ನು ಸರ್ಕಾರಕ್ಕೆ ಮನಮುಟ್ಟುವಂತೆ ಬರೆಯುತ್ತಿದ್ದರು. ಈ ಪತ್ರಿಕೆ ರೈತರಲ್ಲಿ ಜನಜಾಗೃತಿ ಮೂಡಿಸಿ ಆಧುನಿಕ ಬೇಸಾಯಕ್ಕೆ ಸ್ಪಂದಿಸುವಂತೆ ಮಾಡಿತು. ಕೆಲವು ವರ್ಷಗಳ ಕಾಲ ಪತ್ರಿಕೆಯನ್ನು ನಡೆಸಿದರು. ಪಾಡಂವಪುರ ವಿಧಾನಸಭಾ ಕ್ಷೇತ್ರದಿಂದ ಎರಡು ಭಾರಿ ಶಾಸಕರಾಗಿ ಗೆದ್ದು ಬಂದರು.

ಶ್ರೀ ಜಿ. ನಾರಾಯಣ

ಗಂಭೀರ ಮುದ್ರೆಯ ದೇಶಹಳ್ಳಿ ನಾರಾಯಣರವರು **'ವಿನೋದ'** ಎಂಬ ಹಾಸ್ಯಮಯ ಮಾಸಪತ್ರಿಕೆಯನ್ನು 1951 ಫೆಬ್ರವರಿಯಲ್ಲಿ ಪ್ರಾರಂಭಿಸಿದರು. ಇದು ಇಂದಿಗೂ ನಿಲ್ಲದೆ ನಡೆದು ಬರುತ್ತಿರುವ ಏಕೈಕ ಮಾಸಪತ್ರಿಕೆಯಾಗಿದೆ. ಜೀವನದ ಜಂಜಾಟದಿಂದ ಹೊರಬರಲು ಕರೆನೀಡುವ ಪುಟ್ಟ ಪುಸ್ತಕರೂಪದ ಕೈಗೆಟಕುವ ಬೆಲೆಯಲ್ಲಿ ಪ್ರಾರಂಭವಾದ ಈ ಪತ್ರಿಕೆ ಇಂದಿಗೂ ಅದೇ ರೀತಿ ದೊರಕುತ್ತಿದೆ.

ಶ್ರೀ ಕೆ.ವಿ. ಶಂಕರಗೌಡ

ಮತ್ತೋರ್ವ ವರ್ಣಮಯ ವ್ಯಕ್ತಿತ್ವವನ್ನು ಹೊಂದಿದ್ದ ರಾಜಕಾರಣಿ ಹಾಗೂ ಸಾಹಿತಿ ಎಂದರೆ ಮಂಡ್ಯದ ಕೆ.ವಿ. ಶಂಕರಗೌಡ, ರಾಜಕೀಯ ಸಾಹಿತ್ಯ, ನಾಟಕ, ಸಿನಿಮಾ, ಸಹಕಾರ, ಪತ್ರಿಕೋದ್ಯಮದಗಳಲ್ಲಿ ಮಿಂಚಿದ ವ್ಯಕ್ತಿ. ಪ್ರಾಮಾಣಿಕರೂ ಆದ ಇವರು ಜನಪರಕಾಳಜಿಯಿರುವ ರಾಜಕಾರಣಿಗಳಲ್ಲಿ ವಿರಳ ವ್ಯಕ್ತಿ. ನೇರ ನಡೆ, ನುಡಿಯಿಂದ ಕೂಡಿದ್ದ ಗೌಡರು ಪ್ರಾಮಾಣಿಕತೆಯಲ್ಲಿ ಹೆಸರುವಾಸಿಯಾದವರು. ಶಾಸಕರಾಗಿ, ಲೋಕಸಭಾಸದಸ್ಯರಾಗಿ, ಮಂತ್ರಿಯಾಗಿ (ಶಿಕ್ಷಣ ಸಚಿವ) ಸೇವೆ ಸಲ್ಲಿಸಿದರು. 1957ರಲ್ಲಿ **'ಜನಮನ ಪತ್ರಿಕೆ'**ಯ ಮಂಡ್ಯದಿಂದ ಹೊರಡುತ್ತಿತ್ತು. ಪ್ರಚಲಿತ ವಿಷಯಗಳು, ರಾಜಕಾರಣ, ಸಾಹಿತ್ಯ ಸಾಮಾಜಿಕ ವಿಷಯಗಳಿರುತ್ತಿದ್ದ ಪತ್ರಿಕೆಯನ್ನು ಒಂದೆರಡು ವರ್ಷಕಾಲ ನಡೆಸಿದರು.

ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಶ್ರೀ ಕುವೆಂಪುರವರ ಜೇಷ್ಠಪುತ್ರರಾದ ತೇಜಸ್ವಿಯುವರು ಸಾಹಿತ್ಯದ ನಾನಾಪ್ರಾಕಾರಗಳಲ್ಲಿ ಛಾಪು ಮೂಡಿಸಿರುತ್ತಾರೆ. ಇವರು 1961ರಲ್ಲಿ **'ಲಹರಿ'** ಎಂಬ ಪತ್ರಿಕೆಯನ್ನು ಹೊರತಂದರು. ಸ್ವತಃ ಸಾಹಿತಿಗಳಾಗಿದ್ದ ತೇಜಸ್ವಿಯವರು ಪ್ರಸ್ತುತ ಸಮಾಜ, ಸಮಕಾಲೀನ ಪ್ರಪಂಚದ ಪ್ರಸ್ತುತಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು.

ಶ್ರೀ ಎಂ. ನಾರಾಯಣಗೌಡ

ನಾರಾಯಣಗೌಡರು ರೈತನ ಮಗನಾಗಿದ್ದು ರೈತರ ಬಗ್ಗೆ ಅಪಾರವಾದ ಕಾಳಜಿ ಇದ್ದಿತು. 1963ರಲ್ಲಿ **'ರೈತ ಬಂಧು'** ಎಂಬ ಪತ್ರಿಕೆಯನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿ –ದರು. ರೈತರ ಕಷ್ಟಸುಖಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದರು. ವಾರಪತ್ರಿಕೆಯಾಗಿದ್ದ ರೈತ ಬಂಧು ಅಂದಿನ ಸಮಾಜದ ಗಮನವನ್ನು ಸೆಳೆಯುತ್ತಿದ್ದರು. ವಾರಪತ್ರಿಕೆಯಾಗಿದ್ದ ರೈತಬಂಧು ಅಂದಿನ ಸಮಾಜದ ಅದರಲ್ಲೂ ಕೃಷಿಕ ಸಮಾಜ, ರಾಜಕೀಯ, ಪ್ರಸ್ತುತ ವಿಷಯಗಳಿಗೆ ಗಮನವನ್ನು ಕೊಡುತ್ತಿತ್ತು.

ಶ್ರೀ ಹೆಚ್.ವಿ. ವೀರೇಗೌಡ

1963ರಲ್ಲಿ **'ಸಹಕಾರ ಜ್ಯೋತಿ'** ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ಹೆಸರೇ ಸೂಚಿಸಿರುವಂತೆ ಸಹಕಾರ, ಸಂಯೋಜನೆ, ಸಹಬಾಳ್ವೆಗೆ ಒತ್ತು ಕೊಡುತ್ತಿದ್ದ ಪತ್ರಿಕೆಯಾಗಿತ್ತು. ಮಂಡ್ಯ ಜಿಲ್ಲೆಯ ರೈತರ ಭವಣೆಯನ್ನು ಕುರಿತು ಬರೆಯುತ್ತಿದ್ದರು. ಒಮ್ಮೆ ಶಾಸಕರಾಗಿ ಆಯ್ಕೆಯಾಗಿದ್ದರು.

ಶ್ರೀ ಪಿ.ಎನ್. ಜವರಪ್ಪಗೌಡ

ಮಂಡ್ಯದವರಾದ ಜವರಪ್ಪಗೌಡರು ಸ್ವಾತಂತ್ರ್ಯ ಚಳುವಳಿಗಾರರು. ಸಮಾಜ ಸುಧಾರಕರಾಗಿ ಸೇವೆ ಸಲ್ಲಿಸಿರುತ್ತಾರೆ. ಜನವಾಣಿ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಗಳ ಮಂಡ್ಯ ಜಿಲ್ಲೆಯ ವರದಿಗಾರರಾಗಿ ಪತ್ರಿಕೋದ್ಯಮ ಅನುಭವವನ್ನು ಪಡೆದುಕೊಂಡ ಶ್ರೀಯುತರು ತಾವೇ ಸ್ವತಃ **'ವಿಶ್ವಾಮಿತ್ರ'** ಎಂಬ ಪತ್ರಿಕೆಯನ್ನು 1965ರಲ್ಲಿ ಪ್ರಕಟಿಸುತ್ತಿದ್ದರು. ಜನಪರ ಕಾಳಜಿಯನ್ನು ಹೊಂದಿದ್ದ ಪತ್ರಿಕೆಯು ಕೆಲವೇ ಕಾಲದಲ್ಲಿ ಜನಪ್ರಿಯವಾಯಿತು. ಸಹಕಾರ, ಸಂಯೋಜನೆ, ಗ್ರಾಮೀಣ ಬದುಕಿನ ಮೇಲೆ ಬೆಳಕು ಚೆಲ್ಲುವ ಪತ್ರಿಕೆಯಾಗಿ ಹೊರಹೊಮ್ಮಿತು.

ಶ್ರೀ ಹುಲ್ಲುಕೆರೆ ರಮೇಶ್

ರೈತರ ಬಗ್ಗೆ ಕಾಳಜಿಯನ್ನು ಹೊಂದಿದ್ದ ರಮೇಶ್‌ರವರು **'ವೀಕ್ಷಕ'** ಎಂಬ ವಾರಪತ್ರಿಕೆಯನ್ನು 1973ರಲ್ಲಿ ಪ್ರಾರಂಭಿಸಿದರು. ರಾಜಕೀಯ, ವೈಚಾರಿಕತೆ ಸುದ್ದಿ,

ಸಮಾಚಾರಗಳಿಗೆ ಹೆಸರುವಾಸಿಯಾದ ಈ ಪತ್ರಿಕೆ ಯುವ ಬರಹಗಾರರಿಗೆ ಕಥೆ, ಕವನ, ಲೇಖನಗಳನ್ನು ಬರೆಯಲು ಅವಕಾಶವನ್ನು ಮುಕ್ತವಾಗಿ ನೀಡಿತ್ತು. ಸ್ಥಳೀಯ ಸುದ್ದಿಗೆ ಹೆಚ್ಚು ಗಮನವನ್ನು ನೀಡಿದ್ದ ರಮೇಶ್‌ರವರು ಮನೆಮಂದಿಗೆಲ್ಲ ಸಮೃದ್ಧ ಪತ್ರಿಕೆಯನ್ನು ನೀಡಿದ್ದರು. ಈ ಪತ್ರಿಕೆಯು ಮಂಡ್ಯ ಮತ್ತು ಮೈಸೂರು ಪ್ರದೇಶಗಳಲ್ಲಿ ಒಮ್ಮೆ ಜನಪ್ರಿಯ ಪತ್ರಿಕೆಯಾಗಿತ್ತು.

ಶ್ರೀ ಕೌಡ್ಲೆ ಚನ್ನಪ್ಪ

1973ರಲ್ಲಿ **'ದೇಶಹಿತ'** ಎಂಬ ಪತ್ರಿಕೆಯನ್ನು ಪ್ರಾರಂಭಿಸಿದ ಚನ್ನಪ್ಪನವರು ರೈತರ ಬಗ್ಗೆ ಕಾಳಜಿಯನ್ನು ಹೊಂದಿದ್ದು ತಮ್ಮ ಪತ್ರಿಕೆಯಲ್ಲಿ ರೈತರ ಕಷ್ಟ ಸುಖಗಳನ್ನು ಪ್ರಕಟಿಸುತ್ತಿದ್ದರು. ಮೊದಲು ದಿನಪತ್ರಿಕೆಯಾಗಿದ್ದ 'ದೇಶಹಿತ' ಪತ್ರಿಕೆ ಕಾಲಾನಂತರ ವಾರಪತ್ರಿಕೆಯಾಗಿ ಪ್ರಕಟಣೆಗೊಳ್ಳುತ್ತಿತ್ತು.

ಡಾ. ರಾಮಲಿಂಗಯ್ಯ ಉಪ್ಪಿನಕೆರೆ

ರಾಜಕೀಯ ವಿಚಾರಗಳನ್ನು ತಿರುಚಿ ಬರೆದು ರಾತ್ರೋರಾತ್ರಿ ಜನಪ್ರಿಯ-ವಾಗಿರುವ ಎಷ್ಟೋ ಪತ್ರಿಕೆಗಳನ್ನು ನೋಡಿದ್ದೇವೆ, ಆದರೆ ರಾಮಲಿಂಗಯ್ಯನವರು 1975ರಲ್ಲಿ **'ಆರೋಗ್ಯನಿಧಿ'** ಎಂಬ ವಿಜ್ಞಾನ ಮಾಸಪತ್ರಿಕೆಯನ್ನು ಮೈಸೂರಿನಿಂದ ಪ್ರಕಟಿಸುತ್ತಿದ್ದರು. ಹೆಸರೇ ಸೂಚಿಸುವಂತೆ ಆರೋಗ್ಯಕ್ಕೆ ಸಂಬಂಧಿಸಿದ ಪತ್ರಿಕೆಯಾಗಿದ್ದು, ನಾಟಿವೈದ್ಯ ಅಥವಾ ನಾಡ ವೈದ್ಯ, ಅದರ ಲಾಭ ನಷ್ಟಗಳು, ಆರೋಗ್ಯ ಸುಧಾರಿಸಿ-ಕೊಳ್ಳುವುದರ ಬಗ್ಗೆ, ಮೂಢನಂಬಿಕೆ ಗಳು, ಅವುಗಳನ್ನು ದೂರವಿಡಬೇಕೆಂಬ ಸಂದೇಶ ಸಾರುವ ಪತ್ರಿಕೆಯಾಗಿತ್ತು.

ಶ್ರೀ ಎಂ. ಲಿಂಗಯ್ಯ

ಶ್ರೀಮಂತ ಕುಟುಂಬದಿಂದ ಬಂದ ಲಿಂಗಯ್ಯನವರು ಸಮಾಜ ಸುಧಾರಣೆ ಮಾಡಲು, ರಾಜಕೀಯ ಮಾರ್ಗವನ್ನು ಆಯ್ಕೆ ಮಾಡಿಕೊಂಡು **'ಉದಯರವಿ'** ಎಂಬ ಪತ್ರಿಕೆಯನ್ನು 1976ರಲ್ಲಿ ಪ್ರಾರಂಭಿಸಿದರು. ಪತ್ರಿಕೆಯು ರಾಜಕೀಯ ಏಳುಬೀಳುಗಳನ್ನು ಸಮಾಜದ ರೈತರ ಕಷ್ಟಸುಖಗಳನ್ನು, ಪ್ರಸ್ತುತ ಕೆಲವಾರು ವಿಚಾರಗಳನ್ನು ಪ್ರಕಟಿಸುತ್ತಿತ್ತು. ಸುಮಾರು 4–5 ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದಿತು.

ಶ್ರೀ ಎಲ್.ಎಸ್. ರಾಮಲಿಂಗಯ್ಯ

ರೈತನ ಮಗನಾಗಿ ಹುಟ್ಟಿದ ರಾಮಲಿಂಗಯ್ಯನವರು ನೇರ ನಡೆ ನುಡಿಯ ವ್ಯಕ್ತಿ. ಒಕ್ಕಲಿಗೆ ಜನಾಂಗದ ಬಗ್ಗೆ ಬಹಳಷ್ಟು ಕಾಳಜಿ ಹೊಂದಿದ ಇವರು ಭಾರತ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲೇ **'ಪ್ರಜಾರಾಜ್ಯ'** ವೆಂಬ ಪತ್ರಿಕೆಯನ್ನು ಹೊರತಂದು ಜನರನ್ನು ಸ್ವಾತಂತ್ರ್ಯಕ್ಕಾಗಿ ಅಣಿಮಾಡಿದರು. ಸಮಾಜ ಸುಧಾರಕರಾಗಿಪ್ತ್ರಿಕೋದ್ಯಮಿ-

ಯಾಗಿ, ಚಿಂತಕರಾಗಿ ಅಮೋಘ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀ ಎ.ಎಲ್. ಬಸವೇಗೌಡ

ಮಂಡ್ಯ ಸರ್ಕಾರಿ ಪ್ರೌಢಶಾಲೆಯ ಉಪಾಧ್ಯಾಯರಾಗಿ ನಿವೃತ್ತಿ ಹೊಂದಿದ ಎಂ. ಮಲ್ಲಪ್ಪನವರು **'ನುಡಿಭಾರತಿ'** ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಅನಿವಾರ್ಯಕಾರಣದಿಂದ ಪತ್ರಿಕೆಯನ್ನು ನಿಲ್ಲಿಸಬೇಕಾಗಿ ಬಂದುದರಿಂದ ಎ.ಎಲ್. ಬಸವೇಗೌಡರು 978–79ರಲ್ಲಿ ಪತ್ರಿಕೆಯನ್ನು ವಹಿಸಿಕೊಂಡು ನಡೆಸಿದರು.

ಶ್ರೀ ಎಚ್.ಎಲ್. ನಾಗೇಗೌಡ

ಜನಾಂಗದ ಹಿರಿಯ ಚೇತನ, ಸಾರಸ್ವತ ಲೋಕದ ಸರದಾರ ಎಚ್.ಎಲ್. ನಾಗೇಗೌಡರು ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರವಲ್ಲ ಜಾನಪದ ಟ್ರಸ್ಟಿನ ಮುಖವಾಣಿಯಾಗಿ **'ಜಾನಪದ ಜಗತ್ತು'** ಎಂಬ ಮಾಸಪತ್ರಿಕೆಯನ್ನು ಪ್ರಕಟಿಸಿ ಅದರಲ್ಲಿ ಜಾನಪದ ಸಾಹಿತ್ಯ, ಜನಪದ ಕತೆ ವಿಷಯಗಳನ್ನು, ಜಾನಪದ ವಸ್ತುಗಳನ್ನು ಕಾಪಾಡುವ ವಿಚಾರವನ್ನು ಬರೆದು ಪ್ರಕಟಿಸುತ್ತಿದ್ದರು.

ಶ್ರೀ ಸು.ತ. ರಾಮೇಗೌಡ

ಮೂಲತಃ ರೈತರಾದ ರಾಮೇಗೌಡರು ಪತ್ರಿಕೋದ್ಯಮಕ್ಕಿಳಿದರು. ರೈತರ, ದೀನದಲಿತರ ಪರ ದನಿ ಎತ್ತತೊಡಗಿದರು. ಅದಕ್ಕಾಗಿ 1976ರಲ್ಲಿ **'ಬಯಲು ಸೀಮೆ'** ಎಂಬ ವಾರಪತ್ರಿಕೆಯನ್ನು ತಂದರು. ಸರಳ ಮದುವೆ, ರೈತ ಚಳವಳಿ, ರೈತ ಸಂಘಟನೆಗೆ ಪತ್ರಿಕೆಯನ್ನು ಬಳಸಿಕೊಂಡರು. ಕನಕಪುರ, ರಾಮನಗರ, ಮಾಗಡಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜನಪ್ರಿಯವಾಗಿ 1982ರಲ್ಲಿ **'ಬಯಲು ಸೀಮೆ'** ಪತ್ರಿಕೆಯು ದಿನಪತ್ರಿಕೆಯಾಯಿತು.

ಶ್ರೀ ಹುಲಿಗೆರೆಪುರದ ಮಲ್ಲಯ್ಯ

ನೋಡಲು ಸೌಮ್ಯವಾಗಿದ್ರೂ ಸ್ವಭಾವತಃ ಕ್ರಾಂತಿಕಾರಿಯೂ, ಸಮಾಜ ಸುಧಾರಕರೂ ಆದ ಮಲ್ಲಯ್ಯನವರು ಸಾಮಾಜಿಕ ಕ್ರಾಂತಿಮಾಡುವ ನಿಟ್ಟಿನಲ್ಲಿ ಜಾತಿಯ ಕಟ್ಟುಪಾಡುಗಳನ್ನು, ಕಂದವರನ್ನು ದಾಟಿ ಬರುವ ಉದ್ದೇಶದಿಂದ ಅಂತರಜಾತಿಯ ವಿವಾಹವಾಗಿ ಪಡಬಾರದ ಕಷ್ಟಪಟ್ಟು ಕೊನೆಯವರೆವಿಗೂ ಪ್ರಾಮಾಣಿಕರಾಗಿ ಬದುಕಿ ಬಾಳಿದ ಮಲ್ಲಯ್ಯನವರು ವೃತ್ತಿಯಲ್ಲಿ ವಕೀಲರು. 1978ರಲ್ಲಿ **'ಜಾಗೃತ ಕೇಸರಿ'** ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಯಾವ ಹಾಗೂ ಯಾರ ಮರ್ಜಿಗೂ ಒಳಗಾಗದೆ ನಿಷ್ಪಕ್ಷಪಾತವಾಗಿ ಬರೆಯುತ್ತಿದ್ದರು. ಚುನಾವಣೆಯ ವೇಳೆಯಲ್ಲಿ ಪತ್ರಿಕೆಯು ಕೇಸರಿಯಾಗುತ್ತಿತ್ತು. ಮದ್ದೂರಿನಿಂದ ಪ್ರಕಟವಾಗುತ್ತಿದ್ದ ಈ ಪತ್ರಿಕೆ ಒಮ್ಮೆ ಜನಪ್ರಿಯ ಪತ್ರಿಕೆಯಾಗಿತ್ತು.

ಶ್ರೀ ಹೆಚ್.ಎಲ್ ಕೇಶವಮೂರ್ತಿ

ಮಂಡ್ಯದ ಹೆಚ್.ಎಲ್. ಕೇಶವಮೂರ್ತಿಯವರು ವೃತ್ತಿಯಲ್ಲಿ ಇಂಜಿನಿಯ-ರಿಂಗ್ ಕಾಲೇಜ್ ಪ್ರಾಧ್ಯಾಪಕರು. ಪ್ರವೃತ್ತಿಯಲ್ಲಿ ಸಾಹಿತಿ ಹಾಗೂ ಪತ್ರಕರ್ತರು. ನೇರ ನಡೆ ನುಡಿಯ ಸೀದಾ ಸಾದಾ ವ್ಯಕ್ತಿ. ಶ್ರೀಯುತರು ಲಂಕೇಶ್ ಪತ್ರಿಕೆಯಲ್ಲಿ ಕೆಲವಾರು ಅಗ್ರ ಲೇಖನಗಳನ್ನು ವಿಶೇಷವಾಗಿ ಮಂಡ್ಯದ ರಾಜಕೀಯ, ಹಿರಿಯ ವ್ಯಕ್ತಿಗಳ ಬಗ್ಗೆ, ರಾಜಕೀಯ ಆಟಾಟೋಪದ ಬಗ್ಗೆ ವಿಡಂಬನಾತ್ಮಕವಾಗಿ ಬರೆದು ಎಚ್ಚರಿಸುತ್ತಿದ್ದರು. **'ಉದಯರವಿ'** ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು ಮತ್ತು ಇವರ ಮೊನಚಾದ ಬರವಣಿಗೆ ಅಂದು ಎಲ್ಲರನ್ನೂ ದಂಗು ಬಡಿಸಿತು.

ಶ್ರೀ ಶಿ.ಜೆ. ಹೊನ್ನೇಗೌಡ

ಸ್ಥಳೀಯ ವಾರ್ತೆಗಳಿಗೆ ಒತ್ತುಕೊಟ್ಟು ಪತ್ರಿಕೆಯೊಂದನ್ನು ಪ್ರಾರಂಭ ಮಾಡಬೇಕೆಂಬ ಹಂಬಲವಿತ್ತು ಅದಕ್ಕಾಗಿ **'ಪೂರ್ಣಿಮ'** ಎಂಬ ಪತ್ರಿಕೆಯನ್ನು 1983ರಲ್ಲಿ ಪ್ರಾರಂಭಿಸಿದರು. ಕೆಲವು ವರ್ಷಗಳ ಕಾಲ ನಡೆಸಿದರು.

ಶ್ರೀ ಶಿವಳ್ಳಿ ಕೆಂಪೇಗೌಡ

ರೈತನ ಮಗನಾದ ಕೆಂಪೇಗೌಡರು ರೈತರ ಕಷ್ಟಸುಖಗಳನ್ನು ದುಃಖ ದುಮ್ಮಾನಗಳನ್ನು ಪತ್ರಿಕೆಯ ಮೂಲಕ ಹೊರಗೆಡಹಬೇಕೆಂಬ ಉದ್ದೇಶದಿಂದ **'ರೈತಜ್ಯೋತಿ'** ಎಂಬ ಮಾಸಪತ್ರಿಕೆಯನ್ನು 1982ರಲ್ಲಿ ಹೊರತಂದರು. ಇದರಲ್ಲಿ ರೈತರಿಗೆ ಉಪಯುಕ್ತವಾದ ಸಲಹೆ ಸೂಚನೆಗಳನ್ನು ವ್ಯವಸಾಯ ಕ್ರಮದ ಬಗ್ಗೆ ಲೇಖನಗಳನ್ನು ಪ್ರಕಟಿಸಿ, ನಿಜವಾದ ರೈತಪತ್ರಿಕೆಯಾಗಿತ್ತು. ನಂತರ ಕೆಂಪೇಗೌಡರು **'ಕೀಳು ಜನಮೇಜಯ'** ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ರೈತರ ಬಗ್ಗೆ ಕಾಳಜಿಯಿದ್ದ ಗೌಡರು ಪತ್ರಿಕೆಯನ್ನು ಪ್ರಾರಂಭಿಸಿ ಲಾಭ ಪಡೆದುಕೊಳ್ಳುವುದ ಕ್ಕಿಂತಲೂ ಹೆಚ್ಚಾಗಿ ನಷ್ಟ ಅನುಭವಿಸಿದರು. ಆದರೆ ತಮ್ಮಶ್ರಮ ಸಾರ್ಥಕವಾಯಿತೆಂಬ ನೆಮ್ಮದಿ ಅವರಿಗಿದೆ.

ಶ್ರೀ ದೇವಂಗಿ ಗೌಡ

ಮೂಲತಃ ರೈತ ಕುಟುಂಬಕ್ಕೆ ಸೇರಿದ ಗೌಡರು ಶಿವಮೊಗ್ಗದ ಸುತ್ತಮುತ್ತಲಿನ ಪ್ರದೇಶದ ಆಗುಹೋಗುಗಳನ್ನು ತಮ್ಮ **'ಹೊಂಗಿರಣ'** ಪತ್ರಿಕೆಯ ಮೂಲಕ ಹೊರಗೆಡಹುತ್ತಾ ಬಂದರು.

ಶ್ರೀ ರಘುರಾಮಶೆಟ್ಟಿ

ಮಂಗಳೂರಿನವರಾದ ರಘುರಾಮ ಶೆಟ್ಟರು 1983ರಲ್ಲಿ 'ಮುಂಗಾರು' ಎಂಬ ಪತ್ರಿಕೆಯನ್ನು ಹೊರತಂದರು.

ಶ್ರೀ ಪುರುಷೋತ್ತಮ ಬಿಳಿಮಲೆ

ವೃತ್ತಿಯಲ್ಲಿ ಶಿಕ್ಷಕರಾದ ಇವರು 1986-87ರಲ್ಲಿ 'ರಂಗ ಪತ್ರ' ಎಂಬ ಮಾಸಿಕ ಪತ್ರಿಕೆಯನ್ನು ಹೊರತಂದರು.

ಶ್ರೀ ಬಿ.ಎ. ನಾರಾಯಣಸ್ವಾಮಿ

ಕೋಲಾರ ಜಿಲ್ಲೆಯ ರೈತರ, ಶ್ರೀಸಾಮಾನ್ಯರ ಕಷ್ಟ ಸುಖಗಳನ್ನರಿತು 'ವಿಶ್ವಪೌರ' ಪತರಿಕೆಯನ್ನು ಪ್ರಾರಂಭಿಸಿದರು. ಇದು ಒಂದು ಸಮಯದಲ್ಲಿ ಕೋಲಾರದಲ್ಲಿ ಜನಪ್ರಿಯ ಪತ್ರಿಕೆಯಾಗಿತ್ತು.

ಡಾ. ಮುನಿವೆಂಕಟೇಗೌಡ

ಸಮಾನ ಮನಸ್ಕರನ್ನು ಒಂದೆಡೆ ಸೇರಿಸಿ ಜಾತಿ, ಮತ, ಭೇದಗಳನ್ನು ತೊರೆದು, ಜಾತಿ, ಮತ ತಾರತಮ್ಯ, ಅನ್ಯಾಯ, ಶೋಷಣೆಯ ವಿರುದ್ಧ ಹಾಗೂ ದೀನದಲಿತರ, ರೈತ ಕಷ್ಟ ಸುಖಗಳಿಗೆ ಸ್ಪಂದಿಸುವ 'ಜನತಾ ಮಾಧ್ಯಮ' ಎಂಬ ಪತ್ರಿಕೆಯನ್ನು 1977ರಲ್ಲಿ ತಂದು. ಇದು ಹಾಸನ ಜಿಲ್ಲೆಯದಾದ್ಯಂತ ಜನಪ್ರಿಯ ಪತ್ರಿಕೆಯಾಗಿತ್ತು.

ಶ್ರೀ ಜಿ.ಟಿ. ಗೌಡ

ರೈತ ಕುಟುಂಬಕ್ಕೆ ಸೇರಿದ ಜಿ.ಟಿ. ಗೌಡರು 'ಹಾಸನ ಪ್ರಭ' ಎಂಬ ದಿನಪತ್ರಿಕೆಯನ್ನು ಪ್ರಾರಂಭಿಸಿದರು. ಹಾಸನ ಚಿಕ್ಕಮಗಳೂರು ಪ್ರದೇಶಗಳೇ ಅಲ್ಲದೆ ರಾಜ್ಯದ ಆಗು ಹೋಗುಗಳನ್ನು ಬಿಂಬಿಸುವ ಪತ್ರಿಕೆಯಾಗಿತ್ತು.

ಶ್ರೀ ಜಗನ್ನಿವಾಸ ಶೆಟ್ಟಿ

1962ರಲ್ಲಿ ಪುತ್ತೂರು, ಸೂಳ್ಯ, ಬೆಳ್ತಗಂಡಿಯ ಜನಸಾಮಾನ್ಯರನ್ನು, ರೈತಾಪಿ ವರ್ಗವನ್ನು ದೃಷ್ಟಿಯಿಟ್ಟುಕೊಂಡು 'ನವಕೃತಿ' ಎಂಬ ಸಾಪ್ತಾಹಿಕ ಪತ್ರಿಕೆಯನ್ನು ಹೊರತಂದರು.

ಶ್ರೀ ಎಂ.ಎಂ. ಶೆಟ್ಟಿ

ಮಂಗಳೂರಿನವರಾದ ಎಂ.ಎಂ. ಶೆಟ್ಟರು 1964ರಲ್ಲಿ ಮಂಗಳೂರು, ಪುತ್ತೂರು, ಉಡುಪಿ, ಕುಂದಾಪುರವನ್ನು ಸುದ್ದಿ ಕೇಂದ್ರವನ್ನಾಗಿಟ್ಟುಕೊಂಡು 'ಐಕ್ಯರಂಗ' ಎಂಬ ಮಾಸಿಕ ಪತ್ರಿಕೆಯನ್ನು ಹೊರತಂದರು.

ಶ್ರೀ ಹೆಚ್.ಜೆ. ಲಕ್ಕಪ್ಪಗೌಡ

ಶಿಕ್ಷಣವೇತ್ತ ಲಕ್ಕಪ್ಪಗೌಡರು ಬಿ.ಎ. ವಿವೇಕರೈ, ಗುಂಡ್ಮಿ ಚಂದ್ರಶೇಖರ ಐತಾಳರೊಡಗೂಡಿ 1973ರಲ್ಲಿ 'ಮುಂಗಾರು' ಎಂಬ ತ್ರೈಮಾಸಿಕ ಪತ್ರಿಕೆಯನ್ನು

ಹೊರತಂದರು. ಮಂಗಳಗಂಗೋತ್ರಿಯಲ್ಲಿ ಪ್ರಾರಂಭವಾದ ಈ ಪತ್ರಿಕೆ ಮಂಗಳೂರಿ-ನಲ್ಲಿ ಜನಪ್ರಿಯ ಪತ್ರಿಕೆಯಾಗಿತ್ತು.

ಶ್ರೀ ಕೆ.ಎನ್. ನರಸಿಂಹೇಗೌಡ

1957 ರಲ್ಲಿ 'ಮೈಸೂರು ಸಕ್ಕರೆ' ಎಂಬ ಪತ್ರಿಕೆಯನ್ನು ಶ್ರೀ ನಾಗಪ್ಪನವರ ಜೊತೆಗೂಡಿ ಈ ಪತ್ರಿಕೆಯನ್ನು ಹೊರತಂದರು. ನಂತರ ನರಸಿಂಹೇಗೌಡರು 'ಸಂಜೆವಾಣಿ ವಾರ್ತೆ' ಎಂಬ ಸಂಜೆ ದಿನಪತ್ರಿಕೆಯನ್ನು ಇಂದಿಗೆ 35–40 ವರ್ಷಗಳ ಹಿಂದೆಯೇ ತಂದು ಪ್ರಯೋಗ ಮಾಡಿದ ಧೀರ.

ಶ್ರೀ ಹೊ. ಶ್ರೀನಿವಾಸಯ್ಯ

ಪ್ರಕೃತಿ ಚಿಕಿತ್ಸಾ ಪದ್ದತಿಯನ್ನು ಪ್ರಚುರ ಪಡಿಸುವ ಉದ್ದೇಶದಿಂದ ಸಿದ್ದವನಹಳ್ಳಿ ಕೃಷ್ಣಶರ್ಮರೊಡಗೂಡಿ ಹೊ. ಶ್ರೀನಿವಾಸಯ್ಯನವರು 'ಪ್ರಕೃತಿ ಜೀವನ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಹೊರತಂದರು.

ಇವರಷ್ಟೇ ಅಲ್ಲದೆ ನಗುವಿನಹಳ್ಳಿ ವಿಶು ಹೆಸರಾಂತ ಪತ್ರಕರ್ತರಾಗಿದ್ದು ಲಂಕೇಶ್ ಪತ್ರಿಕಾ ವರದಿಗಾರರಾಗಿದ್ದಾರೆ. ಸುಬ್ಬೇಗೌಡರ 'ಥಳಕು' ಆದಿಚುಂಚನಗಿರಿ ಮಠದಿಂದ 'ಆದಿಚುಂಚನಗಿರಿ ಪತ್ರಿಕೆ' ಜೆ. ಪುಟ್ಟಲಿಂಗಯ್ಯನವರ 'ಸುಮಾರ್ಗ', ಡಿ. ಲಿಂಗಯ್ಯನವರ 'ಚಿಂತನೆ' ಮತ್ತು 'ಚಂದನ', ನೀಲಕಂಠನಹಳ್ಳಿ ತಮ್ಮಣ್ಣಗೌಡರ 'ನವನಿರ್ಮಾಣ' ಇನ್ನೂ ಮುಂತಾದ ಪತ್ರಿಕೆಗಳನ್ನು ಕೆಲವಾರು ಒಕ್ಕಲಿಗ ಪತ್ರಿಕೋದ್ಯಮಿಗಳು ತಮ್ಮ ತಮ್ಮ ಪ್ರದೇಶದ ವಿಚಾರಗಳನ್ನು ತಿಳಿಸಲು ಪತ್ರಿಕೆಗಳನ್ನು ಹೊರತಂದರು. ಇದರಿಂದ ಲಾಭಗಳಿಸಿದವರಿಗಿಂತ ನಷ್ಟ ಅನುಭವಿಸಿದರೇ ಹೆಚ್ಚು.

ಜಾನಪದ ಪತ್ರಿಕೆಗಳು

ಒಕ್ಕಲಿಗ ಜನಾಂಗ ಮತ್ತು ಜಾನಪದ ಕಲೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹೆಚ್.ಎಲ್ ನಾಗೇಗೌಡ, ಹೆಚ್.ಜೆ. ಲಕ್ಕಪ್ಪಗೌಡ ಇನ್ನೂ ಮುಂತಾದವರ ಮಾರ್ಗದರ್ಶನದಲ್ಲಿ 1979ರಲ್ಲಿ 'ಜಾನಪದ ಜಗತ್ತು' ಎಂಬ ಹೆಸರಿ-ನಿಂದ ಆರಂಭಗೊಂಡಿತು. 1982ರಲ್ಲಿ ವಿಶೇಷ ಸಂಚಿಕೆಯನ್ನು ಹೊರತಂದಿತು.

ಮೂಡಲಪಾಯ ಪತ್ರಿಕೆ

ಡಾ. ಜಿಶಂಪರವರ ಪರಿಶ್ರಮದಿಂದ ತಿಪಟೂರು ತಾಲೂಕಿನ ಕೊನೇಹಳ್ಳಿ ಯಲ್ಲಿ ಸ್ಥಾಪನೆಯಾದ 'ಮೂಡಲಪಾಯ ಯಕ್ಷಗಾನ ಟ್ರಸ್ಟ್'ನ ಸಹಾಯವನ್ನು ಪಡೆದು 1970–71ರಲ್ಲಿ 'ಮೂಡಲಪಾಯ' ಪತ್ರಿಕೆಯೆಂಬ ಹೆಸರಿನ ಪತ್ರಿಕೆಯನ್ನು ಹೊರತಂದರು. ನಶಿಸಿ ಹೋಗುತ್ತಿದ್ದ ಮೂಡಲಪಾಯ ಯಕ್ಷಗಾನಕ್ಕೆ

ಕಾಯಕಲ್ಪ ನೀಡಿದರು. ಈ ಪತ್ರಿಕೆಯ ಅಭಿವೃದ್ಧಿಗೆ ಹ.ಕ. ರಾಜೇಗೌಡ, ಡಿ.ಕೆ. ರಾಜೇಂದ್ರ, ಹೆಚ್.ಎಲ್. ನಾಗೇಗೌಡ ಇನ್ನೂ ಮುಂತಾದವರು ಶ್ರಮಿಸಿದರು.

ಜಾನಪದ ಗಂಗೋತ್ರಿ

ಹೆಚ್.ಎಲ್. ನಾಗೇಗೌಡರ ಸಂಪಾದಕತ್ವದಲ್ಲಿ 'ಜಾನಪದ ಗಂಗೋತ್ರಿ' ಆರಂಭಗೊಂಡಿತು. ಹ.ಕ. ರಾಜೇಗೌಡರು ಸಂಪಾದಕರಾಗಿ ದುಡಿದರು.

ಹೀಗೆ ಒಕ್ಕಲಿಗೆ ಪತ್ರಿಕೆಯ ಪ್ರಭಾವದಿಂದ ರಾಜ್ಯದಾದ್ಯಂತ ಹಲವಾರು ಒಕ್ಕಲಿಗ ಕುಲಬಾಂಧವರು ಕೆಲವಾರು ಪ್ರಾದೇಶಿಕ ಭಾಷಾ ಪತ್ರಿಕೆಗಳನ್ನು ಪ್ರಾರಂಭಿಸಿದರು. ಈ ಪತ್ರಿಕೆಗಳು ಸ್ಥಳೀಯ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಒಡನಾಟವನ್ನು ಪ್ರತಿಬಿಂಬಿಸುವ ಪತ್ರಿಕೆಗಳಾಗಿದ್ದರೂ ಜನಾಂಗದಲ್ಲಿ ರಾಜಕೀಯ ಹಾಗೂ ಪತ್ರಿಕೋದ್ಯಮದ ಬಗ್ಗೆ ಒಂದಿಷ್ಟು ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಒಕ್ಕಲಿಗರ ಪತ್ರಿಕೆ ಸ್ಫೂರ್ತಿಯಾಯಿತು ಎಂದರೆ ತಪ್ಪಾಗಲಾರದು. ಇಂತಹ ಪತ್ರಿಕೆ 1972 ಫೆಬ್ರವರಿಯಲ್ಲಿ ತಟಸ್ಥಗೊಂಡಿತು. ಹಳೆಯ ಮುದ್ರಣಾ ಸಾಮಗ್ರಿಗಳನ್ನು ಮೈಸೂರಿನ ಕುವೆಂಪು ಟ್ರಸ್ಟ್‌ನವರಿಗೆ ಮಾರಾಟ ಮಾಡಿದರು.

□

ಬ್ರಾಹ್ಮಣೇತರ ಚಳವಳಿ ಮತ್ತು ಹಿಂದುಳಿದ ವರ್ಗಗಳ ಆಯೋಗಗಳು

ಈಗಾಗಲೇ ತಿಳಿಸಿದಂತೆ ಹಿಂದೂ ಧರ್ಮದಲ್ಲಿ ಬ್ರಾಹ್ಮಣರು ಮೇಲ್ಪಂಕ್ತಿಯಲ್ಲಿದ್ದರೆ ರಾಜ್ಯವನ್ನಾಳುತ್ತಿದ್ದ ರಾಜ, ಮಹಾರಾಜರೂ ಸೇರಿದಂತೆ ಎಲ್ಲರೂ ಬ್ರಾಹ್ಮಣೇತರ ವರ್ಗಕ್ಕೆ ಸೇರುತ್ತಿದ್ದರು. ಬಹುಶಃ ಕರ್ನಾಟಕದ ಇತಿಹಾಸವನ್ನು ನೋಡುವುದಾದರೆ ಕದಂಬರ ರಾಜವಂಶವೊಂದನ್ನು ಬಿಟ್ಟು (ಇದು ಕೂಡಾ ಗೊಂದಲದಿಂದ ಕೂಡಿದೆ) ಉಳಿದಂತೆ ಎಲ್ಲಾ ರಾಜಮನೆತನಗಳು ಬ್ರಾಹ್ಮಣೇತರ ರಾಜಮನೆತನಗಳಾಗಿವೆ. ಜೈನಧರ್ಮ ಪ್ರಭಾವಶಾಲಿಯಾಗಿದ್ದ ಕಾಲದಲ್ಲಿ ಮೂಲೆಗುಂಪಾಗಿದ್ದ ಬ್ರಾಹ್ಮಣರು ಹಿಂದೂಧರ್ಮ ಪುನಶ್ಚೇತನಗೊಂಡಂತೆಲ್ಲಾ ಮೇಲೇರಿದರು. ದಕ್ಷಿಣ ಭಾರತದ ರಾಜ್ಯ –ಗಳಲ್ಲಿ ಬ್ರಾಹ್ಮಣರನ್ನು ಈ ಕೆಳಕಂಡಂತೆ ಗುರ್ತಿಸಿದರು–ಆಂಧ್ರದಲ್ಲಿ ನಿಯೋಗಿ ಬ್ರಾಹ್ಮಣರು, ತಮಿಳುನಾಡು ಹಾಗೂ ಕರ್ನಾಟಕದಲ್ಲಿ ಸ್ಮಾರ್ತ ಹಾಗೂ ಶ್ರೀವೈಷ್ಣವ ಬ್ರಾಹ್ಮಣರು ಮತ್ತು ಕೇರಳದಲ್ಲಿ ನಂಬೂದರಿಗಳು. ಇವರು ತಮ್ಮ ತಮ್ಮ ರಾಜ್ಯ ಗಳಲ್ಲಿ ಅತ್ಯಂತ ಪ್ರಭಾವಶಾಲಿಗಳಾಗಿದ್ದರು. ಶ್ರೀಮಂತರು, ಜಮೀನ್ದಾರರು, ಆಳರಸರು ದೇವಸ್ಥಾನಗಳನ್ನು ನಿರ್ಮಿಸಿದಾಗ ಅದರ ನಿತ್ಯಪೂಜೆಗಾಗಿ ಇಲ್ಲವೆ ಪಾಪ ಪರಿಹಾರ–ಕ್ಕಾಗಿ, ಪುಣ್ಯ ಇಲ್ಲವೆ ಧನ ಸಂಪಾದನೆಗಾಗಿ ಬ್ರಾಹ್ಮಣರಿಗೆ ಧನ ಕನಕ ಹಾಗೂ ಕೊಡುಗೆಯಾಗಿ ಜಮೀನನ್ನು ದಾನ ರೂಪದಲ್ಲಿ ನೀಡುತ್ತಿದ್ದರು. ಬ್ರಾಹ್ಮಣರು ಸಮಾಜ –ದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದರು. ಅವರು ಹುಟ್ಟುತ್ತಲೇ ಜಾತಿಯ ಬಲದಿಂದಲೇ ಉನ್ನತ ಸ್ಥಾನವನ್ನಲಂಕರಿಸಿದ್ದರು. ಬ್ರಾಹ್ಮಣರ ಪ್ರಾಮುಖ್ಯತೆಯನ್ನು ಆಳರಸರು ಅವರ ರಾಜ್ಯಗಳಲ್ಲಿ ಗುರುತಿಸಿದ ಬಳಿಕ ಉಳಿದ ಜನ ಅದನ್ನು ಹಾಗೇ ಸ್ವೀಕರಿಸಬೇಕಾಗಿತ್ತು.

ಬ್ರಿಟಿಷ್ ಆಳ್ವಿಕೆ ಪೂರ್ವದಲ್ಲಿ ಮೇಲ್ಜಾತಿಯವರ ಪ್ರಾಬಲ್ಯ ಹೆಚ್ಚಾಗಿದ್ದಿತು. ಕಾಲಾನಂತರ ಭೂ ನಿಯಂತ್ರಣ ಪದ್ಧತಿಯನ್ನು ಬದಲಾಯಿಸಿದ ನಂತರ ಅವರ ಪ್ರಾಬಲ್ಯ ಇನ್ನೂ ಹೆಚ್ಚು ಸಮಗ್ರವೂ, ಸದೃಢವೂ ಆಯಿತು. ಇದರ ಜೊತೆಗೆ

ಆಳರಸರು, ಬಲಿಷ್ಠ ಗುಂಪುಗಳನ್ನು ತಮ್ಮತ್ತ ಸೆಳೆದುಕೊಳ್ಳುವ ಉತ್ಸಾಹದಲ್ಲಿ ಅವರಿಗೆ ಪ್ರಮುಖ ಇಲಾಖೆಗಳಾದ ಪೋಲೀಸ್ ಮತ್ತು ಕಂದಾಯ ಇಲಾಖೆಗಳಂತಹ ಸ್ಥಾನಗಳನ್ನು ಕಲ್ಪಿಸಿಕೊಟ್ಟರು. ಬ್ರಿಟಿಷ್ ಆಡಳಿತಗಾರರು ಗ್ರಾಮೀಣ ಪ್ರದೇಶಗಳಲ್ಲಿ ನಿಜವಾದ ಅಧಿಕಾರದ ಮೂಲಗಳೆಲ್ಲಿವೆ ಎಂಬುದನ್ನು ಬಹಳ ಬೇಗ ಗುರ್ತಿಸಿದರಲ್ಲದೇ ಗ್ರಾಮದ ಮುಖಂಡ ಅಥವಾ ಪಟೇಲ ಇಲ್ಲವೆ ಶಾನುಭೋಗನ ಸ್ಥಾನವನ್ನು ಸದೃಢಗೊಳಿಸುವುದರ ಮೂಲಕ ತಮ್ಮ ಅನುಕೂಲಕ್ಕೆ ತಕ್ಕಂತೆ ಪರಿಸ್ಥಿತಿಯನ್ನು ಬದಲಾಯಿಸಿಕೊಂಡರು. ಸಾಮಾನ್ಯವಾಗಿ ಬುದ್ಧಿವಂತರ ಕುಟುಂಬದಿಂದ ಇಂತಹ ವ್ಯಕ್ತಿಗಳನ್ನು ಆರಿಸಲಾಗುತ್ತಿತ್ತು. ಈ ಪಟೇಲರು ಮತ್ತು ಶಾನುಭೋಗರು ಆ ಗ್ರಾಮದ ಅಥವಾ ಸಮಾಜದಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತಿದ್ದರು. ಭ್ರಷ್ಟಾಚಾರಕ್ಕೆ ಅತ್ಯಂತ ಫಲವತ್ತಾದ ಪ್ರದೇಶಗಳು ಇವಾಗಿದ್ದವು. ವಿಶೇಷವಾಗಿ ಶಾನುಭೋಗರ ಸ್ಥಾನವನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ. ಗ್ರಾಮಗಳಲ್ಲಿ ಈ ವ್ಯಕ್ತಿಗಳು ಪ್ರಬಲರಾಗಿದ್ದರೆ ತಾಲ್ಲೂಕು ಮಟ್ಟದಲ್ಲಿ ಹೊಸದಾಗಿ ಸೃಷ್ಟಿಯಾದ ಆಡಳಿತಾತ್ಮಕ ಘಟಕಗಳಲ್ಲಿ – ಮತ್ತೆ ಬ್ರಾಹ್ಮಣರ ಬೇರೆ ಬೇರೆ ಗುಂಪುಗಳು ಶೋಷಣೆಗೆ ಸಜ್ಜಾದವು. ಶೇ. 80 ಭಾಗದ ಕಂದಾಯ ಇಲಾಖೆ ಹುದ್ದೆಗಳು ಬ್ರಾಹ್ಮಣರ ಪಾಲಾಗಿದ್ದವು. 19ನೇ ಶತಮಾನದ ಮಧ್ಯಭಾಗದಲ್ಲಿ ದಕ್ಷಿಣ ಭಾರತದ ಬಹುತೇಕ ಸ್ಥಳಗಳಲ್ಲಿ ವ್ಯಾಪಕವಾಗಿದ್ದ ಬ್ರಾಹ್ಮಣರ ಅಧಿಕಾರದ ಬಗ್ಗೆ ಒಬ್ಬ ಆಂಗ್ಲ ಅಧಿಕಾರಿ ಸಲ್ಲಿಸಿರುವ ವರದಿಯಿಂದ ಸಾಬೀತಾಗಿದೆ. (ಮದ್ರಾಸ್ ಸರ್ಕಾರಕ್ಕೆ ಡಬ್ಲ್ಯೂ.ಇಲಿಯಟ್, 20 ನವೆಂಬರ್ 1854, ಸಂಸತ್ತಿನ ಲೇಖನಗಳಲ್ಲಿ ಹೌಸ್ ಆಫ್ ಕಾಮನ್ಸ್, ಸಂಖ್ಯೆ XVII ಪುಟ–143). ಆತನ ಪ್ರಕಾರ ನಿಜವಾದ ಸ್ಥಳೀಯ ಅಧಿಕಾರಿ ಎಂದರೆ **ಶಾನುಭೋಗ**. ಪಟೇಲನಿಗೆ ಅಲ್ಪ ಪ್ರಮಾಣದ ಭತ್ಯೆ ಪ್ರಾಪ್ತವಾಗುತ್ತಿತ್ತು ಎಂಬುದನ್ನು ಬಿಟ್ಟರೆ ಶಾನುಭೋಗನಿಗೆ ಹೆಚ್ಚಿನ ಪ್ರಮಾಣದ ಇನಾಮು ಎಂದರೆಬೆಳೆದ ಬೆಳೆಯಲ್ಲಿ ಒಂದು ಭಾಗದ ಜೊತೆಗೆ ಭತ್ಯೆ ದಕ್ಕುತ್ತಿತ್ತು. ಮೇಲಾಗಿ, ಬೆಳೆದ ಫಸಲಿನಲ್ಲಿ ಒಂದು ಭಾಗ ಕೊಡುವ ಪದ್ಧತಿಯು ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುತ್ತಿತ್ತು. ಹಾಗೇ ಕೃಷಿಕರಿಂದ ದಾನ–ಧರ್ಮಗಳ ರೂಪದಲ್ಲಿ ಕಾಣಿಕೆಗಳನ್ನು ಇವರು ವಸೂಲಿ ಮಾಡುತ್ತಿದ್ದರು. ಜಿಲ್ಲಾ ಆಡಳಿತದಲ್ಲಿಯೂ ಸಹ ಬ್ರಾಹ್ಮಣರು ಆಯಕಟ್ಟಿನ ಜಾಗವನ್ನು ಪಡೆದುಕೊಂಡಿದ್ದರು. ಆಯಾ ಪ್ರದೇಶದ ಆಡಳಿತ ಕಾರ್ಯದಲ್ಲಿ ಬ್ರಿಟೀಷ್ ಅಧಿಕಾರಿಗಳು ಈ ಬ್ರಾಹ್ಮಣರ ಮೇಲೆ ಅವಲಂಬಿತವಾಗಿರುತ್ತಿದ್ದ ಕಾರಣ ಇವರಿಗೆ ಇಷ್ಟವಾಗುವ ರೀತಿಯಲ್ಲಿ ಸಾಮಾನ್ಯವಾಗಿ ಬ್ರಿಟೀಷರು ತೀರ್ಮಾನ ಕೈಗೊಳ್ಳುತ್ತಿದ್ದರ. ಜೊತೆಗೆ ಜಿಲ್ಲಾ ಕಲೆಕ್ಟರ್ ಗಳು ತಮ್ಮ ಜಿಲ್ಲೆಗಳಲ್ಲಿ ಉದ್ಯೋಗಗಳನ್ನು ಭರ್ತಿ ಮಾಡುವಾಗ ಶಿರಸ್ತೇದಾರರ ಶಿಫಾರಸ್ಸಿನ ಆಧಾರದ ಮೇಲೆ ನಿರ್ಧರಿಸುತ್ತಿದ್ದರು. ಜಾತಿವಾದಿ ಹಾಗೂ ಸ್ವಜನ ಪಕ್ಷಪಾತಿಗಳಾದ ಶಿರಸ್ತೇದಾರರು (ಬ್ರಾಹ್ಮಣರು) ಸಾಮಾನ್ಯವಾಗಿ ತಮ್ಮ ರಕ್ತಸಂಬಧಿಗಳಿಗೆ ಸರ್ಕಾರಿ

ಉದ್ಯೋಗಗಳನ್ನು ತಮ್ಮ ಸ್ವಂತ ಆಸ್ತಿ ಎನ್ನುವಂತೆ ಹಂಚುತ್ತಿದ್ದರು. (ದ ಹಿಂದು – ಮದ್ರಾಸ್‌ನಿಂದ ಹೊರಡುವ ಆಂಗ್ಲ ದೈನಿಕ 17 ಸೆಪ್ಟೆಂಬರ್ 1982, 31 ಜುಲೈ, 13 ಸೆಪ್ಟೆಂಬರ್ 1894).

ಈ ಶಿರಸ್ತೇದಾರರ ಸ್ವಜನ ಪಕ್ಷಪಾತ ಹಾಗೂ ಜಾತೀಯತೆ ಯಾವ ಮಟ್ಟ ಮುಟ್ಟಿತ್ತೆಂದರೆ ಕಡಪ ಮತ್ತು ಅನಂತಪುರ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸಿದ ಮಹಾಶಯರಾದಂತಹ ಡಿ. ಕೃಷ್ಣರಾವ್ ಎಂಬುವವರು ಆಯಾ ಜಿಲ್ಲಾಧಿಕಾರಿಗಳ ಕಛೇರಿಗಳಿಗೆ ತಮ್ಮ ಸಂಬಂಧಿಕರ ಪೈಕಿ ಕ್ರಮವಾಗಿ 117 ಮತ್ತು 108 ಮಂದಿಯನ್ನು ತಮ್ಮ ಪ್ರಭಾವ ಬಳಸಿ ನೇಮಕ ಮಾಡಿದ್ದರು. (ದ ಹಿಂದು 17 ಸೆಪ್ಟೆಂಬರ್ 1892 ಮತ್ತು 4 ಮೇ 1893).

ಮದ್ರಾಸ್ ಪ್ರಾಂತ್ಯದ ಅನೇಕ ಜಿಲ್ಲೆಗಳಲ್ಲಿಯೂ ಸಹ ಇದೇ ಪ್ರಕಾರವಾಗಿ ನಡೆಯಿತು. ದೇಶೀಯ ಸಂಸ್ಥಾನಗಳಲ್ಲಿ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿರಲಿಲ್ಲ. ಮೈಸೂರು ಸಂಸ್ಥಾನದ ನಗರ ವಿಭಾಗ (ಶಿವಮೊಗ್ಗ ಪ್ರಾಂತ್ಯ) ದಲ್ಲಿ ಒಂದು ಕುಟುಂಬದ ಕಂದಾಯ ಇಲಾಖೆ ಅಧಿಕಾರಿಗಳ ಅಸಮರ್ಪಕ ಕಾರ್ಯ ನಿರ್ವಹಣೆ ಯಿಂದಾಗಿ 1831ರ ಗಲಭೆಗೆ ಕಾರಣವಾಯಿತಲ್ಲದೆ, ತತ್‌ಫಲವಾಗಿ ಮೈಸೂರು ಅರಸರು ತಮ್ಮ ಸಿಂಹಾಸನವನ್ನು ಕಳೆದುಕೊಳ್ಳಬೇಕಾಯಿತು. (1831–1881).

ಈ ಮೇಲೆ ತಿಳಿಸಿದಂತೆ ಆಳರಸರು ಸೇರಿದಂತೆ ಉಳಿದ ಎಲ್ಲರೂ ಬ್ರಾಹ್ಮಣೇತರರ ಸಾಲಿಗೆ ಬರುತ್ತಿದ್ದರು. ದಕ್ಷಿಣ ಭಾರತದಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರೆಂಬ ಭೇದಭಾವ ಅಥವಾ ಕಂದಕ ಹೆಚ್ಚಾಗತೊಡಗಿತು. ಕ್ರೈಸ್ತಧರ್ಮದ ಪ್ರಭಾವ, ಇಂಗ್ಲೀಷ್ ಶಿಕ್ಷಣದ ಪ್ರಭಾವ ಹೆಚ್ಚಾದಂತೆಲ್ಲ ಬ್ರಾಹ್ಮಣೇತರರಲ್ಲಿ ಶ್ರೇಷ್ಠರೆಂಬ (Superiority Complex) ಭಾವನೆ ಹುಟ್ಟಿಕೊಂಡಿತು. ಬ್ರಾಹ್ಮಣೇತರರಲ್ಲಿದ್ದ ಸುಪ್ತಭಾವನೆಗಳು ಹೆಡೆ ಎತ್ತತೊಡಗಿದವು. ಕ್ರಿ.ಶ. 19–20ನೇ ಶತಮಾನದಲ್ಲಿ ಅರ್ಥಾತ್ 1880–1947ರ ಅವಧಿಯಲ್ಲಿ ದಕ್ಷಿಣದಲ್ಲಿ ಹಲವಾರು ಚಳವಳಿಗಳು ನಡೆದವು. ಅವುಗಳಲ್ಲಿ ಸಾಮಾಜಿಕ–ಧಾರ್ಮಿಕ ಚಳವಳಿ, ಕೋಮುವಾದಿ ಚಳವಳಿ, ಸ್ವಾತಂತ್ರ್ಯ ಮತ್ತು ಭಾಷಾವಾರು ಪ್ರಾಂತ್ಯಗಳ ಅಥವಾ ಏಕೀಕರಣ ಚಳವಳಿ ಹೀಗೆ ಹಲವಾರು ಹೆಸರುಗಳಿಂದ ಕರೆಯುವ ಚಳವಳಿಗಳು ಈ ಮೇಲ್ಕಂಡ ಅವಧಿಯಲ್ಲಿ ನಡೆದವು. ಈ ಚಳವಳಿಗೆ ವಿಶಾಲವಾದ ಅರ್ಥ ಹಾಗೂ ಗಂಭೀರತೆಯನ್ನು ಕೆಲವು ನಾಯಕರು ತಂದು ಕೊಟ್ಟು ಮೇಲ್ಪಂಕ್ತಿ ಹಾಕಿಕೊಟ್ಟರು. ಅವರುಗಳೆಂದರೆ ಮಹಾರಾಷ್ಟ್ರದಲ್ಲಿ ಜ್ಯೋತಿರಾವ್‌ಪುಲೆ, ಮದ್ರಾಸಿನ ಪಿ. ತ್ಯಾಗರಾಜ ಚೆಟ್ಟಿ ಮತ್ತು ಪೆರಿಯಾರ್ ರಾಮಸ್ವಾಮಿ ನಾಯರ್, ಕೇರಳದ ನಾರಾಯಣ ಗುರು, ಮೈಸೂರಿನ ಬಸವಯ್ಯ, ಹೆಚ್. ಚನ್ನಯ್ಯ, ಗುಲಾಮ್ ಅಹ್ಮದ್‌ಕಲಾಮಿ ಇನ್ನೂ ಮುಂತಾದವರು. ವಿಶೇಷವಾಗಿ

ಕರ್ನಾಟಕದಲ್ಲಿ (ಮೈಸೂರು ಸಂಸ್ಥಾನ) ಹಿಂದುಳಿದ ವರ್ಗಗಳ ಹೋರಾಟಕ್ಕೆ ರಂಗ ಪ್ರವೇಶ ಮಾಡಿದ ಬ್ರಾಹ್ಮಣೇತರ ಬುದ್ಧಿಜೀವಿ ಎಂದರೆ ಪ್ರೊ. ಕಟ್ಟಿಮಂಚಿ, ರಾಮಲಿಂಗಾರೆಡ್ಡಿಯವರು. ಡಾ॥ ಸಿ.ಆರ್. ರೆಡ್ಡಿ ಎಂದೇ ಖ್ಯಾತನಾಮರಾಗಿದ್ದ ಇವರು ದಕ್ಷಿಣ ಭಾರತದ ರಾಜಕಾರಣದಲ್ಲಿ ಎರಡು ದಶಕಗಳ ಕಾಲ (1910–1930) ಪ್ರಮುಖ ಪಾತ್ರ ವಹಿಸಿದರು. ಮೇಧಾವಿಯೂ ಪ್ರಗತಿಗಾಮಿಗಳೂ ಆದ ಇವರನ್ನು ಹೆಚ್ಚಿನ ವಿದ್ಯಾಭ್ಯಾಸ ಮಾಡಲು ಬರೋಡ ಮಹಾರಾಜರು ವಿದೇಶಕ್ಕೆ ಕಳುಹಿಸಿದ್ದರು. ವಿದ್ಯಾಭ್ಯಾಸ ಮುಗಿಸಿ ಬಂದ ಮೇಲೆ ರೆಡ್ಡಿಯವರು ರಾಜ ಪಕ್ಷ ಪಾತಿಯಾಗಿದ್ದರು. ಅದರಲ್ಲೂ ಬರೋಡ, ಮೈಸೂರು ಮುಂತಾದ ಪ್ರಗತಿ ಪರ ಹಾಗೂ ಮಾದರಿ ರಾಜ್ಯಗಳ ರಾಜರ ಬಗ್ಗೆ ಅವರಿಗೆ ವಿಶ್ವಾಸವಿತ್ತು. ಮೈಸೂರಿಗೆ ಬರುವ ಮುನ್ನ ಬರೋಡಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ರೆಡ್ಡಿಯವರು ಅಂದಿನ ತೀವ್ರಗಾಮಿ ರಾಷ್ಟ್ರೀಯವಾದಿಯಾಗಿದ್ದ ರವಿಂದ್ರ ಘೋಷರ ಸಹೋದ್ಯೋಗಿಯಾಗಿದ್ದರು ಮತ್ತು ಅವರಿಂದ ರಾಷ್ಟ್ರೀಯತಾ ಒಲವುಗಳನ್ನು ಬೆಳೆಸಿಕೊಂಡಿದ್ದರು. ಬರೋಡಾದಿಂದ ಮೈಸೂರು ವಿಶ್ವವಿದ್ಯಾಲಯದ ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಬಂದರು. ಶಿಕ್ಷಣತಜ್ಞರಾದ ಇವರು ಮೈಸೂರಿನಲ್ಲಿ ಮೊದಲು ಹಿಂದುಳಿದ ವರ್ಗಗಳ ಚಳವಳಿಯ ನೇತಾರರಾದರು. ಪಾಶ್ಚಾತ್ಯ ಉದಾರವಾದದಿಂದ ದೇಶೀಯ ಸಂಸ್ಥಾನಗಳಲ್ಲಿ ಮೈಸೂರಿಗೆ ಮೊದಲ ಸ್ಥಾನವಿದೆ. ಬ್ರಿಟಿಷರ, ಆಳರಸರ ರಕ್ಷಣೆಯ ಜೊತೆಜೊತೆಗೆ ಸಾಮಾನ್ಯ ಜನರನ್ನು ಆಡಳಿತದೊಂದಿಗೆ ಬೆಸೆಯುವ ಸಲುವಾಗಿ 1880ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆ ಸೇರಿದಂತೆ ಕೆಲವಾರು ಸಮಿತಿ, ಸಭೆಗಳು ರಚನೆಯಾಗುವ ಮೂಲಕ ಮೈಸೂರು ಇಡೀ ಭಾರತದಲ್ಲಿಯೇ ಮಾದರಿ ಸಂಸ್ಥಾನವಾಯಿತು. ಈಗಾಗಲೇ ತಿಳಿಸಿರುವಂತೆ ಉದಾರವಾದಿಗಳಾದ ಮೈಸೂರರಸರ ವಸಾಹತುಶಾಹಿ ಸನ್ನಿವೇಶದಲ್ಲಿ ಜಾತಿ ಆಧಾರಿತ ಗುಂಪುಗಳು, ಸಂಘಗಳು ಚಿಗುರೊಡೆಯ ತೊಡಗಿದವು. ಹೀಗೆ ಮೊದಲಿಗೆ ಹುಟ್ಟಿಕೊಂಡವೇ ರಾಜ್ಯದ ಶೇಕಡ 40ರಷ್ಟು ಜನಸಂಖ್ಯೆಯಿದ್ದ ಒಕ್ಕಲಿಗೆ, ಲಿಂಗಾಯಿತ ಮತ್ತು ಮುಸ್ಲಿಂ ಜಾತಿ ಸಂಘ ಸಂಸ್ಥೆಗಳು. ಆದರೆ ತಮ್ಮನ್ನೆಲ್ಲಾ ಒಗ್ಗೂಡಿಸಬಹುದಾದ ವಿಷಯಗಳು ಅವರಿಗೆ ಹೊಳೆದದ್ದು ಬಹಳ ನಿಧಾನವಾಗಿ. ಅಲ್ಲಿಯ ತನಕ ಲಭ್ಯವಿದ್ದ ಅವಕಾಶಗಳನ್ನು ಬಳಸಿಕೊಂಡು ಆಳುವವರನ್ನು ಸಂಪ್ರೀತಿಗೊಳಿಸಿ ತಮ್ಮ ಜಾತಿ ಸಂಬಂಧಿಕರಿಗೆ ಸಣ್ಣಪುಟ್ಟ ಸವಲತ್ತುಗಳನ್ನು ಪಡೆದುಕೊಳ್ಳಲು ಅವಲಂಬಿಸಿದ್ದ ಈ ಸಂಘಟನೆಗಳು ರಾಜಶಾಹಿ ಪರವೇ ಇದ್ದು ಅದರ ವಂದಿ ಮಾಗಧರಂತೆ ವರ್ತಿಸಿದ್ದುದರಿಂದ, ಆಡಳಿತವೂ ಅವರನ್ನು ನಿರಾಶೆಗೊಳಿಸುತ್ತಿರಲಿಲ್ಲ. (ಸಾಮಾಜಿಕ ಹಿನ್ನಲೆಯಲ್ಲಿ ಮೈಸೂರು ರಾಜಕೀಯ 1881–1940–ಕೆಲವು ಒಳನೋಟಗಳು, ಎಸ್. ಚಂದ್ರಶೇಖರ್, ಪುಟ–27 ಬೆಂ.)

ಉದಾರವಾದಿಯೂ, ರಾಜನಿಷ್ಠರೂ ಆಗಿದ್ದ ಪ್ರೊ. ಸಿ.ಆರ್. ರೆಡ್ಡಿಯವರಿಗೆ ಮೈಸೂರಿನ ಅರಮನೆಯ ಪ್ರಭಾವಿ ವ್ಯಕ್ತಿಗಳ ಸ್ನೇಹ ಸಲಿಗೆ ಇದ್ದಿತು. ಇವರಲ್ಲಿ ಮುಖ್ಯರೆಂದರೆ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು, ಅವರ ಖಾಸಾ ತಮ್ಮ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ರವರು ಮತ್ತು ಅವರ ಸೋದರ ಮಾವನವರಾಗಿದ್ದ ಕಾಂತರಾಜ ಅರಸರು (ದಿವಾನರು). ಸಿ.ಆರ್. ರೆಡ್ಡಿ ಮತ್ತು ಅವರ ಗುಂಪಿನ ಬಗ್ಗೆ ರಾಜವಂಶಸ್ಥರಿಗೆ ಗೌರವಾದರಗಳಿದ್ದವು ಹಾಗೂ ಅವರ ಮಾತಿಗೆ ಅರಮನೆಯು ಸ್ಪಂದಿಸುತ್ತಿತ್ತು. (ಸಾಮಾಜಿಕ ಹಿನ್ನೆಲೆಯಲ್ಲಿ – ಎಸ್. ಚಂದ್ರಶೇಖರ್, ಪುಟ–130) ರಾಜ್ಯದ ರಾಜಕೀಯ ವಿದ್ಯಮಾನದ ಬಗ್ಗೆ ಸದಾ ಎಚ್ಚರದಿಂದಿರುತ್ತಿದ್ದ ಈ ಆಪ್ತಕೂಟ ರಾಜ್ಯದಲ್ಲಿ ಆಗುತ್ತಿದ್ದ ಜನ ಜಾಗೃತಿಯು ಕ್ರಮೇಣ ವಸಾಹತು ವಿರೋಧಿಯಾಗು ತ್ತಿದ್ದುದನ್ನು ಕಂಡಿತು. ಅದು ರಾಜಶಾಯಿಯ ವಿರುದ್ಧ ತಿರುಗುವ ಲಕ್ಷಣಗಳೂ ಇದ್ದವು. ರಾಜ್ಯದ ಬಹುಸಂಖ್ಯಾತ ಹಾಗೂ ಪ್ರಭಾವಿ ಕೋಮುಗಳು ಅಲ್ಪಸಂಖ್ಯಾತ ವರ್ಗದ ರಾಜ್ಯದ ಅಧಿಕಾರಶಾಯಿಯ ಮೇಲೆ ಹೊಂದಿದ್ದ ಏಕಸ್ವಾಮ್ಯದ ಬಗ್ಗೆ ತೀವ್ರ ಅಸಮಾಧಾನಗೊಂಡಿದ್ದು ಆ ಅಸಮಾಧಾನಕ್ಕೆ ಮಹಾರಾಜರನ್ನೇ ಹೊಣೆ ಮಾಡುವ ಎಲ್ಲಾ ಸಾಧ್ಯತೆಗಳಿದ್ದುದು ರಾಜರ ಹಿತೈಷಿಗಳನ್ನು ಸಹಜವಾಗಿಯೇ ಚಿಂತೆಗೀಡು ಮಾಡಿತ್ತು. ಹಾಗಾಗುವುದು ರೆಡ್ಡಿಯವರಿಗೆ ಇಷ್ಟವಿರಲಿಲ್ಲ. ಜಾಣ್ಮೆಯಿಂದ ಬ್ರಾಹ್ಮಣೇತರರ ಗುಂಪನ್ನು ಅರಮನೆ ಪ್ರಭಾವಿ ವಲಯದೊಂದಿಗೆ ಬೆಸೆಯುವಲ್ಲಿ ರೆಡ್ಡಿಯವರು ಯಶಸ್ವಿಯಾದರು. ಆದರೆ ರೆಡ್ಡಿಯವರಿಗೆ ರಾಜರ ಹಿತವೊಂದೇ ಮುಖ್ಯವಾಗಿರಲಿಲ್ಲ. ಅವರಿಗೆ ಬಹುಮುಖ್ಯವಾಗಿ ಶೋಷಿತ ಬಹುಸಂಖ್ಯಾತರ ಪ್ರಗತಿಯಾಗಬೇಕಾಗಿತ್ತು. ಬಹುಸಂಖ್ಯಾತ ಕೋಮುಗಳ ಗುಂಪನ್ನು ಮಹಾರಾಜರ ಪರೋಕ್ಷ ಬೆಂಬಲದೊಂದಿಗೆ ಹತ್ತಿರ ಸೆಳೆದುಕೊಂಡು ರೆಡ್ಡಿಯವರು ಮೈಸೂರಿನ ರಾಜಕೀಯದಲ್ಲಿ ಹಲವಾರು ಪ್ರಮುಖ ಸಾಮಾಜಿಕ, ರಾಜಕೀಯ ಬದಲಾವಣೆಗಳನ್ನು ತರುವಲ್ಲಿ ಯಶಸ್ವಿಯಾದರು.

ಈ ಹಿನ್ನೆಲೆಯಲ್ಲಿಯೆ ಶಾಲಾ ಕಾಲೇಜುಗಳಲ್ಲಿ ಕೊಡಬೇಕಾಗಿದ್ದ ಶುಲ್ಕದಲ್ಲಿ ಕಡಿತ, ದಲಿತ ಹಾಗೂ ಹಿಂದುಳಿದ ಗ್ರಾಮೀಣ ವಿದ್ಯಾರ್ಥಿವೇತನ ಮತ್ತು ಇತರೆ ಸವಲತ್ತುಗಳು ಇವೇ ಮುಂತಾದ ಬೆಳವಣಿಗೆಗಳನ್ನು ನೋಡಬಹುದು. ಸರ್ಕಾರಿ ಸೇವೆಯ ಮೇಲೆ ಬ್ರಾಹ್ಮಣ ಕೋಮಿಗಿದ್ದ ಹಿಡಿತವನ್ನು ಸಡಿಲಿಸುವ ಪ್ರಯತ್ನವೂ ಈ ಸಂದರ್ಭದಲ್ಲಿ ನಡೆಯಿತು.

ರೆಡ್ಡಿಯವರು ಮೈಸೂರಿನಲ್ಲಿ ಇದ್ದಂತಹ ಕಾಲದಲ್ಲಿ ಅವರೇನು ಪೂರ್ಣಾವಧಿ ರಾಜಕಾರಣಿಯಾಗಿರಲಿಲ್ಲ. ಅವರೆಂತಹ ಉನ್ನತ ಸ್ಥಾನದಲ್ಲೇ ಇರಲಿ ಅರಮನೆ–ಯೊಂದಿಗೆ ನೇರ ಸಂಪರ್ಕವಿದ್ದಿರಲಿ ಮೂಲತಃ ಒಬ್ಬ ಸರ್ಕಾರಿ ನೌಕರರಾಗಿದ್ದರು.

ಸಾರ್ವಜನಿಕ ಸಂಪರ್ಕವಿಟ್ಟುಕೊಳ್ಳಲು ಅವರಿಗೆ ಅವಕಾಶವಿದ್ದಿತು. ಆದರೆ ಬಹಿರಂಗವಾಗಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವಂತಿರಲಿಲ್ಲ. ರೆಡ್ಡಿಯವರಿಗೆ ಮೈಸೂರಿನಲ್ಲಿ ಕ್ರಾಂತಿ ಅಥವಾ ಜನಾಂದೋಲನ ಮಾಡಿ ರಾಜಕೀಯ ಬದಲಾವಣೆ ಮಾಡುವ ಉದ್ದೇಶವಿರಲಿಲ್ಲ. ಬಹುಸಂಖ್ಯಾತರನ್ನು ಆಡಳಿತದಲ್ಲಿ ಪಾಲ್ಗೊಳ್ಳುವಂತೆ ಅನುವು ಮಾಡಿಕೊಟ್ಟು ಸರ್ಕಾರಿ ಯಂತ್ರವನ್ನು ಜನತಾ ಸರ್ಕಾರವನ್ನಾಗಿ ಮಾಡುವುದಾಗಿದ್ದಿತು. ಈ ವಿಷಯದಲ್ಲಿ ರೆಡ್ಡಿಯವರು ಅಪ್ಪಟ ಉದಾರವಾದಿ ಎಂದು ಹೇಳಬಹುದು. ಅಂದು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಉನ್ನತ ಸ್ಥಾನಮಾನವನ್ನು ಹೊಂದಿದ್ದ ಬ್ರಾಹ್ಮಣರ ಜೊತೆ ಬಹುಸಂಖ್ಯಾತ ಶೂದ್ರರು ಸಮಸಮವಾಗಿ ಸ್ಪರ್ಧಿಸಲು ಅಸಾಧ್ಯವಾಗಿತ್ತು. ಒಂದೇ ವೇದಿಕೆಯಡಿ ಒಗ್ಗೂಡದಿದ್ದರೆ ವೈದಿಕ ಅಲ್ಪಸಂಖ್ಯಾತ ವೈದಿಕಶಾಹಿ ಕಪಿಮುಷ್ಠಿಯಿಂದ ಬಿಡಿಸಿಕೊಳ್ಳಲು ಸಾಧ್ಯವಿಲ್ಲವೆಂದು ಸಿ.ಆರ್. ರೆಡ್ಡಿಯವರು ದೃಢವಾಗಿ ನಂಬಿದ್ದರು. ('ಸಾಮಾಜಿಕ ಹಿನ್ನೆಲೆಯಲ್ಲಿ' ಪುಟ–131, ಡಾ. ಎಸ್. ಚಂದ್ರಶೇಖರ್).

ದಕ್ಷಿಣ ಭಾರತದಾದ್ಯಂತ ಹಿಂದುಳಿದ ವರ್ಗಗಳು ಆಂದೋಲನವನ್ನು ನಡೆಸಿದ್ದವು. ಇದರಲ್ಲಿ ಕರ್ನಾಟಕವು ಹಿಂದೆ ಬೀಳಲಿಲ್ಲ. ಹಿಂದುಳಿದ ವರ್ಗ ಎಂದರೆ ಯಾವುದು? ಅದರ ಸಾಮಾಜಿಕ ಸಾಂಸ್ಕೃತಿಕ ಮತ್ತು ಆರ್ಥಿಕ ಲಕ್ಷಣಗಳಾವುವು? ಈ ಪ್ರಶ್ನೆಗಳಿಗೆ ಸ್ಪಷ್ಟವಾದ ಉತ್ತರ ಯಾವ ಕಾಲದಲ್ಲಿಯೂ ದೊರೆತಿಲ್ಲ. ಹಿಂದುಳಿದ ವರ್ಗಗಳನ್ನು ಕುರಿತಂತೆ ಮಾಡುವ ವ್ಯಾಖ್ಯಾನ ಗೊಂದಲಮಯವಾಗಿದೆ. ಹಿಂದುಳಿದ ವರ್ಗ ಒಂದು ನಿಶ್ಚಲವಾದ, ನಿಶ್ಚಿತವಾದ ವರ್ಗವಲ್ಲ. ಅದೊಂದು ಸಾಪೇಕ್ಷವಾದ ಪರಿಕಲ್ಪನೆ. ಹಿಂದುಳಿದ ವರ್ಗಗಳನ್ನು ಗುರುತಿಸುವ ಸಮಸ್ಯೆ ಭಾರತದ ಜಾತಿ ಆಧಾರಿತ ಸಮಾಜಕ್ಕೆ ವಿಶಿಷ್ಟವಾದುದಾಗಿದೆ. ಪ್ರತಿಯೊಂದು ಜಾತಿಯನ್ನು ಮತ್ತೊಂದಕ್ಕೆ ಹೋಲಿಸಿದರೆ ಮುಂದುವರೆದ ಅಥವಾ ಹಿಂದುಳಿದ ವರ್ಗಗಳನ್ನು ಗುರುತಿಸುವ ಸಮಸ್ಯೆ ಹುಟ್ಟುಕೊಂಡಿದ್ದು ಪ್ರಜಾಪ್ರಭುತ್ವ ಮಾದರಿ ಸರ್ಕಾರ ಮುಂದುವರೆದ ಅಥವಾ ಹಿಂದುಳಿದ ವರ್ಗಗಳನ್ನು ಗುರುತಿಸುವ ಸಮಸ್ಯೆ ಹುಟ್ಟುಕೊಂಡಿದ್ದು ಪ್ರಜಾಪ್ರಭುತ್ವ ಮಾದರಿ ಸರ್ಕಾರದ ಹುಟ್ಟಿನೊಂದಿಗೆ. ಭಾರತದಲ್ಲಿ ಸ್ವಾತಂತ್ರ್ಯಾನಂತರ ಹಿಂದುಳಿದ ವರ್ಗಗಳ ಸಮಸ್ಯೆ ಹೆಚ್ಚು ಸ್ಪಷ್ಟವಾದ ರೂಪವನ್ನು ಪಡೆಯಿತು ಎಂದು ಹೇಳಬಹುದು. ಸಂವಿಧಾನದಲ್ಲಿ ಹಿಂದುಳಿದ ವರ್ಗಗಳಿಗೆ ವಿಶೇಷ ಸವಲತ್ತುಗಳನ್ನು ಕೊಡುವ ಉದ್ದೇಶದಿಂದ 15, 16 ಮತ್ತು 340ನೇ ವಿಧಿಯಲ್ಲಿ ಅದರ ಉಲ್ಲೇಖ ಬಂದಾಗ ಅದರ ಅರ್ಥ ನಿರೂಪಣೆಯ ಬಗೆಗೆ ಸಾಕಷ್ಟು ಗೊಂದಲ ಉಂಟಾಯಿತು. ಅಂತಿಮವಾಗಿ ಡಾ॥ ಬಿ.ಆರ್. ಅಂಬೇಡ್ಕರ್‌ರವರು ನಾವು ಹಿಂದುಳಿದ ವರ್ಗಗಳನ್ನು ವ್ಯಾಖ್ಯಾನಿಸುವ ಕೆಲಸವನ್ನು ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಗೆ ಬಿಟ್ಟಿದ್ದೇವೆ. ಸರ್ಕಾರದ ಅಭಿಪ್ರಾಯದ ಪ್ರಕಾರ

ಯಾವ ಸಮುದಾಯದ ಹಿಂದುಳಿದಿದೆಯೋ ಅದೇ ಹಿಂದುಳಿದ ವರ್ಗ ಎಂದು ಅಭಿಪ್ರಾಯಪಟ್ಟರು. ಈ ಸಂದರ್ಭ ಕರಡು ಸಂವಿಧಾನ ಸಮಿತಿಯ ಸದಸ್ಯರಾಗಿದ್ದ ಟಿ.ಟಿ. ಕೃಷ್ಣಮಾಚಾರಿಯುವರು ಇದರ ಉಲ್ಲೇಖವು ವಕೀಲರುಗಳಿಗೆ ಸ್ವರ್ಗವಾಗುತ್ತದೆ ಎಂದು ಭವಿಷ್ಯ ನುಡಿದಿದ್ದರು.

ಹಿಂದುಳಿದ ವರ್ಗಗಳ ಅರ್ಥನಿರೂಪಣೆಯಲ್ಲಿ ಬದಲಾದ ಗೊಂದಲಕ್ಕೆ ಕಾರಣವನ್ನು ತಿಳಿದುಕೊಳ್ಳಬೇಕಾದರೆ ನಾವು ಅದರ ಉಗಮ ಮತ್ತು ವಿಕಾಸದ ಇತಿಹಾಸವನ್ನು ತಿಳಿದುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಅತ್ಯಂತ ಪ್ರಶಸ್ತವಾದ ಇತಿಹಾಸವೆಂದರೆ ಮೈಸೂರು ಸಂಸ್ಥಾನದ ಇತಿಹಾಸ. ಏಕೆಂದರೆ ಮೊಟ್ಟಮೊದಲಿಗೆ ಹಿಂದುಳಿದ ವರ್ಗಗಳ ಸ್ಪಷ್ಟವ್ಯಾಖ್ಯಾನ ನೀಡಿದ ಕೀರ್ತಿ ಒಡೆಯರ ಆಳ್ವಿಕೆಯ ಮೈಸೂರು ಸಂಸ್ಥಾನಕ್ಕೆ ಸೇರುತ್ತದೆ.

ಮೈಸೂರು ಸಂಸ್ಥಾನವು ಎಲ್ಲಾ ವಿಷಯಗಳಲ್ಲಿಯೂ ಭಾರತದ ಮಾದರಿ ಸಂಸ್ಥಾನವಾಗಿದ್ದು ಅಥವಾ ಮಾದರಿ ಸರ್ಕಾರವೆಂದು ಹೆಗ್ಗಳಿಕೆಗೆ ಪಾತ್ರವಾಗಿದ್ದು ಮೈಸೂರು ಸಂಸ್ಥಾನದಲ್ಲಿ ಭಾರತದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಪ್ರಜಾಪ್ರಭುತ್ವ ಮಾದರಿ ಸರ್ಕಾರದ ಪ್ರಯೋಗ ನಡೆಯಿತು. ಇದರ ಪರಿಣಾಮದಿಂದ 1881 ರಲ್ಲಿ ಪ್ರಜಾಪ್ರತಿನಿಧಿ ಸಭೆ' ಉಗಮವಾಯಿತು. ಅಲ್ಲಿನ ಪ್ರಜಾಪ್ರತಿನಿಧಿಗಳು ಎಂದರೆ ವಿವಿಧ ಜಾತಿ ಮತ್ತು ಕೋಮುಗಳಿಗೆ ಸೇರಿದ ಜನ ನಾಯಕರು. ಈ ಪ್ರತಿನಿಧಿಗಳಾಗಲು ಕೆಲವಾರು ಅರ್ಹತೆಗಳನ್ನು ನಿಗದಿಪಡಿಸಿದ್ದರು. ಅವುಗಳೆಂದರೆ ಸುಶೀಕ್ಷಿತರು, ಆಸ್ತಿವಂತರಾಗಿದ್ದು ಸರ್ಕಾರಕ್ಕೆ ಕಾಲಕಾಲಕ್ಕೆ ಕಂದಾಯವನ್ನು ನೀಡಬೇಕಾಗಿತ್ತು. ಶಿಕ್ಷಣ ಮತ್ತು ಆರ್ಥಿಕ ಅನಾನುಕೂಲತೆ ಇವೇ ಮೊದಲಾದ ಅರ್ಹತೆಗಳನ್ನು ನಿಗದಿಪಡಿಸಿದ್ದರಿಂದ ಎಲ್ಲಾ ಜಾತಿಗಳಿಗೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯತ್ವ ಸಿಗುತ್ತಿರಲಿಲ್ಲ. ಈ ಸಂದರ್ಭದಲ್ಲಿ ಸಹಜವಾಗಿಯೇ ಬ್ರಾಹ್ಮಣರು ಹಾಗೂ ಆರ್ಥಿಕವಾಗಿ ಮುಂದುವರಿದ ನಗರೀಕರಣದ ಪ್ರಭಾವಕ್ಕೊಳಗಾದ ಪ್ರಬಲ ಜಾತಿ ಕೋಮಿನವರು ಹೊಸ ರಾಜಕೀಯ ವ್ಯವಸ್ಥೆಯಲ್ಲಿ ತಮ್ಮ ಪ್ರಾಬಲ್ಯವನ್ನು ಗಣನೀಯವಾಗಿ ಬಳಸಿಕೊಂಡರು. ಬೇರೆಲ್ಲಾ ಜಾತಿಗಳಿಗಿಂತ ಇಂಗ್ಲಿಷ್ ಶಿಕ್ಷಣ ಪಡೆದು ಜೀವನೋಪಾಯಕ್ಕಾಗಿ ಸರ್ಕಾರಿ ನೌಕರಿಯನ್ನು ಆರಿಸಿಕೊಂಡ ಇವರು ರಾಜಕೀಯ ಅಧಿಕಾರ ಹಾಗೂ ಪ್ರಭಾವವನ್ನು ಬೆಳೆಸಿಕೊಂಡರು. ಅತ್ಯಂತ ಅಲ್ಪ ಸಂಖ್ಯಾತರಾದ ಬ್ರಾಹಣರು ಶೇ.90ಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳನ್ನು ಪಡೆದುಕೊಂಡಿದ್ದರು. ಉಳಿದ ಬ್ರಾಹ್ಮಣೇತರ ಜಾತಿಗಳಿಗೆ ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕವಾಗಿ ಮುಂದುವರೆದಿದ್ದ ಲಿಂಗಾಯಿತರು ಹಾಗೂ ಒಕ್ಕಲಿಗ ಜನಾಂಗ ಮತ್ತು ನಗರ ಪ್ರದೇಶಗಳಲ್ಲಿ ಶಿಕ್ಷಣ ಪಡೆದಿದ್ದ ಮುಸ್ಲಿಮರಿಗೆ ಅಸಮಾಧಾನ ಉಂಟಾಯಿತು.

ಅದೇ ಸಮಯದಲ್ಲಿ ಮೈಸೂರು ಅರಸರು ಬಹು ಸಂಖ್ಯಾತರಾಗಿದ್ದ ಬ್ರಾಹ್ಮಣೇತರರರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅವಶ್ಯವೆಂದು ಮನಗಂಡರು.

ಮೈಸೂರು ಅರಸರ ಸ್ಥಿತಿ ಹೇಗಿತ್ತೆಂದರೆ 'ಅತ್ತದರಿ ಇತ್ತಪುಲಿ' ಎನ್ನುವಂತೆ ಒಂದೆಡೆ ಬ್ರಿಟಿಷರು (ಪುಲಿ) ಮತ್ತೊಂದೆಡೆ ಬ್ರಾಹ್ಮಣರ (ದರಿ) ನಿಯಂತ್ರಣಕ್ಕೆ ಸಿಲುಕಿದ್ದರು. ಮೈಸೂರು ಸಂಸ್ಥಾನದ ಆಡಳಿತವು ಬ್ರಿಟಿಷರ ಪರೋಕ್ಷ ನಿಯಂತ್ರಣ –ಕ್ಕೊಳಗಾಗಿದ್ದು ಬ್ರಿಟಿಷರ ಪ್ರತಿನಿಧಿಗಳಾಗಿ ದಿವಾನರುಗಳು (ಬ್ರಾಹ್ಮಣರು) ಮದ್ರಾಸ್ ಪ್ರೆಸಿಡೆನ್ಸಿಯ ಗೌರ್ನರ್‌ರವರಿಂದ ನೇಮಕಗೊಳ್ಳುತ್ತಿದ್ದರು. ಇದೇ ರೀತಿಯ ಪರೋಕ್ಷ ನಿಯಂತ್ರಣದಿಂದ ಮುಕ್ತಿ ಪಡೆದು ಸ್ವತಂತ್ರವಾಗಿ ಆಡಳಿತ ನಡೆಸುವ ಹಂಬಲ ಮೈಸೂರು ಅರಸರಿಗಿದ್ದಿತು. ರೊಟ್ಟಿಜಾರಿ ತುಪ್ಪಕ್ಕೆ ಬಿದ್ದಂತೆ ಇದೇ ಸಮಯಕ್ಕೆ ಮೈಸೂರಿನ ಬ್ರಾಹ್ಮಣರು ದಿವಾನ್ ಹುದ್ದೆಗೆ ಮದ್ರಾಸಿನ ಬ್ರಾಹ್ಮಣರ ಬದಲಿಗೆ ಮೈಸೂರಿನ ಬ್ರಾಹ್ಮಣರಿಗೆ ನೀಡಬೇಕೆಂದು **'ಮೈಸೂರು ಮೈಸೂರಿನವರಿಗೆ'** ಎಂಬ ಘೋಷಣೆಯೊಂದಿಗೆ ಒತ್ತಾಯ ಮಾಡತೊಡಗಿದರು. ಮೈಸೂರು ಮೈಸೂರಿನವರಿಗೆ ಎಂಬ ಘೋಷಣೆಯೊಂದಿಗೆ ಚಳವಳಿ ನಡೆಯಿತು. ಇದರಿಂದ ಪ್ರಭಾವಿತರಾದ ನಾಲ್ವಡಿ ಕೃಷ್ಣರಾಜ ಒಡೆಯರು ಮದ್ರಾಸಿ ಬ್ರಾಹ್ಮಣರ ಬದಲಿಗೆ ಮೈಸೂರಿನ ಬ್ರಾಹ್ಮಣ–ರಾದ ಸರ್.ಎಂ. ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಿಸಿಕೊಳ್ಳುವಂತಾಯಿತು. ಇದರ ಪರಿಣಾಮವಾಗಿ ಮೈಸೂರಿನ ಬ್ರಾಹ್ಮಣರು ದಿವಾನ್ ಹುದ್ದೆಗೆ ನೇಮಕವಾಗ–ತೊಡಗಿದರು. ಇದೇ ಸಮಯಕ್ಕೆ ದಕ್ಷಿಣ ಭಾರತದಾದ್ಯಂತ ಬ್ರಾಹ್ಮಣ ವಿರೋಧಿ ಚಳವಳಿ ಪ್ರಾರಂಭಗೊಂಡಿತು. ಅದರಲ್ಲಿ ವಿಶೇಷವಾಗಿ ಮದ್ರಾಸ್‌ನಲ್ಲೂ ಈ ಚಳವಳಿಯು ಗಂಭೀರ ಸ್ವರೂಪವನ್ನು ತಾಳಿತು. ಈ ಬ್ರಾಹ್ಮಣ ವಿರೋಧಿ ಚಳವಳಿ–ಯನ್ನು ಮದ್ರಾಸ್‌ನಿಂದ ಮೈಸೂರಿಗೆ ತಂದ ಕೀರ್ತಿ ಪ್ರೊ॥ ಸಿ.ಆರ್. ರೆಡ್ಡಿಯವರಿಗೆ ಸಲ್ಲುತ್ತದೆ.

ಡಾ॥ ಸಿ.ಆರ್. ರೆಡ್ಡಿಯವರ ವ್ಯಕ್ತಿ ಚಿತ್ರಣ



ಕ್ರಿ.ಶ. ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಇಡೀ ದಕ್ಷಿಣ ಭಾರತದಾದ್ಯಂತ ಹಿಂದುಳಿದ ವರ್ಗಗಳ ಚಳವಳಿಯನ್ನು ಹಬ್ಬಿಸಿದ ಹರಿಕಾರ ಡಾ॥ ಕಟ್ಟಿ ಮಂಚಿ ರಾಮಲಿಂಗಾ ರೆಡ್ಡಿ ಅವರು. ರೆಡ್ಡಿಯವರು ಶಿಕ್ಷಣ ತಜ್ಞರು, ರಾಜಕೀಯ ವಿಚಾರ ತಜ್ಞರು, ಆರ್ಥಿಕ ತಜ್ಞರು, ಪ್ರಾಧ್ಯಾಪಕರು, ಅಷ್ಟೇ ಅಲ್ಲ ಕವಿ ಮತ್ತು ವಿಮರ್ಶಕರೂ ಕೂಡ ಹೌದು. ರೆಡ್ಡಿಯವರ ವಿದ್ಯೆ, ವಿದ್ವತ್ತನ್ನು ಕಂಡ ಭಾರತದ ಹಲವಾರು ಸಂಸ್ಥಾನಗಳ ರಾಜ ಮಹಾ

ರಾಜರು ತಮ್ಮಲ್ಲಿಗೆ ಬರಮಾಡಿಕೊಂಡರು. ಶಿಕ್ಷಣ ತಜ್ಞರಾದ ರೆಡ್ಡಿಯವರು ತಾವು ಹೋದ ಕಡೆಯೆಲ್ಲಾ ಬ್ರಾಹ್ಮಣೇತರ ಚಳವಳಿಯನ್ನು ಬಡಿದೆಬ್ಬಿಸಿದರು. ಕೆಲವರಿಗೆ ಇವರು ಕಾರ್ಲ್ ಮಾರ್ಕ್ಸ್‌ನಂತೆ ಕಂಡರೆ ಕೆಲವರಿಗೆ ವಿಜ್ಞಾನಿ ಐನ್‌ಸ್ಟಿನ್‌ರಂತೆ ಕಂಡು ಬಂದರು. ಮೈಸೂರು ಸಂಸ್ಥಾನಕ್ಕೆ ಬಂದು ಹಿಂದುಳಿದ ಒಕ್ಕಲಿಗ ಜನಾಂಗವನ್ನು ಬಡಿದೆಬ್ಬಿಸಿದರು. ಅವರೇ ಕಟ್ಟಮಂಚಿ ರಾಮಲಿಂಗಾರೆಡ್ಡಿ. (ಆಂಧ್ರದ ರೆಡ್ಡಿಗಳನ್ನು ಈ ಲೇಖಕ ಇಲ್ಲೇಕೆ ತರುತ್ತಿದ್ದಾನೆ. ಎಂಬ ಗುಮಾನಿ ಕೆಲವರಲ್ಲಿ ಬರಬಹುದು.) ಡಾ. ರೆಡ್ಡಿಯವರು ಮೂಲತಃ ಕರ್ನಾಟಕದ ಕೋಲಾರದ ಮದನಪಲ್ಲಿ ಇವರು ಮೂಲ ಒಕ್ಕಲಿಗರು.

ಕಟ್ಟಮಂಚಿ ಆಂಧ್ರದ ಚಿತ್ತೂರು ಜಿಲ್ಲೆಯ ಒಂದು ಸಣ್ಣ ಹಳ್ಳಿ. ರೆಡ್ಡಿಯವರ ಪೂರ್ವಿಕರು ಹಲವಾರು ವರ್ಷಗಳ ಹಿಂದೆ (ಸುಮಾರು ನೂರೈವತ್ತು ವರ್ಷ) ಪ್ರಮುಖ ರಾಜವಂಶದವರಾಗಿದ್ದರು. ರೆಡ್ಡಿಯವರ ವಂಶದ ಮುಖ್ಯ ಕಸುಬು ವ್ಯವಸಾಯ. ಕೃಷಿಕ ಕುಟುಂಬವಾದರೂ ಮನೆತನವೆಲ್ಲಾ ಕವಿಗಳು, ವಿದ್ವಾಂಸರು, ವಿಮರ್ಶಕರಾಗಿ ಮಿಂಚಿದ್ದಾರೆ. ಡಾ. ರೆಡ್ಡಿಯವರ ಅಜ್ಜ (ರಾಮಲಿಂಗಾರೆಡ್ಡಿ) 'ಭಾಸ್ಕರಶತಕ' ದ ಕರ್ತೃ. ಡಾ. ರೆಡ್ಡಿಯವರ ತಂದೆ ಸುಬ್ರಹ್ಮಣ್ಯ ರೆಡ್ಡಿಯವರು ವೃತ್ತಿಯಲ್ಲಿ ಪ್ರಥಮ ಶ್ರೇಣಿ ಪ್ಲೀಡರ್ ಆಗಿದ್ದರೂ ಪ್ರವೃತ್ತಿಯಲ್ಲಿ ಸಾಹಿತಿ. 'ರತ್ನಾವಳಿ' ಹಾಗೂ 'ಭಾಗವತಸಾರ ಮುಕ್ತಾವಳಿ' ಎಂಬ ಎರಡು ಸಂಕಲನಗಳನ್ನು ಪ್ರಕಟಿಸಿದ ಕವಿ. ಇಂತಹ ಸುಸಂಸ್ಕೃತ ಕುಟುಂಬದಲ್ಲಿ 1880 ಡಿಸೆಂಬರ್ 10ರಂದು ಸಿ.ಆರ್. ರೆಡ್ಡಿಯವರು ಜನಿಸಿದರು.

ವಿದ್ಯಾಭ್ಯಾಸ : ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಕ್ರಮವಾಗಿ ತಮ್ಮ ಹುಟ್ಟೂರು ಹಾಗೂ ಚಿತ್ತೂರಿನಲ್ಲಿ ಪಡೆದರು. ಅಂದು ಭಾರತ ದಾದ್ಯಂತ ಪುನರುಜ್ಜೀವನ ಚಳವಳಿ ನಡೆಯುತ್ತಿದ್ದ ಕಾಲ. ಇದರಿಂದಾಗಿ ಶ್ರೀಮತಿ ಅನಿಬೆಸೆಂಟರ ಭಾಷಣಗಳಿಂದ ಪ್ರಭಾವಿತರಾದರು. ಮುಂದೆ ಥಿಯೋಸಾಫಿಕಲ್ ಸೊಸೈಟಿ ಚಳವಳಿಯಲ್ಲಿ ಭಾಗವಹಿಸಿದರು. ರೆಡ್ಡಿಯವರು ತೆಲುಗು, ಸಂಸ್ಕೃತ, ಇಂಗ್ಲಿಷ್ ಭಾಷೆಗಳ ಮೇಲೆ ಹಿಡಿತ ಸಾಧಿಸಿದ್ದರು.

ಉನ್ನತ ಶಿಕ್ಷಣಕ್ಕಾಗಿ ಮದ್ರಾಸಿನ ಸ್ಕಾಟಿಷ್ ಮಿಷನ್ ನಡೆಸುತ್ತಿದ್ದ ಕ್ರಿಶ್ಚಿಯನ್ ಕಾಲೇಜಿಗೆ ಸೇರಿದರು. ತಮ್ಮ ಅಧ್ಯಾಪಕರಾದ ಡಾ. ವಿಲಿಯಂ ಮಿಲ್ಲರ್, ಡಾ. ಸ್ಕಿನ್ನರ್ ಮತ್ತು ಬಾಲಗಂಗಾಧರ ತಿಲಕರ ಪ್ರಭಾವಕ್ಕೊಳಗಾದರು. 1902ರಲ್ಲಿ ಬಿ.ಎ. ಪದವಿ –ಯಲ್ಲಿ ರ್‍ಯಾಂಕ್ ಗಳಿಸಿದರು. ಇಂಗ್ಲೆಂಡಿನ ಕೇಂಬ್ರಿಡ್ಜ್‌ನ ಸೆಂಟ್‌ಜಾನ್ಸ್ ಕಾಲೇಜಿನಲ್ಲಿ ಉನ್ನತ ವ್ಯಾಸಂಗ ಮಾಡಲು ಅಂದಿನ ಭಾರತ ಸರ್ಕಾರವು ವಿದ್ಯಾರ್ಥಿ ವೇತನ ನೀಡಿ ಕಳುಹಿಸಿಕೊಟ್ಟಿತು. ಕಾಲೇಜಿನಲ್ಲಿ ಪ್ರತಿಭಾವಂತ ವಿದ್ಯಾರ್ಥಿಯೆಂಬ ಹೆಗ್ಗಳಿಕೆಗೆ

ಪಾತ್ರರಾದರು. ಯೂನಿವರ್ಸಿಟಿ ಲಿಬರಲ್ ಕ್ಲಬ್ಬಿನ ಕಾರ್ಯದರ್ಶಿಯಾಗಿ ಆಯ್ಕೆ–ಯಾದರು. ಆ ಸಂದರ್ಭದಲ್ಲಿ ಭಾರತದಿಂದ ಗೋಪಾಲಕೃಷ್ಣ ಗೋಖಲೆ, ಲಾಲಾ ಲಜಪತರಾಯ್ ಇನ್ನೂ ಮುಂತಾದ ಮೇಧಾವಿಗಳನ್ನು ಅತಿಥಿ ಭಾಷಣಕಾರರಾಗಿ ಆಹ್ವಾನಿಸುತ್ತಿದ್ದರು. ಇದರಿಂದಾಗಿ ಗೋಖಲೆಯವರು ರೆಡ್ಡಿಯವರು ತೀರಾ ವಂಚಿತ–ರಾದರು. 1906ರಲ್ಲಿ ಉನ್ನತಶ್ರೇಣಿಯಲ್ಲಿ ಪದವಿಗಳಿಸಿದರು. ರೆಡ್ಡಿಯವರು ವಕೀಲ–ರಾಗಬೇಕೆಂಬ ಕನಸು ಕಾಣುತ್ತಿರುವಾಗಲೇ ಗೋಖಲೆಯವರ ಮಾರ್ಗದರ್ಶನದಂತೆ ಎಂ.ಎ. ಪಾಸು ಮಾಡಿ ಉಪನ್ಯಾಸಕ ವೃತ್ತಿಯನ್ನು ಹಿಡಿದರು. 1908ರಲ್ಲಿ ಭಾರತಕ್ಕೆ ಹಿಂತಿರುಗಿದರು.

ಬರೋಡಾದ ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡರ ಆಹ್ವಾನದ ಮೇರೆಗೆ ಅವರ ಕಾಲೇಜಿನಲ್ಲಿ ಪ್ರಾಧ್ಯಾಪಕ ಹಾಗೂ ಉಪ ಪ್ರಾಂಶುಪಾಲರಾದರು. ಮಹಾರಾಜ ಗಾಯಕ್‌ವಾಡರು ರೆಡ್ಡಿಯವರನ್ನು ಕೆನಡ, ಜಪಾನ್ ಮತ್ತು ಫಿಲಿಫೈನ್ ರಾಷ್ಟ್ರಗಳಿಗೆ ಶೈಕ್ಷಣಿಕ ಪ್ರವಾಸಕ್ಕೆ ಕಳುಹಿಸಿಕೊಟ್ಟರು. ಈಗಾಗಲೇ ರೆಡ್ಡಿಯವರು ಭಾರತದಾದ್ಯಂತ ಶ್ರೇಷ್ಠ ಶಿಕ್ಷಣತಜ್ಞರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ವಿಚಾರ ತಿಳಿಯು–ತ್ತಲೇ ಮೈಸೂರು ಮಹಾರಾಜರು 1909ರಲ್ಲಿ ವಿಶ್ವವಿದ್ಯಾಲಯ ಸುಧಾರಣೆ ಕುರಿತು ಉಪನ್ಯಾಸ ನೀಡಲು ಅವರನ್ನು ಮೈಸೂರಿಗೆ ಆಹ್ವಾನಿಸಿದರು. ರೆಡ್ಡಿಯವರ ಭಾಷಣ ಮೈಸೂರು ಆಳರಸರ ಹಾಗೂ ದಿವಾನರಾಗಿದ್ದ ವಿ.ಪಿ. ಮಾಧವರಾಯರ ನಿದ್ದೆ ಕೆಡಿಸಿತು. ರೆಡ್ಡಿಯವರನ್ನು ಮೈಸೂರು ರಾಜ್ಯ ಸೇವೆಗೆ ಸೇರಲು ಒತ್ತಾಯ ಮಾಡ–ತೊಡಗಿದರು. ಅವರ ಒತ್ತಾಯದ ಮೇರೆಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್, ತರ್ಕಶಾಸ್ತ್ರ ಇತಿಹಾಸ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸತೊಡಗಿದರು. ತೆಲುಗು ಭಾಷೆಯಲ್ಲಿ ರಚನೆಯಾದ ಮೊಟ್ಟಮೊದಲ ಶ್ರೇಷ್ಠ **'ಅರ್ಥಶಾಸ್ತ್ರ'** ಗ್ರಂಥ.

ಮಹಾರಾಜರು ಮೈಸೂರು ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂಬ ಹಂಬಲ–ವನ್ನು ಪ್ರೊ. ರೆಡ್ಡಿಯವರಲ್ಲಿ ತೋಡಿಕೊಂಡರು. ಪ್ರೊ. ರೆಡ್ಡಿಯವರು ಮೈಸೂರು ವಿಶ್ವವಿದ್ಯಾಲಯವನ್ನು ಸ್ಥಾಪಿಸಲು 1915ರಲ್ಲಿ ಒಂದು ಯೋಜನೆಯನ್ನು ರೂಪಿಸಿ–ಕೊಟ್ಟರು. ನಂತರ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿ ಬಡ್ತಿ ಪಡೆದರು. 1916–18ರ ವರೆಗೆ ಎರಡು ವರ್ಷಗಳ ಕಾಲ ಪ್ರಾಂಶುಪಾಲರಾಗಿ ದುಡಿದರು. 1918ರಲ್ಲಿ ರೆಡ್ಡಿಯವರು ಇನ್ನೂ ನಲವತ್ತರ ಗಡಿಯಲ್ಲಿರುವಾಗಲೆ ರಾಜ್ಯದ ಉನ್ನತ ಶಿಕ್ಷಣಾಧಿಕಾರಿ–ಯಾಗಿ ನೇಮಕಗೊಂಡರು. (ಡೈರೆಕ್ಟರ್ ಜನರಲ್ ಆಫ್ ಎಜುಕೇಷನ್) ಇದು ಭಾರತೀಯನೊಬ್ಬನಿಗೆ (ವಿಶೇಷವಾಗಿ ಮಣ್ಣಿನ ಮಗ) ಸಂದ ಗೌರವ. ಪ್ರೊ. ರೆಡ್ಡಿ–ಯವರು ದೀನದಲಿತರು ಶಿಕ್ಷಣದಿಂದ ವಂಚಿತರಾಗದಂತೆ ಅವರಿಗೆ ಎಲ್ಲಾ ರೀತಿಯ ಅನುಕೂಲ ಮಾಡಿಕೊಟ್ಟರು. 1921ರಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಹೊರ ನಡೆದರು.

ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಪ್ರೊ. ರೆಡ್ಡಿಯವರು

ಮದ್ರಾಸ್‌ನಲ್ಲಿ ಜನಪ್ರಿಯುವಾಗಿದ್ದ ಬ್ರಿಟೀಷ್ ರಾಜ್ಯಪಾಲರುಗಳ ಆಶೀರ್ವಾದದಿಂದ ಉದಯಗೊಂಡ ಜಸ್ಟೀಸ್ ಪಕ್ಷಕ್ಕೆ ರೆಡ್ಡಿಯವರು ಸೇರಿದರು. ಜಸ್ಟೀಸ್ ಪಕ್ಷದಿಂದ ಸುಲಭವಾಗಿ ವಿಧಾನ ಪರಿಷತ್‌ಗೆ ಆಯ್ಕೆಯಾದರು. ಪ್ರಜಾಪ್ರಭುತ್ವದ ಬಗ್ಗೆ ತುಂಬು ಕಾಳಜಿಯನ್ನು ಹೊಂದಿದ್ದ ರೆಡ್ಡಿಯವರು ಅಂದಿನ ಸರ್ಕಾರದ ದಬ್ಬಾಳಿಕೆಯನ್ನು ಪ್ರಬಲವಾಗಿ ವಿರೋಧಿಸತೊಡಗಿದರು. ನಂತರ ಯುನೈಟೆಡ್ ನ್ಯಾಷನಲ್ ಪಕ್ಷವನ್ನು ಕಟ್ಟಿದರು. ತಾವು ರಾಜಕೀಯ ಜಂಜಾಟದಲ್ಲಿ ಸಿಕ್ಕಿಹಾಕಿಕೊಳ್ಳಬಾರದೆಂಬ ಉದ್ದೇಶದಿಂದ ಅದರಿಂದ ಹೊರಬಂದರು.

ಆಂಧ್ರ ವಿಶ್ವವಿದ್ಯಾಲಯದ ಕಾಯಿದೆಯನ್ನು 1925ರಲ್ಲಿ ಜಾರಿಗೆ ತಂದಾಗ ರಾಮಲಿಂಗಾರೆಡ್ಡಿಯವರನ್ನು ಆಂಧ್ರ ವಿಶ್ವವಿಲದ್ಯಾಲಯದ ವ್ಯವಸ್ಥಾಪಕ ಕುಲಪತಿಗಳನ್ನಾಗಿ ನೇಮಿಸಲಾಯಿತು. 1936ರ ವರೆಗೆ ಉಪಕುಲಪತಿಗಳಾಗಿ ದುಡಿದು ಆ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಆ ಸ್ಥಾನವನ್ನು ಡಾ. ಎಸ್. ರಾಧಾಕೃಷ್ಣನ್ (ಭಾರತದ ಮಾಜಿ ರಾಷ್ಟ್ರಪತಿ) ರವರು ತುಂಬಿದರು. 1948ರಲ್ಲಿ ಆಂಧ್ರ ವಿಶ್ವವಿದ್ಯಾಲಯ ಪ್ರೊ. ರೆಡ್ಡಿಯವರಿಗೆ 'ಡಾಕ್ಟರ್ ಆಫ್ ಲೆಟರ್ಸ್' ಎಂಬ ಗೌರವ ಪದವಿಯನ್ನು ನೀಡಿತು.

1949ರಲ್ಲಿ ಮೈಸೂರು ಸಂಸ್ಥಾನದ ಒತ್ತಾಯದ ಮೇರೆಗೆ ಮೈಸೂರು ವಿಶ್ವವಿದ್ಯಾಲಯದ ಕುಲಾಧಿಪತಿಗಳಾದರು. 1951ರಲ್ಲಿ ಅನಾರೋಗ್ಯ ಪೀಡಿತ ರಾದರು. ಆರೋಗ್ಯ ಬಹಳ ಕ್ಷೀಣಿಸಿತು. 1951 ಫೆಬ್ರವರಿ 24ರಂದು ಇಹಲೋಕ ತ್ಯಜಿಸಿದರು.

ಹೀಗೆ ಡಾ. ಸಿ.ಆರ್. ರೆಡ್ಡಿಯವರು ಮೈಸೂರು ರಾಜ್ಯದಲ್ಲಿಯೂ ಹಿಂದುಳಿದ ವರ್ಗಗಳ ಆಂದೋಲನವನ್ನು ಪ್ರಾರಂಭಿಸಿದ ಹರಿಕಾರರಾಗಿದ್ದಾರೆ. ಡಾ. ಸಿ.ಆರ್. ರೆಡ್ಡಿಯವರ ಗ್ರಂಥಗಳು ಅರ್ಥಶಾಸ್ತ್ರ ವಿಜ್ಞಾನ ಚಂದ್ರಿಕಾ ಮಾಲಿಕೆಗಳು ಬಿಲ್ಹದೇಯಮು.

ಇವರಿಂದ ಉತ್ತೇಜಿತರಾದ ಮೈಸೂರಿನ ಎಂ. ಬಸವಯ್ಯನವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ನೌಕರಿಗಳನ್ನು ಒದಗಿಸುವಂತೆ ಸಭೆಯಲ್ಲಿ ಆಗ್ರಹ ಪಡಿಸಲಾರಂಭಿಸಿದರು. 1917 ನವೆಂಬರ್ ತಿಂಗಳಿನಲ್ಲಿ ಮೈಸೂರಿನ ಡಿ. ಬನುಮಯ್ಯ ಸ್ಕೂಲಿನ ಬಳಿ ರಾವ್ ಸಾಹೇಬ್ ಹೆಚ್. ಚನ್ನಯ್ಯನವರ ನೇತೃತ್ವದಲ್ಲಿ ಸಮಾವೇಶಗೊಂಡ ಹಿಂದುಳಿದ ವರ್ಗದ ಸಭೆ ಸರ್ಕಾರದ ಶಾಸಕಾಂಗ ಮತ್ತು ಕಾರ್ಯಾಂಗಗಳಲ್ಲಿ ಎಲ್ಲಾ ಕೋಮಿಗೂ ಪ್ರಾತಿನಿಧ್ಯ ಕೊಡುವಂತೆ ಒತ್ತಾಯ ಪಡಿಸುವ ಗೊತ್ತುವಳಿ ಯೊಂದನ್ನು ಅಂಗೀಕರಿಸಿ ಹೆಚ್. ಚೆನ್ನಯ್ಯನವರಂತಹ ಹಿರಿಯ ವ್ಯಕ್ತಿಯೊಬ್ಬರು ಚಳವಳಿಗೆ ಧುಮುಕಲಾಗಿ ಹಿಂದುಳಿದ ವರ್ಗಗಳ ಆಂದೋಲನ ಗಂಭೀರ ಸ್ವರೂಪವನ್ನು ತಾಳಿತು. 1917 ನವಂಬರ್ 18ರಂದು ಬೆಂಗಳೂರಿನಲ್ಲಿ ಪ್ರಪ್ರಥಮ ಬಾರಿಗೆ ಹಿಂದುಳಿದ ವರ್ಗಗಳ

ಸಮಾವೇಶವನ್ನು ನಡೆಸಿದರು. ಈ ಸಮಾವೇಶದ ಅಧ್ಯಕ್ಷತೆಯನ್ನು ಮದ್ರಾಸ್‌ನ ಹಿಂದುಳಿದ ಜನಾಂಗದ ನೇತಾರರಾದ ಅಣ್ಣಾಸ್ವಾಮಿ ಮೊದಲಿಯಾರ್ ವಹಿಸಿದ್ದರು. ಅಂದು ಆ ಸಭೆಗೆ 30 ಜಾತಿಗಳನ್ನೊಳಗೊಂಡ 3000 ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಬಸವಯ್ಯ, ಹೆಚ್. ಚನ್ನಯ್ಯ, ಸಾಹುಕಾರ್ ಡಿ. ಬನುಮಯ್ಯ, ಎಂ. ಸುಬ್ಬಯ್ಯ, (ಒಕ್ಕಲಿಗ ಸಂಘದ ಮಾಜಿ ಅಧ್ಯಕ್ಷರು) ಅಬ್ಬಾಸ್ ಖಾನ್ ಇನ್ನೂ ಮುಂತಾದವರು ಸಂಘಟನೆಯ ಪ್ರಾಮುಖ್ಯತೆಯನ್ನರಿತು 1917 ಡಿಸೆಂಬರ್‌ನಲ್ಲಿ 'ಪ್ರಜಾಮಿತ್ರ ಮಂಡಳಿ' ಎಂಬ ಪ್ರಥಮ ರಾಜಕೀಯ ಪಕ್ಷವನ್ನು ಸ್ಥಾಪಿಸಿದರು. ಪ್ರಜಾಮಿತ್ರ ಮಂಡಳಿಯ ಪ್ರಥಮ ಅಧ್ಯಕ್ಷರಾಗಿ ಹೆಚ್. ಚನ್ನಯ್ಯನವರು, ಕಾರ್ಯದರ್ಶಿಯಾಗಿ ಡಿ. ಬನುಮಯ್ಯನವರು ಅವಿರೋಧವಾಗಿ ಆಯ್ಕೆಯಾದರು. ಆಗಿಂದಾಗ್ಗೆ ಸಭೆ ನಡೆಸಿ ಕ್ರಿಯಾಶೀಲರಾದರು.

ಈ ಸಂದರ್ಭದಲ್ಲಿ ಹೆಚ್. ಚನ್ನಯ್ಯನವರ ಸಾದನೆಗಳನ್ನು ತಿಳಿದುಕೊಳ್ಳುವುದು ಅವಶ್ಯಕ.

ರಾವ್ ಸಾಹೇಬ್ ಹಿರೇಹಳ್ಳಿ ಚನ್ನಯ್ಯ



ಬ್ರಾಹ್ಮಣೇತರ ಚಳವಳಿ ಅಥವಾ ಹಿಂದುಳಿದ ವರ್ಗಗಳ ಚಳವಳಿಯ ನೇತಾರನೆಂದೇ ಗುರುತಿಸಲ್ಪಟ್ಟಿರುವ ಚನ್ನಯ್ಯನವರನ್ನು, ಹಿಂದೆ ಮೈಸೂರು ಪ್ರಾಂತ್ಯದಲ್ಲಿ ಕೊಡಗಿನ ಚನ್ನಯ್ಯನವರೆಂದೇ ಕರೆಯುತ್ತಿದ್ದರು. ಇವರು ಮೂಲತಃ ಮೈಸೂರಿನವರಾಗಿದ್ದು ಅನಿವಾರ್ಯ ಕಾರಣಗಳಿಂದಾಗಿ ಇವರ ಪೂರ್ವಿಕರು ಮಡಿಕೇರಿಗೆ ಬಂದು ನೆಲೆಸಿದರು. ಉದ್ಯೋಗ ಇಲ್ಲವೆ ಉದ್ದಿಮೆಯನ್ನರಸುತ್ತಾ ಹೋಗಿ ನೆಲೆಸಿ ಚನ್ನಯ್ಯನವರ ಕುಟುಂಬಕ್ಕೆ ತಮ್ಮ ತಾಯಿ ಬೇರಿನ ಸಂಬಂಧ ಇದ್ದೇ ಇತ್ತು. ಇವರು 1859ರಲ್ಲಿ ಶ್ರೀ ಬೇಲೂರಯ್ಯ ಮತ್ತು ಶ್ರೀಮತಿ ಲಕ್ಷ್ಮಮ್ಮನವರ ಮಗನಾಗಿ ಜನಿಸಿದರು. ಬಾಲ್ಯದಿಂದಲೂ ಬುದ್ಧಿವಂತರೂ, ಚತುರರೂ ಆದ ಚನ್ನಯ್ಯನವರು ಓದಿನಲ್ಲಿ ಮುಂದು. ಅಂದು ಮದ್ರಾಸ್ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ರ‍್ಯಾಂಕ್‌ಗಳಿಸುವ ಮೂಲಕ ಬಾಲ್ಯದಲ್ಲಿಯೇ ಸುದ್ದಿಯಾದರು.

ಬುದ್ಧಿವಂತರಾದ ಚನ್ನಯ್ಯನವರ ಬ್ರಿಟೀಷ್ ಸರ್ಕಾರದಲ್ಲಿ ಉದ್ಯೋಗ ಗಳಿಸುವುದು ಕಷ್ಟವಾಗಲಿಲ್ಲ. ಶಿಕ್ಷಣ ಇಲಾಖೆಯಲ್ಲಿ ಬ್ರಿಟಿಷ್ ಪ್ರಧಾನ ಆಯುಕ್ತರ ಕಛೇರಿಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದರು. ಬುದ್ಧಿವಂತಿಕೆ ಮಾತ್ರವಲ್ಲ ಪ್ರಾಮಾಣಿ–ಕರೂ, ಸ್ವಾಮಿ ನಿಷ್ಠರೂ ಆಗಿದ್ದ ಚನ್ನಯ್ಯನವರು, ಕೊನೆಯವರೆವಿಗೂ ಪ್ರಾಮಾಣಿಕ–ವಾಗಿ ಸೇವೆ ಸಲ್ಲಿಸಿದರು. ಒಮ್ಮೆ ಒಂದು ಘಟನೆ ನಡೆಯಿತು. ಅದೇನೆಂದರೆ ಚನ್ನಯ್ಯ–

ನವರನ್ನು ತಾವಿದ್ದ ಮಡಿಕೇರಿಯಿಂದ ಬೆಂಗಳೂರಿನ ಬ್ರಿಟಿಷ್ ಪ್ರಧಾನ ಆಯುಕ್ತರ ಕಛೇರಿಗೆ ಮೇಲಧಿಕಾರಿಯಾಗಿ ವರ್ಗಾಯಿಸಲಾಯಿತು. ಆ ದಿನಗಳಲ್ಲಿ ಪ್ಲೇಗ್ ಕಾಯಿಲೆಯು ಮಾರಕರೋಗವಾಗಿ ಎಲ್ಲೆಡೆ ವ್ಯಾಪಿಸಿತ್ತು ಹಾಗೂ ಕಾಡುತ್ತಿತ್ತು. ಬೆಂಗಳೂರಿನ ಕಛೇರಿಯಲ್ಲಿದ್ದ ನೌಕರು ಅಧಿಕಾರಿಗಳು ಒಬ್ಬರಾದ ಮೇಲೆ ಒಬ್ಬರಂತೆ ಪ್ಲೇಗ್ ಖಾಯಿಲೆ ಹರಡುತ್ತಿದೆ ಎಂದು ಸುದ್ಧಿ ಕೇಳುತ್ತಲೆ ರಜೆ ಹಾಕಿ ತಮ್ಮ ತಮ್ಮ ಮನೆ ಇಲ್ಲವೆ ಊರುಗಳಿಗೆ ತೆರಳಿದರು. ಕೆಲವೇ ದಿನಗಳಲ್ಲಿ ಚನ್ನಯ್ಯನವರ ಶ್ರೀಮತಿಯವರಿಗೂ ಪ್ಲೇಗ್ ತಗಲಿರುವುದಾಗಿಯೂ ಬದುಕುವುದು ಕಷ್ಟವೆಂದು ಸುದ್ದಿ ಬಂದಿತು. ಈಗಾಗಲೇ ಕಛೇರಿಯ ಬಹುತೇಕ ಸಿಬ್ಬಂದಿ ರಜೆಯಲ್ಲಿ ತೆರಳಿರುವ ಕಾರಣ ತಾವು ರಜೆ ಹಾಕದೆ ದೇವರ ಮೇಲೆ ಭಾರ ಹಾಕಿ ಕಾಯಕವೇ ಕೈಲಾಸವೆಂದು ತಮ್ಮ ಕೆಲಸದಲ್ಲಿ ನಿರತರಾದ ಒಂದೆರಡು ದಿನಗಳಲ್ಲೇ ಅವರ ಶ್ರೀಮತಿಯವರು ದೈವಾಧೀನ –ರಾದ ಸುದ್ದಿ ಮುಟ್ಟಿತು. ಮೇಲಧಿಕಾರಿಗಳಿಗೆ ಈ ಘಟನೆಯನ್ನು ಚನ್ನಯ್ಯನವರ ಸಹೋದ್ಯೋಗಿಗಳು ಮುಟ್ಟಿಸಲಾಗಿ ಬ್ರಿಟೀಷ್ ಪ್ರಧಾನ ಆಯುಕ್ತರು ಮನನೊಂದು–ಕೊಂಡರು ಹಾಗೂ ಚನ್ನಯ್ಯನವರ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ಬಹುವಾಗಿ ಮೆಚ್ಚಿಕೊಂಡು ಅವರನ್ನು ರಜೆಯ ಮೇಲೆ ತೆರಳಲು ಅನುವು ಮಾಡಿಕೊಟ್ಟರು.

ಚನ್ನಯ್ಯನವರಿಗೆ ಕ್ರಮೇಣ ಗುರುತರ ಜವಾಬ್ದಾರಿ ಕೆಲಸ ಕಾರ್ಯಗಳನ್ನು ಅವರ ಬೆನ್ನಿಗೆ ಹೇರುತ್ತಾ ಬಂದರು. ಶ್ರೀಯುತರು ಯಾವುದಕ್ಕೂ ಧೃತಿಗೆಡದೆ ನಿಷ್ಠೆ ಮತ್ತು ಪ್ರಾಮಾಣಿಕವಾಗಿ ದುಡಿಯುತ್ತಿದ್ದರು. ಇವರನ್ನು ಕೊಡಗಿನ ನ್ಯಾಯಾಧೀಶ –ರನ್ನಾಗಿ ನೇಮಿಸಿದರು. ನ್ಯಾಯಾಧೀಶರಾಗಿದ್ದಾಗಲೂ ನಿಷ್ಪಕ್ಷಪಾತವಾಗಿ ನ್ಯಾಯ ವಿತರಣೆ ಮಾಡುತ್ತಿದ್ದರು. ಆಡಳಿತಲ್ಲಿ ಬ್ರಿಟೀಷರಿಗಿಂತಲೂ ಉತ್ತಮವಾಗಿ ಕೆಲಸ ಮಾಡುತ್ತಿದ್ದರು. ಬ್ರಿಟೀಷ್ ಅಧಿಕಾರಿಗಳು ಚನ್ನಯ್ಯನವರ ಸೇವೆಯನ್ನು ಕೊಂಡಾಡುವಷ್ಟರ ಮಟ್ಟಿಗೆ ಬೆಳೆದರು. ಇದೇ ಸಮಯಕ್ಕೆ ಎಂದರೆ 1911 ರಲ್ಲಿ ಬ್ರಿಟನ್ ಚಕ್ರವರ್ತಿ ಐದನೇ ಜಾರ್ಜ್ ಬರುವ ಸಂದರ್ಭದಲ್ಲಿ ನಿಷ್ಠೆಯಿಂದ ಸರ್ಕಾರಕ್ಕೆ ಗಣನೀಯ ಸೇವೆ ಸಲ್ಲಿಸಿದ ಕೆಲವು ಭಾರತೀಯರನ್ನು ಗುರುತಿಸಿ ಸನ್ಮಾನಿಸುವ ಉದ್ದೇಶವಿತ್ತು. ಇದರಿಂದಾಗಿ 1911ರಲ್ಲಿ ಭಾರತದ ವೈಸ್‌ರಯರಾಗಿದ್ದ **ಲಾರ್ಡ್ ಹಾರ್ಡಿಂಜ್**ರವರು ಚನ್ನಯ್ಯನವರನ್ನು ದೆಹಲಿಗೆ ಕರೆಸಿಕೊಂಡು **ರಾವ್ ಸಾಹೇಬ್** ಎಂಬ ಬಿರುದನ್ನು ದಯಪಾಲಿಸಿದರು. ಅಂದಿನಿಂದ ರಾವ್ ಸಾಹೇಬ್ ಹೆಚ್. ಚನ್ನಯ್ಯ ಎಂದೇ ಖ್ಯಾತ ನಾಮರಾದರು. ಸುಮಾರು ಮೂವತ್ತೊಂಬತ್ತು ವರ್ಷಗಳ ಕಾಲ ನಿಸ್ಪೃಹ ಸೇವೆ ಸಲ್ಲಿಸಿದ ಚನ್ನಯ್ಯನವರು 1916ರಲ್ಲಿ ಸೇವೆಯಿಂದ ನಿವೃತ್ತರಾದರು. ಸೇವೆಯಿಂದ ನಿವೃತ್ತರಾದರೂ ಕೂಡ ಅವರ ಮನಸ್ಸು ನಿವೃತ್ತಿ ಹೊಂದಿರಲಿಲ್ಲ. ಸಮಾಜ ಸೇವೆಗಾಗಿ ತುಡಿಯುತ್ತಿತ್ತು.

ಬ್ರಾಹ್ಮಣೇತರ ಚಳವಳಿ / ಹಿಂದುಳಿದ ವರ್ಗಗಳ ಚಳವಳಿಯಲ್ಲಿ ಚನ್ನಯ್ಯನವರು :

ದಕ್ಷಿಣ ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ಮದ್ರಾಸ್ ಪ್ರಾಂತ್ಯದಲ್ಲಿ ಹಿಂದುಳಿದ ವರ್ಗಗಳ ಚಳವಳಿ ಪ್ರಾರಂಭವಾಯಿತು. ಜಸ್ಟೀಸ್ ಪಾರ್ಟಿ ಎಂಬ ಪಕ್ಷವನ್ನು ಕಟ್ಟಿಕೊಂಡು ಹಿಂದುಳಿದ ವರ್ಗಗಳ ಪರ ಹೋರಾಟ ಪ್ರಾರಂಭ ವಾಯಿತು. ಪ್ರೊ. ಸಿ.ಆರ್. ರೆಡ್ಡಿಯವರ ಪ್ರಭಾವದಿಂದಾಗಿ ಮೈಸೂರು ಪ್ರಾಂತ್ಯ-ದಲ್ಲಿಯೂ ಆಂದೋಲನ ಪ್ರಾರಂಭವಾಯಿತು. (ಈ ವಿಷಯದ ಬಗ್ಗೆ ಈಗಾಗಲೇ ವಿವರಿಸಲಾಗಿದೆ) ಮೈಸೂರು ಪ್ರಾಂತ್ಯದಲ್ಲಿ ಈಗಾಗಲೇ ಪ್ರಖ್ಯಾತರಾಗಿದ್ದ ರಾವ್ ಸಾಹೇಬ್ ಚನ್ನಯ್ಯನವರು ಡಾ. ಸಿ.ಆರ್. ರೆಡ್ಡಿಯವರಿಗಿಂತ ಏನೂ ಕಡಿಮೆ ಇರಲಿಲ್ಲ. ಚನ್ನಯ್ಯನವರು ಬ್ರಿಟೀಷರ ಇಲ್ಲವೆ ಆಳರಸರ ಮರ್ಜಿಗೆ ಒಳಗಾಗದೆ ಹಿಂದುಳಿದ ವರ್ಗಗಳ ಚಳವಳಿಗೆ ಧುಮುಕಿದರು. ಬೆಂಗಳೂರಿನ ಬಸವಯ್ಯ, ಸಾಹುಕಾರ್ ಡಿ. ಬನುಮಯ್ಯನವರೊಡಗೂಡಿ **"ಪ್ರಜಾಮಿತ್ರ ಮಂಡಳಿ"** ಎಂಬ ಪಕ್ಷವನ್ನು ಸ್ಥಾಪಿಸಿದರು. ನಂತರ ಅದರ ಸ್ಥಾಪಕ ಅಧ್ಯಕ್ಷರೂ ಆದರು. ಹೆಚ್. ಚನ್ನಯ್ಯನವರು ಹಿಂದುಳಿದ ವರ್ಗಗಳ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರನ್ನು ಮೈಸೂರಿನ ಹಿಂದುಳಿದ ವರ್ಗಗಳ ಹೋರಾಟದ ಹರಿಕಾರನೆಂದೇ ಕರೆಯುತ್ತಾರೆ.

ಆಳರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಚನ್ನಯ್ಯನವರ ಪೂರ್ವಾಪರ ತಿಳಿದುಕೊಂಡು ಅರಮನೆಗೆ ಬರಮಾಡಿಕೊಂಡು ದೀನ, ದಲಿತರ ಸೇವೆಗಾಗಿ ಶ್ರಮಿಸುವಂತೆ ಕೇಳಿಕೊಂಡರು. 1917–1923ರ ವರೆಗೆ ಶ್ರೀಯುತರನ್ನು ಪ್ರಜಾಪ್ರತಿನಿಧಿ ಸಭಾಸದಸ್ಯರನ್ನಾಗಿ, ಮೈಸೂರು ವಿಶ್ವವಿದ್ಯಾಲಯದ ಫೆಲೋ ಸದಸ್ಯರನ್ನಾಗಿ (1920–26). ಬೆಂಗಳೂರು ನಗರ ಸಭೆಯ ಸದಸ್ಯರನ್ನಾಗಿ (1921–1924), ಬೆಂಗಳೂರು ಜಿಲ್ಲಾ ಮಂಡಳಿಯ ಸದಸ್ಯರನ್ನಾಗಿ (1923–1926), ದೀನ-ದಲಿತರ ಬಗ್ಗೆ ಬಹುವಾಗಿ ಕಾಳಜಿಯಿದ್ದ ಚನ್ನಯ್ಯನವರನ್ನು ಮೈಸೂರು ಸರ್ಕಾರವು ಆಗ ತಾನೆ ಸ್ಥಾಪಿಸಿದ್ದ ಶ್ರೀ ನರಸಿಂಹರಾಜ ವಿದ್ಯಾರ್ಥಿನಿಲಯದ ಅಧ್ಯಕ್ಷರನ್ನಾಗಿ ನೇಮಿಸಿತು. 1917ರಲ್ಲಿ ಅಂದಿನ ಮೈಸೂರು ಸರ್ಕಾರವು ಆಯೋಜಿಸಿದ ಲೆಸ್ಲೆ ಮಿಲ್ಲರ್ ಸಮಿತಿಯ ಸದಸ್ಯರನ್ನಾಗಿಯೂ ನೇಮಿಸಿತು (1917–19).

ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ

ಹೆಚ್. ಚನ್ನಯ್ಯನವರು ಒಕ್ಕಲಿಗ ಜನಾಂಗ ಮಾತ್ರವೇ ಅಲ್ಲ ಹಳೇ ಮೈಸೂರು ಪ್ರಾಂತ್ಯದ ಸಂಭಾವಿತ ವ್ಯಕ್ತಿಯಾಗಿದ್ದರು. ಆಳರಸರ, ದಿವಾನರ, ಬ್ರಿಟಿಷರೊಂದಿಗೆ ಒಡನಾಟವಿದ್ದುದರಿಂದ ರಾಜ್ಯ ಒಕ್ಕಲಿಗರ ಸಂಘವು ಚನ್ನಯ್ಯನವರನ್ನು ಸಂಘದ ಗೌರವಾಧ್ಯಕ್ಷರಾಗಲು ಕೇಳಿಕೊಂಡಿತು. ಚನ್ನಯ್ಯನವರು 1929–1935ರ ವರೆಗೆ

ಒಕ್ಕಲಿಗರ ಸಂಘದ ಗೌರವ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಸಂಘವು ಶ್ರೀಯುತರಿಂದ ಬಹುವಾಗಿ ಪ್ರಯೋಜನ ಪಡೆಯಿತು.

ಅಂದಿನ ಸರ್ಕಾರವು ಪ್ರಪ್ರಥಮವಾಗಿ ಪ್ರಾರಂಭಿಸಿದ ಹೌಸ್ ಬಿಲ್ಡಿಂಗ್ (ಸರ್ಕಾರಿ ಗೃಹ ನಿರ್ಮಾಣ ಸಂಘ / ಮಾಡಲ್ ಹೌಸ್ ನಿರ್ಮಾಣ ಸಂಘ)ನ ಅಧ್ಯಕ್ಷರಾಗಿ (1917–1920) ದುಡಿದರು, ರೈತರ ಬಗ್ಗೆ ಬಹುವಾಗಿ ಕಾಳಜಿ ಹೊಂದಿದ್ದ ಶ್ರೀಯುತರು ರೈತಸಂಘದ ಅಧ್ಯಕ್ಷರಾಗಿ, ರೈತ ಸಮ್ಮೇಳನಗಳನ್ನುದ್ದೇಶಿಸಿ ಭಾಷಣ ಮಾಡುವುದರ ಮೂಲಕ ಮುಗ್ಧರಾದ ರೈತರನ್ನು ಸಮಾಜದ ಮುಖ್ಯ ವಾಹಿನಿಗೆ ಕೊಂಡೊಯ್ಯುವಲ್ಲಿ ಫಲಪ್ರದರಾದರು. ಜಯಚಾಮರಾಜೇಂದ್ರ ಒಡೆಯರ್‌ರವರು ಚನ್ನಯ್ಯನವರಿಗೆ 1941ರಲ್ಲಿ **"ಲೋಕಸೇವಾನಿರತ"** ಎಂಬ ಬಿರುದನ್ನು ವಿಶೇಷ ದರ್ಬಾರಿನಲ್ಲಿ ನೀಡಿ ಗೌರವಿಸಿದರು. ಹೀಗೆ ಸರ್ಕಾರ ಮತ್ತು ಸಮಾಜದ ನಾನಾ ಭಾಗಗಳಲ್ಲಿ ದುಡಿದು 1946ರಲ್ಲಿ ತಮ್ಮ ಎಂಭತ್ತೇಳನೆಯ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು.

ಈಗಾಗಲೇ ತಿಳಿಸಿರುವಂತೆ ಮದ್ರಾಸಿನಲ್ಲಿ **'ಜಸ್ಟಿಸ್ ಪಕ್ಷವು'** ಜನ್ಮ ತಳೆದು ಬ್ರಾಹ್ಮಣೇತರರನ್ನು ಒಂದುಗೂಡಿಸಿ ಯಶಸ್ವಿಯಾದದ್ದು ಮೈಸೂರಿನ ನಾಗರಿಕರ ಮೇಲೆ ಪ್ರಭಾವ ಬೀರಿತು. ರಾಜ್ಯದ ಪ್ರಗತಿಗಾಗಿ ವಿಶ್ವೇಶ್ವರಯ್ಯನವರು ಹಾಕಿಕೊಂಡ ಯೋಜನೆಗಳೆಲ್ಲವೂ ವಿದ್ಯಾವಂತ ಪಟ್ಟಣವಾಸಿ ಬ್ರಾಹ್ಮಣರಿಗೆ ಮಾತ್ರ ಅನುಕೂಲವಾಗುವಂಥವುಗಳೇ ವಿನಹ ಗ್ರಾಮೀಣಾಭಿವೃದ್ಧಿ ಮತ್ತು ಕೃಷಿಗೆ ಪ್ರಾಮುಖ್ಯತೆ ನೀಡುತ್ತಿಲ್ಲವೆಂದು ಟೀಕಿಸತೊಡಗಿದರು. ಸರ್.ಎಂ.ವಿ.ರವರು ಹಿಂದುಳಿದ ವರ್ಗಗಳನ್ನು ಸಂತೃಸುವ ಉದ್ದೇಶದಿಂದ ಎಂಬಂತೆ ಕನಿಷ್ಠ ವಿದ್ಯಾರ್ಹತೆಯುಳ್ಳ ಬ್ರಾಹ್ಮಣೇತರರಿಗೆ ನಾಲ್ಕನೆಯ ದರ್ಜೆಯ ಕೆಲಸಕ್ಕೆ ಸೇರಲು ಅವಕಾಶ ನೀಡಿದರು. ಇಷ್ಟೇ ಅಲ್ಲದೆ 19 ಜನರನ್ನು ಗೆಜೆಟೆಡ್ ಹುದ್ದೆಗಳಿಗೆ ನೇಮಕ ಮಾಡಿಕೊಂಡರು. ಇಷ್ಟಾದರೂ ಬ್ರಾಹ್ಮಣೇತರರು ಸಮಾಧಾನಗೊಳ್ಳಲಿಲ್ಲ. ಕಾರಣವೇನೆಂದರೆ ಜಸ್ಟೀಸ್ ಮಿಲ್ಲರ್‌ರವರ ವರದಿಯಂತೆ 1916 ರಿಂದ 1918ರ ಸಾಲಿನಲ್ಲಿ ತಿಂಗಳಿಗೆ 800 ರೂ. ಸಂಬಳ ಪಡೆಯುತ್ತಿದ್ದ 32 ಜನ ಬ್ರಾಹ್ಮಣರು ಮೈಸೂರು ಸರ್ಕಾರದಲ್ಲಿದ್ದರು. ಆದರೆ ಒಕ್ಕಲಿಗರಲ್ಲಿ ಒಬ್ಬ ವ್ಯಕ್ತಿ ಹಾಗೂ ವೀರಶೈವರಲ್ಲಿ ಕ್ರಮವಾಗಿ 4,7,8 ಮಂದಿ ಸರ್ಕಾರಿ ಹುದ್ದೆಯಲ್ಲಿದ್ದರು. (ಹೆಚ್ಚಿನ ವಿವರಗಳಿಗೆ ಜಸ್ಟೀಸ್ ಮಿಲ್ಲರ್ ವರದಿಯನ್ನು ನೋಡಿ) ಮೈಸೂರು ಸಂಸ್ಥಾನದ ಎಲ್ಲಾ ಕ್ಷೇತ್ರಗಳಲ್ಲು ಆಯಕಟ್ಟಿನ ಸ್ಥಳಗಳಲ್ಲಿ ಬ್ರಾಹ್ಮಣರು ತುಂಬಿಕೊಂಡಿದ್ದರು. ಶಾನುಭೋಗರಿಂದ ಹಿಡಿದು ದಿವಾನರವರೆಗೂ ಬ್ರಾಹ್ಮಣಮಯವಾಗಿತ್ತು. ಗ್ರಾಮಗಳ ಚುನಾಯಿತಿ ಪ್ರತಿನಿಧಿಗಳಿಗೆ ಸರ್ಕಾರದಲ್ಲಿ ಕವಡೆ ಕಾಸಿನ ಬೆಲೆಯೂ ಇರಲಿಲ್ಲ. ಸರ್ಕಾರಿ ಯಂತ್ರವನ್ನು ಕೇಂದ್ರೀಕೃತಗೊಳಿಸಿ ಎಲ್ಲಾ

ಅಧಿಕಾರವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದರು. ಬ್ರಾಹ್ಮಣರು ಶೇ. 70ಕ್ಕೂ ಹೆಚ್ಚು ಸ್ಥಾನಗಳಲ್ಲಿದ್ದು ಕೆಳದರ್ಜೆಯ (ನಾಲ್ಕನೆಯ ದರ್ಜೆ) ಹುದ್ದೆಗಳಲ್ಲಿ ಮಾತ್ರ ಬ್ರಾಹ್ಮಣೇತರ ವರ್ಗದವರಿದ್ದರು. (ಮಿಲ್ಲರ್ ಮತ್ತು ನಾಗನಗೌಡರ ವರದಿಗಳನ್ನು ನೋಡಿ) ಇದೇ ಸಮಯಕ್ಕೆ ಸರ್.ಎಂ.ವಿ.ರವರು 19 ಜನ ಅಸಿಸ್ಟೆಂಟ್ ಕಮಿಷನರ್ –ಗಳನ್ನು ನೇಮಕ ಮಾಡಿಕೊಳ್ಳಲು ಆಳರಸರಿಗೆ ಪ್ರಸ್ತಾಪ ಸಲ್ಲಿಸಿದರು. ಆದರೆ ಅವರೆಲ್ಲರೂ ಬ್ರಾಹ್ಮಣರಾಗಿದ್ದರು. ಈ ವಿಷಯವನ್ನು ಶ್ರೀ ಮನ್ಮಹಾರಾಜರ ಗಮನಕ್ಕೆ ತರಲಾಗಿ ಮಹಾರಾಜರು ಹಿಂದುಳಿದ ವರ್ಗದವರಿಗೂ ಪ್ರಾತಿನಿಧ್ಯ ನೀಡುವಂತೆ ಆಜ್ಞಾಪಿಸಿದರು. ಸರ್.ಎಂ.ವಿ.ಯವರು ಪ್ರತಿಭೆಗೆ ಪುರಸ್ಕಾರ ನೀಡಿರುವುದಾಗಿ ಸಬೂಬು ಹೇಳಿದಾಗ ಅರಸರು ಅದನ್ನು ತಿರಸ್ಕರಿಸಿದರು. ಆಡಳಿತದಲ್ಲಿ ಬಿಕ್ಕಟ್ಟು ತಲೆದೋರಿದಾಗಿ 1918ರಲ್ಲಿ ಸರ್.ಎಂ.ವಿ. ರಾಜೀನಾಮೆ ನೀಡಿದರು. ಸರ್.ಎಂ.ವಿ. ಯವರ ಸ್ಥಾನಕ್ಕೆ ಶ್ರೀಕಾಂತರಾಜ ಅರಸರನ್ನು ದಿವಾನರನ್ನಾಗಿ ನೇಮಿಸಿದರು.

ಮೈಸೂರು ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರನ್ನು ಭೇಟಿ ಮಾಡಿದ ಈ ನಾಯಕರುಗಳು ಹಿಂದುಳಿದ ವರ್ಗದವರಿಗೆ ಶಿಕ್ಷಣ, ನೌಕರಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲೂ ಸಮಾನ ಅವಕಾಶ ಕಲ್ಪಿಸಿಕೊಡುವಂತೆ ಬಿನ್ನವತ್ತಳೆ ಅರ್ಪಿಸಿದರು. ಅದೇ ಸಮಯಕ್ಕೆ ಬ್ರಾಹ್ಮಣೇತರ ದಿವಾನರಾಗಿದ್ದ ಸರ್. ಕಾಂತರಾಜ ಅರಸ್ (ನಾಲ್ವಡಿ ಕೃಷ್ಣರಾಜ ಒಡೆಯರ ಸೋದರಮಾವ) ಹಿಂದುಳಿದ ವರ್ಗದ ನಾಯಕರುಗಳ ಒತ್ತಾಯಕ್ಕೆ ಮಣಿದು ಕೆಲವಾರು ಸೌಲಭ್ಯಗಳನ್ನು ಒದಗಿಸಲು ತಕ್ಷಣವೇ ಕ್ರಮ ಕೈಗೊಂಡರು. ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪ್ರವೇಶ, ವಿದ್ಯಾರ್ಥಿ ವೇತನ, ವಿದ್ಯಾರ್ಥಿ ನಿಲಯಗಳ ಸೌಲಭ್ಯ ಮೊದಲಾದವುಗಳನ್ನು ಒದಗಿಸಿದರು. ಈ ತೆರನಾದ ಬೆಳವಣಿಗೆಯಿಂದಾಗಿ ಬ್ರಾಹ್ಮಣೇತರರು ತಮಗೆ ಸಂದ ಜಯವೆಂದು ಸಂತೋಷಪಟ್ಟರು. ಇದು ಮುಂದೆ ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ನಡುವಿನ ಚಳವಳಿಯಾಗಿ ಮಾರ್ಪಾಡಾಯಿತು.

ಜಸ್ಟೀಸ್ ಲೆಸ್ಲೆ ಮಿಲ್ಲರ ಸಮಿತಿ–1918

ವಿಶ್ವೇಶ್ವರಯ್ಯನವರ ರಾಜೀನಾಮೆ ನಂತರ ಹಿಂದುಳಿದ ವರ್ಗಗಳ ಒತ್ತಾಯ, ಹೋರಾಟ ನಡೆದೇ ಇದ್ದಿತು. ಸರ್.ಎಂ.ವಿ.ಯವರು ರಾಜೀನಾಮೆ ನೀಡಿದ ಬಳಿಕ ಅವರ ಸ್ಥಾನಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ತಮ್ಮ ಸೋದರಮಾವ ಕಾಂತರಾಜ ಅರಸ್‌ರವರನ್ನು ದಿವಾನರನ್ನಾಗಿ ಮಾಡಿದರು. ಕಾಂತರಾಜ ಅರಸ್‌ರವರು ಪ್ರಪ್ರಥಮ ಬ್ರಾಹ್ಮಣೇತರ ದಿವಾನರಾಗಿ ಅಧಿಕಾರ ವಹಿಸಿಕೊಂಡರು. ಹಿರೇಹಳ್ಳಿ ಚನ್ನಯ್ಯ, ಎಂ. ಬಸವಯ್ಯ ಇನ್ನೂ ಮುಂತಾದವರ ಒತ್ತಾಯಕ್ಕೆ ಹಿಂದುಳಿದ ವರ್ಗಗಳ ಸಮಸ್ಯೆಯನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ನ್ಯಾಯಮೂರ್ತಿ

ಲೆಸ್ಲೆ ಮಿಲ್ಲರ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಇದು ಭಾರತ –ದಲ್ಲೇ ಪ್ರಪ್ರಥಮ ಹಿಂದುಳಿದ ವರ್ಗಗಳ ಆಯೋಗವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಹೆಚ್. ಚನ್ನಯ್ಯ, ಎಂ. ಬಸವಯ್ಯ, ಗುಲಾಮ್ ಅಹಮ್ಮದ್ ಖಲಾಮಿ ಇನ್ನೂ ಮುಂತಾದವರು ಈ ಆಯೋಗದ ಸದಸ್ಯರಾಗಿದ್ದರು. ಸಮಗ್ರವಾಗಿ ಸಮೀಕ್ಷೆ ನಡೆಸಿದ ಮಿಲ್ಲರ್ ಸಮಿತಿ, ಬ್ರಾಹ್ಮಣೇತರ ರೆಲ್ಲ ಹಿಂದುಳಿದ ವರ್ಗದವರೆಂಬುದಾಗಿ ವ್ಯಾಖ್ಯಾನ ನೀಡಿ ಈ ಕೆಳಕಂಡ ಶಿಫಾರಸ್ಸುಗಳನ್ನು 1919 ಜುಲೈನಲ್ಲಿ ಸರ್ಕಾರಕ್ಕೆ ಸಲ್ಲಿಸಿತು :

1. ಮುಂದಿನ 7 ವರ್ಷಗಳಲ್ಲಿ ಶೇ.50ರಷ್ಟು ಹುದ್ದೆಗಳು ಹಿಂದುಳಿದವರಿಗೆ ಪ್ರಾಪ್ತವಾಗಬೇಕು.
2. ಮಾಧ್ಯಮಿಕ ಶಾಲೆಯ ಹಂತದವರೆಗೆ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಶುಲ್ಕ ಮಾಫಿ.
3. ಹಿಂದುಳಿದ ವರ್ಗಗಳಿಗೂ ವಿದ್ಯಾರ್ಥಿವೇತನ ವಿಸ್ತರಣೆ.
4. ಪಂಚಮರಿಗೆ ಉಚಿತ ಪುಸ್ತಕ ವಿತರಣೆ.
5. ಪಂಚಮರು ಮತ್ತು ಪರಿಶಿಷ್ಟ ವರ್ಗದವರಿಗೆ ಶಾಲೆಗಳಲ್ಲಿ ಪ್ರವೇಶ
6. ಹಿಂದುಳಿದ ಈ ವರ್ಗಗಳಿಗೆ ಪ್ರವೇಶಾವಕಾಶ ನಿರಾಕರಿಸಿದ ಖಾಸಗಿ ಶಾಲೆಗಳ ರದ್ಧತಿಗೆ ಕ್ರಮ.
7. ಹಿಂದುಳಿದ ವರ್ಗಗಳಿಗೆ ವೃತ್ತಿಪರ ಶಿಕ್ಷಣಕ್ಕೆ ಅವಕಾಶ.
8. ನೇಮಕಾತಿ ನಿಯಮಾವಳಿಗಳ ಪುನಃರಚನೆ – ಇತ್ಯಾದಿ.

ಮಿಲ್ಲರ್ ಸಮಿತಿಯ ವರದಿಯು ಬಹುಸಂಖ್ಯಾತರಾಗಿದ್ದ ಹಿಂದುಳಿದ ವರ್ಗದವರಿಗೆ ಸಂತೋಷದ ಸುದ್ದಿಯಾಯಿತು. ಆದರೆ ಬ್ರಾಹ್ಮಣರಿಗೆ ಇದು ಒಗ್ಗದೆ ಮಿಲ್ಲರ್ ಸಮಿತಿಯ ವರದಿಯನ್ನು ಬಹುತೀಕ್ಷ್ಣವಾಗಿ ಖಂಡಿಸಿದರು. ಬ್ರಾಹ್ಮಣರೆಲ್ಲರೂ ಒಂದಾಗಿ ಅರಮನೆಗೆ ಧಾವಿಸಿ ಮಹಾರಾಜರಲ್ಲಿ ವಿಷಯ ಪ್ರಸ್ತಾಪಿಸಿ ಮಿಲ್ಲರ್ ವರದಿಯನ್ನು ಕೈಬಿಡುವಂತೆ ಒತ್ತಾಯಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅದನ್ನು ಪುರಸ್ಕರಿಸದೆ 'ಹಿಂದುಳಿದವರೂ ನನ್ನ ಪ್ರಜೆಗಳೇ' ಎಂದು ಹೇಳುವ ಮೂಲಕ ಹಿಂದುಳಿದ ವರ್ಗಗಳ ಹೋರಾಟಕ್ಕೆ ಜಯ ತಂದುಕೊಟ್ಟರು. (ಸಾಮಾಜಿಕ ಹಿನ್ನಲೆಯಲ್ಲಿ ಮೈಸೂರು ರಾಜಕೀಯ ಕೆಲವು ಒಳನೋಟಗಳು, ಪುಟ 67. ಡಾ. ಎಸ್. ಚಂದ್ರಶೇಖರ್, ಬೆಂಗಳೂರು 1983).

ದಿವಾನ್ ಕಾಂತರಾಜ ಅರಸ್‌ರವರು ಮಿಲ್ಲರ್ ವರದಿಯನ್ನು ಕಾರ್ಯ ರೂಪಕ್ಕೆ ತರಲು ಸೂಕ್ತ ಕ್ರಮಕೈಗೊಂಡರು. ಎಲ್ಲಾ ವರ್ಗಗಳಿಗೂ ಪ್ರಾತಿನಿಧ್ಯ ನೀಡುವಂತೆ ಎಲ್ಲಾ ಇಲಾಖಾ ಮುಖ್ಯಸ್ಥರಿಗೂ ಸುತ್ತೋಲೆಯನ್ನು ರವಾನಿಸಿದರು.

ಇದರ ಪರಿಣಾಮವಾಗಿ 1921ರಲ್ಲಿ ಶೇ.30 ಹುದ್ದೆಗಳಿಗೆ ಹಿಂದುಳಿದ ವರ್ಗದವರನ್ನು ನೇಮಕ ಮಾಡಿಕೊಳ್ಳಲಾಯಿತು. ಈ ಸಂಖ್ಯೆ 1926ರ ಹೊತ್ತಿಗೆ ಶೇ.42ಕ್ಕೆ ಏರಿತು ಆಗಿನ್ನು 8 ಅಮಲ್ದಾರ್ ಹುದ್ದೆಗಳಲ್ಲಿ 6 ಹುದ್ದೆಗಳನ್ನು ಹಿಂದುಳಿದವರಿಗೆ ಕೊಡಲಾಯಿತು.

ಹೀಗೆ ಜಯಭೇರಿ ಬಾರಿಸಿದ ಹಿಂದುಳಿದ ವರ್ಗದ ನಾಯಕರುಗಳು ಮತ್ತಷ್ಟು ಸೌಲಭ್ಯ ಸವಲತ್ತುಗಳನ್ನು ತಮ್ಮ ವರ್ಗಕ್ಕೆ ನೀಡಬೇಕೆಂದು ಒತ್ತಾಯಿಸಿದರು.

ನ್ಯಾಯಮೂರ್ತಿ ಲೆಸ್ಲೆ ಮಿಲ್ಲರ್ ಸಮಿತಿ ವರದಿ – 1918

ಜಾತಿ	ವರ್ಷ	ಸಂಬಳ 25 ರೂ.	26–50 ರೂ.	50–100 ರೂ.	101–250 ರೂ.	251–450 ರೂ.	451–800 ರೂ.	1911ರ ಜನ ಗಣತಿ
ಬ್ರಾಹ್ಮಣರು	1916	4903	2232	634	299	106	40	193137
	1917	5171	2481	639	321	–	–	–
	1918	5407	2891	882	882	–	–	–
ಲಿಂಗಾಯತರು	1916	340	43	11	11	4	2	728571
	1917	392	52	17	11	2	2	–
	1918	412	50	25	10	5	2	–
ಒಕ್ಕಲಿಗರು	1916	222	40	17	6	2	–	1328237
	1917	241	46	18	3	2	–	–
	1918	258	54	18	4	3	–	–

Justice Lesley Miller Report-1918

ನ್ಯಾಯಮೂರ್ತಿ ಲೆಸ್ಲೆ ಮಿಲ್ಲರ್ ಸಮಿತಿ ವರದಿ – 1918

Caste	Total	Liter Popu lation	Liter in Popu lation	Num of English	No. on attend ing lower Second ary & Higher Secon dary School	No. on Rs. & below	Above Rs. 100 to Rs. 250	Percent Rs. 250
Brahmin	**1,93,137**	**80,409**	**15455**	**6481**	**9110**	**362**	**240**	**41.63**
Vokkaliga	**13,28,237**	**42,206**	**00737**	**0428**	**0330**	**004**	**004**	**3.17**
Lingayath	**7,28,571**	**66,665**	**00804**	**0698**	**0487**	**010**	**007**	**9.15**

ವಿಶೇಷ ಸೂಚನೆ : ಈ ಮೇಲ್ಕಂಡ ಆಯೋಗಗಳ ವರದಿಯು ಸವಿಸ್ತಾರ ವಾಗಿದ್ದು ಸದ್ಯ ಇಲ್ಲಿ ಕೇವಲ ಬ್ರಾಹ್ಮಣರು, ಲಿಂಗಾಯತರು ಹಾಗೂ ಒಕ್ಕಲಿಗರ ಅಂಕಿ ಸಂಖ್ಯೆಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಹೋಲಿಕೆ ಮಾಡಲಾಗಿದೆ.

1929ರಲ್ಲಿ ಪ್ರಜಾಮಿತ್ರ ಮಂಡಳಿಯು ಸಮಾವೇಶವನ್ನು ಕರೆಯಿತು. ಆ ಸಮಾವೇಶದ ಅಧ್ಯಕ್ಷತೆಯನ್ನು ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್ ವಹಿಸಿದ್ದರು. ಒಳ್ಳೆಯ ವಿದ್ವಾಂಸರು ರಾಜತಂತ್ರ ನಿಪುಣರು ಆಗಿದ್ದ ರಾಮಸ್ವಾಮಿ ಮೊದಲಿಯಾರ್‌ರವರು ಎಲ್ಲಾ ವರ್ಗಕ್ಕೂ ಸಮಾನ ಅವಕಾಶಗಳಿಗಾಗಿ ಕರೆಯಿತ್ತರು. ಮನುವಿನ ಜಡಭಾರತದ ವಿರುದ್ಧ ಇವರ ಸಾಮಾಜಿಕ ಕ್ರಾಂತಿಯ ಮೊದಲ ಕಹಳೆ ಮೊಳಗಿತು. ಇದರ ಪರಿಣಾಮವಾಗಿ ಸ್ವಲ್ಪ ಮುಂದಿದ್ದ ವೀರಶೈವರು. ಒಕ್ಕಲಿಗರು ಮತ್ತು ಮುಸ್ಲಿಮರು ಗಣನೀಯ ಸಂಖ್ಯೆಯಲ್ಲಿ ಸರ್ಕಾರಿ ನೌಕರಿಗಳನ್ನು ಪಡೆದರು. ಅರ್ಹತೆ ಇಲ್ಲದಿದ್ದರಿಂದಾಗಿ ಉಳಿದ ಹಿಂದುಳಿದ ಕೋಮುಗಳು ಅವಕಾಶ ವಂಚಿತರಾದರು. ಈ ಸಮಯದಲ್ಲಿ ಸೃಷ್ಟಿಯಾದ 36 ಗೆಜೆಟೆಡ್ ಹುದ್ದೆಗಳು 250 ಇತರ ನೌಕರಿಗಳು ಹಿಂದುಳಿದವರಿಗೆ ಲಭ್ಯವಾದವು.

ಹೀಗೆ ಮೈಸೂರಿನ ಇತಿಹಾಸದಲ್ಲಿ ಬ್ರಾಹ್ಮಣೇತರ ಚಳವಳಿಯಲ್ಲಿ ಹಿಂದುಳಿದ ವರ್ಗಗಳ ಚಳವಳಿ ಎಂಬ ಹೆಸರಿನಲ್ಲಿ ಪ್ರಾರಂಭವಾಗಿ ಹಿಂದುಳಿದ ವರ್ಗದ ಜನರಿಗೆ ಶಿಕ್ಷಣ, ಉದ್ಯೋಗ, ಇನ್ನೂ ಮುಂತಾದ ಅವಕಾಶವನ್ನು ಕಲ್ಪಿಸಿಕೊಡಲಾಗಿ ಹಿಂದುಳಿದ ವರ್ಗಗಗಳ ಸಂಸ್ಥೆಗಳಾದ 'ಒಕ್ಕಲಿಗರ ಸಂಘ' ದಂತಹ ಸಂಸ್ಥೆಗಳಿಗೆ ಇದು ಚೇತೋಹಾರಿಯಾಯಿತು.

ಒಕ್ಕಲಿಗರಲ್ಲಿದ್ದ ನಾನಾ ಉಪಜಾತಿಗಳಲ್ಲಿದ್ದ ಸುಶೀಕ್ಷಿತರು, ನಿರುದ್ಯೋಗಿಗಳು, ಅವಕಾಶವಂಚಿತರಿಗೆ ಇದೂ ಸೂಕ್ತ ಅವಕಾಶವನ್ನು ನೀಡಿತು. ಹಿಂದುಳಿದ ವರ್ಗದವರಿಗೆ ಉದ್ಯೋಗಸಿಗುವುದು ಖಾತರಿಯಾದ ಬಳಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದರು. ಶಿಕ್ಷಣ ಮತ್ತು ಉದ್ಯೋಗದಿಂದ ಸಾಮಾಜಿಕ ಬದಲಾವಣೆ ಯಾಗತೊಡಗಿತು. ಬಡತನ, ನಿರುದ್ಯೋಗ, ಅಂಧಕಾರವನ್ನು ತೊಡೆದು ಹಾಕಲು ಸ್ವಲ್ಪಮಟ್ಟಿಗಾದರೂ ನೆರವಾಯಿತು. ಲೆಸ್ಲೆ ಮಿಲ್ಲರ್ ರವರ ವರದಿಯ ಪ್ರಕಾರ 1917ರಲ್ಲಿ ರೂ. 100/– ರೂ. 250 ತಿಂಗಳ ಸಂಬಳ ತೆಗೆದುಕೊಳ್ಳುತ್ತಿದ್ದ ಒಕ್ಕಲಿಗರ ಸಂಖ್ಯೆ ಕೇವಲ ನಾಲ್ಕು ಮಂದಿ, ರೂ. 100 ಕ್ಕಿಂತ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದವರು 300 ಮಂದಿ. 1960 ಎಂದರೆ ನಲವತ್ತಮೂರು ವರ್ಷಗಳಲ್ಲಿ ಗೆಜೆಟೆಡ್ ಹುದದೆಯಲ್ಲಿ ಒಕ್ಕಲಿಗರು 316 ಮಂದಿ ಸರ್ಕಾರಿ ಉದ್ಯೋಗ ಪಡೆಯುವಲ್ಲಿ ಯಶಸ್ವಿಯಾದರು ಎಂದರೆ ಇದು 1917ರಲ್ಲಿ ನಡೆದ 'ಹಿಂದುಳಿದ ಜನಾಂಗದ' ಹೋರಾಟದ ಫಲವೇ ಸರಿ. ಆದರೆ ಒಂದು ವಿಪರ್ಯಾಸವೆಂದರೆ

ಒಕ್ಕಲಿಗರು ಈ ಮಧ್ಯೆ ಶಿಕ್ಷಣಕ್ಕೆ ಅತಿ ಹೆಚ್ಚಿನ ಮಹತ್ವವನ್ನೇನು ನೀಡಲಿಲ್ಲವೆಂದೇ ಹೇಳಬಹುದು. ಕಾರಣವೇನೆಂದರೆ 1960ರ ನಾಗನಗೌಡ ವರದಿಯ ಪ್ರಕಾರ ನಾಲ್ಕನೆಯ ದರ್ಜೆಯ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದವರ ಸಂಖ್ಯೆ 6, 113 (ವಿವರಗಳಿಗೆ ನೋಡಿ ನಾಗನಗೌಡ ವರದಿಯನ್ನು) ಒಮ್ಮೆ ದಿವಾನ್ ಪದವಿಯನ್ನು ಗಳಿಸಲು ಅರ್ಹರಾಗಿದ್ದ ಒಕ್ಕಲಿಗರು ಅತಿಹೆಚ್ಚು ಜವಾನ್ ಪದವಿಯನ್ನು ಪಡೆಯುವುದರಲ್ಲೇ ತೃಪ್ತಿಪಟ್ಟುಕೊಳ್ಳಬೇಕಾಯಿತು. ಕಾರಣವೇನೆಂದರೆ ನಮ್ಮ ಜನಾಂಗದ ಮೇರು ವ್ಯಕ್ತಿಗಳಾದ ರಾವ್ ಬಹದ್ದೂರ್ ಹೆಚ್. ಚನ್ನಯ್ಯ, ಶ್ರೀ ಕೆ.ಹೆಚ್. ರಾಮಯ್ಯ, ಶ್ರೀ ಬಿ. ಪುಟ್ಟಯ್ಯನರಂತಹ ವ್ಯಕ್ತಿಗಳ ಮಾರ್ಗದರ್ಶನ ನಂತರದ ಕಾಲದಲ್ಲಿ ಸಿಗಲಿಲ್ಲ ಎಂದೇ ಹೇಳಬಹುದು. ಹೀಗೆ ಬ್ರಾಹ್ಮಣೇತರ ಚಳವಳಿಯು ಒಕ್ಕಲಿಗರು, ಲಿಂಗಾಯಿತರು, ಮುಸ್ಲಿಮರು ಸೇರಿದಂತೆ ಹಲವಾರು ಹಿಂದುಳಿದ ಜನಾಂಗದವರ ಆಶಾಕಿರಣವಾಗಿ ಪರಿಣಮಿಸಿತು.

ಈ ಸಂದರ್ಭದಲ್ಲಿ ಒಕ್ಕಲಿಗರಲ್ಲದ್ದಿದ್ದರೂ ಬ್ರಾಹ್ಮಣೇತರ ವರ್ಗಕ್ಕೆ ಸೇರಿದ್ದ ಮೈಸೂರಿನ ಶ್ರೀ ವೀರಬಸಪ್ಪನವರು ಹಾಗೂ ಬಿ.ಎನ್. ಗುಪ್ತರವರನ್ನು ಸ್ಮರಿಸಬೇಕು. ಹೇಗೆಂದರೆ 1900ರಲ್ಲಿ ಮೈಸೂರಿನ ವೀರಬಸಪ್ಪನವರು ಪ್ರಾರಂಭಿಸಿದ 'ಮೈಸೂರು ಸ್ಟಾರ್' ಪತ್ರಿಕೆಯು ಬ್ರಾಹ್ಮಣೇತರ ಚಳವಳಿಯಲ್ಲಿದ್ದ ಹಿಂದುಳಿದ ವರ್ಗಗಳ ಮುಖವಾಣಿಯಾಗಿತ್ತು. ಅದಕ್ಕೆ ಸೆಡ್ಡು ಹೊಡೆಯುವಂತೆ ಬಿ.ಎನ್. ಗುಪ್ತರವರ 'ಪ್ರಜಾಮತ' ಈ ಪತ್ರಿಕೆಗಳು ರಾವ್ ಬಹದ್ದೂರ್ ಚನ್ನಯ್ಯನವರನ್ನು ಹಿಂದುಳಿದ ವರ್ಗಗಳ ಮಹಾನಾಯಕನೆಂದು ಬಿಂಬಿಸಿದ್ದವು.

ಹಿಂದುಳಿದ ವರ್ಗಗಳ ಆಯೋಗಗಳು ಹಾಗೂ ಸಮುದಾಯದ ಮೇಲೆ ಅದರ ಪರಿಣಾಮ

ಕ್ರಿ.ಶ. ಇಪ್ಪತ್ತನೆಯ ಶತಮಾನದ ಹೊಸ್ತಿಲಲ್ಲಿ ಈಗಾಗಲೇ ತಿಳಿಸಿರುವಂತೆ, ಮದ್ರಾಸಿನಲ್ಲಿ ಪ್ರಾರಂಭವಾದ ಬ್ರಾಹ್ಮಣೇತರ ಚಳವಳಿ ಅಲ್ಲದೆ ಹಿಂದುಳಿದ ವರ್ಗಗಳ ಏಳಿಗೆಗಾಗಿ ಶ್ರಮಿಸುತ್ತಿದ್ದ 'ಜಸ್ಟೀಸ್ ಪಕ್ಷ' ಕಾಲಾನಂತರ ಇದು ಮೈಸೂರು ಸಂಸ್ಥಾನದ ಮೇಲೆ ಪ್ರಭಾವ ಬೀರಿದವು. ಪರಿಣಾಮವಾಗಿ ಒಕ್ಕಲಿಗರು, ಲಿಂಗಾಯಿತರು ಹಾಗೂ ಮುಸ್ಲೀಮರು ಒಂದಾದರು. (ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಅಧಿಕಾರದ ರುಚಿಯನ್ನು ಕಂಡಿದ್ದ ಮುಸ್ಲಿಮರು) ಹಿಂದುಳಿದ ಜನಾಂಗದವರಲ್ಲಿ ಜಾಗೃತಿ ಮೂಡಲಾಗಿ ಚಳವಳಿಯ ರೂಪ ಪಡೆದುಕೊಂಡಿತು. ಅಂದು ಮೈಸೂರಿನ ಆಳರಸರ ಕೃಪೆಯಿಂದಾಗ ಈ ಚಳವಳಿಗೆ ಜೀವ ಬಂದಂತಾಯಿತು. ಅಂದಿನ ಸರ್ಕಾರವು 1918ರಲ್ಲಿ ಲೆಸ್ಲೆ ಮಿಲ್ಲರ್ ಸಮಿತಿಯನ್ನು ನೇಮಕ ಮಾಡಿದ್ದುದೇ ಅಲ್ಲದೆ ಅವರು ನೀಡಿದ ವರದಿಯನ್ನು ಅನುಷ್ಠಾನಕ್ಕೆ ತರುವುದರೊಂದಿಗೆ ಭಾರತದಲ್ಲೇ

ಮೊಟ್ಟಮೊದಲ ಹಿಂದುಳಿದ ಆಯೋಗವನ್ನು ಅನುಷ್ಠಾನಕ್ಕೆ ತಂದ ಕೀರ್ತಿಗೆ ಪಾತ್ರವಾಯಿತು. ಇದು ಹಿಂದುಳಿದ ವರ್ಗಗಳಿಗೆ ಸಂದ ಜಯವೆಂದೇ ಹೇಳಬಹುದು.

ಮಿಲ್ಲರ್ ವರದಿಯು 1918ರಿಂದ 1960ರ ವರೆವಿಗೂ ಅಸ್ತಿತ್ವದಲ್ಲಿತ್ತು ಎಂದರೆ ಹೆಚ್ಚುಕಡಿಮೆ ನಾಲ್ಕು ದಶಕಗಳ ಕಾಲ ಅಸ್ತಿತ್ವದಲ್ಲಿತ್ತು. ರಾಜ್ಯ ರಾಜಕೀಯದಲ್ಲಾದ ಬದಲಾವಣೆ, ಏಕೀಕರಣ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಒತ್ತಾಯ, ಇವೇ ಮುಂತಾದ ಕಾರಣಗಳಿಂದಾಗಿ ಆಯಾ ಸರ್ಕಾರಗಳು ಹಿಂದುಳಿದ ವರ್ಗಗಳ ಆಯೋಗಗಳನ್ನು ನೇಮಿಸತೊಡಗಿದವು. ಈ ಆಯೋಗಗಳ ಸಾಧಕ ಬಾಧಕಗಳಿಗೆ ತಕ್ಕಂತೆ ಒಕ್ಕಲಿಗ ಜನಾಂಗ ಸ್ಪಂದಿಸುತ್ತಾ ಬಂದಿತು.

ಆಯೋಗಗಳನ್ನು ನೇಮಿಸಲು ಕಾರಣವಾದ ಸನ್ನಿವೇಶಗಳು

ಈಗಾಗಲೇ ತಿಳಿಸಿರುವಂತೆ ಲೆಸ್ಲೆಮಿಲ್ಲರ್‌ರವರ ವರದಿಯು ಸುಮಾರು ನಾಲ್ಕು ದಶಕಗಳ ಕಾಲ ಅಸ್ತಿತ್ವದಲ್ಲಿತ್ತು. ಅಲ್ಲಿಂದೀಚೆಗೆ ಮೂರು ಆಯೋಗಗಳನ್ನು ಕಾಲಕಾಲಕ್ಕೆ ನೇಮಿಸಲಾಯ್ತು. ಈ ಆಯೋಗಗಳ ವರದಿಗಳನ್ನು ಒಂದು ಕೋಮಿನವರು ಒಪ್ಪಿಕೊಂಡರೆ ಮತ್ತೊಂದು ಕೋಮಿನವರು ಒಪ್ಪದೆ ಅದರ ವಿರುದ್ಧ ಚಳವಳಿಯನ್ನು ಮಾಡುವುದರ ಮುಖೇನ ತಿರಸ್ಕರಿಸುವುದು, ನ್ಯಾಯಾಲಯಗಳ ಮೆಟ್ಟಲೇರುವುದು ನಡೆದೇ ಇತ್ತು. 1947ರಲ್ಲಿ ಮೈಸೂರು ಸಂಸ್ಥಾನವು ಸ್ವಾತಂತ್ರ್ಯ ಪಡೆಯಿತು. ದಕ್ಷಿಣ ಭಾರತದಾದ್ಯಂತ ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಣೆ ಮಾಡಲು ಚಳವಳಿಯನ್ನು ಹಮ್ಮಿಕೊಂಡಿತು. ಈ ಚಳವಳಿಗೆ ಕರ್ನಾಟಕ ರಾಜ್ಯದ ದಕ್ಷಿಣ ಭಾಗದ ಎಂದರೆ ಹಳೇ ಮೈಸೂರು ಪ್ರಾಂತ್ಯ, ಚಿಕ್ಕಮಗಳೂರು, ಮಂಗಳೂರು ಪ್ರದೇಶಗಳು ತಣ್ಣಗೆ ಪ್ರತಿಕ್ರಿಯಿಸಿದವು. ಏಕೀಕರಣ ಚಳವಳಿಯ ಕೂಗು ಏನಿದ್ದರೂ ಉತ್ತರ ಕರ್ನಾಟಕದ ಪ್ರದೇಶಗಳಿಗೆ ಮಾತ್ರ ಮೀಸಲಾಗಿತ್ತು. ಅಷ್ಟೇ ಏಕೆ ಹಳೆಯ ಮೈಸೂರು ಪ್ರಾಂತ್ಯ ಅಷ್ಟಾಗಿ ಪ್ರತಿಕ್ರಿಯಿಸಲಿಲ್ಲ. ಅದರಲ್ಲೂ ವಿಶೇಷವಾಗಿ ಹಳೆಯ ಮೈಸೂರು ಪ್ರಾಂತ್ಯದ ಒಕ್ಕಲಿಗರಂತೂ ಏಕೀಕರಣ ಚಳವಳಿಗೆ ವಿರೋಧ ವ್ಯಕ್ತಪಡಿಸುತ್ತಿದ್ದರು ಎಂದರೆ ತಪ್ಪಾಗಲಾರದು. ಈ ವಿಷಯವನ್ನು ಮರೆಮಾಚಲು ಸಾಧ್ಯವಿಲ್ಲ. ಈಗಾಗಲೇ ಈ ವಿಚಾರ ಪುಸ್ತಕಗಳಲ್ಲಿ ಪ್ರಕಟಗೊಂಡಿವೆ. ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ದೊರೆಸ್ವಾಮಿಯವರು ತಮ್ಮ 'ನೆನಪಿನ ಸುರುಳಿ ತೆರೆದಾಗ' ಎಂಬ ಕೃತಿಯಲ್ಲಿ ಹೀಗೆ ಹೇಳಿದ್ದಾರೆ – 'ಸ್ವಾತಂತ್ರ್ಯ ಬಂದ ಮೇಲೂ ಏಕೀಕರಣವನ್ನು ಮೈಸೂರು ಸಂಸ್ಥಾನದ ಒಕ್ಕಲಿಗರು ವಿರೋಧಿಸುತ್ತಿದ್ದರು. ಏಕೀಕರಣವಾದರೆ ಲಿಂಗಾಯಿತರ ಕೈಗೆ ಅಧಿಕಾರ ಶಾಶ್ವತವಾಗಿ ಹೋಗಿಬಿಡುತ್ತದೆಂಬುದು ಒಕ್ಕಲಿಗ ಮುಖಂಡರ ಹೆದರಿಕೆ. ಸ್ವಾತಂತ್ರ್ಯ ಬಂದ ಒಡನೆ, ಮೈಸೂರು ರಾಜ್ಯದಲ್ಲಿ ಒಕ್ಕಲಿಗರನ್ನು ಸರ್ಕಾರದ ಎಲ್ಲಾ ಮುಖ್ಯಸ್ಥಾನಗಳಲ್ಲಿ ಕೂರಿಸುವ ಪ್ರಯತ್ನ ವ್ಯವಸ್ಥಿತವಾಗಿ ನಡೆದಿತ್ತು. ಎಲ್ಲಾ ಜಿಲ್ಲಾಧಿಕಾರಿ

-ಗಳೂ, ಡಿವಿಜನಲ್ ಕಮಿಷನರು ಗಳೂ, ಸರ್ಕಾರದ ಕಾರ್ಯದರ್ಶಿಗಳೂ, ಮರಾಮತ್ ಮತ್ತು ಇತರ ಇಲಾಖಾ ಮುಖ್ಯಸ್ಥರು ಒಕ್ಕಲಿಗ ಬಹುಸಂಖ್ಯಾತರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು... ಇತ್ಯಾದಿ." (ಹೆಚ್.ಎಸ್. ದೊರೆಸ್ವಾಮಿ - ನೆನಪಿನ ಸುರುಳಿ ತೆರೆದಾಗ, ಬೆಂಗಳೂರು - 2003, ಪುಟ 74).

ಅದೇ ರೀತಿ ಮೈಸೂರು ಪ್ರಾಂತ್ಯದ ಒಕ್ಕಲಿಗರು ಏಕೀಕರಣಕ್ಕೆ ಒಪ್ಪದಿರಲು ಕಾರಣಗಳನ್ನು ನೋಡೋಣ. ಏನೆಂದರೆ ಮಂಡ್ಯ ಜಿಲ್ಲೆ (1936-37ರಲ್ಲಿ ಜಿಲ್ಲೆಯಾಯಿತು. ಅಲ್ಲಿಯವರೆವಿಗೂ ಅದು ಮೈಸೂರಿಗೆ ಸೇರಿತ್ತು) ಹಾಸನ ಜಿಲ್ಲೆ ಸೇರಿದಂತೆ ದೊಡ್ಡ ಪ್ರದೇಶವಾದ ಮೈಸೂರು ಪ್ರಾಂತ್ಯವನ್ನು ಸರಿಸುಮಾರು ಆರುನೂರು ವರ್ಷಗಳ ಕಾಲ ಮೈಸೂರು ಪ್ರಾಂತ್ಯವನ್ನು ಸರಿಸುಮಾರು ಆರುನೂರು ವರ್ಷಗಳ ಕಾಲ ಮೈಸೂರು ಒಡೆಯರು ಆಳ್ವಿಕೆ ಮಾಡಿದರು. (1399-1947) ಇನ್ನೂ ವಿಶೇಷವೆಂದರೆ ಇದಕ್ಕಿಂತಲೂ ಮೊದಲು ಒಕ್ಕಲಿಗರು ಆಳರಸರಾಗಿ (ಗಂಗರು) ನಾಡಪ್ರಭುಗಳಾಗಿ (ಕೆಂಪೇಗೌಡ) ಪಾಳೆಯಗಾರರಾಗಿ ಮಧುಗಿರಿ ಇತ್ಯಾದಿ) ಫೌಜುದಾರರಾಗಿ (ಫೌಜುದಾರ್ ಬೋರೇಗೌಡ) ಹಳೇ ಮೈಸೂರು ಪ್ರಾಂತ್ಯದಲ್ಲಿ ಉತ್ತಮ ಸ್ಥಿತಿಯಲ್ಲಿದ್ದರು. (ಈ ಬಗ್ಗೆ ಮೊದಲೇ ತಿಳಿಸಲಾಗಿದೆ.)

ಒಕ್ಕಲಿಗರಲ್ಲಿ ಹಲವಾರು ಮಂದಿ ಶ್ರೀಮಂತ ಜಮೀನ್ದಾರರಾಗಿದ್ದರು. ಹಳೇ ಮೈಸೂರು ಪ್ರಾಂತ್ಯದಲ್ಲಿ ಜನಸಂಖ್ಯೆಯಲ್ಲಿಯೂ ಹೆಚ್ಚಿನ ಜನಬಾಹುಳ್ಯವಿದ್ದ ಒಕ್ಕಲಿಗರನ್ನು ಎದುರು ಹಾಕಿಕೊಳ್ಳಲು ಆಳರಸರು ಅಂಜುತ್ತಿದ್ದರು. 1881ರಲ್ಲಿ ಪ್ರಜಾಪ್ರತಿನಿಧಿ ಸಭೆಯು ಅಸ್ತಿತ್ವಕ್ಕೆ ಬಂದಾಗಲೂ ಅಲ್ಲಿ ಒಕ್ಕಲಿಗ ಸಭಾಸದರ ಸಂಖ್ಯೆಯೂ ಹೆಚ್ಚಾಗಿದ್ದಿತು. ಶ್ರೀಮಂತಿಕೆ, ಗತ್ತು, ಮತ್ತು ಗಮ್ಮತ್ತಿನ (ಇಂದಿಗೂ ಮಂಡ್ಯ ಸೇರಿದಂತೆ ಹಳೆ ಮೈಸೂರು ಪ್ರಾಂತ್ಯದ ಒಕ್ಕಲಿಗರಲ್ಲಿ ಕಾಣಬಹುದು) ಒಕ್ಕಲಿಗರು ಒಡೆಯರಿಗೆ ಹೆಚ್ಚಿನ ಕಂದಾಯ ಕಾಂಟ್ರಿಬ್ಯೂಷನ್ ನೀಡುತ್ತಿದ್ದರು. ಹೀಗೆ ಉತ್ತಮ ಸ್ಥಾನಮಾನವನ್ನು ಹೊಂದಿದ್ದ ಒಕ್ಕಲಿಗ ಜನಾಂಗ ಏಕೀಕರಣವನ್ನು ಸ್ವಾಭಾವಿಕವಾಗಿಯೇ ವಿರೋಧಿಸುತ್ತಿದ್ದುದು ಆ ಕಾಲಕ್ಕೆ ಸರಿ ಎನಿಸಿದ್ದಿತು. ಅದರಲ್ಲೂ ವಿಶೇಷವಾಗಿ ಮಂಡ್ಯ ಜಿಲ್ಲೆಯಲ್ಲಿ ಭಾರೀ ವಿಲೀನ ವಿರೋಧಿ ಸಮ್ಮೇಳನ ನಡೆಯಿತು.

ಹಳೇ ಮೈಸೂರು ಪ್ರಾಂತ್ಯವು ಫಲವತ್ತಾದ ಭೂಮಿ, ನೀರಾವರಿ ಸೌಲಭ್ಯವನ್ನು ಶತಮಾನಗಳಿಂದ ಹೊಂದಿದ್ದ ಪ್ರಾಂತ್ಯವಾಗಿತ್ತು. ಏಕೀಕರಣವಾದರೆ ಗುಲ್ಬರ್ಗ, ರಾಯಚೂರಿನಂತಹ ಹಿಂದುಳಿದ ಪ್ರದೇಶಗಳನ್ನು ಸೇರಿಸಿಕೊಂಡರೆ ನಮ್ಮ ಪ್ರದೇಶಗಳಿಗೆ ಸರ್ಕಾರವು ಗಮನಕೊಡುವುದಿಲ್ಲ ಹಾಗೂ ಅಭಿವೃದ್ಧಿ ಕೆಲಸ ಕಾರ್ಯಗಳು ಕುಂಠಿತವಾಗುತ್ತವೆ ಇವೇ ಮೊದಲಾಗಿ ಯೋಚಿಸಿದರು.

ಇಷ್ಟೇ ಅಲ್ಲದೆ ಉತ್ತರ ಕರ್ನಾಟಕದ ಭಾಗವು ಲಿಂಗಾಯಿತರಿಂದಲೇ ತುಂಬಿರುವ ಪ್ರದೇಶ, ಮುಂದೆ ರಾಜಕೀಯವಾಗಿ ತಾವು ಅತಂತ್ರವಾಗಬಹುದೆಂಬ ಅಂಜಿಕೆಯೂ, ಸಾಲದ್ದಕ್ಕೆ ಬರಡಾದ ಉತ್ತರ ಕರ್ನಾಟಕದ ಭಾಗಗಳನ್ನು ಅಭಿವೃದ್ಧಿ ಪಡಿಸಲು ತಮ್ಮ ಖಜಾನೆಯನ್ನು ಬರಿದು ಮಾಡಬೇಕಾಗಬಹುದು ಇತ್ಯಾದಿಯಾಗಿ ಯೋಚಿಸಿದ್ದು ಹಾಗೂ ಯೋಜಿಸಿದ್ದು ಸಹಜವೆ ಆಗಿತ್ತು.

1957ರಲ್ಲಿ ಕರ್ನಾಟಕ ಏಕೀಕರಣಗೊಂಡಿತು (1.11.1956). ಮುಂಬೈ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ಪ್ರದೇಶಗಳು ಏಕೀಕರಣಗೊಂಡವು. ವಿಭಜಿತ ಪ್ರದೇಶಗಳು ಒಂದುಗೂಡುವ ವೇಳೆಗೆ ಇದ್ದ ಜಾತೀಯ ಭಿನ್ನತೆಗಳು ಕನ್ನಡಿಗರನ್ನು ನಾಮಕರಣದ ಸಾಕಾರತೆಗೂ ತೊಡಕುಗಳನ್ನು ಸೃಷ್ಟಿಸಿದ್ದವು. ಹಳೆಯ ಮೈಸೂರಿನ ಒಕ್ಕಲಿಗ ಸಮುದಾಯದವರು ಇತರೆ ಭಾಗಗಳ ಲಿಂಗಾಯತ ಸಮುದಾಯದವರ ಇಂಗಿತವನ್ನು ಮಾನ್ಯ ಮಾಡಲು ಒಪ್ಪುತ್ತಿರಲಿಲ್ಲ. ಬಹುಪಾಲು ಮೈಸೂರೇತರ ಭಾಗಗಳಲ್ಲಿ ವೀರಶೈವ ಸಮುದಾಯವೆಂದರೆ ಪ್ರಬಲರು ಎಂಬ ಭಾವನೆ ಮೈಸೂರಿಗರಿಗೆ ಬಲವಾಗಿ ಮೂಡಿತ್ತು. ಈ ಹಿನ್ನೆಲೆಯಲ್ಲಿಯೇ ಅವರು (ಉತ್ತರ ಕರ್ನಾಟಕದ ಭಾಗದ ಜನ) ಬಯಸುತ್ತಿದ್ದ ಕರ್ನಾಟಕ ಎಂಬ ಹೆಸರಿಗೆ ಬದಲಾಗಿ ಮೈಸೂರು ಎಂಬ ಹೆಸರನ್ನಿಡಲು ಪ್ರಬಲವಾಗಿ ಒತ್ತಾಯಿಸುತ್ತಿದ್ದರು (ಕ್ರಾಂತಿ ಕರ್ನಾಟಕ – ಸಂ. ಡಾ. ಅಶೋಕ ದೊಡ್ಡಮೇಟಿ) ಹೀಗೆ ರಾಜ್ಯದ ನಾಮಕರಣದ ವಿಷಯದಲ್ಲೂ ಪೂರಕವಾದ ಪ್ರಾದೇಶಿಕ ಅಭಿಮಾನ ತಲೆ ಎತ್ತಿದ್ದು ಈಗ ಇತಿಹಾಸವಾಗಿದೆ.

ಏಕೀಕೃತ ಕರ್ನಾಟಕದಲ್ಲಿ ಒಕ್ಕಲಿಗರು, ಲಿಂಗಾಯಿತರು ಪ್ರಬಲವಾದ ಎರಡು ಕೋಮುಗಳಾಗಿ ರೂಪುಗೊಂಡವು. ಜಾತೀವಾರು ದೃಷ್ಟಿಯಿಂದ ಹೊಸ ಮೀಸಲಾತಿ ನೀತಿಯು ಅಗತ್ಯ ತಲೆದೋರಿತ್ತು. ಇದೆಲ್ಲಕ್ಕಿಂತಲೂ ಹೆಚ್ಚಾಗಿ ನಾಡಿನ ರಾಜಕೀಯದಲ್ಲಿಯೂ ಬದಲಾವಣೆಯಾಯಿತು. ಶ್ರೀ ಕೆಂಗಲ್ ಹನುಮಂತಯ್ಯನವರು ಹಳೆ ಮೈಸೂರಿನವರ ಅದರಲ್ಲೂ ವಿಶೇಷವಾಗಿ ಶ್ರೀ ಹೆಚ್.ಕೆ. ವೀರಣ್ಣಗೌಡರಂತಹವರನ್ನು ಎದರು ಹಾಕಿಕೊಂಡು ತಮ್ಮ ಮುಖ್ಯ ಮಂತ್ರಿಸ್ಥಾನವನ್ನೇ ಕಳೆದುಕೊಳ್ಳಬೇಕಾಯಿತು. ಕೆ.ಸಿ.ರೆಡ್ಡಿಯವರು, ಕೆಂಗಲ್ ಹನುಂತಯ್ಯವನರು ಕ್ರಮವಾಗಿ 1947 ರಿಂದ 1952, 1952 ರಿಂದ 1956ರ ವರೆಗೆ ಕರ್ನಾಟಕವನ್ನು ಆಳಿದ ಇಬ್ಬರೂ ಒಕ್ಕಲಿಗ ಸಮುದಾಯಕ್ಕೆ ಸೇರಿದವರು. ಒಂಬತ್ತು ವರ್ಷಗಳ ಕಾಲ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿದ್ದರು. ನಂತರ ಶ್ರೀ ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಯಾದರು. (1.11.1956 ರಿಂದ 16.5.1958)

ನಾಗನಗೌಡ ಆಯೋಗ

ನಂತರ ಬಿ.ಡಿ. ಜತ್ತಿ (16.5.1958 ರಿಂದ 6.3.1962) ಹೀಗೆ ಲಿಂಗಾಯಿತರು ದಾಪುಗಾಲಿಕ್ಕುತ್ತಾ ರಾಜಕೀಯದಲ್ಲಿ ಅಭಿವೃದ್ಧಿ ಹೊಂದ ತೊಡಗಿದ್ದರು. ಕೊನೆಗೆ ಬಿ.ಡಿ. ಜತ್ತಿಯವರು 1960ರಲ್ಲಿ ನಾಗನಗೌಡರ ನೇತೃತ್ವದಲ್ಲಿ ರಾಜ್ಯದ ಎರಡನೆಯ ಹಿಂದುಳಿದ ವರ್ಗಗಳ ಸಮಿತಿ ನೇಮಕಮಾಡಿದರು. ಈ ಸಮಿತಿಯು ಆಯಾ ಜಾತಿಗಳ ಜನಸಂಖ್ಯೆ ಅವುಗಳ ಶೈಕ್ಷಣಿಕ ಮಟ್ಟ ಮತ್ತು ಸರ್ಕಾರಿ ನೌಕರಿಗಳಲ್ಲಿ ಅವರ ಪಾಲು ಈ ಮೂರು ಆಧಾರಗಳನ್ನು ಇಟ್ಟುಕೊಂಡು ಹೊಸ ಮೀಸಲಾತಿ ನೀತಿಯನ್ನು ಒಳಗೊಂಡ ವರದಿ ನೀಡಿತು. ಈ ವರದಿಯಿಂದಾಗಿ ಲಿಂಗಾಯಿತರು ಮುಂದುವರಿದವರು ಎಂಬ ಹಣೆಪಟ್ಟಿಯನ್ನು ಪಡೆದುಕೊಂಡರು. ಈ ವರದಿಯು ಲಿಂಗಾಯಿತರ ಕೋಪಕ್ಕೆ ತುತ್ತಾಯಿತು. ಅವರು ಈ ವರದಿಯನ್ನು ವಿರೋಧಿಸಿ ಭಾರೀ ಪ್ರತಿಭಟನೆ ಮಾಡಿದರು. ಲಿಂಗಾಯಿತ ಮುಖ್ಯಮಂತ್ರಿಗಳಿಗೆ ಇದು ಬಿಸಿ ತುಪ್ಪವಾಯಿತು. ಕೊನೆಗೆ ಈ ವಿವಾದ ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿತು.

ನಾಗನಗೌಡ ಆಯೋಗದ ವರದಿ ಈ ಕೆಳಕಂಡಂತಿದೆ...

NAGANA GOWDA REPORT-1960
ನಾಗನಗೌಡ ವರದಿ

Statement Showing representation of community in Govt Services 31st March 1959

Caste	Estimated Population as in 1960	Percentage Population	Gazeted employee	Now gazeted	Class IV employee	Total employee
Brahmin	9,05,700	4.28	1,012	25,123	2,294	28,428 19.12%
Lingayat	32,93,000	15.57	488	15,706	2,237	18.431 12.4%
Vokkaliga	27,44,300	12.98	316	9,457	6,113	15,886 10.68%

a. List of socialy and educationally class for purpose of article 15(4) of the constitution
A- Backward
Atte - Vokkal (Gramvokkal, Holokki vokkal)
Karevokkal, Kunchavokkal, Kuduvokkal
Gawda, Raddi (Reddi) (Non - Ligayat) vokkaliga

b. List of backward classes not adequately represented in Govt services for purpose of article 16(4) of the the consitiution atte - vokkal (Gramavakkal, ... Gowda, vokkaliga)

Total Students Studying in High School - 1960

ನಾಗನಗೌಡ ವರದಿ 1960ರ ಪ್ರೌಢಶಾಲಾ ವಿದ್ಯಾಭ್ಯಾಸ

Caste percentage school	Estimate	Total Stidents population in 1960	No. of classes of high
Brahmin	9,05,700	36,117	38.8
Lingayat	32,93,000	23,369	7.1
Vokkaliga	27,44,300	16,471	22.8

Statement showing representation of community in services under the Govt. as on 31st March 1959-60
1959–60ರ ಸರ್ಕಾರಿ ಉದ್ಯೋಗಿಗಳ ವರದಿ

Caste	Estimated population as in 1960	Percentage	Gazeted	NGO	Class IV	Total No. of Employees	Percentage	Adequate Representation (+) Inadequate (-)
Brahmin	9,50,700	4.28	1,012	25,123	2,294	28,429	19.12	+14.84
Lingayat	32,93,000	15.57	488	15,706	2,237	18,431	12.40	-3.17
Vokkaliga	27,44,300	12.98	300	12.98	316	9,457	6,113	15,886

e. Statement showing list of socialy and educational backward classes, Purpose of article 15(4) of the condtitution
A- Backward
Sl.No. 79 Vokkaliga

ವಿಶೇಷ ಸೂಚನೆ : ಈ ಮೇಲ್ಕಂಡ ಆಯೋಗಗಳ ವರದಿಯು ಸವಿಸ್ತಾರವಾಗಿದ್ದು ಸದ್ಯ ಇಲ್ಲಿ ಕೇವಲ ಬ್ರಾಹ್ಮಣರು, ಲಿಂಗಾಯಿತರು ಹಾಗೂ ಒಕ್ಕಲಿಗರ ಅಂಕೆ-ಸಂಖ್ಯೆಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಹೋಲಿಕೆ ಮಾಡಲಾಗಿದೆ.

ರಾಜ್ಯ ರಾಜಕೀಯದಲ್ಲಿ ಒಡೆದು ಆಳುವ ನೀತಿಯ ಪ್ರತಿಪಾದನೆ

ರಾಜಕೀಯ ಎನ್ನುವುದು ನಿಂತ ನೀರಲ್ಲ. ಸ್ವಾತಂತ್ರ್ಯಾ ನಂತರ ಕರ್ನಾಟಕ–ದಾದ್ಯಂತ ಬದಲಾವಣೆಯ ಗಾಳಿ ಬೀಸತೊಡಗಿತು. ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಎಸ್. ನಿಜಲಿಂಗಪ್ಪನವರು ರಾಷ್ಟ್ರರಾಜಕಾರಣಕ್ಕೆ ಧುಮುಕಿದರು. ಬೃಹತ್ತಾದ ಕಾಂಗ್ರೆಸ್ ಪಕ್ಷವು ಸಂಸ್ಥಾ ಕಾಂಗ್ರೆಸ್, ಇಂದಿರಾ ಕಾಂಗ್ರೆಸ್ ಎಂಬುದಾಗಿ ಇಬ್ಭಾಗವಾಯಿತು. ನಿಜಲಿಂಗಪ್ಪನವರು ಸಂಸ್ಥಾ ಕಾಂಗ್ರೆಸ್‌ನ ಮುಂಚೂಣಿಯಲ್ಲಿದ್ದರು. ಕರ್ನಾಟಕದ ರಾಜಕೀಯದಲ್ಲಾದ ಬದಲಾವಣೆಯಿಂದ ಶ್ರೀ ದೇವರಾಜ ಅರಸರು ರಾಜ್ಯದ ಮುಖ್ಯಮಂತ್ರಿಯಾದರು (20.3.1972 ರಿಂದ 31.12.1980). ಈಗಾಗಲೇ ಎಸ್. ನಿಜಲಿಂಗಪ್ಪ, ಬಿ.ಡಿ. ಜತ್ತಿ, ಎಸ್.ಆರ್. ಕಂಠಿ, ವೀರೇಂದ್ರ ಪಾಟೀಲ್ ಹೀಗೆ ನಾಲ್ಕು ಮಂದಿ ಲಿಂಗಾಯಿತ ಮುಖ್ಯಮಂತ್ರಿಗಳು ರಾಜ್ಯದ ಚುಕ್ಕಾಣಿ ಹಿಡಿದಿದ್ದರು. ರಾಜ್ಯದಲ್ಲಿ ಲಿಂಗಾಯಿತರು ಮತ್ತು ಒಕ್ಕಲಿಗರು ಪ್ರಬಲರಾಗಿದ್ದರು. ಆದರೆ ದೇವರಾಜ ಅರಸರು ಇವೆರಡೂ ಸಮುದಾಯಕ್ಕೆ ಸೇರದ ಕ್ಷತ್ರಿಯ (ಅಲ್ಪಸಂಖ್ಯಾತ ಸಮುದಾಯ–ವೆನ್ನಬಹುದು) ಸಮುದಾಯಕ್ಕೆ ಸೇರಿದವರಾಗಿದ್ದರು. ದೇವರಾಜ ಅರಸರಿಗೆ ಕೆಲವಾರು ರಾಜಕೀಯ ಸವಾಲುಗಳು ಎದುರಾದವು. ಅವುಗಳೆಂದರೆ (1) ಲಿಂಗಾಯಿತ ಮತ್ತು ಒಕ್ಕಲಿಗ ಸಮುದಾಯವನ್ನು ಎದುರಿಸುವುದು (2) ಸಂಸ್ಥ ಕಾಂಗ್ರೆಸ್ ಅನ್ನು ಸದೆ ಬಡಿದು ಇಂದಿರಾ ಕಾಂಗ್ರೆಸ್ ಅನ್ನು ಪುನಶ್ಚೇತನಗೊಳಿಸುವುದು. (3) ತಾನು ಅಧಿಕಾರದಲ್ಲಿ ಉಳಿಯಬೇಕಾದರೆ ಒಕ್ಕಲಿಗರು, ಲಿಂಗಾಯಿತರನ್ನು ಸಮಾನ ಅಂತರದಲ್ಲಿಡುವುದು ಇಲ್ಲವೆ ಒಡೆದು ಆಳುವ ನೀತಿಯ ಮೂಲಕ ರಾಜ್ಯ ಆಳುವುದು. ಈ ಸವಾಲುಗಳನ್ನು ಇಲ್ಲವೆ ಸಮಸ್ಯೆಗಳನ್ನು ನಿವಾರಿಸಿಕೊಂಡರೆ ಸುರಕ್ಷತೆಯಿಂದಿರಬಹುದೆಂದು ಎಣಿಸಿದರು.

ಸ್ವಾತಂತ್ರ್ಯಾನಂತರ ಕೇವಲ ಎರಡು ದಶಕಗಳಲ್ಲಿ ಲಿಂಗಾಯಿತರು ಮತ್ತು ಒಕ್ಕಲಿಗ ಸಮುದಾಯಗಳೆರಡೂ ತುಂಬಾ ಪ್ರಬಲವಾದವು. ಆದರೆ ಅವೆರಡೂ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿಯೇ ಉಳಿದುಕೊಂಡಿದ್ದವು. ತಾನು ಅಧಿಕಾರದಲ್ಲಿ ಉಳಿದುಕೊಳ್ಳಬೇಕೆಂದರೆ, ಲಿಂಗಾಯಿತ ಮತ್ತು ಒಕ್ಕಲಿಗರ ಪ್ರಾಬಲ್ಯವನ್ನು ಮುರಿದು ಇತರೇ ಹಿಂದುಳಿದ ವರ್ಗಗಳನ್ನು ಬಲಪಡಿಸುವುದು. ಅವಶ್ಯವೆಂದು ದೇವರಾಜ ಅರಸ್ ಭಾವಿಸಿದರು. ಈ ಮೇಲ್ಕಂಡ ಎರಡು ಪ್ರಬಲ ಕೋಮುಗಳಲ್ಲಿ ಅವರಿಗೆ ಒಕ್ಕಲಿಗರ ಬಗ್ಗೆ ಒಂದು ರೀತಿಯ ಮಮಕಾರವಿದ್ದಿತು. ಕಾರಣವೇನೆಂದರೆ ಶ್ರೀ ಎಸ್.ಎಂ. ಕೃಷ್ಣ, ಎಸ್.ಎನ್. ನಂಜೇಗೌಡ ಸೇರಿದಂತೆ ಒಕ್ಕಲಿಗ ನಾಯಕರು ದೇವರಾಜ ಅರಸರ ಪರವಾಗಿದ್ದರು. ಹಳೇ ಮೈಸೂರು ಒಕ್ಕಲಿಗರ ತಾಣವಾಗಿದ್ದರೆ, ಉತ್ತರ ಕರ್ನಾಟಕದ ಭಾಗಗಳು ಲಿಂಗಾಯಿತರೇ ತುಂಬಿರುವ ಪ್ರದೇಶಗಳಾಗಿದ್ದವು. ಉತ್ತರ ಕರ್ನಾಟಕದ ಬಹುತೇಕ ಭಾಗಗಳು ಲಿಂಗಾಯಿತರ ಭದ್ರಕೋಟೆಯಾಗಿದ್ದು ಶ್ರೀ ಎಸ್. ನಿಜಲಿಂಗಪ್ಪ

ಮತ್ತು ವೀರೇಂದ್ರ ಪಾಟೀಲರನ್ನು ಹಾಗೂ ಅವರ ಪಕ್ಷವನ್ನು ಬೆಂಬಳಿಸಿದರೆ ಹಳೇ ಮೈಸೂರು ಪ್ರದೇಶವು ಕಾಂಗ್ರೆಸ್‌ನ 'ಕೈ' ಬಲಪಡಿಸಿದವು. ಮೇಲಾಗಿ ದೇವರಾಜ ಅರಸರು ಹಳೇ ಮೈಸೂರು ಪ್ರಾಂತ್ಯಕ್ಕೆ (ಮೈಸೂರು ಜಿಲ್ಲೆ ಹುಣಸೂರು) ಸೇರಿದವರಾಗಿ –ದ್ದರು. ಇವೇ ಮುಂತಾದ ಕಾರಣಗಳಿಂದ ಒಕ್ಕಲಿಗ ಮತ್ತು ಲಿಂಗಾಯಿತ ಈ ಎರಡು ಸಮುದಾಯಗಳಲ್ಲಿ ಒಕ್ಕಲಿಗ ಜನಾಂಗಕ್ಕೆ ಅನುಕೂಲ ಮಾಡಿಕೊಡುವುದರ ಮೂಲಕ ಲಿಂಗಾಯಿತರನ್ನು ನಿಯಂತ್ರಿಸಲು ತೀರ್ಮಾನಿಸಿದರು. ಅದರ ಫಲವೇ ಹಾವನೂರು ವರದಿ.

ಹಾವನೂರು ಆಯೋಗ

ಎಲ್.ಜಿ. ಹಾವನೂರು ಖ್ಯಾತ ವಕೀಲರು ಹಿಂದುಳಿದ ವರ್ಗಗಳ ಸಿದ್ಧಾಂತದ ಪ್ರತಿಪಾದಕರು ಎಂದು ಹೆಸರು ಮಾಡಿದ್ದರು. ಅಷ್ಟೇ ಅಲ್ಲ ನಿಷ್ಠುರಮತಿಯೂ, ಶಿಸ್ತಿನ ವ್ಯಕ್ತಿಯೂ ಆಗಿದ್ದ ಹಾವನೂರರನ್ನು ಶ್ರೀ ದೇವರಾಜ ಅರಸರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನಾಗಿ ಮಾಡಿದರು. ಶ್ರೀ ಹಾವನೂರರು ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾನಂತರ ಶಿಕ್ಷಣ, ಉದ್ಯೋಗ, ಆರ್ಥಿಕ ಸ್ಥಿತಿಗತಿಗಳು ಇವೇ ಮುಂತಾದ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ರಾಜ್ಯದಾದ್ಯಂತ ಕ್ಷೇತ್ರ ಕಾರ್ಯ ಮಾಡಿ 1972ರಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರು. ಈ ವರದಿಯನ್ನು ಅರಸರು ಅನುಷ್ಠಾನಕ್ಕೆ ತಂದರು. ಈ ವರದಿಯಲ್ಲಿ ಲಿಂಗಾಯಿತರು ಒಕ್ಕಲಿಗರಿಗಿಂತ ಮುಂದುವರಿದ ಸಮುದಾಯ ವೆಂದು ಬಿಂಬಿಸಲಾಯಿತು. ಒಕ್ಕಲಿಗರನ್ನು ಹಿಂದುಳಿದ ಪಟ್ಟಿಯಲ್ಲೇ ಉಳಿಸಲಾಯಿತು. ಇಡೀ ಒಕ್ಕಲಿಗ ಸಮುದಾಯ ಸಂಪ್ರೀತವಾಯಿತು. ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆವಿಗೂ ಫೀಜಿನಲ್ಲಿ ರಿಯಾಯಿತಿ ಮತ್ತು ಉದ್ಯೋಗದಲ್ಲಿ ಮೀಸಲಾತಿ ಮುಂತಾದ ಅನುಕೂಲಗಳು ಒಕ್ಕಲಿಗರಿಗೆ ಲಭ್ಯವಾದರೆ ಲಿಂಗಾಯಿತರು ಇವುಗಳಿಂದ ವಂಚಿತರಾದರು. ನಿಧಾನವಾಗಿ ಎಚ್ಚೆತ್ತ ಲಿಂಗಾಯಿತ ಮುಖಂಡರು ಸರ್ಕಾರದ ವಿರುದ್ಧ ತಿರುಗಿ ಬೀಳುವುದಕ್ಕೂ, ಇದೇ ಸಮಯಕ್ಕೆ ದೇಶ –ದಲ್ಲಿ ತುರ್ತು ಪರಿಸ್ಥಿತಿ ಹೇರುವುದಕ್ಕೂ ಸರಿಹೋಯಿತು. (ತುರ್ತು ಪರಿಸ್ಥಿತಿ– ಯಿಂದಾಗಿ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ 31.12.1977 ರಿಂದ 28.2.1978). ಈ ವರದಿ –ಯಿಂದಾಗಿ ಅದುವರೆವಿಗೂ ನಗಣ್ಯ ಹಿಂದುಳಿದ ಜಾತಿಯವರು ಅರಸರನ್ನು ಕೊಂಡಾಡಿದರು. ಧೀರೋದಾತ, ಹಿಂದುಳಿದ ಕೋಮಿನ ಉದ್ಧಾರಕ ಇವೇ ಮುಂತಾಗಿ ಹಾಡಿ ಹೊಗಳಿ ಬಿಂಬಿಸಲಾಯಿತು. ಇಡೀ ದೇಶದಲ್ಲಿ ಇಂದಿರಾಗಾಂಧಿ –ಯವರ ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತಂದ ವ್ಯಕ್ತಿ ಎಂದು ಮೆರೆಸಿದರು. ದುರಂತವೆಂದರೆ ಕರ್ನಾಟಕದವರೆ ಹುಟ್ಟು ಹಾಕಿದ ಸಂಸ್ಥಾ ಕಾಂಗ್ರೆಸ್ ಅನ್ನು ಇಂದಿರಾ ಕಾಂಗ್ರೆಸ್ ಇಂದಿರಾ ಕಾಂಗ್ರೆಸ್ ಮೆಟ್ಟಿ ನಿಂತಿತು. ಹಾವನೂರು ವರದಿಯನ್ನು ವಿರೋಧಿಸಿ ಅಲ್ಲಲ್ಲಿ ಹರತಾಳಗಳು, ಮುಷ್ಕರಗಳು ನಡೆದವು ಪ್ರಯೋಜನವಾಗದಿದ್ದಾಗ ಈ ವಿವಾದ ಸುಪ್ರೀಂಕೋರ್ಟ್ ಮೆಟ್ಟಲೇರಿತು.

HAVANUR COMMISSION REPORT 1972

ಹಾವನೂರು ಆಯೋಗದ ವರದಿ 1972

A. Statement showing particulars of candidate passing SSLC Exam 1899 High School in Karnataka March / April 1972

Caste	Population %	Average % per 1000	Number Passed in			Total 4+5+6
			I Class	II Class	III Class	
Brahmin	12,69,455 4.23%	10.33	3,293	3,633	6,157	13,113
Lingayat	43,92,699 14.64%	2.33	828	2,102	7,294	10,124
Vokkaliga	35,46,171 11.82%	1.06	272	690	2,802	3,764

E. Statement Showing in list of other backward class under article 16(4)
A- Backward communitites
SL.No. 16. Vokkaliga
6. Afternth of the Havanur report

A. Annexure to the Govt. order No. SWL 12TES - 77, Bangalore dated 22-02-1977. containing the list of backward classes of citizen's under article 15(4) & 16(4) of constitution of India.
A. Backward community
Sl.No. 15. Vokkaliga

ರಾಜ್ಯ ರಾಜಕೀಯದಲ್ಲಿ ಜಿದ್ದಾಜಿದ್ದಿ

ಕರ್ನಾಟಕ ರಾಜ್ಯ ರಾಜಕೀಯದಲ್ಲಿ ಭಾರಿ ಬದಲಾವಣೆಯ ಗಾಳಿ ಬೀಸತೊಡಗಿತು. ಶ್ರೀ ಗುಂಡೂರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ 1983ರಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ಖಚಿತ ಸೋಲನ್ನನುಭವಿಸಿತು. ರಾಜ್ಯದ ಪ್ರಬಲ ಸಮುದಾಯಗಳಾದ ಒಕ್ಕಲಿಗ ಮತ್ತು ಲಿಂಗಾಯಿತರು ಶ್ರೀ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಒಂದಾದರು. ಪ್ರಥಮ ಕಾಂಗ್ರೆಸ್ಸೇತರ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ರಾಮಕೃಷ್ಣ ಹೆಗಡೆಯವರು ರಾಜ್ಯದ ಮುಖ್ಯಮಂತ್ರಿಯಾದರು. (10.1.1983 ರಿಂದ 11.8.1988) ಶ್ರೀಮಾನ್ ಹೆಚ್.ಡಿ. ದೇವೇಗೌಡರು ಒಕ್ಕಲಿಗರ ನಾಯಕರಾದರು. ಹೆಗಡೆಯವರಿಗೆ ಲಿಂಗಾಯಿತರು ಮೀಸಲಾತಿ ಪಟ್ಟಿಯಲ್ಲಿ ತಮ್ಮನ್ನು ಸೇರಿಸಬೇಕೆಂಬ ಒತ್ತಾಯ ಹೇರತೊಡಗಿದರು. ಚಾಣಾಕ್ಷರಾದ ಹೆಗಡೆಯವರು ಒಂದೆಡೆ ಲಿಂಗಾಯಿತರನ್ನು ಓಲೈಸುವುದು ಮತ್ತೊಂದು ಕಡೆ ಒಕ್ಕಲಿಗರನ್ನು ನಿಯಂತ್ರಿಸಲು ಹೊಸ ಆಯೋಗವನ್ನು ರಚಿಸಿ ತಮ್ಮ ಹಿತ ಸಾಧಿಸಬಹುದೆಂದು

ತೀರ್ಮಾನಿಸಿದರು. ಅದರ ಫಲವೇ ಜಸ್ಟೀಸ್ ವೆಂಕಟಸ್ವಾಮಿ ಆಯೋಗ. ಹೊಸ ಆಯೋಗದಿಂದ ಒಕ್ಕಲಿಗ ಮತ್ತು ಲಿಂಗಾಯಿತ ಎರಡೂ ಸಮುದಾಯವನ್ನು ನಿಯಂತ್ರಿಸಬಹುದು. ಒಕ್ಕಲಿಗರನ್ನು ಹಿಂದುಳಿದ ಪಟ್ಟಿಯಿಂದ ಕೈಬಿಟ್ಟರೆ ಒಕ್ಕಲಿಗ ಜನಾಂಗ ದೇವೇಗೌಡರ ವಿರುದ್ಧ ಸಮರ ಸಾರುತ್ತಾರೆ ಎಂದೆಲ್ಲಾ ಲೆಕ್ಕಾಚಾರ ಹಾಕಿ ಜಸ್ಟೀಸ್ ವೆಂಕಟಸ್ವಾಮಿ ಆಯೋಗವನ್ನು ರಚಿಸಿದರು.

ಜಸ್ಟೀಸ್ ವೆಂಕಟಸ್ವಾಮಿ ಆಯೋಗ

1983ರಲ್ಲಿ ರಚಿತವಾದ ಜಸ್ಟೀಸ್ ಟಿ. ವೆಂಕಟಸ್ವಾಮಿ ಆಯೋಗವು ರಾಜ್ಯದಾದ್ಯಂತ ಕ್ಷೇತ್ರ ಕಾರ್ಯ ನಡೆಸಿ ಒಕ್ಕಲಿಗರು ಸೇರಿದಂತೆ ಉಳಿದ 13 ಜಾತಿಗಳನ್ನು (ಈಗಾಗಲೇ ಹಿಂದುಳಿದ ಪಟ್ಟಿಯಲ್ಲಿದ್ದ) ಹಿಂದುಳಿದವರ ಪಟ್ಟಿಯಿಂದ ಕೈಬಿಟ್ಟಿತು. ಇವರೆಲ್ಲ ಮುಂದುವರಿದ ಸಮುದಾಯಗಳೆಂದು ತನ್ನ ವರದಿಯಲ್ಲಿ ಸೂಚಿಸಿತು. ಈ ವರದಿಯು ಲಿಂಗಾಯಿತರಿಗೆ ಎಷ್ಟೋ ಸಮಾಧಾನ ತಂದಿತು. ಹಳೇ ಮೈಸೂರಿಗೆ ಸೇರಿದ್ದ ಮಂಡ್ಯ, ಹಾಸನ, ಚಿಕ್ಕಮಗಳೂರು, ಮಂಗಳೂರು, ಮೈಸೂರುಗಳಲ್ಲಿ ದಟ್ಟವಾಗಿದ್ದ ಒಕ್ಕಲಿಗರು ಒಂದಾದರು. ವೆಂಕಟಸ್ವಾಮಿ ಆಯೋಗವನ್ನು ಸಾರಸಗಟಾಗಿ ತಿರಸ್ಕರಿಸಿದರು. ಒಕ್ಕಲಿಗರ ಜೊತೆಗೆ ಉಳಿದ 13 ಜಾತಿಯವರೂ ಸೇರಿಕೊಂಡರು. ಒಕ್ಕಲಿಗ ನಾಯಕರುಗಳು ಇದೆಲ್ಲ ಹೆಗಡೆಯವರ ಕುತಂತ್ರ, ಒಕ್ಕಲಿಗರನ್ನು ತುಳಿಯುವ ಹಾಗೂ ಹೊಡೆಯುವ ಷಡ್ಯಂತ್ರ ಎಂದೆಲ್ಲ ಹೇಳಿ ಹೌಹಾರಿದರು. ಚಳವಳಿ ಶಾಲಾ ಕಾಲೇಜುಗಳ ಮಕ್ಕಳಿಗೂ ಬಿಸಿ ಮುಟ್ಟಿತು. ವಿಶೇಷವಾಗಿ ಮಂಡ್ಯದಲ್ಲಿ ಜನ ತೀವ್ರವಾಗಿ ಪ್ರತಿಭಟಿಸಿದರು. ಹೆಗಡೆಯವರ ಬಗ್ಗೆ ಅವಾಚ್ಯ ಶಬ್ಧಗಳಿಂದ ಗೋಡೆಯ ಮೇಲೆ ಬರೆಯುವುದು, ಪ್ರತಿಕೃತಿ ದಹನ ಮಾಡುವುದು ನಡೆದೇ ಇತ್ತು. ರಾಮಕೃಷ್ಣ ಹೆಗಡೆಯವರು ನಿರೀಕ್ಷಿಸದೇ ಇದ್ದದ್ದು ನಡೆದು ಹೋಯಿತು. ದೇವೇಗೌಡರ ಬೆಂಬಲಕ್ಕೆ ಜನ ನಿಂತರು. ಸರ್ಕಾರ ಉರುಳಿಹೋಗಬಹುದೆಂಬ ಭಯ ಶುರುವಾಯಿತು.ಈ ಚಳವಳಿಯನ್ನು ಹೆಗಡೆಯವರು ನಿಯಂತ್ರಿಸಲಾಗದೆ ಹಾಗೂ ಕಡೆಗಣಿಸಲೂ ಆಗದೆ ಇದ್ದಂತ ಸಂದಿಗ್ಧತೆ ತಲೆದೋರಿತು. ವಿಧಿ ಇಲ್ಲದೆ ಮುಖ್ಯಮಂತ್ರಿಯಾಗಿದ್ದ ಹೆಗಡೆಯವರು ವೆಂಕಟಸ್ವಾಮಿ ಆಂಯೋಗದಲ್ಲಿ ಕೆಲವು ತಪ್ಪುಗಳಿವೆ ಎಂದು ಹೇಳಿ ಅನುಷ್ಠಾನಗೊಳಿಸದೆ ಹಿಂದಕ್ಕೆ ಪಡೆದರು.

JUSTICE VENKATASWAMY COMMISSION REPORT

ನ್ಯಾಯಮೂರ್ತಿ ವೆಂಕಟಸ್ವಾಮಿ ಆಯೋಗ

G. Religion / caste wise, numbers of Govt. Employees in class-I, II & III in Karnataka as on 31.7.1984

Caste	Class-1	Class-II	Class-III	Employees in Total	% to the Total
Brahmin	1036	3314	30587	34037	15.54
Lingayat	1190	3721	39349	44260	10.68
Vokkaliga	700	2133	2713	23322	15.38

ವಿಶೇಷ ಸೂಚನೆ : ಈ ಮೇಲ್ಕಂಡ ಆಯೋಗಗಳ ವರದಿಯು ಸವಿಸ್ತಾರವಾಗಿದ್ದು ಸದ್ಯ ಇಲ್ಲಿ ಕೇವಲ ಬ್ರಾಹ್ಮಣರು, ಲಿಂಗಾಯಿತರು ಹಾಗೂ ಒಕ್ಕಲಿಗರ ಅಂಕೆ-ಸಂಖ್ಯೆಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಹೋಲಿಕೆ ಮಾಡಲಾಗಿದೆ.

STATEMENT SHOWING CASTE / COMMUNITY PARTICULARS REGARDING SSLC PASS PERCENTAGE IN THE YEAR 1985

ನ್ಯಾಯಮೂರ್ತಿ ವೆಂಕಟಸ್ವಾಮಿ ವರದಿ ಎಸ್.ಎಸ್.ಎಲ್.ಸಿ. ಫಲಿತಾಂಶ

G. Religion / caste wise, numbers of Govt. Employees in class-I, II & III in Karnataka as on 31.7.1984

Caste Popula	Population as per survery 1984	No. of Sutdents		% of pass to
		Appeared for SSLC 1985	Passed SSLC 1985	
Brahmin	13,77,550	21,113	14,658	1,064
Lingayat/ Veerashiva	61,14,466	44,717	26,406	0.451
Vokkaliga	42,19,520	31.272	14,119	0.334

ವಿಶೇಷ ಸೂಚನೆ : ಈ ಮೇಲ್ಕಂಡ ಆಯೋಗಗಳ ವರದಿಯು ಸವಿಸ್ತಾರವಾಗಿದ್ದು ಸದ್ಯ ಇಲ್ಲಿ ಕೇವಲ ಬ್ರಾಹ್ಮಣರು, ಲಿಂಗಾಯಿತರು ಹಾಗೂ ಒಕ್ಕಲಿಗರ ಅಂಕೆ-ಸಂಖ್ಯೆಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಹೋಲಿಕೆ ಮಾಡಲಾಗಿದೆ.

CASTE WISE & SEX WISE NUMBER OF EMPLOYEES WORKING IN KARNATAKA STATE CIVIL SERVICES AS ON 01.11.1988

ನ್ಯಾಯಮೂರ್ತಿ ವೆಂಕಟಸ್ವಾಮಿ ವರದಿ 1988ರ ನಾಗರಿಕ ಸೇವೆಯಲ್ಲಿದ್ದವರ ಅಂಕಿ–ಸಂಖ್ಯೆ

	Group-A			Group-B			Group-C			Group-D		
	Male	Female	Total	Male	Female	Total	Male	Female	Total	Male	Female	Total
	1739	254	1993	2582	362	2944	26404	11451	37855	1577	280	1857
Brahmin	Total Male		32302									
	Total Female		12347									
	Total		**44649**									
	2051	160	2211	3181	145	3326	46279	5061	51330	4427	361	4788
Lingayat	Total Male		55938									
	Total Female		5717									
	Total		**61655**									
	1307	38	1395	2285	118	2403	28542	3119	31661	6466	730	7196
Vokkaliga	Total Male		38600									
	Total Female		4055									
	Total		**42655**									

ವಿಶೇಷ ಸೂಚನೆ : ಈ ಮೇಲ್ಕಂಡ ಆಯೋಗಗಳ ವರದಿಯು ಸವಿಸ್ತಾರವಾಗಿದ್ದು ಸದ್ಯ ಇಲ್ಲಿ ಕೇವಲ ಬ್ರಾಹ್ಮಣರು, ಲಿಂಗಾಯಿತರು ಹಾಗೂ ಒಕ್ಕಲಿಗರ ಅಂಕೆ–ಸಂಖ್ಯೆಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಹೋಲಿಕೆ ಮಾಡಲಾಗಿದೆ.

ಕಾಂಗ್ರೆಸ್ ಸರ್ಕಾರದಲ್ಲಿ ಒಳ ರಾಜಕೀಯ

ಶ್ರೀ ರಾಮಕೃಷ್ಣ ಹೆಗಡೆ ಮತ್ತು ದೇವೇಗೌಡರ ನಡುವೆ ಮುಸುಕಿನ ಗುದ್ದಾಟ ನಡೆಯತೊಡಗಿತು. ಈಗಾಗಲೇ ಆರು ವರ್ಷಗಳಿಂದ ರಾಜ್ಯದ ಅಧಿಕಾರದಿಂದ ಹೊರಗುಳಿದಿದ್ದ ಕಾಂಗ್ರೆಸ್ ಪಕ್ಷ ಅಧಿಕಾರಕ್ಕಾಗಿ ಹಾತೊರೆಯುತ್ತಿತ್ತು. ಆಗಿಂದಾಗ್ಗೆ ಹೆಗಡೆಯವರ ಸರ್ಕಾರದಲ್ಲಿಯೇ ಭಿನ್ನಮತ ಭುಗಿಲೆದ್ದು ಅವರ ವಿರುದ್ಧ ಅವಿಶ್ವಾಸ ನಿರ್ಣಯವನ್ನು ತರುವುದು ನಡೆದೇ ಇತ್ತು. ಅಂದಿನ ಕರ್ನಾಟಕದ ರಾಜ್ಯಪಾಲರಾಗಿದ್ದ ಪಿ. ವೆಂಕಟಸುಬ್ಬಯ್ಯನವರು ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತವನ್ನು ಘೋಷಿಸಿಯೇ ಬಿಟ್ಟರು. (21.4.1989 ರಿಂದ 30.1.1989). ಕಾಂಗ್ರೆಸ್ ಪಕ್ಷದ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾದರು. (31.11.1989 ರಿಂದ 10.10.1990) ಶ್ರೀ ಪಾಟೀಲರ ಆಡಳಿತದಲ್ಲಿ ರಾಜ್ಯದ ಆಡಳಿತ ಮತ್ತು ಹಣಕಾಸು ವ್ಯವಸ್ಥೆ ಸುಧಾರಿಸಿತು. ರಾಜ್ಯ ರಾಜಕೀಯದದಲ್ಲಿ ಭಾರೀ ಪ್ರಮಾಣದ ಏರುಪೇರು ಉಂಟಾಯಿತು. 1989 ರಿಂದ 1994 ಈ ಐದು ವರ್ಷಗಳಲ್ಲಿ ವೀರೇಂದ್ರ ಪಾಟೀಲ್, ಎಸ್. ಬಂಗಾರಪ್ಪ, ವೀರಪ್ಪ ಮೊಯ್ಲಿಯವರು ಈ ಮೂರು ಮಂದಿ ಮುಖ್ಯಮಂತ್ರಿಗಳಾದರು. ದೆಹಲಿಯಿಂದ ತೂರಿಬಂದ ಚೀಟಿಯ ಆಧಾರದ ಮೇಲೆ ವೀರಪ್ಪ ಮೊಯ್ಲಿಯವರು ರಾಜ್ಯದ ಮುಖ್ಯಮಂತ್ರಿಯಾದರು (19.11.1992 ರಿಂದ 10.12.1994). ಒಕ್ಕಲಿಗರನ್ನು ನಿಯಂತ್ರಿಸಲು ಷಡ್ಯಂತ್ರ ಹೂಡಿದರು. 1994ರಲ್ಲಿ ಜಸ್ಟೀಸ್ ಓ. ಚಿನ್ನಪ್ಪ ರೆಡ್ಡಿಯವರ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರಲು ಸರ್ಕಾರ ನಿರ್ಧಾರ ತೆಗೆದುಕೊಂಡ ಕೂಡಲೆ ರಾಜ್ಯ ಒಕ್ಕಲಿಗರ ಸಂಘ ಆ ಕೂಡಲೆ ಎಚ್ಚೆತ್ತುಕೊಂಡು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳಿಗೆ ಪರಿಸ್ಥಿತಿಯನ್ನು ಮನದಟ್ಟು ಮಾಡಿತು. ಸ್ವಾಮಿಗಳು ಗಂಭೀರವಾಗಿ ಯೋಚಿಸಿ ಒಂದು ನಿರ್ಧಾರಕ್ಕೆ ಬಂದರು. ಅದೇನೆಂದರೆ ರಾಜಕೀಯ ವ್ಯಕ್ತಿಗಳನ್ನು ದೂರವಿಟ್ಟು, ಸ್ವಾಮಿಗಳು ಬೀದಿಗಿಳಿದು ವರದಿಯನ್ನು ವಿರೋಧಿಸುವುದಾಗಿತ್ತು. ಸ್ವಾಮಿಗಳ ನೇತೃತ್ವದಲ್ಲಿ ತಾರೀಖು 25.7.1994ರಂದು ವಿಧಾನಸೌಧಕ್ಕೆ ಬೃಹತ್ ಜಾಥಾ ಹೊರಡಲು ತೀರ್ಮಾನಿಸಲಾಯಿತು.

ಈ ಜಾಥಾಕ್ಕೆ ಜನಾಂಗದ ಕನಿಷ್ಠ ಐವತ್ತು ಲಕ್ಷ ಜನರನ್ನು ಸೇರಿಸಲು ಉದ್ದೇಶಿಸಲಾಗಿತ್ತು. ಬೆಂಗಳೂರು ಜಿಲ್ಲೆ, ಮಂಡ್ಯ, ಹಾಸನ ಸೇರಿದಂತೆ ಬೇರೆ ಬೇರೆ ಊರುಗಳಲ್ಲಿ ಕಟೌಟ್‌ಗಳನ್ನು, ಬ್ಯಾನರ್‌ಗಳನ್ನು, ಕರಪತ್ರಗಳನ್ನು ಹಂಚಲಾಯಿತು. ಜನ ಹೋಗಿ ಬರಲು ವಾಹನ ಸೌಲಭ್ಯ, ಊಟ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಎಲ್ಲ ರೀತಿಯ ಅನುಕೂಲವನ್ನು ಬೆಂಗಳೂರಿನಲ್ಲಿ ಮಾಡಿಕೊಳ್ಳಲಾಯಿತು. ಈ ವಿಷಯ ಗುಪ್ತಚಾರ ಇಲಾಖೆಯಿಂದ ಸರ್ಕಾರಕ್ಕೆ ತಿಳಿಯುತ್ತಲೇ ಶ್ರೀ ಮೊಯ್ಲಿಯವರು ಒಂದು ಕ್ಷಣ ಬೆಚ್ಚಿಬಿದ್ದರು. ಜಸ್ಟೀಸ್ ಚಿನ್ನಪ್ಪ ರೆಡ್ಡಿಯವರ ವರದಿಯನ್ನು ಹಿಂದಕ್ಕೆ ಪಡೆದಿರುವುದಾಗಿಯೂ ನಿರ್ಧರಿತ ಜಾಥಾವನ್ನು

ನಿಲ್ಲಿಸಬೇಕೆಂದು ಮುಖ್ಯಮಂತ್ರಿಗಳು ಪತ್ರಿಕೆಗಳಿಗೆ ಹೇಳಿಕೆ ಕೊಟ್ಟರು. ಆದರೆ ಈಗಾಗಲೇ ನಿರ್ಧರಿಸುವ ಜಾಥಾವನ್ನು ಏಕಾಏಕಿ ನಿಲ್ಲಿಸಲು ಸಾಧ್ಯವಿಲ್ಲವೆಂದು ಸ್ವಾಮೀಜಿಯವರು ಅದೇ ಪತ್ರಕರ್ತರಿಗೆ ಹೇಳಿಕೆ ನೀಡಿದರು.

ಜುಲೈ 25, 1994 ಸೋಮವಾರ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಭಾಷಣಗಳ ಸುರಿಮಳೆ. 12.50ಕ್ಕೆ ಸರಿಯಾಗಿ ನ್ಯಾಷನಲ್ ಕಾಲೇಜಿನಿಂದ ವಿಧಾನಸೌಧಕ್ಕೆ ತೆರಳಲು ಮಾರ್ಗ ನಿಗದಿಯಾಗಿತ್ತು. ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮಂಡ್ಯ, ಹಾಸನ, ಮೈಸೂರು ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಜನ ನ್ಯಾಷನಲ್ ಕಾಲೇಜಿನ ಆವರಣದಲ್ಲಿ ಜಮಾಯಿಸಿದರು. ಕನಿಷ್ಠವೆಂದರೂ ಹತ್ತು ಲಕ್ಷ ಜನ ಸೇರಿದರು. ಸ್ವಾಮಿಗಳನ್ನು ಜನಾಂಗದ ಹೆಸರಾಂತ ನಟ ಶ್ರೀ ಅಂಬರೀಶ್‌ರವರೂ ಕೂಡಿಕೊಂಡರು. ಮೊದಲೇ ನಿರ್ಧರಿಸಿದಂತೆ ರಾಜಕೀಯ ವ್ಯಕ್ತಿಗಳನ್ನು ದೂರವೇ ಇಡಲಾಗಿತ್ತು. ಸ್ವಾಮೀಜಿಗಳು ಸಭೆಯನ್ನುದ್ದೇಶಿಸಿ ನ್ಯಾಯ ಸಿಗುವವರೆಗೂ ಇದೇ ರೀತಿ ಬೀದಿಗಿಳಿದು ಹೋರಾಡುವುದಾಗಿ ಘರ್ಜಿಸಿದರು. ಎಲ್ಲಾ ಮಾಧ್ಯಮಗಳು ವಿಶೇಷವಾಗಿ ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಕನ್ನಡಪ್ರಭ ಪತ್ರಿಕೆಗಳು ತಮ್ಮ ಮುಖಪುಟದಲ್ಲಿ **'ಕೆಂಪೇಗೌಡನ ನೆಲದಲ್ಲಿ ಒಕ್ಕಲಿಗರ ವಿರಾಟ ರೂಪ'** ಎಂದು ಬರೆದವು. (ನೋಡಿ ಪತ್ರಿಕೆಗಳ ಮುಖಪುಟವನ್ನು)

1994ರಲ್ಲಿ ಚಿನ್ನಪ್ಪರೆಡ್ಡಿ ಆಯೋಗದ ವಿರುದ್ಧ ಒಕ್ಕಲಿಗರ ಸಂಘವು ಆಯೋಜಿಸಿದ್ದ ಬೃಹತ್ ಪ್ರತಿಭಟನಾ ಸಭೆ



ಜಸ್ಟೀಸ್ ಓ. ಚಿನ್ನಪ್ಪರೆಡ್ಡಿಯವರ ವರದಿಯು ಒಕ್ಕಲಿಗರ ಸಿಂಹ ಘರ್ಜನೆಯಿಂದಾಗಿ ಪೆಟ್ಟಿಗೆ ಸೇರಿತು. ಬಹುಶಃ ಈ ರೀತಿಯ ಹೋರಾಟ ಮಾಡದಿದ್ದರೆ ಒಕ್ಕಲಿಗರು ದೇವರಾಜ ಅರಸರಿಂದ ದಕ್ಕಿಸಿಕೊಂಡ ಮೀಸಲಾತಿಯನ್ನು ಶ್ರೀ ಮೊಯ್ಲಿಯವರಿಂದಾಗಿ ಕಳೆದುಕೊಳ್ಳಬೇಕಾಗುತ್ತಿತ್ತು.

ಒಕ್ಕಲಿಗರ ಜನಾಂಗವು ಸರ್ಕಾರ ನೀಡುವ ಮೀಸಲಾತಿಯನ್ನೇ ನಂಬಿಕೊಂಡಿರದೆ *Each one teach one* ಎಂಬಂತೆ ಜನಾಂಗದ ಸುಶಿಕ್ಷೀತರು, ಅನುಕೂಲಸ್ಥರು ತಮ್ಮವರೇ ಆದ ಹಿಂದುಳಿದ, ಅಶಕ್ತ ಮತ್ತು ದುರ್ಬಲರ ನೆರವಿಗೆ ಬಂದು ಅವರೂ ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈಗಲೂ ಹಳ್ಳಿಗಳಲ್ಲಿ ನಮ್ಮ ಜನಾಂಗದ ಕೆಲವಾರು ಕುಟುಂಬಗಳು (ಹೇರಳವಾಗಿ ಎಂದರೂ ತಪ್ಪಾಗಲಾರದು) ದಲಿತರಿಗಿಂತಲೂ ಹೀನಾಯ ಸ್ಥಿತಿಯನ್ನು ತಲುಪಿದ್ದಾರೆ. ಪಟ್ಟಣಗಳಲ್ಲಿ ಇದಕ್ಕಿಂತ ಭಿನ್ನವಾಗಿಲ್ಲ (ನೋಡಿ–ಸಾಮಾಜಿಕ ಬದಲಾವಣೆಯಲ್ಲಿ ಒಕ್ಕಲಿಗ ಜನಾಂಗ ಅಧ್ಯಾಯವನ್ನು) ಒಕ್ಕಲಿಗ ಜನಾಂಗದ ಕೆಲವರು ಆಗರ್ಭ ಶ್ರೀಮಂತರಾಗಿದ್ದು ಹಣಕ್ಕೆ ಬೆಲೆಯೇ ಇಲ್ಲದಂತೆ ಐಷಾರಾಮಿ ಜೀವನ ನಡೆಸುತ್ತಿದ್ದಾರೆ. ಕಲಿತ ಹಾಗೂ ಸುಶೀಕ್ಷಿತರಲ್ಲಿ ಕೆಲವರು ತಾವು ಒಕ್ಕಲಿಗರಾಗಿ ಹುಟ್ಟಬಾರದಿತ್ತು ಎಂತಲೂ ತಮ್ಮ ಹೆಸರಿನ ಮುಂದೆ 'ಗೌಡ' ಎಂಬ ಜಾತಿ ಸೂಚಕ ಹೆಸರಿಟ್ಟುಕೊಳ್ಳುವುದನ್ನು ಇಷ್ಟಪಡದಿರುವವರೂ ಇದ್ದಾರೆ. ಇವರಿಗೆ ಅಮೆರಿಕದಲ್ಲಿರುವ ಬುದ್ಧಿವಂತ ಒಕ್ಕಲಿಗರು ಮಾದರಿಯಾಗಿದ್ದಾರೆ. ಹಾಗೂ ವಿ.ಪಿ.ಎ. ಎಂಬ ಸಂಘಟನೆಯು ಅಸ್ತಿತ್ವದಲ್ಲಿದ್ದು ಸಮುದಾಯದ ಬಗ್ಗೆ ತೀವ್ರ ಕಾಳಜಿಯನ್ನೊಂದಿದೆ. ಕೆಲವರ ಹೆಸರಿನ ಮುಂದೆ ಗೌಡ ಎಂಬ ಜಾತಿ ಸೂಚಕ ಪದ ಬಳಕೆ ಅಲ್ಲಿ ಸರ್ವೇಸಾಮಾನ್ಯವಾಗಿದೆ ಹಾಗೂ ಭಾರತದಲ್ಲಿರುವ ತಮ್ಮ ಜನಾಂಗದ ಬಗ್ಗೆ ತುಂಬಾ ಕಾಳಜಿಯನ್ನು ಹೊಂದಿದ್ದಾರೆ. ಇಂತಹ ಜನ ನಮ್ಮವರಿಗೆ ಮಾದರಿಯಾಗಲಿ ಎಂದು ಆಶಿಸೋಣವೇ?

□

ಸ್ವಾತಂತ್ರ್ಯ ಹೋರಾಟದಲ್ಲಿ ಒಕ್ಕಲಿಗ ಜನಾಂಗದ ಪಾತ್ರ

ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಕರ್ನಾಟಕವು ಪ್ರಮುಖ ಪಾತ್ರವನ್ನು ವಹಿಸಿತು. ಕರ್ನಾಟಕದಲ್ಲಿ 1885ರ ನಂತರ ನಡೆದ ಸ್ವಾತಂತ್ರ್ಯ ಚಳವಳಿಯನ್ನು ಎರಡು ಭಾಗಗಳಾಗಿ ನೋಡಬಹುದು. ಅವು ಉತ್ತರ ಕರ್ನಾಟಕದಲ್ಲಿ ಜರುಗಿದ ರಾಷ್ಟ್ರೀಯ ಚಳವಳಿ ಮತ್ತು ಮೈಸೂರು ಪ್ರಾಂತ್ಯದಲ್ಲಿ ಜರುಗಿದ ರಾಷ್ಟ್ರೀಯ ಚಳವಳಿ. ಉತ್ತರ ಕರ್ನಾಟಕದ ಭಾಗವು ಭಾರತ ರಾಷ್ಟ್ರೀಯ ಕಾಂಗ್ರೆಸ್ ನೇತೃತ್ವದಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಚಳವಳಿಯ ಪ್ರಭಾವಕ್ಕೆ ಒಳಗಾಗಿ ಆ ಭಾಗದಲ್ಲಿ ಬಿರುಸಿನಿಂದ ಸ್ವಾತಂತ್ರ್ಯ ಚಳವಳಿ ಹುಟ್ಟಿಕೊಂಡಿತು. ಕರ್ನಾಟಕ ವಿದ್ಯಾವರ್ಧಕ ಸಂಘ (1890) ಮತ್ತು ಕರ್ನಾಟಕ ಸಭಾ (1916) ಸಂಸ್ಥೆಗಳ ಸ್ಥಾಪನೆ, ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾದ ಎ.ಓ. ಹ್ಯೂಮ್‌ರವರ ಉತ್ತರ ಕರ್ನಾಟಕದ ಪ್ರವಾಸ, ತಿಲಕ್‌ರ ಭಾಷಣಗಳು, ಕೇಸರಿ ಮತ್ತು ಮರಾಠ ಪತ್ರಿಕೆಗಳು, ಶಿವಾಜಿ ಮತ್ತು ಗಣಪತಿಯ ಉತ್ಸವಗಳು ಜನಜಾಗೃತಿಯನ್ನುಂಟು ಮಾಡಿತು. ಕಾಂಗ್ರೆಸ್ ನೇತೃತ್ವದ ಮಂದಗಾಮಿ (1885–1905) ಹಾಗೂ ಉಗ್ರಗಾಮಿಗಳ ಯುಗ (1905–1920)ದ ಕಾಲಾವಧಿಯಲ್ಲಿ ಚಳವಳಿ ನಡೆಯಿತು. ಈ ಕಾಲಾವಧಿಯಲ್ಲಿ ಎಂದರೆ ಕಾಂಗ್ರೆಸ್ ನೇತೃತ್ವದ ಮಂದಗಾಮಿ ಮತ್ತು ಉಗ್ರಗಾಮಿಗಳ ಯುಗದ ಹೋರಾಟದಲ್ಲಿ ಮೈಸೂರು ಪ್ರಾಂತ್ಯದ ಪಾತ್ರ ಗೌಣವಾಗಿತ್ತು. ಕಾರಣ ಮೈಸೂರು ಮಹಾರಾಜರ ಅಧೀನದಲ್ಲಿದ್ದ ಈ ಪ್ರದೇಶ ಬ್ರಿಟಿಷರ ವಿರುದ್ಧ ನೇರವಾಗಿ ಹೋರಾಟ ನಡೆಸಲಿಲ್ಲ ಬದಲಾಗಿ ಅದು ಇಲ್ಲಿ ಒಡೆಯರ ವಿರುದ್ಧ ಹಾಗೂ ಬ್ರಿಟೀಷರ ವಿರುದ್ಧವಾಗಿ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಮಾಡುತ್ತಿದ್ದರು. ಈ ಮೈಸೂರು ಪ್ರಾಂತ್ಯದಲ್ಲಿ ಪ್ರಜಾಪ್ರತಿನಿಧಿ ಸಭೆ (ದಿವಾನ್ ಸಿ. ರಂಗಾಚಾರ್ಲು–1881ರಲ್ಲಿ) ಸ್ಥಾಪನೆಯೊಂದಿಗೆ ರಾಜಕೀಯ ಸ್ವಾತಂತ್ರ್ಯ ಚಳವಳಿ ಆರಂಭವಾಯಿತು. ಈ ಚಳವಳಿ ಮೈಸೂರಿನಲ್ಲಿ ಮದ್ರಾಸ್ ಮೂಲದ ದಿವಾನರ ವಿರುದ್ಧವಾಗಿ ಚಳವಳಿ

ನಡೆಯಿತು. ನಂತರದ ಕಾಲದಲ್ಲಿ ಮೈಸೂರು ಮೈಸೂರಿನವರಿಗಾಗಿ (Mysore for Mysorian) ಎಂಬ ಚಳವಳಿಯೊಂದಿಗೆ ಪ್ರಾರಂಭಗೊಂಡು ಕೊನೆಗೆ ಬ್ರಾಹ್ಮಣೇತರ ಚಳವಳಿಗೆ ನಾಂದಿಯಾಯಿತು.

ಧನಬಲ ಮತ್ತು ಜನ ಬಲದಿಂದ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನವನ್ನು ಪಡೆದಿದ್ದ ಕೆಲವು ಒಕ್ಕಲಿಗ ಮುಖಂಡರು ರಾಜಕೀಯವಾಗಿ ಮೇಲೆ ಬರಲು ಹವಣಿಸುತ್ತಿದ್ದರು. ಅತ್ತ ಬ್ರಿಟೀಷರು ಇತ್ತ ಆಳರಸರ ನಡುವೆ ಸಿಕ್ಕಿದ ಜನಾಂಗ ಸ್ವಾತಂತ್ರ್ಯದ ಪರ ದನಿ ಎತ್ತಿದರು. ಒಂದು ಅಶ್ಚರ್ಯದ ಸಂಗತಿ ಎಂದರೆ ಮೈಸೂರಿನಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಗುವ ಮೊದಲೇ ಪ್ರಜಾಮಿತ್ರ ಮಂಡಳಿ ಸ್ಥಾಪನೆಯಾದದ್ದು. ಇಷ್ಟೇ ಅಲ್ಲದೆ ಅದಕ್ಕಿಂತ ಒಂದು ದಶಕದ ಮೊದಲೇ 'ಒಕ್ಕಲಿಗರ ಸಂಘ' ಸ್ಥಾಪನೆಯಾದದ್ದು ಇತಿಹಾಸಕ್ಕೆ ಹಿಡಿದ ಕನ್ನಡಿಯಾಗಿದೆ. ಒಕ್ಕಲಿಗ ನಾಯಕರಲ್ಲಿ ಕೆಲವಾರು ಜನ ರಾಜರಿಗೆ ನಿಷ್ಠೆಯಿಂದ ಇದ್ದಿದ್ದರೆ ಮತ್ತೆ ಕೆಲವರು ಅದರಿಂದ ಹೊರಬಂದರು. ಹೀಗೆ ಹೊರಬಂದ ಜನ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು, ನಂತರ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಆಂದೋಲನದಲ್ಲಿಯೂ ಆಳರಸರ ವಿರುದ್ಧ ಚಳವಳಿ ನಡೆಸಿದರು. ಇಷ್ಟೇ ಅಲ್ಲದೆ ಕರ್ನಾಟಕದ ಏಕೀಕರಣದಲ್ಲಿ ತಮ್ಮನ್ನು ತೊಡಗಿಸಿ ಕೊಂಡದ್ದು ರೋಚಕವಾಗಿದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆ

ದಿವಾನ್ ಸಿ. ರಂಗಾಚಾರ್ಲು ಅವರ ಸಲಹೆಯ ಮೇರೆಗೆ ಮಹಾರಾಜ ಚಾಮರಾಜ ಒಡೆಯರು 1881ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನು ಅಸ್ತಿತ್ವಕ್ಕೆ ತಂದರು. ಇದು ಭಾರತದಲ್ಲೆ ಪ್ರಪ್ರಥಮ ಪ್ರಜಾಪ್ರತಿನಿಧಿ ಸಭೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. 1881 ಅಕ್ಟೋಬರ್ 7ನೇ ತಾರೀಖು ಮೈಸೂರಿನಲ್ಲಿ ಪ್ರಥಮ ಸಭೆ ನಡೆಯಿತು. 144 ಜನ ಸದಸ್ಯರು ಹಾಜರಾಗಿದ್ದರು. ಈ ಸಭೆಗೆ ಪ್ರತಿ ತಾಲ್ಲೂಕಿನಿಂದ ಇಬ್ಬರು ಕಾಲಕಾಲಕ್ಕೆ ಸರಿಯಾಗಿ ಕಂದಾಯ ಪಾವತಿಸುತ್ತಿರುವ ಸಭ್ಯ ಜಮೀನ್ದಾರರು, ಅದೇ ರೀತಿ ಪ್ರತಿ ಜಿಲ್ಲೆಯಿಂದ 4 ಜನ ವ್ಯಾಪಾರಸ್ಥರು ಭಾಗವಹಿಸುತ್ತಿದ್ದ ಪ್ರಜಾಪ್ರತಿನಿಧಿ ಸಭೆಯಾಗಿದ್ದಿತು. ಅದು ಒಂದು ರೀತಿಯ ಮೈಸೂರು ರಾಜ್ಯದ ಎಲ್ಲಾ ತಾಲ್ಲೂಕುಗಳ ರೈತರ ಮತ್ತು ವ್ಯಾಪಾರಸ್ಥ ಪ್ರತಿನಿಧಿಗಳ ಸಭೆಯಾಗಿದ್ದಿತು. ವ್ಯವಸಾಯ ಮಾಡುವವರಿಗೆ ವಿಶೇಷವಾಗಿ ಜಮೀನ್ದಾರರಿಗೆ ತಮ್ಮ ಪ್ರದೇಶವನ್ನು ಪ್ರತಿನಿಧಿಸುವ ಅವಕಾಶವನ್ನು ನೀಡಲಾಗಿ ಗಣ್ಯ ಒಕ್ಕಲಿಗರು ಇಂತಹ ಅವಕಾಶವನ್ನು ಪಡೆದುಕೊಂಡರು. ಶ್ರೀಯುತರುಗಳಾದ ಸೋಮನಹಳ್ಳಿ ಚಿಕ್ಕೇಗೌಡರ ನಂತರ ಅವರ ಮಗ ಎಸ್.ಸಿ. ಮಲ್ಲಯ್ಯ, ಎಂ.ಸಿ. ಲಿಂಗೇಗೌಡ, ವೆಂಕಟೇಗೌಡ, ಹೊನ್ನಪ್ಪ, ಬಿ. ಚನ್ನಪ್ಪ, ಕೆ.ಎಂ. ಕೃಷ್ಣೇಗೌಡ, ಎಡತೊರೆ ಕುಳ್ಳೇಗೌಡ, ಬೆಡಗದಪುರ (ಹೆಚ್.ಡಿ. ಕೋಟೆ) ಲಿಂಗೇಗೌಡ,

ನಂಜನಗೂಡಿನ ಪಾಪಣ್ಣ, ಕೆ. ಕೆಂಪೇಗೌಡ, ಶ್ರೀರಂಗಪಟ್ಟಣದ ಎಂ. ಸುಬ್ಬಯ್ಯ, ಶೀಳನೆರೇ ತಿಮ್ಮೇಗೌಡ (ಕೆ.ಆರ್.ಪೇಟೆ), ಎಸ್.ಕೆ. ಸಿದ್ದೇಗೌಡ, ಅಡಕಮಾರನಹಳ್ಳಿ ಶ್ರೀ ಚನ್ನಮಾರೇಗೌಡ, ಎಂ. ಶಂಕರಲಿಂಗೇಗೌಡ, ಮದ್ದೂರಿನ ಹೆಚ್.ಕೆ. ವೀರಣ್ಣಗೌಡ, ಕೊಪ್ಪದ ಜೋಗಿಗೌಡ (ಮದ್ದೂರ್ ತಾ||), ಕೆಂಗಲ್ ಹನುಮಂತಯ್ಯ, ಹಾಸನದ ಹೆಚ್.ಬಿ. ಗುಂಡಪ್ಪಗೌಡ ಹೀಗೆ ಒಕ್ಕಲಿಗ ನಾಯಕರು ಪ್ರಜಾಪ್ರತಿನಿಧಿ ಸಭೆಯಲ್ಲಿ ಭಾಗವಹಿಸುವುದರ ಮೂಲಕ ಸಾಮಾಜಿಕವಾಗಿ, ರಾಜಕೀಯವಾಗಿ ಸ್ಥಾನಮಾನವನ್ನು ಪಡೆದುಕೊಂಡರು. ಜನಾಂಗದ ಮುಖಂಡರು ಪ್ರತಿನಿಧಿ ಸಭೆಯ ಮೇಲೆ ಎಷ್ಟು ನಿಯಂತ್ರಣವನ್ನು ಹೊಂದಿದ್ದರೆಂದರೆ 1937ರ ಅಕ್ಟೋಬರ್ ಮಾಹೆಯಲ್ಲಿ ನಡೆದ ಸಭೆಯಲ್ಲಿ ಶ್ರೀ ಹೆಚ್.ಕೆ. ವೀರಣ್ಣಗೌಡರ ನೇತೃತ್ವದಲ್ಲಿ 90 ಜನ ಪ್ರತಿನಿಧಿಗಳು ಕೆ.ಟಿ. ಭಾಷ್ಯಂರವರನ್ನು ಮಧ್ಯರಾತ್ರಿಯಲ್ಲಿ ಬಂಧಿಸಿದ್ದರ ವಿರುದ್ಧವಾಗಿ ಸಭಾತ್ಯಾಗ ಮಾಡುವ ಮೂಲಕ ಇತಿಹಾಸದ ಮೈಲುಗಲ್ಲಾದರು. ರಾಜ್ಯದ ಹಲವಾರು ಪತ್ರಿಕೆಗಳು ಈ ಘಟನೆಯನ್ನು ಹೆಚ್.ಕೆ. ವೀರಣ್ಣಗೌಡರ ಧೈರ್ಯ ಸಾಹಸವನ್ನು ಕೊಂಡಾಡಿದವು. ಇಷ್ಟೇ ಅಲ್ಲದೆ ರಾಜ್ಯ ಆಯವ್ಯಯ ಮಂಡನೆಯ ವೇಳೆ ಅಂದಿನ ಸರ್ಕಾರವು ಹಾಸನದ ಗುಂಡಪ್ಪಗೌಡರು (1941–42ರಲ್ಲಿ) ದೇಶಬಂಧು ಎಂ. ಶಂಕರಲಿಂಗೇಗೌಡರಂತಹ ಮೇಧಾವಿಗಳ ಸಲಹೆ ಸೂಚನೆಯನ್ನು ಪಡೆದ ಉದಾಹರಣೆ ಇದೆ. ಈ ಪ್ರಜಾಪ್ರತಿನಿಧಿ ಸಭಾಸದರು ಪ್ರತ್ಯೇಕವಾಗಿ ಇಲ್ಲವೆ ಪರೋಕ್ಷವಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಇಳಿದಿದ್ದರು. ಜನಸಾಮಾನ್ಯರಿಗೆ ಮಾದರಿಯಾಗಿದ್ದರು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಭಾರೀ ಪ್ರತಿಭಟನೆ

ಮೈಸೂರು ರಾಜ್ಯದ ರಾಜಕೀಯದಲ್ಲಿ 1937 ಅತ್ಯಂತ ಗಮನೀಯವಾದ ವರ್ಷ. ಕಾರಣ ಇಷ್ಟೇ: ರಾಜ್ಯದಲ್ಲಿ ಆಗ ಬೇರೆ ಬೇರೆ ಹೆಸರಿನಿಂದ ಇದ್ದ ರಾಜಕೀಯ ಪಕ್ಷಗಳು ಮತ್ತು ತತ್ವಗಳು ಒಂದಾದವು. ಹಾಗೆನ್ನುವಾಗ ಈ ಹಿಂದಿನ ರಾಜಕೀಯ ಪಕ್ಷಗಳ ಸೂಕ್ಷ್ಮ ಪರಿಚಯ ಮಾಡಿಕೊಡುವುದು ಅಗತ್ಯ. ಮೈಸೂರು ರಾಜ್ಯ ದೇಶೀಯ ಆಡಳಿತಕ್ಕೆ ಸೇರಿದ್ದು, ಕನ್ನಡದ ಕೆಲವು ಭಾಗಗಳು ಬೊಂಬಾಯಿ, ಹೈದರಾಬಾದು ಹಾಗೂ ಮದ್ರಾಸು ಅಧಿಪತ್ಯಗಳಿಗೆ ಸೇರಿದ್ದಾಗಿತ್ತು. ಕೊಡಗು ಮಾತ್ರ ಬೇರೆಯೇ ಇತ್ತು. ಮೈಸೂರು ಸಂಸ್ಥಾನ ಶ್ರೀಮನ್ಮಹಾರಾಜರ ಆಳ್ವಿಕೆಗೆ ಸೇರಿದ್ದಾಗಿತ್ತು. ಶ್ರೀ ಮನ್ಮಹಾರಾಜರು ಸ್ವತಂತ್ರರಾಗಿರಲಿಲ್ಲ. ಅವರು ಬ್ರಿಟಿಷರ ಅಧೀನದಲ್ಲಿದ್ದರು. ಹೀಗಾಗಿ, ರಾಜ್ಯದ ಪ್ರಜೆಗಳು ಇಬ್ಬರು ಯಜಮಾನರ ಅಧೀನದಲ್ಲಿದ್ದರು. ಇದನ್ನು ತಪ್ಪಿಸಲು ರಾಷ್ಟ್ರೀಯ ಕಾಂಗ್ರೆಸ್ಸಿಗರು ಪ್ರಯತ್ನಿಸುತ್ತಿದ್ದರೂ, ಇಲ್ಲಿ ಗಮನೀಯವಾದ ನಾಯಕರು ಇಲ್ಲದೆ ಅದೊಂದು ಸಪ್ಪೆ ಪಕ್ಷವಾಗಿತ್ತು. ರಾಜ್ಯದ ಪ್ರಭಾವಶಾಲಿ ನಾಯಕರುಗಳೆಲ್ಲ ಸಂಯುಕ್ತ ಪ್ರಜಾಪಕ್ಷದಲ್ಲೇ ಇದ್ದರು. ಈ ಪಕ್ಷದಲ್ಲಿ ಶ್ರೀಯುತರುಗಳಾದ ಎಚ್.ಸಿ. ದಾಸಪ್ಪ, ಎಚ್.ಬಿ. ಗುಂಡಪ್ಪಗೌಡ, ಕೆ.ಸಿ. ರೆಡ್ಡಿ,

ಎಸ್.ಸಿ. ಮಲ್ಲಯ್ಯ, ಎಂ.ಸಿ. ಲಿಂಗೇಗೌಡರು ಮುಂತಾದ ಹಲವಾರು ಮಂದಿ ಒಕ್ಕಲಿಗ ನಾಯಕರೂ ಹಾಗೂ ಇತರ ಹಲವಾರು ಪ್ರಮುಖರೂ ಇದ್ದುದರಿಂದ, ಈ ಪಕ್ಷವೇ ರಾಜ್ಯದ ಪ್ರಭಾವೀ ಪಕ್ಷವಾಗಿತ್ತು.

ಆಗ ರಾಜ್ಯದಲ್ಲಿ ಶ್ರೀ ಬಿ.ಎಂ. ಶೀನಪ್ಪನವರ ನಾಯಕತ್ವದಲ್ಲಿ ಜನರನ್ನು ಜಾಗೃತಗೊಳಿಸಲು ಜನಜಾಗೃತಿ ಸಂಘವು ಕೆಲಸ ಮಾಡುತ್ತಿದ್ದರೂ, ಜನತೆಯ ಮೇಲೆ ಸಾಕಷ್ಟು ಪ್ರಭಾವ ಬೀರಲು ಸಾಧ್ಯವಾಗುತ್ತಿರಲಿಲ್ಲ. ಇದರಿಂದ ಎಲ್ಲರ ಕಣ್ಣು ಸಂಯುಕ್ತ ಪ್ರಜಾಪಕ್ಷದ ಮೇಲೆಯೇ ಇತ್ತು. ಆ ಸಮಯಕ್ಕಾಗಲೇ ರಾಜ್ಯದಲ್ಲಿ ಗಾಂಧೀಜಿಯವರ ಪ್ರವಾಸ ನಡೆದು, ಜನರ ಮೇಲೆ ಒಂದು ರೀತಿಯ ರಾಷ್ಟ್ರೀಯ ಮನೋಭಾವ ಮೂಡಿತ್ತು. ಮೇಲಾಗಿ, ಸಂಯುಕ್ತ ಪ್ರಜಾಪಕ್ಷವೂ ರಾಜ್ಯದಲ್ಲಿ ಜವಾಬ್ದಾರಿ ಸರಕಾರದ ಬೇಡಿಕೆಯನ್ನು ಮುಂದಿಟ್ಟಿತ್ತು. ಅದಕ್ಕೆ ಸರಿಯಾಗಿ ಬೊಂಬಾಯಿ ಮೇಯರ್ ಆಗಿದ್ದ ಶ್ರೀ ಕೆ.ಎಫ್. ನಾರಿಮನ್‌ರವರು ಬೆಂಗಳೂರಿಗೆ ಬಂದಿದ್ದಾಗ ಅವರನ್ನು ಪೋಲೀಸರು ಬನಪ್ಪ ಪಾರ್ಕಿನಲ್ಲಿ (ಕಬ್ಬನ್‌ಪೇಟೆ ಪಕ್ಕದ ಮೈದಾನ) ದಸ್ತಗಿರಿ ಮಾಡಿದಾಗ ಆದ ಗಲಭೆ ಈ ಸೌಮ್ಯವಾದಿಗಳನ್ನು ಕೆರಳಿಸಿತು.

ಅದೇ ಸಮಯಕ್ಕೆ ಅಂದರೆ, ಅಕ್ಟೋಬರ್ ತಿಂಗಳಲ್ಲಿ, ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆ ಸೇರಿದ್ದಿತು. ರೆಸಿಡೆಂಟರೇ ಆದಿಯಾಗಿ ಸಭೆಯ ಕಾರ್ಯಕಲಾಪ ವೀಕ್ಷಿಸಲು ಬಂದಿದ್ದರು. ಆ ಸಭೆಗೆ ದಿವಾನರೇ ಅಧ್ಯಕ್ಷರಾಗಿದ್ದುದರಿಂದ ಸರ್ ಮಿರ್ಜಾರವರು ಅಧ್ಯಕ್ಷತೆ ವಹಿಸಿದ್ದರು. ಸಭೆಯ ಪ್ರಾರಂಭದಲ್ಲಿ ಅಧ್ಯಕ್ಷರು ಭಾಷಣ ಮಾಡುವುದು ಪದ್ಧತಿಯಾಗಿತ್ತು. ಅದರಂತೇ ಸರ್ ಮಿರ್ಜಾರವರು ಭಾಷಣ ಮಾಡುತ್ತಿದ್ದಾಗ ಹಿಂದಿನ ರಾತ್ರಿ ಪಕ್ಷದ ನಾಯಕರಾದ ಶ್ರೀ ಕೆ.ಟಿ. ಭಾಷ್ಯಂರನ್ನು ದಸ್ತಗಿರಿ ಮಾಡಿದ ನೀತಿಯನ್ನು ಪ್ರತಿಭಟಿಸಿ, ಶ್ರೀ ಎಚ್.ಕೆ. ವೀರಣ್ಣಗೌಡರ ನಾಯಕತ್ವದಲ್ಲಿ ಸುಮಾರು 90 ಮಂದಿ ಸಭಾತ್ಯಾಗ ಮಾಡಿ ಸಭಿಕರನ್ನು ದಿಗ್ಭ್ರಾಂತರನ್ನಾಗಿ ಮಾಡಿದರು. ಅದರಿಂದ ಸರಕಾರದ ಧೈರ್ಯ ಕುಗ್ಗಿದಂತಾಯಿತು.

ಪ್ರಜಾಮಿತ್ರ ಮಂಡಳಿ : 1917ರಲ್ಲಿ ಪ್ರಜಾಮಿತ್ರ ಮಂಡಳಿ ಸ್ಥಾಪನೆ ಮಾಡುವುದರ ಮೂಲಕ ರಾಜ್ಯ ರಾಜಕೀಯದಲ್ಲಿ ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಮೈಸೂರು ವಿ.ವಿ.ಗೆ ಪ್ರಾಧ್ಯಾಪಕರಾಗಿ ಬಂದ ಡಾ॥ ಸಿ.ಆರ್. ರೆಡ್ಡಿಯವರು ಬ್ರಾಹ್ಮಣೇತರರನ್ನು ಸಂಘಟಿಸುವಲ್ಲಿ ಫಲಪ್ರದರಾದರು. ಶೇ.90ರಷ್ಟಿದ್ದ ಬ್ರಾಹ್ಮಣೇತರರಲ್ಲಿ ಒಂದು ರೀತಿಯ ಶಕ್ತಿ ಸಂಚಲನವಾದಂತಾಯಿತು. 1917 ಡಿಸೆಂಬರ್ 6ನೇ ತಾರೀಖು ರಾಜ್ಯದ ಪ್ರಥಮ ರಾಜಕೀಯ ಪಕ್ಷ ತಲೆ ಎತ್ತಿತು. ಅದೇ ಪ್ರಜಾಮಿತ್ರಮಂಡಳಿ. ರಾವ್ ಬಹದ್ದೂರ್ ಹಿರೇಹಳ್ಳಿ ಚನ್ನಯ್ಯನವರು ಅದರ ಪ್ರಥಮ ಅಧ್ಯಕ್ಷರಾಗಿ, ಶ್ರೀ ಎಂ. ಬಸವಯ್ಯನವರು ಅದರ ಕಾರ್ಯದರ್ಶಿಯಾಗಿ, ಮಹಮದ್

ಅಬ್ದುಲ್ ಕಲಾಮಿ, ಡಿ. ಬನುಮಯ್ಯ, ಮಹಮದ್ ಅಬ್ಬಾಸ್ ಖಾನ್, ಎಂ. ಸುಬ್ಬಯ್ಯ (ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷರು) ಇನ್ನೂ ಮುಂತಾದವರು ಆಯ್ಕೆಯಾದರು. (ಮೈಸೂರ್ ಸ್ಟಾರ್, 13.1.1918) 1917 ಫೆಬ್ರವರಿ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಹಿಂದುಳಿದ ಜನರಿಗೆ ಶಿಕ್ಷಣ, ಉದ್ಯೋಗ, ಸಮಾನ ಅವಕಾಶ ಇನ್ನೂ ಮುಂತಾದ ಬೇಡಿಕೆಗಳ ಮನವಿ ಪತ್ರವನ್ನು ಮಹಾರಾಜರ ಮುಂದಿಟ್ಟಿತು. (ಮೈಸೂರ್ ಸ್ಟಾರ್ ಪತ್ರಿಕೆ, 1918) ಹೆಚ್. ಚನ್ನಯ್ಯನವರು ಒಕ್ಕಲಿಗರಿಗೆ ಮಾತ್ರವಲ್ಲ ರಾಜ್ಯದ ಬ್ರಾಹ್ಮಣೇತರ ಮತ್ತು ಹಿಂದುಳಿದ ವರ್ಗಗಳ ನಾಯಕಮಣಿಯಾದರು.

ಹೀಗೆ ಪ್ರಜಾಮಿತ್ರ ಮಂಡಳಿ ಕೇವಲ ರಾಜಕೀಯ ಪಕ್ಷವಾಗಿರದೆ ಬ್ರಾಹ್ಮಣೇತರರ ಮತ್ತು ಹಿಂದುಳಿದ ಜನಾಂಗದ ದನಿಯಾಗಿ, ಕೈಗೋಲಾಗಿ ಮಾರ್ಪಟ್ಟಿತು. ಪ್ರಜಾಮಿತ್ರ ಮಂಡಳಿಯು 1929 ಅಕ್ಟೋಬರ್ ತಿಂಗಳಿನಲ್ಲಿ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ರಾಜ್ಯದ ಪ್ರಪ್ರಥಮ ಹಿಂದುಳಿದ ವರ್ಗಗಳ ಸಮಾವೇಶ ನಡೆಯಿತು. ಹಿಂದುಳಿದ ವರ್ಗಗಳ ಜನರು ಇನ್ನು ಮುಂದೆ ಎಲ್ಲಾ ಸಾರ್ವಜನಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ತಿಳಿಸಿತು.

ಪ್ರಜಾಪಕ್ಷ

ಪ್ರಜಾಮಿತ್ರ ಮಂಡಳಿಯ ನೀತಿ ನಿರೂಪಣೆಯು ಎಲ್ಲಾ ಹಿಂದುಳಿದ ವರ್ಗಗಳ ಹಿತವನ್ನು ಕಾಪಾಡುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದ ಕೆಲವು ನಾಯಕರು ಪ್ರಜಾಪಕ್ಷವನ್ನು ಅಸ್ತಿತ್ವಕ್ಕೆ ತಂದರು. 1931 ಸೆಪ್ಟಂಬರ್ ತಿಂಗಳಿನಲ್ಲಿ ಚನ್ನಪಟ್ಟಣದಲ್ಲಿ ಪ್ರಪ್ರಥಮ ಅಧಿವೇಶನ ನಡೆಯಿತು. ಡಿ.ಎಸ್. ಮಲ್ಲಪ್ಪನವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದರೆ ತಿಟ್ಟಮಾರನಹಳ್ಳಿ ವಿ. ವೆಂಕಟಪ್ಪನವರು ಸ್ವಾಗತಸಮಿತಿ ಅಧ್ಯಕ್ಷರಾದರು. ಈ ಸಭೆಯಲ್ಲಿ ಅವರು ರಾಜ್ಯದ ಆಡಳಿತವನ್ನು ಟೀಕಿಸಿದರು. 1931 ಅಕ್ಟೋಬರ್‌ನಲ್ಲಿ ಮೈಸೂರಿನಲ್ಲಿ ನಡೆದ ಎರಡನೆ ಸಭೆಯನ್ನು ಹೆಚ್.ಬಿ. ಗುಂಡಪ್ಪಗೌಡರು ಅಧ್ಯಕ್ಷತೆಯನ್ನು ವಹಿಸಿದ್ದರೆ ಸಾಹುಕಾರ್ ಡಿ. ಬನುಮಯ್ಯನವರು ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಈ ಸಭೆಯಲ್ಲಿ ರಾಜ್ಯದ ಆಗು ಹೋಗುಗಳನ್ನು ಚರ್ಚಿಸಲಾಯಿತು.

ಸಂಯುಕ್ತ ಪ್ರಜಾಪಕ್ಷ

ಸುಮಾರು ನಾಲ್ಕು ವರ್ಷಗಳ ಕಾಲ ರಾಜ್ಯದಲ್ಲಿ ಪ್ರಜಾಮಿತ್ರ ಮಂಡಳಿ ಮತ್ತು ಪ್ರಜಾ ಪಕ್ಷಗಳು ಅಸ್ತಿತ್ವದಲ್ಲಿದ್ದು ತಮ್ಮ ತಮ್ಮ ರಾಜಕೀಯ ಚಟುವಟಿಕೆಯಲ್ಲಿ ನಿರತವಾಗಿದ್ದವು. ಹೀಗೆ ಪ್ರತ್ಯೇಕವಾಗಿದ್ದರೆ ಸಮರ್ಥವಾಗಿ ಕೆಲಸ ಮಾಡಲು ಸಾಧ್ಯವಿಲ್ಲವೆಂದು ಅರಿತ ಎರಡೂ ಪಕ್ಷಗಳ ನಾಯಕರು ಒಂದೆಡೆ ಸೇರಿ ಸಂಯುಕ್ತ

ಪ್ರಜಾಪಕ್ಷ ವೆಂಬ ಪಕ್ಷವನ್ನು ಹುಟ್ಟು ಹಾಕಿದರು. ಅದು 1935 ಜನವರಿ ತಿಂಗಳಿನಲ್ಲಿ ಹಾಸನದಲ್ಲಿ ಪ್ರಥಮ ಅಧಿವೇಶನವನ್ನು ಜರುಗಿಸಿತು. ಮದರಾಸಿನ ಸ್ವಾಮಿ ವೆಂಕಟಾಚಲ ಶೆಟ್ಟಿಯವರು ಉದ್ಘಾಟಿಸಿದರು. ಕೋಲಾರ ಜಿಲ್ಲಾ ಬೋರ್ಡ್‌ನ ಅಧ್ಯಕ್ಷರಾಗಿದ್ದ ಕೆ.ಸಿ. ರೆಡ್ಡಿಯವರು ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದರು. ಅದರ ಮುಂದಿನ ವರ್ಷ ಕೋಲಾರದಲ್ಲಿ ನಡೆದ ಅಧಿವೇಶನದಲ್ಲಿ ವಿ. ವೆಂಕಟಪ್ಪನವರು ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದರೆ ಕೆ.ಸಿ. ರೆಡ್ಡಿಯವರು ಸ್ವಾಗತ ಸಮಿತಿ ಅಧ್ಯಕ್ಷರಾಗಿ ದುಡಿದರು.

ಸಂಸ್ಥಾನದಲ್ಲಿ 'ಕಾಂಗ್ರೆಸ್' ಜನನ

ಈ ಎಲ್ಲಾ ವಿದ್ಯಾಮಾನಗಳು ನಡೆಯುತ್ತಿರುವಂತೆಯೇ ಕಾಂಗ್ರೆಸ್ ಮತ್ತು ಸಂಯುಕ್ತ ಪ್ರಜಾಪಕ್ಷಗಳು ಒಂದಾಗುವುದರ ಬಗ್ಗೆ ಸಾಕಷ್ಟು ಮಾತುಕತೆಗಳು ನಡೆದು 16.10.1937ರಂದು ಭಾರಿ ಸಮ್ಮೇಳನವೊಂದು ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಶ್ರೀ ತಿಮ್ಮಯ್ಯಾಚಾರ್ಯರ ಛತ್ರದಲ್ಲಿ ನಡೆಯಿತು. ಸುಮಾರು 500 ಮಂದಿ ಪ್ರತಿನಿಧಿಗಳು ಅದರಲ್ಲಿ ಭಾಗವಹಿಸಿದ್ದರು. ಶ್ರೀ ವಿ. ವೆಂಕಟಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಹಿರಿಯ ನಾಯಕರಾದ ಶ್ರೀ ಎಚ್.ಸಿ. ದಾಸಪ್ಪನವರು ಚರಿತ್ರಾರ್ಹವಾದ ಈ ಸಮ್ಮೇಳನದಲ್ಲಿ ಪ್ರತಿನಿಧಿಗಳನ್ನು ಸ್ವಾಗತಿಸಿ, ತಮ್ಮ ಪಕ್ಷ ಕಾಂಗ್ರೆಸ್ ಪಕ್ಷದೊಡನೆ ವೀಲೀನವಾಗುವ ಅಗತ್ಯತೆಯನ್ನು ಹೀಗೆ ವಿವರಿಸಿದರು : ಮೈಸೂರು ಭಾರತದ ಒಂದು ಅಂಗ. ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ನಾವೆಲ್ಲರೂ ದುಡಿಯಬೇಕಾದ್ದು ನಮ್ಮ ಆದ್ಯ ಕರ್ತವ್ಯ. ಆದ್ದರಿಂದ ನಮ್ಮ ಪಕ್ಷದ ಕಾರ್ಯಕಾರಿ ಸಮಿತಿ ಅಖಿಲ ಭಾರತ ಕಾಂಗ್ರೆಸ್ಸಿನೊಡನೆ ವೀಲೀನಗೊಳ್ಳುವ ನಿರ್ಣಯ ಮಾಡಿದೆ. ಅದಕ್ಕೆ ಎಲ್ಲರೂ ಬೆಂಬಲ ನೀಡಬೇಕು. ಶ್ರೀ ಮನ್ಮಹಾರಾಜರವರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರಕಾರ ರಚಿಸುವುದೇ ನಮ್ಮ ಗುರಿ ಎಂದು ಸಾರಿದರು. ಆ ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಗಿ ಮೈಸೂರು ಸಂಸ್ಥಾನದಲ್ಲಿ ಬಲಿಷ್ಠವಾದ ಕಾಂಗ್ರೆಸ್ ಪಕ್ಷದ ಉದಯವಾಯಿತು. ಇದರಲ್ಲಿ ಒಕ್ಕಲಿಗರ ಮುಖಂಡರುಗಳು ಪ್ರಮುಖ ಪಾತ್ರ ವಹಿಸಿದ್ದರಾದರೂ, ಶ್ರೀಗಳಾದ ಎಸ್.ಸಿ. ಮಲ್ಲಯ್ಯನವರು ಮತ್ತು ಎಂ.ಸಿ. ಲಿಂಗೇಗೌಡರು ಬೇರೆಯೇ ಉಳಿದರು. ಆಳರಸರ ಪರವಿದ್ದು ಜನಸೇವೆಗೆ ತಮ್ಮನ್ನು ತೊಡಗಿಸಿಕೊಂಡರು. ಪ್ರಬಲ ಕಾಂಗ್ರೆಸ್ ರಚನೆಯಲ್ಲಿ ಒಕ್ಕಲಿಗ ಮುಖಂಡರ ಪಾತ್ರ ಹಿರಿದಾದದ್ದು. ಅಂದು ಇಂದಿನಂತೆ ಹಲವಾರು ವಿಧವಾದ ಜಾತಿಯ ಕಲಹಗಳು ಇರಲೇ ಇಲ್ಲ. ಏನಾದರೂ ಇದ್ದಿತೆಂದರೆ ಅದು ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಎಂಬ ಎರಡೇ ಜಾತಿ. ಬ್ರಾಹ್ಮಣರನ್ನು ಬಿಟ್ಟರೆ ಉಳಿದವರೆಲ್ಲಾ ಒಂದೇ ಜಾತಿಯವರಂತೆ ವರ್ತಿಸುತ್ತಿದ್ದರು. ಅವರುಗಳಲ್ಲಿ ಒಕ್ಕಲಿಗರೇ ಎಲ್ಲಾ ರಂಗಗಳಲ್ಲೂ ಮಂಚೂಣಿಯಲ್ಲಿದ್ದರು ಹಾಗೂ ಬ್ರಾಹ್ಮಣೇತರ ವರ್ಗದ ಮಾರ್ಗದರ್ಶಕರೂ

ಆದರು. ಕಾರಣವೇನೆಂದರೆ ಮೈಸೂರು ಪ್ರಾಂತ್ಯದಲ್ಲಿ ಬ್ರಾಹ್ಮಣೇತರ ಚಳವಳಿಯನ್ನು ಆರಂಭಿಸಿದ, ಪ್ರಜಾಮಿತ್ರಮಂಡಳಿ ಪಕ್ಷದಂತಹ ಕಾಂಗ್ರೆಸ್ಸೇತರ ಪಕ್ಷವನ್ನು ಸ್ಥಾಪಿಸಿದ ಕೀರ್ತಿಗೆ ಭಾಜನರಾದ ಒಕ್ಕಲಿಗ ಜನಾಂಗದ ಪ್ರತಿಷ್ಠಿತರಲ್ಲಿ ಹೆಚ್. ಚನ್ನಯ್ಯ, ಡಿ. ಬನುಮಯ್ಯ, ಕೆ.ಸಿ. ರೆಡ್ಡಿ, ಹೆಚ್.ಬಿ. ಗುಂಡಪ್ಪಗೌಡ, ಸಾಹುಕಾರ್ ಚನ್ನಯ್ಯ, ವಿ. ವೆಂಕಟಪ್ಪ, ಹೆಚ್.ಕೆ. ವೀರಣ್ಣಗೌಡ ಇನ್ನೂ ಮುಂತಾದ ಮೇರು ವ್ಯಕ್ತಿಗಳು ಬ್ರಾಹ್ಮಣೇತರ ವರ್ಗದ ನಾಯಕತ್ವವನ್ನು ವಹಿಸಿಕೊಂಡಿದ್ದರು. ದಿವಾನ್ ಹುದ್ದೆ ಸೇರಿದಂತೆ ಬಹುತೇಕ ಎಲ್ಲಾ ಸರ್ಕಾರಿ ಮೇಲಧಿಕಾರಿಗಳಾಗಿದ್ದ ಬ್ರಾಹ್ಮಣರಿಗೆ ಈ ಬೆಳವಣಿಗೆ ಅವರಿಗೆ ನಡುಕ ಹುಟ್ಟಿಸಿತು. ಶ್ರೀ ಮನ್ಮಹಾರಾಜರಿಗೆ ಇವರ ವಿರುದ್ಧ ಚಾಡಿ ಇಲ್ಲವೆ ಅಸಮಾಧಾನ ಹುಟ್ಟುವಂತೆ ಮಾಡೋಣವೆಂದರೆ ಮಹಾರಾಜರ ಆಪ್ತವಲಯದಲ್ಲಿ ಎಂ.ಸಿ. ಲಿಂಗೇಗೌಡ, ಎಸ್.ಸಿ. ಮಲ್ಲಯ್ಯ, ಹೆಚ್.ಬಿ. ಗುಂಡಪ್ಪಗೌಡ ಇನ್ನೂ ಮುಂತಾದ ಒಕ್ಕಲಿಗ ಜನಾಂಗದ ನಾಯಕರುಗಳು ಇದ್ದರು. ಇವೆಲ್ಲದಕ್ಕಿಂತಲೂ ಮೈಸೂರು ಒಡೆಯರು ತಾವು ಕ್ಷತ್ರಿಯರು ಎಂದು ಹೇಳಿಕೊಂಡರೂ ಬ್ರಾಹ್ಮಣೇತರ ವರ್ಗಕ್ಕೆ ಬರುತ್ತಾರೆಯೇ ವಿನಃ ಬ್ರಾಹ್ಮಣ ಕೋಮಿಗೆ ಸೇರಲಾಗದು. ಆದಕಾರಣ ಒಡೆಯರೂ ಕೂಡ ಬ್ರಾಹ್ಮಣೇತರ ವರ್ಗದ ಪರವಾಗಿದ್ದರು ಎಂದರೆ ತಪ್ಪಾಗಲಾರದು. ಈ ದಿಸೆಯಲ್ಲಿ ಕಾಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸುವ ಕಾರ್ಯ ಮುಂದುವರಿಯುತ್ತಾ ಹೋಯಿತು. ಕಾಂಗ್ರೆಸ್ ಶಕ್ತಿ ಬಲವಾಗುತ್ತಿರುವುದನ್ನು ನೋಡಿದ ಸರಕಾರ ಬಂಧಿತರನ್ನು ಬಿಡುಗಡೆ ಮಾಡಿತು.

ಹರಿಪುರದಲ್ಲಿ ಭಾರತೀಯ ಕಾಂಗ್ರೆಸ್ ಅಧಿವೇಶನ

1938 ಮತ್ತೊಂದು ವಿಧದಲ್ಲಿ ಮಹತ್ವಪೂರ್ಣ ಹಾಗೂ ಚರಿತ್ರಾರ್ಹ ವರ್ಷ. ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಹರಿಪುರದಲ್ಲಿ ಶ್ರೀ ಸುಭಾಷ್ ಚಂದ್ರಬೋಸ್‌ರವರ ಅಧ್ಯಕ್ಷತೆಯಲ್ಲಿ ಫೆಬ್ರವರಿ ತಿಂಗಳಲ್ಲಿ ಏರ್ಪಾಡಾಗಿತ್ತು. ಆ ಅಧಿವೇಶನಕ್ಕೆ ಶ್ರೀಗಳಾದ ಕೆ.ಸಿ. ರೆಡ್ಡಿ, ಕೆ. ಹನುಮಂತಯ್ಯ, ವಿ. ವೆಂಕಟಪ್ಪನವರಾದಿ –ಯಾಗಿ ಪ್ರತಿನಿಧಿಗಳಾಗಿ ಹೋಗಿದ್ದರು. ಅಲ್ಲಿ ಒಂದು ವಿಶೇಷ ನಿರ್ಣಯವನ್ನು ಪಾಸು ಮಾಡಿದರು. ಅದೇನೆಂದರೆ ದೇಶೀಯ ರಾಜ್ಯಗಳು ಕಾಂಗ್ರೆಸ್ಸಿನ ಹೆಸರಿನಲ್ಲಿ ಹೋರಾಟ ನಡೆಸಬಾರದೆಂಬುದು, ಈ ನಿರ್ಣಯ ಅಂಗೀಕೃತವಾಯಿತು. ಮೂಲ ನಿರ್ಣಯವು ದೇಶೀಯ ಸಂಸ್ಥಾನಗಳ ಪ್ರಜೆಗಳ ಆಸೆ, ಆಕಾಂಕ್ಷೆಗಳಿಗೆ ಮಾರಕವಾಗಬಹುದೆಂದು ಆ ನಿರ್ಣಯಕ್ಕೆ ಶ್ರೀ ಚಂಗಲರಾಯ ರೆಡ್ಡಿಯವರು ತಿದ್ದುಪಡಿ ಮಾಡಿಸಿ ಪ್ರಭಾವಯುತವಾಗಿ ವಾದಿಸಿದರು. ಆದರೂ ನಿರ್ಣಯದ ಸೂಚಕರಾದ ಮೌಲಾನಾ ಅಬ್ದುಲ್ ಕಲಾಂ ಆಜಾದ್‌ರವರು ತಮ್ಮ ಪಟ್ಟನ್ನು ಬಿಡದಿದ್ದುದರಿಂದ ತಿದ್ದುಪಡಿ ಬಿದ್ದುಹೋಗಿ ಮೂಲ ನಿರ್ಣಯ ಅಂಗೀಕೃತವಾಯಿತು. ಆಗ ನಮ್ಮ ನಾಯಕರುಗಳಾದ ಶ್ರೀ ಕೆಂಗಲ್ ಹನುಮಂತಯ್ಯ ಮತ್ತಿತರರು ಪಂಡಿತ

ನೆಹರೂರವರನ್ನೂ ಭೇಟಿಯಾಗಿ ಮಾತುಕತೆ ನಡೆಸಿದರು. ಒಟ್ಟಿನಲ್ಲಿ ಈ ಮೊದಲು ನಡೆಸಿದ ಮಾತುಕತೆಯಂತೆ ನೆಹರು ಮತ್ತು ರಾಜಾಜಿಯವರು ಮೊದ ಮೊದಲು ಒಪ್ಪದೆ ಹೋದರೂ, ಅಧ್ಯಕ್ಷರಾದ ಶ್ರೀ ಸುಭಾಷ್ ಚಂದ್ರ ಬೋಸ್‌ರವರು ಒಂದು ಒಡಂಬಡಿಕೆಗೆ ಒಪ್ಪಿದರು. ಅದೇನೆಂದರೆ, ದೇಶೀಯ ರಾಜ್ಯಗಳಲ್ಲೂ ಅಖಿಲ ಭಾರತ ಕಾಂಗ್ರೆಸ್ಸಿನಿಂದ ಕಾರ್ಯ ನಡೆಯಬಹುದು. ಆದರೆ ಹೋರಾಟ ಮಾತ್ರ ಕೂಡದು. ಹೋರಾಟ ನಡೆಯುವುದಾದರೆ ಬೇರೆ ಪಕ್ಷದ ಹೆಸರಿನಲ್ಲಿ ಮಾತ್ರ ಮಾಡಬಹುದು ಎಂಬುದು. ಅವರು ಹಾಗೆ ಮಾಡಲು ಕಾರಣವೆಂದರೆ ದೇಶೀಯ ರಾಜ್ಯಗಳ ಜನರು ಹೋರಾಟಕ್ಕೆ ಸಿದ್ಧ ಇಲ್ಲ ಎನ್ನುವುದು ಒಂದು. ಸದ್ಯದಲ್ಲಿ ಬ್ರಿಟೀಷರನ್ನೂ ಮತ್ತು ದೇಶೀಯ ರಾಜರುಗಳನ್ನೂ ಏಕಕಾಲದಲ್ಲಿ ಎದುರು ಹಾಕಿಕೊಳ್ಳುವುದು ಸರಿಯಲ್ಲ ಎಂಬುದು ಇನ್ನೊಂದು. ಬ್ರಿಟಿಷರು ಹೋದರೆ ಈ ರಾಜರುಗಳು ಹೋಗಿಯೇ ಹೋಗುತ್ತಾರೆಂಬ ಕಲ್ಪನೆ ಅವರದಾಗಿತ್ತು. ಆದರೆ ಇದರಿಂದ ದೇಶೀಯ ರಾಜ್ಯಗಳ ಪ್ರಜೆಗಳು ಎಚ್ಚೆತ್ತು, ತಮ್ಮ ಕಾಲ ಮೇಲೆ ನಿಂತು ತಮ್ಮದೇ ಸ್ವಂತ ಸಂಸ್ಥೆಯನ್ನು ಸ್ಥಾಪಿಸುವಂತಾಯಿತು. ಅದೇ ಪ್ರತ್ಯೇಕ ಮೈಸೂರು ಕಾಂಗ್ರೆಸ್ಸಿನ ಜನನ.

ಒಟ್ಟಿನಲ್ಲಿ ಹೇಳುವುದೆಂದರೆ ರಾಜ್ಯದಲ್ಲಿ ಪ್ರಜಾಮಿತ್ರ ಮಂಡಳಿಯು ತಲೆ ಎತ್ತಲಾಗಿ ಗ್ರಾಮಾಂತರ ಪ್ರದೇಶಗಳ ಹಿಂದುಳಿದ ಹಾಗೂ ಬ್ರಾಹ್ಮಣೇತರರಲ್ಲಿ ರಾಜಕೀಯ ಪ್ರಜ್ಞೆಯನ್ನು ಸಾಕಾರಗೊಳಿಸಲು ಮುಂದೆ ಸ್ವಾತಂತ್ರ್ಯಕ್ಕಾಗಿ ಹೋರಾಡಲು, ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯಿಸಲು ವೇದಿಕೆಯಾಯಿತು.

ಇರ್ವಿನ್ ನಾಲಾ ರೈತರ ಐತಿಹಾಸಿಕ ಜಾಥಾ ಮತ್ತು ಹೆಚ್.ಕೆ.ವೀರಣ್ಣಗೌಡ

ದಿವಾನರ ಸರ್ಕಾರವು ರೈತರು ಅಬಲರೆಂದು ತಿಳಿದು ಅವರ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಿದ್ದಿತು. ಇದರಿಂದಾಗಿ ರೈತರು ಕಂಗಾಲಾದರು. ಅವರ ಅಹವಾಲನ್ನು ಕೇಳುವವರಿರಲಿಲ್ಲ. ರೈತ ಮುಖಂಡರು ಚಳವಳಿಯ ನೇತೃತ್ವವನ್ನು ವಹಿಸಲು ಶ್ರೀ ವೀರಣ್ಣಗೌಡರೇ ಸೂಕ್ತ ವ್ಯಕ್ತಿ ಎಂದು ನಿರ್ಧರಿಸಿದರು. ಇಂಡವಾಳು ಹೆಚ್. ಹೊನ್ನಯ್ಯನವರು, ಹೊನಗಾನಹಳ್ಳಿ ಕೆ. ಪುಟ್ಟಣ್ಣಯ್ಯನವರು ಇನ್ನೂ ಮುಂತಾದವರು ವೀರಣ್ಣಗೌಡರನ್ನು ಭೇಟಿ ಮಾಡಿ ಮಾತುಕತೆ ನಡೆಸಿ ಒಂದು ದಿನ ಗೊತ್ತು ಮಾಡಿದರು. 1931 ಡಿಸೆಂಬರ್ 31ನೇ ತಾರೀಖು ಮದ್ದೂರಿನಿಂದ ಬೆಂಗಳೂರಿಗೆ ಸಾಗಿದ ಸುಮಾರು 80–90 ಕಿ.ಮೀ. ದೂರದ ಜಾಥಾದಲ್ಲಿ 5000ಕ್ಕೂ ಹೆಚ್ಚು ಜನ ರೈತರು ಭಾಗವಹಿಸಿದ್ದರು. ಬಹಳಷ್ಟು ಜನ ರೈತರು ಕಾಲ್ನಡಿಗೆಯಲ್ಲೇ ಎರಡು ಸಾಲುಗಳಲ್ಲಿ ಶಿಸ್ತಿನಿಂದ ಸುಮಾರು ಎರಡೂವರೆ ಕಿ.ಮೀ. ಉದ್ದದ ರೈತರ ಜಾಥಾ ಬೆಂಗಳೂರಿಗೆ 1932 ಜನವರಿ 4ನೇ ತಾರೀಖು ಬೆಂಗಳೂರಿನ ಅಠಾರ ಕಛೇರಿಯಲ್ಲಿ ಜಮಾಯಿಸಿ ಕೊನೆಯಲ್ಲಿ ಸಭೆ ನಡೆಸಿದರು. ದಿವಾನ್ ಮಿರ್ಜಾ

ಇಸ್ಮಾಯಿಲ್‌ರು ಸಭೆಗೆ ಖುದ್ದು ಹಾಜರಾಗಿ ರೈತರು ಕೊಡಬೇಕಾಗಿದ್ದ ಹೆಚ್ಚಿನ ತೆರಿಗೆಯನ್ನು ಮಾಫಿ ಮಾಡಿದರು. ರಾಜ್ಯ ರೈತರ ಮುಖದಲ್ಲಿ ಗೆಲುವಿನ ನಗುವಿತ್ತು. ಈ ರೈತ ಹೋರಾಟದ ಗೆಲುವು ಸ್ವಾತಂತ್ರ್ಯ ಹೋರಾಟದ ಮತ್ತೊಂದು ಮುಖವೆಂದು ಹೇಳಬಹುದು. ವೀರಣ್ಣಗೌಡರು ನಡೆಸಿದ ರೈತರ ಬೃಹತ್ ಜಾಥಾ 1922ರಲ್ಲಿ ವಲ್ಲಭಭಾಯಿ ಪಟೇಲರು ನಡೆಸಿದ ಬರ್ಡೋಲಿ ರೈತ ಸತ್ಯಾಗ್ರಹವನ್ನು ಹೋಲುತ್ತಿತ್ತು. (ಹೆಚ್ಚಿನ ವಿವರಗಳಿಗೆ ಅಧ್ಯಾಯ 8ರಲ್ಲಿರುವ ರೈತ ಚಳವಳಿಯನ್ನು ನೋಡಿ)

ಶಿವಪುರ ಧ್ವಜ ಸತ್ಯಾಗ್ರಹ

ಸ್ವಾತಂತ್ರ್ಯ ಹೋರಾಟದ ಬಿಸಿ ಏರತೊಡಗಿತು. ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ರಾಷ್ಟ್ರಕೂಟ ಸಭೆ ನಡೆಸಲು ಸೂಕ್ತ ಸ್ಥಳಕ್ಕಾಗಿ ಹುಡುಕಾಟ ನಡೆಯಿತು. ಶ್ರೀರಂಗಪಟ್ಟಣದ ಪಶ್ಚಿಮ ವಾಹಿನಿಯಲ್ಲಿ ಸಭೆ ನಡೆಸಲು ಎ.ಜಿ. ಬಂದೀಗೌಡರು, ಅದೇ ರೀತಿ ನಂಜನಗೂಡಿನಲ್ಲಿ ಸಭೆ ನಡೆಸಲು ಕೆ. ವಿಶ್ವೇಶ್ವರಗೌಡರು ಒಪ್ಪದಿದ್ದಾಗ ಮದ್ದೂರಿನ ಶಿವಪುರದಲ್ಲಿ ಸಭೆ ನಡೆಸಲು ಹೆಚ್.ಕೆ. ವೀರಣ್ಣಗೌಡರು ಧಾರಾಳವಾಗಿ ಒಪ್ಪಿದರು. ಕೊನೆಗೆ ವೀರಣ್ಣಗೌಡರನ್ನು ಹಾಗೂ ಬಂದೀಗೌಡರನ್ನು ಶಿವಪುರ ಧ್ವಜ ಸತ್ಯಾಗ್ರಹದ ಸಭೆಯ ಕಾರ್ಯದರ್ಶಿ-ಗಳನ್ನಾಗಿಯೂ, ಸಾಹುಕಾರ್ ಚನ್ನಯ್ಯನವರನ್ನು ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿಯೂ, ಕೊಪ್ಪದ ಜೋಗೀಗೌಡರನ್ನು ಖಜಾಂಚಿಯನ್ನಾಗಿಯೂ ಮಾಡಲಾಯಿತು. ಶಿವಪುರದ ತಿರುಮಲೇ ಗೌಡರು ಸ್ಥಳಾವಕಾಶ ಮಾಡಿಕೊಟ್ಟರು. ಮಾಲಿ ಮರಿಯಪ್ಪ, ಹೆಂಜಾರಪ್ಪ, ಕೆ.ವಿ. ಶಂಕರಗೌಡ, ಇಂಡವಾಳು ಹೊನ್ನಯ್ಯನವರೂ ಸೇರಿದಂತೆ ಇನ್ನೂ ಮುಂತಾದವರು ಶಿವಪುರ ಧ್ವಜ ಸತ್ಯಾಗ್ರಹದ ಯಶಸ್ಸಿಗೆ ಓಡಾಡಿದರು. ಇಂದಿನಂತೆ ರೈಲು, ಬಸ್ಸಿನ ಸೌಕರ್ಯವಿಲ್ಲದ ಸಮಯದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಧ್ವಜವನ್ನು ಹಾರಿಸುವುದು ಸುಲಭದ ವಿಷಯವಾಗಿರಲಿಲ್ಲ. ಹತ್ತು ಸಾವಿರ ಜನರನ್ನು ನೀರೀಕ್ಷೆ ಮಾಡಿದ್ದು ನಲವತ್ತರಿಂದ ಐವತ್ತು ಸಾವಿರ ರೂ. ಹಣವನ್ನು ಒದಗಿಸಬೇಕಾಗಿತ್ತು. ಅಂತಹ ಸಂದರ್ಭದಲ್ಲಿ ಸಾಹುಕಾರ್ ಚನ್ನಯ್ಯನವರು ಮೇಲ್ಕಂಡ ವೆಚ್ಚದ ಅರ್ಧದಷ್ಟು ಹಣವನ್ನು ತೊಡಗಿಸಲು ಒಪ್ಪಿದರು. ಉಳಿದ ಹಣವನ್ನು ಚಿಕ್ಕಮಗಳೂರಿನ ಬಾಗೆಮನೆ ದೇವೇಗೌಡ, ಎ.ಎನ್. ಸೂರ್ಯನಾರಾಯಣರಾವ್, ಕೊಪ್ಪದ ಶ್ರೀ ಜೋಗೀಗೌಡ, ಬೆಸಗರಹಳ್ಳಿ ತಮ್ಮಯ್ಯ, ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ಗುರುದೇವರಹಳ್ಳಿ ತಮ್ಮಯ್ಯ, ತಾಯಮ್ಮ ವೀರಣ್ಣಗೌಡ ಇನ್ನೂ ಮುಂತಾದವರು ಮುಂದೆ ಬಂದು ಭರಿಸಿದರು ಹಾಗೂ ಚಟುವಟಿಕೆಯಿಂದ ಓಡಾಡಿದರು. ಹಾಗೆಯೇ ಶಿವಪುರದ ಶ್ರೀ ತಿರುಮಲಗೌಡರವರು ಶಿವಪುರ ಧ್ವಜಸತ್ಯಾಗ್ರಹದ ಯಶಸ್ಸಿಗೆ ಒಬ್ಬ ಕಾರಣಕರ್ತರು.

ಧ್ವಜಾರೋಹಣ ಮಾಡಬೇಕಾಗಿದ್ದ ಟಿ. ಸಿದ್ಧಲಿಂಗಯ್ಯನವರನ್ನು ಗೌರವದಿಂದ ನಾಲ್ಕು ಕಿ.ಮೀ. ಉದ್ದದ ಮೆರವಣಿಗೆಯ ಮೂಲಕ ಸಭೆಗೆ ಕರೆತರಲಾಯಿತು. 1938ರ ಏಪ್ರಿಲ್ 11ರಂದು ಬೆಳಿಗ್ಗೆ 8 ಗಂಟೆಗೆ ಧ್ವಜ ಮಂಡಲವನ್ನು ಪ್ರವೇಶಿಸಿದ ಟಿ. ಸಿದ್ಧಲಿಂಗಯ್ಯನವರು ಸ್ವಯಂ ಸೇವಕರುಗಳ ನಾಯಕರಾದ (ಸರ್ವಾಧಿಕಾರಿ) ಎಂ.ಎನ್. ಜೋಯಿಸ್‌ರೊಡನೆ ವೇದಿಕೆ ಹತ್ತಿ ಧ್ವಜಾರೋಹಣ ಮಾಡುವಷ್ಟರಲ್ಲಿ ಪೋಲೀಸರು ಟಿ. ಸಿದ್ಧಲಿಂಗಯ್ಯನವರನ್ನು ಬಂಧಿಸಿದರು. ಸಿದ್ಧಲಿಂಗಯ್ಯನವರು ಆ ಕೂಡಲೆ ಹೆಚ್.ಸಿ. ದಾಸಪ್ಪನವರನ್ನು ತಮ್ಮ ಸ್ಥಾನಕ್ಕೆ ನೇಮಿಸಿ ಪೋಲೀಸರೊಂದಿಗೆ ಜೈಲಿಗೆ ನಡೆದರು. ಮೂರನೆಯ ದಿನ ಧ್ವಜಾರೋಹಣ ಮಾಡ ಹೊರಟ ಹೆಚ್.ಸಿ. ದಾಸಪ್ಪ, ಕೆ.ಸಿ. ರೆಡ್ಡಿ, ವಿ. ವೆಂಟಪ್ಪನವರನ್ನು ಬಂಧಿಸಲಾಯಿತು. ದಿನಾಂಕ 13 ರಂದು ಹೆಚ್.ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ನಡೆದ ಅಧಿವೇಶನದಲ್ಲಿ ನಡೆದ ಧ್ವಜಾರೋಹಣದಲ್ಲಿ ಕೆ.ಟಿ. ಭಾಷ್ಯಂ, ಹೆಚ್. ಸಿದ್ದಯ್ಯ, ಎಂ.ಎನ್. ಜೋಯಿಸ್, ವಿಶ್ವೇಶ್ವರ ಗೌಡ, ಯಶೋಧರ ದಾಸಪ್ಪ, ಬಳ್ಳಾರಿ ಸಿದ್ದಮ್ಮ ಇನ್ನೂ ಮುಂತಾದವರನ್ನು ಬಂಧಿಸಲಾಯಿತು.

ನಾಡಿನ ಇತಿಹಾಸದಲ್ಲಿ ಶಿವಪುರ ಧ್ವಜ ಸತ್ಯಾಗ್ರಹ ಪ್ರಮುಖವಾದ ಮೈಲಿಗಲ್ಲಾಯಿತು. ಈ ಸಭೆಯನ್ನು ಯಶಸ್ವಿ ಮಾಡಿದ ಕೀರ್ತಿಗೆ ಭಾಜನರಾದ ಹೆಚ್.ಕೆ. ವೀರಣ್ಣಗೌಡ, ತಾಯಮ್ಮ ವೀರಣ್ಣಗೌಡರನ್ನು ಜನ ಕೊಂಡಾಡಿದರು. (ಹೆಚ್ಚಿನ ವಿವರಗಳಿಗೆ ಅಧ್ಯಾಯ 8ರಲ್ಲಿರುವ ರೈತರ ಚಳವಳಿಯನ್ನು ನೋಡಿ)

ವಿದುರಾಶ್ವತ್ಥ ಚಳವಳಿ

ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥ ಒಂದು ಯಾತ್ರಾಸ್ಥಳ. ಅಲ್ಲಿ ಪ್ರತಿ ವರ್ಷ ಏಪ್ರಿಲ್ ತಿಂಗಳಿನಲ್ಲಿ ಬಹಿರಂಗ ಸಭೆ ನಡೆಸಲು ಕಾಂಗ್ರೆಸ್ ಕಾರ್ಯಕರ್ತರು ನಿರ್ಧರಿಸಿದ್ದರು. ಆದುದರಿಂದಾಗಿ 1938 ಏಪ್ರಿಲ್ ತಿಂಗಳಿನ 18 ರಿಂದ 25ರ ಸಮಯದಲ್ಲಿ ವಿದುರಾಶ್ವತ್ಥದಲ್ಲಿ ಧ್ವಜಾರೋಹಣ ಹಾಗೂ ಬಹಿರಂಗ ಸಭೆ ನಡೆಸಲು ತೀರ್ಮಾನಿಸಲಾಯಿತು. ಹೆಚ್.ಸಿ. ದಾಸಪ್ಪನವರು ಅಧ್ಯಕ್ಷರಾದರು, ಎನ್.ಸಿ. ನಾಗಯ್ಯರೆಡ್ಡಿ, ಎನ್.ಸಿ. ತಿಮ್ಮಾರೆಡ್ಡಿ, ಮಾಲಿ ಮರಿಯಪ್ಪ ಇನ್ನೂ ಮುಂತಾದವರು ಚಟುವಟಿಕೆಯಿಂದ ಓಡಾಡಿ ಸಭೆಯನ್ನು ಸಂಘಟಿಸಿದರು. ಏಪ್ರಿಲ್ 25ರಂದು ನಡೆದ ಬಹಿರಂಗ ಸಭೆಗೆ ಹತ್ತು ಸಾವಿರ ಜನ ಜಮಾಯಿಸಿದರು. ನಿಷೇಧಾಜ್ಞೆಯನ್ನು ಜಾರಿಗೆ ತಂದ ಪೋಲೀಸರು ಸಭೆ ಜರುಗದಂತೆ ಏನೆಲ್ಲಾ ಪ್ರಯತ್ನಿಸಿದರು.

ಪೋಲೀಸರು ಸಂಘಟನಾಕಾರರನ್ನು ಚದುರಿಸಲು ಲಾಠಿ ಚಾರ್ಜ್, ಗೋಲೀಬಾರ್ ಮಾಡಿದರು. ಗೋಲೀಬಾರ್‌ನಲ್ಲಿ ನೂರಾರು ಜನರು

ಗಾಯಗೊಂಡರು. ಮೂವತ್ತೈದು ಮಂದಿ ಮಡಿದರು (ಸರ್ಕಾರದ ಹೇಳಿಕೆ ಕೇವಲ ಹತ್ತು ಮಂದಿ). ವಿದುರಾಶ್ವತ್ಥ ದ ಈ ದುರಂತವನ್ನು ಜಲಿಯನ್ ವಾಲಾಬಾಗ್ ದುರಂತವೆಂದು ಕರೆಯಲಾಯಿತು. ಗಾಂಧೀಜಿಯವರಿಗೆ ಸುದ್ದಿ ಮುಟ್ಟಿದಾಗ ಅವರು ಮಮ್ಮಲ ಮರುಗಿದರು.

ಕೆ.ಜಿ.ಎಫ್. ಸತ್ಯಾಗ್ರಹ ಮತ್ತು ನಾಯಕರ ಬಂಧನ

ಕೆ.ಜಿ.ಎಫ್., ಎಂದರೆ ಕೋಲಾರ ಗೋಲ್ಡ್ ಫೀಲ್ಡ್ ಎಂದು. ಹೆಸರೇ ಸೂಚಿಸುವಂತೆ, ಕೋಲಾರ ಚಿನ್ನದ ಗಣಿಯನ್ನು ಇಂಗ್ಲೆಂಡ್‌ನ ಜಾನ್ ಟೇಲರ್ ಕಂಪನಿಯವರು ಗುತ್ತಿಗೆಗೆ ಹಿಡಿದಿದ್ದರು. ಭಾರತೀಯರನ್ನು ಅದರಲ್ಲೂ ವಿಶೇಷವಾಗಿ ಕೋಲಾರ ಜಿಲ್ಲೆಯ ಸ್ಥಳೀಯರನ್ನು ಕಂಪನಿಯು ಬಹುವಾಗಿ ಶೋಷಣೆ ಮಾಡುತ್ತಿತ್ತು. ಸ್ಥಳೀಯರನ್ನು ಪ್ರಾಣಿಗಳಂತೆ ಕಾಣುತ್ತಿದ್ದರು. ಅವರ ಜೀವದ ಜೊತೆ ಚೆಲ್ಲಾಟ ಆಡುತ್ತಿದ್ದರು. ಗಣಿಯು 27,000 ಕಾರ್ಮಿಕರನ್ನು ಹೊಂದಿದ್ದರೆ ಆ ಗಣಿಗಳ ಪ್ರದೇಶದಲ್ಲಿ 80,000 ಮಂದಿ ವಾಸಿಸುತ್ತಿದ್ದರು. ಕಂಪನಿಯು ತನ್ನ ಕಾರ್ಮಿಕರಿಗೆ ಸರಿಯಾದ ಸಂಬಳ, ಸಾರಿಗೆ ಆಕಸ್ಮಿಕವಾಗಿ ಸತ್ತರೆ ಆ ಕುಟುಂಬಕ್ಕೆ ಪರಿಹಾರ ಇತ್ಯಾದಿಗಳನ್ನು ನೀಡುತ್ತಿರಲಿಲ್ಲ. ಕೆ.ಸಿ. ರೆಡ್ಡಿ, ಪಿ.ಆರ್.ಕೆ. ಶರ್ಮ, ಎಂ.ಸಿ. ಪೆರುಮಾಳ್, ಏ.ಟಿ. ಲಕ್ಷ್ಮಣ ಮೊದಲಿಯಾರ್, ಟಿ. ರಾಮಲಿಂಗಂ ಇನ್ನೂ ಮುಂತಾದವರು ಸಭೆ, ಹರತಾಳಗಳನ್ನು ನಡೆಸಿದರು. ಆದರೆ ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಕೆ.ಜಿ.ಎಫ್.ನಲ್ಲಿ ಬೃಹತ್ ಸಭೆ ನಡೆಸಲು ತೀರ್ಮಾನಿಸಿದರು. ಪೋಲೀಸರು ಆ ಸ್ಥಳದಲ್ಲಿ ನಿಷೇಧಾಜ್ಞೆ ಹೇರಿದರು. ಪೋಲೀಸರ ನಿಷೇಧಾಜ್ಞೆಯನ್ನು ಉಲ್ಲಂಘಿಸಿದಾಗ ಹೆಚ್.ಸಿ. ದಾಸಪ್ಪ, ವಿ. ವೆಂಕಟಪ್ಪ, ಮಾಲಿ ಮರಿಯಪ್ಪ, ಹೆಂಜಾರಪ್ಪ, ಹೆಚ್.ಕೆ. ವೀರಣ್ಣಗೌಡ, ಎಂ.ಸಿ. ಪೆರುಮಾಳ್, ಇನ್ನೂ ಮುಂತಾದವರನ್ನು ಪೋಲೀಸರು ಬಂಧಿಸಿ ಸೆರೆಮನೆಗೆ ಕಳುಹಿಸಿದರು. ಈ ಸತ್ಯಾಗ್ರಹವನ್ನು ಮುಂದುವರೆಸಲು ನಾಯಕರೇ ಇಲ್ಲದಂತಾದಾಗ ಅಂದು ಹೆಸರಾಂತ ವಕೀಲರಾಗಿದ್ದ ಕೆಂಗಲ್ ಹನುಮಂತಯ್ಯನವರು ಸತ್ಯಾಗ್ರಹವನ್ನು ಮುಂದುವರೆಸಿದರು. ಕೆ.ಜಿ.ಎಫ್.ನ ಸತ್ಯಾಗ್ರಹದಲ್ಲಿ ಕೆ.ಸಿ.ರೆಡ್ಡಿ ಮತ್ತು ಕೆಂಗಲ್ ಹನುಮಂತಯ್ಯನವರು ನಾಡಿನ ಮೇರುನಾಯಕರಾಗಿ ಕಂಗೊಳಿಸಿದರು.

ಅರಣ್ಯ ಸತ್ಯಾಗ್ರಹ

ಮೈಸೂರಿನ ಇತಿಹಾಸದಲ್ಲಿ ಅರಣ್ಯ ಸತ್ಯಾಗ್ರಹವು ಒಂದು ಐತಿಹಾಸಿಕ ಘಟನೆ ಹಾಗೂ ರಾಷ್ಟ್ರ ಪ್ರೇಮದ ಸಂಕೇತವೆಂದರೆ ತಪ್ಪಾಗಲಾರದು. ಅರಣ್ಯ ಸತ್ಯಾಗ್ರಹವೆಂದರೆ ಅರಣ್ಯವನ್ನು ಉಳಿಸುವುದು ಎಂದರ್ಥವಲ್ಲ. ಹೆಂಡದ ಸರಬರಾಜನ್ನು ತಡೆಯುವ ಇಲ್ಲವೇ ಪಾನ ನಿಷೇಧ ಮಾಡುವ ಉದ್ದೇಶವೇ ಅರಣ್ಯ ಸತ್ಯಾಗ್ರಹ.

ಸುಲಭವಾಗಿ ತಯಾರು ಮಾಡಬಹುದಾದ ಹೆಂಡವನ್ನು ಬಡಜನರಿಗೆ ಸರಬರಾಜು ಮಾಡಿ ಬ್ರಿಟೀಷರು ಅಧಿಕ ಲಾಭವನ್ನು ಗಳಿಸುತ್ತಿದ್ದರು. ಹೊಟ್ಟೆಗೆ, ಬಟ್ಟೆಗೆ ಇಲ್ಲದ ಜನ ಹೆಂಡವನ್ನು ಕುಡಿಯುವುದರ ಮೂಲಕ ದುಶ್ಚಟಕ್ಕೆ ಬಲಿಯಾಗಿ ತಮ್ಮ ಸಂಸಾರವನ್ನು ಹಾಳು ಮಾಡಿಕೊಳ್ಳುತ್ತಿದ್ದರು. ವಿದ್ಯಾವಂತರು, ಬುದ್ಧಿವಂತರು, ದೇಶಭಕ್ತರು ಇದನ್ನು ನೋಡುತ್ತಾ ಕುಳಿತುಕೊಳ್ಳದೆ ಕಾರ್ಯ ಪ್ರವೃತ್ತರಾದರು. ಕಾಂಗ್ರೆಸ್ ಪಕ್ಷವು ಪಾನ ನಿರೋಧವನ್ನು ಜಾರಿಗೆ ತರುವಂತೆ ಮೈಸೂರು ಸರ್ಕಾರವನ್ನು ಒತ್ತಾಯಿಸಿತು. ಸರ್ಕಾರ ಪಾನ ನಿರೋಧ ಜಾರಿಗೆ ತರದಿದ್ದಾಗ, ಕಾಂಗ್ರೆಸ್ ಪಕ್ಷವು ಈಚಲು ಮರಗಳನ್ನು ಕಡಿದು ಉರುಳಿಸಲು ತೀರ್ಮಾನಿಸಿತು. ತುಮಕೂರಿನಲ್ಲಿ ಸತ್ಯಾಗ್ರಹವನ್ನು ಮೊದಲು ಆರಂಭಿಸಲಾಯಿತು.

1939 ಸೆಪ್ಟೆಂಬರ್ 28 ರಂದು ಮಾಲಿ ಮರಿಯಪ್ಪನವರನ್ನು ಸರ್ವಾಧಿಕಾರಿ –ಯೆಂದು ಪಕ್ಷವು ನೇಮಿಸಿತು. (ಸರ್ವಾಧಿಕಾರಿ ಎಂದರೆ ಸತ್ಯಾಗ್ರಹಿಗಳ ನಾಯಕ ಎಂದರ್ಥ). ಈಚಲು ಮರ ಕಡಿಯುವವರನ್ನು ಪುಂಡರೆಂದು ಘೋಷಿಸಿ ಪುಂಡು –ಗಂದಾಯ ಹಾಕಿ, ಗಡಿ ಪಾರು ಶಿಕ್ಷೆ ನೀಡುವುದಾಗಿ ಪೋಲೀಸರು ಎಚ್ಚರಿಸಿದರು. ಇದನ್ನು ಲೆಕ್ಕಿಸದೆ ಮಾಲಿ ಮರಿಯಪ್ಪ, ಹೆಂಜಾರಪ್ಪ ಇನ್ನೂ ಮುಂತಾದವರು ಬಂಧನಕ್ಕೊಳಗಾದರು.

ಅರಣ್ಯ ಸತ್ಯಾಗ್ರಹವು ಎಲ್ಲೆಡೆ ಹಬ್ಬಿತು. ಪೋಲೀಸರ ನಿಯಂತ್ರಣ ತಪ್ಪಿತು. ಪೋಲೀಸರು ಒಟ್ಟು 1238 ಮಂದಿ ಸತ್ಯಾಗ್ರಹಿಗಳನ್ನು ಬಂಧಿಸಿದರು. ಈ ಅರಣ್ಯ ಸತ್ಯಾಗ್ರಹವು ಬಡಜನರನ್ನು ಎಚ್ಚರಿಸಿತು. ಬ್ರಿಟಿಷ್ ಸರ್ಕಾರಕ್ಕೆ ಸರಾಯಿ ಮಾರಾಟದಿಂದ ಬರುತ್ತಿದ್ದ ಹಣಕ್ಕೆ ತೊಂದರೆಯಾಯಿತು.

ಭಾರತ ಬಿಟ್ಟು ತೊಲಗಿ ಆಂದೋಲನ

1942ರಲ್ಲಿ ಗಾಂಧೀಜಿಯವರು ಭಾರತಬಿಟ್ಟು ತೊಲಗಿ ಆಂದೋಲನಕ್ಕೆ ಕರೆಕೊಟ್ಟರು. ದೇಶದಾದ್ಯಂತ ಆಬಾಲವೃದ್ಧರಾದಿಯಾಗಿ ಆಂದೋಲನಕ್ಕಿಳಿದರು. ಮೈಸೂರು ರಾಜ್ಯದಲ್ಲಿ ಆಳರಸರ ಪ್ರಾಬಲ್ಯವಿದ್ದರೂ ಅಷ್ಟರಲ್ಲಾಗಲೇ ಮೈಸೂರು ಕಾಂಗ್ರೆಸ್ ಪ್ರಬಲವಾಗಿತ್ತು. ನಾಡಿನಾದ್ಯಂತ ಭಾರತಬಿಟ್ಟು ತೊಲಗಿ ಆಂದೋಲನ ಕಾಳ್ಗಿಚ್ಚಿನಂತೆ ಹರಡಿತು. ಮೈಸೂರಿನ ಕೃಷ್ಣರಾಜೇಂದ್ರ ಮಿಲ್‌ನ ನೌಕರರು, ಮೈಸೂರು ಐರನ್ ಅಂಡ್ ಸ್ಟೀಲ್ ಕೈಗಾರಿಕೆಯ ನೌಕರರು, ಬಿನ್ನಿ ಮಿಲ್ ಕೈಗಾರಿಕೆ, ಬೆಂಗಳೂರು, ಇನ್ನೂ ಮುಂತಾದ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಮುಷ್ಕರಕ್ಕಿಳಿದರು. ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು ಕಾಲೇಜನ್ನು ತ್ಯಜಿಸಿ ಬೀದಿಗಿಳಿದರು. ಮಹಾರಾಜ ಕಾಲೇಜಿನ ವಿದ್ಯಾರ್ಥಿ ನಿಲಯದ ಮೇಲೆ ಅಲ್ಲಿನ ವಿದ್ಯಾರ್ಥಿಗಳು ಕಾಂಗ್ರೆಸ್ ಧ್ವಜವನ್ನು ಹಾರಿಸಿಯೇ ಬಿಟ್ಟರು. ಹೆಚ್.ಎಲ್. ತಿಮ್ಮೇಗೌಡರು ಆರನೆಯ

ತರಗತಿಯ ವಿದ್ಯಾರ್ಥಿಯಾಗಿರುವಾಗಲೇ ಚಳವಳಿಗಿಳಿದು ಪೋಲೀಸರಿಂದ ಬಂಧನ –ಕ್ಕೊಳಗಾಗಿ 1942 ಆಗಸ್ಟ್ 26 ರಿಂದ ಸೆಪ್ಟೆಂಬರ್ 30ರವರೆವಿಗೂ ಜೈಲಿನಲ್ಲಿದ್ದರು. (Secret R.D. 188/4243/2 October, 1942 34d 4243) ವಿ. ವೆಂಕಟಪ್ಪನವರ ನೇತೃತ್ವದಲ್ಲಿ ಮೂವತ್ತೊಂದು ಜನ ಪ್ರಜಾಪ್ರತಿನಿಧಿ ಸಭಾಸದರು ಸಭೆ ನಡೆಸಿ ಸ್ವಾತಂತ್ರ್ಯ –ಕ್ಕಾಗಿ ಹೋರಾಡಲು ತೀರ್ಮಾನಿಸಿದರು. ಹಾಸನದ ಚನ್ನರಾಯಪಟ್ಟಣದಲ್ಲಿ 1942 ಸೆಪ್ಟೆಂಬರ್ 24, ಮಂಡ್ಯದ ಕೆ.ಆರ್. ಪೇಟೆಯಲ್ಲಿ ಅಕ್ಟೋಬರ್ 6 ರಂದು ಅದೇ ತಾಲ್ಲೂಕಿನ ತೊಂಡೆಕೆರೆಯಲ್ಲಿ ಉಗ್ರ ಚಳವಳಿ ನಡೆಯಿತು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈ ಸೂರಿನಲ್ಲಿ ಚಳವಳಿಯು ಹಿಂಸಾತ್ಮಕ ರೂಪ ತಾಳಿತು. ಇದು ಗಾಂಧೀಜಿಯವರ ತತ್ವಕ್ಕೆ ವಿರುದ್ಧವಾದುದಾಗಿತ್ತು.

ಊರಿನ ಹೊರಭಾಗದಲ್ಲಿ ಈಸೂರಿನ ಗ್ರಾಮಸ್ಥರು ಬೇಜವಾಬ್ದಾರಿ ಸರ್ಕಾರದವರು ಯಾರೂ ಬರಕೂಡದು ಎಂದು ದಪ್ಪ ಅಕ್ಷರಗಳಲ್ಲಿ ಫಲಕ ಬರೆಸಿ ಹಾಕಿಸಿದರು. ಊರಿನ ಪಟೇಲ ಮತ್ತು ಶಾನಭೋಗರ ಅಧಿಕಾರವನ್ನು ಕಿತ್ತುಕೊಂಡು ಅವರಿಗೆ ಒಂಟಿ ಕಾಲಿನಲ್ಲಿ ನಿಂತುಕೊಳ್ಳುವ ಶಿಕ್ಷೆ ವಿಧಿಸಲಾಯಿತು.

ಭಾರತ ಬಿಟ್ಟು ತೊಲಗಿ ಚಳವಳಿಯು ಕ್ರಮೇಣ ತಣ್ಣಗಾಯಿತು. ಮೈಸೂರು ಸರ್ಕಾರವು ಜೈಲಿನಲ್ಲಿದ್ದ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಿತು. ಅದೇ ವರ್ಷ ನಡೆದ ನ್ಯಾಯ ವಿಧಾಯಕ ಸಭೆ ಮತ್ತು ಪ್ರಜಾ ಪ್ರತಿನಿಧಿ ಸಭೆ ಚುನಾವಣೆಗಳಲ್ಲಿ ನ್ಯಾಯ ವಿಧಾಯಕ ಸಭೆಗೆ ಇಪ್ಪತ್ತು ಮಂದಿ ಹಾಗೂ ಪ್ರಜಾಪ್ರತಿನಿಧಿ ಸಭೆಗೆ ನೂರಾ –ಮೂವತ್ತು ಮಂದಿ ಕಾಂಗ್ರೆಸ್ ಪಕ್ಷದಿಂದ ಚುನಾವಣೆಗೆ ನಿಂತಿದ್ದ ಹುರಿಯಾಳುಗಳು ವಿಜೇತರಾದರು. ಮಾರ್ಚಿ 18, 1944ರಂದು ಈ ಎರಡೂ ಸಭೆಗಳ ಸದಸ್ಯರು ಒಟ್ಟಿಗೆ ಸೇರಿ ಪ್ರಜಾಪ್ರತಿನಿಧಿ ಸಭೆಗೆ ನಾಯಕರನ್ನಾಗಿ ಕೆ. ಹನುಮಂತಯ್ಯನವರನ್ನು ಹಾಗೂ ಕೆ.ಸಿ. ರೆಡ್ಡಿಯವರನ್ನು ನ್ಯಾಯ ವಿಧಾಯಕ ಸಭೆಗೆ ನಾಯಕರನ್ನಾಗಿ ಚುನಾಯಿಸಿದರು. 1946 ನವೆಂಬರ್ 2 ರಂದು ಬೆಂಗಳೂರಿನಲ್ಲಿ ಮೈಸೂರು ಕಾಂಗ್ರೆಸ್ಸಿನ ಆರನೇ ಅಧಿವೇಶನವು ಕೆ. ಚಂಗಲರಾಯರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೆ.ಸಿ. ರೆಡ್ಡಿಯವರು ರಾಜ್ಯದ ನೂರಾರು ಹಳ್ಳಿಗಳಲ್ಲಿ ಸಂಚರಿಸಿ ಕಾಂಗ್ರೆಸ್ ಬಗ್ಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತ ಪಡಿಸಿದರು. ಗ್ರಾಮಸ್ಥರಲ್ಲಿ ಅನೇಕರು ಕಾಂಗ್ರೆಸ್ ಸೇರಿದರು. ಹಾಗೂ ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸಲು ಸಿದ್ಧರಾದರು. (ಕೆ. ವೀರತಪ್ಪ, ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ, ಬೆಂಗಳೂರು. ಪುಟ–113)

ಮೈಸೂರು ಸಂಸ್ಥಾನದಾದ್ಯಂತ ಸಭೆ, ಸಮಾರಂಭ ಮೆರವಣಿಗೆಗಳ ವಿರುದ್ಧ ನಿಷೇಧಾಜ್ಞೆಯನ್ನು ಹೇರಲಾಯಿತು. ಕೆಂಗಲ್ ಹನುಮಂತಯ್ಯನವರನ್ನು ರಾಜದ್ರೋಹದ ಆಪಾದನೆಯ ಮೇಲೆ ಬಂಧಿಸಲಾಯಿತು. 1947ರ ಮಾರ್ಚಿ

ಕಡೆಯ ವಾರದಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಕೋಲಾರ ಜಿಲ್ಲೆಯ ಬಂಗಾರಪೇಟೆಯಲ್ಲಿ ಸಭೆ ನಡೆಸಿ ನೂತನ ರಾಜ್ಯಾಂಗ ರಚನೆಯಾಗುವವರೆಗೆ ತಾತ್ಕಾಲಿಕ ಸರ್ಕಾರ ರಚಿಸಬೇಕೆಂದು ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿತು. ಕೆ.ಸಿ. ರೆಡ್ಡಿಯವರು ದಿವಾನರೊಂದಿಗೆ ಮಾತುಕತೆ ನಡೆಸಿದರು. ಭಾರತದ ರಾಜ್ಯಾಂಗ ಸಭೆಗೆ ಮೈಸೂರು ಸಂಸ್ಥಾನದಿಂದ ಕಳುಹಿಸಬೇಕಾಗಿದ್ದ ಸದಸ್ಯರ ಚುನಾವಣೆ ನಡೆದು ಹೆಚ್.ಆರ್. ಗುರುವಾರೆಡ್ಡಿ ಮತ್ತು ಕೆ.ಸಿ. ರೆಡ್ಡಿಯವರು ಪ್ರಜಾಪ್ರತಿನಿಧಿ ಸಭೆಯಿಂದಲೂ, ಡಿ.ಹೆಚ್. ಚಂದ್ರಶೇಖರಯ್ಯ ಮತ್ತು ಹೆಚ್.ವಿ. ಕೃಷ್ಣಮೂರ್ತಿ-ಯವರು ನ್ಯಾಯವಿಧಾಯಕ ಸಭೆಯಿಂದಲೂ ಆಯ್ಕೆಯಾದರು.

ಸ್ವಾತಂತ್ರ್ಯ ಚಳವಳಿಯಲ್ಲಿ ತುಮಕೂರು ಜಿಲ್ಲೆಯ ಪಾತ್ರ

ಸ್ವಾತಂತ್ರ್ಯ ಚಳವಳಿ ಕೇವಲ ಹಳೇ ಮೈಸೂರು ಮತ್ತು ಬೆಂಗಳೂರಿಗೆ ಮಾತ್ರವಲ್ಲ ತುಮಕೂರಿನಲ್ಲಿಯೂ ಸುಮಾರು ಮೂರು, ನಾಲ್ಕು ದಶಕಗಳ ಕಾಲ ನಡೆಯಿತು. (ತುಮಕೂರು ಪ್ರದೇಶದಲ್ಲಿ ಸಾಕಷ್ಟು ದಟ್ಟವಾಗಿ ಹರಡಿರುವ ಕುಂಚಟಿಗರು, ಸರ್ಪ ಒಕ್ಕಲಿಗರು, ಹಳ್ಳಿಕಾರರು ಇನ್ನೂ ಮುಂತಾದ ಒಕ್ಕಲಿಗ ಸಮುದಾಯಕ್ಕೆ ಸೇರಿದ ಉಪ ಪಂಗಡಗಳ ನಾಯಕರು ಸ್ವಾತಂತ್ರ್ಯ ಚಳವಳಿಯಲ್ಲಿ ತ್ರಿಕರಣಪೂರ್ವಕವಾಗಿ ಭಾಗವಹಿಸಿದುದೇ ಅಲ್ಲದೆ ತುಮಕೂರು, ಮೈಸೂರು, ಬೆಂಗಳೂರು, ಶಿವಮೊಗ್ಗ, ಚಿತ್ರದುರ್ಗ, ಮಧುಗಿರಿ, ಶಿರಾ, ಮಡಕಶಿರಾ, ಮಧುರೈ, ಸೇಲಂ, ದಿಂಡಿಗಲ್, ಪಳನಿ ಇನ್ನೂ ಮೊದಲಾದ ಪ್ರದೇಶಗಳಲ್ಲಿ ನೆಲೆಸಿದ್ದ ತಮ್ಮ ಕುಲ ಬಾಂಧವರೂ ಸ್ವಾತಂತ್ರ್ಯ ಚಳವಳಿಗೆ ಧುಮುಕುವಂತೆ ಮಾಡಿದರು).

ಮೈಸೂರಿನ ಶ್ರೀಮಂತ ವರ್ತಕರಾದ ಶ್ರೀ ಡಿ. ಬನುಮಯ್ಯನವರು ಮಹಾರಾಜರ ಪರವಾಗಿದ್ದರೂ ಗಾಂಧೀಜಿಯವರ ಅನುಯಾಯಿಗಳಾಗಿದ್ದರು. ತೆರೆಯ ಮರೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಸಹಾಯ, ಸಹಕಾರ ಮಾಡುತ್ತಿದ್ದರು. 1927ರಲ್ಲಿ ಗಾಂಧೀಜಿಯವರು ಅನಾರೋಗ್ಯದಿಂದ ನಾಲ್ಕು ತಿಂಗಳು ನಂದಿ ಬೆಟ್ಟದಲ್ಲಿದ್ದಾಗ ಕಾಂಗ್ರೆಸ್ ನಾಯಕರು, ಗಾಂಧೀಜಿಯವರ ಅನುಯಾಯಿಗಳು ಅವರನ್ನು ನೋಡಲು ನಂದಿಬೆಟ್ಟಕ್ಕೆ ಧಾವಿಸಿ ಅವರ ಪ್ರಭಾವಕ್ಕೊಳಗಾದರು. ಅಂತಹವರಲ್ಲಿ ಡಬ್ಲ್ಯು.ಹೆಚ್. ಹನುಮಂತಪ್ಪನವರು ಗಾಂಧೀಜಿಯವರನ್ನು ಭೇಟಿ ಮಾಡಿ ಬಂದರು. ಅಲ್ಲಿಂದೀಚೆಗೆ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮನ್ನು ತೊಡಗಿಸಿಕೊಂಡರು. ಕ್ರಮೇಣ ಶ್ರೀಯುತರುಗಳಾದ ಕೆ. ಕೆಂಚಪ್ಪ, ಮಾಲಿ ಮರಿಯಪ್ಪ, ಕೆ. ಹೆಂಜಾರಪ್ಪ, ಬಿ.ಎನ್. ರಾಮೇಗೌಡ, ಟಿ. ತಾರೇಗೌಡ, ವಿ. ಮಸಿಯಪ್ಪ, ಬಿ. ಗಂಗಣ್ಣ, ಸಿ.ಜೆ. ಮುಕ್ಕಣ್ಣಪ್ಪ, ಶಿರಾದ ಕೆಂಚಣ್ಣ, ಲಕ್ಷ್ಮೀಸಾಗರದ ಹೆಚ್.ಆರ್. ದಾಸೇಗೌಡ, ಕಳ್ಳಂಬೆಳ್ಳದ ಮಲ್ಲೇಗೌಡ, ಹೊಳಲ್ಕರೆಯ ಚಿಕ್ಕಜಾಜೂರಿನ

ಮಹಾದೇವಪ್ಪ, ಸಿ.ಎಂ. ಅಣ್ಣಯಪ್ಪ, ಎನ್. ಹುಚ್ಚಮಾಸ್ತೀಗೌಡ, ಟಿ. ಶಂಕರಗೌಡ, ತಮ್ಮಣ್ಣ ಗೌಡ, ಬೋರೇಗೌಡ, ನಂಜೇಗೌಡ, ಟಿ.ಎನ್. ಮೂಡಲಗಿರಿಗೌಡ, ಬಾಣಸಂದ್ರದ ಹುಚ್ಚೇಗೌಡ ಇನ್ನೂ ಮುಂತಾದವರು ಮನೆ, ಮಠ, ಆಸ್ತಿ ಪಾಸ್ತಿಗಳನ್ನು ಅಸಹಕಾರ ಚಳವಳಿ, ಕಾನೂನು ಭಂಗ ಚಳವಳಿ, ಭಾರತ ಬಿಟ್ಟು ತೊಲಗಿ ಮತ್ತು ಮೈಸೂರು ಚಲೋ ಚಳವಳಿ ಇವೇ ಮುಂತಾದ ಚಳವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ನಾಡಿನ ಸ್ವಾತಂತ್ರ್ಯಕ್ಕಾಗಿ ದುಡಿದಂತವರು.

ಮೈಸೂರು ಚಲೋ ಚಳವಳಿ/ಅರಮನೆ ಚಳವಳಿ

1945ರಲ್ಲಿ ಇಂಗ್ಲೆಂಡಿನಲ್ಲಿ ಸಾರ್ವತ್ರಿಕ ಚುನಾವಣೆ ನಡೆದು ಲೇಬರ್ ಪಕ್ಷ ಅಸ್ತಿತ್ವಕ್ಕೆ ಬಂದಿತು. ಕ್ಲೆಮೆಂಟ್ ಹಟ್ಲಿ ಇಂಗ್ಲೆಂಡಿನ ಪ್ರಧಾನಮಂತ್ರಿಯಾದಾಗ ಭಾರತದ ಸ್ವಾತಂತ್ರ್ಯದ ಕನಸು ನನಸಾಗತೊಡಗಿತು. 1947 ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಯಿತು. ಮೈಸೂರಿನ ಆಳರಸರು ಜವಾಬ್ದಾರಿ ಸರ್ಕಾರಕ್ಕೆ ಅವಕಾಶ ನೀಡದಿದ್ದಾಗ ಕಾಂಗ್ರೆಸ್ ಅದಕ್ಕಾಗಿ ಒತ್ತಾಯಿಸಿತು. 1947 ಆಗಸ್ಟ್ 21ರಂದು ಸಭೆ ಸೇರಿದ ಮೈಸೂರು ಕಾಂಗ್ರೆಸ್ ಪಕ್ಷವು ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಿ ಮೈಸೂರು ಚಲೋ ಅಥವಾ ಅರಮನೆ ಚಳವಳಿಯನ್ನು ಆರಂಭಿಸಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿತು. ರಾಜ್ಯದಾದ್ಯಂತ ಚಳುವಳಿ ಉಗ್ರರೂಪ ತಾಳಿತು. ಮಂಡ್ಯ ಜಿಲ್ಲೆಯ ಫ್ರೆಂಚ್‌ರಾಕ್ (ಪಾಂಡವಪುರ) ನ ತಾಲ್ಲೂಕು ಕಛೇರಿ ಬಳಿ ಎರಡು ಸಾವಿರ ಜನ ಸತ್ಯಾಗ್ರಹಿಗಳು ಸೇರಿ ಹರತಾಳ ಹೂಡಿದರು. ಶಿವಮೊಗ್ಗದಲ್ಲಿ 5000 ಜನ ಮುಷ್ಕರ ಹೂಡಲಾಗಿ ಅಲ್ಲಿಗೆ ಸರ್ಕಾರವು ಸೈನ್ಯವನ್ನು ಕರೆಸಿತು. (The Hindu 9.9.1947)

1947 ಸೆಪ್ಟೆಂಬರ್ 4ರ ಬೆಳಿಗ್ಗೆ ಮೈಸೂರಿಗೆ ಹೊರಡಲು ಕೆ.ಸಿ. ರೆಡ್ಡಿ ಮತ್ತಿತರ ಕಾಂಗ್ರೆಸ್ ನಾಯಕರು ಸಿದ್ಧತೆಗಳನ್ನು ಬೆಂಗಳೂರಿನಲ್ಲಿ ಮಾಡಿಕೊಳ್ಳುತ್ತಿರುವಷ್ಟರಲ್ಲಿ ಪೋಲೀಸರು ಕಾಂಗ್ರೆಸ್ ನಾಯಕರನ್ನು ಬಂಧಿಸಿದರು. ಅದೇ ರೀತಿ ಮೈಸೂರಿನಲ್ಲಿ ಹೆಚ್.ಸಿ. ದಾಸಪ್ಪ, ಸಾಹುಕಾರ್ ಚನ್ನಯ್ಯ, ಹೆಚ್.ಕೆ. ವೀರಣ್ಣಗೌಡ, ಟಿ. ಮರಿಯಪ್ಪ, ಇನ್ನೂ ಮುಂತಾದವರನ್ನು ಬಂಧಿಸಲಾಯಿತು. ಬೆಂಗಳೂರಿನ ಬಸವನ ಗುಡಿ, ಮಲ್ಲೇಶ್ವರಂ, ಇನ್ನೂ ಮುಂತಾದ ಕಡೆ ಗೋಲೀಬಾರ್ ಮಾಡಲಾಯಿತು. ಮೈಸೂರಿನಲ್ಲಿ ವಿದ್ಯಾರ್ಥಿಗಳ ಮುಷ್ಕರ ಉಗ್ರ ರೂಪ ತಳೆದಾಗ ವಿದ್ಯಾರ್ಥಿಗಳ ಮೇಲೆ ಗೋಲೀಬಾರ್ ಮಾಡಲಾಯಿತು. ಅದರಲ್ಲಿ ರಾಮಸ್ವಾಮಿ ಎಂಬ ವಿದ್ಯಾರ್ಥಿ ಸ್ಥಳದಲ್ಲೇ ಅಸುನೀಗಿದ (ರಾಮಸ್ವಾಮಿ ಸರ್ಕಲ್ ಎಂದು ಹೆಸರಿಡಲಾಗಿದೆ). ತುಮಕೂರು, ಚಿತ್ರದುರ್ಗ, ಮಂಡ್ಯ ಇನ್ನೂ ಮುಂತಾದ ಕಡೆ ಮುಷ್ಕರ, ಹರತಾಳ, ಸತ್ಯಾಗ್ರಹಗಳು, ಅವ್ಯಾಹತವಾಗಿ ನಡೆಯುತ್ತಿದ್ದಾಗ ವಿಧಿಯಿಲ್ಲದೆ ಸರ್ಕಾರ ಮಣಿಯಿತು. 1947 ಅಕ್ಟೋಬರ್ 7ರಂದು ಎಲ್ಲಾ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಿತು.

ಕೆ.ಸಿ. ರೆಡ್ಡಿಯವರು ದಿವಾನ್ ರಾಮಸ್ವಾಮಿ ಮೊದಲಿಯಾರರ ಜೊತೆ ಮಾತುಕತೆ ನಡೆಸಿದುದರ ಫಲವಾಗಿ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷದ ನಡುವೆ ಒಪ್ಪಂದ ಏರ್ಪಟ್ಟಿತು. ಅಕ್ಟೋಬರ್ 12 ರಂದು ಕೆ.ಸಿ. ರೆಡ್ಡಿಯವರು ಕಾಂಗ್ರೆಸ್‌ನ ಇತರ ಆರು ಮಂದಿ ನಾಯಕರೊಡನೆ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ರವರನ್ನು ಭೇಟಿ ಮಾಡಲಾಗಿ, ಮಹಾರಾಜರು ಆ ನಾಯಕರನ್ನು ಮಾತುಕತೆಗೆ ಆಹ್ವಾನಿಸಿ ಜವಾಬ್ದಾರಿ ಸರ್ಕಾರವನ್ನು ವಹಿಸಿಕೊಳ್ಳಲು ಅವಕಾಶ ನೀಡಿದರು.

1947 ಅಕ್ಟೋಬರ್ 13ರಂದು ಮೈಸೂರು ಸರ್ಕಾರವು ರಾಜ್ಯಾಂಗ ಸುಧಾರಣೆ –ಗಳನ್ನು ಘೋಷಿಸಿತು. ಒಪ್ಪಂದದ ಪ್ರಕಾರ ಕಾಂಗ್ರೆಸ್‌ನ ಅಧ್ಯಕ್ಷರು ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳಾಗಿರುವುದಾಗಿಯೂ, ದಿವಾನ್ ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು ಸ್ವಲ್ಪ ಕಾಲ ಮುಂದುವರೆಯುವಂತೆಯೂ ತೀರ್ಮಾನ –ವಾಯಿತು. ಮಂತ್ರಿಮಂಡಲದಲ್ಲಿ ಆರು ಮಂದಿ ಕಾಂಗ್ರೆಸ್ ಪಕ್ಷದಿಂದಲೂ 3 ಮಂದಿ ಇತರ ಪಕ್ಷಗಳಿಂದ ಇರುವುದೆಂತಲೂ ತೀರ್ಮಾನಿಸಲಾಯಿತು. ಮಂತ್ರಿ ಮಂಡಲವು ರಾಜ್ಯಾಂಗವನ್ನು 1948 ಜುಲೈ ವೇಳೆಗೆ ರಚಿಸಬೇಕೆಂದು ತೀರ್ಮಾನಿಸಲಾಯಿತು.

ಸ್ವಾತಂತ್ಯ ಹೋರಾಟಕ್ಕೆ ತಮ್ಮನ್ನು ತೊಡಗಿಸಿಕೊಂಡ ಕೆಲವು ಒಕ್ಕಲಿಗ ಮಹಾನ್ ಚೇತನಗಳ ವ್ಯಕ್ತಿ ಚಿತ್ರಣಗಳು

ಶ್ರೀ ಸಾಹುಕಾರ್ ಚನ್ನಯ್ಯ



ಚನ್ನಂಯ್ಯನವರು 26.4.1902ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರ ತಂದೆ ಸಾಹುಕಾರ್ ಸಿದ್ದಣ್ಣನವರು, ತಾಯಿ ಪುಟ್ಟಮ್ಮನವರು. ಸಿದ್ದಣ್ಣನವರು ಮೂಲತಃ ಮಂಡ್ಯದ ಉಮ್ಮಡಳ್ಳಿಯವರು. ಮೈಸೂರಿ –ನಲ್ಲಿ ಅಕ್ಕಿ ವ್ಯಾಪಾರದಿಂದ ಲಾಭಗಳಿಸಿ ಮೇಲೇರಿದ ಸಿದ್ದಣ್ಣನವರು, ಸಾಹುಕಾರ್ ಸಿದ್ದಣ್ಣನವರಾದರು, ಮೈಸೂರಿನಲ್ಲಿ ಶ್ರೀಮಂತರೆಂದರೆ ಇಬ್ಬರೇ, ಸಾಹುಕಾರ್ ಸಿದ್ದಣ್ಣ ಮತ್ತು ಸಾಹುಕಾರ್ ಬನುಮಯ್ಯ ಎಂದು ಜನ ಹೇಳುತ್ತಿದ್ದರು. ಏಕಮಾತ್ರ ಪುತ್ರ ಚನ್ನಯ್ಯನವರನ್ನು ಮುದ್ದಾಗಿ ಬೆಳೆಸಿದರಾದರೂ ವ್ಯಾಸಂಗಕ್ಕಿಂತಲೂ ವ್ಯವಹಾರವನ್ನು ಕಲಿಸಿದರು ಸಿದ್ದಣ್ಣನವರು. ಗರಡಿಯಲ್ಲಿ ವ್ಯಾಯಾಮ ಕುಸ್ತಿ ಮಾಡುವುದೆಂದರೆ ಚನ್ನಯ್ಯನವರಿಗೆ ಖುಷಿ ಕೊಡುತ್ತಿತ್ತು. ಶ್ರೀಮಂತಿಕೆಯಿಂದಾಗಿ ರಾಜಮನೆತನಕ್ಕೆ ಹತ್ತಿರವಾಗಿದ್ದ ಚನ್ನಯ್ಯನವರು ರಾಜಮನೆತನದವರೊಡನೆ ಕುಸ್ತಿ ಅಖಾಡಕ್ಕಿಳಿದು ಜಯಶೀಲರಾಗುತ್ತಿದ್ದರು. ಚನ್ನಯ್ಯನವರಿಗೆ ಕುಸ್ತಿ ಬಹಳ ಪ್ರಿಯವಾದ ಕ್ರೀಡೆಯಾಗಿತ್ತು. ಆ ಕಾರಣದಿಂದಲೇ

ಮೈಸೂರಿನಲ್ಲಿ ಇವರು ಕುಸ್ತಿ ಕೂಟಗಳನ್ನು ತೆರೆದಿದ್ದರು. ತಂದೆ ಸಿದ್ದಣ್ಣನವರು ಕಾಲವಾದ ನಂತರ ತಂದೆಯವರ ವ್ಯವಹಾರವನ್ನು ನೋಡಿಕೊಳ್ಳತೊಡಗಿದರು. ಚನ್ನಯ್ಯನವರಿಗೆ ಶ್ರೀಮಂತಿಕೆಯನ್ನು ಕೊಟ್ಟ ದೇವರು ಅವರ ಮಡದಿಗೆ ಆಯಸ್ಸನ್ನು ಕೊಡಲಿಲ್ಲ. ಎರಡು ವರ್ಷದ ಮಗಳು ಪ್ರಮಿಳ ಮತ್ತು ಚನ್ನಯ್ಯನವರನ್ನು ಬಿಟ್ಟು ಅಕಾಲಮೃತ್ಯುವಿಗೆ ಒಳಗಾದ ಪತ್ನಿಯ ನಂತರ ಚನ್ನಯ್ಯನವರು ಬೇರೆ ವಿವಾಹವಾಗದೆ ಜನಸೇವೆಯಲ್ಲಿ ಕಾರ್ಯತತ್ಪರರಾದರು.

ಏಕಮಾತ್ರ ಪುತ್ರಿ ಪ್ರಮಿಳಾಳನ್ನು ಕೆ.ಹೆಚ್. ರಾಮಯ್ಯನವರ ಮಗ ಕ್ಯಾಪ್ಟನ್ ಕೃಷ್ಣರಿಗೆ ಕೊಟ್ಟು ವಿವಾಹ ಮಾಡಿಕೊಡುವ ಮೂಲಕ ಕೆ.ಹೆಚ್. ರಾಮಯ್ಯನವರ ಬೀಗರಾದರು. ಒಕ್ಕಲಿಗ ಜನಾಂಗದ ಈ ದಿಗ್ಗಜರಿಬ್ಬರೂ ಮೈಸೂರು ಒಡೆಯರಿಗೆ ಆಪ್ತರಾಗಿದ್ದದ್ದರಿಂದ ಒಕ್ಕಲಿಗರ ಸಂಘಕ್ಕೆ ಮತ್ತು ಜನಾಂಗಕ್ಕೆ ಲಾಭವಾಯಿತೆಂದರೆ ತಪ್ಪಾಗಲಾರದು. ಚನ್ನಯ್ಯನವರ ಅಳಿಯ ಕ್ಯಾಪ್ಟನ್ ಕೃಷ್ಣರ ಅಕ್ಕ ಯಶೋಧರ, ಭಾವ ಹೆಚ್.ಸಿ. ದಾಸಪ್ಪನವರು ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದರು. ಅವರು ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಕಾಲವದು. ಬೀಗರ ಮನೆಯ ಪ್ರಭಾವ ಸೇರಿದಂತೆ ನಾಡಿನ ಹಲವಾರು ಜನ ಈ ಕೊಡುಗೈ ದೊರೆಯ ಸಹಾಯವನ್ನು ಬೇಡಿ ಬಂದರು. 1933ರಲ್ಲಿ ಚನ್ನಯ್ಯನವರು ರಾಜಕೀಯ ದೀಕ್ಷೆಗೆ ಒಳಪಟ್ಟರಾದರೂ ರಾಜಭಕ್ತಿ ಮತ್ತು ದೇಶಪ್ರೇಮಗಳ ಕೊಂಡಿಯಾಗಿ ನಿಂತರು. 1937ರಲ್ಲಿ ಪ್ರಜಾ ಸಂಯುಕ್ತ ಪಕ್ಷ, ಪ್ರಜಾ ಮಿತ್ರಮಂಡಳಿಯಂತಹ ಬ್ರಾಹ್ಮಣೇತರ ಪಕ್ಷಗಳು ಕಾಂಗ್ರೆಸ್‌ನೊಂದಿಗೆ ವಿಲೀನವಾಗುವಲ್ಲಿ ಪ್ರಮುಖ ಪಾತ್ರವಹಿಸಿದರು. 1938ರಲ್ಲಿ ಶಿವಪುರ ಸತ್ಯಾಗ್ರಹದ ಚಳವಳಿಯ ಸ್ವಾಗತಸಮಿತಿಯ ಅಧ್ಯಕ್ಷರಾಗಿ ಹೇರಳವಾಗಿ ಹಣ ಖರ್ಚುಮಾಡಿ ಶಿವಪುರ ಧ್ವಜಸತ್ಯಾಗ್ರಹವನ್ನು ಯಶಸ್ವಿಗೊಳಿಸಿದರು. ಶಿವಪುರ ಸತ್ಯಾಗ್ರಹ ಮೈಸೂರಿನ ಚರಿತ್ರೆಯನ್ನೇ ಬದಲಾಯಿಸಿತು. ಇಲ್ಲದಿದ್ದರೆ ಮೈಸೂರು ಸಂಸ್ಥಾನವು ಮತ್ತೊಂದು ಹೈದ್ರಾಬಾದ್ ಅಥವಾ ಜುನಾಘಡ್ ಸಂಸ್ಥಾನವಾಗುತ್ತಿತ್ತು. ಆ ಮೂಲಕ ಚನ್ನಯ್ಯನವರು ತಮ್ಮನ್ನು ದೇಶಸೇವೆಗೆ ಅರ್ಪಿಸಿಕೊಂಡರು. ರಾತ್ರೋರಾತ್ರಿ ಚನ್ನಯ್ಯನವರ ಹೆಸರು ಪ್ರಖ್ಯಾತಿ ಹೊಂದಿತು. ಕಾಂಗ್ರೆಸ್ ಪಕ್ಷಕ್ಕೆ ಇವರ ಮನೆಯೇ ಸತ್ಯಾಗ್ರಹಿಗಳ ತೌರುಮನೆ, ಆಶ್ರಯತಾಣವಾಯಿತು. ರಾಷ್ಟ್ರನಾಯಕರಾದ ಗಾಂಧಿ, ನೆಹರು, ಪಟೇಲ್, ಕೃಪಲಾನಿ ಇನ್ನೂ ಮುಂತಾದವರು ಮೈಸೂರಿಗೆ ಬಂದರೆ ಚನ್ನಯ್ಯನವರನ್ನು ಕಂಡೇ ಹೋಗುತ್ತಿದ್ದರು.

ಕೆಲವರಿಗೆ ಹಣ ಹೆಚ್ಚಾದಷ್ಟು ಲೋಭಿಗಳಾಗಿ ಜನರಿಂದ ದೂರವಾಗುವುದನ್ನು ನಾವು ನೋಡಿದ್ದೇವೆ ಆದರೆ ಚನ್ನಯ್ಯನವರು ಉದಾರ, ಸಜ್ಜನ, ಸನ್ನಡತೆಯ ಮತ್ತು ದಾನ ಧರ್ಮಗಳಿಂದಾಗಿ ಜನಗಳಿಗೆ, ಜಟ್ಟಿಗಳಿಗೆ, ರಾಜಕೀಯ ಜಟ್ಟಿಗಳಿಗೆ, ಬಡ

ವಿದ್ಯಾರ್ಥಿಗಳಿಗೆ ಹತ್ತಿರವಾಗತೊಡಗಿದರು. ಇವರು ದಾನ ನೀಡಿದ ಮನೆಗಳು ಇಂದು ವಿದ್ಯಾರ್ಥಿನಿಲಯಗಳಾಗಿ ಇವರ ಹೆಸರನ್ನು ಶಾಶ್ವತಗೊಳಿಸಿವೆ. (ಮೋತಿಲಾಲ್ ನೆಹರುರವರು ಅಲಹಾಬಾದ್‌ನ ತಮ್ಮ ಮನೆಯನ್ನು ಸತ್ಯಾಗ್ರಹಿಗಳಿಗೆ ಬಿಟ್ಟು ಕೊಟ್ಟಿದನ್ನು ಕಾಂಗ್ರೆಸ್ಸಿಗರು ವೈಭವೀಕರಿಸುತ್ತಾರೆ).


ಯಾವುದೇ ಬ್ರಾಹ್ಮಣೇತರ ಸಂಸ್ಥೆಗೆ ಇವರ ಬೆಂಬಲ, ನೆರವು, ಇರುತ್ತಿತ್ತು. ಗ್ರಾಮಾಂತರ ಪ್ರದೇಶಗಳಿಂದ ಪಟ್ಟಣಕ್ಕೆ ಓದಲು ಬರುವ ವಿದ್ಯಾರ್ಥಿಗಳು ಪಡುವ ಕಷ್ಟವನ್ನು ನೋಡಲಾರದೆ ತಮ್ಮ ಸ್ವಂತ ಕಟ್ಟಡವನ್ನೇ ಮುಫತ್ತಾಗಿ ವಿದ್ಯಾರ್ಥಿ ನಿಲಯ ಸ್ಥಾಪಿಸಲು ಬಿಟ್ಟುಕೊಟ್ಟರು. ಈಗಲೂ ಅವರು ದಾನ ನೀಡಿದ ಮೂರು ಮನೆಗಳು ವಿದ್ಯಾರ್ಥಿನಿಲಯಗಳಾಗಿವೆ. ಇವರು ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ದತ್ತಿ ನಿಧಿಯನ್ನು ಸ್ಥಾಪಿಸಿದರು.

ಕೆ.ಹೆಚ್. ರಾಮಯ್ಯನವರ ಹಾಗೂ ಒಕ್ಕಲಿಗರ ಸಂಘದ ಮಹನೀಯರ ಒತ್ತಾಯಕ್ಕೆ ಮಣಿದು 1934–35ರ ಸಮಯದಲ್ಲಿ ಎಕ್ಸಿಕ್ಯುಟಿವ್ ಕೌನ್ಸಿಲ್‌ನ ಅಧ್ಯಕ್ಷ–ರಾಗಿದ್ದರು. 1929 ರಿಂದ 1934 ರವರೆವಿಗೆ ಸುಮಾರು ಐದು ವರ್ಷಗಳ ಕಾಲ ಕಾರ್ಯಕಾರಿ ಸಮಿತಿಯ ಏಕೀಕೃತ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ–ದರು. ಅಂದು ಸಂಘ ಇಂದಿನಂತೆ ಬೆಳೆದಿರಲಿಲ್ಲ, ಹಣಕಾಸಿನ ಮುಗ್ಗಟ್ಟು ಬಾಧಿಸು–ತ್ತಿದ್ದಿತು. ಅಂತಹ ಸೂಕ್ತ ಸಮಯದಲ್ಲಿ ಸಾಹುಕಾರ ಚನ್ನಯ್ಯನವರು ಅಧ್ಯಕ್ಷರಾಗಿ ಉದಾರವಾಗಿ ಹಣಕಾಸನ್ನು ಒದಗಿಸುವ ಜೊತೆಗೆ ಮೈಸೂರು ಆಳರಸರ ಕೃಪಾ–ಕಟಾಕ್ಷಕ್ಕೆ ಒಕ್ಕಲಿಗರ ಸಂಘ ಒಳಗಾಗಲು ಕೊಂಡಿಯಾದರು ಎಂದರೆ ತಪ್ಪಾಗಲಾರದು.

ಚನ್ನಯ್ಯನವರು ಮೈಸೂರಿನ ನಾಗರಿಕರಿಗೆ ಸಾಂಸ್ಕೃತಿಕ ಹರಿಕಾರರಾಗಿ, ರಾಜಕೀಯ ರಂಗದಲ್ಲಿ ರಾಜಕೀಯಗುರು ಮತ್ತು ನವಾಬ್ ಅಫ್ ನಜರ್ಬಾದ್, ನಿಜಾಮ್ ಆಫ್ ನಸರಾಬಾದ್, ಕಾಮರಾಜ್ ಆಫ್ ಮೈಸೂರು, ಜಟ್ಟಿಗಳ ಜಟ್ಟಿ ಎಂದು ಕರೆಸಿಕೊಂಡ ಚನ್ನಯ್ಯನವರು, ಕಾಂಗ್ರೆಸ್ ಪಕ್ಷವನ್ನು ಬೆಳೆಸಲು ಹಣದ ಹೊಳೆಯನ್ನೇ ಹರಿಸಿದರು. ಚನ್ನಯ್ಯನವರು ಕಾಂಗ್ರೆಸ್ ಬೆಳೆದು ನಿಂತ ಮೇಲೆ ಪಕ್ಷವು ಇವರನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ. ಪಕ್ಷದಿಂದ ಹೊರಬಂದು ಹೊಸ ಪಕ್ಷವನ್ನು ಕಟ್ಟಿದರು. ಒಟ್ಟಿನಲ್ಲಿ ಹೇಳುವುದಾದರೆ ಒಂದು ಕಾಲದಲ್ಲಿ ಇವರು ಮೈಸೂರಿನ ರಾಜಕೀಯ ಚರಿತ್ರೆಯಲ್ಲಿ ಕಿಂಗ್ ಮೇಕರ್ ಎಂದೇ ಪ್ರಖ್ಯಾತರಾಗಿದ್ದರು.

ಶ್ರೀ ಹೆಚ್.ಸಿ. ದಾಸಪ್ಪ

ಸ್ವಾತಂತ್ರ್ಯಪೂರ್ವ ಮೈಸೂರಿನಲ್ಲಿ ನಡೆದ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ನಡೆದ ಹೋರಾಟದ ಮುಂಚೂಣಿಯಲ್ಲಿದ್ದು ರಾಜ್ಯ ಕಂಡ ಜನಪ್ರಿಯ ನಾಯಕರಾಗಿದ್ದ ನಿಷ್ಠಾವಂತ ಗಾಂಧೀವಾದಿ ಹೆಚ್.ಸಿ. ದಾಸಪ್ಪನವರು. ಇವರು ಭಾರತದ ರಾಜಕೀಯ



ಕ್ಷೇತ್ರಕ್ಕೆ ಮೈಸೂರಿನ ಕೊಡುಗೆ. ರಾಜ್ಯದಲ್ಲಿ ಹಾಗೂ ಕೇಂದ್ರದಲ್ಲಿ ಮಂತ್ರಿಗಳಾಗಿದ್ದ ಖ್ಯಾತ ಸಂಸದೀಯ ಪಟು ಇವರು. ದಾಸಪ್ಪನವರು ಪಟ್ಟ ಶ್ರಮ, ನಡೆಸಿದ ಹೋರಾಟ ಮತ್ತು ತ್ಯಾಗದ ಪರಿಣಾಮವೇ ಅವರ ಖ್ಯಾತಿಗೆ ಕಾರಣ.

ದಾಸಪ್ಪನವರು 5.12.1894ರಂದು ಮಡಿಕೇರಿಯ ಹಿರೇಹಳ್ಳಿ ಚನ್ನಯ್ಯ ಮತ್ತು ತಿಮ್ಮಮ್ಮನವರ ಮೂರನೆಯ ಮಗನಾಗಿ ಜನಿಸಿದರು. ಶ್ರೀ ಚನ್ನಯ್ಯನವರು ಮಡಿಕೇರಿಯಲ್ಲಿ ನ್ಯಾಯಾಧೀಶರಾಗಿ ಖ್ಯಾತಿ ಪಡೆದಿದ್ದರು. ದಕ್ಷತೆಗೆ ಹೆಸರಾದ ಇವರು ರಾವ್ ಸಾಹೇಬ್ ಎಂಬ ಬಿರುದನ್ನು ಪಡೆದಿದ್ದರು. ತಮ್ಮ ವೃತ್ತಿಯಿಂದ ನಿವೃತ್ತರಾದ ಮೇಲೆ ಬೆಂಗಳೂರಿಗೆ ಬಂದು ನೆಲೆಸಿದರು. ಮೈಸೂರು ಸಂಸ್ಥಾನದಲ್ಲಿ ಆರಂಭವಾದ ಹಿಂದುಳಿದ ವರ್ಗದವರ ಏಳಿಗೆಗೆ ಜಸ್ಟೀಸ್ ಚಳವಳಿಯ ಸ್ಥಾಪಕರಾದ ರೂವಾರಿಗಳಲ್ಲಿ ಒಬ್ಬರಾಗಿದ್ದರು.

ದಾಸಪ್ಪನವರು ಮೆಟ್ರಿಕ್ ನಂತರ 1914ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿಗೆ ಇಂಟರ್ಮೀಡಿಯಟ್‌ಗೆ ಸೇರಿದರು. ಇದೊಂದು ಅವರ ಜೀವನದ ಪರ್ವಕಾಲ. 1916ರಲ್ಲಿ ಪದವಿ ಶಿಕ್ಷಣಕ್ಕಾಗಿ ಮದರಾಸಿನ ಕ್ರಿಶ್ಚಿಯನ್ ಕಾಲೇಜನ್ನು ಸೇರಿದ ದಾಸಪ್ಪನವರು ಅಲ್ಲಿ ಪಾಠದ ಜೊತೆಯಲ್ಲಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಇವರು ಸಮಾನಮನಸ್ಕರ ಜೊತೆ ಸೇರಿ ಫ್ರೆಂಡ್ಸ್ ಯೂನಿಯನ್ ಎಂಬ ಸಂಸ್ಥೆಯನ್ನು ಕಟ್ಟಿದರು. 1915ರಲ್ಲಿ ಗಾಂಧೀಜಿಯವರು ಮದ್ರಾಸಿಗೆ ಬಂದಿದ್ದಾಗ ಅವರ ಭಾಷಣವನ್ನು ಕೇಳಿ ಅದರಿಂದ ತುಂಬಾ ಪ್ರೇರಿತರಾದರು. ಗಾಂಧೀಜಿಯವರನ್ನು ಸಂದರ್ಶಿಸಿ, ಕಾಂಗ್ರೆಸ್ಸನ್ನು ಸೇರಲು ಇಚ್ಛೆ ವ್ಯಕ್ತಪಡಿಸಿದಾಗ, ಗಾಂಧೀಜಿಯವರೇ ದಾಸಪ್ಪನವರಿಗೆ ಹಾಗೆ ಮಾಡದೇ ಮೊದಲು ತಮ್ಮ ಗುರಿಯಾದ ವಿದ್ಯಾಭ್ಯಾಸದ ಕಡೆ ಗಮನಹರಿಸುವಂತೆ ಹೇಳಿದರು. ಗಾಂಧೀಜಿಯವರ ನೇರ ನಡೆ, ನುಡಿ, ಸರಳತೆ ದಾಸಪ್ಪನವರನ್ನು ಆ ಮಹಾತ್ಮನೆಡೆಗೆ ಸೆಳೆಯಿತು. ಆದರೆ ದಾಸಪ್ಪನವರು ಮೊದಲು ತಮ್ಮ ಕರ್ತವ್ಯದೆಡೆ ಗಮನಹರಿಸಿ ಬಿ.ಎ. ಪದವಿ ಪಡೆದರು.

ಬಿ.ಎ. ಪದವಿಯ ನಂತರ ಕಾನೂನು ಪದವಿ ಪಡೆಯಲು ಮುಂಬೈಗೆ ತೆರಳಿ ಅಲ್ಲಿ ಯಶಸ್ವಿಯಾಗಿ ಬಿ.ಎಲ್. ಪದವಿ ಪಡೆದರು. 1919ರಲ್ಲಿ ಬೆಂಗಳೂರಿನಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿದರು.

1926ರಲ್ಲಿ ಸುಪ್ರಸಿದ್ಧ ಸಮಾಜ ಸುಧಾರಕರಾದ ಕೆ.ಎಚ್. ರಾಮಯ್ಯನವರ ಮಗಳಾದ ಯಶೋಧರಮ್ಮನವರನ್ನು ವಿವಾಹವಾದರು. 1937ರವರೆಗೆ ಸಂಯುಕ್ತ

ಪ್ರಜಾಪಕ್ಷದ ಮುಖಂಡರಾಗಿ ಮೈಸೂರಿನ ಪುರಸಭೆ ಹಾಗೂ ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಹಿಂದುಳಿದ ವರ್ಗಗಳ ಮುನ್ನಡೆಗೆ ನಡೆದ ಚಳವಳಿಯಲ್ಲಿ ಅಗ್ರನಾಯಕರಾಗಿದ್ದರು. ಅದೇ ವರ್ಷ ಮೈಸೂರು ಸಂಸ್ಥಾನದ ಕಾಂಗ್ರೆಸ್ ಪಕ್ಷ ಸೇರಿ 1939ರಲ್ಲಿ ಆ ಪಕ್ಷದ ಅಧ್ಯಕ್ಷರಾದರು.

ರಾಜಕೀಯಕ್ಕೆ

ಅಲ್ಪಕಾಲದಲ್ಲಿಯೇ ವಕೀಲರಾಗಿ ಪ್ರಸಿದ್ಧಿ ಪಡೆದ ದಾಸಪ್ಪನವರು, ಯಶಸ್ಸನ್ನೂ, ಕೈ ತುಂಬಾ ಹಣವನ್ನೂ ಸಂಪಾದಿಸಿದರು. ಆದರೆ ತಮ್ಮ ಯಶಸ್ಸಿನಿಂದ ಹಾಗೂ ಶ್ರೀಮಂತಿಕೆಯಿಂದ ಅವರು ತೃಪ್ತರಾಗಲಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಒಕ್ಕಲಿಗ ಸಂಘದ ಸದಸ್ಯರಾದರು. ತಮ್ಮ ತಂದೆಯವರು ಅಧ್ಯಕ್ಷರಾಗಿದ್ದ ಪ್ರಜಾಮಿತ್ರ ಮಂಡಳಿಯನ್ನು ಸೇರಿದರು. ಆದರೆ ಈ ಸಂಸ್ಥೆಗಳು ಅವರ ಸೇವಾಕಾಂಕ್ಷೆಯನ್ನು ತೃಪ್ತಿಗೊಳಿಸಲಿಲ್ಲ. ಸೀಮಿತವಾದ ಪ್ರಣಾಳಿಕೆಗಳು, ಜಾತಿಯ ಅಥವಾ ಕೋಮುವಾದಗಳಿಗೆ ಅವರ ವಿರೋಧವಿತ್ತು. ಅವರದು ಹೊಸದನ್ನು ಸಾಧಿಸುವ ಛಲವಾಗಿತ್ತು.

ದಾಸಪ್ಪನವರ ಜನಪ್ರಿಯತೆ ಎಷ್ಟಿತ್ತೆಂದರೆ, ಅವರು ಸತತವಾಗಿ ಹತ್ತು ವರ್ಷಗಳ ಕಾಲ ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಖ್ಯಾತ ವಕೀಲರಾಗಿ, ಜನಪ್ರಿಯ ನಾಯಕರಾಗಿದ್ದ ದಾಸಪ್ಪನವರು ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಗಳಲ್ಲಿ ತಮ್ಮ ವಿದ್ವತ್ತು, ಸಾಮಾಜಿಕ ಕಳಕಳಿಗಳಿಂದ ಜನರ ಸಮಸ್ಯೆಗಳನ್ನು ಸರ್ಕಾರದ ಮುಂದಿಡುವಲ್ಲಿ ಸಫಲರಾಗಿದ್ದರು. ಈ ಸಭೆಗಳಲ್ಲಿನ ಚರ್ಚೆಗಳಲ್ಲಿ ದಾಸಪ್ಪನವರು ಭಾಗವಹಿಸುತ್ತಿದ್ದ ರೀತಿ ಪ್ರಶಂಸನೀಯ. ಅವರು ಯಾವುದೇ ವಿಷಯವಾದರೂ ನಿರರ್ಗಳವಾಗಿ ಮಾತನಾಡುತ್ತಿದ್ದರು. ಸಮಸ್ಯೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡು, ವಿವಿಧ ಮೂಲಗಳಿಂದ ಅಂಕಿ ಅಂಶಗಳನ್ನು ತರಿಸಿಕೊಂಡು ಜನಾಭಿಪ್ರಾಯವನ್ನು ಸಂಗ್ರಹಿಸಿ ಅದರಂತೆ ಚರ್ಚೆಗಳಲ್ಲಿ ತಮ್ಮ ವಾದವನ್ನು ಮಂಡಿಸುತ್ತಿದ್ದರು.

ದಾಸಪ್ಪನವರ ಚರ್ಚೆಯ ಕೇಂದ್ರವಾಗಿರುತ್ತಿದ್ದ ವಿಷಯಗಳೆಂದರೆ ಅಸ್ಪೃಶ್ಯತೆ ನಿವಾರಣೆ, ಹರಿಜನರಿಗೆ ಒದಗಿಸಿಕೊಡಬೇಕಾದ ಸೌಲಭ್ಯಗಳು, ಗ್ರಾಮೋದ್ಧಾರ, ರೈತರಿಗೆ ದೊರಕಬೇಕಾದ ಪರಿಹಾರ, ಬಾಲ್ಯವಿವಾಹ ನಿಷೇಧ, ವಿಧವಾ ವಿವಾಹಕ್ಕೆ ಪ್ರೋತ್ಸಾಹ, ಹೆಣ್ಣುಮಕ್ಕಳಿಗೆ ದೊರಕಬೇಕಾದ ಆಸ್ತಿಯ ಹಕ್ಕು, ಮುನಿಸಿಪಲ್, ಜಿಲ್ಲಾ, ತಾಲ್ಲೂಕು ಮಂಡಳಿಗಳ ಅಧಿಕಾರ ವಿಸ್ತರಣೆ, ಚುನಾಯಿತ ಪ್ರತಿನಿಧಿಗಳಿಗೆ ದೊರಕಬೇಕಾದ ಅಧಿಕಾರ – ಹೀಗೆ ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ,

ದಾಸಪ್ಪನವರು ಭಾಗವಹಿಸದ ಚರ್ಚೆಯಿರಲಿಲ್ಲ. ಸರ್ಕಾರದ ಎಚ್ಚರಿಕೆಯ ಘಂಟೆಯ ಕೆಲಸ ಮಾಡುತ್ತಿದ್ದ ದಾಸಪ್ಪ, ಸರ್ಕಾರದ ಮಸೂದೆಗಳಿಗೆ ತಿದ್ದುಪಡಿ ತರುವಲ್ಲಿ ಬೇಕಾದ ಮಾರ್ಪಾಡುಗಳನ್ನು ಸೂಚಿಸಲು ಸದಾ ಸಿದ್ಧರಾಗಿರುತ್ತಿದ್ದರು. ಗಂಟೆ ಗಟ್ಟಲೆ ಗ್ರಂಥಾಲಯದಲ್ಲಿ ಕಳೆಯುತ್ತಿದ್ದ ದಾಸಪ್ಪ ತಮ್ಮ ಅಪಾರ ಜ್ಞಾನ, ವಕೀಲಿ ವೃತ್ತಿಯ, ಅನುಭವ, ತೀಕ್ಷ್ಣಮತಿ, ಕುಶಾಗ್ರತೆ ಮತ್ತು ಆಸಕ್ತಿಯಿಂದ ರಾಜ್ಯದ ಶ್ರೇಷ್ಠ ಸಂಸದೀಯಪಟುವೆಂದು ಖ್ಯಾತರಾದರು.

ಪ್ರಜಾಮಿತ್ರ ಪಕ್ಷ ಮತ್ತು ಮೈಸೂರು ಕಾಂಗ್ರೆಸ್

ಇದೇ ಸಮಯದಲ್ಲಿ ಮೈಸೂರು ಕಾಂಗ್ರೆಸ್ ಸಹಾ ಇಂತಹದೇ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಗಾಂಧೀಜಿಯವರ ಆದೇಶದಂತೆ ರಚನಾತ್ಮಕ ಕಾರ್ಯಕ್ರಮವನ್ನು ಮುಖ್ಯ ಅಂಶವನ್ನಾಗಿ ಅಂಗೀಕರಿಸಿತು. ಆಗಾಗ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಮುಂದಿಡುತ್ತಿತ್ತು. ಹೀಗಾಗಿ ಈ ಎರಡು ಪಕ್ಷಗಳೂ ಒಂದೇ ರೀತಿಯ ಕಾರ್ಯಕ್ರಮವನ್ನು ಹೊಂದಿದ್ದರೂ, ಪರಸ್ಪರ ವಿರೋಧಿಗಳಾಗಿದ್ದರು. 1932, 1937ರ ಚುನಾವಣೆಗಳಲ್ಲಿ, ಪ್ರಜಾಪಕ್ಷವೇ ಮೈಸೂರು ಕಾಂಗ್ರೆಸ್ಸನ್ನು ವಿರೋಧಿಸಿತ್ತು. ಈ ಪಕ್ಷಗಳ ನಡುವಿನ ಭಿನ್ನತೆ ದಿವಾನ ಮಿರ್ಜಾರ ಮತ್ತೊಂದು ಅಸ್ತ್ರವಾಗಿತ್ತು.

1937ರ ಚುನಾವಣೆಯು ಈ ಎರಡು ಪಕ್ಷಗಳ ಬಲಹೀನತೆಯನ್ನು ಪ್ರದರ್ಶಿಸಿತು. ಪ್ರಜಾಪಕ್ಷ ಹೆಚ್ಚಿನ ಸೀಟುಗಳನ್ನು ಪಡೆದರೂ, ಹೆಚ್ಚಿನದೇನನ್ನೂ ಸಾಧಿಸುವಂತಿರಲಿಲ್ಲ. ದಾಸಪ್ಪ, ಕೆ.ಸಿ. ರೆಡ್ಡಿ, ಕೆ.ಟಿ. ಭಾಷ್ಯಂ, ಹೆಚ್.ಕೆ. ವೀರಣ್ಣಗೌಡ, ಸಿದ್ದಲಿಂಗಯ್ಯ ಮುಂತಾದವರು ಈ ಎರಡೂ ಪಕ್ಷಗಳನ್ನು ಒಂದುಗೂಡಿಸಲು ನಿರ್ಧರಿಸಿದರು. ಪ್ರಜಾಪಕ್ಷದ ಪರವಾಗಿ ದಾಸಪ್ಪ ಮತ್ತು ಕೆ.ಟಿ. ಭಾಷ್ಯಂ ಪ್ರಜಾಪಕ್ಷವನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಲು ಪ್ರಯತ್ನಿಸಿದರು. ದಾಸಪ್ಪನವರು ವಿಲೀನದ ಕಡೆ ಒಲವು ತೋರಿಸಿದ್ದುಕೆ, ಸ್ವಾರ್ಥದಿಂದಾಗಿಯೇ ಎಂಬ ಪ್ರಶ್ನೆ ಏಳುತ್ತದೆ. ಈ ಪ್ರಶ್ನೆಗೆ ಉತ್ತರವೆಂಬಂತೆ ದಾಸಪ್ಪನವರು ಮಿರ್ಜಾರವರು ಕಾಂಗ್ರೆಸ್ ಅನ್ನು ಬಗ್ಗು ಬಡಿಯುತ್ತಿದ್ದ ರೀತಿ, ರಾಜ್ಯದಲ್ಲಿ ಯಾವ ರಾಜಕೀಯ ಪಕ್ಷದ ಅಸ್ತಿತ್ವವು ಪೂರಕವೆಂದು ತಿಳಿದು, ಈ ದಬ್ಬಾಳಿಕೆಯ ವಿರುದ್ಧ ಕಾಂಗ್ರೆಸ್‌ನ್ನು ಬಲಗೊಳಿಸುವುದು ಅಗತ್ಯವೆಂದು ಹೇಳಿದರು.

ದಾಸಪ್ಪನವರು ಕಾಂಗ್ರೆಸ್ ಸೇರಿದ್ದರಿಂದ ಕಾಂಗ್ರೆಸ್‌ಗೆ ಹೆಚ್ಚು ಪ್ರಯೋಜನ-ವಾಯಿತು. ಇದುವರೆಗೂ ಇರದಿದ್ದ ಜನ ಬೆಂಬಲ ಕಾಂಗ್ರೆಸ್‌ಗೆ ದೊರೆಯಿತು. ದಾಸಪ್ಪನವರಂತಹ ಧುರೀಣರ ಗಮನ ಕಾಂಗ್ರೆಸ್‌ನ ಬಲ ಸಂವರ್ಧನೆಗೆ ಕಾರಣವಾಯಿತು.

ಶಿವಪುರ ಸತ್ಯಾಗ್ರಹದಲ್ಲಿ ದಾಸಪ್ಪನವರು

1938ರಲ್ಲಿ ಮೈಸೂರು ಕಾಂಗ್ರೆಸ್ ನಡೆಸಿದ ಪ್ರಥಮ ಅಧಿವೇಶನಕ್ಕೆ ದಾಸಪ್ಪ ಸ್ವಾಗತ ಸಮಿತಿಯ ಉಪಾಧ್ಯಕ್ಷರಾಗಿದ್ದರು. ಅಲ್ಲಿ ಬರಲಿರುವ ಕಾರ್ಯಕರ್ತರಿಗೆ (30,000) ನೀರು, ವಸತಿ, ಏರ್ಪಾಟು ಮಾಡುವುದು ದಾಸಪ್ಪನವರ ಕೆಲಸ. ದಾಸಪ್ಪ ಬೇರೆ ಬೇರೆ ಕಡೆಗಳಿಂದ ಬರುವ ಕಾರ್ಯಕರ್ತರಿಗೆ ಅನುಕೂಲವಾಗುವಂತೆ ಶಿವಪುರಕ್ಕೆ ನಿಲ್ದಾಣವನ್ನು ಮಂಜೂರು ಮಾಡಿಸಿ, ಅಲ್ಲಿ ಎಲ್ಲಾ ರೈಲುಗಳು ನಿಲ್ಲುವಂತೆ ನೋಡಿ–ಕೊಂಡರು. ನಿಲ್ದಾಣದ ನಿರ್ಮಾಣ ಶೀಘ್ರವಾಗಿ ನಡೆಯಿತು. ಈ ಏರ್ಪಾಡುಗಳಿಗಾಗಿ ದಾಸಪ್ಪ ಒಂದು ತಿಂಗಳು ಶಿವಪುರದಲ್ಲಿ ಬೀಡು ಬಿಡಬೇಕಾಯಿತು.

ಸಮ್ಮೇಳನದ ಮೊದಲನೇ ದಿನ (ದಿನಾಂಕ 10 ಏಪ್ರಿಲ್, 1938) ಅಧ್ಯಕ್ಷ ಸಿದ್ದಲಿಂಗಯ್ಯನವರ ಬಂಧನ ನಂತರ ಅಧ್ಯಕ್ಷರಾಗಿ ಸಮ್ಮೇಳನಕ್ಕೆ ಯಾವ ಕುಂದು ಕೊರತೆ ಇಲ್ಲದಂತೆ ಶಾಂತವಾಗಿ ಮುಂದುವರಿಯಲು ದಾಸಪ್ಪ ಕಾರಣರಾದರು. ಎರಡನೆಯ ದಿನ ಏಪ್ರಿಲ್ 11 ರಂದು ಕಾಂಗ್ರೆಸ್‌ನ ಬಾವುಟವನ್ನು ಹಾರಿಸಿ, ಬಂಧನಕ್ಕೊಳಗಾದರು. ಆಗ ಒಂದು ತಿಂಗಳ ಶಿಕ್ಷೆಯಾಯಿತು.

ದಾಸಪ್ಪನವರು ಸೆರೆಮನೆಯ ವಾಸವನ್ನು ಅನುಭವಿಸಿದ್ದಕ್ಕಾಗಿ ಅವರು ಚುನಾವಣೆಗೆ ನಿಲ್ಲುವಂತಿರಲಿಲ್ಲ. ಅವರು ಈಗಾಗಲೇ ಪಕ್ಷದ ಆದೇಶದಂತೆ ಪ್ರಜಾಪ್ರತಿನಿಧಿ ಸಭೆಗೆ ರಾಜೀನಾಮೆ ನೀಡಿದ್ದರು. ಆ ಸ್ಥಾನಕ್ಕೆ ಚುನಾವಣೆ ಘೋಷಿಸಿದಾಗ ದಾಸಪ್ಪನವರ ಬದಲಾಗಿ ಅವರ ಪತ್ನಿ ಯಶೋಧರ ಅವರನ್ನು ಸ್ಪರ್ಧಿಸಲು ಒಪ್ಪಿಸಲಾಯಿತು. ದಾಸಪ್ಪನವರ ಮೇಲೆ ಮತದಾರರಿಗೆ ಎಷ್ಟೊಂದು ಪ್ರೀತಿ ಎಂದರೆ ಯಶೋಧರಾ ಅವರನ್ನು ಗೆಲ್ಲಿಸಿ, ವಿರೋಧಿಯಾಗಿದ್ದ ರಾವ್ ಸಾಹೇಬ್ ಮುನಿವೆಂಕಟಪ್ಪನವರು ಠೇವಣಿ ಕಳೆದುಕೊಳ್ಳುವಂತೆ ಆಯಿತು.

ದಾಸಪ್ಪನವರ ಜನಪ್ರಿಯತೆ ಮತ್ತು ಕಾರ್ಯಶ್ರದ್ಧೆ ಮೆಚ್ಚಿದ ಕಾಂಗ್ರೆಸ್ ಪಕ್ಷ ಅವರನ್ನು 1939–40ರ ಅವಧಿಯ ಅಧ್ಯಕ್ಷರನ್ನಾಗಿ ನೇಮಿಸಿತು. ಈಗಾಗಲೇ ನಡೆದ ಶಿವಪುರ ಧ್ವಜಸತ್ಯಾಗ್ರಹ ಹಾಗೂ ವಿದುರಾಶ್ವತ್ಥದ ಘಟನೆ ಕಾಂಗ್ರೆಸ್‌ನ ಜನಪ್ರಿಯತೆಗೆ ಸರ್ಕಾರದ ಪ್ರತಿಕ್ರಿಯೆ ಏನು ಎಂದು ತೋರಿಸಿಕೊಟ್ಟಿತ್ತು. ಅಧ್ಯಕ್ಷ ದಾಸಪ್ಪನವರ ಮೇಲೆ ದೊಡ್ಡ ಜವಾಬ್ದಾರಿ. ಆಗತಾನೆ ಅಂಬೆಗಾಲಿಡುತ್ತಿದ್ದ ಮೈಸೂರು ಕಾಂಗ್ರೆಸ್ ಅನ್ನು ಬಲಪಡಿಸುವುದು, ಜನರಲ್ಲಿ ಜವಾಬ್ದಾರಿ ಸರ್ಕಾರದ ಹಾಗೂ ಕಾಂಗ್ರೆಸ್‌ನ ಧ್ಯೇಯಗಳ ಪ್ರಚಾರ, ಜೊತೆಗೆ ಕಾಂಗ್ರೆಸ್ ಸಂಘಟನೆಗೆ ನಿರ್ದಿಷ್ಟ ರೂಪು ರೇಷೆಗಳನ್ನು ನೀಡುವುದು. ದಾಸಪ್ಪ ಒಂದು ವರ್ಷಕಾಲ ತಮ್ಮ ಮೇಲಿದ್ದ ಈ ಮಹತ್ತರ ಜವಾಬ್ದಾರಿಯನ್ನು ನಿರ್ವಹಿಸಿದರು. ಅವರು ಮಹಾ ಹೋರಾಟಗಾರರು. 1937ರಲ್ಲಿ ಪಕ್ಷದ ಎರಡನೇ ಅಧಿವೇಶನವನ್ನು ನಡೆಸಿ, ತಮ್ಮ ಧ್ಯೇಯವನ್ನು

ವಿವರಿಸಿದರು. ಅವರ ಅಧ್ಯಕ್ಷ ಭಾಷಣ ಕಾಂಗ್ರೆಸ್ ಹಾಕಿಕೊಂಡಿದ್ದ ಯೋಜನೆಗಳ ಜೊತೆಯಲ್ಲಿ ದಾಸಪ್ಪನವರ ವೈಯುಕ್ತಿಕ ಅಭಿಪ್ರಾಯಗಳನ್ನೊಳಗೊಂಡಿತ್ತು.

ಸ್ವಾತಂತ್ರ್ಯ ಚಳವಳಿಗಳಲ್ಲಿ ದಾಸಪ್ಪನವರು ಪಾಲ್ಗೊಂಡಿದ್ದರಿಂದ ಸರ್ಕಾರವು ದಾಸಪ್ಪನವರ ವಕೀಲಿ ವೃತ್ತಿ ಸನ್ನದ್ದನ್ನು ರದ್ದುಮಾಡಿತು. ವಕೀಲಿ ವೃತ್ತಿ ರದ್ದಾದ್ದರಿಂದ ಅವರ ಆರ್ಥಿಕ ಪರಿಸ್ಥಿತಿ ಬಿಗಡಾಯಿಸಿತು. ತಾವು ನಂಬಿದ ಗಾಂಧೀತತ್ವಗಳಿಗಾಗಿ ದಾಸಪ್ಪನವರು ಬಂದಂತಹ ಕಷ್ಟಗಳನ್ನು ನಗುನಗುತ್ತಲೇ ಎದುರಿಸಿದರು. ಯಶೋಧರಾ ಅವರು ದಾಸಪ್ಪನವರಿಗೆ ಸಂಪೂರ್ಣ ಬೆಂಬಲ ನೀಡಿದರು.

ಮಹಾತ್ಮಾ ಗಾಂಧಿ ಮತ್ತು ದಾಸಪ್ಪನವರು

ಮಹಾತ್ಮ ಗಾಂಧೀಜಿಯವರು 13.7.1940ರ ಹರಿಜನ ಪತ್ರಿಕೆಯಲ್ಲಿ ದಾಸಪ್ಪನವರ ಬಗ್ಗೆ ಹೆಮ್ಮೆಯ ಮಾತುಗಳನ್ನು ಹೀಗೆ ಬರೆದರು. ಶ್ರೀ ದಾಸಪ್ಪನವರು ಮೈಸೂರಿನ ಅತ್ಯಂತ ಗೌರವಾನ್ವಿತ ವ್ಯಕ್ತಿ. ಸುಮಾರು 20 ವರ್ಷಗಳ ವಕೀಲಿ ಕೆಲಸದ ಅನುಭವವುಳ್ಳವರು. ಮೈಸೂರಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಮ್ಯಾಜಿಸ್ಟ್ರೇಟ್‌ರ ಆಜ್ಞೆಯನ್ನು ಉಲ್ಲಂಘಿಸಿ ಭಾಷಣ ಮಾಡಿದ ಕೆಚ್ಚೆದೆ ಅವರದು. ಜಸ್ಟೀಸ್ ನಾಗೇಶ್ವರ ಅಯ್ಯರ್ ಅವರಿಂದ ನಡೆಯಲಿದ್ದ ಅಧಿಕೃತ ವಿಚಾರಣೆಯನ್ನು ಬಹಿಷ್ಕರಿಸಬೇಕೆಂದು ರಾಜಕೀಯ ಖೈದಿಗಳಿಗೆ ತಿಳಿಸಿ ಹೇಳುವ ಸಾಹಸ ಮಾಡಿದವರು. ಆ ಕೆಲಸವನ್ನು ಅವರು ನನ್ನ ಸೂಚನೆಯ ಮೇರೆಗೆ ಮಾಡಿದ್ದರು. ಆದುದರಿಂದ ಈ ಗುರುತರ ಅಪರಾಧಗಳಿಗಾಗಿ ದಾಸಪ್ಪನವರು ಎಂದೆಂದಿಗೂ ವಕೀಲ ವೃತ್ತಿಯನ್ನು ಕೈಗೊಳ್ಳದಂತೆ ಆದೇಶ ಮಾಡಲಾಗಿದೆ. ದಾಸಪ್ಪನವರನ್ನು ನಾನು ಚೆನ್ನಾಗಿ ಬಲ್ಲೆ. ಅವರು ನಿಷ್ಕಳಂಕ ಚಾರಿತ್ರ್ಯವುಳ್ಳವರು. ಅತ್ಯಂತ ಪ್ರಾಮಾಣಿಕರು. ಅವರು ತಮ್ಮಲ್ಲಿ ಸಾಧ್ಯವಾದ ಮಟ್ಟಿಗೆ ಅಹಿಂಸೆಯನ್ನು ಅನುಸರಿಸಲು ಸ್ಥೈರ್ಯದಿಂದ ಯತ್ನಿಸುತ್ತಿದ್ದಾರೆ. ಬ್ರಿಟಿಷ್ ಇಂಡಿಯಾ ದೇಶಭಕ್ತ ವಕೀಲರು ಏನು ಮಾಡಿದ್ದಾರೋ ಅಥವಾ ಇತರ ವಕೀಲರು ಏನು ಮಾಡಲಿಲ್ಲವೋ ಅದನ್ನು ದಾಸಪ್ಪನವರು ಮಾಡಿದ್ದಾರೆ. ಗಾಂಧೀಜಿಯವರಿಂದ ಮೆಚ್ಚುಗೆ ಪಡೆದ ದಾಸಪ್ಪನವರು 'ಮೈಸೂರು ಗಾಂಧಿ' ಎಂದು ಹೆಸರಾದರು.

ಅನಾರೋಗ್ಯದಿಂದಾಗಿ 1940ರಲ್ಲಿ ಸುಮಾರು ಆರು ತಿಂಗಳ ಕಾಲ ದಾಸಪ್ಪನವರು ಸೇವಾಗ್ರಾಮದಲ್ಲಿದ್ದದ್ದರಿಂದ ಎರಡು ರೀತಿಯ ಪ್ರಯೋಜನ ದಾಸಪ್ಪನವರಿಗಾಯಿತು. ಮೊದಲನೆಯದಾಗಿ ದಾಸಪ್ಪನವರ ಆರೋಗ್ಯ ಸುಧಾರಿಸಿತು. ಎರಡನೆಯದಾಗಿ ತಮ್ಮ ಆರಾಧ್ಯದೈವ ಗಾಂಧೀಜಿಯವರ ನಿಕಟ ಸಂಪರ್ಕ ದೊರೆಯಿತು. ಇವರು ಗಾಂಧೀಜಿಯವರ ಪ್ರಾರ್ಥನಾ ಕೂಟಗಳಲ್ಲಿ ಪಾಲ್ಗೊಂಡು, ಅವರ ಚರ್ಚೆಗಳಲ್ಲಿ ಭಾಗವಹಿಸಿ, ದೇಶದ ವಿವಿಧ ಭಾಗಗಳಲ್ಲಾಗುತ್ತಿದ್ದ ಸತ್ಯಾಗ್ರಹ

ಸ್ವರೂಪವನ್ನು ತಿಳಿದುಕೊಳ್ಳುತ್ತಿದ್ದರು. ಗಾಂಧೀಜಿಯವರಿಗೆ ದಾಸಪ್ಪನವರ ವಿಚಾರ-ವಂತಿಕೆ, ಕಾರ್ಯನಿಷ್ಠೆ, ಮೆಚ್ಚಿಗೆಯಾಯಿತು. ದಾಸಪ್ಪನವರನ್ನು ಗಾಂಧೀಜಿಯವರು ತಮ್ಮ ಆಪ್ತವಲಯದವರನ್ನಾಗಿ ಮಾಡಿಕೊಂಡರು.

ದಾಸಪ್ಪನವರು ಭಾರತ ಸ್ವಾತಂತ್ರ ಪಡೆದ ನಂತರ ರಾಜಕೀಯ ಹಾಗೂ ವಿಧಾಯಕ ಸೇವಾ ಕ್ಷೇತ್ರಗಳಲ್ಲಿ ಬಹುವಾಗಿ ದುಡಿದಿದ್ದಾರೆ. ಶ್ರೀ ರಾಮಕೃಷ್ಣಾಶ್ರಮ, ಕಸ್ತೂರಿ ಬಾ ಗಾಂಧೀ ಸ್ಮಾರಕ ಸಂಸ್ಥೆ, ಗಾಂಧೀ ಸ್ಮಾರಕ ನಿಧಿ ಹಾಗೂ ಹಿಂದೀ ಪ್ರಚಾರ ಸಭೆ ಮುಂತಾದ ಸಂಸ್ಥೆಗಳ ಮೂಲಕ ಜನಸೇವೆ ಸಲ್ಲಿಸಿದರು.

ಜವಾಬ್ದಾರಿ ಸರ್ಕಾರಕ್ಕೆ ಒತ್ತಾಯ

1947ರಲ್ಲಿ ದೇಶವು ಸ್ವತಂತ್ರವಾದಾಗ ರಾಜ್ಯದಲ್ಲಿ ಪ್ರಜಾರಾಜ್ಯ ಸ್ಥಾಪನೆಗೆ ಕಾಂಗ್ರೆಸ್ ಮತ್ತೊಂದು ಚಳವಳಿಯನ್ನು ಕೈಗೊಂಡಿತು. ಅದರ ಮುಖ್ಯಧ್ಯೇಯ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ, ಅದಕ್ಕೆ ಸರ್ಕಾರದ ನಿರುತ್ತರ. ತನ್ನ ಉದ್ದೇಶ ಸಾಧನೆಗಾಗಿ ಕಾಂಗ್ರೆಸ್ ಮೈಸೂರು ಚಲೋ ಚಳವಳಿಯನ್ನು ಆರಂಭಿಸಿತು. ಒಂದನೇ ಸೆಪ್ಟಂಬರ್‌ನಲ್ಲಿ ಆರಂಭಗೊಂಡ ಈ ಚಳವಳಿ ಜನಾಂದೋಲನವಾಗಿತ್ತು. ಸೆಪ್ಟೆಂಬರ್ ಎರಡನೇ ತಾರೀಖು ದಾಸಪ್ಪನವರು ಟೌನ್‌ಹಾಲ್‌ನಲ್ಲಿ ಭಾಷಣ ಮಾಡಿದ ಮೇಲೆ ಸರ್ಕಾರವು ಅವರನ್ನು ಬಂಧಿಸಿತು. ಒಂದು ತಿಂಗಳ ಕಾಲ ದಾಸಪ್ಪನವರು ಸೆರೆಮನೆಯಲ್ಲಿರಬೇಕಾಯಿತು.

ಹಣಕಾಸು ಮತ್ತು ಕೈಗಾರಿಕಾ ಮಂತ್ರಿಯಾಗಿ

1947ರ ಅಕ್ಟೋಬರ್ 24ರಂದು ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಿ ಮಂತ್ರಿಮಂಡಲ ರಚನೆಯಾಯಿತು. ಈ ಸರ್ಕಾರದಲ್ಲಿ ದಾಸಪ್ಪನವರು ಹಣಕಾಸು ಮತ್ತು ಕೈಗಾರಿಕಾ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಕೈಗಾರಿಕಾ ಮಂತ್ರಿಯಾಗಿ ಮಾಡಿದ ಮುಖ್ಯ ಕೆಲಸ ರಾಜ್ಯದಲ್ಲಿ ಕೈಗಾರಿಕೆಗಳ ಬೆಳವಣಿಗೆಯ ಬ್ಲೂ ಪ್ರಿಂಟ್ ತಯಾರಿಸಿದ್ದು, ರಾಜ್ಯವು ಮೊದಲಿನಂತೆಯೇ ಕೈಗಾರಿಕಾ ಕ್ಷೇತ್ರದಲ್ಲಿ ಪ್ರಾಮುಖ್ಯತೆ ಪಡೆಯಲು ಯೋಜನೆಯನ್ನು ರೂಪಿಸಿದ್ದು. ಸರ್ವೇ, ನಡೆಸಿ ಕೈಗಾರಿಕಾಭಿವೃದ್ಧಿಗಾಗಿ ನಿಯಮಗಳನ್ನು ರೂಪಿಸಿದರು. ದಾಸಪ್ಪನವರು ರೂಪಿಸಿದ ಈ ಯೋಜನೆಗೆ ಮೈಸೂರು ಶೈಲಿಯ ಕೈಗಾರಿಕೆಗಳೆಂದು ಹೆಸರು. ಹಣಕಾಸು ಮಂತ್ರಿಗಳಾದ ಇವರು ಪಾನನಿರೋಧವನ್ನು ಜಾರಿಗೆ ತಂದರೆ ರಾಜ್ಯಕ್ಕೆ ಆರ್ಥಿಕ ಹೊರೆಯಾಗುತ್ತದೆ ಎಂದು ಗೊತ್ತಿದ್ದರೂ ಕೂಡ ಪಾನನಿರೋಧವನ್ನು ಬೆಂಬಲಿಸಿದರು.

ದಾಸಪ್ಪನವರು ರಾಜ್ಯದಲ್ಲಿನ ಕೈಗಾರಿಕಾ ಬೆಳವಣಿಗೆಗೆ ತೋರಿದ ಆಸಕ್ತಿಯ ಫಲವೇ ವಿಮಾನ ಕಾರ್ಖಾನೆ ಮತ್ತು ಟೆಲಿಫೋನ್ ಕಾರ್ಖಾನೆಗಳು ಬೆಂಗಳೂರಿಗೆ

ಬಂದಿದ್ದು. ಇವರು ವಿಶ್ವೇಶ್ವರಯ್ಯನವರ ಜೊತೆಗೂಡಿ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಿದರು.

ರೈಲ್ವೆ ಮಂತ್ರಿಯಾಗಿ

ದಾಸಪ್ಪನವರು ಲೋಕಸಭೆಗೆ ಆಯ್ಕೆಯಾಗಿ 1958 ರಿಂದ 1963ರ ಲೋಕಸಭೆಯ ಅಂದಾಜು ಸಮಿತಿಯ ಛೇರ್‌ಮನ್ ಆಗಿ ದೇಶಕ್ಕೆ ಉನ್ನತವಾದ ಸೇವೆಯನ್ನು ಸಲ್ಲಿಸಿದ್ದಾರೆ. ನಂತರ ಅಲ್ಪಾವಧಿಗೆ ರೈಲ್ವೆ ಮಂತ್ರಿಯಾಗಿದ್ದರು (1963-64). ರೈಲ್ವೆ ಮಂತ್ರಿಯಾಗಿ ದಾಸಪ್ಪನವರು ರಾಜ್ಯಕ್ಕೆ ನೀಡಿದ ಕೊಡುಗೆ ಏನೆಂದರೆ ಹಾಸನ-ಮಂಗಳೂರು ರೈಲು ಮಾರ್ಗದ ಯೋಜನೆ ತಯಾರಿಸಿದ್ದು, ಮೈಸೂರು-ಬೆಂಗಳೂರು ಮಾರ್ಗವನ್ನು ಬ್ರಾಡ್‌ಗೇಜ್ ಆಗಿ ಪರಿವರ್ತನೆಗೆ ಅನುಮತಿ ನೀಡಿದ್ದು, ಪೆಣಂಬೂರು-ಮಂಗಳೂರು ರೈಲು ಮಾರ್ಗದ ಉದ್ಘಾಟನೆ, ಶ್ರೀರಂಗಪಟ್ಟಣದ ಹೊಸ ಸೇತುವೆ ದಾಸಪ್ಪನವರ ಆಸಕ್ತಿಯ ಫಲ. ಅಲ್ಲಿಯವರೆಗೂ ರಾಜ್ಯವು ರೈಲ್ವೆ ಸೌಕರ್ಯಗಳ ವಿಷಯದಲ್ಲಿ ಕಡೆಗಣಿಸಲ್ಪಟ್ಟಿತ್ತು. ದಾಸಪ್ಪ ನವರು ರಾಜ್ಯದ ಜನರ ಆಶಯಕ್ಕೆ ಬೆಲೆಕೊಟ್ಟು ರೈಲ್ವೆ ಸೌಕರ್ಯಗಳನ್ನು ಹೆಚ್ಚಿಸಲು ಪ್ರಯತ್ನಿಸಿದರು. ಇದರಿಂದಾಗಿ ರಾಜ್ಯದ ಜನರ ಮನಸ್ಸಿನಲ್ಲಿ ದಾಸಪ್ಪನವರು ಚಿರಸ್ಥಾಯಿಯಾಗು-ವಂತಾಯಿತು.

ಪಂಡಿತ ಜವಹರಲಾಲ್ ನೆಹರುರವರ ಮರಣಾ ನಂತರ ಲಾಲ್‌ಬಹದ್ದೂರ್ ಶಾಸ್ತ್ರಿ ಅವರು ಪ್ರಧಾನಮಂತ್ರಿಗಳಾದರು. ಶಾಸ್ತ್ರಿಗಳು ದಾಸಪ್ಪನವರನ್ನು ಬಹಳ ಹತ್ತಿರದಿಂದ ಬಲ್ಲವರು. ದಾಸಪ್ಪನವರಿಗೆ ಮೈಸೂರಿನ ಮಂತ್ರಿಮಂಡಲದಲ್ಲಿ ಖ್ಯಾತಿಯನ್ನು ತಂದು ಕೊಟ್ಟಿದ್ದ ಕೈಗಾರಿಕೆ ಮತ್ತು ನಾಗರೀಕ ಸರಬರಾಜು ಖಾತೆಯನ್ನೇ ತಮ್ಮ ಕ್ಯಾಬಿನೆಟ್‌ನಲ್ಲೂ ನೀಡಿದರು. ಪ್ರಧಾನಮಂತ್ರಿಗಳು ದಾಸಪ್ಪನವರಿಂದ ಹೆಚ್ಚಿನ ಸಾಧನೆಯನ್ನು ನಿರೀಕ್ಷಿಸಿದ್ದರು. ಆದರೆ ದೈವವು ಅವರಿಗೆ ನೀಡಿದ ಅವಧಿ ಮುಗಿದಿತ್ತು. ದಾಸಪ್ಪನವರು ದಕ್ಷಿಣ ಆಫ್ರಿಕಾದ ಪ್ರವಾಸದಿಂದ ಹಿಂದಿರುಗಿದ ಮೇಲೆ 28 ಅಕ್ಟೋಬರ್ 1964ರಂದು ಹಠಾತ್ತನೆ ಹೃದಯಾಘಾತದಿಂದ ಮರಣ ಹೊಂದಿದರು. ದಾಸಪ್ಪನವರ ಸರಳ ಸಜ್ಜನಿಕೆ, ಪ್ರಾಮಾಣಿಕತೆ ಇಂದಿನ ರಾಜಕಾರಣಿಗಳಿಗೆ ಮಾದರಿಯಾಗುತ್ತದೆ.



ಸೋಮನಹಳ್ಳಿ ಶ್ರೀ ಚಿಕ್ಕೇಗೌಡ ಮಲ್ಲಯ್ಯ

ಒಡೆಯರ ಕಾಲದಲ್ಲಿ ಕೆಲವು ಒಕ್ಕಲಿಗ ಜನಾಂಗದ ಪ್ರಮುಖವ್ಯಕ್ತಿಗಳು ಒಡೆಯರ ಪರವಾಗಿದ್ದರೆ ಮತ್ತೆ ಕೆಲವರು ರಾಜಷಾಹಿಯ ವಿರುದ್ಧ ಸೆಟೆದು ನಿಂತಿದ್ದರು. ಸ್ವಾತಂತ್ರ್ಯ ಹೋರಾಟದ

ಸಮಯದಲ್ಲಿ ಮುಖ್ಯಪಾತ್ರವಹಿಸಿ ಜನಪ್ರಿಯ ವ್ಯಕ್ತಿಗಳಾಗಿ ಸ್ವಾತಂತ್ರ್ಯ ನಂತರ ಕೆಲವರು ಅಧಿಕಾರದ ಗದ್ದುಗೆ ಹಿಡಿದರು. ರಾಜರಪರವಿದ್ದ ಕೆಲವು ಪ್ರಮುಖರು ಉದಾ.: ಶ್ರೀಯುತರಾದ ಎಚ್.ಬಿ. ಗುಂಡಪ್ಪಗೌಡ : ಎಂ.ಸಿ. ಲಿಂಗೇಗೌಡ, ಎಸ್.ಸಿ. ಮಲ್ಲಯ್ಯ, ಡಿ. ಬನುಮಯ್ಯ, ಎಂ. ಶಂಕರಲಿಂಗೇಗೌಡ, ಇನ್ನೂ ಮುಂತಾದವರು ಹೆಚ್ಚು ಬೆಳಕಿಗೇ ಬರಲಿಲ್ಲ. ಆದರೆ ಇವರಿಗೆ ಜನಪರ ಕಾಳಜಿ ಇದ್ದು ಹಲವಾರು ಒಳ್ಳೆಯ ಕೆಲಸವನ್ನು ಮಾಡಿದುದು ಈಗ ಇತಿಹಾಸವಾಗಿ ಉಳಿದಿದೆ ಅಷ್ಟೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಮೈಸೂರು–ಬೆಂಗಳೂರು ನಡುವೆ ಹೆದ್ದಾರಿಯಲ್ಲಿರುವುದೇ ಸೋಮನಹಳ್ಳಿ. ಎಸ್.ಸಿ. ಮಲ್ಲಯ್ಯನವರು ಚಿಕ್ಕೇಗೌಡರ ಗಂಡು ಮಕ್ಕಳಲ್ಲಿ ಎರಡನೇ ಮಗನಾಗಿ 1896ರಲ್ಲಿ ಜನಿಸಿದರು. ಮೊದಲನೆಯವರು ಸೋಮನಹಳ್ಳಿ ಪಟೇಲ್ ಕೆಂಚೇಗೌಡ. ಮಲ್ಲಯ್ಯನವರನ್ನು ಅವರ ತಂದೆ ಸೋಮನಹಳ್ಳಿಗೆ ಸಮೀಪವಿರುವ ನಿಡಘಟ್ಟ ಕೂಲಿಮಠದಲ್ಲಿ ಶಿಕ್ಷಣ ಪಡೆಯಲು ಸೇರಿಸಿದರು. ನಂತರ ಮುಂದಿನ ವ್ಯಾಸಂಗಕ್ಕೆ ಚನ್ನಪಟ್ಟಣದ ಪ್ರೌಢಶಾಲೆಗೆ ಸೇರಿಸಿದರು. ಮಲ್ಲಯ್ಯನವರು ತಮ್ಮ ತಂದೆಯವರ ನಂತರ 1924ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ ನೇಮಕಗೊಂಡರು. 1924ರಿಂದ 1947ರ ವರೆಗೆ 23 ವರ್ಷಗಳ ಕಾಲ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು.

ಮೈಸೂರು ಪ್ರಜಾಪ್ರತಿನಿಧಿ ಸಭಾ ಸದಸ್ಯರಾಗಿ ಮಲ್ಲಯ್ಯ

ಇಡೀ ರಾಷ್ಟ್ರದಲ್ಲಿ ಮೈಸೂರು ಪ್ರಾಂತ್ಯ ಅಥವಾ ಮೈಸೂರು ಸಂಸ್ಥಾನವು ಮಾದರಿ ಸಂಸ್ಥಾನವಾಗಿ ರೂಪುಗೊಳ್ಳಲು ಮಲ್ಲಯ್ಯನವರು ಪ್ರತ್ಯೇಕ ಅಥವಾ ಪರೋಕ್ಷವಾಗಿ ಸರ್ಕಾರಕ್ಕೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಸುಧಾರಣೆಗೆ ಸುಗಮದಾರಿ ಮಾಡಿಕೊಟ್ಟರು. ಇರ್ವಿನ್ ನಾಲೆಯನ್ನು ದುರಸ್ತಿಪಡಿಸಿ ಬೆಳೆದಿರುವ ಕಳೆಯನ್ನು ತೆಗೆಯಲು ಇದಕ್ಕೆ ತಗಲುವ ವೆಚ್ಚವನ್ನು ಸರ್ಕಾರವೇ ಭರಿಸಬೇಕು, ರೈತರ ಮೇಲೆ ನಿಗದಿಯಾಗಿರುವ ಕಂದಾಯಕ್ಕಿಂತ ಹೆಚ್ಚು ಕಂದಾಯ ವಸೂಲಿ ಮಾಡಬಾರದೆಂದು ಒತ್ತಾಯಿಸಿದರು.

ರೈಲ್ವೆ ಸುಧಾರಣೆ ಇತ್ಯಾದಿ

ರೈಲ್ವೆಗೆ ಹೆಚ್ಚಿನ ವರಮಾನ ಮೂರನೆ ದರ್ಜೆಯಿಂದಲೇ ಬರುತ್ತದೆ. ಮೂರನೆ ದರ್ಜೆ ಪ್ರಯಾಣಿಕರನ್ನು ಮೂರನೆ ದರ್ಜೆ ಪ್ರಜೆಗಳಂತೆ ಕಾಣುತ್ತಿದ್ದಾರೆ ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ಹಳ್ಳಿಗಳಲ್ಲಿ ಕುಡಿಯುವ ನೀರು, ರಸ್ತೆ ನೈರ್ಮಲೀಕರಣ, ಒಳಚರಂಡಿ ವ್ಯವಸ್ಥೆ, ವೈದ್ಯಕೀಯ ಸೌಲಭ್ಯ, ಶಾಲಾಕಾಲೇಜುಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದರು.

1929ರ ಪ್ರಜಾಪ್ರತಿನಿಧಿ ಸಭೆ

ಮಲ್ಲಯ್ಯನವರು ಹಿಂದುಳಿದ ವರ್ಗಗಳ, ಬ್ರಾಹ್ಮಣೇತರರ ಮೇಲೆ ಒಳ್ಳೆಯ ಕಾಳಜಿ ಇದ್ದು ಅವರ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಆಸೆ ತಳೆದಿದ್ದರು. ಮೈಸೂರು ಜಿಲ್ಲೆಯ 13 ತಾಲ್ಲೂಕುಗಳ ಶಿರಸ್ತೆದಾರರುಗಳಲ್ಲಿ ಬ್ರಾಹ್ಮಣರೇ ತುಂಬಿದ್ದು, ಅರ್ಹ ಬ್ರಾಹ್ಮಣೇತರ ಅಭ್ಯರ್ಥಿಗಳು ಕಂಡು ಬಂದರೆ ಸರ್ಕಾರ ಅವರನ್ನು ನೇಮಕ ಮಾಡಿಕೊಳ್ಳಬೇಕೆಂದು ಒತ್ತಾಯಿಸಿದರು.

ಮೈಸೂರಿನಿಂದ ಬೇರ್ಪಟ್ಟ ಮಂಡ್ಯ ಜಿಲ್ಲೆ

ಮಲ್ಲಯ್ಯನವರು ಮಂಡ್ಯ ಜಿಲ್ಲೆಯನ್ನು ಮೈಸೂರಿನಿಂದ ಪ್ರತ್ಯೇಕಗೊಳಿಸಿ ಅಭಿವೃದ್ಧಿ ಪಡಿಸಬೇಕು ಎಂಬ ಮುಂದಾಲೋಚನೆಯಿಂದ 1937 ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದರು. ಹಲವಾರು ವಿರೋಧಗಳು ಎದುರಾದರೂ ಜಿಲ್ಲೆಯ ವಿಭಜನೆ ಅನಿವಾರ್ಯ, ಸರ್ವತೋಮುಖ ಅಭಿವೃದ್ಧಿ ಹೊಂದಲು ಇದೊಂದು ಸುವರ್ಣ ಅವಕಾಶ ಎಂದು ಹೇಳಿದರು. ಇದರಿಂದ ಮಂಡ್ಯ ಮೈಸೂರಿನಿಂದ ಅಂತಿಮವಾಗಿ ವಿಭಜನೆಯಾಯಿತು. ಶ್ರೀ ಮನ್ಮಮಹಾರಾಜರು 27.8.1939ರಂದು ಮಂಡ್ಯಕ್ಕೆ ಆಗಮಿಸಿ ಮಂಡ್ಯ ಅಭಿವೃದ್ಧಿ ಹೊಂದಲಿ ಎಂದು ಹರಸಿದರು. ಇದರಿಂದ ಮಲ್ಲಯ್ಯವರು ಕೀರ್ತಿಗೆ ಪಾತ್ರರಾದರು.

ಪ್ರಾಥಮಿಕ ಶಿಕ್ಷಣದ ಬಗ್ಗೆ ಕಾಳಜಿ

1938ರ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಲ್ಲಯ್ಯನವರು ಪ್ರಾಥಮಿಕ ಶಿಕ್ಷಣಕ್ಕೆ ಸರ್ಕಾರ ಒತ್ತು ಕೊಡಬೇಕು. ಸರ್ಕಾರವು ಪ್ರತಿ ಗ್ರಾಮಗಳಲ್ಲಿ ಕನಿಷ್ಠ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯನ್ನು ಮಾಡಬೇಕು ಶೇ. 50ಕ್ಕಿಂತ ಹೆಚ್ಚು ಗ್ರಾಮಗಳಲ್ಲಿ ಶಾಲೆಗಳ ಕೊರತೆ ಕಂಡು ಬರುತ್ತದೆ. ಅದಕ್ಕಾಗಿ ಸರ್ಕಾರವು ಕನಿಷ್ಠ ಐದು ಲಕ್ಷ ರೂಪಾಯಿಗಳನ್ನು ಹಂಗಾಮಿ ಆಯವ್ಯಯದಲ್ಲಿ ಮಂಜೂರು ಮಾಡಬೇಕು ಎಂದು ವಿನಂತಿಸಿ ಕೊಂಡರು. ಪ್ರಾಥಮಿಕ ಶಿಕ್ಷಣವೇ ಅಲ್ಲದೆ ವಿಶ್ವವಿದ್ಯಾಲಯಗಳಲ್ಲಿನ ಶಿಕ್ಷಣ ಅಥವಾ ಉನ್ನತ ಶಿಕ್ಷಣ ಅಲ್ಲದೆ ಕೈಗಾರಿಕಾ ತರಬೇತಿ ಶಾಲೆಗಳನ್ನು ಸ್ಥಾಪಿಸಿ ಗ್ರಾಮೀಣ ವಿದ್ಯಾರ್ಥಿಗಳಿಗೂ ಉನ್ನತ ಶಿಕ್ಷಣ, ತಾಂತ್ರಿಕ ಶಿಕ್ಷಣ ನೀಡುವುದಲ್ಲದೆ ವಿದ್ಯಾರ್ಥಿ ವೇತನ ನೀಡಬೇಕು. ಗ್ರಾಮೀಣ ಜನರಿಗೂ ಸಾಮಾಜಿಕ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ದಲಿತ ಜನಾಂಗಕ್ಕೆ ಪ್ರಾತಿನಿಧ್ಯ ಒತ್ತಾಯ

ಹಿಂದುಳಿದ ಹಾಗೂ ದಲಿತರ ಜನಾಂಗದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಮಲ್ಲಯ್ಯನವರು ಗ್ರಾಮ ಪಂಚಾಯಿತಿ ಮತ್ತು ಪುರಸಭೆ, ನಗರಸಭೆಗಳಲ್ಲಿ ದಲಿತ ಹಾಗೂ ಹಿಂದುಳಿದ ಕೋಮಿನವರು ಮುಕ್ತ ಚುನಾವಣೆಯಲ್ಲಿ ಗೆದ್ದು

ಬರಲು ಸಾಧ್ಯವಿಲ್ಲ, ಅಂತಹ ಕಡೆ ಸರ್ಕಾರವೇ ಇಂತಹ ಹಿಂದುಳಿದ ಕೋಮಿನವರನ್ನು ನಾಮಕರಣ ಮಾಡಬೇಕು ಎಂದು ಸಲಹೆ ನೀಡಿದರು. ಎಸ್. ಸಿ. ಮಲ್ಲಯ್ಯನವರು ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಸೋಮನಹಳ್ಳಿಯಲ್ಲಿ ಸ್ಥಾಪಿಸಿದ ಶಾಲೆಗೆ ಗಾಂಧೀಜಿಯವರು ಭೇಟಿ ನೀಡಿದಾಗ "I am very glad to know that there are Harijan boys also in this Hostel" ಎಂದು ತಮ್ಮ ಹರ್ಷ ವ್ಯಕ್ತ ಪಡಿಸಿ ಮಲ್ಲಯ್ಯನವರ ಬೆನ್ನು ತಟ್ಟಿ ಪ್ರೋತ್ಸಾಹಿಸಿದರು.

ಇವರ ಸೇವೆಯನ್ನು ಮನಗಂಡ ಅಂದಿನ ಸರ್ಕಾರ ಇವರಿಗೆ ಲೋಕ ಸೇವಾ ನಿರತ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಜನ ಸಾಮಾನ್ಯರಿಗೆ ಸರ್ಕಾರದಿಂದ ಅನುಕೂಲಗಳನ್ನು, ಸವಲತ್ತುಗಳನ್ನು ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು. ಹೀಗೆ ತಮ್ಮದೇ ಆದ ಸೇವೆಯನ್ನು ಸಲ್ಲಿಸಿ ಮಾದರಿ ಮಂಡ್ಯ ಮತ್ತು ಮಾದರಿ ಮೈಸೂರು ಪ್ರಗತಿ ಮತ್ತು ಅಭಿವೃದ್ಧಿ ಹೊಂದಲು ಕಾರಣೀಭೂತರಾದರು ಎಂದು ಹೇಳಬಹುದು.

ಶ್ರೀ ಎಂ.ಸಿ. ಲಿಂಗೇಗೌಡ



ಯಾವುದೇ ವಿಷಯವನ್ನು ತೆಗೆದುಕೊಂಡರು ಅದಕ್ಕೆ ಪರ ವಿರೋಧ ಇದ್ದೇ ಇರುತ್ತದೆ. ಇದನ್ನೇ 'ಲೋಕೋ ಭಿನ್ನ ರುಚಿ' ಎನ್ನುವುದು. ಕಾರಣವೇ–ನೆಂದರೆ ದೇಶದಾದ್ಯಂತ ಸ್ವಾತಂತ್ರ್ಯ ಚಳವಳಿ ಪ್ರಾರಂಭವಾಯಿತು. ಮೈಸೂರು ಸಂಸ್ಥಾನದಲ್ಲಿ ಮೈಸೂರು ಒಡೆಯರು ಮೈಸೂರನ್ನು ಇಡೀ ಭಾರತದಲ್ಲೇ ಮಾದರಿ ಸಂಸ್ಥಾನವನ್ನಾಗಿ ಮಾಡಿದ್ದರೂ ಸ್ವಾತಂತ್ರ್ಯ ಚಳವಳಿಯ ಬಿಸಿಯನ್ನು ತಣ್ಣಗೆ ಮಾಡಲಾಗಲಿಲ್ಲ. ಭಾರತದ ಸ್ವಾತಂತ್ರ್ಯ ಸಂಗ್ರಾಮ ಒಂದು ರೀತಿಯ ಸಮೂಹಸನ್ನಿಯಂತೆ ಎಲ್ಲರನ್ನೂ ಸೆಳೆಯಿತು. ಕೆಲವರು ಮಹಾರಾಜರ ಪರ ನಿಂತರೆ ಕೆಲವರು ಸ್ವಾತಂತ್ರ್ಯ ಹೋರಾಟಗಾರರಾಗಿ ಚಳವಳಿ ನಡೆಸುತ್ತಿದ್ದರು. ಶ್ರೀ ಎಂ.ಸಿ. ಲಿಂಗೇಗೌಡ, ಶ್ರೀ ಎಸ್.ಸಿ. ಮಲ್ಲಯ್ಯ, ಎಂ. ಶಂಕರಲಿಂಗೇಗೌಡ, ಇನ್ನೂ ಮುಂತಾದ ಗಣ್ಯವ್ಯಕ್ತಿಗಳು ಮಹಾರಾಜರ ಪರವಿದ್ದರೂ ಸಮಾಜ ಕಲ್ಯಾಣಕ್ಕಾಗಿ ದುಡಿಯುತ್ತಿದ್ದರು. ಸಮಾಜದ ಕಷ್ಟ ಸುಖಗಳನ್ನು ಮಹಾರಾಜರಿಗೆ ತಿಳಿಸಿ ಸಮಾಜ ಮತ್ತು ಸರ್ಕಾರದ ನಡುವೆ ಸೇತುವೆಯಂತೆ ಕೆಲಸ ಮಾಡುತ್ತಿದ್ದರು. ಅಂತಹವರಲ್ಲಿ ಒಬ್ಬ ಮೇರು ವ್ಯಕ್ತಿ ಎಂದರೆ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಎಂ.ಸಿ. ಲಿಂಗೇಗೌಡರವರು.

ಶ್ರೀ ಎಂ.ಸಿ. ಲಿಂಗೇಗೌಡರವರು 15 ಆಗಸ್ಟ್ 1885ರಲ್ಲಿ ಚನ್ನಬೋರೇಗೌಡ ಮತ್ತು ಶ್ರೀಮತಿ ಚನ್ನಂಕಮ್ಮ ದಂಪತಿಗಳಿಗೆ ಜನಿಸಿದರು. ಇವರ ತಂದೆ ಮಂಡ್ಯ ಜಿಲ್ಲೆ ಮದ್ದೂರಿನಲ್ಲಿ ದೊಡ್ಡ ಜಮೀನ್ದಾರರು. ಇವರು ಮದ್ದೂರು, ಚನ್ನಪಟ್ಟಣ ಮತ್ತು ಬೆಂಗಳೂರಿನಲ್ಲಿ ವ್ಯಾಸಂಗ ಮುಗಿಸಿದರು. ಹಣಕಾಸಿಗೆ ಕೊರತೆಯಿರಲಿಲ್ಲ. ಹಣ ಸಂಪಾದಿಸುವ ಉದ್ದೇಶವೂ ಅವರಿಗಿರಲಿಲ್ಲ. ಸಮಾಜ ಸೇವೆ ಮಾಡಲು ಅವರ ಮನಸ್ಸು ತುಡಿಯುತ್ತಿತ್ತು. ಅಂದು ಸರ್ಕಾರಕ್ಕೆ ಸಾಕಷ್ಟು ಕಂದಾಯವನ್ನು ವಂತಿಗೆಗಳನ್ನು ಕಟ್ಟುತ್ತಿದ್ದುದೆ ಅಲ್ಲದೆ ಸುತ್ತಿನ ತುಂಬೆಲ್ಲ ಸಂಭಾವಿತ ವ್ಯಕ್ತಿ ಎನಿಸಿಕೊಂಡಿದ್ದರು. ಇದರಿಂದಾಗಿ ಮೈಸೂರು ಪ್ರಜಾಪ್ರತಿನಿಧಿ ಸಭಾಸದರಾಗಲು ಕಷ್ಟವಾಗಲಿಲ್ಲ.

ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಲಿಂಗೇಗೌಡರು

ಈಗಾಗಲೇ ತಿಳಿಸಿರುವಂತೆ ಮದ್ದೂರಿನ ಶ್ರೀ ಚನ್ನ ಬೋರೇಗೌಡರು ಜಮಿನ್ದಾರರಾಗಿದ್ದು ಅಂದಿನ ಸರ್ಕಾರಕ್ಕೆ ಕಂದಾಯ ಮತ್ತು ವಂತಿಗೆಗಳನ್ನು ಕಟ್ಟುತ್ತಿದ್ದುದೇ ಅಲ್ಲದೆ ಸಂಭಾವಿತ ವ್ಯಕ್ತಿಯಾಗಿದ್ದರು. ಅವರ ಕಾಲಾನಂತರ ಶ್ರೀ ಎಂ.ಸಿ. ಲಿಂಗೇಗೌಡರು ಸುಶಿಕ್ಷಿತರಾಗಿ ತಂದೆಯವರ ವೃತ್ತಿಯನ್ನೇ ಮುಂದುವರಿಸಿದರು. 1922–23ರ ಸಾಲಿನಲ್ಲಿ ನಿರ್ಬಂಧಿತ ಮತದಾನದಲ್ಲಿ ಚುನಾಯಿತರಾದರು (ನಿರ್ಬಂಧಿತ ಮತದಾನವೆಂದರೆ ಸಭಾಭವನಕ್ಕೆ ಖಾತೇದಾರರನ್ನು ಕರೆಸಿ, ಅವರ ಒಪ್ಪಿಗೆ ಕೇಳುವುದು) ಅಲ್ಲಿಂದ 1947ರವರೆವಿಗೂ ಮೈಸೂರು ಪ್ರಜಾಪ್ರತಿನಿಧಿ ಸಭಾ ಸದರಾದರು. ಆಳರಸರ ಪರವಾಗಿದ್ದರೂ ಜನ ಸಾಮಾನ್ಯರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುತ್ತಿದ್ದರು. ಶ್ರೀ ಎಂ.ಸಿ. ಲಿಂಗೇಗೌಡರು ಮತ್ತು ಎಸ್.ಸಿ. ಮಲ್ಲಯ್ಯನವರು ಒಂದೇ ತಾಲ್ಲೂಕಿನವರು, ತುಂಬಾ ಆತ್ಮೀಯರಷ್ಟೇ ಅಲ್ಲ ದೂರದ ನಂಟಸ್ತಿಕೆಯೂ ಅವರನ್ನು ಕೊನೆಯ ತನಕ ಒಗ್ಗೂಡಿಸಿತ್ತು. ದೇಹ ಬೇರೆಯಾಗಿದ್ದರೂ ಮನಸ್ಸು, ಆಲೋಚನೆ ಒಂದೇ ಆಗಿತ್ತು.

ಶ್ರೀ ಎಂ.ಸಿ. ಲಿಂಗೇಗೌಡರು ಹಾಗೂ ಅವರ ಆಪ್ತಮಿತ್ರರಾದ ಎಸ್.ಸಿ. ಮಲ್ಲಯ್ಯನವರು ಸೇರಿ ಮೈಸೂರು ಜಿಲ್ಲೆಯಿಂದ ಮಂಡ್ಯವನ್ನು ಪ್ರತ್ಯೇಕಿಸಬೇಕೆಂದು ಒತ್ತಾಯಿಸತೊಡಗಿದರು. ಈ ವಿಷಯದಲ್ಲಿ ಹಲವಾರು ವಿರೋಧಗಳು ಬಂದರೂ ಅದನ್ನು ಲೆಕ್ಕಿಸದೆ ಮಂಡ್ಯಕ್ಕೆ ಪ್ರತ್ಯೇಕ ಜಿಲ್ಲೆಯ ಸ್ಥಾನಮಾನ ನೀಡಬೇಕೆಂದು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಅಂದಿನ ಸರ್ಕಾರಕ್ಕೆ ಒತ್ತಾಯಿಸಲಾಗಿ 1938–39ರಲ್ಲಿ ಮಂಡ್ಯ ಜಿಲ್ಲೆಯನ್ನು ವಿದ್ಯುಕ್ತವಾಗಿ ಪ್ರತ್ಯೇಕಿಸಲಾಯಿತು.

ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಪಕ್ಷ ತಲೆ ಎತ್ತಿದಾಗ ಬ್ರಾಹ್ಮಣರಿಂದಲೇ ತುಂಬಿತ್ತು. ಅಸಮಾಧಾನಗೊಂಡ ಬ್ರಾಹ್ಮಣೇತರರು ಹೆಚ್. ಚನ್ನಯ್ಯನವರ ನೇತೃತ್ವದಲ್ಲಿ ಪ್ರಜಾಮಿತ್ರ ಮಂಡಳಿ ಸ್ಥಾಪಿಸಿದರು. ನಂತರ ಪ್ರಜಾಪಕ್ಷ ಸ್ಥಾಪಿಸಿದರು.

ಈ ಮೇಲ್ಕಂಡ ಎರಡು ಪಕ್ಷಗಳಲ್ಲೂ ಶ್ರೀ ಎಂ.ಸಿ. ಲಿಂಗೇಗೌಡರು ಮತ್ತು ಎಸ್. ಸಿ. ಮಲ್ಲಯ್ಯನವರು ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡರು. 1937–38ರಲ್ಲಿ ಪ್ರಜಾಪಕ್ಷವನ್ನು ಕಾಂಗ್ರೆಸ್‌ನೊಂದಿಗೆ ವಿಲೀನಗೊಳಿಸಿದಾಗ ಈ ಮೇಲ್ಕಂಡ ಇಬ್ಬರು ನಾಯಕರು ಪ್ರಜಾಪಕ್ಷದಲ್ಲೇ ಮುಂದುವರಿದರು.

ಶ್ರೀ ಎಂ.ಸಿ. ಲಿಂಗೇಗೌಡರು ಕೃಷಿ ಹಾಗೂ ರೈತರ ಬಗ್ಗೆ ತುಂಬು ಕಾಳಜಿಯನ್ನು ಹೊಂದಿದ್ದು ಪ್ರಜಾಪ್ರತಿನಿಧಿ ಸಭೆಯಲ್ಲಿ ರೈತರ ಪರವಾಗಿ ಸರ್ಕಾರವನ್ನು ಪ್ರಶ್ನಿಸುತ್ತಿದ್ದರು. ಒಮ್ಮೆ ಹಲವಾರು ಕೆರೆಗಳು ಒಡೆದು ಹೋಗಿ ಅವುಗಳನ್ನು ಸರ್ಕಾರ ದುರಸ್ತಿಪಡಿಸದೆ ರೈತರಿಗೆ ಅನಾನುಕೂಲವಾಗಿತ್ತು. 1924ರ ಅಧಿವೇಶನದಲ್ಲಿ ಸಭೆ ಪ್ರಶ್ನೋತ್ತರ ವೇಳೆಯಲ್ಲಿ ಅಧಿಕಾರಿಗಳಿಗೆ ಈ ವಿಷಯವನ್ನು ಗಮನಕ್ಕೆ ತಂದು ಕಾರ್ಯಪ್ರವೃತ್ತರಾಗುವಂತೆ ಮಾಡಿದರು.

ಈಗಾಗಲೇ ತಿಳಿಸಿರುವಂತೆ ಮಂಡ್ಯ ಜಿಲ್ಲೆಯು ಕಾವೇರಿ ತಾಣವಾಗಿದೆ. ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಸರ್ ಎಂ. ವಿಶ್ವೇಶ್ವರಯ್ಯನವರಿಂದಾಗಿ ರೈತರು ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಮತ್ತು ಭತ್ತ ಬೆಳೆಯಲು ಪ್ರಾರಂಭಿಸಿದರು. ಭತ್ತಕ್ಕೆ ಮಾರುಕಟ್ಟೆಯ ಸಮಸ್ಯೆಯಾಗಲಿಲ್ಲ. ಆದರೆ ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆ ಇಲ್ಲದೆ ಸಮಸ್ಯೆಯಾಯಿತು. ಆ ಸಮಸ್ಯೆಯನ್ನು ನೀಗಿಸಲು ಶ್ರೀ ಎಂ.ಸಿ. ಲಿಂಗೇಗೌಡರು ಮತ್ತು ಎಸ್.ಸಿ. ಮಲ್ಲಯ್ಯನವರು ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಅಂದಿನ ಸರ್ಕಾರಕ್ಕೆ ಒತ್ತಾಯಿಸುತ್ತಾ ಬಂದರು. ಅಂದಿನ ವ್ಯವಸಾಯ ಇಲಾಖೆಯ ನಿರ್ದೇಶಕರಾಗಿದ್ದ ಡಾ. ಲೆಸ್ಲಿಕೋಲ್‌ಮನ್–ರವರನ್ನು ಸರ್ಕಾರ ಕಾರ್ಖಾನೆ ಸ್ಥಾಪಿಸಲು ಯೋಜನೆ ಸಿದ್ಧಪಡಿಸುವಂತೆ ಆಜ್ಞಾಪಿಸಿದ ಫಲವಾಗಿ ಮಂಡ್ಯ ಸಹಕಾರ ಸಕ್ಕರೆ ಕಾರ್ಖಾನೆ ಸ್ಥಾಪನೆಗೊಂಡಿತು.

ಮೈಸೂರಿನ ರೈಲ್ವೆ ಪ್ಲಾಟ್‌ಫಾರಂ ವಿಸ್ತರಣೆಯ ವಿಚಾರವಾಗಿರಲಿ, ರೈಲ್ವೆ ಪ್ರಯಾಣಿಕರ ಸೌಲಭ್ಯದ ವಿಚಾರವಾಗಿರಲಿ ಈ ಎಲ್ಲಾ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದು ಜನಗಳಿಗೆ ಸರ್ಕಾರದಿಂದ ಅನುಕೂಲ ಮಾಡಿಕೊಡುವ ಪ್ರಯತ್ನ ಮಾಡುತ್ತಿದ್ದರು. ಶ್ರೀ ಎಂ.ಸಿ. ಲಿಂಗೇಗೌಡರು ಮಹಾರಾಜರ ಪರವಹಿಸಿದ ಮಾತ್ರಕ್ಕೆ ಅಂದಿನ ದಿವಾನರನ್ನೂ, ಅಧಿಕಾರಿಗಳು ತಪ್ಪು ಮಾಡಿದಾಗ, ಜನಗಳಿಗೆ ಮೋಸಮಾಡಿದಾಗ, ಅವರನ್ನೂ ತರಾಟೆಗೆ ತೆಗೆದುಕೊಂಡು ನಡೆಯುತ್ತಿರುವ ಅನ್ಯಾಯಗಳನ್ನು ಸರ್ಕಾರಕ್ಕೆ ಎಂದರೆ ಮಹಾರಾಜರ ಗಮನಕ್ಕೆ ತರುತ್ತಿದ್ದರು. ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಉದಾಹರಣೆ ಕೊಡಬೇಕೆಂದರೆ – 1929ರ ಪ್ರಜಾಪ್ರತಿನಿಧಿ ಸಭೆಯಲ್ಲಿ ಜಿಲ್ಲಾ ಕಛೇರಿ ಶಿರಸ್ತೇದಾರರು, ತಾಲ್ಲೂಕು ಕಛೇರಿ ಶಿರಸ್ತೇದಾರರಲ್ಲಿ ಎಷ್ಟು ಮಂದಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಸೇವೆ

ಸಲ್ಲಿಸುತ್ತಿದ್ದಾರೆ ಎಂಬ ಅಂಕಿ ಅಂಶಗಳನ್ನು ನೀಡಬೇಕೆಂದು ಮೇಲಾಧಿಕಾರಿಗಳನ್ನು ಪ್ರಶ್ನಿಸಿದರು. ಶ್ರೀ ಎಂ.ಸಿ. ಲಿಂಗೇಗೌಡರು ಮತ್ತು ಎಸ್.ಸಿ. ಮಲ್ಲಯ್ಯನವರು ಕೇಳಿದ ಪ್ರಶ್ನೆಗೆ ಆನಂತರದ ಸಭೆಯಲ್ಲಿ ಅಂಕಿ ಅಂಶವನ್ನು ನೀಡಲಾಗಿ, ಅವರಲ್ಲಿ ಬಹಳಷ್ಟು ಮಂದಿ ಬ್ರಾಹ್ಮಣರು ಸರ್ಕಾರಿ ಹುದ್ದೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು ಬಯಲಾಯಿತು. ಹೀಗೆ ಶ್ರೀ ಎಂ.ಸಿ. ಲಿಂಗೇಗೌಡರು ಮತ್ತು ಎಸ್.ಸಿ. ಮಲ್ಲಯ್ಯನವರು ಮಹಾರಾಜರ ಪರವಾಗಿದ್ದು ಜನತೆಗೆ ಅನ್ಯಾಯವಾದಾಗಲೆಲ್ಲಾ ಪ್ರತಿಭಟಿಸುತ್ತಿದ್ದರು.

ಒಕ್ಕಲಿಗರ ಸಂಘ ಮತ್ತು ಲಿಂಗೇಗೌಡರು

ಇಂದಿಗೆ 75–80ವರ್ಷಗಳ ಹಿಂದೆ ಇಂದಿನಷ್ಟು ಎತ್ತರಕ್ಕೆ ಒಕ್ಕಲಿಗರ ಸಂಘ ಬೆಳೆದಿರಲಿಲ್ಲ. ಇನ್ನೂ ಶೈಶವಾವಸ್ಥೆಯಲ್ಲಿತ್ತೆಂದರೆ ತಪ್ಪಾಗಲಾರದು. ಸಂಘದ ಪದಾಧಿಕಾರಿಗಳಾಗಿ ಸಾಮಾನ್ಯವಾಗಿ ಜನಾಂಗದ ಮೇರು ವ್ಯಕ್ತಿಗಳು ಮಾತ್ರ ಆಯ್ಕೆಯಾಗುತ್ತಿದ್ದರು. ಜನಾಂಗದ ಸೇವೆ ಮಾಡಬೇಕೆಂದರೆ ಒಕ್ಕಲಿಗರ ಸಂಘದಲ್ಲಿದ್ದು ಸೇವೆ ಮಾಡಬೇಕೆಂದು ನಂಬಿದ್ದ ಕಾಲವೊಂದಿತ್ತು. ಈಗಾಗಲೇ ಲಿಂಗೇಗೌಡರು ಮೈಸೂರು ಪ್ರಜಾಪ್ರತಿನಿಧಿ ಸಭಾಸದರಾಗಿ ಸಾಕಷ್ಟು ಕೀರ್ತಿಗಳಿಸಿದ್ದರು. ಇಷ್ಟೇ ಅಲ್ಲದೆ ಮಹಾರಾಜರೊಡನೆ ಸ್ನೇಹ ಸಲುಗೆಯಿಂದ ಮಾತನಾಡುತ್ತಿದ್ದ ವ್ಯಕ್ತಿಯೂ ಆಗಿದ್ದರು. ಸರ್ಕಾರದಿಂದ ಸಂಘಕ್ಕೆ ಅನುಕೂಲವಾಗುವುದೆಂಬ ಆಸೆಯಿಂದ ಸಂಘವು ಲಿಂಗೇಗೌಡರನ್ನು ಕಾರ್ಯದರ್ಶಿಯಾಗಲು ಆಹ್ವಾನಿಸಿತೆಂದರೆ ತಪ್ಪಾಗಲಾರದು. 1928–34 ಈ ಐದುವರ್ಷಗಳ ಕಾಲ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ, 1943–47 ಸುಮಾರು ನಾಲ್ಕು ವರ್ಷಗಳ ಕಾಲ ಸಂಘದ ಉಪಾಧ್ಯಕ್ಷರಾಗಿ, 1958–63 ಸುಮಾರು ಐದು ವರ್ಷಗಳ ಕಾಲ ಸಂಘದ ಅಧ್ಯಕ್ಷರಾಗಿ ದುಡಿದರು. ಹೀಗೆ ಶ್ರೀಯುತರು ಒಟ್ಟು 30–35 ವರ್ಷಗಳ ಕಾಲ ರಾಜ್ಯ ಒಕ್ಕಲಿಗರ ಸಂಘದೊಂದಿಗೆ ಅವಿನಾಭಾವ ಸಂಬಂಧವನ್ನು ಪಡೆದಿದ್ದರು. ಈ ವೇಳೆಯಲ್ಲಿ ಸಂಘವು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಿತು. ಇವರ ನಂತರ ಸಂಘದ ಅಧ್ಯಕ್ಷರಾಗಿ ಬಂದ ಮದ್ದೂರಿನವರೇ ಆದ ಶ್ರೀ ಹೆಚ್.ಕೆ. ವೀರಣ್ಣಗೌಡರು, ಶ್ರೀ ಎಂ.ಸಿ. ಲಿಂಗೇಗೌಡರು ಹಾಕಿಕೊಟ್ಟ ದಾರಿಯಲ್ಲೇ ನಡೆದರು. ದೀನದಲಿತರ ಹಾಗೂ ಹಿಂದುಳಿದ ಜನರ ಬಗ್ಗೆ ತುಂಬು ಕಾಳಜಿಯಿದ್ದ ಲಿಂಗೇಗೌಡರು ಎಲ್ಲರಿಗೂ ಶಿಕ್ಷಣ, ಉದ್ಯೋಗ ಕೊಡಿಸಲು ಶ್ರಮಿಸುತ್ತಿದ್ದರು.

ಆದಿಚುಂಚನಗಿರಿ ಮಠ ಮತ್ತು ಲಿಂಗೇಗೌಡರು

ಲಿಂಗೇಗೌಡರು ಈಗಾಗಲೇ ತಿಳಿಸಿರುವಂತೆ ಸಮಾಜದ ಬಗ್ಗೆ ತುಂಬು ಕಾಳಜಿಯನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ಇಂದಿಗೆ 75–80 ವರ್ಷಗಳ ಹಿಂದೆ

ಆದಿಚುಂಚನಗಿರಿಯ ಶ್ರೀಕ್ಷೇತ್ರವು ಇಂದಿನಂತೆ ಬಲಿಷ್ಠ ಮಠವಾಗಿರಲಿಲ್ಲ. ಸಾಕಷ್ಟು ವರ್ಷಗಳ ಕಾಲ ಏಳು ಬೀಳಿನಿಂದ ಕೂಡಿ ನಡೆದಿತ್ತು. ಒಮ್ಮೆ ಗುರುಮಠವು ಸಂದಿಗ್ಧಕ್ಕೆ ಸಿಕ್ಕಿದಾಗ ಜನಾಂಗದ ಕುಲಪುತ್ರರಾದ ಶ್ರೀ ಕೆ.ಹೆಚ್. ರಾಮಯ್ಯ, ಹೆಚ್.ಕೆ. ವೀರಣ್ಣಗೌಡರು, ಜಸ್ಟೀಸ್ ಹೊಂಬೇಗೌಡರು ಅದರಲ್ಲೂ ವಿಶೇಷವಾಗಿ ಎಂ.ಸಿ. ಲಿಂಗೇಗೌಡರು ಚಾಕಚಕ್ಯತೆಯಿಂದ ಅಂದಿನ ಗಂಭೀರ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಿದರು ಎಂಬುದನ್ನು ಶ್ರೀ ಹೆಚ್.ಕೆ. ವೀರಣ್ಣಗೌಡರು 'ಬದುಕು ಮೆಲುಕು' ಎಂಬ ಕೃತಿಯಲ್ಲಿ ಬರೆದಿರುವುದನ್ನು ಇಲ್ಲಿ ನಾನು ಉದಾಹರಿಸುವುದು ಸೂಕ್ತವೆಂದು ಭಾವಿಸಿದ್ದೇನೆ. ಅದೇನೆಂದರೆ – "ಆದಿಚುಂಚನಗಿರಿ ಮಠವು ಐವತ್ತು ವರ್ಷಗಳ ಹಿಂದೆ ಕಾಪಾಲಿಗಳ ವಶವಾಗಿದ್ದು ಸ್ವಾಮಿಗಳು ಅಕಾಲಿಕ ಮರಣಹೊಂದಿದರು. ಆದರೆ ಅವರು ತಮ್ಮ ಉತ್ತರಾಧಿಕಾರಿಯನ್ನು ನೇಮಿಸಿರಲಿಲ್ಲ. ಅವರು ಲಿಂಗೈಕ್ಯರಾಗುವ ಮುನ್ನ ಇದು ಒಕ್ಕಲಿಗರ ಮಠ, ಒಕ್ಕಲಿಗರೇ ಈ ಮಠದ ಅಯ್ಯನವರನ್ನು ಆರಿಸಿಕೊಳ್ಳಲಿ" ಎಂದು ಹೇಳಿ ಬಿಟ್ಟರಂತೆ. ಈ ವಿಷಯ ಎಂ.ಸಿ. ಲಿಂಗೇಗೌಡರ ಕಿವಿಗೆ ಬೀಳಲಾಗಿ ಅವರು ಕಾರ್ಯೋನ್ಮುಖರಾಗಿ ಕೆ.ಹೆಚ್. ರಾಮಯ್ಯ, ಎಂ.ಸಿ. ಲಿಂಗೇಗೌಡ, ಹೆಚ್.ಕೆ. ವೀರಣ್ಣಗೌಡರು ಪ್ರಯತ್ನ ಮಾಡಿ ಫಲಪ್ರದರಾದರು. ಶ್ರೀ ಎಂ.ಸಿ. ಲಿಂಗೇಗೌಡರ ಸಮಯಪ್ರಜ್ಞೆ ಚತುರತೆಯನ್ನು ಮೆಚ್ಚಿದ ಭಕ್ತಾದಿಗಳು ಹಾಗೂ ಶ್ರೀ ಮಠವು 'ಗುರುಭಕ್ತ ತಿಲಕ' ಎಂಬ ಬಿರುದನ್ನು ದಯಪಾಲಿಸಿತು. (ಬದುಕು ಮೆಲುಕು – ಹೆಚ್.ಕೆ. ವೀರಣ್ಣಗೌಡ, ಬೆಂಗಳೂರು, 2006, ಪು.298)

ಎಂ.ಸಿ. ಲಿಂಗೇಗೌಡರ ಮಕ್ಕಳಾದ ಎಂ.ಎಲ್. ಚಂದ್ರಶೇಖರ್‌ರವರು ಬೆಂಗಳೂರು ಪೊಲೀಸ್ ಆಯುಕ್ತರಾಗಿ ನಂತರ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರಾಗಿ ಆಯೋಗದಲ್ಲಿ ಭ್ರಷ್ಟಾಚಾರವನ್ನು ತೊಲಗಿಸಿ ಪಾರದರ್ಶಕತೆಯನ್ನು ತಂದು ಹೆಸರು ಮಾಡಿದರು. ಎಂ.ಸಿ. ಲಿಂಗೇಗೌಡರ ಮತ್ತೊಬ್ಬ ಮಗ ಎಂ.ಎಲ್. ಗಂಗಾಧರ್‌ರವರು ನ್ಯಾಯವಾದಿಗಳಾಗಿ ರಾಜ್ಯ ಒಕ್ಕಲಿಗರ ಸಂಘದ ಕಾರ್ಯದರ್ಶಿಯಾಗಿ ನಿಷ್ಠೆಯಿಂದ ಸೇವೆ ಸಲ್ಲಿಸಿದರು. ಮಂಡ್ಯ ಹಾಗೂ ಮದ್ದೂರಿನಿಂದ ಬರುವ ನಮ್ಮ ಸಮುದಾಯದ ನಿರುದ್ಯೋಗಿಗಳಿಗೆ ಉದ್ಯೋಗ ಕೊಡಿಸಲು ತಮ್ಮ ಹಳೇಸ್ಕೂಟರಿನಲ್ಲಿ ಅವರನ್ನು ಕೂರಿಸಿಕೊಂಡು ಕೆ.ಪಿ.ಎಸ್.ಸಿ. ಸದಸ್ಯರ ಮನೆಗೆ ಕರೆದುಕೊಂಡು ಹೋಗಿ ಸಹಾಯ ಮಾಡಿರೆಂದು ಅವರ ಪರವಾಗಿ ಅಂಗಲಾಡುತ್ತಿದ್ದುದುಕ್ಕೆ ನಾನೇ ಸಾಕ್ಷಿ. ಇಂದು ಮಲ್ಲಿಕಾರ್ಜುನರವರು ಅಪರೂಪದಲ್ಲಿ ಅಪರೂಪದ ವ್ಯಕ್ತಿಯಾಗಿದ್ದಾರೆ.

ಹೀಗೆ ಎಂ.ಸಿ. ಲಿಂಗೇಗೌಡರು ಮಹಾರಾಜರ ಪರವಾಗಿದ್ದರೂ ಕೂಡ ಜನಪರ ಕಾರ್ಯಗಳನ್ನು ಮಾಡಿ ಇಡೀ ನಾಡಿನಾದ್ಯಂತ ಹೆಸರುವಾಸಿಯಾಗಿದ್ದರು.

ಶ್ರೀ ಹೆಚ್.ಕೆ. ವೀರಣ್ಣಗೌಡ



ಈ ನಾಡು ಕಂಡ ಬಹುಮುಖ ಪ್ರತಿಭೆಯ ಹಳೆಯ ತಲೆಮಾರಿನ ಹೆಸರಾಂತ ವ್ಯಕ್ತಿ ಎಂದರೆ, ಹೆಚ್.ಕೆ. ವೀರಣ್ಣಗೌಡ ವಿದ್ಯಾರ್ಥಿ ದೆಸೆಯಲ್ಲಿ ಇರು –ವಾಗಲೇ ನಾಯಕನ ಗುಣಗಳನ್ನು ಗಳಿಸಿಕೊಂಡರು. ಶಾಲಾಮಾಸ್ತರಗಿ, ಪತ್ರಿಕಾ ಸಂಪಾದಕರಾಗಿ, ಒಕ್ಕಲಿಗರ ಸಂಘದ ಪದಾಧಿಕಾರಿಯಾಗಿ, ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಜಾಪ್ರತಿನಿಧಿ ಸಭಾಸದರಾಗಿ, ಸ್ವಾತಂತ್ರ್ಯ ಹೋರಾಟ –ಗಾರರಾಗಿ, ಸ್ವಾತಂತ್ರ್ಯಾ ನಂತರ ಶಾಸಕರಾಗಿ, ಮಂತ್ರಿಯಾಗಿ ಸೇವೆ ಸಲ್ಲಿಸಿದ ಮಹಾನ್ ವ್ಯಕ್ತಿ.

ಚನ್ನಪಟ್ಟಣ ತಾಲ್ಲೂಕು ಅವ್ವೇರಹಳ್ಳಿಯಲ್ಲಿ 1.5.1899ರಲ್ಲಿ ಪಟೇಲ್ ಕೆಂಚೇಗೌಡ ಮತ್ತು ಕೆಂಪಮ್ಮ ದಂಪತಿಗಳ ಜ್ಯೇಷ್ಠಪುತ್ರರಾಗಿ ಜನಿಸಿದರು. ಇವರ ಪೂರ್ವಿಕರಾದ ಹೋಬಳಿ ವೀರಣ್ಣಗೌಡರು ಅಂದಿನ ಕಾಲದಲ್ಲಿ ಹೆಸರಾಂತ ವ್ಯಕ್ತಿಯಾಗಿದ್ದರು. ಪ್ರಾಥಮಿಕ ಶಿಕ್ಷಣವನ್ನು ತಮ್ಮ ಹುಟ್ಟೂರಾದ ಅವ್ವೇರಹಳ್ಳಿ, ಅಕ್ಕೂರು, ಚನ್ನಪಟ್ಟಣಗಳಲ್ಲಿ ಮುಗಿಸಿದರು. ಇವರಿಗೆ ಸಮಾಜದ ಕಳಕಳಿ ಹಾಗೂ ಜನಾಂಗದ ಬಗ್ಗೆ ತುಂಬು ಅಭಿಮಾನವಿದ್ದಿತು. ತಮ್ಮ ತಾಲ್ಲೂಕಿನವರು ಹಾಗೂ ಗೆಳೆಯರೇ ಆದ ವಿ. ವೆಂಕಟಪ್ಪನವರ ಜೊತೆಗೂಡಿ ಚನ್ನಪಟ್ಟಣದಲ್ಲಿ ಒಕ್ಕಲಿಗರ ವಿದ್ಯಾರ್ಥಿಸಂಘ ಮತ್ತು ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿದರು. ಸ್ಕೌಟ್ ಮತ್ತು ಸೇವಾದಳದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಬಾಲ್ಯದಲ್ಲಿರುವಾಗಲೇ, ಅವರ ತಂದೆಯವರು ಕೆಲವು ಹೆಸರಾಂತ ಪತ್ರಿಕೆಗಳನ್ನು ತರಿಸಿಕೊಳ್ಳುತ್ತಿದ್ದರು. ಕರ್ನಾಟಕ ದ್ವೈಮಾಸಿಕ ಎಂಬ ಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡಿ ಅನುಭವಗಳಿಸಿಕೊಂಡರು. ಮೈಸೂರಿನಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಪಡೆಯುತ್ತಿರುವಾಗ ವಿದ್ಯಾರ್ಥಿನಾಯಕರಾಗಿ ಮೇಲೆ ಬಂದು ಕೆಲವು ಸ್ವಾತಂತ್ರ್ಯ ಹೋರಾಟಗಾರರ ಸಂಪರ್ಕ ಪಡೆದುಕೊಂಡುದರ ಫಲವಾಗಿ ಕ್ರಾಂತಿಕಾರಿ ಸ್ವಭಾವದವರಾದರು. ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆ (ಯೂನಿವರ್ಸಿಟಿ ಎಂಟ್ರೆನ್ಸ್ ಎಕ್ಸಾಮಿನೇಷನ್)ನಲ್ಲಿ ಅನುತ್ತೀರ್ಣರಾದರು. ಬೆಂಗಳೂರಿನ ವೆಸ್ಲಿಯನ್ ಮಿಷನ್ ಕೂಲಿಯಟ್ ಹೈಸ್ಕೂಲ್‌ನಲ್ಲಿ ವ್ಯಾಸಂಗ ಮಾಡಲು ಸೇರಿದರು. ಒಕ್ಕಲಿಗರ ಸಂಘದಲ್ಲಿ ವಾಸ್ತವ್ಯ ಹೂಡಿದರು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿ ಆಯ್ಕೆಯಾಗುವ ಮೂಲಕ ಮತ್ತೆ ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ರಾಜಕೀಯಕ್ಕಿಳಿದ ಫಲವಾಗಿ ಮತ್ತೆ ಪರೀಕ್ಷೆಯಲ್ಲಿ ಅನುತ್ತೀರ್ಣರಾದರು.

ಪತ್ರಿಕಾ ಸಂಪಾದಕರಾಗಿ ಹಾಗೂ ಒಕ್ಕಲಿಗರ ಸಂಘದ ಪದಾಧಿಕಾರಿಯಾಗಿ

ಪತ್ರಿಕೆಗಳಿಗೆ ಬರೆಯುವ ಅಭ್ಯಾಸವಿದ್ದ ಗೌಡರು, ಒಕ್ಕಲಿಗರ ಪತ್ರಿಕೆಯ ಸಂಪಾದಕ ಹುದ್ದೆಗಾಗಿ ಸಂದರ್ಶನ ಕರೆದಾಗ ಅದನ್ನು ಸುಲಭವಾಗಿ ಗಳಿಸಿದರು. 1927ರಂದು ಒಕ್ಕಲಿಗರ ಪತ್ರಿಕೆಯ ಸಂಪಾದಕರಾಗಿ ಪತ್ರಿಕೆಯನ್ನು ಜನಪ್ರಿಯಗೊಳಿಸಿದರು. 1928ರಲ್ಲಿ ವಾರ್ಷಿಕ ವಿಶೇಷಸಂಚಿಕೆ ಎಂಬ ಸಂಚಿಕೆಯನ್ನು ಹೊರತಂದು ಪತ್ರಿಕಾರಂಗದಲ್ಲಿ ದಾಖಲೆ ಸ್ಥಾಪಿಸಿದರು. ಅದು ಬಹುಶಃ ರಾಜ್ಯದ ಪ್ರಪ್ರಥಮ ವಿಶೇಷ ಸಂಚಿಕೆ ಎಂದು ಹೇಳಬಹುದು. ಬಲು ನಿಷ್ಠುರಮತಿಯಾದ ಗೌಡರು ಒಕ್ಕಲಿಗರ ಪತ್ರಿಕೆಯನ್ನು ತೊರೆದು ತಾವೇ 'ಚಿತ್ರಗುಪ್ತ ಪತ್ರಿಕೆ' ಎಂಬ ಪತ್ರಿಕೆಯನ್ನು ಹೊರತಂದರು. ಅಂದಿನ ಆಳರಸ ಸರ್ಕಾರಕ್ಕೆ ಬಿಸಿ ಮುಟ್ಟಿಸುತ್ತಿದ್ದರು. ಪತ್ರಿಕೆಯಿಂದ ಲಾಭಗಳಿಸುವುದಿರಲಿ, ಸಾಕಷ್ಟು ಕಷ್ಟ ನಷ್ಟ ಅನುಭವಿಸಿದರು. ಆದರೆ ವೀರಣ್ಣಗೌಡರು ಪತ್ರಕರ್ತರಾಗಿದ್ದರಿಂದ ರಾಜ್ಯ ರಾಜಕೀಯದ ಒಳಹೊರಗನ್ನು ಅರ್ಥಮಾಡಿಕೊಂಡರು. ಅದೇ ರೀತಿ ರಾಜ್ಯ ರಾಜಕೀಯದ ಮೇರು ವ್ಯಕ್ತಿಗಳು, ದಿವಾನರು, ಒಡೆಯರಿಗೂ ವೀರಣ್ಣಗೌಡರು ಯಾರೆಂದು ತಿಳಿಯಿತು.

ವಿವಾಹ

ಅಂದು ವೀರಣ್ಣಗೌಡರ ಜನಪ್ರಿಯತೆ ಎಷ್ಟಿತ್ತೆಂದರೆ ಸ್ವಾತಂತ್ರ್ಯ ಹೋರಾಟಗಾರ್ತಿ ಕಮಲಾದೇವಿ ಚಟ್ಟೋಪಾಧ್ಯಾಯ (ವಿವಾಹಕ್ಕೆ ಮೊದಲು ಕುಮಾರಿ ಕಮಲಾದೇವಿ) ರವರು ವೀರಣ್ಣಗೌಡರನ್ನು ವರಿಸಲು ಮುಂದೆ ಬಂದಿದ್ದರಲ್ಲದೆ, ಜನಾಂಗದ ಪ್ರತಿಷ್ಠಿತ ವ್ಯಕ್ತಿಗಳು ಗೌಡರನ್ನು ತಮ್ಮ ಅಳಿಯನನ್ನಾಗಿ ಮಾಡಿಕೊಳ್ಳಲು ಮುಂದೆ ಬಂದಿದ್ದರು. ಆದರೆ ಇವರೆಲ್ಲರನ್ನೂ ಬಿಟ್ಟು ಮದ್ದೂರಿನ ಜಮೀನ್ದಾರರಾಗಿದ್ದ ಎಂ.ಹೆಚ್. ಚನ್ನೇಗೌಡರ ಪುತ್ರಿ ಬಾಲವಿಧವೆಯಾಗಿದ್ದ ತಾಯಮ್ಮಳನ್ನು 2.3.1931ರಂದು ವಿವಾಹವಾಗುವ ಮೂಲಕ ಎಲ್ಲರೂ ಹುಬ್ಬೇರಿಸುವಂತೆ ಮಾಡಿದರು. ಶ್ರೀಮತಿ ತಾಯಮ್ಮನವರು ತಮ್ಮ ಪತಿಯ ಹೆಜ್ಜೆ ಗುರುತುಗಳನ್ನೇ ಹಿಂಬಾಲಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಇಳಿದರು.

ಇರ್ವಿನ್ ನಾಲಾ ರೈತರ ಹೋರಾಟ

ಬಹುಶಃ ವೀರಣ್ಣಗೌಡರು ನಾಡಿನ ಇತಿಹಾಸದಲ್ಲಿ ದಾಖಲಿಸಿದ ಮಹಾನ್‌ಸಾಧನೆ ಎಂದರೆ ಇರ್ವಿನ್ ನಾಲಾ ರೈತರ ಹೋರಾಟ. (ಹೆಚ್ಚಿನ ವಿವರಗಳಿಗೆ ರೈತ ಚಳವಳಿಗಳು ನೋಡಿ) ಬಹುಶಃ ಸರ್ದಾರ್ ವಲ್ಲಭಬಾಯಿ ಪಟೇಲರು 1922ರಲ್ಲಿ ಮಾಡಿದ ರೈತ ಸತ್ಯಾಗ್ರಹದಂತೆ ಇದೂ ಕೂಡ ನಾಡಿನ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಇದರಿಂದಾಗಿ ಗೌಡರ ಹೆಸರು ರೈತ ಚಳವಳಿಯ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದೆ.

ರಾಜ್ಯ ರಾಜಕೀಯಕ್ಕೆ ಗೌಡರು

ಸಾಲಸೋಲ ಮಾಡಿ ಊರು ಸೇರಿದ್ದ ಗೌಡರನ್ನು ಬೆಂಗಳೂರು ಕೈ ಬೀಸಿ ಕರೆಯಿತು. ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. ನಂತರ ಮೈಸೂರು ಜಿಲ್ಲಾ ಎಜುಕೇಷನ್ ಬೋರ್ಡ್ ಸದಸ್ಯರಾಗಿ, ಮೈಸೂರು ಪ್ರಜಾ ಪ್ರತಿನಿಧಿ ಸಭಾಸದರಾಗಿ, ಮದ್ದೂರು ಪುರಸಭಾ ಸದಸ್ಯರಾಗಿ ನಂತರ, ಅದೇ ಪುರಸಭೆಯ ಉಪಾಧ್ಯಕ್ಷರಾಗಿ, ಆಯ್ಕೆಯಾಗುವ ಮೂಲಕ ತಮ್ಮನ್ನು ಸಂಪೂರ್ಣ ರಾಜಕೀಯಕ್ಕೆ ತೊಡಗಿಸಿಕೊಂಡರು.

ಪ್ರಜಾಪ್ರತಿನಿಧಿ ಸಭೆಯಿಂದ ವಾಕ್‌ಓಟ್

ಆಳರಸರು, ದಿವಾನರು, ಅಧಿಕಾರಿಗಳು, ಗೌರವಾನ್ವಿತ ಹಿರಿಯ ಹಾಗೂ ಕಿರಿಯರಿಂದ ಕೂಡಿದ್ದ ಪ್ರಜಾಪ್ರತಿನಿಧಿ ಸಭೆ ಇಡೀ ಭಾರತದಲ್ಲೇ ಪ್ರತಿಷ್ಠಿತವಾದದ್ದು. ನಾಡಿನಾದ್ಯಂತ ಸ್ವಾತಂತ್ರ್ಯ ಚಳವಳಿ ಉಲ್ಬಣಗೊಂಡಾಗ ಅಂದಿನ ಸರ್ಕಾರವು ಕಾಂಗ್ರೆಸ್ ಆಕ್ಷನ್ ಕಮಿಟಿಯ ಸದಸ್ಯರನ್ನು ಜೈಲಿಗೆ ಕಳುಹಿಸಿದ್ದನ್ನು ಪ್ರತಿಭಟಿಸಿ, ಪ್ರಜಾಪ್ರತಿನಿಧಿ ಸಭೆಯಲ್ಲಿದ್ದ ತೊಂಬತ್ತಕ್ಕೂ ಹೆಚ್ಚು ಸಭಾಸದಸ್ಯರನ್ನು ಪ್ರಚೋದಿಸಿ ಸಭಾತ್ಯಾಗ ಮಾಡುವ ಮೂಲಕ ಮೈಸೂರು ಪ್ರಜಾಪ್ರತಿನಿಧಿಸಭೆಯ ಇತಿಹಾಸದಲ್ಲಿ ಒಂದು ದಾಖಲೆ ನಿರ್ಮಿಸಿದ್ದಾರೆ. (ಹೆಚ್ಚಿನ ವಿವರಗಳಿಗೆ ಸ್ವಾತಂತ್ರ್ಯದಲ್ಲಿ ಒಕ್ಕಲಿಗ ಜನಾಂಗದ ಪಾತ್ರ ನೋಡಿ)

ಶಿವಪುರ ಧ್ವಜಸತ್ಯಾಗ್ರಹ ಚಳವಳಿ

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ರಾಷ್ಟ್ರಕೂಟಸಭೆ ನಡೆಸಲು ಸೂಕ್ತ ಸ್ಥಳಕ್ಕಾಗಿ ಹುಡುಕಾಟ ನಡೆಯಿತು. ಶ್ರೀರಂಗಪಟ್ಟಣದಲ್ಲಿ ನಡೆಸಿ ಕೊಡಲು ಎ.ಜಿ. ಬಂದೀಗೌಡರು ಒಪ್ಪಲಿಲ್ಲ. ಅದೇ ರೀತಿ ನಂಜನಗೂಡಿನಲ್ಲಿ ನಡೆಸಿ ಅದರ ಭಾರ ಹೊರಲು ಶ್ರೀ ವಿಶ್ವೇಶ್ವರಗೌಡರು ಒಪ್ಪದಿದ್ದಾಗ, ಮದ್ದೂರಿನ ಶಿವಪುರದಲ್ಲಿ ಕಾಂಗ್ರೆಸ್ ರಾಷ್ಟ್ರಧ್ವಜ ಹಾರಿಸುವ ಹೊಣೆ ಹೊರಲು ವೀರಣ್ಣಗೌಡರು ಒಪ್ಪಿದರು. ಧ್ವಜ ಸತ್ಯಾಗ್ರಹ ಸಮ್ಮೇಳನಕ್ಕೆ ನಲವತ್ತರಿಂದ ಐವತ್ತು ಸಾವಿರ ಕಾರ್ಯಕರ್ತರನ್ನು ಸೇರಿಸುವ ಉದ್ದೇಶವಿತ್ತು. ಸಾಹುಕಾರ್ ಚನ್ನಯ್ಯನವರು ಕಾರ್ಯಾಧ್ಯಕ್ಷರಾಗಿ, ತಿರುಮಲಗೌಡರು ಉಪಾಧ್ಯಕ್ಷರಾಗಿ, ವೀರಣ್ಣಗೌಡರು ಕಾರ್ಯದರ್ಶಿಯಾಗಿ, ಎ.ಜಿ. ಬಂದೀಗೌಡರು ಜೆ.ಬಿ.ಸಿ. (ಜನರಲ್ ಆಫೀಸರ್ ಕಮಾಂಡಿಂಗ್) ಹೀಗೆ ಇನ್ನೂ ಮುಂತಾದ ಸದಸ್ಯರನ್ನೊಳಗೊಂಡ ಸ್ವಾಗತ ಸಮಿತಿ ಹಾಗೂ ಕಾರ್ಯಪಡೆಯನ್ನು ನೇಮಕ ಮಾಡಿ 10.4.1938ರಲ್ಲಿ ಶಿವಪುರ ಧ್ವಜ ಸತ್ಯಾಗ್ರಹ ನಡೆಯಿತು. (ಹೆಚ್ಚಿನ ವಿವರಗಳಿಗೆ ಸ್ವಾತಂತ್ರ್ಯದಲ್ಲಿ ಒಕ್ಕಲಿಗ ಜನಾಂಗದ ಪಾತ್ರ ನೋಡಿ). ಶಿವಪುರ ಧ್ವಜಸತ್ಯಾಗ್ರಹ ರಾಜ್ಯ ಸ್ವಾತಂತ್ರ್ಯ ಚಳವಳಿಯ ಇತಿಹಾಸದಲ್ಲಿ ಒಂದು

ದಾಖಲೆಯಾಗಿ ಉಳಿದಿದೆ. ಇದರ ರೂವಾರಿಯಾದ ಹೆಚ್.ಕೆ. ವೀರಣ್ಣಗೌಡರು ಇದರ ಯಶಸ್ಸಿಗೆ ಭಾಜನರಾಗಿದ್ದಾರೆ.

ಅರಮನೆ ಚಳವಳಿ ಅಥವಾ ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯ

ಸ್ವಾತಂತ್ರ್ಯ ಚಳವಳಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ ಗೌಡರು ಕೆ.ಸಿ. ರೆಡ್ಡಿಯವರ ನೇತೃತ್ವದ ಕೆ.ಜಿ.ಎಫ್.ನಲ್ಲಿ ಬಹಿರಂಗ ಸಭೆಯನ್ನೇರ್ಪಡಿಸಿದಾಗ, ಶಿವಪುರ ಧ್ವಜಸತ್ಯಾಗ್ರಹದ ಗೆಲುವಿನ ರೂವಾರಿಯಾದ ಗೌಡರು ಕೆ.ಜಿ.ಎಫ್.ನಲ್ಲಿ ಮಿಂಚಿದರು. 1939ರಲ್ಲಿ ನಡೆಯಬೇಕಿದ್ದ ಸಭೆಗೆ ಮುನ್ನದಿನ ಗೌಡರನ್ನು ಪೋಲೀಸರು ದಸ್ತಗಿರಿ ಮಾಡಿ ಮೂರು ತಿಂಗಳು ಜೈಲಿಗೆ ಕಳುಹಿಸಿದರು.

ಸೆರೆಮನೆಯಿಂದ ಹೊರಬಂದ ನಂತರ ಸ್ವಾತಂತ್ರ್ಯ ಚಳವಳಿಯನ್ನು ತೀವ್ರಗೊಳಿಸಿದರು. 1942ರ ಭಾರತ ಬಿಟ್ಟು ತೊಲಗಿ ಆಂದೋಲನದಲ್ಲೂ ತಮ್ಮನ್ನು ತೊಡಗಿಸಿಕೊಂಡರು. 1947ರ ಆಗಸ್ಟ್‌ನಲ್ಲಿ ಸ್ವಾತಂತ್ರ್ಯ ಬಂದರೂ ಮೈಸೂರಿನ ಆಳರಸರು ಭಾರತ ಒಕ್ಕೂಟ ಸರ್ಕಾರಕ್ಕೆ ಸೇರಲು ಒಪ್ಪದಿದ್ದಾಗ ಆಳರಸರ ವಿರುದ್ಧ ಅರಮನೆ ಚಳವಳಿ ಅಥವಾ ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯ ಮಾಡಲು ಮೈಸೂರಿನಲ್ಲಿ ಚಳವಳಿ ನಡೆಸಿ ಯಶಸ್ವಿಯಾದರು.

ಶಾಸಕರಾಗಿ ನಂತರ ಮಂತ್ರಿಯಾಗಿ

ಸ್ವಾತಂತ್ರ್ಯಾನಂತರ ಸಾರ್ವಜನಿಕ ಚುನಾವಣೆ ನಡೆಸಲು ತೀರ್ಮಾನಿಸ-ಲಾಯಿತು. ಮಂಡ್ಯ ಜಿಲ್ಲೆಯಿಂದ ಐದು ಜನ ಉಮೇದುವಾರರಲ್ಲಿ ಒಬ್ಬರಾಗಿ ಆಯ್ಕೆಯಾದರು.

ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. (1956–58) ವ್ಯವಸಾಯ, ಪಶು –ಸಂಗೋಪನೆ, ಲೋಕೋಪಯೋಗಿ ವಿಷಯಗಳ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ದ ಗೌಡರು ಉತ್ತಮವಾಗಿ ಕಾರ್ಯನಿರ್ವಹಿಸಿದರು. 1959ರಲ್ಲಿ ಬಿ.ಡಿ. ಜತ್ತಿಯವರ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿದರು.

ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ

ಒಕ್ಕಲಿಗರ ಸಂಘವು ಗೌಡರನ್ನು ಕೈಬೀಸಿ ಕರೆಯಿತು. 1960–72ರವರೆವಿಗೂ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ಜನಾಂಗದ ಸೇವೆ ಮಾಡಿದರು. ರಾಜ್ಯದ ಆಡಳಿತವನ್ನು ನಿಭಾಯಿಸಿದ ಗೌಡರಿಗೆ ಸಂಘದ ಜವಾಬ್ದಾರಿ ಅಷ್ಟೇನು ದೊಡ್ಡದಾಗಿ ಕಾಣಲಿಲ್ಲ. ಸಂಘವು ಈ ಸಂದರ್ಭದಲ್ಲಿ ಯಶಸ್ವಿಯಾಗಿ ಮುನ್ನಡೆಯಿತು.

ಹೀಗೆ ಹೆಚ್.ಕೆ. ವೀರಣ್ಣಗೌಡರು ಕರ್ನಾಟಕ ರಾಜ್ಯ ರಾಜಕೀಯದಲ್ಲಿ ವರ್ಣ ರಂಜಿತ ವ್ಯಕ್ತಿಯಾಗಿ, ಸ್ವಾತಂತ್ರ್ಯ ಚಳವಳಿಯ ಶಕ್ತಿಯಾಗಿ, ಮೂರು ಬಾರಿ ಕಾಂಗ್ರೆಸ್ ಅಧ್ಯಕ್ಷರಾಗಿ, ಶಾಸಕರಾಗಿ, ಮಂತ್ರಿಯಾಗಿ, ರಾಜ್ಯ ಒಕ್ಕಲಿಗರ, ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು 1975ರಲ್ಲಿ ಇಹಲೋಕ ತ್ಯಜಿಸಿದರು.

ಶ್ರೀ ಹೆಚ್.ಬಿ. ಗುಂಡಪ್ಪಗೌಡ



ಅಂದಿನ ಕಾಲದಲ್ಲೇ ವಿದ್ಯಾವಂತರು, ಬುದ್ಧಿವಂತರಾದ ಹಾಸನದ ಶ್ರೀ ಬೋರಣ್ಣನವರು ಬ್ರಿಟಿಷ್ ಸರ್ಕಾರದಲ್ಲಿ ಕಂದಾಯ ಇಲಾಖೆಗೆ ಸೇರಿದರು. ಹಂತ ಹಂತವಾಗಿ ಮೇಲೆ ಬಂದು ತಹಶೀಲ್ದಾರ್ ಹುದ್ದೆಗೇರಿದರು. ಸರ್ಕಾರಿ ಅಧಿಕಾರಿಯಾಗಿದ್ದುಕೊಂಡು ಜನಪರ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು. ನಿವೃತ್ತಿಯ ಬಳಿಕ ರಾಜಕೀಯ ಪ್ರವೇಶಿಸಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಸಭಾಸದರಾದರು. ನಂತರ ಮೇಲ್ಮನೆಯ ಸದಸ್ಯರಾಗಿ ಸೇವೆ ಸಲ್ಲಿಸಿದರು. ತಮ್ಮ ಮಕ್ಕಳಿಗೆ (ಆರು ಜನ ಮಕ್ಕಳು) ವಿದ್ಯಾ ಬುದ್ಧಿ ಕಲಿಸಿ ತಮಗಿಂತಲೂ ಹೆಚ್ಚು ಮೇಲೆ ಬರುವಂತೆ ಬುದ್ಧಿ ಹೇಳುತ್ತಿದ್ದರು. ಅವರ ಮಾತಿನಂತೆ ಹಾಗೂ ಆಶಯದಂತೆ ಮೇಲೇರಿದ ವ್ಯಕ್ತಿಯೇ ಶ್ರೀ ಹೆಚ್.ಬಿ. ಗುಂಡಪ್ಪಗೌಡ.

ಗುಂಡಪ್ಪಗೌಡರು 3-5-1899ರಲ್ಲಿ ಹಾಸನದಲ್ಲಿ ಜನಿಸಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಗಳಿಸಿದರು. ಕಾಲೇಜಿನ ದಿನಗಳಿಂದಲೂ ಉತ್ತಮ ಕ್ರೀಡಾಪಟುವಾದ ಗೌಡರು ಆಟ-ಪಾಠಗಳಲ್ಲಿ ಅಪಾರವಾದ ಶ್ರದ್ಧೆ ಮತ್ತು ಶಿಸ್ತನ್ನು ಮೈಗೂಡಿಸಿಕೊಂಡಿದ್ದರು. ಮದ್ರಾಸಿನ ಕಾನೂನು ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎಲ್. ಪದವಿಯನ್ನು ಗಳಿಸಿದರು.

ಹಾಸನದಲ್ಲಿ ನ್ಯಾಯವಾದಿಯಗಿ ಕೆಲಸ ಪ್ರಾರಂಭಿಸಿದರು. ಕೆಲವೇ ದಿನಗಳಲ್ಲಿ ಜನಪ್ರಿಯ ವಕೀಲರಾದರು. ಎಲ್ಲಾ ಕಡೆ ಸ್ವಾತಂತ್ರ್ಯ ಚಳವಳಿ ನಡೆಯುತ್ತಿದ್ದ ಕಾಲವದು. ಗುಂಡಪ್ಪಗೌಡರನ್ನು ರಾಜಕೀಯ ಕೈಬೀಸಿ ಕರೆಯಿತು. ರಾಜಕೀಯಕ್ಕೆ ಧುಮುಕಿದ ಗೌಡರು ಹಾಸನ ಪುರಸಭೆಯ ಅಧ್ಯಕ್ಷರಾಗಿ ಆಯ್ಕೆಯಾದರು. ನಂತರ ಹಾಸನ ಜಿಲ್ಲಾ ಬೋರ್ಡ್‌ನ ಅಧ್ಯಕ್ಷರೂ ಆದರು. ಮದ್ರಾಸ್‌ನ ಜಸ್ಟೀಸ್ ಪಾರ್ಟಿ ಮೈಸೂರಿನ ಮೇಲೆ ಪ್ರಭಾವ ಬೀರಲು ಕಾರಣವಾದಂತಹ ಅಂಶಗಳು ಅದರಲ್ಲಿ ಡಾ. ಸಿ.ಆರ್. ರೆಡ್ಡಿಯವರ ಪಾತ್ರವನ್ನು ಈಗಾಗಲೇ ತಿಳಿಸಿದೆ. ಸಹಜವಾಗಿ ಗುಂಡಪ್ಪ ಗೌಡರು, ಜಸ್ಟೀಸ್ ಪಕ್ಷದ ಸದಸ್ಯರಾದರು. ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ಲೆಜಿಸ್ಲೇಟಿವ್

ಸಭೆ (ಜನಪ್ರತಿನಿಧಿಗಳ ಸಭೆ) ಗಳೆರಡರಲ್ಲೂ ಸದಸ್ಯರಾಗಿದ್ದರು. ಹಾಸನ ಜಿಲ್ಲೆಯಲ್ಲಿ ಗುಂಡಪ್ಪಗೌಡರು ಜನಪ್ರಿಯ ಹಾಗೂ ಸಂಭಾವಿತ ವ್ಯಕ್ತಿ ಎನ್ನಿಸಿಕೊಂಡಿದ್ದರು.

ಮೈಸೂರು ರಾಜ್ಯದಲ್ಲಿ ಪ್ರಜಾಮಿತ್ರ ಮಂಡಳಿ ಪ್ರಜಾಪಕ್ಷ, ಪ್ರಜಾಮಿತ್ರ ಪಕ್ಷ ಇವೇ ಮುಂತಾದ ಸ್ಥಳೀಯ ಪಕ್ಷಗಳು ಅಸ್ತಿತ್ವದಲ್ಲಿದ್ದವು. ಅವು ಕಾಂಗ್ರೆಸ್ ಪಕ್ಷಕ್ಕಿಂತಲೂ ಹೆಚ್ಚು ಜನಪ್ರಿಯವೂ ಸದೃಢವೂ ಆಗಿದ್ದ ಕಾಲವದು. ಗುಂಡಪ್ಪಗೌಡರು ಕಾಂಗ್ರೆಸ್ ಅನ್ನು ಬೆಂಬಲಿಸಿದರು. ಹಾಸನದಲ್ಲಿ ಕಾಂಗ್ರೆಸ್ ಸರ್ವ ಸದಸ್ಯರ ಸಭೆ ನಡೆಯುವಂತೆ ವ್ಯವಸ್ಥೆ ಮಾಡಿದರು.

1933ರಲ್ಲಿ ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷರಾದರು. ಗೌಡರು ರಾಜಕೀಯವಾಗಿ ಮೇಲೇರಿದಂತೆಲ್ಲಾ ರಾಷ್ಟ್ರೀಯ ಕಾಂಗ್ರೆಸ್‌ಗೆ ಹತ್ತಿರವಾಗ ತೊಡಗಿದರು. ಸಾಹುಕಾರ್ ಚನ್ನಯ್ಯ, ಹೆಚ್.ಸಿ. ದಾಸಪ್ಪ, ಹೆಚ್.ಕೆ. ವೀರಣ್ಣಗೌಡ, ಎಸ್.ಸಿ. ಮಲ್ಲಯ್ಯನವರು ಆಪ್ತರಾಗಿದ್ದರು. ರಾಷ್ಟ್ರೀಯ ನಾಯಕರಾದ ಕಾಮರಾಜ್, ರಾಜಗೋಪಾಲಚಾರಿ, ಜವಾಹರ್‌ಲಾಲ್ ನೆಹರೂ ಅಷ್ಟೇ ಅಲ್ಲ ಸರ್ದಾರ್ ವಲ್ಲಭಬಾಯಿ ಪಟೇಲರು ಗುಂಡಪ್ಪಗೌಡರಿಗೆ ಆತ್ಮೀಯರಾಗಿದ್ದರು.

1938ರ ಶಿವಪುರ ಧ್ವಜ ಸತ್ಯಾಗ್ರಹದಿಂದಾಗಿ ಸ್ವಾತಂತ್ರ್ಯ ಚಳವಳಿ ತೀವ್ರಗೊಂಡಿತು. 1940ರ ಹಂತದಲ್ಲಿ ಮೈಸೂರು ಕಾಂಗ್ರೆಸ್ ಮತ್ತು ಆಳರಸರ ನಡುವಿನ ಘರ್ಷಣೆ ತಾರಕಕ್ಕೇರಿತು. ಇಂತಹ ಸನ್ನಿವೇಶದಲ್ಲಿ ಸರ್ದಾರ್ ವಲ್ಲಭಬಾಯಿ ಪಟೇಲರು ಮಧ್ಯ ಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು. ಮಹಾರಾಜರು ಹಂತಹಂತವಾಗಿ ಅಧಿಕಾರವನ್ನು ಜನತೆಗೆ ಬಿಟ್ಟುಕೊಡಲು ತೀರ್ಮಾನಿಸಿದರು. 1941ರಲ್ಲಿ ಮೈಸೂರು ಸರ್ಕಾರವು ಇಬ್ಬರು ಅಧಿಕಾರೇತರ ಹಾಗೂ ಗೌರವಾನ್ವಿತ ವ್ಯಕ್ತಿಗಳನ್ನು ತಮ್ಮ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಲು ತೀರ್ಮಾನಿಸಿತು. ಅಂತಹವರಲ್ಲಿ ಗುಂಡಪ್ಪಗೌಡರು ಒಬ್ಬರು. ಸ್ವಾತಂತ್ರ್ಯಪೂರ್ವದಲ್ಲೇ ಗುಂಡಪ್ಪಗೌಡರು ಆರೋಗ್ಯ ಸಚಿವರಾದರು. ಹಂತಹಂತವಾಗಿ ಅರಮನೆಯ ಸಖ್ಯ ಬೆಳೆಯಿತು. ಸಚಿವರಾಗಿ ಗ್ರಾಮಗಳಿಗೆ ಭೇಟಿ ನೀಡಿ ಶಾಲೆ, ಆಸ್ಪತ್ರೆ, ರಸ್ತೆ, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಹಲವಾರು ಸೌಲಭ್ಯಗಳನ್ನು ಒದಗಿಸುವ ಮೂಲಕ ಜನಪರ ಕೆಲಸ ಕಾರ್ಯ ಮಾಡತೊಡಗಿದರು. ಶ್ರೀಯುತರು ನಾಲ್ಕು ವರ್ಷಗಳ ಕಾಲ ಸಚಿವರಾಗಿ ಸೇವೆ ಸಲ್ಲಿಸಿ 1945ರಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಒಡೆಯರು ಗುಂಡಪ್ಪ ಗೌಡರ ಸೇವೆಯನ್ನು ಮನ್ನಿಸಿ 'ರಾಜಮಂತ್ರ ಪ್ರವೀಣ' ಎಂಬ ಬಿರುದು ನೀಡಿ ಗೌರವಿಸಿದರು.

ಗುಂಡಪ್ಪಗೌಡರು ನ್ಯಾಯವಾದಿಗಳಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಸಚಿವರಾಗಿ, ಸಮಾಜಮುಖಿಯಾಗಿ ತಮ್ಮ ಛಾಪು ಮೂಡಿಸಿದ್ದಾರೆ. ಗೌಡರು 12.5.1971ರಲ್ಲಿ ಹಾಸನದಲ್ಲಿ ಮೃತರಾದರು.

ಶ್ರೀಮತಿ ಯಶೋಧರಾ ದಾಸಪ್ಪ



ಈ ನಾಡು ಕಂಡ ಅಪರೂಪದ ಮಹಿಳಾರತ್ನವೇ ಯಶೋಧರ ದಾಸಪ್ಪ. ಒಕ್ಕಲಿಗ ಜನಾಂಗ ಮಾತ್ರವಲ್ಲ ನಮ್ಮ ರಾಜ್ಯದ ಮಹಿಳೆಯರೆಲ್ಲರಿಗೂ ಆದರ್ಶ, ಸ್ಫೂರ್ತಿಯ ಸೆಲೆ, ಮರೆಯಲಾಗದ, ಮರೆಯಬಾರದ ಮಹಾನ್ ಶಕ್ತಿ. ಅನನ್ಯ ಗಾಂಧಿವಾದಿ, ಸಮಾಜ ಸೇವಕಿ, ಸ್ವಾತಂತ್ರ್ಯ ಹೋರಾಟಗಾರ್ತಿ ಮಾತ್ರವಲ್ಲ ಹಲವು ಪ್ರಥಮಗಳನ್ನು ಸಾಧಿಸಿದ ವೀರ ಮಹಿಳೆ.

ಕೆ.ಹೆಚ್. ರಾಮಯ್ಯ ಮತ್ತು ರೇವಮ್ಮ ದಂಪತಿಗಳಿಗೆ ಮಗಳಾಗಿ 28.5.1905ರಲ್ಲಿ ಜನಿಸಿದರು. ಇವರ ಪ್ರಭಾವ ತಮ್ಮ ಮಗಳಾದ ಯಶೋಧರಾ ಅವರ ಮೇಲೆ ಬಹಳಷ್ಟು ಇತ್ತು. ಯಶೋಧರಾರವರಿಗೆ ಸಣ್ಣ ವಯಸ್ಸಿನಿಂದಲೂ ಭಾರತೀಯ ಸಂಸ್ಕೃತಿ, ಪೂಜೆ ಪುನಸ್ಕಾರ ಮತ್ತು ಸಂಗೀತದಲ್ಲಿ ಆಸಕ್ತಿಯಿತ್ತು. ರಾಮಯ್ಯನವರ ಮನೆತನದ ಮೇಲೆ ರಾಮಕೃಷ್ಣ ಆಶ್ರಮದ ಪ್ರಭಾವ ಬಹಳವಿತ್ತು. ಯಶೋಧರಾಗೂ ಸಂತರ, ದಾರ್ಶನಿಕರ, ದೇಶದ ಮತ್ತು ಜಗತ್ತಿನ ಮಹಾನುಭಾವರ ಜೀವನ ಚರಿತ್ರೆಯಲ್ಲಿ ಆಸಕ್ತಿಯಿರುತ್ತಿತ್ತು.

ಇವರು 1926ರಲ್ಲಿ ಹೆಚ್.ಸಿ. ದಾಸಪ್ಪನವರನ್ನು ವಿವಾಹವಾದರು. ಶ್ರೀಮತಿ ಯಶೋಧರಾ ದಾಸಪ್ಪನವರಲ್ಲಿ ಸಮಾಜ ಸೇವೆ ಮತ್ತು ದೇಶ ಸೇವೆ ಮಾಡಬೇಕೆಂಬ ಮನೋಭಾವ ನೆಲೆಸಿತ್ತು. ಸಮಾಜ ಸೇವೆ ಮತ್ತು ಸ್ತ್ರೀ ಸಮಾಜಗಳ ಸಂಘಟನೆಯಲ್ಲಿ ತೊಡಗಿದ್ದ ಯಶೋಧರಮ್ಮನವರನ್ನು ಸ್ವಾತಂತ್ರ್ಯ ಹೋರಾಟ ಗಮನ ಸೆಳೆಯಿತು. ಬೆಲೆಬಾಳುವ ವಸ್ತ್ರ ಭರಣಗಳನ್ನು ತ್ಯಜಿಸಿ, ಒರಟು ಖಾದಿ ಬಟ್ಟೆಧರಿಸಿ ಕಾಂಗ್ರೆಸ್ ಸೇರಿ ಅದರ ಸಂಘಟನೆಗೆ ತೊಡಗಿದರು. ಕಂಚಿನ ಕಂಠಹೊಂದಿದ್ದ ಯಶೋಧರಮ್ಮನವರು ಬಹಳ ಸ್ವಾರಸ್ಯವಾಗಿ, ನಿರರ್ಗಳವಾಗಿ ಭಾಷಣ ಮಾಡುತ್ತಿದ್ದರು. ರಾಜಕೀಯದಲ್ಲಿ ಸಕ್ರಿಯವಾಗಿದ್ದು, ಪೌರಸಭೆ, ಪ್ರಜಾಪ್ರತಿನಿಧಿ ಸಭೆ, ಇತರ ಕ್ರಿಯಾತ್ಮಕ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಶ್ರೀ ದಾಸಪ್ಪನವರು ನಾಯಕರಾಗಿ ಕೆಲಸ ಮಾಡುತ್ತಿದ್ದರೂ ಕೂಡ ಇನ್ನೂ ಕಾಂಗ್ರೆಸ್ ಸೇರಿರಲಿಲ್ಲ. ಕಾಂಗ್ರೆಸ್ ಮೇಲಿದ್ದ ಪತ್ನಿಯ ಅಚಲವಾದ ವಿಶ್ವಾಸ ಮತ್ತು ನಿಷ್ಠೆ ದಾಸಪ್ಪನವರನ್ನೂ ಕೂಡ ಕಾಂಗ್ರೆಸ್ ಕಡೆಗೆ ಸೆಳೆಯಿತು. ಅಂದಿನಿಂದ ದಾಸಪ್ಪನವರು ತನ್ನ ಖಾಸಾವಿಲಾಯತಿ ವೇಷಭೂಷಣಗಳನ್ನು ತ್ಯಜಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಅನೇಕ ಬಾರಿ ಸೆರೆಮನೆ ಸೇರಿದರು. ಬ್ರಿಟಿಷ್ ಸರ್ಕಾರ ಅವರ ವಕೀಲಿಯನ್ನು ಕಿತ್ತು ಹಾಕಿತು.

ಬೇರೆ ಆದಾಯವಿಲ್ಲದೆ, ಪತಿ ಜೈಲುವಾಸ ಅನುಭವಿಸುತ್ತಿರುವಾಗ ಯಶೋಧರಮ್ಮ ದೃತಿಗೆಡದೆ ಒಡವೆಗಳನ್ನು ಮಾರಿ ಸಂತೋಷದಿಂದ ಕಷ್ಟಗಳನ್ನು ಸಹಿಸಿದರು. ಅಂದಿನಿಂದ ಆಭರಣಗಳನ್ನು ತೊಡುವುದನ್ನು ತ್ಯಜಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಯಾವ ಕುಂದು ಕೊರತೆ ಬಾರದಂತೆ ಕಾರ್ಯಕರ್ತರನ್ನು ಸಾಕಿ ಸಲಹಿದರು.

ಧೀಮಂತರಾದ ಯಶೋಧರಮ್ಮ ಪುರಸಭೆಯ ಚುನಾವಣೆಗೆ ನಿಂತು ಪ್ರಚಂಡ ಬಹುಮತ ಗಳಿಸಿ ಗೆದ್ದ ಪ್ರಥಮ ಮಹಿಳೆ. ಹಾಗೆಯೇ 1938ರಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಗೆ ಗೆದ್ದು ಬಂದ ಪ್ರಥಮ ಮಹಿಳೆ.

ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ತಮ್ಮ ಸ್ವಂತ ಮನೆ ಮೈಸೂರನಲ್ಲಿರುವ 'ಯಶೋವಿಲಾಸ'ವನ್ನು ಬ್ರಿಟಿಷರ ವಿರುದ್ಧ ಭೂಗತ ಚಳವಳಿಯ ನಿರ್ದೇಶನ ಕೇಂದ್ರವನ್ನಾಗಿ ಮಾಡಿದರು. ಅನೇಕ ಭೂಗತ ಕಾರ್ಯಕರ್ತರು ಯಶೋಧರಮ್ಮ ನವರ ಮಾರ್ಗದರ್ಶನದಲ್ಲಿ ಬ್ರಿಟಿಷರ ವಿರುದ್ಧ ಚಳವಳಿಗೆ ಧುಮುಕಿದರು.

1938ರಲ್ಲಿ ಮದ್ದೂರು ಬಳಿ ಶಿವಪುರದಲ್ಲಿ ಧ್ವಜಸತ್ಯಾಗ್ರಹಕ್ಕೆ ತಯಾರಿ-ಯಾಯಿತು. ಸರ್ಕಾರ ಪ್ರತಿಬಂಧಕಾಜ್ಞೆ ಮಾಡಿತು. ಆಜ್ಞೆ ಮುರಿದು ಧ್ವಜ ಹಾರಿಸಿದರೆ ಗುಂಡು ಹಾರಿಸಬೇಕೆಂದು ಬ್ರಿಟಿಷ್ ಸರ್ಕಾರದ ಆದೇಶ ಹೊರಟಿತು. ರಿಸರ್ವ್ ಪೋಲೀಸರ ಸುತ್ತುಗಾವಲು, ಹತ್ಯಾಕಾಂಡವನ್ನು ತಪ್ಪಿಸಲು ಕಾಂಗ್ರೆಸ್ ನಾಯಕರು ಧ್ವಜಾರೋಹಣ ಮಾಡುವುದನ್ನು ಸ್ಥಗಿತಗೊಳಿಸಿ ಬದಲಾಗಿ ಖಂಡನಾ ಸಭೆ ಮಾಡಲು ಯೋಜಿಸಿದರು. ಆಗ ತೊಟ್ಟ ಸಂಕಲ್ಪ ಬಿಡಕೂಡದು, ನಿಮಗೆ ಆಗದಿದ್ದರೆ ಮಹಿಳೆಯರಿಗೆ ಬಿಡಿ, ನಾವು ಧ್ವಜವನ್ನು ಹಾರಿಸಿ ಗುಂಡೇಟಿಗೆ ಸಿದ್ಧರಾಗಿದ್ದೇವೆ. ಧ್ವಜದ ಗೌರವ ಕಾಪಾಡುತ್ತೇವೆ ಎಂದು ತನ್ನ ಕಂಚಿನ ಕಂಠದಿಂದ ಸಿಂಹಘರ್ಜನೆ ಮಾಡಿದರು ಶ್ರೀಮತಿ ಯಶೋಧರಮ್ಮ ತಮ್ಮ ಇತರ ಮಹಿಳಾ ಸಂಗಡಿಗರೊಂದಿಗೆ. ಕಾಂಗ್ರೆಸ್ ನಾಯಕರು ಬೇರೆ ದಾರಿ ಕಾಣದೆ ಕೂಡಲೇ ಸತ್ಯಾಗ್ರಹ ಸಂಕಲ್ಪಕ್ಕೆ ಬದ್ಧರಾದರು. ಯಶೋಧರಾ ತಮ್ಮ ಎರಡು ಪುಟ್ಟ ಮಕ್ಕಳು ರಾಮದಾಸ ಮತ್ತು ತುಳಸೀದಾಸರನ್ನು ಜತೆಯಲ್ಲಿರಿಸಿಕೊಂಡು ಧ್ವಜವನ್ನು ಕಾದು ಅದರ ಗೌರವ ಕಾಪಾಡಿದರು.

1950ರಲ್ಲಿ ಕಾಂಗ್ರೆಸ್‌ನ ಕಾರ್ಯಕರ್ತರ ಒತ್ತಾಯದ ಮೇಲೆ ಮೈಸೂರು ಸಂಸ್ಥಾನದ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದರು. ಅನಾರೋಗ್ಯದ ನಿಮಿತ್ತ ಮದ್ರಾಸಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೂ ಗೆದ್ದು ಅಧ್ಯಕ್ಷ ಪದವಿ ಪಡೆದರು. ಮೈಸೂರು ಸಂಸ್ಥಾನದ ಕಾಂಗ್ರೆಸ್‌ನ ಪ್ರಥಮ ಮಹಿಳಾ ಅಧ್ಯಕ್ಷೆಯೆನಿಸಿದರು. ಅವರ ಅಧ್ಯಕ್ಷತೆಯ ಅವಧಿಯಲ್ಲಿ ಮೈಸೂರು ಸಂಸ್ಥಾನದ ಕಾಂಗ್ರೆಸ್‌ಗೆ ಪ್ರದೇಶ ಕಾಂಗ್ರೆಸ್‌ನ ಸ್ಥಾನಮಾನವನ್ನು ಎ.ಐ.ಸಿ.ಸಿ. ನೀಡಿತು.

1952ರ ಮಹಾ ಚುನಾವಣೆಯಲ್ಲಿ ಹಾಸನದಿಂದ ಸ್ಪರ್ಧಿಸಿ ಗೆದ್ದು ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕ್ಯಾಬಿನೆಟ್ ಸಚಿವರಾದರು. ನಿಜಲಿಂಗಪ್ಪನವರ ಮಂತ್ರಿಮಂಡಲ ಪಾನನಿರೋಧ ನೀತಿಯನ್ನು ಕೈಬಿಡುವ ನಿರ್ಧಾರ ತೆಗೆದುಕೊಂಡಾಗ ಈ ನಿರ್ಧಾರದಿಂದಾಗಿ ಲಕ್ಷಾಂತರ ಬಡಜನರ, ಹರಿಜನರ ಹಾಗೂ ದಲಿತವರ್ಗದವರ ಬಾಳು ಮಣ್ಣು ಪಾಲಾಗುವುದು ಎಂದು ಅದನ್ನು ಪ್ರತಿಭಟಿಸಿದರು ಮತ್ತು ಮಂತ್ರಿ ಪದವಿಗೆ ರಾಜೀನಾಮೆಯಿತ್ತರು.


ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟ ಮೇಲೆ ರಚನಾತ್ಮಕ ಕಾರ್ಯಗಳನ್ನು ಇನ್ನಷ್ಟು ವಿಸ್ತರಿಸಿದರು. ತನ್ನ ಇಳಿ ವಯಸ್ಸಿನಲ್ಲಿ ಬಡ ಹೆಣ್ಣುಮಕ್ಕಳಿಗೆ ಉದ್ಯೋಗಾವ –ಕಾಶ ನೀಡಲು ಇನ್ನಷ್ಟು ಸಂಸ್ಥೆಗಳನ್ನು ಸ್ಥಾಪಿಸಿ ಹಗಲಿರುಳು ದುಡಿದರು.

ಮೈಸೂರಿನಲ್ಲಿರುವ ತನ್ನ ಸ್ವಂತ ಮನೆ 'ಯಶೋವಿಲಾಸ'ವನ್ನು ದಾನವಾಗಿ ದೇಶಕ್ಕೆ ಅರ್ಪಿಸಿ ತನ್ನ ದಿವಂಗತ ಪತಿಯ ಆದರ್ಶ ಜೀವನದ ಜ್ಞಾಪಕಾರ್ಥವಾಗಿ ಅವರ ಹೆಸರಿನಲ್ಲಿ ಸ್ಮಾರಕ ಸಂಸ್ಥೆಯನ್ನು ಸ್ಥಾಪಿಸಿದರು.

ಭಾರತ ಸರ್ಕಾರ 1972ರಲ್ಲಿ **"ಪದ್ಮಭೂಷಣ"** ಪ್ರಶಸ್ತಿ ನೀಡಿಗೌರವಿಸಿತ್ತು. ಹಲವಾರು ವರ್ಷಗಳ ಸುದೀರ್ಘ ದೇಶ ಸೇವೆ ಅವರದು. ಅವರು ಬೆಳೆಸಿದ ಸಂಸ್ಥೆಗಳು ನೂರಾರು. ರಾಷ್ಟ್ರೀಯ ಮಟ್ಟದಲ್ಲಿ ಹರಿಜನ ಸೇವಕ ಸಂಘ, ಗಾಂಧಿ ಸ್ಮಾರಕ ನಿಧಿ, ಕಸ್ತೂರಬಾ ಗಾಂಧಿ ಸ್ಮಾರಕ ಸಂಸ್ಥೆ, ಮುಂತಾದ ಸಂಸ್ಥೆಗಳಲ್ಲಿ ಧರ್ಮದರ್ಶಿಯಾಗಿ ಸಲ್ಲಿಸಿದ ಸೇವೆ ಅಪಾರ. ಮಹಾತ್ಮ ಗಾಂಧಿಯವರು ಯಶೋ ಭೇಟಿ ಎಂದೇ ಕರೆಯುತ್ತಿದ್ದರು.

ತನ್ನ ಅಂತ್ಯ ಸಂಸ್ಕಾರ ತಾನು ಕಟ್ಟಿ , ಬೆಳೆಸಿ, ಸ್ವಾವಲಂಬಿಯಾಗಿ ಮಾಡಿದ ಅರಸೀಕೆರೆಯ ಕಸ್ತೂರಬಾ ಗ್ರಾಮದಲ್ಲಿ ಗಾಂಧೀಜಿಯವರ ಸ್ಮಾರಕದ ಸಮೀಪ ನಡೆಯಬೇಕೆಂದು ಯಶೋಧರ ಇಚ್ಛಿಸಿದರು. ಅದೇ ರೀತಿ 1980ರ ಜೂನ್ 20ರಂದು ದೈವಾಧೀನರಾದರು.

ಅಂದಾನಪ್ಪ ಜ್ಞಾನಪ್ಪ ದೊಡ್ಡಮೇಟಿ



ಒಕ್ಕಲಿಗ ರೆಡ್ಡಿ ಸಮುದಾಯದಲ್ಲಿ ಚಿರಸ್ಥಾಯಿಯಾಗಿ ಉಳಿದಿರುವ ಹೆಸರೇ ಅಂದಾನಪ್ಪ ಜ್ಞಾನಪ್ಪ ದೊಡ್ಡಮೇಟಿಯುವರು. ಶ್ರೀಯುತರು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ ಸಾಕಷ್ಟು ಕಷ್ಟ–ನಷ್ಟವನ್ನು ಅನುಭವಿಸಿದರು. ಪಕ್ಕಾ ಗಾಂಧಿವಾದಿಯಾದ

ಅಂದಾನಪ್ಪನವರು ಹರಿಜನೋದ್ಧಾರಕ್ಕಾಗಿ ಶ್ರಮಿಸಿದರು. ಇಂದಿನ ಕರ್ನಾಟಕ ರಾಜ್ಯವು ಅಂದು ಕೇವಲ 9 ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದ್ದಾಗ **"ಕರ್ನಾಟಕದ ಏಕೀಕರಣಕ್ಕಾಗಿ"** ಅಹರ್ನಿಶಿ ದುಡಿದರು. ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾಂ ಸೇರಿದಂತೆ ಉತ್ತರ ಕರ್ನಾಟಕದಾದ್ಯಂತ ಕರ್ನಾಟಕದ ಗಾಂಧಿಯೆಂದೆ ಹಿಂದೊಮ್ಮೆ ಮನೆ ಮಾತಾಗಿದ್ದ ವ್ಯಕ್ತಿ. ಬಾಂಬೆ ಲೆಜಸ್ಲೇಟಿವ್ ಸದಸ್ಯರಾಗಿ, ಮೈಸೂರು ಲೆಜಸ್ಲೇಟಿವ್ ಸದಸ್ಯರಾಗಿ, ರಾಜ್ಯದ ನೀರಾವರಿ ಸಚಿವರಾಗಿ, ಸಾಹಿತಿಯಾಗಿ ನಮ್ಮೊಳಗೆ ಚಿರಸ್ಥಾಯಿಯಾಗಿ ನಿಂತಿರುವ ವ್ಯಕ್ತಿಯಾಗಿದ್ದಾರೆ. ಅಂದಾನಪ್ಪನವರು ಗದಗ ಜಿಲ್ಲೆ ರೋಣ ತಾಲ್ಲೂಕಿನ ಜಕ್ಕಲಿ ಎಂಬಲ್ಲಿ 16.03.1908ರಂದು ಜನಿಸಿದರು. ತಮ್ಮ ಹುಟ್ಟೂರಿನಲ್ಲಿ ನಂತರ ಗದಗಿನಲ್ಲಿ ವ್ಯಾಸಂಗ ಮಾಡಿದರು. ಮಧ್ಯಮ ವರ್ಗದ ವ್ಯವಸಾಯಗಾರರ ಕುಟುಂಬದಲ್ಲಿ ಜನಿಸಿದರೂ ಬಡವರ, ದೀನದಲಿತರ ಬಗ್ಗೆ ತುಂಬು ಕಾಳಜಿ ಇದ್ದಿತು. 1924ರಲ್ಲಿ ಬೆಳಗಾಂ ಅಧಿವೇಶನಕ್ಕೆ ಗಾಂಧೀಜಿಯವರು ಬರುವ ವಿಚಾರ ತಿಳಿದು ಯುವಕ ಅಂದಾನಪ್ಪ ಬೆಳಗಾಂಗೆ ಬಂದು ಹೋದ ಮೇಲೆ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದರು. ಕಾನೂನು ಬಂಗ ಚಳವಳಿಯಲ್ಲಿ ಭಾಗವಹಿಸಿ ಸೆರೆವಾಸ ಅನುಭವಿಸಿದರು. 1934ರಲ್ಲಿ ಗಾಂಧೀಜಿಯವರು ಅಂದಾನಪ್ಪನವರ ಸಣ್ಣ ಊರಾದ ಜಕ್ಕಲಿಗೆ ಭೇಟಿ ನೀಡುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಇದಕ್ಕೆ ಕಾರಣ ಅಂದಾನಪ್ಪನವರು ಹರಿಜನೋದ್ಧಾರ ಕಾರ್ಯಕ್ರಮವನ್ನು ಹಮ್ಮಿಕೊಂಡು ಜನಪ್ರಿಯರಾಗಿದ್ದರು. ಗಾಂಧೀಜಿಯವರು ತಮ್ಮ ಊರಿಗೆ ಭೇಟಿಕೊಟ್ಟಿದಕ್ಕೆ ಹರಿಜನ ಕಲ್ಯಾಣ ನಿಧಿಗೆ ಸುಮಾರು ಒಂದು ಸಾವಿರ ರೂಪಾಯಿ ನೀಡಿ ಎಲ್ಲರೂ ಉಬ್ಬೇರಿಸುವಂತೆ ಮಾಡಿದರು.

ಸ್ವಾತಂತ್ರ್ಯ ಹೋರಾಟಕ್ಕೆ ಅಂದಾನಪ್ಪನವರು

ಈಗಾಗಲೆ ತಿಳಿಸಿರುವಂತೆ ಅಂದಾನಪ್ಪನವರು ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಆಲೂರು ವೆಂಕಟರಾಯರು, ಶ್ರೀನಿವಾಸ ಕೌಜಲಗಿ, ಗಂಗಾಧರರಾವ್ ದೇಶಪಾಂಡೆ ಇವರೇ ಮುಂತಾದ ಹಿರಿಯರ ಹಾಗೂ ದೇಶಭಕ್ತರ ಪ್ರಭಾವಕ್ಕೆ ಒಳಗಾದ ಅಂದಾನಪ್ಪನವರು ಮುಂದೆ ಕರನಿರಾಕರಣೆ, ಬ್ರಿಟೀಷರೆ ಭಾರತ ಬಿಟ್ಟು ತೊಲಗಿ ಆಂದೋಲನದಲ್ಲಿ ಭಾಗವಹಿಸಲಾಗಿ ಅಂದಾನಪ್ಪನವರನ್ನು ಬಂಧಿಸಿ ಜೈಲಿಗೆ ಅಟ್ಟಿದರು. ಇದರಿಂದ ತಟಸ್ಥರಾಗುವ ಬದಲು ಮತ್ತಷ್ಟು ಕುಪಿತರಾದರು ಸ್ವಾತಂತ್ರ್ಯ ಉತ್ಸಾಹ ಪುಟಿಯಿತು. ಕರನಿರಾಕರಣೆ ಮಾಡಬೇಕೆಂದು ಕರಪತ್ರ ತಯಾರಿಸಿ ಹಂಚಿದರು ಅದಕ್ಕಾಗಿ ಬ್ರಿಟೀಷರು ಅಂದಾನಪ್ಪನವರನ್ನು ಬಂಧಿಸಿ ಜುಲ್ಮಾನೆ ವಿಧಿಸಿತು. ಎರಡು ಸಾವಿರ ರೂಪಾಯಿ ಜುಲ್ಮಾನೆ ಕೊಟ್ಟು ಮತ್ತೆ ಮುಂದುವರಿಸಿದರು.

ಬಾಂಬೆ ಲೆಜಿಸ್ಲೇಟಿವ್ ಅಸೆಂಬ್ಲಿ ಸದಸ್ಯರಾಗಿ ಅಂದಾನಪ್ಪನವರು

1935ರ ಶಾಸನದಂತೆ ಭಾರತೀಯರು ಸ್ಥಳೀಯ ಆಡಳಿತ (Local Self Government) ನಡೆಸಲು ಅವಕಾಶ ನೀಡಿದರು. ಅದಕ್ಕಾಗಿ ಸ್ಥಳೀಯ ಚುನಾವಣೆಗಳು ನಡೆದವು. ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ ಇವೇ ಮುಂತಾದ ಪ್ರದೇಶಗಳಲ್ಲಿ ಸ್ಥಳೀಯ ಚುನಾವಣೆಗಳು ನಡೆದವು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಹುರಿಯಾಳುಗಳಾಗಿ ನಿಂತಿದ್ದ ಅಭ್ಯರ್ಥಿಗಳು ಸೋತರು. ಸ್ವಾತಂತ್ರ್ಯ ಹೋರಾಟ ಮತ್ತು ಕರ್ನಾಟಕ ಏಕೀಕರಣಕ್ಕಾಗಿ ದುಡಿಯುತ್ತಿದ್ದ ವೆಂಕಟೇಶ್ ಮಾಗಡಿ, ವಿ.ಹೆಚ್. ಪಾಟೀಲ್, ಎ.ಆರ್. ಪಂಚಗವಿ, ಅಂದಾನಪ್ಪ ಇವರೇ ಮುಂತಾದವರು ಸುಲಭದ ಜಯಗಳಿಸಿದರು.

ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಅಂದಾನಪ್ಪನವರು

ಇಂದು ಅಖಂಡ ಕರ್ನಾಟಕವೆಂದು ಕರೆಯುತ್ತಿರುವ ನಮ್ಮ ರಾಜ್ಯ ಅಂದು ಕೇವಲ 9 ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿತ್ತು. ಕರ್ನಾಟಕದ ಬಹುಭಾಗಗಳು ಹೈದರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ, ಕೊಡಗು, ಮಂಗಳೂರು, ಮೈಸೂರು ಸಂಸ್ಥಾನವೆಂದು ಕರೆಯುತ್ತಿದ್ದರು. ಕನ್ನಡ ಭಾಷೆ, ನಾಡು–ನುಡಿ ಸಂಸ್ಕೃತಿಗೆ ಮಾನ್ಯತೆಯಿರಲಿಲ್ಲ ಹೊರರಾಜ್ಯಗಳ ಪ್ರಭಾವ ನಮ್ಮ ರಾಜ್ಯದ ಬಹು ಭಾಗಗಳ ಮೇಲೆ ಇದ್ದಿತು. ಎನ್.ಎಸ್. ಹರ್ಡಿಕರ್, ಹರ್ಡಿಕರ್ ಮಂಜಪ್ಪ, ಆಲೂರು ವೆಂಕಟರಾವ್, ಮುದುವೀಡು ಕೃಷ್ಣರಾವ್ ಇವರೇ ಮುಂತಾದವರ ಜೊತೆ ಸೇರಿದ ಅಂದಾನಪ್ಪನವರು ಏಕೀಕರಣಕ್ಕಾಗಿ ಒತ್ತಾಯ ಮಾಡತೊಡಗಿದರು. ಬಿ.ಎಲ್.ಎ. (ಬಾಂಬೆ ಲೆಜಿಸ್ಲೇಟಿವ್ ಅಸೆಂಬ್ಲಿ ಸದಸ್ಯರಾಗಿದ್ದ ಕಾರಣ ಬಾಂಬೆ ಸಧನದಲ್ಲಿ ಭಾಷಾವಾರು ಪ್ರಾಂತ್ಯಗಳನ್ನಾಗಿ ವಿಂಗಡಣೆ ಮಾಡಬೇಕಂತಲೂ ಕರ್ನಾಟಕ ನಿರ್ಮಾಣ ಶಿಬಿರದ ಸಂಸ್ಥಾಪರಾಗಿ ದುಡಿದರು. ಧಾರವಾಡದಲ್ಲಿ ಅಸ್ತಿತ್ವಕ್ಕೆ ಬಂದ ಕರ್ಣಾಟಕ ಏಕೀಕರಣ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದರು. ಜಮಖಂಡಿ ಸ್ಟೇಟ್ ಪೀಪಲ್ಸ್ ಕಾನ್ಫರೆನ್ಸಿನ ಅಧ್ಯಕ್ಷರಾಗಿ 1932ರಿಂದ 1948ರ ತನಕ ದುಡಿದರು. ಭಾರತದಲ್ಲಿ ವಿಲೀನಗೊಂಡ ಪ್ರದೇಶದಲ್ಲಿ ಜಮಖಂಡಿ ಸಂಸ್ಥಾನವೂ ಒಂದು ಎಂದೇಳಬಹುದು ಇದಕ್ಕೆ ಕಾರಣ ಅಂದಾನಪ್ಪನವರ ಶ್ರಮ ಹಾಗೂ ದೂರದೃಷ್ಠಿ ಎಂದೇಳಬಹುದು. ಏಕೀಕರಣ ಮಾಡುವುದು ತಡವಾದಾಗ ತಮ್ಮ ಹುಟ್ಟೂರಾದ ಜಕ್ಕಲಿಯಲ್ಲಿ ಆಮರಣಾಂತ ಉಪವಾಸ ಕೈಗೊಂಡರು. ಅಂದಿನ ಕೇಂದ್ರ ಸರ್ಕಾರವು ಉಪವಾಸ ಸತ್ಯಾಗ್ರಹವನ್ನು ಕೈಬಿಡುವಂತೆ ಕೇಳಿಕೊಂಡಿತು. ಕೇಂದ್ರ ಸರ್ಕಾರವು ರಾಜ್ಯ ಪುನರ್ ವಿಂಗಡಣಾ ಆಯೋಗವನ್ನು ರಚಿಸುವಂತೆ ಮಾಡಿದ ಕೀರ್ತಿ ಅಂದಾನಪ್ಪನವರಿಗೆ ಸಲ್ಲುತ್ತದೆ.

ವಿಧಾನಸಭಾ ಸದಸ್ಯರಾಗಿ ಮಂತ್ರಿಯಾಗಿ ಅಂದಾನಪ್ಪನವರು

ಬಹಳಷ್ಟು ಪ್ರಾಮಾಣಿಕರೂ ಸ್ವಾತಂತ್ರ್ಯ ಹೋರಾಟಗಾರರು ಏಕೀಕರಣಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಸಿಕೊಂಡ ಅಂದಾನಪ್ಪನವರು ಗದಗ, ಹುಬ್ಬಳ್ಳಿ, ಧಾರವಾಡ, ಬೆಳಗಾಂ ಇವೇ ಮುಂತಾದ ಕಡೆಗಳಲ್ಲಿ ಹೆಸರುವಾಸಿಯಾಗಿದ್ದರು. ಮೈಸೂರು ರಾಜ್ಯವೆಂದು ನಂತರ ಕರ್ನಾಟಕ ರಾಜ್ಯವೆಂದು ನಾಮಕರಣಗೊಳ್ಳುವ ತನಕ ಹೋರಾಡಿದರು. ಮೈಸೂರು ರಾಜ್ಯವೆಂದು 1956 ನವೆಂಬರ್‌ನಲ್ಲಿ ಘೋಷಣೆ ಮಾಡಿದಾಗ ಬಹಳ ಆನಂದಪಟ್ಟರು. ಮೈಸೂರು ರಾಜ್ಯಕ್ಕೆ ನಡೆದ ದ್ವಿತೀಯ, ತೃತೀಯ ಹಾಗೂ ಚತುರ್ಥ ಚುನಾವಣೆಗಳಲ್ಲಿ ಗದಗ ಜಿಲ್ಲೆಯ ರೋಣ ತಾಲ್ಲೂಕಿನಿಂದ ಸುಲಭವಾಗಿ ಗೆಲುವು ಸಾಧಿಸಿದರು.

ವೀರೇಂದ್ರ ಪಾಟೀಲರ ಮಂತ್ರಿ ಮಂಡಲದಲ್ಲಿ ಅಂದಾನಪ್ಪನವರು 1970–71ರಲ್ಲಿ ನೀರಾವರಿ ಖಾತೆಯ ಸಹಾಯಕ ಸಚಿವರಾಗಿ ದುಡಿದರು. ದಕ್ಷತೆ ಮತ್ತು ಪ್ರಾಮಾಣಿ ಕತೆಯ ಮತ್ತೊಂದು ಹೆಸರೇ ಅಂದಾನಪ್ಪನವರು. ಸಾಹಿತ್ಯ ಮತ್ತು ಸಂಗೀತ ಪ್ರೇಮಿಯಾದ ಶ್ರೀಯುತರು ಮಾತೃ ಕೃಪೆ, ಸ್ವಪ್ನ ಪೌರ್ಣಿಮೆ, ಮಹಿಮಾ ಸೂತ್ರ ಇವೇ ಮುಂತಾದ ಕೃತಿಗಳನ್ನು ರಚಿಸಿದರು. ನೇರ ನುಡಿಯ ಅಂದಾನಪ್ಪ ಜ್ಞಾನಪ್ಪ ದೊಡ್ಡಮೇಟಿಯವರು 21.02.1972 ರಂದು ಶಿವೈಕ್ಯರಾದರು. ಇಂದಿಗೂ ಕರ್ನಾಟಕ ಏಕೀಕರಣ ಚರಿತ್ರೆಯಲ್ಲಿ ದೊಡ್ಡ ಹೆಸರು ಮಾಡಿದ್ದಾರೆ.

ಶ್ರೀ ಮಾಲಿ ಮರಿಯಪ್ಪ



ಮಾಲಿ ಮರಿಯಪ್ಪ ಎಂದ ಕೂಡಲೇ ತಟ್ಟನೆ ನೆನಪಿಗೆ ಬರುವುದು ಸಾದ್ವಿಯ ಸಂಭಾವಿತರಾದ ರಾಜಕಾರಣಿ ಮರಿಯಪ್ಪನವರು. ಮರಿಯಪ್ಪನವರಿಗೆ ಮಾಲಿ ಎಂಬ ಪದ ಅವರ ಹೆಸರಿನೊಂದಿಗೆ ಇರುವುದರಿಂದ ಒಂದು ರೀತಿಯ ಗಾಂಭೀರ್ಯವನ್ನು ತಂದು ಕೊಟ್ಟಿದೆ ಎಂದರೆ ತಪ್ಪಾಗಲಾರದು. ಮಾಲಿ ಎಂಬುದು ಇವರ ಮನೆತನದ ಹೆಸರು.

ಮಾಲಿ ದೊಡ್ಡಮುದ್ದಪ್ಪ ತಿಮ್ಮಕ್ಕ ದಂಪತಿಗಳಿಗೆ ಮಾಲಿ ಮರಿಯಪ್ಪ ನಾಲ್ಕನೆಯ ಮಗನಾಗಿ ಜನಿಸಿದರು. ದುರಾದೃಷ್ಟವಶಾತ್ ಮಾಲಿ ಮರಿಯಪ್ಪನವರು ಹುಟ್ಟಿದ 2ನೇ ವರ್ಷದಲ್ಲಿ ತಾಯಿಯನ್ನು 8ನೇ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಳ್ಳಬೇಕಾಯಿತು. ಮರಿಯಪ್ಪನವರ ತಂದೆ ತಾಯಿಯರ ಸ್ಥಾನವನ್ನು ಅವರ ಚಿಕ್ಕಪ್ಪನವರಾದ ಮಾಲಿ ಕರಿಯಪ್ಪನವರು ತುಂಬಿದರು.

1924ರಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಪೂರೈಸಿ, ಪ್ರೌಢಶಾಲಾ ಶಿಕ್ಷಣ ಪಡೆಯಲು ಮೈಸೂರಿಗೆ ತೆರಳಿದರು. ಮರಿಯಪ್ಪನವರು ಬಿ.ಎ. ಪದವಿಯನ್ನು ಓದುವಾಗ ತತ್ವಶಾಸ್ತ್ರ, ಆಧ್ಯಾತ್ಮ, ರಾಜ್ಯಶಾಸ್ತ್ರ ವಿಷಯಗಳನ್ನು ತಮ್ಮ ಐಚ್ಛಿಕ ವಿಷಯಗಳನ್ನಾಗಿ ತೆಗೆದುಕೊಂಡು ಅಭ್ಯಾಸ ಮಾಡಿದರು ಮತ್ತು ಉತ್ತಮ ಅಂಕಗಳನ್ನು ಪಡೆಯುವುದರ ಮೂಲಕ ಪದವಿ ಗಳಿಸಿದರು. 1932ರಲ್ಲಿ ಶಿರಾ ತಾಲ್ಲೂಕಿನ ಚಿಕ್ಕದಾಸರ ಹಳ್ಳಿಯ ಪಟೇಲ್ ಬೆಟ್ಟೇಗೌಡರ 2ನೇ ಮಗಳಾದ ಲಕ್ಷ್ಮಮ್ಮನವರೊಡನೆ ವಿವಾಹ ಜರುಗಿತು. ಇಂದಿನಂತೆ ಅಂದು ನಮ್ಮ ರಾಜ್ಯದಲ್ಲಿ ಕಾನೂನು ಕಾಲೇಜುಗಳಿರಲಿಲ್ಲ. ಕಾನೂನು ವ್ಯಾಸಂಗ ಮಾಡಬೇಕಿದ್ದರೆ, ಬಾಂಬೆ ಪ್ರೆಸಿಡೆನ್ಸಿಯ ಪೂನಾದ ಫರ್ಗ್ಯೂಸನ್ ಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡಬೇಕಾಗಿದ್ದಿತು. ಆದ್ದರಿಂದ ಶ್ರೀಯುತರು ಕಾನೂನು ವ್ಯಾಸಂಗ ಮಾಡಲು ಪೂನಾಕ್ಕೆ ತೆರಳಿದರು. ನ್ಯಾಯ ಶಾಸ್ತ್ರ ಪದವೀಧರರಾದ ಮೇಲೆ ಮರಿಯಪ್ಪನವರು ಬೆಂಗಳೂರಿನ ಖ್ಯಾತ ನ್ಯಾಯವಾದಿಯಾಗಿದ್ದ ಶ್ರೀ ಗುರುವಾರೆಡ್ಡಿಯವರಲ್ಲಿ ಕೆಲವು ತಿಂಗಳು ಕಿರಿಯ ವಕೀಲರಾಗಿ ಕೆಲಸಮಾಡ ತೊಡಗಿದರು. ತಮ್ಮ ವಕೀಲಿ ವೃತ್ತಿಯನ್ನು ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ವರ್ಗಾಯಿಸಿಕೊಂಡು ಚಿತ್ರದುರ್ಗದಲ್ಲಿ ನ್ಯಾಯವಾದಿಯಾಗಿ ವೃತ್ತಿಯನ್ನು ಮುಂದುವರಿಸಿದರು. ಮಧುಗಿರಿಯಲ್ಲಿ ತಮ್ಮ ವಕೀಲಿ ವೃತ್ತಿಯನ್ನು ಆರಂಭಿಸಿದ ಮರಿಯಪ್ಪನವರು ಶ್ರದ್ಧೆಯಿಂದ ಕೇಸುಗಳನ್ನು ಅಭ್ಯಸಿಸಿ ನ್ಯಾಯಾಧೀಶರ ಮುಂದೆ ನ್ಯಾಯ ಮಂಡಿಸುತ್ತಿದ್ದರು.

1936ರಲ್ಲಿ ಮುಂಬೈ ಪ್ರಾಂತ್ಯದ ಫೈಜ್‌ಪುರ್ ಎಂಬಲ್ಲಿ 50ನೇ ಅಖಿಲ ಭಾರತ ಕಾಂಗ್ರೆಸ್ ಸಮ್ಮೇಳನ ಏರ್ಪಾಡಾಯಿತು. ಆ ಸಮ್ಮೇಳನದಲ್ಲಿ ಮರಿಯಪ್ಪವನರು ಶಿರಾ ಮತ್ತು ಮಧುಗಿರಿಗೆ ಸೇರಿದ ಸ್ನೇಹಿತರು, ಹಿತೈಷಿಗಳೊಂದಿಗೆ ಫೈಜ್‌ಪುರಕ್ಕೆ ಧಾವಿಸಿದರು. ಮರಿಯಪ್ಪನವರು ಫೈಜ್‌ಪುರದ ಅಧಿವೇಶನಕ್ಕೆ ಹೋಗಿ ಬಂದ ಮೇಲೆ ತುಮಕೂರು ಜಿಲ್ಲೆಯಾದ್ಯಂತ ಸ್ವಾತಂತ್ರ್ಯದ ಕಿಚ್ಚು ಹಚ್ಚಿದರು.

ಮಧುಗಿರಿ ಕಾಂಗ್ರೆಸ್ : 1936ರಲ್ಲಿ ಫೈಜ್‌ಪುರ ಅಧಿವೇಶನದಲ್ಲಿ ಪಾಲ್ಗೊಂಡಿದ್ದ ಮರಿಯಪ್ಪನವರು ಮಧುಗಿರಿಗೆ ಬಂದು, ಕಾಂಗ್ರೆಸ್ ಕಟ್ಟುವ ಕೆಲಸ ಮಾಡಿದರು. ರಾಷ್ಟ್ರೀಯ ಕಾಂಗ್ರೆಸ್ ಪುನಶ್ಚೇತನಗೊಳಿಸಲು ಎಲ್ಲಾ ಕ್ರಮಗಳನ್ನು ಕೈಗೊಂಡರು. ಮಧುಗಿರಿ ಕಾಂಗ್ರೆಸ್ ಸಂದರ್ಭದಲ್ಲಿ ಮಾಲಿ ಮರಿಯಪ್ಪನವರು ಕಾರ್ಯದರ್ಶಿಗಳಾಗಿ ಆಯ್ಕೆಯಾದರು. ಮಧುಗಿರಿ ತಾಲ್ಲೂಕ್ ಬಡತನ, ನಿರುದ್ಯೋಗ, ಅನಕ್ಷರತೆಯಿಂದ ಬಸವಳಿದಿತ್ತು. ಇದು ಸಾಲದು ಎಂಬಂತೆ ಸೇಂದಿ ಮಾರಾಟ ಯಥೇಚ್ಛವಾಗಿತ್ತು. ಇಂತಹ ಸಮಯದಲ್ಲಿ ಮರಿಯಪ್ಪನವರು ಇದರ ವಿರುದ್ಧ ಪಾನನಿರೋಧ ಸಮರವನ್ನು ಘೋಷಿಸಿದರು. ವಸತಿ ಶಾಲೆಗಳು, ರಾತ್ರಿ

ಶಾಲೆಗಳು, ಅರವಟ್ಟಿಗೆ, ಗ್ರಾಮಾಭಿವೃದ್ಧಿ, ಖಾದಿ ಪ್ರಚಾರ, ಹರಿಜನೋದ್ಧಾರ ಮುಂತಾದ ಕ್ರಿಯಾಶೀಲ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಮಧುಗಿರಿ, ಪಾವಗಡ ಇನ್ನೂ ಮುಂತಾದ ಕಡೆ ಪಾನನಿರೋಧದ ಭಾಷಣಗಳನ್ನು ಮಾಡಿ ಅದರ ಚಟದಿಂದ ವಿಮುಕ್ತಗೊಳಿಸಲು ಹೋರಾಟ ಮಾಡಿದರು.


ಶಿವಪುರ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. 1939ರಲ್ಲಿ ವಾಲಿ ಮರಿಯಪ್ಪನವರ ನೇತೃತ್ವದಲ್ಲಿ ತುಮಕೂರು ಜಿಲ್ಲೆಯಾದ್ಯಂತ ನಡೆದ **ಅರಣ್ಯ ಸತ್ಯಾಗ್ರಹ** ಒಂದು ಸ್ಮರಣೀಯ ಘಟನೆಯಾಗಿದೆ. 1939 ಸೆಪ್ಟಂಬರ್ 28ರಂದು ಸತ್ಯಾಗ್ರಹ ತಂಡದ ನಾಯಕನಾಗಿ ನೇಮಿಸಲಾಯಿತು. 1947ರಲ್ಲಿ ಅರಮನೆ ಚಲೋ ಚಳುವಳಿ ಆರಂಭವಾದ ಸುದ್ದಿ ಹಬ್ಬಿದ ನಂತರ ತುಮಕೂರಿನಲ್ಲಿ ಮರಿಯಪ್ಪನವರು ತಮ್ಮ ಸಂಗಡಿಗರೊಡಗೂಡಿ ತುಮಕೂರಿನಾದ್ಯಂತ ಸತ್ಯಾಗ್ರಹ ಹರತಾಳಗಳನ್ನೇ-ರ್ಪಡಿಸುದುದೇ ಅಲ್ಲದೆ ಜಿಲ್ಲೆಯಾದ್ಯಂತ ರಾಷ್ಟ್ರಧ್ವಜವನ್ನು ಹಾರಿಸಿದರು.

ಶಾಸಕರಾಗಿ : 20.3.1968ರಲ್ಲಿ ಮೈಸೂರು ರಾಜ್ಯಾಂಗ ರಚನಾ ಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಜಯಗಳಿಸಿದರು. 1952ರ ಪ್ರಥಮ ಮಹಾ ಚುನಾವಣೆಯಲ್ಲಿ ಪಾವಗಡ ಮತ್ತು ಮಧುಗಿರಿ ತಾಲ್ಲೂಕುಗಳ ಒಳಗೊಂಡ ದ್ವಿಸದಸ್ಯ ಕ್ಷೇತ್ರದಿಂದ ಮೈಸೂರು ವಿಧಾನಸಭೆಗೆ ಚುನಾಯಿತರಾದರು. ಮರಿಯಪ್ಪನವರನ್ನು ಅಂದಿನ ಸರ್ಕಾರ 1952ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರನ್ನಾಗಿ ನೇಮಿಸಿತು. 1957ರ ದ್ವಿಸದನ ಮಹಾ ಚುನಾವಣೆಯಲ್ಲಿ ಎರಡನೆಯ ಬಾರಿಗೆ ಆಯ್ಕೆಯಾದರು. ಸರ್ಕಾರಿ ಲೆಕ್ಕಪತ್ರ ಸಮಿತಿಯ ಅಧ್ಯಕ್ಷರಾಗಿ ಒಂದು ವರ್ಷ ಸೇವೆ ಸಲ್ಲಿಸಿದರು.

ಮಂತ್ರಿಯಾಗಿ : ಬಿ.ಡಿ. ಜತ್ತಿಯವರು ಮರಿಯಪ್ಪನವರ ಕಾರ್ಯದಕ್ಷತೆಯನ್ನು ಕಂಡು ಅವರನ್ನು ಸಹಕಾರ, ಸಣ್ಣ ಕೈಗಾರಿಕೆ, ಖಾದಿ ಮತ್ತು ಗ್ರಾಮೋದ್ಯೋಗ ಖಾತೆ ಮಂತ್ರಿಯನ್ನಾಗಿ ಮಾಡಿದರು. ನಾಲ್ಕು ವರ್ಷಗಳ ಉತ್ತಮ ಸೇವೆ ಸಲ್ಲಿಸಿ ಸರ್ಕಾರಕ್ಕೆ, ಮಂತ್ರಿಮಂಡಲಕ್ಕೆ ಕೀರ್ತಿ ತಂದುಕೊಟ್ಟರು. 1962ರ ಸಾರ್ವತ್ರಿಕ ಚುನಾವಣೆಯಲ್ಲಿ ತಮ್ಮ ಸ್ವಂತ ತಾಲ್ಲೂಕಿನಲ್ಲೇ ಸೋಲನ್ನು ಅನುಭವಿಸಿದರು. ಭಾರತ ಸರ್ಕಾರವು ಮರಿಯಪ್ಪನವರ ಕಾರ್ಯವನ್ನು ಗುರ್ತಿಸಿ ಅಖಿಲ ಭಾರತ ಖಾದಿ ಗ್ರಾಮೋದ್ಯೋಗ ಮಂಡಳಿಯ ಸದಸ್ಯರಾಗಿ ನೇಮಕ ಮಾಡಿತು. 1965ರಲ್ಲಿ ತುಮಕೂರು ಲೋಕಸಭೆಗೆ ಉಪಚುನಾವಣೆ ನಡೆದಾಗ ಕಾಂಗ್ರೆಸ್ ಪಕ್ಷ ಮರಿಯಪ್ಪನವರನ್ನು ತನ್ನ ಪಕ್ಷದ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿತು. 1967ರಲ್ಲಿ ನಡೆದ ನಾಲ್ಕನೆ ಮಹಾಚುನಾವಣೆಯಲ್ಲಿ ಮಧುಗಿರಿ ಲೋಕಸಭಾ ಕ್ಷೇತ್ರದಿಂದ ಆರಿಸಿ ಬಂದು ಮತ್ತೆ ಸಂಸದರಾದರು. ಅವರು ಅಧಿಕಾರದಲ್ಲಿದ್ದ ಸಮಯದಲ್ಲಿ ತುಮಕೂರು ಜಿಲ್ಲೆಯಲ್ಲಿ ಶಾಲಾ ಕಾಲೇಜು, ಆಸ್ಪತ್ರೆ,

ಸಹಕಾರ ಸಂಘಟನೆಗಳು, ಸಮುದಾಯ ಭವನ, ರಸ್ತೆ, ಸೇತುವೆ ಇವೇ ಮುಂತಾದ ಸಾರ್ವಜನಿಕ ಕೆಲಸ ಕಾರ್ಯಗಳು ಆಭಾಧಿತವಾಗಿ ನಡೆದವು. ಮರಿಯಪ್ಪನವರು ಶಿಸ್ತಿನ ಮರಿಯಪ್ಪನಾಗಿ ಬದುಕಿ ಎಲ್ಲರಿಂದಲೂ ಶಹಭಾಸ್‌ಗಿರಿ ಪಡೆದರು. ಇಂತಹ ಘನತೆವೆತ್ತ ಇವರು 1968 ಮೇ 28ರಂದು ವಿಧಿವಶರಾದರು.

ಶ್ರೀ ಶಾಂತವೇರಿ ಗೋಪಾಲಗೌಡ



ಈ ನಾಡು ಕಂಡ ಅಪರೂಪದ ರಾಜಕಾರಣಿ ಶಾಂತವೇರಿ ಗೋಪಾಲ ಗೌಡರು. ಪ್ರಾಮಾಣಿಕತೆ, ಸಜ್ಜನಿಕೆ, ನೈತಿಕ, ಸ್ಥೈರ್ಯ, ಜಾತ್ಯತೀತ ಮನೋಭಾವ, ನಿರ್ದಾಕ್ಷಿಣ್ಯ ಪ್ರವೃತ್ತಿ ಅವರನ್ನು ಅಮರವಾಗಿಸಿದೆ. ಡಾ॥ ರಾಮ ಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ ಗಾಂಧೀಜಿಯವರಂತಹ ನಾಯಕರ ತತ್ವಾದರ್ಶನಗಳನ್ನು ಮೆಚ್ಚಿ ಆ ತತ್ವಗಳನ್ನು ಕರ್ನಾಟಕದಲ್ಲಿ ಸ್ಥಾಪಿಸಲು ಹೋರಾಡಿದರು. ದೀನದಲಿತರ ಕಷ್ಟಗಳಿಗೆ ದನಿಯಾಗಿದ್ದರು.

ಬಾಲ್ಯ ಜೀವನ : ಶಾಂತವೇರಿ ಗೋಪಾಲಗೌಡರು 1923 ಮಾರ್ಚ್ 14ರಂದು ಮಲೆನಾಡಿನಲ್ಲಿ (ಶಿವಮೊಗ್ಗ) ಜನಿಸಿದರು. ತಂದೆ ಕೊಲ್ಲೂರಯ್ಯ ಅಥವಾ ಕೊಲ್ಲೂರೆಗೌಡ, ತಾಯಿ ಶ್ರೀಮತಿ ಶೇಷಮ್ಮ. ಗೋಪಾಲಗೌಡರ ಪೂರ್ವಿಕರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಶಾಂತವೇರಿ ಎಂಬ ಗ್ರಾಮದಿಂದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಅರಗದ ಸಮೀಪ ನೆಲೆಸಿದ್ದರಿಂದ ಈ ಕುಟುಂಬದ ಹೆಸರೇ ಕ್ರಮೇಣ ಶಾಂತವೇರಿ ಎಂದಾಯಿತು. 1941ರಲ್ಲಿ ಗೋಪಾಲಗೌಡರು ಲೋಯರ್ ಸೆಕೆಂಡರಿಯನ್ನು ಮುಗಿಸಿದರು. 1944ರಲ್ಲಿ ಶಿವಮೊಗ್ಗದಲ್ಲಿ ಇಂಟರ್ ಮೀಡಿಯೆಟ್ ಕಾಲೇಜಿಗೆ ಸೇರಿ ಯಶಸ್ವಿಯಾಗಿ ಶಿಕ್ಷಣವನ್ನು ಮುಗಿಸಿದರು.

ಕ್ರಾಂತಿಯ ಕಿಚ್ಚು : 1962ರಲ್ಲಿ ಚಲೇ ಜಾವ್ ಚಳವಳಿ ದೇಶದಾದ್ಯಂತ ಮೊಳಗಿತು. ಬ್ರಿಟಿಷರ ವಿರುದ್ಧ ಸಮರ ಸಾರಿದ ಭಾರತೀಯರ ಧೈರ್ಯ ಸ್ಥೈರ್ಯವನ್ನು ಕಂಡು ಮೆಚ್ಚಿದ ಗೌಡರು ತಾವು ಸ್ವಾತಂತ್ರ್ಯ ಕಹಳೆಯನ್ನು ಊದಿದರು. ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಇಳಿದರು. ಪ್ರಜಾಪ್ರಭುತ್ವದ ಹೆಸರಿನಲ್ಲಿ ದಬ್ಬಾಳಿಕೆ ದೌರ್ಜನ್ಯ ಮಾಡುವುದನ್ನು ಕಂಡರೆ ಆಗುತ್ತಿರಲಿಲ್ಲ. 1946ರಲ್ಲಿ ಮೈಸೂರು ಜಿಲ್ಲೆ ನಂಜನಗೂಡಿನಲ್ಲಿ ವಿದ್ಯಾರ್ಥಿ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. 1947ರಲ್ಲಿ ಶಿವಮೊಗ್ಗದಲ್ಲಿ ವಿದ್ಯಾರ್ಥಿ ಸಮಾವೇಶ ನಡೆದಾಗ ಅದರಲ್ಲಿ ಭಾಗವಹಿಸಿದುದೇ

ಅಲ್ಲದೆ ಚಳುವಳಿಕಾರರನ್ನು ಉದ್ದೇಶಿಸಿ ಭಾಷಣ ಮಾಡಿ ತಾವು ಒಬ್ಬ ಕ್ರಾಂತಿಕಾರಿ ಎಂಬುದನ್ನು ಸಾಬೀತು ಪಡಿಸಿದರು. ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಬಂಧನಕ್ಕೆ ಒಳಗಾದರು. ಭೂ ಸುಧಾರಣೆ ಶಾಸನ, ಉರಿಗಾಂ ಚಿನ್ನದ ಗಣಿ ರಾಷ್ಟ್ರೀಕರಣ, ರಸ್ತೆ ಸಾರಿಗೆ ರಾಷ್ಟ್ರೀಕರಣ, ಕರ್ನಾಟಕ ಏಕೀಕರಣ, ಮೈಸೂರು ಚಲೋ ಹೀಗೆ ಒಂದಿಲ್ಲೊಂದು ಚಳವಳಿ ಇಲ್ಲವೇ ಹರತಾಳ ಹಮ್ಮಿಕೊಂಡು ಸಮಾಜವಾದವನ್ನು ಜನಪ್ರಿಯಗೊಳಿಸುವಲ್ಲಿ ಶ್ರಮಿಸಿದರು. ಕನ್ನಡಿಗರ ಜಾಗೃತಿಗಾಗಿ ಸಾಹಿತಿಗಳ, ತರುಣರ ಒಂದು ಪಡೆಯನ್ನೇ ಕಟ್ಟಿ ಕನ್ನಡ ಯುವಜನ ಸಭಾದ ಆರಂಭಕ್ಕೆ ಕಾರಣರಾದರು.

ಕಾಗೋಡು ರೈತ ಸತ್ಯಾಗ್ರಹ ಮತ್ತು ಗೋಪಾಲಗೌಡರು

ಗೋಪಾಲಗೌಡರು ಇಂದಿಗೂ ಜನಮಾನಸದಲ್ಲಿ ಉಳಿದಿರುವುದು ಕಾಗೋಡು ಸತ್ಯಾಗ್ರಹವನ್ನು ಯಶಸ್ವಿಗೊಳಿಸಿದ್ದಕ್ಕೆ. ಗೇಣಿ ಪದ್ಧತಿ ವಿರುದ್ಧ ಚಳವಳಿ ಮಾಡಿ ಸಾಮಾಜಿಕ ಕ್ರಾಂತಿ ಸಂಧಿಸಿದ ಸತ್ಯಾಗ್ರಹವಿದು. ಗೇಣಿ ಭತ್ತದ 'ಕೊಳಗ' ಅಳತೆಯ ಪ್ರಮಾಣದ ಸಂಬಂಧದಲ್ಲಿ ಸಂಘರ್ಷಕ್ಕೆ ನಾಂದಿ ಆಯಿತು. ಶ್ರೀ ಗಣಪತಿಯಪ್ಪ ಕಾಗೋಡು ಸತ್ಯಾಗ್ರಹದ ಕಿಚ್ಚು ಹಚ್ಚಿದರು. 1951ರಲ್ಲಿ ಜನವರಿಯಲ್ಲಿ ಶ್ರೀ ಕಡಿದಾಳ್ ಮಂಜಪ್ಪ, ಗಣಪತಿಯಪ್ಪ, ಹಾಗೂ ಗುರುವಯ್ಯ ಗೌಡರು ಶಿವಮೊಗ್ಗ ಜಿಲ್ಲಾಧಿಕಾರಿಯವರ ಸಮ್ಮುಖದಲ್ಲಿ ಮಾತುಕತೆ ನಡೆಸಿದರೂ ಫಲಕಾರಿಯಾಗಲಿಲ್ಲ. ಚಳವಳಿಯ ಕಾವು ಏರತೊಡಗಿತು. 1951 ಏಪ್ರಿಲ್‌ನಲ್ಲಿ ಶ್ರೀ ಸದಾಶಿವರಾವ್ ಮತ್ತು ಪಕ್ಷದ ಶಿವಮೊಗ್ಗ ಜಿಲ್ಲಾಧ್ಯಕ್ಷರಾಗಿದ್ದ ಶ್ರೀ ಗೋಪಾಲಗೌಡರು ಕಾಗೋಡಿಗೆ ಬಂದು ಮುಂದಿನ ಕ್ರಮದ ಬಗ್ಗೆ ಕ್ರಿಯಾ ಸಮಿತಿ ರಚಿಸಿದರು. ಗೋಪಾಲಗೌಡರು ತಮ್ಮ ಮೇಲೆ ವಾರೆಂಟ್ ಇದ್ದರೂ ಲೆಕ್ಕಿಸದೆ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವಂತೆ ಜನರನ್ನು ಪ್ರೇರೇಪಿಸಿದರು. 3.7.1951ರಲ್ಲಿ ಪೋಲೀಸರು ಗೌಡರನ್ನು ಬಂಧಿಸಿದರು. 1951 ಜೂನ್ 14ರಂದು ಡಾ. ರಾಮಮನೋಹರ ಲೋಹಿಯಾರವರು ಕಾಗೋಡಿಗೆ ಬಂದು ಚಳವಳಿಗೆ ಧುಮುಕಿದರು. ಪೋಲೀಸರು ಲೋಹಿಯಾರನ್ನು ಬಂಧಿಸಿದರು. ಕಾಗೋಡು ಸತ್ಯಾಗ್ರಹ, ದೇಶದಾದ್ಯಂತ ಸುದ್ದಿಯಾಯಿತು. ಶಾಂತವೇರಿ ಗೋಪಾಲಗೌಡರು ಬದುಕಿರುವಾಗಲೇ 'ಜಾನಪದ ಕಥಾ ನಾಯಕ'ರಾದರು.

ತಮ್ಮ 41ನೇ ವಯಸ್ಸಿನಲ್ಲಿ ಹುಬ್ಬಳ್ಳಿ ತಾಲ್ಲೂಕು ನೆಲವಡಿ ಗ್ರಾಮದ ವಕೀಲರಾಗಿದ್ದ ಡಿ.ಎಲ್. ಪಾಟೀಲರ ಕುಮಾರಿ ಸೋನಕ್ಕಳನ್ನು 1946 ಮಾರ್ಚಿ 2 ರಂದು ಧಾರವಾಡದ ಟ್ಯಾಗೋರ್ ಹಾಲ್‌ನಲ್ಲಿ ಸರಳವಾಗಿ ವಿವಾಹವಾದರು. 1969ರಲ್ಲಿ ವೀರೇಂದ್ರ ಪಾಟೀಲರು ಬಹಳ ಒತ್ತಾಯ ಮಾಡಿ ಒಂದು ನಿವೇಶನವನ್ನು ಮಂಜೂರು ಮಾಡಿದರು. ಗೌಡರಿಗೆ ಅದು ಇಷ್ಟವಾಗಲಿಲ್ಲ. ಸರ್ಕಾರಕ್ಕೆ

ಹಿಂದಿರುಗಿಸುವ ಏರ್ಪಾಟು ಮಾಡುತ್ತಿರುವಾಗಲೇ ಪತ್ನಿ ಸೋನಕ್ಕ ಮಕ್ಕಳಿಗಾದರೂ ನೆಲೆ ಬೇಡವೇ ಎಂದಾಗ ಮಂಜೂರಾದ ನಿವೇಶನವನ್ನು ಉಳಿಸಿಕೊಂಡರು.

ಗೌಡರು ಬಡತನ ಮತ್ತು ಕಷ್ಟದ ಪರಿಸ್ಥಿತಿಯಲ್ಲಿ ಇರುವವರ ವಿಚಾರ ಕೇಳಿದಾಗ ಕರಗಿ ನೀರಾಗುತ್ತಿದ್ದರು. ಶಾಂತವೇರಿಯವರು ತೀರ್ಥಹಳ್ಳಿಯಲ್ಲಿ ಇದ್ದಾರೆ ಎಂದರೆ ಎಷ್ಟೋ ಜನ ತಮ್ಮ ಕಷ್ಟ ಸುಖಗಳನ್ನು ಅವರೊಡನೆ ಹೇಳಿಕೊಂಡು ತಮ್ಮ ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಿದ್ದರು. ಒಮ್ಮೆ ಮುಸ್ಲಿಂ ಬಾಂಧವ ಗೌಡರ ಹತ್ತಿರ ತಮ್ಮ ಮಗಳ ಮದುವೆ ಮಾಡಬೇಕಾಗಿದ್ದು ತಮಗೆ ಹಣಕಾಸಿನ ಬಗ್ಗೆ ಇರುವ ತೊಂದರೆಯನ್ನು ನಿವೇದಿಸಿಕೊಂಡರು. ಆ ಕ್ಷಣದಲ್ಲಿಯೇ ತಮ್ಮ ಜೇಬಿನಲ್ಲಿರುವ ಹಣವನ್ನು ಪೂರ್ತಿಯಾಗಿ ಕೊಟ್ಟು ಮಗಳ ಮದುವೆಯನ್ನು ಮಾಡಲು ಹಾರೈಸಿದರು. ಮಹಾತ್ಮಗಾಂಧಿ, ಅಂಬೇಡ್ಕರ್, ಲೋಹಿಯಾ ಇನ್ನೂ ಮುಂತಾದವರ ಪ್ರಭಾವಕ್ಕೆ ಒಳಗಾಗಿದ್ದು ಕ್ರಾಂತಿಯ ಬಗ್ಗೆ ಹೆಚ್ಚು ಒತ್ತು ನೀಡಿದರು. 1966ರಲ್ಲಿ ಗೋಪಾಲಗೌಡರು ಲೋಕಸೇವಾ ಆಯೋಗದ ಭ್ರಷ್ಟಾಚಾರ, ಸ್ವಜನ ಪಕ್ಷಪಾತದಿಂದ ಬೇಸತ್ತು ಲೋಕಸೇವಾ ಆಯೋಗವನ್ನು ಮುಚ್ಚುವುದು ಒಳ್ಳೆಯದು ಏಕೆಂದರೆ ಈ ಆಯೋಗವು ಅವ್ಯವಸ್ಥೆಯ ಆಗರವಾಗಿದೆ ಎಂದು ಗುಡುಗಿದರು. ಹಾಗೂ ಆಯೋಗವನ್ನು ಭ್ರಷ್ಟರ ಕೈಯಿಂದ ಮುಕ್ತಗೊಳಿಸಬೇಕೆಂದು ಸರ್ಕಾರಕ್ಕೆ ಸಲಹೆ ನೀಡಿದರು.

ಗೋಪಾಲಗೌಡರು ಸಮಾಜವಾದದ ತತ್ವಕ್ಕೆ ಉತ್ತಮ ಉದಾಹರಣೆಯಾಗಿ ನಾಡಿನಾದ್ಯಂತ ಹೆಸರುಗಳಿಸಿದರು. ಕಾಗೋಡು ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿ ಜನಮಾನಸದಲ್ಲಿ ಇಂದಿಗೂ ಉಳಿದಿದ್ದಾರೆ. ಬಡವರ, ಗೇಣಿದಾರರ, ದೀನದಲಿತರ ದನಿಯಾಗಿ ನಿಂತರು. ಕೊನೆಯವರೆಗೂ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡದ್ದು ಅವರ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ. ಇವರು 1972 ಜೂನ್ 9 ರಂದು ವಿಧಿವಶರಾದರು. ಪ್ರಸ್ತುತ ರಾಜಕಾರಣಿಗಳಿಗೆ ಇವರು ಮಾದರಿಯಾಗಿದ್ದಾರೆ.

ಶ್ರೀ ಎಂ.ವಿ. ಕೃಷ್ಣಪ್ಪ



ಛಲ, ಬುದ್ಧಿವಂತಿಕೆ, ನಿಸ್ವಾರ್ಥ ಸೇವೆ ಮತ್ತು ಉತ್ತಮವಾದ ಶಿಕ್ಷಣ ಪಡೆದು ಚಿಕ್ಕವಯಸ್ಸಿನಲ್ಲಿಯೇ ಏನೆಲ್ಲ ಸಾಧಿಸಿ ಎಲ್ಲರಿಗೂ ಮಾದರಿಯಾದ ವ್ಯಕ್ತಿಯೇ ಮೋತಕಪಲ್ಲಿ ವೆಂಕಟ ರಾಮೇಗೌಡ ಕೃಷ್ಣಪ್ಪ. ಇವರ ತಂದೆ ತಾಯಂದಿರು. ವೆಂಕಟರಾಮೇಗೌಡ ಮತ್ತು ಚಂಗಮ್ಮ ಆದರ್ಶ ದಂಪತಿಗಳು ಮಾತ್ರವಲ್ಲ ಮಾದರಿ ಕೃಷಿಕರೂ ಕೂಡ ಹೌದು. ತಮ್ಮ ಪಾಲಿಗೆ ಬಂದ ಅತ್ಯಲ್ಪ ಜಮೀನಿನಲ್ಲೇ ಉತ್ತಮವಾಗಿ ವ್ಯವಸಾಯ ಮಾಡಿ 1888ರಲ್ಲಿ ಅಂದಿನ ಮೈಸೂರು

ಸಂಸ್ಥಾನವು ಏರ್ಪಡಿಸಿದ್ದ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನದಲ್ಲಿ ಆದರ್ಶ ರೈತ ಪ್ರಶಸ್ತಿಗೆ ಭಾಜನರಾದರು. ಅಂತಹ ಆದರ್ಶ ರೈತನ ಆದರ್ಶ ಪುತ್ರರಾದ ಕೃಷ್ಣಪ್ಪನವರು 1.6.1918ರಲ್ಲಿ ಮೋತಕಪಲ್ಲಿಯಲ್ಲಿ ಜನಿಸಿದರು.

ಪ್ರಾಥಮಿಕ ಶಿಕ್ಷಣವನ್ನು ತಮ್ಮ ಹುಟ್ಟೂರಿನಲ್ಲೇ ಪಡೆದ ಕೃಷ್ಣಪ್ಪನವರು ವ್ಯವಸಾಯದ ಕಷ್ಟಸುಖಗಳನ್ನು ಅನುಭವಿಸಿಯೇ ಬೆಳೆದವರು. ಬೆಂಗಳೂರಿನ ಬಸವನಗುಡಿಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪಡೆದು ಮತ್ತೆ ಕೋಲಾರಕ್ಕೆ ಹಿಂತಿರುಗಿ ಕೆ.ಜಿ.ಎಫ್.ನ ಮುನಿಸಿಪಲ್ ಪ್ರೌಢಶಾಲೆಯಲ್ಲಿ ಕಲಿತರು. ಇಂಟರ್ಮೀಡಿಯೆಟ್ ಮುಗಿಸಿ ಉನ್ನತ ಶಿಕ್ಷಣಕ್ಕೆ ಪಾದಾರ್ಪಣೆ ಮಾಡುವ ಬದಲು ಸ್ವಾತಂತ್ರ್ಯ ಹೋರಾಟಕ್ಕೆ ಪಾದಾರ್ಪಣೆ ಮಾಡಿದರು. ಕೋಲಾರ ಜಿಲ್ಲೆ ಹೇಳಿ ಕೇಳಿ ಬೆಂಗಾಡು ಅಂದು ದೀನದಲಿತ ಹಾಗೂ ಬಡ ರೈತರಿಂದ, ತುಂಬಿದ್ದ ಜಿಲ್ಲೆಯಾಗಿತ್ತು. ಕೋಲಾರ ಚಿನ್ನದ ಗಣಿಯು ಬ್ರಿಟಿಷರಿಗೆ ಮಾತ್ರ ಚಿನ್ನ ತುಂಬಿ ಕೊಡುವ ಗಣಿಯಾಗಿದ್ದಿತೇ ವಿನಃ ಬಡ ಭಾರತೀಯರ ಹಾಗೂ ಗಣಿ ಕಾರ್ಮಿಕರ ಪಾಲಿಗೆ ನರಕದ ಕೂಪವಾಗಿತ್ತು. ನಾಗರಿಕ ಸೌಲಭ್ಯಗಳಾಗಲಿ, ಉತ್ತಮವಾದ ಸಂಬಳ ಸಾರಿಗೆಯಾಗಲಿ ಇಲ್ಲದೆ ಕಾರ್ಮಿಕರ ಜೀವನ ದುಸ್ತರವಾಗಿತ್ತು. ಬಾಲಗಂಗಾಧರ ತಿಲಕ್, ಮಹಾತ್ಮಾಗಾಂಧಿ, ಸರದಾರ್ ವಲ್ಲಭಬಾಯಿ ಪಟೇಲರ ಆದರ್ಶಗಳನ್ನು ಪಾಲಿಸಿಕೊಂಡು ಬಂದಿದ್ದ ಕೃಷ್ಣಪ್ಪನವರು ಇದನ್ನು ಕಣ್ಣಾರೆ ಕಂಡು ಸಹಿಸದೆ ಬಡ ಕೂಲಿ ಕಾರ್ಮಿಕರ, ದೀನ ದಲಿತರ ಪರ ಹೋರಾಟಕ್ಕಿಳಿದರು. ಅಸಂಘಟಿತರಾಗಿದ್ದ ಕಾರ್ಮಿಕರಿಗೆ ಧೈರ್ಯ, ಸ್ಥೈರ್ಯ ತುಂಬಿ ಸಂಘಟಿತರನ್ನಾಗಿ ಮಾಡಿದರು. ಇದರಿಂದ ಕಾರ್ಮಿಕರಲ್ಲಿ ಹೊಸಚೇತನ ಮೂಡಿದಂತಾಯಿತು. ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಸರ್ಕಾರವನ್ನು, ಉದ್ಯಮಪತಿಗಳನ್ನು ಒತ್ತಾಯಿಸತೊಡಗಿದರು. ಕಾರ್ಮಿಕರು ಕೃಷ್ಣಪ್ಪನವರ ನೇತೃತ್ವದಲ್ಲಿ ಒಂದಾಗಿ ತಮ್ಮ ಹಕ್ಕುಗಳಿಗಾಗಿ ಉಗ್ರ ಪ್ರತಿಭಟನೆ ಮಾಡತೊಡಗಿದರು. ಕೃಷ್ಣಪ್ಪನವರು ಕಾರ್ಮಿಕ ನಾಯಕರಾಗಿ ಹೊರಹೊಮ್ಮಿದರು. ಬ್ರಿಟಿಷರ ಕೆಂಗಣ್ಣಿಗೆ ಬಿದ್ದ ಕೃಷ್ಣಪ್ಪನವರನ್ನು ಗಡಿಪಾರು ಮಾಡಿದರು. ಹಿರಿಯರ ಸಲಹೆಯ ಮೇರೆಗೆ ತಮ್ಮ ಉನ್ನತ ವ್ಯಾಸಂಗವನ್ನು ಮುಂದುವರೆಸಲು ನಿರ್ಧರಿಸಿದರು.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ವ್ಯಾಸಂಗ ಮಾಡಲು ಕಾಲೇಜಿಗೆ ಸೇರಿದರು. ಮೈಸೂರಿನಲ್ಲಿ ಹೆಚ್.ಕೆ. ವೀರಣ್ಣಗೌಡ, ಸಾಹುಕಾರ್ ಚೆನ್ನಯ್ಯ, ವೀರಕೇಸರಿ ಸೀತಾರಾಮಯ್ಯ ಇನ್ನೂ ಮುಂತಾದ ನಾಯಕರ ಪರಿಚಯವಾಯಿತು. ಈಗಾಗಲೇ ಅವರುಗಳು ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದರು. ಕೃಷ್ಣಪ್ಪನವರಿಗೆ ಇವರ ಪರಿಚಯ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಯ್ತು. ಮುಂದೆ ಸ್ವಾತಂತ್ರ್ಯ ಹೋರಾಟಕ್ಕೆ ಇದು ಬಹಳಷ್ಟು ನೆರವಾಯಿತು. ವಿದ್ಯಾರ್ಥಿನಾಯಕನಾಗಿ

ಬೆಳೆದು ಕೃಷ್ಣಪ್ಪನವರು ನೂರುಜನಗಳ ಮಧ್ಯೆ ಗುರ್ತಿಸುವಷ್ಟು ಬೆಳೆದರು. ಬಿ.ಎ. ಪದವಿಯನ್ನು ಮುಗಿಸಿದ ಕೃಷ್ಣಪ್ಪನವರು ಮದ್ರಾಸಿನಲ್ಲಿ ಕಾನೂನು ಪದವಿ ಅಭ್ಯಾಸಕ್ಕೆ ತೆರಳಿದರು. ಮದ್ರಾಸಿನಲ್ಲಿ ಸ್ವಾತಂತ್ರ್ಯ ಹೋರಾಟ ಬಿರುಸಿನಿಂದ ನಡೆಯುತ್ತಿತ್ತು. ಹುಟ್ಟು ಹೋರಾಟಗಾರರಾದ ಕೃಷ್ಣಪ್ಪನವರ ಮನಸ್ಸು ಓದಿಗಿಂತಲೂ ಹೋರಾಟಕ್ಕೆ ತನ್ನ ಒಲವು ತೋರಿತು. ಕಾನೂನು ಕಾಲೇಜಿಗೆ ಗುಡ್ ಬೈ ಹೇಳಿ ಊರಿಗೆ ತೆರಳಿದರು. ಹಿರಿಯರಾದ ಕೆ.ಸಿ. ರೆಡ್ಡಿಯವರು ಕೋಲಾರದಲ್ಲಿ ಬ್ರಿಟಿಷರ ವಿರುದ್ಧ ಸಮರ ಸಾರಿ ಕಾರ್ಮಿಕರ ಪರ ಹೋರಾಟಕ್ಕಿಳಿದರು. ಕೃಷ್ಣಪ್ಪನವರು ಕೆ.ಸಿ. ರೆಡ್ಡಿಯವರನ್ನು ಕೂಡಿಕೊಂಡರು.


1944ರಿಂದ 1947ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಕೋಲಾರದ ಮುಳಬಾಗಿಲು ಪ್ರದೇಶವನ್ನು ಪ್ರತಿನಿಧಿಸಿದರು. 1947ರಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ನಡೆದಾಗ ಅರಮನೆ ಚಳವಳಿ ಅಥವಾ ಮೈಸೂರು ಚಲೋ ಚಳವಳಿಯಲ್ಲಿ ಭಾಗವಹಿಸಿದ್ದರು. 1947-1952ರವರೆಗೆ ಮೈಸೂರು ರಾಜ್ಯಾಂಗ ಸಭೆಯ ಮುಖ್ಯಸಚೇತರಾಗಿ ಸೇವೆಸಲ್ಲಿಸಿದರು. 1952ರಲ್ಲಿ ಲೋಕಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದಿಂದ ಚುನಾವಣೆಗೆ ನಿಂತು ಕಾಂಗ್ರೆಸ್‌ನಿಂದ ಲೋಕಸಭಾ ಸದಸ್ಯರಾಗಿ ಬಹುಮತಗಳಿಂದ ಆಯ್ಕೆಯಾದರು. ಜವಹರಲಾಲ್ ನೆಹರುರವರು ಕೃಷ್ಣಪ್ಪನವರಲ್ಲಿದ್ದ ನಾಯಕತ್ವಕ್ಕೆ ಬೇಕಾದ ಶಕ್ತಿ, ಮತ್ತು ಯುಕ್ತಿಯನ್ನು ಕಂಡು ಕೃಷಿ ಮತ್ತು ಆಹಾರ ಖಾತೆಯ ರಾಜ್ಯಸಚಿವರನ್ನಾಗಿ ನೇಮಕ ಮಾಡಿದರು. ಆಗ ಕೃಷ್ಣಪ್ಪನವರಿಗೆ ಕೇವಲ 34 ವರ್ಷ ವಯಸ್ಸಾಗಿತ್ತು.

ಸ್ವಾತಂತ್ರ್ಯ ಬಂದ ಹೊಸದರಲ್ಲಿ ರಾಷ್ಟ್ರ ಹಲವಾರು ಸಮಸ್ಯೆಗಳನ್ನು ಎದುರಿಸು -ತ್ತಿತ್ತು. ಅದರಲ್ಲೂ ವಿಶೇಷವಾಗಿ ಆಹಾರ ಸಮಸ್ಯೆ. ಕೃಷ್ಣಪ್ಪನವರು ಕೃಷಿ ಮತ್ತು ಹೈನು -ಗಾರಿಕೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರು. ಹಾಲೆಂಡ್, ಡೆನ್ಮಾರ್ಕ್, ಸ್ವೀಡನ್ ರಾಷ್ಟ್ರ- ಗಳಿಗೆ ಭೇಟಿ ನೀಡಿ ಭಾರತದ ಕೃಷಿ ಮತ್ತು ಹೈನುಗಾರಿಕೆಯನ್ನು ಅಭಿವೃದ್ಧಿ ಪಡಿಸಿದರು. ಗುಜರಾತ್, ಮದ್ರಾಸ್, ಕರ್ನಾಟಕ ಇನ್ನೂ ಮುಂತಾದ ಕಡೆ ಬೃಹತ್ ಕ್ಷೀರ ಕೇಂದ್ರಗಳನ್ನು ತೆರೆದರು. ರೈತರಿಗೆ ಕೃಷಿಯ ಜೊತೆಗೆ ಹೈನುಗಾರಿಕೆ ಲಾಭದಾಯಕ -ವಾಗುವಂತೆ ಮಾಡಿದ ಕೀರ್ತಿ ಕೃಷ್ಣಪ್ಪನರಿಗೆ ಸಲ್ಲುತ್ತದೆ. ಮಹಾರಾಷ್ಟ್ರ, ಗುಜರಾತ್, ರಾಜಾಸ್ಥಾನ ಇನ್ನೂ ಮುಂತಾದ ಕಡೆ ಸಕ್ಕರೆ ಕಾರ್ಖಾನೆಗಳನ್ನು ತೆರೆಯಲು ಕಾರಣಕರ್ತರಾದರು.

ಕಾರ್ಮಿಕರ ಬಗ್ಗೆ ಬಹಳಷ್ಟು ಕಾಳಜಿಯನ್ನು ಹೊಂದಿದ್ದ ಕೃಷ್ಣಪ್ಪನವರು ಪಂಚವಾರ್ಷಿಕ ಯೋಜನೆಯಡಿ ರಾಷ್ಟ್ರದಾದ್ಯಂತ ಕೈಗಾರಿಕೆಗಳನ್ನು ಸ್ಥಾಪಿಸುವಂತಹ ಸಮಯದಲ್ಲಿ ಕೃಷ್ಣಪ್ಪನವರು ಬೆಂಗಳೂರಿನಲ್ಲಿ ಬಿ.ಇ.ಎಂ.ಎಲ್. ಕಾರ್ಖಾನೆಯ

ಸ್ಥಾಪನೆಗೆ ಕಾರಣಕರ್ತರಾದರು. ಗೌರಿಬಿದನೂರಿನಲ್ಲಿ ಸಕ್ಕರೆ ಕಾರ್ಖಾನೆಯ ಸ್ಥಾಪನೆ, ಕೆ.ಜಿ.ಎಫ್.ನಲ್ಲಿ ಗೋಲ್ಡನ್ ವ್ಯಾಲಿ ಎಜುಕೇಷನ್ ಇನ್‌ಸ್ಟಿಟ್ಯೂಟ್ ಎಂಬ ಹೆಸರಿನಲ್ಲಿ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದರು. ಬೆಂಗಳೂರಿನ ರಾಜ್ಯ ಒಕ್ಕಲಿಗರ ಸಂಘದ ಬಗ್ಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದ ಕೃಷ್ಣಪ್ಪನವರು ಸಂಘದ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದರು. ಇವರು ಆಗಸ್ಟ್ 1980ರಲ್ಲಿ ಇನ್ನಿಲ್ಲವಾದರು.

ಕೆ.ವಿ. ಶಂಕರಗೌಡ



ಈ ನಾಡು ಕಂಡ ಶ್ರೇಷ್ಠ ರಾಜಕಾರಣಿ, ಸಹಕಾರ ಧುರೀಣ, ಸಾಹಿತಿ, ನಾಟಕಕಾರರೆಂದರೆ ಮಂಡ್ಯದ ಕೆ.ವಿ. ಶಂಕರಗೌಡರು. ರಾಜ್ಯ ಇಲ್ಲವೆ ದೇಶದ ಜನರಿಗೆ ಮಂಡ್ಯ ಎಂದರೆ ತಟ್ಟನೆ ನೆನಪಿಗೆ ಬರುವುದು ಕೆ.ವಿ. ಶಂಕರಗೌಡರು. 60ರ ದಶಕದಲ್ಲಿ ಒಕ್ಕಲಿಗರ ವಿದ್ಯಾರ್ಥಿ ನಿಲಯವನ್ನು ಶಾಲೆ-ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಶಿಕ್ಷಣ ದಾಸೋಹ ನೀಡಿದ ವ್ಯಕ್ತಿ.

ಮಂಡ್ಯ ನಗರಕ್ಕೆ ಹತ್ತು ಕಿ.ಮೀ. ದೂರದ ಕೀಲಾರ ಗ್ರಾಮದಲ್ಲಿ 1915 ಜುಲೈ 15 ರಂದು ಜನಿಸಿದರು. ವೀರೇಗೌಡ ಮತ್ತು ವೀರಮ್ಮ ಇವರ ತಂದೆ-ತಾಯಿ ಯರು. ಹುಟ್ಟೂರಾದ ಕೀಲಾರದಲ್ಲಿ ಪ್ರಾಥಮಿಕ, ಮಂಡ್ಯ ನಗರದಲ್ಲಿ ಮಾಧ್ಯಮಿಕ ಹಾಗೂ ಚನ್ನಪಟ್ಟಣದಲ್ಲಿ ಪ್ರೌಢ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದರು. ಮೈಸೂರಿನಲ್ಲಿ ಇಂಟರ್ ಮೀಡಿಯಟ್‌ನಲ್ಲಿ ತೇರ್ಗಡೆ ಹೊಂದಿ ಬೆಂಗಳೂರಿನಲ್ಲಿ ಬಿ.ಎಸ್ಸಿ. ಪದವಿಗಳಿಸಿದರು. ಬೆಳಗಾಂ ಕಾನೂನು ಕಾಲೇಜಿನಲ್ಲಿ ವ್ಯಾಸಂಗ ಮಾಡಿ 1944ರಲ್ಲಿ ಕಾನೂನು ಪದವಿಯನ್ನು ಗಳಿಸಿದರು. ಮಂಡ್ಯದಲ್ಲಿ ವಕೀಲಿ ವೃತ್ತಿ ಹಿಡಿದರು. ಅವರ ಮನಸ್ಸು ಸಮಾಜ ಸುಧಾರಣೆಯತ್ತ ವಾಲಿತು.

1945ರಲ್ಲಿ ಜಿಲ್ಲಾ ಬೋರ್ಡಿನ ಚುನಾವಣೆಗೆ ಸ್ಪರ್ಧಿಸಿ ಗೆದ್ದು ಸದಸ್ಯರಾದರು. 1947ರಲ್ಲಿ ರಾಜ್ಯಾಂಗ ಸಭೆಗೆ ಆಯ್ಕೆಯಾದರು. 1947 ಸೆಪ್ಟೆಂಬರ್‌ನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯ ಪ್ರಾರಂಭವಾಗಿ ಅರಮನೆ ಚಳವಳಿ ಪ್ರಾರಂಭವಾಯ್ತು. ಇದರಲ್ಲಿ ಗೌಡರು ಪೂರ್ಣಪ್ರಮಾಣದಲ್ಲಿ ಭಾಗವಹಿಸಿದ ಫಲವಾಗಿ ಸೆರೆವಾಸ ಅನುಭವಿಸಬೇಕಾಗಿ ಬಂದಿತು. 1952ರ ಪ್ರಥಮ ಸಾರ್ವತ್ರಿಕ ಚುನಾವಣೆಗೆ ನಿಂತು ವಿಧಾನ ಸಭಾ ಸದಸ್ಯರಾದರು. ಶಿಸ್ತು ಸಂಯಮದ ವ್ಯಕ್ತಿಯಾದ ಗೌಡರು ತಾವು ನಂಬಿದ ಮೌಲ್ಯಗಳಿಗೆ ಧಕ್ಕೆ ಬಂದಾಗ 1954ರಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಮಂಡ್ಯದ ಬದಲಾದ ರಾಜಕೀಯದಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ಗೆಲ್ಲುವುದು ಕಷ್ಟವಾಯಿತು. 1966ರಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಮೇಲ್ಮನೆಯ

ಸಭಾ ಸದಸ್ಯರಾದರು. ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದ ವೇಳೆ ಅವರಿಗೆ ಆಪ್ತರಾಗಿದ್ದ ಶಂಕರಗೌಡರನ್ನು ಶಿಕ್ಷಣ ಸಚಿವರನ್ನಾಗಿ ಮಾಡಿದರು. ನಂತರ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾದಾಗ ಶಂಕರಗೌಡರನ್ನೇ ಮುಂದುವರಿಸಿದರು. ಹೀಗೆ ಒಟ್ಟು ನಾಲ್ಕು ವರ್ಷಗಳ ಕಾಲ ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿದರು. ಶಿಕ್ಷಕರ ವೇತನ ಮತ್ತು ಅವರ ಸ್ಥಾನಮಾನ ತೀರ ನಿಕೃಷ್ಟವಾಗಿತ್ತು. ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಕರಿಗೆ ಕಡಿಮೆ ವೇತನ ನೀಡಿ ಹೆಚ್ಚಿನ ವೇತನ ಕೊಟ್ಟಿರುವಂತೆ ಸಹಿ ಮಾಡಿಸಿ-ಕೊಳ್ಳುತ್ತಿದ್ದರು. ಇದು ಸಚಿವರಿಗೆ ತಿಳಿಯುತ್ತಲೇ ಶಿಕ್ಷಕರಿಗೆ ಚೆಕ್ ಮೂಲಕ ವೇತನ ನೀಡುವಂತೆ ಕಾನೂನು ಜಾರಿಗೆ ತಂದ ಕೀರ್ತಿ ಕೆ.ವಿ. ಶಂಕರಗೌಡರಿಗೆ ಸಲ್ಲುತ್ತದೆ.

1970ರಲ್ಲಿ ಶಿಕ್ಷಣ ಇಲಾಖೆಯಲ್ಲಿ ವಿಕೇಂದ್ರೀಕರಣ ಮಾಡಿ ಕೆಳಗಿನ ಅಧಿಕಾರಿಗಳಿಗೆ ಹೆಚ್ಚಿನ ಹೊಣೆ ಮತ್ತು ಜವಾಬ್ದಾರಿ ಹೊರಿಸಿದರು. ಶಿಕ್ಷಣ ತಜ್ಞರಾಗಿದ್ದ ಜೆ.ಬಿ. ಮಲ್ಲರಾಧ್ಯ ಮತ್ತು ಪ್ರೊ॥ ಎಂ.ಪಿ.ಎಲ್. ಶಾಸ್ತ್ರಿ ಮುಂತಾದವರನ್ನು ಒಳಗೊಂಡ ಶಿಕ್ಷಣ ಸಮಿತಿ ನೇಮಕ ಮಾಡಿ ಹೊಸ ಯೋಜನೆಯನ್ನು ಜಾರಿಗೆ ತಂದು "ಮೈಸೂರು ಯೋಜನೆ" ಎಂಬ ಶಿಕ್ಷಣ ಸುಧಾರಣೆಗೆ ನಾಂದಿ ಹಾಡಿದರು. ರಾಷ್ಟ್ರಕವಿ ಕುವೆಂಪುರವರು ಶಂಕರಗೌಡರನ್ನು "ನಿತ್ಯ ಸಚಿವ" ಎಂದು ಪ್ರೀತಿಯಿಂದ ಕರೆದರು.

ಸಹಕಾರ ಕ್ಷೇತ್ರಕ್ಕೆ ಕೊಡುಗೆ – 1947ರಲ್ಲಿ ಮಂಡ್ಯದಲ್ಲಿ "ರೈತರ ಸಹಕಾರ ಸಂಘ"ವನ್ನು ಮಂಡ್ಯ ನಗರದ ಹೃದಯ ಭಾಗದಲ್ಲಿ ಸ್ಥಾಪಿಸಿದರು. 'ರೈತರ ವಿವಿಧೋದ್ದೇಶ ಸಹಕಾರ ಸಂಘ' ರಾಷ್ಟ್ರಮಟ್ಟದಲ್ಲಿ ಹೆಸರುವಾಸಿಯಾಯಿತ್ತು. ರೈತರಿಗೆ ಯಂತ್ರೋಪಕರಣ ಸರಬರಾಜು, ಬೀಜ ಮತ್ತು ಗೊಬ್ಬರ ಮಾರಾಟ ಇದೆ ಮುಂತಾದ ಸೌಲಭ್ಯ ದೊರೆಯುವಂತೆ ಮಾಡಿದರು.

ಶಿಕ್ಷಣಕ್ಕೆ ಕೊಡುಗೆ – ಹಿಂದೊಮ್ಮೆ ಮಂಡ್ಯ ಜಿಲ್ಲೆಯು ಗ್ರಾಮಗಳಿಂದ ಕೂಡಿದ ಹಿಂದುಳಿದ ಜಿಲ್ಲೆಯಾಗಿತ್ತು. 1952ರಲ್ಲಿ ಸಾರ್ವಜನಿಕ ಒಕ್ಕಲಿಗರ ವಿದ್ಯಾರ್ಥಿನಿಲಯ -ವನ್ನು ಸ್ಥಾಪಿಸಿದರು. ಅದನ್ನು ಮುಂದುವರಿಸಲು ಕಷ್ಟವಾದಾಗ ತಾವು ಸ್ಥಾಪಿಸಿದ ಶಾಲಾ-ಕಾಲೇಜುಗಳ ಶಿಕ್ಷಕ-ಶಿಕ್ಷಕೇತರ ಸಹಾಯದಿಂದ ಪೌರಾಣಿಕ ನಾಟಕ ಆಡಿ ಸಾರ್ವಜನಿಕರಿಂದ ಹಣ ದೇಣಿಗೆ ಸಂಗ್ರಹಿಸಿ ಶಾಲಾ-ಕಾಲೇಜುಗಳನ್ನು ಸ್ಥಾಪಿಸಲು ಮುಂದಾದರು. 1962ರಲ್ಲಿ ಜನತಾ ಶಿಕ್ಷಣ ಸಂಸ್ಥೆ (ಪಿ.ಇ.ಎಸ್. ಸಂಸ್ಥೆ)ಯನ್ನು ಹುಟ್ಟು ಹಾಕಿ. ಎಂಜಿನಿಯರಿಂಗ್ ಕಾಲೇಜನ್ನು 1967ರಲ್ಲಿ ವಿಜ್ಞಾನ, ಕಲಾ ಕಾಲೇಜನ್ನು 1975ರಲ್ಲಿ ಶಿಕ್ಷಕರ ಕಾಲೇಜನ್ನು ಸ್ಥಾಪಿಸಿದರು. ರಾಜ್ಯ ಒಕ್ಕಲಿಗರ ಸಂಘದೊಂದಿಗೆ ಒಡನಾಟವನ್ನೊಂದಿದ್ದರು.

ಸಾಹಿತ್ಯ, ನಾಟಕ ಮತ್ತು ಚಲನಚಿತ್ರಕ್ಕೆ ಕೊಡುಗೆ – 'ಪಾದುಕಾ ಕಿರೀಟ' ಎಂಬ ಪೌರಾಣಿಕ ನಾಟಕ, 'ಕೂಡಿ ಬಾಳೋಣ', 'ಶಿಷ್ಟಾಚಾರ ಅಪರಂಜಿ' ಎಂಬ ಸಾಮಾಜಿಕ

ನಾಟಕಗಳನ್ನು ರಚಿಸಿದ ಕೀರ್ತಿ ಶಂಕರಗೌಡರಿಗೆ ಸಲ್ಲುತ್ತದೆ. ಈ ನಾಟಕಗಳನ್ನು ತಾವೇ ಬಣ್ಣ ಹಚ್ಚಿ ಆಡಿ, ಆಡಿಸುತ್ತಿದ್ದರು. ಮುತ್ತು ಒಂದು ಮುತ್ತು, ಕೂಡಿ ಬಾಳೋಣ, ಮರೆಯದ ಹಾಡು ಎಂಬ ಚಲನಚಿತ್ರವನ್ನು ತಯಾರಿಸಿದರು.

ಶಂಕರಗೌಡರು ಮಂಡ್ಯ ಇರುವ ತನಕ ಅವರ ಹೆಸರು ಶಾಶ್ವತವಾಗಿರುತ್ತದೆ. ತುಸು, ಮುಂಗೋಪ, ಯಾವುದನ್ನು ಮುಚ್ಚುಮರೆ ಮಾಡದೆ ನೇರ ನಡೆನುಡಿಯ ವ್ಯಕ್ತಿ. 'ನಿಷ್ಠೂರವಾದಿ ಲೋಕ ವಿರೋಧಿ' ಎನ್ನುವ ಮಾತು ಇವರಿಗೆ ಅನ್ವಯವಾಗುತ್ತದೆ. ರಾಷ್ಟ್ರಕವಿ ಕುವೆಂಪುರವರು ಓ ನನ್ನ ಚೇತನ ಆಗು ಆನಿಕೇತನ... ...ಮನೆಯನೆಂದು ಕಟ್ಟದಿರು ಕೊನೆಯನೆಂದು ಮುಟ್ಟದಿರು ಎಂಬ ಮಾತು ಕೆ.ವಿ. ಶಂಕರಗೌಡರಿಗೆ ಸಲ್ಲುತ್ತದೆ.

ಶ್ರೀಮತಿ ಬಿ.ಎಲ್. ಸುಬ್ಬಮ್ಮ



ಪರಮ ಪವಿತ್ರವಾದ ಸ್ವಾತಂತ್ರ್ಯ ಕೆಲವು ವ್ಯಕ್ತಿಗಳಿಂದ ಬಂದುದಲ್ಲ ದೇಶದ ಲಕ್ಷಾಂತರ ಮಂದಿಯ ಶ್ರಮದ ಫಲ, ಹೋರಾಟದ ಫಲ, ಮಾನ ಪ್ರಾಣದ ಹಂಗು ತೊರೆದು ಲಾಠಿ ಹಾಗೂ ಗುಂಡಿನೇಟು ತಿಂದು ಗಳಿಸಿದ ಸ್ವಾತಂತ್ರ್ಯ. ಒಂದೊಮ್ಮೆ ಹೆಣ್ಣು ಮಕ್ಕಳು, ಗೃಹಿಣಿಯರು ಮನೆಯಿಂದ ಹೊರಬಾರದಂತೆ ಸಂಪ್ರದಾಯದ ಕಟ್ಟಳೆಯನ್ನು ಹೇರಿದ್ದ ನಮ್ಮ ಸಮಾಜ. ವಿಚಾರಣೆಯಿಲ್ಲದೆ ಬಂಧಿಸಿ ಕಾರಾಗೃಹಕ್ಕೆ ಅಟ್ಟುತ್ತಿದ್ದ ಬ್ರಿಟಿಷರು. ಇಂತಹ ಸನ್ನಿವೇಶದಲ್ಲಿ ಕರ್ನಾಟಕದಲ್ಲಿ ಕೆಲವು ಮಹಿಳೆಯರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಉದಾಹರಣೆಗಳಿವೆ. ಅದರಲ್ಲೂ ಒಕ್ಕಲಿಗ ಸಮುದಾಯವು ಕಟ್ಟಾ ಸಂಪ್ರದಾಯಸ್ಥ ಸಮಾಜ. ಇಂತಹ ಸಮುದಾಯದಲ್ಲಿ ಕೆಲವು ಮಹಿಳೆಯರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ. ಅಂತಹವರಲ್ಲಿ ಶ್ರೀಮತಿ ಬಿ.ಎಲ್. ಸುಬ್ಬಮ್ಮ (ಬೆಳಗೂಡು, ಲಿಂಗೇಗೌಡ, ಸುಬ್ಬಮ್ಮ) ನವರೂ ಒಬ್ಬರು.

ನಗರದ ಪ್ರಭಾವವಿರದ, ಹೆಚ್ಚಿನ ಶಿಕ್ಷಣವಿಲ್ಲದ, ರಸ್ತೆ, ಸಂಪರ್ಕ, ಸುದ್ದಿಮಾಧ್ಯಮ ಇವೇ ಮುಂತಾದ ಸೌಲಭ್ಯವಿಲ್ಲದ ಪ್ರದೇಶವೆಂದರೆ ಮಲೆನಾಡು ಪ್ರದೇಶ. ಬ್ರಿಟಷರಿಂದಾಗಿ ಅಲ್ಲಲ್ಲಿ ಕಾಫಿ, ಏಲಕ್ಕಿ, ಅಡಿಕೆ ಇತ್ಯಾದಿ ವಾಣಿಜ್ಯ ಬೆಳೆ ತಲೆ ಎತ್ತಿತ್ತು. ಇದರ ಲಾಭ ಮಾತ್ರ ಬ್ರಿಟಿಷರಿಗೆ ಕೂಲಿಯಾದರೂ ಸಿಕ್ಕಿತಲ್ಲಾ! ಎಂಬ ಧೋರಣೆ ಬಡ ಕೂಲಿ ಕಾರ್ಮಿಕರದು. ಮೈಸೂರು ಒಡೆಯರ ಆಳ್ವಿಕೆ. ಅರಸರು ನಾಲ್ಕನೆಯ ಮೈಸೂರು ಯುದ್ಧಾನಂತರ ಹೆಚ್ಚು ಕಡಿಮೆ ಬ್ರಿಟಿಷರಿಗೆ ವಿಧೇಯರಾಗಿದ್ದರು. ಅಂದಮೇಲೆ ಬ್ರಿಟಿಷರ ವಿರುದ್ಧ ಹೋರಾಡುವ ಮನಸ್ಥಿತಿ ಇರಲಿಲ್ಲ ಅಲ್ಲಿಯ ಜನರಿಗೆ.

ಮಲೆನಾಡ ಒಕ್ಕಲಿಗರ ಸಂಘ ಸ್ಥಾಪನೆ – ಮಲೆನಾಡು ಪ್ರದೇಶದಲ್ಲಿ ಒಕ್ಕಲಿಗರು ದಟ್ಟವಾಗಿದ್ದರು. ಕೆಲವು ಶ್ರೀಮಂತ ಜಮಿನ್ದಾರರು ಮೈಸೂರು ಪ್ರಜಾಪ್ರತಿನಿಧಿ ಸಭಾಸದರಾಗಿದ್ದರು. (ಎಂ.ಆರ್.ವಿ.) ಅರ್ಥಾತ್ ಶ್ರೀಮಂತ ಜಮೀನ್ದಾರರು, ಪ್ರತಿಷ್ಠಿತರು, ವಿದ್ಯಾವಂತರು ಆಳರಸರಿಗೆ ವಿಧೇಯರಾಗಿದ್ದರು, ಅದೇ ರೀತಿ ಮೈಸೂರು ಅರಸರು ಬ್ರಿಟಿಷರಿಗೆ ವಿಧೇಯರಾಗಿದ್ದರು. ಬೆಂಗಳೂರಿನಲ್ಲಿ 1906ರಲ್ಲಿ "ರಾಜ್ಯ ಒಕ್ಕಲಿಗರ ಸಂಘ" ಸ್ಥಾಪನೆಯಾದ ವರ್ಷವೇ ಅವರಿಂದ ಪ್ರಭಾವಿತರಾಗಿ ಮೂಡಿಗೆರೆಯಲ್ಲಿ ಒಕ್ಕಲಿಗರ ಸಂಘ ಸ್ಥಾಪನೆಯಾಯ್ತು. ಬಾಗಮನೆ ದ್ಯಾವೇಗೌಡರು, ಮೋಕೋನಹಳ್ಳಿ ಹುಚ್ಚೇಗೌಡರು, ಬಿ.ಎಲ್. ಲಿಂಗೇಗೌಡರು, ಬಿ.ಎಂ. ಅಣ್ಣೇಗೌಡರು ಇವರೇ ಮುಂತಾದವರ ಸಹಕಾರದಿಂದ ಮಲೆನಾಡು ಒಕ್ಕಲಿಗರ ಸಂಘ ತಲೆ ಎತ್ತಿತು. ನಂತರದ ದಿನಗಳಲ್ಲಿ ತೀರ್ಥಹಳ್ಳಿ, ಹೊಸನಗರ, ಶಿವಮೊಗ್ಗದಲ್ಲಿ ಒಕ್ಕಲಿಗರ ಸಂಘ ಸ್ಥಾಪನೆಯಾಯ್ತು. 1913ರಲ್ಲಿ ಅಂದಿನ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು ಮೂಡಿಗೆರೆಗೆ ಪ್ರವಾಸ ನಿಮಿತ್ತ ಬಂದಾಗ ಅವರಿಂದ 'ವಿದ್ಯಾರ್ಥಿ ನಿಲಯ' ಸ್ಥಾಪನೆಗೆ ಅವರಿಂದ ಶಂಕುಸ್ಥಾಪನೆ ಮಾಡಿಸಲಾಯಿತು. ಬಹಳ ಹಿಂದೆ ಶಿಕ್ಷಣಕ್ಕೆ ಒತ್ತುಕೊಟ್ಟ ಉದಾಹರಣೆ ಎಂದು ಹೇಳಬಹುದು. 1941ರಲ್ಲಿ ಸರ್.ಎಂ.ವಿ.ಯವರು 'ಮಲೆನಾಡು ಅಭಿವೃದ್ಧಿ' ಯೋಜನೆಯನ್ನು ಜಾರಿಗೆ ತಂದರು. ಇದರಿಂದಾಗಿ ಹಿಂದುಳಿದಿದ್ದ ಮಲೆನಾಡು ಭಾಗದ ಜನರ ಶಿಕ್ಷಣ, ಸಾರಿಗೆ, ಆರೋಗ್ಯ ಇವೇ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಯಿತು.

ಬಿ.ಎಲ್. ಸುಬ್ಬಮ್ಮನವರ ಬಾಲ್ಯಜೀವನ – ಚಿಕ್ಕಮಗಳೂರು ಜಿಲ್ಲೆಯ ಬೆಳಗೋಡು ಗ್ರಾಮದ ಲಿಂಗೇಗೌಡ ಮತ್ತು ಭೈರಮ್ಮ ದಂಪತಿಗಳಿಗೆ ಬಿ.ಎಲ್. ಮಂಜಮ್ಮ, ಬಿ.ಎಲ್. ಸುಬ್ಬಮ್ಮ ಮತ್ತು ಬಿ.ಎಲ್. ರಾಮೇಗೌಡ ಎಂಬ ಮೂರು ಮಕ್ಕಳು. 1921ರಲ್ಲಿ ಸುಬ್ಬಮ್ಮನವರು ಜನಿಸಿದರು. ತಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣ ನೀಡಬೇಕೆಂಬ ಹಂಬಲ ಲಿಂಗೇಗೌಡರದಾಗಿತ್ತು. ಈಗಾಗಲೇ ತಿಳಿಸಿರುವಂತೆ ಅಂದು ಇಂದಿನಂತೆ ಶಾಲಾ, ಕಾಲೇಜುಗಳ ಕೊರತೆ, ರಸ್ತೆ ಇವೇ ಮುಂತಾದ ಸಮಸ್ಯೆಗಳಿಂದಾಗಿ ತಮ್ಮ ಊರಿನಿಂದ ಐದಾರು ಕಿಲೋಮೀಟರ್ ದೂರದಲ್ಲಿರುವ ಬಣಗಲ್‌ಗೋ, ಮೂಡಿಗೆರೆಗೂ ಕಳುಹಿಸಬೇಕಾಗಿತ್ತು. ಇಂದಿನ ಕಾಲದಲ್ಲಿ ಮನೆಯ ಬಳಿಗೆ ಬರುವ ವ್ಯಾನು, ಬೆಳಿಗ್ಗೆ ಮಕ್ಕಳಿಗೆ ತಿಂಡಿ–ತಿನಿಸು ಬಾಕ್ಸ್ ರೆಡಿಮಾಡಬೇಕು ಇತ್ಯಾದಿ. ಅಂದು ಈ ತೆರನಾದ ಆಧುನಿಕ ಸೌಲಭ್ಯಗಳಿರಲಿಲ್ಲ. ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳನ್ನು ಐದಾರು ಕಿಲೋಮೀಟರ್ ದೂರದ ಶಾಲೆಗೆ ಕಳುಹಿಸಲು ಹಿಂದೇಟು ಹಾಕಿದರು.

ತಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡಿಸಲೇಬೇಕೆಂಬ ಹಂಬಲ ಲಿಂಗೇ–ಗೌಡರಿಗೆ. ಶಾಲೆಗೆ ಕಳುಹಿಸುವ ಬದಲು ಅಲ್ಲಿನ ಮುಖಂಡರು ತಮ್ಮ ಮನೆಯಲ್ಲೇ

ಪಾಠ ಹೇಳಿಕೊಡುವ ಮಾಸ್ತರನ್ನು ನೇಮಕ ಮಾಡಿಕೊಂಡರು. ಕೊಡಗಿನ ಮೊಚಯ್ಯ, ತಿಮ್ಮೇಗೌಡ, ಬೇಲೂರು ಕೇಶವದಾಸರು ತಮ್ಮ ಗುರುಗಳಾಗಿದ್ದರೆಂದು ನೆನೆಯುತ್ತಾರೆ. (ಶ್ರೀಮತಿ ಬಿ.ಎಲ್. ಸುಬ್ಬಮ್ಮ – ಲೇಖಕರು ಡಾ. ಡಿ.ಎಸ್. ಜಯಪ್ಪಗೌಡ) ಓದಿನಲ್ಲಿ ಚುರುಕಾಗಿದ್ದ ಸುಬ್ಬಮ್ಮನವರು ಎಲ್.ಎಸ್. (ಲೋಯರ್ ಸೆಕೆಂಡರಿ) ನಂತರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಖಾಸಗಿಯಾಗಿ ಕುಳಿತರು. ಆದರೆ ಅದರಲ್ಲಿ ನಪಾಸಾದರು. ಅಂದು ಹೆಣ್ಣು ಮಕ್ಕಳಿಗೆ ಭಾವಗೀತೆ, ಭಕ್ತಿಗೀತೆಯಂತಹ ಸಂಗೀತ ಪಾಠವನ್ನು ಕಲಿಸುತ್ತಿದ್ದರು. ಕಸೂತಿ, ಟೈಲರಿಂಗ್ ಇವೇ ಮುಂತಾದವುಗಳನ್ನು ಬಾಲ್ಯದಲ್ಲಿ ಕಲಿತರು.

ಸ್ವಾತಂತ್ರ್ಯ ಚಳವಳಿಗೆ ದುಮುಕಿದ ಸುಬ್ಬಮ್ಮನವರು – 1885ರಲ್ಲಿ ಕಾಂಗ್ರೆಸ್ ಸ್ಥಾಪನೆಯಾದರೂ ಅದರ ಪ್ರಭಾವ ಹಳೆಯ ಮೈಸೂರಿಗರ ಮೇಲೆ ಪ್ರಭಾವ ಬೀರಲಿಲ್ಲ. 1824ರಲ್ಲಿ ಗಾಂಧೀಜಿಯವರು ಬೆಳಗಾವಿ ಅಧಿವೇಶನವನ್ನು ಮಾಡಿ–ದಾಗಲೂ ಅದರ ಪ್ರಭಾವ ಬೀರಲಿಲ್ಲ. 1936–37ರಲ್ಲಿ ಪ್ರಜಾಮಿತ್ರ ಮಂಡಳಿಯು ಸಂಯುಕ್ತ ಪ್ರಜಾಪಕ್ಷವಾಗಿ ನಂತರ ಕಾಂಗ್ರೆಸ್‌ನೊಂದಿಗೆ ವಿಲೀನವಾಗಲಾಗಿ ಕ್ರಮೇಣ ಮೈಸೂರು ಕಾಂಗ್ರೆಸ್ ಎಲ್ಲೆಡೆ ಪ್ರಭಾವ ಬೀರಿತು. ಹಳೇ ಮೈಸೂರು ಭಾಗದಲ್ಲಿ ಹೆಚ್.ಸಿ. ದಾಸಪ್ಪ, ಸಾಹುಕಾರ ಚನ್ನಯ್ಯ, ಹೆಚ್.ಕೆ. ವೀರಣ್ಣಗೌಡ ಇವರೇ ಮುಂತಾದವರು ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದರು. ಇವರ ಪ್ರಭಾವ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಮತ್ತು ಮಂಗಳೂರಿನವರೆಗೂ ವ್ಯಾಪಿಸಿತು.

ಸುಬ್ಬಮ್ಮನವರನ್ನು ಅವರ ಬಂಧುವಾದ ಬಾಗಮನೆ ದ್ಯಾವೇಗೌಡರು, ತಳಹಳ್ಳದ ಉದ್ದೇಗೌಡರು, ಬೆಳಗೂಡಿನ ಈರೇಗೌಡರು, ಬಿ.ಎಂ. ಅಣ್ಣೇಗೌಡರು, ಮೂಡಿಗೆರೆಯ ದಾರದಹಳ್ಳಿ ಡಿ.ಎಸ್. ಕೃಷ್ಣಪ್ಪ ಗೌಡರು, ಬೆಳಗೂಡಿನ ಬಿ.ವೈ. ಕೃಷ್ಣೇಗೌಡರು, ಲೋಕಪ್ಪ ಗೌಡರು, ಬಣಕಲ್ ಶಿವಣ್ಣ ಗೌಡರು ಸೇರಿದಂತೆ ಹಲವಾರು ಹಿರಿಯರು ಸುಬ್ಬಮ್ಮನವರನ್ನು ಸ್ವಾತಂತ್ರ್ಯ ಹೋರಾಟಕ್ಕೆ ಇಳಿಯುವಂತೆ ಪ್ರೇರೇಪಿಸಿದರು. ಸ್ವಾತಂತ್ರ್ಯ ಹೋರಾಟಗಾರರ ಭಾಷಣಗಳನ್ನು, ಗಾಂಧೀಜಿಯವರ ಸಂದೇಶಗಳನ್ನು ಓದಿ ತಿಳಿದುಕೊಂಡರು. ಸುಬ್ಬಮ್ಮನವರು ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಭಾಷಣ ಮಾಡತೊಡಗಿದರು. ಮಲೆನಾಡು ಪ್ರದೇಶದಲ್ಲಿ ಒಬ್ಬ ಹೆಣ್ಣು ಮಗಳು ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ತನು, ಮನ, ಧನವನ್ನರ್ಪಿಸಿದುದೇ ಅಲ್ಲದೆ ತಮ್ಮ ಮಾನ, ಪ್ರಾಣವನ್ನು ಒತ್ತೆಯಿಟ್ಟು ಅಹೋರಾತ್ರಿ ಸ್ವಾತಂತ್ರ್ಯದ ಕಿಚ್ಚು ಹೊತ್ತಿಸುತ್ತಿರುವುದನ್ನು ಕಂಡ ಜನ ಸ್ವಾತಂತ್ರ್ಯ ಹೋರಾಟಕ್ಕೆ ದುಮುಕಿದರು. ಸುಬ್ಬಮ್ಮನವರ ಹೆಸರು ಚಿಕ್ಕಮಗಳೂರು ಜಿಲ್ಲೆ, ಶಿವಮೊಗ್ಗ, ಹಾಸನ, ಮಡಿಕೇರಿ, ದಕ್ಷಿಣ ಕನ್ನಡಕ್ಕೆ ವ್ಯಾಪಿಸಿತು. ಅಂದು ಎಲ್ಲರ ಬಾಯಲ್ಲೂ ಬಿ.ಎಲ್. ಸುಬ್ಬಮ್ಮ. ಅಂದು ಇಂದಿನಂತೆ ದಿನಪತ್ರಿಕೆಗಳು, ಟಿ.ವಿ. ಮಾಧ್ಯಮಗಳಿರಲಿಲ್ಲ. ಬಾಯಿಯಿಂದ

ಬಾಯಿಗೆ ಸುದ್ದಿ ಹಬ್ಬುತ್ತಿತ್ತು. ಕರಪತ್ರಗಳನ್ನು ಹಂಚುತ್ತಿದ್ದರು. ಅಂದು ಕರಪತ್ರಗಳು, ಭಿತ್ತಿ ಪತ್ರಗಳು, ಪೋಸ್ಟರ್‌ಗಳು, ಬ್ಯಾನರ್‌ಗಳು ಇವೇ ಮುಂತಾದವುಗಳನ್ನು ಮುದ್ರಿಸಿ ಹಂಚುವುದು ಅಪರಾಧವಾಗಿತ್ತು. ಅಂತಹ ಸಂದರ್ಭದಲ್ಲಿ ಕರಪತ್ರಗಳನ್ನು ಗುಪ್ತವಾಗಿ ಮುದ್ರಿಸಿ ಇಲ್ಲವೆ ಕೈಯಲ್ಲಿ ಬರೆದು ಹಂಚಲಾಗುತ್ತಿತ್ತು. ಗುಪ್ತವಾಗಿ ಸಭೆ, ಸಮಾರಂಭ –ಗಳು ನಡೆಯುತ್ತಿದ್ದವು. ಸುಬ್ಬಮ್ಮನವರಿಂದಾಗಿ ಮಲೆನಾಡು ಪ್ರದೇಶದಲ್ಲಿ ಹಲವಾರು ಮಹಿಳಾ ಸತ್ಯಾಗ್ರಹಿಗಳು ಸ್ವಾತಂತ್ರ್ಯ ಹೋರಾಟಕ್ಕಿಳಿದರು.

ವೈವಾಹಿಕ ಜೀವನಕ್ಕೆ ಕಾಲಿಟ್ಟ ಸುಬ್ಬಮ್ಮನವರು – ಸುಬ್ಬಮ್ಮನವರು ಪ್ರಾಪ್ತ–ವಯಸ್ಸಿಗೆ ಬರುತ್ತಲೇ ಅವರ ಪೋಷಕರು ಸುಬ್ಬಮ್ಮನವರಿಗೆ ವಿವಾಹ ಮಾಡಬೇಕೆಂದು ತೀರ್ಮಾನಿಸಿದರು. ಸುಬ್ಬಮ್ಮನವರು ಎಷ್ಟು ಜನಪ್ರಿಯರಾಗಿದ್ದರೆಂದರೆ ಅವರನ್ನು ವಿವಾಹವಾಗಲು ಯಾರಾದರು ಮುಂದೆ ಬರುತ್ತಾರೋ ಇಲ್ಲವೋ ಅನ್ನುವ ಭಯ ಪೋಷಕರಿಗೆ. ಒಕ್ಕಲಿಗರು ಹೇಳಿಕೇಳಿ ಸಂಪ್ರದಾಯಸ್ಥರು. ಚಿಕ್ಕಮಗಳೂರು ತಾಲ್ಲೂಕು ತಳಿಹಳ್ಳದ ಶ್ರೀಮತಿ ಶಿವಮ್ಮ ಹೆಗ್ಗಡ್ತಿ ಮತ್ತು ಶ್ರೀ ಅಣ್ಣೇಗೌಡರ ಮಗ ಶ್ರೀ ತಿಪ್ಪೇಗೌಡರು ಸುಬ್ಬಮ್ಮನವರನ್ನು ವಿವಾಹವಾಗಲು ಮುಂದೆ ಬಂದರು. ಈ ತಳಿಹಳ್ಳ ಎಂಬ ಊರು ಚಿಕ್ಕಮಗಳೂರು ಮತ್ತು ಮಲ್ಲಂದೂರು ಮಧ್ಯದಲ್ಲಿದೆ. ಶ್ರೀಮತಿ ಶಿವಮ್ಮ ಹೆಗ್ಗಡ್ತಿ (ಸುಬ್ಬಮ್ಮನವರ ಅತ್ತೆಯವರು) ಅಂದು ಚಿಕ್ಕಮಗಳೂರು ಮತ್ತು ಇಡೀ ಮಲೆನಾಡು ಪ್ರದೇಶದಲ್ಲಿ ಖ್ಯಾತನಾಮರಾಗಿದ್ದ ಬಾಗೆಮನೆ ದ್ಯಾವೇಗೌಡರ ಸಹೋದರಿ. (ಪ್ರತಿಭಾ–ವಂತ ಸಂಸದೀಯ ಪಟುಗಳು ಶ್ರೀಮತಿ ಬಿ.ಎಲ್. ಸುಬ್ಬಮ್ಮ – ಲೇ ಡಾ॥ ಜಯಪ್ಪ–ಗೌಡ) ಶ್ರೀ ಅಣ್ಣೇಗೌಡರಿಗೆ ಐದು ಜನ ಮಕ್ಕಳು. ಅದು ಅವಿಭಕ್ತ ಕುಟುಂಬ. ತುಂಬಿದ ಮನೆಯನ್ನು ಶ್ರೀಮತಿ ಸುಬ್ಬಮ್ಮನವರು ನಿಭಾಯಿಸಬೇಕಾಗಿತ್ತು.

ಭಾರತ ಬಿಟ್ಟು ತೊಲಗಿ ಆಂದೋಲನ – 1942ರಲ್ಲಿ ಚಲೇಜಾವ್ ಅಥವಾ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಆಂದೋಲನ ದೇಶದಾದ್ಯಂತ ನಡೆಯ ತೊಡಗಿತು. ಮಲೆನಾಡಿನಲ್ಲೂ ಈಗಾಗಲೇ ಸತ್ಯಾಗ್ರಹಿಗಳು ಸಾಕಷ್ಟು ಜನರಿದ್ದರು. ಅವರಲ್ಲಿ ಬಣಕಲ್ ಶಿವಣ್ಣಗೌಡ, ಬೆಳಗೂಡಿನ ಲೋಕಪ್ಪ ಗೌಡ, ಕೃಷ್ಣಪ್ಪ ಗೌಡ, ಡಿ.ಎಸ್. ಕೃಷ್ಣಪ್ಪ ಗೌಡ, ಬಾಗಮನೆ ದೇವೇಗೌಡರವರೇ ಮುಂತಾದವರು. ಭಾರತ ಬಿಟ್ಟು ತೊಲಗಿ ಆಂದೋಲನ ಎಲ್ಲೆಡೆ ವ್ಯಾಪಿಸಿತು. ಪೋಲಿಸರೊಂದಿಗೆ ಘರ್ಷಣೆಗಿಳಿದರು.

ಮಹಿಳೆಯರನ್ನು ಹಾಗು ಮನೆಯಲ್ಲಿ ಕುಳಿತಿದ್ದ ಸೋಗಲಾಡಿ ಗಂಡಸರನ್ನು ಮನೆಯಿಂದ ಕರೆತರುವ ಉದ್ದೇಶದಿಂದ ಶ್ರೀಮತಿ ಸುಬ್ಬಮ್ಮನವರನ್ನು ಸ್ವಾತಂತ್ರ್ಯ ಹೋರಾಟಕ್ಕಿಳಿಸಲು ತೀರ್ಮಾನಿಸಿದರು. ಆಕೆ ಈಗ ಗೃಹಿಣಿ ಆದ ಕಾರಣ ಹೇಗೆ ಹೋರಾಟಕ್ಕೆ ಕರೆತರುವುದು ಎಂಬ ಚಿಂತೆ ಕಾಡತೊಡಗಿತು. ಬಾಗಮನೆ ದ್ಯಾವೇಗೌಡರ ನೇತೃತ್ವದಲ್ಲಿ ಮುಖಂಡರು ಸುಬ್ಬಮ್ಮನವರನ್ನು ಮಾವನರಾದ ಅಣ್ಣೇಗೌಡರನ್ನು

ಹಾಗೂ ಸುಬ್ಬಮ್ಮನವರ ಪತಿ ತಿಪ್ಪಣ್ಣನವರನ್ನು ಕೇಳಿಕೊಂಡರು. ಸುಬ್ಬಮ್ಮನವರಿಗೆ ಇಷ್ಟವಿದ್ದರೆ ಹೋರಾಟಕ್ಕಿಳಿಯಲಿ, ನಮ್ಮ ಅಭ್ಯಂತರವಿಲ್ಲ. ನಾಡಿನ ಸ್ವಾತಂತ್ರ್ಯ ಮುಖ್ಯ ಎಂದು. ಮುಖಂಡರಿಗೆ ಅಷ್ಟು ಸಾಕಾಗಿತ್ತು.

ರಾಜಕೀಯ ರಂಗದಲ್ಲಿ ಗುರ್ತಿಸಿಕೊಂಡ ಸುಬ್ಬಮ್ಮನವರು – 1945ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ (ಎಂ.ಆರ್.ಎ.) ಮಹಿಳಾ ಮೀಸಲು ಸ್ಥಾನದಿಂದ ಆಯ್ಕೆಯಾದರು. ಬಹುಮತದಿಂದ ಆಯ್ಕೆಯಾಗಿ ಅಂದು ವಿಕ್ರಮ ಸಾಧಿಸಿದರು. ಕಾಲ ಕ್ರಮೇಣ ಜಿಲ್ಲೆಯ ವಿವಿಧ ಸಂಘಸಂಸ್ಥೆಗಳಲ್ಲಿ ಸುಬ್ಬಮ್ಮನವರು ಸೇವೆ ಸಲ್ಲಿಸಿದರು. 1945 ರಿಂದ 1957ರ ತನಕ ಮೈಸೂರು ಪ್ರಜಾಪ್ರತಿನಿಧಿ ಸಭಾಸದರಾಗಿ ನಂತರ ಶಾಸಕಿಯಾಗಿ ಆಯ್ಕೆಯಾಗುತ್ತಾ ಬಂದರು. ಆ ದಿನಗಳಲ್ಲಿ ಬೆಂಗಳೂರಿನ ವಿಧಾನ ಸೌಧದಲ್ಲಿ ನಡೆಯುತ್ತಿದ್ದ ವಿಧಾನಸಭಾ ಕಲಾಪಗಳಿಗೆ ಹೋಗಿಬರುವುದು ಕಷ್ಟದ ಕೆಲಸವಾಗಿತ್ತು. ತಮ್ಮೊಂದಿಗೆ ಬೆಂಗಳೂರಿಗೆ ಬರುವ ತಮ್ಮ ಅನುಯಾಯಿಗಳಿಗೂ ಬಸ್ ಚಾರ್ಜು ಅನ್ನು ತಾವೇ ನೀಡುವುದೇ ಅಲ್ಲದೆ ಅವರಿಗೆ ಊಟ ತಿಂಡಿಯ ಖರ್ಚನ್ನು ತಾವೇ ಭರಿಸುತ್ತಿದ್ದರು (ಇಂದು?)

ತಮ್ಮ ಕ್ಷೇತ್ರಕ್ಕೆ ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ, ವಿದ್ಯುತ್ ದೀಪಗಳ ಸೌಕರ್ಯ, ಆಸ್ಪತ್ರೆ, ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪಿ.ಯು. ಕಾಲೇಜು ಮತ್ತು ಪದವಿ ಕಾಲೇಜುಗಳು ಸ್ಥಾಪನೆಯಾಗಲು ಶ್ರಮಿಸಿದರು. ಸಂಬಂಧಪಟ್ಟ ಅಧಿಕಾರಿಗಳ, ಮಂತ್ರಿಗಳ ಮನ ಒಲಿಸಿ ಕ್ಷೇತ್ರಾಭಿವೃದ್ಧಿ ಕಾರ್ಯ ಮಾಡುತ್ತಿದ್ದರು. 1957ರ ಚುನಾವಣೆ ಸ್ಪರ್ಧಿಸಲು ಕಾಂಗ್ರೆಸ್ ಸೀಟು ದೊರೆಯಲಿಲ್ಲ. ಕಾಲಾನಂತರ ತಾವು ಪ್ರತಿನಿಧಿಸುತ್ತಿದ್ದ ಮೂಡಿಗೆರೆ ವಿಧಾನಸಭಾ ಕ್ಷೇತ್ರವನ್ನು ಮೀಸಲು ಕ್ಷೇತ್ರವನ್ನಾಗಿ ಪರಿವರ್ತಿಸಿದರು. ಶ್ರೀ ಕೆ.ಹೆಚ್. ರಂಗನಾಥ್‌ರವರು ಪಿ.ಎಸ್.ಪಿ. ಪಕ್ಷದಿಂದ ಅಂದು ಆಯ್ಕೆಯಾಗಿದ್ದರು. 1962ರ ವಿಧಾನಸಭಾ ಚುನಾವಣೆಯಲ್ಲಿ ಚಿಕ್ಕಮಗಳೂರಿನಿಂದ ಸ್ಪರ್ಧಿಸಲು ಶ್ರೀಮತಿ ಸುಬ್ಬಮ್ಮನವರಿಗೆ ಕಾಂಗ್ರೆಸ್ ಪಕ್ಷವು ಟಿಕೆಟ್ ನೀಡಿತ್ತು. ಸುಬ್ಬಮ್ಮನವರು ಸುಲಭವಾಗಿ ಆಯ್ಕೆಯಾದರು.

ವಿಧಾನಸಭೆ ಕಲಾಪಗಳಲ್ಲಿ ಭಾಗವಹಿಸಿ ತಮ್ಮ ಕ್ಷೇತ್ರದ ಕುಂದು ಕೊರತೆಗಳೇ ಅಲ್ಲದೆ ಇಡೀ ರಾಜ್ಯದ ಆಗುಹೋಗುಗಳ ಬಗ್ಗೆ ಚರ್ಚಿಸುತ್ತಿದ್ದರು. ಕಲಾಪಕ್ಕೆ ಹೋಗುವ ಮೊದಲು ಅಧ್ಯಯನ ಮಾಡಿಕೊಂಡು ಹೋಗಿ ಚರ್ಚಿಸುತ್ತಿದ್ದರು. ಹಾಸನ ಹಾಗೂ ಮಂಗಳೂರು ರೈಲು ಮಾರ್ಗಕ್ಕೆ ಕಡೂರು, ಮೂಡಿಗೆರೆ–ಸಕಲೇಶಪುರ ಮಾರ್ಗವಾಗಿ ತೆರಳಲು ಒತ್ತಾಯಿಸಿದ್ದು, ಮಲೆನಾಡು ಅಭಿವೃದ್ಧಿ ಮಂಡಳಿ ಸ್ಥಾಪಿಸಿದ್ದು, ಚಿಕ್ಕಮಗಳೂರಿನಲ್ಲಿ ಸರ್ಕಾರಿ ಪದವಿ ಸ್ಥಾಪನೆಯಾದದ್ದು ಇವೇ ಮುಂತಾದವು ಗಮನಾರ್ಹವಾದ ಸಾಧನೆಗಳು.

ಶ್ರೀಮತಿ ಸುಬ್ಬಮ್ಮನವರು ಎಂದಿಗೂ ತನ್ನನ್ನು ಮಂಡಳಿಯ ಅಧ್ಯಕ್ಷೆಯನ್ನಾಗಿ ಮಾಡಿ, ಮಂತ್ರಿಯನ್ನಾಗಿ ಮಾಡಿ ಎಂದು ಯಾರನ್ನು ಒತ್ತಾಯಿಸುತ್ತಿರಲಿಲ್ಲ. ತಮಗೆ ಜನರು ಕೊಟ್ಟಿರುವ ಜವಾಬ್ದಾರಿಯನ್ನು ನೆರವೇರಿಸುತ್ತಿದ್ದರು. ಚಿಕ್ಕಮಗಳೂರು ಜಿಲ್ಲೆಯ ಜನತೆ ಸುಬ್ಬಮ್ಮನವರಿಗೆ "ಮಹಿಳಾ ರತ್ನ" ಎಂಬ ಬಿರುದು ನೀಡಿ ಗೌರವಿಸಿದ್ದು ಅವರ ಬದುಕು ಸಾರ್ಥಕ ಎಂದೆನಿಸುತ್ತದೆ.

ಹೀಗೆ ಒಕ್ಕಲಿಗ ಜನಾಂಗವು ಕೃಷಿಯನ್ನು ನಂಬಿ ಬದುಕುತ್ತಿದ್ದರೂ ಕೂಡ ಮೈಸೂರು ಸಂಸ್ಥಾನವು ಪ್ರಜಾಪ್ರತಿನಿಧಿ ಸಭೆಯನ್ನು ಪ್ರಾರಂಭಿಸಲಾಗಿ ಜನಾಂಗದ ಹಲವಾರು ಜನ ಜಮೀನ್ದಾರರು, ವ್ಯಾಪಾರೋದ್ಯಮಿಗಳು, ಸುಶಿಕ್ಷಿತರು, ಸಂಭಾವಿತರು, ತಜ್ಞರು (ಎಂ. ಶಂಕರಲಿಂಗೇಗೌಡರಂತ ಅರ್ಥಶಾಸ್ತ್ರ ಜ್ಞರು), ಈ ಪ್ರತಿಷ್ಠಿತ ಪ್ರಜಾಪ್ರತಿನಿಧಿಯ ಸಭಾಸದರಾಗಿ ಜನಾಂಗದ ನೇತಾರರಾದರು. ನಂತರ ಹೆಚ್. ಚನ್ನಯ್ಯನವರಂತಹ ಪ್ರತಿಷ್ಠಿತ ವ್ಯಕ್ತಿಗಳು 1917ರ ಹೊತ್ತಿಗೆ ಕಾಂಗ್ರೆಸ್ ಪಕ್ಷಕ್ಕೆ ಸೆಡ್ಡು ಹೊಡೆದು ಪ್ರಜಾಮಿತ್ರಮಂಡಳಿ ಎಂಬ ಪಕ್ಷವನ್ನು ಕಟ್ಟಿದರು. ಇದೇ ಹೆಚ್. ಚನ್ನಯ್ಯನವರು ಹಿಂದುಳಿದ ವರ್ಗಗಳ ಆಂದೋಲನದಲ್ಲಿ ಜನಾಂಗವನ್ನು ಉದ್ಧರಿಸಿದುದೇ ಅಲ್ಲದೆ ಹಿಂದುಳಿದ ವರ್ಗಗಳ ನೇತಾರರಾಗಿ ಬಿಂಬಿಸಲ್ಪಟ್ಟರು. ಸ್ವಾತ್ರಂತ್ರಕ್ಕಾಗಿ ಹೋರಾಟ ಪ್ರಾರಂಭವಾದಾಗ ಹೆಚ್.ಕೆ. ವೀರಣ್ಣಗೌಡ, ಕೆ.ಸಿ. ರೆಡ್ಡಿ, ಹೆಚ್.ಸಿ. ದಾಸಪ್ಪ, ಮಾಲಿ ಮರಿಯಪ್ಪ, ವಿಶ್ವೇಶ್ವರ ಗೌಡ, ಯಶೋಧರಾ ದಾಸಪ್ಪ, ಕೆಂಗಲ್ ಹನುಮಂತಯ್ಯನವರಂತಹ ಘಟಾನುಘಟಿಗಳು ಸ್ವಾತಂತ್ರ್ಯ ಚಳುವಳಿಗಿಳಿದು ನಾಡು ಬ್ರಿಟೀಷರ ದಾಸ್ಯದಿಂದ ಮುಕ್ತವಾಗಲು ಕಾರಣಕರ್ತರಾದರು. ಸ್ವಾತಂತ್ರ್ಯ ಹೋರಾಟದಲ್ಲಿ ಒಕ್ಕಲಿಗ ಜನಾಂಗ ತಮ್ಮದೇ ಆದ ಕಾಣಿಕೆಯನ್ನು ನೀಡಿದೆ. ಮೊದಲು ನೇಗಿಲು ಹಿಡಿದು, ಕತ್ತಿ ಹಿಡಿದು, ಕಾಂಗ್ರೆಸ್ ಬಾವುಟ ಹಿಡಿದು ಇಂದು ಅಧಿಕಾರದ ದಂಡ ಹಿಡಿದಿರುವುದನ್ನು ಕಾಣಬಹುದು.

□

ಸ್ವಾತಂತ್ರ್ಯಾನಂತರ ರಾಜ್ಯ ರಾಜಕೀಯದಲ್ಲಿ ಜನಾಂಗ

ಮುಖ್ಯಮಂತ್ರಿಗಳಾಗಿ ಮತ್ತು ಮಂತ್ರಿಗಳಾಗಿ

ದೇಶಕ್ಕೆ ಸ್ವಾತಂತ್ರ್ಯ ಬಂದರೂ, ಮೈಸೂರು ರಾಜ್ಯ ಸ್ವಾತಂತ್ರ್ಯಗಳಿಸಲಿಲ್ಲ. ಇದಕ್ಕೆ ಕಾರಣ ಮೈಸೂರಿನ ಆಳರಸರು. ಭಾರತ ಸರ್ಕಾರದೊಡನೆ ಮೈಸೂರಿನ ಆಳರಸರು ವಿಲೀನ ಪ್ರಕ್ರಿಯೆಗೆ ಒಪ್ಪದಿದ್ದಾಗ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದ ಮುಂಚೂಣಿಯಲ್ಲಿದ್ದ ಒಕ್ಕಲಿಗರು ಅರಮನೆ ಚಳವಳಿಯನ್ನು ಹಮ್ಮಿಕೊಂಡು ಆಳರಸರೂ ಕೂಡ ಸತ್ಯಾಗ್ರಹಿಗಳಿಗೆ ಮಣಿಯುವಂತೆ ಮಾಡಿದ ಘಟನೆಯನ್ನು ಈ ಮೊದಲೇ ತಿಳಿಸಲಾಗಿದೆ. 1947 ಅಕ್ಟೋಬರ್ 24ರಂದು ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಶ್ರೀ ಕೆ.ಸಿ. ರೆಡ್ಡಿಯವರು ರಾಜ್ಯದ ಪ್ರಥಮ ಮುಖ್ಯಮಂತ್ರಿ–ಯಾದರು. ಅಂದಿನಿಂದ ಇಂದಿನವರೆಗೂ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಒಕ್ಕಲಿಗ ನಾಯಕರು ಮುಖ್ಯಮಂತ್ರಿಗಳಾಗಿ, ಮಂತ್ರಿಗಳಾಗಿ, ಕೇಂದ್ರ ಸಚಿವರುಗಳಾಗಿ, ಶಾಸಕರಾಗಿ, ರಾಜ್ಯ ಮತ್ತು ರಾಷ್ಟ್ರಕ್ಕೆ ತಮ್ಮ ಕೊಡುಗೆಯನ್ನು ನೀಡುತ್ತಾ ಬಂದಿದ್ದಾರೆ.


ಮೈಸೂರು ಸಂಸ್ಥಾನವು ರಾಷ್ಟ್ರದಲ್ಲೇ ಮಾದರಿ ಸಂಸ್ಥಾನವಾಗಿತ್ತೆಂದು ಈ ಮೊದಲೇ ತಿಳಿಸಲಾಗಿದೆ. ದಿವಾನರುಗಳು ಬುದ್ದಿವಂತರೂ, ಮೇಧಾವಿಗಳು ಆಗಿದ್ದು ರಾಜ್ಯ ರಾಜಕಾರಣವನ್ನು ನಿಭಾಯಿಸುತ್ತಿದ್ದರು. ಈ ದಿವಾನರುಗಳು ಮಹಾರಾಜರಿಗೆ ಜವಾಬ್ದಾರರಾಗಿದ್ದರೇ ಹೊರತು ಪ್ರಜೆಗಳಿಗಲ್ಲ. ಆದರೆ 1947ರಲ್ಲಿ ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ದಿವಾನರ ಸ್ಥಾನವನ್ನು ಮುಖ್ಯಮಂತ್ರಿಗಳು ತುಂಬಿದರು. ಈ ಮುಖ್ಯಮಂತ್ರಿಗಳು ಪ್ರಜೆಗಳಿಗೆ ಅರ್ಥಾತ್ ಪ್ರಜಾಪ್ರತಿನಿಧಿಗಳಿಗೆ ಜವಾಬ್ದಾರರಾಗಿರಬೇಕಾಯಿತು. ಆಳರಸರು ವಿಧಿಯಿಲ್ಲದೆ ಸ್ವಾತಂತ್ರ್ಯ ನೀಡಬೇಕಾಗಿ ಬಂದಿತು. ಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಲು ಮೈಸೂರು ಸಂಸ್ಥಾನಕ್ಕೆ ಪ್ರತ್ಯೇಕ ರಾಜ್ಯಾಂಗವನ್ನು ಸಿದ್ಧಪಡಿಸಲು ಒಂದು ರಾಜ್ಯಾಂಗ ಸಭೆಯನ್ನು

ರಚಿಸಬೇಕೆಂದು ದಿವಾನರಿಗೂ ಮುಖ್ಯಮಂತ್ರಿಗಳಿಗೂ ಒಪ್ಪಂದವಾಗಿತ್ತು. 1947ರ ಅಕ್ಟೋಬರ್ 24ರಂದು ಕ್ಯಾಸಂಬಳ್ಳಿ ಚಂಗಲರಾಯ ರೆಡ್ಡಿಯವರ ನೇತೃತ್ವದಲ್ಲಿ ಹೊಸ ಸರ್ಕಾರವು ಅಸ್ತಿತ್ವಕ್ಕೆ ಬಂದಿತು. ಇದರೊಂದಿಗೆ ಶ್ರೀ ರೆಡ್ಡಿಯವರು ರಾಜ್ಯದ ಮೊದಲ ಮುಖ್ಯಮಂತ್ರಿಯಾದರು. ಕ್ರಿ.ಶ. 14ನೇಯ ಶತಮಾನದಲ್ಲಿ ಸ್ಥಾಪನೆಯಾದ 600 ವರ್ಷಗಳ ಕಾಲ ಆಳ್ವಿಕೆ ಮಾಡಿದ ಯಧುವಂಶ ಚಕ್ರಾಧಿಪತ್ಯ ಕೊನೆಗೊಂಡಿತು.

ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕಿದ್ದಲ್ಲಿ ಮೈಸೂರು ಸಂಸ್ಥಾನಕ್ಕೆ ಪ್ರತ್ಯೇಕ ರಾಜ್ಯಾಂಗವನ್ನು ಸಿದ್ದಪಡಿಸಲು ಒಂದು ರಾಜ್ಯಾಂಗ ಸಭೆಯನ್ನು ರಚಿಸಬೇಕಾಗಿದ್ದಿತು. ಆದರಂತೆ 1948ರಲ್ಲಿ ರಾಜ್ಯಾಂಗ ಸಭೆಗೆ ಚುನಾವಣೆ ನಡೆಯಿತು. 7.4.1948ರಲ್ಲಿ ನೂತನ ರಾಜ್ಯಂಗದ ಸಭೆಯ ಪ್ರಥಮ ಅಧಿವೇಶನ ನಡೆದು ಕಾಂಗ್ರೆಸ್ ನೇತಾರರಾಗಿ ದುಡಿದಿದ್ದ ಶ್ರೀ ಟಿ. ಸುಬ್ರಹ್ಮಣ್ಯಂರವರು ರಾಜ್ಯಾಂಗಸಭೆಯ ಪ್ರಥಮಾಧ್ಯಕ್ಷರಾದರು.

ಸ್ವಾತಂತ್ರ್ಯಾನಂತರ ನಮ್ಮ ರಾಜ್ಯವನ್ನು ಹಾಗೂ ರಾಷ್ಟ್ರವನ್ನು ಮುನ್ನಡೆಸಿದ ಜನಾಂಗದ ಕೆಲವು ಪ್ರಮುಖರ ಸಾಧನೆಗಳನ್ನು ಪರಿಚಯಿಸೋಣ.

ಶ್ರೀ ಕೆ.ಸಿ. ರೆಡ್ಡಿ (1902–1976)



ಬಾಲ್ಯ ಜೀವನ ಮತ್ತು ಸಾಧನೆಗಳು : ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ರಾಷ್ಟ್ರ ಭಕ್ತರಲ್ಲಿ ಕೆ.ಸಿ. ರೆಡ್ಡಿ ಎಂದೇ ಹೆಸರಾಗಿದ್ದ ಕ್ಯಾಸಂಬಳ್ಳಿ ಚಂಗಲರಾಯ ರೆಡ್ಡಿಯವರು 4.5.1902ರಲ್ಲಿ ವೆಂಕಟರೆಡ್ಡಿ ಮತ್ತು ಗಂಗೋಜಮ್ಮ ದಂಪತಿಗಳಿಗೆ ಎರಡನೆಯ ಮಗನಾಗಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಕ್ಯಾಸಂಬಳ್ಳಿಯಲ್ಲಿ ಮಾಡಿದರು. ಪ್ರೌಢಶಿಕ್ಷಣವನ್ನು ಬೆಂಗಳೂರಿನ ಲಂಡನ್ ಮಿಷನ್ ಹೈಸ್ಕೂಲಿನಲ್ಲಿ ಪಡೆದರು. 1918–19ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್‌ಗಳಿಸಿದರು. 1920ರಲ್ಲಿ ಬಿ.ಎ. ವ್ಯಾಸಂಗ ಮಾಡಲು ಮದ್ರಾಸಿನ ಪಚ್ಚೆಯಪ್ಪ ಕಾಲೇಜಿಗೆ ಸೇರಿದರು. 1926ರಲ್ಲಿ ಪ್ರಥಮ ದರ್ಜೆಯಲ್ಲಿ ಕಾನೂನು ಪದವಿ–ಯನ್ನು ಗಳಿಸಿದರು. ನಂತರ ಕೋಲಾರದಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು.

ರಾಜಕೀಯ ಪ್ರವೇಶ : ರೆಡ್ಡಿಯವರು 1920–26ರ ಸಮಯದಲ್ಲಿ ಬಿ.ಎ. ಮತ್ತು ಬಿ.ಎಲ್. ಪದವಿ ವ್ಯಾಸಂಗ ಮಾಡುತ್ತಿದ್ದಾಗ ಅಂದಿನ ಸಮಾಜ, ರಾಜಕೀಯ ವಿದ್ಯಮಾನಗಳು ಅವರ ಮೇಲೆ ಪ್ರಭಾವ ಬೀರಿದವು. 1927ರಲ್ಲಿ ಗಾಂಧೀಜಿಯವರು ನಂದಿ ಬೆಟ್ಟದಲ್ಲಿ ತಂಗಿದ್ದಾಗ ರೆಡ್ಡಿಯವರು ಅವರನ್ನು ಭೇಟಿ ಮಾಡಿ ಕೆಲಕಾಲ ಅವರೊಂದಿಗೆ ಮಾತನಾಡಿದ ಸಂದರ್ಭದಲ್ಲಿ ಗಾಂಧೀಜಿಯವರ ನಡೆ ನುಡಿ,

ಆಚಾರ ವಿಚಾರಗಳು ಗಾಢ ಪ್ರಭಾವ ಬೀರಿದವು. ಆ ನಂತರ ವಕೀಲಿ ವೃತ್ತಿಯನ್ನು ಬಿಟ್ಟು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಟಕ್ಕೆ ಧುಮುಕಿದರು. 1917ರಲ್ಲಿ ಉದಯಿಸಿದ ಪ್ರಜಾಮಿತ್ರ ಮಂಡಳಿಯ ಪಕ್ಷಕ್ಕೆ ಸೇರಿದರು. 1930ರಲ್ಲಿ ಪ್ರಜಾಪಕ್ಷ ಎಂಬ ನೂತನ ಪಕ್ಷ ಸ್ಥಾಪಿಸಿದರು. ಪ್ರಜಾ ಪಕ್ಷವನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ರಾಜ್ಯದ ನಾನಾ ಭಾಗಗಳಲ್ಲಿ ಅಧಿವೇಶನ ನಡೆಸತೊಡಗಿದರು.

1934ರಲ್ಲಿ ಪ್ರಜಾ ಸಂಯುಕ್ತ ಪಕ್ಷ ಸ್ಥಾಪನೆಯಾಗಿ ಹಾಸನದಲ್ಲಿ ನಡೆದ ಅಧಿವೇಶನದ ಅಧ್ಯಕ್ಷತೆಯನ್ನು ಕೆ.ಸಿ. ರೆಡ್ಡಿಯವರು ವಹಿಸಿಕೊಂಡಿದ್ದರು. 1938ರಲ್ಲಿ ನಡೆದ ಶಿವಪುರ ಧ್ವಜಸತ್ಯಾಗ್ರಹದಲ್ಲಿ ಕೆ.ಸಿ. ರೆಡ್ಡಿಯವರು ಪೋಲೀಸರಿಂದ ದಸ್ತಗಿರಿಯಾದರು. ಕಾರ್ಮಿಕರ ಪರ ಹೋರಾಡಲು ಕೆ.ಸಿ. ರೆಡ್ಡಿಯವರು ಕಾರ್ಮಿಕ ಹಿತೈಷಿ ಸಂಘ ಎಂಬ ಸಂಘಟನೆಯನ್ನು ಕಟ್ಟಿಕೊಂಡು ಹೋರಾಟಕ್ಕೆ ಇಳಿದರು.

1940 ರಲ್ಲಿ ಕೆ.ಸಿ. ರೆಡ್ಡಿಯವರು ಪ್ರಜಾಪ್ರತಿನಿಧಿ ಸಭೆಯ ನಾಯಕರಾಗಿ ಅವಿರೋಧವಾಗಿ ಆಯ್ಕೆಯಾದರು. 1944ರಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಯ ನಾಯಕರಾಗಿ ಆಯ್ಕೆಯಾದರು. 1946ರಲ್ಲಿ ನಡೆದ ಮೈಸೂರು ಕಾಂಗ್ರೆಸ್‌ನ 6ನೇ ಅಧಿವೇಶನದ ಅಧ್ಯಕ್ಷತೆ ವಹಿಸಿದರು.

ಮೈಸೂರು ಚಲೋ ಚಳವಳಿಯಲ್ಲಿ ಕೆ.ಸಿ. ರೆಡ್ಡಿ : 1947 ಆಗಸ್ಟ್ 15ರಂದು ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಿದರು. 1947ರ ಕಾಯ್ದೆಯಲ್ಲಿ ನೀಡಿರುವ ಹಕ್ಕಿನಂತೆ, ಮೈಸೂರು ಅರಸರು ಮೈಸೂರಿಗೆ ಸ್ವಾತಂತ್ರ್ಯವನ್ನು ನೀಡಲು ಒಪ್ಪದಿದ್ದಾಗ ಟಿ. ಸಿದ್ದಲಿಂಗಯ್ಯ, ಕೆ.ಸಿ. ರೆಡ್ಡಿ, ಕೆ.ಟಿ. ಭಾಷ್ಯಂ, ಹೆಚ್.ಕೆ. ವೀರಣ್ಣಗೌಡ, ಟಿ. ಮರಿಯಪ್ಪ, ಕೆಂಗಲ್ ಹನುಮಂತಯ್ಯ ಇನ್ನೂ ಮುಂತಾದವರು ಹೆಸರಾಂತ ಅರಮನೆ ಸತ್ಯಾಗ್ರಹ ಅಥವಾ ಮೈಸೂರು ಚಲೋ ಅಥವಾ ಜವಾಬ್ದಾರಿ ಸರ್ಕಾರಕ್ಕಾಗಿ ಚಳುವಳಿ ಮಾಡತೊಡಗಿದರು. ಕೆ.ಸಿ. ರೆಡ್ಡಿಯವರು ಜನಜಾಗ್ರತಿ ಮೂಡಿಸಲು ಹಾಗೂ ಜನತೆಯ ಸಹಕಾರವನ್ನು ಕೋರಲು 1947 ಆಗಸ್ಟ್ 21 ರಿಂದ 10 ದಿನಗಳ ಕಾಲ ಸಂಸ್ಥಾನದಾದ್ಯಂತ ಪ್ರವಾಸ ಕೈಗೊಂಡರು. ಹಾಗೂ ಅಂದು ದಿವಾನರಾಗಿದ್ದ ರಾಮಸ್ವಾಮಿ ಮೊದಲಿಯಾರ್ ಮತ್ತು ಮಹಾರಾಜ ಜಯಚಾಮರಾಜೇಂದ್ರ ಒಡೆಯರೊಡನೆ ಸಮಾಲೋಚನೆ ನಡೆಸಿದರು. 1947 ಅಕ್ಟೋಬರ್ 13ರಂದು ಮೈಸೂರು ಸಂಸ್ಥಾನವು ಇನ್‌ಸ್ಟ್ರುಮೆಂಟ್ ಆಫ್ ಅಕ್ಸೆಷನ್‌ಗೆ ಸಹಿ ಮಾಡುವುದರ ಮೂಲಕ ಮೈಸೂರು ಸಂಸ್ಥಾನವು ಭಾರತದ ಒಕ್ಕೂಟಕ್ಕೆ ಸೇರಿತು.

ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿ ಕೆ.ಸಿ. ರೆಡ್ಡಿ (1947–1952) : 1947 ಅಕ್ಟೋಬರ್ 24ರಂದು ಕೆ.ಸಿ ರೆಡ್ಡಿಯವರು ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿ ಆಯ್ಕೆಯಾದರು.

ಸ್ವಾತಂತ್ರ್ಯ ಚಳವಳಿಯ ಮುಂಚೂಣಿಯಲ್ಲಿದ್ದ ಕೆ.ಸಿ. ರೆಡ್ಡಿಯವರನ್ನು ಮತ್ತು ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ನಾಯಕರನ್ನೊಳಗೊಂಡ ಒಂಬತ್ತು ಜನ ಸಚಿವರನ್ನೊಳಗೊಂಡ ಮಂತ್ರಿಮಂಡಲ ಅಸ್ತಿತ್ವಕ್ಕೆ ಬಂದಿತು. ಮಂತ್ರಿಗಳು ಮತ್ತು ಅವರ ಖಾತೆಗಳು ಈ ಕೆಳಕಂಡಂತಿವೆ.

1)	ಕೆ.ಸಿ. ರೆಡ್ಡಿ	–	ಮುಖ್ಯಮಂತ್ರಿ, ಆಹಾರ ಮತ್ತು ಕಂದಾಯ ಖಾತೆ
2)	ಹೆಚ್. ಸಿದ್ದಯ್ಯ	–	ಲೋಕೋಪಯೋಗಿ ಮತ್ತು ಕೃಷಿ ಖಾತೆ
3)	ಹೆಚ್.ಸಿ. ದಾಸಪ್ಪ	–	ಹಣಕಾಸು ಮತ್ತು ಕೈಗಾರಿಕಾ ಖಾತೆ
4)	ಟಿ. ಮರಿಯಪ್ಪ	–	ಗೃಹ, ರೈಲ್ವೆ ಮತ್ತು ಆಹಾರ ಖಾತೆ
5)	ಆರ್. ಚನ್ನಿಗರಾಮಯ್ಯ	–	ಸ್ಥಳೀಯ ಸಂಸ್ಥೆಗಳ ಖಾತೆ
6)	ಕೆ.ಟಿ. ಭಾಷ್ಯಂ	–	ಕಾರ್ಮಿಕ ಮತ್ತು ಕಾನೂನು ಖಾತೆ

ಕಾಂಗ್ರೆಸ್ಸೇತರ ಮಂತ್ರಿಗಳು

1.	ಮಹಮದ್ ಷರೀಫ್	–	ವೈದ್ಯಕೀಯ ಮತ್ತು ಆರೋಗ್ಯ ಖಾತೆ
2.	ಡಿ.ಹೆಚ್.ಚಂದ್ರಶೇಖರಯ್ಯ	–	ಶಿಕ್ಷಣ ಖಾತೆ
3.	ಪಿ. ಸುಬ್ಬರಾಮಶೆಟ್ಟಿ	–	ಪುರಸಭಾ ಅಭಿವೃದ್ಧಿ ಖಾತೆ

ಮಹಾರಾಜರಿಂದ ಅಧಿಕಾರದ ದಂಡವನ್ನು ಕಸಿದುಕೊಂಡಿದ್ದೇನೋ ಸರಿ, ಆದರೆ ಸಮಸ್ಯೆಗಳು ಧುತ್ತನೆ ಬಂದೆರಗಿದವು. ಅಂದು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಜಕೀಯ ಮುಖಂಡರು ತಮಗೆ ಮಂತ್ರಿ ಪದವಿ ಸಿಗಲಿಲ್ಲವೆಂಬ ಮುನಿಸು, ಜಾತಿ ಮತ್ತು ಪ್ರಾದೇಶಿಕ ಆಧಾರದ ಮೇಲೆ ತಮಗೆ ಮಂತ್ರಿ ಪದವಿ ಲಭಿಸಬೇಕೆಂತಲೂ ಹೀಗೆ ಅಸಮಾಧಾನದ ಹೊಗೆಯಾಡುತ್ತಿತ್ತು. ಆಳರಸರ ಕಾಲದಲ್ಲಿ ದಿವಾನರಾಗಿದ್ದ ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು ಸ್ವಾತಂತ್ರ್ಯ ಬಂದ ನಂತರವೂ 1949ರವರೆವಿಗೂ ದಿವಾನರಾಗಿಯೇ ಮುಂದುವರೆದರು.

ಶ್ರೀರೆಡ್ಡಿಯವರು ಅಧಿಕಾರಕ್ಕೆ ಬಂದ ಮೇಲೆ ಅಭಿವೃದ್ಧಿ ಕೆಲಸಗಳನ್ನು ಮಾಡಲು ಕೆಲವಾರು ಅಡ್ಡಿ ಆತಂಕಗಳು ಎದುರಾದವು. ಅವುಗಳೆಂದರೆ 1949ರಲ್ಲಿ ಆಹಾರ ಧಾನ್ಯಗಳ ದಾಸ್ತಾನು ಸರಿಯಾಗಿ ಆಗದೆ ಅಭಾವ ತಲೆದೋರಿತು. ಸಮಸ್ಯೆಯನ್ನು ಎದುರಿಸಲು ಹೋಟೆಲ್‌ಗಳಲ್ಲಿ ಇಡ್ಲಿ, ದೋಸೆಗಳನ್ನು ಮಾಡಬಾರದೆಂಬ ಆಜ್ಞೆಯನ್ನು ಹೊರಡಿಸಿದರು. ಅದರಿಂದಲೇ ಲಾಭಗಳಿಸುತ್ತಿದ್ದ ಹೋಟೇಲು ಮಾಲೀಕರು ಸರ್ಕಾರದ ಆಜ್ಞೆಯನ್ನು ವಿರೋಧಿಸಿದರು. ರಾಜ್ಯದಲ್ಲಿದ್ದ ಹದಿನೈದು ಸಾವಿರ ಹೋಟೆಲ್ ಮಾಲೀಕರು ಹೋಟೆಲ್‌ಗಳನ್ನು ಮುಚ್ಚಿ ಮುಷ್ಕರ

ಹೂಡಿದರು. ಪರಿಸ್ಥಿತಿಯನ್ನು ಹೇಗೋ ನಿಭಾಯಿಸಿದ ರೆಡ್ಡಿಯವರ ಸರ್ಕಾರ ಕೇಂದ್ರ ಸರ್ಕಾರದೊಂದಿಗೆ ಸಮಾಲೋಚನೆ ನಡೆಸಿದ ಫಲವಾಗಿ ಕೇಂದ್ರದಿಂದ ರಾಜ್ಯಕ್ಕೆ ಒಂದು ಲಕ್ಷ ಟನ್ ಆಹಾರಧಾನ್ಯ ಪೂರೈಕೆಯಾಯಿತು. ಇದರಿಂದಾಗಿ ರಾಜ್ಯದ ಆಹಾರ ಪರಿಸ್ಥಿತಿ ಕೊಂಚ ಮಟ್ಟಿಗೆ ಚೇತರಿಸಿಕೊಂಡಿತು.

ರಾಷ್ಟ್ರವು ಬ್ರಿಟಿಷರಿಂದ ಸ್ವಾತಂತ್ರ್ಯಗಳಿಸಿದರೂ ಮೈಸೂರು ರಾಜ್ಯವು 1949ರವರೆವಿಗೂ ಸೈನ್ಯವನ್ನು ಅದರ ಸುಪರ್ದಿನಲ್ಲಿಟ್ಟುಕೊಂಡಿತ್ತು. ಅದನ್ನು ನಿಭಾಯಿಸುವುದು ಕಷ್ಟಸಾಧ್ಯವೆಂದು ತಿಳಿದು ಬಂದಾಗ ಸ್ವತಂತ್ರಭಾರತದ ಸೈನ್ಯಕ್ಕೆ ಸೇರ್ಪಡೆ ಮಾಡಲು ಯತ್ನಿಸಿ ವಿಫಲವಾಯಿತು. ಶ್ರೀ ರೆಡ್ಡಿಯವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಮೈಸೂರು ಸೈನ್ಯವು ಈ ಹಿಂದೆ ರಾಜ್ಯಕ್ಕೆ ಸಲ್ಲಿಸಿದ್ದ ಸೇವೆಯನ್ನು ಪರಿಗಣಿಸಿ ಈ ಸೈನಿಕರನ್ನು ಮಾನವೀಯತೆಯ ದೃಷ್ಟಿಯಿಂದ ಸೈನ್ಯದಲ್ಲಿ ಉದ್ಯೋಗ ಕೊಡಿಸಿಕೊಡಬೇಕೆಂತಲೂ ಅದು ಸಾಧ್ಯವಾಗದಿದ್ದರೆ ಅವರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು. ಶ್ರೀ ರೆಡ್ಡಿಯವರ ಒತ್ತಾಯದ ಫಲವಾಗಿ ಮೈಸೂರು ಆಳರಸರ ಸುಪರ್ದಿನಲ್ಲಿದ್ದು ಕೆಲಸ ಕಳೆದುಕೊಂಡಿದ್ದ ಎರಡು ಸಾವಿರ ಮಂದಿ ಸೈನಿಕರಲ್ಲಿ ಒಂದೂವರೆ ಸಾವಿರ ಮಂದಿ ಸೈನಿಕರಿಗೆ ಉದ್ಯೋಗ ಲಭಿಸಿತು. ಉಳಿದ ಐನೂರು ಮಂದಿಗೆ ಪರಿಹಾರವನ್ನು ನೀಡಿದರು.

ಗಾಂಧೀಜಿಯವರ ಅನುಯಾಯಿಯಾದ ಶ್ರೀ ರೆಡ್ಡಿಯವರು ಪಾನ ನಿರೋಧ –ವನ್ನು ಚಿತ್ರದುರ್ಗ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಹಂತಹಂತವಾಗಿ ಜಾರಿಗೆ ತಂದರು. ಇನ್ನು ಕೆಲವೇ ದಿನಗಳಲ್ಲಿ ಸಂಪೂರ್ಣ ಪಾನ ನಿಷೇಧವಾಗಿ ನಮ್ಮ ರಾಜ್ಯ ಪಾನಮುಕ್ತ ರಾಜ್ಯವಾಗುವುದೆಂದು ಘೋಷಿಸಿದರು. ಗಾಂಧೀಜಿಯವರ ಕಟ್ಟಾ ಅಭಿಮಾನಿಗಳಾಗಿದ್ದ ಹೆಚ್.ಸಿ. ದಾಸಪ್ಪ ಅದರಲ್ಲೂ ವಿಶೇಷವಾಗಿ ಶ್ರೀಮತಿ ಯಶೋಧರ ದಾಸಪ್ಪನವರು ಶ್ರೀ ರೆಡ್ಡಿಯವರನ್ನು ಬೆಂಬಲಿಸಿದರು. ಆದರೆ ಮದ್ಯದ ವ್ಯವಹಾರದ ದಂಧೆ ನಡೆಸಿ ಸಂಪಾದಿಸುತ್ತಿದ್ದ ಒಂದು ಗುಂಪು ರೆಡ್ಡಿಯವರ ಸರ್ಕಾರ –ವನ್ನೂ, ಕಾಂಗ್ರೆಸ್ ನೀತಿಯನ್ನೂ ಖಂಡಿಸತೊಡಗಿತು. ಸರ್ಕಾರ ಮಣಿಯದಿದ್ದಾಗ ಮುಂದೆ ಪತ್ರಿಕಾ ಪ್ರಕಟಣಾ ಸಂಸ್ಥೆಯನ್ನು ಪ್ರಾರಂಭಿಸಿತು. ಶ್ರೀ ರೆಡ್ಡಿ 1948ರಲ್ಲಿ ರಸ್ತೆ ಸಾರಿಗೆ ನಿಗಮವನ್ನು ರಚಿಸಿ ಕೆಲವು ಪ್ರಮುಖ ರಸ್ತೆಗಳನ್ನು ರಾಷ್ಟ್ರಕರಣ ಮಾಡಿದರು. ಶರಾವತಿಯಲ್ಲಿ ಮಹಾತ್ಮ ಗಾಂಧಿ ಜಲವಿದ್ಯುತ್ ಯೋಜನೆಯನ್ನು ಪ್ರಾರಂಭಿಸಿದರು. ಬೆಂಗಳೂರು ನಗರವನ್ನು ಅಭಿವೃದ್ಧಿ ಪಡಿಸಬೇಕೆಂಬ ಉದ್ದೇಶದಿಂದ 1949ರಲ್ಲಿ ದಂಡುಪ್ರದೇಶ ಮತ್ತು ಬೆಂಗಳೂರನ್ನು ಒಗ್ಗೂಡಿಸಿ 'ಬೆಂಗಳೂರು ಕಾರ್ಪೊರೇಷನ್' ಸ್ಥಾಪಿಸಲಾಯಿತು. 1950ರಲ್ಲಿ ದೇಶದಲ್ಲೇ ಮೊದಲ ಬಾರಿಗೆ ಪ್ರೌಢ ಮತದಾನದಂತೆ ಚುನಾವಣೆ ನಡೆಯಿತು. ಬೆಂಗಳೂರು ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದು ಬೆಂಗಳೂರು

ನಗರಾಭಿವೃದ್ಧಿಗೆ ಗಮನ ನೀಡಿತು. ಬೆಂಗಳೂರು ನಗರದಂತೆ ಬೇರೆ ನಗರಗಳೂ ಅಭಿವೃದ್ಧಿ ಯಾಗಬೇಕೆಂಬ ಉದ್ದೇಶದಿಂದ 1951ರಲ್ಲಿ ಪುರಸಭೆ ಕಾನೂನನ್ನು ಜಾರಿಗೆ ತಂದರು. 1949ರಲ್ಲಿ ಸಾಂಖ್ಯಿಕ ಇಲಾಖೆಯನ್ನು ಅಸ್ತಿತ್ವಕ್ಕೆ ತರಲಾಯಿತು. ಅದೇ ರೀತಿ ಸ್ಥಳೀಯ ಮತ್ತು ಸ್ವಾಯತ್ತ ಸಂಸ್ಥೆಗಳ ಲೆಕ್ಕ ಪತ್ರ ಪರೀಶೀಲನೆಗಾಗಿ ಸ್ಟೇಟ್ಸ್ ಅಕೌಂಟ್ಸ್ ಇಲಾಖೆಯು 1951ರಲ್ಲಿ ಅಸ್ತಿತ್ವಕ್ಕೆ ಬಂದಿತು.

ವಿಧಾನಸೌಧ ಸ್ಥಾಪನೆಯ ಮೊದಲ ಪ್ರಯತ್ನ : ಶ್ರೀ ರೆಡ್ಡಿಯವರು ರಾಜ್ಯದ ರಾಜಧಾನಿಯನ್ನು ಮೈಸೂರಿನಿಂದ ಬೆಂಗಳೂರಿಗೆ ಸ್ಥಳಾಂತರಿಸಿದರು. ಅಠಾರ ಕಛೇರಿಯಲ್ಲಿದ್ದ ಸಚಿವಾಲಯಕ್ಕೆ ಇಡೀ ರಾಜ್ಯದ ಆಡಳಿತ ನಿಭಾಯಿಸಲು ಸಿಬ್ಬಂದಿ ವರ್ಗ ಮತ್ತು ಕಡತಗಳಿಗೆ ಜಾಗ ಸಾಕಾಗದೇ ಬಂದಾಗ ದೊಡ್ಡದೊಂದು ಆಡಳಿತ ಕಛೇರಿ ಇಲ್ಲವೇ ವಿಧಾನಸೌಧ ಅಗತ್ಯವೆಂದು ಭಾವಿಸಿ ವಿಧಾನಸೌಧದ ನಿರ್ಮಾಣಕ್ಕೆ ಮೂವತ್ಮೂರು ಲಕ್ಷ ರೂ.ಗಳನ್ನು ಅಂದಾಜು ವೆಚ್ಚವೆಂದು ನಿಗದಿಪಡಿಸಿದರು. ಕೆ.ಸಿ. ರೆಡ್ಡಿಯವರು, ಕೆಂಗಲ್ ಹನುಮಂತಯ್ಯನವರು ಈಗ ನಿರ್ಮಿಸಿರುವ ಬೃಹತ್ ಹಾಗೂ ಭವ್ಯ ಕಟ್ಟದವಾದ ವಿಧಾನಸೌಧದ ಮಾದರಿಯಾಗಿರದೆ ಚಿಕ್ಕ ಮತ್ತು ಚೊಕ್ಕ ಭವನದ ನಿರ್ಮಾಣಕ್ಕೆ ಮುಂದಾದರು. 1951 ಜುಲೈ 13ರಂದು ಅಂದಿನ ಭಾರತದ ಪ್ರಧಾನ ಮಂತ್ರಿಗಳಾದ ಶ್ರೀ ಜವಹರಲಾಲ್ ನೆಹರೂರವರು ಕಟ್ಟಡ ನಿರ್ಮಾಣದ ಶಂಖು ಸ್ಥಾಪನೆ ನೆರವೇರಿಸಿದರು. ಆದರೆ ಇದರ ರೂಪುರೇಷೆ ಮುಂದೆ ಕೆಂಗಲ್‌ರವರ ಕಾಲದಲ್ಲಿ ಪೂರ್ತಿ ಬದಲಾಯಿತು. ಆದರೆ ಅದೇ ಸ್ಥಳದಲ್ಲಿ ಕಟ್ಟಡ ರಚನೆಯಾಯಿತು.

ಮುಖ್ಯಮಂತ್ರಿ ಪದವಿಯಿಂದ ನಿರ್ಗಮನ : ಕಾಂಗ್ರೆಸ್ ಪಾಳೆಯದಲ್ಲಿ ಶ್ರೀ ರೆಡ್ಡಿಯವರ ವಿರೋಧಿಗಳು ಹೆಚ್ಚಾಗ-ತೊಡಗಿದರು. ಈ ಮೊದಲೇ ಒಂದು ಅವಿಶ್ವಾಸ ಗೊತ್ತುವಳಿ ಮಂಡನೆಯಾಗಿ ಶ್ರೀ ರೆಡ್ಡಿಯವರು 34-30 ಮತಗಳಿಂದ ಅಧಿಕಾರವನ್ನು ಉಳಿಸಿಕೊಂಡಿದ್ದರು. ವಿರೋಧಿಗಳು ಶ್ರೀ ಕೆಂಗಲ್ ಹನುಮಂತಯ್ಯನವರ ನೇತೃತ್ವದಲ್ಲಿ ಶ್ರೀ ರೆಡ್ಡಿಯವರ ವಿರುದ್ಧ ತಿರುಗಿ ಬಿದ್ದರು. ರಾಜಕೀಯ ಜಂಜಾಟ ತಾರಕಕ್ಕೇರಿದ ಕಾರಣದಿಂದ ಕೇಂದ್ರದಿಂದ ವೀಕ್ಷಕರಾಗಿ ಬಂದ ಲಾಲ್ ಬಹದ್ದೂರ್ ಶಾಸ್ತ್ರಿಯವರು ಅಂದು ಬೆಂಗಳೂರಿಗೆ ಆಗಮಿಸಿ ಕಾಂಗ್ರೆಸ್ ಶಾಸಕರ, ಮುಖಂಡರ, ಮಂತ್ರಿಗಳ ಸಲಹೆ ಸೂಚನೆಯನ್ನು ಪಡೆದು, ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಮೈಸೂರು ರಾಜ್ಯವು ಹೊಸ ನಾಯಕನ್ನು ಬಯಸುತ್ತದೆ ಎಂಬ ಅಭಿಪ್ರಾಯವನ್ನು ಮಂಡಿಸಿದರು. ನಂತರ ಅಂದಿನ ಪ್ರಧಾನಮಂತ್ರಿಗಳಾದ ಶ್ರೀ ಜವಹರ್‌ಲಾಲ್ ನೆಹರೂರವರು ಮಧ್ಯಪ್ರವೇಶಿಸಿ ಶ್ರೀ ರೆಡ್ಡಿಯವರನ್ನು ಕೇಂದ್ರದ ಸೇವೆಗೆ ಬರಮಾಡಿಕೊಂಡರು.

ರಾಷ್ಟ್ರ ರಾಜಕಾರಣಕ್ಕೆ ಶ್ರೀ ರೆಡ್ಡಿಯವರು : ಕೆ.ಸಿ. ರೆಡ್ಡಿಯವರ ಶಿಸ್ತು, ದಕ್ಷತೆ, ಪ್ರಾಮಾಣಿಕತೆ, ಕಾರ್ಯಕ್ಷಮತೆಯನ್ನು ಮೆಚ್ಚಿದ ಶ್ರೀ ಜವಹರಲಾಲ್ ನೆಹರೂರವರು

ರಾಷ್ಟ್ರ ರಾಜಕಾರಣಕ್ಕೆ ಕರೆತಂದರು. ಶ್ರೀ ರೆಡ್ಡಿಯವರು ವಿಧಾನಸಭೆಗೆ ಸ್ಪರ್ಧಿಸದೆ ನೇರವಾಗಿ ರಾಜ್ಯಸಭಾ ಸದಸ್ಯರಾದರು. ನಂತರ ಕೇಂದ್ರ ಕೈಗಾರಿಕಾ ಮತ್ತು ಉತ್ಪಾದನಾ ಸಚಿವರಾದರು. ಪಂಚವಾರ್ಷಿಕ ಯೋಜನೆಯ ತಳಹದಿಯಲ್ಲಿ ಕೃಷಿ ಮತ್ತು ಕೈಗಾರಿಕೆಗೆ ಕೇಂದ್ರ ಸರ್ಕಾರವು ಒತ್ತುಕೊಟ್ಟಿತು. ಇದರ ಫಲವಾಗಿ ರಾಂಚಿ, ದುರ್ಗಾಪುರ, ರೂರ್ಕೆಲ, ಬಿಲಾಯ್‌ಗಳಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ತಲೆ ಎತ್ತಿದವು. ಕರ್ನಾಟಕದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಬೆಂಗಳೂರಿನಲ್ಲಿ ಹೆಚ್.ಎಂ.ಟಿ., ಬಿ.ಹೆಚ್.ಇ.ಎಲ್. ಕೈಗಾರಿಕೆಗಳು ಸ್ಥಾಪನೆಯಾಗಲು ಕಾರಣಕರ್ತರಾದರು. ರಾಜ್ಯ ಮತ್ತು ರಾಷ್ಟ್ರವನ್ನು ಮುನ್ನಡೆಸಲು ಶ್ರೀ ರೆಡ್ಡಿಯವರು ಸಾಕಷ್ಟು ದುಡಿದರು.

ಇಂಗ್ಲೆಂಡ್, ರಷ್ಯಾ, ಜರ್ಮನಿಗಳಿಗೆ ಭೇಟಿ ಕೊಟ್ಟು ಅಲ್ಲಿನ ಕೈಗಾರಿಕಾಭಿವೃದ್ಧಿ-ಯನ್ನು ಅಭ್ಯಸಿಸಿ ಅಲ್ಲಿನ ಸರ್ಕಾರಗಳೊಂದಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ವಿನಿಮಯಕ್ಕೆ ಒಪ್ಪಂದ ಮಾಡಿಕೊಳ್ಳುವುದರ ಮೂಲಕ ಭಾರತದ ಕೈಗಾರಿಕಾಭಿವೃದ್ಧಿಗೆ ಕಾರಣಕರ್ತರಾದರು. ರಾಷ್ಟ್ರಾಭಿವೃದ್ಧಿಯನ್ನೇ ಎದುರು ನೋಡುತ್ತಿದ್ದ ಶ್ರೀ ರೆಡ್ಡಿಯವರ ಕಾಲದಲ್ಲಿಯೇ ನೈವೇಲಿಯ ಲಿಗ್ನೈಟ್ ಯೋಜನೆಯು ಅಸ್ತಿತ್ವಕ್ಕೆ ಬಂದಿತು.

1957ರಲ್ಲಿ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಬಹುಮತಗಳಿಂದ ಗೆದ್ದು ಬಂದರು. ಕೇಂದ್ರ ಸರ್ಕಾರದ ಗೃಹ ನಿರ್ಮಾಣ ಮತ್ತು ಸಾರಿಗೆ ಖಾತೆ ಸಚಿವ-ರಾಗಿ ಸೇವೆ ಸಲ್ಲಿಸಿದರು. ನಂತರ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರಾಗಿ ಸೇವೆ ಸಲ್ಲಿಸಿದರು. ನಂತರ ಪಂಜಾಬಿನ ರಾಜ್ಯಪಾಲರನ್ನಾಗಿ ರೆಡ್ಡಿಯವರನ್ನು ನೇಮಿಸಲು ಹೊರಟಾಗ ನಯವಾಗಿ ಅದನ್ನು ತಿರಸ್ಕರಿಸಿದರು. ಲೋಕಸಭೆಯಲ್ಲಿ ಉಪನಾಯಕರಾಗಿ ಆಯ್ಕೆಯಾದರು. ಪ್ರಧಾನಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ-ಯವರು ಶ್ರೀ ರೆಡ್ಡಿಯವರನ್ನು ಮಧ್ಯಪ್ರದೇಶದ ರಾಜ್ಯಪಾಲರನ್ನಾಗಿ ನೇಮಿಸಿದರು. 1964 ರಿಂದ 1971ರವರೆಗೂ ಮಧ್ಯಪ್ರದೇಶದ ರಾಜ್ಯಪಾಲರಾಗಿ ಸೇವೆಸಲ್ಲಿಸಿದರು. 1973ರಲ್ಲಿ ಸಕ್ರಿಯ ರಾಜಕಾರಣದಿಂದ ಹಿಂದೆ ಸರಿದರು. 1976ರಲ್ಲಿ ಬೆಂಗಳೂರಿನಲ್ಲಿ ಅಸುನೀಗಿದರು.

ಶ್ರೀ ಕೆಂಗಲ್ ಹನುಮಂತಯ್ಯ



ಬಾಲ್ಯ ಜೀವನ ಮತ್ತು ಸಾಧನೆಗಳು : ಕೆಂಗಲ್ ಹನುಮಂತಯ್ಯನವರು ಎಂದ ಕೂಡಲೆ ಥುತ್ತನೆ ನಮ್ಮ ನೆನಪಿಗೆ ಬರುವುದು ವಿಶಾಲವಾದ ವಿಧಾನಸೌಧ. ಕೆಂಗಲ್ಲರು ಕರ್ನಾಟಕ ಕಂಡ ರಾಜಕಾರಣ ಮುತ್ಸದ್ದಿಗಳಲ್ಲಿ ಪ್ರಮುಖ ವ್ಯಕ್ತಿ ಎಂದರೆ ತಪ್ಪಾಗಲಾರದು. ಜನಪ್ರಿಯ ವಕೀಲರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ

ಮೈಸೂರು ಚಲೋ ಚಳುವಳಿಯ ನೇತಾರರಾಗಿ, ನಂತರ ಮುಖ್ಯಮಂತ್ರಿ ಪದವಿಯನ್ನು ಗಳಿಸಿ ಶ್ರೇಷ್ಠ ಆಡಳಿತಗಾರರಾಗಿ, ಶ್ರೇಷ್ಠ ಸಂಸದೀಯ ಪಟುವಾಗಿ, ಹಲವು ಹತ್ತು ಅಭಿವೃದ್ಧಿ ಕಾರ್ಯಗಳ ಕಾರಣಕರ್ತರಾಗಿ ಇಡೀ ಕರ್ನಾಟಕದ ಇತಿಹಾಸದಲ್ಲಿ ತನ್ನ ವಿರಾಟರೂಪವನ್ನು ಪ್ರದರ್ಶಿಸಿದ್ದಾರೆ.

ಹನುಮಂತಯ್ಯನವರು ಬೆಂಗಳೂರು ಜಿಲ್ಲೆ ರಾಮನಗರ ತಾಲ್ಲೂಕು ಲಕ್ಕಪ್ಪನಹಳ್ಳಿ ಅಥವಾ ಮೊಟ್ಟೆದೊಡ್ಡಿ ಎಂಬಲ್ಲಿ 10.2.1908ರಲ್ಲಿ ವೆಂಕಟೇಗೌಡ ಮತ್ತು ನಂಜಮ್ಮ ದಂಪತಿಗಳಿಗೆ ಜನಿಸಿದರು. ದಂಪತಿಗಳಿಗೆ ಕೆಲವಾರು ಕಾಲ ಮಕ್ಕಳಿಲ್ಲದ ಕಾರಣ ಚನ್ನಪಟ್ಟಣ ಮತ್ತು ರಾಮನಗರ ಸಮೀಪದ ಕೆಂಗಲ್ ಹನುಮಂತರಾಯ ಸ್ವಾಮಿ ದೇವರಿಗೆ ಹರಕೆ ಹೊತ್ತ ಪರಿಣಾಮವಾಗಿ ಜನಿಸಿದ ಮಗುವಿಗೆ ಕೆಂಗಲ್ ಹನುಮಂತಯ್ಯ ಎಂದು ನಾಮಕರಣ ಮಾಡಿದರು. ಹನುಮಂತಯ್ಯನವರು ಬಡತನದಲ್ಲೇ ಹುಟ್ಟಿ ಬಡತನದಲ್ಲೇ ಬೆಳೆದರು. 1920ರಲ್ಲಿ ಎಲ್.ಎಸ್. (ಲೋಯರ್ ಸೆಕೆಂಡರಿ) ತೇರ್ಗಡೆಯಾದರು. ಒಕ್ಕಲಿಗ ಕುಲಪುತ್ರ ಕೆ.ಹೆಚ್. ರಾಮಯ್ಯನವರ ಪರಿಚಯದ ಕಾರಣ ವಿದ್ಯಾರ್ಥಿ ವೇತನ ದೊರೆಯಿತಲ್ಲದೆ ಒಕ್ಕಲಿಗರ ಸಂಘದ ವಿದ್ಯಾರ್ಥಿ ನಿಲಯದಲ್ಲಿದ್ದು ವ್ಯಾಸಂಗ ಮಾಡಲು ಅನುಕೂಲವಾಯಿತು. ಮೈಸೂರಿನಲ್ಲಿ ಬಿ.ಎ. ವ್ಯಾಸಂಗ ಮಾಡುತ್ತಿರುವಾಗ ರಾಷ್ಟ್ರೀಯ ಆಂದೋಲನ ನಡೆಯುತ್ತಿರುವಾಗ ಚಕ್ರವರ್ತಿ ರಾಜಗೋಪಾಲಾಚಾರಿ, ಗಾಂಧೀಜಿ ಇನ್ನೂ ಮುಂತಾದ ನಾಯಕರ ಪ್ರಭಾವಕ್ಕೊಳಗಾದರು. 1927ರಲ್ಲಿ ಮದ್ರಾಸಿನಲ್ಲಿ ನಡೆದ ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನಕ್ಕೆ ಕರ್ನಾಟಕದ ಪ್ರತಿನಿಧಿಯಾಗಿ ರಾಜ್ಯವನ್ನು ಪ್ರತಿನಿಧಿಸಿದರು.

ಕ್ರಮೇಣ ಹೆಚ್.ಸಿ. ದಾಸಪ್ಪ, ಯಶೋಧರ ದಾಸಪ್ಪ, ಕೆ.ಸಿ.ರೆಡ್ಡಿ, ಹೆಚ್.ಕೆ. ವೀರಣ್ಣಗೌಡ, ತಗಡೂರು ರಾಮಚಂದ್ರರಾಯ, ಸಾಹುಕಾರ್ ಚನ್ನಯ್ಯ ಇನ್ನೂ ಮುಂತಾದವರ ಪ್ರಭಾವಕ್ಕೊಳಗಾದರು. 1929-30ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಪದವಿಯನ್ನು ಪಡೆದು ಪುಣೆಯ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಕಾನೂನು ಪದವಿಗೆ ಸೇರಿ 1932ರಲ್ಲಿ ಕಾನೂನು ಪದವೀಧರರಾದರು. ಬೆಂಗಳೂರಿಗೆ ಹಿಂತೆರಳಿದ ಕೆಂಗಲ್ಲರು ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ಗಾಂಧೀಜಿಯವರು ಕರ್ನಾಟಕಕ್ಕೆ ಬಂದಾಗ ಅವರ ಪ್ರಭಾವಕ್ಕೊಳಗಾದ ಕೆಂಗಲ್ಲರು, 1934ರಲ್ಲಿ ಮೈಸೂರು ಹಿಂದಿ ಪ್ರಚಾರ ಸಭಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಸ್ವಾತಂತ್ರ್ಯ ಹೋರಾಟಕ್ಕೆ ಪಾದಾರ್ಪಣೆ : 1938ರಲ್ಲಿ ಶಿವಪುರ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಜೈಲು ಶಿಕ್ಷೆ ಅನುಭವಿಸಿದರು. 1939ರಲ್ಲಿ ಕೆ.ಸಿ. ರೆಡ್ಡಿಯವರ ಒತ್ತಾಯದ ಮೇರೆಗೆ ಮೈಸೂರು ರಾಜ್ಯದ ಸ್ವಾತಂತ್ರ್ಯ ಹೋರಾಟದ ನಾಯಕಸ್ಥಾನವನ್ನಲಂಕರಿಸಿ -ದರು. (ಕೆ.ಸಿ. ರೆಡ್ಡಿಯವರು ಆಗ ಜೈಲಿನಲ್ಲಿದ್ದರು) 1940-41ರಲ್ಲಿ ಮೈಸೂರು

ಪ್ರಜಾಪ್ರತಿನಿಧಿ ಸಭೆಗೆ ಬೆಂಗಳೂರು ಪುರಸಭಾ ಕ್ಷೇತ್ರದಿಂದ ಆಯ್ಕೆಯಾದರು. 1940ರಿಂದ 1947ರವರೆಗೆ ಪ್ರಜಾಪ್ರತಿನಿಧಿ ಸಭಾಸದರಾಗಿ 1947 ರಿಂದ 1962ರವರೆಗೆ ಚುನಾಯಿತ ಶಾಸಕರಾಗಿ ಆಯ್ಕೆಯಾಗುತ್ತಾ ಬಂದರು. 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರಸರು ಭಾರತದ ಒಕ್ಕೂಟಕ್ಕೆ ಸೇರದಿದ್ದಾಗ ಅರಮನೆ ಚಳವಳಿ ಅಥವಾ ಮೈಸೂರು ಚಲೋ ಚಳವಳಿಯನ್ನು ಪ್ರಾರಂಭಿಸಿ ಜವಾಬ್ದಾರಿ ಸರ್ಕಾರಕ್ಕೂ ಒತ್ತಾಯಿಸಿದರು. 1947ರಿಂದ 1951ವರೆಗೆ ಶಾಸಕರಾಗಿ ಸೇವೆ ಸಲ್ಲಿಸಿದರು.

ಕೆ.ಸಿ. ರೆಡ್ಡಿಯವರ ಆಡಳಿತ ಕಾಲದಲ್ಲಿ ಕೇಂದ್ರದಿಂದ ವೀಕ್ಷಕರಾಗಿ ಬಂದ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಕಾಂಗ್ರೆಸ್ ಶಾಸಕರ ಮುಖಂಡರ, ಮಂತ್ರಿಗಳನ್ನು ಭೇಟಿ ಮಾಡಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಮೈಸೂರು ರಾಜ್ಯವು ಹೊಸ ನಾಯಕನ್ನು ಬಯಸುತ್ತದೆ ಎಂಬ ಅಭಿಪ್ರಾಯವನ್ನು ಮಂಡಿಸಿದರು. ನೆಹರೂರವರು ಮಧ್ಯಪ್ರವೇಶಿಸಿ ಕೆ.ಸಿ. ರೆಡ್ಡಿಯವರನ್ನು ಕೇಂದ್ರದ ಸೇವೆಗೆ ನಿಯುಕ್ತಿಗೊಳಿಸುವುದರ ಮೂಲಕ ಪರಿಸ್ಥಿತಿ ನಿಭಾಯಿಸಿದರು. 1952ಕ್ಕೆ ಕೆ.ಸಿ. ರೆಡ್ಡಿಯವರು ಹೆಚ್ಚು ಕಡಿಮೆ 5 ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿ ಕೇಂದ್ರಕ್ಕೆ ಕಾಲಿಟ್ಟರು. ಅಲ್ಲಿಗೆ ಮೈಸೂರಿನ ರಾಜಕೀಯ ಬಿಕ್ಕಟ್ಟು ತಾತ್ಕಾಲಿಕವಾಗಿ ಶಮನಗೊಂಡಿತು.

1952ರಲ್ಲಿ ಮೈಸೂರು ರಾಜ್ಯದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಇದರಲ್ಲಿ ಕಾಂಗ್ರೆಸ್ ನಾಯಕರು ಬಿರುಸಿನ ಮತ ಪ್ರಚಾರ ಮಾಡಿದರು. ಬಡವರ, ದೀನ–ದಲಿತರ ಶೋಷಣೆಯ ವಿರುದ್ಧ ದನಿ ಎತ್ತುತ್ತಿದ್ದ ಕೆಂಗಲ್‌ರು ಬಹುಬೇಗ ಜನಪ್ರಿಯಗೊಂಡರು. ಅವರ ಮುಂದಾಲೋಚನೆ, ಕಾರ್ಯಶೀಲತೆ, ಜನಮನವನ್ನಾಕರ್ಷಿಸಿತು. ಉತ್ತಮ ಭಾಷಣಕಾರರೂ, ವಾಗ್ಮಿಯೂ ಆದ ಕೆಂಗಲ್ಲರು, ಕಾಂಗ್ರೆಸ್ ಪಕ್ಷ ಮತ್ತೊಮ್ಮೆ ಅಧಿಕಾರಕ್ಕೆ ಬರುವಂತೆ ಮಾಡಿದ ಕೀರ್ತಿಗೆ ಭಾಜನರಾದರು.

ಮುಖ್ಯಮಂತ್ರಿಯಾಗಿ ಕೆಂಗಲ್ ಹನುಮಂತಯ್ಯ (1952–56) : ರಾಜ್ಯದ 2ನೇ ಮುಖ್ಯಮಂತ್ರಿಯಾಗಿ 30.3.1952ರಲ್ಲಿ ಅಧಿಕಾರಕ್ಕೆ ಬಂದರು. ಅವರು ಮುಖ್ಯಮಂತ್ರಿಯಾದಾಗ 44ರ ಪ್ರಾಯ. ನೀಳ ದೇಹದ ಗೌರವರ್ಣವುಳ್ಳ ಕೆಂಗಲ್ ತುಂಬುಕಾಲರಿನ ಉದ್ದನೆಯ ಕೋಟು, ಅದಕ್ಕೊಪ್ಪುವ ಪ್ಯಾಂಟು ಹಾಗೂ ಮೈಸೂರು ಪೇಟವನ್ನು ಧರಿಸುತ್ತಿದ್ದರು. ಕೋಟು ಪ್ಯಾಂಟಿನಲ್ಲಿ ನೆಹರೂರವರಂತೆ ಕಂಡರೂ, ತಲೆಗೆ ಮಾತ್ರ ಮೈಸೂರು ಪೇಟವನ್ನು ತೊಡುತ್ತಿದ್ದು ಪಾಶ್ಚಾತ್ಯ ಮತ್ತು ಭಾರತೀಯ ಶೈಲಿಯ ಸಮ್ಮಿಳಿತವಾದಂತೆ ಕಾಣುತ್ತಿತ್ತು. ಕನ್ನಡ, ಇಂಗ್ಲೀಷ್, ಹಿಂದಿ ಭಾಷೆಯಲ್ಲಿ ಆಳವಾದ ಜ್ಞಾನವಿದ್ದಿತು. ಮೈಸೂರು ರಾಜ್ಯವನ್ನು ಇಡೀ ರಾಷ್ಟ್ರದಲ್ಲೇ ಆಧುನಿಕಗೊಳಿಸಬೇಕೆಂದು ಕನಸು ಕಾಣುತ್ತಿದ್ದರು. ಅಂದು ಮುಖ್ಯಮಂತ್ರಿ ಪದವಿಯು

ಹೂವಿನ ಹಾಸಿಗೆ ಆಗಿರದೇ ಮುಳ್ಳಿನ ಹಾಸಿಗೆಯಾಗಿತ್ತು. ಕಾರಣವೇನೆಂದರೆ ಶಿಕ್ಷಣ, ಆಹಾರ, ಉದ್ಯೋಗ ಇನ್ನೂ ಮುಂತಾದ ಸಮಸ್ಯೆಗಳು ಇದ್ದವು. ಇದೇ ಸಮಯಕ್ಕೆ ಭಾಷಾವಾರು ಪ್ರಾಂತ್ಯಗಳ ವಿಂಗಡನೆಗಾಗಿ ಕರ್ನಾಟಕದ ಏಕೀಕರಣಕ್ಕಾಗಿ ಹೋರಾಟ ನಡೆಯುತ್ತಿತ್ತು. ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಬೇಕಾಗಿತ್ತು.

ಕೆಂಗಲ್ ಹನುಮಂತಯ್ಯನವರ ಮಂತ್ರಿಮಂಡಲ

1.	ಕೆಂಗಲ್ ಹನುಮಂತಯ್ಯ	:	ಮುಖ್ಯಮಂತ್ರಿ
2.	ಟಿ. ಸಿದ್ದಲಿಂಗಯ್ಯ	:	ಕೈಗಾರಿಕ ಸಚಿವ
3.	ಎ.ಜಿ. ರಾಮಚಂದ್ರ ರಾವ್	:	ಶಿಕ್ಷಣ ಮತ್ತು ಕಾನೂನು ಸಚಿವ
4.	ಟಿ. ಚನ್ನಯ್ಯ	:	ಸಾರ್ವಜನಿಕ ಆರೋಗ್ಯ ಮತ್ತು ಸ್ಥಳೀಯ ಸರ್ಕಾರ ಸಚಿವ
5.	ಕಡಿದಾಳ್ ಮಂಜಪ್ಪ	:	ಕಂದಾಯ ಮತ್ತು ಲೋಕೋಪಯೋಗಿ
6.	ಹೆಚ್. ಸಿದ್ದವೀರಪ್ಪ	:	ಗೃಹ ಖಾತೆ ಮತ್ತು ಕೃಷಿ ಸಚಿವ

ರಾಜ್ಯದೊಳಗೊಂದು ರಾಜ್ಯ : ಮೈಸೂರು ಸಂಸ್ಥಾನವು ಭಾರತ ಸರ್ಕಾರದೊಡನೆ 1947 ಅಕ್ಟೋಬರ್‌ನಲ್ಲಿ ಸೇರಿಕೊಂಡು ಎಲ್ಲಾ ಷರತ್ತುಗಳನ್ನು ಒಪ್ಪಿಕೊಂಡ ಮೇಲೂ ಹಳೆಯ ಮೈಸೂರು ಭಾಗಗಳು ಮೈಸೂರು ಅರಸರಿಗೆ ಸೇರಿದೆಯೇನೋ ಎಂಬಂತೆ ವರ್ತಿಸುತ್ತಿತ್ತು. ಕೆಂಗಲ್ಲರು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ (1952) ಹಲವಾರು ವಿಚಾರಗಳು ವಿಧಾನ ಸಭೆಯಲ್ಲಿ ಪ್ರಸ್ತುತ ಆದವು. ಹಳೆಯ ಮೈಸೂರು ಶಾಲೆಗಳಲ್ಲಿ ರಾಷ್ಟ್ರಗೀತೆಯಾದ **'ಜನಗಣಮನ'** ಕ್ಕಿಂತಲೂ ಮೊದಲು **'ಕಾಯೌ ಶ್ರೀಗೌರಿ'** ಎಂಬುದು ಪ್ರಾರ್ಥನೆಯಾಗಿದ್ದಿತು. ಅಲ್ಲದೆ ರಾಷ್ಟ್ರದ ತ್ರಿವರ್ಣ ಧ್ವಜದ ಜೊತೆಗೆ ಮಹಾರಾಜರ ಗಂಡಭೇರುಂಡ ಧ್ವಜವೂ ಹಾರಾಡುತ್ತಿತ್ತು. ಹೀಗೆ ಎರಡು ಪ್ರಾರ್ಥನೆ, ಎರಡು ಧ್ವಜಗಳು ಹಳೆಯ ಮೈಸೂರು ಪ್ರಾಂತ್ಯವನ್ನು ಮೈಸೂರು ಒಡೆಯರು ಸ್ವತಂತ್ರ್ಯವಾಗಿರಲು ಬಿಟ್ಟಿಲ್ಲ ಎಂದು ವಿರೋಧಿಗಳು ಛೇಡಿಸಿದರು.

ಅದಕ್ಕೆ ಕೆಂಗಲ್ಲರು ಇನ್ನು ಮುಂದೆ ರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜವಲ್ಲದೇ ಬೇರೆ ಧ್ವಜಕ್ಕೆ ಅವಕಾಶ ನೀಡುವುದಿಲ್ಲ ಎಂದು ಆಶ್ವಾಸನೆ ನೀಡಿ, ಆ ಕೂಡಲೆ ಆಜ್ಞೆಯೊಂದನ್ನು ಹೊರಡಿಸಿದರು.

ಶಿಕ್ಷಣ ಸುಧಾರಣೆ : ಸುಶಿಕ್ಷಿತರಾದ ಹನುಮಂತಯ್ಯನವರು ಮೈಸೂರು ರಾಜ್ಯ ಮತ್ತು ತಮಿಳುನಾಡಿನ ಶಿಕ್ಷಣಕ್ರಮವನ್ನು ಅರಿತುಕೊಂಡಿದ್ದರು. ಹಾಗೂ ಅವುಗಳಲ್ಲಿದ್ದ ಲೋಪದೋಷಗಳನ್ನು ಕಂಡುಕೊಂಡಿದ್ದರು ಹಾಗೂ ತಾವೇ ಶಿಕ್ಷಣ ಸುಧಾರಣಾ

ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದ ಅನುಭವವಿದ್ದಿತು. ಪ್ರತಿಯೊಬ್ಬ ವಿದ್ಯಾರ್ಥಿ–ಯೂ ಉಚಿತವಾಗಿ, ಒಂದು ಗೊತ್ತಾದ ಕ್ರಮದಲ್ಲಿ ಎಸ್.ಎಸ್.ಎಲ್.ಸಿ. ಮಟ್ಟವನ್ನು ದಾಟುವವರೆಗೂ ಸರ್ಕಾರವು ಅವರಿಗೆ ಶಿಕ್ಷಣವನ್ನು ನೀಡಬೇಕೆಂದು ಕೇಂದ್ರವನ್ನು ಒತ್ತಾಯಿಸುತ್ತಿದ್ದರು. ಸಂಸ್ಥಾನದಲ್ಲಿ ಅಂದು ಪ್ರತಿವರ್ಷ 1,000ಕ್ಕೂ ಹೆಚ್ಚು ಮಂದಿ ಬಿ.ಎ. ಬಿ.ಎಸ್ಸಿ., ಎಂ.ಎ. ಮುಂತಾದ ಪದವಿಗಳನ್ನು ಪಡೆಯುತ್ತಿದ್ದಾರೆ. ಇವರುಗಳು ತಮ್ಮ ವ್ಯಾಸಂಗ ಮುಗಿದ ಮೇಲೆ ಒಂದು ವರ್ಷ ಕಾಲ ಉಪಾಧ್ಯಾಯರಾಗಿ ಸೇವೆ ಸಲ್ಲಿಸದ ಹೊರತು ಅವರಿಗೆ ಪದವಿ ಪತ್ರಗಳನ್ನು ನೀಡಬಾರದೆಂದು ಸಲಹೆ ಮತ್ತು ಸೂಚನೆಗಳನ್ನು ನೀಡಿದರು. ಪ್ರಾಥಮಿಕ ಶಿಕ್ಷಣಕ್ಕೆ ಇವರು ಹೆಚ್ಚು ಒತ್ತುಕೊಟ್ಟರು.

ಕೆಂಗಲ್ಲರು ಸ್ವಾತಂತ್ರ ಹೋರಾಟಗಾರರಾಗಿ ಮೇಲೆ ಬಂದಿದ್ದರಿಂದಾಗಿ ವಸಾಹತುಶಾಹಿಯ ವಿರೋಧಿಗಳಾಗಿದ್ದರು. ಇದರ ಪರಿಣಾಮವಾಗಿ ಫ್ರೆಂಚ್ ರಾಕ್ಸ್ ಎಂದು ಕರೆಯುತ್ತಿದ್ದ ಹೆಸರನ್ನು ಬದಲಿಸಿ ಪಾಂಡವಪುರ ಎಂತಲೂ ಕ್ಲೋಸ್‌ಪೇಟೆ–ಯನ್ನು ರಾಮನಗರವೆಂತಲೂ. ಬೌರಿಂಗ್‌ಪೇಟೆಯನ್ನು ಬಂಗಾರಪೇಟೆ ಎಂದು ಬದಲಿಸುವುದರ ಮೂಲಕ ವಸಾಹತು ಹೆಸರುಗಳನ್ನು ತೆಗೆದುಹಾಕಿ ಸ್ಥಳೀಯ ಹೆಸರುಗಳನ್ನು ಇಟ್ಟರು.

ಸಾಹಿತ್ಯ ಮತ್ತು ಸಂಸ್ಕೃತಿಗೆ ಪ್ರೋತ್ಸಾಹ : ಹನುಮಂತಯ್ಯನವರು ಭಾರತದ ಇತಿಹಾಸ, ಸಂಸ್ಕೃತಿ, ಸಾಹಿತ್ಯ ಮತ್ತು ಪರಂಪರೆಯ ಬಗ್ಗೆ ಅತೀವ ಕಾಳಜಿಯನ್ನು ಹೊಂದಿದ್ದರು. ಸಾಹಿತ್ಯ ಮತ್ತು ಸಂಸ್ಕೃತಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಕುವೆಂಪು, ಅ.ನ. ಕೃಷ್ಣರಾವ್, ಎ.ಎನ್. ಮೂರ್ತಿರಾವ್, ಡಿ.ವಿ.ಜಿ. ದೇವುಡು, ಬಿ. ಶಿವಮೂರ್ತಿಶಾಸ್ತ್ರಿ, ವೆಂಕಟಾಚಲ ಶಾಸ್ತ್ರಿ ಇನ್ನೂ ಮುಂತಾದವರ ಸಲಹೆ ಸೂಚನೆ, ಮಾರ್ಗದರ್ಶನಗಳನ್ನು ಪಡೆಯುತ್ತಿದ್ದರು. ಸಾಹಿತ್ಯ ಕೃತಿಗಳು ನವ ಪೀಳಿಗೆಗೆ ಸುಲಭದರದಲ್ಲಿ ದೊರಕಬೇಕೆಂಬ ಉದ್ದೇಶದಿಂದ ಕುಮಾರವ್ಯಾಸ ಭಾರತ, ಕನ್ನಡ ಜೈಮಿನಿಭಾರತ, ಹರಿಶ್ಚಂದ್ರ ಕಾವ್ಯ, ವಚನ ಭಾರತ ಇನ್ನೂ ಮುಂತಾದ ಗ್ರಂಥಗಳನ್ನು ಸರ್ಕಾರದ ವತಿಯಿಂದ ಪ್ರಕಾಶನಗೊಳಿಸಿ, ಹೊರತಂದು ಸುಲಭ ಬೆಲೆಗೆ ಮಾರಾಟ ಮಾಡುವುದರ ಮೂಲಕ ನಾಡಿಗೆ ಮಾದರಿಯಾದರು. ಇಷ್ಟೇ ಅಲ್ಲದೆ ವಿಶ್ವಕೋಶ ಮತ್ತು ಕನ್ನಡ ನಿಘಂಟುಗಳನ್ನು ಹೊರತಂದ ಕೀರ್ತಿಗೆ ಪಾತ್ರರಾಗಿದ್ದಾರೆ.

ಏಕೀಕರಣ ಮತ್ತು ಕೆಂಗಲ್ : ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಿಸಿ ಆಯಾ ಭಾಷೆಗಳಿಗೆ ಆದ್ಯತೆ ನೀಡಬೇಕೆಂದು ಮೈಸೂರು ಆಂಧ್ರ ಮುಂತಾದ ರಾಜ್ಯಗಳು ಏಕೀಕರಣ ಚಳುವಳಿಯನ್ನು ನಡೆಸುತ್ತಿದ್ದವು. ಈ ಚಳುವಳಿಯು ತಾರಕಕ್ಕೇರಿತು. ಕೆಲವು ಸದಸ್ಯರು ಏಕೀಕರಣವನ್ನು ವಿರೋಧಿಸುತ್ತಿದ್ದರು. ಕೆಂಗಲ್‌ರು ಶಾಸನ ಸಭೆಯಲ್ಲಿ ಏಕೀಕರಣದ ಅಗತ್ಯವನ್ನು ಎಳೆ–ಎಳೆಯಾಗಿ ಬಿಡಿಸಿ ಹೇಳಿದರು. ಹೈದರ್

ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಮೈಸೂರು ರಾಜ್ಯದ ವಿಸ್ತೀರ್ಣ 80,000 ಚದರು ಮೈಲಿಗೂ ಮೀರಿತ್ತು. 1799ರಲ್ಲಿ 4ನೇ ಮೈಸೂರು ಯುದ್ಧ ನಡೆದು ಆನಂತರ ಮೈಸೂರು ರಾಜ್ಯದ ವಿಸ್ತೀರ್ಣ 29,000 ಚದುರ ಮೈಲಿಗೆ ಇಳಿಯಿತು. ಆದ್ದರಿಂದ ನಮ್ಮೆಲ್ಲರ ಇಂದಿನ ಕರ್ತವ್ಯ ನಿಜಾಮರಿಗೆ ಮತ್ತು ಮರಾಠರಿಗೆ ಹೋದ ಪ್ರದೇಶಗಳನ್ನು ಮತ್ತೆ ನಾವು ಗಳಿಸಿಕೊಳ್ಳುವುದೇ ಆಗಿದೆ. ಹೀಗೆ ರಚಿತವಾಗುವ ವಿಶಾಲ ಮೈಸೂರು, ಮೈಸೂರು ರಾಜ್ಯವೇ ಹೊರತು. ಹೊಸರಾಜ್ಯವಲ್ಲ ಎಂದು ಏಕೀಕರಣ ವಿರೋಧಿಗಳಿಗೆ ಸಮಜಾಯಿಷಿ ನೀಡಿದರು. **'ನಾನು ಕರ್ನಾಟಕದ ದಾಸ'** ಎಂದೂ ಸಹ ಘೋಷಿಸಿಕೊಂಡರು. ಅಂದಿನ ವಿಧಾನಸಭೆಯ ಸಭಾಧ್ಯಕ್ಷರಾಗಿದ್ದ ಎಸ್. ಸಿದ್ದಯ್ಯನವರ ಸಹಕಾರ ಪಡೆದು ಏಕೀಕರಣಕ್ಕೆ ಶಾಸಕರ ಬೆಂಬಲವನ್ನು ಗಳಿಸಿಕೊಂಡರು. ಹಾಗೂ ಮೈಸೂರು ಪ್ರಾಂತ್ಯದ ಹೊರಗಿದ್ದ ಉತ್ತರ ಕರ್ನಾಟಕದಲ್ಲಿ ವಿರೋಧ ಪಕ್ಷದ ನಾಯಕ ಜೆ.ಎಂ. ಇಮಾಮ್‌ರವರ ಜೊತೆ ಸಂಚಾರ ಮಾಡಿ ಏಕೀಕರಣಕ್ಕಾಗಿ ಎಲ್ಲೆಡೆ ಭಾಷಣ ಮಾಡಿದರು. ಕರ್ನಾಟಕ ಏಕೀಕರಣವನ್ನು ಸಾಧಿಸುವ ಮೂಲಕ ನಾಡಿನ ಇತಿಹಾಸದಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದರು.

ವಿಧಾನಸೌಧದ ನಿರ್ಮಾಣ : ಇಂದಿಗೂ ಇಡೀ ಭಾರತದ ಉದ್ದಗಲಕ್ಕೂ ಕರ್ನಾಟಕ ಅಥವಾ ಬೆಂಗಳೂರು ಎಂದರೆ ವಿಧಾನಸೌಧದ ಚಿತ್ರ ಜನರ ಕಣ್ಮುಂದೆ ನಿಲ್ಲುತ್ತದೆ. ಸಂಪೂರ್ಣ ಭಾರತೀಯ ಶೈಲಿಯನ್ನಳವಡಿಸಿಕೊಂಡು, ಉದ್ದಗಲಕ್ಕೂ ವಿಸ್ತರಿಸಿಕೊಂಡಿರುವ ಬೃಹತ್ತಾದ ಸೌಧ. ದೈತ್ಯ ಕಂಬಗಳ, ಅರೆ ಗುಮ್ಮಟಗಳ, ಕುಸುರಿ ಕೆಲಸ ಮಾಡಿದ, ಕಲ್ಲಿನ ಪಟ್ಟಿಕೆಗಳ ಸುಂದರವಾದ ಸೌಧ. ಲಂಡನ್‌ನ ಜೇಮ್ಸ್ ಪ್ಯಾಲೇಸನ್ನು ನಾಚಿಸುವಂತಹ ವಿಶಾಲವಾದ ಮೆಟ್ಟಿಲುಗಳು ಎಂಥವರನ್ನು ಆಕರ್ಷಿಸುತ್ತವೆ. ಸ್ವಾತಂತ್ರ್ಯ ಬಂದು 50–60 ವರ್ಷಗಳಾದರೂ ಬಹುಶಃ ಇಂದಿಗೂ ಭಾರತದ ಯಾವುದೇ ರಾಜ್ಯದಲ್ಲೂ ವಿಧಾನಸೌಧದಂತಹ ಸುಂದರವಾದ ಸೌಧವನ್ನು ನಿರ್ಮಿಸಲು ಸಾಧ್ಯವಾಗಿಲ್ಲ. ಕೆಂಗಲ್ಲರನ್ನು ಇಡೀ ಭಾರತದಲ್ಲೇ ಅಗ್ರನಾಯಕನ ಮಟ್ಟಕ್ಕೇರಿಸಲು ಈ ಸೌಧ ಒಂದೇ ಸಾಕು.

ಕೆ.ಸಿ. ರೆಡ್ಡಿಯವರು ಮುಖ್ಯಮಂತ್ರಿಯಾಗಿದ್ದಾಗ ಅಂದಿನ ಅಠಾರ ಕಛೇರಿಯಲ್ಲಿ ರಾಜ್ಯದ ಎಲ್ಲಾ ಕೆಲಸ ಕಾರ್ಯಗಳು ನಡೆಯುತ್ತಿದ್ದು ಅದು ತುಂಬಾ ಚಿಕ್ಕದಾಗಿತ್ತು. ಸರ್ಕಾರ ತನ್ನ ಆಡಳಿತ, ವಿಧಾನ ಮಂಡಳದ ಅಧಿವೇಶನ ಇವೇ ಮುಂತಾದವುಗಳನ್ನು ಒಂದೇ ಕಡೆ ನಿರ್ವಹಿಸಬೇಕಾಗಿದ್ದಿತು. ಅಠಾರ ಕಛೇರಿಯನ್ನು ತೆರವುಗೊಳಿಸಿ ಹೊಸ ಕಟ್ಟಡವನ್ನು ನಿರ್ಮಿಸಬೇಕೆಂದು ತೀರ್ಮಾನಿಸಲಾಯಿತ್ತು. ಹೊಸ ಕಟ್ಟಡ ನಿರ್ಮಾಣದ ನಕ್ಷೆಯನ್ನು ತಯಾರಿಸಲಾಯಿತ್ತು. ಆ ನಕ್ಷೆಯ ಪ್ರಕಾರ 1,32,400 ಚ.ಅ. ಕಟ್ಟಡ ನಿರ್ಮಾಣದ ಅಂದಾಜು ವೆಚ್ಚ 33 ಲಕ್ಷ ರೂಪಾಯಿ ಎಂದು ನಿಗದಿಪಡಿಸಲಾಯಿತ್ತು.

ದಿನಾಂಕ 13 ಜುಲೈ 1951ರಂದು ಭಾರತದ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರೂರವರು ವಿಧಾನಸೌಧ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಿದರು. ಆದರೆ ಕಟ್ಟಡ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಲಿಲ್ಲ. ಕಾರಣವೆಂದರೆ ಅಂದಿನ ರಾಜಕೀಯ ಅನಿಶ್ಚತತೆ, ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರನ್ನು ಕಾಡಿತು. ಕಟ್ಟಡ ನಿರ್ಮಾಣ ಕಾರ್ಯ ನೆನೆಗುದಿಗೆ ಬಿದ್ದಿತು.

ಕೆಂಗಲ್‌ರು ಅಧಿಕಾರಕ್ಕೆ ಬಂದ ಮೇಲೆ ಅವರು ಕನಸುಕಂಡಿದ್ದು ಭವ್ಯವಾದ ಹಾಗೂ ಸುಂದರವಾದ ವಿಧಾನಸೌಧದ ನಿರ್ಮಾಣ ಮಾಡುವುದೇ ಆಗಿತ್ತು. ರೆಡ್ಡಿಯವರ ಕಾಲದಲ್ಲಿ ನಿರ್ಮಿಸಬೇಕೆಂದಿದ್ದ ನಕ್ಷೆ, ಸ್ಥಳ, ಅಂದಾಜು ವೆಚ್ಚ ಇನ್ನೂ ಮುಂತಾದವು ಸಂಪೂರ್ಣವಾಗಿ ಬದಲಾವಣೆಯಾದವು. ಒಂದು ಅಂತಸ್ತಿನ ಬದಲಾಗಿ ಮೂರು ಅಂತಸ್ತುಗಳಿರಬೇಕು. ಶಾಸನ ಸಭೆಗಳ ಕಲಾಪ, ಸಚಿವರ ಕಛೇರಿಗಳು, ಕಾರ್ಯದರ್ಶಿಗಳ ಕಛೇರಿಗಳು, ಗ್ರಂಥಾಲಯ ಇನ್ನು ಮುಂತಾದವು ಒಂದೇ ಭವನ-ದಲ್ಲಿ ಇರಬೇಕೆಂದು ಯೋಜಿಸಿದರು. ಹಿಂದಿನ ಅಂದಾಜು ವೆಚ್ಚ 33 ಲಕ್ಷರೂ.ಗಳಿಂದ 50 ಲಕ್ಷಕ್ಕೇರಿತು. ಇದಕ್ಕೆ ಸಭೆಯ ಅನುಮೋದನೆಯನ್ನು ಪಡೆದುಕೊಂಡರು. ತಮ್ಮ ಕನಸಿನ ವಿಧಾನಸೌಧದ ಕಾರ್ಯಕ್ಕೆ ಟೊಂಕ ಕಟ್ಟಿ ನಿಂತರು. ಮಾಣಿಕ್ಯಂರವರು ಮುಖ್ಯ ವಾಸ್ತುಶಿಲ್ಪಿಯಾದರೆ ಮುನಿಯಪ್ಪನವರು ಮುಖ್ಯ ಇಂಜಿನಿಯರ್‌ರಾಗಿ ನೇಮಕಗೊಂಡರು. ಅಂದಿನ ಮುಖ್ಯ ಇಂಜಿನಿಯರ್ ಆಗಿದ್ದ ಮುನಿಯಪ್ಪನವರನ್ನು ಬರಹೇಳಿ ದೇವರ ಮುಂದೆ ಕುಳ್ಳಿರಿಸಿಕೊಂಡು ಎರಡು ಲೋಟ ಹಾಲು ತರಿಸಿ ಮುಖ್ಯ ಇಂಜಿನಿಯರ್‌ಗೆ ಹೀಗೆ ಹೇಳಿದರು. "ಮುನಿಯಪ್ಪನವರೇ ನಾವು ವಿಧಾನಸೌಧದ ನಿರ್ಮಾಣದ ಮಹಾಕಾರ್ಯವನ್ನು ಕೈಗೆತ್ತಿಕೊಳ್ಳೋಣ ಇಬ್ಬರೂ ಕಾಯಾ, ವಾಚಾ, ಮನಸಾ, ಶುದ್ಧವಾಗಿ ಕೆಲಸ ಮಾಡೋಣ. ಇದರಲ್ಲಿ ಒಂದು ರೂಪಾಯಿ ಹಣವನ್ನು ಕಬಳಿಸುವುದಾಗಲೀ, ಪೋಲು ಮಾಡುವುದಾಗಲೀ ನಡೆಯಕೂಡದು" ಎಂದು ಹೇಳಿ ಇಬ್ಬರೂ ದೇವರ ಮೇಲೆ ಪ್ರಮಾಣ ಮಾಡಿ ಹಾಲು ಕುಡಿಯುವುದರ ಮೂಲಕ ನಿರ್ಮಾಣದ ಮಹಾಕಾರ್ಯವನ್ನು ಕೈಗೆತ್ತಿಕೊಂಡರು. ಕೆಂಗಲ್ಲರು, ದೆಹಲಿ, ಪಂಜಾಬ್, ಉತ್ತರ ಪ್ರದೇಶಗಳಲ್ಲಿರುವ ಭವನಗಳು, ಕಟ್ಟಡಗಳು, ದೇವಾಲಯಗಳನ್ನು ನೋಡಿ ಅವುಗಳ ಕಲೆ ಮತ್ತು ವಾಸ್ತು ಶಿಲ್ಪವನ್ನು ಅರ್ಥ ಮಾಡಿಕೊಂಡರು. ರಾಷ್ಟ್ರದ ಸುಪ್ರಸಿದ್ಧ ಹಾಗೂ ಪ್ರತಿಭಾವಂತ ವಾಸ್ತುಶಿಲ್ಪಿಗಳನ್ನು ಕರೆಸಿ ಅವರಿಂದ ಸೂಕ್ತ ಸಲಹೆ, ಸಹಕಾರಗಳನ್ನು ಪಡೆದುಕೊಂಡರು. ತಮ್ಮ ಬಿಡುವಿಲ್ಲದ ಆಡಳಿತ ಮತ್ತು ರಾಜಕೀಯದ ಕಾರ್ಯಕ್ರಮಗಳನ್ನು ಮುಗಿಸಿ ವಿಧಾನಸೌಧ ಕಟ್ಟಡದ ನಿರ್ಮಾಣಕ್ಕೆ ಗಮನ ಕೊಡುತ್ತಿದ್ದರು. ನಿರ್ಮಾಣದ ಪ್ರಗತಿಯಲ್ಲಿದ್ದ ವಿಧಾನಸೌಧವನ್ನು ನೋಡಲು ಸರ್. ಎಂ. ವಿಶ್ವೇಶ್ವರಯ್ಯ, ಕುವೆಂಪು, ಯುಗೋಸ್ಲೋವಿಯಾದ ಅಧ್ಯಕ್ಷರಾಗಿದ್ದ ಮಾರ್ಷಲ್‌ಟೀಟೋ, ಇಂಗ್ಲೆಂಡಿನ ರಾಣಿ

ಎಲಿಜಿಬೆತ್ ಇನ್ನೂ ಮುಂತಾದವರು ಭೇಟಿಕೊಟ್ಟು ತಮ್ಮ ಹರ್ಷ ವ್ಯಕ್ತಪಡಿಸಿದರು. ವಿಧಾನಸೌಧದ ಒಟ್ಟು ವಿಸ್ತೀರ್ಣ 5,00,000 ಚ.ಅ. ಈ ಮೊದಲು ಅಂದಾಜಿಸಿದ್ದ ವೆಚ್ಚಕ್ಕಿಂತಲೂ ದುಪ್ಪಟ್ಟು ಆಗುತ್ತಾ ನಡೆಯಿತು. 1953ರಲ್ಲಿ ಪ್ರಾರಂಭ– ಗೊಂಡ ನಿರ್ಮಾಣ ಕಾರ್ಯ 1956ರಲ್ಲಿ ಪೂರ್ಣಗೊಂಡಿತು. ವೆಚ್ಚ ಅಧಿಕವಾದಂತೆಲ್ಲಾ ಕೇಂದ್ರದಿಂದ ಓವರ್ ಡ್ರಾಫ್ಟ್ ಮೂಲಕ ಸರ್ಕಾರ ಹಣ ಪಡೆಯತೊಡಗಿತು. ಇದು ಪೂರ್ಣಗೊಂಡಾಗ ತಗಲಿದ ಒಟ್ಟು ವೆಚ್ಚ 2 ಕೋಟಿ 80 ಲಕ್ಷ ರೂಪಾಯಿಗಳು. ತಮ್ಮ ಕನಸಿನ ಸೌಧ ವಿಧಾನಸೌಧದ ಪೂರ್ವಭಾಗದಲ್ಲಿ 'ಸರ್ಕಾರದ ಕೆಲಸ ದೇವರ ಕೆಲಸ'ವೆಂದು ಕಲ್ಲಿನ ಮೇಲೆ ಕೆತ್ತಿಸಿದರು.

ವಿಧಾನಸೌಧದ ನಿರ್ಮಾಣವು ಪೂರ್ತಿಯಾದಂತೆಲ್ಲಾ ಕೆಂಗಲ್ಲರ ಹೆಸರು ಎಲ್ಲೆಡೆ ವ್ಯಾಪಿಸುತ್ತಿದ್ದಂತೆಯೇ ವಿರೋಧಿಗಳ ಅಪಸ್ವರವೂ ಅಷ್ಟೇ ಎತ್ತರಕ್ಕೆ ಏರಿತು. ತಾವು ಕಟ್ಟಿಸಿದ ಕನಸಿನ ಸೌಧದಲ್ಲಿ ಕುಳಿತುಕೊಳ್ಳಲು ವಿರೋಧಿಗಳು ಬಿಡಲಿಲ್ಲ. ದುಂದುವೆಚ್ಚ ಮಾಡಿ ಕಟ್ಟಿರುವ ವಿಧಾನಸೌಧ ಯಾರಿಗೆ ಬೇಕು ಎಂತೆಲ್ಲಾ ಬೊಬ್ಬೆ ಹಾಕಿದರು. ಹಣದ ಅಪವ್ಯಯ ಇವೇ ಮುಂತಾದ ಆರೋಪಗಳನ್ನು ಮಾಡಿದ ತಮ್ಮ ಪಕ್ಷದವರೇ ಆದ ಕೆಲವು ಮುಖಂಡರು ಪಕ್ಷದ ಹೈಕಮಾಂಡ್‌ಗೆ ದೂರು ಸಲ್ಲಿಸಿದರು. ಕೆಂಗಲ್ಲರ ವಿರುದ್ಧ ಅವಿಶ್ವಾಸ ನಿರ್ಣಯವನ್ನು ತಂದು ಕೊನೆಗಳಿಗೆಯಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಳ್ಳಲು ವಿಫಲ ಪ್ರಯತ್ನ ಮಾಡಿದರು. ವಿಧಾನಸೌಧದಲ್ಲಿ ಕುಳಿತುಕೊಳ್ಳುವು –ದಿರಲಿ ಉದ್ಘಾಟನೆ ಮಾಡಲೂ ಬಿಡಲಿಲ್ಲ. 19.8.1956ರಂದು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕಾಯಿತು. ಕಡಿದಾಳ್ ಮಂಜಪ್ಪನವರು ಹಂಗಾಮಿ ಮುಖ್ಯಮಂತ್ರಿಗಳಾಗಿ ನೇಮಕಗೊಂಡರು. ಕಡಿದಾಳ್ ಮಂಜಪ್ಪನವರ ಕಾಲದಲ್ಲಿ ವಿಧಾನಸೌಧದ ಉದ್ಘಾಟನೆಯಾಯಿತು.

ಶಾಸಕರಾಗಿ ಕೆಂಗಲ್ ಹನುಮಂತಯ್ಯ : 1957ರಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಈ ಚುನಾವಣೆಯಲ್ಲಿ ಕೆಂಗಲ್ಲರನ್ನು ಸೋಲಿಸಲು ಭಾರಿ ಸಂಚು ನಡೆಯಿತು. ಆದರೆ ಮಾರುತಿಯ ಭಂಟ ಹನುಮಂತಯ್ಯನವರಿಗೆ ಇದ್ಯಾವುದೂ ಸವಾಲಾಗಲಿಲ್ಲ. ತಮ್ಮ ಸ್ವ–ಕ್ಷೇತ್ರ ರಾಮನಗರದಿಂದ ಭಾರಿ ಬಹುಮತದಿಂದ ಆಯ್ಕೆಯಾದರು. ರಾಜಕೀಯ ಜಂಜಾಟದಿಂದಾಗಿ ಕೆಂಗಲ್ಲರು ಸಾಮಾನ್ಯ ಶಾಸಕರಾಗಿ ಉಳಿಯಬೇಕಾಯಿತ್ತು. ಪಕ್ಷದ ಕಾರ್ಯಕರ್ತರು, ಮಿತ್ರರು, ರೈತರು ಕೆಂಗಲ್ಲರನ್ನು ಭೇಟಿ ಮಾಡಿ ಅವರ ಸಲಹೆ ಸಹಕಾರವನ್ನು ಪಡೆದುಕೊಳ್ಳುತ್ತಿದ್ದರು. 1959ರಲ್ಲಿ ಬೆಂಗಳೂರು ಮೈಸೂರುಗಳಲ್ಲಿ ವಿದ್ಯಾರ್ಥಿಗಳ ಮುಷ್ಕರ ಹಿಂಸಾರೂಪ ತಳೆದಾಗ ವಿದ್ಯಾರ್ಥಿಗಳ ಹಾಗೂ ಸರ್ಕಾರದ ಸರಿ ತಪ್ಪುಗಳನ್ನು ಆಲಿಸಿ ಸಭೆಯಲ್ಲಿ ನಿಷ್ಪಕ್ಷಪಾತವಾಗಿ ಚರ್ಚಿಸಿ ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿದರು.

ಒಮ್ಮೆ ಶ್ರೀ ಬಿ.ಡಿ. ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದಾಗ ನಾಯಕತ್ವದ ಬಿಕ್ಕಟ್ಟು ಉದ್ಭವಿಸಿತು. ಆಗ ಕಾಂಗ್ರೆಸ್ ಹೈಕಮಾಂಡ್ 3–4 ನಾಯಕರುಗಳ ಹೆಸರುಗಳನ್ನು ಸೂಚಿಸಿ ಇವರಲ್ಲಿ ಯಾರಾದರೊಬ್ಬರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆರಿಸಲು ಶಾಸಕರಿಗೆ ಅವಕಾಶ ನೀಡಿತು. ಆ ಹೆಸರುಗಳಲ್ಲಿ ಹನುಮಂತಯ್ಯನವರ ಹೆಸರೂ ಇದ್ದಿತು. ಶ್ರೀ ನಿಜಲಿಂಗಪ್ಪ ಸೇರಿದಂತೆ ಹಲವಾರು ಶಾಸಕರ ಬೆಂಬಲ ಕೆಂಗಲ್ಲರಿಗಿದ್ದರೂ ಅಂದಿನ ಪ್ರಧಾನಿಯಾಗಿದ್ದ ಜವಾಹರ್‌ಲಾಲ್ ನೆಹರೂರವರ ಬೆಂಬಲ ಇರಲಿಲ್ಲ. ಕೆಂಗಲ್ಲರನ್ನು ಅಧಿಕಾರಕ್ಕೆ ತರುವ ಇಚ್ಛೆ ನೆಹರೂರವರಿಗೆ ಇಲ್ಲವಾದ್ದರಿಂದ ಬಿ.ಡಿ. ಜತ್ತಿಯವರನ್ನೇ ಮುಖ್ಯಮಂತ್ರಿಯನ್ನಾಗಿ ಮುಂದುವರಿಸಿದರು. ಹೀಗೆ ಕೆಂಗಲ್ಲರು ಶಾಸಕಾಂಗ ಪಕ್ಷದ ನಾಯಕರಾಗಿ 2ನೇ ಬಾರಿ ಆಯ್ಕೆಯಾಗುವ ಅವಕಾಶವನ್ನು ಕಳೆದುಕೊಂಡರು. ಇದಕ್ಕಿಂತಲೂ ದುರಂತವೆಂದರೆ ಸುಂದರವಾದ ವಿಧಾನಸೌಧವನ್ನು ಕಟ್ಟಿಸಿ ಅದೇ ಮಂದಿರದಲ್ಲಿ ನಿಂತು ತಾನು ಅಪರಾಧ ಮಾಡಿಲ್ಲ ಎಂಬ ಮೊರೆಯನ್ನು ಶಾಸನ ಸಭೆಯ ಮುಂದೆ ಇಡಬೇಕಾದಂತಹ ಇಕ್ಕಟ್ಟಿಗೆ ಸಿಕ್ಕಿದುದು ಈ ನಾಡಿನ ದೌರ್ಭಾಗ್ಯವೇ ಸರಿ.

ಲೋಕಸಭಾ ಸದಸ್ಯರಾಗಿ : 1957ರಲ್ಲಿ ಲೋಕಸಭೆಗೆ ಸಾರ್ವತ್ರಿಕ ಚುನಾವಣೆ ನಡೆಯಿತು. ಕಾಂಗ್ರೆಸ್ ಪಕ್ಷವು ಹನುಮಂತಯ್ಯನವರನ್ನು ಬೆಂಗಳೂರು ನಗರ ಪ್ರದೇಶದಿಂದ ಹುರಿಯಾಳಾಗಿ ಪಕ್ಷವು ನಿಲ್ಲಿಸಿತು. ಕೆಂಗಲ್ಲರು ಭಾರಿ ಬಹುಮತದಿಂದ ಲೋಕಸಭೆಗೆ ಆಯ್ಕೆಯಾದರು. ಆ ದಿನಗಳಲ್ಲಿ ದಕ್ಷಿಣಭಾರತವನ್ನು ಪ್ರತಿನಿಧಿಸುತ್ತಿದ್ದ ಲೋಕಸಭಾ ಸದಸ್ಯರಲ್ಲೇ ಪ್ರಭಾವಿ ಸದಸ್ಯರಾಗಿದ್ದರು. ಲೋಕಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಿದರು. ಭಾರತ ಕಂಡ ಅತ್ಯುತ್ತಮ ಸಂಸದೀಯ ಪಟುಗಳಲ್ಲಿ ಒಬ್ಬರಾಗಿ ರೂಪುಗೊಂಡರು. ಜಮ್ಮು ಕಾಶ್ಮೀರದ ವಿಚಾರ, ನೇಫಾದ ಗಡಿರಕ್ಷಣಾ ವಿಚಾರ, ತೆಲಂಗಾಣ ಸಮಸ್ಯೆ ಹೀಗೆ ಯಾವುದೇ ಸಮಸ್ಯೆ ಇರಲಿ ಅದನ್ನು ಚರ್ಚಿಸಿ ಬಗೆಹರಿಸುವಲ್ಲಿ ಫಲಪ್ರದರಾದರು. ಅವರು ಲೋಕಸಭೆಯಲ್ಲಿ ಮಾಡಿರುವ ಭಾಷಣಗಳು ವಿಚಾರಪೂರಿತವಾಗಿದ್ದವು. ಯಾವುದೇ ಕೇಂದ್ರ ಮಂತ್ರಿ ಅಥವಾ ಪ್ರಧಾನಮಂತ್ರಿಯ ಮರ್ಜಿಗೆ ಒಳಗಾಗದೇ ನಿಷ್ಠುರ ಮತಿಗಳಾಗಿ ವರ್ತಿಸಿದ್ದರು. ಆಡಳಿತ ಪಕ್ಷದಲ್ಲಿದ್ದು ಪ್ರಧಾನಿಯಾಗಿದ್ದ ನೆಹರೂರವರ ಕ್ರಮಗಳನ್ನು ಪ್ರಶ್ನಿಸುತ್ತಿದ್ದರು. ಸರ್ಕಾರದ ನೀತಿ ನಿಯಮಗಳು ಸರಿ ಇಲ್ಲದಿದ್ದರೆ ಜನ ಸಾಮಾನ್ಯರಿಗೆ ತೊಂದರೆಯಾಗುವಂತಿದ್ದರೆ ಅದನ್ನು ಯಾವ ಮರ್ಜಿಗೂ ಒಳಗಾಗದೇ ಖಂಡಿಸುತ್ತಿದ್ದರು. ಒಮ್ಮೆ ಒಂದು ಪ್ರಸಂಗ ನಡೆಯಿತು. ಬೆಂಗಳೂರಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯಿತು. ಆ ಸಂದರ್ಭದಲ್ಲಿ ಭಾರತ ಮತ್ತು ಚೀನಾದೊಡನೆ ನಡೆದ ಯುದ್ಧದಲ್ಲಿ ಭಾರತಕ್ಕಾದ ಪರಾಭವದ ಬಗ್ಗೆ ಚರ್ಚೆ ನಡೆದು ಕೆಂಗಲ್ಲರು ನೆಹರೂರವರ ನೀತಿಯನ್ನು ಅತ್ಯಂತ ತೀವ್ರವಾಗಿ

ಟೀಕಿಸಿದರು. ಅವರು ಟೀಕೆ ಮಾಡಿದ ರೀತಿಯನ್ನು ಕಂಡ ಅನೇಕರು ನೆಹರೂರವರ ಕೋಪಕ್ಕೆ ತುತ್ತಾಗಿ ಕೆಂಗಲ್ ಪಕ್ಷದಲ್ಲಿ ಮುಂದುವರಿಯುವುದು ಕಷ್ಟ ಎಂದು ಭಾವಿಸಿದ್ದರು. ಕೆಂಗಲ್ಲರು ಇವುಗಳ ಪರಿವೇ ಇಲ್ಲದೆ ಸಭೆಯನ್ನು ಮುಗಿಸಿ ಬಳ್ಳಾರಿ ರಸ್ತೆಯಲ್ಲಿರುವ ತಮ್ಮ ಮನೆಗೆ ತೆರಳುತ್ತಿದ್ದಾಗ ಹಿಂದಿನಿಂದ ತಮ್ಮ ಕಾರಿನಲ್ಲಿ ಬಂದ ನೆಹರೂ ಎಲ್ಲಾ ಶಿಷ್ಟಾಚಾರಗಳನ್ನು ಬದಿಗೊತ್ತಿ "Mr. Hanumanthaiah, Why are you Walking? come on." ಎಂದು ತಮ್ಮ ಕಾರಿನ ಬಾಗಿಲು ತೆಗೆದು ತಮ್ಮ ಬಳಿಯೇ ಕೂರಿಸಿಕೊಂಡು ಹೋದದ್ದು ಕೆಂಗಲರ ಧೈರ್ಯ, ಸ್ಥೈರ್ಯ ಹಾಗೂ ನೇರ ನಡೆ ನುಡಿಗೆ ಸಿಕ್ಕಿದ ಉತ್ತಮವಾದ ಒಂದು ಪ್ರತಿಕ್ರಿಯಯಾಗಿದೆ.

ನೆಹರೂರವರ ನಂತರ ಲಾಲ್ ಬಹದ್ದೂರ್ ಶಾಸ್ತ್ರಿಯವರು ಪ್ರಧಾನಮಂತ್ರಿಯಾದರು. ಶಾಸ್ತ್ರಿಯವರು ಕೆಂಗಲ್ಲರನ್ನು ಕಾಫಿ ಮಂಡಳಿಯ ಸದಸ್ಯರನ್ನಾಗಿ, ಅಖಿಲ ಭಾರತ ವಿವೇಕಾನಂದ ಸ್ಮಾರಕ ಸಮಿತಿ ಮತ್ತು ಮೈಸೂರು ರಾಜ್ಯ ಶಾಖೆಯ ಅಧ್ಯಕ್ಷರಾಗಿ, 1966ರಲ್ಲಿ ಕೆನಡಾದ ಒಟ್ಟಾವದಲ್ಲಿ ನಡೆದ ಕಾಮನ್‌ವೆಲ್ತ್ ಸಂಸ್ಥೆಯ ಸಮ್ಮೇಳನಕ್ಕೆ ಭಾರತ ನಿಯೋಗದ ನಾಯಕರನ್ನಾಗಿ ನೇಮಿಸಿದರು. ಕೆಂಗಲ್ಲರು ಯುರೋಪ್ ಸೇರಿದಂತೆ ಹಲವಾರು ರಾಷ್ಟ್ರಗಳಿಗೆ ಭೇಟಿ ನೀಡಿದರು.

ರಾಷ್ಟ್ರ ರಾಜಕಾರಣಕ್ಕೆ ಕೆಂಗಲ್ : 1969ರಲ್ಲಿ ರಾಷ್ಟ್ರದ ಬೃಹತ್ ಪಕ್ಷವಾದ ಕಾಂಗ್ರೆಸ್ ಇಬ್ಭಾಗವಾಯಿತು. ಆಡಳಿತ ಕಾಂಗ್ರೆಸ್ ಮತ್ತು ಸಂಸ್ಥಾ ಕಾಂಗ್ರೆಸ್ ಎಂಬ ಎರಡು ಬಣಗಳು ತಲೆ ಎತ್ತಿದವು. ಕೆಂಗಲ್ಲರು ಸಣ್ಣ ಅಪಘಾತವೊಂದರಲ್ಲಿ ಗಾಯ-ಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅಂದು ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ದೂರವಾಣಿ ಮೂಲಕ ತಮ್ಮ ಪಕ್ಷಕ್ಕೆ ಸೇರಿಕೊಳ್ಳುವಂತೆ ಕೆಂಗಲ್‌ರಿಗೆ ಆಹ್ವಾನ ನೀಡಿದರು. ಅವರ ಕೋರಿಕೆಯಂತೆ ಆಡಳಿತ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು. ಅವರನ್ನು ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಯಿತ್ತು. ನಂತರ ಭಾರತ ಸರ್ಕಾರದ ಆಡಳಿತ ಸುಧಾರಣಾ ಆಯೋಗದ ಸದಸ್ಯರಾಗಿ, ಅದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. 1970ರಲ್ಲಿ ಆಡಳಿತ ಸೇವಾ ಸುಧಾರಣೆಯನ್ನು ಕುರಿತು, 25,000 ಪುಟಗಳ ಬೃಹತ್ ವರದಿಯನ್ನು ಸಲ್ಲಿಸಿದರು. ಇದು ಅವರ ಆಡಳಿತದ ಮೇಲಿರುವ ಪಾಂಡಿತ್ಯವನ್ನು ತಿಳಿಸುತ್ತದೆ.

1970ರಲ್ಲಿ ಕೇಂದ್ರ ಕಾನೂನು ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವರಾದರು. ಕೇಂದ್ರ ಸರ್ಕಾರವು ಅವರನ್ನು ವಿಶ್ವಸಂಸ್ಥೆಯ ಹೇಗ್‌ನ ಅಂತರ-ರಾಷ್ಟ್ರೀಯ ನ್ಯಾಯಾಲಯದ ಸದಸ್ಯರನ್ನಾಗಿ ನೇಮಿಸಿತು. 1970-71ರಲ್ಲಿ ಫಿಲಿಫೈನ್ಸ್‌ನ ಮಲಿನಾದಲ್ಲಿ ನಡೆದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾರತದ ನಿಯೋಗದ ನಾಯಕರಾಗಿ ಭಾಗವಹಿಸಿದರು. ಹಾಗೂ ಅದರ ಒಂದು ಅಧಿವೇಶನದ ಅಧ್ಯಕ್ಷತೆ-

ಯನ್ನು ವಹಿಸಿದ್ದರು. ಅದೇ ವರ್ಷ ಮನಿಲಾದಲ್ಲಿ ಸೇರಿದ್ದ ಏಷ್ಯಾ ದೇಶಗಳ ಸಮಾಜ ಕಲ್ಯಾಣ ಸಚಿವರುಗಳ ಸಮ್ಮೇಳನದಲ್ಲಿ ಭಾಗವಹಿಸಿದುದೇ ಅಲ್ಲದೆ ಅದರ ಉಪಾಧ್ಯಕ್ಷ–ರಾಗಿ ಆಯ್ಕೆಯಾದರು. 1971ರಲ್ಲಿ ನವದೆಹಲಿಯಲ್ಲಿ ನಡೆದ ಅಂತರರಾಷ್ಟ್ರಾಯ ಕಾನೂನು ಸಚಿವರ ಮತ್ತು ಅಟಾರ್ನಿ ಜನರಲ್‌ಗಳ ಸಮ್ಮೇಳನದಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದರು.

ಕೇಂದ್ರ ರೈಲ್ವೆ ಸಚಿವರಾಗಿ : ಹನುಮಂತಯ್ಯನವರ ಜಾಣ್ಮೆ, ಆಡಳಿತಾನುಭವ –ವನ್ನು ರಾಷ್ಟ್ರವು ಸದುಪಯೋಗಪಡಿಸಿಕೊಂಡಿತು. 1971ರಲ್ಲಿ ಚುನಾವಣೆ ನಡೆದು ಕೆಂಗಲ್ಲರು ಬೆಂಗಳೂರು ನಗರ ಕ್ಷೇತ್ರದಿಂದ ಲೋಕಸಭೆಗೆ ಭಾರಿ ಬಹುಮತದಿಂದ ಆಯ್ಕೆಯಾದರು. ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಯಾದರು. ರಾಷ್ಟ್ರದ ಬೃಹತ್ ಜಾಲವಾದ ರೈಲ್ವೆಗೆ ಸಚಿವರನ್ನು ನೇಮಿಸಬೇಕಾದ ಸಂದರ್ಭದಲ್ಲಿ ದಕ್ಷರಾದ ಕೆಂಗಲ್‌ರನ್ನು ಕೇಂದ್ರ ರೈಲ್ವೆ ಸಚಿವರನ್ನಾಗಿ ನೇಮಿಸಿದರು. ರೈಲ್ವೆ ಇಲಾಖೆಯು ಅನೇಕ ಕುಂದು ಕೊರತೆಗಳ, ನ್ಯೂನತೆಗಳ ಆಗರವಾಗಿತ್ತು. ರೈಲ್ವೆ ಆಸ್ತಿ–ಪಾಸ್ತಿಯ ದುರುಪಯೊಗ, ಟಿಕೆಟ್ ರಹಿತ ಪ್ರಾಯಾಣ, ಲಗೇಜ್ ಚಾರ್ಜ್ ನೀಡದೇ ಪ್ರಯಾಣ, ರೈಲ್ವೆ ಆಸ್ತಿಯನ್ನು ಹಾನಿ ಮಾಡುವುದು. ವೇಳೆಗೆ ಸರಿಯಾಗಿ ರೈಲು ಬರದಿರುವುದು ಇವೇ ಮುಂತಾದ ಸಮಸ್ಯೆಗಳು ರೈಲ್ವೆ ಇಲಾಖೆಯನ್ನು ಕಾಡುತ್ತಿದ್ದವು. ಕೆಂಗಲ್ಲರು ರೈಲ್ವೆ ಸಚಿವರಾಗುವವರೆಗೂ ಈ ಮೊದಲು ಪ್ರತಿವರ್ಷ 78 ಕೋಟಿ ನಷ್ಟವಾಗುತ್ತಿತ್ತು. ಈ ನಷ್ಟವಾಗದಂತೆ ನೋಡಿಕೊಂಡುದುದೇ ಅಲ್ಲದೆ 1972ರಲ್ಲಿ 30 ಕೋಟಿ ರೂಪಾಯಿ ಲಾಭ ಬರುವಂತೆ ಮಾಡಿ ಇಡೀ ರಾಷ್ಟ್ರವೇ ನಿಬ್ಬೆರಗಾಗುವಂತೆ ಮಾಡಿದ ಕೀರ್ತಿ ಇವರದಾಗಿದೆ. ಇದೊಂದು ಪವಾಡವೇ ಸರಿ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ರೈಲ್ವೆ ಜಾಲವನ್ನು ರೂಪಿಸುವುದು. ರಾಷ್ಟ್ರದ ಎಲ್ಲಾ ರಾಜ್ಯದ ರಾಜಧಾನಿಯಿಂದ ದೆಹಲಿಗೆ ನೇರಸಂಪರ್ಕ ಕಲ್ಪಿಸುವುದು, ಗೇಜ್ ಪರಿವರ್ತನೆ ಸೇರಿದಂತೆ ಹಲವು ಹತ್ತು ಕೆಲಸ ಕಾರ್ಯಗಳನ್ನು ಕೈಗೊಂಡರು. ಕೆಂಗಲ್ಲರ ಸಾಧನೆಗಳು ಮತ್ತು ಅವರ ಹೆಸರು ಪ್ರಖ್ಯಾತಗೊಳ್ಳತೊಡಗಿದಂತೆ ಹಲವಾರು ರಾಜಕೀಯ ಪುಢಾರಿಗಳು ಪ್ರಧಾನಿ ಮತ್ತು ಕೆಂಗಲ್ಲರ ನಡುವೆ ಹುಳಿ ಹಿಂಡಿದರು (ಶ್ರೀ ಕೆಂಗಲ್ ಹನುಮಂತಯ್ಯ ಮತ್ತು ಗಂಗೂಲಿ ಹಗರಣ). ಇದರಿಂದ ಬೇಸರಗೊಂಡ ಇವರು 1972ರಲ್ಲಿ ರಾಜೀನಾಮೆ ನೀಡಿದರು.

1972–77ರವರೆಗೆ ಸಂಸತ್ ಸದಸ್ಯರಾಗಿ ಮುಂದುವರಿದರು. 1977ರಲ್ಲಿ ಸಾರ್ವಜನಿಕ ಚುನಾವಣೆ ನಡೆಯಿತು. ಇಂದಿರಾಗಾಂಧಿಯವರು ತುರ್ತು ಪರಿಸ್ಥಿತಿಯನ್ನು ಹೇರಿದುದರ ಪರಿಣಾಮವಾಗಿ ಇಂದಿರಾಗಾಂಧಿ ಸೇರಿದಂತೆ ರಾಷ್ಟ್ರದ ಅನೇಕ ನೇತಾರರು ಸೋತು ಹೋದರು. ಅದರಿಂದ ಕೆಂಗಲ್ಲರು ಹೊರತಾಗಿರಲಿಲ್ಲ.

ತಮ್ಮ ಜೀವಮಾನದಲ್ಲಿ ಎಂದೂ ಸೋಲನ್ನರಿಯದ ಕೆಂಗಲ್ ಅವರಿಗೆ ಅದೇ ಮೊದಲ ಮತ್ತು ಕೊನೆಯ ಸೋಲಾಗಿತ್ತು.


ದೇವಾಲಯಗಳ ಮತ್ತು ಸೌಧಗಳ ನಿರ್ಮಾತೃ : ಕೆಂಗಲ್ಲರು ರಾಜಕಾರಣಿ ಮಾತ್ರವಲ್ಲ ಅಪಾರ ದೈವಭಕ್ತರೂ, ಸಜ್ಜನರೂ ಆಗಿದ್ದರು. ರಾಮ ಮತ್ತು ಆಂಜನೇಯನ ಭಕ್ತರಾಗಿದ್ದರು. ಮಠಮಾನ್ಯಗಳಿಗೆ ದಾನ ದತ್ತಿ ನೀಡಿ ಗೌರವಿಸುತ್ತಿದ್ದರು. ಚನ್ನಪಟ್ಟಣ ತಾಲ್ಲೂಕಿನ ಕೆಂಗಲ್ ದೇವಸ್ಥಾನವನ್ನು ಅಭಿವೃದ್ಧಿಪಡಿಸಿ ಅಲ್ಲೊಂದು ಪುಟ್ಟ ರೈಲ್ವೆ ನಿಲ್ದಾಣ ನಿರ್ಮಾಣವಾಗುವುದಕ್ಕೆ ಕಾರಣರಾದರು. ರಾಮನಗರದ ಬಳಿ ಶ್ರೀರಾಮ ದೇವಸ್ಥಾನವನ್ನು ನಿರ್ಮಿಸಿದರು. ಬೆಂಗಳೂರಿನ ಹನುಮಂತ ನಗರದಲ್ಲಿ (ಜಿ. ನಾರಾಯಣ್‌ರವರ ಮನೆಯ ಸಮೀಪ) ರಾಮ ಮತ್ತು ಆಂಜನೇಯರ ಆಲಿಂಗನ ಮೂರ್ತಿಯನ್ನು ಅತ್ಯಾಕರ್ಷಕವಾಗಿ ನಿರ್ಮಿಸಿದರು. ಅದೇ ರೀತಿ ಮಹಾಲಕ್ಷ್ಮೀ ಲೇ ಔಟ್‌ನ ಆಂಜನೇಯ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಮಾಡಿದರು. 1973ರಲ್ಲಿ ಕೆಂಗಲ್ಲರ ದೈವಭಕ್ತಿ, ಶ್ರದ್ಧೆಯನ್ನು ಕಂಡ ಶೃಂಗೇರಿಯ ಜಗದ್ಗುರುಗಳು ಕೆಂಗಲ್ಲರಿಗೆ ರಾಷ್ಟ್ರರತ್ನ ಎಂಬ ಪ್ರಶಸ್ತಿ ಮತ್ತು ಫಲಕವನ್ನು ನೀಡಿ ಗೌರವಿಸಿದರು. ಮೈಸೂರು ಬೆಂಗಳೂರು ರಸ್ತೆಯ ಮದ್ದೂರಿನ ಬಳಿ ಇರುವ ಶಿವಪುರದಲ್ಲಿ ಸತ್ಯಾಗ್ರಹ ಸೌಧವನ್ನು ನಿರ್ಮಿಸುವಲ್ಲಿ ಯಶಸ್ವಿಯಾದರು (1978).

ರಾಜಕೀಯ ದಿನೇ ದಿನೇ ಹೊಲಸಾಗುತ್ತಾ ಬಂದಿತು. ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಮೇಲ್ಜಾತಿ ಕೆಳಜಾತಿ ಎಂಬ ಭಾವನೆ ಇವೇ ಮುಂತಾದವು ಕೆಂಗಲ್ಲರನ್ನು ಕಾಡಿತು. 1977ರಲ್ಲಿ ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿ ಅದರ ಗೆಲುವಿಗೆ ಸಾಕಷ್ಟು ಪ್ರಯತ್ನಿಸಿ ವಿಫಲರಾದರು. ಮತ್ತೆ ಕಾಂಗ್ರೆಸ್ ಸೇರಿದರು. ಕೆಂಗಲ್ಲರು ಯುವಕರನ್ನು ಕುರಿತು ಹೀಗೆ ಸಂದೇಶವನ್ನು ನೀಡುತ್ತಿದ್ದರು.

ದುಷ್ಟಾಚಾರವನ್ನು ದಮನ ಮಾಡಿರಿ,
ಭ್ರಷ್ಟಾಚಾರವನ್ನು ಭಗ್ನ ಮಾಡಿರಿ
ಜಾತಿವಾದವನ್ನು ಸದೆ ಬಡಿಯಿರಿ
ಉದಯವಾಗಲಿ ಚಲುವ ಕನ್ನಡನಾಡು
ಪ್ರಬಲವಾಗಲಿ ಭಾರತದ ನೆಲೆವೀಡು.

ತಮ್ಮ ಜೀವಿತ ಕಾಲದ ಕೊನೆಯವರೆಗೂ ನಾಡಿನ ಶ್ರೇಯೋಭಿವೃದ್ಧಿಯನ್ನು ಚಿಂತಿಸುತ್ತಾ, ಮಂಥನ ಮಾಡುತ್ತಾ 1980ರ ಡಿಸೆಂಬರ್ 1ನೇ ತಾರೀಖು ರಾಷ್ಟ್ರರತ್ನ ಕೆಂಗಲ್ ಹನುಮಂತಯ್ಯ ಚಿರನಿದ್ರೆಗೀಳಿದರು.

ಶ್ರೀ ಕಡಿದಾಳ್ ಮಂಜಪ್ಪ



ಮೇಧಾವಿಯು, ಪ್ರಾಮಾಣಿಕರೂ ಆದ ಶ್ರೀ ಕೆಂಗಲ್ ಹನುಮಂತಯ್ಯನವರು ಜನಪ್ರಿಯ-ರಾದಂತೆಲ್ಲಾ ಅವರನ್ನು ಮುಖ್ಯಮಂತ್ರಿ ಪದವಿಯಿಂದ ಕೆಳಗಿಳಿಸಲು ಅವರ ವಿರೋಧಿಗಳು ಸಂಚು ನಡೆಸಿದರು. ವಿಧಾನಸೌಧವನ್ನು ನಿರ್ಮಾಣ ಮಾಡುವ ಭರದಲ್ಲಿ ದುಂದುವೆಚ್ಚ ಹಾಗೂ ಹಣದ ಅಪವ್ಯಯವಾಗಿದೆ ಎಂದು ಬೊಬ್ಬೆ ಹಾಕಿದರು. ಕಾಂಗ್ರೆಸ್ ನಾಯಕರು ಪಕ್ಷದ ಹೈಕಮಾಂಡ್‌ಗೆ ದೂರುಸಲ್ಲಿಸಿದರು. ಅವಿಶ್ವಾಸ ನಿರ್ಣಯತಂದು ಅಧಿಕಾರದಲ್ಲಿ ಮುಂದುವರಿಯಲು ಬಿಡಲಿಲ್ಲ. ಇದಕ್ಕಿಂತಲೂ ದುರಂತದ ಸಂಗತಿ ಎಂದರೆ ಕೆಂಗಲ್ ಅವರು ನಿರ್ಮಿಸಿದ ವಿಧಾನಸೌಧದ ಉದ್ಘಾಟನೆಗೂ ಬಿಡಲಿಲ್ಲ. ಹೀಗಾಗಿ 19.8.1956 ರಲ್ಲಿ ಶ್ರೀ ಕೆಂಗಲ್ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದರು. ತಮ್ಮ ಸ್ಥಾನ-ವನ್ನು ಬಿಟ್ಟುಕೊಡುವ ಮೊದಲು ಆ ಹುದ್ದೆಗೆ ಸರ್ವ ರೀತಿಯಲ್ಲೂ ಸಮರ್ಥರಾದ ಶ್ರೀ ಕಡಿದಾಳ್ ಮಂಜಪ್ಪನವರನ್ನೇ ಹಂಗಾಮಿ ಮುಖ್ಯಮಂತ್ರಿಯನ್ನಾಗಿ ಮಾಡ-ಬೇಕೆಂದು ಹೈಕಮಾಂಡ್‌ಗೆ ಸಲಹೆ ನೀಡಿ ಪದತ್ಯಾಗ ಮಾಡಿದರು.

ಬಾಲ್ಯ, ಜೀವನ ಮತ್ತು ಸಾಧನೆಗಳು : ಕಡಿದಾಳ್ ಮಂಜಪ್ಪನವರು ಕರ್ನಾಟಕದ ರಾಜಕೀಯ ಕಂಡ ಒಬ್ಬ ಸಾತ್ವಿಕ ರಾಜಕಾರಣಿ. ಬಡತನದಲ್ಲಿ ಹುಟ್ಟಿ ಬೆಳೆದು, ಕೊನೆಯವರೆಗೂ ಬಡತನವನ್ನೇ ಉಂಡು, ಉಟ್ಟು ಆದರೆ ಸತ್ಯ ನಿಷ್ಠೆ, ಶಿಸ್ತಿನ ವಿಷಯದಲ್ಲಿ ಶ್ರೀಮಂತ ಹಾಗೂ ಧೀಮಂತ ವ್ಯಕ್ತಿಯಾಗಿದ್ದವರು.

ಮಂಜಪ್ಪನವರು 10 ಜುಲೈ, 1910ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹಾರೋಹಳ್ಳಿ ಎಂಬ ಗ್ರಾಮದಲ್ಲಿ ದುಗ್ಗಪ್ಪಗೌಡ ಮತ್ತು ಗಂಗಮ್ಮನವರ ಜ್ಯೇಷ್ಠ ಪುತ್ರರಾಗಿ ಜನಿಸಿದರು. ಕಡಿದಾಳ್ ಎಂಬುದು ಇವರ ಮನೆತನದ ಹೆಸರು. ಶಿವಮೊಗ್ಗದಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿ ಎಂಟ್ರೆನ್ಸ್ ಪರೀಕ್ಷೆ ಮತ್ತು ಎಫ್.ಎ ಕೋರ್ಸ್‌ಗಳಲ್ಲಿ ತೇರ್ಗಡೆಯಾಗಿ, ಬಿ.ಎ. ಪದವಿಗಳಿಸಲು ಮೈಸೂರಿನ ಮಹಾರಾಜ ಕಾಲೇಜಿಗೆ ಸೇರಿದರು. 1932ರಲ್ಲಿ ಪುಣೆಯ ಕಾನೂನು ಕಾಲೇಜಿನಲ್ಲಿ ಕಾನೂನು ವ್ಯಾಸಂಗ ಮಾಡಲು ಸೇರಿದರು. ಲಾ ಪದವೀಧರರಾದ ಮಂಜಪ್ಪನವರು 1938ರಲ್ಲಿ ತಮ್ಮ ಸ್ವಂತ ಜಿಲ್ಲೆಯಾದ ಶಿವಮೊಗ್ಗದಲ್ಲಿಯೇ ತಮ್ಮ ವಕೀಲಿ ವೃತ್ತಿಯನ್ನು ಪ್ರಾರಂಭಿಸಿ-ದರು. 1937ರಲ್ಲಿ ಸ್ವಾತಂತ್ರ್ಯ ಸಮರಕ್ಕೆ ಧುಮುಕಿದರು. 1939ರಲ್ಲಿ ಅರಣ್ಯ ಸತ್ಯಾಗ್ರಹ ಪ್ರಾರಂಭವಾಗಿ ಅದರ ನಾಯಕತ್ವವನ್ನು ತಾವೇ ವಹಿಸಿಕೊಂಡರು. 1940ರಲ್ಲಿ

ಮೈಸೂರು ಕಾಂಗ್ರೆಸ್ ಅಧಿವೇಶನವು ಶಿವಮೊಗ್ಗದಲ್ಲಿ ನಡೆದಾಗ ಮಂಜಪ್ಪನವರು ಸಮಿತಿಯ ಕಾರ್ಯದರ್ಶಿಯಾಗಿದ್ದರು.

ರಾಜಕೀಯ ಪ್ರವೇಶ : ಮಂಜಪ್ಪನವರು ಜೀವನದಲ್ಲಿ ವಕೀಲಿಯನ್ನು ವೃತ್ತಿಯನ್ನಾಗಿಯೂ, ರಾಜಕೀಯವನ್ನು ಪ್ರವೃತ್ತಿಯನ್ನಾಗಿಯೂ ಆಯ್ಕೆ ಮಾಡಿಕೊಂಡರು. ಸ್ವಾತಂತ್ರ್ಯ ಹೋರಾಟದ ಮೂಲಕ ರಾಜಕೀಯಕ್ಕೆ ಪ್ರವೇಶಿದರು. ಶಿವಮೊಗ್ಗದ ತೀರ್ಥಹಳ್ಳಿ ಪ್ರದೇಶದಿಂದ 1941ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರಾದರು. ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕಾರ್ಮಿಕರು ಮಂಜಪ್ಪನವರನ್ನು ನಾಯಕನನ್ನಾಗಿ ಮಾಡಿಕೊಂಡು ಮುಷ್ಕರವನ್ನು ತೀವ್ರಗೊಳಿಸಿದರು. ಜಮೀನ್ದಾರರ ಕಿರುಕುಳ ಮತ್ತು ಶೋಷಣೆಯ ವಿರುದ್ಧ ಹೋರಾಟಕ್ಕಿಳಿದರು. 1952 ಮಾರ್ಚ್ ತಿಂಗಳಿನಲ್ಲಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾದರು.

ಕಂದಾಯ ಸಚಿವರಾಗಿ ಮಂಜಪ್ಪನವರು : ಕೆಂಗಲ್ ಹನುಮಂತಯ್ಯನವರು 1952ರಲ್ಲಿ ಕಂದಾಯ ಮತ್ತು ಲೋಕೋಪಯೋಗಿಯಂತಹ ಬೃಹತ್ ಖಾತೆಯನ್ನು ಮಂಜಪ್ಪನವರಿಗೆ ನೀಡಿದರು. ಇವರು ಕಂದಾಯ ಸಚಿವರಾದ ಮೇಲೆ ಮಾಡಿದ ಮೂರು ಪ್ರಮುಖ ಕೆಲಸಗಳೆಂದರೆ

1. ಇನಾಂ ರದ್ದತಿ (ಇನಾಂ ಜಮೀನಿನ ರದ್ದತಿ) (1953)
2. ರೆವಿನ್ಯೂ ಬೋರ್ಡ್ ಸ್ಥಾಪನೆ (1955)
3. ಹರಾಜು ಪದ್ಧತಿಯನ್ನು ತಡೆಗಟ್ಟಿದ್ದು (1958)

1953ರಲ್ಲಿ ಭೂ ಸುಧಾರಣಾ ವಿಧೇಯಕವನ್ನು ರಚಿಸಿ ವಿಧಾನಸಭೆಯಲ್ಲಿ ಮಂಡಿಸಿದರು. ಸಭೆಯ ಅನುಮೋದನೆ ಪಡೆದುಕೊಂಡ ನಂತರ ಜಾರಿಗೆ ತಂದರು. ಹಾಸನ ಜಿಲ್ಲೆ ಗೋರೂರಿನ ಹೇಮಾವತಿ ಅಣೆಕಟ್ಟಿನ ನಿರ್ಮಾಣ ಕಾಯಕ 1934–35 ರಿಂದಲೂ ಕುಂಟುತ್ತಾ ನಡೆಯುತ್ತಿತ್ತು. ಈ ಯೋಜನೆಯನ್ನು ಪೂರ್ಣಗೊಳಿಸಲು ಸ್ಥಳಕ್ಕೆ ಭೇಟಿ ನೀಡಿ ಪರೀಶೀಲಿಸಿದರು. ಹಾಗೂ ಆ ಕೆಲಸಕ್ಕೆ ಒತ್ತುಕೊಟ್ಟು ಪೂರ್ಣಗೊಳಿಸಿದರು. ರೈತರ ಮೇಲಿದ್ದ ಸಾಲದ ಹೊರೆಯನ್ನು ಇಳಿಸಲು ಹಾಗೂ ಶೋಷಣೆಯನ್ನು ತಪ್ಪಿಸಲು 1939ರಲ್ಲಿ **ಮನಿಲೆಂಡರ್ ಕಾಯ್ದೆ, 1928ರ ರೈತರ ಪರಿಹಾರ ಕಾಯ್ದೆ, 1937ರ ಲೋನ್ ಕನ್ಸಿಲಿಯೇಷನ್ ಬೋರ್ಡ್ ಕಾಯ್ದೆ**ಗಳನ್ನು ಅಳವಡಿಸಿಕೊಂಡು ರೈತರ ಅಭಿವೃದ್ಧಿಗೆ ಶ್ರಮಿಸಿದರು. ಅಲ್ಲದೆ ಕಡಿಮೆ ಬಡ್ಡಿದರದಲ್ಲಿ ರೈತರಿಗೆ ಸಾಲ ನೀಡಲು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಮತ್ತು ರೈತರ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಿ ರೈತರ ಪರ ನಿಂತರು.

ಮುಖ್ಯಮಂತ್ರಿಯಾಗಿ ಕಡಿದಾಳ್ ಮಂಜಪ್ಪ : ನಿಷ್ಠಾವಂತ ಮುಖ್ಯಮಂತ್ರಿ-ಯಾಗಿದ್ದ ಕೆಂಗಲ್ ಹನುಮಂತಯ್ಯನವರ ವಿರುದ್ಧ ಅವಿಶ್ವಾಸ ಗೊತ್ತುವಳಿ ಅಂಗೀಕಾರವಾಗಿ 1956 ಆಗಸ್ಟ್ 19ರಂದು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದರು. ತಮ್ಮ ನೆಚ್ಚಿನ ಸ್ನೇಹಿತನೂ ನಿಷ್ಠಾವಂತ ಮತ್ತು ಪ್ರಾಮಾಣಿಕ ವ್ಯಕ್ತಿಯಾದ ಕಡಿದಾಳ್ ಮಂಜಪ್ಪನವರೇ ಹಂಗಾಮಿ ಮುಖ್ಯಮಂತ್ರಿಯಾಗಲು ಕೆಂಗಲ್ಲರು ಇಚ್ಛಿಸಿದರು. ಕಡಿದಾಳ್ ಮಂಜಪ್ಪನವರು ರಾಜ್ಯದ ಮೂರನೇ ಮುಖ್ಯಮಂತ್ರಿಯಾಗಿ (ಹಂಗಾಮಿ) ಅಧಿಕಾರ ಸ್ವೀಕರಿಸಿದರು. ಇವರು ಮುಖ್ಯಮಂತ್ರಿಯಾಗಿ ಅಧಿಕಾರವನ್ನು ವಹಿಸಿಕೊಂಡ ನಂತರ ಏಕೀಕರಣ, ಅಧಿಕಾರಿಗಳ ವರ್ಗಾವಣೆ, ನೆಲ-ಜಲದ ಸಮಸ್ಯೆ ಮತ್ತು ಭಾಷಾ, ಅಲ್ಪಸಂಖ್ಯಾತರ ಸಮಸ್ಯೆಗಳು ಎದುರಾದವು. ಇವುಗಳೆಲ್ಲವನ್ನೂ ಮಂಜಪ್ಪನವರು ದಕ್ಷತೆಯಿಂದ ಎದುರಿಸಿದರು.

ಕೆಂಗಲ್ ಹನುಮಂತಯ್ಯನವರ ಕನಸಿನ ಸೌಧ ವಿಧಾನಸೌಧವನ್ನು ಉದ್ಘಾಟನೆ ಮಾಡುವ ಭಾಗ್ಯ ಮಂಜಪ್ಪನವರಿಗೆ ಸಿಕ್ಕಿತು. ವಿಧಾನಸೌಧವನ್ನು ವಿಧ್ಯುಕ್ತವಾಗಿ ಉದ್ಘಾಟನೆ ಮಾಡಿ ಅಲ್ಲಿಂದ ವಿಧಾನಸೌಧದಲ್ಲಿ ಎಲ್ಲಾ ಸರ್ಕಾರಿ ಕಾರ್ಯ ಕಲಾಪಗಳು ನಡೆಯುವಂತೆ ಮಾಡಲಾಯಿತು. ಮಂಜಪ್ಪನವರು ಹಂಗಾಮಿ ಮುಖ್ಯಮಂತ್ರಿಯಾಗಿ ಕೇವಲ 74 ದಿನಗಳು ಮಾತ್ರ ಅಧಿಕಾರದಲ್ಲಿದ್ದು 1957ರ ಸಾರ್ವತ್ರಿಕ ಚುನಾವಣೆ ನಡೆಯಲು ಅನುವು ಮಾಡಿಕೊಟ್ಟರು.

ಅವರು 1957ರ ಸಾರ್ವತ್ರಿಕ ಚುನಾವಣೆಯಲ್ಲಿ ಶೃಂಗೇರಿ ಮತ ಕ್ಷೇತ್ರದಿಂದ ಆಯ್ಕೆಯಾದರೂ ಸಹ. ಬಿ.ಡಿ. ಜತ್ತಿಯವರು (ಬಸಪ್ಪ ದಾನಪ್ಪ ಜತ್ತಿ) ರಾಜ್ಯದ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಬಿ.ಡಿ. ಜತ್ತಿಯವರು ಮಂಜಪ್ಪನವರನ್ನು ಕಂದಾಯ ಸಚಿವರನ್ನಾಗಿ ನೇಮಕ ಮಾಡಿಕೊಂಡರು. ಮಂಜಪ್ಪನವರು 2ನೇ ಬಾರಿಗೆ ಕಂದಾಯ ಸಚಿವರಾಗಿ ಬಂದದ್ದು ಭೂ ಮಾಲೀಕರಿಗೆ ಮತ್ತು ಭ್ರಷ್ಟ ಅಧಿಕಾರಿಗಳಿಗೆ ಸಮಸ್ಯೆಯಾಯಿತು. 1961ರಲ್ಲಿ ಕರ್ನಾಟಕ ಭೂ ಸುಧಾರಣಾ ಕಾಯ್ದೆಯನ್ನು ಜಾರಿಗೆ ತಂದರು. ಸಮಾಜವಾದಿಯಾಗಿದ್ದ ಮಂಜಪ್ಪನವರು ಮಾನವತಾವಾದಿಯೂ ಆಗಿದ್ದರು. ಭ್ರಷ್ಟ ಹಾಗೂ ದುಷ್ಟ ಅಧಿಕಾರಿಗಳನ್ನು ಖಂಡಿಸದೇ ಬಿಡುತ್ತಿರಲಿಲ್ಲ. ಬಡ ರೈತರು, ಕೂಲಿ ಕಾರ್ಮಿಕರು, ಗೇಣಿದಾರರು, ಸಾಗುವಳಿ ಮಾಡಲು ಅನುಕೂಲ -ವಾಗುವಂತೆ ಭೂಮಿಯನ್ನು ನೀಡುವ ವ್ಯವಸ್ಥೆ ಮಾಡಿದರು. ಭದ್ರಾ ಅಚ್ಚುಕಟ್ಟು, ಲಿಂಗಾಪುರ, ಉಂಬಳೆ ಬಯಲು ಅಚ್ಚುಕಟ್ಟು-ಗಳನ್ನು ನಿರ್ಮಿಸಿ ನೀರಾವರಿ ವ್ಯವಸ್ಥೆ-ಯನ್ನು ಕಲ್ಪಿಸಿದರು. ಹೀಗೆ ಕಡಿದಾಳ್ ಮಂಜಪ್ಪನವರು ಶಾಸಕರಾಗಿ ಮಂತ್ರಿಯಾಗಿ ದಕ್ಷತೆಯನ್ನು ಮೆರೆದರು.

ರಾಜಕೀಯದಿಂದ ನಿವೃತ್ತಿ : ಗಾಂಧೀಜಿಯವರ ಪ್ರಭಾವದಿಂದ ರಾಷ್ಟ್ರೀಯ

ಆಂದೋಲನಕ್ಕೆ ಧುಮುಕಿದ ಮಂಜಪ್ಪನವರು, 1927ರಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ರಾಜಕೀಯ ಪ್ರವೇಶಿಸಿ, ಸತತವಾಗಿ ತಮ್ಮನ್ನು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡು ಸೆರೆವಾಸವನ್ನು ಅನುಭವಿಸಿ 1952ರಲ್ಲಿ ಕೆಂಗಲ್ ಹನುಮಂತಯ್ಯ-ನವರ ನಾಯಕತ್ವದಲ್ಲಿ ಕಂದಾಯ ಸಚಿವರಾಗಿ, 1956ರಲ್ಲಿ ಹಂಗಾಮಿ ಮುಖ್ಯಮಂತ್ರಿಗಳಾಗಿ, ನಿಜಲಿಂಗಪ್ಪ ಮತ್ತು ಬಿ.ಡಿ.ಜತ್ತಿಯವರ ನಾಯಕತ್ವದಲ್ಲಿ ಕ್ಯಾಬಿನೆಟ್ ಸಚಿವರಾಗಿ ದಕ್ಷತೆಯ ಛಾಪು ಮೂಡಿಸಿದರು. 1966 ಡಿಸೆಂಬರ್ ತಿಂಗಳಲ್ಲಿ ಸಕ್ರಿಯ ರಾಜಕಾರಣದಿಂದ ನಿವೃತ್ತರಾದರು. ಮಂಜಪ್ಪನವರೇ ಹೇಳುವಂತೆ 1969ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಇಬ್ಭಾಗವಾದಾಗ ಭ್ರಷ್ಟಾಚಾರದ ಯುಗ ಪ್ರಾರಂಭವಾಯಿತು, ರಾಜಕಾರಣದಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ತಲೆ ಎತ್ತಿತು.

ರಾಜ್ಯದ ರಾಜಕಾರಣದಲ್ಲಿ ಕ್ಯಾಬಿನೆಟ್ ದರ್ಜೆಯ ಸಚಿವರಾಗಿದ್ದ ಮಂಜಪ್ಪನವರು ಯಾವ ಆಸ್ತಿ ಪಾಸ್ತಿಯನ್ನೂ ಮಾಡಿಕೊಳ್ಳಲಾಗದೇ ಸದಾಶಿವನಗರ -ದಲ್ಲಿ ಒಂದು ಮನೆಯನ್ನು ಕಟ್ಟಿಸಿ ಜೀವಮಾನ ಪರ್ಯಂತ ಆ ಮನೆಕಟ್ಟಲು ಮಾಡಿದ್ದ ಸಾಲವನ್ನು ತೀರಿಸಲು ಹೆಣಗಾಡಿದ್ದು ಬಹುಶಃ ಹಿಂದೊಮ್ಮೆ ಕೇಂದ್ರ ರೈಲ್ವೆ ಸಚಿವರಾಗಿ ಹಂಗಾಮಿ ಪ್ರಧಾನಿಯಾಗಿ ಸೇವೆ ಸಲ್ಲಿಸಿ ಬಡತನದಲ್ಲೇ ಇದ್ದು ವಿಧಿವಶರಾದ ಗುಲ್ಜಾರಿಲಾಲ್ ನಂದರವರ ಬದುಕನ್ನು ಹೋಲುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ರಾಜಕೀಯದಿಂದ ನಿವೃತ್ತಿ ಹೊಂದಿದ ಮೇಲೆ ಜೀವನ ಸಾಗಿಸಲು ಹಾಗೂ ಮನೆ ಸಾಲ ತೀರಿಸಲು ವಕೀಲಿ ವೃತ್ತಿಗೆ ಎಡೆತಾಕಿದರು.

ಮಹಾತ್ಮಾಗಾಂಧೀಜಿಯವರ ಪ್ರಭಾವಕ್ಕೊಳಗಾಗಿದ್ದ ಮಂಜಪ್ಪನವರು **ಕರ್ನಾಟಕ ಪ್ರದೇಶ ಗಾಂಧಿ ಸ್ಮಾರಕ ಸಂಸ್ಥೆಯ** ಅಧ್ಯಕ್ಷರಾಗಿ ದುಡಿದರು. ಬೆಂಗಳೂರಿನ ಬಿ.ಎಂ.ಎಸ್. ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾಗಿ ದುಡಿದರು, ಸ್ಕಾಲರ್ಶಿಪ್ ಮತ್ತು ಅಡ್ಮಿಷನ್ ಕಮಿಟಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. 1974ರಲ್ಲಿ **ನವನಿರ್ಮಾಣ ಕ್ರಾಂತಿ** ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ಅದರ ಮೂಲಕ ಬಡಜನರನ್ನು, ಯುವಕರನ್ನು ಹುರಿದುಂಬಿಸುತ್ತಿದ್ದರು.

ಜಯಪ್ರಕಾಶ್ ನಾರಾಯಣ್‌ರವರು ಕರ್ನಾಟಕಕ್ಕೆ ಧಾವಿಸಿದಾಗ ಅದರ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಜಯಪ್ರಕಾಶ್‌ನಾರಾಯಣ್‌ರವರು ಕರ್ನಾಟಕದಾದ್ಯಂತ ಸಂಚರಿಸಲು ನೆರವಾದರು. 1977ರಲ್ಲಿ ಜಗಜೀವನ್‌ರಾಮ್ ಮತ್ತು ಹೆಚ್.ಎನ್. ಬಹುಗುಣ ಸ್ಥಾಪಿಸಿದ **ಕಾಂಗ್ರೆಸ್ ಫಾರ್ ಡೆಮಾಕ್ರಸಿ** ಪಕ್ಷದ ಕರ್ನಾಟಕ ಶಾಖೆಯ ಅಧ್ಯಕ್ಷರಾಗಿ ದುಡಿದರು. ತದನಂತರ **ಸಮಾಜವಾದಿ ವೇದಿಕೆ** ಎಂಬ ಸಮಾಜವಾದ ಮತ್ತು ಸಮತಾವಾದದ ತಳಹದಿಯ ಮೇಲೆ ಒಂದು ಪಕ್ಷವನ್ನು ಕಟ್ಟಿದರು. ಅದೂ ಕೂಡ ಕೆಲವೇ ತಿಂಗಳುಗಳಲ್ಲಿ ನಿಷ್ಕ್ರಿಯವಾಯಿತು. 1977ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ

ಬಂದ ಜನತಾಪಕ್ಷವು ಕಾಂಗ್ರೆಸ್‌ನ ಜಾಡನ್ನೇ ಹಿಡಿದಾಗ ಬೇಸತ್ತ ಮಂಜಪ್ಪನವರು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.


1980ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಅಧಿಕಾರಕ್ಕೆ ಬಂದು ತುರ್ತು -ಪರಿಸ್ಥಿತಿಯಲ್ಲಿ ಆದ ಅನಾಹುತಗಳಿಗೆ ತಾವೇ ಹೊಣೆ ಎಂದು ಒಪ್ಪಿಕೊಂಡಾಗ ಮಂಜಪ್ಪನವರು ಕಾಂಗ್ರೆಸ್ಸನ್ನು ಬೆಂಬಲಿಸಿದರು. ಕೆಲವೇ ಕಾಲದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಹಳೇ ಚಾಳಿಯನ್ನೇ ಮುಂದುವರಿಸಿದಾಗ 1982ರಲ್ಲಿ ರ‍್ಟ್ರಾಯ ಜಾಗೃತ ಮಂಡಳಿ ಎಂಬ ವೇದಿಕೆಯನ್ನು ಸ್ಥಾಪಿಸುವುದರ ಮೂಲಕ ಭ್ರಷ್ಟಾಚಾರ, ಸ್ವಜನಪಕ್ಷಪಾತವನ್ನು ಹೊರಗೆಳೆದರು.

ಸಾಹಿತಿಯಾಗಿ ಕಡಿದಾಳ್ : ಮಂಜಪ್ಪನವರು ವೃತ್ತಿ ರಾಜಕಾರಣಿಯಲ್ಲ, ರಾಜಕಾರಣಕ್ಕೆ ಆಕಸ್ಮಿಕವಾಗಿ ಬಂದದ್ದು. ರಾಜಕೀಯದಲ್ಲಿದ್ದೂ ತಮ್ಮ ಹೆಸರನ್ನು ಕೆಡಿಸಿಕೊಳ್ಳಲಿಲ್ಲ. ಇವರು ಮೂರು ಕಾದಂಬರಿಗಳನ್ನು ಹಾಗೂ ಒಂದು ಆತ್ಮಕಥನವನ್ನು ಬರೆದಿದ್ದಾರೆ. 1962-63ರಲ್ಲಿ **'ಪಂಜರವಳ್ಳಿಯ ಪಂಜು'** ಎಂಬ ಕಾದಂಬರಿಯನ್ನು ಬರೆದರು. ಈ ಕಾದಂಬರಿಯಲ್ಲಿ ಮೂರು ತಲೆಮಾರಿನ ಕಥೆಯನ್ನು, ಘಟನೆಗಳನ್ನು ಅಂದಿನ ಸಮಾಜವನ್ನು ಎಳೆ-ಎಳೆಯಾಗಿ ಬಿಡಿಸಿರುತ್ತಾರೆ. ಈ ಕಾದಂಬರಿಗೆ ಕನ್ನಡದ ಹೆಸರಾಂತ ಕವಿ ಜ್ಞಾನಪೀಠ ಪ್ರಶಸ್ತಿ ವಿಜೇತ ದ.ರಾ. ಬೇಂದ್ರೆಯವರು ಮುನ್ನುಡಿ ಬರೆದಿದ್ದಾರೆ. 1966ರಲ್ಲಿ **'ನಾಳೆಯ ನೆಳಲು'** ಎಂಬ ಕೃತಿಯನ್ನು ರಚಿಸಿದರು. ಮಂಜಪ್ಪನವರು ತಮ್ಮ ರಾಜಕೀಯ ಜೀವನದಲ್ಲಿ ಕಂಡುಂಡ ಕಹಿ-ಸಿಹಿ ಘಟನೆಗಳನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ. ಈ ಕೃತಿಗೆ ಕನ್ನಡದ ಮತ್ತೊಬ್ಬ ಹೆಸರಾಂತ ನಾಟಕಕಾರ ಶ್ರೀರಂಗರು ಮುನ್ನುಡಿ ಬರೆದಿದ್ದಾರೆ. 1975ರಲ್ಲಿ **'ಕ್ರಾಂತಿ ಕೂಟ'** ಎಂಬ ಕೃತಿಯನ್ನು ಹೊರತಂದರು. ಈ ಕೃತಿಯಲ್ಲಿ ರಾಜಕೀಯ ದೊಂಬರಾಟ, ಅದರಲ್ಲಿರುವ ಹುಳುಕುಗಳು ಹಾಗೂ ಸಮಾಜದಲ್ಲಿರುವ ಕೆಲವಾರು ಲೋಪದೋಷಗಳನ್ನು ಚಿತ್ರಿಸಿದ್ದಾರೆ. ಮಂಜಪ್ಪನವರ ನಾಲ್ಕನೇ ಕೃತಿ **'ನನಸಾಗದ ಕನಸು'**. ಇದೊಂದು ಆತ್ಮಕಥನವಾಗಿದ್ದು ಅವರ ರಾಜಕೀಯ ಬದುಕು, ತಮ್ಮ ಅನಿಸಿಕೆ-ಗಳು, ತಮ್ಮ ಮನಸ್ಸಿನ ತುಮುಲಗಳನ್ನು ಬರಹರೂಪಕ್ಕೆ ತಂದಿದ್ದಾರೆ. ಇದರಲ್ಲಿ ತಮ್ಮ ಸಾಂಸಾರಿಕ ಜೀವನವನ್ನು, ತಮ್ಮ ಅನಿಸಿಕೆಗಳನ್ನು ಯಥಾವತ್ತಾಗಿ ನಿರ್ಭೀಡೆಯಿಂದ ಬರೆದಿದ್ದಾರೆ. ಇವರ ಈ ಕೃತಿಗಳನ್ನೆಲ್ಲಾ ಓದಿದಾಗ ಇವರು ಶ್ರೇಷ್ಠ ರಾಜಕಾರಣಿಗಳು ಮಾತ್ರವಲ್ಲ ಉತ್ತಮ ಸಾಹಿತಿಯೂ ಆಗಿದ್ದರೆಂಬುದು ಸ್ಪಷ್ಟವಾಗುತ್ತದೆ. ಇವರ ಪತ್ನಿ ಶ್ರೀಮತಿ ಮಲ್ಲಿಕಾ ಕಡಿದಾಳ್ (ಶ್ರೀಮತಿ ಲಕ್ಷ್ಮೀ ದೇವಮ್ಮ) ರವರು ಕೂಡಾ ಉತ್ತಮ ಸಾಹಿತಿಯಾಗಿದ್ದಾರೆ.

ಕಾನೂನು ಪದವೀಧರರಾದ ಮಂಜಪ್ಪನವರು ವಕೀಲರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ದಕ್ಷ ಮತ್ತು ಪ್ರಾಮಾಣಿಕ ರಾಜಕಾರಣಿಯಾಗಿ, ಶ್ರೇಷ್ಠ

ಸಾಹಿತಿಯಾಗಿ ನಾಡಿನ ಎಲ್ಲಾ ರಾಜಕಾರಣಿಗಳಿಗೂ ಮಾದರಿಯಾಗಿದ್ದಾರೆ. ಭವಿಷ್ಯ ಭಾರತದ ಚಿಂತನೆಯಲ್ಲಿಯೇ ಕಡಿದಾಳ್ ಮಂಜಪ್ಪನವರು 8.3.1992ರಲ್ಲಿ ಇತಿಹಾಸಕ್ಕೆ ಸೇರಿಹೋದರು.

ಶ್ರೀ ಹೆಚ್.ಡಿ. ದೇವೇಗೌಡ



ಕೆಂಗಲ್ ಹನುಮಂತಯ್ಯ ಇಲ್ಲವೆ ಕಡಿದಾಳ್ ಮಂಜಪ್ಪನವರ ನಂತರ ರಾಜ್ಯದ ಮುಖ್ಯಮಂತ್ರಿ ಸ್ಥಾನಕ್ಕೆ ಒಕ್ಕಲಿಗರೊಬ್ಬರು ಬರಲು ಸುಮಾರು ಮೂವತ್ತೆಂಟು ವರ್ಷಗಳಾದವು. (ಕಡಿದಾಳ್ ಮಂಜಪ್ಪ 1956) ಬಹುಶಃ ಇದು ಕರ್ನಾಟಕ ಏಕೀಕರಣ ಫಲವೋ ಅಥವಾ ನಮ್ಮ ಜನಾಂಗದ ಐಕ್ಯಮತ್ಯದಲ್ಲಿರುವ ಕೊರತೆಯೋ ತಿಳಿಯದು. ದೇವೇಗೌಡರ ದುರದೃಷ್ಟವೋ ಅಥವಾ ಅವರಲ್ಲಿರುವ ಒಳ್ಳೆಯತನದ ದೌರ್ಬಲ್ಯವೋ ರಾಜ್ಯದಲ್ಲಿ ಕಾಂಗ್ರೇಸ್ಸೇತರ ಪಕ್ಷವನ್ನು ಕಟ್ಟಿ ಉಳಿಸಿ ಬೆಳೆಸಿದರು. (ಜನತಾಪಕ್ಷ ನಂತರ ಜನತಾದಳ) ಆದರೆ ಅದೇ ಗೌಡರು ರಾಜ್ಯದ ಮುಖ್ಯಮಂತ್ರಿ -ಯಾಗಲು ಎಡೆಬಿಡದೆ ಅಡ್ಡಹಾಕುತ್ತಾ ಬಂದ ಕೆಲವು ಶಕ್ತಿಗಳು ಏನೆಲ್ಲ ಪ್ರಯತ್ನ ಮಾಡಿದರು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ.

1994ರಲ್ಲಿ ವಿಧಾನಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸಿದ ಕೀರ್ತಿಗೆ ಗೌಡರು ಪಾತ್ರರಾದರು. ದೇವೇಗೌಡರೇ ಮುಂದಿನ ಮುಖ್ಯಮಂತ್ರಿ ಎಂದು ಚುನಾವಣೆಯಲ್ಲಿ ಬಿಂಬಿಸಲಾಗಿತ್ತು. ರಾಜ್ಯದ ಇಡೀ ಒಕ್ಕಲಿಗ ಸಮುದಾಯದಲ್ಲಿ ಒಂದು ರೀತಿಯ ಮಿಂಚಿನ ಸಂಚಾರವಾಗಿ ಜನತಾದಳವನ್ನು ಗೆಲ್ಲಿಸಿದರು. ಆದರೆ ವಿಧಿಯ ಆಟ ಎಂಬಂತೆ ದೇವೇಗೌಡರನ್ನು ಮುಖ್ಯಮಂತ್ರಿ -ಯನ್ನಾಗಿ ಮಾಡಲು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಬಿಡದೇ ಹೋದರೂ. ಅವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಲು ತೀರ್ಮಾನಿಸಿದರು. 11.12.1994 ರಂದು ಕರ್ನಾಟಕದ 14ನೇ ಮುಖ್ಯಮಂತ್ರಿಯಾಗಿ ಒಕ್ಕಲಿಗರಲ್ಲಿ ನಾಲ್ಕನೆಯ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಇದು ರಾಜ್ಯದ ಬೃಹತ್ ಒಕ್ಕಲಿಗ ಸಮುದಾಯಕ್ಕೆ ಸಂದ ಗೌರವವೆನ್ನಬಹುದು.

ಬಾಲ್ಯ, ಜೀವನ ಮತ್ತು ಸಾಧನೆಗಳು : ಹಾಸನ ಜಿಲ್ಲೆ ಹೊಳೇನರಸಿಪುರ ತಾಲ್ಲೂಕಿನ ಹರದನಹಳ್ಳಿಯಲ್ಲಿ ತಾರೀಖು 18.5.1933ರಲ್ಲಿ ದೊಡ್ಡೇಗೌಡ ಮತ್ತು ಶ್ರೀಮತಿ ಲಕ್ಷ್ಮೀದೇವಮ್ಮ ದಂಪತಿಗಳಿಗೆ ಜನಿಸಿದರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹರದನಹಳ್ಳಿ, ಹಳೇಕೋಟೆ ಹಾಗೂ ಹಾಸನದಲ್ಲಿ ವಿದ್ಯಾಭ್ಯಾಸ ಮಾಡಿದರು.

ಎಸ್.ಎಸ್.ಎಲ್.ಸಿ. ಆದ ಬಳಿಕ ಕೆಲವು ಕಾಲ ಶಾಲಾ ಉಪಾಧ್ಯಾಯರಾಗಿಯೂ ಸೇವೆ ಸಲ್ಲಿಸಿದರು. (ಡಿಪ್ಲೊಮೊ ಸೇರುವ ಮುನ್ನ) ನಂತರ 1952ರಲ್ಲಿ ಹಾಸನದಲ್ಲಿ ಪಾಲಿಟೆಕ್ನಿಕ್‌ಗೆ ಸೇರಿ ಮೂರು ವರ್ಷಗಳಲ್ಲಿ ಸಿವಿಲ್ ಡಿಪ್ಲೊಮಾ ಪಡೆದರು. ನಂತರ ಜೀವನೋಪಾಯಕ್ಕಾಗಿ ಶಾಲಾಶಿಕ್ಷಕರಾಗಿ, ಸಿವಿಲ್ ಕಂಟ್ರಾಕ್ಟರ್ ಆಗಿ ದುಡಿದರು. ಸರ್ಕಾರಿ ಗುತ್ತಿಗೆ ಕೆಲಸವೊಂದು ದೊರೆತರೂ ಅದಕ್ಕೆ ಠೇವಣಿ ಇಡಲು ಹಣವಿಲ್ಲದೆ ಕೈಚೆಲ್ಲಿ ಕುಳಿತರು.

ಸಾರ್ವಜನಿಕ ಸೇವೆ : ಗ್ರಾಮ ಜೀವನಕ್ಕೆ ತುಂಬಾ ಒಗ್ಗಿಕೊಂಡಿದ್ದ ಗೌಡರು ಹೊಳೆನರಸೀಪುರದಲ್ಲಿ ಆಂಜನೇಯಸ್ವಾಮಿ ಸಹಕಾರ ಸಂಘವನ್ನು ಸ್ಥಾಪಿಸಿದರು, ತಮ್ಮ ಗೆಳೆಯರ ಒತ್ತಾಯದಿಂದಾಗಿ ಅದರ ಅಧ್ಯಕ್ಷರಾದರು. ಅಲ್ಲಿಂದಾಗಿ ಇವರ ರಾಜಕೀಯ ರಂಗಪ್ರವೇಶವಾಯಿತು ಎಂದರೆ ತಪ್ಪಾಗಲಾರದು. ನಂತರ ರಾಜಕಾರಣ ಗೌಡರ ಜೀವನದ ಅವಿಭಾಜ್ಯ ಅಂಗವಾಯಿತು. ಇವರ ರಾಜಕೀಯ ಗುರು ಶ್ರೀ ಎ.ಜಿ. ರಾಮಚಂದ್ರರಾಯರು. 1957ರಲ್ಲಿ ಶ್ರೀ ಎ.ಜಿ. ರಾಮಚಂದ್ರರಾಯರು ಶಾಸನ ಸಭೆಗೆ ಆಯ್ಕೆಯಾಗುವಲ್ಲಿ ಗೌಡರ ಪಾತ್ರ ಹಿರಿದಾದದು. ಗೌಡರಿಗೆ ರಾಜಕೀಯ ಚದುರಂಗ ದಾಟದ ಹಲವಾರು ಮಗ್ಗಲುಗಳ ಪರಿಚಯವಾಯಿತು. ಹೊಳೆನರಸೀ –ಪುರದಲ್ಲಿ ಜನಮೆಚ್ಚಿದ ಯುವ ನಾಯಕರಾಗಿ ರೂಪುಗೊಂಡರು.

ರಾಜ್ಯರಾಜಕಾರಣಕ್ಕೆ : ತಾವು ಮೆಚ್ಚಿದ ಹಾಗೂ ಪಕ್ಷಕ್ಕಾಗಿ ದುಡಿದ ಕಾಂಗ್ರೆಸ್ 1962ರ ಚುನಾವಣೆಯಲ್ಲಿ ಪಕ್ಷದಿಂದ ಸ್ಪರ್ಧಿಸಲು ಗೌಡರಿಗೆ ಸೀಟು ಕೊಡಲಿಲ್ಲ. ಇದರಿಂದ ಬೇಸತ್ತು ಸ್ವತಂತ್ರ ಅಭ್ಯರ್ಥಿಯಾಗಿ ನಿಂತರು. ರಾಜ್ಯದ 3ನೇ ವಿಧಾನಸಭೆಗೆ ಅಪಾರ ಬಹುಮತದಿಂದ ಆಯ್ಕೆಗೊಂಡರು. ಆಗ ಗೌಡರಿಗೆ ಕೇವಲ 29 ವರ್ಷ. ಅಲ್ಲಿಂದ ಸತತವಾಗಿ 4ನೇ ವಿಧಾನಸಭೆ (1967–71), 5ನೇ ವಿಧಾನಸಭೆ (1972–77), 6ನೇ ವಿಧಾನಸಭೆ (1978–83), 7ನೇ ವಿಧಾನಸಭೆ (1983–84) ಹಾಗೂ 8ನೇ ವಿಧಾನಸಭೆ (1985–87) ಆಯ್ಕೆಯಾದರು. ರಾಜ್ಯ ರಾಜಕೀಯದಲ್ಲಿ ಭಾರೀ ಪ್ರಮಾಣದ ಬದಲಾವಣೆ ಆಯಿತು; ಅದೆಂದರೆ ಶ್ರೀ ನಿಜಲಿಂಗಪ್ಪನವರು ಶ್ರೀಮತಿ ಇಂದಿರಾಗಾಂಧಿಯವರನ್ನು ಧಿಕ್ಕರಿಸಿದ ಫಲವಾಗಿ ಕಾಂಗ್ರೆಸ್ ಇಬ್ಭಾಗವಾಯಿತು. ನಿಜಲಿಂಗಪ್ಪನವರ ನೇತೃತ್ವದಲ್ಲಿ ಸಂಸ್ಥಾ ಕಾಂಗ್ರೆಸ್ ಎಂತಲೂ ಇಂದಿರಾಗಾಂಧಿಯವರ ನೇತ್ರೃತ್ವದಲ್ಲಿ ಕಾಂಗ್ರೆಸ್(ಐ) ಎಂತಲೂ ನಾಮಕರಣವಾಯಿತು. ಇಂತಹ ಸಂದರ್ಭದಲ್ಲಿ ಗೌಡರು ಶ್ರೀ ನಿಜಲಿಂಗಪ್ಪನವರ ಸಂಸ್ಥಾ ಕಾಂಗ್ರೆಸ್‌ಗೆ ಸೇರಿದರು. ಸಾರ್ವತ್ರಿಕ ಚುನಾವಣೆ ನಡೆದಾಗ ಕಾಂಗ್ರೆಸ್ (ಐ) ಜಯಭೇರಿ ಬಾರಿಸಲಾಗಿ 1972ರಿಂದ 1979ರವರೆಗೆ ಶ್ರೀ ದೇವರಾಜು ಅರಸರು ರಾಜ್ಯದ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಶ್ರೀ ನಿಜಲಿಂಗಪ್ಪನವರು ದೇವೇಗೌಡರನ್ನು

ತಮ್ಮ ಪಕ್ಷಕ್ಕೆ ಆಹ್ವಾನಿಸಿ ನೀವು ಈ ಪಕ್ಷವನ್ನು ಮುನ್ನಡೆಸಬೇಕೆಂದು ಪುಸಲಾಯಿಸಿದರು. ಗೌಡರು ಸಂಸ್ಥಾ ಕಾಂಗ್ರೆಸ್ ಸೇರಿದರು. ಶ್ರೀ ದೇವರಾಜ ಅರಸರ ನೇತೃತ್ವದ ಕಾಂಗ್ರೆಸ್ (ಐ) ಸರ್ಕಾರದಲ್ಲಿ ಶ್ರೀ ದೇವೇಗೌಡರು ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದರು. ಜನತೆಗಾಗಿ ಪಕ್ಷಕ್ಕಾಗಿ ಕಾಯಾ, ವಾಚಾ, ಮನಸಾ ದುಡಿಯತೊಡಗಿ-ದರು. ಕಾವೇರಿ ನದಿ ನೀರಿನ ಹಂಚಿಕೆ ವಿಷಯದಲ್ಲಿ ಬಿಕ್ಕಟ್ಟು ತಲೆ ಎತ್ತಿದಾಗ ಶ್ರೀ ಅರಸರು ಹೈಕಮಾಂಡ್‌ನ ಆದೇಶಕ್ಕಾಗಿ ಕಾಯುತ್ತಾ ಕುಳಿತಾಗಲೆಲ್ಲಾ ಗೌಡರು ಅದನ್ನು ಪ್ರತಿಭಟಿಸಿ ಕಾವೇರಿ ನೀರನ್ನು ಬಳಸುವುದು ನಮ್ಮ ಪಾಲಿನ ಹಕ್ಕು ಅದಕ್ಕಾಗಿ ಕೇಂದ್ರವನ್ನು ಕಾಯಬೇಕಾದ ಅಗತ್ಯವಿಲ್ಲವೆಂದು ಗುಡುಗಿದರು. 1970ರ ಸಾಲಿನಲ್ಲಿ ಸಂಡೂರು ಭೂ ವಿಮೋಚನೆ ಹೋರಾಟದಲ್ಲಿ ಎಲೆಗಾರ ತಿಮ್ಮಪ್ಪನ ಮೇಲೆ ಹಲ್ಲೆ ನಡೆದಾಗ ಶ್ರೀ ದೇವರಾಜು ಅರಸರ ವಿರುದ್ಧ ನೇರ ಆಪಾದನೆ ಮಾಡಿ ನ್ಯಾಯಾಂಗ ತನಿಖೆಗೆ ಆಗ್ರಹಿಸಿದರು. ಶ್ರೀ ದೇವರಾಜ ಅರಸರು ಭ್ರಷ್ಟಾಚಾರಕ್ಕಿಳಿದಾಗ ಅದನ್ನು ಖಂಡಿಸಿದರು. ಹಾಗೂ ಅರಸರ ವಿರುದ್ಧ ಗ್ರೋವರ್ ಆಯೋಗ ನೇಮಿಸಲು ಕಾರಣ -ರಾದರು. ರೈತರ, ದೀನ, ದಲಿತರ, ಶೋಷಣೆಯ ವಿರುದ್ಧ ಯಾವ ಮುಲಾಜಿಗೂ ಒಳಗಾಗದೆ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಅರಸರಿಗೆ ಗೌಡರು ಸಿಂಹಸ್ವಪ್ನವಾದರು. ಗೌಡರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಏನೆಲ್ಲಾ ಪ್ರಯತ್ನ ಪಟ್ಟರೂ ಅದು ಸಾಧ್ಯವಾಗಲಿಲ್ಲ. ವಿರೋಧ ಪಕ್ಷದ ನಾಯಕ ಸ್ಥಾನ ಇವರಿಗೆ ತೃಪ್ತಿ ತಂದುಕೊಟ್ಟಿತು.

1975ರಲ್ಲಿ ಇಂದಿರಾಗಾಂಧಿಯವರು ತುರ್ತು ಪರಿಸ್ಥಿತಿಯನ್ನು ಜಾರಿಗೆ ತಂದಾಗ ಅದನ್ನು ತೀವ್ರವಾಗಿ ಪ್ರತಿಭಟಿಸಿದರು. ಗೌಡರನ್ನು ಅಂದಿನ ಸರ್ಕಾರ 9 ತಿಂಗಳ ಕಾಲ ಜೈಲಿಗೆ ಅಟ್ಟಿತು. ಜೈಲುಸೇರಿದ ಮೇಲೆ ಶ್ರೀ ಜಯಪ್ರಕಾಶ ನಾರಾಯಣರ ವಿಚಾರಧಾರೆಗೆ ಮನಸೋತ ಗೌಡರು ಮುಂದೆ ಜನತಾಪಕ್ಷವು ರಾಜ್ಯದಲ್ಲಿ ತಲೆ ಎತ್ತಲು ಕಾರಣಕರ್ತರಾದರು. 1978ರಲ್ಲಿ ಜನತಾಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದರು. ರಾಜ್ಯ ಮತ್ತು ರಾಷ್ಟ್ರದಲ್ಲಿ ಪಕ್ಷವು ಜನಪ್ರಿಯವಾಗಲು ಗೌಡರು ಅಹರ್ನಿಶಿ ದುಡಿದರು. 1983ರಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ಶ್ರೀ ರಾಮಕೃಷ್ಣ ಹೆಗಡೆ ಮತ್ತು ಗೌಡರ ಜೋಡಿ ಜನತಾಪಕ್ಷ ತಲೆ ಎತ್ತಲು ಕಾರಣವಾಯಿತು.

ಕ್ರಾಂತಿರಂಗ ಮತ್ತು ಬಿ.ಜೆ.ಪಿ. ಸಮ್ಮಿಶ್ರ ಪಕ್ಷಗಳು ಸರ್ಕಾರ ನಡೆಸಲು ತೀರ್ಮಾನಿಸಿದವು. 1983ರಲ್ಲಿ ಶ್ರೀ ರಾಮಕೃಷ್ಣಹೆಗಡೆಯರು ರಾಜ್ಯದ ಮುಖ್ಯಮಂತ್ರಿಯಾಗಲು ಗೌಡರು ಅನುವು ಮಾಡಿಕೊಟ್ಟರು. ಆದರೆ ಹೆಗಡೆಯವರಿಗೆ ಆ ಕೃತಜ್ಞತೆ ಇರಲಿಲ್ಲ. ಹೆಗಡೆಯವರ ಸಚಿವ ಸಂಪುಟದಲ್ಲಿ ಲೋಕೋಪಯೋಗಿ ಹಾಗು ನೀರಾವರಿ ಸಚಿವರಾಗಿ ನೇಮಕಗೊಂಡರು. ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆ ಗೌಡರಿಗೆ ಬಲುಪ್ರಿಯವಾದ ಇಲಾಖೆ ಕಾರಣವೇನೆಂದರೆ

ರೈತರಿಗೆ ಅನುಕೂಲ ಮಾಡಿಕೊಡಬೇಕಾದರೆ ಈ ಇಲಾಖೆಯಿಂದ ಮಾತ್ರ ಸಾಧ್ಯವೆಂದು ಅರಿತಿದ್ದರು. ರಾಜ್ಯದ ಹಳ್ಳಿಗಳ ರಸ್ತೆಗಳು ಬಹಳಷ್ಟು ದುಸ್ಥಿತಿಯಲ್ಲಿದ್ದವು. ನೀರಾವರಿ ವ್ಯವಸ್ಥೆಗೆ ಯಾವ ಸರ್ಕಾರವೂ ಹೆಚ್ಚಿನ ಆದ್ಯತೆ ನೀಡಿರಲಿಲ್ಲ. ಆದರೆ ಗೌಡರು ಸಮರ್ಥವಾಗಿ ತಮ್ಮ ಇಲಾಖೆಯನ್ನು ನಿಭಾಯಿಸಿದರು. ನೂರಾರು ಉತ್ತಮ ರಸ್ತೆಗಳು, ಕೆರೆ, ಕುಂಟೆ ಕಾಲುವೆಗಳು ನಿರ್ಮಾಣಗೊಂಡವು.

1989ರ ಸಾರ್ವತ್ರಿಕ ಚುನಾವಣೆಯಲ್ಲಿ ಗೌಡರು ಸೋತರು. 1989ರಿಂದ 91ರವರೆಗೆ ಅಜ್ಞಾತವಾಸ ಅನುಭವಿಸಿದರು. 1991ರ ಚುನಾವಣೆಯಲ್ಲಿ ಹಾಸನ ಜಿಲ್ಲೆಯಿಂದ ಲೋಕಸಭೆಗೆ ಆಯ್ಕೆಯಾದರು. ಲೋಕಸಭೆಯಲ್ಲಿ ರೈತರ ಹಿತಾಸಕ್ತಿ ಕಾಪಾಡಲು ಹೋರಾಟ ನಡೆಸಿದರು.

ಮುಖ್ಯಮಂತ್ರಿಯಾಗಿ

1994ರಲ್ಲಿ ರಾಜ್ಯ ವಿಧಾನ ಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಜನತಾ ದಳವನ್ನು ರಾಮಕೃಷ್ಣ ಹೆಗಡೆ, ದೇವೇಗೌಡರ ನೇತೃತ್ವದಲ್ಲಿ ಮುನ್ನೆಡಿಸಿ ಬಹುಮತ ಬರುವಂತೆ ಮಾಡಿದರು. ಆ ಚುನಾವಣೆಯಲ್ಲಿ ಮುಂದಿನ ಮುಖ್ಯಮಂತ್ರಿ ದೇವೇಗೌಡರು ಎಂದು ಬಿಂಬಿಸಿದ್ದರು. ಆದರೆ ಮುಖ್ಯಮಂತ್ರಿ ಪದವಿ ನೀಡಬೇಕಾದ ಸಂದರ್ಭದಲ್ಲಿ ದೇವೇಗೌಡರ ಹೆಸರನ್ನು ಬದಿಗಿಟ್ಟು ಬೇರೊಬ್ಬರನ್ನು ತರಲು ಪಕ್ಷದ ಪಟ್ಟಭದ್ರರು ಸಾಕಷ್ಟು ಪ್ರಯತ್ನಿಸಿದರು (ಅವರ ಹೆಸರು ಇಲ್ಲಿ ಅಗತ್ಯವಿಲ್ಲ ಎಲ್ಲರಿಗೂ ತಿಳಿದಿದೆ) ಜನರು ದಾಂಧಲೆ ನಡೆಸಿ ದೇವೇಗೌಡರು ಮುಖ್ಯಮಂತ್ರಿಗಳಾಗಬೇಕೆಂದು ಒತ್ತಾಯಿಸಿದ ಫಲವಾಗಿ 11.12.1994 ರಂದು ರಾಜ್ಯದ 14ನೇ ಹಾಗೂ ನಮ್ಮ ಜನಾಂಗದ ನಾಲ್ಕನೆಯ ಮುಖ್ಯಮಂತ್ರಿಯಾಗಿ ಹರದನಹಳ್ಳಿ, ದೊಡ್ಡೇಗೌಡ ದೇವೇಗೌಡರು ಆಯ್ಕೆಯಾದರು.

ಗೌಡರು ಮುಖ್ಯಮಂತ್ರಿಗಳಾದಾಗ ಅವರ ಮುಂದೆ ಹಲವಾರು ಸವಾಲುಗಳು ಎದುರಾದವು. ಅವುಗಳಲ್ಲಿ ಸ್ವಪಕ್ಷೀಯರೇತೆರೆಯ ಮರೆಯಲ್ಲಿ ಬೆನ್ನಿಗೆ ಚೂರಿ ಹಾಕಲು ಹವಣಿಸುತ್ತಿದ್ದರು. ಇವೆಲ್ಲವುಗಳನ್ನು ಗೌಡರು ನಿಭಾಯಿಸಿದರು. ಗೌಡರು ನೀರಾವರಿ, ಕೈಗಾರಿಕೆ, ವಿದ್ಯುತ್, ವ್ಯವಸಾಯ, ಬಡವರಿಗೆ ಆಹಾರ ಮತ್ತು ಸೂರು, ಬೆಂಗಳೂರಿನ ಅಭಿವೃದ್ಧಿ ಇವೇ ಮುಂತಾದ ಸಮಸ್ಯೆಗಳನ್ನು ಬಗೆಹರಿಸಬೇಕಾಗಿ ಬಂದಿತು. ಗೌಡರ ಕಾಲದಲ್ಲಾದ ಕೆಲವು ಬಹುಮುಖ್ಯ ಸಾಧನೆಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ.

1. ತುಂಡು ಗುತ್ತಿಗೆ ನಿಲ್ಲಿಸಿ ಕ್ರಮಬದ್ಧವಾಗಿ ಟೆಂಡರ್ ಕರೆದು ಗುತ್ತಿಗೆ ನೀಡುವ ಮೂಲಕ ಪಾರದರ್ಶಕತೆಯನ್ನು ತಂದಿದ್ದು.

2. ಕೃಷ್ಣ ಮೇಲ್ದಂಡೆ ಯೋಜನೆಗೆ 650 ಕೋಟಿ ರೂಪಾಯಿ ವ್ಯಯ ಮಾಡಿ ನೀರಾವರಿಗೆ ಪ್ರೋತ್ಸಾಹ ನೀಡಿದ್ದು. ಕೃಷ್ಣಾಭಾಗ್ಯ ಜಲ ನಿಗಮದಿಂದ ನೀರಾವರಿ ಬಾಂಡ್ ಸಂಗ್ರಹ ಮಾಡುವ ಮೂಲಕ 188 ಕೋಟಿ ಸಂಗ್ರಹ ಮಾಡಿ ಅದನ್ನು ನೀರಾವರಿಗೆ ತೊಡಗಿಸಿದ್ದು.

3. ಹುಬ್ಬಳ್ಳಿಯಲ್ಲಿ ಕಾಲದಿಂದಲೂ ಈದ್ಗಾ ಮೈದಾನದಲ್ಲಿ ಧ್ವಜಾರೋಹಣಕ್ಕೆ ಅಡ್ಡಿ ಪಡಿಸುತ್ತಿದ್ದರು. 1994ರ ಸಮಯದಲ್ಲೂ ಅವಕಾಶ ನೀಡದಿರಲು ಮುಸ್ಲಿಮರು ತೀರ್ಮಾನಿಸಿದ ವಿಷಯ ಗೌಡರಿಗೆ ತಿಳಿಯುತ್ತಲೆ ಇಬ್ರಾಹಿಂ, ಕಾಲಿಬುಡ್ಡೆ ಹಾಗೂ ಇನ್ನಿತರ ಮುಸ್ಲಿಂ ನಾಯಕರು, ಮೌಲ್ವಿಗಳ ಸಹಾಯದಿಂದ ಸಮಸ್ಯೆಯನ್ನು ಪರಿಹರಿಸಿ ಜನವರಿ 26, 1995ರಂದು ಈದ್ಗ ಮೈದಾನದಲ್ಲಿ ಧ್ವಜಾರೋಹಣ ಮಾಡಿಸಿದ್ದು ಇಂದು ಇತಿಹಾಸವಾಗಿದೆ.

ಪ್ರಧಾನ ಮಂತ್ರಿಯಾಗಿ ದೇವೇಗೌಡರು

ರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷವು ಅತಂತ್ರ ಸ್ಥಿತಿಯಲ್ಲಿದ್ದಾಗ ಕಾಂಗ್ರೆಸ್ಸೇತರ ಪಕ್ಷಗಳು ಒಂದಾದವು. ಬಿ.ಜೆ.ಪಿ. ಪಕ್ಷವನ್ನು ಹೊರತು ಪಡಿಸಿ ಬೇರೆ ಪಕ್ಷಗಳು ಒಂದಾಗಿ ಬಂದರೆ ನಾವು ಹೊರಗಿನಿಂದ ಬೆಂಬಲಿಸುತ್ತೇವೆ ಎಂದು ಹೇಳಿತು ಕಾಂಗ್ರೆಸ್ ಪಕ್ಷ. ಬಂಗಾಳದ ಮುಖ್ಯಮಂತ್ರಿಯಾಗಿದ್ದ ಜ್ಯೋಬಸು, ಹರಿಕಿಶನ್ ಸಿಂಗ್ ಸುರ್ಜಿತ್ ಇವರೇ ಮುಂತಾದವರು ದೇವೇಗೌಡರು ಪ್ರಧಾನಿ ಪಟ್ಟವನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯಿಸಿ ಪ್ರಧಾನ ಮಂತ್ರಿಯನ್ನಾಗಿಸಿದರು. 1.6.1996 ರಂದು ರಾಷ್ಟ್ರದ 15ನೇ ಪ್ರಧಾನ ಮಂತ್ರಿಯಾಗಿ ಗದ್ದುಗೆ ಏರಿದರು. ಆ ಮೂಲಕ ಗೌಡ ಇಲ್ಲವೆ ಒಕ್ಕಲಿಗರು ಕರ್ನಾಟಕದ ಪ್ರಬಲ ಸಮುದಾಯ ಎಂದು ದೇಶಕ್ಕೆ ತಿಳಿಯಿತು. ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ "ಗೌಡ" ಎಂಬ ಸಮುದಾಯಕ್ಕೆ ಹೆಸರು ತಂದು ಕೊಟ್ಟ ಕೀರ್ತಿ ಶ್ರೀ ದೇವೇಗೌಡರಿಗೆ ಸಲ್ಲುತ್ತದೆ.

ದೇವೇಗೌಡರ ಸಂಪುಟ ದರ್ಜೆ ಸಚಿವರು

1. ಹೆಚ್.ಡಿ. ದೇವೇಗೌಡ – ಪ್ರಧಾನಮಂತ್ರಿ
2. ಐ.ಕೆ. ಗುಜ್ರಾಲ್ – ವಿದೇಶಾಂಗ
3. ಇಂದ್ರಜೀತ್ ಗುಪ್ತ – ಗೃಹ
4. ಮುಲಾಯಂ ಸಿಂಗ್ – ರಕ್ಷಣ
5. ರಾಮ್‌ವಿಲಾಸ್ ಪಾಸ್ವಾನ್ – ರೈಲ್ವೆ
6. ಆರ್.ಎಲ್. ಜಾಲಪ್ಪ – ಜವಳಿ
7. ಮುರುಸೋಳ ಮಾರನ್ – ಕೈಗಾರಿಕೆ

8. ಚತುರಾನ ಮಿಶ್ರ – ಕೃಷಿ

9. ಜನೇಶ್ವರ ಮಿಶ್ರ – ಜಲಸಂಪನ್ಮೂಲ

10. ಶ್ರೀಕಾಂತ ಕುಮಾರ್ – ಸಂಸದೀಯ

11. ಪಿ. ಚಿದಂಬರಂ – ಹಣಕಾಸು

ಇವರೇ ಅಲ್ಲದೆ 12 ಜನ ರಾಜ್ಯ ಸಚಿವರಾಗಿ ಆಯ್ಕೆಯಾದರು.

1996 ಜೂನ್ 14 ರಂದು ದೇವೇಗೌಡರ ಸರ್ಕಾರದ ಮೊದಲ ಬಜೆಟ್ ಮಂಡನೆಯಾಯ್ತು. ರೈತರು ಬಳಸುವ ರಸಗೊಬ್ಬರ, ಡ್ರಿಪ್ ಇರಿಗೇಶನ್, ಸ್ಪ್ರಿಂಕ್ಲರ್, ಪವರ್ ಟಿಲ್ಲರ್, ಕೀಟನಾಶಕ, ಟ್ರ್ಯಾಕ್ಟರ್, ಪಂಪ್ಸೆಟ್ ಇವೇ ಮುಂತಾದವುಗಳಿಗೆ ಭಾರಿ ರಿಯಾಯಿತಿ ನೀಡಿದರು. ಇದು "ರೈತರ ಬಜೆಟ್"ಎಂದು ದಿ ಹಿಂದು, ಟೈಮ್ಸ್ ಆಫ್ ಇಂಡಿಯ ಇವೇ ಮುಂತಾದ ದೇಶದ ಪ್ರಮುಖ ಪತ್ರಿಕೆಗಳು ಬಣ್ಣಿಸಿದವು.

ಲಕಡಾವಾಲ ವರದಿಗೆ ಮುಕ್ತಿ

ದೇಶದ 36 ಕೋಟಿ ಬಿ.ಪಿ.ಎಲ್. ಕುಟುಂಬದವರಿಗೆ ಪಡಿತರ ನೀಡುವ ಸಂಬಂಧ ಲಕಡಾವಾಲ ಸಮಿತಿ ನೀಡಿದ್ದ ವರದಿಯನ್ನು ಹಿಂದಿನ ಸರ್ಕಾರ ಮುಚ್ಚಿಟ್ಟಿದಿತು. ಗೌಡರು ಅದನ್ನು ಹೊರತೆಗೆದು ಬಡವರಿಗೆ ಪ್ರತಿ ಕುಟುಂಬಕ್ಕೆ 10 ಕೆ.ಜಿ., ಅಕ್ಕಿ 5 ಕೆಜಿ., ಗೋಧಿ 1 ಕೆ.ಜಿ., ಸಕ್ಕರೆ ನೀಡುವಂತೆ ಮಾಡಿದರು.

ಪಂಜಾಬ್ ಹರಿಯಾನ ರೈತರ ಸಮಸ್ಯೆ

1997–98ರಲ್ಲಿ ಪಂಜಾಬ್ ಹರಿಯಾನ ರೈತರು ಅತಿ ಹೆಚ್ಚು ಭತ್ತ ಬೆಳೆದು ತಾವು ಬೆಳೆದ ಬೆಳಿಗ್ಗೆ ಬೆಲೆ ಸಿಗದಿದ್ದಾಗ ದೇವೇಗೌಡರ ಸರ್ಕಾರ ಅದನ್ನು ಕೊಂಡುಕೊಂಡು ಅವರ ಸಮಸ್ಯೆಯನ್ನು ಪರಿಹರಿಸಿದರು. ಸಂತೋಷ ಭರಿತರಾದ ಅಲ್ಲಿನ ರೈತರು ಭತ್ತದ ಒಂದು ತಳಿಗೆ "ದೇವೇಗೌಡಜಿ ಭತ್ತ" ಎಂದು ಹೆಸರಿಟ್ಟಿದ್ದಾರೆ.

ಕಪ್ಪು ಹಣ ಹೊರಬಂತು

ಶ್ರಿಯುತ ಚಿದಂಬರಂ (ಹಣಕಾಸು ಸಚಿವ) ರವರ ವಿರೋಧದ ನಡುವೆಯು "ವಾಲೆಂಟರಿಡಿಸ್ ಕ್ಲೋಸರ್ ಸ್ಕೀಂ" ಜಾರಿಗೆತಂದರು. 36 ಸಾವಿರ ಕೋಟಿ ಕಪ್ಪುಹಣ ಹೊರಬಂತು. ದೇಶದ ಬೊಕ್ಕಸಕ್ಕೆ 10,800 ಕೋಟಿ ರೂಪಾಯಿ ಆದಾಯ ಸಿಕ್ಕಿತು.

ಒಪೇಕ್‌ನ ಸಾಲ ಎಂಬ ಶೂಲ

ಹಿಂದಿನ ಸರ್ಕಾರವು ಭಾರತಕ್ಕೆ ಪೆಟ್ರೋಲಿಯಂ ಉತ್ಪನ್ನಗಳನ್ನು ಪೂರೈಸುವ ಒಪೆಕ್ ಒಕ್ಕೂಟಕ್ಕೆ 17 ಸಾವಿರ ಕೋಟಿ ನೀಡಬೇಕಿತ್ತು. ಈ ಕೂಡಲೆ ಪಾವತಿಸದಿದ್ದರೆ ಪೆಟ್ರೋಲಿಯಂ ಪೂರೈಕೆ ನಿಲ್ಲಿಸುವುದಾಗಿ ಒಪೆಕ್ ಎಚ್ಚರಿಸಿತು. ಅಷ್ಟೂ ಹಣವನ್ನು ಪಾವತಿಸಿ ದೇಶವನ್ನು ಸಾಲದಿಂದ ಪಾರು ಮಾಡಿದರು.

ಜಮ್ಮು ಕಾಶ್ಮೀರದಲ್ಲಿ ಚುನಾವಣೆ ನಡೆಸಿದ್ದು

ಬಂಡುಕೋರರ ಹಾವಳಿಯಿಂದ ಕಾಶ್ಮೀರವನ್ನು ಮುಕ್ತಗೊಳಿಸಲು ದೇವೇಗೌಡರು ಕಾಶ್ಮೀರಕ್ಕೆ ಭೇಟಿ ನೀಡಿದರು. ಓಪನ್ ಜೀಪಿನಲ್ಲಿ ರೋಡ್ ಶೋ ಮಾಡಿ ಸೈ ಎನಿಸಿಕೊಂಡರು. ನಂತರ ಶಾಂತಿಯುತ ಮತದಾನ ನಡೆಯಿತು. ಲಂಡನ್‌ನಲ್ಲಿದ್ದ ಫಾರುಕ್ ಅಬ್ದುಲ್ ವಾಪಸ್ಸು ಬಂದು ಚುನಾವಣೆಯಲ್ಲಿ ಗೆದ್ದು ಅಲ್ಲಿನ ಮುಖ್ಯಮಂತ್ರಿಯಾದರು.

ಕರ್ನಾಟಕ ಮಿಲ್ಕ್ ಫಡರೇಷನ್

ಡಾ. ಕುರಿಯನ್‌ರನ್ನು ಭಾರತದ ಕ್ಷೀರಕ್ರಾಂತಿಯ ಹರಿಕಾರನೆಂದು ಕರೆಯುತ್ತಾರೆ. ಅವರ ಸಹಾಯದಿಂದ ಕರ್ನಾಟಕದಲ್ಲಿ "ಮಿಲ್ಕ್ ಫೆಡರೇಷನ್" ಸ್ಥಾಪನೆಯಾಗಲು ಗೌಡರು ಕಾರಣಕರ್ತರು ಎಂದೇಳ ಬಹುದು.

ಸರ್ದಾರ್ ಪಟೇಲರಿಗೆ ಗೌರವ

ಒಕ್ಕಲಿಗ ಸಮುದಾಯಕ್ಕೆ ಸೇರಿದ (ಪಟೇಲರು, ಕುರ್ಮಿಗಳು, ಪಾಟೀದಾರರು) ಹಾಗೂ ಭಾರತದ ಉಕ್ಕಿನ ಮನುಷ್ಯ ಎಂದೇ ಖ್ಯಾತನಾಮರಾಗಿದ್ದ ಸರ್ದಾರ್ ವಲಭಬಾಯಿ ಪಟೇಲರ ಹೆಸರನ್ನು ಗುಜರಾತ್‌ನ ಅಹಮದಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅವರ ಹೆಸರನ್ನು ನಾಮಕರಣ ಮಾಡಿದರು. ಗೌಡರು ಸರ್ದಾರ್ ಪಟೇಲರ ಊರಿಗೆ ಭೇಟಿ ನೀಡಿ ಪಟೇಲರ ಹೆಸರಿನಲ್ಲಿ ಮೆಮೋರಿಯಲ್ ಸ್ಥಾಪಿಸಲು ಸ್ಥಳದಲ್ಲೇ ಎರಡು ಕೋಟಿ ರೂಪಾಯಿ ಬಿಡುಗಡೆ ಮಾಡಿದರು. (ಇಂದು ಅದು 20 ಕೋಟಿಗೆ ಸಮ).

ನೀರಾವರಿ ಯೋಜನೆಗಳಿಗೆ ಧನ ಸಹಾಯ ಮಾಡಿದ್ದು

ದೇವೇಗೌಡರು ನೀರಾವರಿಯ ಬಗ್ಗೆ ಅಗಾಧವಾದ ಅನುಭವವಿದೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಾಕಷ್ಟು ಹಣ ತೊಡಗಿಸಿದರು ಹಾಗೂ ಬಂದಿದ್ದ ತಾಂತ್ರಿಕ ಅಡಚಣೆಗಳನ್ನು ನಿವಾರಿಸಿದರು. ಅದೇ ರೀತಿ ಬಾಕ್ರಾನಂಗಲ್, ಹಿರಾಕುಡ್, ತೆಹರಿ, ಸರ್‌ದಾರ್ ಸರೋವರ್, ಇಂದಿರಾ ಡ್ಯಾಂ ಹೀಗೆ ದೇಶದ ಪ್ರಮುಖ ಡ್ಯಾಂಗಳತ್ತ ಗಮನ ಹರಿಸಿ ನೀರಾವರಿ ಯೋಜನೆಗಳಿಗೆ ಮಾನ್ಯತೆ ನೀಡಿದರು.

ದೆಹಲಿ ಮೆಟ್ರೊಗೆ ಗುದ್ದಲಿ ಪೂಜೆ

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಮೆಟ್ರೋ ತರಬೇಕೆಂದು ಹಲವಾರು ವರ್ಷಗಳ ಹಿಂದೆಯೇ ತೀರ್ಮಾನವಾಗಿತ್ತು, ಆದರೆ ಹಲವಾರು ತಕರಾರುಗಳಿಂದ ಸಾಧ್ಯವಾಗಿರಲಿಲ್ಲ ದೇವೇಗೌಡರು ಕ್ಯಾಬಿನೆಟ್‌ನಲ್ಲಿ ಮಂಡಿಸಿ ಹಣ ಬಿಡುಗಡೆ ಮಾಡಿಸಿದರು. ದೆಹಲಿ ಮೆಟ್ರೊ ಕಾರ್ಯಗತವಾಗಿ ಉದ್ಘಾಟನೆಯ ಸಮಯಕ್ಕೆ ದೇವೇಗೌಡರು ಅಧಿಕಾರದಿಂದ ಇಳಿದಿದ್ದರು. ದೆಹಲಿಯ ಮುಖ್ಯಮಂತ್ರಿ ಸಾಹಿಬ್

ಸಿಂಗ್ ವರ್ಮಾ ಮತ್ತು ಕೇಂದ್ರ ಸಚಿವರಾಗಿದ್ದ ಮದನ್‌ಲಾಲ್ ಖುರಾನ ಉದ್ಘಾಟಿಸಿದರು.

ಸಮಗ್ರ ನೀರಾವರಿಗಾಗಿ 635 ಕೋಟಿ ರೂಪಾಯಿ ತೊಡಗಿಸಿದರು. ಇದರಿಂದಾಗಿ 26 ಸಾವಿರ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಒದಗಿದಂತಾಯ್ತು. ಅದೇ ರೀತಿ ಕೃಷ್ಣ ಮೇಲ್ದಂಡೆಗೆ 650 ಕೋಟಿ ರೂಪಾಯಿ ತೊಡಗಿಸಿದರು ಹಾಗೂ ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ನೀರಾವರಿ ಬಾಂಡ್‌ಗಳ ಮೂಲಕ 188 ಕೋಟಿ ಸಂಗ್ರಹಿಸಲಾಯ್ತು.

ಇಷ್ಟೇ ಅಲ್ಲದೆ – 25 ಸಾವಿರ ಉಪಾಧ್ಯಾಯರ ನೇಮಕ, ಗ್ರಾಮೀಣ ಮಕ್ಕಳಿಗೆ ಕೃಪಾಂಕ, 8 ಸಾವಿರ ಪೊಲೀಸ್ ಕಾನ್‌ಸ್ಟೇಬಲ್‌ಗಳ ನೇಮಕ 50 ಸಾವಿರ ಉದ್ಯೋಗ ಸೃಷ್ಟಿ, ಅಂಗವಿಕಲರ ತಾತ್ಕಾಲಿಕ ಹುದ್ದೆ ಖಾಯಂ, ನಗರ ಮತ್ತು ಗ್ರಾಮೀಣ ಬಡವರಿಗೆ ಆಶ್ರಯ ಮನೆಗಳ ನಿರ್ಮಾಣ, ಜಿಲ್ಲೆಗೆ ಒಂದು ಆಸ್ಪತ್ರೆ ಯೋಜನೆ, ರೂಪಿಸಿದರು ಹಾಗೂ ಮೂಲ ಸೌಕರ್ಯಕ್ಕೆ ಒತ್ತುಕೊಟ್ಟರು. ನಗರದ ಸಂಚಾರ ದಟ್ಟಣೆ ತಪ್ಪಿಸಲು ಹೊರ ವರ್ತುಲ ರಸ್ತೆಗಳು, ಕೆ.ಆರ್.ಪುರಂನ ತಂತಿ ಕಮಾನು ಸೇತುವೆ (ಹ್ಯಾಂಗಿಂಗ್ ಬ್ರಿಡ್ಜ್).

ಗೌಡರು ಪ್ರಧಾನಿಯಾಗಿದ್ದಾಗ ಕರ್ನಾಟಕಕ್ಕೆ ನೀಡಿದ ಕೊಡುಗೆಗಳು

ಗೌಡರು ಕರ್ನಾಟಕದಿಂದ ಪ್ರಧಾನಿ ಗದುಗೆಗೆ ಹೋಗಿದ್ದ ಕಾರಣ ತನ್ನ ತಯ್ನಾಡಿನ ಅಭಿವೃದ್ಧಿಗೆ 1600 ಕೋಟಿ ರೂಪಾಯಿಯಷ್ಟು ಹಣವನ್ನು ತೊಡಗಿಸಿದರು. ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿದರು. ಕೃಷ್ಣಾ ಮೇಲ್ದಂಡೆ ಯೋಜನೆ, ಕೃಷ್ಣಾ, ಕಾವೇರಿ ನದಿ. ನೀರಿನ ಬಳಕೆಗೆ ಹೆಚ್ಚಿನ ಆದ್ಯತೆ ಮತ್ತು ಹಣ ನೀಡಿದರು. ಹಳ್ಳಿಗಳಿಗೆ ಕುಡಿಯುವ ನೀರು ಮತ್ತು ಮೂಲ ಸೌಕರ್ಯಕ್ಕೆ ಹಣ ನೀಡಿದರು (835 ಕೋಟಿ ರೂಪಾಯಿ) ಉತ್ತರ ಕರ್ನಾಟಕ ಭಾಗದಲ್ಲಿ ರೈತರು ಕಬ್ಬು ಬೆಳೆದು ಸಕ್ಕರೆ ಕಾರ್ಖಾನೆಗಳು ಒಪ್ಪಿಗೆ ಪತ್ರ ನೀಡದೆ ಇದ್ದುದರಿಂದ ಕಬ್ಬಿಗೆ ಬೆಂಕಿ ಹಾಕಿದರು. ವಿಷಯ ತಿಳಿಯುತ್ತಲೆ ಗೌಡರು 17 ಸಕ್ಕರೆ ಕಾರ್ಖಾನೆ ತೆರೆಯಲು ಅನುಮತಿ ನೀಡಿದರು. ಕರ್ನಾಟಕ ರೈಲ್ವೆಗೆ ಹೆಚ್ಚಿನ ಆಧ್ಯತೆ ನೀಡಿದರು. ಹುಬ್ಬಳ್ಳಿಯಲ್ಲಿ ಪ್ರತ್ಯೇಕ ರೈಲ್ವೆ ವಲಯ ಸ್ಥಾಪಿಸಿದರು. ಬೆಂಗಳೂರು – ಶ್ರವಣಬೆಳಗೊಳ – ಹಾಸನ ಮಾರ್ಗ ಸೇರಿದಂತೆ ಒಂದು ಸಾವಿರ ಕಿ.ಮಿ. ರೈಲು ಮಾರ್ಗಕ್ಕೆ ಅನುಮತಿ ನೀಡಿದರು. ಹೆಚ್.ಎ.ಎಲ್. ಕಾರ್ಖಾನೆಗೆ ಹೆಚ್ಚಿನ ಹಣ ನೀಡಿದರು. ತೇಜಸ್ವಿ ಹೆಲಿಕ್ಯಾಪ್ಟರ್ ನಿರ್ಮಾಣ, ಯೋಜನೆ ಕಾರ್ಯಗತವಾಯ್ತು. ಬೆಂಗಳೂರಿನ ಮೂಲ ಸೌಕರ್ಯಕ್ಕೆ ಹೆಚ್ಚಿನ ಹಣ ಬಂತು. ರಕ್ಷಣಾ ಇಲಾಖೆಯು ವಶಪಡಿಸಿಕೊಂಡು ತಕರಾರು ಮಾಡಿಕೊಂಡು 80 ಎಕರೆ ಭೂಮಿಯನ್ನು ತನ್ನ

ವಶದಲ್ಲಿರಿಸಿಕೊಂಡಿದಿತು. ಅದನ್ನು ವಾಪಸ್ಸು ಪಡೆದು ಬಿ.ಬಿ.ಎಂ.ಪಿ.ಗೆ ಸೇರಿಸಿದರು. ಒಂದು ರಸ್ತೆಗೆ "ದೇವೇಗೌಡ" ರಸ್ತೆ ಎನ್ನುತ್ತಾರೆ.

ಪ್ರಧಾನಿ ಪಟ್ಟಕ್ಕೆ ವಿಧಾಯ ಹೇಳಿದ ಗೌಡರು


ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಮತ್ತು ಅಂದಿನ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸೀತಾರಾಂ ಕೇಸರಿಬಾತ್ (ಸೀತಾರಾಂ ಕೇಸರಿ) ಮುಸುಕಿನ ಗುದ್ದಾಟದಲ್ಲಿ ಗೌಡರನ್ನು ಬಲಿಪಶು ಮಾಡಿದರು. ಐ.ಕೆ. ಗುಜ್ರಾಲ್ ಪರಿಸ್ಥಿತಿಯ ದುರ್ಲಾಭ ಪಡೆಯ ತೊಡಗಿದರು. ಏಪ್ರಿಲ್ 11, 1997 ರಂದು ವಿಶ್ವಾಸಮತ ಪರೀಕ್ಷೆ ನಡೆಯಿತು. ಸಂಯುಕ್ತ ಪಕ್ಷದ ಪರ 190 ಹಾಗೂ 338 ಮಂದಿ ವಿರೋಧವಾಗಿ ಮತ ಚಲಾಯಿಸಿದರು. "ಔಟ್‌ಲುಕ್" ಪತ್ರಿಕೆಯ ತರುಣ್ ತೇಜ್‌ಪಾಲ್ ತಮ್ಮ ಪತ್ರಿಕೆಯಲ್ಲಿ 1997ರ ನಂ.1 ಖಳನಾಯಕ ಸೀತಾರಾಂ ಕೇಸರಿ ಎಂದು ಬಣ್ಣಿಸಿದರು. ಪತ್ರಕರ್ತರು ಕೇಸರಿಯವರನ್ನು ಪ್ರಶ್ನಿಸಿದರು. ಅದಕ್ಕೆ ಕೇಸರಿಯು "ದೇವೇಗೌಡಜಿ ವೋ ನಿಕಮ್ಮ" ಎಂದು ಹೇಳಿದರು. ಹಿಂದಿಯಲ್ಲಿ ನಿಕಮ್ಮ ಎಂದರೆ ನಿರುಪಯುಕ್ತ, ಅನುಪಯುಕ್ತ, ನಿಷ್ಪ್ರಯೋಜಕ ಎಂದರ್ಥ.

ದೇವೇಗೌಡರು ಪಾರ್ಲಿಮೆಂಟ್‌ನಲ್ಲಿ ದೇಶವನ್ನು ಉದ್ದೇಶಿಸಿ ತಮ್ಮ ವಿದಾಯ ಭಾಷಣ ಮಾಡುವಾಗ ಸೀತಾರಾಮ್ ಕೇಸರಿ ಹೇಳಿದ 'ನಿಕಮ್ಮ' ಎಂಬ ಪದವನ್ನೇ ಪದೇಪದೇ ಬಳಸಿ ಹೇಗೆ ಕಾಂಗ್ರೆಸ್ ಪಕ್ಷ ನಿಷ್ಪ್ರಯೋಜಕ ಪಕ್ಷವಾಗಿದೆ (ನಿಕಮ್ಮ) ಹೇಗೆ ಕಾಂಗ್ರೆಸ್ಸ್ ನಾಯಕರು ನಿರುಪಯುಕ್ತರಾಗಿದ್ದಾರೆ (ನಿಕಮ್ಮ) ಹೇಗೆ ಒಬ್ಬ ನಿರುಪಯುಕ್ತ (ನಿಕಮ್ಮ) ಪಕ್ಷದ ಅಧ್ಯಕ್ಷನಿಂದ (ಸೀತಾರಾಮ್ ಕೇಸರಿ) ನೂರಾರು ವರ್ಷಗಳ ಇತಿಹಾಸವಿರುವ ಕಾಂಗ್ರೆಸ್ಸ್ ಪಕ್ಷವನ್ನು ಮುನ್ನಡೆಸಲು ಸಾಧ್ಯವಾಗುತ್ತಿಲ್ಲ ಎಂದು ಎಳೆಎಳೆಯಾಗಿ ಬಿಡಿಸಿ ಹೇಳಿದರು. ಪಿ.ವಿ. ನರಸಿಂಹರಾವ್, ಅಟಲ್ ಬಿಹಾರಿ ವಾಜಪೇಯಿ, ಲಾಲ್ ಕೃಷ್ಣ ಅಡ್ವಾನಿ ಸೇರಿದಂತೆ ದೇಶದ ಮಹಾ ನಾಯಕರಾದಿಯಾಗಿ ಎಲ್ಲರೂ ಪಕ್ಷ ಭೇದ ಮರೆತು ಮೇಜುಕುಟ್ಟಿ ಸಂಭ್ರಮಿಸಿದರು. ತಮ್ಮ ಹನ್ನೊಂದು ತಿಂಗಳ ಪ್ರಧಾನಿ ಪಟ್ಟವನ್ನು ತ್ಯಜಿಸಿ ಹೊರ ಬಂದರು.

ರಾಷ್ಟ್ರ ರಾಜಕಾರಣದಲ್ಲಿ ಭಾರೀ ಬದಲಾವಣೆ : ಕೇಂದ್ರದಲ್ಲಿ ಒಟ್ಟು 13 ಪಕ್ಷಗಳು ಸೇರಿ ಗೌಡರನ್ನು ಪ್ರಧಾನಮಂತ್ರಿಯಾಗಿ ಆಯ್ಕೆ ಮಾಡಿದ್ದರು. ಗೌಡರು ಎಲ್ಲಾ ಪಕ್ಷಗಳನ್ನು ಅದರಲ್ಲೂ ವಿಶೇಷವಾಗಿ ಎರಡನೆಯ ದೊಡ್ಡ ಪಕ್ಷವಾದ ಕಾಂಗ್ರೆಸ್ ನಾಯಕರನ್ನೂ ಸಂಭಾಳಿಸುತ್ತಾ ಬಂದರು. ಗೌಡರಿಂದಾಗಿ ಮಿತ್ರ ಪಕ್ಷಗಳು ಚೇತರಿಸಿಕೊಳ್ಳುತ್ತಿರುವ ವಿಚಾರ ಕಾಂಗ್ರೆಸ್ ನಾಯಕರುಗಳಾಗಿದ್ದ ಶ್ರೀ ಪಿ.ವಿ. ನರಸಿಂಹರಾವ್ ಹಾಗೂ ಶ್ರೀ ಸೀತಾರಾಮ ಕೇಸರಿಯವರಿಗೆ ಸಹಿಸಲಾಗಲಿಲ್ಲ. 1997 ಏಪ್ರಿಲ್ ತಿಂಗಳಿನಲ್ಲಿ ಕಾಂಗ್ರೆಸ್ ಪಕ್ಷ ಏಕಾಏಕಿ ಸಂಯುಕ್ತರಂಗ ಸರ್ಕಾರಕ್ಕೆ ನೀಡುತ್ತಿದ್ದ

ಸಹಕಾರ ಅಥವಾ ಬೆಂಬಲವನ್ನು ವಾಪಸ್ಸು ತೆಗೆದುಕೊಂಡಿತು. ಈ ನಾಟಕೀಯ ಬೆಳವಣಿಗೆಯಿಂದಾಗಿ ಸಂಯುಕ್ತರಂಗ ಸರ್ಕಾರ ಬಹುಮತ ಕಳೆದುಕೊಂಡಿತು. ಗೌಡರು 20.4.1997ರಂದು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದರು.

ಶ್ರೀ ಎಸ್.ಎಂ. ಕೃಷ್ಣ



1994ರಿಂದ 1999 ಈ ಐದು ವರ್ಷಗಳಲ್ಲಿ ಶ್ರೀರಾಮಕೃಷ್ಣ ಹೆಗ್ಗಡೆಯವರ ಗುಂಪು ಮತ್ತು ಶ್ರೀ ದೇವೇಗೌಡರವರ ಗುಂಪುಗಳ ಮಧ್ಯ ವಿರಸ ತಾರಕಕ್ಕೇರಿತು. ಜನತಾದಳ ಜಗಳದಳವಾಯಿತು. ನಾನು ಹೆಚ್ಚು ತಾನುಹೆಚ್ಚು ಅನ್ನುವ ಹುಂಬತನದಿಂದಾಗಿ ಶ್ರೀ ಜೆ.ಹೆಚ್. ಪಟೇಲರ ಸರ್ಕಾರ ತೀರಾ ಸಪ್ಪೆಯಾಯಿತು. ಭಿನ್ನಮತ ಭುಗಿಲೆದ್ದು ಪಟೇಲರ ರಾಜೀನಾಮೆಗೆ ಶಾಸಕರ ಸಹಿ ಸಂಗ್ರಹ ಚಳವಳಿ ಪ್ರಾರಂಭವಾಯಿತು. ವಿಧಾನಸಭೆ ವಿಸರ್ಜಿಸುತ್ತೇನೆಂದು ಶ್ರೀ ಪಟೇಲರು ಬೆದರಿಕೆ ಒಡ್ಡುತ್ತಾ ಬಂದರು. ಈ ಹಗ್ಗದ ಜಗ್ಗಾಟದಿಂದ ಬೇಸತ್ತ ಜನತೆ 'ಕೆಮ್ಮೋಳಾದ್ರು ನಮ್ಮೋಳೆ ವಾಸಿ' ಎನ್ನುವಂತೆ ಕಾಂಗ್ರೆಸ್‌ನತ್ತ ಮುಖ ಮಾಡಿದರು. ಕಾಂಗ್ರೆಸ್ ಅಂದು ನೆಲಕಚ್ಚಿತ್ತು. ನಾಯಕರಲ್ಲಿ ಭಿನ್ನಾಭಿಪ್ರಾಯವಿತ್ತು. ಪಕ್ಷವನ್ನು ಮೇಲೆತ್ತುವ ಗೋಜಿಗೆ ಯಾರೂ ಹೋಗಲಿಲ್ಲ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ಶ್ರೀ ಎಸ್.ಎಂ. ಕೃಷ್ಣಾರವರನ್ನು ಕೆ.ಪಿ.ಸಿ.ಸಿ.ಐ.ನ ಅಧ್ಯಕ್ಷರನ್ನಾಗಿ ಮಾಡಿ ಪಕ್ಷವನ್ನು ಪುನಶ್ಚೇತನ ಮಾಡುವಂತೆ ತಿಳಿಸಿತು. ಇಂತಹ ಸಮಯದಲ್ಲಿ ಕೃಷ್ಣರವರು ಪಾಂಚಜನ್ಯ ರಥವೆಂಬ ಹೆಸರಿನಲ್ಲಿ ಎಲ್ಲಾ ಹಿರಿಯ ಹಾಗೂ ಕಿರಿಯ ಕಾಂಗ್ರೆಸ್ಸಿಗರನ್ನು ಒಗ್ಗೂಡಿಸಿ ಉತ್ತರಾಭಿಮುಖವಾಗಿ ಎಂದರೆ ಉತ್ತರ ಕರ್ನಾಟಕದ ಕಡೆಯಿಂದ ಕಾಂಗ್ರೆಸ್ ಪಕ್ಷದ ಪ್ರಚಾರ ಕೈಗೊಂಡರು. ದಕ್ಷ ಹಾಗೂ ಸ್ವಚ್ಛ ವ್ಯಕ್ತಿ ಎಂದೇ ಹೆಸರುವಾಸಿಯಾಗಿದ್ದ ಕಳಂಕರಹಿತ ಮತ್ತು ಸಚ್ಚಾರಿತ್ರ್ಯವುಳ್ಳ ಕೃಷ್ಣರನ್ನು ಬಹು ಪ್ರೀತ್ಯಾದಾರಗಳಿಂದ ಬರಮಾಡಿಕೊಂಡರು. ಜನತಾದಳದ ನಿಷ್ಪ್ರಯೋಜಕ ಆಡಳಿತವನ್ನು ಎಳೆ ಎಳೆಯಾಗಿ ಜನರಿಗೆ ಬಿಡಿಸಿ ಹೇಳಿದರು. ಹಳೇ ಮೈಸೂರು ಭಾಗದಲ್ಲಂತೂ ಕೃಷ್ಣರವರೇ ಮುಂದಿನ ಮುಖ್ಯಮಂತ್ರಿ ಎಂದು ಬಿಂಬಿಸಲಾಯಿತು. ಒಕ್ಕಲಿಗ ಜನಾಂಗ ಮಾತ್ರವಲ್ಲ ಕೃಷ್ಣರ ಸಚ್ಚಾರಿತ್ರ್ಯವನ್ನು ತಿಳಿದಿದ್ದ ಎಲ್ಲರೂ ಸ್ಪಂದಿಸಿದರು. 1999ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಭಾರಿಸಿತು. ಪಕ್ಷಕ್ಕೆ ನಿಚ್ಚಳ ಬಹುಮತ ಸಾಬೀತಾಯಿತು. ಜನತಾದಳ ನೆಲಕಚ್ಚಿತು. 11.10.1999 ಸೋಮವಾರ ರಾಜ್ಯದ ಹದಿನಾರನೆಯ ಮುಖ್ಯಮಂತ್ರಿಯಾಗಿ ಹಾಗೂ ಜನಾಂಗದ ಐದನೆಯ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು.

ಬಾಲ್ಯ ಮತ್ತು ವಿದ್ಯಾಭ್ಯಾಸ : ಮಂಡ್ಯ ಜಿಲ್ಲೆಯ ಸೋಮನಹಳ್ಳಿ ಎಸ್.ಸಿ. ಮಲ್ಲಯ್ಯ ಅವರ ಏಳನೆಯ ಮಗನಾಗಿ ಹುಟ್ಟಿದರು. ಎಸ್.ಎಂ. ಕೃಷ್ಣ. ಕಾರ್ಮಿಕರ ದಿನವಾದ ಮೇ ಒಂದರಂದು ಇವರು ಜನಿಸಿದುದು ಬಹು ಅರ್ಥ ಪೂರ್ಣವಾಗಿದೆ. (ಜನ್ಮದಿನ 1.5.1932) ತಮ್ಮ ಪ್ರಾಥಮಿಕ ಮಾಧ್ಯಮಿಕ ವಿದ್ಯಾಭ್ಯಾಸವನ್ನು ಮಂಡ್ಯ, ಮೈಸೂರುಗಳಲ್ಲಿ (ರಾಮಕೃಷ್ಣ ಅಶ್ರಮ, ಮೈಸೂರು) ಪೂರೈಸಿದ ಅವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ., ಬೆಂಗಳೂರಿನ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಬಿ.ಎಲ್. ಪಡೆದ ನಂತರ ಉನ್ನತ ವ್ಯಾಸಂಗಕ್ಕಾಗಿ ಅಮೇರಿಕಾದ ಟೆಕ್ಸಾಸ್‌ನ ಡಲ್ಲಾಸ್ ನಗರದಲ್ಲಿರುವ ಸದರ್ನ್ ಮೆಥೋಡಿಸ್ಟ್ ವಿಶ್ವವಿದ್ಯಾಲಯದಲ್ಲಿ ಎಂ.ಸಿ.ಎಲ್. ಅಂದರೆ ಮಾಸ್ಟರ್ ಆಫ್ ಕಂಪ್ಯಾರೀಟೀವ್ ಅಂಡ್ ಇಂಟರ್ ನ್ಯಾಶನಲ್ ಲಾ ಎಂಬ ಸ್ನಾತಕೋತ್ತರ ಪದವಿಯನ್ನು ಪಡೆದರು. ವಾಷಿಂಗ್ಟನ್ ಡಿ.ಸಿ.ಯ ಜಾರ್ಜ್ ವಾಷಿಂಗ್‌ಟನ್ ವಿಶ್ವವಿದ್ಯಾನಿಲಯದಲ್ಲಿ ಪುಲ್‌ಬ್ರೈಟ್ ಸ್ಕಾಲರ್ಶಿಪ್ ಪಡೆದ ಅತ್ಯಂತ ಮೇಧಾವಂತ ವಿದ್ಯಾರ್ಥಿ ಇವರು.

ಭಾರತಕ್ಕೆ ಹಿಂದಿರುಗಿದ ನಂತರ ಇವರು ಬೆಂಗಳೂರಿನ ಶ್ರೀ ಜಗದ್ಗುರು ರೇಣುಕಾಚಾರ್ಯ ಕಾಲೇಜಿನಲ್ಲಿ ಎರಡು ವರ್ಷ ಕಾನೂನು ಪ್ರಾಧ್ಯಾಪಕರಾಗಿದ್ದರು. 1962ರಲ್ಲಿ ತಮ್ಮ ಹುಟ್ಟೂರಿನಿಂದಲೇ ರಾಜಕೀಯ ರಂಗವನ್ನು ಪ್ರವೇಶಿಸಿದರು. ಪ್ರಜಾ ಸೋಷಿಯಲಿಸ್ಟ್ ಅಭ್ಯರ್ಥಿಯಾಗಿ ಮದ್ದೂರಿನಿಂದ ಅವರು ವಿಧಾನ ಸಭೆಗೆ ಶಾಸಕರಾಗಿ ಆಯ್ಕೆಯಾದರು. 1968ರಲ್ಲಿ ಅವರು ಲೋಕಸಭೆಯನ್ನು ಪ್ರವೇಶಿಸಿದರು. 1971ರ ಚುನಾವಣೆಯಲ್ಲಿ ಮತ್ತೆ ಲೋಕಸಭೆ ಪ್ರವೇಶಿಸಿದ ಅವರು 72ರ ಜೂನ್‌ನಲ್ಲಿ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. 1972ರಿಂದ 1977ರ ವರೆಗೆ ರಾಜ್ಯ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆ ಆಗಿ ದೇವರಾಜ ಅರಸರ ಸಂಪುಟದಲ್ಲಿ ಕೈಗಾರಿಕ ಸಚಿವರಾಗಿ ಸೇವೆ ಸಲ್ಲಿಸಿದರು. 1980ರಲ್ಲಿ ಮತ್ತೆ ಲೋಕಸಭೆಗೆ ಪ್ರವೇಶ. 1983ರಿಂದ 1985ರವರೆಗೂ ಕೇಂದ್ರ ಕೈಗಾರಿಕೆ ಮತ್ತು ಹಣಕಾಸು ಖಾತೆಗಳ ಸಹಾಯಕ ಸಚಿವರಾಗಿ ಸೇವೆ ಸಲ್ಲಿಸಿದರು. 1989ರಲ್ಲಿ ಮದ್ದೂರಿನಿಂದ ವಿಧಾನಸಭೆಗೆ ಆಯ್ಕೆಯಾದ ನಂತರ ವಿಧಾನಸಭಾ ಅಧ್ಯಕ್ಷರಾಗಿಯೂ ಮೂರು ವರ್ಷಗಳ ಕಾಲ ಕೆಲಸ ಮಾಡಿದರು. 1992ರಿಂದ 1994 ರವರೆಗೆ ಮೊಯ್ಲಿ ಸರ್ಕಾರದಲ್ಲಿ ಅವರು ಉಪಮುಖ್ಯಮಂತ್ರಿಯಾಗಿದ್ದರು. 1994ರಲ್ಲಿ ನಡೆದ ವಿಧಾನಸಭೆಯ ಚುನಾವಣೆಯಲ್ಲಿ ಮದ್ದೂರು ಕ್ಷೇತ್ರದಲ್ಲಿ ಪರಾಭವ ಅನುಭವಿಸಿ ಕೆಲಕಾಲ ರಾಜಕೀಯ ಅಜ್ಞಾತವಾಸ –ದಲ್ಲಿದ್ದರು. ಕಾಂಗ್ರೆಸ್ ಪಕ್ಷವು 1999ರಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಎಸ್.ಎಂ. ಕೃಷ್ಣ ಅವರ ನಾಯಕತ್ವವೇ ಕಾರಣ ಎಂಬುದನ್ನು ಮರೆಯುವಂತಿಲ್ಲ. ಅವರು ರಾಜ್ಯದ ಮೂಲೆ ಮೂಲೆಗೂ ಪಾಂಚಜನ್ಯ ಯಾತ್ರೆಯನ್ನು ಮಾಡಿ ಜನ ಜಾಗೃತಿ ಉಂಟು

ಮಾಡಿ ಜನರ ಮನಸ್ಸು ಮತ್ತೆ ಕಾಂಗ್ರೆಸ್‌ನತ್ತ ವಾಲುವಂತೆ ಮಾಡಿದರು. ಬಹುಮತ ಪಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಹೊರಹೊಮ್ಮಿದರು.

ಮುಖ್ಯಮಂತ್ರಿಯಾಗಿ ಎಸ್.ಎಂ. ಕೃಷ್ಣ : ಮುಖ್ಯಮಂತ್ರಿಯಾಗಿ ಎದುರಿಸಿದ ಸವಾಲುಗಳು ಅನೇಕ. ಅವರು ಅಧಿಕಾರ ಸೂತ್ರವನ್ನು ಕೈಗೆತ್ತಿಗೊಂಡಾಗ ಖಾಲಿಯಾದ ಖಜಾನೆ, ಛಿದ್ರವಾದ ಅಧಿಕಾರ ಶಾಹಿ, ಮುಗಿಲು ಮುಟ್ಟಿದ ಭ್ರಷ್ಟಾಚಾರ, ಶೂನ್ಯ ಅಭಿವೃದ್ಧಿ, ಇವನ್ನೆಲ್ಲ ನಿಭಾಯಿಸುವ ಛಾಲೆಂಜ್ ಅವರ ಎದುರಿಗಿತ್ತು. ಮಾದರಿ ರಾಜ್ಯವನ್ನು ಕಟ್ಟುವ ಮಹದಾಸೆಯೊಂದಿಗೆ ಅವರು ಮುಖ್ಯಮಂತ್ರಿಯಾದರು. ಈ ರಾಜ್ಯದ ಕೀರ್ತಿಯನ್ನು ಈ ದೇಶದಲ್ಲಿ ಮಾತ್ರವಲ್ಲ ವಿದೇಶಗಳಲ್ಲೂ ಹೆಚ್ಚಿಸಿದರು. ಕರ್ನಾಟಕದ ಹಿಂದಿನ ಎಲ್ಲಾ ಹದಿನೈದು ಮುಖ್ಯಮಂತ್ರಿಗಳಿಗಿಂತ ಎಸ್.ಎಂ. ಕೃಷ್ಣರವರ ಒಂದು ವೈಶಿಷ್ಟ್ಯವೆಂದರೆ ಅವರು ಸಮಾಜವಾದಿ ಹಿನ್ನೆಲೆಯಿಂದ ಬಂದ ಇವರು ದಕ್ಷತೆ, ಶಿಸ್ತು ಮತ್ತು ಪ್ರಾಮಾಣಿಕತೆಗೆ ಒತ್ತು ಕೊಟ್ಟರು.

ಬೆಂಗಳೂರು ನಗರದ ಸೌಂದರ್ಯವನ್ನು ಹೆಚ್ಚಿಸುವ ಸಂಕಲ್ಪ ತೊಟ್ಟಿದ್ದು ಕೃಷ್ಣ ಅವರು ಆಡಳಿತ ವಹಿಸಿಕೊಂಡ ನಂತರ ಕೈಗೊಂಡ ಪ್ರಪ್ರಥಮ ನಿರ್ಧಾರ.

ಎಸ್.ಎಂ. ಕೃಷ್ಣರ ಉವಾಚ :

ಮುಂದಿನ ವರ್ಷಗಳಲ್ಲಿ ರಾಜ್ಯಕ್ಕೆ ಅರ್ಥಪೂರ್ಣ ಆಡಳಿತಕೊಡುವುದೇ ನಮ್ಮ ಮುಖ್ಯ ಗುರಿ.

ಆದಷ್ಟು ಸರ್ಕಾರಿ ಉಸ್ತುವಾರಿ ಖರ್ಚುಗಳನ್ನೆಲ್ಲ ಕಡಿತ ಮಾಡುವ ಉದ್ದೇಶವಿದೆ.

ಪೂರ್ಣ ಆರೋಗ್ಯ ವಿಮರ್ಶೆ ಹಾಗೂ ಸಲಹೆಗಳನ್ನು ನಾನು ನೀರೀಕ್ಷಿಸುತ್ತೇನೆ.

ಜನರ ಸುಖ ಸಮೃದ್ಧಿಗಾಗಿ ನನ್ನ ಆಡಳಿತ.

ನಾನು ಕರ್ನಾಟಕದ ಅಭಿವೃದ್ಧಿಗಾಗಿ ಮಾನಸಿಕ ಯೋಜನೆಯೊಂದನ್ನು ಹಾಕಿಕೊಂಡಿದ್ದೇನೆ. ನಾನು ನನ್ನ ನೀರೀಕ್ಷೆಯ ಕರ್ನಾಟಕಕ್ಕೆ ಅಡಿಗಲ್ಲು ಹಾಕುತ್ತೇನೆ.

ನಮ್ಮದೊಂದೇ ಆಸೆ. ಕೇಂದ್ರ ಸರ್ಕಾರವೂ ಯಾವ ಪರಿಸ್ಥಿತಿಯನ್ನು ರಾಜಕೀಯಗೊಳಿಸಬಾರದು. ಇತ್ಯಾದಿ.

ಸಾಧನೆಯ ಸಂವತ್ಸರ

1. ಬಂಡವಾಳ ಹೂಡಿಕೆ : ಕರ್ನಾಟಕವು ಹಮ್ಮಿಕೊಂಡಿರುವ ಕ್ರಿಯಾತ್ಮಕ ಯೋಜನೆಗಳನ್ನು ಮೆಚ್ಚಿ ವಿಶ್ವದ ಬಹುತೇಕ ರಾಷ್ಟ್ರಗಳು 27 ಸಾವಿರ ಕೋಟಿ ಬಂಡವಾಳವನ್ನು ಉದ್ಯೋಗ ಕ್ಷೇತ್ರಗಳಲ್ಲಿ ಹೂಡಲು ಮುಂದೆ ಬಂದದ್ದು.

2. ಸುಮಾರು 2000 ಕಿ.ಮೀ. ಉದ್ದದ ಹೆದ್ದಾರಿ ನಿರ್ಮಾಣ ಯೋಜನೆಗಾಗಿ ವಿಶ್ವ ಬ್ಯಾಂಕ್ ಸುಮಾರು 1901 ಕೋಟಿ ರೂಪಾಯಿ ಸಹಾಯ ಹಣ ನೀಡಲು ಮುಂದೆ ಬಂದದ್ದು

3. ನೀರಾವರಿ ಕ್ಷೇತ್ರಕ್ಕೆ ಆದ್ಯತೆಯ ಮೇರೆಗೆ 26,000 ಕೋಟಿ ವ್ಯಯಿಸಲು ನಿರ್ಧಾರ ತೆಗೆದುಕೊಂಡದ್ದು, ಇತ್ಯಾದಿ

ಆಧುನಿಕ ವಿಶ್ವದಲ್ಲಿನ ಮಾಹಿತಿ ತಂತ್ರಜ್ಞಾನದ ಪ್ರಾಮುಖ್ಯತೆಯನ್ನು ಗುರುತಿಸಿ ರಾಜ್ಯದಲ್ಲಿ ಇದಕ್ಕೆ ಪ್ರಮುಖ ಸ್ಥಾನವನ್ನು ನೀಡಿದ್ದು. ಈ ಬಗ್ಗೆ ಯುವ ಉದ್ಯಮಿಗಳಿಗೆ ಮಾಹಿತಿ ನೀಡಲು ಯುವಡಾಟ್ ಕಾಂ ಸ್ಥಾಪಿಸಲಾಗಿದೆ. ಆಲಮಟ್ಟಿ ಅಣೆಕಟ್ಟನ್ನು 519 ಅಡಿ ಎತ್ತರಕ್ಕೆ ಏರಿಸಿ ಕ್ರಸ್ಟ್ ಗೇಟ್‌ಗಳನ್ನು ನಿರ್ಮಿಸಿರುವುದು. 30,000 ಕೆರೆಗಳಲ್ಲಿನ ಹೂಳನ್ನು ಎತ್ತಿ ಪುನಶ್ಚೇತನಗೊಳಿಸುವ ಕಾರ್ಯವನ್ನು ಆದ್ಯತೆಯ ಮೇರೆಗೆ ಹಮ್ಮಿಕೊಳ್ಳಲಾಗಿದೆ. ಒಣಭೂಮಿ ಅಭಿವೃದ್ಧಿ ಕೃಷಿಕರಿಗೆ ಆಧುನಿಕ ತಂತ್ರಜ್ಞಾನ ನೀಡುವ ಉದ್ದೇಶದಿಂದ ರೈತಮಿತ್ರ ವ್ಯವಸ್ಥೆಯನ್ನು ನಿರ್ಮಿಸಿದ್ದು. ಸ್ತ್ರೀಯರ ಸರ್ವತೋಮುಖ ಅಭಿವೃದ್ಧಿಗೆ ಇಂಬುಕೊಡುವ ಉದ್ದೇಶದಿಂದ ಸ್ತ್ರೀ ಶಕ್ತಿ ಘಟಕವನ್ನು ತೆರೆದದ್ದು ಇಡೀ ದೇಶದಲ್ಲೇ ಮೊದಲು. ಕರ್ನಾಟಕದ ಎಲ್ಲಾ ನಗರ ಪ್ರದೇಶಗಳಿಗೆ ಸಮರ್ಪಕ ಹಾಗೂ ಶುದ್ಧ ನೀರಿನ ಪೂರೈಕೆಯನ್ನು ಹಾಗೂ ಒಳಚರಂಡಿ ವ್ಯವಸ್ಥೆ -ಯನ್ನು ಮಾಡುವ ಉದ್ದೇಶದಿಂದ ನಿರ್ಮಾಣಗೊಂಡಿರುವ ನಿಗಮಕ್ಕೆ ನವಚೇತನ ನೀಡಲಾಗಿದೆ ಹಾಗೂ ಸಾಕಷ್ಟು ಹಣವನ್ನು ನೀಡಲಾಗಿದೆ. ಗ್ರಾಮೀಣ ಮಹಿಳಾ ಆರೋಗ್ಯ ಯೋಜನೆಯಡಿ ಸುರಕ್ಷಾ ಹೆರಿಗೆ ಮತ್ತು ನೈರ್ಮಲ್ಯ ಕಿಟ್‌ಗಳನ್ನು ವಿತರಿಸಲು ಕ್ರಮಕೈಗೊಳ್ಳಲಾಗಿದೆ. ಪುನರ್ ದಾಖಲಾತಿ ಆಂದೋಲನದಡಿ ಶಾಲೆ ಬಿಟ್ಟ 1.6 ಲಕ್ಷ ಮಕ್ಕಳನ್ನು ಕಳೆದ ವರ್ಷ ಸೇರಿಸಿಕೊಂಡಿದ್ದಾರೆ. ಸರ್ವ ಶಿಕ್ಷಣ ಅಭಿಯಾನ ಕರ್ನಾಟಕ ಎಂಬ ಸಂಸ್ಥೆ ಸ್ಥಾಪಿಸಿ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕ -ಗೊಳಿಸಲು ಸಂಪನ್ಮೂಲಗಳ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಲಾಗಿದೆ.

ಇವರ ಆಡಳಿತದ ನಾಲ್ಕು ವರ್ಷಗಳ ಕಾಲ ಬರಗಾಲ ಮತ್ತು ವೀರಪ್ಪನ್‌ನ ಹಾವಳಿ ಇದ್ದರೂ ಕೂಡ ಶ್ರೀಯುತರು ಧೃತಿಗೆಡದೆ ರಾಜ್ಯವನ್ನು ಅಭಿವೃದ್ಧಿಗೆ ಕೊಂಡೊಯ್ಯಲು ಹಲವಾರು ಇಲಾಖೆಗಳ ಟಾಸ್ಕ್ ಫೋರ್ಸ್‌ಗಳನ್ನು ನಿರ್ಮಿಸಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಪುನಶ್ಚೇತನಗೊಳಿಸಿದ್ದು; ಭೂ ಕಬಳಿಕೆದಾರರಿಂದ ನಗರವನ್ನು ಮುಕ್ತಗೊಳಿಸಿ ಬಿ.ಡಿ.ಎ.ಯನ್ನು ಶ್ರೀಮಂತ ಸಂಸ್ಥೆಯನ್ನಾಗಿಸಿದ್ದು; ಸ್ವರ್ಣಜಯಂತಿ ಸ್ವರೋಜ್‌ಗಾರ್ ಯೋಜನೆಯಡಿ 1,83,000 ಜನರಿಗೆ ತರಬೇತಿ ಕಾರ್ಯಕ್ರಮ; ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗ/ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗಗಳ 10,000 ಜನರಿಗೆ ಉದ್ಯೋಗ ದೊರಕಿಸಿ ಕೊಡಲು ಅಥವಾ ಸ್ವಯಂ ಉದ್ಯೋಗ ಕಲ್ಪಿಸಿಕೊಡಲು ಕ್ರಮ ಕೈಗೊಂಡರು.

ನಂ. 1 ಮುಖ್ಯಮಂತ್ರಿ – ರಾಜ್ಯದ ಅಭಿವೃದ್ಧಿಯ ಯಶೋಗಾಥೆ

1. ನಬಾರ್ಡ್ ಸಾಲದ ನೆರವಿನಡಿ ರೂ. 493 ಕೋಟಿಗಳ ವೆಚ್ಚದಲ್ಲಿ 5,679 ಕಿಲೊ ಮೀಟರ್ ಉದ್ದದ ಅಭಿವೃದ್ಧಿ ಹಾಗೂ 150 ಸೇತುವೆಗಳ ನಿರ್ಮಾಣಕ್ಕೆ ಮಂಜೂರಾತಿ. 135 ಸೇತುವೆಗಳ ನಿರ್ಮಾಣ ಮತ್ತು 7,594 ಕಿ.ಮಿ.ಗಳ ರಸ್ತೆಗಳ ಅಭಿವೃದ್ಧಿ ಪೂರ್ಣ ಮಾಡಿರುವುದು.
2. ರಾಜ್ಯ ಹೆದ್ದಾರಿಗಳ ನಿರ್ವಹಣಾ ಗುತ್ತಿಗೆಯನ್ನು 3 ವರ್ಷಗಳ ಕಾಲ ನಿರ್ವಹಿಸಲು ಖಾಸಗಿಯವರಿಗೆ ನೀಡಲಾಗಿದ್ದು ಇಂತಹ ವ್ಯವಸ್ಥೆ ದೇಶದಲ್ಲೇ ಪ್ರಪ್ರಥಮ.
3. ಬೆಂಗಳೂರು ಕೃಷ್ಣರಾಜಪುರಂ ಬಳಿ ರೂ. 47 ಕೋಟಿಗಳ ವೆಚ್ಚದಲ್ಲಿ ವಿಶಿಷ್ಟ ಬಗೆಯ ಕೇಬಲ್ ಸ್ಟ್ರಯ್ಡ್ ರೈಲ್ವೇ ಸೇತುವೆ (ಮೇಲು) ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಿದ್ದು.
4. ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಮೊದಲ ಹಂತವಾಗಿ ರಾಮನಗರ–ದವರೆಗೆ ನಾಲ್ಕು ಪಥಗಳ ರಸ್ತೆಗಳ ನಿರ್ಮಾಣ ಕಾಮಗಾರಿ ಮುಗಿಸಿ, ಮೈಸೂರಿನವರೆಗೂ ರಸ್ತೆ ನಿರ್ಮಿಸಿರುವುದು.
5. ಬಳ್ಳಾರಿ ಮತ್ತು ಗದಗ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸಲು ತುಂಗಭದ್ರಾ ನದಿಗೆ ಅಡ್ಡಲಾಗಿ ರೂ. 7.67 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಮೊದಲ ಘಟ್ಟ ಸೇತುವೆ ಉದ್ಘಾಟನೆ ಮಾಡಲಾಯಿತು.

ಕೈಗಾರಿಕೆ : ರಫ್ತು ವಲಯಕ್ಕೆ ಆದ್ಯತೆ

ಇಲ್ಲವೇ ನಾಶ ಎಂಬ ಸರ್.ಎಂ.ವಿ. ಅವರ ಘೋಷವಾಕ್ಯವನ್ನು ಎಸ್.ಎಂ. ಕೃಷ್ಣರವರ ಸರ್ಕಾರ ಆದರ್ಶವಾಗಿ ಇಟ್ಟುಕೊಂಡಿತ್ತು. ಇವರ ಅವಧಿಯಲ್ಲಿ ಕೈಗಾರಿಕಾ ವಲಯದಲ್ಲಿ ಆಗಿರುವ ಸಾಧನೆ ಅಪಾರ. ವಿಶ್ವದ ಭೂಪಟದಲ್ಲಿ ಸಾಫ್ಟ್‌ವೇರ್ ರಾಜಧಾನಿ ಎಂಬ ಹೆಸರನ್ನು ಕರ್ನಾಟಕ ಗಳಿಸಿತು.

1. ಖಾಸಗಿ ಬಂಡವಾಳ ಹೂಡಿಕೆದಾರರನ್ನು ಮತ್ತು ಖಾಸಗಿ ಕೈಗಾರಿಕೋದ್ಯಮಿ–ಗಳನ್ನು ಉತ್ತೇಜಿಸುವ ಸಲುವಾಗಿ ಕರ್ನಾಟಕ (ಇಂಡಸ್ಟ್ರೀಸ್) ಫೆಸಲೆಟೇಶನ್ ಬಿಲ್‌ಅನ್ನು ಶಾಸನ ಸಭೆಯ ಮುಂದೆ ತಂದದ್ದು.
2. ಹಾಸನ ಮತ್ತು ಧಾರವಾಡಗಳಲ್ಲಿ ಅಭಿವೃದ್ಧಿ ಕೇಂದ್ರಗಳು ಹಾಗೂ ಹುಬ್ಬಳ್ಳಿಯಲ್ಲಿ ಐ.ಟಿ. ಪಾರ್ಕ್‌ಗಳ ಕಾರ್ಯಾರಂಭ ಮಾಡಿದ್ದು.
3. ಮೈಸೂರಿನಲ್ಲಿ ಇನ್‌ಫೋಸಿಸ್ ಲೀಡರ್ಶಿಪ್ ಇನ್ಸ್‌ಟಿಟ್ಯೂಟ್ ಸ್ಥಾಪನೆ.

4. ಬೆಂಗಳೂರಿನಲ್ಲಿ ಫೈನಾನ್ಷಿಯಲ್ ಡಿಸ್ಟ್ರಿಕ್ಟ್ ಬಯೋಟೆಕ್ನಾಲಜಿಗಾಗಿ ಮಾಹಿತಿ ಪಾರ್ಕ್ ಮತ್ತು ಮೂರು ಆಟೋಪಾರ್ಕ್‌ಗಳ ನಿರ್ಮಾಣ ಕಾರ್ಯವನ್ನು ಉತ್ತೇಜಿಸಿದ್ದು.

ಬೆಂಗಳೂರನ್ನು ಸಿಂಗಪೂರ ಮಾಡುವ ಹಂಬಲ :

ಅಂತರರಾಷ್ಟ್ರೀಯ ವಾಣಿಜ್ಯ ಸಮುದಾಯದ ಕೇಂದ್ರ ಸ್ಥಳವಾಗಿ ಮಾರ್ಪಡು–ತ್ತಿರುವ ಬೆಂಗಳೂರಿನ ಅಭಿವೃದ್ಧಿ ಕಾರ್ಯಗಳಿಗೆ ಕ್ಷಿಪ್ರಗತಿ ನೀಡುವ ಆಶ್ವಾಸನೆಯನ್ನು ಸರ್ಕಾರ ಜನತೆಗೆ ನೀಡಿತ್ತು.

ಹಲವಾರು ಪ್ರಥಮಗಳನ್ನು ದಾಖಲಿಸಿದ ಕೃಷ್ಣರವರ ಸರ್ಕಾರ ಅಭಿವೃದ್ಧಿಗಾಗಿ ಬೆಂಗಳೂರು ಮಹಾನಗರಪಾಲಿಕೆಯ ಜೊತೆ ಒಪ್ಪಂದ ಮಾಡಿಕೊಂಡಿತು. ಇದು ರಾಷ್ಟ್ರದಲ್ಲಿಯೇ ಈ ಮಾದರಿಯಲ್ಲಿ ಮಾಡಿದ ಮೊಟ್ಟಮೊದಲ ಪ್ರಯತ್ನವಾಗಿದೆ.

1. ರಿಚ್‌ಮಂಡ್ ವೃತ್ತ, ಶಿರಸಿ ವೃತ್ತಗಳ ಫ್ಲೈ ಓವರ್‌ನ ಜೊತೆಗೆ ಮೇಖ್ರಿವೃತ್ತ, ಹೆಬ್ಬಾಳ, ಹೊಸೂರು ರಸ್ತೆ, ವೈಟ್ ಫೀಲ್ಡ್ ಫ್ಲೈಓವರ್ ಪೂರ್ಣಗೊಳಿಸಿದ್ದು.
2. ಇವರ ಅಧಿಕಾರದ ಅವಧಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ 25,000 ನಿವೇಶನಗಳ ಹಂಚಿಕೆ ಮಾಡಿ 1,100 ಕೋಟಿ ರೂ. ವೆಚ್ಚದಲ್ಲಿ ಕಾವೇರಿ 4ನೇ ಘಟ್ಟದ ಕುಡಿಯುವ ನೀರು ಯೋಜನೆ ಪೂರ್ಣಗೊಳಿಸಿತು.
3. ಬೆಂಗಳೂರು ನಗರದ ರಸ್ತೆಗಳನ್ನು 154 ಕೋಟಿ ರೂ. ವೆಚ್ಚದಲ್ಲಿ ಸುಧಾರಣೆ ಮಾಡಿದ್ದು.
4. ಬೆಂಗಳೂರನ್ನಷ್ಟೇ ಅಲ್ಲ ರಾಜ್ಯದ ಇತರ ಪ್ರಮುಖ ನಗರಗಳ ಅಭಿವೃದ್ಧಿಗೆಂದು ಆಯಾ ನಗರ ಸ್ಥಳೀಯ ಸಂಸ್ಥೆಗಳಿಗೆ 130 ಕೋಟಿ ರೂ.ಗಳನ್ನು ಹುಡ್ಕೊ ಸಂಸ್ಥೆಯ ಮೂಲಕ ಒದಗಿಸಲಾಯಿತು. ಬಹುತೇಕ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ 130 ಕೋಟಿ ರೂ.ಗಳನ್ನು ಹುಡ್ಕೊ ಸಂಸ್ಥೆಯ ಮೂಲಕ ಒದಗಿಸಲಾಯಿತು. ಬಹುತೇಕ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲಾಯಿತು.
5. ರಾಜ್ಯಾದ್ಯಂತ ವಿವಿಧ ನಗರಾಭಿವೃದ್ಧಿ ಪ್ರಾಧಿಕಾರಗಳ ವತಿಯಿಂದ 50,000 ನಿವೇಶನಗಳಲ್ಲಿ ಹಂಚಿದ್ದು.
6. ಪಟ್ಟಣ ಹಾಗೂ ನಗರ ಭಾಗಗಳಲ್ಲಿ 60 ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ 597 ಕೋಟಿ ರೂ. ಬಿಡುಗಡೆ ಮಾಡಿದ್ದು.
7. ಬೆಂಗಳೂರಿನ ಹೊರಭಾಗದ 7 ನಗರಸಭೆಗಳನ್ನು ಸೇರಿಸಿ ಗ್ರೇಟರ್ ಬೆಂಗಳೂರು ನಿರ್ಮಾಣ ಮಾಡಿದ್ದು.

ನಾಗರಿಕರ ಶಾಂತಿ, ಸುವ್ಯವಸ್ಥೆ ಭದ್ರತೆಗೆ ಆದ್ಯತೆ

ನಮ್ಮ ರಾಜ್ಯದ ಪೋಲೀಸ್ ಪಡೆ ಇಡೀ ರಾಷ್ಟ್ರದಲ್ಲಿಯೇ ಅತ್ಯುತ್ತಮ ಎಂಬ ಹೆಗ್ಗಳಿಕೆಗೆ ಪಾತ್ರ. ಈ ಇಲಾಖೆಯನ್ನು ಮತ್ತಷ್ಟು ಬಲಪಡಿಸಿ ಆಧುನೀಕರಣ ಮಾಡಬೇಕು ಎಂಬುದು ಕೃಷ್ಣರವರ ಸರ್ಕಾರದ ಆಶಯವಾಗಿತ್ತು.

1. ದೇಶದ ಪ್ರಥಮ ಸೈಬರ್ ಪೋಲೀಸ್ ಠಾಣೆ ಸ್ಥಾಪನೆ.
2. 22.65 ಕೋಟಿ ರೂ. ಖರ್ಚಿನಲ್ಲಿ ಇಲಾಖೆಯ ಕಂಪ್ಯೂಟರೀಕರಣ.
3. ಎರಡೂವರೆ ವರ್ಷಗಳಲ್ಲಿ 24 ಹೊಸ ಪೋಲೀಸ್‌ಠಾಣೆಗಳ ಆರಂಭ.
4. ಕರ್ನಾಟಕ ಗೃಹ ಮಂಡಳಿಯಿಂದ ಪೋಲೀಸ್ ಇಲಾಖೆಗೆ 1,188 ಮನೆಗಳ ಖರೀದಿ. ಇದಕ್ಕಾಗಿ 26.87 ಕೋಟಿ ರೂ. ಖರ್ಚು.
5. ಪೋಲೀಸ್ ಇಲಾಖೆಗೆ ಒಟ್ಟಾರೆ 6,000ಕ್ಕೂ ಹೆಚ್ಚು ಮನೆಗಳ ನಿರ್ಮಾಣ ಮಾಡಿದ್ದು.
6. ಪೊಲೀಸ್ ಸಿಬ್ಬಂದಿಯಲ್ಲಿ ಶೇ.40ರಷ್ಟು ಮಂದಿಗೆ ವಸತಿ ಸೌಕರ್ಯ ಕಲ್ಲಿಸಿದ್ದು.

ಈ ಮೇಲ್ಕಂಡ ಎಲ್ಲಾ ಯೋಜನೆಗಳನ್ನು ಕಣ್ಣಾರೆ ಕಂಡು ಕೇಳಿದ ಇಂಡಿಯಾ ಟುಡೇ ಪತ್ರಿಕೆಯು ಕೃಷ್ಣರನ್ನು ನಂ. 1 ಮುಖ್ಯಮಂತ್ರಿ ಎಂದು ಬಿಂಬಿಸಿತು.

2004ರಲ್ಲಿ ತಮ್ಮ ನಾಲ್ಕುವರೆ ವರ್ಷಗಳ ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ನೀಡಿ ವಿಧಾನಸಭೆಯನ್ನು ವಿಸರ್ಜಿಸಿ ಚುನಾವಣೆಗಿಳಿದರು. ಕರ್ನಾಟಕ –ದಲ್ಲಿ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬರುತ್ತಲೇ ಕೃಷ್ಣರವರನ್ನು ಭಾರತ ಸರ್ಕಾರವು ಮಹಾರಾಷ್ಟ್ರದ ಸರ್ಕಾರದ ರಾಜ್ಯಪಾಲರನ್ನಾಗಿ ನೇಮಿಸಿತು. ನಂತರ ಕೇಂದ್ರ ಸರ್ಕಾರವು ವಿದೇಶಾಂಗ ಸಚಿವರನ್ನಾಗಿ ನೇಮಿಸಿತ್ತು ಎರಡುವರೆ ವರ್ಷಗಳ ಕಾಲ ಸೇವೆಸಲ್ಲಿಸಿದರು.

ಈಗಾಗಲೇ ತಿಳಿಸಿರುವಂತೆ ಎಸ್.ಎಂ. ಕೃಷ್ಣಾರವರು ಕೆಂಗೆಲ್ ಹನುಮಂತಯ್ಯನವರು ವಿಧಾನ ಸೌಧವನ್ನು ನಿರ್ಮಿಸಿದ ಮಾದರಿಯಲ್ಲೇ ಅದೇ ಜಾಗದಲ್ಲಿ ವಿಕಾಸ ಸೌಧವನ್ನು ನಿರ್ಮಿಸಿದರು. ಅದರ ಹತ್ತಿರದಲ್ಲೇ ಕರ್ನಾಟಕ ಲೋಕ ಸೇವಾ ಆಯೋಗದ ಕಟ್ಟಡವನ್ನು ಪುನರ್ನಿರ್ಮಾಣ ಮಾಡಿ ಉದ್ಯೋಗ ಸೌಧ ಎಂಬ ಹೆಸರಿಟ್ಟರು. ಇದು ಅವರಿಗೆ ಶಾಶ್ವತವಾದ ಹೆಸರು ತಂದುಕೊಟ್ಟಿತು. ಶ್ರೀಯುತರು ಮುಖ್ಯಮಂತ್ರಿಯಾಗಿದ್ದ ವೇಳೆ ರೈತರನ್ನು ಹಾಗೂ ಬಡ ಜನತೆಯನ್ನು ಗಮನದಲ್ಲಿಟ್ಟುಕೊಂಡು "ಯಶಸ್ವಿನಿ" ಕಾರ್ಡ್ ಎಂಬ ಹೊಸ ಯೋಜನೆಯನ್ನು ಜಾರಿಗೆ ತಂದದ್ದು. ಆರೋಗ್ಯ ಸೇರಿದಂತೆ ನಾನಾ ಅಭಿವೃದ್ಧಿ ರಂಗಗಳ "ಟಾಸ್ಕ್


ಫೋರ್ಸ್" ರಚಿಸಿದ್ದು, ಮಹಿಳಾ ಸಬಲೀಕರಣ ಮಾಡಲು "ಸ್ತ್ರೀ-ಶಕ್ತಿ" ಗುಂಪುಗಳ ರಚನೆ "ಭೂಮಿ ಡಾಟ್ ಕಾಂ" ಮೂಲಕ ರೈತರ ಭೂ ಸರ್ವೆ ಮಾಡಿಸಲು ವ್ಯವಸ್ಥೆ ಇವೇ ಮುಂತಾದವು ಇವರ ಸಾಧನೆಯ ಮೈಲಿಗಲ್ಲು ಎಂದೇಳಬಹುದು.

ಮಹಾರಾಷ್ಟ್ರ ರಾಜ್ಯಪಾಲರಾಗಿ : ಕೃಷ್ಣರವರ ನೇತೃತ್ವದ ಸರ್ಕಾರ ಉತ್ತಮ ಕೆಲಸ ಕಾರ್ಯಗಳನ್ನು ಮಾಡಿದರೂ 2004ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯ ಸೋಲನ್ನು ಅನುಭವಿಸಿತು. ಪ್ರಧಾನಿ ಮನಮೋಹನ್ ಸಿಂಗ್‌ರವರ ಸರ್ಕಾರ ಕೃಷ್ಣರವರನ್ನು ಮಹಾರಾಷ್ಟ್ರದ ರಾಜ್ಯಪಾಲರನ್ನಾಗಿ ನೇಮಿಸಿತು. ಅನುಭವಿ ಹಾಗೂ ನುರಿತ ರಾಜಕಾರಣಿಯೊಬ್ಬರನ್ನು ಮಹಾರಾಷ್ಟ್ರ ಸರ್ಕಾರ ರಾಜ್ಯಪಾಲರಾಗಿ ಪಡೆಯಿತು. ಕೃಷ್ಣಕೊಳ್ಳದ ಯೋಜನೆಯನ್ನು ಉತ್ತಮವಾಗಿ ನಿಭಾಯಿಸಿದರು. ನಾಗಪುರ ಸೇರಿದಂತೆ ಕೆಲವು ಮಹಾರಾಷ್ಟ್ರದ ಹಿಂದುಳಿದ ಪ್ರದೇಶಗಳನ್ನು ವಿದರ್ಭ ಹಿಂದುಳಿದ ಪ್ರದೇಶವೆನ್ನುತ್ತಿದ್ದರು. ಸಂವಿಧಾನದ 371-ಜೆ ಪ್ರಕಾರ ವಿದರ್ಭ ಪ್ಯಾಕೇಜ್ ನೀಡಿ ಹಿಂದುಳಿದ ಆ ಪ್ರದೇಶವು ಮುಖ್ಯ ವಾಹಿನಿಗೆ ತರಬೇಕೆಂದು ಹೇಳಿದರು. ಅಲ್ಲಿನ ಸರ್ಕಾರ ಅದನ್ನು ಮರೆತು ನಿರ್ಲಕ್ಷ್ಯ ತೋರಿದ್ದರಿಂದ ರಾಜ್ಯಪಾಲರು ಎಲ್ಲಾ ಕಡತಗಳನ್ನು ತಡೆಯಿಡಿಯಬೇಕಾಯ್ತು. ವಿಧಿಯಿಲ್ಲದೆ ಅಲ್ಲಿನ ಸರ್ಕಾರವು ವಿದರ್ಭ ಪ್ಯಾಕೇಜ್ ನೀಡಲು ಒಪ್ಪಿತು. ವಿದರ್ಭ ಭಾಗದ ರೈತರು, ರಾಜಕಾರಣಿಗಳು ಇಂದಿಗೂ ಕೃಷ್ಣರವರನ್ನು ಸ್ಮರಿಸಿಕೊಳ್ಳುತ್ತಾರೆ. ಮಹಾರಾಷ್ಟ್ರವು ಪ್ರಗತಿಯತ್ತ ದಾಪುಗಾಲಿಡಲು ಕೃಷ್ಣಾರವರು ಸಾಕಷ್ಟು ನೆರವು ನೀಡಿದರು.

ವಿದೇಶಾಂಗ ಸಚಿವರಾಗಿ : 2009ರಲ್ಲಿ ಭಾರತ ಸರ್ಕಾರವು ಕೃಷ್ಣರವರನ್ನು ಭಾರತದ ವಿದೇಶಾಂಗ ಸಚಿವರನ್ನಾಗಿ ನೇಮಿಸಿತು. ವಿದೇಶಾಂಗ ಸಚಿವರೊಬ್ಬರು ದೇಶ ವಿದೇಶಗಳ ಸಂಧಾನಕಾರರಾಗಿ, ಭಯೋತ್ಪಾದನ ನಿಗ್ರಹ, ರಾಜತಾಂತ್ರಿಕ ಸಂಬಂಧವೃದ್ಧಿ, ವ್ಯಾಪಾರ-ವಾಣಿಜ್ಯ ವೃದ್ಧಿ, ಸಾಗರ ಸರಹದ್ದಿನ ರಕ್ಷಣೆ, ಮಾನವ ಹಕ್ಕು ರಕ್ಷಣೆ, ಪರಮಾಣು ಭದ್ರತೆ, ಸಮಗ್ರ ಭಾರತ ರಕ್ಷಣೆ ಇವೇ ಮುಂತಾದ ಕರ್ತವ್ಯಗಳನ್ನು ಪಾಲಿಸಬೇಕಿತ್ತು. 77 ವರ್ಷಗಳ ಕೃಷ್ಣರವರು ಇವುಗಳನ್ನು ನಿಭಾಯಿಸುತ್ತಿದ್ದರು. ಇಷ್ಟೇ ಅಲ್ಲದೆ ದೇಶ-ವಿದೇಶಗಳ ಪರ್ಯಟನೆ ವಿದೇಶಗಳ ಹವಾಮಾನ, ಊಟ-ತಿಂಡಿ ನೀರಿಗೆ ದೇಹವನ್ನು ಒಗ್ಗಿಸಿಕೊಳ್ಳವುದು ಸವಾಲಿನ ಕೆಲಸವಾಗಿತ್ತು. ಶತೃ ರಾಷ್ಟ್ರಗಳಾದ ಪಾಕಿಸ್ಥಾನ ಮತ್ತು ಚೀನವನ್ನು ಸಮರ್ಥವಾಗಿ ನಿಭಾಯಿಸಿದರು. ಪಾಕಿಸ್ಥಾನದ ವಿದೇಶಾಂಗ ಸಚಿವೆ ಶ್ರೀಮತಿ ಹೀನಾರಬ್ಬಾನಿಕರ್ ನೀಡಿದ ಟಾಸ್ಕ್‌ಗಳನ್ನು ನಿಭಾಯಿಸಿದರು. ಅಮೇರಿಕದ "ಮಿಲ್ವಾಕಿಯು" ಗುರುದ್ವಾರದಲ್ಲಿ ನಡೆದ ಮಾರಣ ಹೋಮದ ಸಂದರ್ಭದಲ್ಲಿ ಸಧೃಡ ನಿರ್ಧಾರ ತೆಗೆದುಕೊಂಡು ಗುರುದ್ವಾರಕ್ಕೆ ಭೇಟಿ ನೀಡಿ ವಾತಾವರಣವನ್ನು ತಿಳಿಗೊಳಿಸಿದರು.

ಹೀಗೆ ತಮಗೆ ನೀಡಿದ ಎಲ್ಲಾ ಕೆಲಸ ಕಾರ್ಯಗಳನ್ನು ಸಮರ್ಥವಾಗಿ ನಿಭಾಯಿಸಿದರು. ಶ್ರೀಯುತರ ಹಿರಿತನವನ್ನು ಗಣನೆಗೆ ತೆಗೆದುಕೊಂಡು ಕಾಂಗ್ರೆಸ್ ಪಕ್ಷವು ರಾಜ್ಯ ಸಭಾ ಸದಸ್ಯನನ್ನಾಗಿ ನೇಮಿಸಬೇಕಿತ್ತು. ಬಿ.ಜೆ.ಪಿ. ಪಕ್ಷಕ್ಕೆ ಅನಿವಾರ್ಯವಾಗಿ ಸೇರಬೇಕಾಯ್ತು. ಇದು ಚರ್ಚೆಗೆ ಗ್ರಾಸವಾಯಿತು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ



ರಾಜಕಾರಣ ಎಲ್ಲರಿಗೂ ಒಲಿಯುವುದಿಲ್ಲ ರಾಜಕಾರಣಿಗಳ ಕುಟುಂಬದಲ್ಲಿ ಹುಟ್ಟಿದ ಎಷ್ಟೋ ಯುವಕರು ರಾಜಕೀಯಕ್ಕೆ ವಿಮುಖರಾಗಿ ಉದ್ಯೋಗ, ಉದ್ಯಮ, ವ್ಯವಸಾಯ ಇವೇ ಮುಂತಾದ ಕಸುಬಿಗೆ ಅಂಟಿಕೊಂಡಿರುವವರನ್ನು ಸರ್ವೇ ಸಾಮಾನ್ಯವಾಗಿ ಕಾಣಬಹುದು. ರಾಜಕಾರಣದಲ್ಲಿರುವವರು ನೆಮ್ಮದಿ-ಯಾಗಿರಲು ಸಾಧ್ಯವೇ ಇಲ್ಲ ಕಾರಣ ರಾಜಕಾರಣವೇ ಹಾಗೆ. ಆದರೆ ಮಾಜಿ ಪ್ರಧಾನಮಂತ್ರಿಗಳಾದ ಹೆಚ್.ಡಿ. ದೇವೇಗೌಡರ ಮಗ ಹೆಚ್.ಡಿ. ಕುಮಾರಸ್ವಾಮಿ ಉರುಫ್ ಕುಮಾರಣ್ಣ ಕರ್ನಾಟಕ ರಾಜಕೀಯದಲ್ಲಿ ಕಿರಿಯವಯಸ್ಸಿನ ಭರವಸೆಯ ರಾಜಕಾರಣಿ. ದಿನಾಂಕ 3.2.2006ರಂದು ರಾಜ್ಯದ 21ನೆಯ ಮುಖ್ಯಮಂತ್ರಿಯಾಗಿ ತಮ್ಮ ನಲವತ್ತಾರನೆಯ ವಯಸ್ಸಿನಲ್ಲಿ ಅಧಿಕಾರದ ಗದ್ದುಗೆಗೇರಿದರು. ಶ್ರೀ ಕುಮಾರಸ್ವಾಮಿಯವರು ಮಾಜಿ ಪ್ರಧಾನಿ ದೇವೇಗೌಡರ ಪುತ್ರ ಎಂಬ ಕಾರಣದಿಂದಾಗಿ ದೇಶದಾದ್ಯಂತ ಸುದ್ದಿಯಾದರು.

ಕುಮಾರಸ್ವಾಮಿಯವರು 1959 ಡಿಸಂಬರ್ 16ರಂದು ಹಾಸನಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಹರದನಹಳ್ಳಿಯಲ್ಲಿ ಶ್ರೀ ಹೆಚ್.ಡಿ. ದೇವೇಗೌಡ ಮತ್ತು ಶ್ರೀಮತಿ ಚನ್ನಮ್ಮನವರ ಮೂರನೆಯ ಮಗನಾಗಿ ಜನಿಸಿದರು. ದೇವೇಗೌಡರು ತಮ್ಮ ನಲವತ್ತು ವರ್ಷಗಳ ರಾಜಕೀಯ ಜೀವನದಲ್ಲಿ ವಿರೋಧಪಕ್ಷದಲ್ಲಿದ್ದುದೇ ಹೆಚ್ಚು. ಹೀಗಾಗಿ ಪಕ್ಷ ಕಟ್ಟುವ, ಜನಪರ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಕುಟುಂಬದ ಬಗ್ಗೆ ಅಷ್ಟಾಗಿ ಹೆಚ್ಚು ಗಮನ ನೀಡದಿದ್ದ ಸಂದರ್ಭದಲ್ಲಿ ಕುಟುಂಬದ ನಿರ್ವಹಣೆಯನ್ನು ಮಾತ್ರವಲ್ಲ ಮನೆಗೆ ಬಂದಂತಹ ಜನಸಾಮಾನ್ಯರಿಗೂ ಅನ್ನಪೂರ್ಣೆಯಾಗಿ ನಿಂತಿದ್ದು ಶ್ರೀಮತಿ ಚನ್ನಮ್ಮನವರು. ಕುಮಾರಸ್ವಾಮಿಗೆ ತಂದೆಗಿಂತಲೂ ತಾಯಿಯ ಆರೈಕೆ ಮಾರ್ಗದರ್ಶನವೇ ಹೆಚ್ಚು ಪ್ರಭಾವ ಬೀರಿರುವುದು ಇಲ್ಲಿ ಮುಖ್ಯವಾಗಿದೆ. ಸಹೋದರ, ಸಹೋದರಿಯರಿರುವ ತುಂಬು ಕುಟುಂಬದಲ್ಲಿ ಜೀವನ ಸಾಗಿಸಿದ ಕುಮಾರಸ್ವಾಮಿಯವರು ಎಲ್ಲರೊಂದಿಗೆ ಬಾಳ್ವೆ ಮಾಡುವುದನ್ನು ಕಲಿತರು. ತಮ್ಮ ಮನೆಯೇ ಗುರುಕುಲವಾಗಿ ತಾಯಿ ಮೊದಲ ಗುರುವಾದರು.

ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹೊಳೆನರಸೀಪುರ, ಹಾಸನದ ಸೆಂಟ್ ಜೋಸೆಫ್ಸ್ ಶಾಲೆ, ಬೆಂಗಳೂರಿನ ಎಂ.ಇ.ಎಸ್. ಶಾಲೆಯಲ್ಲಿ ವ್ಯಾಸಂಗ ಮಾಡಿ ವಿಜಯ ಕಾಲೇಜಿನಲ್ಲಿ ಪಿ.ಯು.ಸಿ ಶಿಕ್ಷಣ ಪಡೆದ ಕುಮಾರಸ್ವಾಮಿಯವರು ಅದೇ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಬಿ.ಎಸ್ಸಿ. ಪದವೀಧರರಾದರು. ಶ್ರೀಯುತರು ಬಸವನಗುಡಿ, ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಹೆಚ್. ನರಸಿಂಹಯ್ಯನವರ ನಡೆನುಡಿ ದೈನಂದಿನ ವ್ಯವಹಾರಗಳನ್ನು ಕಂಡು ಕೇಳಿದ ಕುಮಾರಸ್ವಾಮಿಯವರಿಗೆ ವಿಚಿತ್ರ ಹಾಗೂ ಚೋದ್ಯವೆನಿಸಿತು. ಆನಂತರದ ದಿನಗಳಲ್ಲಿ ತಮಗರಿವಿಲ್ಲದಂತೆ ನರಸಿಂಹಯ್ಯನವರ ಗಾಢ ಪ್ರಭಾವಕ್ಕೊಳಗಾದರು. ಅಂದಿನಿಂದ ಗುರುಹಿರಿಯರ ಬಗ್ಗೆ ತುಂಬು ಗೌರವ. ಸದಾ ಕ್ರಿಯಾಶೀಲರಾಗಿರುವ ಕುಮಾರಸ್ವಾಮಿಯವರಿಗೆ ಮೊದಮೊದಲು ರಾಜಕೀಯವು ಒಗ್ಗದ ಕಷಾಯವಾಗಿತ್ತು. ಹೀಗಾಗಿ 1987–88ರ ಸಮಯದಲ್ಲಿ ಬೆಂಗಳೂರು ಮಹಾನಗರಪಾಲಿಕೆ ಗುತ್ತಿಗೆದಾರರಾಗಿ, ನಂತರ ಕನ್ನಡ ಚಲನಚಿತ್ರ ಹಂಚಿಕೆದಾರರಾಗಿ, ಚಿತ್ರ ನಿರ್ಮಾಪಕರಾಗಿ ತಮ್ಮ ಪಾಡಿಗೆ ತಾವು ತಮ್ಮದೇ ಆದ ಉದ್ಯೋಗ ಉದ್ಯಮಕ್ಕೆ ತೊಡಗಿಸಿಕೊಂಡಿದ್ದರು.

ರಾಜಕೀಯರಂಗಕ್ಕೆ : ಈಗಾಗಲೇ ತಿಳಿಸಿರುವಂತೆ ರಾಜಕೀಯ ರಂಗ ಶ್ರೀಯುತರಿಗೆ ಒಗ್ಗದ ಕಷಾಯವಾಗಿತ್ತು. ಆದರೆ 1994ರಲ್ಲಿ ಶ್ರೀ ದೇವೇಗೌಡರು ರಾಮನಗರ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದಾಗ ಕುಮಾರಸ್ವಾಮಿಯವರಿಗೆ ಪ್ರಚಾರಕಾರ್ಯದ ಪ್ರಮುಖ ಜವಾಬ್ದಾರಿಯು ಅವರ ಹೆಗಲಿಗೆ ಬಿದ್ದಿತು. ರಾಜಕೀಯದ ಒಳಹೊರಗಿನ ಹದ ಅರಿತುಕೊಂಡು ಶ್ರೀಯುತರು ರಾಜಕೀಯಕ್ಕಿಳಿಯಲು ಇಷ್ಟು ಸಾಕಾಗಿತ್ತು. 1996ರಲ್ಲಿ ಶ್ರೀ ದೇವೇಗೌಡರು ರಾಜ್ಯದ ಮುಖ್ಯಮಂತ್ರಿಯಾದರು. ಆಗಲೂ ರಾಜಕೀಯದ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಂಡಿರ–ಲಿಲ್ಲ. ಆದರೆ ಕೆಲವೇ ದಿನಗಳಲ್ಲಿ ಕನಕಪುರ ಕ್ಷೇತ್ರವು ಚಂದ್ರಶೇಖರಮೂರ್ತಿಯವರು ದೈವಾಧೀನರಾದಾಗ ಅವರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜನತಾದಳದಿಂದ ಕುಮಾರಸ್ವಾಮಿಯವರನ್ನು ಕಣಕ್ಕಿಳಿಸಲಾಯಿತು. ಕುಮಾರಸ್ವಾಮಿಯವರ ನಯ, ವಿನಯ, ನಮ್ರತೆಯನ್ನು ಕಂಡುಕೇಳಿದ ಜನತೆ ಆ ಚುನಾವಣೆಯಲ್ಲಿ ಗೆಲ್ಲಿಸಿದರು. ಈ ಗೆಲುವು ಕುಮಾರಸ್ವಾಮಿಯವರ ದಾರಿಯನ್ನೇ ಬದಲಿಸಿತು. ಮುಂದೆ 1999ರಲ್ಲಿ ಕನಕಪುರ ಲೋಕಸಭೆ ಚುನಾವಣೆ ಮತ್ತು ಸಾತನೂರು ವಿಧಾನಸಭಾ ಕ್ಷೇತ್ರಗಳ ಚುನಾವಣೆಗಳ ಸೋಲುಂಡರು. ಹೀಗೆ ಚುನಾವಣೆಯ ಜಯಾಪಜಯಗಳಿಂದಾಗಿ ರಾಜಕಾರಣ ಅವರನ್ನು ಬಿಡಲಿಲ್ಲ ಅನಂತರ ಇವರು ಪೂರ್ಣ ರಾಜಕೀಯಕ್ಕಿಳಿದರು. 2004ರ ರಾಮನಗರ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಬಹುಮತದಿಂದ ಆಯ್ಕೆಯಾದರು. ತಂದೆಯವರ ಅಣತಿಯಂತೆ ಜನತಾದಳದ ಕಾರ್ಯಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಪಕ್ಷವನ್ನು ಕಟ್ಟುವ ಕೆಲಸವನ್ನು

ವಾಡತೊಡಗಿದರು. ಬಾಲಕನಾಗಿದ್ದಾಗ ತಾಯಿಯು ಗುರುವಾಗಿದ್ದರೆ ರಾಜಕೀಯಕ್ಕಿಳಿದ ಮೇಲೆ ತಂದೆಯವರಾದ ದೇವೇಗೌಡರು ಮಾರ್ಗದರ್ಶಕರಾಗಿ, ಸ್ನೇಹಿತರಾಗಿ, ಮಗನನ್ನು ಮುನ್ನಡೆಸುತ್ತಾ ಬಂದರು. ರಾಜಕೀಯದ ವರಸೆಗಳನ್ನು, ಪಟ್ಟುಗಳನ್ನು ಮಗನಿಗೆ ಧಾರೆ ಎರೆಯುತ್ತಾ ಬಂದರು.

ಮುಖ್ಯಮಂತ್ರಿಯಾಗಿ ಕುಮಾರಸ್ವಾಮಿ : ಈಗಾಗಲೇ ತಿಳಿಸಿರುವಂತೆ 3.2.2006ರಂದು ರಾಜ್ಯದ 21ನೆಯ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ –ದರು. ಮುಖ್ಯಮಂತ್ರಿ ಹುದ್ದೆಯು ಹೊರನೋಟಕ್ಕೆ ತುಂಬಾ ನಾಜೂಕಾಗಿ ಕಾಣುವುದು. ಆದರೆ ಈ ಹುದ್ದೆಯಲ್ಲಿದ್ದವರಿಗೇ ಅದರ ಕಷ್ಟ ತಿಳಿಯುವುದು. ಈ ಮೊದಲು ರಾಜ್ಯದ ಮುಖ್ಯಮಂತ್ರಿಯಾಗಿ ಹೆಸರುಗಳಿಸಿದ ಎಸ್.ಎಂ. ಕೃಷ್ಣರಿಗೆ ಶಾಸನ ಸಭೆಯಲ್ಲಿ ಬಹುಮತವಿತ್ತು ಹಾಗೂ ಹೈಕಮಾಂಡ್ ಎಂಬ ಸೂತ್ರವಿತ್ತು. ಆದರೆ ರಾಜ್ಯ ರಾಜಕೀಯದಲ್ಲಿ ಕುಮಾರಸ್ವಾಮಿಯವರು ತೆಗೆದುಕೊಂಡ ನಿರ್ಣಯ ರಾಷ್ಟ್ರದಾದ್ಯಂತ ದೊಡ್ಡ ಸುದ್ದಿಯಾಯಿತು. ಅದೇನೆಂದರೆ ರಾಷ್ಟ್ರಯ ಪಕ್ಷವಾದ ಜನತಾದಳ ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಪಕ್ಷಗಳನ್ನು ಸಮಾನಂತರ ದೂರವಿಟ್ಟುದ್ದು ಇಡೀ ದೇಶಕ್ಕೆ ತಿಳಿದ ವಿಷಯವಾಗಿತ್ತು. ಆದರೆ ರಾತ್ರೋರಾತ್ರಿ ಜನತಾದಳದ ಶಾಸಕರ ಬೆಂಬಲ ಮತ್ತು ಪ್ರೋತ್ಸಾಹದಿಂದ ಬಿ.ಜೆ.ಪಿ.ಯೊಂದಿಗೆ ಕೈಜೋಡಿಸುವ ಮೂಲಕ ಅಚ್ಚರಿ ಮೂಡಿಸಿದರು. ಇದು ದೇಶದಾದ್ಯಂತ ದೊಡ್ಡ ಸುದ್ದಿಯಾಯಿತು. ದೇವೇಗೌಡರಿಗೆ ಬಿಸಿ ತುಪ್ಪವಾಯಿತು. ತಂದೆಯವರನ್ನು ಎದುರು ಹಾಕಿಕೊಳ್ಳುವ ಸಂದರ್ಭ ಒದಗಿ ಬಂದಿತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿಯಾಗಿ ಸಂದರ್ಭ ಮತ್ತು ಸನ್ನಿವೇಶವನ್ನು ಜಾಣ್ಮೆಯಿಂದ ನಿಭಾಯಿಸಿದ್ದಾರೆ.

ರಾಜಕೀಯದಲ್ಲಿ ಹೆಚ್ಚಿನ ಅನುಭವವಿಲ್ಲದ, ವಯಸ್ಸಿನಲ್ಲೂ ಕಿರಿಯರಾದ ಕುಮಾರಸ್ವಾಮಿಯವರು ರಾಜ್ಯದ ಭರವಸೆಯ ರಾಜಕಾರಣಿ ಎಂದು ಹೇಳಿದ್ದು ಇದೇ ಕಾರಣಕ್ಕೆ.

ಗ್ರಾಮಗಳಲ್ಲಿ ಒಂದು ಬಗೆಯ ಸಮಸ್ಯೆಯಾದರೆ ನಗರಗಳಲ್ಲಿ ನಾನಾ ಬಗೆಯ ಸಮಸ್ಯೆಗಳು ಎದುರಾದವು. ಕುಮಾರಸ್ವಾಮಿಯನ್ನು ಜನತೆ ಈ ಮೊದಲು ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದ ಎಸ್.ಎಂ. ಕೃಷ್ಣರೊಂದಿಗೆ ಹೋಲಿಸಿ ನೋಡ ತೊಡಗಿದರು. ಕೃಷ್ಣಾರವರು ರಾಜ್ಯದ ನುರಿತ ರಾಜಕಾರಣಿ, ಅವರೊಂದಿಗೆ ಹೋಲಿ–ಸುವುದು ತರವಲ್ಲ. ಇಲ್ಲಿ ವಯಸ್ಸು ಮತ್ತು ಅನುಭವಕ್ಕಿಂತಲೂ ಹೆಚ್ಚಾಗಿ ತಮ್ಮ ಪಕ್ಷದ ಶಾಸಕರೇ ಅಲ್ಲದೆ ಬೇರೊಂದು ಪಕ್ಷದೊಡನೆ ಆಡಳಿತವನ್ನು ಸರಿದೂಗಿಸಿಕೊಂಡು ಹೋಗುವುದು ಕಷ್ಟಕರವಾದ ವಿಚಾರ ಇಷ್ಟೇ ಅಲ್ಲದೆ ನಾಡಿನ ಜನತೆ ಅದರಲ್ಲೂ ವಿಶೇಷವಾಗಿ ಯುವಕರು ಕುಮಾರಸ್ವಾಮಿಯವರಿಂದ ಬಹುವಾಗಿ ನೀರೀಕ್ಷಿಸಿದ್ದಾರೆ.

ಕೃಷಿಗೆ ಆದ್ಯತೆ : ಕುಮಾರಸ್ವಾಮಿ ತಂದೆಯವರಂತೆ ತಾವೂ ಕೃಷಿಗೆ ಹೆಚ್ಚಿನ ಆದ್ಯತೆ ನೀಡಿದರು. ರೈತರ ಕಷ್ಟಕಾರ್ಪಣ್ಯಗಳನ್ನು ಅರ್ಥ ಮಾಡಿಕೊಂಡಿದ್ದ ಶ್ರೀಯುತರು ಡಾ. ನಂಜುಡಪ್ಪ ವರದಿ, ಈ ಮೊದಲು ಕೃಷಿ ಸಚಿವರಾಗಿದ್ದ ಸಿ. ಬೈರೇಗೌಡರ ವರದಿಯನ್ನು ಜಾರಿಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದು ಇವರು ಕೃಷಿಗೆ ಆದ್ಯತೆ ನೀಡಿರುವುದು ಹಾಗೂ ನೀಡುತ್ತಿರುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಇಷ್ಟೇ ಅಲ್ಲದೆ ರಾಷ್ಟ್ರಪತಿಗಳಾದ ಎ.ಪಿ.ಜೆ. ಅಬ್ದುಲ್ ಕಲಾಂರವರು ಸೂಚಿಸಿರುವ ಹನ್ನೊಂದು ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆ ತರಲು ಕ್ರಮ ತೆಗೆದುಕೊಂಡಿರುವುದನ್ನು ನೋಡಬಹುದು. ಈ ಹಿಂದಿನ ಸರ್ಕಾರಗಳು ನೇಮಿಸಿದ ಕೃಷಿ ತಜ್ಞರ ವರದಿಗಳನ್ನು ಅನುಷ್ಠಾನಕ್ಕೆ ತಂದದ್ದು, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೇವಲ ಶೇ.4ರಷ್ಟು ಬಡ್ಡಿದರವನ್ನು ನಿಗದಿ ಮಾಡಿ ಕೃಷಿ ಸಾಲ ಸೌಲಭ್ಯವನ್ನು ಮಾಡಿಕೊಟ್ಟು ವಾಣಿಜ್ಯ ಬ್ಯಾಂಕುಗಳ, ಬಂಡವಾಳ ಷಾಹಿಗಳ, ಮಾರ್ವಾಡಿಗಳ ಕಪಿಮುಷ್ಠಿಯಿಂದ ರೈತರನ್ನು ಪಾರುಮಾಡುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಂಡಿದ್ದು. ಮಾರ್ವಾಡಿಗಳು ಇಲ್ಲವೆ ಬಂಡವಾಳಷಾಹಿಗಳು ರೈತರಿಗೆ ಹೆಚ್ಚಿನ ಬಡ್ಡಿಯ ಮೇಲೆ ಹಣ ನೀಡಿ ತೊಂದರೆ ನೀಡುವಂತಹ ವ್ಯಕ್ತಿಗಳು ಇಲ್ಲವೆ ಸಂಘ ಸಂಸ್ಥೆಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಇಲ್ಲವೆ ಅಂತಹ ವ್ಯಕ್ತಿಗಳನ್ನು ಜೈಲಿಗೆ ಕಳುಹಿಸುವುದಾಗಿ ಘೋಷಣೆ ಮಾಡಲಾಗಿ ಬಂಡವಾಳಷಾಹಿಗಳು ಬೆಚ್ಚಿಬಿದ್ದರು. ಕೃಷಿ ಸಲಕರಣೆಗಳಿಗೆ ಸಾಲ, ಸೌಲಭ್ಯ ನೀಡುವುದೇ ಅಲ್ಲದೆ ರಿಯಾಯಿತಿ ದರದಲ್ಲಿ ಅವುಗಳನ್ನು ಖರೀದಿ ಮಾಡಲು ಅವಕಾಶ ಮಾಡಿಕೊಟ್ಟದ್ದು ಕುಮಾರಸ್ವಾಮಿಯವರ ರೈತಪರ ಕಾಳಜಿಯ ಸಂಕೇತವಾಗಿದೆ. ಶ್ರೀ ಹೆಚ್.ಡಿ. ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ಹನಿ ನೀರಾವರಿ ಬಯಸುವ ರೈತರಿಗೆ ಅದರಲ್ಲೂ ವಿಶೇಷವಾಗಿ ಕೃಷಿ ಭೂಮಿಯು ಮಹಿಳೆಯ ಹೆಸರಿನಲ್ಲಿದ್ದರೆ ಅಂತಹ ಜನರಿಗೆ ಶೇ.100 ರಿಯಾಯ್ತಿ ನೀಡಿದ್ದು ಇಂದು ಇತಿಹಾಸವಾಗಿದೆ.

ಕುಮಾರಸ್ವಾಮಿಯವರು ಇತ್ತೀಚೆಗೆ ತೆಗೆದುಕೊಂಡ ಬಹಳ ಒಳ್ಳೆಯ ಹಾಗು ಬಹಳಷ್ಟು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ರೈತರ ಸಾಲಮನ್ನಾದ ನಿರ್ಣಯ. ರೈತರು ವರ್ತಕರಂತೆ ಲಾಭದ ಹುದ್ದೆಯನ್ನು ಕೈಗೊಂಡಿಲ್ಲ. 'ಬೇಸಾಯ ನೀ ಸಾಯ' ಎನ್ನುವಂತೆ ಎತ್ತುಗಾಡಿಗೆ, ಟ್ರಾಕ್ಟರ್ ಮತ್ತು ಟಿಲ್ಲರ್ ಕೊಳ್ಳಲು, ಇಲ್ಲವೆ ಬೆಳೆ ತೆಗೆಯಲು ಸಾಕಷ್ಟು ಖರ್ಚಾಗುತ್ತದೆ. ಅದಕ್ಕಾಗಿ ಬ್ಯಾಂಕ್‌ಗಳಲ್ಲಿ ಇಲ್ಲವೆ ಬಂಡವಾಳ ಶಾಹಿಗಳಿಂದ ಸಾಲ ಸೋಲ ಮಾಡಿ ಹಣ ತಂದಿರುತ್ತಾರೆ. ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಕ್ಕದಿದ್ದರೆ, ನುಸೀಪೀಡೆ, ಬೆಂಕಿರೋಗ ಇವೇ ಮುಂತಾದ ಕಾಯಿಲೆಗಳಿಂದ ಬೆಳೆ ನಾಶವಾದರೆ ರೈತರು ಬ್ಯಾಂಕಿನಿಂದ ತಂದಿದ್ದ ಹಣವನ್ನು ಹಿಂತುರಿಗಿಸಲಾಗದೆ ಪೇಚಿಗೆ ಸಿಲುಕುತ್ತಾರೆ. ಇಷ್ಟಾದರೂ ಧೃತಿಗೆಡದೆ ಮುಂದೆ ಉತ್ತಮವಾದ ಫಸಲು

ಬರಬಹುದೆಂಬ ನೀರೀಕ್ಷೆಯಲ್ಲಿ ಮಾರ್‍ವಾಡಿಗಳು ಇಲ್ಲವೆ ಬಂಡವಾಳ ಷಾಹಿಗಳಿಂದ ಮತ್ತೆ ಸಾಲ ಮಾಡಿ ವ್ಯವಸಾಯವೆಂಬ ಜೂಜಿಗೆ ಇಳಿಯುತ್ತಾರೆ. ಆದರೆ ಎರಡನೆಯ ಭಾರಿ ನೀರೀಕ್ಷೆಯಂತೆ ಉತ್ತಮ ಬೆಳೆ ತೆಗೆಯುವಲ್ಲಿ ವಿಫಲನಾದರೆ ಬಡ್ಡಿಗೆ ಬಡ್ಡಿ ಚಕ್ರಬಡ್ಡಿಯಾಗಿ ರೈತ ಕಂಗಾಲಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಇತ್ತೀಚಿನ ದಿನಗಳಲ್ಲಿ ಸರ್ವೇ ಸಾಮಾನ್ಯವಾಗಿದೆ. ಭಾರತದಾದ್ಯಂತ ನೂರಾರು ರೈತರು ಆತ್ಮಹತ್ಯೆಗೆ ಶರಣಾಗಿರುವುದನ್ನು ಮಾಧ್ಯಮಗಳಿಂದ ನಾವು ಕಂಡು ಕೇಳಿದ್ದೇವೆ. ಹೀಗೆ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ರೈತರ ಸಾಲಮನ್ನಾವನ್ನು ಘೋಷಿಸಿರುವುದು ಕುಮಾರಸ್ವಾಮಿಯವರ ರಾಜಕೀಯ ಬದುಕಿಗೆ ಒಂದು ಸವಾಲಾಗಿದೆ. ಸಾಲ ಮನ್ನಾ ಮಾಡಿದ ನಂತರ ಇಷ್ಟೊಂದು ಕೋಟಿ ರೂಪಾಯಿಯನ್ನು (1,400 ಕೊಟಿ) ಹೇಗೆ ಭರಿಸುತ್ತೇವೆ ಎಂದೂ ಕೂಡಾ ತಿಳಿಸಿದರು. ಅದೇನೆಂದರೆ ಕೃಷಿ ಭೂಮಿ ಇಲ್ಲವೆ ಹಸಿರು ಪಟ್ಟಿಗೆ ಸೇರಿರುವ ಜಮೀನನ್ನು ರೈತರಿಂದ ಕಡಿಮೆ ಬೆಲೆಗೆ ಖರೀದಿಸಿ ಲೇ ಔಟ್‍ಗಳನ್ನು ನಿರ್ಮಾಣ ಮಾಡುವ ದಂಧೆಯಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಕಬಂಧ ಬಾಹುಗಳನ್ನು ಚಾಚಿದ್ದಾರೆ. ಹೀಗೆ ಕೃಷಿ ಭೂಮಿಯನ್ನು ವಶಕ್ಕೆ ತೆಗೆದುಕೊಂಡು ಇಲ್ಲವೆ ಬಹಿರಂಗ ಹರಾಜಿನ ಮೂಲಕ ಆ ಭೂಮಿಯನ್ನು ಪರಭಾರೆ ಮಾಡಿ ಬಂದಂತಹ ಹಣದಿಂದ ರೈತರ ಸಾಲಮನ್ನಾ ಮಾಡುವುದಾಗಿ ಘೋಷಿಸಿದ್ದಾರೆ. ಮುಂದಿನ ಫಲಾಫಲಗಳು ಸರ್ಕಾರಕ್ಕೆ ಬಿಟ್ಟಿದ್ದು.

ಕೃಷಿಯೂ ಅಲ್ಲದೆ ಹೈನುಗಾರಿಕೆಗೂ ಅಷ್ಟೇ ಪ್ರೋತ್ಸಾಹ ಕೊಡುತ್ತಿರುವುದು, ರೈತರ ಕೃಷಿ ಉತ್ಪನ್ನಗಳಿಗೆ ಉತ್ತಮವಾದ ಮಾರುಕಟ್ಟೆ ಒದಗಿಸುವುದು ಮತ್ತೊಂದು ಉತ್ತಮವಾದ ಯೋಜನೆಯೇ ಸರಿ. ರಸಗೊಬ್ಬರಗಳ ದಾಸ್ತಾನಿಗೆ ಆವರ್ತನಿಧಿ ಸ್ಥಾಪನೆ, ಯಾಂತ್ರೀಕರಣ ಕೃಷಿಗೆ 30 ಕೋಟಿ ರೂ. ನೀಡಿದ್ದು, ಇಷ್ಟೇ ಅಲ್ಲದೆ ಉತ್ತರ ಕರ್ನಾಟಕದ ರೈತರ ಅನುಕೂಲಕ್ಕಾಗಿ ಬಿಜಾಪುರ ಜಿಲ್ಲೆಯ ದ್ರಾಕ್ಷಿ ಬೆಳೆಗಾರರ ಅನುಕೂಲಕ್ಕಾಗಿ ದ್ರಾಕ್ಷಾರಸ ಘಟಕ ಸ್ಥಾಪನೆ ಮಾಡಿ ಆ ಭಾಗದ ರೈತರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ಕಾರಣವೇನೆಂದರೆ ದ್ರಾಕ್ಷಿ ಬೆಲೆಯು ವಾರ್ಷಿಕ ಬೆಳೆಯಾಗಿದ್ದು ದೇಶದಾದ್ಯಂತ ಒಂದೇ ಸಲ ಬೆಳೆ ಬಂದು ಬೆಲೆಗೆ ಸರಿಯಾದ ಬೆಲೆ ಸಿಕ್ಕುತ್ತಿರಲಿಲ್ಲ. ಆದರೆ ಈ ಘಟಕ ಸ್ಥಾಪನೆಯಿಂದಾಗಿ ಬಹಳಷ್ಟು ಅನುಕೂಲ -ವಾಗಿದೆ. ಇಷ್ಟೇ ಅಲ್ಲದೆ ಕೃಷಿ ಇಲಾಖೆಯಲ್ಲಿ ಖಾಲಿಯಿದ್ದ 700 ಹುದ್ದೆಗಳನ್ನು ಭರ್ತಿ ಮಾಡಿ ಕೃಷಿ ಇಲಾಖೆಯು ಸರಿಯಾಗಿ ಕೆಲಸ ಮಾಡುವಂತೆ ಮಾಡಿದ್ದು.

ಗ್ರಾಮ ವಾಸ್ತವ್ಯ : ಕುಮಾರಸ್ವಾಮಿಯವರು ಇತ್ತೀಚಿನ ದಿನಗಳಲ್ಲಿ ಹಳ್ಳಿಗಳಲ್ಲಿ ವಾಸ್ತವ್ಯ ಹೂಡುತ್ತಿರುವುದನ್ನು ಕೆಲವು ರಾಜಕಾರಣಿಗಳು ಕುಹಕವಾಡುತ್ತಿದ್ದಾರೆ. ನಿಜಕ್ಕೂ ಇದು ಎಲ್ಲಾ ಆಡಳಿತಗಾರರು ಮತ್ತು ಮಂತ್ರಿಗಳಿಗೆ ಮುಂದೆ ಬರುವ

ಮುಖ್ಯಮಂತ್ರಿಗಳಿಗೂ ಮಾದರಿಯಾಗಿದೆ. ಕಾರಣವೇನೆಂದರೆ ಅಧಿಕಾರಿಗಳು, ಶಾಸಕರಿಗೆ ಹಳ್ಳಿಗಳೆಂದರೆ ಅಲರ್ಜಿ ಆದರೆ ಅವರು ಬೆಳೆಯುವ ಬೆಳೆ, ಹಾಲು ಇತ್ಯಾದಿ ಅವಶ್ಯಕವಾಗಿದೆ. ರಾಜಕಾರಣಗಳಿಗೆ ಅವರ ಓಟು ಅತ್ಯಮೂಲ್ಯ ಆದರೆ ಅಲ್ಲಿ ವಾಸ್ತವ್ಯ ಹೂಡಲು ಎಲ್ಲರೂ ಹಿಂಜರಿಯುತ್ತಾರೆ. ಈ ಕೆಲಸವನ್ನು ಮುಖ್ಯಮಂತ್ರಿಯಾದ ನಾನೇ ಮೊದಲು ಮಾಡಬೇಕು, ಮಾದರಿಯಾಗಬೇಕು ಎಂಬ ಕಾರಣದಿಂದ ವಾಸ್ತವ್ಯ ಹೂಡಿ ಅಲ್ಲಿನ ಪರಿಸ್ಥಿತಿಯನ್ನು ಅರ್ಥಮಾಡಿ ಕೊಳ್ಳುತ್ತಿರುವುದು ಎಲ್ಲರೂ ಮೆಚ್ಚು ವಂತದಾಗಿದೆ.

ಕುಮಾರಸ್ವಾಮಿ ಬೆಂಗಳೂರಿನಲ್ಲಿದ್ದಾಗ ಜನತಾದರ್ಶನವನ್ನು ಏರ್ಪಡಿಸಿ ತಮ್ಮಲ್ಲಿಗೆ ಬರುವ ಜನರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸುತ್ತಿರುವುದು ಸರಿಯಷ್ಟೇ. ಆದರೆ ಇದು ಹೊಸದೇನು ಅಲ್ಲ. ಕೆಲವಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಆದರೆ ಅದನ್ನು ನಿಲ್ಲಿಸದೆ ವ್ಯವಸ್ಥಿತವಾಗಿ ಮುಂದುವರೆಸಿಕೊಂಡು ಬಂದು ತಮ್ಮ ಕೈಲಾದ ಸಹಾಯ ಮಾಡುತ್ತಿರುವುದು, ಶಾಲೆಗಳಲ್ಲಿ ಓದುತ್ತಿರುವ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಉಚಿತವಾಗಿ ಸೈಕಲ್ ವಿತರಣೆ ಮಾಡಿದ್ದು, ನಂತರ ಬಾಲಕರಿಗೂ ವಿತರಣೆ ಮಾಡುತ್ತಿರುವುದು ಕುಮಾರಸ್ವಾಮಿಯವರು ಜಾರಿಗೆ ತಂದಿರುವ ವಿನೂತನ ಕಾರ್ಯಕ್ರಮ.

ಬೆಂಗಳೂರು ವಿಶ್ವದ ಐ.ಟಿ.ಬಿ.ಟಿ. ಕೇಂದ್ರವಾಗಿರುವುದು, ಆಗುತ್ತಿರುವುದು ಸರಿಯಷ್ಟೆ. ಮಾಹಿತಿತಂತ್ರಜ್ಞಾನದ ದೈತ್ಯ ಕಂಪನಿಗಳಾದ ಇನ್‌ಫೋಸಿಸ್, ವಿಪ್ರೊ ಸೇರಿದಂತೆ ಇಂತಹ ಕಂಪನಿಗಳಿಗೆ ಸೂಕ್ತ ಅನುಕೂಲಗಳನ್ನು ಮಾಡಿಕೊಟ್ಟು ಅವುಗಳ ಬೆನ್ನು ತಟ್ಟುವುದು, ಮುಖ್ಯವಾಗಿ ರಸ್ತೆಗಳ ನಿರ್ಮಾಣ, ಮೇಲುಸೇತುವೆಗಳ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ನಾಗರಿಕ ಸೌಲಭ್ಯ ಒದಗಿಸುವುದರ ಮೂಲಕ ಪೂರಕವಾಗಿ ಐ.ಟಿ.ಬಿ.ಟಿ ಕೇಂದ್ರಗಳು ಬೆಳೆಯಲು ಅನುಕೂಲಮಾಡಿ ಕೊಡುತ್ತಿರುವುದು ಸ್ತುತ್ಯಾರ್ಹವಾದ ವಿಷಯವಾಗಿದೆ.

ಬೆಳಗಾವಿ ಅಧಿವೇಶನ : ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯಿಂದಾಗಿ ಬೆಳಗಾವಿ ಕರ್ನಾಟಕಕ್ಕೆ ವಿಧ್ಯುಕ್ತವಾಗಿ ಸೇರಿತು. ಆದರೆ ಮಹಾರಾಷ್ಟ್ರ ಏಕೀಕರಣ ಸಂಘ (ಎಂ.ಇ.ಎಸ್) ಎಂಬ ಸಂಘವನ್ನು ಕಟ್ಟಿಕೊಂಡು ಕೆಲವು ಪಟ್ಟಭದ್ರ ಹಿತಾಸಕ್ತಿ –ಗಳು ಅಲ್ಲಿನ ಸ್ಥಳೀಯ ಸಂಸ್ಥೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಇಡೀ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಒತ್ತಾಯ ನಡೆಸುತ್ತಾ ಬಂದಿರುವುದು ಇದುವರೆಗಿನ ಎಲ್ಲಾ ಸರ್ಕಾರಗಳಿಗೂ ದೊಡ್ಡ ಸಮಸ್ಯೆಯಾಗಿದ್ದುದು ಎಲ್ಲರಿಗೂ ತಿಳಿದ ವಿಷಯ. ಈ ರೀತಿಯ ಪ್ರಾದೇಶಿಕ ಅಸಮತೋಲವನ್ನು ತೆಗೆದುಹಾಕುವ ಉದ್ದೇಶದಿಂದ ಮುಂದಿನ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಅಧಿವೇಶವನ್ನು ಬೆಳಗಾವಿಯಲ್ಲಿ

ನಡೆಸುವುದಾಗಿ ಘೋಷಿಸಿಯೇ ಬಿಟ್ಟರು. ಅದಕ್ಕೆ ತಗುಲಬಹುದಾದ ಖರ್ಚು, ವೆಚ್ಚ, ಇಂತಹ ಜಂಟಿ ಅಧಿವೇಶವನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಲು ಬರು-ವರೆ ಇಲ್ಲವೆ ಇಲ್ಲವಾದರೆ ಆಗಬಹುದಾದ ಸಾಂವಿಧಾನಿಕ ಬಿಕ್ಕಟ್ಟು ಇವೇ ಮುಂತಾದ ವಿಷಯಗಳ ಬಗ್ಗೆ ಮಾಧ್ಯಮಗಳು ಕಾಲಕಾಲಕ್ಕೆ ವರದಿ ಮಾಡುತ್ತಾ ಬಂದವು. ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ಹಿರಿಯರ ಮಾರ್ಗದರ್ಶನ ಹಾಗೂ ಪ್ರೋತ್ಸಾಹದ ಮೇರೆಗೆ ಬೆಳಗಾವಿಯಲ್ಲಿ ಅಧಿವೇಶನ ನಡೆಸುವುದರ ಮೂಲಕ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾದರೂ ಯಾರೂ ಮಾಡದಿದ್ದ ಸಾಹಸವನ್ನು ಮಾಡಿ ಹಿರಿಯ ರಾಜಕಾರಣಿಗಳು ಹುಬ್ಬೇರಿಸುವಂತೆ ಮಾಡಿದುದು ಈಗ ಇತಿಹಾಸವಾಗಿದೆ.

ಅನುಸಂಕಟಗಳು : ಕುಮಾರಸ್ವಾಮಿಯವರು ತಮ್ಮ ಕುಟುಂಬದಲ್ಲಿ ಕಿರಿಯ-ವರು (ದೇವೇಗೌಡರ ಮೂರನೆಯ ಮಗ) ರಾಜ್ಯ ರಾಜಕೀಯದಲ್ಲಿ ಬಹಳ ಚಿಕ್ಕವರು. ವಯಸ್ಸು ಮತ್ತು ಅನುಭವದ ಕೊರತೆ ಅವರು ಎಷ್ಟೇ ಬುದ್ಧಿವಂತರಾದರು ಮುಂದಾ-ಲೋಚನೆ, ಯೋಜನೆಗಳಿದ್ದರೂ, ಹೊರಪ್ರಪಂಚಕ್ಕೆ ಅತಿ ಚಿಕ್ಕವರೆಂಬ ಭಾವನೆ ಬರುತ್ತದೆ. ಇಷ್ಟೇ ಅಲ್ಲದೆ ದೇವೇಗೌಡ, ರೇವಣ್ಣ, ಕುಮಾರಸ್ವಾಮಿ ಇವರುಗಳೆಲ್ಲ ಒಂದೇ ಕುಟುಂಬದವರು. ಕುಟುಂಬ ರಾಜಕಾರಣ ಮಾಡುತ್ತಿದ್ದಾರೆ ಇತ್ಯಾದಿಯಾಗಿ ಹೇಳುತ್ತಿ-ರುವುದು ಸರ್ವೇ ಸಾಮಾನ್ಯವಾಗಿದೆ. ಆದರೆ ಹರಿಯಾಣದ ದೇವಿಲಾಲ ಪುತ್ರ ಚೌತಾಲ ಹರಿಯಾಣದ ಮುಖ್ಯಮಂತ್ರಿಯಾಗಿದ್ದರು. ಲಾಲುಪ್ರಸಾದ್ ಯಾದವ್ ರವರ ಪತ್ನಿ ಶ್ರೀಮತಿ ರಾಬ್ಡಿದೇವಿಯವರು ಬಿಹಾರದ ಮುಖ್ಯಮಂತ್ರಿಯಾದರು, ಕಾಶ್ಮೀರದ ಮುಖ್ಯ-ಮಂತ್ರಿಯಾಗಿದ್ದ ಫಾರುಕ್ ಅಬ್ದುಲ್ಲರ ಪುತ್ರ ಷೇಕ್ ಅಬ್ದುಲ್ಲಾ ಕಾಶ್ಮೀರದ ಮುಖ್ಯ-ಮಂತ್ರಿಯಾಗಿದ್ದರು. ಒರಿಸ್ಸಾದ ಮುಖ್ಯಮಂತ್ರಿಯಾಗಿದ್ದ ಬಿಜು ಪಾಟ್ನಾಯಕ್ ಪುತ್ರ ನವೀನ್ ಪಟ್ನಾಯಕ್ ಒರಿಸ್ಸಾದ ಮುಖ್ಯಮಂತ್ರಿಯಾದರು. ಅಷ್ಟೇ ಏಕೆ ಜವಹರ್‌ಲಾಲ್ ನೆಹರು ನಂತರ ಅವರ ಪುತ್ರಿ ಶ್ರೀಮತಿ ಇಂದಿರಾಗಾಂಧಿ, ನಂತರ ಅವರ ಮಗ ರಾಜೀವ್ ಗಾಂಧಿ ಇಷ್ಟೇ ಅಲ್ಲದೆ ಅವರ ಪತ್ನಿ ಶ್ರೀಮತಿ ಸೋನಿಯಾ ಗಾಂಧಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿರುವುದು ಇವೇ ಮುಂತಾದ ಒಂದೇ ಕುಟುಂಬದಲ್ಲಿ ಅಪ್ಪ, ಮಕ್ಕಳು ಮುಖ್ಯಮಂತ್ರಿಯಾಗಿದ್ದನ್ನು ಪ್ರಶ್ನಿಸದ ವಿರೋಧ ಪಕ್ಷದವರು ದೇವೇಗೌಡರನ್ನು ಬಯಲಿಗೆಳೆಯುತ್ತಿರುವುದು ಸರಿಯಲ್ಲ. ಇದು ಪ್ರಜಾಪ್ರಭುತ್ವ ರಾಷ್ಟ್ರ ಪ್ರಜೆಗಳೇ ಪ್ರಭುಗಳು, ದಣಿಗಳು, ದಾತರು ಭವಿಷ್ಯತ್ ನಿರ್ಣಯಾಧಿಕಾರಿಗಳೆಂದು ವಿರೋಧಿಗಳು ಈ ಸೂಕ್ಷ್ಮವನ್ನರಿತುಕೊಂಡು ಮಾತನಾಡಬೇಕು.

2018ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಬಹುಮತ ಬರಲಿಲ್ಲ. ಬಿ.ಜೆ.ಪಿ. ಪಕ್ಷವನ್ನು ಅಧಿಕಾರದಿಂದ ಹೊರಗಿಂಡಬೇಕು ಎಂಬ ಉದ್ದೇಶದಿಂದ ಕಾಂಗ್ರೆಸ್ ಪಕ್ಷವು ಜನತಾ ದಳದ ವರಿಷ್ಠರಾದ ಹೆಚ್.ಡಿ. ದೇವೇಗೌಡ

ಮತ್ತು ಕುಮಾರಸ್ವಾಮಿಯವರನ್ನು ಭೇಟಿ ಮಾಡಿ ಬೇಷರತ್ತಿಲ್ಲದೆ ದಳಕ್ಕೆ ಬೆಂಬಲ ಘೋಷಿಸಿದರು. ಅದರಂತೆ ಹೆಚ್.ಡಿ. ಕುಮಾರಸ್ವಾಮಿಯವರು 2018ರಲ್ಲಿ ಎರಡನೆ ಬಾರಿಗೆ ಮುಖ್ಯಮಂತ್ರಿಗಳಾದರು. ರೈತರ ಸಾಲಮನ್ನಾ ಮಾಡಲು ವಿಫಲ ಪ್ರಯತ್ನ ಮಾಡಿದರು. ಕಾಂಗ್ರೆಸ್ ಮತ್ತು ಜನತಾದಳ ಪಕ್ಷಗಳ ಶಾಸಕರನ್ನು ಒಗ್ಗೂಡಿಸಿಕೊಂಡು ಹೋಗಲು ಸಾಕಷ್ಟು ಪ್ರಯತ್ನಿಸಿದರು. ಇದೇ ಸಮಯಕ್ಕೆ ಬಿ.ಜೆ.ಪಿ. ಪಕ್ಷವು ಆಪರೇಷನ್ ದಳ ಮತ್ತು ಆಪರೇಷನ್ ಕಾಂಗ್ರೆಸ್ ಮಾಡಿ 15 ಜನ ರಾಜಿನಾಮೆ ನೀಡುವಂತೆ ಮಾಡಿ ಸಮ್ಮಿಶ್ರ ಸರ್ಕಾರವನ್ನು ಬೀಳಿಸಿದರು. ಇದರಿಂದಾಗಿ ಕುಮಾರಸ್ವಾಮಿಯವರು ಮುಖ್ಯಮಂತ್ರಿ ಪದವಿಗೆ ರಾಜಿನಾಮೆ ನೀಡಿದರು.

ಹೀಗೆ ಕುಮಾರಸ್ವಾಮಿಯವರು ತಮ್ಮ ನಲವತ್ತಾರನೆಯ ವಯಸ್ಸಿನಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದು ಭರವಸೆಯ ನಾಯಕರಾಗಿ ಹೊರಹೊಮ್ಮಿದರು. ಈ ಮೊದಲು ಕೆಲವು ವ್ಯಕ್ತಿಗಳು ಎರಡು ವರ್ಷದಿಂದ ನಾಲ್ಕು ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿದ್ದು ಏನೇನೂ ಸಾಧನೆ ಮಾಡದೆ (ಹೆಸರು ಹೇಳುವ ಅಗತ್ಯವಿಲ್ಲ) ಕಾಲ ತುಂಬಿಸಿದ ಉದಾಹರಣೆಗಳನ್ನು ನೋಡಿದರೆ ಕುಮಾರಸ್ವಾಮಿಯವರಿಗೆ ಸಿಕ್ಕಿರುವ ಇಪ್ಪತ್ತು ತಿಂಗಳ ಅಧಿಕಾರದ ಅವಧಿಯಲ್ಲಿ ತಮ್ಮ ಕೈಲಾದ ಸಾಧನೆಗಳನ್ನು ಮಾಡಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ



ರಾಜಕೀಯ ಏರುಪೇರಿನಲ್ಲಿ ಅದರಲ್ಲೂ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮಾಡಿಕೊಟ್ಟ ಅವಕಾಶದಿಂದ ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷ ಅಸ್ತಿತ್ವಕ್ಕೆ ಬಂದಿತು. ಈ ಮೊದಲು ಕರ್ನಾಟಕದಲ್ಲಿ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾದಳ ಪಕ್ಷಗಳು ಮಾತ್ರ ಅಸ್ತಿತ್ವದಲ್ಲಿದ್ದವು. ಕರ್ನಾಟಕದಲ್ಲಿ ರಾಜಕೀಯ ಅಸ್ಥಿರತೆಯಾಯಿತು. ಬಿ.ಜೆ.ಪಿ.ಗೆ ಅಪರೂಪಕ್ಕೆ ಸಿಕ್ಕ ಅವಕಾಶವನ್ನು ದಕ್ಕಿಸಿಕೊಂಡು ಹೋಗಬೇಕಾದ ಅನಿವಾರ್ಯ ಪರಿಸ್ಥಿತಿ ಬಂದೊದಗಿದಾಗ ಪಕ್ಷವು ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಯಡಿಯೂರಪ್ಪನವರನ್ನು ಕೆಳಗಿಳಿಸಿ ಆ ಸ್ಥಾನಕ್ಕೆ ಸದಾನಂದಗೌಡರನ್ನು 2011–12ರಲ್ಲಿ ರಾಜ್ಯದ ಮುಖ್ಯಮಂತ್ರಿಯನ್ನಾಗಿ ಮಾಡಿತು.

ಬೃಹತ್ ಸಮಾರಂಭವೊಂದರಲ್ಲಿ ಸದಾನಂದಗೌಡರೇ ಹೇಳಿದಂತೆ "ನನಗೆ ಯಾವ ಯಾವೂದೂ ಕನಸು ಬಿದ್ದಿತ್ತು ಆದರೆ ಮುಖ್ಯಮಂತ್ರಿಯಾಗುವ ಕನಸು

ಬಿದ್ದಿರಲಿಲ್ಲ ಎಂದು" ಗೌಡರು 2011-12ರ ಕಡಿಮೆ ಸಮಯದಲ್ಲಿ ಉತ್ತಮವಾದ ಕೆಲಸ ಮಾಡಿದರು. 'ಸಕಾಲ' ಯೋಜನೆಯು ಗೌಡರ ಉತ್ತಮ ಕೊಡುಗೆ ಇಂದಿಗೂ ಚಾಲ್ತಿಯಲ್ಲಿದೆ.

2012-14ರ ಸಮಯದಲ್ಲಿ ಕರ್ನಾಟಕ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಸೇವೆ ಸಲ್ಲಿಸಿದರು. 2014ರಲ್ಲಿ ಬೆಂಗಳೂರಿನ ಉತ್ತರ ಭಾಗದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಗೆದ್ದರು. ಅದೇ ಸಮಯಕ್ಕೆ ಕೇಂದ್ರದಲ್ಲಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಡಿ.ವಿ. ಸದಾನಂದಗೌಡರಿಗೆ ಮಹತ್ವದ ರೈಲ್ವೆ ಖಾತೆ ನಂತರ, ಕಾನೂನು ಖಾತೆ, ಯೋಜನೆ ಮತ್ತು ಸಾಂಖ್ಯಿಕ ಖಾತೆಗಳನ್ನು ನೀಡಿ ಗೌರವಿಸಿದೆ.

ರಾಜಕೀಯವು ರಾಗ, ದ್ವೇಷ, ಅಸೂಯೆಗಳ ಸಂಗಮ ಹಾಗೂ ದುಷ್ಟರ ಕೊನೆಯ ಅಸ್ತ್ರ ಎಂಬಂತಹ ಈ ಕಾಲದಲ್ಲಿ ಅಜಾತ ಶತ್ರುವೆಂದರೆ ಡಿ.ವಿ. ಸದಾನಂದಗೌಡರು. ಸದಾ ನಗುಮುಖ ವಿನಯವಂತ ರಾಜಕಾರಣಿ. ಒಕ್ಕಲಿಗರು ಒರಟರಲ್ಲ ಹೀಗೂ ಇರುತ್ತಾರೆ. ಎನ್ನುವುದಕ್ಕೆ ಉತ್ತಮ ಉದಾಹರಣೆ. ಅವರ ಸ್ನೇಹಪರತೆ ಹೃದಯವಂತಿಕೆಯಿಂದಲೆ ರಾಜಕೀಯದಲ್ಲಿ ಎಲ್ಲಾ ಸ್ಥಾನಮಾನಗಳನ್ನು ಗಿಟ್ಟಿಸಿಕೊಂಡಿದ್ದಾರೆ ಹಾಗೂ ಗಿಟ್ಟಿಸಿಕೊಳ್ಳುತ್ತಿದ್ದಾರೆ.

ಇವರು ದಕ್ಷಿಣ ಕನ್ನಡ ಜಿಲ್ಲೆಯ ತೀರ ಹಿಂದುಳಿದ ಗ್ರಾಮವಾದ ದೇವರ -ಗುಂಡದವರು. ತಂದೆ ತುಳು ಮೂಲದ ದೇವರಗುಂಡ ವೆಂಕಪ್ಪಗೌಡರು ಸಾಧಾರಾಣ ರೈತರು. ಸದಾನಂದಗೌಡರು ಕಾನೂನು ಪದವಿ ಪೂರೈಸಿದ ನಂತರ ಸುಳ್ಯ, ಪುತ್ತೂರು ಮುಂತಾದ ಕಡೆಗಳಲ್ಲಿ ವಕೀಲರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದರು. ಸುಳ್ಯ ಪುತ್ತೂರು ಜನರೂ ಕೂಡ ಸೌಮ್ಯವಾದಿಗಳು ಘಾಟಿ ಸ್ವಭಾವದ ಜನಗಳಲ್ಲ. ತಂಟೆ ತಗಾದೆ ಇಲ್ಲದೆ ಬದುಕು ನಡೆಸುವ ಜನ ಅವರು. ಹೀಗಾಗಿ ವಕೀಲರಾಗಿ ಅಷ್ಟಾಗಿ ಯಶಸ್ವಿಯಾಗಲಿಲ್ಲ. ಸಂಘ ಪರಿವಾರದೊಂದಿಗೆ ಮೊದಲಿನಿಂದಲೂ ನಂಟಿತ್ತು. ದೇಶ ಪ್ರೇಮಿಯಾದ ಗೌಡರು ಸ್ವಚ್ಛ ಭಾರತವನ್ನು ಕಟ್ಟಬೇಕೆಂಬ ಹಂಬಲವಿತ್ತು, ಕನಸಿತ್ತು. 1994ರಲ್ಲಿ ಗೌಡರು ಶಾಸಕರಾಗಿ ಆಯ್ಕೆಯಾಗುವ ಮೂಲಕ ಅವರ ಕನಸು ನನಸಾಯಿತು.


ನಂತರ 1999ರಲ್ಲಿ ನಡೆದ ಚುನಾವಣೆಯಲ್ಲಿಯೂ ಗೆದ್ದರು. 2004ರಲ್ಲಿ ಮಂಗಳೂರು ಕೊಡಗು ಸೇರಿದ ಲೋಕಸಭಾ ಚುನಾವಣೆ ಗೌಡರಿಗೆ ಅಗ್ನಿ ಪರೀಕ್ಷೆಯಾಯಿತು. ಕಾರಣವೇನೆಂದರೆ ಮಾಜಿ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯಿಲಿಯವರ ವಿರುದ್ಧ ಸೆಣಸುವುದಾಗಿತ್ತು. ಇಂತಹ ಅಗ್ನಿ ಪರೀಕ್ಷೆಯಲ್ಲಿ ಭಾರಿ ಬಹುಮತದಿಂದ ಗೆದ್ದು ಬಂದು ಇಡೀ ರಾಜ್ಯವೇ ಇವರತ್ತ ನೋಡುವಂತೆ ಮಾಡಿದರು. ನಂತರ 2009ರಲ್ಲಿ ಲೋಕಸಭೆಗೆ ನಡೆದ ಚುನಾವಣೆಯಲ್ಲಿಯೂ ಗೆದ್ದರು.

2014ರಲ್ಲಿ ಬೆಂಗಳೂರಿನಲ್ಲಿ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಗೆಲ್ಲುವ ಮೂಲಕ ರಾಜಕೀಯದಲ್ಲಿ ಸೌಮ್ಯವಾದಿಗಳಿಗೂ ಕಾಲವಿದೆ ಕೇವಲ ಗೂಂಡಾ ರಾಜಕಾರಣಿಗಲ್ಲ ಎಂದು ಸಾಬೀತು ಮಾಡಿದ ಕೀರ್ತಿ ಸದಾನಂದಗೌಡರಿಗೆ ಸಲ್ಲುತ್ತದೆ.

ಕೇಂದ್ರದ ಮಂತ್ರಿಯಾಗಿ ಸದಾನಂದಗೌಡರು

2016ರಲ್ಲಿ ಕಾನೂನು ಮತ್ತು ಸಂಸದೀಯ ಸಚಿವರಾಗಿ 2016-17ರಲ್ಲಿ ಸಾಂಖಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಖಾತೆ ಸಚಿವರಾಗಿ 2019ರಲ್ಲಿ ರಸಗೊಬ್ಬರ ಮತ್ತು ರಾಸಾಯನಿಕ ಖಾತಾ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ಗೌಡರು ಹೆಸರಿಗೆ ತಕ್ಕಂತೆ ಸದಾ ಆನಂದದಿಂದ ಇರುತ್ತಾರೆ.

ಶ್ರೀ ಹೆಚ್.ಜಿ. ಗೋವಿಂದಗೌಡ



ರಾಜಕೀಯ ಹೊಲಸು ನಿಜ. ಆದರೆ ಆ ಹೊಲಸನ್ನು ಮೈಗಂಟಿಸಿಕೊಳ್ಳದೆ ಕೆಸರಿನಲ್ಲಿ ಉದಿಸಿದ ಕಮಲದಂತೆ ಎದ್ದು ಬಂದ ಮಹಾನ್ ವ್ಯಕ್ತಿಯೆ ಹೆಚ್.ಜಿ. ಗೋವಿಂದಗೌಡರು. ಇವರನ್ನು ರಾಜಕಾರಣಿ ಎಂದು ಹೇಳಲೂ ಹಾಗದು ರಾಜಕಾರಣವೆಂಬುದನ್ನು ಜನ ಸೇವೆಗೆ ಎಂದು ತಿಳಿಸಿಕೊಟ್ಟ ವ್ಯಕ್ತಿ. ರಾಜಕೀಯ ವ್ಯಕ್ತಿಗಳು ಹೀಗೆ ಇರಬೇಕು ಎನ್ನುವುದಕ್ಕೆ ಉತ್ತಮ ಉದಾಹರಣೆ. ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಹೇಳುವಂತೆ ಗಾಂಧಿವಾದಿ ಚಿಂತನೆಯ ಕಟ್ಟ ಕಡೆಯ ರಾಜಕಾರಣಿ ಇವರಾಗಿದ್ದಾರೆ. ಗೋವಿಂದಗೌಡರು ನಿಜಕ್ಕೂ ಮಲೆನಾಡಿನ ಗಾಂಧಿಯೇ ಸರಿ.

ಉತ್ತಮ ರಸ್ತೆಗಳು, ಶಾಲೆ-ಕಾಲೇಜುಗಳಿಲ್ಲದ ಮಲೇರಿಯ ಕಾಯಿಲೆಗೆ ಆಗಿಂದಾಗೆ ಒಳಗಾಗುವ ಪ್ರದೇಶವಾದ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪವನ್ನು ತಮ್ಮ ಕಾರ್ಯ ಕ್ಷೇತ್ರವನ್ನಾಗಿ ಮಾಡಿಕೊಂಡು ಬೆಳೆದರು. 1926ರಲ್ಲಿ ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರ ತಾಲ್ಲೂಕಿನ ಹೆಣಜಿ ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ತಮ್ಮ ಊರಿನಲ್ಲಿ ಪಡೆದು ಶಿವಮೊಗ್ಗದಲ್ಲಿ ಇಂಟರ್ ಮೀಡಿಯಟ್‌ವರೆಗೆ ಓದಿದರು. ಪ್ರಾಮಾಣಿಕರಾದ ಗೋವಿಂದಗೌಡರು ರಾಷ್ಟ್ರೀಯ ಆಂದೋಲನಕ್ಕೆ ದುಮುಕಿದರು. ಭಾರತ ಬಿಟ್ಟು ತೊಲಗಿ ಆಂದೋಲನ ಮತ್ತು ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯ ಮಾಡಲು ಪ್ರಾರಂಭವಾದ ಮೈಸೂರು ಚಲೋ ಚಳವಳಿ ಅಥವಾ ಅರಮನೆ ಚಳವಳಿಯಲ್ಲಿ ಭಾಗವಹಿಸಿದರು.

ಸ್ವಾತಂತ್ರ್ಯನಂತರ ಜೀವನೋಪಾಯಕ್ಕಾಗಿ ಸಣ್ಣ-ಪುಟ್ಟ ವ್ಯಾಪಾರ ಉದ್ಯಮವನ್ನು ಮಾಡುತ್ತಿದ್ದರು. ಕೊಪ್ಪ ಪುರಸಭೆಯ ಸದಸ್ಯರಾಗಿ, ಅದರ ಅಧ್ಯಕ್ಷರಾಗಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಕೃಷಿ ವ್ಯವಸಾಯೋತ್ಪನ್ನ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾದರು. ತಮ್ಮ ಸರಳತೆ ಮತ್ತು ಪ್ರಾಮಾಣಿಕತೆಯಿಂದಾಗಿ ಬಲುಬೇಗ ಸಾರ್ವಜನಿಕರ ಗಮನ ಸೆಳೆದರು. ಪ್ರಾಮಾಣಿಕರಿಗೆ ಪ್ರಾಮಾಣಿಕರೆ ಸ್ನೇಹಿತರು ಎಂಬಂತೆ ಮಲೆನಾಡು ಸೆರಗಿನ ಮತ್ತೊಬ್ಬ ಪ್ರಾಮಾಣಿಕ ವ್ಯಕ್ತಿ ಕಡಿದಾಳ ಮಂಜಪ್ಪನವರಿಗೆ ಪೂರಕವಾಗಿ ಸಹಾಯ ಹಸ್ತ ನೀಡಿದರು. ಅವರನ್ನು ಬೆಂಬಲಿಸಿದರು. ತಾವು ಮಾತ್ರ ಸಾರ್ವತ್ರಿಕ ಚುನಾವಣೆಗೆ ವಿಮುಖರಾದರು. ಅಂದು ಕಾಂಗ್ರೆಸ್ಸಿನ ದುರಾಡಳಿತಕ್ಕೆ ಬೇಸತ್ತು ಜನತಾ ಪಕ್ಷ ಸೇರಿದರು. ಅಂದು ಜನತಾಪಕ್ಷ ನಿಜಕ್ಕೂ ಜನತೆಯ ಪಕ್ಷವಾಗಿತ್ತು. ಚುನಾವಣೆಯಲ್ಲಿ ಸ್ಪರ್ಧಿಸಿ ಜಯಭೇರಿ ಭಾರಿಸಿದರು.


ಮಂತ್ರಿಯಾಗಿ ಗೋವಿಂದಗೌಡರು – ಗೋವಿಂದಗೌಡರ ದಕ್ಷತೆ ಪ್ರಾಮಾಣಿ–ಕತೆಗೆ ತಕ್ಕಂತೆ 1994ರಲ್ಲಿ ಅವರಿಗೆ ಪ್ರಾಥಮಿಕ ಶಿಕ್ಷಣ ಸಚಿವ ಖಾತೆ ಲಭಿಸಿತು. ಸಚಿವರಾದಾಗ ಅವರ ವಯಸ್ಸು 68 ವರ್ಷ. ಮಾಗಿದ ಮನಸ್ಸು ಮತ್ತು ದೇಹ. ರಾಮಕೃಷ್ಣ ಹೆಗಡೆ ಮತ್ತು ಎಸ್.ಆರ್. ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದ ಕಾಲವದು. ಲೋಕೋಪಯೋಗಿ, ಕಂದಾಯ ಇಲಾಖೆಗಳ ಮುಂದೆ ಸಪ್ಪೆಯಾಗಿ ಕಾಣುತ್ತಿದ್ದ ಇಲಾಖೆಯೆಂದರೆ ಪ್ರಾಥಮಿಕ ಶಿಕ್ಷಣ ಇಲಾಖೆ. ಇಡೀ ಇಲಾಖೆಯಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ವರ್ಗಾವಣೆಯ ದಂಧೆ, ಶಿಕ್ಷಕರ ಕೊರತೆ ಹಣಕಾಸಿನ ಕೊರತೆ ಇವೇ ಮುಂತಾದ ಲೋಪದೋಷಗಳಿಂದ ಇಡೀ ಇಲಾಖೆ ಸೊರಗಿ ಹೋಗಿತ್ತು.

ಗೋವಿಂದಗೌಡರು ಸಚಿವರಾಗಿ ಬಂದ ನಂತರ ತಮ್ಮ ಇಲಾಖೆಗೆ ಹೆಚ್ಚಿನ ಅನುದಾನವನ್ನು ಸರ್ಕಾರದಿಂದ ದಕ್ಕಿಸಿಕೊಂಡರು. ಶಾಲೆಗಳ ಕೊರತೆ ಇದ್ದ ಜಾಗದಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸುವುದು ದುರಸ್ಥಿ ಮಾಡಿಸುವುದು ಖಾಸಗಿ ವ್ಯಕ್ತಿಗಳ, ಸಂಘ–ಸಂಸ್ಥೆಗಳ ನೆರವು ಪಡೆದು ಶಾಲೆಗಳನ್ನು ಅಭಿವೃದ್ಧಿ ಪಡಿಸಿದರು. ಶಾಲೆಗಳಿಗೆ ಶಿಕ್ಷಕರ ಕೊರತೆ ಇರುವುದನ್ನು ಗಮನಿಸಿದರು. ಒಂದು ಲಕ್ಷಕ್ಕೂ ಹೆಚ್ಚು ಮಂದಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದರ ಮೂಲಕ ಇಡೀ ರಾಜ್ಯದ ಜನ ನಿಬ್ಬೆರಗಾಗುವಂತೆ ಮಾಡಿದರು. ಶಿಕ್ಷಕರ ಆಯ್ಕೆಯ ಸಂದರ್ಭದಲ್ಲಿ ಲಂಚಗೊಳಿತನ, ಸ್ವಜನ ಪಕ್ಷ ತಡೆಯಲು ನೇರ ಕೌನ್ಸಿಲಿಂಗ್ ಏರ್ಪಡಿಸಿದರು. ಆಯ್ಕೆಯಲ್ಲಿ ಪ್ರಥಮ ಬಾರಿಗೆ ಪಾರದರ್ಶಕತೆಯನ್ನು ತಂದರು. ದಲಿತರಿಗೆ ನೀಡಬೇಕಾದ ಕೋಟದಲ್ಲಿ ಅವರಿಗೆ ಸಲ್ಲಬೇಕಾದ ಮೀಸಲಾತಿ ಕಲ್ಪಿಸುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಿದರು. ಎಷ್ಟೋ ಮಂದಿ ನಿರುದ್ಯೋಗಿಗಳಿಗೆ ಆಶಾಕಿರಣವಾದರು. ವರ್ಗಾವಣೆ

ಅಂದು ದೊಡ್ಡ ದಂಧೆಯಾಗಿತ್ತು. ರಾಜಕಾರಣಿಗಳಿಂದ ಶಿಫಾರಸ್ಸು ಪತ್ರ ತರುವುದು ವರ್ಗಗೊಂಡ ಸ್ಥಳಕ್ಕೆ ಹೋಗಿ ಕೆಲಸ ಮಾಡದಿರುವುದು ಈ ಮೊದಲು ಸಮಸ್ಯೆಯಾಗಿತ್ತು. ಅದನ್ನು ತಪ್ಪಿಸಲು ಏಕಗವಾಕ್ಷಿಯ ಮತ್ತು ಕೌನ್ಸಿಲಿಂಗ್ ಮೂಲಕ ವರ್ಗಾವಣೆಯಾಗುವಂತೆ ಮಾಡಿದರು. ಆಡಳಿತದಲ್ಲಿ ಪಾರದರ್ಶಕತೆ ತಂದರು. ವಿದ್ಯಾರ್ಥಿಗಳು ಬಯಸಿದರೆ ಅವರ ಉತ್ತರ ಪತ್ರಿಕೆಯನ್ನು ಜೆರಾಕ್ಸ್ ಪ್ರತಿ ನೀಡುವ ವ್ಯವಸ್ಥೆಯನ್ನು ಮಾಡಿದರು, ಮರುಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಿ ಅದು ಸರಿಯಾಗಿ ಮೌಲ್ಯಮಾಪನವಾಗುವಂತೆ ಮಾಡಿದರು. ಇಡೀ ಜನತಾ ಪಕ್ಷಕ್ಕೆ ಒಳ್ಳೆಯ ಹೆಸರನ್ನು ಇಲಾಖೆಗೆ ಘನತೆ–ಗೌರವವನ್ನು ತಂದುಕೊಟ್ಟ ಕೀರ್ತಿ ಗೋವಿಂದಗೌಡರಿಗೆ ಸಲ್ಲುತ್ತದೆ. 1999ರಲ್ಲಿ ಗೋವಿಂದಗೌಡರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ನೀಡಿದರು. ಆದರೆ ಮತ್ತೆ ಚುನಾವಣೆಗೆ ನಿಲ್ಲಲಿಲ್ಲ.

ಈಗಾಗಲೇ ತಿಳಿಸಿರುವಂತೆ ರಾಜಕೀಯಕ್ಕೆ ಅಂಟಿಕೊಳ್ಳದೆ ನನ್ನ ಕೆಲಸ ಮುಗಿಯಿತು ಎಂದು ಹೇಳಿ ರಾಜಕೀಯದಿಂದ ನಿವೃತ್ತಿ ಹೊಂದಿದ್ದರು. ಆದರೆ ಇಂದಿನ ಕಾಲದಲ್ಲಿ ರಾಜಕೀಯಕ್ಕೆ ಬಂದ ಮೇಲೆ ಅಷ್ಟು ಸುಲಭವಾಗಿ ನಿವೃತ್ತಿ ಹೊಂದುವುದಿಲ್ಲ. ಅಧಿಕಾರಕ್ಕಾಗಿ ಅಪಹಪಿಸುತ್ತಾರೆ, ಗೋವಿಂದಗೌಡರು 2016ರಲ್ಲಿ ಬದುಕಿಗೆ ವಿದಾಯ ಹೇಳಿದರು. ಆದರೆ ಒಂದು ಚಿಕ್ಕಾಸು ಖರ್ಚು ಮಾಡದೆ ಉದ್ಯೋಗ ಪಡೆದ ಶಿಕ್ಷಕರ ಮನಸ್ಸಿನಲ್ಲಿ ಬೇರೂರಿದ್ದಾರೆ ಈ ಮಲೆನಾಡಿನ ಗಾಂಧಿ.

ಕೆ.ಹೆಚ್. ಪಾಟೀಲ್



ಒಕ್ಕಲಿಗ ಸಮುದಾಯದ ಉಪಪಂಗಡವಾದ ರೆಡ್ಡಿ ಒಕ್ಕಲಿಗರಲ್ಲಿ ಸಾಮಾನ್ಯವಾಗಿ ತಮ್ಮ ಹೆಸರಿನೊಂದಿಗೆ ರೆಡ್ಡಿ ಎಂದು ಸೇರಿಸಿಕೊಳ್ಳುವುದುಂಟು. ಆದರೆ ಉತ್ತರ ಕರ್ನಾಟಕ ಭಾಗದಲ್ಲಿರುವ ರೆಡ್ಡಿ ಸಮುದಾಯದವರಲ್ಲಿ ಕೆಲವರು ಮೇಟಿ, ಪಾಟೀಲ್, ಚೌದರಿ, ಗೌಡ ಇವೇ ಮುಂತಾದವುಗಳನ್ನು ಸೇರಿಸಿಕೊಳ್ಳುತ್ತಾರೆ. ಉತ್ತರ ಕರ್ನಾಟಕ ಭಾಗದ ರೈತ ನಾಯಕ, ಸಹಕಾರಿ ಧುರೀಣ, ಸಹಕಾರಿರಂಗದ ಮೇರುವ್ಯಕ್ತಿ ಇಷ್ಟೇ ಅಲ್ಲ ಅನನ್ಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಕೆ.ಹೆಚ್. ಪಾಟೀಲ್ ಒಬ್ಬ ಸರ್ವ ಶ್ರೇಷ್ಠ ವ್ಯಕ್ತಿ.

ಶ್ರೀ ರಂಗನಾಥ ಮತ್ತು ನಿಂಗಮ್ಮರವರು ಕೆ.ಹೆಚ್. ಪಾಟೀಲ್‌ರವರ ತಂದೆ–ತಾಯಂದಿರು ಊರು ಹುಲಕೋಟೆ, ಹುಲಕೋಟೆ ಹುಲಿ ಎಂದೇ ಖ್ಯಾತರಾದವರು. 1925 ಮಾರ್ಚ್ 16 ರಂದು ಜನನ. ತಾತ ದ್ಯಾವನಗೌಡ. ಇಡೀ ಹಳ್ಳಿಯ ಸುತ್ತಮುತ್ತಲ ಏಳು ಹಳ್ಳಿಗಳಲ್ಲಿ ದ್ಯಾವನಗೌಡರ ಮನೆತನ ಹೆಸರುವಾಸಿ.

ಸ್ವಾತಂತ್ರ್ಯ ಚಳವಳಿ ಮತ್ತು ಕೆ.ಹೆಚ್. ಪಾಟೀಲ್

1885ರಲ್ಲಿ ಭಾರತದಲ್ಲಿ ಸಣ್ಣಗೆ ಪ್ರಾರಂಭವಾದ ಸ್ವಾತಂತ್ರ್ಯ ಚಳುವಳಿ 1942ರ 'ಭಾರತ ಬಿಟ್ಟುತೊಲಗಿ' ಆಂದೋಲನದ ವೇಳೆಗೆ ತಾರಕಕ್ಕೇರಿತು. 17ರ ಪ್ರಾಯದ ಯುವಕ ಕೆ.ಹೆಚ್. ಪಾಟೀಲ್ ಮೀನಾಮೇಷ ಎಣಿಸದೇ ಬ್ರಿಟೀಷರ ವಿರುದ್ಧ ಚಳವಳಿಗೆ ಧುಮುಕಿದರು. ಹೈಸ್ಕೂಲ್ ಶಿಕ್ಷಣಕ್ಕೆ ತಿಲಾಂಜಲಿ ಇಟ್ಟರು. ರೈತರ, ಬಡವರ, ಧೀನ ದಲಿತರ ಬಗ್ಗೆ ಅಪಾರ ಕಾಳಜಿ ಹುಟ್ಟಿದ್ದು ಆಗಲೇ. ಜಮೀನ್ದಾರರಾದ ಪಾಟೀಲರು ಯಾವ ಹಮ್ಮುಬಿಮ್ಮು ಇಲ್ಲದೇ ಜನರೊಡನೆ ಬೆರೆಯುತ್ತಿದ್ದರು. ಅವರ ಮನಸ್ಸು ಸಹಕಾರ ಕ್ಷೇತ್ರದ ಕಡೆಗೆ ಒಲಿಯಿತು. ತಮ್ಮ ಸ್ವಗ್ರಾಮ ಹುಲಕೋಟೆಯಲ್ಲಿ ಸರಪಂಚರಾಗಿ ಸರ್ವಾನುಮತದಿಂದ ಆಯ್ಕೆಯಾದರು.

ಸಹಕಾರ ಕ್ಷೇತ್ರದ ಧುರೀಣರಾಗಿ ಪಾಟೀಲರು

ರೈತರಿಗೆ, ದೀನ ದಲಿತರಿಗೆ ಬಡ ಕೂಲಿ ಕಾರ್ಮಿಕರಿಗೆ ನೆರವಾಗ ಬಲ್ಲ ಸಹಕಾರಿ ಕ್ಷೇತ್ರವನ್ನು ಉತ್ತೇಜಿಸಲು ತೀರ್ಮಾನಿಸಿದರು. 1955ರ ನಗರ ಸಭೆ ಚುನಾವಣೆಯಲ್ಲಿ ಪಾಟೀಲರು ಸೃಷ್ಠಿಸಿದರು. ಸಿವಿಕ್ ಬೋರ್ಡ್ ಭಾರೀ ಬಹುಮತದಿಂದ ಜಯಗಳಿಸಿತು. ಅಲ್ಲಿಯತನಕ ಗದಗ ನಗರ ಸಭೆಯ ಮೇಲೆ ಹಿಡಿತ ಸಾಧಿಸಿದ್ದ ಪಟ್ಟಭದ್ರರ ಆಳ್ವಿಕೆ ಕೊನೆಗೊಂಡಿತು. **"ದಿ ಗದಗ ಪತ್ತಿನ ಸಂಘ"**ವು ಗದಗ ಬಡರೈತರ ಮತ್ತು ಸಾಮಾನ್ಯ ಜನರ ಜೀವನಾಡಿಯಾಗಿತ್ತು. ಇಂತಹ ಪ್ರತಿಷ್ಠಿತ ಸಂಸ್ಥೆಯ ಕೆಲವು ವ್ಯಕ್ತಿಗಳ ಕೈಗೊಂಬೆಯಾಗಿತ್ತು. ಕೆ.ಹೆಚ್. ಪಾಟೀಲರು ಚುನಾವಣೆಯಲ್ಲಿ ತಾವೂ ಹಾಗೂ ತಮ್ಮ ಸಂಘಡಿಗರು ಸ್ಪರ್ಧಿಸಿ ಗೆದ್ದು ಬಂದು ಆ ಸಂಸ್ಥೆಗೆ ಕಾಯಕಲ್ಪ ನೀಡಿದರು. 1957ರಲ್ಲಿ ಪ್ರಥಮ ಬಾರಿಗೆ ಇಡೀ ರಾಜ್ಯದೆಲ್ಲೆಡೆ ಪ್ರಪ್ರಥಮ ಉಗ್ರಾಣವನ್ನು ಸ್ಥಾಪಿಸಿದರು. ತಾವು ಒಕ್ಕಲಿಗರಾಗಿದ್ದು ಒಕ್ಕಲಿಗ ಜನಾಂಗವನ್ನು ಉತ್ತರ ಕರ್ನಾಟಕ ಭಾಗದಲ್ಲಿ ಅದರಲ್ಲೂ ವಿಶೇಷವಾಗಿ ಗದಗಿನಲ್ಲಿ ಒಗ್ಗೂಡಿಸಬೇಕೆಂಬ ಉದ್ದೇಶದಿಂದ ಇದೇ ಸಂದರ್ಭದಲ್ಲಿ **"ಒಕ್ಕಲಿಗರ ಪರಿಷತ್ತಿನ ಸಭೆ"** ಕರೆದು ಅಲ್ಲಿ ಒಕ್ಕಲಿಗರ ಕುಂದು-ಕೊರತೆಗಳನ್ನು ಚರ್ಚಿಸಿದರು. ಉತ್ತರ ಕರ್ನಾಟಕ ಭಾಗದಲ್ಲಿ ಇದು ಚೇತೋಹಾರಿಯಾಯ್ತು. 1963ರಲ್ಲಿ ಹುಬ್ಬಳ್ಳಿಯಲ್ಲಿ **"ರೆಡ್ಡಿಲೀಗ್ ಜನರಲ್ ಹಾಸ್ಟಲ್"** ಅನ್ನು ಸ್ಥಾಪಿಸಿದರು. ಕೆ.ಹೆಚ್. ಪಾಟೀಲರಿಂದಾಗಿ ಉತ್ತರ ಭಾಗದಲ್ಲಿದ್ದ ಲಿಂಗಾಯಿತರ ಪ್ರಭಾವ ತುಸು ಕಡಿಮೆಯಾಯಿತು.

ಇಂದಿಗೆ ಆರು ದಶಕಗಳ ಮೊದಲೇ ಕಾಟನ್ ಸೇಲ್ ಸೊಸೈಟಿಯ ಎರಡು ಲಕ್ಷ ರೂಪಾಯಿಗೂ ಹೆಚ್ಚಿನ ಲಾಭಗಳಿಸುವಂತೆ ಮಾಡಿದ ಕೀರ್ತಿ ಪಾಟೀಲರಿಗೆ ಸಲ್ಲುತ್ತದೆ. ಗದುಗಿನಲ್ಲಿ ಹತ್ತಿ ಬೆಳೆಯ ಸಹಕಾರಿ ಸಂಘ ಮತ್ತು ಪರಿಷತ್ತನ್ನು ಸಂಘಟನೆಯವರು 1956ರಲ್ಲಿ ಅಂದಿನ ಮೈಸೂರು ಸರ್ಕಾರ ರಜತ ಫಲಕ ನೀಡಿ ಸನ್ಮಾನಿಸಿತು. ರೈತರಿಗಾಗಿ ರೈತ ಭವನ, ಗ್ರಂಥಾಲಯ, ಪ್ರಯೋಗಾಲಯ,

ಸಂಶೋಧನಾಲಯಗಳು ಸ್ಥಾಪನೆಯಾದವು. ನಗರ ಸಭೇಯ ನೂತನ ಕಟ್ಟಡ ಶಂಕುಸ್ಥಾಪನೆ ಸಮಾರಂಭಕ್ಕೆ ಆಗಮಿಸಿದ್ದು ಸ್ವಾತಂತ್ರ್ಯ ಚಳವಳಿಯ ಧುರೀಣ ಶ್ರೀ ಸಹುಕಾರ ಚನ್ನಯ್ಯನವರು. ಕೆ.ಹೆಚ್. ಪಾಟೀಲರ ಸಾಧನೆಗಳನ್ನು ಕೊಂಡಾಡಿದರು. 60ರ ದಶಕದಲ್ಲಿ ಕಾಟನ್ ಸೊಸೈಟಿ ರಾಜ್ಯದ ಪ್ರವಾಸಿ ಕೇಂದ್ರವಾಗಿತ್ತು. ಡೈರಿ, ಪೌಲ್ಟ್ರಿ, ಪಶು ಆಹಾರ ಉತ್ಪಾಧನಾ ಕೇಂದ್ರಗಳು ಸ್ಥಾಪನೆಯಾದವು.

ರಾಜ್ಯ ರಾಜಕೀಯಕ್ಕೆ ಕೆ.ಹೆಚ್. ಪಾಟೀಲ್

ಪಾಟೀಲರ ಎಂದೂ ರಾಜಕೀಯ ಅನುಕೂಲ ಸಿಂಧುತ್ವಕ್ಕೆ ಓಗೊಟ್ಟವರಲ್ಲ. ರಾಜ್ಯ ರಾಜಕೀಯದಲ್ಲಿ ಅಂದು ಮೇರು ವ್ಯಕ್ತಿಯಾಗಿದ್ದ ಶ್ರೀ ನಿಜಲಿಂಗಪ್ಪನವರನ್ನು ಪ್ರಭಲವಾಗಿ ವಿರೋಧಿಸುತ್ತಿದ್ದರು. ಶ್ರೀಮತಿ ಇಂದಿರಾ ಗಾಂಧಿಯವರು ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಬಲಗೊಳಿಸುವ ಉದ್ದೇಶದಿಂದ ದೇವರಾಜ ಅರಸು ಅವರನ್ನು ಚುನಾವಣೆ ಅಧ್ಯಕ್ಷರನ್ನಾಗಿಯೂ, ಕೆ.ಹೆಚ್. ಪಾಟೀಲರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿಯೂ ನೇಮಿಸಿದರು. 70ರ ದಶಕದಲ್ಲಿ ಕಾಂಗ್ರೇಸ್ ಜಯಭೇರಿ ಬಾರಿಸಿತು. 1972 ಮಾರ್ಚ್ 18 ರಂದು ಇಬ್ಬರು ಮಾತ್ರ ಅಂದಿನ ರಾಜ್ಯಪಾಲರಿಂದ ಪ್ರಮಾಣ ವಚನ ಸ್ವೀಕರಿಸಿದರು. ಅವರೇ ಮುಖ್ಯಮಂತ್ರಿಯಾಗಿ ದೇವರಾಜ್ ಅರಸರು. ಸಂಪುಟದರ್ಜೆ ಸಚಿವರಾಗಿ ಕೆ.ಹೆಚ್. ಪಾಟೀಲರು ಮತ್ತು ಹೆಚ್.ಎಂ. ಚನ್ನಬಸಪ್ಪನವರು. ಕೆ.ಹೆಚ್. ಪಾಟೀಲರಿಗೆ ಅರಣ್ಯ, ಕೃಷಿ, ಗಡಿ ವಿವಾದ ಎಂಬ ಪ್ರಮುಖ ಖಾತೆಗಳನ್ನು ನೀಡಲಾಯಿತು. ಪಾಟೀಲರು ಮಂತ್ರಿಯಾಗಿದ್ದು ಗದಗ, ರೋಣ, ಹಾವೇರಿ, ಕೊಪ್ಪಳ ಇವೇ ಮುಂತಾದ ಪ್ರದೇಶಗಳ ಜನರಿಗೆ ಆನಂದವೋ ಆನಂದ, ಪಾಟೀಲರು ಎಂದಿನಂತೆ ಅಭಿವೃದ್ಧಿ ಕೆಲಸಕ್ಕಿಳಿದರು. ತಾವು ಒಕ್ಕಲಿಗರಾಗಿದ್ದು ಒಕ್ಕಲಿಗ ಜನರನ್ನು ಉತ್ತರ ಕರ್ನಾಟಕ ಭಾಗದಲ್ಲಿ ಅದರಲ್ಲೂ ವಿಶೇಷವಾಗಿ ಗದಗಿನಲ್ಲಿ ಒಗ್ಗೂಡಿಸಬೇಕೆಂಬ ಉದ್ದೇಶದಿಂದ ಆ ಸಂಧರ್ಭದಲ್ಲಿ **'ಒಕ್ಕಲಿಗರ ಪರಿಷತ್ತಿನ ಸಭೆ'** ಕರೆದು ಅಲ್ಲಿ ಒಕ್ಕಲಿಗರ ಕುಂದು-ಕೊರತೆಗಳನ್ನು ಚರ್ಚಿಸಿದರು. ಉತ್ತರ ಕರ್ನಾಟಕ ಭಾಗದಲ್ಲಿ ಇದು ಚೇತೋಹಾರಿಯಾಯ್ತು. 1963ರಲ್ಲಿ ಹುಬ್ಬಳ್ಳಿಯಲ್ಲಿ **"ರೆಡ್ಡಿ ಲೀಗ್‌ಜನರಲ್ ಹಸ್ಟೇಲ್"** ಅನ್ನು ಸ್ಥಾಪಿಸಿದರು. ಕೆ.ಹೆಚ್. ಪಾಟೀಲರಿಂದಾಗಿ ಉತ್ತರ ಭಾಗದಲ್ಲಿದ್ದ ಲಿಂಗಾಯಿತರ ಪ್ರಭಾವ ಕಡಿಮೆಯಾಯಿತು.

ಹತ್ತಿ ಬೆಳೆಯುವ ರೈತರಿಗೆ ಅನುಕೂಲವಾಗಲೆಂದು **"ದಿ ಗದಗ ಕೋ ಆಪ್ ಟೆಕ್ಸ್‌ಟೈಲ್ ಮೀಲ್ ಲಿ.,"** ಎಂಬ ಮಿಲ್‌ಅನ್ನು ಪ್ರಾರಂಭಿಸಿದರು. ಪ್ರಾರಂಭೋತ್ಸವಕ್ಕೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಡಿ. ದೇವರಾಜು ಅರಸರನ್ನು ಕರೆಸಿದರು. ಬೆಟಗೇರಿಯಲ್ಲಿ ನಡೆದ ಸಮಾರಂಭದಲ್ಲಿ ದೇವರಾಜ ಅರಸರು ಪಾಟೀಲರನ್ನು ಕೊಂಡಾಡಿದರು. ಜಿಲ್ಲೆಗೊಂದು **ಮಣ್ಣು ಪರೀಕ್ಷಾ ಕೇಂದ್ರ**ಗಳನ್ನು ಸ್ಥಾಪಿಸಿದರು. ಅಧಿಕ ಇಳುವರಿ ನೀಡುವ ಹತ್ತಿ ಬೆಳೆ ಯೋಜನೆಯನ್ನು ಧಾರವಾಡ ಇವೇ ಮುಂತಾದ

ಕಡೆ ಬಸ್ ನಿಲ್ದಾಣ, ಕುಡಿಯುವ ನೀರಿನ ವ್ಯವಸ್ಥೆ, ರೈತ ಪತ್ತಿನ ಸಂಘಗಳು ಮುಂತಾದವುಗಳಿಗೆ ಕಟ್ಟಡಗಳನ್ನು ಸ್ಥಾಪಿಸಿದರು. ಧಾರವಾಡದಲ್ಲಿ ಕೃಷಿ ಕಾಲೇಜು ಬರಲು, ಹಾಗೂ ನಂತರ ವಿಶ್ವವಿದ್ಯಾಲಯ ಸ್ಥಾಪನೆಗೆ ಕೆ.ಹೆಚ್. ಪಾಟೀಲರ ಶ್ರಮವಿದೆ. ದಣೆವರಿಯದ ಪಾಟೀಲರ 53ನೇ ವಯಸ್ಸಿನಲ್ಲಿ ಎಂ.ಎ. (ರಾಜಕೀಯ ಶಾಸ್ತ್ರ) ಪದವಿಗೆ ಅಂಚೆ ತೆರವಿನ ವಿದ್ಯಾರ್ಥಿಯಾಗಿ ಕುಳಿತು ತೇರ್ಗಡೆಯಾದದ್ದು ವಿಶೇಷ.

ರಾಜಕೀಯ ಏಳು ಬೀಳುಗಳನ್ನು ಕಂಡ ಪಾಟೀಲರು 1989 ಸಾರ್ವತ್ರಿಕ ಚುನಾವಣೆಯಲ್ಲಿ ಅತ್ಯಧಿಕ ಮತಗಳಿಂದ ಜಯಶೀಲರಾದರು. ವೀರೇಂದ್ರ ಪಾಟೀಲರ ಸಚಿವ ಸಂಪುಟದಲ್ಲಿ ಕಂದಾಯ ಮತ್ತು ಕಾರ್ಮಿಕ ಖಾತಾ ಸಚಿವರಾದರು. ಇಡೀ ರಾಜ್ಯದ ಅಭಿವೃದ್ಧಿಗೆ ಗಮನ ನೀಡಿದರು. ಇಡೀ ರಾಜ್ಯಕ್ಕೆ ಕುಡಿಯುವ ನೀರು, ಕೃಷಿ ಉತ್ಪನ್ನಗಳು, ಕೃಷಿ ಉತ್ಪನ್ನದ ಮಾರುಕಟ್ಟೆಯನ್ನು ತೆರೆಯಲು ಕಾರಣಕರ್ತರಾದರು. ಜಿಲ್ಲಾ ಪರಿಷತ್ ಕಾಯ್ದೆಗೆ ತಿದ್ದುಪಡಿ ತಂದು ಮಧ್ಯವರ್ತಿಗಳ ಕಾಟ ತಪ್ಪಿಸಿದರು.

1991ರಲ್ಲಿ ವೀರೇಂದ್ರ ಪಾಟೀಲರು ಪಾರ್ಶ್ವವಾಯು ಪೀಡಿತರಾದಾಗ ಕಾಂಗ್ರೆಸ್ ಹೈಕಮಾಂಡ್ ಬಂಗಾರಪ್ಪನವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿತು. ಕೆ.ಹೆಚ್. ಪಾಟೀಲರಿಗೆ ಕಂದಾಯ ಮತ್ತು ಸಹಕಾರ ಖಾತಾ ಮಂತ್ರಿಯನ್ನಾಗಿ ಮಾಡಲಾಯಿತು. ಕೆ.ಹೆಚ್. ಪಾಟೀಲರಿಗೆ ಸಹಕಾರ ಖಾತೆ ಅವರ ಅಚ್ಚುಮೆಚ್ಚಿನ ಖಾತೆ ಆಗಿತ್ತು. ಸಹಕಾರ ಕ್ಷೇತ್ರದಲ್ಲಿ ಕರ್ನಾಟಕವು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಲು ಕಾರಣರಾದರು. ತಮ್ಮ ಸಮುದಾಯದವರೇ ಆದ ಎಸ್.ಎಂ. ಕೃಷ್ಣರವರ ರಾಜಕೀಯ ಏಳಿಗೆಗೆ ಹೆಚ್.ಕೆ. ಪಾಟೀಲರ ಸಹಾಯವೂ ಇತ್ತು ಎಂದು ಇಲ್ಲಿ ಸ್ಮರಿಸಬಹುದು. ಇಂತಹ ಸಹಕಾರ ಧುರೀಣರು ತಮ್ಮ 67ನೇ ವಯಸ್ಸಿನಲ್ಲಿ (1992) ವಿಧಿವಶವಾದರು.

ವಿ. ಮಸಿಯಪ್ಪ



ಹಿರಿಯ ನ್ಯಾಯವಾದಿಗಳಾಗಿ ರಾಜಕಾರಣಿಯಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಸಚಿವರಾಗಿ, ಹಂಗಾಮಿ ಸಭಾಪತಿಗಳಾಗಿ ಸೇವೆಸಲ್ಲಿಸಿದ ವಿ. ಮಸಿಯಪ್ಪನವರು, ಹಣ ಆಸ್ತಿ ಮಾಡಿಕೊಳ್ಳದೇ ತಮ್ಮ ಕೊನೆಯ ಕಾಲದ ತನಕ ಶುದ್ಧ ಹಸ್ತರಾಗಿ ಜೀವನ ಸವೆಸಿದ ವ್ಯಕ್ತಿ ಎಂದೇಳಬಹುದು. ಶ್ರೀಯುತರು ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಹಾಲೂರು ಗ್ರಾಮದ ವೀರೇಗೌಡ ಮತ್ತು ಕೆಂಚಮ್ಮ ದಂಪತಿಗಳ ಮಗನಾಗಿ 15.10.1920 ರಂದು ಜನಿಸಿದರು. ಬಾಲಕನಿಗೆ ಓದಿನಲ್ಲಿ ಆಸಕ್ತಿ ಇದ್ದುದನ್ನು ಕಂಡ ಮಗನನ್ನು ಸ್ವಗ್ರಾಮದಲ್ಲಿ


ಪ್ರಾಥಮಿಕ ಶಿಕ್ಷಣವನ್ನೂ, ಚಿತ್ರದುರ್ಗದಲ್ಲಿ ಪ್ರೌಢ ಶಿಕ್ಷಣವನ್ನೂ, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ 1942ರಲ್ಲಿ ಬಿ.ಎ. ಪದವಿಯನ್ನು ಪಡೆದರು. ಕೇವಲ ಬಿ.ಎ. ಪದವಿಯನ್ನು ಪಡೆದರೆ ಸಾಲದು. ಕಾನೂನು ಶಿಕ್ಷಣ ಪಡೆದು, ನ್ಯಾಯವಾದಿಗಳಾಗಿ ಸೇವೆ ಸಲ್ಲಿಸಬೇಕೆಂದು ಹಿರಿಯರಾದ ಕೆಂಚಪ್ಪನವರು, ಮಸಿಯಪ್ಪನವರ ತಂದೆಯವರಾದ ವೀರನಗೌಡರಿಗೆ ಮನವೊಲಿಸಿದರು. ಈ ನಡುವೆ ಮಸಿಯಪ್ಪನವರು ತಮ್ಮ ಮಾತಾ-ಪಿತೃಗಳಿಗೆ ತಿಳಿಯದಂತೆ ಅಸಹಕಾರ ಚಳವಳಿ, ಈಚಲು ಮರ ಕಡಿಯುವ ಚಳವಳಿಯಲ್ಲಿ ಭಾಗವಹಿಸಿದ್ದರು, ಹಲವಾರು ಬಾರಿ ಸೆರೆವಾಸವನ್ನು ಅನುಭವಿಸಿದರು. ಬೆಳಗಾವಿಯ ಕಾನೂನು ಕಾಲೇಜಿಗೆ ಸೇರಿ ಅಧ್ಯಯನ ಮಾಡಿ 1946ರಲ್ಲಿ ಕಾನೂನು ಪದವೀಧರರಾದರು, ಚಿತ್ರದುರ್ಗ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದರು, ಹಿರಿಯ ವಕೀಲರಾದ ಕೆಂಚಪ್ಪನವರ ಪ್ರಭಾವ ಗಾಢವಾಗಿತ್ತು. ಮಸಿಯಪ್ಪನವರು ಯಶಸ್ವೀ ನ್ಯಾಯವಾದಿಗಳಾಗಿ ಚಿತ್ರದುರ್ಗದಲ್ಲಿ ಹೆಸರುವಾಸಿಯಾದರು. ಬಿ.ಎಲ್. ಗೌಡ, ನಿಜಲಿಂಗಪ್ಪ, ಕೆ.ಹೆಚ್. ರಂಗನಾಥ್, ಇಮಾಂ ಸಾಬ್ ಇವರೇ ಮುಂತಾದವ-ರೊಂದಿಗಿನ ಒಡನಾಟವು ರಾಜಕೀಯಕ್ಕೆ ಇಳಿಯುವಂತೆ ಪ್ರೇರೇಪಿಸಿತು.

1962ರಲ್ಲಿ ಚಳ್ಳಕೆರೆ ಮತ್ತು ಚಿತ್ರದುರ್ಗ ಕ್ಷೇತ್ರದಿಂದ ಚುನಾಚಣೆಗೆ ಸ್ಪರ್ಧಿಸಿ ಜಯಭೇರಿ ಭಾರಿಸಿದರು. ಚಳ್ಳಕೆರೆ ವಿಧಾನ ಸಭಾ ಕ್ಷೇತ್ರದಿಂದ 1972ರಲ್ಲಿ ಮೂರನೇ ಭಾರಿ ವಿಜೇತರಾದರು.

ಸಚಿವರಾಗಿ ಮಸಿಯಪ್ಪನವರು

ಶ್ರೀಯುತರ ದಕ್ಷತೆ, ಪ್ರಾಮಾಣಿಕತೆ ಹಾಗೂ ಮೂರನೇ ಬಾರಿ ಶಾಸಕರಾಗಿ ಆಯ್ಕೆಯಾದ ಕಾರಣದಿಂದಾಗಿ ಮುಖ್ಯಮಂತ್ರಿ ಡಿ. ದೇವರಾಜ್ ಅರಸರ ಸಚಿವ ಸಂಪುಟದಲ್ಲಿ ಮುಜರಾಯಿ ಖಾತೆ ಸಚಿವರಾಗಿ ನೇಮಿಸಲ್ಪಟ್ಟರು. ಅವರಿಗೆ ನೀಡಿದ ಖಾತೆಯು ಅಷ್ಟೇನೂ ಪ್ರಮುಖವಲ್ಲದಿದ್ದರೂ ತಮಗೆ ನೀಡಿರುವ ಜವಾಬ್ದಾರಿಯನ್ನು ಉತ್ತಮವಾಗಿ ನಿಭಾಯಿಸಿದರು.

ಬಿ.ಎಲ್. ಗೌಡ



ಚಿತ್ರದುರ್ಗ ಮಾತ್ರವಲ್ಲ ನಮ್ಮ ರಾಜ್ಯ ರಾಜಕಾರಣ-ದಲ್ಲಿ ಹಾಗೂ ಸಹಕಾರ ಕ್ಷೇತ್ರದಲ್ಲಿ ಚಿರಸ್ಥಾಯಿಯಾದ ವ್ಯಕ್ತಿ ಮಾತ್ರವಲ್ಲ ಶ್ರದ್ಧೆ ಎಂದರೆ ಶ್ರೀ ಬಿ.ಎಲ್. ಗೌಡರವರು, (ಶ್ರೀ ಬೀರಲಿಂಗೇಗೌಡ) ನೇರ ನಡೆನುಡಿಯ, ದೂರದೃಷ್ಟಿಯುಳ್ಳ ನಾಯಕ ಮಣಿಗಳಲ್ಲೊಬ್ಬರು. ಶ್ರೀಯುತರಿಗೆ ರಾಜಕಾರಣಕ್ಕಿಂತಲೂ "ಸಹಕಾರ ಮತ್ತು

ಕೃಷಿ" ಅವರ ಅಚ್ಚುಮೆಚ್ಚಿನ ಕ್ಷೇತ್ರವಾಗಿತ್ತು ಎಂದರೆ ತಪ್ಪಾಗಲಾರದು. ವೃತ್ತಿಯಲ್ಲಿ ನ್ಯಾಯವಾದಿಗಳು, ಪ್ರವೃತ್ತಿಯಲ್ಲಿ ರಾಜಕಾರಣಿ. ಶ್ರೀಯುತರು 22.4.1927ರಲ್ಲಿ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕು ಟಿ.ಎನ್. ಕೋಟೆ (ತಿಮ್ಮಣ್ಣ ನಾಯಕನಕೋಟೆ)ಯಲ್ಲಿ ಜನಿಸಿದರು. ಮುದ್ದಪ್ಪ ಮತ್ತು ಪುಟ್ಟಮ್ಮನವರು ಗೌಡರ ಮಾತಾಪಿತೃಗಳು. ಮಧ್ಯಮ ವರ್ಗದಲ್ಲಿ ಜನಿಸಿದ ಬಿ.ಎಲ್. ಗೌಡರು, ಧರ್ಮಪುರ, ಪರಶುರಾಮಪುರ, ಮೈಸೂರು, ಬೆಂಗಳೂರಿನಲ್ಲಿ ತಮ್ಮ ಸಂಪೂರ್ಣ ವ್ಯಾಸಂಗವನ್ನು ಮುಗಿಸಿ, ವಕೀಲಿ ವೃತ್ತಿಯನ್ನು ಹಿಡಿದರು. ಈಗಾಗಲೇ ಹಿರಿಯೂರಿನಲ್ಲಿ ಖ್ಯಾತ ನ್ಯಾಯವಾದಿಗಳಾಗಿದ್ದ ಶ್ರೀ ಕೆಂಚಮ್ಮನವರ ಬಳಿ ಕಿರಿಯ ನ್ಯಾಯವಾದಿಗಳಾಗಿ ವೃತ್ತಿ ಆರಂಭಿಸಿದರು. ಬಿ.ಎಲ್. ಗೌಡರಿಗೆ ನ್ಯಾಯವಾದಿ-ಗಳಾಗಲು, ರಾಜಕಾರಣಿ-ಯಾಗಲೂ ಮಾರ್ಗದರ್ಶನ ಮಾಡಿದರು. ಕಡೆಗೆ ತಮ್ಮ ಮಗಳಾದ ಕು॥ ಜಯಲಕ್ಷ್ಮಿ ಅವರನ್ನು ಕೊಟ್ಟು ವಿವಾಹ ಮಾಡಿದರು. ಬಿ.ಎಲ್. ಗೌಡರಿಗೆ ದೊರೆತ ಉತ್ತಮವಾದ ಮಾರ್ಗದರ್ಶನದಿಂದಾಗಿ ಕೆಲವೇ ವರ್ಷಗಳಲ್ಲಿ ಖ್ಯಾತ ನ್ಯಾಯವಾದಿಗಳಾದರು.

ರಾಜಕೀಯ ಕ್ಷೇತ್ರಕ್ಕೆ ಗೌಡರು

ಅರವತ್ತರ ದಶಕದಲ್ಲಿ ಇಡೀ ದೇಶವೇ ಕಾಂಗ್ರೆಸ್ ಮಯವಾಗಿದ್ದ ಕಾಲವದು, ಈಗಾಗಲೇ ತಿಳಿಸಿರುವಂತೆ ತಮ್ಮ ಮಾವನವರಾದ ಕೆಂಚಪ್ಪನವರ ಮಾರ್ಗದರ್ಶನ-ದಂತೆ, ಪಿ.ಎಸ್.ಪಿ. (ಪ್ರಜಾ ಸೋಷಿಯಲಿಸ್ಟ್ ಪಕ್ಷ) ಪಕ್ಷದಿಂದ ಹುರಿಯಾಳಾಗಿ ನಿಂತು ಚಳ್ಳಕೆರೆ ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಚಿತ್ರದುರ್ಗ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾಗಿ ಆಯ್ಕೆಯಾದರು. ಗೌಡರ ಪ್ರೀತಿಯ ಕ್ಷೇತ್ರವೂ ಅದೇ ಆಗಿತ್ತು.

ಮದುವೆ, ಮಕ್ಕಳು ಇತ್ಯಾದಿ

ಗೌಡರು ಕಾನೂನು ಪದವಿ ಪಡೆದ ನಂತರ ನ್ಯಾಯವಾದಿಗಳಾದರು. ಹಿರಿಯ ವಕೀಲರು ಚಿತ್ರದುರ್ಗ ಜಿಲ್ಲೆಯಾದ್ಯಂತ ಖ್ಯಾತ ನ್ಯಾಯವಾದಿಗಳಾಗಿ ಹೆಸರು ಮಾಡಿದ್ದ ಶ್ರೀ ಕೆ. ಕೆಂಚಪ್ಪನವರ ಬಳಿ ಕಿರಿಯ ನ್ಯಾಯವಾದಿಗಳಾಗಿ ಕೆಲಸ ಕಲಿಯುವ ಉದ್ದೇಶದಿಂದ ಅವರಲ್ಲಿ ಹೋಗಿ ಸೇರಿಕೊಂಡರು ಈ ಸಂದರ್ಭದಲ್ಲಿ ಹಿರಿಯ ನ್ಯಾಯವಾದಿಗಳಾಗಿದ್ದ ಕೆ. ಕೆಂಚಪ್ಪನವರ ಬಗ್ಗೆ ತಿಳಿಸಬೇಕು. ಕೆ. ಕೆಂಚಪ್ಪನವರು ಹರಿಹರ ತಾಲ್ಲೂಕಿನ ಕೊಪ್ಪದವರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಕೆಲವು ಬಾರಿ ಕಾರಾಗೃಹವಾಸ ಅನುಭವಿಸಿದರು. ಇವರದು ಶಿಸ್ತುಬದ್ಧ ಜೀವನವಾಗಿತ್ತು. ಮೈಸೂರು ಪ್ರಜಾಪ್ರತಿ ನಿಧಿ ಸದಸ್ಯರಾಗಿ (ಎಂ.ಆರ್.ಎ.) ಕಾಂಗ್ರೆಸ್‌ನಿಂದ ಟಿಕೆಟ್ ಪಡೆದು ವಿಧಾನಸಭಾ ಸದಸ್ಯರಾಗಿ ಕಾಂಗ್ರೆಸ್ ಪಕ್ಷವು ಪ್ರಬಲ ಪಕ್ಷವಾಗಿರುವ ಸಂದರ್ಭದಲ್ಲೇ ಅದರ ವಿರುದ್ಧ ಸೆಡ್ಡು ಹೊಡೆದು ಪಿ.ಎಸ್.ಪಿ. (ಪ್ರಜಾ

ಸೋಷಿಯಲಿಸ್ಟ್ ಪಕ್ಷ) ಸೇರಿ ಹಿರಿಯೂರು ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿದ್ದರು. ವಿರೋಧ ಪಕ್ಷದ ನಾಯಕರಾಗಿ ಸೇವೆ ಸಲ್ಲಿಸಿದರು. ಸಮಾಜದಲ್ಲಿ ಕೆಂಚಪ್ಪನವರು ಉನ್ನತ ಸ್ಥಾನಮಾನವನ್ನು ಹೊಂದಿದ್ದರು. ಶ್ರೀಯುತರ ಬಳಿ ಕಿರಿಯ ವಕೀಲರಾಗಿ ಸೇವೆ ಸಲ್ಲಿಸುತ್ತಿದ್ದ ಬಿ.ಎಲ್. ಗೌಡರ ನಿಷ್ಠೆ ಪ್ರಾಮಾಣಿಕತೆ, ಬುದ್ಧಿವಂತಿಕೆಯನ್ನು ಕಂಡು ತಮ್ಮ ಮಗಳಾದ ಕು॥ ಜಯಲಕ್ಷ್ಮಿಯವರನ್ನು ದಿನಾಂಕ 10.5.1950ರಲ್ಲಿ ಬಿ.ಎಲ್. ಗೌಡರಿಗೆ ಕೊಟ್ಟು ವಿವಾಹ ಮಾಡಿದರು.

ಬಿ.ಎಲ್. ಗೌಡರು ತಮ್ಮ ಕಕ್ಷಿದಾರರಿಗೆ ನ್ಯಾಯ ಒದಗಿಸುತ್ತಿದ್ದರೇ ಪರಂತು ವಾಮಮಾರ್ಗದಲ್ಲಿ ಹಣ ಸಂಪಾದಿಸುತ್ತಿರಲಿಲ್ಲ. ಗೌಡರಿಗೆ 6 ಜನ ಮಕ್ಕಳು, ಇವರಲ್ಲಿ ಶ್ರೀಯುತರುಗಳಾದ ಪ್ರಸಾದ್, ದಯಾನಂದ, ಮಂಜುನಾಥ್ ಹಾಗೂ ಹೆಣ್ಣು ಮಕ್ಕಳು ಗೀತ, ಲತ, ಮಮತ. ಗೌಡರು ಸಂಸಾರದ ಜವಾಬ್ದಾರಿಯನ್ನು ಹೊತ್ತಿದ್ದರು. ತಮ್ಮ ಮಕ್ಕಳಿಗೆ ಶಿಸ್ತು, ಸಂಯಮ, ನಿಷ್ಠೆಯನ್ನು ಕಲಿಸಿದರು.

1962ರಲ್ಲಿ ಅದೇ ಪಿ.ಎಸ್.ಪಿ. ಪಕ್ಷದ ಅಭ್ಯರ್ಥಿಯಾಗಿ ನಿಂತು, ಚಳ್ಳಕೆರೆ ವಿಧಾನ ಸಭಾಕ್ಷೇತ್ರದ ಶಾಸಕರಾಗಿ ಆಯ್ಕೆಯಾದರು. ಜನಪರ ಕಾಳಜಿಯಿದ್ದ ಗೌಡರಿಗೆ ತಮ್ಮ ಕ್ಷೇತ್ರದ ಉದ್ದಗಲಕ್ಕೂ ಸಂಚರಿಸಿ, ಅಭಿವೃದ್ಧಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕೆಲವೇ ದಿನಗಳಲ್ಲಿ ಜನಪ್ರಿಯ ಶಾಸಕರಾದರು. 1967ರ ಚುನಾವಣೆಗೆ ಪ್ರಬಲ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸುವಂತೆ ಕರೆದು ಟಿಕೆಟ್ ನೀಡಿತು, ಗೌಡರು ಸುಲಭವಾಗಿ ಜಯಗಳಿಸಿದರು. 1968-1971ರ ಅವಧಿಯವರೆಗೆ ಮುಖ್ಯಮಂತ್ರಿ ವೀರೇಂದ್ರ ಪಾಟೀಲರ ಮಂತ್ರಿ ಮಂಡಳದಲ್ಲಿ ಸಹಕಾರ ಖಾತೆಯ ರಾಜ್ಯ ಮಂತ್ರಿ (ಸ್ಟೇಟ್ ಮಿನಿಸ್ಟರ್) ಆಗಿ ಸೇವೆ ಸಲ್ಲಿಸಿದರು. 1982ರಲ್ಲಿ ಜನತಾ ಪಕ್ಷವು ಕಾಂಗ್ರೆಸ್ ಪಕ್ಷದ ವಿರುದ್ಧ ತಿರುಗಿ ಬಿದ್ದಾಗ, ರಾಮಕೃಷ್ಣ ಹೆಗಡೆಯವರ ಹಾಗೂ ಹೆಚ್.ಡಿ. ದೇವೇಗೌಡರ ಒತ್ತಾಯದ ಮೇರೆಗೆ, ಜನತಾ ಪಕ್ಷದಿಂದ ಸ್ಪರ್ಧಿಸಿ ಗೆದ್ದರು, ರಾಮಕೃಷ್ಣ ಹೆಗಡೆಯವರು ಗೌಡರಿಗೆ ಕೈಗಾರಿಕೆ ಖಾತೆಯನ್ನು ನೀಡಬಯಸಿದರು, ಆದರು ಗೌಡರು ತಮ್ಮ ನೆಚ್ಚಿನ ಕ್ಷೇತ್ರವಾದ ಸಹಕಾರ ಖಾತೆಯನ್ನು ಕೇಳಿ ಪಡೆದರು. ಸಹಕಾರ ಇಲಾಖೆಯ ದಕ್ಷತೆಯಿಂದ ಕೆಲಸ ಮಾಡುವಂತೆ ಮಾಡಿದ ಕೀರ್ತಿ ಶ್ರೀಯುತರಿಗೆ ಸಲ್ಲುತ್ತದೆ. ಕರ್ನಾಟಕ ರಾಜಕೀಯ-ದಲ್ಲಿ ದೊಂಬರಾಟ ಪ್ರಾರಂಭವಾಯಿತು. 1985ರ ಮರು ಚುನಾವಣೆಯಲ್ಲಿ ತುಮಕೂರು ಜಿಲ್ಲೆಯ ಕಳ್ಳಂಬೆಳ್ಳ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗುವ ಮೂಲಕ ತಾನೊಬ್ಬ ಸೋಲಿಲ್ಲದ ಸರದಾರ ಎಂದು ತೋರಿಸಿದರು. ಅಂದು ಕೆ.ಪಿ.ಎಸ್.ಸಿ. (ಕರ್ನಾಟಕ ಲೋಕಸೇವಾ ಆಯೋಗ)ಗೆ ಯೋಗ್ಯರಾದ ಅಧ್ಯಕ್ಷರ ಅವಶ್ಯಕತೆ ಇದ್ದಿತು. ಹೀಗಾಗಿ ಸರ್ಕಾರವು ಗೌಡರನ್ನು 1986ರಲ್ಲಿ ಕೆ.ಪಿ.ಎಸ್.ಸಿ.ಗೆ

ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು. ಶ್ರೀ ಎಂ.ಎಲ್. ಚಂದ್ರಶೇಖರ್‌ರವರು ತೆರವುಗೊಳಿಸಿದ ಸ್ಥಾನಕ್ಕೆ ನೇಮಕಗೊಂಡ ಬಿ.ಎಲ್. ಗೌಡರೂ ಕೂಡ ಅತ್ಯುತ್ತಮ -ವಾಗಿ ಕೆಲಸ ಮಾಡಿ ಲೋಕಸೇವಾ ಆಯೋಗಕ್ಕೆ ಹೊಸ ಕಾಯಕಲ್ಪ ನೀಡಿದರು. ಅಲ್ಲಿಯ ತನಕ ಲಂಚಗುಳಿ ತನಕ್ಕೆ ಹೆಸರಾಗಿದ್ದ ಪಿ.ಎಸ್.ಪಿ.ಗೆ ಚಳಿ ಬಿಡಿಸಿದರು.

ಸಹಕಾರ ಕ್ಷೇತ್ರದ ಧುರೀಣರಾಗಿ ಬಿ.ಎಲ್. ಗೌಡರು

ಗೌಡರ ಅಚ್ಚುಮೆಚ್ಚಿನ ಕ್ಷೇತ್ರವೆಂದರೆ ಸಹಕಾರ ಕ್ಷೇತ್ರ, ಕಾರಣ ಇವರ ರಾಜಕೀಯ ನಡೆ ಪ್ರಾರಂಭವಾದದ್ದೇ ಚಳ್ಳಕೆರೆ ತಾಲ್ಲೂಕು ಅಭಿವೃದ್ಧಿ ಮಂಡಳಿ ಚುನಾವಣೆ. ತಮ್ಮ ವಿಧಾನ ಸಭಾ ಕ್ಷೇತ್ರದ ತುಂಬೆಲ್ಲಾ ಸಂಚರಿಸಿ ರೈತರ ಕಷ್ಟ ಸುಖ ವಿಚಾರಿಸಿದರು. ಶ್ರೀಯುತರು 1960-68ರ ಸಮಯದಲ್ಲಿ ಚಿತ್ರದುರ್ಗ ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷರಾಗಿ ಆಯ್ಕೆಯಾಗಿ ಅತ್ಯುತ್ತಮವಾಗಿ ಸೇವೆ ಸಲ್ಲಿಸಿದರು. ಈಗಾಗಲೇ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರಿಂದ ಬಹಳ ಪ್ರಭಾವಿ ರಾಜಕಾರಣಿಯಾಗಿದ್ದರು. ಚಿತ್ರದುರ್ಗ, ಚೆಳ್ಳಕೆರೆ, ಶಿರ, ಪಾವಗಡ, ಚಿಕ್ಕನಾಯಕನಹಳ್ಳಿ, ಮಧುಗಿರಿ ಇವೇ ಮುಂತಾದ ಪ್ರದೇಶಗಳ ರೈತರು ಮಳೆಯನ್ನೇ ನಂಬಿ ಬದುಕುತ್ತಿದ್ದರು ಹಾಗೂ ಕಷ್ಟದ ಜೀವನ ನಡೆಸುತ್ತಿದ್ದರು, ವಾಣಿವಿಲಾಸ ಸಾಗರದ ಬಯಲುಸೀಮೆಯಲ್ಲಿ ವಾಣಿಜ್ಯ ಬೆಳೆಯಾದ ಕಬ್ಬು ಬೆಳೆಯಲು ಅನುಕೂಲವಾಗುವಂತೆ ಅದೇ ಹೆಸರಿನ ವಾಣಿ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆಯಾಗಬೇಕೆಂದು ತೀರ್ಮಾನಿಸಿದರು, ಸರ್ಕಾರದೊಂದಿಗೆ ಮಾತುಕತೆ ನಡೆಸಿ 150 ಎಕರೆ ಜಮೀನನ್ನು ಕೈಗಾರಿಕೆ ಸ್ಥಾಪನೆಗೆ ಪಡೆದುಕೊಂಡು 1971ರಲ್ಲಿ ಹಿರಿಯೂರಿನಲ್ಲಿ **"ವಾಣಿ ಸಹಕಾರಿ ಸಕ್ಕರೆ ಕಾರ್ಖಾನೆ"**ಯನ್ನು ಸ್ಥಾಪಿಸಿದರು. ಇದರಿಂದಾಗಿ ಹಿರಿಯೂರು, ಚಿತ್ರದುರ್ಗ, ಶಿರ, ಚೆಳ್ಳಕೆರೆ, ಹೊಸದುರ್ಗ, ಚಿಕ್ಕನಾಯಕನಹಳ್ಳಿ ಇವೇ ಮುಂತಾದ ಪ್ರದೇಶಗಳಲ್ಲಿ ರೈತರು ವಾಣಿಜ್ಯ ಬೆಳೆಯಾದ ಕಬ್ಬು ಬೆಳೆದು ಕೈತುಂಬಾ ಹಣಗಳಿಸುವಂತಾಯಿತು. ಶ್ರೀಯುತರು 1960-68ರಲ್ಲಿ ಚಿತ್ರದುರ್ಗ ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. 1972-78ರ ವರೆಗೆ ಹಿರಿಯೂರು ವಾಣಿ ಸಹಕಾರಿ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿ ಅಧ್ಯಕ್ಷರಾಗಿ ಸುಮಾರು ಆರು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಕೈಗಾರಿಕೆಗಾಗಿ ಪಡೆದಿದ್ದ 150 ಎಕರೆ ಪ್ರದೇಶವನ್ನು ಬರಡು ಭೂಮಿಯಾಗಿಸದೆ. ಉತ್ತಮವಾದ ಮರ ಗಿಡಗಳನ್ನು ನೆಡಿಸಿದರು. ಶ್ರೀಯುತರು ಕೃಷಿ ಪದವಿಧರರಾಗಿದ್ದರಿಂದ ಬೆಲೆ ಬಾಳುವ ಮರಗಳು ಮುಂದೆ ಕೈಗಾರಿಕೆ ಲಾಭ ತಂದು ಕೊಟ್ಟಿತು. ಕಬ್ಬಿನ ರಚ್ಚು, ಮೊಲಾಸಿಸ್ ಸೇರಿದಂತೆ ವಾಸನೆ ಬರುವ ಹಾಗೂ ಕೆಲಸಕ್ಕೆ ಬಾರದ ವಸ್ತುಗಳನ್ನು ಕೈಗಾರಿಕೆಯ ಆವರಣದಿಂದ ತೆರವುಗೊಳಿಸಿ ಶುಚಿಗೆ ಮಹತ್ವ ನೀಡುತ್ತಿದ್ದರು. ಇವರು ಸ್ಥಾಪಿಸಿದ ಸಕ್ಕರೆ ಕಾರ್ಖಾನೆಯು ಕಬ್ಬು ಬೆಳೆಯುವ ರೈತರಿಗೆ ಹೆಚ್ಚು ಅನುಕೂಲವಾಯ್ತು. ಕಬ್ಬು ಒಂದು ವಾಣಿಜ್ಯ ಬೆಳೆಯಾಯ್ತು.

ಕೈಗಾರಿಕೆಯಿಂದಾಗಿ ಆರ್ಥಿಕ ಚಟುವಟಿಕೆ ಹೆಚ್ಚಾಗಲಾಗಿ ಹಿಂದುಳಿದಿದ್ದ ಚಿತ್ರದುರ್ಗ ಜಿಲ್ಲೆಯ ಶ್ರೀಮಂತ ಜಿಲ್ಲೆಗಳ ಸಾಲಿಗೆ ಸೇರಿದಂತಾಯ್ತು. 1978–80ರಲ್ಲಿ ಕರ್ನಾಟಕ ಆಡಳಿತ ಮಂಡಳಿ ಅಧ್ಯಕ್ಷರಾಗಿ ನಂತರ 1982–83ರಲ್ಲಿ ಅಖಿಲ ಭಾರತ ಸಹಕಾರಿ ಸಕ್ಕರೆ ಕಾರ್ಖಾನೆಗಳ ಫೆಡರೇಷನ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಇಷ್ಟೇ ಅಲ್ಲದೆ ವಿಶ್ವ ಕಬ್ಬು ಬೆಳೆಗಾರರ ಒಕ್ಕೂಟದ ಸದಸ್ಯರಾಗಿ ರಾಜ್ಯದ ಹಾಗೂ ದೇಶದ ಕಬ್ಬು ಬೆಳೆಗಾರರಿಗೆ ಅನುಕೂಲವಾಗುವ ಯೋಜನೆಗಳನ್ನು ರೂಪಿಸಿದರು. ಗೌಡರು ಕಬ್ಬು ಬೆಳೆಯುವ ರಾಷ್ಟ್ರಗಳಾದ, ಸೌತ್ ಆಫ್ರಿಕ, ರಷ್ಯಾ, ಮೆಕ್ಸಿಕೋ, ಫಿಲಿಫೆನ್ಸ್, ಅಮೇರಿಕಾ ಇವೇ ಮುಂತಾದ ರಾಷ್ಟ್ರಗಳಿಗೆ ಭೇಟಿ ನೀಡಿ, ಎಲ್ಲಾ ಮಾಹಿತಿಗಳನ್ನು ಕಲೆ ಹಾಕಿ ನಮ್ಮ ರೈತರಿಗೆ ಉತ್ತೇಜನ ನೀಡಿದರು.

ತುಮಕೂರು–ಬೆಂಗಳೂರು ರಸ್ತೆಯ ಹೆದ್ದಾರಿ–4 ಮಾಡಲು ಸರ್ಕಾರವು ಕೈಗೆತ್ತಿಕೊಂಡಾಗ ಕಾರ್ಖಾನೆಯ ಭೂಮಿಯನ್ನು ಹೆದ್ದಾರಿ ನಿರ್ಮಾಣಕ್ಕೆ ಬಳಸಿಕೊಳ್ಳಲಾಗಿ ಸರ್ಕಾರವು ಕಾರ್ಖಾನೆಗೆ ಪರಿಹಾರ ರೂಪದಲ್ಲಿ 13 ಕೋಟಿ ಹಣ ನೀಡಿತು. ಕಾರ್ಖಾನೆಯ ಅಭಿವೃದ್ಧಿಗೆ ಈ ಹಣ ನೆರವಾಯಿತು. ಚಳ್ಳಕೆರೆ ತಾಲ್ಲೂಕು ಕುಂದಾಪುರ "ಕುರಿ ಸಾಕಾಣಿಕೆ" ಕೇಂದ್ರವನ್ನು ಸ್ಥಾಪಿಸಿದರು. ಇಂದಿಗೂ ಶಿರಾ ಪಟ್ಟಣದ ಕುರಿಗಳಿಗೆ ಬೆಂಗಳೂರಿನಲ್ಲಿ ಬೇಡಿಕೆ ಇರುವುದನ್ನು ಇಲ್ಲಿ ಸ್ಮರಿಸಬಹುದು. ಬಿ.ಎಲ್. ಗೌಡರಿಗೆ, ಕ್ರೆಡಿಟ್ ಸಲ್ಲಲೇಬೇಕು.


ಶಿಕ್ಷಣ ದಾಸೋಹಕ್ಕೆ ಗೌಡರ ಕೊಡುಗೆ

ರೈತರಿಗೆ ಕೇವಲ ಹಣ ಬಂದರೆ ಸಾಲದು, ರೈತರ ಮಕ್ಕಳಿಗೆ ಉತ್ತಮವಾದ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ಚಳ್ಳಕೆರೆ ತಾಲ್ಲೂಕು ಸಿರಿವಾರ, ಓಬಳಾಪುರಗಳಲ್ಲಿ ಪ್ರೌಢ 'ಶಾಲೆಯನ್ನು, ಚಳ್ಳಕೆರೆಯಲ್ಲಿ ಹೆಚ್.ಪಿ.ಸಿ.ಸಿ. ಪದವಿ ಕಾಲೇಜನ್ನು ಧರ್ಮಪುರದಲ್ಲಿ ಶ್ರೀ ಪಂಚಲಿಂಗೇಶ್ವರ ಪದವಿಪೂರ್ವ ಕಾಲೇಜುಗಳು ಸ್ಥಾಪನೆಯಾಗಲು ಗೌಡರು ಶ್ರಮಿಸಿದರು. ಇಂದು ನೂರಾರುಜನ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಸಾಕಷ್ಟು ಜನಪದವೀಧರರಾಗಿ ಇಂದು ರಾಜ್ಯದಲ್ಲಿ ಹಾಗೂ ಹೊರ ರಾಜ್ಯದಲ್ಲಿ ಉದ್ಯೋಗದಲ್ಲಿದ್ದಾರೆ.

ನೇರ ನಡೆ ನುಡಿಯ ಗೌಡರು ತುಸು ಮುಂಗೋಪಿಗಳಾಗಿದ್ದರೂ, ಜನ ಇವರನ್ನು ಮೆಚ್ಚುತ್ತಿದ್ದರು. ಇಂದಿನ ರಾಜಕಾರಣಿಗಳಂತೆ ಸುಳ್ಳು ತಟವಟ, ತಳುಕು ಬಳುಕನ್ನು ಕಂಡರಿಯರು. ರೈತರ, ದೀನ ದಲಿತರ ಬಗ್ಗೆ ಕನಿಕರವಿತ್ತು. ಗೌಡರ ರಾಜಕೀಯ ಆತ್ಮೀಯ ಮಿತ್ರರುಗಳೆಂದರೆ ಹುಚ್ಚಮಾಸ್ತಿ ಗೌಡ, ಕೆ.ಹೆಚ್. ಪಾಟೀಲ್, ಎಸ್.ಎಂ. ಕೃಷ್ಣ, ಹೆಚ್.ಡಿ. ದೇವೆಗೌಡ ಇವರೇ ಮುಂತಾದವರು. ಬಿ.ಎಲ್. ಗೌಡರು 1988 ರಲ್ಲಿ ಶಿವೈಕ್ಯರಾದರು. ಆದರೆ ಇಂದಿಗೂ ಚಿತ್ರದುರ್ಗ ಜಿಲ್ಲೆಯಲ್ಲಿ

ಇವರ ಹೆಸರು ಶಾಶ್ವತವಾಗಿದೆ. ಸಾಕಷ್ಟು ಜನ ಪದವೀಧರರಾಗಿ ಇಂದು ರಾಜ್ಯದಲ್ಲಿ ಹಾಗೂ ಹೊರ ರಾಜ್ಯದಲ್ಲಿ ಉದ್ಯೋಗದಲ್ಲಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ



ರಾಜಕಾರಣಿಯೊಬ್ಬರು ಹೀಗೆ ಇರಬೇಕು ಮತ್ತು ಹೀಗೂ ಇರುತ್ತಾರೆ ಎನ್ನುವುದಕ್ಕೆ ರಾಮಯ್ಯನವರು ಅತ್ಯುತ್ತಮವಾದ ಉದಾಹರಣೆ. ವಕೀಲರಾಗಿ, ಶಾಸಕರಾಗಿ, ಮಂತ್ರಿಯಾಗಿ ಎಲ್ಲಕ್ಕಿಂತಲೂ ಹೆಚ್ಚಾಗಿ ರೈತರ, ದೀನದಲಿತರ ಪರಿಸರದ ಬಗ್ಗೆ ತುಂಬು ಕಾಳಜಿಯನ್ನು ಹೊಂದಿದ್ದ ವ್ಯಕ್ತಿ. ತುಸುಮುಂಗೋಪ ಆದರೆ ಹಿಡಿದ ಹಠಬಿಡದ ಮೊಂಡು ಸ್ವಭಾವದ ಒರಟು ವ್ಯಕ್ತಿ. ಇಂತಹ ವ್ಯಕ್ತಿಯನ್ನೇ ಅಪ್ಪಿಕೊಂಡ ಜನ ನಾಲ್ಕಾರು ಬಾರಿ ಶಾಸಕರನ್ನಾಗಿ ಆಯ್ಕೆ ಮಾಡಿದ್ದು ವಿಶೇಷ.

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಹುಲಿಯೂರು ದುರ್ಗ ಹೋಬಳಿಯ ಎಲೆಕಡಲು ಗ್ರಾಮದ ರೈತ ದಂಪತಿಗಳಾದ ಕಂಬೇಗೌಡ ಮತ್ತು ಚನ್ನಮ್ಮ ದಂಪತಿಗಳು ರಾಮಯ್ಯನವರ ಮಾತಾಪಿತೃಗಳು. 1939ರಲ್ಲಿ ರಾಮಯ್ಯನವರು ಜನಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಎಲೆಕಡಕಲು ಮತ್ತು ಉಜ್ಜನಿ ಗ್ರಾಮಗಳಲ್ಲಿ ಪಡೆದರು.

1958–59ರಲ್ಲಿ ಹುಲಿಯೂರುದುರ್ಗ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿ ಉತ್ತಮ ಶ್ರೇಣಿಯಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾದರು. ತುಮಕೂರಿನ ಸರ್ಕಾರಿ ಪದವಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿ 1962ರಲ್ಲಿ ಬಿ.ಎ. ಪದವಿಯನ್ನು 1964ರಲ್ಲಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿಗಳಿಸಿದರು. 1966ರಲ್ಲಿ ಧಾರವಾಡ ಜೆ.ಎಸ್.ಎಸ್. ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಗಳಿಸಿದರು. 1967ರಲ್ಲಿ ತುಮಕೂರು ನಗರದ ಹೆಸರಾಂತ ನ್ಯಾಯವಾದಿಗಳಾದ ಹೆಚ್.ಎಸ್. ಶೇಷಾದ್ರಿ (ಒಕ್ಕಲಿಗರು)ಯವರ ಬಳಿ ಕಿರಿಯ ವಕೀಲರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದರು. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪಾಂಡಿತ್ಯ ಹೊಂದಿದ್ದ ರಾಮಯ್ಯನವರು ಸ್ವತಂತ್ರವಾಗಿ ವಕೀಲಿ ವೃತ್ತಿ ಮಾಡತೊಡಗಿದರು. ಕೇಸ್‌ಗಳನ್ನು ಒಂದರ ಮೇಲೆ ಒಂದು ಗೆದ್ದ ಬಳಿಕ ಪ್ರಖ್ಯಾತ ವಕೀಲರಾದರು. ಸಾಕಷ್ಟು ಆಸ್ತಿ–ಪಾಸ್ತಿಗಳಿಸಿದರು. 1974 ರಿಂದ 1985ರ ತನಕ ಅಂದರೆ ಹನ್ನೊಂದು ವರ್ಷಗಳ ಕಾಲ ರೇಷ್ಮೆ ಬೆಳೆಗಾರರ ಸಂಘದ ಅಧ್ಯಕ್ಷರಾದರು. ಸಂಘಕ್ಕೆ ಸೂಕ್ತ ಕಛೇರಿ, ಉತ್ತಮವಾಗಿ ಕೆಲಸ ಮಾಡುವ ಸಿಬ್ಬಂದಿಯ ಆಯ್ಕೆ ಮಾಡಿಕೊಂಡು ರೇಷ್ಮೆ ಬೆಳೆಗಾರರ

ಸಂಘಕ್ಕೆ ಹೊಸ ಕಾಯಕಲ್ಪ ಕಲ್ಪಿಸಿದ ಕೀರ್ತಿ ರಾಮಯ್ಯನವರಿಗೆ ಸಲ್ಲುತ್ತದೆ. ಕುಣಿಗಲ್ ವಕೀಲರ ಸಂಘದ ಅಧ್ಯಕ್ಷರಾಗಿ, ರೋಟರಿ ಕ್ಲಬ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಶಾಸಕರಾಗಿ – ಜನಪ್ರಿಯತೆ ಹೆಚ್ಚಾದಂತೆ ರಾಜಕೀಯ ಇವರನ್ನು ಸೆಳೆಯಿತು. ಜಯಪ್ರಕಾಶ್ ನಾರಾಯಣರ ನೇತೃತ್ವದ ಜನತಾ ಪಕ್ಷ ಅಸ್ತಿತ್ವಕ್ಕೆ ಬಂದಾಗ ಸಕ್ರಿಯ ಕಾರ್ಯಕರ್ತರಾಗಿ ದುಡಿದರು. 1967ರಲ್ಲಿ ವಿಧಾನ ಸಭಾ ಚುನಾವಣೆಗೆ ನಿಂತು ಪರಾಭವಗೊಂಡರು. 1983ರ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದರು. 1985ರಲ್ಲಿ ಕುಣಿಗಲ್ ಕ್ಷೇತ್ರದಿಂದ ನಂತರ 1992ರ ಉಪಚುನಾವಣೆ ಗೆಲುವು ಸಾಧಿಸಿದರು. ನಂತರ 1998–99ರಲ್ಲಿ ಹುಲಿಯೂರುದುರ್ಗ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದರು. ಒಟ್ಟು ನಾಲ್ಕು ಬಾರಿ ವಿಧಾನ ಸಭಾ ಚುನಾವಣೆಯಲ್ಲಿ ಗೆದ್ದು ದಾಖಲೆ ನಿರ್ಮಿಸಿದರು.


ಮಂತ್ರಿಯಾಗಿ ರಾಮಯ್ಯನವರು – 1985ರ ಚುನಾವಣೆಗೆ ನಿಂತು ಎರಡನೆಯ ಬಾರಿ ಗೆಲುವು ಸಾಧಿಸಿದಾಗ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ರಾಮಯ್ಯನವರನ್ನು ರೇಷ್ಮೆ ಖಾತೆ ಸಚಿವರನ್ನಾಗಿ ನೇಮಿಸಿದರು. ವಿಶ್ವ ಬ್ಯಾಂಕ್ ನೆರವಿನಿಂದ ಕೋಟ್ಯಾಂತರ ರೂಪಾಯಿ ಸಾಲ ತಂದು ರೇಷ್ಮೆ ಇಲಾಖೆಯನ್ನು ಅಭಿವೃದ್ಧಿ ಪಡಿಸಿದರು. ಜಡ್ಡುಗಟ್ಟಿದ ಇಲಾಖೆಗೆ ಕಾಯಕಲ್ಪ ಕಲ್ಪಿಸಲು ತೀರ್ಮಾನಿಸಿದರು. ರೇಷ್ಮೆ ಬೆಳೆಗಾರರು ಮಾರಾಟ ಮತ್ತು ಕೊಳ್ಳುವ ಸ್ಥಳಕ್ಕೆ ಬೆಳಂಬೆಳಿಗ್ಗೆ ದಿಢೀರ್ ಭೇಟಿ ನೀಡಿ ಅಧಿಕಾರಿಗಳಿಗೆ, ದಳ್ಳಾಳಿಗಳಿಗೆ ಬಿಸಿ ಮುಟ್ಟಿಸುತ್ತಿದ್ದರು. ಸದಾ ರೈತಪರ ಚಿಂತನೆ ಮಾಡುತ್ತಿದ್ದ ರಾಮಯ್ಯನವರು ರೈತರಿಗೆ ಮೋಸ ವಂಚನೆ ಮಾಡುವವರನ್ನು ಥಳಿಸಲು ಹಿಂದು ಮುಂದು ನೋಡುತ್ತಿರಲಿಲ್ಲ. ರೇಷ್ಮೆ ಕುರಿತ ಅಧ್ಯಯನಕ್ಕಾಗಿ ಜಪಾನ್, ಚೀನಾ, ಕೊರಿಯಾ ರಾಷ್ಟ್ರಗಳಿಗೆ ಭೇಟಿ ನೀಡಿ ಅಲ್ಲಿರುವ ತಂತ್ರಜ್ಞಾನ ಮತ್ತು ಮಾರುಕಟ್ಟೆಯ ವಿಸ್ತರಣೆಯನ್ನು ಅಧ್ಯಯನ ಮಾಡಿ ಅದನ್ನು ಇಲ್ಲೂ ಆಚರಣೆಗೆ ತಂದರು.

ತೋಟಗಾರಿಕ ಸಚಿವರಾಗಿ ರಾಮಯ್ಯನವರು – ಸರ್ಕಾರ 1988ರಲ್ಲಿ ರಾಮಯ್ಯನವರನ್ನು ತೋಟಗಾರಿಕ ಸಚಿವರನ್ನಾಗಿ ನೇಮಕ ಮಾಡಿತು. ಡಾ. ಎಂ.ಹೆಚ್. ಮರಿಗೌಡರ ಸಲಹೆ ಸೂಚನೆಯಂತೆ ರಾಜ್ಯದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸಿದರು. ಒಣಭೂಮಿ ಬೇಸಾಯಕ್ಕೆ ಒತ್ತು ಕೊಟ್ಟರು. ಲಾಲ್‌ಬಾಗ್ ತೋಟಗಾರಿಕಾ ಇಲಾಖೆಯ ದರ್ಪಿಷ್ಟ ಐ.ಎ.ಎಸ್. ಅಧಿಕಾರಿಯ ಮುಖಭಂಗ ಮಾಡಿ ಅಲ್ಲಿನ ಗ್ರಂಥಾಲಯಕ್ಕೆ "ಡಾ. ಎಂ.ಹೆಚ್. ಮರಿಗೌಡ ರಾಷ್ಟ್ರೀಯ ತೋಟಗಾರಿಕಾ ಗ್ರಂಥಾಲಯ" ಎಂದು ನಾಮಕರಣ ಮಾಡಿದರು. ಜನತಾ ಪಕ್ಷ ಹೋಳಾದಾಗ ಹೆಚ್.ಡಿ. ದೇವೇಗೌಡರ ಪರ ನಿಂತರು.

ಹೇಮಾವತಿ ನೀರಿಗಾಗಿ ಹೋರಾಟ – ತುಮಕೂರು ಜಿಲ್ಲೆಯ ರಾಜಧಾನಿ ಬೆಂಗಳೂರಿನ ಸರಹದ್ದಿನಲ್ಲೇ ಇದ್ದರು ಹಿಂದುಳಿದ ಹಾಗೂ ಒಣಭೂಮಿ ಎಂದೇ ಹೆಸರುವಾಸಿ. ಬಹಳ ಕಾಲದಿಂದ ಬಾಗೂರು ನವಿಲೆ ಸುರಂಗದ ಕೆಲಸ ಕುಂಟುತ್ತಾ ಸಾಗುತ್ತಿತ್ತು. ಹೆಚ್.ಡಿ. ದೇವೇಗೌಡರು ಪ್ರಾಮಾಣಿಕ ಪ್ರಯತ್ನ ಮಾಡಿ ಹೇಮಾವತಿ ನೀರು ತುಮಕೂರಿಗೆ ಬರುವಂತೆ ಮಾಡಬೇಕೆಂದು ಒತ್ತಾಯ ಮಾಡಿದರು. ಹಟಬಿಡದ ರಾಮಯ್ಯನವರು ಜನರನ್ನು ಒಗ್ಗೂಡಿಸಿ ಮುಷ್ಕರ ಹರತಾಳವನ್ನು ಮಾಡಿದರು. ಚಳವಳಿ ಬಹಳ ಜೋರಾದಾಗ ಪೋಲಿಸರು ಬಂಧಿಸಿ ನ್ಯಾಯಾಲಕ್ಕೆ ಒಪ್ಪಿಸಿದರು. ನ್ಯಾಯಾಲಯವು ರಾಮಯ್ಯನವರನ್ನು ಜೈಲಿಗೆ ಕಳುಯಿಸಿತು. ಬೇಲ್ ಪಡೆಯದೆ ಜೈಲಿನಲ್ಲಿ ಹೋರಾಟ ಮುಂದುವರಿಸಿದರು. ವಿಧಾನ ಸಭೆಯಲ್ಲಿ ಬಂಧನದ ಬಿಸಿ ತಟ್ಟಿತು. ಬಿಡುಗಡೆಯಾಗಿ ಬಂದು ಮತ್ತೆ ಹೋರಾಟ ಮುಂದುವರಿಸಿದರು. ರಾಮಯ್ಯನವರ ನಿರಂತರ ಹೋರಾಟದ ಫಲವಾಗಿ 1994ರಲ್ಲಿ ಹೇಮಾವತಿ ನೀರನ್ನು ತುಮಕೂರಿಗೆ ಹರಿಸಲಾಯಿತು.

ಹೀಗೆ ವೈ.ಕೆ. ರಾಮಯ್ಯನವರು ಪ್ರಖ್ಯಾತ ವಕೀಲರಾಗಿ, ಶಾಸಕರಾಗಿ, ಮಂತ್ರಿಯಾಗಿ ಎಲ್ಲದಕ್ಕೂ ಹೆಚ್ಚಾಗಿ ರೈತ ಪರ ಚಿಂತಕರಾಗಿ ಹೋರಾಟ ಮಾಡಿದ್ದು ಪಾದಯಾತ್ರೆ ಮಾಡಿದ್ದು ಈಗ ಇತಿಹಾಸವಾಗಿ ಉಳಿದಿದೆ. ರಾಮಯ್ಯನವರು ಕೊನೆಯ ದಿನಗಳಲ್ಲಿ ಅವರ ಮನಸ್ಸು ಸಾಹಿತ್ಯ, ಸಂಸ್ಕೃತಿಯ ಕಡೆಗೆ ಒಲಿಯಿತು. **"ನಾನು ಮತ್ತು ರೇಷ್ಮೆ"** ಎಂಬ ಕೃತಿ ರಚಿಸಿದರು. ಸಾಹಿತಿಗಳ ಒಡನಾಟ ಹಿತ ಎನ್ನಿಸಿತು. ಇಂದಿಗೂ ತುಮಕೂರಿಗರ ಪಾಲಿಗೆ ವೈ.ಕೆ. ರಾಮಯ್ಯನವರು **"ಆಧುನಿಕ ಭಗೀರಥನೇ ಸರಿ"**.

ಶ್ರೀ ಸಿ. ಭೈರೇಗೌಡ



ರೈತನ ಮಗನಾಗಿ ಹುಟ್ಟಿ ರೈತರ ಪರ ಹೋರಾಡಿದ ನಿಜವಾದ ಮಣ್ಣಿನ ಮಗ ಎಂದರೆ ಸಿ. ಭೈರೇಗೌಡ ತಮ್ಮ ಜೀವಿತಾವಧಿಯಲ್ಲಿ ಮೌಲ್ಯಯುತ ರಾಜಕಾರಣ ಮಾಡಿದರೇ ಪರಂತು ಕೊಳಕು ರಾಜಕಾರಣ ಮಾಡಿದವರಲ್ಲ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದು ಶಿಸ್ತು, ನಿಷ್ಠೂರ ರಾಜಕಾರಣ ಅವರನ್ನು ಕೊನೆಯವರೆಗೂ ಕಾಪಾಡಿತು.

ಶ್ರೀಯುತರು ಕೋಲಾರ ತಾಲ್ಲೂಕು ನರಸಾಪುರ ಹೋಬಳಿ ಚೌಡದೇವನ –ಹಳ್ಳಿಯ ಚೌಡೇಗೌಡ ಮತ್ತು ಲಕ್ಷ್ಮೀದೇವಮ್ಮನವರ ಪುತ್ರರಾಗಿ ತಾರೀಖು 12.5.1934 ರಂದು ಜನಿಸಿದರು. ಚನ್ನರಾಯಗೌಡ, ಸೊಣ್ಣೆಗೌಡ, ಶಾಂತಮ್ಮ ಇವರುಗಳು ಭೈರೇಗೌಡರ ಸಹೋದರ, ಸಹೋದರಿಯರು. ಹುಟ್ಟಿನಿಂದ ವ್ಯವಸಾಯ ಪಶು

ಸಂಗೋಪನೆಯ ಬಗ್ಗೆ ತುಂಬು ಕಾಳಜಿ ಹೊಂದಿದ್ದರು. ಬಿ.ಎಸ್ಸ್‌ಸಿ ಪದವೀಧರರಾದ ನಂತರ ತನ್ನ ಸಹಪಾಟಿಗಳಂತೆ ಸರ್ಕಾರಿ ಕೆಲಸಕ್ಕೆ ಸೇರದೆ ತಮ್ಮ ಗ್ರಾಮದಲ್ಲಿನ ಸಮಸ್ಯೆಗೆ ಸ್ಪಂದಿಸುತ್ತಿದ್ದರು. ತಮಗೆ ಬಂದ ಭೂಮಿಯಲ್ಲಿ ಕೃಷಿ ಮಾಡತೊಡಗಿದರು. ಪಟ್ಟಣಕ್ಕೆ ಮುಖ ಮಾಡದೆ ರೈತ ಪರ ಸಂಘಟನೆಗಳೊಂದಿಗೆ ಒಡನಾಟ ಇಟ್ಟು-ಕೊಂಡರು. ರೈತಪರ ಚಳವಳಿಗಳಲ್ಲಿ ಭಾಗವಹಿಸ ತೊಡಗಿದರು. ಆಗತಾನೆ ಚಿಗುರೊಡೆ-ಯುತ್ತಿದ್ದ ರೈತ ಸಂಘಕ್ಕೆ ಪುಷ್ಟಿ ನೀಡುತ್ತಿದ್ದರು. ಭೂ ಸುಧಾರಣೆ, ಜೋಡಿ ಇನಾಂ ಪದ್ಧತಿಗಾಗಿ ಹೋರಾಟ ಕೈಗೊಂಡರು. ಅವರ ಮನಸ್ಸು ದೀನ ದಲಿತರ, ಕಾರ್ಮಿಕರ, ಶ್ರಮಿಕರ ಪರ ಚಿಂತಿಸುತ್ತಿತ್ತು. ನಂತರ ಮಾರ್ಕ್ಸ್‌ಸ್ಟ ತತ್ವಗಳನ್ನು ಮೆಚ್ಚಿ ಶ್ರಮಿಕರ ಪರ ನಿಂತರು ಹೀಗೆ ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡ ಬೈರೇಗೌಡರು ದಿನೇ ದಿನೇ ಜನಪ್ರಿಯ ವ್ಯಕ್ತಿಯಾದರು. 1972ರ ಸಾರ್ವತ್ರಿಕ ಚುನಾವಣೆಯಲ್ಲಿ ವೇಮಗಲ್ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದರು. ನಂತರ 1983, 1985, 1989, 1994, 1999 ಹೀಗೆ ಕೆಲವಾರು ಬಾರಿ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದರು. ಈಗಾಗಲೇ ತಿಳಿಸಿರುವಂತೆ ರೈತರ ಬಗ್ಗೆ ತುಂಬುಕಾಳಜಿ ಹೊಂದಿದ್ದ ಗೌಡರು ಕಬ್ಬು ಬೆಳೆಗಾರರು, ರೇಷ್ಮೆ ಬೆಳೆಗಾರರ, ಭತ್ತ ಬೆಳೆಗಾರರು ಸಂಕಟಕ್ಕೆ ಸಿಕ್ಕಿ ನಲುಗಿದಾಗಲೆಲ್ಲ ಅವರ ಪರ ವಿಧಾನ ಸಭೆಯಲ್ಲಿ ಪಟ್ಟು ಹಿಡಿದು ಚರ್ಚಿಸುತ್ತಿದ್ದರು. ತಮ್ಮ ಕ್ಷೇತ್ರ ಮಾತ್ರ-ವಲ್ಲ ರಾಜ್ಯದ ಯಾವುದೇ ಮೂಲೆಯ ರೈತರಿಗೆ ತೊಂದರೆಯಾದರೂ ಸಹಿಸುತ್ತಿರಲಿಲ್ಲ ಅವರ ಪರ ನಿಲ್ಲುತ್ತಿದ್ದರು. ರೈತರಿಗೆ ತೊಂದರೆ ಕೊಡುವ ಹಾಗೂ ಲಂಚ ಕೇಳುವ ಅಧಿಕಾರಿಗಳನ್ನು ಕಂಡರೆ ಆಗುತ್ತಿರಲಿಲ್ಲ.

ರೈತರ ದೀನ ದಲಿತರ ಪರ ಭೈರೇಗೌಡರು ಇದ್ದುದರಿಂದ ರೈತರು, ಕೃಷಿ ಕಾರ್ಮಿಕರು, ಮದ್ಯಮ ಹಾಗೂ ಕೆಳಮದ್ಯಮ ವರ್ಗದ ಜನ ಸಾರ್ವತ್ರಿಕ ಚುನಾವಣೆ-ಯಲ್ಲಿ ಭೈರೇಗೌಡರನ್ನು ಕೈ ಬಿಡುತ್ತಿರಲಿಲ್ಲ. ಭೈರೇಗೌಡರು 1972ರಲ್ಲಿ ಸೈಕಲ್ 1983ರಲ್ಲಿ ತಕ್ಕಡಿ, 1985ರಲ್ಲಿ ಚಕ್ರದೊಳಗೆ ನೇಗಿಲು ಹೊತ್ತ ರೈತ, 1989ರಲ್ಲಿ ಕೃಷಿ ಭೂಮಿ ಅಗೆತ ಮಾಡುತ್ತಿರುವ ರೈತ, 1994ರಲ್ಲಿ ಚಕ್ರ ಹಾಗೂ ಸಂಯುಕ್ತ ಜನತಾ ದಳದಿಂದ, 1999ರಲ್ಲಿ ಬಾಣ ಗುರುತಿನ ಮೇಲೆ ಹೀಗೆ ನಾನಾ ಚಿಹ್ನೆಗಳಲ್ಲಿ ಗೌಡರು ನಿಂತು ಗೆದ್ದರು. ಕಷ್ಟಪಟ್ಟು ಕೆಲಸ ಮಾಡುವ ರೈತರನ್ನು ಕಂಡರೆ ಎಲ್ಲಿಲ್ಲದ ಪ್ರೀತಿ ಮತ್ತು ಗೌರವವನ್ನು ತೋರಿಸುತ್ತಿದ್ದರು (ಕೆಲಸ ಮಾಡದೆ ರೈತರೆಂದು ಹೇಳಿಕೊಂಡು ವಿಧಾನ ಸೌಧ ಸುತ್ತುವವರನ್ನಲ್ಲ) ಅವರಿಗಾಗಿ ಸ್ಪಂದಿಸುತ್ತಿದ್ದರು. ತಾವು ವಿರೋಧ ಪಕ್ಷದ ಸಭಾ ಸದರಾಗಿರಲಿ ಆಡಳಿತ ಪಕ್ಷವಾಗಲಿ ಮಂತ್ರಿಯಾಗಿರಲಿ ಅವರ ಮನಸ್ಸು ರೈತರ ಪರವಿರುತ್ತಿತ್ತು.

ಹಿಂದೊಮ್ಮೆ ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದಾಗ ಪ್ರಶ್ನೋತ್ತರದ ವೇಳೆ ಅಪ್ರಯೋಜಕವಾಗಿರುವ ಕಾಡು ಪ್ರದೇಶವನ್ನು ರೈತರಿಗೆ ನೀಡುವುದಾಗಿ ಹೇಳಿಕೆ


ನೀಡಿದಾಗ ಭೈರೆಗೌಡರು ಭೂ ರಹಿತ ರೈತರಿಗೆ ಭೂಮಿ ಕೊಡುವುದಾದರೆ ಉತ್ತಮ -ವಾದ ಭೂಮಿ ನೀಡಿ ಅದನ್ನು ಬಿಟ್ಟು ಕೆಲಸಕ್ಕೆ ಬಾರದ ಕುರುಚಲು ಕಾಡನ್ನು ನೀಡಿದರೆ ಅದನ್ನು ಆಬದ್ದು ಮಾಡುವಷ್ಟರಲ್ಲಿ ರೈತನು ಹೈರಾಣಾಗುತ್ತಾನೆ ನೀವು ಭೂಮಿಯನ್ನು ನೀಡಿ ರೈತರಿಗೆ ಅನುಕೂಲ ಮಾಡುವುದರ ಬದಲು ಅವರನ್ನು ಮತ್ತಷ್ಟು ದಿವಾಳಿ ಮಾಡುತ್ತೀರಿ ಎಂದು ಮುಖ್ಯಮಂತ್ರಿ ಡಿ.ದೇವರಾಜ ಅರಸರಿಗೆ ರುಚಿ ಮುಟ್ಟಿಸಿದರು.

ಇಂದಿರಾ ಗಾಂಧಿಯವರ ಇಪ್ಪತ್ತು ಅಂಶದ ಕಾರ್ಯಕ್ರಮದ ಪ್ರಕಾರ ಭೂ ಸುಧಾರಣೆ ಮಸೂದೆಗೆ ತಿದ್ದುಪಡಿಯನ್ನು ತಂದು ರೈತರಿಗೆ ಭೂಮಿಯನ್ನು ಉಚಿತವಾಗಿ ಹಂಚುತ್ತೇವೆ ಎಂದು ಕರಪತ್ರ ಮತ್ತು ವಾಲಪೋಸ್ಟ್‌ಗಳನ್ನಾಕಿ ಕೀಳುಮಟ್ಟದ ಜನಪ್ರಿಯತೆ ಗಳಿಸಲು ಪ್ರಯತ್ನಿಸುತ್ತಿದ್ದಾರೆ. ಇದು ತರವಲ್ಲ ನಿಜವಾಗಿ ಕಷ್ಟಪಟ್ಟು ದುಡಿಯುವ ರೈತರನ್ನು ಗುರ್ತಿಸಿ ಅವರಿಗೆ ಭೂಮಿಯನ್ನು ಹಂಚಿ ಎಂದು ಮುಖ್ಯಮಂತ್ರಿ ದೇವರಾಜ ಅರಸರನ್ನು ಒತ್ತಾಯಿಸಿದರು.

ಕರ್ನಾಟಕ ರಾಜ್ಯದ ರಾಜಕೀಯದ ಏರಿಳಿತಗಳಲ್ಲಿ ತಮ್ಮ ಸ್ಥಾನವನ್ನು ಕಾಯ್ದು -ಕೊಂಡರು ಹೆಚ್.ಡಿ.ದೇವೇಗೌಡರಿಗೆ ಬೆಂಬಲಕ್ಕೆ ನಿಂತರು. 1994ರಲ್ಲಿ ಕೃಷಿ ಸಚಿವರಾದರು ತಾವೇ ಮೆಚ್ಚಿದ ಖಾತೆ ಅದಾಗಿತ್ತು ಕೃಷಿ ಇಲಾಖೆಯು ದಕ್ಷತೆಯಿಂದ ಕೆಲಸ ಮಾಡುವಂತೆ ಇಲಾಖೆಗೆ ಕಾಯಕಲ್ಪ ನೀಡಿದ ಕೀರ್ತಿ ಭೈರೇಗೌಡರಿಗೆ ಸಲ್ಲುತ್ತದೆ.

ಹೀಗೆ ಸಿ. ಭೈರೇಗೌಡರು, ಡಿ.ದೇವರಾಜ ಅರಸರು, ವೀರೇಂದ್ರ ಪಾಟೀಲ್, ರಾಮಕೃಷ್ಣ ಹೆಗಡೆ, ಹೆಚ್.ಡಿ.ದೇವೇಗೌಡ, ಎಸ್.ಎಂ.ಕೃಷ್ಣ ಇನ್ನೂ ಮುಂತಾದ ಮುಖ್ಯಮಂತ್ರಿಗಳನ್ನೂ, ಮಂತ್ರಿಗಳೊಂದಿಗೆ ಕೆಲಸಮಾಡಿ ಸೈ ಎನಿಸಿಕೊಂಡರು. ತಮ್ಮ ಕೈ ಕೆಸರು ಮಾಡಿಕೊಳ್ಳದೆ ಶುದ್ದ ಹಸ್ತರಾಗಿ ಕೊನೆಯ ಕಾಲದ ತನಕ ತಮ್ಮ ತನವನ್ನು ಬಿಟ್ಟುಕೊಡಲಿಲ್ಲ. ತಮ್ಮನ್ನು ಗೆಲ್ಲಿಸಿದ ಮತದಾರರಿಗೆ, ತಮ್ಮ ಕ್ಷೇತ್ರಕ್ಕೆ, ರೈತರಿಗೆ ಪ್ರತ್ಯೇಕವಾಗಿ ಪರೋಕ್ಷವಾಗಿ ಸಹಾಯ ಮಾಡಿದರು. ಅದೇ ನಿಟ್ಟಿನಲ್ಲಿ ಅವರ ಪುತ್ರ ಕೃಷ್ಣ ಭೈರೇಗೌಡರು ಹೆಜ್ಜೆ ಹಾಕುತ್ತಿದ್ದಾರೆ.

ಮಾಕೋನಹಳ್ಳಿ ದೊಡ್ಡಪ್ಪಗೌಡರು



ದಿವಂಗತ ಮಾಕೋನಹಳ್ಳಿ ದೊಡ್ಡಪ್ಪ ಗೌಡರು ಶರೀರ ರೂಪವನ್ನು ಕಳಚಿ ಅನಂತ ವ್ಯಾಪಿಯಾದ ದೊಡ್ಡಜೀವ. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ ತಮ್ಮ ಜೀವಿತದ ಬಹುಪಾಲು ಕಾಲವನ್ನು ಕಳೆದ ಇವರು ಒಂಬತ್ತು ದಶಕಗಳ ತನಕ ಬದುಕಿದ್ದರು. ಬದುಕಿದ್ದಷ್ಟೂ ದಿನ

ಅವರ ಬುದ್ಧಿ ಮಸುಕಾಗಲಿಲ್ಲ, ವಿಚಾರಶಕ್ತಿ ಹಳತಾಗಲಿಲ್ಲ. ಅವರ ದೃಷ್ಟಿ ಮಂಜಾಗಲಿಲ್ಲ. ಅವರ ಮನಸ್ಸು ನಂಜಾಗಲಿಲ್ಲ! ಸಂಜೆಗಣ್ಣಿನ ಹಿನ್ನೋಟದಲ್ಲಿಯೂ ಅವರು ಮುಂಬೆಳಕನ್ನೇ ಕಂಡರು.

ಮೂಡಿಗೆರೆಗೆ ಸುಮಾರು ಒಂಬತ್ತು ಕಿ.ಮೀ. ದೂರದಲ್ಲಿರುವ ಒಂದು ಪುಟ್ಟ ಗ್ರಾಮ ಮಾಕೋನಹಳ್ಳಿ. ಚಿಕ್ಕಮಗಳೂರು ಜಿಲ್ಲೆಯ ಪುನರ್‌ರಚನೆಯ ಕಾಲದಲ್ಲಿ ಈ ಗ್ರಾಮ ಬೇಲೂರು ತಾಲ್ಲೂಕಿನಲ್ಲಿ ಮೂಡಿಗೆರೆ ತಾಲ್ಲೂಕಿಗೆ ಸೇರಿಕೊಂಡಿತು. ಈ ಕುಗ್ರಾಮದ ಮಂದೇಪಟೇಲ್ ಮನೆತನದ ಕಾಳೇಗೌಡ ಮತ್ತು ಸಿದ್ದಮ್ಮ ಅವರ ಮೂರನೆಯ ಮಗುವಾಗಿ ದೊಡ್ಡಪ್ಪಗೌಡರು 10.6.1907ರಂದು ಜನಿಸಿದರು. ತುಮಕೂರು ಮೇಷ್ಟ್ರು ಎಂದೇ ಖ್ಯಾತರಾದ ವೆಂಕಟರಮಣಯ್ಯನವರ ಮನೆಯಲ್ಲಿ ವಿದ್ಯಾಭ್ಯಾಸ ಆರಂಭಿಸಿದ ಗೌಡರು ಬಾಲಬೋಧೆಯ ಜೊತೆಗೆ, ಇಂಗ್ಲಿಷ್ ರೀಡರ್‌ನ್ನೂ ಓದಿ ಮುಗಿಸಿದ್ದರು. ಅನಂತರ ಮೂಡಿಗೆರೆ, ಚಿಕ್ಕಮಗಳೂರು ಹಾಗೂ ಬೆಂಗಳೂರಿನ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಓದಿದರು. ಬೆಂಗಳೂರಿನಲ್ಲೇ ಇಂಟರ್ ಮೀಡಿಯೇಟ್ ಮಾಡಿದ ಗೌಡರು ಕುಟುಂಬದ ಯಜಮಾನರ ಆಣತಿ ಮೇರೆಗೆ ಓದಿಗೆ ಎಳ್ಳುನೀರು ಬಿಟ್ಟರು.

1927ರಲ್ಲಿ ಗೌಡರು ಬೆಂಗಳೂರಿನ ವೆಸ್ಲಿಯನ್ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ, ಒಕ್ಕಲಿಗರ ಸಂಘದ ವಿದ್ಯಾರ್ಥಿ ನಿಲಯದಲ್ಲಿ ವಾಸವಾಗಿದ್ದರು. ಆ ಸಂದರ್ಭದಲ್ಲಿ ಚಕ್ರವರ್ತಿ ಸಿ. ರಾಜಗೋಪಾಲಾಚಾರಿ ಅವರು ವಿದ್ಯಾರ್ಥಿ ನಿಲಯಕ್ಕೆ ಭೇಟಿಕೊಟ್ಟಿದ್ದರು. ಆಗ ಅವರು ರಾಷ್ಟ್ರಭಕ್ತಿಯ ವಿಚಾರವಾಗಿ ಉಪದೇಶ ಮಾಡಿದರು. ಇದರಿಂದ ಪ್ರೇರಿತರಾದ ದೊಡ್ಡಪ್ಪಗೌಡರು ಖಾದಿಯನ್ನು ತಾವೇ ನೂತು ಖಾದಿ ಹಾಕಲು ಆರಂಭಿಸಿದರು. ಮಹಾತ್ಮಗಾಂಧಿಯವರ ಹರಿಜನೋದ್ಧಾರಕ್ಕಾಗಿ ನಿಧಿ ಸಂಗ್ರಹಿಸಲು ಬೆಂಗಳೂರಿಗೆ ಬಂದು ನ್ಯಾಷನಲ್ ಕಾಲೇಜ್ ಮೈದಾನದಲ್ಲೂ ಒಂದು ತಿಂಗಳ ಕಾಲ ತಂಗಿದ್ದರು. ಆ ಸಂದರ್ಭದಲ್ಲಿ ದೊಡ್ಡೇಗೌಡರಿಗೆ ಅವರ ಸೇವೆ ಮಾಡುವ ಸುಯೋಗ ಲಭಿಸಿತು. ಆ ದಿನಗಳಲ್ಲಿ ದೊಡ್ಡಗೌಡರು ವಾಸವಾಗಿದ್ದ ವಿದ್ಯಾರ್ಥಿನಿಲಯಕ್ಕೆ ಪಂಡಿತ್ ಜವಹರಲಾಲ್ ನೆಹರು, ಪಂಡಿತ್ ಮದನಮೋಹನ ಮಾಳವೀಯ ಡಾ. ಪಿ.ಸಿ.ರೇ, ಮೌಲಾನ ಅಬ್ದುಲ್ ಕಾಲಂ ಆಜಾದ್, ಪಂಡಿತ್ ತಾರಾನಾಥ ಮುಂತಾದ ಪ್ರಮುಖರು ಬಂದು ಭಾಷಣ ಮಾಡುತ್ತಿದ್ದರು. ಆಗ ಅವರೆಲ್ಲರ ರಾಷ್ಟ್ರ ಪ್ರೇಮದ ಮಾತುಗಳಿಗೆ ಮರುಳಾಗಿ ಗೌಡರು ಡಾ.ಎನ್.ಎಸ್. ಹರ್ಡೀಕರ್ ಅವರು ಸ್ಥಾಪಿಸಿದ್ದ ಹಿಂದೂಸ್ಥಾನಿ ಸೇವಾದಳಕ್ಕೆ 1930ರಲ್ಲಿ ಸೇರುವ ಮೂಲಕ, ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು. ಅನೇಕ ಬಗೆಯ ಹರತಾಳಗಳಲ್ಲಿ

ಭಾಗಿಯಾದರು. ಸಂಘಟನೆಯ ಮುಂದಾಳಾಗಿ ಪಾದರಸದಂತೆ ಓಡಾಡಿದರು. ಹರ್ಡೀಕರ ಒಡನಾಟದಲ್ಲಿ ಹುಬ್ಬಳ್ಳಿಗೆ ಹೋಗಿ ಮುಂಬೈ, ಪೂನಾ, ಸೊಲ್ಲಾಪುರ, ಧಾರವಾಡ, ಹಂಸಭಾವಿ, ಎಕ್ಕಂಬಿ, ಮಾಲಂಬಿ ಮುಂತಾದ ಸ್ಥಳಗಳಲ್ಲಿ ಸತ್ಯಾಗ್ರಹ ನಡೆಸಿ ಅನುಭವ ಪಡೆದುಕೊಂಡು ಊರಿಗೆ ಬಂದ ದೊಡ್ಡಗೌಡರು, ಸಮಾಜ ಸೇವೆಗೆ ತಮ್ಮನ್ನು ತೊಡಹಿಸಿಕೊಂಡರು. ಮಾಕೋನಹಳ್ಳಿಯಲ್ಲಿ 'ಶ್ರೀ ಕಾಲಭೈರವೇಶ್ವರ ಲೈಬ್ರರಿ ಅಂಡ್ ರೀಡಿಂಗ್ ರೂಂ' ಸ್ಥಾಪಿಸಿದರು. ದಿನಪತ್ರಿಕೆ, ವಾರಪತ್ರಿಕೆ, ವಿಕಟ ವಿನೋದಿನಿ, ಕೊರವಂಜಿಯಂತಹ ಸಾಪ್ತಾಹಿಕ ಹಾಗೂ ಮಾಸಪತ್ರಿಕೆಗಳಿಗೆ ಚಂದಾದಾರರಾದರು. ಲೈಬ್ರರಿಗೆ ಬಂದ ಪತ್ರಿಕಗಳನ್ನು ತಪ್ಪದೆ ಓದಿದರು. ಸಾಹಿತ್ಯಕ ಅಭಿರುಚಿಗೆ ನೀರೆರೆದು ಪೋಷಿಸಿದರು. ಬರೇ ಮನಸ್ಸು, ಬುದ್ಧಿ ಬೆಳೆದರೆ ಸಾಲದು. ದೇಹವೂ ಬೆಳೆಯಬೇಕು ಎಂಬ ಸದುದ್ದೇಶದಿಂದ ಶ್ರೀ ಕಾಲಭೈರವೇಶ್ವರ ಜಿಮ್ನ್ಯಾಶಿಯಂ ಆರಂಭಿಸಿದರು.

ಗೌಡರ ಚಟುವಟಿಕೆಗಳನ್ನು ಕಂಡ ಜಿಲ್ಲಾಧಿಕಾರಿಯವರಾದ ಎಸ್.ವಿ. ರಾಮಸ್ವಾಮಿಯವರು, On wonderful. I see a model village in the nook and comer of my dist ಎಂದು ಉದ್ಗಾರ ತೆಗೆದರಂತೆ! ಜಿಲ್ಲಾಧಿಕಾರಿಗಳೂ ಮೆಚ್ಚುವಂತಹ ಕೆಲಸ ಮಾಡಿದ ಗೌಡರಿಗೆ ಅದಷ್ಟರಿಂದಲೇ ತೃಪ್ತಿಯಾಗಲಿಲ್ಲ. ಕಾಂಗ್ರೆಸ್ಸಿನ ಹೆಸರೇ ಇಲ್ಲದ್ದನ್ನು ಕಂಡು ಆ ಪ್ರದೇಶಕ್ಕೆ ಕಾಂಗ್ರೆಸ್‌ನ ವಕ್ತಾರರಂತೆ ಅದನ್ನು ಜನತೆಗೆ ಪರಿಚಯಿಸಿದ ಕೀರ್ತಿ ಕೂಡ ದೊಡ್ಡಪ್ಪಗೌಡರಿಗೆ ಸಲ್ಲುತ್ತದೆ. ಸಾರ್ವಜನಿಕ ಕೆಲಸಗಳಿಗೆ ಮೂಡಿಗೆರೆಯೇ ಸೂಕ್ತ ಸ್ಥಳ ಎಂದು ಅವರು ನಿರ್ಧರಿಸಿ 1932ನೆಯ ಇಸವಿ ಅಕ್ಟೋಬರ್‌ನಲ್ಲಿ ಅವರು ತಮ್ಮ ಅವಿಭಕ್ತ ಕುಟುಂಬವನ್ನು ತೊರೆದು ಮೂಡಿಗೆರೆಗೆ ಬಂದರು. ಆರಂಭದಲ್ಲಿ ಇಲ್ಲಿನ ಒಕ್ಕಲಿಗರ ಹಾಸ್ಟೆಲಿನಲ್ಲಿ ವಾಸ್ತವ್ಯ ಹೂಡಿ ಅನಂತರ ಅದರ ಮ್ಯಾನೇಜರ್ ಆಗಿ ಇಲ್ಲಿಯೇ ನೆಲೆಸಿದರು.

ಶ್ರೀಯುತರು ಮೂಡಿಗೆರೆಯಲ್ಲಿ ನೆಲಸಿದ ಮೇಲೆ ಇವರ ಕಾರ್ಯಕ್ಷೇತ್ರ ವಿಸ್ತರಿಸಿತು. ಕಾಂಗ್ರೆಸ್ಸನ್ನು ಹುಟ್ಟು ಹಾಕಿ. ಇವರೇ ಅದಕ್ಕೆ ಸ್ಥಾಪಕ ಅಧ್ಯಕ್ಷರಾದರು. ಅಷ್ಟೇ ಏಕೆ ಕಾರ್ಯದರ್ಶಿ, ಖಜಾಂಚಿಗಳೂ ಇವರೇ ಆಗಿ ಮೂವತ್ತು ವರ್ಷಗಳ ಕಾಲ ಕಾರ್ಯನಿರ್ವಹಿಸಿದರು. ಮೂಡಿಗೆರೆಯ ಮುನಿಸಿಪಾಲಿಟಿ ಚುನಾವಣೆಗೆ ನಿಂತು ಬಹುಮತಗಳಿಂದ ಅವಿರೋಧವಾಗಿ ಗೌಡರು ಆಯ್ಕೆಯಾಗಿ ಮುನಿಸಿಪಾಲಿಟಿಯ ಉಪಾಧ್ಯಕ್ಷರಾದರು. ಅನೇಕ ಜನಪರ ಕೆಲಸ ಮಾಡಿದರು. ಕಟ್ಟುನಿಟ್ಟಾಗಿ ಅಕ್ರಾಯ್ ವಸೂಲಿ ಕ್ರಮಗಳನ್ನು ಜಾರಿಗೆ ತಂದರು. ರಸ್ತೆಗಳನ್ನು ಮಾಡಿಸಿದರು. ಜಾಡಮಾಲಿಗಳಿಂದ ಮನೆ ಕಂದಾಯ ವಸೂಲಿ ಮಾಡಬಾರದೆಂದು, ಸರ್ಕಾರಕ್ಕೆ ಬರೆದು ಅವರ ಮನೆ ಕಂದಾಯ ವಜಾ ಮಾಡಿಸಿದರು. ಇದು ಮೂಡಿಗೆರೆಯಲ್ಲಷ್ಟೇ

ಅಲ್ಲ ರಾಜ್ಯದ ಎಲ್ಲಾ ಮುನಿಸಿಪಾಲಿಟಿಗಳಿಗೂ ಅನ್ವಯುವಾಗಿ ಅನುಮೋದನೆಗೊಂಡಿತು. ಟೌನ್ ಕೋ-ಆಪರೇಟಿವ್ ಸೊಸೈಟಿಯ ಉಪಾಧ್ಯಕ್ಷರಾಗಿ ದುಡಿದರು. ಇದರ ಜೊತೆಗೆ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಸರ್ಕಾರಿ ತರಪ್‌ನಿಂದ ಗೌರವ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಮೂಡಿಗೆರೆ ಕ್ಲಬ್ ಅಂಡ್ ರೀಡಿಂಗ್ ರೂಮ್ ಸ್ಥಾಪಿಸಿದರು. ತಮ್ಮದೇ 'ಗೆಳೆಯರ ಗುಂಪುಕಟ್ಟಿ ಅನೇಕ ವರ್ಷ ಆಟೋಟ ಚಟುವಟಿಕೆಗಳನ್ನು ನಡೆಸಿದರು. ಕಾರ್ಡಮಮ್ ಮರ್ಚೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷರಾಗಿ ತೀರಿಕೊಳ್ಳುವ ಕೆಲವರ್ಷಗಳವರೆಗೂ ಕರ್ತವ್ಯ ಪಾಲಿಸಿದರು. "ಮೂಡಿಗೆರೆ ಕರ್ನಾಟಕ ಸಂಘ" ಸ್ಥಾಪಿಸಿ ಅನೇಕ ವರ್ಷಗಳ ಕಾಲ ಅದನ್ನು ನಡೆಸಿದರು. ಹೀಗೆ ದೊಡ್ಡಪ್ಪಗೌಡರು ಅನೇಕ ಚಟುವಟಿಕೆಗಳಲ್ಲಿ ತಮ್ಮನ್ನೇ ತೊಡಗಿಸಿಕೊಂಡು ಜನಾನುರಾಗಿಯಾದರು. ಮೂಡಿಗೆರೆ ಟೌನ್‌ಗೆ ಒಂದು ಸರ್ಕಾರಿ ಹೈಸ್ಕೂಲ್ ಮಂಜೂರು ಮಾಡಿಸಲು ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ.

ಮಾಕೋನಹಳ್ಳಿ ದೊಡ್ಡಪ್ಪಗೌಡರು ತಮ್ಮ ಜೀವನದ ಅನೇಕ ಜವಾಬ್ದಾರಿ ಹುದ್ದೆಗಳನ್ನು ಅಲಂಕರಿಸಿದ್ದರೂ ಅವರ ಮಾನಸಿಕ ತುಡಿತ ಮಾತ್ರ ಸಾಹಿತ್ಯದ ಕಡೆಗೇ ಇತ್ತು. ಅವರ ಉತ್ಸಾಹಕ್ಕೆ ನೀರೆರೆದು ಪೋಷಿಸಿದವರೆಂದರೆ ಹನಸೋಗೆ ಮಾದೇವಯ್ಯನವರು ಮತ್ತು ಡಾ. ಸೂರ್ಯನಾಥ ಕಾಮತರು. ಇವರ ಸಲಹೆಯ ಮೇರೆಗೆ ಸ್ವಾತಂತ್ರ್ಯ ಹೋರಾಟದ ಯಶಸ್ವೀ ಹೆಜ್ಜೆ ಗುರುತುಗಳನ್ನು ಬರೆದು ಕಲೆಹಾಕಿದರು. 1966ರಲ್ಲಿ ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಇದು ಪ್ರಾಮಾಣಿಕ ಪ್ರಜೆಯ ಆತ್ಮಚರಿತ್ರೆಯಾಗಿ, ದೇಶಭಕ್ತನೊಬ್ಬರ ಸಾಹಸಗಾಥೆಯಾಗಿ ಕಾಣಿಸಿಕೊಂಡಿತು. ನಾಡಿನ ಸ್ವಾತಂತ್ರ್ಯ ಹೋರಾಟಗಾರರ ಸುಂದರವಾದ ಚಿತ್ರಣವನ್ನು ಇದು ಎಳೆಎಳೆಯಾಗಿ ಕಟ್ಟಿಕೊಡುತ್ತದೆ. ಶ್ರೀಯುತರ 'ಒಕ್ಕಲಿಗರು ಹಾಗೂ ಸಂಪ್ರದಾಯಗಳು' ಎಂಬ ಕೃತಿ ಒಕ್ಕಲಿಗ ಜನಾಂಗವನ್ನು ಕುರಿತ ಮಾಹಿತಿಪೂರ್ಣ ಕೃತಿ. ಇದೊಂದು ಸಾಂಸ್ಕೃತಿಕ ಅಧ್ಯಯನವೂ ಆಗಿ ಸಾಧಿತವಾಗಿದೆ. ಇದು ಮೂರು ಮರುಮುದ್ರಣವನ್ನು ಕಂಡ ಅತ್ಯಂತ ಮಹತ್ವದ ಕೃತಿ.

"ಪಾಶುಪತ ಶೈವರು ಮತ್ತು ಗೌಡ ಜನಾಂಗ" ದೊಡ್ಡಪ್ಪಗೌಡರ ಮತ್ತೊಂದು ಕೃತಿ (1985). ಇದು ಕೂಡ ಒಕ್ಕಲಿಗ ಜನಾಂಗವನ್ನು ಕುರಿತ ಮಹತ್ವದ ಕೃತಿ. ಇದರ ಎರಡನೆಯ ಭಾಗವನ್ನೂ ಗೌಡರು ಪ್ರಕಟಿಸಿದ್ದಾರೆ. ಇವಲ್ಲದೆ, 'ಓ ಮೇರಾ ಭೈಯಾ' ಎಂಬ ಸಾಮಾಜಿಕ, ಕಾಡಹರಟೆ ಎಂಬ ಹದಿನಾರು ಕಥೆಗಳ ಸಂಕಲನ, 'ದೇಹ ಮತ್ತು ಆತ್ಮ' ಎಂಬ ಆಧ್ಯಾತ್ಮಿಕ ಕೃತಿ, ನಮ್ಮೂರ ಚರಿತೆ, ಮಲೆನಾಡಿನ ಬಿಲ್ಲವರು, ಸಮಯ ಪ್ರಜ್ಞೆ, ಮಾರಿಕಾಂಬಾ ಮಹಾತ್ಮೆ, ಗೀಳು ಮುಂತಾದ ಅಪ್ರಕಟಿತ ಕೃತಿಗಳನ್ನು

ಅವರು ಬಿಟ್ಟುಹೋಗಿದ್ದಾರೆ. 'ಸ್ಮೃತಿ ಕೃತಿ' ಅವರ ಮತ್ತೊಂದು ಅಪ್ರಕಟಿತ ಗ್ರಂಥ. ಇದರಲ್ಲಿ ತಮ್ಮ ಕಾಶಿಯಾತ್ರೆಯ ಅನುಭವವನ್ನು ರಸವತ್ತಾಗಿ ಬರೆದಿದ್ದಾರೆ. ಮುಕ್ತಕಗಳ ರಚನೆಯಲ್ಲೂ ಗೌಡರು ಕೈಯಾಡಿಸಿದ್ದಾರೆ.

ಪ್ರತಿಷ್ಠಿತ ಮನೆತನದಲ್ಲಿ ಹುಟ್ಟಿ ಅವಿಭಕ್ತ ಕುಟುಂಬದಲ್ಲಿ ಬೆಳೆದು ದೊಡ್ಡವರಾದ ದೊಡ್ಡಪ್ಪಗೌಡರು 1936ನೆಯ ಇಸವಿಯಲ್ಲಿ ಬಾಳೂರಿನ ಗೌರವಾನ್ವಿತ ಮನೆತನದ ಸಾಧ್ವೀಮಣಿ ಬಿ.ಎಲ್. ಸೀತಮ್ಮನವರೊಡನೆ ಲಗ್ನವಾದರು. ದೈವಭಕ್ತೆ, ಅನ್ನದಾತೆ, ಸದ್ಗುಣ ಸಂಪನ್ನೆಯಾದ ಇವರಿಗೆ ನಾಲ್ಕು ಗಂಡು ಇಬ್ಬರು ಹೆಣ್ಣು ಮಕ್ಕಳು. ಅವರೆಲ್ಲ ಇಂದು ಚೆನ್ನಾಗಿದ್ದಾರೆ.

ಇವರಿಗೆ ಹತ್ತು ಹಲವು ಪ್ರಶಸ್ತಿಗಳು ಬಂದಿವೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಸಲುವಾಗಿ ಸರ್ಕಾರದಿಂದ ಸನ್ಮಾನ ಪತ್ರ ಲಭ್ಯವಾಗಿದೆ. ಒಕ್ಕಲಿಗ ನೌಕರರ ಸಂಘ ಇವರನ್ನು ಗೌರವಿಸಿದೆ. ಅನೇಕ ಸಂಘ-ಸಂಸ್ಥೆಗಳಿಂದ ಸನ್ಮಾನಿತರಾಗಿದ್ದಾರೆ. ಮಾಕೋನಹಳ್ಳಿ ದೊಡ್ಡಪ್ಪಗೌಡರು ಶ್ರೇಷ್ಠ ಸಾಹಿತಿ, ಅತ್ಯುತ್ತಮ ಸಂಶೋಧಕ, ಉತ್ತಮ ರಾಜಕಾರಣಿ, ಆದರ್ಶ ಸಮಾಜ ಸೇವಕ, ಒಳ್ಳೆಯ ವಾಗ್ಮಿ, ಚಿತ್ರಕಲಾವಿದ, ಅಪ್ಪಟ ಗಾಂಧೀವಾದಿ, ಪ್ರಸಿದ್ಧ ಕಾಫಿ ಬೆಳೆಗಾರ, ಏಲಕ್ಕಿ ವ್ಯಾಪಾರಿ, ಇದೆಲ್ಲಕ್ಕಿಂತಲೂ ಹೆಚ್ಚಾಗಿ ಮಾನವೀಯ ಹೃದಯದ ಮಹಾನ್ ವ್ಯಕ್ತಿ. ಇಂಥವರ ಜೀವನ ಪ್ರಸಂಗಗಳು ನಮ್ಮ ತಲೆಮಾರಿನವರಿಗೆ ಅನುಕರಣೀಯ ಆದರ್ಶ.

ಹೀಗೆ ಸ್ವಾತಂತ್ರ್ಯಾನಂತರ ಒಕ್ಕಲಿಗ ಸಮುದಾಯವು ರಾಜ್ಯ ರಾಜಕೀಯದ ಅಧಿಕಾರ ದಂಡವನ್ನು ಹಿಡಿಯಿತು. ರಾಜ್ಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಸಾಕಷ್ಟು ಶ್ರಮಿಸಿದರು. ಸ್ವಾತಂತ್ರ್ಯ ಬಂದ ಹೊಸತರಲ್ಲಿ ನೂರಾರು ಸಮಸ್ಯೆಗಳು ತಲೆ ಎತ್ತಿದವು. ಇವುಗಳೆಲ್ಲವನ್ನೂ ಜಾಣ್ಮೆಯಿಂದ ಕೆ.ಸಿ. ರೆಡ್ಡಿಯವರು ಪರಿಹರಿಸಿದರು. ಮೈಸೂರು ರಾಜ್ಯವನ್ನು ಏಕೀಕರಣಗೊಳಿಸಿ ಕರ್ನಾಟಕ ರಾಜ್ಯವನ್ನಾಗಿಸಿದ ಕೀರ್ತಿ ಕೆಂಗಲ್ ಹನುಮಂತಯ್ಯನವರಿಗೆ ಸಲ್ಲುತ್ತದೆ. ಅದೇ ಕೆಂಗಲ್ಲರು ವಿಧಾನಸೌಧವನ್ನು ನಿರ್ಮಿಸಿ ಇಡೀ ರಾಷ್ಟ್ರದಲ್ಲೇ ಮಾದರಿಯಾದ ಶಾಸನ ಸಭಾಲಯವನ್ನು ನಿರ್ಮಿಸಿದರು. ಕಡಿದಾಳ್ ಮಂಜಪ್ಪನವರು ರಾಜಕಾರಣಿಗಳಲ್ಲೇ ಶಿಸ್ತು ಮತ್ತು ದಕ್ಷತೆಯುಳ್ಳ ಮಂತ್ರಿಯೆಂದೇ ಖ್ಯಾತನಾಮರಾದರು. ಹಾಗೂ ಇಂದಿಗೂ ಎಲ್ಲಾ ರಾಜಕಾರಣಿಗಳಿಗೂ ರೋಲ್ ಮಾಡೆಲ್ ಎನ್ನಬಹುದು. ಶ್ರೀ ಹೆಚ್.ಡಿ. ದೇವೇಗೌಡರವರು ಭಾರತದ ಪ್ರಧಾನಿಗಳಾಗುವುದರ ಮೂಲಕ ಒಕ್ಕಲಿಗರ ಕೀರ್ತಿ ಪತಾಕೆಯನ್ನು ದೇಶದಾದ್ಯಂತ ಹಬ್ಬಿಸಿದರು. ರೈತರ, ಜನಸಾಮಾನ್ಯರ ಪರ ನಿಂತು ಹೋರಾಟ ಮಾಡುವುದರ ಮೂಲಕ ಇಂದಿಗೂ ಜನಪ್ರಿಯ ನಾಯಕರಾಗಿದ್ದಾರೆ.

ಎಸ್.ಎಂ. ಕೃಷ್ಣರವರು ಕರ್ನಾಟಕವನ್ನು ಅದರಲ್ಲೂ ವಿಶೇಷವಾಗಿ ಬೆಂಗಳೂರು ನಗರವನ್ನು ಐ.ಟಿ. ಬಿ.ಟಿ. ನಗರವನ್ನಾಗಿ ಮಾಡುವುದರ ಮೂಲಕ ಬೆಂಗಳೂರನ್ನು ಅಂತರ ರಾಷ್ಟ್ರಮಟ್ಟಕ್ಕೆ ಏರಿಸಿದರು. ಹೆಚ್.ಡಿ. ಕುಮಾರಸ್ವಾಮಿಯವರು ರೈತರ, ದೀನ ದಲಿತರ ಪರ ಹೋರಾಟ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಒಟ್ಟಿನಲ್ಲಿ 1600 ವರ್ಷಗಳ ಇತಿಹಾಸವಿರುವ ಒಕ್ಕಲಿಗ ಸಮುದಾಯವು ಸ್ವಾತಂತ್ರ್ಯ ನಂತರ ರಾಜ್ಯ ರಾಜಕೀಯದಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ ಹಾಗೂ ನೀಡುತ್ತಿದ್ದಾರೆ.

□

ಸಾಮಾಜಿಕ ಬದಲಾವಣೆಯಲ್ಲಿ ಒಕ್ಕಲಿಗ ಮಠಮಾನ್ಯಗಳು

ಹಲವಾರು ಕುಟುಂಬಗಳು ಒಂದೆಡೆ ನೆಲೆಸಿ ರೂಢಿ, ಸಂಪ್ರದಾಯ, ನಡವಳಿಕೆ-ಗಳಿಂದ ಬೆಸೆದಿರುವ ಒಂದು ವ್ಯವಸ್ಥೆಗೆ ಸಮಾಜ ಎನ್ನುತ್ತಾರೆ. ಇಂತಹ ಸಮಾಜ-ದಲ್ಲಿ ಹಲವಾರು ಜಾತಿ, ಉಪಜಾತಿಗಳು, ವರ್ಗಗಳೆಂಬ ತಾರತಮ್ಯವಿರುವುದು ಸರ್ವೇ ಸಾಮಾನ್ಯ. ಸಮಾಜವೆಂಬುದು ನಿಂತ ನೀರಲ್ಲ. ಇದು ನಿರಂತರವಾಗಿ ಬದಲಾವಣೆಯಾಗುತ್ತದೆ ಹಾಗೂ ಕ್ರಿಯಾಶೀಲವಾಗಿರುತ್ತದೆ. ಇಂದಿಗೆ ನೂರು ವರ್ಷಗಳ ಹಿಂದೆ ಇದ್ದ ಸಮಾಜ ಮತ್ತು ಅಂದು ಆ ಸಮಾಜದಲ್ಲಿದ್ದ ರೂಢಿ, ಸಂಪ್ರದಾಯಗಳು, ನಡವಳಿಕೆಗಳು, ಆಚಾರ-ವಿಚಾರಗಳು ಆಲೋಚನೆಗಳು ಬದಲಾವಣೆಯಾಗಿವೆ. ಈ ರೀತಿ ಬದಲಾವಣೆಯಾಗಲು ಮುಖ್ಯ ಕಾರಣವೆಂದರೆ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಪಾಶ್ಚ್ಯಾತೀಕರಣ, ಹೊಸ ಹೊಸ ಆಲೋಚನೆಗಳು, ಅನುಭವಗಳು ಇನ್ನೂ ಮುಂತಾದವು. 1906ರಲ್ಲಿ ಒಕ್ಕಲಿಗರ ಸಂಘ ಸ್ಥಾಪನೆಯಾಗಿ ಇಂದಿಗೆ ನೂರು ವರ್ಷಗಳಾಯಿತು. ನಾಡಿನಾದ್ಯಂತ ಹಲವಾರು ಕಡೆ ಒಕ್ಕಲಿಗರ ವಿದ್ಯಾರ್ಥಿ ನಿಲಯಗಳೇ ಅಲ್ಲದೆ ಹಿಂದುಳಿದ ವರ್ಗಗಳ ಸಂಘ-ಸಂಸ್ಥೆಗಳು, ವಿದ್ಯಾರ್ಥಿ ನಿಲಯಗಳು ಸ್ಥಾಪನೆಯಾಗಿ ಆಯಾ ಜಾತಿಗಳ ಅಥವಾ ಜನಾಂಗದ ಮಕ್ಕಳು ವಿದ್ಯಾಭ್ಯಾಸ ಪಡೆದು ಸುಶಿಕ್ಷಿತರಾಗಿ ರಾಷ್ಟ್ರದ ಮುಖ್ಯವಾಹಿನಿಗೆ ಸೇರಲು **'ಒಕ್ಕಲಿಗರ ಸಂಘ'**ವು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಕಾರಣವಾಯಿತು ಎಂದರೆ ತಪ್ಪಾಗಲಾರದು.

ಈಗಾಗಲೇ ತಿಳಿಸಿರುವಂತೆ ಒಕ್ಕಲಿಗರು ನಾಡಪ್ರಭುಗಳಾಗಿ, ಪಾಳೆಗಾರರಾಗಿ, ಸೈನ್ಯಾಧಿಕಾರಿಗಳಾಗಿ, ಗ್ರಾಮಾಡಳಿತಗಾರರಾಗಿ ಸಾಹಿತ್ಯ, ಸಂಗೀತ ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ತಮ್ಮ ಕೊಡುಗೆಯನ್ನು ಕೊಟ್ಟಿದ್ದಾರೆ (ಈಗಾಗಲೇ ಸವಿವರವಾಗಿ ತಿಳಿಸಲಾಗಿದೆ). ಆದರೆ ನಮ್ಮ ಸಮಾಜದ ಮೇಲ್ವರ್ಗದಲ್ಲಿರುವ ಬ್ರಾಹ್ಮಣರು ಒಕ್ಕಲಿಗರನ್ನು ಶೂದ್ರರೊಂದಿಗೆ ಸೇರಿಸಿ ತನಗಿಂತ ಮೇಲ್ವರ್ಗದವರ ಸೇವೆಯನ್ನು

ಮಾಡಬೇಕೆಂದು ವಿಧಿಸಿದರು. ಶೂದ್ರರು ಅವಿದ್ಯಾವಂತರು, ಅವಿವೇಕಿಗಳು, ಸಂಸ್ಕೃತ, ವೇದ ವೇದಾಂಗಗಳನ್ನು ಕಲಿಯಲು ಅನರ್ಹರೆಂದು ಹೀಗಳೆದರು. ಇವರಿಗೆ ವಿದ್ಯೆ ಹತ್ತುವುದಿಲ್ಲ. ವಿದ್ಯೆ ಕಲಿಯಲು ಅನರ್ಹರು, ಸಂಸ್ಕೃತವನ್ನು ಕೇಳಿದರೆ ಅಂತಹ ಶೂದ್ರರ ಕಿವಿಗೆ ಸೀಸವನ್ನು ಹೊಯ್ಯಬೇಕು. ಇತ್ಯಾದಿಯಾಗಿ ಹೇಳಿ ಅವರನ್ನು ಶಿಕ್ಷಣದಿಂದ ದೂರ ಇರಿಸುತ್ತ ಬಂದರು. ಬಹುಶಃ ಯಾವ ರಾಷ್ಟ್ರದಲ್ಲೂ, ಯಾವ ಧರ್ಮದಲ್ಲೂ ಇಲ್ಲದ ಕಟ್ಟುಪಾಡುಗಳನ್ನು ಹಿಂದೂ ಧರ್ಮದಲ್ಲಿ ಕಾಣಬಹುದು.

ಒಕ್ಕಲಿಗರು ಮೂಲತಃ ಶೈವಧರ್ಮಾವಲಂಬಿಗಳು. ಆಯಾ ಧರ್ಮಗಳು ಪ್ರಬಲವಾಗಿದ್ದ ಕಾಲಗಳಲ್ಲಿ ಅವರು ಜೈನ, ಬೌದ್ಧ, ಶೈವ, ವೈಷ್ಣವ ಮತ ಪಂಥಗಳನ್ನು ಸ್ವೀಕರಿಸಿ ಅವುಗಳಿಗೆ ನಡೆದುಕೊಂಡು ತಮ್ಮ ಹೃದಯ ವೈಶಾಲ್ಯತೆಯನ್ನು ಮೆರೆದಿದ್ದಾರೆ. ಸಮುದಾಯದ ಆಳರರಸರೂ ಕೂಡ ಅನ್ಯಮತ ಸಹಿಷ್ಣುಗಳಾಗಿ ಎಲ್ಲರಿಗೂ ಮಾದರಿಯಾಗಿದ್ದಾರೆ. (ಹೊಯ್ಸಳ ದೊರೆ ವಿಷ್ಣುವರ್ಧನ) ಇಷ್ಟೇ ಅಲ್ಲ ಇತರರ ಭಾವನೆಗಳನ್ನು ಕೆಣಕಿದವರಲ್ಲ. ಅಂತರಂಗ ಮತ್ತು ಬಹಿರಂಗಗಳೆರಡರಲ್ಲೂ ಶುದ್ಧಿಗೆ ಒಕ್ಕಲಿಗರು ಎಲ್ಲರಿಗೂ ಮಾದರಿ.

ಆದರೆ ವಾಸ್ತವವಾಗಿ ಹೇಳುವುದಾದರೆ ಇಂದಿಗೂ ಶೂದ್ರರೆಂದು ಕರೆಸಿಕೊಳ್ಳುವ ಒಕ್ಕಲಿಗರು ಹಿಂದೊಮ್ಮೆ ಎಂದರೆ ಕ್ರಿ.ಶ. 4ನೇ ಶತಮಾನದಲ್ಲಿ ಜೈನ ಧರ್ಮ ಬಹಳ ಪ್ರಭಾವಶಾಲಿ ಧರ್ಮವಾಗಿದ್ದಾಗ ಜೈನ ಧರ್ಮೀಯರಾಗಿದ್ದರು. ಗಂಗಡಿಕಾರ ಒಕ್ಕಲಿಗರ ಮೂಲ ಪುರುಷರಾದ ದಡಿಗ ಮತ್ತು ಮಾಧವರು ಜೈನ ಮುನಿ ಸಿಂಹನಂದಿಯ ಪ್ರಭಾವದಿಂದಾಗಿ ರಾಜ್ಯ ಕಟ್ಟಿದರು. ಹಾಗೂ ಅನನ್ಯ ಜೈನ ಧರ್ಮೀಯರಾಗಿದ್ದರು.

ಬಹುಶಃ ಕ್ರಿ.ಶ. 4ನೇ ಶತಮಾನದಿಂದ 11 ಮತ್ತು 12 ಶತಮಾನದವರೆಗೂ ನಮ್ಮ ನಾಡಿನಾದ್ಯಂತ ಜೈನಧರ್ಮದ ಪ್ರಭಾವವಿದ್ದಿತು. ಕರ್ನಾಟಕ ಮಾತ್ರವೇಕೆ ಇಡೀ ಭಾರತದಲ್ಲಿ ಹಿಂದೂ ಧರ್ಮ ಕ್ಷೀಣಿಸಿ ಜೈನಧರ್ಮ ಮತ್ತು ಬೌದ್ಧ ಧರ್ಮಗಳು ಹೆಚ್ಚು ಪ್ರಭಾವಶಾಲಿಯಾಗಿದ್ದವು. ಉದಾ: ದಕ್ಷಿಣ ಭಾರತವನ್ನೇ ತೆಗೆದುಕೊಂಡರೆ ದಕ್ಷಿಣ ಭಾರತದ ಒಡೆಯರೆಂದು ಕರೆಯಲ್ಪಡುತ್ತಿದ್ದ ಬಹುತೇಕ ಶಾತವಾಹನರು ಬೌದ್ಧಧರ್ಮೀಯರಾಗಿದ್ದರು. ಹಿಂದೂ ಧರ್ಮವು ಕ್ಷೀಣಿಸಿ ಜೈನಧರ್ಮ, ಬೌದ್ಧ ಧರ್ಮಗಳು ಪ್ರಭಾವಶಾಲಿಯಾಗಲು ಕಾರಣವೇನೆಂದರೆ ಹಿಂದೂ ಧರ್ಮದಲ್ಲಿದ್ದ ಹಲವಾರು ನ್ಯೂನತೆಗಳು, ಮೌಢ್ಯತೆಗಳು, ಕಟ್ಟುಪಾಡುಗಳು ಇತ್ಯಾದಿ.

ಇತಿಹಾಸದ ಕಾಲಘಟ್ಟವನ್ನು ಸಮಗ್ರವಾಗಿ ಅಧ್ಯಯನ ಮಾಡಲಾಗಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಜೈನಧರ್ಮ ಮತ್ತು ಬೌದ್ಧ ಧರ್ಮಗಳು ಅಧಃ ಪತನದ ಹಾದಿ ಹಿಡಿದು ಹಿಂದೂ ಧರ್ಮ ಪುನಃಶ್ಚೇತನಗೊಳ್ಳಲು ಕಾರಣಗಳು ಈ ಕೆಳಕಂಡಂತಿವೆ :

ಕ್ರಿ.ಶ. 8ನೇ ಶತಮಾನದಲ್ಲಿ ಕೇರಳದ ಕಾಲಡಿಯಲ್ಲಿ ಶಂಕರಾಚಾರ್ಯರು ಅದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡುತ್ತ ದೇಶದಾದ್ಯಂತ ಸಂಚರಿಸಿ ನಾಲ್ಕು ಮಠಗಳನ್ನು ಸ್ಥಾಪಿಸಿದರು. ಹೀನಾಯ ಸ್ಥಿತಿಯಲ್ಲಿದ್ದ ಹಿಂದೂ ಧರ್ಮವನ್ನು ಪುನಃಶ್ಚೇತನಗೊಳಿಸುವ ನೆಪದಲ್ಲಿ ಬೌದ್ಧ ಧರ್ಮದ ನೆಲೆಬೀಡಾಗಿದ್ದ ಆಂಧ್ರದ ನಾಗಾರ್ಜುನಕೊಂಡ ಸೇರಿದಂತೆ ಹಲವಾರು ಕಡೆ ತಮ್ಮ ಹಿಂಬಾಲಕರ ಸಹಾಯದಿಂದ ದಾಳಿ ನಡೆಸಿ ಬೌದ್ಧ ಧರ್ಮದ ಸ್ತೂಪ, ಚೈತ್ಯ, ವಿಹಾರಗಳನ್ನು ಕೆಡವಿಸಿದರು. (ಶಂಕರಾಚಾರ್ಯ ಮತ್ತು ಪ್ರತಿಗಾಮಿತನ – ಪ್ರೊ. ಭಗವಾನ್ 1989, ಪುಟ–1) ಪ್ರಚಂಡ ವಾಗ್ಮಿಯಾದ ಶಂಕರಾಚಾರ್ಯರ ಪ್ರಭಾವಕ್ಕೆ ಒಳಗಾದ ಜನ ಅವರ ಅನನ್ಯ ಹಿಂಬಾಲಕರಾದರು. ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಕರ್ನಾಟಕದ ಶೃಂಗೇರಿಯೂ ಒಂದು. ಇದರಿಂದಾಗಿ ಕರ್ನಾಟಕದಲ್ಲಿ ಹಿಂದೂ ಧರ್ಮದ ಪ್ರಚಾರಕ್ಕೆ ಇದು ಪ್ರಮುಖ ಕೇಂದ್ರವಾಯಿತು. ನಾಡಿನ ರಾಜಮಹಾರಾಜರು, ಪಂಡಿತ ಪಾಮರರಿಂದ ಹಿಡಿದು ವಿಧರ್ಮೀಯನಾದ ಟಿಪ್ಪು ಸುಲ್ತಾನನೂ ಕೂಡ ಶೃಂಗೇರಿಗೆ ಸಂಬಂಧಿಸಿದಂತೆ ಒಳ್ಳೆಯ ರೀತಿಯಲ್ಲಿ ನಡೆದು–ಕೊಂಡಿರುವುದನ್ನು ನಾವು ಕಾಣಬಹುದು. ಅಂತಹ ಸಮಯದಲ್ಲಿ ಹೀನಾಯ ಸ್ಥಿತಿಯಲ್ಲಿದ್ದ ಹಿಂದೂ ಧರ್ಮ ಚಿಗುರೊಡೆಯಲು ಅಷ್ಟು ಸಾಕಾಗಿತ್ತು.

ಕ್ರಿ.ಶ. 11 ಮತ್ತು 12ನೇ ಶತಮಾನದಲ್ಲಿ ತಮಿಳು ನಾಡಿನಿಂದ ಬಂದ ರಾಮಾನುಜಾಚಾರ್ಯರು (ಕ್ರಿ.ಶ. 1017–1138) ಕರ್ನಾಟಕಕ್ಕೆ ಬಂದು ಅನನ್ಯ ಜೈನ ಧರ್ಮೀಯನಾಗಿದ್ದ ಹೊಯ್ಸಳ ದೊರೆ ಬಿಟ್ಟಿದೇವನ ಆಸ್ಥಾನಕ್ಕೆ ಭೇಟಿ ನೀಡಿ ವೈಷ್ಣವ ಧರ್ಮ ಪ್ರಚಾರ ಮಾಡಿದರು. ಅಲ್ಲಿಯ ತನಕ ಜೈನಧರ್ಮೀಯನಾಗಿದ್ದ ಬಿಟ್ಟಿದೇವ ವೈಷ್ಣವ ಧರ್ಮವನ್ನು ಸ್ವೀಕರಿಸಿ ತನ್ನ ಹೆಸರನ್ನು ವಿಷ್ಣುವರ್ಧನನೆಂದು ಪುನರ್ ನಾಮಕರಣ ಮಾಡಿಕೊಂಡನು. ಅಷ್ಟಾದರೂ ವಿಷ್ಣುವರ್ಧನನ ಪಟ್ಟದ ರಾಣಿ ಶಾಂತಲಾದೇವಿ ಜೈನಧರ್ಮೀಯಳಾಗಿ ಮುಂದುವರೆದಳು. ರಾಮಾನುಜಾಚಾರ್ಯರ ಅದ್ವೈತ ಸಿದ್ಧಾಂತ ಎಲ್ಲರಿಗೂ ನಿಲುಕದ ಮಾರ್ಗವಾದುದರಿಂದ ಸುಲಭವಾಗಿ ಅರ್ಜಿಸಬಹುದಾದ ಭಕ್ತಿಮಾರ್ಗವನ್ನು ಬೋಧಿಸಿದರು. ರಾಮಾನುಜಾಚಾರ್ಯರು ಶೂದ್ರ ಮತ್ತು ಅಂತ್ಯಜರಿಗೂ ಭಕ್ತಿ ರಸವನ್ನು ನೀಡಿ ಅವರಿಗೂ ಮೋಕ್ಷದ ಅರಿವಿನ ದಾರಿ ತೋರಿದರು. ಉದಾ: ಒಕ್ಕಲಿಗರ ಪಂಗಡಗಳಲ್ಲಿ ಪ್ರಮುಖ ಪಂಗಡವಾದ ನಾಮಧಾರಿಗಳು ಮಲೆನಾಡಿನಲ್ಲಿ ನೆಲೆಸಿರುತ್ತಾರೆ. ಒಮ್ಮೆ ರಾಮಾನುಜರ ಪ್ರಭಾವಕ್ಕೆ ಒಳಗಾಗಿ ವೈಷ್ಣವ ಪಂಥಾನುಯಾಯಿಗಳಾದರು, ಈಗಲೂ ಇವರು ಶ್ರೀ ವೈಷ್ಣವ ನಾಮಧಾರಿ ಗೌಡರೆಂದು ತಮ್ಮನ್ನು ಕರೆದುಕೊಳ್ಳುತ್ತಾರೆ. ಆದರೆ ನಾಮಧಾರಿಗೌಡರ ಮನೆಗಳಲ್ಲಿ ತಮ್ಮ ಪಿತೃಗಳಿಗೆ ಎಡೆ ಹಾಕುವಾಗ ಜೈನ ಎಡೆ ಎಂದು ಪ್ರತ್ಯೇಕವಾಗಿ ಎಡೆಯನ್ನು ಇಡುವುದು ರೂಢಿಯಲ್ಲಿದೆ. (ಕಡಿದಾಳ್ ಎಸ್. ರಾಮಪ್ಪ ಗೌಡ,

ಮಲೆನಾಡು ಶ್ರೀ ವೈಷ್ಣವ ನಾಮಧಾರಿಗೌಡ ಸಂಸ್ಕೃತಿ 1998, ಪುಟ-86) ಇದಕ್ಕೆ ಕಾರಣವೇನೆಂದರೆ ನಾಮಧಾರಿಗೌಡರು ರಾಮಾನುಜರ ಪ್ರಭಾವಕ್ಕೊಳಗಾಗುವ ಮೊದಲು ಜೈನರಾಗಿರಬೇಕು. ಸಂಶೋಧಕರು ಈ ವಿಷಯದಲ್ಲಿ ಸಂಶೋಧನೆ ಮಾಡುವುದು ಅವಶ್ಯವಿದೆ.

ಅದೇ ರೀತಿ ಮಂಗಳೂರು, ಕುಂದಾಪುರ, ಪುತ್ತೂರು ಇನ್ನೂ ಮುಂತಾದ ಪ್ರದೇಶಗಳಲ್ಲೂ ನೆಲೆಸಿರುವ ಬಂಟರು ಯಾನೆ ನಾಡವರು, ಜೈನ ಬಂಟರು ಇಲ್ಲವೆ ಜೈನ ಸೆಟ್ರು ಎಂದು ಕರೆದುಕೊಳ್ಳುವ ಇವರು ಇಂದಿಗೂ ತಮ್ಮ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿರುತ್ತಾರೆ. ಇತಿಹಾಸಕಾರರಾದ ಥರ್ಸ್ಟನ್‌ರವರು ಬಂಟರನ್ನು ಕುರಿತು ಇವರು ಮೂಲತಃ ಹಿಂದೂಗಳಾಗಿದ್ದು ಈಗಲೂ ಇವರು ಆರಾಧಿಸುತ್ತಿರುವ ಪೂರ್ವಿಕರ, ದ್ರಾವಿಡ ಭೂತಾರಾಧನೆಯ ಜೊತೆಗೆ ಆಗಿನ ಕಾಲಾಕರ್ಷಣೆಯಿಂದಾಗಿ ಜೈನ ಧರ್ಮವನ್ನು ಸ್ವೀಕರಿಸಿರಬೇಕು ಎಂದು ಹೇಳುತ್ತಾರೆ. (Thurstorn E.L., The Castes and Tribes of Southern India; Page, 151)

ಕ್ರಿ.ಶ. 14ನೇ ಶತಮಾನದಲ್ಲಿ ವಿಜಯನಗರವನ್ನು ಸ್ಥಾಪಿಸಿದ ಹಕ್ಕ ಬುಕ್ಕರಿಗೆ ಆಶೀರ್ವದಿಸಿದ ವಿದ್ಯಾರಣ್ಯರು ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವಂತೆ ಪ್ರೋತ್ಸಾಹಿಸಿದರು. ಇವರ ಪ್ರಭಾವದಿಂದಾಗಿ ಹಕ್ಕ-ಬುಕ್ಕರು ಅನನ್ಯ ಹಿಂದೂ ಧರ್ಮೋದ್ಧಾರಕರಾಗಿ ಹಿಂದೂ ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗಿ ಜೈನ ಧರ್ಮ ಮತ್ತು ಬೌದ್ಧಧರ್ಮಗಳು ಕ್ಷೀಣಿಸತೊಡಗಿದವು. ಇವರ ಕಾಲದಲ್ಲಿ ಹಿಂದೂ ಧರ್ಮ ರಾಜ್ಯಧರ್ಮವಾಯಿತು (State Religion).

ಎಲ್ಲಕ್ಕಿಂತಲೂ ಹೆಚ್ಚಾಗಿ ಕ್ರಿ.ಶ. 12ನೇ ಶತಮಾನದಲ್ಲಿ ತಲೆ ಎತ್ತಿದ ಬಸವಣ್ಣನವರು ಉತ್ತರ ಕರ್ನಾಟಕದ ಭಾಗದಲ್ಲಿ ಸಮಾಜ ಮತ್ತು ಧರ್ಮದ ವಿಷಯದಲ್ಲಿ ನಿಜಕ್ಕೂ ಕ್ರಾಂತಿಯನ್ನೇ ಉಂಟುಮಾಡಿದರು. ಬಸವಣ್ಣನವರು ಜಾತಿರಹಿತ ಸಮಾಜವನ್ನು ನಿರ್ಮಾಣ ಮಾಡಲು ಕ್ರಾಂತಿಯನ್ನೇ ಮಾಡಿದರು. ಮಾದಿಗರ ಚನ್ನಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ ಇನ್ನೂ ಮುಂತಾದ ನಿಮ್ನ ಇಲ್ಲವೇ ಹಿಂದುಳಿದ ವರ್ಗದ ಜನಗಳನ್ನು ಸೇರಿಸಿಕೊಂಡು ಹೊಸ ಸಮಾಜವನ್ನು ಕಟ್ಟಿದರು. ಇವರನ್ನು ಲಿಂಗಾಯಿತ ಅಥವಾ ವೀರಶೈವರೆಂದು ಕರೆಯಲಾಯಿತು. ಬಸವಣ್ಣನವರ ಸರಳವಾದ ಕನ್ನಡದ ವಚನಗಳು ಎಷ್ಟು ಪ್ರಭಾವಶಾಲಿಯಾಗಿದ್ದವು ಎಂದರೆ ಜನ ಸಾಮಾನ್ಯರಿಗೆ ಅರ್ಥವಾಗದ ದ್ವೈತ, ಅದ್ವೈತ, ವಿಶಿಷ್ಟಾದ್ವೈತಗಳು ಗಾಳಿಗೆ ತೂರಿಹೋದವು. ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಹಿಂದುಳಿದಿದ್ದ, ಉತ್ತರ ಕರ್ನಾಟಕದ ಜನರಿಗೆ ಇದು ಚೇತೋಹಾರಿಯಾಯಿತು. ಆ ಭಾಗದಲ್ಲಿ ಹಿಂದುಳಿದ ವರ್ಗದ ಜನಗಳು ಮಾತ್ರವಲ್ಲ

ಒಕ್ಕಲಿಗ ಜನಾಂಗದಲ್ಲಿ ಹಿಂದುಳಿದಿದ್ದ ಅಷ್ಟೇ ಅಲ್ಲ ಪ್ರತಿಷ್ಠಿತರೂ, ನಾಡಪ್ರಭುಗಳು, ವೀರಶೈವ ಧರ್ಮ ಅಥವಾ ಜಾತಿಗೆ ಸೇರಿದರು. ಉತ್ತರ ಕರ್ನಾಟಕದ ಒಕ್ಕಲಿಗ ಜನಾಂಗದ ಹಲವಾರು ಜನ ಇಂದಿಗೂ ತಮ್ಮ ಹೆಸರಿನೊಂದಿಗೆ ಗೌಡ ಎಂಬ ಹೆಸರನ್ನು ಹೊಂದಿರುವುದನ್ನು ಕಾಣಬಹುದು. ಅಲ್ಲಿಂದಾಗಿ ಕುಂಚಿಟಿಗರು, ಸಾದರು ಸೇರಿದಂತೆ ಒಕ್ಕಲಿಗ ಜನಾಂಗದ ಹಲವಾರು ಪಂಗಡಗಳು ಲಕ್ಷಾಂತರ ಜನರು ಮತಾಂತರಗೊಂಡಿದ್ದಾರೆ. ಇಂದು ತಾವು ಒಕ್ಕಲಿಗ ಜನಾಂಗದ ಪಂಗಡಗಳಲ್ಲೊಂದು ಎಂಬುದನ್ನು ಮರೆಯುವಷ್ಟರ ಮಟ್ಟಿಗೆ ವೀರಶೈವರಾಗಿದ್ದಾರೆ. ಈ ಮತಾಂತರ ಕೊನೆಗೊಂಡಿಲ್ಲ. ಇಂದಿಗೂ ಅಲ್ಲಲ್ಲಿ ನಡೆಯುತ್ತಿದೆ. ಎಲ್ಲಿಯ ತನಕ ಒಕ್ಕಲಿಗ ಜನಾಂಗದ ನಾಯಕರು, ಮಠಾಧಿಪತಿಗಳು ಎಚ್ಚೆತ್ತುಕೊಳ್ಳುವುದಿಲ್ಲವೋ ಅಲ್ಲಿಯ ತನಕ ಈ ಮತಾಂತರ ನಿರಂತರವಾಗಿ ನಡೆಯುತ್ತಿರುತ್ತದೆ.

ಹೀಗೆ ಇವೇ ಮುಂತಾದ ಕಾರಣಗಳಿಂದಾಗಿ ಹಿಂದೂ ಧರ್ಮವು ತ್ವರಿತವಾಗಿ ಪುನಶ್ಚೇತನಗೊಂಡಿತು. ಜೈನ ಧರ್ಮ ಮತ್ತು ಬೌದ್ಧಧರ್ಮಗಳು ಅಧಃಪತನದ ಹಾದಿಯನ್ನು ಹಿಡಿದವು. ಒಂದು ದುರಂತವೆಂದರೆ ಹಿಂದೂಧರ್ಮವು ಪುನಃ ಉಚ್ಛ್ರಾಯ ಸ್ಥಿತಿಗೆ ಬಂದು ಸಮಾಜಕ್ಕೆ ಲಾಭವೇನೂ ಆಗಲಿಲ್ಲ ಎಂದರೆ ತಪ್ಪಾಗಲಾರದು. ಕಾರಣವೇನೆಂದರೆ ಮತ್ತೊಮ್ಮೆ ಹಿಂದೂ ಧರ್ಮದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಪಂಚಮ ಇನ್ನೂ ಮುಂತಾದ ಜಾತಿ, ಉಪಜಾತಿ, ಹಾಗೂ ಮೇಲು-ಕೀಳೆಂಬ ಭಾವನೆಗಳು ಹೆಚ್ಚಾದವು. ಒಮ್ಮೆ ಜೈನಧರ್ಮವು ಪ್ರಭಾವಶಾಲಿಯಾಗಿದ್ದಾಗ ಒಕ್ಕಲಿಗರು ಜೈನ ಧರ್ಮೀಯರಾಗಿದ್ದರು. ಆಗ ತಾವು ಹಿಂದುಳಿದವರೆಂಬ ಭಾವನೆ ಸಮಾಜದಲ್ಲಿ ಇರಲಿಲ್ಲ. ಹಿಂದೂಧರ್ಮ ಪುನರುಜ್ಜೀವನ -ಗೊಳ್ಳಲಾಗಿ ಒಕ್ಕಲಿಗರನ್ನು **'ಶೂದ್ರ'** ಪಟ್ಟಕಟ್ಟಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ದೂರವಿರಿಸಿದ್ದು ಈಗ ಇತಿಹಾಸದ ಕಪ್ಪು ಚುಕ್ಕಿಯಾಗಿದೆ.

ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಮೊದಲಾದ ವಿವಿಧ ಪಂಥಗಳ ಬಗ್ಗೆ ಅಷ್ಟೇನು ತಲೆಕೆಡಿಸಿಕೊಳ್ಳದ ಒಕ್ಕಲಿಗ ಜನಾಂಗದಲ್ಲಿ ಮೂಲತಃ ಶೈವ ಸಂಪ್ರದಾಯದವರು ಹಾಗೂ ವೈಷ್ಣವ ಸಂಪ್ರದಾಯದವರು ಕಂಡು ಬರುವರು. ಇವರಿಗೆ ಇಂತಹುದೇ ದೇವರು, ದೇವತೆಯರು ಶ್ರೇಷ್ಠವೆಂತಲೂ ಉಳಿದ ದೇವರು, ದೇವತೆಗಳು ನಿಕೃಷ್ಟವೆಂಬ ಸಂಕುಚಿತ ಮನೋಭಾವನೆಗಳಿಲ್ಲ. ಇವರಲ್ಲಿ ಕಾಲಭೈರವೇಶ್ವರ, ತಿರುಪತಿ ವೆಂಕಟರಮಣ ಸ್ವಾಮಿ ಹಾಗೂ ರಾಘವೇಂದ್ರ ಮಠ ಸೇರಿದಂತೆ ಎಲ್ಲಾ ಧಾರ್ಮಿಕ ಕೇಂದ್ರಗಳಿಗೆ ನಡೆದುಕೊಳ್ಳುವುದೇ ಅಲ್ಲದೆ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ 'ಮುಳಕಟ್ಟೆ ಹುಚ್ಚಮ್ಮ' ದೇವತೆಗೆ ಹರಿಜನರೆ ಪೂಜೆ ಮಾಡುವ ಹಾಗೂ ಅರ್ಚಕರಿರುವ ದೇವಾಲಯಕ್ಕೂ ಭೇಟಿ ನೀಡಿ ಆ ದೇವತೆಗೆ

ನಡೆದುಕೊಳ್ಳುತ್ತಾರೆ. ಇದು ಒಕ್ಕಲಿಗರ ಹೃದಯ ವೈಶಾಲ್ಯ ಮತ್ತು ದೊಡ್ಡಗುಣವನ್ನು ತೋರಿಸುತ್ತದೆ ಮತ್ತು ಸಾರುತ್ತದೆ. ಇದಿಷ್ಟು ಒಕ್ಕಲಿಗರ ಧಾರ್ಮಿಕ ಆಚಾರ-ವಿಚಾರಗಳ ಬಗ್ಗೆ ನಾವು ನೋಡಬಹುದು.

ಒಕ್ಕಲಿಗರ ಸಮಾಜ

ಒಕ್ಕಲಿಗರು ಅನಾದಿಕಾಲದಿಂದಲೂ ಓದು ಬರಹಗಳಿಂದ ವಂಚಿತರಾಗಿ ವಾಣಿಜ್ಯ ಮತ್ತು ವ್ಯಾಪಾರ ವೃತ್ತಿಯಿಂದ ವಿಮುಖರಾಗಿ ಕೇವಲ ನೇಗಿಲ ಯೋಗಿಗಳಾಗಿ ಬೇಸಾಯವನ್ನೇ ನಂಬಿಕೊಂಡು ಬದುಕುತ್ತಿದ್ದಾರೆ. ರಸವನ್ನು ಬೆಳೆದು ಕಸವನ್ನು ತಿಂದು 'ಪಾಲಿಗೆ ಬಂದುದ್ದು ಪಂಚಾಮೃತ'ವೆಂದು ತಮ್ಮನ್ನು ತಾವು ಸಮಾಧಾನ ಪಡಿಸಿಕೊಳ್ಳುತ್ತಾರೆ. ಸಾತ್ವಿಕ ಆಹಾರದ ಜೊತೆಗೆ ಮಾಂಸಾಹಾರಿಗಳು ಆಗಿದ್ದು ಕೆಲವರಲ್ಲಿ ಮದ್ಯಪಾನವು ಬೆರೆತಿದೆ. ಮದ್ಯಪಾನ ಮಾಡುವುದು ನಿಜವಾಗಿಯೂ ಕೆಟ್ಟದ್ದು ನಿಜ. ಆದರೆ ಮಾಂಸಾಹಾರಿಗಳಾದ ಶೂದ್ರರನ್ನು ಬ್ರಾಹ್ಮಣರು ಹೀಗಳೆ-ಯುತ್ತಾರೆ. ಅವರ ಪ್ರಕಾರ ಮಾಂಸಾಹಾರಿಗಳು ತಮಗಿಂತ ಕೀಳು ಎಂಬ ಭಾವನೆ ಅವರಲ್ಲಿದೆ. ಸ್ವಾಮಿ ವಿವೇಕಾನಂದರು ಮಾಂಸಾಹಾರಿಗಳ ಬಗ್ಗೆ ಹೀಗೆ ಹೇಳಿದ್ದಾರೆ. ಕಡ್ಡಾಯವಾಗಿ ಮಾಂಸವನ್ನು ಸೇವಿಸುವ ರಾಷ್ಟ್ರಗಳ ಜನರು ಧೈರ್ಯವಂತರೂ, ವೀರತ್ವದಿಂದ ಕೂಡಿದವರೂ ಹಾಗೂ ಆಲೋಚನಾಪರರೂ ಆಗಿರುತ್ತಾರೆ. (ಇಂಡಿಯನ್ ಸೋಷಿಯಲ್ ರಿಫಾರ್ಮರ್‌ನಲ್ಲಿ ಉಲ್ಲೇಖಿಸಿದ ಪ್ರಬುದ್ಧ ಭಾರತ – 27, ಅಕ್ಟೋಬರ್ 1901.)

ಮಣ್ಣಿನ ಮಕ್ಕಳಾಗಿ ಬದುಕುತ್ತಿರುವುದರಿಂದ ಇವರು ಮಣ್ಣು, ಧೂಳು, ಕೆಸರು, ಬೆವರುಗಳ ಸತತ ಒಡನಾಟದಿಂದ ಕೂಡಿರುತ್ತಾರೆ. ಅಂದ ಮಾತ್ರಕ್ಕೆ ಇವರನ್ನು ನಿಕೃಷ್ಟವಾಗಿ ಕಾಣುವುದು ಸರಿಯಲ್ಲ. ವಿಶ್ವಕವಿ ರವೀಂದ್ರನಾಥ್ ಠಾಗೂರ್‌ರವರು ತಮ್ಮ ಕೃತಿ ಗೀತಾಂಜಲಿಯಲ್ಲಿ **ದೇವರು ದೇವಾಲಯದಲ್ಲಿ** ಇಲ್ಲ... **ಶ್ರಮಜೀವಿಯ ಬೆವರಿನ ಹನಿ ಹನಿಗಳಲ್ಲೂ ದೇವರಿದ್ದಾನೆ. ಶ್ರಮಜೀವಿಯ ಕಣಕಣಗಳಲ್ಲಿ ದೇವರಿದ್ದಾನೆ ಎಂದು ಹೇಳಿರುವುದು ಈ ನೇಗಿಲಯೋಗಿಗೆ ಅನ್ವಯವಾಗುತ್ತದೆ**. ಇದನ್ನೇ ಸಾಮಾಜಿಕ ಕ್ರಾಂತಿಯ ಹರಿಕಾರನಾದ ಬಸವಣ್ಣನವರು **'ಕಾಯಕವೇ ಕೈಲಾಸ'** ಎಂದು ಒಂದೇ ಮಾತಿನಲ್ಲಿ ಹೇಳಿದ್ದಾರೆ. ಶತಶತಮಾನಗಳಿಂದ ಶಿಕ್ಷಣದಿಂದ ವಂಚಿತರಾದ ಒಕ್ಕಲಿಗರು ಆಧುನಿಕ ಜಗತ್ತಿನ ನಡೆ-ನುಡಿ ಆಧುನಿಕತೆಯ ಡಂಬಾಚಾರವಿಲ್ಲದೆ ಕಾಪಟ್ಯರಹಿತ ನೇರ ಹಾಗೂ ನೈಜ ನಡವಳಿಕೆಯ ಹೃದಯ ವೈಶಾಲ್ಯವುಳ್ಳ ವ್ಯಕ್ತಿಗಳಾಗಿದ್ದಾರೆ. ಹುಟ್ಟು – ನಾಮಕರಣ, ವಿವಾಹ, ಶ್ರಾದ್ಧ, ಹಬ್ಬ-ಹರಿದಿನ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಬ್ರಾಹ್ಮಣರ ಮಾರ್ಗದರ್ಶನದಂತೆ ನಡೆದುಕೊಳ್ಳುವುದು ಇಂದಿಗೂ ಪ್ರಸ್ತುತವಾಗಿದೆ.

ಒಕ್ಕಲಿಗ ಜನಾಂಗದಲ್ಲಿ ಬೇರೆ ಯಾವುದೇ ಜನಾಂಗಕ್ಕೂ ಕಡಿಮೆ ಇಲ್ಲದ ಪ್ರಮಾಣದಲ್ಲಿ ಅನೈಕ್ಯತೆ, ಅಸಂಘಟನೆ, ಸೇಡು, ದ್ವೇಷ, ಅಸೂಯೆಗಳಿದ್ದು ಆಸ್ತಿ-ಪಾಸ್ತಿ ವಿಂಗಡಣೆಯ ವಿಷಯದಲ್ಲಿ ದೊಡ್ಡ ರಾದ್ಧಾಂತವನ್ನೇ ಮಾಡುತ್ತಾರೆ. ವಿದ್ಯಾವಂತರು ಕೂಡ ಇದರಿಂದ ಹೊರತಾಗಿಲ್ಲ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಇತ್ತೀಚೆಗೆ ಕಾಲೇಜಿನ ಪ್ರಾಧ್ಯಾಪಕರೊಬ್ಬರು ತಮ್ಮ ಊರಿನ ತುಂಡು ಜಮೀನಿಗಾಗಿ ತಮ್ಮ ದಾಯಾದಿಗಳೊಂದಿಗೆ ಬೀದಿ ಕಾಳಗಕ್ಕೆ ಇಳಿದು ತುರಂಗವಾಸ ಅನುಭವಿಸಿ ಬಂದಿರುವುದನ್ನು ನಾವು ನೋಡಬಹುದು. ಗ್ರಾಮಗಳಲ್ಲಿ ಶಿಕ್ಷಣದ ಕೊರತೆಯಿಂದಾಗಿ ನಿರುದ್ಯೋಗ, ಬಡತನ, ಅರೆ ಉದ್ಯೋಗ, ಅನಕ್ಷರತೆ, ಮೂಢನಂಬಿಕೆ, ವರದಕ್ಷಿಣೆ ಮೊದಲಾದ ಸಾಮಾಜಿಕ ಪಿಡುಗುಗಳು ಈ ಜನಾಂಗವನ್ನು ಕಿತ್ತು ತಿನ್ನುತ್ತಿವೆ. ಇತ್ತೀಚೆಗೆ ವರದಕ್ಷಿಣೆ ಪರಾಕಾಷ್ಠೆಯನ್ನು ಮುಟ್ಟಿದೆ. ಉಳ್ಳವರು ತಮ್ಮ ಮಕ್ಕಳ ಮದುವೆಯನ್ನು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮದುವೆ ಮಾಡಿದರೆ ಬಡರೈತ ಮರ್ಯಾದೆ ಉಳಿಸಿಕೊಳ್ಳುವ ಸಲುವಾಗಿ ಸಾಲ-ಸೋಲ ಮಾಡಿಯೋ ತನ್ನ ಹೊಲಗದ್ದೆಯನ್ನು ಅಡವಿಟ್ಟೋ ಅಥವಾ ಮಾರಿಯಾದರೂ ಮದುವೆಯನ್ನು ಮಾಡುತ್ತಾನೆ. ವಿದ್ಯಾವಂತರೋ ಇದೇ ತಪ್ಪು ಮಾಡುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ವಿದೇಶದಲ್ಲಿ ವ್ಯಾಸಂಗ ಮಾಡಿ ಬಂದ ಒಕ್ಕಲಿಗ ಸುಶಿಕ್ಷಿತರೊಬ್ಬರು ಮಂಡ್ಯದಲ್ಲಿ ತಮ್ಮ ಮಗಳ ಮದುವೆಯನ್ನು ಜನ ಬೆಚ್ಚಿಬೀಳುವಂತೆ ವೈಭವೋಪೇತವಾಗಿ ಮಾಡುವ ಮೂಲಕ ಕೆಟ್ಟ ಉದಾಹರಣೆಯಾಗಿದ್ದಾರೆ. ಸಮಾಜ ಇವುಗಳನ್ನು ಖಂಡಿಸಬೇಕು. ಇಂತಹವುಗಳಿಗೆ ಉತ್ತಮವಾದ ಮದ್ದು ಎಂದರೆ ಕುವೆಂಪುರವರು ಪ್ರತಿಪಾದಿಸಿದ ಸರಳ ವಿವಾಹ ಅಥವಾ ಮಂತ್ರ ಮಾಂಗಲ್ಯ.

ಸಂಶೋಧಕರಾದ ಜೇಮ್ಸ್ ಮ್ಯಾನರ್‌ರವರು ಕರ್ನಾಟಕದ ಪ್ರಬಲ ಸಮುದಾಯಗಳಾದ ಒಕ್ಕಲಿಗರು ಮತ್ತು ಲಿಂಗಾಯಿತ ಸಮುದಾಯಗಳಲ್ಲಿನ ಶಿಕ್ಷಣ, ಉದ್ಯೋಗ, ಇವೇ ಮುಂತಾದವುಗಳನ್ನು ಅಧ್ಯಯನ ಮಾಡಿ ಅವರ ಸ್ಥಾನಮಾನ-ಗಳನ್ನು ಹೀಗೆ ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ : ಕ್ರಿ.ಶ. 20ನೇ ಶತಮಾನದ ಕಾಲದಲ್ಲಿ ಲಿಂಗಾಯಿತರಲ್ಲಿ ಒಕ್ಕಲಿಗರಿಗಿಂತಲೂ ಹೆಚ್ಚು ಐಕ್ಯಮತ್ಯ ಹಾಗೂ ಸಮನ್ವಯತೆ ಇತ್ತು. ವೀರಶೈವರ ವಿರಕ್ತಮಠಗಳು, ಆಶ್ರಮಗಳು, ಅಧಿಕ ಪ್ರಮಾಣ -ದಲ್ಲಿದ್ದು ಇವುಗಳು ಸ್ಥಳೀಯ ಸಂಸ್ಥೆಗಳಂತೆ ಕೆಲಸ ಮಾಡುತ್ತಿದ್ದು, ಲಿಂಗಾಯಿತರ ಸಮನ್ವಯತೆಗೆ ಹೆಚ್ಚು ಪರಿಣಾಮ ಬೀರಿದವು. ಆ ಕಾಲದಲ್ಲಿ ಈ ವಿರಕ್ತಾಶ್ರಮಗಳು ಅಥವಾ ಮಠಗಳೇ ಪ್ರಬಲ ಸ್ಥಳೀಯ ಸಂಸ್ಥೆಗಳಾಗಿದ್ದುವಲ್ಲದೆ, ಆ ಮಠಗಳ ಸ್ವಾಮಿಗಳು ತಮ್ಮ ಶ್ರೇಷ್ಠತೆಯನ್ನು, ಪ್ರಖ್ಯಾತಿಯನ್ನು ಉಳಿಸಿಕೊಂಡಿದ್ದರು. ಜನರು ಈ ಮಠದ ಸ್ವಾಮಿಗಳು ಇಲ್ಲವೆ ಗುರುಗಳು ದೈವಾಂಶ ಸಂಭೂತರು ಇಲ್ಲವೆ ದೇವರ ಅಪರಾವತಾರ ಎಂದೆಲ್ಲ ನಂಬಿಕೆಯಿಟ್ಟಿರುವುದನ್ನು ಕಾಣಬಹುದು. ಅಲ್ಲದೆ ತಮ್ಮ

ಮತೀಯರಿಗೆ ಸಾಂದರ್ಭಿಕವಾಗಿ ಮಾರ್ಗದರ್ಶನ ನೀಡುವುದರಲ್ಲಿ, ಬ್ರಾಹ್ಮಣ ಮತದವರೊಡನೆ ತಮ್ಮ ಮತದ ಪ್ರತಿಷ್ಠೆಯನ್ನು ಉಳಿಸುವುದರಲ್ಲಿ, ಶಿಕ್ಷಣ ಕೊಡಿಸುವುದರಲ್ಲಿ, ಹಾಗೂ ಇತರ ಸಣ್ಣ ಸಣ್ಣ ಮಠಗಳ ಮೂಲಕ ಮತ ಪ್ರಚಾರ ಕಾರ್ಯ ಮಾಡುವುದರಲ್ಲಿ ಲಿಂಗಾಯಿತರ ಮಠದ ಮಠಾಧೀಶರು ಅಥವಾ ಗುರುಗಳು ಬಹಳ ಉತ್ಸುಕರಾಗಿದ್ದಾರೆ. (Dr. James Manor : The evaluation of political arenas and units of social organsiations – The ligngayats and vokkaligas of princely Mysore" – Published in "Dimesnions of social change in India" edited by M.N. Srinivas, S. Seshaiah and V.S. Parthasarathy)

ವಿದ್ವಾಂಸರಾದ ಜೇಮ್ಸ್ ಮ್ಯಾನರ್‌ರವರ ಈ ಮೇಲ್ಕಂಡ ಹೇಳಿಕೆ ಸತ್ಯವಾಗಿದೆ. ಈ ಮಠಗಳು, ರಾಜಕಾರಣಿಗಳು ಹಾಗೂ ಕೆಲವು ಪ್ರತಿಷ್ಠಿತ ವ್ಯಕ್ತಿಗಳು ಲಿಂಗಾಯಿತ ಮತವನ್ನು ಪ್ರಬಲ ಶಕ್ತಿಯನ್ನಾಗಿ ರೂಪಿಸಿವೆ, ಹಾಗೂ ರೂಪಿಸುತ್ತಿವೆ. ಇಂದು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಅವರು ನೆಲೆ ಕಂಡು ಕೊಂಡಿದ್ದಾರೆ. ಒಕ್ಕಲಿಗರಲ್ಲಿ ಈ ರೀತಿಯ ಸಂಘಟನಾ ಕಲೆಯಾಗಲೀ, ಛಾತಿಯಾಗಲೀ, ಅವರಂತೆ ಪ್ರತಿಷ್ಠಿತ ವ್ಯಕ್ತಿಗಳಾಗಲೀ ನಮ್ಮ ಜನಾಂಗದಲ್ಲಿ ಹೆಚ್ಚಾಗಿ ಕಂಡು ಬರುವುದಿಲ್ಲ. ಈ ವಿಚಾರದಲ್ಲಿ ಲಿಂಗಾಯಿತರನ್ನು ನೋಡಿ ಕಲಿಯಬೇಕು ಎಂದರೆ ತಪ್ಪಾಗಲಾರದು. ಬೆಂಗಳೂರು ನಗರದ ಯಾವುದೇ ಬಡಾವಣೆಗಳಿಗೆ ಹೋದರೂ ಅಲ್ಲೊಂದು 'ನಂದಿ ಸಂಘ' ಎಂತಲೂ, 'ಬಸವ ಬಳಗ' ಎಂತಲೂ, 'ಬಸವೇಶ್ವರ ಸಂಘ' ಎಂತಲೂ ಇರುತ್ತದೆ. ಆದರೆ ಇತ್ತೀಚೆಗೆ ಒಕ್ಕಲಿಗರು ಕೆಂಪೇಗೌಡರ ಹೆಸರಿನಲ್ಲಿ 'ಕೆಂಪೇಗೌಡ ಯುವಕರ ಸಂಘ' ಇಲ್ಲವೇ 'ನಾಡಪ್ರಭು ಕೆಂಪೇಗೌಡ ಸಂಘ' ಎಂತಲೂ ತಲೆ ಎತ್ತುತ್ತಿವೆ. ಆದರೆ ಈ ಸಂಘಗಳು ಈ ಮೊದಲೇ ತಿಳಿಸಿದ ವೀರಶೈವ ಸಂಘ ಸಂಸ್ಥೆಗಳ ಮುಂದೆ ಸಪ್ಪೆಯಾಗಿದೆ. ಕಾಯಾ, ವಾಚಾ, ಮನಸಾ, ತಮ್ಮ ಸಮುದಾಯಕ್ಕಾಗಿ ದುಡಿಯಬೇಕು. ಉಳ್ಳವರು ಉಳ್ಳದಿರುವವರ ಸಹಾಯಕ್ಕೆ ಬರಬೇಕು. ಹಿಂದೆ ಹಳ್ಳಿಗಳಲ್ಲಿ ಮದುವೆ, ಮುಂಜಿ, ಸಂಸ್ಕಾರಾದಿಗಳಲ್ಲಿ ಇಡೀ ಊರಿಗೆ ಊರೇ ಒಗ್ಗಟ್ಟಾಗಿ ನಿಲ್ಲುತ್ತಿದ್ದರು. ಈಗ ಅದು ಕಡಿಮೆಯಾಗುತ್ತಾ ಬರುತ್ತಿದೆ.

ಒಕ್ಕಲಿಗರು ಗ್ರಾಮಗಳಲ್ಲಿ ಒಂದು ರೀತಿಯ ಜೀವನ ನಡೆಸುತ್ತಿದ್ದರೆ ನಗರಗಳಲ್ಲಿ ಮತ್ತೊಂದು ರೀತಿಯ ಬದುಕನ್ನು ನಡೆಸುತ್ತಿದ್ದಾರೆ.

ಗ್ರಾಮ ಜೀವನ: ಒಕ್ಕಲುತನವನ್ನೇ ನಂಬಿರುವ ಒಕ್ಕಲಿಗರು ಕಷ್ಟವೋ ಸುಖವೋ ಗ್ರಾಮಗಳಲ್ಲೇ ಇಂದಿಗೂ ಜೀವನ ನಡೆಸುತ್ತಿದ್ದಾರೆ. ನಗರಗಳಿಗೆ ಆಕರ್ಷಿತರಾಗಿ ಹಳ್ಳಿಯನ್ನು ಬಿಟ್ಟು ಎಲ್ಲರೂ ನಗರಗಳಿಗೆ ವಲಸೆ ಹೋದರೆ

ನಗರವಾಸಿಗಳ ತುತ್ತಿನ ಚೀಲವನ್ನು ತುಂಬುವವರು ಯಾರು? ಆದ ಕಾರಣ ಶೇ 50 ರಿಂದ 60ರಷ್ಟು ಜನ ಒಕ್ಕಲಿಗರು ಗ್ರಾಮಗಳಲ್ಲೇ ಇದ್ದು ವ್ಯವಸಾಯ ಮಾಡಿಕೊಂಡಿರುತ್ತಾರೆ. ಹಲವಾರು ಗ್ರಾಮಗಳಲ್ಲಿ ಕುಡಿಯುವ ನೀರು, ಉತ್ತಮವಾದ ರಸ್ತೆ, ಶೌಚಾಲಯ, ಒಳಚರಂಡಿ ವ್ಯವಸ್ಥೆ, ಶಾಲಾ - ಕಾಲೇಜುಗಳು ಇವೇ ಮುಂತಾದ ನಾಗರೀಕ ಸೌಲಭ್ಯಗಳಿಂದ ವಂಚಿತರಾದ ಇವರು ನೆಲ ಮತ್ತು ಮಳೆಯನ್ನೇ ನಂಬಿ ಬದುಕುತ್ತಿದ್ದಾರೆ.

ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರಿ ಶಾಲೆಗಳ ಸ್ಥಿತಿಗತಿಗಳು ಅಧೋಗತಿಗಿಳಿ-ದಿದೆ. ಶಾಲೆಯಿದ್ದರೆ ಶಿಕ್ಷಕರಿಲ್ಲ, ಶಾಲೆ ಮತ್ತು ಶಿಕ್ಷಕರು ಇಬ್ಬರೂ ಇದ್ದರೆ ವಿದ್ಯಾರ್ಥಿಗಳೇ ಇರುವುದಿಲ್ಲ. ಇವೇ ಮುಂತಾದ ಸಮಸ್ಯೆಗಳನ್ನು ನಾವು ನೋಡುತ್ತಿದ್ದೇವೆ. ಇಂತಹ ಶಾಲಾ-ಕಾಲೇಜುಗಳಲ್ಲಿ ವ್ಯಾಸಂಗಮಾಡಿ ಮೇಲೆ ಬಂದ ವಿದ್ಯಾರ್ಥಿಗಳು ಮತ್ತು ಪದವೀಧರರು ಪಟ್ಟಣದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಮತ್ತು ಪದವೀಧರ-ರೊಂದಿಗೆ ಪೈಪೋಟಿ ಮಾಡಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಅಂದು ಶ್ರೀಯುತ ಎಚ್.ಡಿ. ದೇವೇಗೌಡರವರು ಗ್ರಾಮಾಂತರ ಪ್ರದೇಶಗಳಲ್ಲಿ ಓದಿ ಬಂದ ಪದವೀಧರ-ರಿಗೆ ಶೇ.15ರಷ್ಟು ಮೀಸಲಾತಿ / ಗ್ರೇಸ್ ನೀಡಿದ್ದು ಸ್ವಾಗತಾರ್ಹ ವಿಷಯವಾಗಿದೆ.

ಸ್ವಾತಂತ್ರ್ಯ ಪೂರ್ವ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳ ಒಕ್ಕಲಿಗರ ಹೆಣ್ಣು ಮಕ್ಕಳು ಅಲ್ಲಿನ ಉಳಿದ ಹೆಣ್ಣು ಮಕ್ಕಳಂತೆ ಚಿಕ್ಕವಯಸ್ಸಿನಲ್ಲೇ ವಿವಾಹವಾಗುತ್ತಿದ್ದರು. ಹೆಣ್ಣು ಮಕ್ಕಳಿಗೆ ಸಿಗಬೇಕಾದ ಶಿಕ್ಷಣ, ಸಾಮಾನ್ಯಜ್ಞಾನ ಇವೇ ಮುಂತಾದವುಗಳಿಂದ ವಂಚಿತರಾಗುತ್ತಿದ್ದರು. ಇಂದಿಗೂ ಕೂಡ ಎಷ್ಟೋ ಒಕ್ಕಲಿಗ ಕುಟುಂಬದ ಹೆಣ್ಣು ಮಕ್ಕಳು ಬಾಲ್ಯ ವಿವಾಹಕ್ಕೆ ಒಳಗಾಗುತ್ತಿದ್ದಾರೆ. ಚಿಕ್ಕ ವಯಸ್ಸಿನಲ್ಲಿ ವಿವಾಹವಾಗುವುದ-ರಿಂದ ಆಗಬಹುದಾದ ತೊಂದರೆ ಎಂದರೆ ಆಕಸ್ಮಿಕವಾಗಿ ಆಕೆಯ ಗಂಡ ಮರಣ ಹೊಂದಿದರೆ ಬಾಲವಿಧವೆಯಾಗಬೇಕಾಗುತ್ತದೆ. ಬಾಲವಿಧವೆಯ ಗೋಳು ಹೇಳ-ತೀರದು. ನಮ್ಮ ಸಮಾಜ ಆಕೆಯ ಪುನರ್ ವಿವಾಹಕ್ಕೆ ಅಷ್ಟು ಸುಲಭವಾಗಿ ಒಪ್ಪುವುದಿಲ್ಲ. ಪುರುಷ ಪ್ರಧಾನ ಸಮಾಜ ಇದೇ ರೀತಿ ವಿವಾಹವಾದ ಪುರುಷನ ಪತ್ನಿ ತೀರಿಕೊಂಡರೆ ಆತನ ಪುನರ್ ವಿವಾಹಕ್ಕೆ ಎಡೆತಾಕುತ್ತದೆ. ಗ್ರಾಮಗಳಲ್ಲಿರುವ ಒಕ್ಕಲಿಗರಲ್ಲಿ ಕೆಲವಾರು ಜಮೀನ್ದಾರರು, ಶ್ರೀಮಂತರು, ಭಾರಿ ಕುಳಗಳು ವೈಭವದ ಜೀವನ ಸಾಗಿಸಿದರೆ ಒಕ್ಕಲಿಗರಲ್ಲಿ ಬಡತನದ ರೇಖೆಗಿಂತ ಕೆಳಗಿರುವ ಬಹು ಸಂಖ್ಯಾತರ ಬದುಕು ಬವಣೆಯಾಗಿದೆ. ಇತ್ತೀಚೆಗೆ ಬೆಂಗಳೂರು ಸುತ್ತಮುತ್ತಲಿನ ಜಮೀನಿಗೆ ಚಿನ್ನದ ಬೆಲೆ ಬಂದಿದೆ. ಇಲ್ಲಿನ ಒಕ್ಕಲಿಗರು ತಮ್ಮ ಜಮೀನನ್ನು ಮಾರಿಕೊಂಡು ಕಾರು-ಬಾರು ನಡೆಸುತ್ತಿದ್ದಾರೆ ಮುಂದೊಂದು ದಿನ ಜಮೀನೂ ಇಲ್ಲದೆ, ಉದ್ಯೋಗವೂ ಇಲ್ಲದೆ ತೊಂದರೆಗೆ ಸಿಕ್ಕಿಬೀಳುವ ಸನ್ನಿವೇಶ ಎದುರಾಗಬಹುದು.

ನಗರ ಜೀವನ

ಕೆಟ್ಟು ಪಟ್ಟಣಕ್ಕೆ ಸೇರು ದುಡ್ಡು ಕೊಟ್ಟು ದೊಡ್ಡ ಊರಿನಲ್ಲಿರು ಇವೆ ಮುಂತಾದ ನಾಣ್ನುಡಿಗಳನ್ನು ನಾವು ಕೇಳಿದ್ದೇವೆ. ನಗರಗಳಿಗೆ ಆಕರ್ಷಿತರಾದ ಒಕ್ಕಲಿಗರಲ್ಲಿ ಹಲವಾರು ಜನ ಹೊಟ್ಟೆ-ಬಟ್ಟೆ ಕಟ್ಟಿ ಪಟ್ಟಣ ಅಥವಾ ನಗರ ಪ್ರದೇಶಗಳಲ್ಲಿ ಮನೆ-ಗಳನ್ನು ಕಟ್ಟಿಕೊಂಡಿದ್ದಾರೆ. ತಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ. ಪಟ್ಟಣ ಅಥವಾ ನಗರಕ್ಕೆ ಬಂದ ಒಕ್ಕಲಿಗರೆಲ್ಲರೂ ಸಂತೋಷ ಮತ್ತು ಸಮೃದ್ಧಿಯಿಂದ ಇಲ್ಲ. ಪಟ್ಟಣ ಅಥವಾ ನಗರಗಳ ಕೊಂಪೆಯಂತಿರುವ ಕೆಲವು ಪ್ರದೇಶಗಳಲ್ಲಿ ಶೇ.60 ಜನ ವಾಸಿಸುತ್ತಿರುವುದನ್ನು ಕಾಣಬಹುದು. ಉದ್ಯೋಗವನ್ನರಸಿ ಬಂದ ಇವರು ಉತ್ತಮವಾದ ಶಿಕ್ಷಣವನ್ನು ಪಡೆಯದೆ, ಉದ್ಯೋಗವನ್ನು ಪಡೆಯದೆ ಸಣ್ಣ ಪುಟ್ಟ ಉದ್ಯೋಗಗಳಲ್ಲಿ ಕಾಲ ಕಳೆಯುತ್ತಿರುವುದನ್ನು ನೋಡಬಹುದು.

ಒಮ್ಮೆ ನಮ್ಮ ಜನಾಂಗದ ರಾಜಕೀಯ ಮುಖಂಡರೊಬ್ಬರು ವಿಧಾನ ಸೌಧದಲ್ಲಿ ಉನ್ನತ ಸ್ಥಾನದಲ್ಲಿರುವ ಬ್ರಾಹ್ಮಣ ಅಧಿಕಾರಿಯನ್ನು ಕುರಿತು ಏನ್ ಸಾಹೇಬ್ರೆ ವಿಧಾನಸೌಧದಲ್ಲಿ ನಮ್ಮ ಜನಾಂಗದ ಯಾರೊಬ್ಬರೂ ಉನ್ನತ ಸ್ಥಾನದಲ್ಲಿಲ್ಲವಲ್ಲ ಎಂದರಂತೆ. ಅದಕ್ಕೆ ಆ ದರ್ಪಿಷ್ಟ ಅಧಿಕಾರಿ ಹೇಳಿದರಂತೆ ಅಯ್ಯೋ ಏಕ್ ಹಾಗಂತೀರಿ. ವಿಧಾನಸೌಧದ ಕೀಲಿ ಕೈ ನಿಮ್ಮವರ ಕೈಲಿದೆ. ಅವರು ಬಾಗಿಲು ತೆಗೆದ್ರೇನೆ ಸ್ವಾಮಿ ನಾವು ಒಳಕ್ಕೆ ಬರಬಹುದು. ಇಲ್ದಿದ್ರೆ ನಾವು ಹೊರಗೆ ನಿಲ್ಬೇಕು ಎಂದು ಕುಹಕದ ಮಾತನ್ನು ಆಡಿದರಂತೆ.

ದಿವಾನ್ ಚಾಕರಿ ಸಿಕ್ಕೋದಿಲ್ಲ, ಜವಾನ್ ಚಾಕರಿಗೆ ಇವರು ಹೋಗೋದೇ ಇಲ್ಲ ಎನ್ನುವಂತಹ ಸ್ಥಿತಿಗೆ ತಲುಪಿದ್ದಾರೆ. ಒಕ್ಕಲಿಗರು ತಮ್ಮ ಗತ್ತು ಮತ್ತು ಗೌಡಿಕೆಯನ್ನು ಬಿಟ್ಟು ತಾವು ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು.

ಒಕ್ಕಲಿಗರ ಸಂಘದ ಅಂದಿನ ಅಧ್ಯಕ್ಷರಾಗಿದ್ದ ಡಾ. ಎಂ.ಎಚ್. ಮರೀಗೌಡರು ಜನಾಂಗವನ್ನು ಕುರಿತು "ನೋಡಿ ನಮ್ಮ ಒಕ್ಕಲಿಗರು ಎಂತಾವ್ರು ಅಂದ್ರೆ ನಾನು ಒಕ್ಕಲಿಗ ನನಗೇ ಕೆಲ್ಸ ಕೊಡಿ ಅಂತ ಗಲಾಟೆ ಮಾಡ್ತಾರೆ. ಇವರನ್ನು ಮೈಮೇಲೆ ಹಾಕ್ಕೊಳೋದು ಬೇಡ ಅಂತೇಳಿ ಕೆಲ್ಸ ಕೊಟ್ರೆ ಕೆಲ್ಸ ಮಾಡೋದಿಲ್ಲ. ಯಾಕಯ್ಯ ಕೆಲ್ಸ ಮಾಡೋದಿಲ್ಲ? ಅಂತ ಕೇಳದ್ರೆ ನಾನು ಒಕ್ಕಲಿಗ ಕಷ್ಟಪಟ್ಟು ಕೆಲ್ಸ ತಗೊಂಡಿವ್ನಿ, ನಾನ್ಯಾಕ್ ಕೆಲ್ಸ ಮಾಡ್ಲಿ? ಬೇರೆಯವರ್ ಕೈಲಿ ಕೆಲ್ಸ ಮಾಡ್ಸಿ ಅಂತ ಹೇಳ್ತಾರೆ, ಏನ್ ಮಾಡೋದು? ನಮ್ಮ ಜನಗಳಿಗೆ ನಿಷ್ಠೆ, ಪ್ರಾಮಾಣಿಕತೆ ಇಲ್ಲ" ಎಂದು ಹೇಳುತ್ತಿದ್ದರು. ನಿಜ ಪ್ರತಿಯೊಬ್ಬರೂ ನಿಷ್ಠೆ ಪ್ರಾಮಾಣಿಕತೆ ಬೆಳೆಸಿಕೊಳ್ಳಲೇಬೇಕು.

ಇಂದಿಗೂ ಕೆಲವಾರು ಕಛೇರಿಗಳಲ್ಲಿ, ಬ್ಯಾಂಕುಗಳಲ್ಲಿ ಜವಾನ್ ಚಾಕರಿಯಲ್ಲಿ ಇರುವವರನ್ನು ನೋಡಬಹುದು. ಅಂದರೆ ಪಟ್ಟಣ ಅಥವಾ ನಗರ ಪ್ರದೇಶದಲ್ಲಿರುವ ಎಲ್ಲಾ ಒಕ್ಕಲಿಗರು ನಿಕೃಷ್ಟ ಜೀವನವನ್ನೇನು ನಡೆಸುತ್ತಿಲ್ಲ.

ಒಕ್ಕಲಿಗರಲ್ಲಿರುವ ಪ್ರಮುಖ ಪಂಗಡಗಳಾದ ಗಂಗಡಿಕಾರ ಒಕ್ಕಲಿಗರು, ಮೊರಸು ಒಕ್ಕಲಿಗರು, ಬಂಟರಲ್ಲಿ ಕೆಲವಾರು ಜನ ಆಗರ್ಭ ಶ್ರೀಮಂತರಿದ್ದಾರೆ, ಬುದ್ಧಿ ಜೀವಿಗಳಿದ್ದಾರೆ, ವೈದ್ಯರು, ಸಿನಿಮಾ ತಾರೆಯರಿದ್ದಾರೆ. ಆದರೆ ತಮ್ಮ ಜಾತಿಯ ಅಥವಾ ಕುಲ ಬಾಂಧವರ ಅಭಿವೃದ್ದಿಗೆ ಎಂದಿಗೂ ಯೋಚಿಸದ ಇವರು ತಾನುಂಟು ತನ್ನ ಕುಟುಂಬ ಉಂಟು ಎಂಬಂತೆ ವೈಭವದ ಜೀವನವನ್ನು ನಡೆಸುತ್ತಿರುವುದನ್ನು ನಾವು ನೋಡಬಹುದು. 80 ರಿಂದ 100 ವರ್ಷಗಳ ಹಿಂದೆ ಕೆಲವಾರು ಒಕ್ಕಲಿಗ ಗಣ್ಯ ವ್ಯಕ್ತಿಗಳು ವಿದ್ಯಾರ್ಥಿಗಳಿಗೆ ವಾರಾನ್ನ ಹಾಕುವುದು, ಬಡವಿದ್ಯಾರ್ಥಿಗಳನ್ನು ತಮ್ಮ ಮನೆಗಳಲ್ಲಿ ಓದಲು ಅವಕಾಶ ನೀಡುವುದು, ಬಟ್ಟೆ, ಫೀಜು, ಇನ್ನೂ ಮುಂತಾದ ಸೌಲಭ್ಯ ನೀಡುವುದು, ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ನೀಡುವುದು ಇವೇ ಮುಂತಾದ ಶಿಕ್ಷಣ ದಾಸೋಹದ ಕೆಲಸದಲ್ಲಿ ನಿರತರಾಗಿದ್ದರು. ಆದರೆ ಇತ್ತೀಚೆಗೆ ಗ್ರಾಮ ಮತ್ತು ನಗರಗಳ ಚಿತ್ರಣವೇ ಬದಲಾಗಿದೆ. ನಗರದಲ್ಲಿ ವಾಸವಾಗಿರುವ ಜನಾಂಗದ ಕೆಲವರು ಐಷಾರಾಮಿ ಜೀವನ ನಡೆಸಲು, ವಿದೇಶ ಸಂಚಾರ ಮಾಡಲು, ತಮ್ಮ ಪ್ರತಿಷ್ಠೆ ಹೆಚ್ಚಿಸಿಕೊಳ್ಳಲು ಧಾರಾಳವಾಗಿ ಹಣವನ್ನು ವಿನಿಯೋಗಿಸುತ್ತಾರೆ. ದೇವಸ್ಥಾನ ಕಟ್ಟಲು ಧಾರಾಳವಾಗಿ ಮತ್ತು ಉದಾರವಾಗಿ ಧನ ಸಹಾಯ ಮಾಡುವ ಈ ಜನ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದಿಲ್ಲ. ಬೆಂಗಳೂರು ನಗರವನ್ನೇ ಉದಾ: ತೆಗೆದುಕೊಳ್ಳುವುದಾದರೆ ಇಲ್ಲಿರುವ ಕೆಲವೇ ಪ್ರತಿಷ್ಠಿತ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ತಂದೆ ತಾಯಂದಿರು ಮತ್ತು ಪೋಷಕರು ಸ್ಥಿತಿವಂತರಾಗಿದ್ದಾರೆ. ಬಹಳಷ್ಟು ಶಾಲಾ-ಕಾಲೇಜುಗಳ ಒಕ್ಕಲಿಗ ವಿದ್ಯಾರ್ಥಿಗಳು ಬಹಳ ತೊಂದರೆಯನ್ನು ಅನುಭವಿಸಿ ವಿದ್ಯಾರ್ಜನೆ ಮಾಡುತ್ತಿರುವುದನ್ನು ನಾವು ನೋಡಬಹುದು. ಸರ್ಕಾರವು ಹಿಂದುಳಿದ ಹಾಗೂ ನಿಮ್ನ ವರ್ಗದ ವಿದ್ಯಾರ್ಥಿಗಳಿಗೆ ಏನೆಲ್ಲ ಸೌಲಭ್ಯ ನೀಡುತ್ತಿದೆ. ಆದರೆ ಒಕ್ಕಲಿಗ ವಿದ್ಯಾರ್ಥಿಗಳಿಗೆ ಸರ್ಕಾರದಿಂದಲೂ ಸಹಾಯವಿಲ್ಲ ಹಾಗೂ ತಮ್ಮ ಕುಲಬಾಂಧವರಿಂದಲೂ ಯಾವುದೇ ಸಹಾಯವಿಲ್ಲದೆ ಅತಂತ್ರರಾಗಿದ್ದಾರೆ.

ಲೋಕಾಯುಕ್ತ (ನಿ) ನ್ಯಾಯಮೂರ್ತಿ ವೆಂಕಟಾಚಲ ಅವರನ್ನು ಸಂದರ್ಶನ ಮಾಡಿದಾಗ ಅವರು ಹೇಳಿದ ಕೆಲವು ಮಾತುಗಳನ್ನು ಇಲ್ಲಿ ಹೇಳುವುದು ಸೂಕ್ತವಾಗಿದೆ. ಸರ್ಕಾರಿ ಕೆಲಸದಲ್ಲಿರುವ ಅಧಿಕಾರಿಗಳಲ್ಲಿ ಬಹಳಷ್ಟು ಜನ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಇಂತಹವರಲ್ಲಿ ಒಕ್ಕಲಿಗರು ಎರಡನೆಯ ಸ್ಥಾನದಲ್ಲಿದ್ದಾರೆ. ನಗರದಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿರುವ ಈ ಜನ ಯಾವುದೇ ಕಾರಣದಿಂದ ಗ್ರಾಮಗಳಲ್ಲಿ

ವಾಸಿಸುತ್ತಿರುವ ತಮ್ಮ ಸಮುದಾಯದ ಮಕ್ಕಳಿಗೆ ಸಹಾಯ ಮಾಡುವುದಿಲ್ಲ. ರಾಜಕಾರಣಿಗಳನ್ನು ಓಲೈಸಿಕೊಂಡು ಬೇನಾಮಿ ಹಣ ಮಾಡುತ್ತಿದ್ದಾರೆ, ಇದು ನಿಲ್ಲಬೇಕು. ಪ್ರಾಮಾಣಿಕವಾಗಿ ಸೇವೆ ಸಲ್ಲಿಸಬೇಕು... ಇತ್ಯಾದಿ. ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗಡೆಯವರನ್ನು ಸಂದರ್ಶಿಸಲಾಗಿ ಭ್ರಷ್ಟಾಚಾರದಲ್ಲಿ ತೊಡಗಿರುವವರಲ್ಲಿ ಒಂದು ರೀತಿ ಸಾಮರಸ್ಯ ಹಾಗೂ ಐಕ್ಯಮತ್ಯವಿದೆ. ಜವಾನನಿಂದ ಹಿಡಿದು ನ್ಯಾಯಾಧೀಶರೂ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ನಗರಗಳಲ್ಲಿ ವಾಸಮಾಡುವ ಜನ ಗ್ರಾಮೀಣ ಜನರ ಬಗ್ಗೆ ಕಾಳಜಿ ಹೊಂದಬೇಕು, ಗ್ರಾಮೀಣ ಜನರ ಜೀವನವನ್ನು ಹಸನುಗೊಳಿಸಲು ಯತ್ನಿಸಬೇಕು.

ಒಕ್ಕಲಿಗರ ಕ್ಷೇತ್ರವಾರು ಗುಣಸ್ವಭಾವ

ಇಲ್ಲಿ ಒಕ್ಕಲಿಗರ ಗುಣಸ್ವಭಾವವನ್ನು ತಿಳಿಸುವುದು ಅಷ್ಟೇ ಸೂಕ್ತವಾದುದು. ಒಕ್ಕಲಿಗರಲ್ಲಿ ನೂರಕ್ಕೂ ಹೆಚ್ಚು ಉಪಪಂಗಡಗಳಿವೆ. ಇವುಗಳಲ್ಲಿ **ಗಂಗಡಿಕಾರ ಒಕ್ಕಲಿಗರು** ಬಹುಸಂಖ್ಯಾತರು ಹಾಗೂ ಜನಬಾಹುಳ್ಯವಿರುವ ಜಾತಿ ಅಥವಾ ಉಪಜಾತಿ ಎಂದರೆ ತಪ್ಪಾಗಲಾರದು. ಇವರು ಹೆಚ್ಚಾಗಿ ಮಂಡ್ಯ, ಮೈಸೂರು, ಕೆ.ಆರ್. ನಗರ, ಹಾಸನ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹೇರಳವಾಗಿರುವುದನ್ನು ಕಾಣಬಹುದು (ಮುಂದೆ ವಿವರಿಸಲಾಗಿದೆ). ಮೈಸೂರು ಜಿಲ್ಲೆ (ಮಂಡ್ಯ ಜಿಲ್ಲೆ ಅಂದು ಮೈಸೂರಿಗೆ ಸೇರಿತ್ತು) ಕಾವೇರಿ ನದಿಯ ಮುಖಜ ಭೂಮಿ ಹಾಗೂ ಸಂಪದ್ಭರಿತ-ವಾದ ಪ್ರದೇಶವಾದ ಕಾರಣದಿಂದಲೇ ಗಂಗರು, ಚಾಲುಕ್ಯರು ಅದರಲ್ಲೂ ಹೊಯ್ಸಳರು ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ಹಣಾಹಣಿ ನಡೆಸಿದರು. ನಂತರದ ಕಾಲದಲ್ಲಿ ವಿಜಯನಗರದರಸರು ಈ ಪ್ರದೇಶವನ್ನು ಗೆದ್ದುಕೊಂಡು ಶ್ರೀ ರಂಗಪಟ್ಟಣದಲ್ಲಿ ಶ್ರೀರಂಗರಾಯನನ್ನು ತಮ್ಮ ರಾಯಭಾರಿಯನ್ನಾಗಿ ನೇಮಿಸಿದ್ದರು. ನಂತರ ಮೈಸೂರು ಒಡೆಯರಿಗೆ ಈ ಪ್ರದೇಶವು ಸೇರಿತು. ಚಿಕ್ಕದೇವರಾಜ ಒಡೆಯರು ಚಿಕ್ಕದೇವರಾಯ ನಾಲಾ, ವಿರಿಜಾ ನಾಲೆ ಇವೇ ಮುಂತಾದ ನಾಲೆಗಳನ್ನು ಹಾಗೂ ಒಡ್ಡುಗಳನ್ನು ಹಾಕಿಸುವ ಮೂಲಕ ಆಳರಸರು ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿದ್ದರು. ಟಿಪ್ಪು ಸುಲ್ತಾನನೂ ಹಿಂದೆ ಬೀಳಲಿಲ್ಲ. ಆನಂತರದ ಕಾಲದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಸರ್ ಎಂ. ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ಕನ್ನಂಬಾಡಿ ಕಟ್ಟೆಯನ್ನು ನಿರ್ಮಿಸಿದರು. ಆದರೆ ಇದರ ನೆಲೆ, ಹಿನ್ನೆಲೆ, ಇತಿಹಾಸವನ್ನು ತಿಳಿಯದ ಎಷ್ಟೋ ಮಂದಿ ಮಂಡ್ಯ ಜಿಲ್ಲೆ ಬರಡಾಗಿತ್ತಂತೆ ವಿಶ್ವೇಶ್ವರಯ್ಯನವರು ಕಟ್ಟೆಯನ್ನು ಕಟ್ಟಿದರಂತೆ ಇತ್ಯಾದಿಯಾಗಿ ಹೇಳುತ್ತಾರೆ. ನಾಲ್ವಡಿ ಕೃಷ್ಣರಾಜ ಒಡೆಯರು ಭಾರೀ ಪ್ರಮಾಣದ ಹಣ ತೆರದಿದ್ದರೆ ಒಬ್ಬ ವಿಶ್ವೇಶ್ವರಯ್ಯನವರಿಂದ ಕಟ್ಟೆಯನ್ನು ಕಟ್ಟಲು ಸಾಧ್ಯವಾಗುತ್ತಿರಲಿಲ್ಲ. ಇಲ್ಲಿ ವಿಶ್ವೇಶ್ವರಯ್ಯನವರೂ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರು ಇಬ್ಬರೂ ಕೂಡ ಪ್ರಾತಃಸ್ಮರಣೀಯರು.

ಹೀಗೆ ನೀರಾವರಿ ಸೌಲಭ್ಯವನ್ನು ನೂರಾರು ವರ್ಷಗಳಿಂದ ಪಡೆದ ಈ ಪ್ರದೇಶದ ಜನರಲ್ಲಿ ಒಂದು ವಿಧವಾದ ಗತ್ತು, ಗೌಡಿಕೆ, ದೌಲತ್ತು, ದರ್ಪ, ಇವೇ ಮುಂತಾದ ರಾಜಸ ಗುಣಗಳನ್ನು ಕಾಣಬಹುದು. ಇಂದಿಗೂ ಮಂಡ್ಯ, ಮೈಸೂರು ಕಡೆಯ ಜನ ನೂರು ರೂಪಾಯಿ ಸಂಪಾದಿಸಿದರೆ ನಾನೂರು ರೂಪಾಯಿ ಸಾಲ ಮಾಡಿ, ಖರ್ಚು ಮಾಡಿ ಮುಂದೆ ಸಾಲಗಾರರಾಗಿ ಪೇಚಾಡುತ್ತಾರೆ. ಇಂದಿಗೂ ತಮ್ಮ ಹೊಲ, ಗದ್ದೆಯನ್ನು ಮಾರಿಯಾದರೂ ಭರ್ಜರಿ ಮದುವೆ ಔತಣ ಮಾಡುತ್ತಾರೆ, ಮರಿ ಕುಯ್ಯುತ್ತಾರೆ. ಇಲ್ಲಿನ ಪ್ರಚಲಿತ ನಾಣ್ಣುಡಿಯೊಂದಿದೆ 'ತೆಂಗಿನ ಮರದ ಎತ್ತರ ಹುಲ್ಲು ಮೆದೆ, ಬಾಣದೆತ್ತರ ಸಾಲ' ಇತ್ಯಾದಿ. ಆದರೆ ಇವರಲ್ಲಿರುವ ದೊಡ್ಡ ಗುಣವೆಂದರೆ ಅತಿಥಿ ಸತ್ಕಾರ, ದಾನ ಮಾಡುವುದು. ಇವರ ಸ್ವಭಾವವೆಂದರೆ ತಮ್ಮನ್ನು 'ನಂಬಿದವರಿಗೆ ತಲೆ ಕೊಡಲೂ ಸೈ, ಕೈ ಕೊಟ್ಟರೆ ತಲೆ ಗೆತೆಯಲೂ ಸೈ.'

ಮಲೆನಾಡ ಪ್ರದೇಶವಾದ ಶಿವಮೊಗ್ಗ, ಚಿಕ್ಕಮಗಳೂರು, ಪುತ್ತೂರು, ಸೂಳ್ಯ ಈ ಪರಿಸರದ ಒಕ್ಕಲಿಗರನ್ನು **ಶ್ರೀ ವೈಷ್ಣವ ನಾಮಧಾರಿಗೌಡರು, ಮಲೆನಾಡ ಶೈವ ಒಕ್ಕಲಿಗರು** ಇವೇ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇವರು ಬಲು ನಾಜೋಕಿನ ಜನ, ಒರಟುತನವನ್ನು ಒಪ್ಪದ ಈ ಜನ ಸೌಮ್ಯವಾದಿಗಳು, ಸುಸಂಸ್ಕೃತರು. ಅಂದಿನಿಂದ ಇಂದಿಗೂ ಮದುವೆ ಮುಂಜಿಯಂತಹ ಸಮಾರಂಭ-ಗಳನ್ನು ವಿಜೃಂಭಣೆ ಮತ್ತು ದುಂದುಗಾರಿಕೆ ಮಾಡದೆ ಕ್ರಿಶ್ಚಿಯನ್ನರಂತೆ ಕೆಲವೇ ಗಂಟೆಗಳಲ್ಲಿ ಮಾಡಿ ಮುಗಿಸುತ್ತಾರೆ. ಇಂದಿಗೆ ನೂರು ವರ್ಷಗಳ ಹಿಂದೆ ಮಲೆನಾಡು ಪ್ರದೇಶದಲ್ಲಿ ದೇವಂಗಿ ರಾಮಣ್ಣಗೌಡರು ಸೇರಿದಂತೆ ಕೆಲವು ಬುದ್ಧಿವಂತರು ಕ್ರಿಶ್ಚಿಯನ್ನರ ಸಹಾಯದಿಂದ ಶಿಕ್ಷಣ ಜಾಗೃತಿ ಮೂಡಿಸಿದುದು ಇಂದು ಇತಿಹಾಸವಾಗಿದೆ. ಇವರು ಸಾಹಿತ್ಯ, ಶಿಕ್ಷಣ, ಕಲೆ ಇವೇ ಮುಂತಾದವುಗಳಿಗೆ ತಮ್ಮದೇ ಆದ ಕೊಡುಗೆಗಳನ್ನು ಕೊಟ್ಟಿದ್ದಾರೆ.

ಘಟ್ಟದ ಕೆಳಗಿನ ಮಂಗಳೂರು, ಉಡುಪಿ, ಕುಂದಾಪುರ ಇವೇ ಮುಂತಾದ ಪ್ರದೇಶಗಳಲ್ಲಿ ಬಂಟರು ದಟ್ಟವಾಗಿ ಹರಡಿದ್ದಾರೆ. ಇವರು ಉತ್ತಮ ಅಂಗಸೌಷ್ಠವ ಹೊಂದಿರುವ ಸ್ಫುರದ್ರೂಪಿಗಳು. ಶಿಕ್ಷಣದ ಕೊರತೆ, ಅಳಿಯ ಸಂತಾನ ಪದ್ಧತಿ, ವರದಕ್ಷಿಣಾ ಪದ್ಧತಿ ಇವೇ ಮುಂತಾದ ಸಾಮಾಜಿಕ ಪಿಡುಗುಗಳಿಗೆ ಸಿಕ್ಕಿ ನಲುಗಿದ ಈ ಜನ ಕಾಲಾನಂತರ ಮೈಕೊಡವಿ ಎಚ್ಚೆತ್ತುಕೊಂಡರು. ವ್ಯಾಪಾರ ವಾಣಿಜ್ಯದಲ್ಲಿ ಕೇರಳ ಮಲೆಯಾಳಿಗೂ ಮೀರಿಸುವಂತೆ ಹೋಟೆಲ್ ಉದ್ಯಮದಲ್ಲಿ ತೊಡಗಿಸಿ-ಕೊಂಡಿದ್ದಾರೆ. ತಮ್ಮ ಕಾರ್ಯಕ್ಷೇತ್ರವನ್ನು ದೂರದ ಮುಂಬಯಿಗೂ ವಿಸ್ತರಿಸಿದ್ದಾರೆ. ಸ್ವಭಾವತಃ ಬಂಟರಲ್ಲದ ಇತರರೊಡನೆ ಅಷ್ಟಾಗಿ ಬೆರೆಯುವುದಿಲ್ಲ. ತಮ್ಮಷ್ಟಕ್ಕೆ ತಾವು ತಮ್ಮ ವ್ಯಾಪಾರ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. ಇವರಿಗೆ ತೊಂದರೆ ಮಾಡಿದರೆ ಒರಟರಾಗುತ್ತಾರೆ.

ಕುಂಚಿಟಿಗರು ಕರ್ನಾಟಕದ ತುಮಕೂರು, ಸಿರಾ, ಚಿತ್ರದುರ್ಗ, ಶಿವಮೊಗ್ಗ, ಆಂಧ್ರದ ಅನಂತಪುರ, ಹಿಂದೂಪುರ, ಮಡಕಶಿರಾ, ತಮಿಳುನಾಡಿನ ಮಧುರೈ, ಕಂಚಿ, ಕೊಯಮತ್ತೂರು, ಧರ್ಮಪುರಿ, ಊಟಿ ಇನ್ನೂ ಮುಂತಾದ ಪ್ರದೇಶಗಳಲ್ಲಿ ದಟ್ಟವಾಗಿದ್ದಾರೆ. ಸ್ವಭಾವತಃ ಕುಂಚಿಟಿಗರು ಹಣಕಾಸಿನ ವಿಷಯದಲ್ಲಿ ಜಿಗುಟು ಸ್ವಭಾವದವರು. ಆದರೆ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡುವುದು ಕಂಡು ಬರುತ್ತದೆ. ಶಿಕ್ಷಣ ಸಂಸ್ಥೆಗಳಿಗೆ ಉದಾರವಾಗಿ ದಾನ ಮಾಡಿರುವ ಉದಾಹರಣೆಗಳಿವೆ. ಇವರಿಗೆ ಒಂದು ವಿಧವಾದ ಜಾತಿ ಪ್ರತಿಷ್ಠೆಯ ಕೀಳರಿಮೆ ಇದೆ.

ಮೊರಸು ಒಕ್ಕಲಿಗರು ಕೋಲಾರ, ಬಂಗಾರಪೇಟೆ ಹಾಗೂ ಬೆಂಗಳೂರಿನ ಕೆಲವು ಭಾಗಗಳಲ್ಲಿ ನೆಲೆಸಿದ್ದಾರೆ. ಇವರ ಭಾಷೆ ತೆಲುಗು. ಕಷ್ಟ ಸಹಿಷ್ಣುಗಳಾದ ಇವರು ವ್ಯವಸಾಯ ಮತ್ತು ಪಶುಸಂಗೋಪನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವ್ಯವಹಾರಿಕವಾಗಿ ಬಹಳ ಬುದ್ಧಿವಂತರು ಹಾಗೂ ಚುರುಕು ಸ್ವಭಾವದವರು. ಕೋಮಟಿಗೆ ಶೆಟ್ಟರನ್ನೂ ಮೀರಿಸುವಂತಹ ಜಿಪುಣರು. ಸಾದರು, ಹಳ್ಳಿಕಾರರು ಸೇರಿದಂತೆ ಇವೇ ಮುಂತಾದ ಉಪಪಂಗಡಗಳು ತುಮಕೂರು, ಚಿತ್ರದುರ್ಗ, ದಾವಣಗೆರೆ ಪ್ರದೇಶಗಳಲ್ಲಿ ದಟ್ಟವಾಗಿ ಹರಡಿಕೊಂಡಿ –ದ್ದಾರೆ. ಈ ಮೇಲ್ಕಂಡ ಪ್ರದೇಶಗಳು ಆರ್ಥಿಕವಾಗಿ ಹಿಂದುಳಿದಿರುವುದಕ್ಕೆ ಒಕ್ಕಲಿಗ ಜನಾಂಗದ ಗುರುಮಠದ ಕೊರತೆಯೇ ಕಾರಣ. ಮೈಸೂರು ಅರಸರ ರಾಜಾಶ್ರಯದಿಂದ ವಂಚಿತರಾದ ಇವರಲ್ಲಿ ಕೀಳರಿಮೆ ಕಂಡು ಬರಲಾಗಿ ಕಾಲಾನಂತರ ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠ, ತುಮಕೂರಿನ ಸಿದ್ದಗಂಗಾ ಮಠಗಳ ಆಶ್ರಯವನ್ನು ಪಡೆದು ಮತಾಂತರಗೊಂಡರು. ಹಾಗೂ ಇಂದಿಗೂ ಮತಾಂತರ ನಡೆಯುತ್ತಿದೆ. ಒಕ್ಕಲಿಗರಲ್ಲಿ ಗರಿಷ್ಠ ಪ್ರಮಾಣದಲ್ಲಿದ್ದ ಸಾದರು ಮೊದಲು ಜೈನ ಧರ್ಮದತ್ತ ಪ್ರಭಾವಿತರಾಗಿ ಜೈನರಾದರು. ಇವರು ಸಾಧು ಜೈನರಾದರು. ಹಾಗೆಯೇ ಲಿಂಗಾಯಿತ ಪ್ರಭಾವದಿಂದ ಮತಾಂತರಗೊಂಡ ಇವರು ಸಾಧು ಲಿಂಗಾಯಿತರಾದರು. ಹಾಗೆಯೇ ಕುಂಚಟಿಗರು ಮತಾಂತರ ಹೊಂದಿ ಕುಂಚಿಟಿಗ ಲಿಂಗಾಯಿತರಾದರು. ಹೀಗೆ ನಾನಾ ಪ್ರದೇಶದಲ್ಲಿರುವ ಒಕ್ಕಲಿಗ ಸಮುದಾಯದ ಉಪಪಂಗಡಗಳು ವಿಭಿನ್ನ ಗುಣಸ್ವಭಾವವನ್ನು ಹೊಂದಿರುವುದನ್ನು ನೋಡಬಹುದು.

ಒಕ್ಕಲಿಗ ಜನಾಂಗಕ್ಕೆ ಅನಿವಾರ್ಯವಾದ ಸಂಘಟನೆ

ಈಗಾಗಲೇ ತಿಳಿಸಿರುವಂತೆ ಮಾನವ ಸಂಘ ಜೀವಿ. ಸಮಾಜದಲ್ಲಿ ಉತ್ತಮವಾಗಿ ಬಾಳಿಬದುಕಲು ಸಂಘಟನೆ ಬಹಳಷ್ಟು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಆದರೆ ಅಸಂಘಟಿತರಾಗಿ ಬಾಳಿಬದುಕಲು ಕಷ್ಟ ಸಾಧ್ಯ. ನಾಗರೀಕ ಸಮಾಜದಲ್ಲಂತೂ ಇದರ ಆವಶ್ಯಕತೆ ಹೆಚ್ಚಿದೆ. ಕಾರ್ಮಿಕರು, ನೌಕರರು, ವೈದ್ಯರು,

ವಿದ್ಯಾರ್ಥಿಗಳು, ದಾದಿಯರು ಹೀಗೆ ಒಂದಲ್ಲ ಒಂದು ರೀತಿಯ ವೃತ್ತಿ ಮಾಡುವ ಇವರು ಸುಸಂಘಟಿತರಾಗಿ ಯಾವುದೇ ಸರ್ಕಾರ ಬರಲಿ ತಮ್ಮ ಬೇಡಿಕೆಗಳನ್ನಾಗಲೀ ತಮಗೆ ಬಂದೊದಗಿದ ಕಷ್ಟಗಳನ್ನಾಗಲೀ ಈ ಸಂಘಟನೆಯ ಮೂಲಕ ಪರಿಹರಿಸಿ ಕೊಳ್ಳುವ ಮಾರ್ಗವನ್ನು ಕಂಡುಕೊಂಡಿದ್ದಾರೆ. ಆದರೆ ದುರಾದೃಷ್ಟವಶಾತ್ ರೈತಾಪಿ ಜನರು, ಒಕ್ಕಲಿಗರು ಸಂಘಟಿತರಲ್ಲ; ಬಹುಶಃ ಪ್ರಕೃತಿಯಲ್ಲಿ ಮರಗಿಡಗಳು, ಪ್ರಾಣಿ, ಪಕ್ಷಿಗಳು ಹೇಗೆ ತಮ್ಮತಮ್ಮ ಶಕ್ತಿ ಸಂಪನ್ಮೂಲಗಳಿಂದ ಬದುಕುತ್ತವೆಯೋ ಹಾಗೆ ಬದುಕಿದವರು. ಕುಟುಂಬವನ್ನು ಒಂದು ಘಟಕವಾಗಿ ತೆಗೆದುಕೊಂಡರೆ ಅದರ ಆಚೆಗಿನ ಸಂಘಟನೆಗೆ ಹೋದವರಲ್ಲ. ಅವಿಭಕ್ತ ಕುಟುಂಬಗಳಲ್ಲೂ ಯಜಮಾನಿಕೆಯನ್ನು ಮೆರೆದವರು. ಇನ್ನೂ ಗ್ರಾಮಾಳ್ವಿಕೆಯಲ್ಲಿ ಅಧಿಕಾರಶಾಹಿಯ ಮೇಲುಕೀಳು ಪ್ರಜೆಇಯಿಂದ ಪ್ರಭಾವಿತರಾದವರು. ಅತಿ ಸ್ವಾಭಿಮಾನದಿಂದಾಗಿ, ಹಠ, ಛಲದ ಹೆಸರಿನಲ್ಲಿ ಸ್ವಹಿತಾಸಕ್ತಿಗಳನ್ನು ಬದಿಗೊಟ್ಟು ಕಾದಾಡಿದವರು. ಇದರಿಂದಾಗಿ ಇವರಲ್ಲಿ ಸಂಘಟನೆ, ಸಮಾನತೆ, ಬಹುಕಷ್ಟ ಸಾಧ್ಯವಾದ ಧ್ಯೇಯಗಳು. ಆದರೆ ಇತ್ತೀಚೆಗೆ ಅನಿವಾರ್ಯತೆಯಿಂದಲೋ ಕಾಲ ಪ್ರಜ್ಞೆಯಿಂದಲೋ ಅವರು ಮೂರು ಸಂಘಟನೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಕಂಡು ಬರುತ್ತದೆ. ಅವುಗಳೆಂದರೆ : 1. ಒಕ್ಕಲಿಗ ಮಠಗಳು 2. ಒಕ್ಕಲಿಗರ ಸಂಘ 3. ರೈತ ಸಂಘ

ಒಕ್ಕಲಿಗ ಮಠಗಳಲ್ಲಿ ಮುಖ್ಯವಾದವುಗಳನ್ನು ಈ ಕೆಳಗೆ ವಿವರಿಸಲಾಗಿದೆ

1. ಆದಿಚುಂಚನಗಿರಿ ಪೀಠ : ಈಗಾಗಲೇ ತಿಳಿಸಿರುವಂತೆ, ಒಕ್ಕಲಿಗರು ಶೈವ, ವೈಷ್ಣವ ಎಂಬ ಭೇದಭಾವವಾಗಲಿ ಉಚ್ಚ ಕುಲ, ನೀಚ ಕುಲವೆಂಬ ತಾರತಮ್ಯ-ವನ್ನಾಗಲಿ ತೋರದೆ ಎಲ್ಲಾ ದೇವಾನುದೇವತೆಗಳಿಗೂ ವಿಧೇಯರಾಗಿದ್ದು ತಮ್ಮ ದೊಡ್ಡಗುಣವನ್ನು ಮೆರೆದಿದ್ದಾರೆ. ಒಕ್ಕಲಿಗರ ಮಠಗಳು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಕಾಲ ಚಕ್ರದ ಏಳು ಬೀಳಿಗೆ ಸಿಕ್ಕಿವೆ. ಆದಿಚುಂಚನಗಿರಿ ಮಠವು ಈ ಜನಾಂಗದ ಗುರುಪೀಠವಾಗಿದೆ. ಹಾಸನ ಜಿಲ್ಲೆಯ ಕುಂದೂರು ಮಠ, ಮಂಗಳೂರಿನ ಕದ್ರಿ ಪಟ್ಣಾಯನಳ್ಳಿ ಮಠಗಳು ಒಕ್ಕಲಿಗರ ಮಠಗಳೆನಿಸಿಕೊಂಡಿವೆ. ಚಿಕ್ಕಮಗಳೂರು ಜಿಲ್ಲೆ ಕೊಪ್ಪ ಪಟ್ಟಣದ ಸಮೀಪ ಒಕ್ಕಲಿಗರ ಪುರಾತನ ಮಠವಿದ್ದು ಇತ್ತೀಚೆಗೆ ಚುಂಚನಗಿರಿ ಸ್ವಾಮಿಗಳ ಪ್ರಯತ್ನದಿಂದಾಗಿ ಶಾಖಾಮಠವಾಗಿ ಸೇರ್ಪಡೆಯಾಗಿದೆ (ಡಾ. ಜಯಪ್ಪ ಗೌಡ – ವಜ್ರಹಾರ, ಪು.54). ಆದಿಚುಂಚನಗಿರಿಯ ಗುರುಮಠದ ಪೌರಾಣಿಕ ಕಥೆಯ ಮೇರೆಗೆ ದ್ವಾದಶನಾಥರ (ಹನ್ನೆರಡು) ಹೆಸರುಗಳು ಬರುತ್ತವೆ. ಇದರಿಂದ ಕದ್ರಿಮಠ ಮತ್ತು ಚುಂಚನಗಿರಿ ಈ ಎರಡೂ ಮಠಗಳೂ ನಾಥ ಪಂಥೀಯ ಮಠಗಳೆಂದೂ ಮತ್ತು ಬಾರಾನಾಥ್ ಪಂಥದವರೆಂದೂ ಹೆಸರಿಸುತ್ತಾರೆ. ಇದರಿಂದ ವೇದಕಾಲದಲ್ಲಿ ಪಾಶುಪತ ಶಿವಾದ್ವೈತ ಮತವನ್ನು ಭಾರತದಲ್ಲಿ ಮೊಟ್ಟಮೊದಲಿಗೆ

ಪ್ರಸಾರ ಮಾಡಿದವರು ವೇದ ಪಾರಂಗತರಾಗಿ, ನೈಷ್ಠಿಕ ತಪಸ್ವಿಗಳಾಗಿದ್ದ ಹನ್ನೆರಡು ಜನ ಯೋಗೀಶ್ವರರೆಂದು ತಿಳಿಯಬಹುದು. ಇವರನ್ನು ಶಿವ ಅವತಾರಿಗಳಾದ ಪ್ರವಾದಿಗಳು ಎನ್ನಬಹುದು. ಇದೇ ಪಾಶುಪತಶಿವಾದ್ವೈತಮತದ ಪೌರಾಣಿಕ ಉಗಮವಾಗಿರುತ್ತದೆ.

ಮಂಗಳೂರು ಕದ್ರಿಮಠ ಈಗಲೂ ಅವಧೂತಯೋಗಿ, ನಾಥ ಪಂಥೀಯರ ಮಠವಾಗಿಯೇ ಉಳಿದಿದೆ. ಚುಂಚನಗಿರಿ ಮಠದ ಕ್ಷೇತ್ರ ಪುರಾಣದಲ್ಲಿ ದ್ವಾದಶಾನಾಥರ ಹೆಸರುಗಳು ಬಂದಿದ್ದು ಅದರಲ್ಲಿ ಆದಿನಾಥ, ಮತ್ಸ್ಯೇಂದ್ರನಾಥ, ಗೋರಕ್ಷನಾಥ – ಹೀಗೆ ಹಲವಾರು ನಾಥರ ಹೆಸರುಗಳು ಕದ್ರಿಮಠದ ಪುರಾತನ ಧರ್ಮಗ್ರಂಥವಾದ ಭಾರದ್ವಾಜಸಂಹಿತೆಯಲ್ಲಿಯೂ ಇದ್ದು ಒಂದಕ್ಕೊಂದು ಸಾಮ್ಯವಿರುವುದರಿಂದ ಈ ಎರಡೂ ಲಕುಲೀಶಪಾಶುಪತ ನಾಥ ಪಂಥೀಯರ ಮಠಗಳಾಗಿರುತ್ತವೆ ಎಂದೂ ಹೇಳಬಹುದು. ಭಾರತದಲ್ಲಿ ಇನ್ನುಳಿದ ನಾಥ ಪಂಥೀಯರ ಮಠಗಳು ಯಾವುವು ಎಂಬುದು ತಿಳಿಯದು. ಕದರೀಮಠದಲ್ಲಿ ದಂಡಧಾರಿ ಲಕುಲೀಶರ ವಿಗ್ರಹವಿದೆ. ಇದನ್ನೇ ಗೋರಕ್ಷನಾಥನ ವಿಗ್ರಹವೆನ್ನುತ್ತಾರೆ. ಅದರಂತೆ ಮತ್ಸ್ಯೇಂದ್ರನಾಥರ ವಿಗ್ರಹವೂ ಇದೆ. ಆದರೆ ಸ್ವಯಂಭುದಂಡಧಾರಿ ಲಕುಲೀಶನು ಜನ್ಮ ನಿಮಿತ್ತ ಮೀನಾನಾಥ, ಮತ್ಸ್ಯೇಂದ್ರನಾಥನೆಂದೇ ಪ್ರಸಿದ್ಧನಾಗಿದ್ದಾನೆ. ಈ ವಿಷಯ ಕುರಿತು ಇನ್ನೂ ವಿವರವಾಗಿ ಪರೀಶೀಲಿಸಬೇಕಾಗಿದೆ. ಉತ್ತರ ಭಾರತದಲ್ಲಿ ಮಧ್ಯಭಾರತದಲ್ಲಿಯೂ ದಂಡಧಾರಿ ಲಕುಲೀಶನ ವಿಗ್ರಹಗಳು ದೊರೆತಿವೆ. ಭಾರದ್ವಾಜ ಸಂಹಿತೆಯಲ್ಲಿ ಗೋರಕ್ಷನಾಥನು ನಿಗೂಢಧಾರಿಯಾಗಿರುವ ಸಂದರ್ಭವನ್ನು ವಿವರವಾಗಿ ವಿಸ್ತರಿಸಿದೆ ಮತ್ತು ಮತ್ಸ್ಯೇಂದ್ರನಾಥನು ಗುರುವಾಗಿ, ಸ್ವಯಂಭುವಾಗಿಯೂ ವರ್ಣಿತವಾಗಿದ್ದಾನೆ. ಡಾ. ಡೇವಿಡ್‌ಯನ್, ಲಾರೆನಜೆನ್ ಅವರು ಇದನ್ನೇ ಅನುಮೋದಿಸುತ್ತಾರೆಯಾದರೂ ಲಕುಲೀಶನೇ ಆದಿಗುರು ಎನ್ನುತ್ತಾರೆ.

ಈ ರೀತಿಯಲ್ಲಿ ಶಿವನು ಭೂಲೋಕದಲ್ಲಿ ಲಕುಲೀಶನೆಂಬ ಅಭಿದಾನದಿಂದ ಅವತರಿಸಿ ಶಿವದ್ವೈತ ಸಿದ್ಧಾಂತವನ್ನು ಪ್ರಸಾರ ಮಾಡಿದುದರ ಕುರಿತು ಬಗೆಬಗೆಯ ವಿಚಾರಗಳು ಬೆಳಕು ಕಂಡಿದ್ದರೂ ಇನ್ನೂ ಅನೇಕ ವಿಷಯಗಳು ವಾದಗ್ರಸ್ತವಾಗಿಯೇ ಉಳಿದಿವೆ. ಅಂತೂ ಲಕುಲೀಶನೆಂಬ ಧರ್ಮಗುರುವು ಸುಮಾರು ಕ್ರಿಸ್ತಶಕಾರಂಭದಲ್ಲಿ ಗುಜರಾತಿನ ಕಾರೋಹನವೆಂಬಲ್ಲಿ ಜನಿಸಿ ಸರ್ವಶಾಸ್ತ್ರ ವಿದ್ಯಾಪಾರಂಗತನಾಗಿ, ತಪೋಧನನಾಗಿ ಲಕುಲೀಶ ಪಾಶುಪತ ಪಂಚಾರ್ಥಿಕ ಎಂಬ ಶಿವಾದ್ವೈತ ಧರ್ಮಗ್ರಂಥವನ್ನು ರಚಿಸಿ, ಅನೇಕ ಶಿಷ್ಯವರ್ಗವನ್ನು ಸಂಪಾದಿಸಿ, ದೂರದ ಉಜ್ಜಯಿನಿ, ಮಧ್ಯಭಾರತದವರೆಗೆ ಧಾರ್ಮಿಕ ಪ್ರವಚನಕ್ಕಾಗಿ ಪ್ರವಾಸ ಮಾಡುತ್ತಿದ್ದನೆಂದು ಚರಿತ್ರಕಾರರು ಅಭಿಪ್ರಾಯಪಟ್ಟಿರುತ್ತಾರೆ.

ಆದರೆ ಮಂಗಳೂರಿನ ಕದ್ರಿಮಠದಲ್ಲಿ ಲಕುಲೀಶನ ವಿಗ್ರಹವಿರುವುದರಿಂದಲೂ ಮತ್ತು ಕೇರಳ ರಾಜಕುಮಾರಿ ಮಂಗಳಾದೇವಿ, ಲಕುಲೀಶಗುರುವಿನ ಶಿಷ್ಯಳಾಗಿ ಮಂಗಳೂರಿಗೆ ಬಂದು, ಅಲ್ಲಿಯೇ ತಪೋನಿರತಳಾಗಿದ್ದು ಐಕ್ಯಳಾಗಿ, ಆಕೆಯ ಹೆಸರಿನಿಂದಲೇ ದೇವಸ್ಥಾನವಿರುವುದರಿಂದಲೂ ಆ ಮಹಾಗುರು ಭಾರತದಾದ್ಯಂತ ಸಂಚರಿಸುತ್ತಿದ್ದನೆಂಬುದು ವ್ಯಕ್ತವಾಗುತ್ತದೆ. ಮಂಗಳಾದೇವಿಯ ಹೆಸರಿನಿಂದ ಮಂಗಳೂರು ಎಂದಾಗಿರುತ್ತದೆ. ಆ ದೇವಸ್ಥಾನವು ಈಗಲೂ ಒಕ್ಕಲಿಗ ಹೆಗ್ಗಡೆಯವರ ಆಡಳಿತದಲ್ಲಿದೆ.

ಮಹಾಭಾರತದ ಕಾಲಕ್ಕೆ ಸಾಂಖ್ಯ, ಯೋಗ, ಪಂಚರಾತ್ರ, ವೇದ ಮತ್ತು ಪಾಶುಪತ ಹೀಗೆ ಐದು ಮುಖ್ಯ ಧರ್ಮಗಳಿದ್ದುವೆಂದು ಹಿಂದೆಯೇ ತಿಳಿಸಿದೆ. ಈಗ ಪಾಶುಪತಲಾಕುಳಶೈವ ಸಿದ್ಧಾಂತವನ್ನು ಅನುಸರಿಸಿಕೊಂಡು ಬಂದ ಅವರ ಶಾಖೆಗಳನ್ನು ಕುರಿತು ವಿಮರ್ಶಿಸೋಣ. ಚರಿತ್ರಕಾರರು ಇದನ್ನು ಕೂಲಂಕಷವಾಗಿ ವಿಚಾರ ಮಾಡಿ, ಪುರಾತನ ಶೈವ ಧರ್ಮದ ಶಾಖೆಗಳು ನಾಲ್ಕು ಎಂದೂ ಅವು 1. ಪಾಶುಪತ, 2. ಕಾಳಾಮುಖ 3. ಕಪಾಲಿ 4. ಶೈವ ಎಂದೂ ಲಕುಲೀಶನೇ ಆದಿಗುರುವಾಗಿ ಆತನ ಪ್ರಧಾನ ಶಿಷ್ಯರು : 1. ಕುಶಿಕ (ಕೌಶಿಕ) 2. ಗಾರ್ಗ್ಯ 3. ಕಾರುಸ 4. ಮೈತ್ರೇಯ ಎಂದೂ ಹೇಳುತ್ತಾರೆ. ಈ ನಾಲ್ವರು ಗುರುಗಳ ಶಿಷ್ಯಸಂತಾನವೇ ಮೇಲೆ ಹೇಳಿದ ನಾಲ್ಕು ವರ್ಗಕ್ಕೆ ಕಾರಣವಾಯಿತೋ ಅಥವಾ ಶೈವಾಗಮದ ಧರ್ಮಸೂತ್ರ ರಚನೆಯಲ್ಲಿ ತಾತ್ವಿಕ ಭೇದದಿಂದ ತಮ್ಮ ತಮ್ಮ ಗುರುಮಾರ್ಗವನ್ನು ಅನುಸರಿಸಿ ಈ ವರ್ಗಭೇದವಾಯಿತೋ ತಿಳಿಯದು.

ಮೇಲೆ ಹೇಳಿದ ಲಕುಲೀಶಧರ್ಮಗುರುವಿನ ಪ್ರಧಾನ ಶಿಷ್ಯರಾದ ಋಷಿ ಶ್ರೇಷ್ಠರಿಗೆ ಕ್ರಮವಾಗಿ ಹದಿಮೂರು ಮಂದಿ ಪಟ್ಟ ಶಿಷ್ಯರಿದ್ದರೆಂದು ತಿಳಿದುಬಂದಿದೆ. 1. ಈಶಾನ್ಯ 2. ಪಾರಗಾರ್ಗ್ಯ 3. ಕಪಿಲಾಂಡ (ಕಪಿಲ ಮಹರ್ಷಿ) 4. ಮಾನುಷ್ಯಕ 5. ಅಪರಕುಶಿಕ 6. ಅತ್ರಿಮುನಿ 7. ಪಿಂಗಳಾಕ್ಷ 8. ಪುಷ್ಪಕ 9. ಬೃಹದಾಚಾರ್ಯ 10. ಅಗಸ್ತ್ಯ 11. ಸಂತಾನ 12. ರಾಸಿಕಾರ 13. ವಿದ್ಯಾಗುರು.

ಲಕುಲೀಶನನ್ನೊಳಗೊಂಡ ಈ ಹದಿನೆಂಟು ಮಂದಿ ಗುರುಪರಂಪರೆಯವರೇ ಪ್ರಧಾನರಾಗಿ ಭಾರತದಲ್ಲಿ ಶಿವಾದ್ವೈತ ಧರ್ಮಸೂತ್ರವನ್ನು ಪಸರಿಸಿದರು. ಇದೇ ಶೈವಾಗಮದ ಚಾರಿತ್ರಿಕ ಉಗಮವೆಂದು ಚರಿತ್ರೆಕಾರರು ಭಾವಿಸುತ್ತಾರೆ. ಮತ್ತು ರತ್ನಾಟೀಕೆ ಎಂಬ ಗ್ರಂಥದಲ್ಲಿ ಇವರನ್ನು ತೀರ್ಥಕಾರರು, ತೀರ್ಥೇಶರು ಎಂದಿದೆ.


ಸಂಶೋಧಕರಾದ ಡಾ॥ ಡಿ.ಎಸ್. ಜಯಪ್ಪಗೌಡರವರು ಹೀಗೆ ಹೇಳುತ್ತಾರೆ: ಒಕ್ಕಲಿಗರು ಯುಗಾಂತರದಲ್ಲಿ ವಿವಿಧ ಧಾರ್ಮಿಕ ಚಳವಳಿಗಳ ಫಲವಾಗಿ ಮತ್ತು ಪ್ರಾದೇಶಿಕ ಅಂತರದಿಂದಾಗಿ ಒಡೆದು ಹೋಗಿರುವ ಜನಾಂಗವಾಗಿದ್ದಾರೆ. ಆದರೆ

ಪ್ರಕೃತಿಗೆ ಸಹಜವಾಗಿ ಮತ್ತು ಇತಿಹಾಸದ ಆರಂಭ ಕಾಲದಿಂದಲೂ ತಮ್ಮದೇ ಆದ ಸಂಸ್ಕೃತಿ, ಸಂಪ್ರದಾಯ ಮತ್ತು ಧಾರ್ಮಿಕ ಆಚರಣೆಗಳನ್ನು ಉಳಿಸಿಕೊಂಡು ಬಂದಿರುವ ಈ ಒಕ್ಕಲಿಗರ ಬಗ್ಗೆ ನಡೆದಿರುವ ಅಧ್ಯಯನ ಕಡಿಮೆ ಎಂದೇ ಹೇಳಬಹುದು. ಆದರೆ ಅವರು ವೈದಿಕ, ಬೌದ್ಧ ಮತ್ತು ಜೈನ ಧರ್ಮಗಳ ಹುಟ್ಟಿಗೆ ಸಮಾನಾಂತರವಾಗಿ ತಮ್ಮವೇ ಆದ ಶೈವ ಪಂಥವನ್ನು ರೂಢಿಸಿಕೊಂಡು ಬೆಳೆಸಿಕೊಂಡು ಬಂದಿರುವ ವಿಶಿಷ್ಟ ಹಿನ್ನೆಲೆ ಈ ಒಕ್ಕಲಿಗರದಾಗಿದೆ.

ಆದಿಚುಂಚನಗಿರಿ ಕ್ಷೇತ್ರ

ಆದಿಚುಂಚನಗಿರಿ ಕ್ಷೇತ್ರ ಅಥವಾ ಶ್ರೀಕ್ಷೇತ್ರವು ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿದೆ. ಮೈಸೂರಿನಿಂದ ತುಮಕೂರು, ತಿಪಟೂರಿಗೆ ಹೋಗುವ ಹೆದ್ದಾರಿಯಲ್ಲಿ ಬೆಳ್ಳೂರಿನಿಂದ ಮುಂದೆ ಸಾಗಿ ವರವೈಷ್ಣವಿ ನದಿಯನ್ನು ದಾಟಿ ಮುಂದಕ್ಕೆ ಸ್ವಲ್ಪ ದೂರ ಹೋದರೆ ಚುಂಚನಹಳ್ಳಿ ಎಂಬ ಚಿಕ್ಕಗ್ರಾಮ ಒಂದು ಸಿಗುತ್ತದೆ. ಬೆಂಗಳೂರಿನಿಂದ ಹೊರಟು ನೆಲಮಂಗಲ, ಕುಣಿಗಲ್, ಯಡಿಯುರು, ನೆಲ್ಲಿಗೆರೆ ಮಾರ್ಗದಲ್ಲಿ ಪ್ರಯಾಣ ಮಾಡಿ ಚುಂಚನಹಳ್ಳಿಯನ್ನು ತಲುಪಬಹುದು. ಹಾಸನದಿಂದ ಚೆನ್ನರಾಯಪಟ್ಟಣ, ಬೆಳ್ಳೂರಿನ ಮಾರ್ಗವಾಗಿ ಪ್ರಯಾಣ ಮಾಡಿ, ಚುಂಚನಹಳ್ಳಿಯನ್ನು ತಲುಪಬಹುದು. ಬೆಂಗಳೂರಿನಿಂದ ಮಂಗಳೂರಿಗೆ ಹೋಗುವ ಬೆಳ್ಳೂರ್ ಕ್ರಾಸ್ ಚುಂಚನಗಿರಿ ಅಥವಾ ಚುಂಚನಹಳ್ಳಿಗೆ ಹೋಗುವ ಮುನ್ನ ಅಲ್ಲಿರುವ ಆಸ್ಪತ್ರೆ ಮತ್ತು ಮೆಡಿಕಲ್ ಕಾಲೇಜ್‌ಗಳು ಶ್ರೀ ಕ್ಷೇತ್ರಕ್ಕೆ ಹೋಗುವ ಹೆಬ್ಬಾಗಿಲಿನಂತೆ ಕಂಗೊಳಿಸುತ್ತವೆ.

ಚುಂಚನಹಳ್ಳಿಯು ಪ್ರಶಾಂತವಾದ ಹಳ್ಳಿಯಾದರು ಇದೊಂದು ಮಾದರಿ ಗ್ರಾಮವಾಗಿದೆ. ಈ ಹಳ್ಳಿಯ ಮೂಲಕವೇ ಶ್ರೀ ಕ್ಷೇತ್ರಕ್ಕೆ ಹೋಗಬೇಕು. ಈ ಹಳ್ಳಿಯಿಂದ ನಿಂತು ನೋಡಿದರೆ ಭವ್ಯವಾದ ಗಿರಿಯ ದರ್ಶನವಾಗುತ್ತದೆ. ದೂರದಿಂದ ನೋಡಿದರೆ ಉದ್ಭವ ಲಿಂಗದಂತೆ ಕಂಗೊಳಿಸುತ್ತದೆ. ಬೆಟ್ಟವನ್ನೇರಿ ಆದಿಶಕ್ತಿ ಸ್ವರೂಪಿಣಿಯಾದ ಕಂಬದಮ್ಮನ ಹತ್ತಿರ ನಿಂತು ಗಿರಿಯ ತ್ರಿಕೂಟಗಳನ್ನು ನೋಡಿದಾಗ ಅದು ಶಿವನ ತ್ರಿಶೂಲದಂತೆ ಭಾಸವಾಗುತ್ತದೆ. ಆದಿಚುಂಚನಗಿರಿಯನ್ನು ಪವಿತ್ರ ನದಿಗಳಾದ ತುಂಗಾ, ಕಾವೇರಿ, ವರವೈಷ್ಣವಿ ನದಿಗಳು ನಿತ್ಯ ತೋಯಿಸುವುದೇನೋ ಎಂದು ಭಾಸವಾಗುತ್ತದೆ. ಈ ಗಿರಿಯ ಒಂದು ಶಿಖರದಲ್ಲಿರುವ ಆಕಾಶ ಭೈರವನೆಂದು ಸುಪ್ರಸಿದ್ಧವಾದ ಅಡಿಗಲ್ಲಿನ ಎತ್ತರ ಸುಮಾರು 125 ಅಡಿ. ಬೆಟ್ಟದ ನಡುನೆತ್ತಿಯ ಮೇಲೆ ಹೆಬ್ಬಂಡೆಯೊಂದು ಲಿಂಗದಂತೆ ಕಂಡುಬರುತ್ತದೆ. ಚುಂಚನಗಿರಿಯ ಆಗ್ನೇಯಕ್ಕೆ ಆಂಜನೇಯ ಸ್ವಾಮಿ ಬೆಟ್ಟವು, ಉತ್ತರಕ್ಕೆ ಮಲೆಮಹದೇಶ್ವರ ಸ್ವಾಮಿಯ ಶ್ರೀಕ್ಷೇತ್ರವು, ದಕ್ಷಿಣಕ್ಕೆ ಶ್ರೀರಂಗನಾಥ ದೇವಾಲಯವು ಇವೆ. ಕಂಚನಹಳ್ಳಿಯಲ್ಲಿ ಭಕ್ತಾದಿಗಳಿಗೆ



ನಾಗಮಂಗಳದಲ್ಲಿನ
ಶ್ರೀ ಆದಿಚುಂಚನಗಿರಿ ಶ್ರೀ ಕಾಲಭೈರವೇಶ್ವರಸ್ವಾಮಿ
ದೇವಾಲಯ

ಅನುಕೂಲವಾಗುವಂತೆ ಪುಷ್ಕರಣಿಗಳು, ಮಂಟಪಗಳು, ಶಾಸನಗಳು, ದೇವತಾ ಮೂರ್ತಿಗಳು ಆದಿಚುಂಚನಗಿರಿಯ ಹಿಂದಿನ ಮಠಾಧಿಪತಿಗಳ ಹೆಸರನ್ನು ಕೆತ್ತಿರುವ ಶಿಲಾಸ್ತಂಭಗಳು ಇವೆ. ಈ ಗ್ರಾಮವು ಅನೇಕ ಯತಿಗಳು, ಯೋಗಿಗಳು, ತಪಸ್ವಿಗಳು ನಡೆದಾಡಿರಬಹುದಾದ ಪವಿತ್ರವಾದ ನೆಲವೆಂದರೆ ತಪ್ಪಾಗಲಾರದು. ಶ್ರೀಕ್ಷೇತ್ರ ಆದಿಚುಂಚನಗಿರಿಯು ನಿಜಕ್ಕೂ ಪವಿತ್ರವಾದ ಯಾತ್ರಾಸ್ಥಳವೆಂದರೆ ತಪ್ಪಾಗಲಾರದು. ಕಾರಣವೇನೆಂದರೆ ಇದರ ಸುತ್ತಲೂ ಶೈವ, ವೈಷ್ಣವ, ಜೈನ ಇವೇ ಮುಂತಾದ ಧರ್ಮಗಳ ಪವಿತ್ರಕ್ಷೇತ್ರಗಳನ್ನೂ ಇಲ್ಲಿಂದ ನೋಡಬಹುದು. ಅವುಗಳೆಂದರೆ ಆದಿಚುಂಚನಗಿರಿಯ ಸ್ವಲ್ಪವೇ ದೂರದಲ್ಲಿ ಶ್ರವಣಬೆಳಗೊಳ, ಮತ್ತೊಂದು ಕಡೆ ಯಡಿಯೂರಿನ ತೋಂಟದ ಸಿದ್ದಲಿಂಗೇಶ್ವರ ಕ್ಷೇತ್ರ, ಚುಂಚನಕಟ್ಟೆಯ ಶ್ರೀ ರಾಮಕ್ಷೇತ್ರ,

ಮೇಲುಕೋಟೆಯ ಚಲುವರಾಯಸ್ವಾಮಿ ಶ್ರೀ ಕ್ಷೇತ್ರ, ಹಾಲ್ಥಿಯ ಪರಶುರಾಮ ಕ್ಷೇತ್ರ, ನಾಗಮಂಗಲದಲ್ಲಿ ಸ್ಥಾಪಿತವಾದ ಸೌಮ್ಯಕೇಶವ ಸ್ವಾಮಿ ದೇವಾಲಯ ಇವೇ ಮುಂತಾದ ಪುಣ್ಯಕ್ಷೇತ್ರಗಳೂ ಚುಂಚನಗಿರಿಯ ಸುತ್ತಮುತ್ತಲೂ ಇರುವುದನ್ನು ನೋಡಿದರೆ ಇದೊಂದು ಪುಣ್ಯಭೂಮಿಯೆಂದೇ ಹೇಳಬಹುದು. ಈ ಸುತ್ತಮುತ್ತಣ ಪ್ರದೇಶವನ್ನು ವಿಕ್ರಮಚೋಳ ಮಂಡಳವೆಂದು ಕರೆಯುತ್ತಿದ್ದರು. ಇಷ್ಟೇ ಅಲ್ಲದೆ ಆದಿಚುಂಚನಗಿರಿಯಿಂದ ಕೆಲವಾರು ಮೈಲಿ ದೂರದ ಅಂತರದಲ್ಲಿ ಮತ್ತಷ್ಟು ಪವಿತ್ರಸ್ಥಳಗಳನ್ನು, ಬೆಟ್ಟಗುಡ್ಡ ದುರ್ಗಗಳನ್ನು ಹೆಸರಿಸಬಹುದು. ಅವುಗಳೆಂದರೇ ಹಾಸನ ಜಿಲ್ಲೆಯ ಬೇಲೂರಿನ ಚೆನ್ನಕೇಶವ ದೇವಾಲಯ, ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ, ಬೆಂಗಳೂರು ಜಿಲ್ಲೆಗೆ ಸೇರಿದ ಮಾಗಡಿ ರಂಗನಾಥ ದೇವಾಲಯ, ಸಾವನದುರ್ಗ, ಹುತ್ತರಿದುರ್ಗ, ಹುಲಿಯೂರುದುರ್ಗ, ತಲಕಾಡಿನಲ್ಲಿರುವ ಪಂಚಲಿಂಗೇಶ್ವರ ದೇವಾಲಯಗಳು, ಶಂಭುಲಿಂಗೇಶ್ವರನ ಬೆಟ್ಟ, ಶಿವಗಂಗೆ ಬೆಟ್ಟ ಇವೇ ಮುಂತಾದವುಗಳು ಯಾತ್ರಾಸ್ಥಳಗಳು, ಪ್ರವಾಸೀಕೇಂದ್ರಗಳು, ಪುಣ್ಯಕ್ಷೇತ್ರಗಳು ಆಗಿದ್ದು ಜನಮನವನ್ನು ನಿತ್ಯವೂ ಆಕರ್ಷಿಸುತ್ತಿವೆ.

ಇಂತಹ ಆದಿಚುಂಚನಗಿರಿಕ್ಷೇತ್ರ ಅಥವಾ ಶ್ರೀಕ್ಷೇತ್ರವು ಕರ್ನಾಟಕದಲ್ಲಿಯೇ ಹೆಚ್ಚಿನ ಜನಬಾಹುಳ್ಯವಿರುವ ಜನಾಂಗವಾದ ಒಕ್ಕಲಿಗರ ಪುಣ್ಯಕ್ಷೇತ್ರವು ಹೌದು. ಈ ಆದಿಚುಂಚನಗಿರಿಯ ಪ್ರಧಾನ ದೇವತೆಯೇ ಗಂಗಾಧರೇಶ್ವರ. ಇದು ಉದ್ಭವಲಿಂಗ. ಕೆಳಗೆ ಚಾಚಿರುವ ಬೃಹತ್ತಾದ ಬಂಡೆಯ ಮೇಲೆ ಈ ಉದ್ಭವಲಿಂಗವಿದೆ. ಈ ಉದ್ಭವ ಲಿಂಗವು ಒಂದು ಪೀಠದ ಮೇಲೆ ಸ್ಥಾಪಿಸಲಾಗಿದೆ. ಈ ಲಿಂಗದ ಮೇಲೆ ಹೆಬ್ಬಂಡೆಯೊಂದು ಚಾಚಿಕೊಂಡು ನಿಸರ್ಗವೇ ಹಾವಿನ ಹೆಡೆಯಂತೆ ನಿಂತಿರುವುದು ಕಂಡುಬರುತ್ತದೆ. ಇತ್ತೀಚೆಗೆ ಈ ಗುಹೆಗೆ ಒಂದು ಬಾಗಿಲುವಾಡವನ್ನು ತಂದು ನಿಲ್ಲಿಸಿ ಗರ್ಭಗುಡಿಯನ್ನಾಗಿ ಪರಿವರ್ತಿಸಲಾಗಿದೆ. ಈ ಲಿಂಗದ ಮೇಲೆ ಕತ್ತಿ ಏಟಿನ ಗುರುತಿದೆ. ಈ ಗರ್ಭ ಗುಡಿಗೆ ಸೇರಿದಂತೆ ಲಿಂಗದ ಮೇಲೆ ಬಿದಿರುತೊಟ್ಟಿಲಿದೆ. ಈ ದೇವಾಲಯ ಅಥವಾ ಪುಣ್ಯಕ್ಷೇತ್ರದ ಒಳಪ್ರವೇಶಿಸಿದರೆ ಏನೋ ಒಂದು ವಿಧವಾದ ಭಕ್ತಿಭಾವ ಬರುತ್ತದೆ.

ಗಂಗಾಧರೇಶ್ವರ ದೇವಾಲಯದಿಂದ ಕೆಳಗೆ ಇಳಿದರೆ ಎಡಗಡೆ ಸೋಮೇಶ್ವರ ಲಿಂಗದ ದರ್ಶನವಾಗುತ್ತದೆ. ಈ ಮಾರ್ಗದ ಇಕ್ಕೆಲಗಳಲ್ಲಿ ಪ್ರಕೃತಿಯ ಸೊಬಗನ್ನೂ ಕಾಣಬಹುದು. ಹಳೆಯ ಮಠಕ್ಕೆ ಸೇರಿದಂತೆ ಚಂದ್ರಮೌಳೇಶ್ವರ ಲಿಂಗವಿರುವ ದೇವಾಲಯ ಇದೆ. ಈ ದೇವಾಲಯದಲ್ಲಿಯೇ ಅನ್ನಪೂರ್ಣೇಶ್ವರಿ ಮೂರ್ತಿಯೂ ಇದೆ. ಹೀಗೆ ನವದ್ವಾರದ ಈ ಗಿರಿಯಲ್ಲಿ ಗಂಗಾಧರೇಶ್ವರ, ಗವಿಸಿದ್ದೇಶ್ವರ, ಕತ್ತಲೆ ಸೋಮೇಶ್ವರ, ಮಲ್ಲೇಶ್ವರ, ಚಂದ್ರಮೌಳೇಶ್ವರವೆಂಬ ಪಂಚಲಿಂಗಗಳಿವೆ. [9]

ಹೆಬ್ಬಾಗಿಲಿನಲ್ಲಿ ಈಗ ಕೆಲವು ಮಾತ್ರ ಉಳಿದಿವೆ. ಮಠದ ಹೆಬ್ಬಾಗಿಲಿನ ಮುಂದೆ ಭೈರವೇಶ್ವರನ ದೇವಾಲಯವಿದೆ. ಈಗಿರುವ ಪ್ರಾಚೀನ ದೇವಾಲಯವು ಚಿಕ್ಕದಾದರೂ ಸುಂದರವಾಗಿದೆ. ಈ ಭೈರವೇಶ್ವರನು ನಗ್ನರೂಪ, ಮುಕ್ಕಣ್ಣನು, ಸರ್ಪಾಭರಣ. ರತ್ನಾಕುಂಡಲಿಯನ್ನು ಧರಿಸಿ ಶಿರೋಮಾಲೆಯಿಂದ ಅಲಂಕೃತನು ಆಗಿರುವ ಈತ ಚತುರ್ಭುಜನಾಗಿದ್ದು ಖಡ್ಗ, ತ್ರಿಶೂಲ, ಕಪಾಲ, ಢಮರುಗಧಾರಿಯೂ ಆಗಿದ್ದಾನೆ. ಈ ಭೈರವನು ದುಷ್ಟರ ಪಾಲಿಗೆ ಯುಮುನಂತೆಯೂ ಶಿಷ್ಟರಪಾಲಿಗೆ ಸೌಮ್ಯಕೇಶವನಂತೆಯೂ ಕಂಡುಬರುತ್ತಾನೆ.

ಈ ಸ್ಥಳೀಯರು ಈ ಭೈರವನನ್ನು ಕ್ಷೇತ್ರಪಾಲಕ, ಶ್ರೀ ಸಾಮಾನ್ಯರ ರಕ್ಷಕನಂತೆಲ್ಲಾ ಕರೆಯುತ್ತಾರೆ. ಇವನನ್ನು ಬಾಗಿಲು ಭೈರವ, ಬೆಟ್ಟದಭೈರವ, ಚುಂಚನಭೈರವ, ಗಿರಿಯ ಭೈರವ, ಅನ್ನದಾನಿ ಭೈರವ, ಕಾಲ ಭೈರವ, ಇನ್ನೂ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಈ ಕಾಲಭೈರವನು ಎಲ್ಲಾ ಜಾತಿಮತಗಳ ದೇವರಾಗಿದ್ದಾನೆ. ಆತನನ್ನು ಪೂಜಿಸುವವರಿಗೆ ಭೈರವನ ಒಕ್ಕಲೆನ್ನುತ್ತಾರೆ. ಈ ಭೈರವನ ಒಕ್ಕಲು ರಾಷ್ಟ್ರದ ನಾನಾ ಭಾಗದಲ್ಲಿದ್ದಾರೆ.

ಈ ಮೊದಲೇ ಲಕುಲೀಶ ಧರ್ಮಗುರುವಿನ ಶಿಷ್ಯರು, ಗುರು ಪರಂಪರೆ ಇವೇ ಮುಂತಾದವುಗಳನ್ನು ತಿಳಿಸಲಾಗಿದೆ. 12 ಮಂದಿ ನಾಥರಲ್ಲಿ (ನಾಥಪಂಥಿಯರು) ಶಿವಸ್ವರೂಪನು, ಪ್ರಥಮನಾಥನೂ ಆದ ಸಿದ್ಧಯೋಗಿಯು ಅಲ್ಲಲ್ಲಿ ಸಂಚರಿಸಿ ಧರ್ಮೋಪದೇಶ ಮಾಡುತ್ತ ದೇಶಸಂಚಾರ ಮಾಡಿ ಶ್ರೀಕ್ಷೇತ್ರವಾದ ಆದಿಚುಂಚನಗಿರಿಗೆ ಬಂದನು. ಅಲ್ಲಿ ನೆಲೆಸಿದ್ದ ಶಿವನು ಸಿದ್ಧಯೋಗಿಯನ್ನು ನೋಡಿ ಸಂತುಷ್ಟನಾದನು. ಆ ಸಿದ್ಧಯೋಗಿಗೆ ಶಿವನು ಹೀಗೆ ಹೇಳಿದನು 'ನಾನು ನನ್ನ ಪಂಚ ಕಾರಣಗಳಿಂದ ಪಂಚಲಿಂಗಗಳಾಗಿ ಮೂರ್ತಿಭವಿಸಿರುತ್ತೇನೆ. ನೀನು ಇಲ್ಲಿದ್ದುಕೊಂಡು ಈ ಪಂಚಲಿಂಗಗಳನ್ನು, ಆದಿಶಕ್ತಿ ಸ್ವರೂಪಿಣಿಯಾದ ಸ್ತಂಭಾಂಬೆಯನ್ನು ಆಧರಿಸುತ್ತಾ ಲೋಕೋಪಕಾರವನ್ನು ಮಾಡು. ಇದು ನನ್ನ ಆವಾಸಸ್ಥಾನವಾಗಿದೆ, ಹಾಗೂ ಆದೀಪೀಠವು ಹೌದು. ಇದು ನಿನ್ನ ಪರಂಪರೆವರೆಗೆ ಸೇರಿದ್ದು ಉಳಿದ 11 ನಾಡಪೀಠಗಳಿಗೆ ಅಧಿಪತಿಗಳನ್ನಾಗಿ ನೇಮಿಸುವ ಅಧಿಕಾರ ನಿನಗಿರುತ್ತದೆ. ಆದರೆ ಅವರು ಯಾರು ನಿನಗೆ ಸಮರಲ್ಲ." ಎಂದು ಹೇಳಿ ಶಿವನು ರಜತಾದ್ರಿಗೆ ತೆರಳಿದನು. ಪರಶಿವನ ಆಜ್ಞೆಯಂತೆ ಶ್ರೀಕ್ಷೇತ್ರವು ಆದೀಪೀಠವಾಗಿದ್ದರಿಂದಾಗಿ ಚುಂಚನಗಿರಿಗೆ ಆದಿಚುಂಚನಗಿರಿ ಎಂಬ ಹೆಸರು ಬಂದಿತ್ತು. ಮಹಾತಪಸ್ವಿಯಾದ ಸಿದ್ಧಯೋಗಿಯು ಇಲ್ಲಿ ನೆಲೆಸಿ ಶಿವನ ಆಜ್ಞೆಯಂತೆ ಧರ್ಮಕೈಂಕರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡನು.

ಸಿದ್ಧಯೋಗಿಯು ಧರ್ಮಪರಾಯಾಣದಲ್ಲಿ ತೊಡಗಿರುವುದನ್ನು ಕಂಡು ಕರ್ಮನಾಥನೆಂಬ ವ್ಯಕ್ತಿಯು ಸಿದ್ಧಯೋಗಿಯ ಸೇವೆ ಮಾಡಲು ಮುಂದೆ ಬಂದನು.

ಆತನ ಸೇವೆಯಿಂದ ಸುಪ್ರೀತನಾದ ಸಿದ್ಧಯೋಗಿಯು ಕ್ರಮೇಣ ಆತನಿಗೆ ದೀಕ್ಷೆಕೊಟ್ಟು ಮಂತ್ರೋಪದೇಶ ಮಾಡಿ ಯೋಗ ರಹಸ್ಯವನ್ನು ಧಾರೆಯೆರೆದು ಆತನನ್ನು ತನ್ನ ಪಟ್ಟ ಶಿಷ್ಯನನ್ನಾಗಿ ಸ್ವೀಕರಿಸಿದನು. ಸಿದ್ಧಯೋಗಿಯು ಧರ್ಮಕಾರ್ಯದಲ್ಲಿ ತೊಡಗಿರಲು ಭಕ್ತಾದಿಗಳು ಬೆಲ್ಲಕ್ಕೆ ಇರುವೆ ಮುತ್ತುವಂತೆ ಮುತ್ತತೊಡಗಿದರು.

ಶ್ರೀಕ್ಷೇತ್ರವು ಪವಿತ್ರ ಕ್ಷೇತ್ರವಾಗಿತ್ತು. ಈ ಗುರು ಶಿಷ್ಯರು ಗಂಗಾಧರೇಶ್ವರ ದೇವಾಲಯವನ್ನು, ಒಂದು ಗುರುಪೀಠವನ್ನು, ಮಠವನ್ನು ಕಟ್ಟಿಸಿದರು ಹಾಗೂ ಧರ್ಮಕಾರ್ಯಕ್ಕೆ ನಿಂತರು. ಶ್ರೀಕರ್ಮನಾಥರು ಚುಂಚನಗಿರಿ ಮಠವನ್ನು ಶ್ರೀಕ್ಷೇತ್ರವನ್ನಾಗಿ ಮಾಡುವಲ್ಲಿ ಯಶಸ್ವಿಯಾದರು. ಈ ಶ್ರೀಕ್ಷೇತ್ರವು ನಾಥಪಂಥ ಹಾಗೂ ನಾಥ ಸಂಪ್ರದಾಯಕ್ಕೆ ಕೇಂದ್ರಬಿಂದುವಾಯಿತು.

ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸ ಇರುವ ಈ ಪುಣ್ಯಕ್ಷೇತ್ರ ಆದಿ ಚುಂಚನಗಿರಿ ಮಠವು ಅಷ್ಟೇ ಸುದೀರ್ಘವಾದ ಗುರುಪರಂಪರೆಯನ್ನು ಒಳಗೊಂಡಿದೆ. ಆದಿಚುಂಚನಗಿರಿ ಸ್ಥಳ ಮಹಾತ್ಮೆ ಎಂಬ ಕೃತಿಯಲ್ಲಿ ಗುರು ಪರಂಪರೆಯ ಒಂದು ಪಟ್ಟಿಯನ್ನು ಕೊಡಲಾಗಿದೆ. ಈ ಪಟ್ಟಿಯಲ್ಲಿ 66 ಗುರುಗಳ ಹೆಸರುಗಳು ಇವೆ. ಅಲ್ಲಿಂದೀಚೆಗೆ 5 ಮಂದಿ ಮಠಾಧಿಪತಿಗಳಾಗಿದ್ದಾರೆ. ಈಗ ಪೀಠಾಧಿಪತಿಗಳಾಗಿರುವ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು 71ನೇ ಯವರು. ಹೀಗೆ ಅವಿಚ್ಛನ್ನವಾಗಿ ನಡೆದುಕೊಂಡು ಬಂದ ಶ್ರೀಮಠವು ಒಕ್ಕಲಿಗ ಜನಾಂಗದ ತಾಯಿಬೇರಾಯಿತು. ಈ ಶ್ರೀಕ್ಷೇತ್ರದ 67ನೇಯ ಗುರುಗಳಾಗಿದ್ದ ಶ್ರೀತೇಜಾನಾಥರು ಒಮ್ಮೆ ಕೃಷ್ಣರಾಜಪೇಟೆಯ ತಮ್ಮ ಭಕ್ತರೊಬ್ಬರ ಮನೆಯಲ್ಲಿ ತಂಗಿದ್ದಾಗ ರೋಗಪೀಡಿತರಾದರು. ಕಾಯಿಲೆ ಉಲ್ಬಣಿಸಿದಾಗ ಆ ಮನೆಯೊಡೆಯರು ಮಠದ ಗತಿ ಏನು ಎಂದು ಅವರನ್ನು ಕೇಳಿದರು. ಅದಕ್ಕೆ ಸ್ವಾಮಿಗಳು ಮಠದ ಹಕ್ಕುದಾರರಾದ ಒಕ್ಕಲಿಗರೇ ಮುಂದಿನ ಏರ್ಪಾಡು ಮಾಡಿಕೊಳ್ಳುತ್ತಾರೆ ಎಂದು ಹೇಳಿ 1924ನೆಯ ಇಸವಿ ಜುಲೈ 24ನೇ ತಾರೀಖು ಶಿವೈಕ್ಯರಾದರು.

ಒಕ್ಕಲಿಗ ಜನಾಂಗದ ಶ್ರೀ ಕ್ಷೇತ್ರವು ಗುರುವಿಲ್ಲದ ಮಠವಾದಾಗ ಆ ಮಠಕ್ಕೆ ಗುರು ಒಬ್ಬರನ್ನು ಪೀಠಾಧಿಪತಿಗಳನ್ನಾಗಿ ಮಾಡಬೇಕೆಂದು ಜನಾಂಗದ ಸ್ವಾಭಿಮಾನಿ ಒಕ್ಕಲಿಗರು ಹಿರಿಯರಾದ ಶ್ರೀ ಕೆ.ಹೆಚ್. ರಾಮಯ್ಯನವರಿಗೆ ಮನವಿ ಮಾಡಿಕೊಂಡರು. ಶ್ರೀ ಕೆ.ಹೆಚ್. ರಾಮಯ್ಯನವರು ಒಕ್ಕಲಿಗ ಜನಾಂಗದ ಸಂಭಾವಿತರು, ಮೇರು ವ್ಯಕ್ತಿಯೂ ಆಗಿದ್ದರು. ಇವರು ಜನಾಂಗದ ಇತರೆ ಸಂಭಾವಿತ ವ್ಯಕ್ತಿಗಳಾದ ಶ್ರೀ ಹೆಚ್.ಕೆ. ವೀರಣ್ಣಗೌಡ, ಶ್ರೀ ಎಂ.ಸಿ. ಲಿಂಗೇಗೌಡ, ಶ್ರೀ ಎಸ್.ಸಿ. ಮಲ್ಲಯ್ಯ, ಇನ್ನೂ ಮುಂತಾದವರಿಗೆ ಈ ವಿಚಾರವನ್ನು ತಿಳಿಸಿ ಮುಂದಿನ ಕ್ರಮಕೈಗೊಳ್ಳಲು ಯೋಜನೆಯೊಂದನ್ನು ರೂಪಿಸಿದ್ದರು. ಮುಂದಿನ ಪೀಠಾಧಿಕಾರಿಯ ಆಯ್ಕೆಯ

ಪ್ರಕ್ರಿಯೆ ಪ್ರಾರಂಭವಾಯಿತು. ಈ ವಿಷಯವನ್ನು ಒಕ್ಕಲಿಗರ ವೃತ್ತಪತ್ರಿಕೆಯಲ್ಲಿ ಪ್ರಕಟಿಸಲಾಯಿತು. ಭಕ್ತಾದಿಗಳು, ಮಹಾಜನರು ದಿನಾಂಕ 21.2.1925ರಂದು ಸಭೆ ಸೇರಿದರು. ಈ ಸಭೆಯಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರದ ಕುಂತಿ ಬೆಟ್ಟಕ್ಕೆ ಸಮೀಪದಲ್ಲಿರುವ ದರಸುಗುಪ್ಪೆ ಎಂಬ ಹಳ್ಳಿಯಲ್ಲಿ ವಾಸವಾಗಿದ್ದರೂ ಆಧ್ಯಾತ್ಮಿಕದ ಬಗ್ಗೆ ತಮ್ಮನ್ನು ತೊಡಗಿಸಿಕೊಂಡಿದ್ದ ಗುರು ರಾಮಯ್ಯನವರನ್ನು ಮುಂದಿನ ಪೀಠಾಧ್ಯಕ್ಷರನ್ನಾಗಿ ಆ ಸಭೆಯು ಆಯ್ಕೆ ಮಾಡಿತು. ಹೀಗೆ ಗುರು ರಾಮಯ್ಯನವರು ಆದಿಚುಂಚನಗಿರಿ ಪೀಠದ ಗುರುವಾದರು. ಈ ಗುರು ರಾಮಯ್ಯನವರಿಗೆ 23.2.1928ರಂದು ಶ್ರೀ ಶ್ರೀ ಶ್ರೀ ಭಕ್ತಿನಾಥ ಸ್ವಾಮಿಗಳೆಂಬ ಹೆಸರಿನಿಂದ ಪಟ್ಟಾಭಿಷೇಕ ಮಹೋತ್ಸವ ಜರುಗಿತು. ಈ ವಿಷಯದಲ್ಲಿ ಕೆ.ಹೆಚ್. ರಾಮಯ್ಯನವರು, ಎಂ.ಸಿ. ಲಿಂಗೇಗೌಡರು ಬಹಳ ಶ್ರಮಪಟ್ಟರು.

ಶ್ರೀ ಶ್ರೀ ಭಕ್ತನಾಥ ಸ್ವಾಮಿಗಳು ಮಠಾಧೀಶರಾದ ಸಂದರ್ಭದಲ್ಲಿ ಮಠದ ಉಗ್ರಾಣ ಬರಿದಾಗಿತ್ತು. ಮಠವು ಸಾಲಸೋಲಗಳಿಗೆ ಗುರಿಯಾಗಿತ್ತು, ಮಠಕ್ಕೆ ಸೇರಿದ್ದ ಹೊಲಗದ್ದೆ ಬರಡಾಗಿದ್ದಿತು, ವ್ಯವಸ್ಥೆ ಕುಸಿದಿತ್ತು. ಸಿಬ್ಬಂದಿಗೆ ಸಂಬಳ ಕೊಡುವ ಸ್ಥಿತಿಯಲ್ಲಿ ಇರಲಿಲ್ಲ. ಇಂತಹ ಸ್ಥಿತಿಯಲ್ಲಿ ಭಕ್ತನಾಥಸ್ವಾಮಿಗಳು ಆದಿಚುಂಚನಗಿರಿ ಕ್ಷೇತ್ರದ ಮಠಾಧೀಶರಾಗಿ ಬಂದಾಗ ಕಂಡು ಅನುಭವಿಸಿದ ಯಾತನಾಮಯ ಸನ್ನಿವೇಶವಾಗಿತ್ತು. ಸ್ವಾಮಿಗಳು ಪೀಠಾಧ್ಯಕ್ಷರಾಗಿ ಮಠವನ್ನು ಪುನಃಶ್ಚೇತನಗೊಳಿಸಲು ತೀರ್ಮಾನಿಸಿದರು. ಬಂಜರಾಗಿದ್ದ ಭೂಮಿಯನ್ನು ಬೇಸಾಯಕ್ಕೆ ಅನುವು ಮಾಡಿದರು. ದನಕರುಗಳನ್ನು ದಾನ ಪಡೆದು ಗೋಶಾಲೆಯನ್ನು ನಿರ್ಮಿಸಿದರು. ಶ್ರೀ ಕ್ಷೇತ್ರಕ್ಕೆ ಬರುವ ಭಕ್ತಾದಿಗಳು ಅನ್ನ ನೀರಿಲ್ಲದೆ ಬರಿಹೊಟ್ಟೆಯಲ್ಲಿ ಹೋಗಬಾರದೆಂಬ ಉದ್ದೇಶದಿಂದ ಬಂದಂತಹ ಭಕ್ತಾಧಿಗಳಿಗೆ ಪ್ರಸಾದ, ಊಟ, ವಸತಿ ವ್ಯವಸ್ಥೆಗೆ ಮುಂದಾದರು. ಮೈಸೂರಿನ ಒಡೆಯರಿಗೆ ಈ ವಿಷಯ ತಿಳಿಯುತ್ತಲೇ ಮಠಕ್ಕಾಗಿ ತಮ್ಮ ಕೈಲಾದ ಸಹಾಯವನ್ನು ಮಾಡಿದರು. ಅಂದು ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್‌ರವರು ಕೂಡ ಮಠದ ಬಗ್ಗೆ ತುಂಬು ಕಾಳಜಿಯನ್ನು ಹೊಂದಿದ್ದರು. ಭಕ್ತನಾಥ ಸ್ವಾಮಿಗಳು ದಿವಾನರಿಗೆ ಒಂದು ವಿಜ್ಞಾಪನ ಪತ್ರವನ್ನು ನೀಡಿದ್ದರು. ಅಂದಿನ ಮೈಸೂರು ಸರ್ಕಾರವು ಮಠದ ಬಗ್ಗೆ ಬಹಳಷ್ಟು ಕಾಳಜಿಯನ್ನು ಹೊಂದಿದ್ದು ಅಲ್ಲದೇ ಸರ್ಕಾರದಿಂದ ಆಗಬಹುದಾದ ನೆರವನ್ನು ನೀಡಿತು.

ಹೀಗೆ ಶ್ರೀ ಶ್ರೀ ಭಕ್ತನಾಥ ಸ್ವಾಮಿಗಳೂ ಮಠವನ್ನು ಸ್ವಲ್ಪ ಅಭಿವೃದ್ಧಿ ಪಥದತ್ತ ಕೊಂಡೊಯ್ದರು. ಸ್ವಾಮಿಗಳು ಇಳಿವಯಸ್ಸಿಗೆ ಬರುತ್ತಲೇ ಶ್ರೀ ಶ್ರೀ ಶ್ರೀ ಚಂದ್ರಶೇಖರನಾಥ ಸ್ವಾಮಿಗಳವರನ್ನು ತಮ್ಮ ಉತ್ತರಾಧಿಕಾರಿಗಳಾಗಿ ನೇಮಿಸಿದರು. ಶ್ರೀ ಶ್ರೀ ಶ್ರೀ ಭಕ್ತನಾಥ ಸ್ವಾಮಿಗಳು 1967ರಂದು ಶಿವೈಕ್ಯರಾದರು. ಶ್ರೀ ಶ್ರೀ ಶ್ರೀ

ಚಂದ್ರಶೇಖರ ಸ್ವಾಮೀಜಿಗಳ ಜನ್ಮ ಸ್ಥಳ ಬೆಂಗಳೂರಿನ ಅಲಸೂರು ಪ್ರದೇಶ. ಪದವೀಧರರಾದ ಈ ಸ್ವಾಮಿಗಳು ಕನ್ನಡ, ತೆಲುಗು, ತಮಿಳು, ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿದ್ದರು. ಈಗಾಗಲೇ ಬೇರೆ ಬೇರೆ ಜನಾಂಗದ ಮಠಗಳ ಬಗ್ಗೆ ತಿಳಿದುಕೊಂಡಿದ್ದ ಸ್ವಾಮಿಗಳು ಶಿಕ್ಷಣಕ್ಕೆ ಒತ್ತು ಕೊಟ್ಟರು. ಶ್ರೀ ಕ್ಷೇತ್ರದಲ್ಲಿ ಪುರೋಭಿವೃದ್ಧಿ ಕೆಲಸಕಾರ್ಯಗಳು ಅವಿಚ್ಛಿನ್ನವಾಗಿ ನಡೆಯತೊಡಗಿ-ದವು. ಶ್ರೀ ಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು ತೆರೆದುದೇ ಅಲ್ಲದೇ ಉಚಿತ ವಿದ್ಯಾರ್ಥಿನಿಲಯವನ್ನೂ ಸ್ಥಾಪಿಸಿದರು. ಉಪಾಧ್ಯಾಯರನ್ನು ನೇಮಿಸಿಕೊಂಡರೆ ಪ್ರತಿ ತಿಂಗಳು ಸಂಬಳವನ್ನು ಕೊಡಬೇಕಾಗುತ್ತದೆ ಅಷ್ಟೊಂದು ಹಣ ಮಠದಲ್ಲಿ ಇಲ್ಲವೆಂದು ಹೇಳಿ ಸುಶಿಕ್ಷಿತರಾದ ಸ್ವಾಮಿಗಳು ಉಪಾಧ್ಯಾಯರಾಗಿ ಪಾಠ ಪ್ರವಚನಗಳನ್ನು ಮಾಡಲಾರಂಭಿಸಿದರು. ಒಟ್ಟಿನಲ್ಲಿ ಹೇಳುವುದಾದರೇ ಶ್ರೀಕ್ಷೇತ್ರವು ಪ್ರಾಚೀನ ಗುರುಕುಲದಂತೆ ಕಂಗೊಳಿಸ ತೊಡಗಿತು. ತಾವು ಪ್ರಾರಂಭಿಸಿದ ಶಾಲೆಯನ್ನು ಪ್ರಗತಿಪಥದತ್ತ ಕೊಂಡೊಯ್ದರು. ಅಂದಿನ ಸರ್ಕಾರಕ್ಕೆ ಒತ್ತಾಯಿಸಿ ಸರ್ಕಾರಿ ಪ್ರೌಢಶಾಲೆಯೊಂದನ್ನು ಶ್ರೀಕ್ಷೇತ್ರಕ್ಕೆ ದೊರಕಿಸಿಕೊಂಡರು. ಇದರಿಂದಾಗಿ ಸುತ್ತ ಮುತ್ತ ಗ್ರಾಮದ ಮಕ್ಕಳಿಗೆ ವಿದ್ಯಾಕೇಂದ್ರವಾಗಿ, ಭಕ್ತಾದಿಗಳಿಗೆ ಗುರುಮಠವಾಗಿ, ಧರ್ಮಪಾಲಕರಿಗೆ ಪವಿತ್ರ ಯಾತ್ರಾಸ್ಥಳವಾಗಿ ಶ್ರೀ ಕ್ಷೇತ್ರವು ಕಂಗೊಳಿಸತೊಡಗಿತು.

ಇಷ್ಟೇ ಅಲ್ಲದೆ ನಮ್ಮ ಜನಾಂಗದವರು ವಿವಾಹಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡಿ ಸಾಲ ಸೋಲ ಮಾಡಿಕೊಳ್ಳುತ್ತಿದ್ದರು. ಇದನ್ನು ತಪ್ಪಿಸಲು ಸಾಮೂಹಿಕ ವಿವಾಹ ಹಾಗೂ ಸರಳ ವಿವಾಹಗಳನ್ನು ಮಠದ ಸಾನ್ನಿಧ್ಯದಲ್ಲಿ ಮಾಡತೊಡಗಿದರು. ಬಡಜನತೆಗೆ ಇದು ಚೇತೋಹಾರಿಯಾಯಿತು. ವಿವಾಹದ ಪೌರೋಹಿತ್ಯವನ್ನು ತಾವೇ ವಹಿಸುತ್ತಿದ್ದರು. ಕೇವಲ 11 ತಿಂಗಳಲ್ಲಿ ಶ್ರೀ ಶ್ರೀ ಚಂದ್ರಶೇಖರನಾಥ ಸ್ವಾಮಿಗಳು ಶ್ರೀ ಕ್ಷೇತ್ರದ ಪೀಠಾಧ್ಯಕ್ಷರಾಗಿದ್ದ ಕಾಲದಲ್ಲಿ ಮಠವನ್ನು ಮುನ್ನಡೆಸಿದುದೇ ಅಲ್ಲದೆ ಮಠವನ್ನು ಇಡೀ ರಾಜ್ಯದಲ್ಲಿಯೇ ಒಂದು ಮಾದರಿ ಮಠವನ್ನಾಗಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಸ್ವಾಮಿಗಳ ಅಭಿವೃದ್ಧಿ ಕಾರ್ಯವನ್ನು ಕಂಡು ಸಹಿಸದ ದೇವರು ಸ್ವರ್ಗಕ್ಕೆ ಕರೆಸಿಕೊಂಡ, ಅರ್ಥಾತ್ ಪೀಠಾಧ್ಯಕ್ಷರಾದ ಕೇವಲ 11 ತಿಂಗಳಿನಲ್ಲಿಯೇ ಶಿವೈಕ್ಯರಾದರು.

ಶ್ರೀಕ್ಷೇತ್ರವು ಒಕ್ಕಲಿಗ ಜನಾಂಗಕ್ಕೆ ಮಾತ್ರವಲ್ಲ ಬಡವರ ದೀನದಲಿತರ ಆಶ್ರಯ ತಾಣವೂ ಆಗಿದ್ದಿತು. ಶ್ರೀ ಶ್ರೀ ಚಂದ್ರಶೇಖರನಾಥ ಸ್ವಾಮಿಗಳ ನಂತರ ಶ್ರೀ ಶ್ರೀ ರಮಾನಂದನಾಥರು ಪೀಠಾಧ್ಯಕ್ಷರಾದರು. ಇವರು ಕೂಡ ಸುಶೀಕ್ಷಿತರಾಗಿದ್ದು ಪ್ರಾರಂಭದಲ್ಲಿ ಉಪಾಧ್ಯಾಯರಾಗಿದ್ದರು. ಇವರ ಜನ್ಮಸ್ಥಳ ಕೊಡವಲಪಟ್ಟಣ. ಪ್ರಾರಂಭದಿಂದಲೂ ಆಧ್ಯಾತ್ಮಿಕದ ಬಗ್ಗೆ ಅಪಾರವಾದ ಕಾಳಜಿ ಇದ್ದಿತು. ಶ್ರೀಗಳು ತಮ್ಮ ಉಪಾಧ್ಯಾಯ ವೃತ್ತಿಗೆ ರಾಜೀನಾಮೆ ಕೊಟ್ಟು ಶ್ರೀಕ್ಷೇತ್ರದ ಅನುಯಾಯಿಯಾಗಿ ಸೇವೆ ಸಲ್ಲಿಸತೊಡ-ಗಿದ್ದರು. ಶ್ರೀ ಶ್ರೀ ರಮಾನಂದನಾಥ ಸ್ವಾಮಿಗಳು ಇಳಿವಯಸ್ಸಿನಲ್ಲಿ ಶ್ರೀ ಕ್ಷೇತ್ರದ ಕೆಲಸ

ಕಾರ್ಯಗಳನ್ನು ನಿರ್ವಹಿಸುವುದು ಕ್ರಮೇಣ ಕಷ್ಟಸಾಧ್ಯದ ಕೆಲಸವಾಗತೊಡಗಿತ್ತು. 1974ರಲ್ಲಿ ಸ್ವಾಮಿಗಳು ಶಿವೈಕ್ಯರಾದರು. ರಮಾನಂದ ಸ್ವಾಮಿಗಳ ತರುವಾಯ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಶ್ರೀ ಕ್ಷೇತ್ರದ ಪೀಠಾಧ್ಯಕ್ಷರಾದರು.

ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು



ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಯವರು ಇಂದಿನ ರಾಮನಗರ ಜಿಲ್ಲೆ ಬಿಡದಿ ಬಳಿಯ ಬಾನಂದೂರಿನಲ್ಲಿ 18.01.1945 ರಲ್ಲಿ ಜನಿಸಿದರು ಶ್ರೀ ಚಿಕ್ಕಲಿಂಗೇಗೌಡ ಮತ್ತು ಶ್ರೀಮತಿ ಬೋರಮ್ಮನವರು ಶ್ರೀಗಳ ಮಾತಾಪಿತೃಗಳು ಶ್ರೀಗಳು ಬಾಲ್ಯದಲ್ಲಿ ಎಲ್ಲ ಮಕ್ಕಳಂತೆ ಆಡಿ ಬೆಳೆದರು. ಪ್ರಾಥಮಿಕ ಶಿಕ್ಷಣವನ್ನು ತಮ್ಮ ಹುಟ್ಟೂರಿನಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ರಾಮನಗರದಲ್ಲೂ, ನಂತರ ಪಿ.ಯು.ಸಿ ಶಿಕ್ಷಣ ಮುಗಿಸಿದರು. ಆರ್ಥಿಕ ಮುಗ್ಗಟ್ಟು ತಲೆದೋರಿದಾಗ ತಮ್ಮ ತಂದೆ ತಾಯಿಗೆ ಹೊರೆಯಾಗಬಾರದೆಂಬ ಕಾರಣದಿಂದ ಅದೇ ಶಾಲೆಯಲ್ಲಿ ಕೆಲವು ಕಾಲ ಗುಮಾಸ್ತರಾಗಿ ಸೇವೆ ಸಲ್ಲಿಸಿದರು. ಶ್ರೀಗಳ ಮನಸ್ಸು ಪಾರಮಾರ್ಥಿಕದ ಕಡೆ ತಿರುಗಿತು. ಕೈಲಾಸಾಶ್ರಮದಲ್ಲಿ ನೆಲೆಸಿ ವೇದ, ವೇದಾಂಗ, ಸಂಸ್ಕೃತ, ಪ್ರಾಕೃತ ಇವೇ ಮುಂತಾದವನ್ನು ಅಧ್ಯಯನ ಮಾಡಿದರು.

ಈ ಮುಂದೆ ತಿಳಿಸಿರುವಂತೆ ಶ್ರೀ ಕ್ಷೇತ್ರ ಆದಿಚುಂಚನಗಿರಿಯು ನಾಥಪಂಥಿ ಯರ ಕ್ಷೇತ್ರವಾಗಿದ್ದು ನಮ್ಮ ಗುರು ಹಿರಿಯರಾದ ಕೆ.ಹೆಚ್. ರಾಮಯ್ಯ, ಎಂ.ಸಿ. ಲಿಂಗೇಗೌಡ, ಎಸ್.ಸಿ. ಮಲ್ಲಯ್ಯ, ಹೆಚ್.ಕೆ. ವೀರಣ್ಣಗೌಡ, ಜಸ್ಟೀಸ್ ಹೊಂಬೇ ಗೌಡರು, ಶ್ರೀಶ್ರೀಶ್ರೀ ಚಂದ್ರಶೇಖರನಾಥ ಸ್ವಾಮಿಗಳು, ರಮಾನಂದ ಸ್ವಾಮಿಗಳ ಪ್ರಯತ್ನ ದಿಂದಾಗಿ 5.1.1975ರಂದು ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠದ ಅಧ್ಯಕ್ಷರನ್ನಾಗಿ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರನ್ನು 72ನೇ ಪೀಠಾಧ್ಯಕ್ಷರನ್ನಾಗಿ ನೇಮಿಸಲ್ಪಟ್ಟರು.

ಶ್ರೀಕ್ಷೇತ್ರ ಆದಿಚುಂಚನಗಿರಿಯು ಆರ್ಥಿಕವಾಗಿ ಬಡವಾಗಿದ್ದಿತು. ಶ್ರೀಗಳ ಮುಂದಾಲೋಚನೆ, ಅವಿರತಶ್ರಮ, ಸಂಘಟನಾಚತುರತೆ ಇವೇ ಮುಂತಾದವುಗಳಿಂದ ಮಠ ಹಂತ ಹಂತವಾಗಿ ಬೆಳೆಯ ತೊಡಗಿತು. ಶ್ರೀಗಳು ಪಟ್ಟ ಶ್ರಮ ಅಷ್ಟಿಷ್ಟಲ್ಲ ಹಳ್ಳಿಹಳ್ಳಿಗೆ ತೆರಳಿ ದವಸ, ಧಾನ್ಯ, ಹಣ ಇವೇ ಮುಂತಾದವುಗಳನ್ನು ಹೊಂದಿಸಿ ತಂದು ತ್ರಿವಿದ ದಾಸೋಹ ಮಾಡತೊಡಗಿದರು. ದೇಶವಿದೇಶಗಳಿಗೆ ತೆರಳಿ ಕುಲಭಾಂದವರಿಂದ ಧನ ದಾನ್ಯವೇ ಅಲ್ಲದೆ ತಾವು ಸ್ಥಾಪಿಸಿದ ಶಾಲಾ ಕಾಲೇಜು, ಆಸ್ಪತ್ರೆಗಳಿಗೆ ಯಂತ್ರಗಳನ್ನು, ತಂತ್ರಜ್ಞರ ಸಹಾಯವನ್ನು ಪಡೆದರು. ನಾಡಿನಾದ್ಯಂತ,

475ಕ್ಕೂ ಹೆಚ್ಚು ಶಾಲಾ, ಕಾಲೇಜು, ತಾಂತ್ರಿಕ ಕಾಲೇಜು, ಮೆಡಿಕಲ್ ಕಾಲೇಜು, ಅಂಧಮಕ್ಕಳ ಶಾಲೆ ಇವೆ ಮುಂತಾದವುಗಳು ಸ್ಥಾಪನೆಯಾದವು ಹಿಂದೊಮ್ಮೆ ಶೃಂಗೇರಿಯು ಒಂದು ಸಮುದಾಯಕ್ಕೆ ಸೇರಿದ ಪ್ರದೇಶವೆನೂ ಎಂಬಂತೆ ತಮ್ಮ ಕಪಿಮುಷ್ಟಿಯಲ್ಲಿ ಹಿಡಿದಿಟ್ಟಿದ್ದರು. ಕೊಪ್ಪ, ಶೃಂಗೇರಿ, ತೀರ್ಥಹಳ್ಳಿ ಇವೇ ಮುಂತಾದ ಪ್ರದೇಶಗಳ ರೈತರ, ವ್ಯಾಪಾರಸ್ತರ ಕಾಫಿ ಪ್ಲಾಂಟರ್‌ಗಳ ಸಹಾಯದಿಂದ ಅದ್ಭುತವಾದ ಶಾಲಾ, ಕಾಲೇಜು, ಮಠವನ್ನು ಸ್ಥಾಪಿಸಿದ್ದು ಒಂದು ಸಾಧನೆ ಆದಿಚುಂಚನಗಿರಿಯಲ್ಲಿ ಚೋಳರ ಶೈಲಿಯಲ್ಲಿ ಬೆಣಚುಕಲ್ಲಿನಿಂದಲೇ ನಿರ್ಮಾಣಗೊಂಡ ಭೈರವೇಶ್ವರ ದೇವಲಾಯ ಶಾಶ್ವತವಾಗಿ ಉಳಿಯುವಂತೆ ಕೆಲಸ ಇದಾಗಿದೆ.

ಕೇವಲ ನಾಲ್ಕು ದಶಕಗಳ ಒಳಗೆ ನಾನೂರು ವರ್ಷಗಳಲ್ಲಿ ಮಾಡಬಹುದಾದ ಸಾಧನೆ ಮಾಡಿದ್ದಾರೆ. ಶ್ರೀಗಳು 13.1.2013ರಂದು ಭೈರವೈಕ್ಯರಾದರು. ಪರಮಪೂಜ್ಯರ ಮತ್ತೊಂದು ಅತ್ಯುತ್ತಮವಾದ ಕೊಡುಗೆ ಎಂದರೆ ಶ್ರೀ ಶ್ರೀ ಶ್ರೀ ನಿರ್ಮಾಲಾನಂದನಾಥ ಸ್ವಾಮಿಜಿಯವರನ್ನು 72ನೇ ಪೀಠಾಧ್ಯಕ್ಷರನ್ನಾಗಿ ನೇಮಕಮಾಡಿದ್ದು.

ಶ್ರೀ ಶ್ರೀ ಶ್ರೀ ನಿರ್ಮಾಲಾನಂದ ನಾಥಮಹಾಸ್ವಾಮಿಗಳು



ಪದವೀ ಪೂರ್ವ ಪೂಣ್ಯನಾಂ ಪಶುಪತಿ ಸುಖಾಲಯ ಅಂದರೆ ಯಾವುದೇ ಸ್ಥಾನಮಾನ ಪಡೆಯಬೇಕಾದರೂ ಪುಣ್ಯಫಲವಿರಬೇಕು ಎಂದು ನಮ್ಮ ಹಿರಿಯರು ಹೇಳುತ್ತಾರೆ ಸಾವಿರಾರು ವರ್ಷಗಳ ಪ್ರಾಚೀನ ಇತಿಹಾಸವಿರುವ ಶ್ರೀಕ್ಷೇತ್ರ ಆದಿಚುಂಚನಗಿರಿ ಅತ್ಯುತ್ತಮ ವಾದ ಕಾಯಕಲ್ಪ ನೀಡಿದರು ಪರಮಪೂಜ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು. ಈಗಾಗಲೆ ತಿಳಿಸಿರುವಂತೆ 475ಕ್ಕೂ ಹೆಚ್ಚು ಶಾಲಾ ಕಾಲೇಜುಗಳು, ಅಂಧ ಮಕ್ಕಳ ಶಾಲೆ, ತಾಂತ್ರಿಕ ಹಾಗೂ ವೈದ್ಯಕೀಯ ಕಾಲೇಜು ಸೇರಿದಂತೆ ಹಲವು ಹತ್ತು ಸಂಸ್ಥೆಗಳು ಶ್ರೀಕ್ಷೇತ್ರದಲ್ಲಿ ಅದ್ಭುತವಾದ ದೇವಾಲಯವನ್ನು ನಿರ್ಮಿಸಿದರು ಸಾವಿರಾರು ಕೋಟಿರೂಪಾಯಿ ಆಸ್ತಿಪಾಸ್ತಿಯುನ್ನು ಹಾಗೂ ಕೊಟ್ಯಾಂತರ ಭಕ್ತರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಅಂದು ಮುಂದಾಲೋಚನೆ ಮಾಡಿ ಚಿಕ್ಕಬಳ್ಳಾಪುರ ಶಾಖಾಮಠದ ಸ್ವಾಮಿಗಳಾದ ಶ್ರೀಶ್ರೀಶ್ರೀ ನಿರ್ಮಾಲಾನಂದನಾಥ ಸ್ವಾಮಿಗಳಿಗೆ ಪಟ್ಟಕಟ್ಟಿದರು.

ನಿರ್ಮಾಲಾನಂದನಾಥ ಸ್ವಾಮಿಗಳ ಪೂರ್ವದ ಹೆಸರು ನಾಗರಾಜ ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಚೀಕನಹಳ್ಳಿಯಲ್ಲಿ ಸ್ವಾಮಿಗಳು 20 ಜುಲೈ 1969ರಲ್ಲಿ ಜನಿಸಿದರು. ಶ್ರೀನರಸೇಗೌಡ ಮತ್ತು ಶ್ರೀಮತಿ ನಂಜಮ್ಮನವರು ಸ್ವಾಮಿಗಳ ಮಾತಾಪಿತೃಗಳು. ಪ್ರಾಥಮಿಕದಿಂದ ಪ್ರೌಢಶಿಕ್ಷಣವನ್ನು ಸ್ಥಳೀಯ ಶಾಲಾಕಾಲೇಜುಗಳಲ್ಲಿ

ಕಲಿತರು. ತುಮಕೂರಿನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಡಿಪ್ಲಮಾ ಪಡೆದರು ಮೈಸೂರಿನ ನ್ಯಾಶನಲ್ ಇನ್ಸಿಟಿಟ್ಯೂಟ್ ಇಂಜಿನಿಯರಿಂಗ್ ಕಾಲೇಜಿಗಲ್ಲಿ ಬಿ.ಇ. ಪದವಿ ಪಡೆದರು. ಮದ್ರಾಸ್‌ನ ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ ಎಂ.ಟೆಕ್ (ಸ್ಟ್ರಕ್ಚರಲ್ ಇಂಜಿನೀರಿಂಗ್) ಪದವಿ ಪಡೆದರು. ಐ.ಐ.ಟಿ.ಯು ಭಾರತದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಕಾರಣ ಶ್ರೀಯವರಿಗೆ ಕೇಂದ್ರ ಜಲಶಕ್ತಿ ಸಂಶೋಧನಾಲಯ ಪೂನ ಇಲ್ಲಿ ವಿಜ್ಞಾನಿಯಾಗಿ ಉದ್ಯೋಗ ಲಭಿಸಿತು.

ಸ್ವಾಮಿಗಳು ಎಷ್ಟೇ ಶಿಕ್ಷಣ ಪಡೆದಿದ್ದರೂ, ಉದ್ಯೋಗ ದೊರೆತ್ತಿದ್ದರೂ ಅವರ ಮನಸ್ಸು ಲೌಕಿಕಕ್ಕಿಂತಲೂ ಪಾರಮಾರ್ಥಿಕ ಕಡೆಗೆ ಒಲಿಯಿತು. ಸಮಾಜಸೇವೆ ಈಶ ಸೇವೆಯಾಗಿ ಅವರ ಮನಸ್ಸು ತುಡಿಯುತ್ತಿತ್ತು. ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಬಗ್ಗೆ ಗೌರವಾಧರಗಳನ್ನು ಹೊಂದಿದ್ದರು. ಶ್ರೀಕ್ಷೇತ್ರ ಆದಿಚುಂಚನಗಿರಿಗೆ ಬೇಟಿನೀಡಿ ಪರಮಪೂಜ್ಯ ಸಾಧನೆಗಳನ್ನು ಕಣ್ಣಾರೆಕಂಡು ಬೆರಗಾದರು. ಶ್ರೀ ನಿರ್ಮಾಲಾನಂದರಿಗೆ ಅರಿವಿಲ್ಲದಂತೆ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಭಕ್ತರಾದರು ವೇದಾಂತ, ಶೈವಾಗಮದಲ್ಲಿ ಎಂ.ಎ. ಪದವಿ ಗಳಿಸಿದರು. ಚುಂಚನ–ಗಿರಿಯ ವೇದಾಗಮ ಕಾಲೇಜಿನಲ್ಲಿ ಸಂಸ್ಕೃತಿ ಮತ್ತು ಪ್ರಾಕೃತ ಕಲಿತರು ಪರಮಪೂಜ್ಯರ ಆಣತಿಯಂತೆ ಶ್ರೀ ನಿರ್ಮಾಲಾನಂದರು ರಾಮನಗರದ ಅಂಧಮಕ್ಕಳ ಶಾಲೆಯಲ್ಲಿ ಶಿಕ್ಷಕರಾಗಿ ಕೆಲವು ಕಾಲ ಸೇವೆಸಲ್ಲಿಸಿದರು. ಶ್ರೀಗಳಿಗೆ ಅರಿವಿಲ್ಲದಂತೆ ಲೌಕಿಕದಿಂದ ಪಾರಮಾರ್ಥಿಕದೆಡೆಗೆ ಅವರ ಮೈಮನಸ್ಸು ಜಾರಿತು ಪರಮಪೂಜ್ಯರು ಶ್ರೀ ನಿರ್ಮಾಲಾ–ನಂದನಾಥರನ್ನು ಚಿಕ್ಕಬಳ್ಳಾಪುರ ಶಾಖಾಮಠ ಹಾಗೂ ಅಲ್ಲಿನ ತಾಂತ್ರಿಕ ಕಾಲೇಜಿನ ಮುಖ್ಯಸ್ಥರನ್ನಾಗಿ ನೇಮಿಸಿದರು. ಕೆಲವೇ ವರ್ಷಗಳಲ್ಲಿ ಸ್ಥಳೀಯ ಮುಖಂಡರನ್ನು ಮಠದ ಸದ್ಭಕ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಲ್ಲಿನ ಮಠ ಹಾಗೂ ಕಾಲೇಜನ್ನು ಅಭಿವೃದ್ಧಿ ಪಡಿಸುವ ಮೂಲಕ ಪರಮಪೂಜ್ಯರ ಮನ ಗೆದ್ದರು. ನನ್ನ ಉತ್ತರಾಧಿಕಾರಿ–ಯಾಗಲು ಅರ್ಹನೆಂದು ತಿಳಿಯಲು ಪರಮಪೂಜ್ಯರಿಗೆ ಹೆಚ್ಚುಕಾಲ ಬೇಕಾಗಲಿಲ್ಲ.

72ನೇ ಪೀಠಾಧ್ಯಕ್ಷರಾಗಿ ಶ್ರೀ ಶ್ರೀ ಶ್ರೀ ನಿರ್ಮಾಲಾನಂದನಾಥ ಮಹಾಸ್ವಾಮಿಗಳು : ಪರಮಪೂಜ್ಯರಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಶಿವೈಕ್ಯರಾದರು. ಅವರ ನಂತರ 72ನೇ ಪೀಠಾಧ್ಯಕ್ಷರಾಗಿ ಶ್ರೀ ಶ್ರೀ ಶ್ರೀ ನಿರ್ಮಾಲಾನಂದನಾಥ ಸ್ವಾಮಿಗಳು ಗದ್ದುಗೆ ಏರಿದರು. ಸಾವಿರಾರು ಕೋಟಿ ರೂಪಾಯಿ ಆಸ್ತಿಪಾಸ್ತಿ ಶಾಲಾ, ಕಾಲೇಜುಗಳು, ಆಸ್ಪತ್ರೆ, ಶಾಖಾ ಮಠಗಳು, ಕೊಟ್ಯಾಂತರ ಭಕ್ತ ಮಹಾಶಯರು ರಾಜಕಾರಣಿಗಳು ಇವುಗಳನ್ನೆಲ್ಲ ನೋಡಿಕೊಳ್ಳುವುದು ಸಾಧಾರಣ ವ್ಯಕ್ತಿಗೆ ಸಾಧ್ಯವಿಲ್ಲ ಶ್ರೀ ಶ್ರೀ ಶ್ರೀ ನಿರ್ಮಾಲಾನಂದ ನಾಥರು ಸಾವಧಾನ ಚಿತ್ತರಾಗಿ ಎಲ್ಲವನ್ನು ಅರ್ಥಮಾಡಿಕೊಂಡು ಹಂತ ಹಂತವಾಗಿ ಮೇಲೆರುತ್ತಿದ್ದಾರೆ. ಪರಮಪೂಜ್ಯರ ಅನುಪಸ್ಥಿಯು ಭಕ್ತರಿಗೆ ಬಾರದಂತೆ ಕಾಪಾಡಿಕೊಂಡು ಹೋಗುತ್ತಿದ್ದಾರೆ.

ಸತ್ಸಂಗ ಎಂಬ ಜನಪ್ರಿಯಕಾರ್ಯಕ್ರಮ ಮತ್ತು ಶ್ರೀಶ್ರೀಶ್ರೀ ನಿರ್ಮಾಲಾನಂದರು : ಇಂದಿಗೆ ನೂರು ವರ್ಷಗಳಿಗೆ ಹೋಲಿಕೆ ಮಾಡಿದರೆ ಒಕ್ಕಲಿಗರು ಆರ್ಥಿಕವಾಗಿ ರಾಜಕೀಯವಾಗಿ, ಶೈಕ್ಷಣಿಕವಾಗಿ ಸಭಲರಾಗಿದ್ದಾರೆ ಸದೃಡರಾಗಿದ್ದಾರೆ. ನಮ್ಮ ಸಮಾಜ ಭೌತಿಕವಾಗಿ ಬೆಳೆದರೆ ಸಾಲದು ಬೌದ್ಧಿಕವಾಗಿಯೂ ಬೆಳೆಯಬೇಕು. ಸಾತ್ವಿಕವಾಗಿ ಗಟ್ಟಿ ಗೊಳಿಸಬೇಕು. ನಾವು ಪ್ರತಿದಿನ ಸ್ನಾನ ಮಾಡುತ್ತೇವೆ (ಬಹುತೇಕ ನಗರ ವಾಸಿಗಳು) ಇದರ ಮೂಲಕ ನಮ್ಮ ಮೈಯಲ್ಲಿರುವ ಕೊಳೆ ಹೋಗುತ್ತದೆ ಆದರೆ ಮನಸ್ಸಿನ ಇಲ್ಲವೆ ಆತ್ಮದಲ್ಲಿರುವ ಕೊಳೆ? ನಾವು ಮಾಡುವ ಸ್ನಾನದಿಂದ ಹೋಗದು ಅಂತಹ ಕೊಳೆ ಹೋಗಬೇಕಾದರೆ ಕೇವಲ ಸತ್ಸಂಗದಿಂದ ಮಾತ್ರ ಸಾಧ್ಯ. ಅಂತಹ ಶ್ರೇಷ್ಠ ಆತ್ಮದರ್ಶನದ ಸತ್ಸಂಗವನ್ನು ಶ್ರೀ ಶ್ರೀ ಶ್ರೀ ನಿರ್ಮಾಲಾನಂದ ಸ್ವಾಮಿಗಳು ಬೆಂಗಳೂರು, ಮೈಸೂರು, ಮಂಡ್ಯ ಸೇರಿದಂತೆ ಎಲ್ಲೆಡೆ ಏರ್ಪಡಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಅತ್ಯಾವಶ್ಯಕ ಸ್ವಾಮಿಗಳ ಸತ್ಸಂಗ ಕಾರ್ಯಕ್ರಮಕ್ಕೆ ಅಬಾಲವೃದ್ಧರಾಗಿ ಎಲ್ಲರೂ ಸೇರುತ್ತಿದ್ದಾರೆ. ಪರಮಪೂಜ್ಯರು ಚುಂಚನಗಿರಿಯನ್ನು ಚಿನ್ನದ ಗಿರಿಯನ್ನಾಗಿ ಮಾಡಿದರೆ ಸ್ವಾಮಿ ನಿರ್ಮಾಲಾನಂದರು ಆ ಚಿನ್ನದಗಿರಿಗೆ ಸಾತ್ವಿಕ ಲೇಪಮಾಡಿ ಗಟ್ಟಿಗೊಳಿಸುತ್ತಿದ್ದಾರೆ. ಅವರಲ್ಲಿರುವ ಅಪಾರಜ್ಞಾನ ತಿಳಿದವರಿಗೆ ಗೊತ್ತು ಸಂಸ್ಕೃತ, ಪ್ರಾಕೃತ, ವೇದ ವಿಜ್ಞಾನಗಳನ್ನು ಮೈಗೂಡಿಸಿಕೊಂಡಿದ್ದಾರೆ.

ಒಕ್ಕಲಿಗ ಸಮುದಾಯವನ್ನು ಸನ್ಮಾರ್ಗದಲ್ಲಿ ಕೊಂಡ್ಯುಯ್ಯುತ್ತಿದ್ದಾರೆ ಪರಮಪೂಜ್ಯರ ದೂರದರ್ಶಿತ, ಆಸೆ, ಆಶೋತ್ತರಗಳನ್ನು ಸಾಕ್ಷತ್ಕರಿಸುತ್ತಿದ್ದಾರೆ.

ಶ್ರೀ ಆದಿಚುಂಚನಗಿರಿ ಗುರು ಪರಂಪರೆ : ಪುರಾಣೇತಿಹಾಸ ಪ್ರಸಿದ್ಧವಾದ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ಬಹಳ ಪ್ರಾಚೀನವಾದುದು. ಇದರ ಗುರುಪರಂಪರೆಯೂ ಸುದೀರ್ಘವಾದುದು. ಆದಿಚುಂಚನಗಿರಿ ಸ್ಥಳ ಮಹಾತ್ಮೆ ಎಂಬ ಕೃತಿಯಲ್ಲಿ ಗುರು ಪರಂಪರೆಯ ಒಂದು ಪಟ್ಟಿಯನ್ನು ಕೊಡಲಾಗಿದೆ. ಈ ಪಟ್ಟಿಯಲ್ಲಿ 66 ಗುರುಗಳ ಹೆಸರುಗಳಿದ್ದು, ಅಲ್ಲಿಂದೀಚೆಗೆ 6 ಮಂದಿ ಪೀಠಾಧಿಪತಿಗಳಾಗಿದ್ದಾರೆ. ಆದಿಚುಂಚನಗಿರಿ ಮಹಾ ಸಂಸ್ಥಾನದ ಈಗಿನ ಪೀಠಾಧಿಪತಿಗಳಾದ ನಿರ್ಮಾಲಾನಂದ ನಾಥ ಸ್ವಾಮಿಗಳವರು 72ನೆಯವರು.

1. ಶ್ರೀ ಆದಿರುದ್ರ
2. ಶ್ರೀ ಸಿದ್ಧಯೋಗಿ
3. ಶ್ರೀ ಕರ್ಮನಾಥರು
4. ಶ್ರೀ ಶಿವನಾಥರು
5. ಶ್ರೀ ಹರಿನಾಥರು
6. ಶ್ರೀ ಬ್ರಹ್ಮನಾಥರು
7. ಶ್ರೀ ಗಿರಿಜಾನಾಥರು
8. ಶ್ರೀ ಲಕ್ಷ್ಮೀನಾಥರು
9. ಶ್ರೀ ವಾಣೀನಾಥರು
10. ಶ್ರೀ ಸೋಮನಾಥರು
11. ಶ್ರೀ ಭೌಮನಾಥರು
12. ಶ್ರೀ ಸೌಮ್ಯನಾಥರು

13. ಶ್ರೀ ಗುರುನಾಥರು
14. ಶ್ರೀ ಭಾರ್ಗವ ನಾಥರು
15. ಶ್ರೀ ಮಂದನಾಥರು
16. ಶ್ರೀ ತಮೋನಾಥರು
17. ಶ್ರೀ ಕೇತುನಾಥರು
18. ಶ್ರೀ ವಜ್ರನಾಥರು
19. ಶ್ರೀ ಆಜೇಞಾಯನಾಥರು
20. ಶ್ರೀ ಕಾಲನಾಥರು
21. ಶ್ರೀ ನಿರುರುತಿನಾಥರು
22. ಶ್ರೀ ಸಿಂಧುನಾಥರು
23. ಶ್ರೀ ಪವನನಾಥರು
24. ಶ್ರೀ ಕುಬೇರನಾಥರು
25. ಶ್ರೀ ಈಶ್ವರನಾಥರು
26. ಶ್ರೀ ಧರಣೀನಾಥರು
27. ಶ್ರೀ ಮೇಘನಾಥರು
28. ಶ್ರೀ ಕೈಲಾಸನಾಥರು
29. ಶ್ರೀ ಕ್ಷೀರಾಬ್ಧನಾಥರು
30. ಶ್ರೀ ಸತ್ಯಲೋಕನಾಥರು
31. ಶ್ರೀ ವಿಶ್ವನಾಥರು
32. ಶ್ರೀ ಕಾಶೀನಾಥರು
33. ಶ್ರೀ ಗಂಗಾನಾಥರು
34. ಶ್ರೀ ಕಲ್ಯಾಣನಾಥರು
35. ಶ್ರೀ ಶಂಕರನಾಥರು
36. ಶ್ರೀ ಪ್ರೇಮನಾಥರು
37. ಶ್ರೀ ಪಂಪಾನಾಥರು
38. ಶ್ರೀ ವಿರೂಪಾಕ್ಷನಾಥರು
39. ಶ್ರೀ ಹರಿನಾಥರು
40. ಶ್ರೀ ರಾಮನಾಥರು
41. ಶ್ರೀ ರಂಗನಾಥರು
42. ಶ್ರೀ ಗುರೂಜಿನಾಥರು
43. ಶ್ರೀ ಸಿದ್ಧನಾಥರು
44. ಶ್ರೀ ಭಜನನಾಥರು
45. ಶ್ರೀ ಶಾಂತಿನಾಥರು
46. ಶ್ರೀ ಸೋಮನಾಥರು
47. ಶ್ರೀ ಶಿವನಾಥರು
48. ಶ್ರೀ ವಸಂತನಾಥರು
49. ಶ್ರೀ ಮೇಹರನಾಥರು
50. ಶ್ರೀ ಗಣೇಶನಾಥರು
51. ಶ್ರೀ ಪಾರ್ಶ್ವನಾಥರು
52. ಶ್ರೀ ಧರ್ಮನಾಥರು
53. ಶ್ರೀ ಭೈರವನಾಥರು
54. ಶ್ರೀ ನಾದಿನಾಥರು
55. ಶ್ರೀ ಸಂಪಾನಾಥರು
56. ಶ್ರೀ ಟೀಕರನಾಥರು
57. ಶ್ರೀ ಗಂಗಾನಾಥರು
58. ಶ್ರೀ ಥವಾರನಾಥರು
59. ಶ್ರೀ ಶಿವನಾಥರು
60. ಶ್ರೀ ಕುರುಕ್ಷೇತ್ರನಾಥರು
61. ಶ್ರೀ ಬಸವನಾಥರು
62. ಶ್ರೀ ಸಾಯರನಾಥರು
63. ಶ್ರೀ ಪ್ರೇಮನಾಥರು
64. ಶ್ರೀ ಧೀರಜನಾಥರು
65. ಶ್ರೀ ಸುಂದರನಾಥರು
66. ಶ್ರೀ ಆದಿತ್ಯನಾಥರು
67. ಶ್ರೀ ತೇಜನಾಥರು
68. ಶ್ರೀ ಭಕ್ತಾನಾಥರು
69. ಶ್ರೀ ಚಂದ್ರಶೇಖರನಾಥರು
70. ಶ್ರೀ ರಮಾನಂದನಾಥರು
71. ಶ್ರೀ ಬಾಲಗಂಗಾಧರನಾಥರು
72. ಡಾ. ಶ್ರೀ ನಿರ್ಮಲಾನಂದನಾಥ

ಕೆಲವು ವರ್ಷಗಳ ಹಿಂದೆ ಒಕ್ಕಲಿಗ ಜನಾಂಗದ ಸಮಗ್ರ ಚರಿತ್ರೆಯ ಕೃತಿಗಳ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಮಾಡಿದರು. ಆದರೆ ಅನಿವಾರ್ಯ ಕಾರಣಗಳಿಂದ ಈ ಪವಿತ್ರಕಾರ್ಯ ಕುಂಟುತ್ತಾ ಸಾಗಿದೆ. ಒಕ್ಕಲಿಗ ಜನಾಂಗದ ಹಿಂದುಳಿದ ಇತರ ಜನಾಂಗವನ್ನು ಗುರ್ತಿಸಿ ಮೇಲೆ ತರಲು ಅವಿರತವಾಗಿ ಶ್ರಮಿಸುತ್ತಿದ್ದಾರೆ. ಇಂದಿಗೂ ಊಟಿ, ಕೊಯಮತ್ತೂರು ಸೇರಿದಂತೆ ನಾಡಿನ ಹೊರಭಾಗಗಳಲ್ಲಿ ಶ್ರೀ ಕ್ಷೇತ್ರಕ್ಕೆ ನಡೆದುಕೊಳ್ಳುತ್ತಿದ್ದಾರೆ. ನಡೆಯುವವನು ಬೀಳುವನಲ್ಲದೆ ಕುಳಿತಿರುವವನು ಬೀಳುವನೆ ಎಂಬಂತೆ ಸ್ವಾಮಿಗಳ ಬಗ್ಗೆ ಕುಹಕವಾಡುವವರು, ಹಗುರವಾಗಿ ಮಾತನಾಡುವವರು ಸಾಕಷ್ಟು ಜನರಿದ್ದಾರೆ. ಇದ್ಯಾವುದಕ್ಕೂ ಕಿವಿಗೊಡದೆ ಸ್ವಾಮಿಗಳು ಕಾಯಕದ ಮೂಲಕ ಕೈಲಾಸ ಕಾಣುತ್ತಿದ್ದಾರೆ.

ಶ್ರೀ ಕ್ಷೇತ್ರ ಕುಂದೂರು ಮಠ

ಒಕ್ಕಲಿಗ ಮಠಗಳಲ್ಲಿ ಶ್ರೀ ಕ್ಷೇತ್ರ ಕುಂದೂರು ಮಠವೂ ಒಂದು. ಶ್ರೀ ಕ್ಷೇತ್ರ ಹಾಸನ ಜಿಲ್ಲೆ ಚನ್ನರಾಯ ಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿಯಲ್ಲಿದೆ. ಶ್ರೀಕ್ಷೇತ್ರವು ಚನ್ನರಾಯಪಟ್ಟಣ ಅರಸೀಕೆರೆ ರಸ್ತೆಯಲ್ಲಿ ಇರುವ ಮೂಡನಹಳ್ಳಿ ಗ್ರಾಮದಿಂದ 3 ಕಿ.ಮೀ. ದೂರದಲ್ಲಿದೆ. ಶ್ರೀ ಕ್ಷೇತ್ರಕ್ಕೆ ಬೆಂಗಳೂರಿನಿಂದ ಹಿರಿಸಾವೆ ಬಾಗೂರು ಮಾರ್ಗವಾಗಿ ನೇರ ಸಾರಿಗೆ ಸೌಕರ್ಯವಿದೆ. ಈ ಮಠವು ಸುಮಾರು 10 ಎಕರೆ ಪ್ರದೇಶದಲ್ಲಿ ಹರಡಿಕೊಂಡಿದ್ದು ತೆಂಗು, ಅಡಿಕೆ, ಮಾವು ಇವೇ ಮುಂತಾದ ವೃಕ್ಷ, ಪಶುಸಂಪತ್ತಿನಿಂದ ಕಂಗೊಳಿಸುತ್ತಿದೆ. ಶ್ರೀ ಕ್ಷೇತ್ರವು ಈ ಭಾಗದ ರೈತ ಸಮುದಾಯದ ಶಾಂತಿ, ನೆಮ್ಮದಿ ಆಧ್ಯಾತ್ಮಿಕ ಭಾವನೆಯನ್ನು ತರುವ ಕೇಂದ್ರವಾಗಿದೆ.

ಮಠದ ಸ್ಥಾಪನೆ ಮತ್ತು ಗುರುಪರಂಪರೆ : ಪ್ರಾಚೀನ ಗುರುಕುಲವನ್ನು ನೆನಪಿಸುವ ಅರಣ್ಯ ತಪೋಭೂಮಿಯ ಮಲೆನಾಡು ಪ್ರದೇಶದಲ್ಲಿ ಸ್ಥಾಪನೆಗೊಂಡಿದೆ. ಈ ಮಠದ ಸ್ಥಾಪನೆ 17ನೇ ಶತಮಾನದಕ್ಕೂ ಹಿಂದಕ್ಕೆ ಹೋಗುತ್ತದೆ. ಕಾಯಕ ಸಂಸ್ಕೃತಿ ಮಹತ್ವ ಪಡೆದ ಆದರ್ಶ ರೈತ ಕುಟುಂಬ ಅಂದರೆ ಒಕ್ಕಲಿಗ ಜನಾಂಗದಿಂದ ಸ್ಥಾಪನೆಗೊಂಡಿದೆ. ಶ್ರೀ ಕ್ಷೇತ್ರ ಈ ಭಾಗದ ರೈತ ಸಮುದಾಯದ ಆಧ್ಯಾತ್ಮಿಕ ಬೆಂಬಲಕ್ಕೆ ನಿಂತ ಕ್ಷೇತ್ರವಾಗಿದ್ದು, ರೈತಾಪಿ ಬದುಕಿನ ಜೀವನ ಶೈಲಿಗೂ ಸ್ವಾಮೀಜಿಗಳ ಜೀವನ ಶೈಲಿಗೂ ವ್ಯತ್ಯಾಸ ಕಾಣಿಸುವುದಿಲ್ಲ. ಹೀಗಾಗಿ ಇಂಥಹವರೇ ಸ್ವಾಮೀಜಿಗಳಾಗ-ಬೇಕೆಂಬ ಶಿಷ್ಟಾಚಾರ ಕಂಡುಬರುವುದಿಲ್ಲ. ರೈತ ಕುಟುಂಬದಿಂದ ಬಂದ ಪಾರಮಾರ್ಥಿಕ ಚಿಂತನೆಯಲ್ಲಿ ತೊಡಗಿದ ಕಾಯಕ ಯೋಗಿ ಶ್ರೀ ಶ್ರೀ ಶ್ರೀ ತಿಮ್ಮಪ್ಪ ಸ್ವಾಮಿಗಳಿಗೆ ಈ ಮಠವನ್ನು ಕಟ್ಟಿ ಬೆಳೆಸಿದ ಕೀರ್ತಿ ಸಲ್ಲುತ್ತದೆ.


ಈ ಮಠದ ಗುರುಪರಂಪರೆಯ ಮೂಲ ಪುರುಷರ ಬಗ್ಗೆ ಸ್ಪಷ್ಟ ಮಾಹಿತಿ-ಗಳಿಲ್ಲ. ಈ ಮಠದಲ್ಲಿ ಈಗಿನ ದೇವಾಲಯದ ನಿರ್ವಹಣೆ ಮತ್ತು ಹೊಣೆಯನ್ನು

ಶ್ರೀ ಪರದೇಶಯ್ಯ ಸ್ವಾಮಿಯುವರು ವಹಿಸಿಕೊಂಡ ಮೇಲೆ ಆಧಾರಗಳು ಲಭ್ಯವಾಗುತ್ತವೆ. ಕೃಷಿ ಮತ್ತು ಹೈನುಗಾರಿಕೆಗೆ ಮಹತ್ವ ನೀಡಿದ ಇವರು ಚರಾವಿಗಾಗಿ ಹಳ್ಳಿ ಹಳ್ಳಿಗೆ ತೆರಳಲು ಮೈಸೂರು ಅರಸರಿಂದ ಅನುಮತಿ ಪಡೆದಿದ್ದರು. ಕುದುರೆ ಏರಿ ತಮ್ಮ ಸಂಗಡಿಗರೊಂದಿಗೆ ಹಳ್ಳಿಯ ಮಧ್ಯಭಾಗದಲ್ಲಿ ನಗಾರಿ ಬಾರಿಸುತ್ತಾ, ಭಕ್ತರಿಂದ ದವಸಧಾನ್ಯ ಕಾಣಿಕೆ ಸ್ವೀಕರಿಸಿ ದೇವಾಲಯದ ಅಭಿವೃದ್ಧಿಗೆ ಶ್ರಮಿಸಿದರು. ಇವರ ನಂತರ ತಿಮ್ಮಪ್ಪ ಸ್ವಾಮಿಗಳು ಮಠ ಪೀಠಕ್ಕೆ ಮುಖ್ಯಸ್ಥರಾದರು.

ಶ್ರೀ ಶ್ರೀ ಶ್ರೀ ತಿಮ್ಮಪ್ಪ ಸ್ವಾಮೀಜಿಯುವರು ಪರದೇಶಯ್ಯ ಸ್ವಾಮೀಜಿಯವರಿಂದ ಭಗವಂತನ ಸೇವಾ ಕೈಂಕರ್ಯವನ್ನು ಹಸ್ತಾಂತರಿಸಿಕೊಂಡ ನಂತರ ಶ್ರೀ ಕ್ಷೇತ್ರಕ್ಕೆ ಹೊಸರೂಪ ಕೊಟ್ಟರು. ಇವರ ನೇತೃತ್ವದಲ್ಲಿ ಕೇವಲ ದೇವಾಲಯುವಿದ್ದ ಈ ಸ್ಥಳ ಒಂದು ಧರ್ಮಸಂಸ್ಥೆ ಅಥವಾ ಮಠವಾಗಿ ರೂಪುಗೊಂಡಿತು. ಶ್ರೀಗಳು ನಾಗಮಂಗಲ ತಾಲ್ಲೂಕು ಬಿಂಡಗನವಿಲೆ ಹೋಬಳಿಯ ಯಾಯ್ಗೇನಹಳ್ಳಿಯ ಒಕ್ಕಲಿಗ ಕುಟುಂಬದಲ್ಲಿ ಜನಿಸಿದರು. ಇವರು ಸಂಸಾರಿಯಾಗಿದ್ದರೂ ಕೂಡ ಇವರ ಮನಸ್ಸು ಲೌಕಿಕಕ್ಕಿಂತಲೂ ಪಾರಮಾರ್ಥಿಕದೆಡೆಗೆ ಒಲಿಯಿತು. ಶ್ರೀ ಕ್ಷೇತ್ರಕ್ಕೆ ಬಂದು ನೆಲೆ ನಿಂತ ನಂತರ ಕೃಷಿ ಪಾಲನೆಯಲ್ಲಿ ತೊಡಗಿಕೊಂಡು ಈ ಗ್ರಾಮಕ್ಕೆ ಆಧ್ಯಾತ್ಮಿಕ ಮತ್ತು ಕಾಯಕ ಕಾರ್ಯದ ಮಾರ್ಗದರ್ಶಿಯಾದರು. ಇಲ್ಲಿನ ದೇವಾಲಯದ ಜೊತೆ ಮಠ ಕಟ್ಟಡ ಸುತ್ತಲು ಪೌಳಿ ಗರುಡಗಂಬಗಳನ್ನು ಸ್ಥಾಪಿಸಿ ಶ್ರೀ ಕ್ಷೇತ್ರ ಕುಂದೂರುಮಠ ವೆಂದು ಖ್ಯಾತಿಗೊಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅಲ್ಲದೆ ಅರಕಲುಗೂಡಿನ ದೊಡ್ಡ ಬೊಮ್ಮೇನಹಳ್ಳಿಯಲ್ಲಿ ಒಂದು ಶಾಖಾಮಠವನ್ನು ಸ್ಥಾಪಿಸಿದರು. ಕುಂದೂರು ಮಠದಲ್ಲಿ ಧಾರ್ಮಿಕ ಆಚರಣೆಗಳಾದ ವಾರ್ಷಿಕ ಜಾತ್ರೆ, ಹರಿಸೇವೆ, ಮೊದಲಾದವುಗಳನ್ನು ಏರ್ಪಡಿಸುವುದರ ಮೂಲಕ ಒಂದು ಧಾರ್ಮಿಕ ಯಾತ್ರಾ ಸ್ಥಳವಾಗಿಸಿದರು. ಶ್ರೀಗಳು 1940 ರಲ್ಲಿ ಕಾಲದಲ್ಲಿ ಲೀನವಾದರು. ಇವರ ನಂತರ ತುರುವೇಕೆರೆ ತಾಲ್ಲೂಕು ಹೊಸಹಳ್ಳಿ ಗ್ರಾಮದ ಶ್ರೀ ಶ್ರೀ ಶ್ರೀ ಪರದೇಶಿ ನಂಜಯ್ಯ ಸ್ವಾಮಿಗಳು ಮಠದ ಮುಖ್ಯಸ್ಥರಾದರು. ಇವರು ತಿಮ್ಮಪ್ಪ ಸ್ವಾಮಿಗಳು ಹಾಕಿಕೊಟ್ಟ ಮಾರ್ಗದಲ್ಲಿಯೇ ಶ್ರೀ ಕ್ಷೇತ್ರವನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಬಂದು 1991 ಇಹಲೋಕ ಯಾತ್ರೆ ಮುಗಿಸಿದರು. ಇವರ ನಂತರ ಇವರ ವಂಶಸ್ಥರೇ ಆದ ಶ್ರೀ ಶ್ರೀ ಶ್ರೀ ಪರದೇಶಿ ರಾಮಯ್ಯ ಸ್ವಾಮೀಜಿಯವರು ಮಠದ ಮುಖ್ಯಸ್ಥರಾದರು. (ಇವರು 1959ರಲ್ಲಿ ನಂಜಯ್ಯ ಸ್ವಾಮೀಜಿಯವರಿಂದ ದೀಕ್ಷೆ ಪಡೆದಿದ್ದರು). ಇಂದು ಇವರು ಮಠದ ಏಳಿಗೆಗಾಗಿ ಕಂಕಣ ಬದ್ಧರಾಗಿ ಶ್ರಮಿಸುತ್ತಿದ್ದಾರೆ. ಬರುವ ಭಕ್ತಾದಿಗಳಿಗೆ ಊಟ ವಸತಿ ವ್ಯವಸ್ಥೆಯನ್ನೂ ಕಲ್ಪಿಸುತ್ತಿದ್ದಾರೆ.

ವಾರ್ಷಿಕ ಜಾತ್ರೆ ಮತ್ತು ಭಕ್ತರು : ಸಂಪೂರ್ಣವಾಗಿ ಕೃಷಿಯನ್ನು ಅವಲಂಬಿಸಿರುವ ಈ ಭಾಗದ ಜನ ಸಾಮಾನ್ಯವಾಗಿ ಧಾರ್ಮಿಕವಾಗಿ ಶ್ರೀ ಕ್ಷೇತ್ರ ಆದಿಚುಂಚನಗಿರಿಮಠಕ್ಕೂ ಹಾಗೂ ಶ್ರೀ ಕ್ಷೇತ್ರ ಕುಂದೂರು ಮಠಕ್ಕೂ ನಡೆದುಕೊಳ್ಳುತ್ತಾರೆ. ಶೈವ ಸಂಪ್ರದಾಯದ ಆರಾಧನಾ ಪದ್ಧತಿಯನ್ನು ಒಪ್ಪಿದ ಜನ ಶ್ರೀ ಕ್ಷೇತ್ರ ಆದಿಚುಂಚನಗಿರಿಮಠಕ್ಕೆ ನಡೆದುಕೊಂಡರೆ, ಶ್ರೀ ರಾಮಾನುಜಾಚಾರ್ಯರ ಶ್ರೀ ವೈಷ್ಣವ ಧರ್ಮ ಅನುಸರಿಸಿದ ಅನೇಕ ಕೃಷಿಕ ವಲಯದ ಭಕ್ತರು ಕುಂದೂರು ಮಠಕ್ಕೆ ವಿಶೇಷವಾಗಿ ನಡೆದುಕೊಳ್ಳುತ್ತಾರೆ. ಈ ಮಠಕ್ಕೆ ದಕ್ಷಿಣ ಕರ್ನಾಟಕದ ವಿವಿಧೆಡೆಗಳಿಂದ ಭಕ್ತರೂ ಬರುತ್ತಾರೆ. ಶ್ರೀ ಕ್ಷೇತ್ರ ಕುಂದೂರು ಮಠ ಒಂಬತ್ತು ದೇಗುಲಗಳ ಕೂಟವಾದುದರಿಂದ ಎಲ್ಲಾ ಸಮುದಾಯಗಳ ಜನ ತಮಗಿಷ್ಟ ಬಂದ ದೈವಕ್ಕೆ ನಡೆದುಕೊಳ್ಳುತ್ತಾರೆ. ತಮಗಿಷ್ಟ ಬಂದ ಆಹಾರ ಪದ್ಧತಿಯಂತೆ ನೈವೇದ್ಯದಿಂದ ಆರಾಧಿಸಿ ಭಕ್ತಿ ಸಮರ್ಪಿಸುತ್ತಾರೆ. ಪ್ರತಿ ಭಾನುವಾರ ಮತ್ತು ಮಂಗಳವಾರ ಶ್ರೀಮಠಕ್ಕೆ ಬರುವ ಭಕ್ತಾದಿಗಳು ಇಲ್ಲಿನ ರಕ್ಷಾದೇವತೆ ಮೆಳೆಯಮ್ಮನಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಷಷ್ಠಿಗೆ ಏಳುದಿನ ಮುಂಚೆ ಎಣ್ಣೆ ಬಟ್ಟೆ ನೇಯುವುದರೊಂದಿಗೆ ಪ್ರಾರಂಭವಾಗುವ ಜಾತ್ರೆ ಒಟ್ಟು ಆರು ದಿನ ನಡೆಯುತ್ತದೆ. ಈ ವಾರ್ಷಿಕ ಜಾತ್ರೆ ಇಂದಿಗೂ ತನ್ನ ಜನಪದ ಧರ್ಮ ಮತ್ತು ಜನಪದ ಸಂಸ್ಕೃತಿಗಳ ಮೂಲಸೊಗಡನ್ನು ಉಳಿಸಿಕೊಂಡು ಬರುತ್ತಿದೆ.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ



ಪುರಂದರದಾಸರು ಒಂದು ಕಡೆ ಹೇಳಿದ್ದಾರೆ ಸುಮ್ಮನೇ ಬಾಹುದಯ್ಯಾ ಮುಕ್ತಿ ಎಂದು. ಅದೇ ರೀತಿ ಜೀವನದಲ್ಲಿ ಲೌಕಿಕ, ಪಾರಮಾರ್ಥಿಕ ಎಂಬ ಎರಡು ಮಾರ್ಗಗಳು. ಹುಟ್ಟಿದೊಡನೆ ನಮ್ಮ ಮನಸ್ಸು ಪಾರಮಾರ್ಥಿಕ ಮಾರ್ಗಕ್ಕಿಂತಲೂ ಲೌಕಿಕದ ಕಡೆಗೆ ಹರಿಯುವುದು ಸರ್ವೇಸಾಮಾನ್ಯ. ಬೆರಳಣಿಕೆಯಷ್ಟು ಜನಗಳ ಮನಸ್ಸು ಮಾತ್ರ ಪಾರಮಾರ್ತಿಕದ ಕಡೆ ಹೊರಳುವುದು."ನಿನ್ನೊಳು ಮಾಯೆಯೋ ಇಲ್ಲ ಮಾಯೆಯೊಳು ನೀನೋ," ಈ ಮಾತು ನಿತ್ಯ ಸತ್ಯ. ನಾವೆಲ್ಲ ಮಾಯೆಗೆ ಸಿಲುಕಿದ್ದೇವೆ. ಶ್ರೀ ಶ್ರೀ ಶ್ರೀ ಚಂದ್ರಶೇಖರ ಸ್ವಾಮೀಜಿಗಳು ಮಾಯೆಯನ್ನು ಗೆದ್ದವರು.

ಬೆಂಗಳೂರು ಮೈಸೂರು ಹೆದ್ದಾರಿಯ (ಬೆಂಗಳೂರಿನಿಂದ 18 ಕಿ.ಮೀ. ದೂರದಲ್ಲಿರುವ) ಕೆಂಗೇರಿ ಪುರಸಭೆಯ ಬಸವೇಶ್ವರ ನಗರ ಗ್ರಾಮದ ಬಳಿ ಸ್ಥಾಪಿಸಿರುವ ಶ್ರೀ ಗುರುಜ್ಞಾನಕ್ಷೇಂದ್ರವೇ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ. ಇಲ್ಲಿನ ಮಠಾಧೀಶರೇ ಶ್ರೀ ಶ್ರೀ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ. ಇವರ

ಪೂರ್ವಾಶ್ರಮ ತಿಳಿದುಕೊಳ್ಳಬೇಕೆಂದರೆ – ಮಂಡ್ಯ ಜಿಲ್ಲೆ ಕೆ.ಆರ್. ಪೇಟೆಯ ಶ್ರೀನಿವಾಸ ಬಸ್ ಮಾಲೀಕರಾದ ಶ್ರೀ ಕೆ.ವಿ. ತಿಮ್ಮೇಗೌಡ ಮತ್ತು ಶ್ರೀಮತಿ ಸಣ್ಣಮ್ಮ ದಂಪತಿಗಳ ಸುಪುತ್ರರು. ಸ್ವಾಮಿಗಳ ಪೂರ್ವಾಶ್ರಮದ ಹೆಸರು ಗೋವಿಂದೇಗೌಡ. ಬಾಲ್ಯದಲ್ಲಿ ಎಲ್ಲರೊಂದಿಗೂ ಕಲೆತು ಬೆರೆತು ಆಟೋಟಗಳಲ್ಲಿ ಭಾಗವಹಿಸುತ್ತ ಕ್ರಮೇಣ ಬಿ.ಕಾಂ. ಪದವೀಧರರಾದರು. ಗೋವಿಂದೇಗೌಡರು ಪ್ರಾಪ್ತವಯಸ್ಸಿಗೆ ಬರುತ್ತಲೇ ಎಲ್ಲರಂತೆ ಅವರ ಮನಸ್ಸು ಲೌಕಿಕದ ಕಡೆಗೆ ಹರಿಯುವ ಬದಲು ಪಾರಮಾರ್ಥಿಕದ ಕಡೆಗೆ ಹರಿಯತೊಡಗಿತು. ಮೊದಮೊದಲು ಸಂಸ್ಕೃತ ಭಾಷೆಯನ್ನು ಕಲಿಯಲು ಅಷ್ಟಾಗಿ ಮನಸ್ಸು ಕೊಡಲಿಲ್ಲ. ಕಾರಣವೇನೆಂದರೆ ಒಂದು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆಯಲ್ಲಿ ತಿಳಿದುಕೊಳ್ಳುವುದು ಬೇಕಾದಷ್ಟಿದೆ, ಅದನ್ನು ಬಿಟ್ಟು ಬೇರೊಂದು ಭಾಷೆಯನ್ನೇಕೆ ಕಲಿಯಬೇಕು ಎನ್ನುತ್ತಿದ್ದರು. ಕಾಲಾನಂತರ ಸಂಸ್ಕೃತ, ಪ್ರಾಕೃತ ಭಾಷೆಗಳನ್ನು ಕಲಿತರು. ವೇದ, ವೇದಾಂಗ, ರಾಮಾಯಣ, ಮಹಾಭಾರತದಂತಹ ಉದ್ಗ್ರಂಥಗಳನ್ನು ಕರಗತ ಮಾಡಿಕೊಂಡರು. ಸಾತ್ವಿಕ ಸ್ವಭಾವದ ಸ್ವಾಮಿಗಳು ಪರೋಪಕಾರ ಬುದ್ಧಿಯುಳ್ಳವರಾಗಿದ್ದರು.

ಮಗನ ಈ ಸಾತ್ವಿಕ ಸ್ವಭಾವದ ಗುಣಗಳನ್ನು ಕಂಡು ತಂದೆಯವರಾದ ತಿಮ್ಮೇಗೌಡರು ಆದಿಚುಂಚನಗಿರಿ ಮಠದ ಗುರುಗಳ ಆಶ್ರಮಕ್ಕೆ ಬಿಟ್ಟರು. ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆ ಆಶ್ರಮವಾಸಿಗಳಾಗಿ ವೇದಾಧ್ಯಯನಕ್ಕೆ ಬಹಳ ಅನುಕೂಲವೇ ಆಯಿತು.

ಆದಿಚುಂಚನಗಿರಿ ಪೀಠಾಧಿಪತಿಗಳಾಗಿದ್ದ ಶ್ರೀ ಶ್ರೀ ಶ್ರೀ ರಮಾನಂದನಾಥ ಸ್ವಾಮೀಜಿಗಳು ಗೌಡರಿಗೆ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಎಂದು ಪುನರ್ ನಾಮಕರಣ ದೀಕ್ಷೆ ನೀಡಿದರು. ಹಾಗೂ ಚಂದ್ರಶೇಖರನಾಥರ ಆಸಕ್ತಿ ಉತ್ಸಾಹವನ್ನು ಬಹಳವಾಗಿ ಮೆಚ್ಚಿಕೊಂಡರು. ಅದೇ ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠದಲ್ಲಿ ಶ್ರೀ ಬಾಲಗಂಗಾಧರನಾಥರೂ ಕೂಡ ಚಂದ್ರಶೇಖರಸ್ವಾಮಿಗಳ ಸಹಪಾಠಿಗಳಾಗಿದ್ದರು. ಈ ಇಬ್ಬರೂ ಶ್ರೀ ಶ್ರೀ ಶ್ರೀ ರಮಾನಂದ ಸ್ವಾಮಿಗಳ ಮುಖ್ಯ ಶಿಷ್ಯರೇ ಆಗಿದ್ದುದರಿಂದ ತಮ್ಮ ಇಬ್ಬರು ಶಿಷ್ಯರನ್ನು ಉನ್ನತ ವ್ಯಾಸಂಗಕ್ಕಾಗಿ ಬೆಂಗಳೂರಿನ ಬಳಿಯಿರುವ ಕೆಂಚೇನಹಳ್ಳಿಯಲ್ಲಿರುವ ಶ್ರೀ ಕೈಲಾಸಾಶ್ರಮದಲ್ಲಿ ಶ್ರೀ ಶ್ರೀ ಶ್ರೀ ತಿರುಚ್ಚಿಮಹಾಸ್ವಾಮಿಗಳ ಗುರುಕುಲದಲ್ಲಿ ಅಧ್ಯಯನ ಮಾಡಲು ಕಳುಹಿಸಿಕೊಟ್ಟರು. ಸ್ವಾಮಿಗಳ ಸಾನ್ನಿಧ್ಯದಲ್ಲಿ ವೇದ, ಉಪನಿಷತ್ತುಗಳನ್ನು ಅಧ್ಯಯನ ಮಾಡತೊಡಗಿದರು. ಶ್ರೀ ಶ್ರೀ ಶ್ರೀ ಬಾಲ –ಗಂಗಾಧರನಾಥರು ಆದಿಚುಂಚನಗಿರಿ ಕ್ಷೇತ್ರದ ಪೀಠಾಧಿಪತಿಗಳಾದರು. ಇತ್ತ ಶ್ರೀ ಶ್ರೀ ಶ್ರೀ ಚಂದ್ರಶೇಖರನಾಥಸ್ವಾಮಿಗಳು ಗುರುಗಳ ಅಣತಿಯ ಮೇರೆಗೆ ಸುಮಾರು ಇಪ್ಪತ್ತು ವರ್ಷಗಳ ಕಾಲ ನಿರಂತರವಾಗಿ ಜಪ, ತಪ, ಧ್ಯಾನ ಇವೇ ಮುಂತಾದ

ಸಾತ್ವಿಕ ಜೀವನ ನಡೆಸಿದರು. ಮಿತಭಾಷಿಕರು, ಮೌನಿಗಳೂ ಆದ ಸ್ವಾಮಿಗಳು ಯಾವತ್ತೂ ಪ್ರಚಾರ ಪ್ರಿಯರಲ್ಲ ಹಾಗೂ ಯಾರಿಗೂ ಕೇಡು ಬಯಸುವವರಲ್ಲ.

ಈ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಒಕ್ಕಲಿಗ ಜನಾಂಗದ ಜನಸಂಖ್ಯೆ ಹೆಚ್ಚಿ ಮತ್ತೊಂದು ಮಠದ ಅಗತ್ಯವನ್ನು ಕೋರಿಕೊಳ್ಳಲಾಗಿ ಪ್ರಸ್ತುತ ಗುರುಜ್ಞಾನ ಕೇಂದ್ರವನ್ನು ಸ್ಥಾಪಿಸಿ ಭಕ್ತಾದಿಗಳ ಬೇಡಿಕೆಯನ್ನು ಪೂರೈಸುತ್ತಿದ್ದಾರೆ. ಈ ಪುಣ್ಯಕ್ಷೇತ್ರವು ದಿನೇ ದಿನೇ ಅಭಿವೃದ್ಧಿ ಹೊಂದುತ್ತಿದ್ದು, ಭಕ್ತಾದಿಗಳಿಗೆ ಆಧ್ಯಾತ್ಮಿಕದ ತಾಣವಾಗಿದೆ. ಮುಂದಾಲೋಚನೆಯುಳ್ಳ ಸ್ವಾಮಿಗಳು ನಗರದ ನಾಗರಿಕರಿಗೆ ಲೌಕಿಕದ ಜಂಜಾಟದಿಂದ ಹೊರಬಂದು ಕೆಲಕಾಲ ನೆಮ್ಮದಿಯಿಂದ ದೇವರ ಧ್ಯಾನ ಮಾಡಲು ಕೆಂಗೇರಿ ಬಳಿ ಮಠ ಸ್ಥಾಪಿಸಿದ್ದಾರೆ.

ಸ್ವಾಮಿಗಳು 63 ಅಡಿ ಎತ್ತರದ ಪಂಚಮುಖಿ ಗಣಪತಿಯನ್ನು ನಿರ್ಮಿಸುತ್ತಿ–ದ್ದಾರೆ. ಭಕ್ತಾದಿಗಳಿಗೆ ಅನುಕೂಲವಾಗಲೆಂದು ಮಠದಲ್ಲಿ ಧ್ಯಾನಮಂದಿರ, ಯೋಗ ಮಂದಿರಗಳನ್ನು ನಿರ್ಮಿಸುವ ಮೂಲಕ ಭಕ್ತಾದಿಗಳು ಯೋಗಾಭ್ಯಾಸ, ಧ್ಯಾನ ಇವೇ ಮುಂತಾದ ಸತ್ಸಂಗದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡಿದ್ದಾರೆ. ಉತ್ತಮ ಸಂಗೀತಗಾರರೂ ಆದ ಸ್ವಾಮಿಗಳು ಸಂಗೀತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದಾರೆ.

ಶಿಕ್ಷಣಕ್ಕೆ ಆದ್ಯತೆ : ಸುಶಿಕ್ಷಿತರಾದ ಸ್ವಾಮಿಗಳು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ನಾವು ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿರಿಸಿದ್ದರೂ ಗ್ರಾಮೀಣ ಭಾಗದಲ್ಲಿ ಬಡತನ ಇದ್ದೇ ಇದೆ. ಬತನದಲ್ಲಿರುವ ಕುಟುಂಬದ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಿದೆ, ಸ್ವಾಮಿಗಳು ಶಿಕ್ಷಣಕ್ಕೆ ಒತ್ತುಕೊಟ್ಟು ಆಶ್ರಮದಲ್ಲಿ ಶಾಲೆ ಪ್ರಾರಂಭಿಸಿದ್ದಾರೆ. ಪ್ರಾಥಮಿಕ ಶಿಕ್ಷಣದಿಂದ ಪ್ರೌಢಶಾಲಾ ಶಿಕ್ಷಣದವರೆಗೆ ನೂರಾರು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಮುಂದೆ ಇಂತಹ ಬಡವಿದ್ಯಾರ್ಥಿಗಳಿಗೆ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣವನ್ನು ನೀಡಬೇಕೆಂಬ ಹಂಬಲ ಸ್ವಾಮಿಗಳದಾಗಿದೆ. ತಾರೀಖು 4.5.2003ರಲ್ಲಿ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ದೇವೇಗೌಡರು ಮಠದ ಬೆಳ್ಳಿಹಬ್ಬದ ಉದ್ಘಾಟನೆ ಮಾಡಿದರು.

ಹೀಗೆ ಶ್ರೀ ಶ್ರೀ ಶ್ರೀ ಕುಮಾರ ಚಂದ್ರಶೇಖರಸ್ವಾಮಿಗಳು ಸಾಕಷ್ಟು ಮುಂದಾಲೋಚನೆ ಮತ್ತು ದೂರದೃಷ್ಟಿಯುನ್ನೊಂದಿದ್ದು ಮಠವನ್ನು ಸರ್ವರೀತಿಯಲ್ಲೂ ಅಭಿವೃದ್ಧಿಪಡಿಸಿ ಭಕ್ತಾದಿಗಳ ಆಶೋತ್ತರಗಳನ್ನು ನೆರವೇರಿಸಲು ತಮ್ಮ ಮಠವನ್ನು ಆಧ್ಯಾತ್ಮಿಕ ಕೇಂದ್ರವನ್ನಾಗಿ ಮಾಡಹೊರಟಿದ್ದಾರೆ.

ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಹಾಸಂಸ್ಥಾನ ಮಠ

ಕರ್ನಾಟಕದ ಇತಿಹಾಸದಲ್ಲಿ "ಅವಧೂತ ಪರಂಪರೆ"ಗೆ ಮಹತ್ವದ ಸ್ಥಾನವಿದೆ. ಪ್ರಾಚೀನ ಇತಿಹಾಸವಿರುವ ನಾಥ ಸಂಪ್ರದಾಯದ ಮುಂದುವರೆದ ಭಾಗವೇ ಶೈವ ಅವಧೂತ ಪರಂಪರೆ. ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಜಾತಿ ಭೇದ ಮರೆತು ಪೌರೋಹಿತ್ಯಶಾಹಿಯ ವಿರುದ್ಧ ನಡೆದ ರೈತ ಚಳವಳಿಯೊಂದಿಗೆ ಮತ್ತು ಅನಂತರ ಸಮಾಜದ ಇತರೆ ವರ್ಗಕ್ಕೆ ಸೇರಿದ ಅವಧೂತ ಮತ ಈ ನಾಡಿನುದ್ದಕ್ಕೂ ಬೆಳೆದು ಬಂದಿತು. ಮಂಟೇ ಸ್ವಾಮಿ, ಮಲೆಯ ಮಹದೇವ, **ಸಿದ್ಧಾರೂಢರು,** ನಾಯಕನಹಟ್ಟಿ ತಿಪ್ಪೇಸ್ವಾಮಿ, ಆದಿ ಚುಂಚನಗಿರಿಮಠದ ಶ್ರೀಗಳು, ಇವರೆಲ್ಲರೂ ಇದೇ ಅವಧೂತ ಪಂಥದವರು. ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಠವೂ ಕೂಡ ಈ ಮೇಲ್ಕಂಡ ವರ್ಗಕ್ಕೆ ಸೇರುತ್ತದೆ. ಇದರ ನೇತಾರ ನಂಜಾವಧೂತರು ಇದೇ ಶೈವ ಅವಧೂತ ಪರಂಪರೆಯವರು.

ಭೌಗೋಳಿಕವಾಗಿ ಬಯಲು ಸೀಮೆಗೆ ಸೇರುವ ಶ್ರೀ ಕ್ಷೇತ್ರ ಸ್ಫಟಿಕ ಪುರಿ ಮಠ ಐತಿಹಾಸಿಕವಾಗಿಯೂ ಪ್ರಸಿದ್ಧಿ ಪಡೆದಿದೆ. ಈ ಪ್ರದೇಶ ಹಿಂದೆ ಹೇಮಾವತಿಯ ನೊಳಂಬರ ಆಳ್ವಿಕೆಗೆ ಒಳಪಟ್ಟಿತ್ತು. ನಂತರ ಹೊಯ್ಸಳ, ವಿಜಯನಗರ, ಮೈಸೂರು ಒಡೆಯರ ಆಧೀನಕ್ಕೆ ಬಂದಿತು. ಅಲ್ಲದೆ ಮಧುಗಿರಿ ಹಾಗೂ ಸಿರಾ ಪಾಳೆಗಾರರು ಆಳ್ವಿಕೆ ನಡೆಸಿದ್ದಾರೆ. ಶ್ರೀ ಕ್ಷೇತ್ರ ಮಠವು ಸುಮಾರು 300 ವರ್ಷಗಳ ಇತಿಹಾಸ ಹೊಂದಿದೆ.

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಸಿರಾ – ಅಮರಾಪುರ ರಸ್ತೆಯಲ್ಲಿ 14 ಕಿ.ಮೀ. ಕ್ರಮಿಸಿ ಎಡಭಾಗಕ್ಕೆ ತಿರುವು ರಸ್ತೆಗೆ ಹೊರಳಿ 4 ಕಿ.ಮೀ. ಸಾಗಿದರೆ ಸಿಗುವುದೇ ಪಟ್ಟನಾಯಕನಹಳ್ಳಿ. ಈ ಊರಿನಲ್ಲಿರುವುದೇ ಶ್ರೀ ಗುರುಗುಂಡ ಬ್ರಹ್ಮೇಶ್ವರ ಮಠ ಅಥವಾ ನಂಜಪ್ಪಯ್ಯಸ್ವಾಮಿ ಮಠ. ಈ ಕ್ಷೇತ್ರವು ಸದ್ದು ಗದ್ದಲಗಳಿಂದ ದೂರವಿದ್ದು, ಪ್ರಶಾಂತ ಪರಿಸರದಲ್ಲಿ ನೆಲೆಯಾಗಿದೆ. ಹಾಗೂ ಆ ಭಾಗದ ಕಾಯಕ ಜೀವಿ ಭಕ್ತ ಸಮೂಹಕ್ಕೆ ಭಕ್ತಿ, ಜ್ಞಾನ, ಮೋಕ್ಷದ ಮಾರ್ಗವನ್ನು ತೋರಿಸುತ್ತಿದೆ. ಶ್ರೀ ಮಠವು ಒಕ್ಕಲಿಗರ ಉಪ ಪಂಗಡ ಕುಂಚಿಟಿಗರಿಗೆ ಸೇರಿದ ಸ್ವತಂತ್ರ ಮಠವಾಗಿದೆ.

ಮಠದ ಮೂಲ ಮತ್ತು ಗುರುಪರಂಪರೆ : ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ವಿಜಯಪುರ ಎಂಬುದು ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಠದ ಮೂಲ. ಮೌಖಿಕ ಇತಿಹಾಸದ (ಜನಪದ) ಪ್ರಕಾರ ಮೈಸೂರಿನಿಂದ ಉದಕ ಮಂಡಲ (ಊಟಿ) ನೀಲಗಿರಿ ಬೆಟ್ಟ ತಪ್ಪಲಲ್ಲಿ, ಮೈಸೂರು ಮಹಾರಾಜರು ರಸ್ತೆ ನಿರ್ಮಾಣ ಮಾಡುತ್ತಿದ್ದ ಸಮಯದಲ್ಲಿ, ದಾರಿಗೆ ಅಡ್ಡಲಾಗಿ ಬೆಳದ ಹುತ್ತವೊಂದನ್ನು ಅಗೆಯುತ್ತಿದ್ದಾಗ ತಪಸ್ವಿಯೊಬ್ಬರು ಎದ್ದು ಬಂದರು. ಆ ತಪಸ್ವಿಗಳು ಮುಂದೆ

ನೀಲಗಿರಿ ಸ್ವಾಮಿಗಳೆಂದು ಹೆಸರಾದರು. ನೀಲಗಿರಿ ಸ್ವಾಮಿಗಳು ಮೈಸೂರು ರಾಜ್ಯದ ಶ್ರೀರಂಗಪಟ್ಟಣಕ್ಕೆ ಬಂದು ಮಹಾರಾಜರನ್ನು ಆಶೀರ್ವದಿಸಿ ಅವರಿಂದ ಸತ್ಕಾರ ಪಡೆದು ದೇಶ ಸಂಚಾರ ಕೈಗೊಂಡರು. ಕೊನೆಗೆ ದೇವನಹಳ್ಳಿಯ ವಿಜಯಪುರದಲ್ಲಿ ನೆಲೆ ನಿಂತರು. ನೀಲಗಿರಿ ಶ್ರೀಗಳ ಪ್ರಭಾವಕ್ಕೆ ಒಳಗಾದ ಹಲವರಲ್ಲಿ ಬೇಗೂರು ಗ್ರಾಮದ ಕುಂಬಾರ ವೃತ್ತಿಯ ಗುರಪ್ಪ ಎಂಬುವರೂ ಒಬ್ಬರು. ಇವರು ಸಂಸಾರ ತ್ಯಜಿಸಿ ಸನ್ಯಾಸ ದೀಕ್ಷೆ ಪಡೆದರು. ಗುರುಗಳ ಮಾರ್ಗದರ್ಶನದಿಂದ ಆಧ್ಯಾತ್ಮಿಕ ಶಿಸ್ತು ಮತ್ತು ಜ್ಞಾನ ಪಡೆದರು. ಶ್ರೀಗಳು ಶಿಷ್ಯ ಗುರಪ್ಪನ ಹೆಸರು ಬದಲಾಯಿಸಿ ಶ್ರೀ ಗುರುಗುಂಡ ಬ್ರಹ್ಮೇಶ್ವರ –ಸ್ವಾಮಿ ಎಂದು ಪುನರ್ ನಾಮಕರಣ ಮಾಡಿದರು. ವಿಜಯಪುರವು ಆ ಭಾಗದ ಶ್ರದ್ಧಾವಂತ ಆಸ್ತಿಕ ಜನರ ಆಧ್ಯಾತ್ಮಿಕ ಕೇಂದ್ರವಾಯಿತು. ಶ್ರೀ ಕ್ಷೇತ್ರ ಮಠವಾಗಿ ಬೆಳೆಯಿತು.

ಶ್ರೀ ನೀಲಗಿರಿ ಸ್ವಾಮಿಗಳು ಕೈವಲ್ಯರಾದ ಮೇಲೆ ಶ್ರೀ ಮಠಕ್ಕೆ ಶ್ರೀ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿಗಳು ಪೀಠಾಧ್ಯಕ್ಷರಾದರು. ಇದೇ ಸಮಯದಲ್ಲಿ ಇಬ್ಬರು ಕುಂಚಟಿಗ ವಟುಗಳಾದ ಶ್ರೀ ನಂಜಾವದೂತ ಮತ್ತು ಶ್ರೀ ಸಹಜಾನಂದ ಎಂಬ ಶಿಷ್ಯರು ಶ್ರೀ ಗುರುಗುಂಡ ಬ್ರಹ್ಮೇಶ್ವರರ ಶಿಷ್ಯತ್ವ ಸ್ವೀಕರಿಸಿದರು. ಇಬ್ಬರು ಶಿಷ್ಯರ ಸಹಕಾರದಿಂದ ಶ್ರೀಗಳು ಮಠದಲ್ಲಿ ಶ್ರೀ ಓಂಕಾರೇಶ್ವರ ವಿಗ್ರಹ ಪ್ರತಿಷ್ಠಾಪಿಸಿ ದೇವಾಲಯವನ್ನು ನಿರ್ಮಿಸಿದರು. ಒಂದು ನೂರು ಲಿಂಗ ಪ್ರತಿಷ್ಠಾಪಿಸಿದರು. ಹಾಗೂ ಒಂದು ಪುಷ್ಕರಣಿಯನ್ನೂ ನಿರ್ಮಿಸಿದರು. ಮಠವನ್ನು ಒಂದು ಆಧ್ಯಾತ್ಮಿಕ ಕೇಂದ್ರವಾಗಿ ಅಭಿವೃದ್ಧಿಪಡಿಸಿದರು. ಶ್ರೀ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿಗಳು ನಂಜಾವಧೂತರಿಗೆ ಹಠಯೋಗವನ್ನು, ಶ್ರೀ ಸಹಜಾನಂದರಿಗೆ ಜ್ಞಾನ ದೀಕ್ಷೆಯನ್ನು ನೀಡಿದರು. ಇವರಿಬ್ಬರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪ್ರೌಢಿಮೆ ಸಂಪಾದಿಸಿದ ತರುವಾಯ ಪುಣ್ಯಕ್ಷೇತ್ರ –ಗಳಿಗೆ ಯಾತ್ರೆ ಕೈಗೊಂಡರು. ಯಾತ್ರೆಯುದ್ದಕ್ಕೂ ಭಕ್ತಿಯನ್ನು ಪ್ರಚಾರ ಮಾಡುತ್ತಾ ಭಕ್ತ ವೃಂದವನ್ನು ಸಂಘಟಿಸುವ ಕಾರ್ಯ ಕೈಗೊಂಡರು. ದೊಡ್ಡ ಮತ್ತು ಚಿಕ್ಕಬಳ್ಳಾಪುರ, ಕೊರಟಗೆರೆ, ಮಧುಗಿರಿ, ಶಿರಾ, ಮಡಕಶಿರಾ ಪ್ರದೇಶಗಳಲ್ಲಿ ನಂಜಾವಧೂತರ ಕೀರ್ತಿ ಹಬ್ಬಿತು. ಕೃಷಿಕ ಜನ ಸಮುದಾಯದಲ್ಲಿ ಭಕ್ತಿಯು ಬೀಜಾಂಕುರವಾಯಿತು. ಇವರ ಪವಾಡ ಪ್ರವಚನಗಳಿಂದ ಜನರು ಪ್ರಭಾವಿತರಾದರು. ಸ್ಫಟಿಕ ಪುರಿಯ (ಪಟ್ಟನಾಯಕನ ಹಳ್ಳಿ) ಸುತ್ತಮುತ್ತಲಿನ ಗ್ರಾಮಸ್ಥರು ಒಟ್ಟುಗೂಡಿ ನಂಜಾವಧೂತರು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರಾ ತಾಲ್ಲೂಕಿನ ಹೇಮಾವತಿಯಲ್ಲಿ ತಂಗಿದ್ದಾಗ ಶ್ರೀಗಳು ತಮ್ಮಲ್ಲಿಗೆ ಬರುವಂತೆ ಒತ್ತಾಯಿಸಲಾರಂಭಿಸಿದರು.

ಅದೇ ಸಮಯಕ್ಕೆ ಶಿಷ್ಯನ ಖ್ಯಾತಿಗೆ ಸಂತೋಷಪಟ್ಟ ಶ್ರೀ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿಗಳು ಶಿಷ್ಯನನ್ನು ಅರಸುತ್ತಾ ವಿಜಯಪುರದಿಂದ ಹೇಮಾವತಿಗೆ (ಮಡಕಶಿರಾ) ಬಂದರು. ಇವರ ಸಮ್ಮುಖದಲ್ಲಿಯೇ ಸ್ಫಟಿಕಪುರಿಯ ಸಮಸ್ತ ಜನರು

ತಮ್ಮಲ್ಲಿಗೆ ಬಂದು ನೆಲೆಸಬೇಕೆಂದೂ, ಮಠ ಸ್ಥಾಪನೆಗೆ ಬೇಕಾದ ಎಲ್ಲಾ ನೆರವನ್ನೂ ನೀಡುತ್ತೇವೆಂದೂ ನಿವೇದಿಸಿಕೊಂಡರು. ಇಷ್ಟಾದರೂ ನಂಜಾವಧೂತರಿಗೆ ಶ್ರೀ ಸ್ಫಟಿಕ ಪುರಿಯಲ್ಲಿ ನೆಲೆಸುವುದಾಗಲೀ, ಮಠ ಸ್ಥಾಪನೆಯ ಉದ್ದೇಶವೂ ಇಲ್ಲದೆ ನಿರಾಕರಿಸುತ್ತಾ ಬಂದರು. ಕೊನೆಗೆ ಗುರುಗುಂಡರು ನಾನು ನಿನ್ನ ಜೊತೆಯಲ್ಲಿಯೇ ಇರುತ್ತೇನೆ ನನ್ನ ಕೈವಲ್ಯ ಕೂಡ ಸ್ಫಟಿಕಪುರಿಯಲ್ಲಿಯೇ ಆಗಲಿದೆ, ಅಲ್ಲಿಯೇ ಮಠ ಸ್ಥಾಪನೆಯಾಗ –ಬೇಕೆಂಬುದು ಭಗವಂತನ ಇಚ್ಛೆ ಒಪ್ಪಿಕೋ ಎಂದಾಗ ನಂಜಾವಧೂತರು ಒಪ್ಪಿ ತಮ್ಮ ಗುರುವಿನೊಡನೆ ಪಟ್ಟನಾಯಕನಹಳ್ಳಿಗೆ ಬಂದರು. ನಂಜಾವಧೂತರ ಶಿಷ್ಯ ಸಂಕುಲ ಕೊಟ್ಟ ಮಾತಿನಂತೆ ಮಠ ಸ್ಥಾಪನೆ, ಭೂಮಿಯನ್ನು ಒಳಗೊಂಡಂತೆ ಎಲ್ಲಾ ನೆರವನ್ನೂ ನೀಡಿದರು. ಗುರುಗಳ ಮಾರ್ಗದರ್ಶನದಂತೆ ಮಠವನ್ನು ಕಟ್ಟಿಸಿದರು. ಗುರುಗುಂಡರು ಬದುಕಿರುವಾಗಲೇ ಅವರ ಹೆಸರಿನಲ್ಲಿ ಒಂದು ಮಹಾಲಿಂಗ ಸ್ಥಾಪನೆ –ಯಾಯಿತು. ಶ್ರೀಗಳ ಹಸ್ತದಿಂದ ವಿನಾಯಕ, ನವಗ್ರಹ, ಸೂರ್ಯನಾರಾಯಣ, ಭಕ್ತಾಂಜನೇಯ ದೇವರುಗಳ ವಿಗ್ರಹ ಪ್ರತಿಷ್ಠಾಪನೆಯಾಯಿತು. ಮುಂದೆ ಮಹಾಲಿಂಗ ಸೇರಿಕೊಂಡಂತೆ ದ್ರಾವಿಡ ಶೈಲಿಯ ಮುಖ್ಯ ದೇವಾಲಯವು ನಿರ್ಮಾಣಗೊಂಡಿತು. ವಯಸ್ಸಾದ ಶ್ರೀ ಗುರುಗುಂಡ ಬ್ರಹ್ಮೇಶ್ವರರು ಶ್ರೀ ಸ್ಫಟಿಕಪುರಿ ಮಠ ಮತ್ತು ವಿಜಯ ಮಠಕ್ಕೆ ಶ್ರೀ ನಂಜಾವಧೂತರನ್ನೇ ಪೀಠಾಧಿಪತಿಗಳಾಗಿ ನೇಮಿಸಿದರು. ಶ್ರೀ ಮಠದಲ್ಲೇ ಜೀವೈಕ್ಯರಾದರು.

ಪೂರ್ವಾಶ್ರಮದಲ್ಲಿ ನಂಜಪ್ಪ ಎಂಬ ಹೆಸರನ್ನು ಹೊಂದಿದ್ದ ಶ್ರೀಗಳು ಅವಧೂ –ತತ್ವವನ್ನು ಪಡೆದು ನಂಜಾವಧೂತರಾದರು. ಇದರೊಂದಿಗೆ ಪಟ್ಟನಾಯಕನಹಳ್ಳಿ ಮಠದಲ್ಲಿ ಕುಂಚಟಿಗ ಜನಾಂಗಕ್ಕೆ ಸೇರಿದ ಸ್ವಾಮೀಜಿಯ ಪರಂಪರೆ ಆರಂಭವಾಯಿತು.

ಸುಮಾರು 19ನೆಯ ಶತಮಾನದ ಮಧ್ಯಭಾಗದಲ್ಲಿ ನಂಜಾವಧೂತ ಸ್ವಾಮಿಗಳು ಸ್ಫಟಿಕಪುರ ಮತ್ತು ವಿಜಯಪುರ ಎರಡು ಮಠಗಳಿಗೂ ಪೀಠಾಧಿಪತಿಗಳಾದರು. ಅವರಿಂದ ಆರಂಭವಾದ ಗುರುಪರಂಪರೆ ಏಳು ತಲೆಮಾರುಗಳ ಕಾಲ ಹಾಗೆಯೇ ಮುಂದುವರೆದುಕೊಂಡು ಬಂದಿದೆ. ಪ್ರಥಮ ಪೀಠಾಧಿಪತಿಗಳಾಗಿ ಗುರುಪರಂಪರೆ –ಯನ್ನು ಆರಂಭಿಸಿದ ಶ್ರೀಗಳು ಶ್ರೀ ಮಠವನ್ನು ಮತ್ತಷ್ಟು ಅಭಿವೃದ್ಧಿಪಡಿಸಿ ಗುರುಕುಲ –ವಾಗಿ, ಆಧ್ಯಾತ್ಮಿಕ ಕೇಂದ್ರವನ್ನಾಗಿಸಿದರು. ಇವರ ಪೂರ್ವಾಪರ ಮತ್ತು ಸಾಧನೆಯ ಕುರಿತು "ಶ್ರೀ ನಂಜಾವಧೂತ ಯಕ್ಷಗಾನ" ಗ್ರಂಥವು ರಚನೆಗೊಂಡಿದ್ದು ಇವರ ಕೀರ್ತಿಯನ್ನು ತಿಳಿಸುತ್ತದೆ. ಅವರ ಉತ್ತರಾಧಿಕಾರಿಯಾಗಿ ಶ್ರೀ ರಂಗಾವಧೂತರು (19ನೆಯ ಶತಮಾನದ ಉತ್ತರಾರ್ಧ), ಮೂರನೆಯವರಾಗಿ ಶ್ರೀ ರಂಗಾವಧೂತರು, 4ನೆಯದಾಗಿ ಮುದ್ದರಂಗಾವಧೂತರು (20ನೆಯ ಶತಮಾನ), 5ನೆಯವರಾಗಿ ಪರಮಂಸಾವಧೂತರು, ಆರನೆಯವರಾಗಿ ಕುಮಾರಾವಧೂತರು ಪಟ್ಟಾಭಿಷಕ್ತರಾದರು.

ನಂತರ 2ನೇ ನಂಜಾವಧೂತರು (ಈಗಿನ ಸ್ವಾಮಿಗಳು) 7ನೆಯವರಾಗಿ ಈಗ ಪೀಠಾಧಿಪತಿಗಳಾಗಿದ್ದಾರೆ.

ಶ್ರೀ ಶ್ರೀ ಶ್ರೀ ಇಮ್ಮಡಿ ನಂಜಾವಧೂತ ಸ್ವಾಮಿಗಳು



7ನೇ ಪೀಠಾಧ್ಯಕ್ಷರಾಗಿರುವ ಶ್ರೀ ಶ್ರೀ ಇಮ್ಮಡಿ ನಂಜಾವಧೂತ ಸ್ವಾಮಿಗಳವರು 21.4.1979ರಿಂದ ಯಾದಲಡರಿನ ಕುಂಚಿಟಿಗ ಒಕ್ಕಲಿಗ ಸಮುದಾಯಕ್ಕೆ ಸೇರಿದ ಎಮ್ಮೆನೋರು ಬೆಡಗಿನ (ಗೋತ್ರದ) "ಹಿರಿಮನೆ" ಗೌಡರ ಮನೆಯಲ್ಲಿ ಜನಿಸಿದರು. ಪೂರ್ವಾಶ್ರಮದ ಇವರ ಹೆಸರು ಗೀರೀಶ್ ಕುಮಾರ್. ಮೊದಲನೆ ನಂಜಾವಧೂತರು ಗುರು ಪರಂಪರೆಯ ಏಳನೆಯ ತಲೆಯಲ್ಲಿ "ನಾನು ಮತ್ತೆ ಬಾಲಕನಾಗಿ ಹುಟ್ಟುತ್ತೇನೆ" ಎಂದು ಹೇಳಿದ ಮಾತು ಜನಜನಿತವಾಗಿರುವುದರಿಂದ, ಗುರು ಕುಮಾರಾವಧೂತರು ತಮ್ಮ ಮುಂದಿನ ಪೀಠಾಧಿಕಾರಿಯನ್ನಾಗಿ ಇವರನ್ನು ಆಯ್ಕೆ ಮಾಡಿದಾಗ, ಈಗ ಏಳನೆಯ ಪೀಠಕ್ಕೆ ಬರುವವರೇ ಮೊದಲ ನಂಜಾವಧೂತರ ಅವತಾರಿಗಳೆಂದು ನಂಬಲಾಯಿತು. ಈ ಹಿನ್ನೆಲೆಯಲ್ಲಿ ಪೂರ್ವಾಶ್ರಮದ ಗೀರೀಶ್‌ಕುಮಾರ್‌ರವರನ್ನು "ನಂಜಾವಧೂತ" ರೆಂದು ಕರೆದು ಮರು ನಾಮಕರಣ ಮಾಡಲಾಯಿತು. ಅವರಿಗೆ ಸನ್ಯಾಸದ ದೀಕ್ಷೆ ನೀಡಿ 20.2.1990ರಂದು ಅಂದರೆ ಅವರ 11ನೇ ವರ್ಷಕ್ಕೆ ಸರಿಯಾಗಿ ಪೀಠಾರೋಹಣ ಮಾಡಿದರು. ನಂತರ ಆಧ್ಯಾತ್ಮಿಕ ಶಿಕ್ಷಣ ಕಲಿಕೆಗಾಗಿ ಇವರು ಶ್ರೀ ಆದಿ ಚುಂಚನಗಿರಿಯ ಸಂಸ್ಕೃತ ಪಾಠಶಾಲೆಗೆ ಸೇರಿ ವೇದ, ಆಗಮಗಳ ಅಧ್ಯಯನ ನಡೆಸಿದರು. ಇದರಲ್ಲಿ ಪಾಂಡಿತ್ಯ ಪಡೆದರು. ಇವರು ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಮಾರ್ಗದರ್ಶನದಲ್ಲಿ ಶಿಕ್ಷಣ ಪಡೆದು ಆಧ್ಯಾತ್ಮಿಕ ಜ್ಞಾನ ಸಂಪಾದಿಸಿದ್ದಾರೆ. ಗುರು ಕುಮಾರುವಧೂತರು ಕೈವಲ್ಯರಾದ ನಂತರ 1996ರ ಮಾರ್ಚ್ 24ರಂದು ಶ್ರೀ ಶ್ರೀ ಇಮ್ಮಡಿ ನಂಜಾವಧೂತಸ್ವಾಮಿಗಳ ಪಟ್ಟಾಭಿಷಿಕ್ತರಾದರು.

ಏಳನೇ ಪೀಠಾಧ್ಯಕ್ಷರಾಗಿ ಶ್ರೀಗಳರವರು ಪೀಠಾರೋಹಣ ಮಾಡಿದ ಶುಭ ಅಮೃತಘಳಿಗೆಯಿಂದ ಶ್ರೀ ಕ್ಷೇತ್ರವು ಸರ್ವತೋಮುಖ ಅಭಿವೃದ್ಧಿಗೊಳ್ಳುತ್ತಿದೆ.

ಈ ಮಠವು ಹಿಂದೆ ಎಲೆಮರೆ ಕಾಯಿಯಂತಿದ್ದು ಈಗ ನಾಡಿನಲ್ಲಿ ಪ್ರಸಿದ್ಧ -ವಾಗಿದೆ. ಶ್ರೀಗಳು ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ಸಮಾಜಸೇವಾ ಕ್ಷೇತ್ರಗಳ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಈ ಭಾಗದ ಜನಸೇವೆಯಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದಾರೆ.

ಶ್ರೀ ಕ್ಷೇತ್ರದಲ್ಲಿ ನಡೆಯುವ ಪೂಜೆ, ಧಾರ್ಮಿಕ ಉತ್ಸವ ಕಾರ್ಯಕ್ರಮಗಳು

ಶ್ರೀ ಮಠದಲ್ಲಿ ಶ್ರೀಗಳು ಪೀಠಾರೋಹಣ ಮಾಡಿದ ನೆನಪಿಗಾಗಿ ಮತ್ತು ಜನ್ಮದಿನದ ನೆನಪಿಗಾಗಿ ಗುರುವಂದನಾ ಮತ್ತು ಜಯಂತ್ಯೋತ್ಸವ ಕಾರ್ಯಕ್ರಮ ಅದ್ಧೂರಿಯಾಗಿ ನಡೆಯುತ್ತದೆ. ಅಂದು ಉಚಿತ ಹಾಗೂ ಸರಳ ವಿವಾಹ ಸಮಾರಂಭ ನಡೆಸಲಾಗುತ್ತದೆ. ಶ್ರೀ ಕ್ಷೇತ್ರವು ಮೊದಲಿನಿಂದಲೂ ಗುರುಪೀಠ, ಗುರುಕುಲಾಶ್ರಮವಿದ್ದು ನೂರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ. ಪ್ರಾಥಮಿಕ ತರಗತಿಯಿಂದ ಬಿ.ಎ., ಬಿ.ಎಡ್., ವರೆಗೆ ಶಾಲಾ ಕಾಲೇಜುಗಳನ್ನು ತೆರೆದು ಉಚಿತ ವಸತಿಯಿಂದ ಶಿಕ್ಷಣ ನೀಡಲಾಗುತ್ತಿದೆ. ಬಂದ ಭಕ್ತ ಜನರಿಗೆ ಪ್ರತಿನಿತ್ಯ ಉಚಿತ ಪ್ರಸಾದ ವಿನಿಯೋಗ ವ್ಯವಸ್ಥೆ, ವಸತಿ ವ್ಯವಸ್ಥೆ ಮಾಡಲಾಗಿದೆ. ಶ್ರೀ ಕ್ಷೇತ್ರದಲ್ಲಿ ನಡೆಯುವ ಮತ್ತೊಂದು ಪ್ರಮುಖ ಕಾರ್ಯಕ್ರಮ ಜನವರಿ ತಿಂಗಳಿನಲ್ಲಿ ನಡೆಯುವ ವಾರ್ಷಿಕ ರಥೋತ್ಸವ ಮತ್ತು ಭಾರೀ ದನಗಳ ಜಾತ್ರೆ ಈ ನಾಡಿನಲ್ಲೇ ಪ್ರಖ್ಯಾತಿ ಪಡೆದುಕೊಂಡಿದೆ. ಜಾತ್ರೆ ಸಂದರ್ಭದಲ್ಲಿ ಆಧುನಿಕ ಕೃಷಿ, ಕೈಗಾರಿಕೆ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗುತ್ತದೆ. ಪ್ರಗತಿಪರ ರೈತರಿಗೆ ಮತ್ತು ಉತ್ತಮ ರಾಸುಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಪ್ರತಿವರ್ಷ ಮಠದವತಿಯಿಂದ ಉಚಿತ ನೇತ್ರ ಚಿಕಿತ್ಸಾ ಕಾರ್ಯಕ್ರಮ ನಡೆಸಲಾಗುತ್ತದೆ. ಮಠದ ವತಿಯಿಂದ ಸಾವಿರಾರು ಸಸಿ ನಡೆವುದರ ಮೂಲಕ ಈ ಭಾಗದ ವನಮಹೋತ್ಸವ ಕಾರ್ಯಕ್ರಮವನ್ನು, ಗೋಶಾಲೆಯನ್ನೂ ನಡೆಸುತ್ತಿದ್ದಾರೆ.

ಈ ಮಠ ಕುಂಚಿಟಿಗ ಒಕ್ಕಲಿಗ ಗುರುಪರಂಪರೆಯನ್ನು ಹೊಂದಿದ್ದರೂ ಎಂದೂ ಅದೊಂದೇ ಜಾತಿಗೆ ಸೀಮಿತವಾಗಿ ಉಳಿಯದೆ ಜಾತ್ಯತೀತ ನೆಲೆಯಲ್ಲಿ ಎಲ್ಲರನ್ನೂ ತನ್ನ ಒಡಲೊಳಗೆ ಇಟ್ಟಿಕೊಂಡಿದೆ. ಈ ಮಠದ ಪುರೋಭಿವೃದ್ಧಿಗೆ ದುಡಿದ ಮಹನೀಯರಾದ ಶ್ರೀ ಬಿ.ಎಂ. ಕರೇಗೌಡರು ಒಕ್ಕಲಿಗ ಜನಾಂಗಕ್ಕೆ ಕಲಶಪ್ರಾಯರಾದವರು. ಮೈಸೂರು ಪ್ರಜಾಪ್ರತಿನಿಧಿ ಸಭೆಯ (1882)ಲ್ಲಿ ಸದಸ್ಯರಾಗಿದ್ದ ಶ್ರೀ ಕರೇಗೌಡರು ಮೈಸೂರು ಮಹಾರಾಜರ ಸಮೀಪವರ್ತಿಗಳಾಗಿದ್ದುಇವರು ಮಠಕ್ಕೆ ಹೆಚ್ಚಿನ ಮಾನ್ಯತೆ ಮತ್ತು ಉಂಬಳಿಯನ್ನು ದೊರಕಿಸಿಕೊಟ್ಟರು. ತಮ್ಮ ಜೀವಿತದವರೆಗೂ ಮಠದ ಏಳಿಗೆಗಾಗಿ ದುಡಿದರು. ಹಾಗೂ ಮಠದ ವತಿಯಿಂದ ಪ್ರತಿ ತಿಂಗಳು ನಾಲ್ಕನೆ ಭಾನುವಾರ “ದೃಷ್ಠಿ” ಯೋಜನೆಯ ಮೂಲಕ ಉಚಿತ ನೇತ್ರ ಚಿಕಿತ್ಸಾ ತಪಾಸಣೆ ಕಾರ್ಯಕ್ರಮ ನಡೆಯುತ್ತಿದೆ. ಹೀಗೆ ಶ್ರೀ ಕ್ಷೇತ್ರ ಸ್ಫಟಿಕ ಪುರ ಮಠವು ಶ್ರೀಗಳ ನೇತೃತ್ವದಲ್ಲಿ ತ್ರಿವಿಧ ದಾಸೋಹ ಮಹಾಕಾರ್ಯದಲ್ಲಿ ಮುನ್ನಡೆಯುತ್ತಿದೆ.

ಒಕ್ಕಲಿಗರ ಮತ್ತು ರೈತ ಸಂಘ

ರೈತ ಸಂಘಟನೆಯ ಹುಟ್ಟು ಮತ್ತು ಬೆಳವಣಿಗೆ (ರೈತಸಂಘ)

ದೇಶಕ್ಕೆ ಸ್ವಾತಂತ್ರ್ಯ ಬಂದ ಮೂರು ದಶಕಗಳ ನಂತರ ರೈತ ಪರ ಧ್ವನಿ ಎತ್ತಿ ಸಂಘಟಿತವಾಗಿ ಭುಗಿಲೇಳತೊಡಗಿತು. ಉತ್ತರ ಭಾರತದಲ್ಲಿ ಚೌಧರಿ ಚರಣ್ ಸಿಂಗ್, ದೇವೀಲಾಲ್, ರಾಜನಾರಾಯಣ್, ಮಹೇಂದ್ರ ಟಿಕಾಯತ್, ಮಹಾರಾಷ್ಟ್ರದಲ್ಲಿ ಶರದ್ ಜೋಷಿ, ತಮಿಳುನಾಡಿನಲ್ಲಿ ನಾರಾಯಣಸ್ವಾಮಿ ಇನ್ನೂ ಮುಂತಾದ ನಾಯಕರು ದನಿಯಿಲ್ಲದ ರೈತರ ದನಿಯಾಗಲಾಗಿ ರೈತಾಪಿ ಜನರ ಕಣ್ಣಲ್ಲಿ ಮಹಾನ್ ನಾಯಕರಾದರು. ಇವರಲ್ಲಿ ಪಂಜಾಬ್‌ನ ಶ್ರೀ ಚೌದರೀ ಚರಣ್ ಸಿಂಗ್ ಭಾರತದ ಪ್ರಧಾನಮಂತ್ರಿಗಳಾದರೆ, ಶ್ರೀ ದೇವೀಲಾಲ್‌ರವರು ಉಪಪ್ರಧಾನಿಯಾದರು.

ಅದೇ ರೀತಿ ಕರ್ನಾಟಕದಲ್ಲಿ ಪ್ರೊ. ನಂಜುಂಡಸ್ವಾಮಿ, ಎಂ.ಡಿ. ಸುಂದರೇಶ್, ಪೂರ್ಣಚಂದ್ರ ತೇಜಸ್ವಿ, ಕಡಿದಾಳ್ ಶಾಮಣ್ಣ, ಎಂ. ಶ್ರೀನಿವಾಸ್ ಇನ್ನೂ ಮುಂತಾದ ಸಮಾಜವಾದಿಗಳು ರಾಜ್ಯದಲ್ಲಿ ಸಮಾಜವಾದಿ ಯುವಜನ ಸಭಾ ಸಂಘಟನೆಯನ್ನು ಕಟ್ಟಿಕೊಂಡು ಅಂತರಜಾತಿ ವಿವಾಹ, ಸರಳ ವಿವಾಹ, ಮಂತ್ರಮಾಂಗಲ್ಯ (ಕುವೆಂಪುರವರ ಪರಿಕಲ್ಪನೆ) ಇವೇ ಮುಂತಾದ ತತ್ವಾದರ್ಶಗಳಿಂದಾಗಿ ಜನಪ್ರಿಯರಾದರು. ನಂತರ ಅವರ ದೃಷ್ಟಿ ಅಸಂಘಟಿತರ ಕಡೆ ತಿರುಗಲಾಗಿ ರೈತ ಚಳವಳಿಯು ಗಂಭೀರ ರೂಪ ಪಡೆಯಿತು.

1931ರ ದಶಕದಲ್ಲಿ ಸ್ಥಾಪಿಸಲ್ಪಟ್ಟ "ಅಖಿಲ ಭಾರತ ಕಿಸಾನ್ ಸಭಾ" (ಉತ್ತರ ಭಾರತದಲ್ಲಿ ಸ್ಥಾಪನೆ) ಅದರ ಅಂಗ ಸಂಸ್ಥೆಯೇ "ಪ್ರಾಂತ ರೈತ ಸಂಘ" ಎಂಬುದು 1980ರ ದಶಕದಲ್ಲಿ ಕರ್ನಾಟಕದಲ್ಲಿ ಸ್ಥಾಪನೆಯಾಯಿತು. ಪ್ರಪ್ರಥಮ ಬಾರಿಗೆ 1980ರಲ್ಲಿ ಉತ್ತರ ಕರ್ನಾಟಕದಲ್ಲಿ ಬೆಳೆಹಾನಿ, ಬರ ಇವೇ ಮುಂತಾದ ಸಂಕಷ್ಟಗಳಿಗೆ ತುತ್ತಾದ ರೈತರು ಸರ್ಕಾರದ ವಿರುದ್ಧ ಸಿಡಿದೆದ್ದರು. ಅದೇ ವರ್ಷ "ಮಲಪ್ರಭಾ ನೀರಾವರಿ ಸಮನ್ವಯ ಸಮಿತಿ" ಎಂಬ ಹೆಸರಿನಲ್ಲಿ ನವಲಗುಂದ, ಸವದತ್ತಿ ಮತ್ತು ರಾಮದುರ್ಗ ಪ್ರದೇಶದ ರೈತರು ಸಂಘಟಿತರಾಗಿ ಈ ಮೇಲ್ಕಂಡ ಸಮಿತಿಯನ್ನು ರಚಿಸಿಕೊಂಡರು. ಹಳೇ ಮೈಸೂರು ಪ್ರಾಂತ್ಯದಲ್ಲಿ 1982 ಅಕ್ಟೋಬರ್ 2 ಗಾಂಧಿ ಜಯಂತಿಯಂದು ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ರುದ್ರಪ್ಪನವರ ನೇತೃತ್ವದಲ್ಲಿ ಶಿವಮೊಗ್ಗದಲ್ಲಿ (ಹಿಂದೊಮ್ಮೆ ಕಾಗೋಡು ಸತ್ಯಾಗ್ರಹದ ಕೇಂದ್ರವಾಗಿತ್ತು) "ಕರ್ನಾಟಕ ರಾಜ್ಯ ರೈತ ಸಂಘ" ಎಂಬ ಹೆಸರಿನಲ್ಲಿ ಜನ್ಮ ತಾಳಿತು. ಪ್ರೊ ಎಂ.ಡಿ. ನಂಜಂಡಸ್ವಾಮಿ, ಎನ್.ಡಿ. ಸುಂದರೇಶ್, ಕಡಿದಾಳ್ ಶಾಮಣ್ಣನವರೇ ಅಲ್ಲದೆ ಚಿಂತಕರು ಸಾಹಿತಿಗಳು ಆದ ಪೂರ್ಣಚಂದ್ರ ತೇಜಸ್ವಿ, ಪ್ರೊ. ರಾಮದಾಸ್, ಜಾನಪದ ತಜ್ಞರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡ, ಹೆಚ್.ಎಲ್. ಕೇಶವಮೂರ್ತಿ ಸಮಾಜದ ಬುದ್ಧಿಜೀವಿಯೂ,

ನ್ಯಾಯವಾದಿಯಾದ ಪ್ರೊ. ರವಿವರ್ಮ ಕುಮಾರ್, ಬೆಳಗಾವಿಯ ಬಾಬಾಗೌಡ ಪಾಟೀಲ್, ಉತ್ತರ ಕರ್ನಾಟಕ ಬಸವರಾಜಪ್ಪ, ಹನುಮನ ಗೌಡ, ಶಿವಮೊಗ್ಗದ ಎನ್. ಗಂಗಾಧರ್, ಹಾಸನದ ಮಂಜುನಾಥದತ್ತ, ಆರ್.ಪಿ. ವೆಂಕಟೇಶ್ ಮೂರ್ತಿ, ಮಂಡ್ಯದ ಎಸ್. ಶ್ರೀನಿವಾಸ್, ಕೃಷಿಕ ಕೆ. ಬೋರಯ್ಯ ಇನ್ನೂ ಮುಂತಾದ ಪ್ರಜ್ಞಾವಂತರು ರೈತ ಸಂಘವನ್ನು ಕಟ್ಟಲು ಅಹರ್ನಿಶಿ ದುಡಿದರು.

ರೈತ ಸಂಘದ ಜನಪ್ರಿಯತೆ

ಸಮಾಜದ ಬುದ್ಧಿಜೀವಿಗಳು, ಸಾಹಿತಿಗಳು, ಚಿಂತಕರು ಮೇಲಾಗಿ ಉತ್ತಮ ವಾಗ್ಮಿಗಳಾದ ಈ ಜನ ರೈತ ಸಂಘಕ್ಕೆ ಕಾಯಕಲ್ಪ ನೀಡಿದರು. ಅಸಂಘಟಿತರು, ಅವಿದ್ಯಾವಂತರು (ಬಹುತೇಕ) ಆದ ರೈತರ ಬಾಳಿನಲ್ಲಿ ಹೊಸಶಕ್ತಿಯು ಸಂಚಲನವಾಯಿತು. ರೈತರ ಸಂಕಟ ಮತ್ತು ಸಮಸ್ಯೆಗಳಿಗೆ ಹಾಗೂ ಸವಾಲುಗಳಿಗೆ ಪ್ರತ್ಯುತ್ತರ ನೀಡ ಹೊರಟರು. ಕರ ಭರ, ಸಾಲ ಬಾಧೆ, ಬೆಳೆ ಹಾನಿ, ರೈತರು ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದೆ ತೊಂದರೆ ಪಡುತ್ತಿದ್ದ ರೈತರು, ದಲ್ಲಾಳಿಗಳ ಶೋಷಣೆಯ ವಿರುದ್ಧ ಹೋರಾಡಲು ರೈತ ಸಂಘವು ಸಮರ್ಥವಾಯಿತು. ರೈತರಿಗೆ ವಂಚಿಸುವ ಅಧಿಕಾರಿಗಳು, ನೌಕರರನ್ನು ಸಾರ್ವಜನಿಕವಾಗಿ ತರಾಟೆಗೆ ತೆಗೆದುಕೊಳ್ಳತೊಡಗಿದರು. ರೈತ ವಿರೋಧಿ ಅಧಿಕಾರಿಗಳಿಗೆ, ನೌಕರರಿಗೆ ಪ್ರವೇಶವಿಲ್ಲ ಎಂಬ ನಾಮ ಫಲಕಗಳು ಎಲ್ಲಾ ಹಳ್ಳಿ ಹಳ್ಳಿಗಳಲ್ಲೂ ರಾರಾಜಿಸತೊಡಗಿದವು. ಭ್ರಷ್ಟ ಅಧಿಕಾರಿಗಳನ್ನು ಮರಕ್ಕೆ ಕಟ್ಟಿ ಛೀಮಾರಿ ಹಾಕಿದ ಪ್ರಸಂಗಗಳು ನಡೆದವು. ಇದರಿಂದಾಗಿ ರೈತರು ಉನ್ಮಾದ ಸ್ಥಿತಿಗೇರಿದರು. ಈ ಬೆಳೆವಣಿಗೆ ಅಧಿಕಾರಿಗಳು ಮತ್ತು ಜನ ಪ್ರತಿನಿಧಿಗಳ ನಿದ್ರಾಭಂಗಕ್ಕೆ ಕಾರಣವಾಯಿತು. ಮಾಧ್ಯಮಗಳು ರೈತ ಹೋರಾಟದ ದನಿಯಾದವು. ರೈತ ಸಂಘವು ದಿನೇ ದಿನೇ ಜನಪ್ರಿಯವಾಗತೊಡಗಿತು.

ದಮನಕಾರಿ ಸರ್ಕಾರದ ವಿರುದ್ಧ ರೈತ ಸಂಘ

ಈಗಾಗಲೇ ತಿಳಿಸಿರುವಂತೆ ರೈತ ಸಂಘ ಮತ್ತು ರೈತಾಪಿ ಜನರು ಸರ್ಕಾರಕ್ಕೆ ಸವಾಲಾಗಿ ನಿಂತರು. ಶ್ರೀ ಆರ್. ಗುಂಡೂರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರವು ರೈತರ ಪ್ರಾಬಲ್ಯ ಮುರಿಯಲು ತೀರ್ಮಾನಿಸಿತು. 1983ರಲ್ಲಿ ಉತ್ತರ ಕರ್ನಾಟಕದ ನರಗುಂದದಲ್ಲಿ ಸೇರಿದ್ದ ಭಾರೀ ರೈತ ಸಮಾವೇಶವನ್ನು ಪೋಲೀಸರು ಹತ್ತಿಕ್ಕಲು ಪ್ರಯತ್ನ ಮಾಡಿದರು. ಈ ಸಂದರ್ಭದಲ್ಲಿ ದರ್ಪಿಷ್ಟ ಪೋಲೀಸ್ ಅಧಿಕಾರಿಯೊಬ್ಬ ಅಸಹನೀಯವಾಗಿ ನಡೆದುಕೊಂಡಾಗ ರೊಚ್ಚಿಗೆದ್ದ ರೈತರು ಈ ಪೋಲಿಸ್ ಅಧಿಕಾರಿಯನ್ನು ಚೆನ್ನಾಗಿ ಥಳಿಸಿದ್ದಲ್ಲದೆ ಕೊಂದು ಹಾಕಿದರು. ಮತ್ತೊಬ್ಬ ಅಧಿಕಾರಿಯ ಮೂಳೆ ಮುರಿದರು. ಭಾವಾವೇಶಗೊಂಡ ರೈತರು ಅತಿರೇಕಕ್ಕೆ ಇಳಿದರು. ಅಂದಿನ ಸರ್ಕಾರಕ್ಕೆ ಮತ್ತು ಪೋಲೀಸರಿಗೆ ನುಂಗಲಾರದ ತುತ್ತಾಯಿತು. ರೈತರನ್ನು

ಸದೆಬಡೆಯಲು ಅಂದಿನ ಸರ್ಕಾರ ಪೋಲೀಸ್ ಶಕ್ತಿಯನ್ನು ಬಳಸಿತು. ರೈತರು ಹಾಗೂ ಪೋಲೀಸರ ನಡುವೆ ಕೈಕೈ ಮಿಲಾಯಿಸಿ ನರಗುಂದ ಮತ್ತು ನವಿಲುಗುಂದ ಪ್ರದೇಶಗಳು ರಣರಂಗವಾಯಿತು. ಪೋಲೀಸರು ರೈತರ ಮೇಲೆ ಗೋಲಿಬಾರ್ ಮಾಡಲಾಗಿ ಸ್ಥಳದಲ್ಲೇ 15 ಮಂದಿ ರೈತರು ಅಸುನೀಗಿದರು.

ನರಗುಂದ ಮತ್ತು ನವಿಲುಗುಂದದಲ್ಲಿ ನಡೆದ ನರಮೇಧವನ್ನು ಖಂಡಿಸಿ ರಾಜ್ಯದಾದ್ಯಂತ ಎಲ್ಲಾ ಕಡೆ ಅಕ್ರೋಶಭರಿತ ರೈತರು ಬಂಡಾಯವೆದ್ದರು. ಮಂಡ್ಯ ಜಿಲ್ಲೆಯ ಗೆಜ್ಜಲಗೆರೆಯಲ್ಲಿಯೂ ರೈತರು ಸರ್ಕಾರದ ವಿರುದ್ಧ ಹೋರಾಟಕ್ಕೆ ಇಳಿದಾಗ ಪೋಲೀಸ್ ಗೋಲಿಬಾರ್‌ಗೆ ಒಬ್ಬ ರೈತ ಆಹುತಿಯಾದ. 1983ರಲ್ಲಿ ಸರ್ಕಾರದ ದಮನಕಾರಿ ನೀತಿಯನ್ನು ಖಂಡಿಸಲು ಹಾಗೂ ರೈತರ ಕಷ್ಟ ಕಾರ್ಪಣ್ಯಗಳ ಪರಿಹರಿಸಲು ಒತ್ತಾಯಿಸಿ ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಬೃಹತ್ ರೈತ ಸಮಾವೇಶ ನಡೆಯಿತು. ಅಂದಿನ ಸರ್ಕಾರವು ಭುಗಿಲೆದ್ದ ರೈತ ಚಳವಳಿಯನ್ನು ನಿಯಂತ್ರಣ ತರುವಷ್ಟರಲ್ಲಿ ರಾಜ್ಯದಾದ್ಯಂತ ಸುಮಾರು 140 ಜನರನ್ನು ಬಲಿ ತೆಗೆದುಕೊಂಡಿತು. ರೈತರು ಇದರಿಂದ ಧೃತಿಗೆಡಲಿಲ್ಲ. ರೈತರ ಹೋರಾಟ ಮತ್ತಷ್ಟು ಶಕ್ತಿಶಾಲಿಯಾಯಿತು.

ರೈತರ ಚಳವಳಿಯ ಹಿನ್ನಡೆ

ಇದರ ಪರಿಣಾಮವಾಗಿ ಗುಂಡೂರಾವ್ ನೇತೃತ್ವದ ಸರ್ಕಾರವನ್ನು 1983–84ರ ಸಾರ್ವತ್ರಿಕ ಚುನಾವಣೆಯಲ್ಲಿ ಧೂಳಿಪಟಮಾಡಿತು. ಇದು ಒಂದು ರೀತಿಯ ಸೇಡಿಗೆ ಸೇಡಾಗಿ ಪರಿಣಮಿಸಿತು. ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ಶ್ರೀ ರಾಮಕೃಷ್ಣ ಹೆಗಡೆ ನೇತೃತ್ವದ ಕಾಂಗ್ರೇಸ್ಸೇತರ ಸರ್ಕಾರ ಅಸ್ತಿತ್ವಕ್ಕೆ ಬಂದಿತು. 1984ರಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾರಿ ಸಂಖ್ಯೆಯ ರೈತರ ಸಮಾವೇಶ ನಡೆಯಿತು.

ಇಂತಹ ಸಂದರ್ಭದಲ್ಲಿ ಚಾಣಾಕ್ಷ ಹಾಗೂ ಕುತಂತ್ರಿಯು ಆದ ರಾಮಕೃಷ್ಣ ಹೆಗಡೆ ಬ್ರಿಟೀಷರ ಒಡೆದು ಆಳುವ ನೀತಿಯಂತೆ ರೈತರ ಸಂಘದಲ್ಲಿ ಒಡಕು ಉಂಟು ಮಾಡಿ ನಿಷ್ಕ್ರಿಯಗೊಳಿಸಲು ಒಳಗೊಳಗೆ ಸಂಚು ಮಾಡಿದರು. ಕರ್ನಾಟಕ ಪ್ರಾಂತ ರೈತ ಸಂಘ ಎಂಬ ಪರ್ಯಾಯ ಸಂಘಟನೆಯನ್ನು ಅಸ್ತಿತ್ವಕ್ಕೆ ತರಲು ಪಿತೂರಿ ನಡೆಸಿದರು. ಈ ಸಮಯಕ್ಕೆ ರೈತ ಸಂಘವು 1984ರ ಸಾರ್ವತ್ರಿಕ ಚುನಾವಣೆಯಲ್ಲಿ ರೈತ ಮುಖಂಡರನ್ನು ಚುನಾವಣೆ ಕಣಕ್ಕೆ ಇಳಿಸಿತು. ಈ ಚುನಾವಣೆಯಲ್ಲಿ ಗೆದ್ದು ವಿಧಾನಸೌಧದ ಮೇಲೆ ರೈತರ ಬಾವುಟ ಹಾರಿಸುವ ಕನಸು ಕಂಡಿತು. ಬಹುಶಃ ಈ ಕನಸು ನನಸಾಗುವ ಮೊದಲೇ ಅನೀರೀಕ್ಷಿತ ಕೆಲವಾರು ಪೆಟ್ಟುಗಳು ಬಿದ್ದವು. ರೈತ ಸಂಘದಲ್ಲಿ ಕರ್ನಾಟಕದ ಸುಭಾಷ್ ಚಂದ್ರಬೋಸ್ ಆಗಿದ್ದ ಎನ್.ಡಿ. ಸುಂದರೇಶ್‌ರವರು ಅಕಾಲಿಕ ಮರಣಕ್ಕೆ ತುತ್ತಾದರು. ಶ್ರೀ ಹೆಚ್.ಎಸ್. ರುದ್ರಪ್ಪನವರು

ಆ ಸ್ಥಾನವನ್ನು ತುಂಬಿದರೂ ಕೆಲವೇ ಕಾಲದಲ್ಲಿ ಅವರೂ ಕೂಡ ತೀರಿಕೊಂಡರು. ರುದ್ರಪ್ಪನವರ ಜಾಗಕ್ಕೆ ಪ್ರೊ. ನಂಜುಂಡಸ್ವಾಮಿಯವರು ಬಂದರು.

ರೈತ ಸಂಘಕ್ಕೆ ಶಕ್ತಿ ತುಂಬಲು ಮುಂದೆ ಬರುವ ಸಾರ್ವತ್ರಿಕ ಚುನಾವಣೆಯಲ್ಲಿ ರೈತ ನಾಯಕರನ್ನು ಚುನಾವಣೆ ಕಣಕ್ಕೆ ಇಳಿಸಲು ತೀರ್ಮಾನಿಸಿದರು. ಈ ಸಾರ್ವತ್ರಿಕ ಚುನಾವಣೆಯಲ್ಲಿ ಬೆಳಗಾವಿ ಬಾಬಾ ಗೌಡ ಪಾಟೀಲ್‌ರು, ಧಾರವಾಡ ದಕ್ಷಿಣ ಮತ್ತು ಬೆಳಗಾವಿ ಕ್ಷೇತ್ರ ಎರಡರಲ್ಲೂ ಗೆದ್ದು ದಾಖಲೆ ನಿರ್ಮಿಸಿದರು. ಈ ಎರಡರಲ್ಲಿ ಬೆಳಗಾವಿ ಕ್ಷೇತ್ರವನ್ನು ಉಳಿಸಿಕೊಂಡು ಧಾರವಾಡ ದಕ್ಷಿಣ ಕ್ಷೇತ್ರಕ್ಕೆ ರಾಜೀನಾಮೆ ಸಲ್ಲಿಸಿ ಆ ಸ್ಥಾನಕ್ಕೆ ಪ್ರೊ. ನಂಜುಂಡಸ್ವಾಮಿಯವರನ್ನು ಕಣಕ್ಕೆ ಇಳಿಸಿ ಗೆಲ್ಲಿಸಿದರು. ಹೀಗೆ ಪ್ರಪ್ರಥಮ ಬಾರಿಗೆ ಶಾಸನಸಭೆಯಲ್ಲಿ ಇಬ್ಬರು ರೈತ ಸಂಘದ ಶಾಸಕರು ಸ್ಥಾನ ಗಿಟ್ಟಿಸಿದರು. ಈ ಕೇವಲ ಇಬ್ಬರಿಂದ ರೈತರ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗಲಿಲ್ಲ.

1994 ಸಾರ್ವತ್ರಿಕ ಚುನಾವಣೆ ಮತ್ತಷ್ಟು ರೈತ ನಾಯಕರನ್ನು ಚುನಾವಣಾ ಕಣಕ್ಕೆ ಇಳಿಸಿದರು. ಈ ಚುನಾವಣೆಯ ದುರಂತವೆಂದರೆ ಪ್ರೊ. ನಂಜುಂಡಸ್ವಾಮಿ, ಬಾಬಾಗೌಡ ಪಾಟೀಲ್ ಸೇರಿದಂತೆ ಎಲ್ಲಾ ಅಭ್ಯರ್ಥಿಗಳು ಸೋತು ಮಂಡ್ಯ ಜಿಲ್ಲೆಯ ಪಾಂಡವಪುರದ ಕೆ.ಎಸ್. ಪುಟ್ಟಣ್ಣಯ್ಯನವರು ಮಾತ್ರ ವಿಜೇತರಾದರು.

ಈ ಚುನಾವಣೆಯ ಫಲಿತಾಂಶದಿಂದ ಹತಾಶರಾದ ರೈತ ನಾಯಕರಲ್ಲಿ ಒಡಕು ಉಂಟಾಯಿತು. ಪ್ರೊ. ನಂಜುಂಡಸ್ವಾಮಿಯವರು 1997ರಲ್ಲಿ ರೈತ ಸಂಘದ ವತಿಯಿಂದಲೇ ಕನ್ನಡ ದೇಶ ಎಂಬ ಹೊಸ ಪಕ್ಷವನ್ನು ಹುಟ್ಟು ಹಾಕಿದರು. ಒಮ್ಮೆ ರೈತ ಸಂಘಟನೆಯು ಬಿರುಗಾಳಿಯಂತೆ ಜನಪ್ರಿಯಗೊಂಡು ಅದು ತಣ್ಣಗಾಗುತ್ತಾ ಬಂದಿತು.

1999ರ ಚುನಾವಣೆಗೆ ರೈತ ಸಂಘವು ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿತು. ಆದರೆ ಯಾವ ಅಭ್ಯರ್ಥಿಯೂ ಗೆಲ್ಲಲಿಲ್ಲ. ರೈತ ಸಂಘವು ನೋವು ಮತ್ತು ಹತಾಶೆಯಿಂದ ಕೈ ಕೈ ಹಿಸುಕಿಕೊಂಡಿತು. 2004ರಲ್ಲಿ ರೈತ ಸಂಘದ ಬೆನ್ನೆಲು-ಬಾಗಿದ್ದ ನಂಜುಂಡಸ್ವಾಮಿಯವರು ವಿಧಿವಶರಾದರು. ರೈತ ಸಂಘ ಮತ್ತು ಸಂಘಟನೆ ಮನೆಯೊಡೆಯನಿಲ್ಲದ ಮನೆಯಂತಾಯಿತು. ನಂತರದ ಚುನಾವಣೆಯಲ್ಲಿ ರೈತ ಸಂಘದ ಕೆ.ಎಸ್. ಪುಟ್ಟಣ್ಣಯ್ಯನವರು ಒಮ್ಮೆ ಗೆದ್ದರು. ರೈತ ಸಂಘದ ಏಕೈಕ ನಾಯಕರಾಗಿ ಹೋರಾಡಿದರು.

ರೈತ ಚಳವಳಿಗಳು ಹಾಗೂ ಸತ್ಯಾಗ್ರಹಗಳು

ರೈತನು ಅನ್ನದಾತ, ದೇಶದ ಬೆನ್ನೆಲುಬು ಎಂತೆಲ್ಲಾ ಹಾಡಿ ಹೊಗಳಿರುವುದು ಸರಿ ಅಷ್ಟೇ. ಒಕ್ಕಲುತನ ಮತ್ತು ಒಕ್ಕಲಿಗರು ಎಂಬ ಅಧ್ಯಾಯದಲ್ಲಿ ಸಾಕಷ್ಟು

ವಿವರವಾಗಿ ತಿಳಿಸಲಾಗಿದೆ. ಬೇಸಾಯವೆಂದರೆ ಭೂಮಿಯನ್ನು ಉತ್ತಿ ಬಿತ್ತಿ ಬೆಳೆ ತೆಗೆಯುವ ಕಾಯಕದಲ್ಲಿ ತೊಡಗುವುದು ಎಂದರ್ಥ. ಇದು ಮನುಷ್ಯನ ಹೊಟ್ಟೆಗೆ ತುತ್ತು ನೀಡುವ ಒಂದು ಮುಖ್ಯವಾದ ಮಾಧ್ಯಮವೇ ಸರಿ. ಮಾನವನು ಬೇಸಾಯದಲ್ಲಿ ಸುಮಾರು 15 ಸಾವಿರ ವರ್ಷಗಳಿಂದೀಚೆಗೆ ತನ್ನನ್ನು ತೊಡಗಿಸಿ-ಕೊಂಡಿದ್ದನೆಂದೂ ವಿದ್ವಾಂಸರು ಆಧಾರ ಸಹಿತವಾಗಿ ಹೇಳುತ್ತಾರೆ. (Lowle R.H. (1934) An Introduction to cultural anthropology. P.125) ಎಂದರೆ ಅದಕ್ಕಿಂತ ಮೊದಲು ಮಾನವನು ಬೇಟೆಯಾಡುತ್ತಿದ್ದನು. ಈ ಬೇಟೆಯ ಸಂದರ್ಭದಲ್ಲಿ ಪ್ರಾಣಿಗಳನ್ನು ಬೇಟೆಯಾಡಲು ಹೋಗಿ ಕೆಲವು ಸಲ ತಾನೇ ಪ್ರಾಣಿಗಳಿಗೆ ಬೇಟೆಯ ಬಲಿಪಶುವು ಆಗುತ್ತಿದ್ದನು. ಇದನ್ನು ತಪ್ಪಿಸಿ ಬೇಸಾಯ ಅಥವಾ ವ್ಯವಸಾಯಕ್ಕೆ ಇಳಿದಿದ್ದು ಈಗ ಇತಿಹಾಸವಾಗಿದೆ. ಕೃಷಿಯನ್ನು ತನ್ನ ಬದುಕಿನ ಸಂಗಾತಿಯನ್ನಾಗಿ ಕಂಡವನೂ ರೈತ. ತುತ್ತಿಗಾಗಿ, ಸೂರಿನ ನೆಳಲಿಗಾಗಿ, ನೆಮ್ಮದಿಯ ನಿದ್ದೆಗಾಗಿ, ಅವನು ಕೃಷಿಯನ್ನೇ ನೆಚ್ಚಿಕೊಂಡು ಸಹಸ್ರಾರು ವರ್ಷಗಳಿಂದ ಸಾಗಿ ಬಂದಿದ್ದಾನೆ. ಇಷ್ಟೇ ಅಲ್ಲದೇ ತನ್ನನ್ನೇ ನಂಬಿರುವ ಇತರರ ಹೊಟ್ಟೆಯನ್ನು ತುಂಬಿಸಿದ್ದಾನೆ. ಹೀಗೆ ಸಾಗಿ ಬರುವಲ್ಲಿ ತನ್ನ ಬದುಕಿನ ಕಷ್ಟ ನಿಷ್ಠುರಗಳನ್ನು ಸಹಿಸಿಕೊಂಡು ತ್ಯಾಗದ ನಿಸ್ಸೀಮ ಜೀವಿಯಾಗಿಯೂ ಕಾಣಿಸಿಕೊಂಡಿದ್ದಾನೆ. ವ್ಯವಸಾಯ ಅಥವಾ ಕೃಷಿಯನ್ನು ಮೊತ್ತ ಮೊದಲು ಪ್ರಾರಂಭಿಸಿದ್ದು ಹೆಣ್ಣೇ ಹೊರತು ಗಂಡಲ್ಲ. ಕಾರಣವೇನೆಂದರೆ ಪುರುಷ ಬೇಟೆಯಲ್ಲಿ ತಲ್ಲೀನನಾಗಿದ್ದ ಹಾಗೂ ಇದು ತನ್ನ ಕಾಯಕವೆಂದೇ ನಂಬಿದ್ದ. ಅಂದು ಮನೆಯಲ್ಲಿದ್ದ ಸ್ತ್ರೀಯು ಸಾಕು ಪ್ರಾಣಿಗಳನ್ನು ಪೋಷಿಸುವುದು, ಕೃಷಿ ಮಾಡುವುದು ಇವೇ ಮುಂತಾದ ತನ್ನ ಸಾಮರ್ಥ್ಯಕ್ಕೆ ತಕ್ಕಂತ ಕೆಲಸವನ್ನು ಮಾಡುತ್ತಿದ್ದಳು. ಕೃಷಿಯನ್ನು ಅವಳೇ ಮೊತ್ತಮೊದಲಿಗೆ ಕಂಡು ಹಿಡಿದಿದ್ದು. ಆದರೆ ಗಂಡಸಿಗೆ ಸಿಕ್ಕ ಪ್ರಚಾರ ಆಕೆಗೆ ಸಿಗಲಿಲ್ಲ. ಕೃಷಿ ಕೈಂಕರ್ಯದಲ್ಲಿ ವಿಶೇಷತಃ ದಲಿತವರ್ಗಗಳಿಗೆ ಸೇರಿದವರು ಶತಶತಮಾನಗಳಿಂದ ಬೇಸಾಯದ ಮಕ್ಕಳಾಗಿ ನಿಜವಾದ ಮಣ್ಣಿನ ಮಕ್ಕಳಾಗಿ ದುಡಿದಿದ್ದಾರೆ, ಹಾಗೂ ದುಡಿಯುತ್ತಿದ್ದಾರೆ ಎಂದರೆ ತಪ್ಪಾಗಲಾರದು.

ಜನಸಂಖ್ಯೆಯ ಶೇಕಡ 60 ರಿಂದ 70ರಷ್ಟಿರುವ ರೈತರು ಕಾರ್ಮಿಕರಂತೆ ಸುಸಂಘಟಿತರಲ್ಲ. ರೈತರು ಅವಿದ್ಯಾವಂತರಾಗಿರಬಹುದು ಆದರೆ ಬುದ್ಧಿವಂತರು. ಆದರೂ ಅವರಲ್ಲಿ ಸಂಘಟನಾ ಚಾತುರ್ಯವಿಲ್ಲ. ಈ ರೈತಾಪಿ ಜನಗಳಿಗೆ ತೊಂದರೆ ಒದಗಿದಾಗ ಹಾಗೂ ತಮಗೆ ಅನ್ಯಾಯವಾದಾಗ ಆಳರಸರ ಇಲ್ಲವೇ ಆಯಾ ಸರ್ಕಾರದ ವಿರುದ್ಧ ಸತ್ಯಾಗ್ರಹ, ಮುಷ್ಕರ, ಹರತಾಳಗಳನ್ನು ಮಾಡಿ ತಮಗೆ ಆಗಿರುವ ಅನ್ಯಾಯದ ವಿರುದ್ಧ ಪ್ರತಿಭಟಿಸಿದ್ದುಂಟು. ಭಾರತ ಹಾಗೂ ವಿಶೇಷವಾಗಿ ಕರ್ನಾಟಕದ ಇತಿಹಾಸದಲ್ಲಿ ಇದು ತನ್ನದೇ ಆದ ರೋಚಕವಾದ ಇತಿಹಾಸವನ್ನೊಳಗೊಂಡಿದೆ.

ರೈತ ಚಳವಳಿಗಳು ನೆಲೆ ಮತ್ತು ಹಿನ್ನೆಲೆ : ಚಳವಳಿ ಎಂದಾಗ ಮೂಲಭೂತ –ವಾಗಿ ಕಾಣಬರುವುದು ಸಾವಕಾಶವಾಗಿ ಏಕಪ್ರಕಾರ ಕಾಣಿಸಿಕೊಳ್ಳುವ ಬದಲಾವಣೆ –ಗಳಾಗಿರುತ್ತದೆ. ಇದನ್ನು ವಿಕಾಸಕ್ರಮ ಎನ್ನಬಹುದು. ಆದರೆ ಇದಕ್ಕೆ ನಿರ್ದಿಷ್ಟ ಗುರಿ ಸಿದ್ಧಾಂತ ಸಾಧಿತವಾಗದಿದ್ದಾಗ ಧೀರ್ಘಾಕಾಲೀನ ಸ್ಥಾಹಿತ್ವವಿಲ್ಲದಿದ್ದಾಗ ಅಲ್ಪಕಾಲದ ಬದಲಾವಣೆ ಪ್ರಭಾವಹೀನವಾಗಬಹುದು. ಆಗ ಚಳವಳಿ ಎಂಬ ಗೌರವಾರ್ಹ ಹೆಸರನ್ನು ಪಡೆಯಲಾರದು. (ಕರ್ನಾಟಕದ ರೈತ ಚಳವಳಿ– ಸತ್ಯಾಗ್ರಹಗಳು ಸಂಪುಟ–2, – ಡಾ. ಎಂ.ಜಿ. ನಾಗರಾಜ್–ಬೆಂಗಳೂರು 2006, ಪುಟ–1)

ಸತ್ಯಾಗ್ರಹ ಎಂದಾಗ ನೆನಪಾಗುವುದು ಗಾಂಧಿ ವಿಧಾನ. ಇಲ್ಲಿ ದೈಹಿಕ ಹಿಂಸೆಯ ಪಾತ್ರವಿಲ್ಲ. ಗುಂಪು ಗದ್ದಲವಿಲ್ಲ. ಅಸಹಕಾರ ಮಾರ್ಗದಿಂದ ಎದುರಾಳಿಯೂ ಮಣಿಯುವಂತೆ ಮಾಡುವುದು, ಹಕ್ಕು ಒತ್ತಾಯ ಮಾಡುವುದು ಈ ಸಮಯದಲ್ಲಿ ಆಗುವ ನೋವು ಯಾತನೆಯನ್ನು ಸ್ವತಃ ಅನುಭವಿಸುವುದೇ ವಿನಃ ತಿರುಗೇಟು ನೀಡುವುದು ಇಲ್ಲವೆ ಪ್ರತಿಹಿಂಸೆ ಮಾಡುವುದಲ್ಲ. ಇಂತಹ ಸತ್ಯಾಗ್ರಹ ಮಾರ್ಗವು ಕಠಿಣತಮವಾದುದು.

ಭಾರತದಲ್ಲಿ ನಡೆದ ರೈತ ಹೋರಾಟಗಳನ್ನು ಸತ್ನಾಮಿಗಳು, ಸಿಕ್ಕರು, ಜಾಟರ ಬಂಡಾಯಗಳು, ಆದಿವಾಸಿ ಸಂತಾಲರ ದಂಗೆ, ಸನ್ಯಾಸಿ ಫಕೀರರ ದಂಗೆ, ನೀಲಿಬೆಳೆಗಾರರ ಮುಷ್ಕರ, ಕುಣಬಿ ದಂಗೆ, ಮಾಪೀಳೆಗಳ ದಂಗೆ, ಬರ್ದೋಲಿ ಸತ್ಯಾಗ್ರಹ ಇವೇ ಮುಂತಾದವು ನಮ್ಮ ರಾಷ್ಟ್ರದಲ್ಲಿ ನಡೆದ ದಂಗೆಗಳು ಮತ್ತು ಸತ್ಯಾಗ್ರಹಗಳು. ಕ್ರಿ.ಶ. 12ನೇ ಶತಮಾನದಲ್ಲಿಯೇ ಕರ್ನಾಟಕದಲ್ಲಿ ಕರನಿರಾಕರಣೆ ಮಾಡಿದ ಉದಾಹರಣೆಯೂ ಇದೆ. ಅದೆಂದರೇ – ಕ್ರಿ.ಶ. 12ನೇ ಶತಮಾನದಲ್ಲಿ ಒಕ್ಕಲಿಗ ಮುದ್ದಣ್ಣ ಅಥವಾ ಮುದ್ದಯ್ಯ ಗೌಡನು ಕರ ನಿರಾಕರಣೆ ಮಾಡಿದ್ದ. ಇತಿಹಾಸವನ್ನು ನೋಡಿದರೆ ಭಾರತದಲ್ಲಿಯೇ ರೈತನೊಬ್ಬ ರಾಜ ಅಥವಾ ಸರ್ಕಾರದ ವಿರುದ್ಧ ಕರ ನಿರಾಕರಣೆ ಮಾಡಿದ ಉದಾಹರಣೆ ಬೇರೆಲ್ಲೂ ಇರಲಾರದು. ಉತ್ತರ ಕರ್ನಾಟಕದ ಭಾಗದ ಜೋಳದಾಳು ಗ್ರಾಮದ ಒಕ್ಕಲಿಗ ಮುದ್ದಯ್ಯ ಅಥವಾ ಮುದ್ದಯ್ಯಗೌಡನು ಕೃಷಿ ಕಾಯಕದ ಮೂಲಕ ಜಂಗಮ ದಾಸೋಹವನ್ನೂ ಮಾಡುತ್ತಿದ್ದ. ಇದು ಅವನ ವ್ರತವಾಗಿತ್ತು. ಹೊಲದಲ್ಲಿ ಹೂಡಿದ ನೇಗಿಲಿಗೆ ಸಿಕ್ಕ ಲಿಂಗವನ್ನು ಹೊರತೆಗೆದು ಪೂಜಿಸಿ ಲಿಂಗ ದೀಕ್ಷೆ ಪಡೆದ. (ಬಹುಶಃ ಬಸವಣ್ಣನ ಪ್ರಭಾವದಿಂದ ಅಥವಾ ಒತ್ತಾಯದಿಂದ ಲಿಂಗದೀಕ್ಷೆ ಪಡೆದಿರಬಹುದು) ಇವನೊಬ್ಬ ವಚನಕಾರ ಆಗಿದ್ದ. ರಾಜನು ಕೇಳಿದ ಹೆಚ್ಚಿನ ತೆರಿಗೆಯನ್ನು ಕೊಡಲು ನಿರಾಕರಿಸಿದ. ಆ ಹೆಚ್ಚಿನ ಹಣವನ್ನು ದಾಸೋಹಕ್ಕೆ ವಿನಿಯೋಗಿಸಿದ (ಸಮಗ್ರ ವಚನ ಸಂಪುಟ; ಸಂಕೀರ್ಣ ವಚನ ಸಂಪೂರ್ಣ–1, 1999 ಸಂಪಾದಕ ಡಾ॥ ಎಂ.ಎಂ. ಕಲಬುರ್ಗಿ,

ಬೆಂಗಳೂರು ಪುಟ 672, 674 ವ.10) ಹೆಚ್ಚಿನ ಕರ ನಿರಾಕರಿಸಿದ 12ನೇ ಶತಮಾನದ ಮೊದಲ ರೈತ ಒಕ್ಕಲಿಗ ಮುದ್ದಯ್ಯ ಅಥವಾ ಮುದ್ದಯ್ಯ ಗೌಡನೇ ಭಾರತದಲ್ಲಿ ಮೊದಲಿಗನೆಂದರೆ ತಪ್ಪಾಗಲಾರದು. ರಾಜನಿಗಿಲ್ಲದ ನೈತಿಕ ಪ್ರಜ್ಞೆ ಎದುರು ತನ್ನ ದೈವ ಪ್ರಜ್ಞೆ, ಸ್ವಾತ್ಮ ಪ್ರಜ್ಞೆ ತೋರಿ ರೈತ ಚಳವಳಿಯ 12ನೇ ಶತಮಾನದ ಮಾದರಿ ವಕ್ತಾರನೆನಿಸಿದ್ದಾನೆ. **"ರಾಷ್ಟ್ರದ ಇತಿಹಾಸದಲ್ಲೇ ಕರನಿರಾಕರಣೆ ಮಾಡಿದ ಮೊಟ್ಟ ಮೊದಲ ರೈತ ಎನಿಸಿಕೊಳ್ಳುತ್ತಾನೆ."**

ಬ್ರಿಟಿಷ್ ಆಳ್ವಿಕೆಯ ಭಾರತದಲ್ಲಿ ರಾಷ್ಟ್ರದ ನಾನಾ ಕಡೆ ಹಲವಾರು ರೈತಚಳವಳಿಗಳು ನಡೆದವು. ದಕ್ಷಿಣ ಭಾರತದಲ್ಲಿ ಕರ್ನಾಟಕಕ್ಕಿಂತಲೂ ಮೊದಲು ತಮಿಳುನಾಡಿನಲ್ಲಿ ರೈತ ಹೋರಾಟಗಳು ನಡೆದವು. ಅವುಗಳಿಂದ ತಾತ್ವಿಕವಾಗಿ, ತಾಂತ್ರಿಕವಾಗಿ, ಕರ್ನಾಟಕ ರೈತ ಹೋರಾಟಗಳು ಪ್ರಭಾವಿತವಾಗಿವೆ. ಭಾರತೀಯ ಶಕ್ತಿ ಕೊಳದಲ್ಲಿ ರೈತನ ಶಕ್ತಿ ಸ್ಥಾನಗಳನ್ನು ಗಮನಿಸಿ ಹೇಳಿದರೆ ಶೋಷಣಾ ಶಕ್ತಿ ಕೂಟವಾದ ಜಮೀನುದಾರ, ಸಾಹುಕಾರ ಆಳುವ ವರ್ಗದ ಶೋಷಣೆ ವಿರುದ್ಧ ಸಂಘಟಿತರಾಗಿ ನಡೆಸುವ ಹಾಗೂ ನಡೆಸಿದ ಪ್ರಗತಿಪರ ಹೋರಾಟದ ನೆಲೆಯೇ ರೈತ ಶಕ್ತಿಯ ನೆಲೆ (ಕರ್ನಾಟಕ ರೈತ ಹೋರಾಟಗಳು – ಎಂ.ವಿ. ನಾಡಕರ್ಣಿ 1986 ಬೆಂಗಳೂರು ಪುಟ 2) ಎಂದೂ ಗುರುತಿಸಿರುವುದನ್ನು ನೋಡಬಹುದು.

ಕರ್ನಾಟಕದಲ್ಲಿ ನಡೆದ ರೈತ ಚಳವಳಿಗಳಲ್ಲಿ ಕ್ರಿ.ಶ.17ನೇ ಶತಮಾನದಿಂದೀಚೆಗೆ ಸಾಕಷ್ಟು ರೈತ ಹೋರಾಟಗಳನ್ನು ನೋಡಬಹುದು. ಅದರಲ್ಲಿ 1. ಚಿಕ್ಕದೇವರಾಜ ಒಡೆಯರ ಕಾಲದ ರೈತ ಚಳವಳಿ (1683–94) 2. ಟಿಪ್ಪುಕಾಲದ ದಂಡದ ವಿರುದ್ಧ ಫಿರಿಯಾದು, 3. ಪೂರ್ಣಯ್ಯನ ವಿರುದ್ಧ ಪ್ರಾತಿನಿಧಿಕ ಪ್ರಭುತ್ವದ ಸ್ಥಾನದಲ್ಲಿ ರೈತರ ಸ್ಥಿತಿಗತಿಗಳು, ದೂರು ದುಮ್ಮಾನಗಳು, 4. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಡೆದ ರೈತ ಬಂಡಾಯ, 5. 1830ರಲ್ಲಿ ನಡೆದ ಸಂಗೊಳ್ಳಿ ರಾಯಣ್ಣನ ಬಂಡಾಯ, 6. 1830ರಲ್ಲಿ ಮೈಸೂರು ರಾಜ್ಯದ ಆಂಗ್ಲರ ಕಾಲದ ಟ್ಯಾಂಕ್‌ಕೋರ್ ನಿಯಮಗಳ ವಿಫಲತೆ, 7. ಕೊಡಗು ಮತ್ತು ಅಮರಸೋಳ್ಯ (ಕೆನರಾ ಬಂಡಾಯ 1836–370), 8. ಉತ್ತರಕನ್ನಡ ಜಿಲ್ಲೆಯ ಕುಲಬನ್ನಿ ಕರನಿರಾಕರಣ 1930, ಇವೇ ಮುಂತಾದವುಗಳು. ಇವುಗಳಲ್ಲಿ 1931ರಲ್ಲಿ ನಡೆದ ಇರ್ವಿನ್ ನಾಲ ರೈತ ಚಳುವಳಿಯು ಜನಮಾನಸದಲ್ಲಿ ಇಂದಿಗೂ ಉಳಿದಿದೆ. ಇದರ ನೇತಾರರಾದ ಶ್ರೀ ಹೆಚ್.ಕೆ. ವೀರಣ್ಣಗೌಡರ ಹೆಸರು ಚಿರಸ್ಥಾಯಿಯಾಗಿ ಉಳಿದಿದೆ. ಈ ಮೊದಲು ತಿಳಿಸಿದ ರೈತ ಚಳವಳಿಗಳು ಈಗ ಇತಿಹಾಸವಾಗಿವೆ. ಇಂದಿಗೂ 75–80 ವರ್ಷಗಳ ಹಿಂದೆ ನಡೆದ ಇರ್ವಿನ್ ನಾಲ ರೈತ ಚಳುವಳಿ ಇಂದಿಗೂ ಹಸಿಯಾಗಿಯೇ ಇದೆ. ಈ ಇರ್ವಿನ್ ನಾಲ ಚಳವಳಿಯ ಹಿನ್ನೆಲೆಯನ್ನು ನೋಡೋಣ.

ಇರ್ವಿನ್ ನಾಲಾ ರೈತ ಚಳವಳಿ ಒಂದು ಐತಿಹಾಸಿಕ ಜಾಥಾ

ಆಳರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಕನ್ನಂಬಾಡಿ ಕಟ್ಟೆ ಅಥವಾ ಕೃಷ್ಣರಾಜ ಸಾಗರವನ್ನು ನಿರ್ಮಿಸಿದ್ದರು. ಕನ್ನಂಬಾಡಿಯಿಂದ ನೀರು ಹೊರ ಹೋಗಲು ನಾಲೆಗಳನ್ನು ರೂಪಿಸಿದರು. ಇದಕ್ಕೆಲ್ಲ ಸಾಕಷ್ಟು ಹಣ ಖರ್ಚಾಯಿತು. ಈ ಹಣವನ್ನು ಫಲಾನುಭವಿಗಳಾದ ರೈತರೇ ಭರಿಸಬೇಕಾಗಿದ್ದಿತು. ಅಂದಿನ ಸರ್ಕಾರವು ಒಂದು ಗೊತ್ತುವಳಿಯನ್ನು ರೈತರ ಪ್ರದೇಶದಲ್ಲಿ ಎಂದರೇ ಕೃಷ್ಣರಾಜ ಶಾಖೆಯ, ಶಿಂಷಾ ಶಾಖೆಯ ರೈತರು 1) ಅನುಸರಿಸಬೇಕಾದ ಬ್ಲಾಕ್ ಸಿಸ್ಟಮ್ ವ್ಯವಸ್ಥೆಯ ಕ್ರಮ 2) ನೀರಾವರಿಯಾಗುವ ಜಮೀನುಗಳಿಗೆ ಕೊಡಬೇಕಾದ ಕಂದಾಯ 3) ಕಾಂಟ್ರಿಬಿಷನ್ (ಅಣೆಕಟ್ಟು ಕಟ್ಟಿ, ನೀರಾವರಿ ಸೌಲಭ್ಯ ಒದಗಿಸಿದ ಕಾರಣ ಸರ್ಕಾರಕ್ಕೆ ನೀಡಬೇಕಾದ ಅಭಾರಿ ಸಹಾಯಧನ), ಹಣ ಕಟ್ಟಬೇಕಾದ್ದು ತಡವಾದರೆ ಅದಕ್ಕೆ ಕೊಡಬೇಕಾದ ಬಡ್ಡಿಯ ಬಗ್ಗೆ ಸರ್ಕಾರ ಹೊರಡಿಸಿದ ಹುಕುಂ, ಇವುಗಳು ರೈತರಿಗೆ ಕಷ್ಟದಾಯಕವೆನಿಸಿದ್ದವು.

ಬ್ಲಾಕ್ ಸಿಸ್ಟಂನಲ್ಲಿ (Block Systemನಲ್ಲಿ) – ಜಮೀನಿನ ಭಾಗದಲ್ಲಿ ವರ್ಷ ವರ್ಷ ಪರ್ಯಾಯ ಬೆಳೆ ಬೆಳೆವ ಪದ್ಧತಿ) ಮೊದಲ ವರ್ಷ ಭತ್ತ, 2ನೇ ವರ್ಷ ಕಬ್ಬು ಅಥವಾ ಒಣಬೆಳೆಗಳಾದ ಆಲೂಗಡ್ಡೆ, ಈರುಳ್ಳಿ, ಅರಿಶಿಣ ಬೆಳೆಯಬೇಕು. ಮತ್ತೊಂದು ವರ್ಷ ಬೇರೆ ಬೆಳೆ ಬೆಳೆಯಬೇಕು. ಇನ್ನೊಂದು ಹೇಳಿಕೆ ರೀತಿಯಲ್ಲಿ ಒಂದು ನಿಗದಿಯಾದ ಜಮೀನು ಪ್ರದೇಶದಲ್ಲಿ ಅಥವಾ ಒಂದು ನಾಲೆ ಹಾಗೂ ಸೀಳು ನಾಲೆಯ ಕೆಳಗಿರುವ ಜಮೀನುಗಳಲ್ಲಿ 1 ವರ್ಷ ಕಬ್ಬು, 2ನೇ ವರ್ಷ ಭತ್ತ, 3ನೇ ವರ್ಷ ಖುಷ್ಕಿ ಬೆಳೆ, ಬೆಳೆಯಲು ಸರ್ ಎಂ. ವಿಶ್ವೇಶ್ವರಯ್ಯ ಸಮಿತಿಯು ರೈತರಿಗೆ ತಿಳಿಸಿತ್ತು. ಇಲಾಖಾ ಮುಖ್ಯಸ್ಥರಿಗೆ ಈ ಬಗ್ಗೆ ಸೂಚನೆ ನೀಡಿತ್ತು. ಇದು ರೈತರಿಗೆ ತ್ರಾಸದಾಯಕ ಹಾಗೂ ವೆಚ್ಚ ಹೆಚ್ಚಳವೆನಿಸಿತ್ತು. ಕಾಂಟ್ರಿಬಿಷನ್ ನೀಡಿಕೆ ಎಂದರೆ ಸಾಮಾನ್ಯವಾಗಿ ರೈತನಿಗೆ ಆರ್ಥಿಕ ಹೊರೆ ಎನಿಸಿತ್ತು. ಕಾರಣ ವಿಶ್ವೇಶ್ವರಯ್ಯ ಸಮಿತಿ ಶಿಫಾರಸ್ಸು ಮಾಡಿದ್ದು, 80 ರಿಂದ 100 ರೂಪಾಯಿ ಕಾಂಟ್ರಿಬಿಷನ್ ಹಣದ ನಿಗದಿಯನ್ನು ಸರ್ಕಾರ ಬದಲಿಸಿ 100 ರೂಪಾಯಿಯಿಂದ 150 ರೂಪಾಯಿಗಳಿಗೆ ಏರಿಸಿದುದೇ ಆಗಿತ್ತು. ಅಂದಿನ ವ್ಯವಸ್ಥೆಯ ಇಲಾಖಾ ಡೈರಕ್ಟರ್ ಆಗಿದ್ದ ಡಾ॥ ಲೆಸ್ಲಿಕೋಲ್‌ಮನ್‌ರವರು ವಿಶ್ವೇಶ್ವರಯ್ಯನ ಸಲಹೆಯನ್ನು ಎತ್ತಿ ಹಿಡಿದಿದ್ದರು.

ಹೀಗೆ ಅಂದಿನ ಸರ್ಕಾರವು ಮನಬಂದಂತೆ ರೈತರ ಮೇಲಿನ ತೆರಿಗೆಯನ್ನು ಹೆಚ್ಚಿಸಿತ್ತು. ಬೇಸಾಯ ಲಾಭದಾಯಕ ಹುದ್ದೆಯಲ್ಲ, ರೈತ ಪರ ಹೋರಾಟ ಮಾಡುವವರು ಯಾರೂ ಇರಲಿಲ್ಲ. ಈ ಹಿನ್ನೆಲೆಯಲ್ಲಿ ರೈತರನ್ನು ಒಗ್ಗೂಡಿಸಿ ಸರ್ಕಾರಕ್ಕೆ ತಮ್ಮ ಸಂಕಷ್ಟಗಳನ್ನು ತಿಳಿಸಲು ಹಲವಾರು ಜನ ರೈತ ಮುಖಂಡರು

ಒಂದು ಯೋಜನೆಯನ್ನು ಸಿದ್ಧಗೊಳಿಸಿದರು. ಅದೇನೆಂದರೆ ಮಂಡ್ಯ ಜಿಲ್ಲೆಯಿಂದ ಬೆಂಗಳೂರಿನವರೆಗೂ ರೈತರೆಲ್ಲರೂ ಸೇರಿ ಒಗ್ಗಟ್ಟಾಗಿ ಕಾಲ್ನಡಿಗೆಯಲ್ಲಿ ಬೆಂಗಳೂರಿಗೆ ತೆರಳಿ ದಿವಾನರನ್ನು ಕಂಡು ಮನವಿಯನ್ನು ಸಲ್ಲಿಸಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದು. ಆ ಕಾರಣದಿಂದ ಮಂಡ್ಯ ಜಿಲ್ಲೆಯ ಹಿಂಡವಾಳು ಹೆಚ್. ಹೊನ್ನಯ್ಯ, ಹೊನಗಾನಹಳ್ಳಿಯ ಶ್ರೀ ಕೆ. ಪುಟ್ಟಣ್ಣಯ್ಯ ಇನ್ನೂ ಮುಂತಾದವರು, ಜನನಾಯಕರು, ಸುಶಿಕ್ಷಿತರು, ಪತ್ರಕರ್ತರು ಆಗಿದ್ದ ಶ್ರೀ ಹೆಚ್.ಕೆ. ವೀರಣ್ಣಗೌಡರನ್ನು ಕಂಡು ತಮ್ಮ ಯೋಜನೆಯನ್ನು ಅವರ ಮುಂದಿಟ್ಟರು. ಹಾಗೂ ಈ ರೈತ ಜಾಥಾದ ಮುಂದಾಳತ್ವವನ್ನು ವಹಿಸಲು ಕೇಳಿಕೊಂಡರು. ವೀರಣ್ಣಗೌಡರು ತಮ್ಮ ಒಪ್ಪಿಗೆ ಸೂಚಿಸಿದರು. ವೀರಣ್ಣಗೌಡರು ಜಾಥಾ ಯಶಸ್ಸಾಗಲು ಪ್ರಾಮಾಣಿಕ ಪ್ರಯತ್ನ ಮಾಡಿದರು. ಸರ್ಕಾರದ ಆಜ್ಞೆಯಿಂದಾಗಿ ರೈತರಿಗೆ ಆಗುವ ತೊಂದರೆಗಳನ್ನು ನಾನಾ ಪ್ರದೇಶದ ಎಲ್ಲಾ ತಾಲ್ಲೋಕ್‌ಗಳ ಪ್ರತಿ ಹಳ್ಳಿಗಳ ರೈತರಲ್ಲಿಗೆ ಹೋಗಿ ಅವರಿಗೆ ತಿಳುವಳಿಕೆ ಹೇಳುವುದು, ಅಂಕಿ ಅಂಶಗಳ ಸಹಿತ ಈ ಬಗೆಗಿನ ಪ್ರಕಟಣೆ ಹೊರಡಿಸುವುದು ಎಂದೆಲ್ಲಾ ನಿರ್ಧರಿಸಲಾಗಿತ್ತು. ಎಲ್ಲವೂ ಸರಿ ಆದರೆ ಹೋರಾಟದ ವೆಚ್ಚಕ್ಕೆ ಹಣದ ವ್ಯವಸ್ಥೆ ಮಾಡುವುದು, ಮಂಡ್ಯ ಸಹಕಾರ ಸಂಘದಲ್ಲಿ ಆ ಹಣವನ್ನು ಠೇವಣಿ ಇಡುವುದು, ಚಂದ ಎತ್ತಿ ಮೊತ್ತ ಕೂಡಿಸುವುದು, ರೈತರ ಎತ್ತಿನ ಗಾಡಿಯನ್ನು ಪ್ರಚಾರೋದ್ದೇಶಗಳಿಗೆ ಕಟ್ಟಿಸಿ ಕೊಡುವುದು ಇತ್ಯಾದಿಗಳು ಅಪಪ್ರಚಾರಕ್ಕೆ ಕಾರಣವಾಗಬಹುದೆಂದು ಹೆದರಿ ಹಳ್ಳಿ–ಹಳ್ಳಿಗಳಿಗೆ ನಡೆದುಕೊಂಡೇ ಹೋಗಿ ಪ್ರಚಾರ ಕಾರ್ಯದಲ್ಲಿ ತೊಡಗಬೇಕೆಂದು ನಿರ್ಧಾರವಾಯಿತು. ಆದರೂ ಸಾಕಷ್ಟು ಪ್ರಮಾಣದಲ್ಲಿ ಹಣದ ಅವಶ್ಯಕತೆ ಇದ್ದಿತು. ಯಾರೂ ಮುಫತ್ತಾಗಿ ಹಣ ನೀಡಲು ಮುಂದೆ ಬರಲಿಲ್ಲ. ಇಂತಹ ಸಂದರ್ಭದಲ್ಲಿ ಮಂಡ್ಯದ ಹಿಂಡವಾಳು ಹೊನ್ನಯ್ಯನವರು ತಾವು ಮನೆಕಟ್ಟಲು ಇಟ್ಟುಕೊಂಡಿದ್ದ ಹಣವನ್ನು ಸಾಲದ ರೂಪದಲ್ಲಿ ನೀಡುವುದಾಗಿಯೂ ಈ ಹಣವನ್ನು ಹೋರಾಟದ ವೆಚ್ಚಕ್ಕೆ ತೆಗೆದುಕೊಂಡು ನಂತರ ಹಿಂದಕ್ಕೆ ಕೊಡಬೇಕೆಂದೂ ತೀರ್ಮಾನವಾಯಿತು. ಒಟ್ಟಾರೆ ಹೇಳುವುದಾದರೆ ಹೆದರದೇ ಚಳುವಳಿಯ ನೀರಿಗೆ ಇಳಿದೇ ಬಿಟ್ಟರು. ರೈತರಲ್ಲಿ ಜಾಗೃತಿ ಮೂಡಿಸಬೇಕೆಂದೂ ತೀರ್ಮಾನವಾಯಿತು. ಮೊದಲ ಪ್ರಚಾರ ಸಭೆ ಮಳವಳ್ಳಿ ತಾಲ್ಲೂಕ್, ಮತ್ತಿತಾಳೇಶ್ವರ ತೋಪಿಸಿನಲ್ಲಿ ಆರಂಭಗೊಂಡಿತ್ತು. ನಂತರ ಚಿಕ್ಕ ಅರಸಿನಕೆರೆ, ಗೆಜ್ಜಲಗೆರೆ, ಗೌಡಗೆರೆ, ಹೊಳಲು, ಕೆರೆಗೋಡು, ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣ ಮುಡುಕುತೊರೆ ಜಾತ್ರೆ, ಚುಂಚನಕಟ್ಟೆ ಜಾತ್ರೆ ಇನ್ನೂ ಮುಂತಾದ ಕಡೆ ನೂರಾರು ಪ್ರಚಾರಸಭೆಗಳನ್ನು ಏರ್ಪಡಿಸಿ ರೈತರ ಕಷ್ಟನಿಷ್ಠುರಗಳಿಗೆ ಸರ್ಕಾರದ ಗಮನ ಸೆಳೆಯುವಂತೆ, ಪರ್ಯಾಯಕ್ಕೆ ಒತ್ತಾಯಿಸುವಂತೆ ರೈತರಲ್ಲಿ ಅರಿವು ಉಂಟು ಮಾಡಲಾಯಿತು.

ಸರ್ಕಾರವು ರೈತರ ಈ ಪ್ರಯತ್ನಗಳಿಗೆ ನಿರ್ಲಕ್ಷ್ಯ ತೋರಿದಾಗ, ಗೆಜ್ಜಲಗೆರೆ –ಯಲ್ಲಿ ಬೃಹತ್ ರೈತರ ಸಭೆ ಸೇರಿತ್ತು. 1931 ಡಿಸೆಂಬರ್‌ನಲ್ಲಿ ಸಾವಿರಾರು ಸಂಖ್ಯೆಯ ರೈತರು ಕಾಲು ನಡಿಗೆಯಲ್ಲಿ ದಿವಾನರಿರುವ ಬೆಂಗಳೂರಿಗೆ ಜಾಥಾ ಹೋಗಲು ತೀರ್ಮಾನಿಸಲಾಯಿತು. ಆ ವಿಷಯವಾಗಿ ರೈತರು ದಿವಾನರನ್ನೂ (ಸರ್ ಮಿರ್ಜಾ ಇಸ್ಮಾಯಿಲ್) ಕಾಣಬಯಸುವರೆಂದು ಪತ್ರ ಬರೆಯಲಾಯಿತು. ಅದಕ್ಕೆ ಉತ್ತರವಾಗಿ ಸಾಧ್ಯವಾದಷ್ಟು ಕಡಿಮೆ ಸಂಖ್ಯೆಯಲ್ಲಿ 1932ರ ಜನವರಿ 4ನೇ ತಾರೀಖು ಮಧ್ಯಾಹ್ನ 2 ಘಂಟೆಗೆ ಬೆಂಗಳೂರು ಅಠಾರ ಕಚೇರಿಯಲ್ಲಿ ರೈತ ಮುಖಂಡರು ದಿವಾನರನ್ನು ಭೇಟಿ ಮಾಡಬಹುದೆಂದೂ ಆಪ್ತಕಾರ್ಯದರ್ಶಿಯವರಿಂದ ಪತ್ರವು ರೈತ ಮುಖಂಡ–ರಿಗೆ ಬಂದಿತು. ರೈತರು ಕಾಲ್ನಡಿಗೆಯಲ್ಲಿ ಬೆಂಗಳೂರಿಗೆ ತೆರಳಲು ತೀರ್ಮಾನಿಸಿದ್ದರು.

ಪ್ರತಿಗ್ರಾಮದಿಂದ ಜನಸಂಖ್ಯೆಗೆ ಅನುಗುಣವಾಗಿ ರೈತರು ಬರಬೇಕು. ಎಂಟು ದಿನಗಳಿಗೆ ಬೇಕಾದ ಪದಾರ್ಥಗಳ ಸಹಿತ ಒಂದೆರಡು ಎತ್ತಿನ ಬಂಡಿಗಳಲ್ಲಿ ತುಂಬಿಕೊಂಡು ಬರಬೇಕು. ವಯಸ್ಸಾದವರನ್ನು ಅದರಲ್ಲಿ ಕೂರಿಸಿಕೊಂಡು ಉಳಿದವರೂ ಇಬ್ಬಿಬ್ಬರಂತೆ ಶಿಸ್ತಿನಿಂದ ಸಾಲಾಗಿ ಬರಬೇಕು. ರಸ್ತೆಯನ್ನು ಕೊಳಕು ಮಾಡಬಾರದು, ಬಹಿಷ್ಕಾರ ಕೂಗುವುದು, ದಾಂಧಲೆ ಮಾಡುವುದು ನಿಷಿದ್ಧ ಇವೇ ಮುಂತಾದ ನಿಯಮಾವಳಿಗಳನ್ನು ಅಚ್ಚು ಹಾಕಿಸಿ ರೈತರಿಗೆ ಹಂಚಿ ತಿಳುವಳಿಕೆ ನೀಡಲಾಯಿತು. (ಬಹುಶಃ ಇಂದಿನ ತಲೆಮಾರಿನ ಜನ ಚಳುವಳಿ ಇಲ್ಲವೇ ಮುಷ್ಕರ ಮಾಡುವವರು ಈ ರೈತರನ್ನು ನೋಡಿ ಕಲಿಯಬೇಕು). ಈ ವಿಷಯ ತಿಳಿಯುತ್ತಲೇ ಪೊಲೀಸರು ಈ ರೈತರ ಜಾಥಾವನ್ನು ವಿಫಲಗೊಳಿಸಲು ಸಾಕಷ್ಟು ಪ್ರಯತ್ನಿಸಿದರು. ಜಿಲ್ಲಾಧಿಕಾರಿಗಳಂತೂ ಅಂದಿನ ಸರ್ಕಾರದ ವಕ್ತಾರರಂತೆ ವರ್ತಿಸಿದರು. ರೈತರನ್ನೂ, ರೈತ ನಾಯಕರನ್ನು ದೇಶದ್ರೋಹಿಗಳಂತೆ ಪರಿಗಣಿಸುತ್ತಿದ್ದರು. ರೈತ ಮುಖಂಡರು ಇಂತಹ ಸಂದರ್ಭದಲ್ಲಿ ಪೋಲೀಸರೊಂದಿಗೆ ಘರ್ಷಣೆಗೆ ಇಳಿಯದೇ ಉಪಾಯವಾಗಿ ಕಾರ್ಯ ಸಾಧಿಸತೊಡಗಿದರು ಇಲ್ಲವಾದರೇ ರೈತರ ಜಾಥಾ ವಿಫಲವಾಗುವ ಸಾಧ್ಯತೆಗಳು ಹೆಚ್ಚಿದ್ದವು. ಇಂತಹ ಸಂದರ್ಭದಲ್ಲಿ ಸಂಘಟನಾಕಾರರಲ್ಲಿ ಪ್ರಮುಖರಾಗಿದ್ದ ಶ್ರೀ ಹೆಚ್.ಕೆ. ವೀರಣ್ಣಗೌಡರವರು ಬಹಳಷ್ಟು ಎಚ್ಚರಿಕೆಯಿಂದಿದ್ದರು.

ಜಾಥಾಕ್ಕೆ ಬರುವ ರೈತರು ಡಿಸೆಂಬರ್ 31, 1931ರ ಸಂಜೆ 2 ಘಂಟೆಗೆ ಮದ್ದೂರು ಸೇತುವೆ ಬಳಿ ಸೇರಬೇಕೆಂದೂ ತಿಳಿಸಲಾಯಿತು. ಹಲವಾರು ರೈತರು ಮದ್ದೂರು ಸೇತುವೆಯ ಬಳಿ ಗುಂಡು ತೋಪಿನಲ್ಲಿ ಜಮಾಯಿಸಿದ್ದರು. ರೈತರಲ್ಲಿ ಉತ್ಸಾಹದ ಚಿಲುಮೆಯನ್ನು ಕಾಣಬಹುದಾಗಿತ್ತು. ಸೇತುವೆ ಬಳಿ ಇರುವ ಗ್ರಾಮಗಳಲ್ಲಿ ಕಾಲರಾ ಇದೆ ಎಂದು ಸುದ್ದಿ ಹರಡಿತು. ರೈತ ಸಂಘಟನಾಕಾರರು ಸೇತುವೆಯ ದಕ್ಷಿಣಕ್ಕೆ 1 ಮೈಲು ದೂರದಲ್ಲಿರುವ ಕೋಡಿಹಳ್ಳಿ ಗುಂಡು ತೋಪಿನಲ್ಲಿ ಆ ರಾತ್ರಿ

ಸುಮಾರು 1 ಘಂಟೆಗೆ ರೈತರನ್ನೆಲ್ಲ ಸೇರಿಸಿದರು. ಬೆಳಿಗ್ಗೆ 6 ಘಂಟೆಗೆ ರೈತರನ್ನು ಇಬ್ಬಿಬ್ಬರಂತೆ ಸಾಲಾಗಿ ನಿಲ್ಲಿಸಿ ಶಿಸ್ತಿನಿಂದ ಬೆಂಗಳೂರಿನತ್ತ ಪಯಣ ಆರಂಭಿಸಿದರು. ಈ ಸಂಖ್ಯೆ 4 ಸಾವಿರ ಇತ್ತು. 100 ಗಾಡಿಗಳಲ್ಲಿ ಹೊರಟ ಈ ರೈತರಲ್ಲಿ ಕುರುಡರು, ವಯಸ್ಸಾದವರೂ ಇದ್ದರು. ರೈತರಿಗೆ ಬೇಕಾಗಬಹುದೆಂದು ಬ್ರೆಡ್ಡು, ಬಿಸ್ಕತ್ತು, ಎಲೆ, ಅಡಿಕೆ, ಬೀಡಿ, ಸಿಗರೇಟು, ಬೆಂಕಿಪೊಟ್ಟಣ, ಇತ್ಯಾದಿಗಳನ್ನಿಟ್ಟುಕೊಂಡು ಮಂಡ್ಯದ ತಿ. ವೆಂಕಟಗಿರಿಯಪ್ಪನವರು ಗಾಡಿ ಅಂಗಡಿಯನ್ನೂ (ತಾತ್ಕಾಲಿಕ ಸಂಚಾರಿ ಅಂಗಡಿ) ಸಾಗಿಸಿಕೊಂಡು ಬಂದರು. ಸಾಲು ನಡಿಗೆಯ ಶಿಸ್ತು ನಿರ್ವಹಿಸಲು ಮಲ್ಲಿಗೆರೆ ಪಾಪಣ್ಣ –ನವರ ನೇತೃತ್ವದ 100 ಮಂದಿ ಸೈಕಲ್ ಸವಾರರು ಜೊತೆಗಿದ್ದರು. ಚನ್ನಪಟ್ಟಣ ದಾಟಿ ಹೋಗುವಲ್ಲಿ ರೈತರ ಶಿಸ್ತು ನಿರ್ವಹಣೆ ಕಂಡು ಮೈಸೂರಿಗೆ ಕಾರಿನಲ್ಲಿ ಹಿಂದಿರುಗುತ್ತಿದ್ದ ಮೈಸೂರು ಜಿಲ್ಲಾಧಿಕಾರಿ ಅಬ್ದುಲ್ವಾಜೀರ್ ಅವರು ನೋಡಿ ಸಂತೋಷಪಟ್ಟು ದಿವಾನರಿಗೂ ತಿಳಿಸಿದರು. ಅದು ದಿವಾನರಿಗೂ ಮೆಚ್ಚುಗೆ ಆಗಿತ್ತೆಂದೂ ತಿಳಿಯಿತು.

ಹಾದಿಯುದ್ದ ಎಲ್ಲಾ ಗ್ರಾಮ ಪಟ್ಟಣಗಳವರು ಹಸಿರುಚಪ್ಪರ ಹಾಕಿ ಸ್ವಾಗತಿಸಿ ಶುಭ ಹಾರೈಸಿದರು. ಹೆಂಗಸರು ಆರತಿಬೆಳಗಿ ಬೀಳ್ಕೊಟ್ಟರು. ಕೆಂಗೇರಿ ನಾಗಣ್ಣನವರ ಛತ್ರದಲ್ಲಿ ರಾತ್ರಿ ತಂಗಿದ್ದಾಗ ನಾಗಣ್ಣನವರು ಬಂದು ಜಾಥಾಕ್ಕೆ ಯಶಸ್ಸು ಕೋರಿದರು. ಜಾಥಾದ ರೈತರ ರುಜುಗಳನ್ನು ಹಾಕಿಸಿದ ಹಾಳೆಗಳನ್ನು ಬೈಂಡ್ ಮಾಡಿಸಿ ಇರ್ವಿನ್ ನಾಲಾ ರೈತರ ರುಜುಗಳ ಪುಸ್ತಕ ಎಂದೂ ಅಚ್ಚು ಮಾಡಿಸಿದರು. ದಿವಾನರಿಗೆ ಸಲ್ಲಿಸಬೇಕಾದ ಅರ್ಜಿಯಲ್ಲಿ 14 ಬೇಡಿಕೆಗಳನ್ನು ಮಂಡಿಸಲಾಗಿತ್ತು. ಬೆಂಗಳೂರಿಗೆ ಬಂದ ರೈತರ ಜಾಥಾವನ್ನು ಬೆಂಗಳೂರಿನ ಸಾವಿರಾರು ನಾಗರೀಕರು ಸ್ವಾಗತಿಸಿದರು. ಚಾಮರಾಜಪೇಟೆ ಒಂದನೇ ರಸ್ತೆಗೆ ಬಂದು, ಕೋಟೆಯ ಮುಂದಿನಿಂದ ಸಾಗಿ ಅಠಾರ ಕಛೇರಿ ಮೈದಾನದಲ್ಲಿ 1932ನೇ ಜನವರಿ 4ರ ಮಧ್ಯಾಹ್ನ 12 ಗಂಟೆ ಸುಮಾರಿಗೆ ರೈತರೆಲ್ಲ ಸಾಲಾಗಿ ಶಿಸ್ತಿನಿಂದ ಕುಳಿತರು.

ಸರ್ ಮಿರ್ಜಾ ಇಸ್ಮಾಯಿಲ್ ದಿವಾನರು 8–10 ಜನ ರೈತ ಮುಖಂಡರನ್ನು ಮಾತ್ರ ನೋಡಬಯಸಿದರು. ವೀರಣ್ಣಗೌಡರು ದಿವಾನರಲ್ಲಿಗೆ ಹೋಗಿ ಸಾವಿರಾರು ಮಂದಿ ರೈತರಿಗೆ ದಿವಾನರ ಕಛೇರಿಯಲ್ಲಿ ಜಾಗವಾಗದಿರುವುದರಿಂದ, ಎಲ್ಲಾ ರೈತರು ದಿವಾನರನ್ನು ನೇರ ನೋಡಲು ಅಪೇಕ್ಷಿಸಿರುವುದರಿಂದ ದಿವಾನರೇ ರೈತರಿರುವಲ್ಲಿಗೆ ಬರಲು ಆಹ್ವಾನಿಸಿದರು. ಅಠಾರ ಕಛೇರಿಯ ದಕ್ಷಿಣ ಭಾಗದ ಹುಲ್ಲಿನ ಮೈದಾನದ ವೇದಿಕೆಯ ಪೀಠಗಳ ಮೇಲೆ ದಿವಾನರು, ಕೌನ್ಸಿಲರು, ಸರ್ಕಾರಿ ಕಾರ್ಯದರ್ಶಿಗಳು, ಇಲಾಖಾ ಮುಖ್ಯಾಧಿಕಾರಿಗಳು ಮುಂತಾದವರು ಆಸೀನರಾದರು. ರೈತರು ಕಾಲ್ನಡಿಗೆ ಬಿಟ್ಟು ರೈಲಿನಲ್ಲಿ ಬರಬಹುದಿತ್ತಲ್ಲ, ಎಂದು ದಿವಾನರು ನುಡಿದಾಗ ಬಡರೈತರು

15–20 ಸಾವಿರ ರೂ. ಖರ್ಚು ಮಾಡಿಕೊಂಡು ಬರಲು ಸಾಧ್ಯವೇ? ಎಂದೂ ವೀರಣ್ಣಗೌಡರು ನುಡಿದಿದ್ದರು.

ಅಂದು ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್‌ರವರು ರೈತರ ಶಿಸ್ತು, ಸಂಯಮ, ಜನಜಾಗೃತಿಯನ್ನು ಕಂಡು ಬೆಚ್ಚಿ ಬಿದ್ದರು. ರೈತ ಮುಖಂಡರು ದಿವಾನರೊಡನೆ ನಡೆಸಿದ ಚರ್ಚೆಯಲ್ಲಿ ರೈತರು ಒಂದೇ ಬಾರಿಗೆ ಕಾಂಟ್ರಿಬಿಷನ್ ಹಣ ಕೊಡಬೇಕೆಂಬುದು, ತಪ್ಪಿದರೆ ಶೇಕಡ 6ರಂತೆ ಬಡ್ಡಿ ಕೊಡಬೇಕೆಂಬ ಸರ್ಕಾರದ ಆಜ್ಞೆ ಸಾಧುವಲ್ಲ ಹಾಗೂ ಸಾಧ್ಯವೂ ಇಲ್ಲ. ರೈತರು, ವರ್ತಕರಂತೆ ಶ್ರೀಮಂತರು ಹಾಗೂ ಬಂಡವಾಳಗಾರರಲ್ಲ. ಆದರೆ ಸರ್ಕಾರವು ರೈತರಿಗೆಂದು ಕೋಟ್ಯಂತರ ರೂಪಾಯಿ ಖರ್ಚುಮಾಡಿ ಅಣೆಕಟ್ಟು ಕಟ್ಟಿ ಕಾಲುವೆ ತೋಡಿ ಉಪಕಾರ ಮಾಡಿರುವುದು ಸ್ವಾಗತಾರ್ಹ. ಆದರೆ ರೈತರಿಗೆ ಮತ್ತಷ್ಟು ಅನುಕೂಲವಾಗುವ ಸುಧಾರಣೆಗಳನ್ನು ಮಾಡಬೇಕೆ ವಿನಃ ತೊಂದರೆ ಕೊಡಬಾರದೆಂದೂ ವಿನಂತಿಸಿ-ಕೊಂಡರು. ರೈತರ ಪ್ರಾರ್ಥನೆಯನ್ನು ಮನ್ನಿಸಿದ ದಿವಾನರು ಈಗಾಗಲೇ ಹಾಕಿರುವ ಬಡ್ಡಿಯನ್ನು ವಜಾಮಾಡಲಾಗುವುದು, ಕಾಂಟ್ರಿಬಿಷನ್ ಹಣವನ್ನು 10 ಕಂತುಗಳಲ್ಲಿ ತೀರಿಸಲು ಅವಕಾಶ ನೀಡಲಾಗುವುದು, 10 ವರ್ಷಗಳು ಕಳೆದ ಮೇಲೆ ಉಳಿಕೆ ಹಣಕ್ಕೆ ಬಡ್ಡಿ ಕೊಡಬೇಕಾಗುವುದು ಎಂಬ ಆಜ್ಞೆಯನ್ನು ಹೊರಡಿಸುವುದಾಗಿ ತಿಳಿಸಿ-ದರು. ಇದರಿಂದ ಸುಪ್ರೀತರಾದ ರೈತರು ದಿವಾನರಿಗೆ ಜೈಕಾರ ಹಾಕಿದರು. ರೈತ ಚಳವಳಿಯ ಸಮಯದಲ್ಲಿ ಇರ್ವಿನ್ ನಾಲಾ ರೈತರ ಕಷ್ಟ ನಷ್ಟಗಳು ಎಂಬ ಪುಸ್ತಕವು ರೈತ ಸಂಘದಿಂದ ಪ್ರಕಟವಾಯಿತು. ಈ ಪುಸ್ತಕವನ್ನು ವಶಪಡಿಸಿಕೊಳ್ಳುವ ಸರ್ಕಾರದ ಕ್ರಮವು ಸಫಲವಾಗಲಿಲ್ಲ.

ಈ ನಡುವೆ ರೈತ ಸಂಘವು ಕೃಷ್ಣರಾಜ ಸಾಗರದ ಮುಖ್ಯದ್ವಾರದ ಮಂಟಪದಲ್ಲಿರುವ ಟಿಪ್ಪುಸುಲ್ತಾನನ ಶಾಸನದ ಕನ್ನಡ ಭಾಷಾಂತರದ ಹತ್ತು ಸಾವಿರ ಅಚ್ಚಾದ ಪ್ರತಿಗಳನ್ನು ಸೇರಿದ್ದ ರೈತರೆಲ್ಲರಿಗೂ ಮುಖಂಡರು ಹಂಚಿದರು. ಆ ಶಾಸನದ ರೀತ್ಯಾ ಟಿಪ್ಪು ಕಟ್ಟಿಸುತ್ತಿದ್ದ (ಸುಮಾರು 70 ಅಡಿ) ನಾಲೆಯಿಂದ ಬೇಸಾಯ ಮಾಡುವ ರೈತರು ಬೇರೆಡೆ ವ್ಯವಸಾಯದ ರೈತರು ಕೊಡುವ ಕಂದಾಯದಲ್ಲಿ ರೂಪಾಯಿಯ 12 ಆಣೆಯಷ್ಟು ಕೊಟ್ಟರೆ ಸಾಕು. ಉಳಿದ 4 ಆಣೆಯನ್ನು ದೇವರ ಹೆಸರಲ್ಲಿ ಧರ್ಮವಾಗಿ ಬಿಡಲಾಗಿದೆ. ಇದಕ್ಕೆ ವಿರೋಧವಾಗಿ ನಡೆದುಕೊಳ್ಳುವವರು ಸೈತಾನರು ಎಂದೆಲ್ಲಾ ಇತ್ತು. ಈ ವಿಷಯದ ಸಾವಿರಾರು ಪ್ರತಿಗಳು ರೈತರಿಗೆ ಹಂಚಿದ ಕಾರಣ ಸರ್ಕಾರಕ್ಕೆ ಇರಿಸು ಮುರಿಸು ಆಗಿತ್ತು. ಈ ಬಗ್ಗೆ ದಿವಾನರು ಹೆಚ್ಚು ಮಾತನಾಡಲಾಗದೇ ಮೈಸೂರಿಗೆ ಹಿಂತಿರುಗಿದ್ದರು. ನಿಷೇಧಾಜ್ಞೆ ಉಲ್ಲಂಘಿಸಿದರೆಂದು ಹೆಚ್.ಕೆ. ವೀರಣ್ಣಗೌಡರು ಸೇರಿದಂತೆ 10–12 ಮಂದಿ ರೈತರ ಮೇಲೆ ಕ್ರಿಮಿನಲ್ ಕೇಸ್ ಸರ್ಕಾರ ದಾಖಲು ಮಾಡಿದುದು ರೈತರಿಗೆ ಅಸಮಾಧಾನವಾಯಿತು.

ಹೀಗೆ ಮಂಡ್ಯ ಕಡೆಯಿಂದ ಬಂದ ರೈತರು ತಮ್ಮ ಜಾಥಾವನ್ನು ಮುಗಿಸಿಕೊಂಡು ಪ್ರಸ್ತುತ ವಿವಿಪುರಂ ಬಡಾವಣೆಯಲ್ಲಿರುವ ಒಕ್ಕಲಿಗರ ಸಂಘಕ್ಕೆ ಬರುವಂತೆ ಒಕ್ಕಲಿಗರ ಸಂಘವು ಅವರಿಗೆ ಆಹ್ವಾನ ನೀಡಿತ್ತು. ರೈತರಿಗೆ ಸಂಘವು ಭೋಜನವನ್ನು ಏರ್ಪಡಿಸಿತ್ತು. ಇದಕ್ಕೆ ಕಾರಣವೇನೆಂದರೆ ಶ್ರೀ ಹೆಚ್.ಕೆ. ವೀರಣ್ಣಗೌಡರವರು ರಾಜ್ಯ ಒಕ್ಕಲಿಗರ ಸಂಘದ ಪದಾಧಿಕಾರಿಗಳು ಆಗಿ ಸೇವೆ ಸಲ್ಲಿಸಿದ್ದರು. ರೈತರು ಜಾಥಾ ಮಾಡಿದ ಸುದ್ದಿಯನ್ನು ಒಕ್ಕಲಿಗರ ಪತ್ರಿಕೆ ಸೇರಿದಂತೆ ರಾಜ್ಯದ ಹಲವಾರು ಪತ್ರಿಕೆಗಳು ಪುಂಖಾನುಪುಂಖವಾಗಿ ಬರೆದವು. ಕೆಲವು ಬುದ್ಧಿ ಜೀವಿಗಳು ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಕೆಲವಾರು ಲೇಖನಗಳನ್ನು ಬರೆದವು. ಪ್ರಜಾಪ್ರತಿನಿಧಿ ಸಭೆಯಲ್ಲಿ ಸರ್ಕಾರದ ವಿರುದ್ಧ ಪ್ರಜಾ ಪ್ರತಿನಿಧಿಗಳು ಸಾಕಷ್ಟು ಟೀಕೆ ಮಾಡಿದರು. ಒಟ್ಟಾರೆ ಹೇಳುವುದಾದರೆ ಈ ರೈತರ ಜಾಥಾ ರೈತರಲ್ಲಿ ಮಾತ್ರವಲ್ಲ, ಶ್ರೀಸಾಮಾನ್ಯರಲ್ಲಿಯೂ ಜನ ಜಾಗೃತಿಯನ್ನು ಮೂಡಿಸಿತ್ತು. ಅಸಂಘಟಿತರಾದ ರೈತರು ಪ್ರಪ್ರಥಮ ಬಾರಿಗೆ ಸಂಘಟಿತರಾದರು.

1922ರಲ್ಲಿ ಇದೇ ತೆರನಾದ ರೈತ ಚಳುವಳಿಯನ್ನು ಗುಜರಾತಿನ ಬರ್ಡೋಲಿ ಎಂಬಲ್ಲಿ ರೈತರ ಬೃಹತ್ ಜಾಥಾ ಮತ್ತು ರೈತರ ಸತ್ಯಾಗ್ರಹವನ್ನು ಅಂದಿನ ಧೀಮಂತ ನಾಯಕ ವಲ್ಲಭಬಾಯಿ ಪಟೇಲರವರು ನಡೆಸಿ ಯಶಸ್ವಿಯಾದುದರಿಂದ ಅವರಿಗೆ ರೈತನಾಯಕ ಹಾಗೂ ಸರ್ದಾರ್ ಎಂಬ ಬಿರುದನ್ನು ರೈತರು ನೀಡಿದ್ದರು. ಅಂದಿನಿಂದ ವಲ್ಲಭಬಾಯಿ ಪಟೇಲರವರು ಸರ್ದಾರ್ ವಲ್ಲಭಬಾಯಿ ಪಟೇಲ್‌ರಾದರು. ಈ ವಿಷಯನ್ನು ಈಗ ಏಕೆ ಪ್ರಸ್ತಾಪಿಸುತ್ತಿದ್ದೇನೆಂದರೆ ಅದೇ ತೆರನಾದ ರೈತ ಸತ್ಯಾಗ್ರಹವನ್ನು ಶ್ರೀ ಹೆಚ್.ಕೆ. ವೀರಣ್ಣಗೌಡರವರು ಮಾಡಿ ದನಿಯಿಲ್ಲದ ರೈತರ ದನಿಯಾಗಿ ಮೇರು ವ್ಯಕ್ತಿಯಾಗಿ ಹೊರಹೊಮ್ಮಿದರು. ಇಂದಿಗೂ ಕೂಡ ಇವರು ಮಾಡಿದ ರೈತ ಜಾಥಾ ಕರ್ನಾಟಕ ಇತಿಹಾಸದ ರೈತ ಚಳವಳಿಯಲ್ಲಿ ಒಂದು ಮೈಲುಗಲ್ಲಾಗಿ ಉಳಿದಿದೆ. (ಬದುಕು ಮೆಲುಕು – ಹೆಚ್.ಕೆ. ವೀರಣ್ಣಗೌಡ)

ಈ ಅಧ್ಯಾಯದಲ್ಲಿ ಅಸಂಘಟಿತ ರೈತರ ಸಂಕಷ್ಟಗಳು ಹಾಗೂ ಈ ಸಂಕಷ್ಟಗಳನ್ನು ಪರಿಹರಿಸಿಕೊಳ್ಳಲು ಪ್ರಪ್ರಥಮ ಬಾರಿಗೆ ಸಂಘಟಿತರಾದುದು, ಸಂಘಟನೆಯ ಮೂಲಕ ಏನೆಲ್ಲಾ ಸಾಧಿಸಬಹುದು ಎಂಬುದನ್ನು ಈಗಾಗಲೇ ನಮ್ಮ ರೈತರು ಸಾಬೀತು ಮಾಡಿ ತೋರಿಸಿದ್ದಾರೆ. ಇನ್ನು ಮುಂದಾದರೂ ಬುದ್ಧಿವಂತರಾದ ನಮ್ಮ ರೈತರು ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೇ, ರಾಜಕೀಯ ಪಕ್ಷಗಳ ಮರ್ಜಿಗೆ ಒಳಗಾಗದೇ ತಮ್ಮ ಪಕ್ಷವಾದ "ರೈತ ಸಂಘ"ವನ್ನು ಬೆಂಬಲಿಸಬೇಕೇ ಪರಂತು ಹಣ ಮತ್ತು ಹೆಂಡಕ್ಕಾಗಿ ತಮ್ಮ ರತ್ನಖಚಿತವಾದ ಓಟನ್ನು ರಾಜಕೀಯ ಪಕ್ಷಗಳಿಗೆ ನೀಡುವುದು ಸರಿಯಲ್ಲ. ಈ ನಾಡಿನ ಒಂದು ದುರಂತವೆಂದರೆ ಲಕ್ಷೋಪಲಕ್ಷ

ಸಂಖ್ಯೆಯಲ್ಲಿರುವ ರೈತರು ಸಂಘಟಿತರಾಗಿ ರೈತ ಸಂಘಕ್ಕೆ ಮತ ನೀಡಿ ಈ ರೈತ ಸಂಘದಿಂದ ಕನಿಷ್ಠ 20 ರಿಂದ 25 ಜನ ಶಾಸಕರನ್ನು ಗೆಲ್ಲಿಸಲಾರದೇ ಇರುವುದು. ಒಂದೆರಡು ದಶಕಗಳ ಹಿಂದೆ ಪ್ರೊ. ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ಚಾಲ್ತಿಯಲ್ಲಿದ್ದ ಅಥವಾ ಸುದ್ದಿಯಲ್ಲಿದ್ದ ರೈತಸಂಘವು ಬರುಬರುತ್ತಾ ತಣ್ಣಗಾದುದು ವಿಪರ್ಯಾಸವೇ ಸರಿ. ರೈತರು ಮಾರವಾಡಿಗಳ, ಅಧಿಕಾರಶಾಹಿಗಳ, ರಾಜಕಾರಣಿಗಳ, ಕೈಗೊಂಬೆಯಾಗಿದ್ದಾರೆ. ರೈತ ದೇಶದ ಬೆನ್ನುಲುಬು ಎಂತೆಲ್ಲಾ ಘೋಷಣೆ ಮಾಡುವ ಸರ್ಕಾರವು ಖಾಸಗೀಕರಣ, ಜಾಗತೀಕರಣ, ಉದಾರೀಕರಣದ ನೆಪದಲ್ಲಿ ವಿದೇಶಿ ಕಂಪನಿಗಳು, ವಿದೇಶಿ ಆಹಾರ ಪದಾರ್ಥಗಳು (ಅಡುಗೆ ಎಣ್ಣೆ ಸೇರಿದಂತೆ) ಭಾರತಕ್ಕೆ ಲಗ್ಗೆ ಇಡುತ್ತಿವೆ. ಪಂಜಾಬಿನಲ್ಲಿ ಗೋಧಿಯನ್ನು ರೈತರಿಂದ ಸಾರಾಸಗಟಾಗಿ ಕೇವಲ 2 ರೂಪಾಯಿಯಿಂದ 5 ರೂಪಾಯಿಗೆ ಕೊಂಡುಕೊಂಡು ಆದರ್ಶ ಅಟ್ಟ, ಪಿಲ್ಸಬರಿ, ಅನ್ನಪೂರ್ಣ ಆಟ್ಟ, ಇವೇ ಮುಂತಾದ ಹೆಸರಿನಿಂದ 20 ರಿಂದ 25ರೂ.ಗೆ ಪ್ಲಾಸ್ಟಿಕ್ ಪಟ್ಟಣದಲ್ಲಿ ಮಾರಾಟ ಮಾಡುತ್ತಿವೆ. ಇದರಿಂದಾಗಿ ರೈತರು ಬೆಳೆದ ಬೆಳೆಗೆ ನ್ಯಾಯವಾದ ಬೆಲೆ ಸಿಗುತ್ತಿಲ್ಲ. ಇಷ್ಟೇ ಅಲ್ಲ ಹೈನುಗಾರಿಕೆ ಮಾಡಿ ಕಷ್ಟಪಟ್ಟು ರೈತ ಮಾರುವ ಒಂದು ಲೀಟರ್ ಹಾಲಿಗೆ 10 ರೂಪಾಯಿಯಿಂದ 12 ರೂಪಾಯಿ, ಅದೇ ಮಿನರಲ್ ವಾಟರ್ (ಖನಿಜಯುಕ್ತ ನೀರು) ಎಂಬ ಬೋರ್‌ವೆಲ್ ನೀರಿಗೆ ಒಂದು ಲೀಟರ್‌ಗೆ 12 ರೂಪಾಯಿಯಿಂದ 15 ರೂಪಾಯಿ. ಇಂತಹ ದಂಧೆಗೆ ಬಿಸಿಲರಿ, ಕಿನ್ಲೆ, ಕಿಂಗ್ ಫಿಷರ್‌ನಂತಹ ಬೃಹತ್ ಕಂಪನಿಗಳು ಇಳಿದಿವೆ. ಇವುಗಳನ್ನು ರೈತ ಸಂಘವು ತೀವ್ರವಾಗಿ ಖಂಡಿಸಬೇಕು. ಜನಜಾಗೃತಿ ಮೂಡಿಸಬೇಕು. ಸರ್ಕಾರವನ್ನು ಎಚ್ಚರಿಸಬೇಕು. ಕೆಲವು ವರ್ಷಗಳ ಹಿಂದೆ ಈ ಕಂಪನಿಗಳು ಸರಬರಾಜು ಮಾಡುತ್ತಿರುವ ಹಾಗೂ ಮಾರಾಟ ಮಾಡುತ್ತಿರುವ ಮಿನರಲ್ ವಾಟರ್ ಉತ್ತಮ ಗುಣಮಟ್ಟದಲ್ಲಿ ಇಲ್ಲ ಎಂಬುದಾಗಿ ಕೆಲವು ಪ್ರತಿಷ್ಠಿತ ಪ್ರಯೋಗಾಲಯಗಳು ಅವುಗಳ ಸಾಚಾತನವನ್ನು ಜಗಜ್ಜಾಹೀರು ಮಾಡಿದವು. ಕೊನೆಗೆ ಇದು ಪಾರ್ಲಿಮೆಂಟಿನಲ್ಲಿಯೂ ಚರ್ಚಿತವಾಯಿತು. ಕಾಲಾನಂತರ ಇದು ಮರೆತೇ ಹೋಯಿತು. ಮತ್ತೊಂದು ತಾಜಾ ಉದಾಹರಣೆ ಎಂದರೆ ಅಯೋಡಿನ್‌ಯುಕ್ತ ಉಪ್ಪು. ಗಳಗಂಡವನ್ನು ನಿವಾರಿಸಲು ಅಯೋಡಿನ್‌ನ ಅಗತ್ಯವಿದೆ ಆದರೆ ಈ ಅಯೋಡಿನ್ ಸಮುದ್ರದ ಮೀನು ಸೇರಿದಂತೆ ನಾವು ಬಳಸುವ ಕೆಲವಾರು ಆಹಾರ ಪದಾರ್ಥಗಳಲ್ಲಿ ಅಯೋಡಿನ್‌ನ ಅಂಶವಿದೆ. ನಾವು ಅತ್ಯಲ್ಪ ಅಯೋಡಿನನ್ನು ಬಳಸಿದರೆ ಸಾಕು ಆದರೆ ನಮ್ಮ ಪೂರ್ವಿಕರು ಈ ಅಯೋಡಿನ್ ಬೆರೆಸಿದ ಉಪ್ಪನ್ನೇನೂ ಬಳಸುತ್ತಿರಲಿಲ್ಲ, ಹಾಗೆಂದ ಮಾತ್ರಕ್ಕೆ ಅವರಿಗೆ ಗಳಗಂಡವೇನು ಇರುತ್ತಿರಲಿಲ್ಲ. ಅವರು ಸಾಮಾನ್ಯವಾಗಿ ಎಲ್ಲರೂ ಬಳಸುವ ಉಪ್ಪನ್ನೇ ಬಳಸುತ್ತಿದ್ದರು. ಈ ಅಯೋಡಿನ್‌ಯುಕ್ತ ಉಪ್ಪು ಇತ್ತೀಚೆಗಷ್ಟೇ ಪ್ರಚಾರಕ್ಕೆ ಬಂದುದ್ದು, ಈ ಉಪ್ಪು 1 ಕೆ.ಜಿ.ಗೆ 9 ರೂಪಾಯಿಯಿಂದ 10 ರೂಪಾಯಿಗೆ ಮಾರಾಟವಾಗುತ್ತಿದೆ.

ಈ ತರಹದ ಲಾಭದ ದಂಧೆಗೆ ಉಕ್ಕನ್ನು ತಯಾರು ಮಾಡುತ್ತಿರುವ ಟಾಟಾದಂತಹ ಕಂಪನಿಗಳು ಇಳಿದಿವೆ. ಇದು ಒಂದು ರೀತಿಯ ಬಂಡವಾಳವಿಲ್ಲದ ವ್ಯಾಪಾರ. ನೈಸರ್ಗಿಕವಾಗಿ ಸಿಗುವ ಉಪ್ಪು ಹೆಚ್ಚು ಖರ್ಚಿಲ್ಲದ ಸ್ವಲ್ಪಭಾಗ ಅಯೋಡಿನ್ ಬಳಸಿ ಅಧಿಕ ಬೆಲೆಗೆ ಮಾರಾಟ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ವಿಪರ್ಯಾಸವೆಂದರೆ 1 ಕೆ.ಜಿ. ಅಕ್ಕಿಗೆ 3 ರೂಪಾಯಿ, ಅದೇ 1 ಕೆ.ಜಿ. ಉಪ್ಪಿಗೆ 9 ರೂಪಾಯಿಯಿಂದ 10 ರೂಪಾಯಿ ತೆರಬೇಕು. ಮಹಾತ್ಮಾಗಾಂಧೀಜಿಯವರು ಬ್ರಿಟಿಷರ ವಿರುದ್ಧ ಉಪ್ಪಿನ ಸತ್ಯಾಗ್ರಹವನ್ನು ಮಾಡಿ ಯಶಸ್ವಿಯಾದರು. ಆದರೆ ಹಿಂದೆ ಬ್ರಿಟೀಷರು ಮಾಡುತ್ತಿದ್ಧ ದಂಧೆಯನ್ನು ಈಗ ಬೃಹತ್ ಕಂಪನಿಗಳು ಮಾಡುತ್ತಿವೆ. ಈ ಶೋಷಣೆಯ ವಿರುದ್ಧ ಹೋರಾಡುವವರು ಯಾರು?

ಹೀಗೆ ರೈತರು ಸಂಘಟಿತರಾಗಿ ಇಂತಹ ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡು ಶಾಸನ ಸಭೆಯಲ್ಲಿ ರೈತರಿಗೆ ನ್ಯಾಯ ಒದಗಿಸಿಕೊಡಬೇಕು. ಕೆಲವು ರಾಜಕಾರಣಿಗಳು ತಮ್ಮ ತಮ್ಮ ಕ್ಷೇತ್ರವನ್ನು ಗುತ್ತಿಗೆ ಹಿಡಿಯುವಂತೆ ಬದಲಾವಣೆ ಸಮಯದಲ್ಲಿ ಸಾಮಾನ್ಯವಾಗಿ ಗೆಲ್ಲುತ್ತಾರೆ. **ರೈತಾಪಿ ಜನರು ರಾಜಕಾರಣಿಗಳ ಮರ್ಜಿಗೆ ಒಳಗಾಗದೇ ತಮ್ಮದೇ ಆದ ಪಕ್ಷವಾದ ರೈತಸಂಘಕ್ಕೆ ಮತ ನೀಡಿ ರೈತ ಸಂಘಟನೆಗೆ ಶಕ್ತಿ ತುಂಬುವುದು ಅಗತ್ಯವಾಗಿದೆ.** ಇನ್ನು ಮುಂದಾದರೂ ರೈತರು ರೈತ ಸಂಘಟನೆಯನ್ನು ಶಕ್ತಿಶಾಲಿಯನ್ನಾಗಿ ಮಾಡಿ ದನಿಯಿಲ್ಲದ ರೈತರಿಗೆ ದನಿಯಾಗಿ ಅಶಕ್ತ ರೈತರ ಪಾಲಿಗೆ ಶಕ್ತಿಶಾಲಿಯಾದ ಪಕ್ಷವನ್ನು ಕಟ್ಟಿ ರೈತರ ಪರ ಹೋರಾಡುವುದು ಅನಿವಾರ್ಯವಾಗಿದೆ. ಕಾರಣವೇನೆಂದರೆ ಬಹುತೇಕ ಒಕ್ಕಲಿಗರು ರೈತರಾಗಿದ್ದಾರೆ.

□

ನಾಡಿನ ಸಾಹಿತ್ಯ, ಕಲೆ, ಸಂಸ್ಕೃತಿಗೆ ಒಕ್ಕಲಿಗರ ಕೊಡುಗೆ

ಒಕ್ಕಲಿಗರು ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿರುವುದನ್ನು ಈಗಾಗಲೇ ಸವಿಸ್ತಾರವಾಗಿ ತಿಳಿಸಲಾಗಿದೆ. ಸಾಮ್ರಾಟರಾಗಿ, ನಾಡಪ್ರಭುಗಳಾಗಿ, ಪಾಳೆಯಗಾರರಾಗಿ, ಫೌಜುದಾರರಾಗಿ ಆಡಳಿತದ ಕೊನೆಯ ಹಂತವಾದ ಗ್ರಾಮ ಮುಖಂಡರಾಗಿ ದುಡಿದಿದ್ದಾರೆ. ಅಂದಿನಿಂದ ಇಂದಿನವರೆವಿಗೂ ಸಾಹಿತ್ಯ, ಕಲೆ, ಸಂಸ್ಕೃತಿ, ನಾಡು, ನುಡಿಗೆ ದುಡಿಯುತ್ತಿದ್ದಾರೆ.

ಸಾಹಿತ್ಯ – ಕನ್ನಡದ ಮೇರು ಲೇಖಕರಾದ ಡಾ. ರಂ.ಶ್ರೀ ಮುಗಳಿಯವರು ತಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೀಗೆ ಉಲ್ಲೇಖಿಸುತ್ತಾರೆ. ಸಾಹಿತ್ಯ ಪದವಿಗೆ ಏರಲು ಮೂರು ಕಾರಣಗಳು 1) ಶ್ರವಣಪ್ರಿಯ ಬಹುಜನ ಸಮಾಜ 2) ಪ್ರತಿಷ್ಠಾಪ್ರಿಯ ವಿದ್ವಾನ್ ಪಂಡಿತವರ್ಗ 3) ಕೀರ್ತಿಪ್ರಿಯ ಆಶ್ರಯಶೀಲ ರಾಜರು. ಇವುಗಳಲ್ಲಿ ಎರಡು ಕಾರಣಗಳು ಅನುಕೂಲವಿದ್ದರೆ ಮೂರನೆಯ ಕಾರಣವು ಅನುಕೂಲವಾಗುತ್ತಾ ಹೋಗುತ್ತದೆ. ಬಹುಜನ ಭಾಷೆ, ಪಂಡಿತರಿಗೆ ಮಾನ್ಯವಾದರೆ ರಾಜಾಶ್ರಯವನ್ನು ದೊರಕಿಸುವುದು ಕಠಿಣವಾಗಲಾರದು. ("ಕನ್ನಡ ಸಾಹಿತ್ಯ ಚರಿತ್ರೆ" – ರಂ.ಶ್ರೀ. ಮುಗಳಿ, ಬೆಂಗಳೂರು, 2002, ಪುಟ–17,) ಈ ಮಾತು ಗಂಗ ದೊರೆಗಳಿಗೆ ಸಲ್ಲುತ್ತದೆ. ಗಂಗರು ಸಾಹಿತ್ಯಾಭಿಮಾನಿಗಳು, ಕಲಾಪೋಷಕರು, ಸ್ವತಃ ಕವಿಗಳೂ ಆಗಿದ್ದು ಸಾಹಿತ್ಯಕ್ಕೆ ಸಾಕಷ್ಟು ಕೊಡುಗೆಯನ್ನು ನೀಡಿದ್ದಾರೆ. ಗಂಗರಸರು ರಣರಂಗಕ್ಕಿಳಿದರೆ ಸಹಸ್ರ ಸಹಸ್ರ ರುಂಡಗಳನ್ನು ಚಂಡಾಡಬಲ್ಲವರಾಗಿದ್ದರು. ಅದೇ ರೀತಿ ಲೇಖನಿಯನ್ನು ಹಿಡಿದು ಸಹಸ್ರ ಸಹಸ್ರ ಪುಟಗಳ ಸಾಹಿತ್ಯ ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಗಂಗ ದೊರೆಗಳಲ್ಲಿ ಪರಾಕ್ರಮದಲ್ಲಿಯೂ, ಪಾಂಡಿತ್ಯದಲ್ಲಿಯೂ ಅಷ್ಟೇ ಹೆಸರಾದ ದುರ್ವಿನೀತನ (ಕ್ರಿ.ಶ. 529–70) ಕಾಲದಲ್ಲಿ ಸಾಹಿತ್ಯವು ಪ್ರಫುಲ್ಲ ಪುಷ್ಪದಂತೆ ಅರಳಿತು. ಅವನೇ ಕವಿರಾಜ ಮಾರ್ಗದಲ್ಲಿ ಹೇಳಿರುವ ದುರ್ವಿನೀತನಾಗಿರಬೇಕು.

ಗಂಗರಶಾಸನಗಳಲ್ಲಿ ಅವನ ಬಹುಮುಖವಾದ ಪಾಂಡಿತ್ಯ, ಪ್ರತಿಭೆಗಳ ವರ್ಣನೆಯಲ್ಲದೆ ಅವನು ರಚಿಸಿದ ಹಲವು ಗ್ರಂಥಗಳ ಸ್ಪಷ್ಟ ಉಲ್ಲೇಖವಿದೆ (ಆರ್. ನರಸಿಂಹಾಚಾರ್ : History of Karnatka Literature, P.P. -2—&3 : MAR-1924)

ದುರ್ವಿನೀತನು "ಶಬ್ದಾವತಾರ" ಎಂಬ ವ್ಯಾಕರಣ ಗ್ರಂಥವನ್ನು ರಚಿಸಿದ್ದಾನೆ. ನಂತರ ಅಂದೇ ಗಂಗರ ವಂಶಸ್ಥನಾದ ರಾಜ ಶ್ರೀಪುರುಷನು 'ಗಜಶಾಸ್ತ್ರ' ಎಂಬ ಕೃತಿಯನ್ನು ರಚಿಸಿದನು. ಈ ಕೃತಿಯು ಆನೆಗಳನ್ನು ಪಳಗಿಸುವ ವಿವರಣೆ ನೀಡುವ ಉಪಯುಕ್ತ ಕೃತಿಯಾಗಿದೆ.

ಇದೇ ರೀತಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ಸಾಹಿತ್ಯಾಭಿಮಾನಿ–ಗಳು, ಸಾಹಿತ್ಯ ಪೋಷಕರು ಸ್ವತಃ ಕವಿಗಳೂ ಆಗಿದ್ದರು. ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಒಕ್ಕಲಿಗ ಮುದ್ದಣ್ಣ ಅಥವಾ ಒಕ್ಕಲಿಗ ಮುದ್ದಯ್ಯಗೌಡನು ಅಂದು ದುಡಿಯುವ ವರ್ಗದ ಪ್ರಮುಖ ವಚನಕಾರನಾಗಿದ್ದನು.

ಒಕ್ಕಲಿಗರ ಮುದ್ದಯ್ಯ/ಒಕ್ಕಲಿಗ ಮುದ್ದಯ್ಯಗೌಡ

ಡಾ॥ ಎಂ.ಎಂ. ಕಲ್ಬುರ್ಗಿಯವರು ತಮ್ಮ "ಸಂಕೀರ್ಣ ವಚನ ಸಂಪುಟ" ಎಂಬ ಕೃತಿಯಲ್ಲಿ ವಚನಕಾರ ಒಕ್ಕಲಿಗ ಮುದ್ದಯ್ಯನು 12 ವಚನಗಳನ್ನು ರಚಿಸಿದ ಬಗ್ಗೆ ತಿಳಿಸಿದ್ದಾರೆ. ಬಹುಷಃ ನೂರಕ್ಕೂ ಹೆಚ್ಚು ವಚನಗಳನ್ನು ರಚಿಸಿರಬಹುದು ನಮಗೆ ಲಭ್ಯವಾದವು ಕೇವಲ 12 ಮಾತ್ರ ಎಂದೇಳಬಹುದು. ಕಾರಣ ಇಂದಿನಂತೆ ಅಂದಿನ ಕಾಲದಲ್ಲಿ ಮುದ್ರಣಯಂತ್ರವಾಗಲಿ ಬೇರೆ ರೀತಿಯ ಆಧುನಿಕ ಪರಿಕರಗಳು ಇರಲಿಲ್ಲವೆಂದೇಳಬಹುದು. ಇಷ್ಟೇ ಅಲ್ಲದೇ ಸಂಶೋಧಕರ ಅನಾಧಾರವೂ ಕಾರಣವಿರಬಹುದು. ಡಾ॥ ಎಂ.ಎಂ. ಕಲ್ಬುರ್ಗಿಯವರು ಅಷ್ಟಾದರೂ ಹೊರ ತಂದಿದ್ದಾರೆ. ಒಕ್ಕಲಿಗ ಮುದ್ದಯ್ಯನು ತನ್ನ ಕಾವ್ಯನಾಮವನ್ನು ತನ್ನ ವಚನದ ಕೊನೆಯಲ್ಲಿ "ಕಾಮಭೀಮ ಜೀವಧನದೊಡೆಯ" ಎಂದಿಟ್ಟುಕೊಂಡಿದ್ದಾನೆ. ಕ್ರಿ.ಶ. 12ನೇ ಶತಮಾನದಲ್ಲಿ ಈತನನ್ನು "ಒಕ್ಕಲಿಗ" ಎಂಬ ಜಾತಿ ಸೂಚಕದೊಂದಿಗೆ ಗುರುತಿಸಲು ಕಾರಣವೇನೆಂದರೆ ಆ ದಿನಗಳಲ್ಲಿ ವ್ಯಕ್ತಿಯನ್ನು ಆತನ ವೃತ್ತಿಯೊಂದಿಗೆ ಗುರುತಿಸಲಾಗುತ್ತಿತ್ತು. ಉದಾಹರಣೆಗೆ ಮಾದಿಗರ ಚನ್ನಯ್ಯ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ ಇದೇ ರೀತಿ ಒಕ್ಕಲುತನ ಮಾಡುತ್ತಿದ್ದ ಮುದ್ದಯ್ಯ ಗೌಡನನ್ನು ಒಕ್ಕಲಿಗ ಮುದ್ದಯ್ಯ ಎಂದು ಹೆಸರಿಸಿದರು. ಒಕ್ಕಲಿಗ ಮುದ್ದಯ್ಯ ವಚನಗಳಲ್ಲಿ ಕೃಷಿ (ವ್ಯವಸಾಯ) ಮತ್ತು ಕೃಷಿಯ ಪರಿಕರಗಳನ್ನು ಕಟ್ಟಿಕೊಡುವುದರ ಜೊತೆ ಜೊತೆಗೆ ಆತನಲ್ಲಿರುವ ಅಗಾಧ ಜ್ಞಾನವು ಬೆರಗು ಹುಟ್ಟಿಸುತ್ತದೆ. ಅವುಗಳನ್ನು ಕೆಲವನ್ನು ಮಾತ್ರ ಈ ಕೆಳಗೆ ನೀಡಿದ್ದೇನೆ. ಆತ ಎಲ್ಲೂ ತಾನು ಮೇಧಾವಿ ಎಂದು ಹೇಳಿಕೊಂಡಿಲ್ಲ.

ಒಕ್ಕಲಿಗ ಮುದ್ದಯ್ಯನು ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಜೋಳದ ಹಡಗಿ (ಹಿಂದೆ ಇದು ಜೋಳದ ಹಾಳು ಎಂದಿತ್ತು)ಯಲ್ಲಿ ಜನಿಸಿದನು. ವೀರಭದ್ರಗೌಡ ಮತ್ತು ಗಂಗವ್ವ ಈತನ ಮಾತಪಿತೃಗಳು. ಒಕ್ಕಲಿಗ ಮುದ್ದಯ್ಯನು ತನ್ನ ವಚನವೊಂದರಲ್ಲಿ ಹೀಗೆ ಹೇಳಿದ್ದಾನೆ.

"ವೇದ ಶಾಸ್ತ್ರವನೋದುವುದಕೆ ಹಾರುವನಲ್ಲ
ಇರಿದು ಮರೆವುದಕೆ ಕ್ಷತ್ರಿಯನಲ್ಲ
ವ್ಯವಹರಿಸುವುದಕೆ ವೈಶ್ಯನಲ್ಲ
ಒಕ್ಕಲು ಮಗನ ತಪ್ಪು ನೋಡದೆ ಒಪ್ಪುಗೊಳ್ಳಯ್ಯ
ಕಾಮಭೀಮ ಜೀವನದೊಡೆಯ ನೀನೆ ಬಲ್ಲೆ"

ಎಂದು ತನ್ನ ವಚನದಲ್ಲಿ ತನ್ನ ಜಾತಿ, ತನ್ನ ಕಾಯಕ ಹಾಗೂ ತಾನೊಬ್ಬ ಸಾಮಾನ್ಯರಲ್ಲಿ ಸಾಮಾನ್ಯ ವ್ಯಕ್ತಿ ಎಂಬುದಾಗಿ ವಿನೀತನಾಗಿ ಹೇಳಿಕೊಂಡಿದ್ದಾನೆ.

ಒಕ್ಕಲಿಗ ಮುದ್ದಯ್ಯನು ಮತ್ತೊಂದು ವಚನದಲ್ಲಿ ಮನುಷ್ಯನ ದೇಹ ಪ್ರಕೃತಿಯನ್ನೇ ಉದಾಹರಣೆ ತೆಗೆದುಕೊಂಡು ದೈವತ್ವದ ಕಡೆಗೆ ಸಾಗುವ ಮಾರ್ಗವನ್ನು ತಿಳಿಸಿಕೊಟ್ಟಿದ್ದಾನೆ.

ದೊಡ್ಡವೆರೆಡು ಕಂಬದ ಮಧ್ಯದಲ್ಲಿ ಚಿಕ್ಕವೆರೆಡು ಕಂಬ
ಇಂತಿ ನಾಲ್ಕರ ಮಧ್ಯದ ಮನೆಗೆ..................................

ಈ ವಚನದಲ್ಲಿ ಮುದ್ದಯ್ಯನು ವ್ಯವಸಾಯ ಮಾಡುವ ವಿಧಾನ ಕೃಷಿ ಉಪಕರಣಗಳು, ಕೃಷಿ ಮಾಡುವ ಕ್ರಮ, ಬೆಳೆಯ ಒಳಮರ್ಮವನ್ನು ಹೇಳುವ ನೆಪದಲ್ಲಿ ಆಧ್ಯಾತ್ಮಿಕತೆಯ ಒಳಸುಳಿಯನ್ನು ಮನೋಜ್ಞನಾಗಿ ತಿಳಿಸಿದ್ದಾನೆ. ಅದರ ಒಳರಹಸ್ಯ ಹೀಗಿದೆ. ಭಕ್ತಿಯೆಂಬ ಹೊಲದಲ್ಲಿ ಗುರೂಪದೇಶವೇ ನೇಗಿಲು, ಮನಸ್ಸು, ಬುದ್ಧಿ, ಚೇತನ ಎಂಬ ನಾಲ್ಕು ಅಂತಃ ಕರಣಗಳೇ ಎತ್ತುಗಳು. ಆ ಎತ್ತುಗಳನ್ನು ನೇಗಿಲಿಗೆ ಕಟ್ಟಬೇಕು. ಓಂಕಾರನಾದವೆಂಬ. ಕೋಲು (ಬಾರುಕೋಲು) ಪಿಡಿದು ನಮ್ಮ ದುಷ್ಕೃತ್ಯಗಳೆಂಬ ಮುಳ್ಳಿನ ಪೊದೆಯನ್ನು ಕಡಿದು ಹಾಕಿ ಅರಿವೆಂಬ ಸೂರ್ಯನ ಕಿರಣಗಳಿಂದ ಒಣಗಿಸಬೇಕು. ಒಣಗಿದ ಮುಳ್ಳಿನ ಗಿಡಗಂಟೆಗಳನ್ನು ಜ್ಞಾನವೆಂಬ ಅಗ್ನಿಯಿಂದ ಅನಿಲವನ್ನು ಸುಡಬೇಕು. ಹೀಗೆ ಮೊದಲು ಹೊಲವನ್ನು ಹಸನು ಮಾಡಿಕೊಳ್ಳಬೇಕು ಎಂಬುದಾಗಿ ವ್ಯವಸಾಯದ ಕ್ರಮವನ್ನು ಆಧ್ಯಾತ್ಮಿಕ ಚಿಂತನೆಗೆ ಒರೆ ಹಚ್ಚಿದ್ದಾನೆ.

ನಮ್ಮಲ್ಲಿ ಸುಪ್ತವಾಗಿರುವ ಕುಂಡಲಿನ ಶಕ್ತಿಯನ್ನು ಜಾಗ್ರುತಗೊಳಿಸುವಿಕೆಯನ್ನು ತಿಳಿಸುತ್ತಾನೆ. ಓಂಕಾರವು ಶಿವನಿಗೆ ಪ್ರಿಯವಾದುದು. ಓಂಕಾರದಲ್ಲಿ ನಾದ, ಬಿಂದು,

ಘೋಷ, ಉದಾತ್ತ, ಅನುದಾತ್ತ, ಸ್ವರಿತ. ಇನ್ನೂ ಮುಂತಾದ ಧ್ವನಿಯ ಏರಿಳಿತಗಳಿವೆ ಒಂದೊಂದೂ ಜೀವನೌಲ್ಯಗಳು. ರೈತನು ಹೇಗೆ ಹೊಲ ಅರಿತು ಬೀಜವನ್ನು ಬಿತ್ತುವನೋ ಹಾಗೆಯೇ ಓಂಕಾರದ ಎಲ್ಲಾ ಒಳ ರಹಸ್ಯಗಳನ್ನು ಅರಿತು ಬೀಜವನ್ನು ಬಿತ್ತುವನೋ ಹಾಗೆಯೇ ಯಾವಾಗಲೂ ದೇವರ ಧ್ಯಾನದಲ್ಲಿರಬೇಕು. ನಮ್ಮ ಶರೀರದಲ್ಲಿ ಇಡಾ ಮತ್ತು ಪಿಂಗಾಳ ಎಂಬ ನಾಡಿಗಳಿವೆ. ಎಡ ಭಾಗದಲ್ಲಿರುವ 36 ಸಾವಿರ ನಾಡಿಗಳನ್ನು ಇಡಾ ನಾಡಿಗಳು ಎಂತಲೂ, ಬಲ ಭಾಗದಲ್ಲಿರುವ 36 ಸಾವಿರ ನಾಡಿಗಳನ್ನು ಪಿಂಗಳಾ ನಾಡಿಗಳೆಂತಲೂ ಕರೆಯುತ್ತಾರೆ. ಇವೆರೆಡು ನಾಡಿಗಳು ಇರುತ್ತವೆ ಎಂದಿದ್ದಾನೆ. ನಮ್ಮ ಇಷ್ಟವೆಂಬ ಕುಡುಗೋಲು (ನಾನು, ನನ್ನದು ಎಂಬ ಅಹಂ) ನಮ್ಮ ಇಡೀ ಜೀವನವನ್ನೇ ಹಾಳು ಮಾಡುತ್ತದೆ. ಅದಕ್ಕೆ ಓಂಕಾರವೆಂಬ ಹಿಡಿಕೆಯನ್ನು ಅಳವಡಿಸಿದರೆ ಯಾವುದೇ ವಿಧದ ತೊಂದರೆಯಾಗದು. ಅಷ್ಟಾಂಗ ಯೋಗದ ಮೂಲಕ ನಮ್ಮ ಜೀವನದಲ್ಲಿ ಬರುವ ಜಂಜಡಗಳಿಂದ ಹೊರಬರಬಹುದು. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಮತ್ತು ಸಮಾಧಿ ಎಂಬ ಅಷ್ಟಾಂಗ ಮಾರ್ಗಗಳನ್ನು ತಿಳಿಸಿಕೊಡುತ್ತಾನೆ.

ರೈತನು ವ್ಯವಸಾಯ ಆರಂಭಿಸುವ ಮೊದಲು ಜೀಜವನ್ನು ಬಿತ್ತಬೇಕು. ಬೀಜವು ಮೊಳೆತು ಪೈರಾಗುತ್ತದೆ. ಆ ಪೈರಿಗೆ ಎಷ್ಟು ಬೇಕೋ ಅಷ್ಟು ನೀರುಣಿಸಬೇಕು ಎಂದು ಹೇಳುತ್ತಾನ ಜೀವನೌಲ್ಯಗಳನ್ನು ವ್ಯವಸಾಯದ ಕ್ರಮಗಳಿಗೆ ಹೋಲಿಕೆ ಮಾಡುತ್ತಾನೆ.

ರೈತರ ಚಳವಳಿಯ ಪಿತಾಮಹನಾಗಿ ಒಕ್ಕಲಿಗ ಮುದ್ದಯ್ಯ

ಒಕ್ಕಲಿಗ ಮುದ್ದಯ್ಯನ ಹಲವಾರು ವಚನಗಳಲ್ಲಿ ಈ ಕೆಳಗಿನ ವಚನವು ಹೇಗೆ ಆತನು ಕೃಷಿ ಕಾಯಕ ಮಾಡಿಕೊಂಡು ಲೌಕಿಕ ಮತ್ತು ಪಾರಮಾರ್ಥಿಕ ಜೀವನ ನಡೆಸತ್ತಿದ್ದ ಹಾಗೂ ರೈತರು ಸುಖವಾಗಿರಬಹುದು ಎಂಬ ಈ ವಚನದ ಹಿಂದಿರುವ ಉದ್ದೇಶವಾಗಿದೆ.

"ಅಂಗವೇ ಭೂಮಿಯಾಗಿ ಲಿಂಗವೇ ಬೆಳೆಯಾಗಿ ವಿಶ್ವಾಸವೆಂಬ
ಭತ್ತ ಬಲಿದು ಉಂಡು ಸುಖವಾಗಿರಬೇಕೆಂದ
ಕಾಮ ಭೀಮ ಜೀವ ದನದೊಡೆಯ"

ಶಿಸ್ತು, ಸಂಯಮ, ರಾಜಭಕ್ತಿ ಮತ್ತು ಆಧ್ಯಾತ್ಮಿಕ ಜೀವನ ನಡೆಸುತ್ತಿದ್ದ ಒಕ್ಕಲಿಗ ಮುದ್ದಯ್ಯ ಸೇರಿದಂತೆ ರೈತರಿಗೆ ವಾರ್ಷಿಕ ತೆರಿಗೆಯನ್ನು ನೀಡಿದ ಮೇಲೂ ಹೆಚ್ಚಿನ ತೆರಿಗೆಯನ್ನು ನೀಡಬೇಕೆಂದು ರಾಜನ ಸೇವಕರು ಒತ್ತಾಯಿಸುತ್ತಾರೆ. 20 ಕೊಳಗ ಭತ್ತ 90 ಹೊನ್ನು ಕೊಟ್ಟಿದ್ದೇನೆ. ಮತ್ತೆ ಕೊಡಬೇಕೆಂದು ನಿನ್ನ ಸೇವಕರು ಪೀಡಿಸುತ್ತಿದ್ದಾರೆ, ಎಂದು ರಾಜನಿಗೆ ತಿಳಿಸಿದ. ಗುತ್ತಿಗೆ ಪ್ರಕಾರ ನಾನು ಕೊಡತಕ್ಕ

ಪಟ್ಟಿಯನ್ನು ರಾಜನಿಗೆ ನೀಡಿದ್ದೇನೆ. ಆಜ್ಞೆಯನ್ನು ಉಲ್ಲಂಘಿಸಿಲ್ಲ ಎಂದು ಗ್ರಾಮಸ್ಥರಿಗೆ ತಿಳಿಸಿದ. ಇಷ್ಟಾದರೂ ರಾಜನು ಹೆಚ್ಚಿನ ತೆರಿಗೆ ನೀಡಬೇಕೆಂದು ಒತ್ತಾಯಿಸಿದ. ಹೀಗೆ ಮಾಡಿದರೆ ಗುತ್ತಿಗೆದಾರರಿಗೆ ಕುಳಗಳು ಉಳಿಯುವುದಿಲ್ಲ. ರಾಜನಿಗೆ ಹೆಚ್ಚಿನ ಕಂದಾಯ ಕೊಟ್ಟೆನಾದರೆ ನನ್ನ ಹಟ್ಟಿ ಕೊಟ್ಟಿಗೆ ಪರಮಾತ್ಮನೇ ಒಡೆಯ ಹೊರತು ಅರಸನಲ್ಲ ಎಂದು ಹೇಳುತ್ತಾನೆ.

ಇಲ್ಲಿ ಹದಿಕೆಯ (ಹೆಚ್ಚಿನ ತೆರಿಗೆ) ಕೇಳಿದಾಗ ಮೊದಲೇ ಸಿದ್ದಾಯ ಸುಂಕ ಕೊಟ್ಟಿರುವಾಗ ಮತ್ತೆ ಕೊಡಲು ಸಾಧ್ಯವಿಲ್ಲ ಎನ್ನುತ್ತಾನೆ. ಗುತ್ತಿಗೆದಾರರಿಗೆ ಕುಳಗಳು ಉಳಿಯುವುದಿಲ್ಲ ಎಂದಿದ್ದಾನೆ. ರಾಜನಿಗೆ ಕೊಡುವ ಮರ್ಯಾದೆಯನ್ನು ನೀಡುತ್ತಾನೆ ಮುದ್ದಯ್ಯಗೌಡ. ಆದರೆ ಅದಕ್ಕೆ ಮೀರಿ ರಾಜ ನಡೆದರೆ ಹಟ್ಟಿ ಕೊಟ್ಟಿಗೆಯೊಡೆಯ (ಕಟ್ಟಿ ಕೊಟ್ಟಿಗೆಯ ನಿಜವಾದ ಒಡೆಯ ಪರಮಾತ್ಮ ಎನ್ನುವ ಅರ್ಥ ಬರುತ್ತದೆ).

ಹೀಗೆ ಒಕ್ಕಲಿಗ ಮುದ್ದಯ್ಯನು ತನ್ನ ಕುಲ ಕಸುಬಾದ ವ್ಯವಸಾಯ ಮತ್ತು ಪಶುಸಂಗೋಪನೆಯನ್ನು ಮಾಡಿಕೊಂಡಿದ್ದು ಸಾತ್ವಿಕ ಜೀವನ ನಡೆಸುತ್ತಿದ್ದ. ರಾಜನು ಹೆಚ್ಚಿನ ತೆರಿಗೆಗಾಗಿ ಪೀಡಿಸಿದಾಗ ಅವನಿಗೆ ತಿರುಗಿ ಬಿದ್ದ. ಮುದ್ದಯ್ಯ ಗೌಡನು ಒಕ್ಕಲಿಗ ಜನಾಂಗದ ಕರ್ನಾಟಕದ "ರೈತ ಚಳವಳಿಯ ಪಿತಾಮಹ" ಎಂದೇಳಬಹುದು.

ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಬಹುಮುಖ ಪ್ರತಿಭೆಯ ಸಾಹಿತಿ ಶ್ರೀ ಕಂಠೇಶಗೌಡರು ಕನ್ನಡ ಸಾಹಿತ್ಯಕ್ಕೆ ಉತ್ತಮವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಅದೇ ರೀತಿ ಇಪ್ಪತ್ತನೆಯ ಶತಮಾನದ ಮೇರು ಕವಿ ಕುವೆಂಪುರವರು. ಹೀಗೆ ಶತಶತಮಾನಗಳಿಂದ ಒಕ್ಕಲಿಗರು ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡುತ್ತಾ ಬಂದಿದ್ದಾರೆ.

ಶ್ರೀ ಎಂ.ಎಲ್. ಶ್ರೀಕಂಠೇಶಗೌಡ



ಕನ್ನಡ ಸಾರಸ್ವತ ಲೋಕದ ಅರುಣೋದಯ ಕಾಲದಲ್ಲಿ ಉದಿಸಿದ ಸಾಹಿತಿ ಎಂದರೆ ಶ್ರೀ ಎಂ.ಎಲ್. ಶ್ರೀಕಂಠೇಶಗೌಡ. ಕುವೆಂಪುರವರಿಗಿಂತಲೂ ಮೊದಲೇ ಸಾಹಿತ್ಯ ಕೃಷಿ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ವೃತ್ತಿಯಲ್ಲಿ ವಕೀಲರು, ನಂತರ ನ್ಯಾಯಾಧೀಶರಾಗಿದ್ದು ಪ್ರವೃತ್ತಿಯಲ್ಲಿ ಸಾಹಿತಿಗಳಾಗಿ ಕನ್ನಡ ಸಾರಸ್ವತ ಲೋಕಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಜೀವನ ಮತ್ತು ಸಾಧನೆ – ಶ್ರೀ ಕಂಠೇಶಗೌಡರು 1852ರಲ್ಲಿ ಜನಿಸಿದರು. ತಂದೆ ಬೈರೇಗೌಡರು. ಶ್ರೀಯುತರ ಪ್ರಾಥಮಿಕ ಶಿಕ್ಷಣ ಮೊದಲು ತುಮಕೂರು ಜಿಲ್ಲೆಯ ಕುಣಿಗಲ್ಲಿನಲ್ಲಿ ಪ್ರಾರಂಭವಾಯಿತು. ನಂತರ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಮೆಟ್ರಿಕ್ಯುಲೇಶನ್ ವ್ಯಾಸಂಗವನ್ನು ಪ್ರಥಮ ದರ್ಜೆಯಲ್ಲಿ ಮುಗಿಸಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಪದವಿಗೆ ಸೇರಿದರು. ಬಿ.ಎಲ್. ಪದವಿಯನ್ನು ಗಳಿಸಲು ಮದ್ರಾಸಿಗೆ ಹೊರಟರು. ನಂತರ ಕಾನೂನು ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಿ.ಎಲ್. ಪದವಿಯನ್ನು ಪಡೆದು ಬೆಂಗಳೂರಿನಲ್ಲಿ ತಮ್ಮ ವಕೀಲಿ ವೃತ್ತಿಯನ್ನು ಆರಂಭಿಸಿದರು.

ಇಡೀ ಮೈಸೂರು ಪ್ರಾಂತ್ಯದಲ್ಲೇ ಗೌಡರು ಜನಪ್ರಿಯ ವಕೀಲರಾಗಿ ಹೆಸರುಗಳಿಸಿದ್ದರು. ಅಂದಿನ ಬ್ರಿಟೀಷ್ ಸರ್ಕಾರವು ಇವರನ್ನು ನ್ಯಾಯಾಧೀಶರನ್ನಾಗಿ ನೇಮಿಸಿತು. ನಂತರ ಇವರು ನ್ಯಾಯಾಧೀಶರಾಗಿ ಹಾಸನ, ಶಿವಮೊಗ್ಗ, ಕೋಲಾರ, ನಂಜನಗೂಡು, ಮಧುಗಿರಿ, ಇನ್ನು ಮುಂತಾದ ಕಡೆ ಸೇವೆ ಸಲ್ಲಿಸಿದರು.

ಕನ್ನಡಾಭಿಮಾನಿ – ಶ್ರೀಕಂಠೇಶಗೌಡರಿಗೆ ಹಲವಾರು ಭಾಷೆಗಳು ಬರುತ್ತಿತ್ತು. ಗೌಡರ ಬಹುತೇಕ ತೀರ್ಪುಗಳು ಕನ್ನಡ ಭಾಷೆಯಲ್ಲಿರುತ್ತಿದ್ದವು. ಸಾಧ್ಯವಾದಷ್ಟು ಕನ್ನಡಕ್ಕೆ ಆದ್ಯತೆ ನೀಡುತ್ತಿದ್ದರು. ತಮ್ಮ ಮಕ್ಕಳಿಗೂ ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ನೀಡಿಸುತ್ತಿದ್ದರು. ಕನ್ನಡ ಪ್ರಕಾಶನವೊಂದನ್ನು ಹುಟ್ಟು ಹಾಕಿ ಅದರ ಮೂಲಕ ಹಲವಾರು ಪುಸ್ತಕಗಳು ಹೊರಬರಲು ಕಾರಣಕರ್ತರಾಗಿದ್ದಾರೆ.

ಪತ್ರಿಕಾರಂಗ ಮತ್ತು ಶ್ರೀಕಂಠೇಶಗೌಡರು – 1893ರರಿಂದಲೇ ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ರಾಮರಾವ್ ಇತರರು ಮುಖ್ಯ ಸಂಪಾದಕರಾಗಿದ್ದ ವಿದ್ಯಾದಾಹಿನಿ ಎಂಬ ಶಿಕ್ಷಣ ಮತ್ತು ಸಾಹಿತ್ಯಕ್ಕೆ ಮೀಸಲಾಗಿದ್ದ ಪತ್ರಿಕೆ ಅಲ್ಲದೆ ಅದೇ ಸಮಯದಲ್ಲಿ ಮೈಸೂರಿನ ಜೆ.ಟಿ.ಎ. ಸಂಸ್ಥೆಯ ಕರ್ನಾಟಕ ಗ್ರಂಥಮಾಲೆ ಎಂಬ ಆಧುನಿಕ ಬರಹಗಳ ಮೇಲೆ ಬೆಳಕು ಚೆಲ್ಲುತ್ತಿದ್ದ ಮಾಸಪತ್ರಿಕೆಗಳಲ್ಲಿ ಶ್ರೀಕಂಠೇಶಗೌಡರ ನಾಟಕಗಳು ಪ್ರಕಟವಾಗುತ್ತಿದ್ದವು. "ವಿದ್ಯಾದಾಹಿನಿ" ಮತ್ತು "ಸುರಭಿ" ಪತ್ರಿಕೆಗಳನ್ನು ಹುಟ್ಟುಹಾಕಿದರು. ಇದರಲ್ಲಿ ಸುಲಭವಾಗಿ ಅರ್ಥವಾಗುವಂತೆ ಶಾಲಾ ಪಾಠಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುತ್ತಿದ್ದರು.

ಕನ್ನಡ ಭಾಷೆಯ ಕಂಪು, ಹಳ್ಳಿಯ ಜೀವನ, ಗ್ರಾಮ್ಯ ಭಾಷೆ, ಜಾನಪದ ಸೊಗಡು, ಗಾದೆ ಮಾತುಗಳು ಮತ್ತು ಜನಜೀವನದಲ್ಲಿ ಅದರ ಪ್ರಭಾವ, ಗ್ರಾಮೀಣ ಜನರ ಮುಗ್ಧತೆ, ಪ್ರಕೃತಿಯನ್ನು ಗಡಿಯಾರವಾಗಿ (ವೇಳೆಯ ಬಳಕೆ) ಬಳಸುವ ರೀತಿ ಇತ್ಯಾದಿ ವಿಷಯಗಳನ್ನು ಕಾದಂಬರಿ ನಾಟಕ ಇವೇ ಮುಂತಾದ ತಮ್ಮ ಕೃತಿಗಳಲ್ಲಿ ಮೂಡಿ ಬಂದಿದೆ.

ಸಾಹಿತ್ಯೋಪಾಸಕರಾಗಿ ಗೌಡರು ಹಲವಾರು ನಾಟಕಗಳು, ಕಾದಂಬರಿ, ಕಾವ್ಯ, ಜೀವನಚರಿತ್ರೆ, ಜಾನಪದ ಕಥೆಗಳು ಇವೇ ಮುಂತಾದವುಗಳನ್ನು ರಚಿಸಿದ್ದಾರೆ. ಗೌಡರ ಅಚ್ಚು ಮೆಚ್ಚಿನ ಕವಿ ಎಂದರೆ ಷೇಕ್ಸ್‌ಪಿಯರ್, ಆತನ ಕೆಲವಾರು ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಗೌಡರು ಭಾಷಾಂತರಿಸಿದ ಹಾಗೂ ಕೆಲವನ್ನು ತಾವೇ ರಚಿಸಿದ ಕೃತಿಗಳೆಂದರೆ


ನಾಟಕ	– ಪ್ರತಾಪರುದ್ರದೇವ, ಪ್ರಮಿಳಾರ್ಜುನೀಯಂ, ಸೀತಾ ಸ್ವಯಂವರ, ಪ್ರಿಯದರ್ಶಿಕ ರಾಮವರ್ಮ, ಲೀಲಾವತಿ
ಕಾದಂಬರಿ	– ಚಿಕ್ಕಬಣಜಿಗರು, ಕನ್ಯಾನಿತಂತು, ಭವಾನಿ ಬಾಳು
ಕಾವ್ಯ	– ಚಾಮನೃಪ ಚಂದ್ರಪ್ರಭ, ಬುದ್ದಿಯ ಬಲವೇ ಬಲ, ಈಚಲವನ
ಜೀವನಚರಿತ್ರೆ	– ವೆಸ್ಟ್ ಲಾಟ್ಸೆಯವರ ಚರಿತ್ರೆ, ಶಾಲಿವಾಹನ ಚರಿತ್ರೆ, ಲೋಹಿತಾಕ್ಷರಾಯನ ಚರಿತೆ, ವಾಲ್ಮೀಕಿ ಋಷಿಗಳು ಚರಿತ್ರೆ, ಮೇಜರ್ ಜನರಲ್ ವ್ಯಾನ್‌ಸಾವುರನ ಪೋಪ್, ಆನರಬಲ್ ಮೆ.ಡಿ. ಡಂಕನ್, ಅರ್ಗಳದ ರಾಣಿ, ಕಿತ್ತೂರು ರಾಣಿ
ಜಾನಪದ ಕಥೆಗಳು	– ದ್ವಾದಶ ಕುಮಾರರು, ವಿವೇಕಕ್ಕೆ ತಕ್ಕಂತಾ ಪ್ರತಿಫಲ, ಪುಷ್ಪ ಮಂಜರಿಯ ಕಥೆ, ಅಧಿಕಾರ ವಿಧೇಯತೆ, ಕೋತಿಯೂ ಕನ್ನಡಿಯೂ, ಭೂಲೋಕದ ಯಮ, ಬುದ್ಧಿವಂತರ ಕಥೆ, ಭಕ್ತಿ ಪಾಠ

ಮೈಸೂರಿನಲ್ಲಿದ್ದ ಸಮಯದಲ್ಲಿ ಜಿ.ಟಿ.ಎ. ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ (Graduation Trading Association) ಎಂಬ ಸಾಹಿತ್ಯ ಕೃತಿಗಾಗಿ ಒಂದು ಸಂಸ್ಥೆಯನ್ನೇ ಹುಟ್ಟುಹಾಕಿ ಸಾಹಿತ್ಯಾಸಕ್ತರನ್ನು ಕಲೆ ಹಾಕಿ ಕನ್ನಡ ಸಾಹಿತ್ಯ ಆಂಗ್ಲ, ಸಂಸ್ಕೃತ ಹಾಗೂ ಇನ್ನಿತರ ಭಾಷೆಗಳಲ್ಲಿ ಸಾಹಿತ್ಯವನ್ನು ಅಧ್ಯಯನ ಮಾಡಿ ಕನ್ನಡ ಅಳವಡಿಸಿಕೊಳ್ಳಲು ಯೋಚಿಸುತ್ತಿದ್ದರು. ರತ್ನಾವಳಿ ನಾಟಕ ಕಂಪನಿಯ ಮೂಲಕ ಹಲವಾರು ಪ್ರದರ್ಶನಗಳನ್ನು ಕಂಡವು. 'ಪ್ರತಾಪರುದ್ರದೇವ' ಪ್ರಕಟವಾಗಿ ಯಶಸ್ವಿಯಾಗುತ್ತಲೆ ಗೌಡರ ಶ್ರಮ ಸಾರ್ಥಕವಾಯಿತು.

ಇಂಗ್ಲೀಷ್ ನಾಟಕಗಳೇ ಅಲ್ಲದೆ ಸಂಸ್ಕೃತ ನಾಟಕ ಗದ್ಯ ಭಾಗಗಳನ್ನು ಕನ್ನಡಕ್ಕೆ ಭಾಷಾಂತರಿಸಿದರು. 'ಭವಾನಿ ಬಾಳು' ಎಂಬುದು 1976ರಲ್ಲಿ ಮುದ್ರಣ ಕಂಡಿತು. (ಗೌಡರ ಮರಣಾನಂತರ)

ಕ್ರಿ.ಶ. ಹತ್ತೊಂಬತ್ತನೆಯ ಶತಮಾನದಲ್ಲಿ ಜನಿಸಿದ ಶ್ರೀಕಂಠೇಶಗೌಡರು ಕನ್ನಡ ಭಾಷೆ, ಸಾಹಿತ್ಯ, ಸಂಗೀತ ಜಾನಪದ ಇನ್ನೂ ಮುಂತಾದ ಪ್ರಕಾರಗಳಲ್ಲಿ ದುಡಿದ ಹಿರಿಯ ಚೇತನ. ಸ್ವಲ್ಪ ಮುಂಗೋಪಿಯಾದರೂ ಸ್ಥಿತಪ್ರಜ್ಞರು, ಸಾಹಸಿಗಳಾಗಿದ್ದು ಹಿಡಿದ ಕೆಲಸವನ್ನು ಪೂರೈಸಿಯೇ ತೀರುತ್ತಿದ್ದರು. ಬಹುಮುಖ ಪ್ರತಿಭೆಯ ಸಾಹಿತಿಯಾಗಿದ್ದ ಎಂ.ಎಲ್. ಶ್ರೀಕಂಠೇಶಗೌಡರು 1926ರಲ್ಲಿ ಇನ್ನಿಲ್ಲವಾದರು.

ರಾಷ್ಟ್ರಕವಿ ಶ್ರೀ ಕುವೆಂಪು



ಕರ್ನಾಟಕ ಮಾತೆಯನ್ನು ಭಾರತ ಜನನಿಯ ತನುಜಾತೆ ಎಂದು ಹೃದಯ ತುಂಬಿ ಹಾಡಿ ಹೊಗಳಿದ, ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿಕೊಡುವ ಮೂಲಕ ಕನ್ನಡದ ಸ್ಥಾನಮಾನಗಳನ್ನು ರಾಷ್ಟ್ರಮಟ್ಟಕ್ಕೇರಿಸಿದ ಜಗದ ಕವಿ, ಯುಗದ ಕವಿ, ರಾಷ್ಟ್ರ ಕವಿ ಕುವೆಂಪು.

ಬಾಲ್ಯ ಜೀವನ : ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ ಎಂಬ ಗ್ರಾಮದಲ್ಲಿ 1904ನೇ ಡಿಸೆಂಬರ್ 29ರಂದು ಸೀತಮ್ಮ ಮತ್ತು ವೆಂಕಟಪ್ಪ ಎಂಬ ದಂಪತಿಗಳಿಗೆ ಜನಿಸಿದರು. ಇವರ ಪೂರ್ಣ ಹೆಸರು ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ.

ಇವರ ಪ್ರಾಥಮಿಕ ವಿದ್ಯಾಭ್ಯಾಸ ಎಂಟನೇ ವಯಸ್ಸಿದಲ್ಲಿ ಕೂಲಿಮಠದಲ್ಲಿ ಪ್ರಾರಂಭವಾಯಿತು. ವಿದ್ಯಾಭ್ಯಾಸ ತೀರ್ಥಹಳ್ಳಿಯಲ್ಲಿ ಮುಂದುವರೆಯಿತು. ಲೋಯರ್ ಸೆಕೆಂಡರಿ ಮುಗಿಸಿದ ನಂತರ 1918ರಲ್ಲಿ ಪ್ರೌಢ ಶಿಕ್ಷಣಕ್ಕಾಗಿ ಮೈಸೂರಿಗೆ ಬಂದು ಹಾರ್ಡ್‌ವಿಕ್ ಪ್ರೌಢಶಾಲೆಗೆ ಸೇರಿದರು. 1921ರಲ್ಲಿ ಹೈಸ್ಕೂಲ್ ಓದುತ್ತಿರುವಾಗಲೇ ಪದ್ಮಪತ್ರ ಸಂಘವನ್ನು ಸ್ಥಾಪಿಸಿದರು. 1924ರಲ್ಲಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪದವಿ ಅಧ್ಯಯನಕ್ಕಾಗಿ ಮಹಾರಾಜ ಕಾಲೇಜಿಗೆ ಸೇರಿದರು. 1927ರಲ್ಲಿ ಬಿ.ಎ. ಪಾಸು ಮಾಡಿ ನಂತರ ಕನ್ನಡ ಎಂ.ಎ.ಗೆ ಸೇರಿದರು. ಎಂ.ಎ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಾಸು ಮಾಡಿದ ಕೂಡಲೇ 1929ರಲ್ಲಿ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ದೊರೆಯಿತು. ಅಲ್ಲಿಂದ 1955ರವರೆಗೆ ಸುಮಾರು ಇಪ್ಪತ್ತಾರು ವರ್ಷಗಳ ಕಾಲ ಸೇವೆ ಸಲ್ಲಿಸಿದರು. 1937ರಲ್ಲಿ ದೇವಂಗಿಯ ರಾಮಣ್ಣಗೌಡರ ಪುತ್ರಿ ಹೇಮಾವತಿಯೊಡನೆ ವಿವಾಹ ನಡೆಯಿತು. 1955ರಲ್ಲಿ ಮಹಾರಾಜ ಕಾಲೇಜಿನ ಪ್ರಾಚಾರ್ಯರಾಗಿ ಬಡ್ತಿ ದೊರೆಯಿತು.

1956ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ನೇಮಕಗೊಂಡರು. ಈ ಹುದ್ದೆಯನ್ನು ನಾಲ್ಕು ವರ್ಷಗಳ ಕಾಲ ದಕ್ಷತೆಯಿಂದ

ನಿರ್ವಹಿಸಿದರು. ಈ ವರ್ಷಗಳಲ್ಲಿ ಇಂಟರ್ ಮೀಡಿಯೆಟ್ ಹಂತದಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಜಾರಿಗೆ ತಂದರು. ಕನ್ನಡದಲ್ಲಿ ಪುಸ್ತಕಗಳ ನಿರ್ಮಾಣಕ್ಕೆ ಭದ್ರಬುನಾದಿ ಹಾಕಿದರು. ವಿಶ್ವವಿದ್ಯಾನಿಲಯದ ಕಾರ್ಯಕಲಾಪಗಳನ್ನು, ಬೋಧನಾಂಗ, ಸಂಶೋಧನಾಂಗ, ಪ್ರಸಾರಾಂಗಗಳೆಂದು ವಿಭಜಿಸಿ ಕೆಲಸ ಕಾರ್ಯಗಳು ವ್ಯಾಪಕವಾಗಿ ಪ್ರಗತಿ ಹೊಂದುವಂತೆ ಮಾಡಿದರು. 1960ರಲ್ಲಿ ವಿಶ್ವವಿದ್ಯಾಲಯದ ಬಳಿ ರಬೀಂದ್ರನಾಥ ಠಾಗೂರರ ಶಾಂತಿನಿಕೇತನದ ಮಾದರಿಯಲ್ಲಿ "ಮಾನಸ ಗಂಗೋತ್ರಿ" ಎಂಬ ಸುಂದರ ಶಿಕ್ಷಣ ತಾಣವನ್ನು ಸ್ಥಾಪಿಸಿದರು. 1960 ಜುಲೈ 3 ರಂದು ಉಪಕುಲಪತಿಗಳ ಹುದ್ದೆಯಿಂದ ನಿವೃತ್ತರಾದರು.

ಕುವೆಂಪು ಮತ್ತು ಸಾಮಾಜಿಕ ಕಳಕಳಿ – ಕುವೆಂಪುರವರು ಕೇವಲ ಕವಿ ಮಾತ್ರವಲ್ಲ ಸಾಮಾಜಿಕ ಕಳಕಳಿ ಹಾಗೂ ಪ್ರಜ್ಞೆಯನ್ನು ಹೊಂದಿದ್ದರು. ಜನತೆಯಲ್ಲಿರುವ ದಾರಿದ್ರ್ಯ, ಮೌಢ್ಯಗಳು ತೊಲಗಬೇಕು, ಎಲ್ಲಾ ಬಗೆಯ ಶೋಷಣೆಗಳೂ ಕೊನೆಗೊಳ್ಳಬೇಕು ಎಂಬುದೇ ಇವರ ಆಶಯವಾಗಿತ್ತು. ಕುವೆಂಪು ಅವರು ಬಹಳ ಹಿಂದಿನಿಂದಲೂ ಪುರೋಹಿತಷಾಹಿ ವಿರೋಧಿಗಳಾಗಿದ್ದು ಅದನ್ನು ಧಿಕ್ಕರಿಸುತ್ತಾ ಬಂದರು. ಒಂದು ಕಡೆ ತಮ್ಮ ಸಾಹಿತ್ಯವೆಲ್ಲ ಸಾಮಾಜಿಕ ಅಸ್ತ್ರವಾಗಿ ಬಲಿಷ್ಠವಾಗಿದೆ ಎಂದಿದ್ದಾರೆ. ಅವರ ದೃಷ್ಟಿ ಸಂಪೂರ್ಣ ಜನಪರವಾದುದು, ಮಾನವೀಯವಾದದು, ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆಯ ಮೌಲ್ಯಗಳಲ್ಲಿ ಅವರಿಗೆ ಧೃಢವಾದ ನಂಬಿಕೆ ಮತ್ತು ಕಾಳಜಿ ಇದ್ದಿತು. ತಮ್ಮಲ್ಲಿಗೆ ಬಂದವರಿಗೆ ಮನುಜ ಮತ–ವಿಶ್ವಪಥವನ್ನು ಹಿಡಿಯಬೇಕೆನ್ನುವ ಸಂದೇಶ ಸಾರುತ್ತಿದ್ದರು. ಎಲ್ಲಾ ಬಗೆಯ ಉಪಾಧಿಗಳನ್ನು ಉಲ್ಲಂಘಿಸಿ ಅನಿಕೇತನ ಪ್ರಜ್ಞೆಯನ್ನು ಸಾಧಿಸಬೇಕೆಂಬ ಕರೆಕೊಟ್ಟರು. ಮದುವೆ, ಮುಂಜಿ ಇತ್ಯಾದಿಗಳಿಗೆ ಸಾಕಷ್ಟು ಹಣ ಖರ್ಚು ಮಾಡಿ ಕೈಬರಿದು ಮಾಡಿಕೊಳ್ಳುತ್ತಿರುವುದನ್ನು ಕಂಡ ಅವರು ಪಂಚಮಂತ್ರ ಸೂತ್ರಗಳನ್ನು ರೂಪಿಸಿದರು. ಮಂತ್ರ ಮಾಂಗಲ್ಯವನ್ನು ಜನಪ್ರಿಯಗೊಳಿಸಿದರು. ಜನರು ವೈಜ್ಞಾನಿಕ ಮನೋಧರ್ಮವನ್ನು ಬೆಳೆಸಿಕೊಳ್ಳಲು ಕರೆಕೊಟ್ಟರು. ನಿರಂಕುಶಮತಿಗಳಾಗಿ, ವಿಚಾರಕ್ರಾಂತಿಗೆ ಆಹ್ವಾನ, ಜನತಾಪ್ರಜ್ಞೆ ಮತ್ತು ವೈಚಾರಿಕತೆ ಇವೇ ಮುಂತಾದ ಇವರ ಭಾಷಣಗಳು ಜನರನ್ನು ವಿಚಾರವಾದಿಗಳನ್ನಾಗಿಸುತ್ತವೆ.

ಕುವೆಂಪುರವರ ಸಾಹಿತ್ಯ ಕೃಷಿ – ಸಮನ್ವಯ ಸರ್ವೋದಯ ಮತ್ತು ಪೂರ್ಣದೃಷ್ಟಿ ತಮ್ಮ ಸಾಹಿತ್ಯದ ಮೂರು ಕಣ್ಣುಗಳೆಂದು ಕುವೆಂಪು ಹೇಳಿಕೊಂಡಿದ್ದಾರೆ. ದರ್ಶನ ದೀಪ್ತವಾದ ಸಾಹಿತ್ಯ ಅವರದು. ಜೀವರಥೋತ್ಸವದಲ್ಲಿ ಸರ್ವರೂ ಶ್ರದ್ಧೆಯಿಂದ, ಉಲ್ಲಾಸದಿಂದ ಪಾಲ್ಗೊಳ್ಳಬೇಕು ಎಂಬುದು ಅವರ ನಿಲುವು.

ಇಂಗ್ಲೀಷ್‌ನಲ್ಲಿ: 01

Beginner's Muse : ಕುವೆಂಪು ಅವರ ಪ್ರಥಮ ಕೃತಿ. ಮಿತ್ರರ ಒತ್ತಾಯಕ್ಕೆ ಮಣಿದು ತಾವು ರಚಿಸಿದ ಕವನಗಳಲ್ಲಿ ಆಯ್ದ ಆರು ಕವನಗಳುಳ್ಳ ಈ ಸಂಗ್ರಹ 1922ರಲ್ಲಿ ಪ್ರಕಟಿಸಿದರು.

ಮಹಾಕಾವ್ಯ: 01 – ಶ್ರೀರಾಮಾಯಣದರ್ಶನಂ

ಸರಳ ರಗಳೆಯ ಮಹಾಚಂದಸ್ಸಿನಲ್ಲಿ ಮೂಡಿದ ಈ ಯುಗದ ಬೃಹತ್ ಕಾವ್ಯ. 27.01.1936 ರಿಂದ 12.01.1945ರ ವರೆಗಿನ ಅವಧಿಯಲ್ಲಿ ರಚನೆಯಾಗಿದೆ. 4 ಸಂಪುಟಗಳು, 50 ಸಂಚಿಕೆಗಳು, 22,284 ಸಾಲುಗಳಿಂದ ಕೂಡಿದೆ. ಕಥೆ ಆದಿಕವಿ ವಾಲ್ಮೀಕಿಯದು, ದರ್ಶನ ಕುವೆಂಪು ಅವರದು. ವಾಲ್ಮಿಕಿಯು ಕೃತಿ ರಚಿಸಿದ ನಂತರ ಅನೇಕರು ಅದನ್ನಾಧರಿಸಿ ರಾಮಾಯಣ ಕೃತಿಗಳನ್ನು ರಚಿಸಿದ್ದಾರೆ. ಅವೆಲ್ಲವನ್ನು ಮತ್ತು ಪಾಶ್ಚಾತ್ಯ ಮಹಾಕಾವ್ಯಗಳ ಅಭಿವ್ಯಕ್ತಿಯನ್ನು ಅಳವಡಿಸಿಕೊಂಡು ರಚಿಸಿರುವ ಈ ಕೃತಿಗೆ ಅತೀಂದ್ರಿಯ ಸಂಬಂಧವು ಇರಬಹುದೆಂದು ಕವಿ ಕುವೆಂಪುರವರೇ ಅಭಿಪ್ರಾಯ ಪಟ್ಟಿದ್ದಾರೆ.

ಕುವೆಂಪುರವರು ಮಹಾಛಂದಸ್ಸಿನಲ್ಲಿ ರಚಿಸಿರುವ "ಶ್ರೀರಾಮಾಯಣ ದರ್ಶನಂ" ಒಂದು ಬೃಹತ್ ಮಹಾಕಾವ್ಯ. ಅದು ಈ ಯುಗದ ಮೇರುಕೃತಿ, ಭಾರತೀಯ ಸಂಸ್ಕೃತಿಯ ಕಲಾರೂಪ, ವೇದೋಪನಿಷತ್ತುಗಳ ಸಾರ ಕವಿಯ ಆಧ್ಯಾತ್ಮಿಕ ಸಾಧನೆಯಿಂದ ಪ್ರಣೀತವಾದ ದರ್ಶನ ಗ್ರಂಥ. ರಾಮಾಯಣ ದರ್ಶನದುದ್ದಕ್ಕೂ ಕಂಡು ಬರುವ ಇನ್ನೊಂದು ಮಹತ್ವದ ಸಂಗತಿ ಎಂದರೆ ಅತೀಂದ್ರಿಯ ಯೋಗ, ಅನ್ನಮಯ ಮತ್ತು ಪ್ರಾಣಮಯಕ್ಕೆ ಸಂಬಂಧಪಟ್ಟ ವಿಷಯಗಳು ಕವಿಯ ಆತ್ಮಸಾಧನೆಯ ಉನ್ನತಿಯನ್ನು ಪರಿಚಯಿಸುತ್ತದೆ. ಈ ಬೃಹತ್ ಕಾವ್ಯದಲ್ಲಿ ರೂಪಕ, ಮಿಶೋಪಮೆ, ಮಹೋಪಮೆಗಳು. ಈ ಮಹಾಕಾವ್ಯಕ್ಕೆ ಮೆರಗು ನೀಡಿವೆ.

ಕವನ ಸಂಕಲನ: 28

1. **ಕೊಳಲು** : ಇದು ಕುವೆಂಪು ಅವರ ಮೊದಲು ಕವನ ಸಂಕಲನ. 1930ರಲ್ಲಿ ಪ್ರಕಟವಾದ ಇದರಲ್ಲಿ 70 ಲವನಗಳಿವೆ. ಕನ್ನಡದ ಕಣ್ವ ಬಿ.ಎಂ.ಶ್ರೀ. ಅವರು ಮುನ್ನುಡಿ ಬರೆದಿದ್ದು ಕುವೆಂಪುರವರ ಕವನಗಳಲ್ಲಿ ಅಮೃತತ್ವದ ಸಾರವಿದೆಯೆಂದು ಕೊಂಡಾಡಿದ್ದಾರೆ.

2. **ಪಾಂಚಜನ್ಯ** : ಇದರಲ್ಲಿ 19 ವೀರ ಗೀತೆಗಳಿವೆ. 1933ರಲ್ಲಿ ಪ್ರಕಟವಾಯಿತು.

3. **ಕಲಾಸುಂದರಿ** : ಇದರಲ್ಲಿ 43 ಕವನಗಳಿವೆ. ಕಲಾಸುಂದರಿ ಆತ್ಮಾಹ್ಲಾದ ಕಾರಿಣಿಯೂ ಹೌದು, ಆತ್ಮೋದ್ಧಾರಕಾರಿಣಿಯೂ ಹೌದು ಎಂಬ ತತ್ವವನ್ನು

ಆಧರಿಸಿರುವ ಪ್ರಕೃತಿ ಪ್ರಧಾನ ಕವನಗಳಾಗಿವೆ. 1934ರಲ್ಲಿ ಪ್ರಕಟವಾಯಿತು.

4. **ಚಿತ್ರಾಂಗದಾ** : ಆರು ಪರ್ವಗಳಿಂದ 2496 ಸಾಲುಗಳಿಂದ ಕೂಡಿದ ದೀರ್ಘಕಾವ್ಯ ಮೊದಲು 1936ರಲ್ಲಿ ಪ್ರಕಟವಾಯಿತು.

5. **ಕಥನ ಕವನಗಳು** : ಹನ್ನೊಂದು ಕಥನ ಕವನಗಳ ಸಂಗ್ರಹ. 1937ರಲ್ಲಿ ಪ್ರಕಟವಾಯಿತು.

6. **ನವಿಲು** : ಇದರಲ್ಲಿ 42 ಕವನಗಳಿವೆ.

7. **ಕೋಗಿಲೆ ಮತ್ತು ಸೋವಿಯತ್ ರಷ್ಯಾ** : ಇದರಲ್ಲಿ 43 ಕ್ರಾಂತಿ ಕವನಗಳಿದ್ದು 1944ರಲ್ಲಿ ಪ್ರಕಟವಾಯಿತು.

8. **ಪ್ರೇಮ ಕಾಶ್ಮೀರ** : 46 ಪ್ರೇಮ ಗೀತೆಗಳಿದ್ದು 1946ರಲ್ಲಿ ಪ್ರಕಟವಾಯಿತು.

9. **ಅಗ್ನಿಹಂಸ**: ಅನುಭವ ಪ್ರಧಾನವಾದ 45 ಕವನಗಳಿದ್ದು 1946ರಲ್ಲಿ ಪ್ರಕಟವಾಯಿತು.

10. **ಕೃತ್ತಿಕೆ** : ಪ್ರಕೃತಿ ಪ್ರಧಾನವಾದ 93 ಸಾನೆಟ್ಟುಗಳಿದ್ದು 1946ರಲ್ಲಿ ಪ್ರಕಟವಾಯಿತು.

11. **ಪಕ್ಷಿಕಾಶಿ** : ಪ್ರಕೃತಿ ಪ್ರಧಾನವಾದ 47 ಕವನಗಳಿದ್ದು 1946ರಲ್ಲಿ ಪ್ರಕಟವಾಯಿತು.

12. **ಕಿಂಕಿಣಿ** : 60 ವಚನ ಕವನಗಳಿದ್ದು 1946ರಲ್ಲಿ ಪ್ರಕಟವಾಯಿತು.

13. **ಷೋಡಶಿ** : ಇದರಲ್ಲಿ 45 ಪ್ರೇಮ ಗೀತೆಗಳಿದ್ದು 1947ರಲ್ಲಿ ಪ್ರಕಟವಾಯಿತು.

14. **ಜೇನಾಗುವಾ** : ಇದರಲ್ಲಿ 56 ಪ್ರೇಮ ಗೀತೆಗಳಿದ್ದು 1952ರಲ್ಲಿ ಪ್ರಕಟವಾಯಿತು.

15. **ಚಂದ್ರಮಂಚಕೆ ಬಾ ಚಕೋರಿ** : ಇದರಲ್ಲಿ 59 ಪ್ರೇಮ ಗೀತೆಗಳಿದ್ದು 1954ರಲ್ಲಿ ಪ್ರಕಟವಾಯಿತು.

16. **ಇಕ್ಷು ಗಂಗೋತ್ರಿ** : ದೇಶ–ಸಮಾಜವನ್ನು ಕುರಿತ 25 ಕವನಗಳಿದ್ದು 1957ರಲ್ಲಿ ಪ್ರಕಟವಾಯಿತು.

17. **ಅನಿಕೇತನ** : ಅನುಭವ ಪ್ರಧಾನವಾದ 40 ಕವಿತೆಗಳಿದ್ದು 1963ರಲ್ಲಿ ಪ್ರಕಟವಾಯಿತು.

18. **ಅನುತ್ತರಾ** : 21 ಪ್ರೇಮ ಗೀತೆಗಳಿದ್ದು 1965ರಲ್ಲಿ ಪ್ರಕಟವಾಯಿತು.

19. **ಮಂತ್ರಾಕ್ಷತೆ** : ಸಂಕೀರ್ಣ ಸ್ವಭಾವದ 117 ಪುಟ್ಟ ಕವನಗಳಿದ್ದು 1966ರಲ್ಲಿ ಪ್ರಕಟವಾಯಿತು.

20. **ಕದರಡಕೆ :** ಪ್ರಕೃತಿ ಪ್ರಧಾನವಾದ 46 ಕವನಗಳಿದ್ದು ಜತೆಗೆ 42 ಪುಟ್ಟ ಕವನಗಳನ್ನು ಒಳಗೊಂಡಿದೆ.

21. **ಪ್ರೇತಕ್ಯೂ:** ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗತಿ ಕುರಿತ 40 ಕವಿತೆಗಳಿದ್ದು 1967ರಲ್ಲಿ ಪ್ರಕಟವಾಯಿತು.

22. **ಕುಟೀಚಕ :** ಅನುಭವ ಪ್ರಧಾನವಾದ 48 ಕವನಗಳು ಈ ಸಂಕಲನದಲ್ಲಿದ್ದು 1967ರಲ್ಲಿ ಪ್ರಕಟವಾಯಿತು.

23. **ಕನ್ನಡ ಡಿಂಡಿಮ:** ಕವನ ಸಂಕಲನ

24. **ಪ್ರಾರ್ಥನಾ ಗೀತಾಂಜಲಿ :** ಕವನ ಸಂಕಲನ

25. **ಕಬ್ಬಿಗನ ಕೈ ಬುಟ್ಟಿ :** ಕವನ ಸಂಕಲನ

26. **ಹೊನ್ನ ಹೊತ್ತಾರೆ :** ಕವನ ಸಂಕಲನ

27. **ಸಮುದ್ರ ಲಂಘನ :** ಕವನ ಸಂಕಲನ

28. **ಮಹಾದರ್ಶನ ಮತ್ತು ಪ್ರಾಯಶ್ಚಿತ್ತ :** ಕಾವ್ಯ.

ನಾಟಕಗಳು: 12

1. **ಯಮನ ಸೋಲು :** ಸಾವಿತ್ರಿ ಸತ್ಯವಾನರ ಲೋಕ ಪ್ರಸಿದ್ಧಿ ಕಥೆಯನ್ನಾಧರಿಸಿದ ನಾಟಕ. ಕುವೆಂಪು ರಚಿಸಿದ ಮೊದಲ ನಾಟಕ.

2. **ಜಲಗಾರ :** ಎರಡು ದೃಶ್ಯಗಳನ್ನು ಹೊಂದಿರುವ ಈ ನಾಟಕ 1928ರಲ್ಲಿ ಮೊದಲು ಪ್ರಕಟವಾಯಿತು. ಬೀದಿಗುಡಿಸುವ ಜಲಗಾರನೊಬ್ಬನ ಮಾಣಸಿಕ ಔನ್ನತ್ಯದ ಚೊತ್ರಣವಿದೆ. ತನ್ನ ದಿನನಿತ್ಯದ ಕರ್ತವ್ಯದಲ್ಲಿ ಮಗ್ನನಾಗಿದ್ದುಕೊಂಡು ಅದರಲ್ಲಿಯೇ ದೈವವನ್ನು ಕಂಡ ಕರ್ಮಯೋಗಿ ಆ ಜಲಗಾರ.

3. **ಬಿರುಗಾಳಿ :** ಷೇಕ್ಸ್‌ಪಿಯರ್‌ನ ಟೆಂಪೆಸ್ಟ್ ನಾಟಕದ ರೂಪಾಂತರವಾಗಿದ್ದು ಟಿ.ಎಸ್. ವೆಂಕಣ್ಣಯ್ಯನವರು ಮುನ್ನುಡಿ ಬರೆದಿದ್ದಾರೆ.

4. **ವಾಲ್ಮೀಕಿಯ ಭಾಗ್ಯ :** ಸೀತಾವನವಾಸದ ವಸ್ತು.

5. **ಮಹಾರಾತ್ರಿ :** ಸಿದ್ಧಾರ್ಥನು ಬುದ್ಧನಾಗಲು ಹೊರಡುವ ಮಹಾ ರಾತ್ರಿಯ ಕಥೆ.

6. **ಸ್ಮಶಾನಕುರುಕ್ಷೇತ್ರಂ :** ಯುದ್ಧದ ದುರಂತತೆ, ಅನ್ಯಾಯ, ಕ್ರೌರ್ಯ, ವಿನಾಶ, ಅವಿವೇಕ, ವಿಧಿ ವಿಫಲತೆ, ಸಂಸ್ಕೃತಿಯ ಸಾವು ಇವುಗಳಿಂದ ಕೂಡಿದ ಮಹಾ ಭಾರತ ಕಥಾವಸ್ತು.

7. **ರಕ್ತಾಕ್ಷಿ :** ಬಿದನೂರಿನ ಇತಿಹಾಸವನ್ನು ಆಧರಿಸಿದ ಕಥೆ. ಷೇಕ್ಸ್ಪಿಯರ್‌ನ ಹ್ಯಾಮ್ಲೆಟ್ ನಾಟಕದ ಪ್ರಭಾವವಿದೆ.
8. **ಶೂದ್ರತಪಸ್ವಿ :** ಮೂರು ದೃಶ್ಯಗಳಿಂದ 48 ಪುಟಗಳಿಂದ ಕೂಡಿರುವ ಈ ನಾಟಕ 1944ರಲ್ಲಿ ಪ್ರಕಟವಾಯಿತು.
9. **ಬೆರಳ್ಗೆ ಕೊರಳ್ :** ಮೂರು ದೃಶ್ಯಗಳಿಂದ 72 ಪುಟಗಳನ್ನೊಂದಿರುವ ಈ ನಾಟಕವು 1947ರಲ್ಲಿ ಪ್ರಕಟವಾಯಿತು.
10. **ಬಲಿದಾನ :** ಮೂರು ದೃಶ್ಯಗಳಿಂದ 34 ಪುಟಗಳನ್ನೊಂದಿರುವ ಈ ನಾಟಕ 1948ರಲ್ಲಿ ಪ್ರಕಟವಾಯಿತು.
11. **ಚಂದ್ರಹಾಸ :** ಪೌರಾಣಿಕ ಚಂದ್ರಹಾಸನ ಕಥೆಯನ್ನೊಂದಿರುವ ನಾಟಕ. ಆದಿ, ಮಧ್ಯ ಮತ್ತು ಅಂತ್ಯ ರಂಗಗಳು ಎಂಬ ಮೂರು ಭಾಗಗಳಿಂದ ಇಪ್ಪತ್ತೊಂದು ದೃಶ್ಯಗಳನ್ನೊಂದಿದೆ.
12. **ಕಾನೀನ :** ಕರ್ಣನ ಕಥೆಯನ್ನಾಧರಿಸಿದ ನಾಟಕ.

ಕಥಾ ಸಂಕಲನ: 03

1. **ಸಂನ್ಯಾಸಿ ಮತ್ತು ಇತರ ಕಥೆಗಳು :** ಸಂನ್ಯಾಸಿ, ಕ್ರಿಸ್ತನಲ್ಲ–ಪಾದ್ರಿಯ ಮಗಳು, ಈಶ್ವರನೂ ನಕ್ಕಿರಬೇಕು, ಆರಾಣಿ ಮೂರು ಕಾಸು, ಯಾರು ಅರಿಯದ ವೀರ, ಹೋಳಿಗೆ ಪ್ರತಿಜ್ಞೆ, ಮಾಯದ ಮನೆ, ದೆವ್ವದ ಕಾಟ, ಶ್ರೀ ಶ್ರೀಮನ್ಮೂಕವಾಗಿತ್ತು ಎಂಬ ಒಂಬತ್ತು ಸಣ್ಣ ಕಥೆಗಳ ಸಂಕಲನ.
2. **ನನ್ನ ದೇವರು ಮತ್ತು ಇತರ ಕಥೆಗಳು :** ನನ್ನ ದೇವರು, ಸಾಲದ ಮಗು, ಆದರ್ಶ ಸಾಧನೆ, ಔದಾರ್ಯ, ಗಂಟು (ಗುಪ್ತಧನ), ಮೀನಾಕ್ಷಿ ಮನೆ ಮೇಷ್ಟರು, ಧನ್ವಂತರಿಯ ಚಿಕಿತ್ಸೆ, ವೈರಾಗ್ಯದ ಮಹಿಮೆ ಅಥವಾ ಅಟ್ಟಿದರೆ ಓಡುತ್ತದೆ; ಬಿಟ್ಟರೆ ಹಿಂಬಾಲಿಸುತ್ತದೆ ಎಂಬ ಎಂಟು ಕಥೆಗಳ ಸಂಕಲನ.
3. **ಆರಂಭದಲ್ಲಿ ಕಥೆಗಳೊಡನೆ :** ಹಲವು ಕಥೆಗಳನ್ನೊಳಗೊಂಡ ಕಥಾ ಸಂಕಲನ.

ಜೀವನ ಚರಿತ್ರೆ: 02

1. **ಶ್ರೀರಾಮಕೃಷ್ಣ ಪರಮಹಂಸ :** ಉದಯ, ಚೈತ್ರಯಾತ್ರೆ, ಯಾತ್ರಿಕರು, ಕಾಮಿನಿ, ಶ್ರೀಮಾತೆ, ದೇವಶಿಲ್ಪಿ, ಮಹಾಸಮಾಧಿ, ಅನಂತರ ಎಂಬ ಎಂಟು ಅಧ್ಯಾಯಗಳನ್ನು ಹೊಂದಿದೆ.
2. **ಸ್ವಾಮಿ ವಿವೇಕಾನಂದ :** ಯಾರಿವನು? ಆನನ ಮತ್ತು ಬಾಲ್ಯ, ಹಿನ್ನೆಲೆ, ನಿರಂಕುಶಮತಿ, ಮುಕ್ತಿ ರಾಹು, ಅಗ್ನಿ ಪರೀಕ್ಷೆ, ಅನುಭೂತಿ, ಧರ್ಮನೀಡವಿ

ರಚನೆ, ಪರಿವ್ರಾಜಕ ಸನ್ಯಾಸಿ, ಕಡಲಿನಾಚೆಗೆ, ಹಸುಳೆಯ ಗೆಲುವಿಗೆ ಹೆತ್ತಮ್ಮನ ಹೆಮ್ಮೆ, ಸಹಸ್ರ ದ್ವೀಪೋದ್ಯಾನದಲ್ಲಿ, ಯೂರೋಪಿನಲ್ಲಿ ಯುಗ ಪ್ರವರ್ತಕ, ಸಂಘ ಸ್ಥಾಪನೆ, ಜೀವನ ಸಂಧ್ಯೆ ಕರೆಯುತಿದೆ ಯುಗವಾಣಿ ಎಂಬ ಹದಿನೇಳು ಅಧ್ಯಾಯಗಳನ್ನು ಹೊಂದಿರುವ ಈ ಕೃತಿ 1932ರಲ್ಲಿ ಪ್ರಕಟವಾಯಿತು.

ಪ್ರಬಂಧ / ಗದ್ಯ ಚಿತ್ರ: 01

1. **ಮಲೆನಾಡಿನ ಚಿತ್ರಗಳು:** ಹಾಸ್ಯ ಚಟಾಕಿ, ಕಾಡಿನಲ್ಲಿ ಕಳೆದ ಒಂದಿರುಳು, ಅಜ್ಜಯ್ಯನ ಅಭ್ಯಂಜನ, ಬಂದನಾ ಹುಲಿರಾಯನು, ಪಟ್ಟಾಚಾರಿಯ ಕಾಡುಕೋಳಿ, ಮನೆಯ ಶಾಲೆಯ ಐಗಳ ಮಾಲೆ, ತೋಟದಾಚೆಯ ಭೂತ, ಅಪ್ಪಣ್ಣನ ರೇಷ್ಮೆ ಕಾಯಿಲೆ, ಮಲೆನಾಡಿನ ಗೋಪಾಲಕರು, ಜೇನುಬೇಟೆ, ಕತೆಗಾರ ಮಂಜಣ್ಣ, ರಾಮರಾವಣರ ಯುದ್ಧ ಎಂಬ ಹನ್ನೆರಡು ಗದ್ಯ ಚಿತ್ರಗಳ ಸಂಕಲನ.

ಅನುವಾದ: 03

1. **ವೇದಾಂತ:** ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶಗಳಲ್ಲಿ ವೇದಾಂತ ಧರ್ಮವನ್ನು ಸಿಂಹ ಕಂಠದಿಂದ ಸಾರಿ ಭರತ ವರ್ಷಕ್ಕೆ ಹಿಂದಿರುಗಿ ಬಂದ ಮೇಲೆ ಲಾಹೋರಿನಲ್ಲಿ ಮಾಡಿದ ಭಾಷಣದ ಭಾಷಾಂತರ.
2. **ಜನಪ್ರಿಯ ವಾಲ್ಮೀಕಿ ರಾಮಾಯಣ:** ವಾಲ್ಮಿಜಿ ರಾಮಾಯಣ ಕಥೆಯನ್ನು ಹೊಸದಾಗಿ ಓದು ಕಲಿತ ವಯಸ್ಕರಿಗೆ ಹೇಳಿದ ಕೃತಿ.
3. **ಗುರುವಿನೊಡನೆ ದೇವರಡಿಗೆ:** (ಭಾಗ–1, 2) ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರೂ ಕುವೆಂಪುರವರ ದೀಕ್ಷಾ ಗುರುಗಳೂ ಆದ ಸ್ವಾಮಿ ಶಿವಾನಂದರ ಮಾತುಕತೆಗಳು ಇಲ್ಲಿವೆ.

ಸಾಹಿತ್ಯ ವಿಮರ್ಶೆ: 06

1. **ಕಾವ್ಯ ವಿಹಾರ:** ಲಕ್ಮೀಶನ ಸೀತಾವನವಾಸ, ಕುಮಾರ ವ್ಯಾಸನ ದುರಂತ ಕರ್ಣ, ರಾಘವಾಂಕನ ಹರಿಶ್ಚಂದ್ರಕಾವ್ಯ ಎಂಬ ಮೂರು ವಿಮರ್ಶಾ ಲೇಖನಗಳಿವೆ.
2. **ತಪೋನಂದನ :** ಮಹಾಶ್ವೇತೆಯ ತಪಸ್ಸು, ಪ್ರತಿಮಾ ಮತ್ತು ಪ್ರಕೃತಿ, ಪಂಪನಲ್ಲಿ ಭವ್ಯತೆ, ಮಹೋಪಮೆ, ಸರೋವರದ ಸಿರಿಗನ್ನಡಿಯಲ್ಲಿ, ನಾಟಕ ಕಲೆಯಲ್ಲಿ ಪ್ರತಿಕೃತಿ ಮತ್ತು ಪ್ರತಿಮಾ ವಿಧಾನಗಳು, ಋಷಿ ವಾಲ್ಮೀಕಿಯ ಕಾವ್ಯ ಜಾಹ್ನವಿ, ಕಾವ್ಯ ವಿಮರ್ಶೆಯಲ್ಲಿ ಪೂರ್ಣದೃಷ್ಟಿ ಎಂಬ ಎಂಟು ಪ್ರಬಂಧಗಳಿವೆ.

3. **ವಿಭೂತಿ ಪೂಜೆ :** ಕವಿಯಲ್ಲಿ ವಿಭೂತಿ, ಶಕ್ತಿ ಕವಿ ರನ್ನ, ಕಲಿಯದವರಿಗೂ ಕಾಮಧೇನು, ಇಂದಿನ ಹೊಸಗನ್ನಡ ಕವಿತೆ ಮತ್ತುಅದರ ಮುಂದಿನ ನಡೆ, ಕವಿಯ ದೃಷ್ಟಿಯಲ್ಲಿ ಪ್ರಕೃತಿ, ಮಲೆನಾಡಿನ ನಿಸರ್ಗ ವಿಭೂತಿ, ವಚನಕಾರ ಬಸವೇಶ್ವರರು, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪರಮಹಂಸರ ವಚನಾಮೃತದಲ್ಲಿ ದೃಷ್ಟಾಂತಕಥಾ ವಿಧಾನ, ದಿವಂಗತ ರಾಷ್ಟ್ರಪಿತ ಬಾಪೂಜಿಗೆ ಭಾಷ್ಪಾಂಜಲಿ, ಪೂರ್ಣದೃಷ್ಟಿಗೆ ಗಾಂಧೀಜಿ, ಕವಿ ರವಿಂದ್ರರು, ಶ್ರೀ ಅರವಿಂದರು, ಪ್ರಖ್ಯಾತ ಪೌರಾಣಿಕ ಯುದ್ಧಗಳು, ಶ್ರೀ ರಾಮಾಯಣ ದಿವ್ಯಶಿಲ್ಪ ಎಂಬ ಹದಿನಾರು ಲೇಖನಗಳಿವೆ.

4. **ದ್ರೌಪದಿಯ ಶ್ರೀಮುಡಿ :** ದ್ರೌಪದಿಯ ಶ್ರೀಮುಡಿ, ಯಶೋಧರ ಚರಿತೆಯಲ್ಲಿ ಕಾಮ ವಿಕಾರ ನಿರೂಪಣೆಯ ಉದ್ದೇಶ, ಶ್ರೀ ಕೃಷ್ಣ ಜನ್ಮಾಷ್ಟಮಿ, ಕವಿಯ ಜೀವನ ದೃಷ್ಟಿ ಮತ್ತು ಕಾವ್ಯ ದೃಷ್ಟಿ, ಇದಾವ ನ್ಯಾಯ? ಕವಿ ಕೃತಿಯಲ್ಲಿ ಅನನ್ಯ ಪರತಂತ್ರತೆ, ಭಾಷೆ; ಲೋಕೋಪಯೋಗಿ ಮತ್ತು ಭಾವೋಪಯೋಗಿ ಮುಂದಿನ ಸಾಹಿತ್ಯದಲ್ಲಿ ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿ ಎಂಬ ಎಂಟು ವಿಮರ್ಶೆ ಮತ್ತು ಕಾವ್ಯ ಮೀಮಾಂಸೆ ಕುರಿತ ಪ್ರಬಂಧಗಳಿವೆ.

5. **ರಸೋ ವೈ ಸಃ :** ಕವಿ ನಿರ್ಮಿತಿಯಲ್ಲಿ ನಿಯತಿಕೃತ ನಿಯಮ ಸಾಹಿತ್ಯ, ರಸಾನುಭವದ ಅಲೌಕಿಕತೆ, ಸಾಹಿತ್ಯದಲ್ಲಿ ಪ್ರತಿಮಾ, ಭೂಮಾನುಭೂತಿ ಮತ್ತು ಭವ್ಯಕತಾ ಅನುಭವದ ಮೀಮಾಂಸೆ, ರಸೋ ವೈ ಸಃ ಎಂಬ ಸಾಹಿತ್ಯ ವಿಮರ್ಶೆ ಮತ್ತು ಕಾವ್ಯ ಮೀಮಾಂಸೆ ಕುರಿತ ಐದು ಪ್ರಬಂಧಗಳಿವೆ.

6. **ಇತ್ಯಾದಿ :** ಸಾಹಿತ್ಯ ವಿಮರ್ಶೆ ಮತ್ತು ಕಾವ್ಯ ಮೀಮಾಂಸೆಯ ಲೇಖನಗಳು ಇಲ್ಲಿವೆ. ಪ್ರಕೃತಿ ಸೌಂದರ್ಯ, ಉಪಮಾಲೋಲ ಲಕ್ಷ್ಮೀಶ, ರನ್ನನ ವೀರಕೌರವ, ಉಪನಿಷತ್ತಿನ ಋಷಿಯ ದರ್ಶನ, ದಿವಂಗತ ಶ್ರೀಯವರು, ಶಿಲ್ಪಿಯ ಕವಿತೆಯ ಸಮರ್ಥನೆ ಕುರಿತ 6 ಪ್ರಬಂಧಗಳು ಈ ಕೃತಿಯಲ್ಲಿ ಇವೆ.

ಭಾಷಣ/ಲೇಖನಗಳ ಸಂಕಲನ: 07

1. **ಸಾಹಿತ್ಯ ಪ್ರಚಾರ :** ವಿದ್ಯಾರ್ಥಿ ಕವಿಗಳಲ್ಲಿ ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು, ಕವಿಯ ದರ್ಶನದಲ್ಲಿ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಕನ್ನಡ ಸಾಹಿತ್ಯ, ದೇಶದೇವಿಯ ಪೂಜೆಗೆ ಬನ್ನಿ ಎಂಬ ಆರು ಭಾಷಣಗಳ ಈ ಕೃತಿ 64 ಪುಟಗಳನ್ನೊಂದಿದೆ. 1930ರಲ್ಲಿ ಪ್ರಕಟವಾಯಿತು.

2. **ನಿರಂಕುಶಮತಿಗಳಾಗಿ :** ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ವಿದ್ಯಾರ್ಥಿಗಳಲ್ಲಿ ಮತಿಗೌರವದ ಅವಶ್ಯಕತೆ, ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ? ಎಂಬ ನಾಲ್ಕು ಭಾಷಣಗಳ ಈ ಕೃತಿ 62 ಪುಟಗಳನ್ನೊಂದಿದೆ. 1944ರಲ್ಲಿ ಪ್ರಕಟವಾಯಿತು.

3. **ಷಷ್ಠಿನಮನ :** ಸಂಸ್ಕೃತಿ ಕರ್ನಾಟಕ, ವಿಶ್ವಮಾನವ, ಮಾನಸ ಗಂಗೋತ್ರಿ, ನಮಗೆ ಬೇಕಾಗಿರುವ ಇಂಗ್ಲೀಷ್, ತೀರ್ಥಯಾತ್ರೆ, ಶ್ರೀ ರಾಮಕೃಷ್ಣ ವಚನವೇದ, ಭಾರತದಲ್ಲಿ ಇಂಗ್ಲೀಷಿನ ಸ್ಥಾನ, ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಆಧುನಿಕ ಮನಃಶಾಸ್ತ್ರ, ಶ್ರೀ ವಿನೋಬಾಜಿ, ವಿಶ್ವ ವಿದ್ಯೆ ಮತ್ತು ಪ್ರಸಾರಾಂಗ, ಸಮನ್ವಯ ರಾಷ್ಟ್ರದಲ್ಲಿ ವಿಶ್ವ ವಿದ್ಯೆ, ಶ್ರೀ ಅರವಿಂದರ ಕಾವ್ಯದರ್ಶನ, ವಿದ್ಯಾರ್ಥಿ ಜೀವನವೂ ಒಂದು ತಪಸ್ಯೆ, ಡಾಕ್ಟರೇಟ್ ಪ್ರಶಸ್ತಿ ಕೊಲಂಬೋ ಇಂದ ಅಲ್ಮೋರಕ್ಕೆ, ಪಂಪನ ಕರ್ಣ, ಮಹಾ ಪುರುಷ ಸ್ವಾಮಿ ಶಿವಾನಂದರು, ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ, ಶ್ರೀ ರಾಮಕೃಷ್ಣ ಲೀಲಾಪ್ರಸಂಗ, ವೈಜ್ಞಾನಿಕ ದೃಷ್ಟಿ ಮತ್ತು ವಿಚಾರಬುದ್ಧಿ ಎಂಬ 30 ಭಾಷಣ / ಮುನ್ನುಡಿಗಳ ಈ ಕೃತಿಯು 272 ಪುಟಗಳನ್ನೊಂದಿದೆ. 1964ರಲ್ಲಿ ಮೊದಲು ಪ್ರಕಟವಾಯಿತು.

4. **ಮನುಜಮತ-ವಿಶ್ವಪಥ :** 1971ರಲ್ಲಿ ಪ್ರಕಟವಾದ ಭಾಷಣ ಲೇಖನಗಳ ಸಂಗ್ರಹವಾಗಿದೆ.

5. **ವಿಚಾರ ಕ್ರಾಂತಿಗೆ ಆಹ್ವಾನ :** 1976ರಲ್ಲಿ ಪ್ರಕಟವಾದ 140 ಪುಟಗಳ ಭಾಷಣ, ಲೇಖನ ಮತ್ತು ಸಂದೇಶಗಳ ಸಂಗ್ರಹವಾಗಿದೆ. ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವವರಿಗೆ ಎಚ್ಚರಿಕೆ, ಸಾಹಿತ್ಯ ಚರಿತ್ರಕಾರರಿಗೆ ಸಲಹೆಗಳು, ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ, ಕರ್ನಾಟಕ ಇಟ್ಟ ಹೆಸರು ಕೊಟ್ಟಮಂತ್ರ, ಶಿವಾನಂದರು, ರಾಮಕೃಷ್ಣರ ಕುರಿತುಟಾಯ್ನಬಿ, ಲಿಪಿ, ಭಾಷೆ, ಭಾವೈಕ್ಯತೆ ಮೊದಲಾದ ಲೇಖನಗಳಿವೆ.

6. **ವಿಶ್ವವಿದ್ಯಾನಿಲಯ ಪ್ರಸಾರಾಂಗ :** ಪ್ರಸಾರಾಂಗ, ವಿದ್ಯಾಭ್ಯಾಸ ಅಂದು-ಇಂದು, ಕನ್ನಡ ಮಾಧ್ಯಮ, ಪ್ರಕಟಣೆಗಳು, ಪ್ರಸಾರಾಂಗದ ಮುನ್ನಡೆ, ಇತ್ಯಾದಿ ಮೈಸೂರು ವಿಶ್ವವಿದ್ಯಾಲಯ ಉಪಕುಲಪತಿಗಳಾಗಿ ಮಾಡಿದ ಭಾಷಣಗಳ ಆಯ್ದ ಭಾಗಗಳು.

7. ಕೊನೆಯ ತೆನೆ ಮತ್ತು ವಿಶ್ವಮಾನವ ಸಂದೇಶ.

ಕಾದಂಬರಿಗಳು

1. **ಕಾನೂರು ಸುಬ್ಬಮ್ಮ ಹೆಗ್ಗಡತಿ :** ಕುವೆಂಪು ರಚಿಸಿದ ಮೊದಲ ಕಾದಂಬರಿ.

1936ರಲ್ಲಿ ಪ್ರಕಟವಾಯಿತು. ಮಹಾ ಭಾರತವನ್ನು ಹೋಲುವ ಈ ಮಹಾ ಕೃತಿಯ ಮುನ್ನುಡಿಯಲ್ಲಿ ಕುವೆಂಪು "ಇಲ್ಲಿ ಚಿತ್ರಿತವಾಗಿರುವುದು ಮಲೆನಾಡಿನ ಬಾಳಿನ ಕಡಲಲ್ಲಿ ಒಂದು ಹನಿ" ಎಂದಿದ್ದಾರೆ. ಅತೀಂದ್ರಿಯ ಅಂಶಗಳಿದ್ದು ಪ್ರಾದೇಶಿಕ ಸೋಗಡು ಪ್ರಧಾನವಾಗಿದೆ. ಕಾನೂರು ಸುಬ್ಬಮ್ಮ ಹೆಗ್ಗಡತಿ ಕ್ಷೇತ್ರ, ಯಂತ್ರ, ನಾಗರಿಕತೆ, ಇಂಗ್ಲೀಷು, ಚಾಂಚಲ್ಯ, ಉದ್ವೇಗ, ವೇಗ ಇವುಗಳಿಂದ ಕೂಡಿದ ಪ್ರಗತಿಗಾಮಿ ಪ್ರಪಂಚದಿಂದ ಬಹುದೂರವಾದ ಮಲೆನಾಡಿನ ಕೊಂಪೆಯ ಚಿತ್ರಣ ಆಗಿದೆ. ನಿತ್ಯ ಚಲನಶೀಲವಾಗಿದ್ದು ದಿನ ದಿನವೂ ಬದಲಾಗುತ್ತಿರುವ ಹೊರಗಿನ ವಿಶಾಲ ಜಗತ್ತಿಗೆ ಪ್ರತಿಯಾದ ಕಾನೂರು, ಮುತ್ತಳ್ಳಿ, ಸೀತೆ ಮನೆಗಳ ಸಂಕುಚಿತ ಬದುಕು ಈ ಕಾದಂಬರಿಯ ತಿರುಳು.

2. **ಮಲೆಗಳಲ್ಲಿ ಮದುಮಗಳು :** ಕುವೆಂಪು ರಚಿಸಿದ ಎರಡನೆ ಕಾದಂಬರಿ. 1967ರಲ್ಲಿ ಪ್ರಕಟವಾಯಿತು. ಕಾದಂಬರಿಯ ಕ್ಷೇತ್ರ ತೀರ್ಥಹಳ್ಳಿ ತಾಲ್ಲೂಕಿನ ಮೇಗರವಳ್ಳಿ ಸೀಮೆ ದುರ್ಗಮ ಪರ್ವತಾರಣ್ಯಗಳ ನೆಲೆವೀಡು. ಈ ಮಲೆನಾಡ ಮಡಿಲಲ್ಲಿರುವ ಸಿಂಬಾವಿ, ಲಕ್ಕುಂದ, ಮೇಗರವಳ್ಳಿ, ಹಳೇಮನೆ, ಕೋಣೂರು, ಹೂವಳ್ಳಿ, ಬೆಟ್ಟಳ್ಳಿ ಇವುಗಳಲ್ಲಿನ ಶ್ರೀಸಾಮಾನ್ಯರ ಬದುಕು – "ಕ್ಷುದ್ರ ಅಲ್ಪ ಜಟಿಲರಾಗ ದ್ವೇಷಮಯ ಜೀವನ ಜಾಲ" ಈ ಕಾದಂಬರಿ. ವಿವರ ವರ್ಣನೆಯ ರಾಮಾಯಣವನ್ನು ಹೋಲುವ ಈ ಕಾದಂಬರಿಯ ವಸ್ತು ಕಾಮ. ಸಾಮಾನ್ಯರ ಪಾತ್ರಗಳ ಸರಳತೆ ಕಾಣಬರುತ್ತದೆ.

ಆತ್ಮಚರಿತ್ರೆ : 01– ನೆನಪಿನ ದೋಣಿಯಲ್ಲಿ

ಕವಿ ಕುವೆಂಪು ಅಂಬಿಗನಾಗಿ ಜೀವನ ವಾಹಿನಿಯಲ್ಲಿ ತೇಲುತ್ತಾರೆ, ದಾಟುತ್ತಾರೆ. ಹುಟ್ಟು ಹಾಕುತ್ತಾಗತ ಜೀವನದೆಡೆಗೆ ಹಿನ್ನೋಟದ ಚಿತ್ರಣ ನೀಡಿದ್ದಾರೆ. ರಾಮಕೃಷ್ಣರ ಆಶೀರ್ವಾದ ಮತ್ತು ನಿರಂತರ ತಪಸ್ಸಿನಿಂದ ಸಿಕ್ಕ ಜ್ಯೋತಿಯೇ ಕುವೆಂಪು ಅವರ ಪ್ರಾಣ ರಕ್ಷೆಯೆಂದು, ಭಗವತ್ಕೃಪೆ ಅವರ ಚಾಲಕ ಕ್ರಿಯೆಯೆಂಬುದು ಈ ಕೃತಿಯಿಂದ ವ್ಯಕ್ತವಾಗುತ್ತದೆ. ವಿರಕ್ತ ಜೀವನ, ಆಧ್ಯಾತ್ಮ ಸಾಧನೆ, ಕಾವ್ಯ ರಚನೆ, ಅವಿಭಕ್ತ ಕುಟುಂಬದ ಸ್ಥಿತಿಗತಿ, ಬೈಬಲ್ ವ್ಯಾಸಂಗ, ಮಂಜಪ್ಪ ಗೌಡರ ಸಂಪರ್ಕ, ಮೈಸೂರು ಹೋಟೆಲು ವಾಸ, ಕೃತಿಗಳ ರಚನೆ, ರೋಗಗಳು, ಸಿದ್ಧೇಶ್ವರರ ಆಧ್ಯಾತ್ಮ ಸಂಪರ್ಕ ಇವೆಲ್ಲ ಬದುಕನ್ನು ರೂಪಿಸಿವೆ. ಇಂಗ್ಲೀಷಿನಲ್ಲಿ ಆರಂಭವಾದ ಕಾವ್ಯ ರಚನೆ ಕ್ರಮೇಣ ಕನ್ನಡದತ್ತ ತಿರುಗಿಸಿ ಸಾಧಿಸಿದ ಸಾಹಸ ವಿಕ್ರಮಗಳ ಕತೆ ಇಲ್ಲಿದೆ.

ಶಿಶು ಸಾಹಿತ್ಯ: 09

1. **ಅಮಲನ ಕಥೆ :** 190 ಚೌಪದಿಗಳ 39 ಪುಟಗಳಿಂದ ಕೂಡಿದ ಈ ಕೃತಿ

ಮೊದಲು 1924ರಲ್ಲಿ ಪ್ರಕಟವಾಯಿತು. ಅಚ್ಯುತನ ಭಕ್ತನಾದ ಅಮಲನು ಒಮ್ಮೆ ಮರತರಲು ಕಾಡಿಗೆ ಹೋಗಿದ್ದನು. ಅಲ್ಲಿಕಂಡ ಪ್ರಕೃತಿ ಸೌಂದರ್ಯವೆಲ್ಲ ದೇವರ ಕರುಣೆಯೆಂದು ಹಾಡುತ್ತಾ ಸಾಗುತ್ತಾನೆ. ಒಂದಿಷ್ಟು ಮರಕಡಿದು ಎಳಗರುಕೆ ಮೇಲೆ ವಿಶ್ರಮಿಸಿಕೊಳ್ಳುತ್ತಿರುವಾಗ ಪ್ರಾಣಿಯೊಂದು ಓಡಿ ಬರುತ್ತಿರುವ ಶಬ್ದ ಕೇಳಿಸುತ್ತದೆ. ಎದ್ದಾಗ ಹರಿಣ (ಜಿಂಕೆ) ವೊಂದು ಬಂದುತನ್ನನ್ನು ಕೊಲ್ಲ ಬರುತ್ತಿರುವ ಶಬರನಿಂದ ರಕ್ಷಿಸು ಎನ್ನುತ್ತದೆ. ಅಮಲ ಅಭಯ ನೀಡುವಷ್ಟರಲ್ಲಿ ಶಬರನು ಬರುವನು. ಅಮಲ ಮತ್ತು ಶಬರರರಿಬ್ಬರಿಗೂ ವಾಗ್ವಾದ ಜಗಳಗಳಾಗುತ್ತವೆ. ಅಮಲನು ಸೋಲುತ್ತಾ ಬಂದಾಗದೈವ ಪ್ರಾರ್ಥನೆ ಮಾಡುತ್ತಾನೆ. ಎಷ್ಟು ಹೊತ್ತಾದರೂ ತನ್ನ ತಂದೆ ಬರಲಿಲ್ಲವೆಂದು ತಾಯಿಯ ಸಲಹೆಯಂತೆ ಅಮಲನ ಮಗ ಮಧುರನು ದೇವರನ್ನು ಪ್ರಾರ್ಥಿಸಿದಾಗ ಪ್ರತ್ಯಕ್ಷವಾಗಿ ಅವನ ಕಷ್ಟ ನಿವಾರಣೆಯಾಗುತ್ತದೆ. ಎಲ್ಲರೂ ಸುಖವನ್ನೊಂದುತ್ತಾರೆ. ಇದರಲ್ಲಿ ನಿರ್ಮಲ ಭಕ್ತಿ ಪ್ರತಿಪಾದನೆಯಾಗಿದೆ.

2. **ದೊಡ್ಡಣ್ಣನ ತಮ್ಮ** : 1926ರಲ್ಲಿ ಪ್ರಕಟವಾಯಿತು. ಮಕ್ಕಳಲ್ಲಿ ಸಹಜವಾಗಿರುವ ಕಲ್ಪನಾಶಕ್ತಿ, ಪ್ರಚೋದಿಸುವ ವಸ್ತು, ಆಗಸದಲ್ಲಿ ತೇಲುತ್ತಿರುವ ಮೋಡ, ಮಿನುಗುತ್ತಿರುವ ನಕ್ಷತ್ರ, ಬೀಸುವ ಗಾಳಿ, ಕುಕಿಲಿಯಿರಿಯುವ ಹಕ್ಕಿಗಳು ಇವುಗಳನ್ನು ಕಲ್ಪನಾಲೋಕದಲ್ಲಿ ವಿಹರಿಸುವ ಮಕ್ಕಳು ಇಲ್ಲಿ ಕಾಣಬರುತ್ತಾರೆ.

3. **ಹಾಳೂರು** : 1926ರಲ್ಲಿ ಪ್ರಕಟವಾಯಿತು. ನವನಾಗರಿಕತೆ ಪ್ರಭಾವದಿಂದ ನಮ್ಮ ಹಳ್ಳಿಗಳು ಹೇಗೆ ಸಂಸ್ಕೃತಿ ಕಳೆದುಕೊಂಡು ಬಂಜೆಯಾಗುತ್ತಿವೆ ಎಂಬುದೇ ಇಲ್ಲಿನ ಕಥಾ ವಸ್ತುವಾಗಿದೆ.

4. **ಬೊಮ್ಮನಹಳ್ಳಿಯ ಕಿಂದರಿಜೋಗಿ** : ಒಂಗ್ಲೀಷ್ ಕವಿ ಬ್ರೌನಿಂಗ್‌ನ the pide of the Hamelin ಆಧರಿಸಿ ಬರೆದದ್ದು. ಬೊಮ್ಮನಹಳ್ಳಿಯಲ್ಲಿ ಇಲಿಗಳಿಂದಾಗುವ ಹಾವಳಿಯನ್ನು ಮಕ್ಕಳಿಗೆ ಮನಕ್ಕೆ ಮುಟ್ಟುವಂತೆ ರಚಿಸಲಾಗಿದೆ.

5. **ನನ್ನ ಗೋಪಾಲ** : 1930ರಲ್ಲಿ ಪ್ರಕಟವಾಯಿತು. ವಿಧವೆ ಮತ್ತು ಬಡವೆ ತಾಯಿಯೊಬ್ಬಳ ಭಕ್ತಿಯಿಂದ ಮಗ ಗೋಪಾಲನಿಗೆ ಶ್ರೀಕೃಷ್ಣನು ಅಣ್ಣನಾಗಿ ದರ್ಶನ ಕೊಟ್ಟಕಥೆ. ಗುರುಭಕ್ತಿ ಕಾಣಿಕೆಗೆ ಏನೂ ಇಲ್ಲದೆ ಮೊಸರಿನ ಕುಡಿಕೆ ಕೊಟ್ಟಾಗ ಅದು ಅಕ್ಷಯವಾಗುತ್ತದೆ. ತಾಯಿಯ ಭಕ್ತಿ ಮತ್ತು ಗೋಪಾಲನ ನಂಬಿಕೆ ಭಗವಂತನು ಒಲಿಯಲು ಕಾರಣವೆಂಬುದು ಇಲ್ಲಿ ವ್ಯಕ್ತವಾಗಿದೆ.

6. **ಮರಿವಿಜ್ಞಾನಿ:** 1947ರಲ್ಲಿ ಪ್ರಕಟವಾಯಿತು. ಅರಳುತ್ತಿರುವ ಮಕ್ಕಳ ಮನಸ್ಸು ತಾಳುವ ವೈಜ್ಞಾನಿಕ ದೃಷ್ಠಿಯ ಗೀತೆಗಳ ಸಂಕಲನವಿದು.

7. **ಮೇಘಪುರ :** 1947ರಲ್ಲಿ ಪ್ರಕಟವಾಯಿತು. ಹಕ್ಕಿ, ನದಿ, ಮುಗಿಲುಗಳೊಡನೆ ಸಂಬಂಧಪಟ್ಟ ಮಕ್ಕಳ ಸ್ವಪ್ನಾತಿಶಯಗಳ ಚಿತ್ರಣವೇ ಈ ಗೀತೆಗಳ ವಸ್ತು.

8. **ನನ್ನ ಮನೆ :** 1946ರಲ್ಲಿ ಪ್ರಕಟವಾಯಿತು. ಪ್ರಕೃತಿ, ಮಾತೃ ಮತ್ತು ಕನ್ನಡ ಪ್ರೇಮವನ್ನು ಚಿತ್ರಿಸುವ ಕೃತಿ.


9. **ನರಿಗಳಿಗೇಕೆ ಕೋಡಿಲ್ಲ :** ಮಕ್ಕಳಿಗಾಗಿ ರಚಿಸಿದ ಕೃತಿ.

ಪ್ರಶಸ್ತಿ ಪುರಸ್ಕಾರಗಳು : 1955ರಲ್ಲಿ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತವು. 1958ರಲ್ಲಿ ಕೇಂದ್ರ ಸರ್ಕಾರ ಪದ್ಮ ಭೂಷಣ ಪ್ರಶಸ್ತಿ ನೀಡಿತು. 1964ರಲ್ಲಿ ರಾಜ್ಯ ಸರ್ಕಾರ ಕುವೆಂಪುರವರನ್ನು ರಾಷ್ಟ್ರಕವಿ ಎಂದು ಸನ್ಮಾನಿಸಿತು. 1968ರಲ್ಲಿ ಶ್ರೀ ರಾಮಾಯಣದರ್ಶನಂ ಮಹಾಕಾವ್ಯಕ್ಕೆ ಜ್ಞಾನ ಪೀಠ ಪ್ರಶಸ್ತಿಯೂ, 1988ರಲ್ಲಿ ರಾಜ್ಯ ಸರ್ಕಾರದ ಪಂಪ ಪ್ರಶಸ್ತಿಯೂ ದೊರೆತವು. 1992ರಲ್ಲಿ ಕರ್ನಾಟಕ ರತ್ನ ಬಿರುದಿಗೆ ಭಾಜನರಾದರು.

1956ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ, 1966ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ, 1969ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯಗಳು ಗೌರವ ಡಿ.ಲಿಟ್. ಪದವಿಯನ್ನು ನೀಡಿ ಗೌರವಿಸಿದವು.

ಮನುಜಮತ, ವಿಶ್ವಪಥ ಎಂಬ ವಿಶ್ವ ಮಾನವ ಸಂದೇಶವನ್ನು ಸಾರಿದ ಕುವೆಂಪುರವರು ರಸಋುಷಿಗಳಾಗಿ ಲೋಕ ಕಲ್ಯಾಣ ಚಿಂತಕರಾಗಿ ತುಂಬು ಜೀವನ ನಡೆಸಿ 1994 ನವೆಂಬರ್ 9ರಂದು ಅಮರರಾದರು.

ಶ್ರೀ ಹೆಚ್.ಎಲ್. ನಾಗೇಗೌಡ



ಕನ್ನಡ ಸಾಹಿತ್ಯ, ಇತಿಹಾಸ, ಮತ್ತು ಜಾನಪದ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಕನ್ನಡ ಸಾರಸ್ವತ ಲೋಕದ ಹಿರಿಯ ಸಂಶೋಧಕರೆಂದರೆ ನಾಡೋಜ ಹೆಚ್.ಎಲ್. ನಾಗೇಗೌಡರು. ಬಹುಮುಖ ಪ್ರತಿಭೆಯುಳ್ಳ ಗೌಡರು ಒಬ್ಬ ಆಡಳಿತಗಾರರಾಗಿ, ಕವಿಯಾಗಿ, ಅನುವಾದಕರಾಗಿ, ಜಾನಪದ ಸಂಗ್ರಾಹಕರಾಗಿ, ಸಂಶೋಧಕರಾಗಿ ನಿರ್ಮಾತೃವಾಗಿ ನಾಡಿನ ಸಾಂಸ್ಕೃತಿಕ ಲೋಕಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಒಬ್ಬ ವ್ಯಕ್ತಿ

ತನ್ನ ಜೀವಿತಾವಧಿಯಲ್ಲಿ ತನ್ನ ವೃತ್ತಿ, ಪ್ರವೃತ್ತಿಗಳೆರಡರಲ್ಲೂ ಇಷ್ಟೆಲ್ಲವನ್ನೂ ಸಾಧಿಸಲು ಸಾಧ್ಯವೇ ಎಂದು ವಿಸ್ಮಯ ಪಡುವಂತೆ ಮಾಡಿರುವ ಸಾಧಕರೆಂದರೆ ಹೆಚ್.ಎಲ್. ನಾಗೇಗೌಡರು. ಸಾಧನೆ ಅವರ ವ್ಯಕ್ತಿತ್ವದಷ್ಟೇ ಗಟ್ಟಿಯಾದುದು, ಮೌಲ್ಯಯುತವಾದುದು.

ಹೆಚ್.ಎಲ್. ನಾಗೇಗೌಡರು ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೋಕು ಹೆರಗನಹಳ್ಳಿಯಲ್ಲಿ 1915 ಫೆಬ್ರವರಿ 11ರಂದು ಅವಿಭಕ್ತ ಕುಟುಂಬ ಒಂದರಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಬುದ್ಧಿವಂತರು, ಸೂಕ್ಷ್ಮಜೀವಿಯೂ ಆಗಿದ್ದರು. ಪ್ರಾಥಮಿಕ ಶಿಕ್ಷಣದ ನಂತರ ಬಿ.ಎಸ್ಸಿ. ಮತ್ತು ಎಲ್.ಎಲ್.ಬಿ. ಪದವಿಗಳನ್ನೂ ಪೂರೈಸಿದರು. 1941ರಲ್ಲಿ ನಡೆದ ಮೈಸೂರು ಸಿವಿಲ್ ಸರ್ವೀಸ್ ಸ್ಪರ್ಧಾತ್ಮಕ ಪರೀಕ್ಷೆ –ಯಲ್ಲಿ ತೇರ್ಗಡೆಯಾಗಿ ಗೆಜೆಟೆಡ್ ಹುದ್ದೆಗೆ ಆಯ್ಕೆಯಾದರು. ಹೀಗೆ ಆಡಳಿತಾತ್ಮಕ ಉನ್ನತ ಹುದ್ದೆಗೆ ಏರಿದ ಹೆಚ್.ಎಲ್. ನಾಗೇಗೌಡರು 1979ರಲ್ಲಿ ರಾಜ್ಯದ ಲೋಕಸೇವಾ ಆಯೋಗದ ಸದಸ್ಯರಾಗಿ ನಿವೃತ್ತಿ ಹೊಂದಿದರು. ತಮ್ಮ ವೃತ್ತಿಯಲ್ಲಿ ದಕ್ಷ ಆಡಳಿತಗಾರರಾಗಿ, ಕರ್ತವ್ಯನಿಷ್ಠೆ, ಮಾನವೀಯತೆಗಳಿಗೆ ಹೆಸರಾಗಿದ್ದರು.

ನಾಗೇಗೌಡರ ಸಾಧನೆಗಳು – ನಾಗೇಗೌಡರು ಗ್ರಾಮೀಣ ಪ್ರದೇಶದಿಂದ ಬಂದು ಮೂಲತಃ ಕಲಿತಿದ್ದು ವಿಜ್ಞಾನ ಮತ್ತು ನ್ಯಾಯ ಶಾಸ್ತ್ರಗಳನ್ನು, ವೃತ್ತಿಗೆ ಸೇರಿದ್ದು ಆಡಳಿತ ಕ್ಷೇತ್ರವನ್ನು, ಆಸಕ್ತಿ ಬೆಳೆದಿದ್ದು ಕನ್ನಡ ಸಾಹಿತ್ಯ ಮತ್ತು ಜಾನಪದದಲ್ಲಿ. ಅವರ ಲೋಕಗ್ರಹಿಕೆ ಮತ್ತು ಅಭಿವ್ಯಕ್ತಿಗಳೆರಡೂ ಅಸಾಧಾರಣವಾದುದು. ತಮ್ಮ ಇಡೀ ಬದುಕನ್ನು ಸಾಹಿತ್ಯ ಮತ್ತು ಜಾನಪದ ಏಳಿಗೆಗೆ ತ್ಯಾಗ ಮಾಡಿದರು. ಅವರ ಜೀವನದ ಅನುಭವ ಮತ್ತು ಅವರ ಸಾಹಿತ್ಯಿಕ ಕೊಡುಗೆಯ ವ್ಯಾಪ್ತಿ ವಿಶಾಲವಾದುದು ಮತ್ತು ಅಪರಿಮಿತವಾದದ್ದು ಎಂಬುದಕ್ಕೆ ಅವರು ರಚಿಸಿರುವ ಸುಮಾರು 50ಕ್ಕೂ ಹೆಚ್ಚು ಕೃತಿಗಳು ಸಾಕ್ಷಿಗಳಾಗಿವೆ. ಸೃಜನಶೀಲ ಬರವಣಿಗೆಗಾರರಾದ ನಾಗೇಗೌಡರು ತಮ್ಮ ತಾರುಣ್ಯದಲ್ಲಿದ್ದಾಗಲೇ ಸಾಹಿತ್ಯಕೃಷಿಗಿಳಿದರು. ಗೀಜಗನ ಹಕ್ಕಿ ಮತ್ತು ಕಥೆವ್ಯಥೆ ಎಂಬ ಹೆಸರಿನ ಕವನ ಸಂಕಲವನ್ನು ಹೊರತಂದರು. ಬಯಲುಸೀಮೆಯ ಗ್ರಾಮೀಣ ಸಂಸ್ಕೃತಿಯನ್ನು ಚಿತ್ರಿಸುವ ನನ್ನೂರು, ದೊಡ್ಡಮನೆ ಮತ್ತು ಸೊನ್ನೆಯಿಂದ ಸೊನ್ನೆಗೆ ಎಂಬ ಅಪರೂಪದ ಕಾದಂಬರಿಗಳನ್ನು ರಚಿಸಿದರು. ಸರೋಜಿನಿದೇವಿ, ಬೆಟ್ಟದಿಂದ ಬಟ್ಟಲಿಗೆ, ಕಾಫಿಯ ಕಥೆ ಇವರ ಇತರ ಪ್ರಮುಖ ಕೃತಿಗಳಾಗಿವೆ.

ಇವರ ಮತ್ತೊಂದು ಬರವಣಿಗೆ ಕ್ಷೇತ್ರ, ಅನುವಾದ ಸಾಹಿತ್ಯ. ಇವರ ಪ್ರಸಿದ್ಧ ಅನುವಾದ ಸಾಹಿತ್ಯ ಕೊಡುಗೆ ಎಂದರೇ ಕನ್ನಡದಲ್ಲಿ ರಚಿಸಿರುವ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಸಮಗ್ರ ಪ್ರವಾಸಿಕಥನಗಳನ್ನು ಕುರಿತಾದ 8 ಬೃಹತ್ ಸಂಪುಟಗಳ **"ಪ್ರವಾಸಿ ಕಂಡ ಇಂಡಿಯಾ"** ಇಡೀ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯ ವೈಭವವನ್ನೇ ಬಿಚ್ಚಿಡುವ ಪ್ರವಾಸಿ ಕಂಡ ಇಂಡಿಯಾ ಸಂಪುಟಗಳು

ಭಾರತೀಯ ಸಾಹಿತ್ಯದಲ್ಲೇ, ಅಪೂರ್ವವಾದ ಮೌಲ್ಯಯುತವಾದ ಮಹತ್ವದ ಸಾಹಿತ್ಯಿಕ ಕೃತಿಗಳಾಗಿವೆ. ಸರ್ ವಾಲ್ಟರ್ ಸ್ಕಾಟ್‌ನ ಕೆನಿಲ್‌ವರ್ತ್, ವೆರಿವರೆಲ್ವನ್‌ನ ಜೀವನ ಚರಿತ್ರೆಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ.


ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಇತರೆ ಸಂಘ ಸಂಸ್ಥೆಗಳ ಮೂಲಕ ಜನಪದೀಯ ಚಟುವಟಿಕೆಗೆ ಪ್ರೇರಕರಾದ ನಾಗೇಗೌಡರು ಜನಪದ ಸಂಗ್ರಾಹಕರಾಗಿ ಸಂಶೋಧಕರಾಗಿ ಬಹುದೊಡ್ಡ ಹೆಸರಾಗಿದ್ದಾರೆ. ಜನಪದ ಸಂಶೋಧನೆ ಎಂದರೆ ಹೆಚ್.ಎಲ್. ನಾಗೇಗೌಡರು ಎನ್ನುವ ಖ್ಯಾತಿ ಪಡೆದ ಅವರು ಆ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆಗಳು ಅಪಾರ.

ನಾಗೇಗೌಡರ ಜನಪದ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಅನನ್ಯ ಕೃತಿಗಳೆಂದರೆ ಸೋಬಾನೆ ಚಿಕ್ಕಮ್ಮನ ಪದಗಳು, ಪದವವೇ ನಮ್ಮ ಎದೆಯಲಿ, ಹೆಳವರು ಮತ್ತು ಅವರ ಕಾವ್ಯಗಳು, ಅಲ್ಲದೇ ಇಂಗ್ಲೀಷಿನಲ್ಲಿ ಪ್ರೊ. ಹೆಚ್.ಆರ್. ರಾಮಕೃಷ್ಣಯ್ಯ–ನವರೊಂದಿಗೆ ಕರ್ನಾಟಕದ ಸಮಗ್ರ ಜಾನಪದ ಪರಂಪರೆಯನ್ನು, **'ಎಸೆನ್ಸಿಯಲ್ಸ್ ಆಫ್ ಕರ್ನಾಟಕ ಫೋಕ್‌ಲೋರ್'** ಎಂಬ ಕೃತಿಯನ್ನು ಹೊರತಂದಿದ್ದಾರೆ. ಮತ್ತೊಂದು ಪ್ರಮುಖ ಜನಪದಕೃತಿ ಇವರ ಪ್ರಧಾನ ಸಂಪಾದಕತ್ವದಲ್ಲಿ ಹೊರಬಂದ ಕನ್ನಡ–ಜಾನಪದ ಕೋಶವು ಒಂದು ಜಾನಪದ ವಿಶ್ವಕೋಶವಾಗಿದೆ. ನಾಗಸಿರಿ ಶೀರ್ಷಿಕೆ ಅಡಿಯಲ್ಲಿ ಹೊರಬಂದಿರುವ ನಾಗೇಗೌಡರ ಜೀವನ ಚರಿತ್ರೆಯು ಅವರ ಜೀವನ ಮತ್ತು ವಿದೇಶಿ ಪ್ರವಾಸ ಆಡಳಿತ, ಹಾಗೂ ಜಾನಪದ ಕ್ಷೇತ್ರದ ಅವರ ಜೀವಾನುಭದ ಸಮಗ್ರ ವಿಚಾರಗಳನ್ನು ಒಳಗೊಂಡಿದೆ. ಅವರ ಮತ್ತೊಂದು ಮಹತ್ವದ ಸಾಹಿತ್ಯ ಕೃತಿ ಮಲೆನಾಡ ವಾಲ್ಮೀಕಿ; ನಾ ಕಂಡ ಪ್ರಪಂಚವೆಂಬ ತಮ್ಮ ಪ್ರವಾಸೀ ಕಥನವನ್ನು ರಚಿಸಿದ್ದಾರೆ. ಪತ್ರಿಕೋದ್ಯಮದಲ್ಲೂ ತಮ್ಮನ್ನು ತೊಡಗಿಸಿಕೊಂಡ ಗೌಡರು ಜಾನಪದ ಜಗತ್ತು ಎಂಬ ತ್ರೈಮಾಸಿಕ ಪತ್ರಿಕೆಯನ್ನು ತಮ್ಮ ಸಂಪಾದಕತ್ವದಲ್ಲಿ ಪ್ರಕಟಿಸುತ್ತಾ ಬಂದರು. ನಾಗೇಗೌಡರು ಸಾಹಿತ್ಯಿಕ ಕೃಷಿಗೆ ಮಾತ್ರವಲ್ಲ ಹಲವು ಸಂಘ ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕ ಸಾಂಸ್ಥಿಕ ಕೃಷಿಯಲ್ಲಿ ಖ್ಯಾತರಾಗಿದ್ದಾರೆ. ನಾಡ ಸಂಸ್ಕೃತಿ ಜನಪದದಲ್ಲಿ ಅಪಾರ ಶಕ್ತಿ ಇದ್ದ ಗೌಡರು 1963ರಲ್ಲಿ ಜನಪದ ಸಂಸ್ಕೃತಿಯ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದ್ದಾರೆ. 1979ರಲ್ಲಿ ಜಾನಪದ ಸಂರಕ್ಷಣೆ, ಸಂವರ್ಧನೆ, ಪ್ರಚಾರ ಹಾಗೂ ಪ್ರಸಾರಗಳ ಪ್ರಧಾನ ಉದ್ದೇಶಗಳನ್ನು ಒಳಗೊಂಡು ಕರ್ನಾಟಕ ಜಾನಪದ ಪರಿಷತ್ತು ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು. ಸಂಸ್ಥೆಯ ಮೂಲಕ ಸುಮಾರು 2000 ಪುಟಗಳ ಜನಪದ ಗೀತೆಗಳ ಮುದ್ರಣ ಸುಮಾರು 800 ಘಂಟೆಗಳ ಕಾಲಾವಧಿಯ ವೀಡಿಯೋ ಚಿತ್ರೀಕರಣ ಮಾಡಿಸಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಸಿರಿಗಂಧ ಹೆಸರಿನಲ್ಲಿ ಜಾನಪದ ಸಾಕ್ಷ್ಯಚಿತ್ರವು 108 ಕಂತುಗಳಲ್ಲಿ

ಬೆಂಗಳೂರು ದೂರದರ್ಶನದಿಂದ ಪ್ರಸಾರಗೊಂಡಿತ್ತು. ಕರ್ನಾಟಕ ಜಾನಪದ ಹಾಗು ಯಕ್ಷಗಾನ ಅಕಾಡಮಿಯ ಮೊದಲ ಅಧ್ಯಕ್ಷರಾಗಿ ಸುಮಾರು 6 ವರ್ಷಗಳ ಕಾಲ ಸೇವೆ ಸಲ್ಲಿಸಿ ಜನಪದದ ಉಳಿವಿಗಾಗಿ ಅನೇಕ ರಚನಾತ್ಮಕ ಕಾರ್ಯ ಯೋಜನೆಯನ್ನು ರೂಪಿಸಿದರು. ನಾಗೇಗೌಡರ ಜನಪದ ಲೋಕಕ್ಕೆ ನೀಡಿದ ಮತ್ತೊಂದು ಚಿರಸ್ಮರಣೆ ಕೊಡುಗೆ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ರಾಮನಗರದ ಬಳಿ ರೂಪಿಸಿದ **"ಜಾನಪದ ಲೋಕ."** ಇದೊಂದು ಮಹತ್ವದ ಜಾನಪದ ಸಾಂಸ್ಕೃತಿಕ ಕೇಂದ್ರವಾಗಿ ಬೆಳವಣಿಗೆ ಸಾಧಿಸಿದೆ. ಇಂದು ವೃತ್ತಿ ಪ್ರವೃತ್ತಿಗಳೆರಡರಲ್ಲೂ ಅಪಾರ ಸಾಧನೆಗಳನ್ನು ಸಾಧಿಸಿದ ಈ ಸಾಧಕನಿಗೆ ಹಲವು ಪ್ರಶಸ್ತಿ ಸನ್ಮಾನ ಗೌರವಗಳು ಸಂದಿವೆ : ಕನ್ನಡ ಸಾಹಿತ್ಯ ಅಕಾಡಮಿ ಪ್ರಶಸ್ತಿ (1974), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1988), ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡಮಿ ಪ್ರಶಸ್ತಿ (1990), ಅಖಿಲ ಭಾರತ 64ನೇಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೌರವ (1995), 1995ರಲ್ಲಿ ಕರ್ನಾಟಕದ ವಿಧಾನ ಪರಿಷತ್ತಿನ ಸದಸ್ಯತ್ವ, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಚುಂಚಶ್ರೀ ಪ್ರಶಸ್ತಿ (2002) ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರತಿಷ್ಠಿತ ನಾಡೋಜ ಪ್ರಶಸ್ತಿ (2002).

ಸಾಧನೆಯ ಸಾಧಕನಿಗೆ ಕೊನೆ ಇಲ್ಲ ಎಂಬಂತೆ ತಮ್ಮ 90ರ ಇಳಿವಯಸ್ಸಿನಲ್ಲೂ ಕಿಂಚಿತ್ತೂ ಉತ್ಸಾಹ ಕುಗ್ಗದ ಜನಪದವನ್ನೇ ಜೀವನವನ್ನಾಗಿ ಮಾಡಿಕೊಂಡು ನಾಗೇಗೌಡರು ಮೌಖಿಕ ವೈವಿಧ್ಯಮಯ ಜಾನಪದವನ್ನು ಅಳಿಸದೇ ಜೀವಂತವಾಗಿರಿಸಲು ಜಾನಪದ ಸಿರಿ ಜೀವನವನ್ನೇ ಬೆಂಗಳೂರಿನಲ್ಲಿ ಸ್ಥಾಪಿಸಿದ್ದಾರೆ. ಜಾನಪದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಎಂದೂ ಅಳಿಸಿಹಾಕಲಾಗದ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಹೆಚ್.ಎಲ್. ನಾಗೇಗೌಡರೆಂಬ ಜಾನಪದ ಮೇರು ಶಿಖರ. ಅವರು 2005ರಲ್ಲಿ ಕಾಲವಾದರು.

ಪ್ರೊ. ದೇ. ಜವರೇಗೌಡ



ಕನ್ನಡ ಸಾರಸ್ವತ ಲೋಕದ ಸರದಾರ, ದೇಜಗೌ ಎಂದೇ ಖ್ಯಾತನಾಮರಾದ ದೇವೇಗೌಡ ಜವರೇಗೌಡರು ಕನ್ನಡ ಪರ ಹೋರಾಟದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಮಾನ್ಯ ಸ್ಥಾನಮಾನ ನೀಡಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಬಡತನದಿಂದ ಮೇಲೆ ಬಂದ ಗೌಡರು ಹೆಸರಾಂತ ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದಲ್ಲಿ ಉಪನ್ಯಾಸಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ,

ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಹಲವು ಹತ್ತು ಅಭಿವೃದ್ಧಿ ಕೆಲಸಗಳನ್ನು ಮಾಡಿ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಅನ್ನು ಹುಟ್ಟು ಹಾಕಿ ಅದರ ಗೌರವಾಧ್ಯಕ್ಷರಾಗಿ ದುಡಿದರು.

ಶ್ರೀಯುತರು ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ಚಕ್ಕೆರೆ ಗ್ರಾಮದ ರೈತರಾದ ದೇವೇಗೌಡ ಮತ್ತು ಚನ್ನಮ್ಮ ದಂಪತಿಗಳಿಗೆ 6.7.1918ರಂದು ಜನಿಸಿದರು. ಬಾಲಕ ಜವರೇಗೌಡನಿಗೆ ಶಾಲೆಯಲ್ಲಿ ಕಲಿಯಬೇಕೆಂಬ ಹಂಬಲ, ಅದರೆ ಬಡತನ ಇದಕ್ಕೆ ಅವಕಾಶ ನೀಡುತ್ತಿರಲಿಲ್ಲ. ಶಾಲಾ ಮಾಸ್ತರರಾಗಿದ್ದ ಹೆಚ್.ಕೆ. ವೀರಣ್ಣಗೌಡರು ಬಾಲಕನ ನೆರವಿಗೆ ಬಂದರು. ತಮ್ಮ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಪ್ರೌಢಶಾಲಾ ಶಿಕ್ಷಣದವರೆಗೆ ಚನ್ನಪಟ್ಟಣದಲ್ಲಿ ವ್ಯಾಸಂಗ ಮಾಡಿ ಬೆಂಗಳೂರಿನಲ್ಲಿ ಇಂಟರ್ಮೀಡಿಯಟ್ ವ್ಯಾಸಂಗ ಮಾಡುವಾಗ ಒಕ್ಕಲಿಗರ ಸಂಘದ ವಿದ್ಯಾರ್ಥಿನಿಲಯದಲ್ಲಿದ್ದುಕೊಂಡು ವ್ಯಾಸಂಗ ಮುಗಿಸಿ, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್‌ಗೆ ಸೇರಿದರು ಅವರಿಗೆ ಕುವೆಂಪು, ಬಿ.ಎಸ್. ವೆಂಕಣ್ಣಯ್ಯ, ತೀನಂಶ್ರೀ ಯವರಂತಹ ಮೇಧಾವಿಗಳ ಪಾಠ ಪ್ರವಚನ ಕೇಳುವ ಭಾಗ್ಯ ದೊರೆಯಿತು. ಬಿ.ಎ. ಪದವೀಧರರಾದ ಮೇಲೆ ಕೆಲವು ತಿಂಗಳು ಶಿಕ್ಷಣ ಇಲಾಖೆಯಲ್ಲಿ ಗುಮಾಸ್ತರಾಗಿದ್ದರು. ಆದರೆ ಜ್ಞಾನದಾಹ ಅವರನ್ನು ಅಷ್ಟಕ್ಕೆ ಬಿಡಲಿಲ್ಲ. ಕನ್ನಡ ಎಂ.ಎ. ಪದವಿಗೆ ಸೇರಿದರು. ಕುವೆಂಪುರವರ ಶಿಷ್ಯರಾಗಿ ಹೊರಹೊಮ್ಮಿದ ಗೌಡರು ಎಂ.ಎ. ಪದವಿ ಪಡೆದು ಮಹಾರಾಜ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಆಯ್ಕೆಯಾದರು. ಕುವೆಂಪುರವರನ್ನು ತನ್ನ ಆರಾಧ್ಯದೈವವನ್ನಾಗಿಸಿಕೊಂಡರು. ಕನ್ನಡ–ಕನ್ನಡ ನಿಘಂಟಿನ ಸಮಿತಿಯ ಸದಸ್ಯರಾಗಿ, ಉಪಾಧ್ಯಕ್ಷರಾಗಿ ನಿಘಂಟು ಹೊರಬರಲು ಕಾರಣಕರ್ತರಾದರು. ಕುವೆಂಪುರವರ ಕನಸಿನ ಕೂಸಾದ ಮಾನಸಗಂಗೋತ್ರಿಯಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಅಸ್ತಿತ್ವಕ್ಕೆ ಕಾರಣಕರ್ತರಾದರು. ಹಾಗೂ ಸಂಸ್ಥೆಯ ನಿರ್ದೇಶಕರಾಗಿ ದುಡಿದರು. ಹಿರಿಯ ರಾಜಕಾರಣಿಯಾಗಿದ್ದ ಶ್ರೀ ಕೆ.ವಿ. ಶಂಕರಗೌಡರ ಮನ ಒಲಿಸಿ ಕನ್ನಡ ವಿಶ್ವಕೋಶದ ಯೋಜನೆಯನ್ನು ಮೈಸೂರು ವಿ.ವಿ.ಗೆ ದಕ್ಕಿಸಿಕೊಂಡು ಕನ್ನಡಿಗರಿಗೆ ಕನ್ನಡದಲ್ಲಿ ವಿಶ್ವಕೋಶವನ್ನು ಓದುವ ಅವಕಾಶ ಮಾಡಿಕೊಟ್ಟರು. ಗಂಗೋತ್ರಿಯಲ್ಲಿ ಜಾನಪದ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದ್ದು, ಪ್ರಾಚ್ಯವಿದ್ಯಾಸಂಶೋಧನಾಲಯದ ಕನ್ನಡ ಸಂಪಾದನ ವಿಭಾಗವನ್ನು ಪ್ರತ್ಯೇಕಿಸಿ ಅದನ್ನು ಕನ್ನಡ ಅಧ್ಯಯನ ಸಂಸ್ಥೆಗೆ ತೆಗೆದುಕೊಂಡಿದ್ದು ಇವರ ಸಾಧನೆಯ ಮಹತ್ವದ ಹೆಜ್ಜೆಗುರುತುಗಳಾಗಿವೆ.

ಒಬ್ಬ ಪ್ರಾಧ್ಯಾಪಕರಾಗಿ ಮಾಡಬಹುದಾದ ಕೆಲಸಕಾರ್ಯಗಳಿಗಿಂತಲೂ ಹೆಚ್ಚು ಸಾಧಿಸಿ ತಾವು ಸಮರ್ಥರು ಎಂದು ಸಾಬೀತುಪಡಿಸಿದರು. ಸರ್ಕಾರ 1969ರಲ್ಲಿ

ಶ್ರೀಯುತರನ್ನು ಮೈಸೂರು ವಿ.ವಿಯ ಉಪಕುಲಪತಿಗಳನ್ನಾಗಿ ನೇಮಕ ಮಾಡಿತು. ಎರಡು ಅವಧಿಗೆ ಎಂದರೆ ಆರು ವರ್ಷಗಳ ಕಾಲ ಉಪಕುಲಪತಿಗಳಾಗಿದ್ದರು. ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಗೆ ಒತ್ತು ಕೊಟ್ಟರು. (ಅದು ಈಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವಾಗಿದೆ). ಇವರ ಕಾಲದಲ್ಲಿ ತಲೆ ಎತ್ತಿದ್ದು ಶಿವಮೊಗ್ಗದ ಬಿ.ಆರ್. ಪ್ರಾಜೆಕ್ಟ್ (ಈಗ ಕುವೆಂಪು ವಿಶ್ವವಿದ್ಯಾಲಯವಾಗಿದೆ). ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಅನ್ನು ಮೈಸೂರಿನಲ್ಲಿ ಸ್ಥಾಪಿಸಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಕುವೆಂಪುರವರ ಬಗ್ಗೆ ಅಧ್ಯಯನಕ್ಕೆ ನೆರವಾಗುವಂತೆ ಮಾಡಿದರು. ಕಾಲಾನಂತರ ದೇಜಗೌ ಟ್ರಸ್ಟ್ ಅನ್ನೂ ಕೂಡ ಸ್ಥಾಪಿಸಿ ಸಂಶೋಧನೆಗೆ ನೆರವಾದರು.

ಸಾಹಿತ್ಯ ಸೇವೆ – ಗದ್ಯಲೇಖನ, ಆತ್ಮಕಥೆ, ಭಾಷಾಂತರ, ಗ್ರಂಥ ಸಂಪಾದನೆ, ಪ್ರವಾಸ ಸಾಹಿತ್ಯ, ವೈಚಾರಿಕದುವರೆವಿಗೂ 135ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.

ಪ್ರಶಸ್ತಿಗಳು : ದೇಜಗೌರವರ ಸಾಹಿತ್ಯ ಸೇವೆಯನ್ನು ಗುರ್ತಿಸಿ ಕನ್ನಡ ಸಾಹಿತ್ಯ ಪರಿಷತ್ತು 1970ರಲ್ಲಿ ಬೆಂಗಳೂರಿನಲ್ಲಿ ನಡೆದ 47ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ತಮ್ಮ ಗೌರವವನ್ನು ಸೂಚಿಸಿತು. 1975ರಲ್ಲಿ ಕರ್ನಾಟಕ ವಿ.ವಿ. ಗೌರವ ಡಾಕ್ಟರೇಟ್ ನೀಡಿತು. 1984ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ, 1985ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, 1998ರಲ್ಲಿ ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿಯು ಶ್ರೀಯುತರಿಗೆ ದೊರಕಿತು. ಹಂಪಿ ಕನ್ನಡ ವಿ.ವಿ. ಶ್ರೀಯುತರಿಗೆ ಡಿ.ಲಿಟ್. ಪ್ರಶಸ್ತಿ ನೀಡಿ ಗೌರವಿಸಿತು. 2002ರಲ್ಲಿ ಭಾರತ ಸರ್ಕಾರವು ಗೌಡರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು. ಇವರ ಸುಪುತ್ರರಾದ ಪ್ರೊ. ಜೆ. ಶಶಿಧರ ಪ್ರಸಾದ್‌ರವರು 2003ರಿಂದ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿದರು.

ದೇಜಗೌರವರು ರಚಿಸಿರುವ ಕೃತಿಗಳು : ಆತ್ಮಕಥೆ – ಹೋರಾಟದ ಬದುಕು, ಭಾಗ–1, ಭಾಗ–2, ನೆನಪಿನ ಬುತ್ತಿ, ಕುಲಪತಿಯ ದಿನಚರಿ.

ಪತ್ರ ಸಾಹಿತ್ಯ – (ಕನ್ನಡ ಸಾಹಿತ್ಯಕ್ಕೆ ಹೊಸ ಕೊಡುಗೆ) ಕುಲಪತಿಯ ಪತ್ರಗಳು.

ಭಾಷಣ ಸಾಹಿತ್ಯ – ಕುಲಪತಿಯ ಭಾಷಣಗಳು – ಒಟ್ಟು ಆರು ಭಾಗಗಳಲ್ಲಿ – ತುಡಿತ, ನಿರಂತರ.

ಪ್ರವಾಸ ಸಾಹಿತ್ಯ – ಆಫ್ರಿಕಾ ಯಾತ್ರೆ, ಪ್ರವಾಸಿಯ ದಿನಚರಿ, ಯೇಸು ವಿಭೀಷಣರ ನಾಡಿನಲ್ಲಿ, ವಿದೇಶದಲ್ಲಿ ನಾಲ್ಕು ವಾರ, ವಿಸ್ಮಯಗಳ ನಾಡಿನಲ್ಲಿ (ಅಮೇರಿಕಾರ ಪ್ರವಾಸ, ಕಾದಂಬರಿ ಶೈಲಿಯಲ್ಲಿ), ಜಗತ್ತಿನ ನಡುನೆತ್ತಿಯ ಮೇಲೆ, ನಿಚ್ಚ ಹಸುರಿನ ನಾಡಿನಲ್ಲಿ, ಹಳದಿ ಕಲ್ಲಿನ ಉದ್ಯಾನ (ಮಕ್ಕಳಿಗಾಗಿ)

ಜಾನಪದ ಸಾಹಿತ್ಯ – ಜನಪದ ಗೀತಾಂಜಲಿ, ಜಾನಪದ ಅಧ್ಯಯನ, ಜಾನಪದ ವಾಹಿನಿ, ಜಾನಪದ ಸೌಂದರ್ಯ

ಜೀವನ ಚರಿತ್ರೆಗಳು : ಅಮೇರಿಕಾ ಗಾಂಧಿ, ಕರ್ನಾಟಕದ ರೂವಾರಿ, ಕ್ರಾಂತಿಕಾರಿ ಡಾ. ಅಂಬೇಡ್ಕರ್, ತೀನಂಶ್ರೀ, ದಾರೀದೀಪಗಳು, ನಿತ್ಯ ಸಚಿವ, ಬಸವ ಬೆಳಕು, ಬೂಕರ್ ಟಿ. ವಾಷಿಂಗಟನ್, ಮೋತಿಲಾಲ್ ನೆಹರು, ಯಾತ್ರಿಕರು, ರಾಷ್ಟ್ರಕವಿ ಕುವೆಂಪು, ಸಮಾಜವಾದಿ ಲೋಹಿಯಾ, ಲೋಕದ ಬೆಳಕು, ಲೋಕನಾಯಕ, ವ್ಯಾಕರಣದ ಮಲ್ಲಪ್ಪನವರು, ವಿಚಾರವಾದಿ ಪೆರಿಯಾರ್, ಸಾಹಿತಿಗಳ ಸಂಗದಲ್ಲಿ, ನಾರಾಯಣ ಗುರು, ದಕ್ಷಿಣೇಶ್ವರಕ್ಕೆ ನಮನ, ಶತಾಯುಷಿ, ಎ.ಎನ್. ಮೂರ್ತಿರಾವ್, ನಾನು ಮೆಚ್ಚಿದವರು, ಶ್ರೀ ಬಸವೇಶ್ವರರು, ಸಿದ್ಧಗಂಗೆಯ ಶಿವನಿಧಿ, ಕಲಾಕಂಠೀರವ ಕರಿಬಸವಯ್ಯ, ದೇವಮಾನ್ಯರು, ಲಾಲ್‌ಬಾಗ್ ಉದ್ಯಾನದ ಮಹಾಶಿಲ್ಪಿ ಡಾ. ಮರಿಗೌಡರು, ನಾಡು ಕಟ್ಟಿದವರು, ಮಹಾತ್ಮ ಜ್ಯೋತಿರಾವ್, ನಿತ್ಯ ಸಾಹಿತ್ಯೋತ್ಸವ.

ಮಕ್ಕಳ ಸಾಹಿತ್ಯ – ಆಲ್‌ಬರ್ಟ್ ಐನ್‌ಸ್ಟೈನ್, ಋಷಿ ಕವಿ ರವೀಂದ್ರರು, ಕನ್ನಡ ನಾಡಿನ ಕಲಿ, ಗೋಪಾಲಕೃಷ್ಣ ಗೋಖಲೆ, ನಮ್ಮ ನೆಹರು, ಪಂಡಿತ ಮೋತಿಲಾಲ್ ನೆಹರು, ಮಕ್ಕಳ ಏಕಲವ್ಯ, ಮಕ್ಕಳ ಶೂದ್ರ ತಪಸ್ವಿ, ಮೇಡಂ ಕ್ಯೂರಿ, ವಿವೇಕಾನಂದರು, ಮಹರ್ಷಿ ಟಾಲ್‌ಸ್ಟಾಯ್.

ರಾಷ್ಟ್ರಕವಿ ಕುವೆಂಪು ಅವರನ್ನು ಕುರಿತು ಬರೆದಿರುವ ಕೃತಿಗಳು – ಕುವೆಂಪು ಅವರ ಶಿಕ್ಷಣ ತತ್ವ ವಿಚಾರಗಳು, ಕುವೆಂಪು ದರ್ಶನ ಮತ್ತು ಸಂದೇಶ, ಕುವೆಂಪು ವಿಶ್ವಮಾನವ ಸಂದೇಶ, ಕುವೆಂಪು ಶೈಲಿ, ಕುವೆಂಪು ಸಾಹಿತ್ಯ ಕೆಲವು ಅಧ್ಯಯನಗಳು (ನಾಲ್ಕು ಭಾಗಗಳಲ್ಲಿ), ಕುವೆಂಪು ಸಾಹಿತ್ಯದಲ್ಲಿ ಮಕ್ಕಳು, ಕುವೆಂಪು ಸಾಹಿತ್ಯದಲ್ಲಿ ರೈತ, ರಾಷ್ಟ್ರಕವಿ ಕುವೆಂಪು, ರಾಷ್ಟ್ರಕವಿ ಭಾಷಣಗಳು, ರಾಷ್ಟ್ರಕವಿ ಸಂದರ್ಶನ, ವಿಚಾರ ಕ್ರಾಂತಿಗೆ ಕುವೆಂಪು ಕರೆ, ಶ್ರೀ ಕುವೆಂಪು ಸೂಕ್ತಿಮಾಲೆ, ಶ್ರೀ ರಾಮಾಯಣದರ್ಶನಂ ವಚನ ಚಂದ್ರಿಕೆ, ಕವಿ ವಿಭೂತಿ ಕುವೆಂಪು.

ಸಂಶೋಧನೆ – ವಿಮರ್ಶೆ – ಇಣುಕು ನೋಟ, ಗದ್ಯಶೈಲಿ, ಗದುಗಿನ ಭಾರತ – ಒಂದು ಸಾಂಸ್ಕೃತಿಕ ಅಧ್ಯಯನ, ನೂರೆಂಟು ಪುಸ್ತಕಗಳು, ಬಸವೇಶ್ವರ ಅಂಬೇಡ್ಕರ್, ಬಸವೇಶ್ವರ, ಕಾರ್ಲ್‌ಮಾರ್ಕ್ಸ್, ಮುನ್ನುಡಿಗಳು, ಮುನ್ನುಡಿ ತೋರಣ, ವಚನಗಳಲ್ಲಿ ವೈಚಾರಿಕತೆ, ವಚನಗಳಲ್ಲಿ ಸಮಾಜವಾದ, ವಿಶ್ವಸಂಸ್ಕೃತಿಗೆ ವೀರಶೈವ ಸಂಸ್ಕೃತಿಯ ಕಾಣಿಕೆ, ಶರಣ ಪಥ, ಬಸವ ಸಂಹಿತೆ, ಶ್ರೀ ಕುವೆಂಪು ಅವರ ದಾಂಪತ್ಯ ದರ್ಶನದ ನಾಲ್ಕು ಮಹಾ ಕವನಗಳು, ಷಡಕ್ಷರ ದೇವ, ಸರ್ವಜ್ಞ, ಸ್ಥಳನಾಮ ವ್ಯಾಸಂಗ, ಸಾಹಿತ್ಯಮಾರ್ಗ, ಸಾಹಿತ್ಯ ಯಾತ್ರೆ, ಸಾಹಿತಿಯ ಸಾಮಾಜಿಕ

ಬದ್ಧತೆ, ಮುನ್ನುಡಿ ಕನ್ನಡಿ, ಮುನ್ನುಡಿ ಮಿನುಗು, ಜೀವನ ಚರಿತ್ರೆ ಮತ್ತು ಇತರ ಪ್ರಬಂಧಗಳು, ಮುಗಿದ ಮುನ್ನುಡಿ ಗಂಟು, ದಾರಿಬುತ್ತಿ, ಮಹಾಕಾವ್ಯ ಪರಂಪರೆ ಮತ್ತು ಇತರ ಲೇಖನಗಳು, ಕನಕ ದರ್ಶನ.

ಶೈಕ್ಷಣಿಕ ಸಾಹಿತ್ಯ – ಕೆಲವು ಶೈಕ್ಷಣಿಕ ವಿಚಾರಗಳು, ವಿದ್ಯಾಪೀಠಗಳು, ಮಂಡ್ಯ ಜಿಲ್ಲೆಯ ಶಿಕ್ಷಣ ಅಭಿವೃದ್ಧಿ ಸಮೀಕ್ಷೆ, ಪುಸ್ತಕ ಪ್ರಪಂಚ – ಪ್ರಧಾನ ಸಂಪಾದಕರು (ವಯಸ್ಕರ ಶಿಕ್ಷಣ).

ಪ್ರಬಂಧ ಹರಟೆ – ತೆನೆ, ಕೆನೆ, ಬೆರಕೆ ಸೊಪ್ಪು.

ಅಂಕಣ–ಸಂಪಾದಕೀಯ – ಅನುಭವ ಸಂಪದ, ಸಂಪಾದಕೀಯ ಸಂಕಲನ.

ವಚನಗಳು ಚುಟುಕುಗಳು – ಗುರುದೇವರಡಿಗೆ, ದೇಜಗೌ ಚುಟುಕಗಳು.

ಕನ್ನಡ ನಾಡು ನುಡಿಗಳಿಗೆ ಸಂಬಂಧಿಸಿದ ಕೃತಿಗಳು – ಕನ್ನಡಕ್ಕಾಗಿ ಕೈಯೆತ್ತು, ಕನ್ನಡಕ್ಕೆ ನಮನ, ಕನ್ನಡಿಗರೇ ಎಚ್ಚರಗೊಳ್ಳಿ.

ಐತಿಹಾಸಿಕ ಕಾದಂಬರಿಗಳು – ಕಡುಗಲಿ ಕುಮಾರ ರಾಮ, ಬೆಂಗಳೂರು ಕೆಂಪೇಗೌಡ.

ಅನುವಾದ – ಅಕ್ಬರ್, ಗುರುನಾನಕ್, ಟಾಲ್‌ಸ್ಟಾಯ್ ಅವರ ಎರಡು ನಾಟಕಗಳು, ನೆನಪು ಕಹಿಯಲ್ಲ, ಪುನರುತ್ಥಾನ, ಭಾರತದ ಜಾನಪದ ಕಥೆಗಳು, ವಿಷವೃಕ್ಷ ನಾಟಕ, ಯುದ್ಧ ಮತ್ತು ಶಾಂತಿ, ಹಮ್ಮು–ಬಿಮ್ಮು, ಅನ್ನಾ ಕರೆನಿನಾ. 'ಪ್ರವಾಸಿ ಕಂಡ ಇಂಡಿಯಾ' (ಸಂಪುಟಗಳು).

ಇತರ ಲೇಖನಗಳು – ಆಧುನಿಕ ಭಾರತೀಯ ರಾಜಕೀಯ ವಿಚಾರಧಾರೆ.

(ಸುಮಾರು ಐದು ಸಾವಿರ ಪುಟಗಳಷ್ಟು ಅನುವಾದಿಸಿದ್ದಾರೆ, ಟಾಲ್‌ಸ್ಟಾಯ್ ಅವರ ಸರಿ ಸುಮಾರು ಕೃತಿಗಳ ಅನುವಾದ ಮಾಡಿದ್ದಾರೆ).

ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿ



ಈ ನಾಡು ಕಂಡ ಬಹುಶ್ರುತ ಪ್ರತಿಭೆ. ಬಹು ಮುಖ ವ್ಯಕ್ತಿತ್ವದ ಖ್ಯಾತ ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ. ಖ್ಯಾತ ಬರಹಗಾರರಾಗಿ, ಚಿಂತಕರಾಗಿ, ದನಿ ಇಲ್ಲದ ರೈತರ ದನಿಯಾಗಿ, ರೈತರ ಸಂಘಟನೆಗೆ ಚಾಲನೆ ನೀಡಿದರು. ತಮ್ಮ ವಿಶಿಷ್ಟ ಕಥೆ, ಕಾದಂಬರಿ, ವೈಜ್ಞಾನಿಕ ಬರಹಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನಗಳಿಸಿದ್ದಾರೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಸಹ್ಯಾದ್ರಿ ಪರ್ವತಸಾಲಿನ ಹಸಿರನ್ನೇ ಹೊದ್ದು ಕೊಂಡಿರುವ ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯಲ್ಲಿ 1938ರಲ್ಲಿ ಕುವೆಂಪು ಮತ್ತು ಹೇಮಾವತಿಯ ಹಿರಿಯ ಮಗನಾಗಿ ಜನಿಸಿದರು. ಅವರ ಉನ್ನತ ವ್ಯಾಸಂಗ ಮೈಸೂರು ವಿಶ್ವವಿದ್ಯಾಲಯದಲ್ಲಿ ನಡೆಯಿತು. ಕನ್ನಡದಲ್ಲಿ ಬಿ.ಎ. ಆನರ್ಸ್ ಮತ್ತು ಅದೇ ವಿಷಯದಲ್ಲಿ ಎಂ.ಎ. ಪದವಿ ಪಡೆದ ನಂತರ ಅಪ್ಪನಂತೆ ಅಧ್ಯಾಪಕನಾಗಲು ಇಚ್ಛಿಸದೆ ಚಿಕ್ಕಮಗಳೂರಿನ ಪರಿಸರದಲ್ಲಿ ಕೃಷಿ ತೋಟದಲ್ಲಿ ಆಸಕ್ತಿ ತಳೆದು ಅಲ್ಲಿಯೇ ನೆಲೆಸಿದರು. ನೇರ ನಡೆ ನುಡಿಯ ತೇಜಸ್ವಿ ನಿಷ್ಠುರಮತಿಯೂ ಹೌದು. ನವ್ಯ ಸಾಹಿತ್ಯ ಉತ್ಕರ್ಷ ಸ್ಥಿತಿಯಲ್ಲಿದ್ದ ಕಾಲದಲ್ಲಿ ತೇಜಸ್ವಿಯವರು ಕೃಷಿ ಮತ್ತು ಸಾಹಿತ್ಯ ಎರಡಕ್ಕೂ ಸಮಾನಾಂತರವಾಗಿ ಪ್ರಾಮುಖ್ಯತೆ ನೀಡಿದರು.

ತೇಜಸ್ವಿಯವರು ಸಹ್ಯಾದ್ರಿಯ ಪರಿಸರದಿಂದ ಬಂದ ಕುವೆಂಪು ಅವರಂತೆ ಕನ್ನಡದಲ್ಲಿ ವಿಶಿಷ್ಟವಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯದಲ್ಲಿ ಕಾಣುವ ವಿಶಿಷ್ಟ ಗುಣವೆಂದರೆ ಪ್ರಕೃತಿಯ ಭವ್ಯ ದೃಶ್ಯ ಸೌಂದರ್ಯಗಳ ಮುಂದೆ ಮಗುವಿನ ಸಹಜ ಕುತೂಹಲ, ಮುಗ್ಧತೆಗಳು ಈ ಎಲ್ಲಾ ಸೂಕ್ಷ್ಮಾತಿ ಸೂಕ್ಷ್ಮತೆಗಳನ್ನು ತೇಜಸ್ವಿಯವರು ತಮ್ಮ ಕೃತಿಗಳಲ್ಲಿ ಹಿಡಿದಿಟ್ಟಿದ್ದಾರೆ. ತೇಜಸ್ವಿಯವರಿಗೆ ಮನೆಗಿಂತ, ಕಾಡು, ನದಿ, ಕೊಳ ಅಲ್ಲಿ ಈಜಾಡುವ ಮೀನುಗಳು, ಅವುಗಳ ಗಾಳ ಹಾಕಿ ಹಿಡಿಯುವ ತಂತ್ರಗಾರಿಕೆ, ಪ್ರಾಣಿಗಳ ಬೇಟೆ ಇವೇ ಮುಂತಾದ ಸಾಹಸಗಳು, ಹೆಚ್ಚು ಇಷ್ಟವಾಗಿ ಕಾಣುತ್ತಿದ್ದವು. ತೇಜಸ್ವಿಯವರು ಎಂ.ಎ. ಪದವಿ ನಂತರ ಚಿಕ್ಕಮಗಳೂರಿನ ಮೂಡಿಗೆರೆ ಸಮೀಪದಲ್ಲಿ ಚಿತ್ರಕೂಟ ಎಂಬ ಮನೆ ನಿರ್ಮಿಸಿ ವಾಸಿಸತೊಡಗಿದರು. 1966ರಲ್ಲಿ ಆರ್. ರಂಗಪ್ಪನವರ ಪುತ್ರಿ ರಾಜೇಶ್ವರಿಯವರನ್ನು ವರಿಸಿದರು. ತೇಜಸ್ವಿಯವರಿಗೆ ಬೆಟ್ಟಗುಡ್ಡ ಪರಿಸರ ತುಂಬ ಅಚ್ಚುಮೆಚ್ಚು. ಇವರಿಗೆ ಕೃಷಿ, ಛಾಯಾಗ್ರಹಣ, ಪಕ್ಷಿ ವೀಕ್ಷಣೆ, ಬೇಟೆ, ವಿಜ್ಞಾನದ ಅಧ್ಯಯನ ಇವೇ ಮುಂತಾದ ಆಸಕ್ತಿಗಳನ್ನು ಮೈಗೂಡಿಸಿಕೊಂಡಿದ್ದರು. ತೇಜಸ್ವಿಯವರಿಗೆ ತಾನು ಕುವೆಂಪುರವರ ಮಗ ಎಂಬ ಹಮ್ಮು ಬಿಮ್ಮು ಇರಲಿಲ್ಲ. ತೇಜಸ್ವಿಯವರೇ ಹೇಳಿಕೊಂಡಿರುವಂತೆ ಅವರ ಬರವಣಿಗೆಗಳ ಮೇಲೆ ಪ್ರಭಾವ ಬೀರಿರುವ ಅಂಶಗಳು ಲೋಹಿಯರವರ ತತ್ವ ಚಿಂತನೆ, ಕುವೆಂಪುರವರ ಕಲಾಸೃಷ್ಟಿ, ಕಾರಂತರ ಪ್ರಯೋಗಶೀಲಾತ್ಮಕ ಸಾಹಸ. ತೇಜಸ್ವಿಯವರು ನವೋದಯ, ನವ್ಯ, ನವ್ಯೋತ್ತರ, ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳಲ್ಲಿ ಕೃತಿಗಳನ್ನು ರಚಿಸತೊಡಗಿದರು. ಇವರಿಗೆ ಪರಿಸರ ಹಾಗೂ ಸಮಾಜದ ಬಗ್ಗೆ ಅಪಾರ ಕಾಳಜಿ ಹಾಗೂ ಇವರು ಪ್ರಗತಿ ಪರ ಚಿಂತನಾಶಾಲಿಗಳಾಗಿದ್ದರು. ಜೀವನದ ಅನುಭವಗಳನ್ನು ಸಾಹಿತ್ಯದ ಮೂಲಕ ಹಂಚಿಕೊಂಡಿದ್ದಾರೆ. 1960ರ ದಶಕದಲ್ಲಿ ಸಾಹಿತ್ಯ ಕೃಷಿ ಮಾಡಲು ತೊಡಗಿದರು. ಅಲ್ಲಿಂದ ಸತತವಾಗಿ ಮೂರರಿಂದ ನಾಲ್ಕು ದಶಕಗಳ ಕಾಲ ಕನ್ನಡ ಸಾರಸ್ವತ ಲೋಕಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆ ಕೊಟ್ಟಿದ್ದಾರೆ.

ತೇಜಸ್ವಿಯವರ ಬರಹ – "ಲಿಂಗ ಬಂದ"ದ ವಿಶೇಷ ಎಂಬ ಕಥೆಯನ್ನು ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆಗೆ ಕಳುಹಿಸುವುದರ ಮೂಲಕ ಕನ್ನಡ ಸಾರಸ್ವತ ಲೋಕವನ್ನು ಪ್ರವೇಶಿಸಿದರು. ಈ ಕಥೆಗೆ ಇವರಿಗೆ ಪ್ರಥಮ ಬಹುಮಾನ ಬಂದಿತು. ಇವರು ಕಥೆ, ಕಾದಂಬರಿ, ಕಾವ್ಯ, ವೈಚಾರಿಕ ಬರಹ, ವೈಜ್ಞಾನಿಕ ಬರಹ ಮತ್ತು ಅನುವಾದಿತ ಕೃತಿಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ತೇಜಸ್ವಿಯವರ ಆಳವಾದ ಅಧ್ಯಯನ, ಜ್ಞಾನ ಶಾಖೆಗಳ ಪರಿಚಯ, ವಿಭಿನ್ನ ವಲಯಗಳಲ್ಲಿನ ತಿರುಗಾಟ ಇವುಗಳಿಂದಾಗಿ ಅವರ ಬರಹಗಳಲ್ಲಿ ಹೊಸತನವನ್ನು ಕಾಣಬಹುದು. ಕನ್ನಡ ಸಾಹಿತ್ಯದ ವಿಭಿನ್ನ ಕಾಲಘಟ್ಟಗಳಲ್ಲಿ ತೇಜಸ್ವಿ ಬರೆಯುತ್ತಾ ಬಂದರೂ ತಮ್ಮದೇ ಆದ ಹಾದಿಯನ್ನು ನಿರ್ಮಿಸಿಕೊಂಡಿರುವುದು ಅವರಿಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅನನ್ಯ ಸ್ಥಾನ ದೊರಕಿಸಿಕೊಟ್ಟಿದೆ. ಪ್ರಕೃತಿ, ಪರಿಸರಗಳ ನಿಗೂಢತೆಯ ಬಗೆಗೆ ಸಂಶೋಧನೆ ಮಾಡಿರುವ, ಇವರು ಮಾನವಶಾಸ್ತ್ರ, ಇತಿಹಾಸ, ರಾಜಕೀಯ ಇನ್ನೂ ಮುಂತಾದ ರಂಗಗಳ ಬಗ್ಗೆ ಸಾಕಷ್ಟು ತಿಳಿವಳಿಕೆಯನ್ನು ಹೊಂದಿದ್ದರು.

ತೇಜಸ್ವಿ ರಚಿಸಿದ ಕೃತಿಗಳು – ಹುಲಿಯೂರಿನ ಸರಹದ್ದು (1962), ಸೋಮುವಿನ ಸ್ವಗತ ಲಹರಿ (1962), ಯಮಳ ಪ್ರಶ್ನೆ (ನಾಟಕ 1964), ವ್ಯಕ್ತಿ ವಿಶಿಷ್ಟ ಸಿದ್ಧಾಂತ (1964), ವೈಚಾರಿಕ ಬರಹ, ಸ್ವರೂಪ (1966), ನಿಗೂಢ ಮನುಷ್ಯರು (ಕಿರು ಕಾದಂಬರಿ), ಅಬಚೂರಿನ ಪೋಸ್ಟ್ ಆಫೀಸ್ (ಕಥೆ ಸಂಕಲನ –1973), ಕರ್ವಾಲೋ (ಕಾದಂಬರಿ–1980), ಚಿದಂಬರ ರಹಸ್ಯ (ಕಾದಂಬರಿ–1985), ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್ (ಪ್ರವಾಸ ಕಥನ –1999), ಪರಿಸರದ ಕಥೆ, ಕಿರುಗೂರಿನ ಗೈಯ್ಯಾಳಿಗಳು, ಕಿರಿಯರಿಗಾಗಿ ಪರಿಸರ (1991), ಸಹಜ ಕೃಷಿ, ಮಿಸ್ಸಿಂಗ್ ಲಿಂಕ್ (1992), ಏರೋಪ್ಲೇನ್ ಚಿಟ್ಟೆ ಮತ್ತು ಇತರೆ ಕಥೆಗಳು ಕಾಡಿನ ಕಥೆಗಳ ಭಾಗ 1, 2, ಫ್ಲೆಯಿಂಗ್ ಸಾಸರ್ಸ್ ಭಾಗ 1, 2, ವಿಸ್ಮಯ ಭಾಗ 1,2, ದಕ್ಷಿಣ ಭಾರತದ ಹಕ್ಕಿಗಳು (1993), ಕಾಡಿನ ಕಥೆಗಳು ಭಾಗ 3, 4, ಮಿಂಚುಳ್ಳಿ, ಕನ್ನಡನಾಡಿನ ಹಕ್ಕಿಗಳು ಭಾಗ 1, 2 (1994), ಜುಗಾರಿ ಕ್ರಾಸ್ (ಕಾದಂಬರಿ) (1994), ವಿಸ್ಮಯ ಭಾಗ ಮೂರು (1994), ರುದ್ರ ಪ್ರಯಾಗದ ಭಯಾನಕ ನರಭಕ್ಷಕ, ಅಣ್ಣನ ನೆನಪು (1995) (ನೆನಪುಗಳ ಸಂಗ್ರಹ), ಹೆಜ್ಜೆ ಮೂಡದ ಹಾದಿ (1996), ಹಕ್ಕಿ ಪುಕ್ಕ, ನಡೆಯುವ ಕಂಡ್ಡಿ! ಹಾರುವ ಎಲೆ!, ಮಿಲೇನಿಯಂ ಸರಣಿ 1 ರಿಂದ 16 (1997), ಹುಡುಕಾಟ, ಜೀವನ ಸಂಗ್ರಮ, ಪೆಸಿಫಿಕ್ ದ್ವೀಪಗಳು, ಚಂದ್ರನ ಚೂರು, ನೆರೆಹೊರೆಯ ಗೆಳೆಯರು. ಮಹಾಯುದ್ಧ 1, 2, ದೇಶವಿದೇಶ, ವಿಸ್ಮಯ ವಿಶ್ವ, ಮಹಾಫಲಾಯನ, ವಿಸ್ಮಯ–2, ಅಡ್ವೆಂಚರ್ (ಚಾರಣ).

ತೇಜಸ್ವಿಯವರಿಗೆ ಸಂದ ಪ್ರಶಸ್ತಿ – ಪುರಸ್ಕಾರಗಳು – ಕರ್ನಾಟಕ ಸರ್ಕಾರದ ಪರಿಸರ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸಂದೇಶ ಕನ್ನಡ ಸಾಹಿತ್ಯ ಪ್ರಶಸ್ತಿ, ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇವೇ ಮುಂತಾದವುಗಳು

ಹೀಗೆ ಪೂರ್ಣಚಂದ್ರ ತೇಜಸ್ವಿಯವರ ಕನ್ನಡ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೈಯಾಡಿಸಿದ್ದಾರೆ. ಕುವೆಂಪುರವರು ಹಳೆಯ ತಲೆಮಾರಿನ 20ನೇ ಶತಮಾನದ ಮೇರುಕವಿಯೆನಿಸಿದರೆ, ತೇಜಸ್ವಿಯವರು ಹೊಸ ತಲೆಮಾರಿನ ಜನರಿಗೆ ನಿಗೂಢ ಜಗತ್ತಿನ ವಿಸ್ಮಯುವನ್ನು ಪರಿಚಯಿಸಿದ 21ನೆಯು ಶತವಮಾನವನ್ನು ಶುಭಕಾಮನೆಯೊಂದಿಗೆ ಪ್ರಾರಂಭಿಸಿದ ಮೇರು ಸಾಹಿತಿ. ಇಂದಿಗೂ ತೇಜಸ್ವಿಯವರಿಗೆ ಕನ್ನಡ ಸಾಹಿತ್ಯದಲ್ಲಿ ಒಂದು ಗಟ್ಟಿಯಾದ ಸ್ಥಾನವಿದೆ. ತೇಜಸ್ವಿಯವರು ತಮ್ಮ 69ನೆಯ ವಯಸ್ಸಿನಲ್ಲಿ ದಿನಾಂಕ 5.4.2007ರಲ್ಲಿ ಅಸ್ತಂಗತರಾದರು.

ಕಲೆ ಮತ್ತು ಸಂಸ್ಕೃತಿಗೆ ಸಮುದಾಯದ ಕೊಡುಗೆ

ಕಲೆ ಮತ್ತು ಸಂಸ್ಕೃತಿಗೆ ಒಕ್ಕಲಿಗ ಸಮುದಾಯವು ಬಹಳ ಕಾಲದಿಂದಲೂ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದೆ. ನಾಟಕ, ನೃತ್ಯ, ಬಯಲಾಟ, ಕೋಲಾಟ, ದೊಡ್ಡಾಟ, ಯಕ್ಷಗಾನ, ಸೋಮನಕುಣಿತ, ಡೊಳ್ಳುಕುಣಿತ ಇಷ್ಟೇ ಅಲ್ಲದೆ ಜನಪದ ಗೀತೆ, ಜನಪದ ನೃತ್ಯ, ಸೋಬಾನೆ ಪದಗಳು ಇವೇ ಮುಂತಾದ ಕಲಾಪ್ರಕಾರಗಳಲ್ಲಿ ಒಕ್ಕಲಿಗರು ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಹಳ್ಳಿಯ ಹೆಣ್ಣು ಮಗಳೊಬ್ಬಳು ಮುಂಜಾನೆ ಎದ್ದು ರಾಗಿ ಬೀಸುವಾಗ ಹೇಳುವ ಪದಗಳು, ತಾಯಿ ತನ್ನ ಮಗುವನ್ನು ಮಲಗಿಸಬೇಕಾದಾಗ ಹೇಳುವ ಜೋಗುಳ, ಮದುವೆ, ಮುಂಜಿ, ಸಮಾರಂಭಗಳಲ್ಲಿ ಹೇಳುವ ಸೋಬಾನೆ ಪದಗಳು ಇವೇ ಮುಂತಾದವು ಬಾಯಿಂದ ಬಾಯಿಗೆ ಬಂದಿತು. ಆಧುನಿಕತೆಯ ಬಿರುಗಾಳಿಗೆ ಸಿಕ್ಕಿ ಇವೆಲ್ಲವೂ ನಶಿಸುತ್ತಾ ಬಂದಿವೆ. ಇಂದು ಯಕ್ಷಗಾನ ಕಲೆ ಎಂದರೆ ಅದು ದಕ್ಷಿಣ ಕರ್ನಾಟಕದ ಕಲೆ ಎಂದು ಹೇಳುತ್ತೇವೆ. ಆದರೆ ಅದು ಬಯಲು ಅಥವಾ ಹಳೇ ಮೈಸೂರು ಪ್ರಾಂತ್ಯದಲ್ಲಿ ಮೂಡಲಪಾಯ ಯಕ್ಷಗಾನವೆಂದೇ ಪ್ರಖ್ಯಾತವಾಗಿತ್ತು. ಕೆಂಪಣ್ಣಗೌಡ ಯಕ್ಷಗಾನ ಕಾವ್ಯದ ಬಗ್ಗೆ ಸಾಕಷ್ಟು ಪ್ರಯೋಗವನ್ನು ಮಾಡಿದ್ದಾನೆ. "ಕರಿಬಂಟನ ಕಾಳಗ" ಎಂಬ ಯಕ್ಷಗಾನವನ್ನು ಬರೆದಿದ್ದಾನೆ. ಇದು ಯಕ್ಷಗಾನ ಹಸ್ತ ಪ್ರತಿಗಳಲ್ಲೇ ಅತ್ಯಂತ ಹಳೆಯದು ಎಂದೇಳಬಹುದು. 1913ರ ಸಮಯದಲ್ಲಿ ಶ್ರೀ ಮಠದ ಅವದೂತ ಪೀಠದ ಮೊದಲ ಗುರುಗಳಾದ ಶ್ರೀ ನಂಜಾವಧೂತರನ್ನು ಕುರಿತು ಕವಿ ನಾಗಶರ್ಮ ಎಂಬುವವನು ಯಕ್ಷಗಾನ ನಾಟಕ ರಚಿಸಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಸೋಬಾನೆ ಚಿಕ್ಕಮ್ಮ, ಪಿರಿಯಾಪಟ್ಟಣದ ನಿಂಗಮ್ಮ ಇನ್ನೂ ಮುಂತಾದವರನ್ನು ನಾವು ಮರೆತ್ತಿದ್ದೇವೆ.

ರಾಜಮಹಾರಾಜರಿಗೆ, ಆಸ್ಥಾನ ಕವಿಗಳಿಗೆ, ಮಂತ್ರಿಗಳಿಗೆ ಮಾತ್ರ ಸೀಮಿತವಾಗಿದ್ದ ಸಂಗೀತವನ್ನು ಶ್ರೀ ಸಾಮಾನ್ಯರೂ ಕೇಳಲು ಅನುವು ಮಾಡಿಕೊಟ್ಟ ಭೈರವಿ ಕೆಂಪೇಗೌಡ, ಸರಳತೆ ಸಜ್ಜನಿಕೆಗೆ ಮತ್ತೊಂದು ಹೆಸರು. ಒಮ್ಮೆ ತಮಿಳುನಾಡು ಇಡೀ ದಕ್ಷಿಣ ಭಾರತದ ಸಂಗೀತ ಮತ್ತು ನೃತ್ಯದ ಕೇಂದ್ರವಾಗಿತ್ತು. ಅಂತಹ ಅಖಾಡಾದಲ್ಲಿ ಮೆರೆದ ಮಹಾನ್ ಸಂಗೀತಗಾರರೆಂದರೆ ಪೀಟೀಲು ಚೌಡಯ್ಯ. ಸಂಗೀತ ವಿದುಷಿಯಾದ ಶ್ರೀಮತಿ ರಾಜಮ್ಮ, ಸಿ.ಆರ್. ಗೌಡ, ಟಿ. ನಾಗಮ್ಮ (ಪೀಟೀಲು ಚೌಡಯ್ಯನವರ ತಂಗಿ), ಇಂದಿಗೆ ಮೂವತ್ತು ವರ್ಷಗಳ ಹಿಂದೆ ಬೆಂಗಳೂರು ಆಕಾಶವಾಣಿಯ ಸಂಗೀತ ವಿದುಷಿಯಾಗಿದ್ದ ಶಾಂತ ಲಿಂಗೇಗೌಡ, ಗಮಕಿಗಳಾದ ತಲಕಾಡಿನ ಮಾಯಿಗೌಡ, ಹನುಮನಹಳ್ಳಿ ಸಿದ್ದೇಗೌಡ, ಮಿರ್ಲೆ ರಾಮೇಗೌಡ, ಮಾಯಸಂದ್ರದ ಮುನೀಶ್ವರಯ್ಯ, ಅರಕೆರೆ ನಾರಾಯಣಗೌಡ (ರಾಮಾಯಣ ದರ್ಶನಂ ಕಾವ್ಯವನ್ನು ಹಾಡುತ್ತಿದ್ದವರು) ಇವರೇ ಮುಂತಾದವರು ಕಲಾಪ್ರಕಾರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಚಲನಚಿತ್ರಗಳು, ಚಿತ್ರಗೀತೆಗಳು, ಚಲನಚಿತ್ರ ಸಂಭಾಷಣೆ, ಚಲನಚಿತ್ರ ಸಾಹಿತ್ಯ, ಇವೇ ಮುಂತಾದವು ಪ್ರಸ್ತುತ ಚಲಾವಣೆಯಲ್ಲಿವೆ. ಹಾಗೆಂದ ಮಾತ್ರಕ್ಕೆ ಒಕ್ಕಲಿಗ ಸಮುದಾಯವು ಇದಕ್ಕೆ ಒಗ್ಗಿಕೊಂಡಿಲ್ಲವೆಂತಲ್ಲ. ಚಲನಚಿತ್ರಗಳಲ್ಲೂ ಒಂದು ಕೈ ಮೇಲು. ಶ್ರೀಮತಿ ಸರೋಜಾದೇವಿ, ಮುಂಬೈನ ಬಾಲಿವುಡ್‌ನಲ್ಲಿ ಬಹಳ ವರ್ಷಗಳ ಹಿಂದೆಯೇ ಸ್ಥಾನ ಗಿಟ್ಟಿಸಿದ ಫೈಟರ್ ಶೆಟ್ಟಿ, ಕನ್ನಡ ಚಿತ್ರರಂಗದ ಮೇರು ನಟ ಅಂಬರೀಶ್, ಐಶ್ವರ್ಯ ರೈ ಬಚ್ಚನ್, ಕಾಲಾನಂತರ ಸುನಿಲ್ ಶೆಟ್ಟಿ, ಕೇವಲ ಬಾಲಿವುಡ್‌ನಲ್ಲಿ ಮಾತ್ರವಲ್ಲ ಇಂಗ್ಲೆಂಡಿನ ಚಾನಲ್ ಫೋರ್ ನಡೆಸಿದ ಬಿಗ್ ಬಿ ಪ್ರಶಸ್ತಿ ವಿಜೇತಳಾಗಿ ವಿಶ್ವದಲ್ಲೇ ಜನಪ್ರಿಯಳಾದ ಬಂಟರ ಮನೆ ಮಗಳು ಶಿಲ್ಪಾಶೆಟ್ಟಿ, ನಮಿತಾಶೆಟ್ಟಿ, ಸುಮನ್ ರಂಗನಾಥ್, ಮಧುಗಿರಿಯ ಸಿದ್ದೇಗೌಡ (ಬಿಂದು ಬಿ.ಎ. ಎಂಬ ಹಳೆಯ ಕನ್ನಡ ಚಿತ್ರದ ನಾಯಕನಟ), ಇವರ ಮಗ ರಾಜಾಶಂಕರ್, ಶಿರಾದ ಕೆ.ಎಲ್. ಮಹಾದೇವಪ್ಪ, ಮಧುಗಿರಿಯ ವಜ್ರಮುನಿ, ಶಕ್ತಿ ಪ್ರಸಾದ್ (ಖಳನಾಯಕನಾಗಿ ಸುಪ್ರಸಿದ್ಧಿ ಪಡೆದಿದ್ದರು). ಶಕ್ತಿಪ್ರಸಾದ್‌ರವರ ಮಗ ಅರ್ಜುನ್ ಸರ್ಜಾ (ತಮಿಳು ಚಿತ್ರರಂಗದ ಮೇರು ನಟ), ಕಿಶೋರ್ ಚಂದ್ರ, ಪ್ರಕಾಶ್ ರೈ, ಜಗ್ಗೇಶ್, ಜೈ ಜಗದೀಶ್, ಬಿ.ಎಂ. ಕೃಷ್ಣೇಗೌಡ, ಅಭಿನಯ, ಯಶ್ (ನವೀನ್‌ಗೌಡ), ರಚಿತಾರಾಮ್, ದೇವರಾಜ್ ಮತ್ತು ಇವರ ಮಗ ಸಿಕ್ಸರ್ ಖ್ಯಾತಿಯ ಪ್ರಜ್ವಲ್, ನವೀನ್ ಚಂದರ್, ಸುಪ್ರಸಿದ್ಧ ತಾರೆ ರಮ್ಯ ಇನ್ನೂ ಮುಂತಾದವರು ಚಿತ್ರರಂಗದಲ್ಲಿ ಮಿಂಚುತ್ತಿದ್ದಾರೆ.

ತೆರೆಯ ಮರೆಯಲ್ಲಿ ಕೆಲಸ ಮಾಡುವ ನಿರ್ದೇಶಕರು ಬಹಳ ಮುಖ್ಯ. ಅಂತಹವರಲ್ಲಿ ಶ್ರೀಯುತರುಗಳಾದ ಕೆ.ವಿ. ಜಯರಾಂ, ನಾಗತಿಹಳ್ಳಿ ಚಂದ್ರಶೇಖರ್,

ನಂಜುಂಡೇಗೌಡ, ಟಿ.ಎಸ್. ನಾಗಾಭರಣ, ರಾಜ್ ಕಿಶೋರ್, ಕೂಡ್ಲು ರಾಮಕೃಷ್ಣ, ಜೋಗಿ ಚಿತ್ರ ನಿರ್ದೇಶಕ ಪ್ರೇಮ್, ಜಿ.ಕೆ. ಮುದ್ದುರಾಜ್, ಶಿವಕುಮಾರ್ ಗೌಡ, ಕೆ. ಸುರೇಶ್ ರೆಡ್ಡಿ , ಚಂದ್ರಹಾಸ ಆಳ್ವ ಇನ್ನೂ ಮುಂತಾದವರು. ಗೀತ ರಚನೆ ಮತ್ತು ಸಂಗೀತ ನಿರ್ದೇಶನದಲ್ಲಿ ದೊಡ್ಡರಂಗೇಗೌಡ, ಗುರುಕಿರಣ್, ಅದೇ ರೀತಿ ರಂಗಕಲಾವಿದರಲ್ಲಿ ವೈ.ಕೆ. ಮುದ್ದುಕೃಷ್ಣ, ಶ್ರೀನಿವಾಸ, ಜಿ. ಕಪ್ಪಣ್ಣ, ಎಂ.ಎಸ್. ಸುರೇಶ್, ಲಕ್ಷ್ಮಣ್, ದೇವನಾಗೇಶ್, ಶ್ರೀ ಕಂಠಯ್ಯ, ಎ.ಎನ್. ರಮೇಶ್ ಇನ್ನೂ ಮುಂತಾದವರು ಚಿತ್ರರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಹಾಸ್ಯೋತ್ಸವ ನಾಡಿನಾದ್ಯಂತ ಜನಪ್ರಿಯವಾಗುತ್ತಿದೆ. ಅಬಾಲವೃದ್ಧರಾಗಿ ಇಂತಹ ಹಾಸ್ಯೋತ್ಸವಗಳ ಅಭಿಮಾನಿಗಳಾಗುತ್ತಿದ್ದಾರೆ. ಮೈಸೂರಿನ ಪ್ರೊ. ಕೃಷ್ಣೇಗೌಡರವರು ಹಾಸ್ಯೋತ್ಸವಗಳ ಮೂಲಕ ಹಾಸ್ಯ ಚಕ್ರವರ್ತಿ ಎನಿಸಿಕೊಂಡಿದ್ದಾರೆ. ಕನ್ನಡ ನಾಡಿನ ಡಿ.ವಿ. ಗುಂಡಪ್ಪ ಎಂದೇ ಖ್ಯಾತನಾಮರಾದ ಹಾಡುಗಾರ ಮಾತಿನಮಲ್ಲ ಆಲೂರು ನಾಗಪ್ಪನವರು. ಅವರ ಸುಪುತ್ರಿ ಶ್ರೇಷ್ಠ ಉದ್ಘೋಷಕಿ ಹಾಗೂ ಮಾತಿನಮಲ್ಲಿ ಶ್ರೀಮತಿ ದಿವ್ಯಾ ಆಲೂರು. ಒಕ್ಕಲಿಗರ ಇತಿಹಾಸ ಮತ್ತು ಸಂಸ್ಕೃತಿಯನ್ನು ಮನೆ ಮನಕ್ಕೆ ತಲುಪಿಸುತ್ತಿರುವ **'ಒಕ್ಕಲಿಗ ವಾಯ್ಸ್'** ಪತ್ರಿಕೆಯ ನಿರ್ಮಾತೃ ಶ್ರೀ ನಾಗಭೂಷಣ್‌ರವರು.

ಹೀಗೆ ಸಾಕಷ್ಟು ಜನ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿಗೆ ಕೊಡುಗೆಯನ್ನು ನೀಡಿದ್ದಾರೆ ಹಾಗೂ ನೀಡುತ್ತಿದ್ದಾರೆ. ಇವರಲ್ಲಿ ಕೆಲವರ ವ್ಯಕ್ತಿ ಚಿತ್ರಣ ಇಲ್ಲಿ ನೀಡಲಾಗಿದೆ.

ಶ್ರೀ ಭೈರವಿ ಕೆಂಪೇಗೌಡ

ಇಂದಿಗೆ ನೂರು, ನೂರಿಪತ್ತು ವರ್ಷಗಳ ಹಿಂದೆ ನಮ್ಮ ಸಮುದಾಯದವರಿಗೆ ಸಂಗೀತದ ಗಂಧ ಗಾಳಿಯಿರದಿದ್ದ ಕಾಲವದು. ಅದು ಕೇವಲ ಬ್ರಾಹ್ಮಣರಿಗೆ ಮಾತ್ರ ಎಂಬ ಮಾತಿತ್ತು. ಅಂತಹ ಕಾಲದಲ್ಲಿ ಭೈರವಿ ಕೆಂಪೇಗೌಡರು, ಪಿಟೀಲು ಚೌಡಯ್ಯ ನಂತವರು ಇಡೀ ದಕ್ಷಿಣ ಭಾರತದಲ್ಲೆಲ್ಲಾ ಹೆಸರು ಮಾಡಿ ಸಮಾಜವೂ ಕೂಡ ಅವರ ವಿದ್ವತ್ತಿಗೆ ತಲೆದೂಗಿದ್ದು ಇಂದು ಇತಿಹಾಸವಾಗಿದೆ. ಭೈರವಿ ಕೆಂಪೇಗೌಡರಂತೂ ಹಣ, ಆಸ್ತಿ, ಕೀರ್ತಿಗೆ ಎಂದೂ ಯೋಚಿಸಿದವರಲ್ಲ. ಅಷ್ಟೇ ಅಲ್ಲದೆ ತಮ್ಮ ವೈಯಕ್ತಿಕ ವಿಚಾರಗಳನ್ನು ಯಾರೊಂದಿಗೂ ಹಂಚಿಕೊಂಡವರಲ್ಲ. ಡಿ.ವಿ.ಜಿ.ಯವರ 'ಜ್ಞಾಪಕ ಚಿತ್ರ ಶಾಲೆ' ಮಾಲಿಕೆಯ ಕಲೋಪಾಸಕರು, ನಾಡೋಜ ಹೆಚ್.ಎನ್. ನಾಗೇಗೌಡರ 'ಭೂಮಿಗೆ ಬಂದಗಂಧರ್ವ', ಕೆಂಪೇಗೌಡರ ಸಹವರ್ತಿಯಾಗಿದ್ದ ವಾಸುದೇವಾಚಾರ್ಯರ 'ನಾ ಕಂಡ ಕಲಾವಿದರು'. ಇವೇ ಮುಂತಾದ ಕೃತಿಗಳಿಂದ ಕೆಲವು ಮಾಹಿತಿಗಳು ಲಭ್ಯವಾಗುತ್ತದೆ. ಇಷ್ಟಕ್ಕೂ ನಾನು ಒಕ್ಕಲಿಗರ ಇತಿಹಾಸ ಕೃತಿ ಬರೆಯಲು ಹೆಚ್.ಎಲ್. ನಾಗೇಗೌಡರ "ಭೂಮಿಗೆ ಬಂದಗಂಧರ್ವ" ಕೃತಿಯು ನನ್ನ ಮೇಲೆ ಮಾಡಿದ ಗಾಢ ಪ್ರಭಾವ ಎಂದೇಳಬಹುದು.

1857 ರಿಂದ 1937ರ ತನಕ ಎಂಬತ್ತು ವರ್ಷಗಳ ತುಂಬು ಜೀವನ ನಡೆಸಿ, ನಾಡಿನ ತುಂಬೆಲ್ಲ ಸಂಗೀತದ ನಾದವನ್ನು ಹಂಚಿದ ಮಹಾನುಭಾವ. ಭೈರವಿ ಕೆಂಪೇಗೌಡರು ಮೂಲತಃ ಬೆಂಗಳೂರು ಗ್ರಾಮಾಂತರ ಚನ್ನಪಟ್ಟಣದ ಶೆಟ್ಟಿಹಳ್ಳಿ ಇವರ ಮೂಲ. ನೂರಾರು ವರ್ಷಗಳ ಹಿಂದೆ ಅಂದರೆ ಟಿಪ್ಪು ಸುಲ್ತಾನನ ಕಾಲದಲ್ಲಿ ಕೆಂಪೇಗೌಡರ ಪೂರ್ವಿಕರು ತಮಿಳು ನಾಡಿನ ಕೊಯಮತ್ತೂರಿಗೆ ಹೋಗಿ ನೆಲೆಸಿದರು. ಕೊಯಮತ್ತೂರಿನ ಜಮಿನ್ದಾರ ಕುಟುಂಬ, ಶ್ರೀಮಂತ ಮನೆತನದಲ್ಲಿ 1857ರಲ್ಲಿ ಹುಟ್ಟಿದರು ಕೆಂಪೇಗೌಡರು. ಇವರ ತಂದೆ ದೊಡ್ಡೇಗೌಡ, ತಾತಾ ಚಿಕ್ಕೇಗೌಡ. ತಂದೆ, ತಾತಾ, ಅಜ್ಜಿ ಹಾಗೂ ಊರಿನವರು ಬಾಯಲ್ಲಿ ಕೆಂಪ, ಕೆಂಪೂ, ಕೆಂಪಯ್ಯ, ಕೆಂಪೇಗೌಡ ಇತ್ಯಾದಿ. ಬಾಲಕ ಕೆಂಪುಗೆ ಓದಿನ ಕಡೆ ಗಮನವಿಲ್ಲ ಆತನ ಮೈಮನಸೆಲ್ಲಾ ಸಂಗೀತದ ಕಡೆಗೆ. ಸಂಗೀತವನ್ನು ಬಾಲಕನಿಗೆ ಹೇಳಿ ಕೊಡುವವರೂ ಯಾರೂ ಇಲ್ಲ. ಅಲ್ಲಿ-ಇಲ್ಲಿ ಒಮ್ಮೆ ಕೇಳಿಸಿಕೊಂಡರೆ ಸೊಗಸಾಗಿ ಹಾಡುವ ಕಲೆ ಕರತಲಾಮಲಕವಾಗಿತ್ತು. ದಾಸರ ಪದಗಳು, ಲಾವಣಿ, ಕುಮಾರ ವ್ಯಾಸ ಭಾರತವನ್ನು ಒಮ್ಮೆ ಕೇಳಿ ಅದನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ ಕೆಂಪು. ಪಿಳ್ಳಾರಿ ಗೀತೆಗಳಾದ ಶ್ರೀ ಗಣನಾಥ ...... ಲಂಭೋಧರ ಲಕುಮಿಕರ, ಕೆರೆಯ ನೀರನ್ನೂ ಕೆರೆಗೆಚೆಲ್ಲಿ ...., ತಾರಕ್ಕ ಬಿಂದಿಗೆ ನಾನೀರಿಗೋಗುವೆತಾರೇ ಬಿಂದಿಗೆಯ ...... ಹೀಗೆ ಎಲ್ಲೋ ಕೇಳಿಸಿಕೊಂಡದ್ದನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ. ಇಂತಹ ಸಂಗೀತವನ್ನು ಕೆಂಪುವಿನ ಬಾಯಿಂದ ಕೇಳಿದ ಆತನ ತಾತ ಚಿಕ್ಕೇಗೌಡರಿಗೆ ಪರಮಾನಂದ ನನ್ನ ಮೊಮ್ಮಗನನ್ನು ಒಳ್ಳೆಯ ಸಂಗೀತಗಾರರಲ್ಲಿ ಪಾಠಕ್ಕೆ ಸೇರಿಸಿ ಒಳ್ಳೆಯ ಸಂಗೀತಗಾರನನ್ನಾಗಿ ಮಡಬೇಕೆಂಬ ಹಂಬಲ. ಕೆಂಪುವಿನ ತಂದೆ ದೊಡ್ಡಗೌಡರಿಗೆ ಅದು ಬೇಡ ಅವೆಲ್ಲ ದೇವದಾಸಿ ಮನೆತನದವರು ಹಾಡುವ ಹಾಡುಗಾರಿಕೆ ಎಂದು ತಾತ್ಸಾರ ಮಾಡುತ್ತಿದ್ದರು. ಹಠ ಬಿಡದ ತಾತ ಚಿಕ್ಕೆಗೌಡರು ತಮ್ಮ ಮೊಮ್ಮಗನನ್ನು ಮೈಸೂರಿನ ಪ್ರಸಿದ್ಧ ಸಂಗೀತಗಾರರ ಹಾಗೂ ಆಸ್ಥಾನ ವಿದ್ವಾಂಸರ ಬಳಿ ಕರೆದುಕೊಂಡು ಹೋಗಿ ಕೇಳಿ ಕೊಂಡರು. ಅದು ಪ್ರಯೋಜನವಾಗಲಿಲ್ಲ ಕಾರಣವೇನೆಂದರೆ 'ಜಾತಿ' ಎಂಬ ಅಡ್ಡಗೋಡೆ ಹಾಗೂ ಶೂದ್ರ ಬಾಲಕನಿಗೆ ತಮ್ಮಂತಹ ವಿದ್ವಾಂಸರು ಪಾಠ ಹೇಳಿ ಕೊಡುವುದು ಅಪಚಾರ ಎಂದು ಭಾವಿಸಿದರು. ತಾತ ಮತ್ತು ಮೊಮ್ಮಗ ಬರಿಗೈಲಿ ಕೊಯಮತ್ತೂರು ಸೇರಿದರು.

ಸಂಗೀತ ಕಲಿಯಲೇಬೇಕೆಂಬ ಹಂಬಲದಿಂದ ಯುವಕ ಕೆಂಪು ತಂಜಾವೂರಿಗೆ ನಂತರ ತಿರುವಾಯ್ಯೂರಿಗೆ ಬಂದು ನೆಲೆಸಿದ. ಅದೃಷ್ಟ ವಶಾತ್ ಅಲ್ಲಿ ತ್ಯಾಗರಾಜರ ಸಂಗೀತೋತ್ಸವದ ಸಡಗರ. ಸಂಗೀತ ವಿದ್ವಾಂಸರ ಸಂಗೀತ ಕೇಳಿದ ಕೆಂಪು ಗುರುಗಳನ್ನು ಆಯ್ಕೆ ಮಾಡಿಕೊಳ್ಳುವ ಸರದಿ ಬಂದಿತು. ಪಟ್ನಂ ಸುಬ್ರಮಣ್ಯ ಅಯ್ಯರ್‌ರವರ ಸಂಗೀತ ಕೇಳಿದ ಕೆಂಪು ಇವರನ್ನೇ ತಮ್ಮ ಗುರುಗಳನ್ನಾಗಿ

ಮಾಡಿಕೊಳ್ಳಬೇಕೆಂದು ತೀರ್ಮಾನಿಸಿ ಅವರ ಮನೆ ಬಾಗಿಲು ತಟ್ಟಿದ. ವಿಚಾರ ತಿಳಿದುಕೊಂಡ ಸುಬ್ರಹ್ಮಣ್ಯ ಅಯ್ಯರ್ ಮೊದಮೊದಲು ಒಪ್ಪಲಿಲ್ಲ. ನಿಮ್ಮ ಹಸುಗಳನ್ನು ನೋಡಿಕೊಂಡು ಉಳಿದ ಸಮಯದಲ್ಲಿ ಸಂಗೀತ ಕಲಿಯುತ್ತೇನೆ. ಕೊಟ್ಟಿಗೆಯಲ್ಲಿ ಜಾಗಕೊಟ್ಟರೆ ಸಾಕು ಅಲ್ಲೆ ಮಲಗುತ್ತೇನೆ ಎಂದ ಕೆಂಪು. ಇವರ ಮಾತುಗಳನ್ನು ಕೇಳಿಸಿಕೊಂಡ ಅಯ್ಯರ್‌ರವರ ಪತ್ನಿ ಶಾಂತಮ್ಮಾಳ್ ತಮ್ಮ ಪತಿಗೆ ಒಪ್ಪಿಕೊಳ್ಳುವಂತೆ ಒತ್ತಾಯಿಸಿದರು. ಅಯ್ಯರ್‌ರವರು ಒಪ್ಪಿದರು. ಐಯ್ಯರ್‌ರವರು ತಮ್ಮ ಶಿಷ್ಯರಿಗೆ ತಮ್ಮ ಮನೆಯಲ್ಲಿ ಸಂಗೀತ ಪಾಠ ಹೇಳಿ ಕೊಡುವಾಗ ಕೆಂಪ ದೂರದಿಂದಲೇ ಆ ರಾಗಗಳನ್ನು ಕಲಿತು ಹಸುಗಳಿಗೆ ನೀರು ಕುಡಿಸಿ ಬರುವ ನೆಪದಲ್ಲಿ ದೂರದ ಬಯಲು ಪ್ರದೇಶದಲ್ಲಿ ತಾನು ಕೇಳಿಸಿಕೊಂಡ ರಾಗಗಳನ್ನು ಅಲ್ಲಿದ್ದ ಮರಗಳಿಗೆ, ಹಸು–ಕರುಗಳಿಗೆ ಒಪ್ಪಿಸುತ್ತಿದ್ದ. ಹಂತಹಂತವಾಗಿ ತಾನವರ್ಣ, ಪದವರ್ಣ, ದರುವರ್ಣ, ಕೃತಿ, ರಾಗ ಮಾಲಿಕೆ, ತಿಲ್ಲಾನ ಇವೇ ಮುಂತಾದ ಪ್ರಯೋಗ ಮಾಡುತ್ತಿದ್ದ. ಭೈರವಿ ರಾಗದರಕ್ತಿರಾಗ, ತಾರಾ, ಷಡ್ಜ, ಋಷಭ, ಗಮಕ, ದೃಕ್‌ಗಳ ಏರಿಳಿತವನ್ನು ಪ್ರಯೋಗಿಸ ತೊಡಗಿದ. ಹಂಸಧ್ವನಿರಾಗದ ವಾತಾಪಿ ಗಣಪತಿಂ ಭಜೆ .... ಇಷ್ಟೇ ಅಲ್ಲದೆ ಜನರಂಜನಿರಾಗದ ಪಾಹಿಮಾಂ ಶ್ರೀ ರಾಜರಾಜೇಶ್ವರಿ ....ಆನಂದ ಭೈರವಿ ರಾಗದ–ಮರಿವೇರೆಗತಿಯವರಮ್ಮ ...... ಎಂಬ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ–ಹಾಡಿ ಪ್ರಯೋಗ ಮಾಡುತ್ತಿದ್ದ. ಗುರುಗಳು ತಮ್ಮ ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಿದ್ದ ರೀತಿಟೀಕೆ, ಟಿಪ್ಪಣಿ ಇವೇ ಮುಂತಾದವುಗಳನ್ನು ಕೆಂಪು ಶ್ರದ್ದೆಯಿಂದ ಗಮನಿಸುತ್ತಿದ್ದ.

ಹಲವಾರು ತಿಂಗಳುಗಳ ಬಳಿಕ ಮೈಸೂರು ಅರಸರಿಂದ ಶಿಫಾರಸ್ಸು ಪತ್ರತಂದ ವಾಸುದೇವಾಚಾರ್ ಎಂಬ ಯುವಕನಿಗೆ ಸಂಗೀತ ಪಾಠ ಹೇಳಿಕೊಡಲು ಗುರುಗಳು ಒಪ್ಪಿದರು (ಈತ ಬ್ರಾಹ್ಮಣನಾಗಿದ್ದ). ವಾಸುವಿಗೆ ಕನ್ನಡ ಭಾಷೆ ಬಿಟ್ಟರೆ ತಮಿಳು, ತೆಲಗು ಬಾರದು. ಕೆಂಪುವಿಗೆ ಕನ್ನಡ, ತಮಿಳು, ತೆಲುಗು ಸರಾಗವಾಗಿ ಬರುತ್ತಿತ್ತು. ಹೀಗಾಗಿ ಮೈಸೂರಿನ ವಾಸು ಕೆಂಪುವಿನ ಸ್ನೇಹಕ್ಕಾಗಿ ಕೈಚಾಚಿದ. ಕೆಂಪು ಗುರುವಿನ ಹಾಗೂ ವಾಸುವಿನ ನಡುವೆ ದುಭಾಷಿಯಾದ. ಇಬ್ಬರ ನಡುವೆ ಗಾಢ ಸ್ನೇಹವಾಯಿತು. ಅಷ್ಟೇ ಅಲ್ಲ ಸಂಗೀತ ಕಲಿಯಲು ನೆರವಾಯಿತು. ಕೆಂಪೇಗೌಡರು ಕಾಲ ಕ್ರಮೇಣ – ಭೈರವಿ, ಆನಂದ ಭೈರವಿ, ಶಂಕರಾಭರಣ, ಕಾಂಬೋಜಿ, ಹಂಸಧ್ವನಿ, ಜನರಂಜನಿ, ಕಲ್ಯಾಣಿ, ತೋಡಿರಾಗ, ಬಿಲಹರಿರಾಗ, ಪೂರ್ವಿಕಲ್ಯಾಣಿ, ಮುಖಾರಿರಾಗ, ಮಾಯಾ ಮಾಳವಗೌಳ ಇವೇ ಮುಂತಾದ ರಾಗಗಳನ್ನು ಕಲಿತು ಪ್ರಯೋಗ ಮಾಡಿದರು. ದೇವರ ನಾಮದ ಗಾಯನಕ್ಕೆ ಪೂರ್ವಭಾವಿಯಾಗಿ ಪೀಠಿಕೆಯಂತೆ ಪುರಂದರ ದಾಸರ ಉಗಾಭೋಗಗಳನ್ನು ಕಲಿತರು. ತಾವು ಕಲಿಯುತ್ತಿರುವ ಹಾಗೂ ಕಲಿತಿರುವ ರಾಗಗಳನ್ನು, ಕೀರ್ತನೆಗಳನ್ನು ಗುರುಗಳಿಗೆ ಒಪ್ಪಿಸುವ ಭಾಗ್ಯ ಕೆಂಪುವಿಗಿರಲಿಲ್ಲ ಆದರೆ ವಾಸುದೇವನಿಗಿತ್ತು. ಕೆಂಪೇಗೌಡರು ಸಂಗೀತದಲ್ಲಿ ನಿಪುಣರಾದರು. ಇಷ್ಟಾದರೂ

ಗುರುವಿನ ಸೇವೆ ನಿಲ್ಲಿಸಲಿಲ್ಲ. ಸುಬ್ರಹ್ಮಣ್ಯ ಅಯ್ಯರ್‌ರವರು ಅನಿವಾರ್ಯ ಕಾರಣಗಳಿಂದಾಗಿ ಮದ್ರಾಸ್‌ಗೆ ಹೋಗಿ ನೆಲಸಬೇಕಾಗಿತ್ತು. ಹೀಗಾಗಿ ಅವರು ಮನೆ ಖಾಲಿ ಮಾಡಿದರು. ಕೆಂಪೇಗೌಡರು ನಂತರ ತಮಿಳುನಾಡಿನ ತಿರುವಯ್ಯೂರ್‌ನ ಬ್ರಹ್ಮಾನಂದ ಗುರುಗಳ ಸೇವೆ ಮಾಡುವ ನೆಪದಲ್ಲಿ ಅವರ ಮನೆ ಮತ್ತು ಮನಸ್ಸನ್ನು ಗೆದ್ದು. ಖರಹರಪ್ರಿಯ, ಅರಭಿ, ಷಣ್ಮುಖಪ್ರಿಯ, ಸರಸಾಂಗಿ, ಅಠಾಣ, ಕಾನಡ, ರಾಮಪ್ರಿಯ, ಚಾರುಕೇಶಿ, ಕೀರವಾಣಿ, ಶ್ರೀರಂಜನಿ, ಹರಿಕಾಂಬೋಜ, ನಾಟಕುರಂಜಿ, ಬೇಗಡೆ, ಕೇದರಗೌಳ, ಶುದ್ಧ ಕಾಂಬೋಜ, ಹುಸೇನಿ, ಷಡ್ವಿದಿ ಮಾರ್ಗಿಣಿ, ರೀತಿಗೌಳ, ದಿವ್ಯಮಾಲತಿ ಇವೇ ಮುಂತಾದ ರಾಗಗಳನ್ನು ಕಲಿತು ಪ್ರಯೋಗಿಸಿದರು. ಕೆಂಪೇಗೌಡರು ಸಂಗೀತ ಕೋವಿದರಾದರೂ ಸರಳತೆಯ ಸಾಕಾರ ಮೂರ್ತಿಯಾಗಿದ್ದರು.

ಭೈರವಿ ಕೆಂಪೇಗೌಡರು ಮತ್ತು ಸ್ವಾಮಿ ವಿವೇಕಾನಂದರು

ಕೆಂಪೇಗೌಡರು ತಮ್ಮ ಗುರುಗಳನ್ನು ಬೀಳ್ಕೊಟ್ಟು ಮೈಸೂರಿನ ಕಡೆ ನಡೆದರು. ಮೈಸೂರಿನಲ್ಲಿ ವಾಸುದೇವಾಚಾರ್ಯರನ್ನು ಭೇಟಿಮಾಡಿ ಕೆಲವು ಕಾಲ ಮೈಸೂರಿನಲ್ಲಿ ನೆಲಿಸಿದರು. ಒಮ್ಮೆ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ಸಂಗೀತ ಸೇವೆ ಮಾಡುತ್ತಿದ್ದರು. ಒಮ್ಮೆ ದೇವಾಲಯದಲ್ಲಿ **ಆನಂದ ಭೈರವಿ ರಾಗದ "ಓ ಜಗದಂಬ....."** ಎಂಬ ಸಂಗೀತವನ್ನು, **ಭೈರವಿ ರಾಗದ – "ಕಾಮಾಕ್ಷಿ ಅನುದಿನಮು ......"** ಎಂಬುದನ್ನು **ಆನಂದ ಭೈರವಿ ರಾಗದ "ಮರಿವೇರೆ ಗತಿಯವರಮ್ಮ....." ತೋಡಿರಾಗದ "ಏನು ಧನ್ಯಳೋ..... ಲಕುಮಿ ಏನು ಮಾನ್ಯಳೊ......"** ಇವೇ ಮುಂತಾದ ಕೃತಿಗಳನ್ನು ಹಾಡುತ್ತಾ–ಹಾಡುತ್ತಾ ಮೈಮರೆತ್ತಿದ್ದರು. ಕಣ್ಬಿಟ್ಟು ನೋಡಲು ಮೈಸೂರಿನ ಮಹಾರಾಜರಾದ ಶ್ರೀ ಚಾಮರಾಜ ಒಡೆಯರು ಅವರೊಂದಿಗೆ ದಿವ್ಯ ಸ್ವರೂಪಿಯಾದ ಸ್ವಾಮಿ ವಿವೇಕಾನಂದರು ನಿಂತು ಸಂಗೀತ ಕೇಳುತ್ತಿದ್ದರು. ಕೆಂಪೇಗೌಡರು ಪ್ರಭುಗಳಿಗೆ ನಮಸ್ಕರಿಸಿ ತಮ್ಮ ಪರಿಚಯ ಮಾಡಿಕೊಂಡರು. ಸ್ವಾಮಿ ವಿವೇಕಾನಂದರು ಕೆಂಪೇಗೌಡರಿಗೆ ನಿಮ್ಮ ಗಂಟಲಿನಲ್ಲೇ ಸರಸ್ವತಿ ನೆಲೆಸಿದ್ದಾರೆ. ಇವರು ಈ ನೆಲದ ಅನರ್ಘ್ಯರತ್ನ ಎಂದರು (ಹಿಂದಿಯಲ್ಲಿ) ಮಹಾರಾಜರು ಗೌಡರನ್ನು ಅರಮನೆಗೆ ನಾಳೆ ಬನ್ನಿ ಎಂದು ಆಹ್ವಾನ ನೀಡಿದರು. ಅರಮನೆಗೆ ಹೋಗಿ ಅಲ್ಲಿಯೂ ಸಂಗೀತಗಾನ ಸುಧೆಯನ್ನು ಹರಿಸಿದರು. ಕೆಂಪೇಗೌಡರು ಆಸ್ಥಾನ ವಿದ್ವಾಂಸರಾಗಿ ಬಿಡುವರೂ ಎಂಬ ಯೋಚನೆ ಅಲ್ಲಿದ್ದ ಸಂಗೀತ ವಿದ್ವಾಂಸರಿಗೆ ಗಾಭರಿಯಾಯ್ತು. ಪ್ರಲೋಭನೆ ಮಾಡಿ ಮದ್ಯ ಕುಡಿಸಿದರು. ನಶೆಯಲ್ಲೂ ಹಾಡಿ ಸೈ ಎನಿಸಿಕೊಂಡರು. ಮಹಾರಾಜರು ಕೆಂಪೇಗೌಡರನ್ನು ಬಹಳವಾಗಿ ಹಚ್ಚಿಕೊಂಡರು. ಮಹಾರಾಜರು 1894ರಲ್ಲಿ ಕಲ್ಕತ್ತಾ ಪ್ರವಾಸಕ್ಕೆ ಏರ್ಪಾಡು ಮಾಡಿಕೊಂಡರು ಕೆಂಪೇಗೌಡರಿಗೂ ಕಲ್ಕತ್ತಾಗೆ ಬರಲೂ ಆಹ್ವಾನ ನೀಡಿದರು.

ಮಹಾರಾಜರು, ಕೆಂಪೇಗೌಡರು ಮತ್ತು ಪರಿವಾರದವರು ಕಲ್ಕತ್ತ ಪಟ್ಟಣವನ್ನು ಸೇರಿದರು. ಸಂಜೆ ವೇಳೆಯಲ್ಲಿ ಪ್ರಭುಗಳು ಕೆಂಪೇಗೌಡರ ಸಂಗೀತವನ್ನು ಕೇಳಿ ಆನಂದಿಸುತ್ತಿದ್ದರು. ಇದು ಹೆಚ್ಚು ಕಾಲ ನಡೆಯಲಿಲ್ಲ 1894ರಲ್ಲಿ ಮಹಾರಾಜ ಚಾಮರಾಜ ಒಡೆಯರ್‌ರವರು ಕಾಲವಾದರು. ತುಂಬಾ ಬೇಸರಗೊಂಡ ಕೆಂಪೇಗೌಡರು ಕಾಶಿ, ವಾರಾಣಾಸಿ ಪ್ರವಾಸ ಮುಗಿಸಿ **ಸ್ವಾಮಿ ವಿವೇಕಾನಂದರನ್ನು** ಕಾಣಲು ಕಲ್ಕತ್ತಾದ ಬೇಲೂರು ಮಠಕ್ಕೆ ಹೋಗಿ ಬೇಟಿ ಮಾಡಿ ವಿವೇಕಾನಂದರನ್ನು ಸಂಗೀತ ಸಾಗರದಲ್ಲಿ ಮುಳುಗಿಸಿದರು. ನಂತರ ಅವರಿಂದ ಅವರು ಧರಿಸುತ್ತಿದ್ದ ವಸ್ತ್ರವನ್ನು ಪಡೆದು ಹಿಂತೆರಳಿದರು. ಅವರು ಕೊಟ್ಟ ವಸ್ತ್ರವನ್ನು ತಮ್ಮ ಉಸುರಿರುವ ತನಕ ಜೋಪಾನ ಪಡಿಸಿದ್ದುದೇ ಅಲ್ಲದೆ ಅದನ್ನು ನೋಡಿ ಖುಷಿ ಪಡುತ್ತಿದ್ದರು. ಕಲ್ಕತ್ತಾದಿಂದ ಹೊಸೂರು, ಡೆಂಕಣಿಕೋಟೆ, ಆನೇಕಲ್ಲು, ಜಿಗಣಿ ಇವೇ ಮುಂತಾದ ಕಡೆ ತೆರಳಿ ತಮ್ಮ ಸ್ನೇಹಿತರನ್ನು ಬಂಧುಗಳನ್ನು ಭೇಟಿ ಮಾಡಿ ಬೆಂಗಳೂರಿಗೆ ಬಂದರು. ಬಡ ಕುಟುಂಬದ ಹೆಣ್ಣು ಮಗಳೊಬ್ಬಳು ವಿವಾಹಕ್ಕಾಗಿ ತಮಗೆ ಅತ್ಯಂತ ಪ್ರಿಯವಾಗಿದ್ದ ಭೈರವಿ ರಾಗವನ್ನು ಅಡವಿಟ್ಟು ಆ ಕುಟುಂಬಕ್ಕೆ ಧನಸಹಾಯ ಮಾಡಿದ್ದುಂಟು. ಇದನ್ನು ತಿಳಿದ ಅವರ ಸಂಗೀತಾಭಿಮಾನಿಗಳು ನಂತರ ಆ ರಾಗವನ್ನು ಬಿಡಿಸಿಕೊಂಡಿದ್ದು ಉಂಟು. (ಹೆಚ್.ಎಲ್. ನಾಗೇಗೌಡ – ಭೂಮಿಗೆ ಬಂದ ಗಂಧರ್ವ – ಪು.270) ಬಳೆಪೇಟೆ, ಅಕ್ಕಿಪೇಟೆಯ ಅಂಗಡಿಯವರು ಕರೆದರೆ ಅಲ್ಲಿಯೂ ಹಾಡಿ ರಂಜಿಸುತ್ತಿದ್ದರು. ರಾಗಿ ಮೂಟೆಯ ಮೇಲೆ ಕುಳಿತು **ರೇವತಿರಾಗದ** ರಾಗಿ ತಂದಿರಾ ಭಿಕ್ಷೆಗೆ ರಾಗಿ ತಂದೀರಾ, ಯೋಗ್ಯರಾಗಿ ಭೋಗ್ಯರಾಗಿ, ಭಾಗ್ಯವಂತರಾಗಿ ನೀವು .... ಹೀಗೆ ಸಂದರ್ಭೋಚಿತವಾಗಿ, ಸಂಗೀತ ಹಾಡುತ್ತಿದ್ದರು. ಜಿಗಣಿಯ ಮಲ್ಲಾರೆಡ್ಡಿಯವರು ತಮ್ಮ ಊರಿಗೆ ಕರೆದುಕೊಂಡು ಹೋದರು. ಸಂಗೀತ ಹಾಡುತ್ತಲೆ ಆರೋಗ್ಯ ತಪ್ಪಿತು. ಆ ಕೂಡಲೆ ಅವರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿದರು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀ ಹೆಚ್.ಕೆ. ವೀರಣ್ಣ ಗೌಡರು ಕೆಲವು ಕಾಲ ಸುಶೃಷೆ ಮಾಡಿದ್ದೂ ಉಂಟು ಎಂದು ಹೆಚ್.ಎಲ್. ನಾಗೇಗೌಡರು ತಮ್ಮ "ಭೂಮಿಗೆ ಬಂದ ಗಂಧರ್ವ" ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಕೆಂಪೇಗೌಡರ ಸರಳತೆ, ಸಜ್ಜನಿಕೆ, ಹಾಡುಗಾರಿಕೆಯನ್ನು ಕೇಳಿದ ಆಸ್ಪತ್ರೆಯ ವೈದ್ಯರು, ದಾದಿಯರು ವಿಶೇಷ ಕಾಳಜಿ ವಹಿಸುತ್ತಿದ್ದರು. ಕೆಂಪೇಗೌಡರು ಸ್ವಾಮಿ ವಿವೇಕಾನಂದರು ನೀಡಿದ ವಸ್ತ್ರವನ್ನು ತೆಗೆದು ನೋಡಿ ಆನಂದಿಸುತ್ತಿದ್ದರು. ಸ್ಫೂರ್ತಿಗೊಂಡು ಪುರಂದರದಾಸರ ಭೈರವಿ ರಾಗದ "ಇಂದು ಎನಗೆ ಗೋವಿಂದ ನಿನ್ನಯ ಪಾದಾರವಿಂದ ತೋರೋ ಮುಕುಂದನೆ ।" ಎಂದು ಹಾಡುತ್ತಾ 1937ರಲ್ಲಿ ಗೋವಿಂದನ ಪಾದ ಸೇರಿದರು.

ಹೀಗೆ ಭೈರವಿ ಕೆಂಪೇಗೌಡರು ಸರಿಯಾಗಿ ಎಂಬತ್ತು ವರ್ಷಗಳ ಕಾಲ ಬಾಳಿ ಬದುಕಿದರು. ಹಣ, ಐಶ್ವರ್ಯ, ಕೀರ್ತಿಗೆ ಆಸೆ ಪಡದೆ ಹಾಡುವ ಹಕ್ಕಿಯಂತೆ ಎಲ್ಲಾ

ಕಡೆ ಸಂಚರಿಸಿ ಪಂಡಿತ ಪಾಮರರಿಗೆ ಸಂಗೀತ ಸುಧೆಯನ್ನು ಹರಿಸಿದರು. ಕೆಂಪೇಗೌಡರ ಕಾಯ ಅಳಿಯಿತು ಅಷ್ಟೆ ಶಾಶ್ವತ ಹೆಸರು ಉಳಿಯಿತು.

ಪಿಟೀಲು ಟಿ. ಚೌಡಯ್ಯ



ಸಂಗೀತ ಮನುಷ್ಯನ ಮನಸ್ಸನ್ನು ಮೃದುಗೊಳಿಸುತ್ತದೆ. ತನ್ನದೇ ಆದ ಪ್ರಪಂಚಕ್ಕೆ ಕೊಂಡೊಯ್ಯುತ್ತದೆ. ಇತ್ತೀಚಿನ ದಿನಗಳಲ್ಲಿ ಶಾಸ್ತ್ರಿಯ ಹಾಗೂ ಸಾಂಪ್ರದಾಯಿಕ ಸಂಗೀತ ಕ್ಷೀಣಿಸುತ್ತಿದೆ. ಒಮ್ಮೆ ದಕ್ಷಿಣ ಭಾರತದಲ್ಲಿಯೇ ತಮಿಳುನಾಡು ಸಂಗೀತ ಕ್ಷೇತ್ರದಲ್ಲಿ ಮನೆ ಮಾತಾಗಿತ್ತು. ಅದರಲ್ಲಿಯೂ ತಿರುಚಿನಾಪಳ್ಳಿ, ತಂಜಾವೂರು, ಶ್ರೀರಂಗಂ, ಚಿದಂಬರಂ, ಕುಂಭಕೋಣಂ ಇನ್ನೂ ಮುಂತಾದವು. ಕರ್ನಾಟಕ ಸಂಗೀತವನ್ನು ಪುರಂದರದಾಸರಿಂದ ಹಿಡಿದು ತ್ಯಾಗರಾಜ, ಮುತ್ತುಸ್ವಾಮಿ ದೀಕ್ಷಿತರು, ಶ್ಯಾಮಾಶಾಸ್ತ್ರಿಗಳವರೆವಿಗೆ ಜನಪ್ರಿಯಗೊಳಿಸಿದರು.

ಕರ್ನಾಟಕದಲ್ಲಿ ರುದ್ರಪಟ್ಟಣ, ಹನಸೋಗೆ (ವೀಣೇ ಶೇಷಣ್ಣನವರ ಹುಟ್ಟೂರು), ಮೈಸೂರು, ಶ್ರೀರಂಗಪಟ್ಟಣ, ತಿರುಮಕೂಡಲು (ಚೌಡಯ್ಯನವರ ಹುಟ್ಟೂರು) ಇತ್ಯಾದಿ ಸಂಗೀತ ಕೇಂದ್ರಗಳಾಗಿದ್ದವು.

ಸಂಗೀತ ಕ್ಷೇತ್ರದಲ್ಲಿ ಮೈಸೂರಿನ ಹೆಸರನ್ನು ದಶದಿಕ್ಕುಗಳಿಗೂ ಹಬ್ಬಿಸಿದವರು ಟಿ. ಚೌಡಯ್ಯನವರು. ತಂದೆ ಅಗಸ್ತಗೌಡರು, ತಾಯಿ ಸುಂದರಮ್ಮ. ಸಂಗೀತ ಮತ್ತು ನೃತ್ಯದಲ್ಲಿ ಪರಿಣತಿ ಹೊಂದಿದ್ದ ಹೆಣ್ಣು ಮಗಳು ಆಕೆ. ವಿವಾಹಿತೆಯೊಬ್ಬಳು ಮನೆಯ ಹೊಸಲು ದಾಟಬಾರದೆಂಬ ಕಾಲವದು. ಚೌಡಯ್ಯನವರು 1894ರ ಜನವರಿಯಲ್ಲಿ ಜನಿಸಿದರು. ಬಾಲಕ ಚೌಡಯ್ಯ ದೂರದ ನರಸೀಪುರಕ್ಕೆ ಹೋಗಿ ಬಂದು ವಿದ್ಯೆ ಕಲಿಯಬೇಕಾದ ಅಗತ್ಯವಿದ್ದಿತು. ಓದಿನಲ್ಲಿ ಅಷ್ಟೇನು ಆಸಕ್ತಿ ಇರಲಿಲ್ಲ. ಆತನ ಮನಸ್ಸು ಸಂಗೀತದೆಡೆಗೆ ತನಗರಿವಿಲ್ಲದಂತೆ ಹಾತೊರೆಯುತ್ತಿದ್ದಿತು. ಚೌಡಯ್ಯನವರ ಸೋದರಮಾವನ ಹೆಸರೂ ಚೌಡಯ್ಯ ಎಂಬುದಾಗಿತ್ತು. ಅವರು ಮೈಸೂರಿನಲ್ಲಿ ಉದ್ಯೋಗದಲ್ಲಿದ್ದರು. ತನ್ನ ಸೋದರಿಯ ಮಗನಾದ ಚೌಡಯ್ಯನನ್ನು ಮೈಸೂರಿಗೆ ಕರೆತಂದು, ಇಡೀ ದಕ್ಷಿಣ ಭಾರತದಲ್ಲಿ ಹೆಸರುವಾಸಿಯಾಗಿದ್ದ ಬಿಡಾರಂ ಕೃಷ್ಣಪ್ಪನವರಲ್ಲಿಗೆ ಸಂಗೀತಾರ್ಜನೆಗಾಗಿ ಸೇರಿಸಿದರು. ಹಿರಿಯರ ಆಶೀರ್ವಾದ ಮತ್ತು ಗುರುಗಳ ಮಾರ್ಗದರ್ಶನದಿಂದ ದಿನೇ ದಿನೇ ಮೇಲೇರತೊಡಗಿದ ಚೌಡಯ್ಯನವರಿಗೆ ಶರೀರ-ಶಾರೀರ ಎರಡೂ ಚೆನ್ನಾಗಿದ್ದವು. ಆದರೆ ಅವರ ಗುರುಗಳ ಅಪ್ಪಣೆಯಂತೆ

ಹಾಡುಗಾರಿಕೆಯ ಬದಲು ಪೀಟೀಲು ನುಡಿಸುವುದನ್ನು ಕಲಿಯ ತೊಡಗಿದರು. ಪೀಟೀಲು ವಾದನವನ್ನು ಕರತಲಾಮಲಕ ಮಾಡಿಕೊಂಡರು.

ಚೌಡಯ್ಯನವರ ಹೆಸರು ಮೈಸೂರು ಪ್ರಾಂತ್ಯದಲ್ಲಿ ಜನಪ್ರಿಯಗೊಳ್ಳುತ್ತಿದ್ದ ಕಾಲವದು. ಇಂದಿನಂತೆ ಅಂದು ಧ್ವನಿವರ್ಧಕಗಳ ಬಳಕೆ ಹೆಚ್ಚಾಗಿರಲಿಲ್ಲ. ಪ್ರಥಮ ಬಾರಿಗೆ ಮರುಂಗಾಪುರಿ ಗೋಪಾಲಕೃಷ್ಣ ಅಯ್ಯರ್ ತಮ್ಮ ಪೀಟೀಲಿಗೆ ಧ್ವನಿವರ್ಧಕ –ವನ್ನು ಅಳವಡಿಸಿಕೊಂಡು ಕಛೇರಿ ನಡೆಸಿದರು. ಪಟ್ಣಂ ಸುಬ್ರಹ್ಮಣ್ಯ ಅಯ್ಯರ್, ಮುತ್ತಯ್ಯ ಭಾಗವತರ್, ಪಾಲಕ್ಕಾಡು ರಾಮ ಭಾಗವತರಂತಹ ಸಂಗೀತ ದಿಗ್ಗಜರ ಕಛೇರಿಗಳಲ್ಲಿ ಧ್ವನಿವರ್ಧಕವುಳ್ಳ ಪೀಟೀಲು ಕಿರಿಕಿರಿ ಉಂಟು ಮಾಡತೊಡಗಿತು. ಇದನ್ನು ಕಂಡ ಚೌಡಯ್ಯನವರು ಏಳು ತಂತಿಗಳ ಪೀಟೀಲನ್ನು ತಯಾರಿಸಿದರು. ಈ ಹೊಸ ಪ್ರಯೋಗ ಧ್ವನಿವರ್ಧಕದ ಕಿರಿಕಿರಿಯನ್ನು ತಪ್ಪಿಸಿ ಅದರ ಜಾಗವನ್ನು ತುಂಬಿದಂತಾಯ್ತು. ಅನಂತರ ಒಂಭತ್ತು ತಂತಿಗಳು, ಹನ್ನೆರಡು ತಂತಿ ಗಳನ್ನು ತಮ್ಮ ಪೀಟೀಲಿಗೆ ಅಳವಡಿಸಿಕೊಂಡು ಹೊಸ ಪ್ರಯೋಗ ಮಾಡಿದರು. ಅಂತಿಮವಾಗಿ ಏಳು ತಂತಿಗಳ ಪೀಟೀಲು ಜನಪ್ರಿಯಗೊಂಡು, ಇಡೀ ದಕ್ಷಿಣ ಭಾರತ ದಲ್ಲಿ ಹೊಸ ಸಂಶೋಧನೆಯಾಗಿ (1926) ಚೌಡಯ್ಯನವರ ಕೀರ್ತಿಗೆ ಇದು ಕಳಸವಿಟ್ಟಿತು. ಇದು ಸಮಕಾಲೀನ ಅದರಲ್ಲೂ ತಮಿಳುನಾಡಿನ ಪಕ್ಕ ವಾದ್ಯಗಾರರ ನಿದ್ರೆ ಕೆಡಿಸಿತು. ಮೈಸೂರಿನ ವೀಣೆಶೇಷಣ್ಣನವರು ಕಿರಿಯನಾದ ಚೌಡಯ್ಯನ ಸಾಧನೆಯನ್ನು ಕೊಂಡಾಡಿದರು.

ಮುಂದೆ ಸಂಗೀತ ದಿಗ್ಗಜರಾದ ಟೈಗರ್ ವರದಾಚಾರ್, ಕೆ. ವಾಸುದೇವಾ –ಚಾರ್ಯರು, ರಾಮನುಜ ಅಯ್ಯಂಗಾರ್, ತಿಟ್ಟೆ ಕೃಷ್ಣಯ್ಯಂಗಾರ್, ಮಧುರೆಮಣಿ ಅಯ್ಯರ್‌ರವರಂತಹ ಹಿರಿಯರಲ್ಲದೆ, ಪಾಲಕ್ಕಾಡು ನಾರಾಯಣಸ್ವಾಮಿ, ಪೊನ್ನಯ್ಯ ಪಿಳ್ಳೆ, ಟಿ.ಆರ್. ಮಹಾಲಿಂಗಂ, ಎಂ.ಎಸ್. ಸುಬ್ಬಲಕ್ಷ್ಮಿ (ಭಾರತರತ್ನ ಪ್ರಶಸ್ತಿ ವಿಜೇತೆ) ಮುಂತಾದವರಿಗೆ ಪಕ್ಕವಾದ್ಯ ನುಡಿಸಿ ಪೀಟೀಲು ವಾದನಕ್ಕೆ ಗೌರವ ತಂದುಕೊಟ್ಟರು. ಆಗ ತಾನೆ ಮಾರುಕಟ್ಟೆಗೆ ಬಂದ ಬ್ರಾಡ್‌ಕ್ಯಾಸ್ಟ್ ರೆಕಾರ್ಡಿಂಗ್ ಕಂಪನಿಗೆ ನಾಯಪಿಳ್ಳೆ–ಯವರೊಂದಿಗೆ ಪಕ್ಕವಾದ್ಯ ನುಡಿಸಿ ಗ್ರಾಮಾಫೋನ್ ಕಂಪನಿಗೆ ಲಾಭ ತಂದು ಕೊಡುವ ಜೊತೆಗೆ ಸಂಗೀತವನ್ನು ಪಂಡಿತ ಪಾಮರರೂ ಸವಿಯುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಪ್ರಯೋಗಶೀಲರಾದ ಚೌಡಯ್ಯನವರ ಮನಸ್ಸು ಹೊಸ ಹೊಸ ಪ್ರಯೋಗ –ಗಳಿಗೆ ಹಾತೊರೆಯುತ್ತಿದ್ದಿತು. 1943ರಲ್ಲಿ ವಾಣಿ ಎಂಬ ಚಲನಚಿತ್ರವನ್ನು ನಿರ್ದೇಶಿಸಿದರು. ಇದೊಂದು ಸಂಗೀತಮಯ ಚಲನಚಿತ್ರವಾದರೂ ಅಷ್ಟೇನೂ ಯಶಸ್ವಿಯಾಗಲಿಲ್ಲ. ಈ ಚಿತ್ರದ ನಾಯಕ, ಸಂಗಿತ ನಿರ್ದೇಶಕ ಮತ್ತು ನಿರ್ಮಾಪಕರಾಗಿ ಚೌಡಯ್ಯನವರು ದುಡಿದರು.

ಮೈಸೂರು ಪ್ರಾಂತ್ಯದ ಕೀರ್ತಿಯನ್ನು ದಶದಿಕ್ಕುಗಳಿಗೂ ಹಬ್ಬಿಸಿದ ಚೌಡಯ್ಯ–ನವರನ್ನು ಮೈಸೂರು ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು (1895–1940) 1938ರಲ್ಲಿ ಮೈಸೂರು **ಆಸ್ಥಾನದಲ್ಲಿ ಆಸ್ಥಾನ** ವಿದ್ವಾಂಸರನ್ನಾಗಿ ನೇಮಿಸಿ–ಕೊಂಡರು. ಮೈಸೂರಿನ ಆಳರಸರಾದ ಜಯಚಾಮರಾಜ ಒಡೆಯರು 1941ರಲ್ಲಿ ಚೌಡಯ್ಯನವರಿಗೆ **ಸಂಗೀತ ರತ್ನ** ಎಂಬ ಬಿರುದನ್ನು ದಯಪಾಲಿಸಿದರು. ಭಾರತದ ಹೆಸರಾಂತ ಸಂಗೀತ ಸಂಸ್ಥೆಯಾದ ಮದರಾಸಿನ ಮ್ಯೂಸಿಕ್ ಅಕಾಡಮಿಯು ಚೌಡಯ್ಯನವರಿಗೆ 1957ರಲ್ಲಿ **ಸಂಗೀತ ಕಲಾನಿಧಿ** ಎಂಬ ಬಿರುದನ್ನು ಕೊಟ್ಟು ಗೌರವಿಸಿತು. 1957–58ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯು ಪುರಸ್ಕರಿಸಿತು. ಕೇಂದ್ರ ಸರ್ಕಾರವು ಸಹ ಇವರನ್ನು ಗೌರವಿಸುವುದರಲ್ಲಿ ಹಿಂದೆ ಬೀಳಲಿಲ್ಲ. ಚೌಡಯ್ಯನವರಿಗೆ **ರಾಷ್ಟ್ರಪತಿ** ಪ್ರಶಸ್ತಿಯನ್ನು ನೀಡುವುದರೊಂದಿಗೆ ಪಕ್ಕವಾದ್ಯ ನುಡಿಸುವುವವರನ್ನು ರಾಷ್ಟ್ರವೇ ಗೌರವಿಸುವಂತೆ ಮಾಡಿದ ಕೀರ್ತಿ ಚೌಡಯ್ಯನವರಿಗೆ ಸಲ್ಲುತ್ತದೆ. ಟಿ. ಚೌಡಯ್ಯನವರು ಐವತ್ತಕ್ಕೂ ಹೆಚ್ಚು ತೆಲಗು, ಕನ್ನಡ, ತಮಿಳು, ಸಂಸ್ಕೃತ ಭಾಷೆಗಳಲ್ಲಿ ಸಂಗೀತ ರಚಿಸಿದ್ದಾರೆ. ವಾಗ್ಗೆಯಕಾರರೂ ಆಗಿದ್ದರು. ಚೌಡಯ್ಯನವರು ಒಮ್ಮೆ ತಂಜಾವೂರಿನಲ್ಲಿ ಸಂಗೀತ ಸಬೆ ನಡೆಯಿತು. ಅಲ್ಲಿ ಅಮೋಘವಾಗಿ ಪಿಟೀಲು ನುಡಿಸಿದ ಚೌಡಯ್ಯನವರ ಪಿಟೀಲನ್ನು ಆನೆಯ ಮೇಲೆ ಮೆರವಣಿಗೆ ಮಾಡುವ ಮೂಲಕ ಧನ್ಯವಾದವನ್ನು ಅರ್ಪಿಸಿದರು.

ಹೊಸ ಪ್ರಯೋಗ ಮಾಡುವುದರಲ್ಲಿ ಸಿದ್ಧಹಸ್ತರಾದ ಚೌಡಯ್ಯನವರು ಸಂಗೀತ–ವನ್ನು ನುಡಿಸಿದರೆ ಗಿಡಗಳು ಹುಲುಸಾಗಿ ಬೆಳೆಯುತ್ತದೆಂದು ಮ್ಯೂಸಿಕ್ ಥೆರಪಿ ಪ್ರಯೋಗ ಮಾಡಿದರು. ಕೆಲವು ತಿಂಗಳ ಹಿಂದೆ ಪ್ರಜಾವಾಣಿಯ ವಾಚಕರ ವಾಣಿಯಲ್ಲಿ ಈ ಮೇಲ್ಕಂಡ ವಿಚಾರವನ್ನು ಮೈಸೂರಿನ ಹಿರಿಯ ನಾಗರಿಕರೊಬ್ಬರು ಬರೆದಿದ್ದರು.

ಸಂಗೀತ ಜಗತ್ತಿನ ಉತ್ತರ ಧ್ರುವತಾರೆ, ಗಂಧರ್ವ ಲೋಕದಿಂದ ಬಂದ ಅನರ್ಘ್ಯ ರತ್ನ ಚೌಡಯ್ಯನವರು ದಿನಾಂಕ 19 ಜನವರಿ 1967ರಂದು ದಿವಂಗತರಾದರು.

ಶ್ರೀಮತಿ ಬಿ. ಸರೋಜಾದೇವಿ



ಇಂದಿಗೆ ಐವತ್ತು ವರ್ಷಗಳ ಹಿಂದೆ ಚಲನಚಿತ್ರಗಳಲ್ಲಿ ಅಭಿನಯಿಸುವುದು ಸುಲಭದ ವಿಚಾರವಾಗಿರಲಿಲ್ಲ. ನಾಟಕರಂಗದಲ್ಲಿ ಪಳಗಿರಬೇಕು, ಮುಖಸೌಂದರ್ಯ ಭಾವನೆ, ಅಭಿನಯ ಇವೇ ಮುಂತಾದ ಅರ್ಹತೆಗಳಿರ–ಬೇಕಿತ್ತು ಅಂತಹ ಸಂದರ್ಭದಲ್ಲಿ ಉದಯಿಸಿದ ನಟಿಯೇ ಬಿ. ಸರೋಜಾದೇವಿ. ತಮಿಳು, ಕನ್ನಡ, ತೆಲುಗು, ಹಿಂದಿ

ಚಿತ್ರಗಳಲ್ಲಿ ನಟಿಸಿ ಚತುರ್ಭಾಷಾ ತಾರೆ ಎನಿಸಿಕೊಂಡರು. ಹೆಚ್ಚಾಗಿ ತಮಿಳು ಚಿತ್ರಗಳಲ್ಲಿ ನಟಿಸಿದ ಕಾರಣ ತಮಿಳುನಾಡಿನವರು ತಮಿಳ್ ಮಗಳ್ ಎಂತಲೂ, ತೆಲುಗಿನಲ್ಲಿ ನಟಿಸಿದ ಕಾರಣ ತೆಲುಗುವಾಳ್ಳು (ವೈಜಯಂತಿ ಮಾಲ ಮತ್ತು ಸರೋಜಾ ದೇವಿ ಸಹೋದರಿಯರಿರಬೇಕೆಂದು ಕೆಲವರು) ಎಂತಲೂ ಭ್ರಮಿಸಿದ್ದುಂಟು. ಆದರೆ ವಾಸ್ತವದಲ್ಲಿ ಈಕೆ ಅಚ್ಚಕನ್ನಡತಿ ಹಾಗೂ ಒಕ್ಕಲಿಗ ಜನಾಂಗದ ಹೆಣ್ಣುಮಗಳು.

ಬೆಂಗಳೂರು ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ದಶವಾರದ ಭೈರಪ್ಪ ಮತ್ತು ರುದ್ರಮ್ಮ ದಂಪತಿಗಳ ಮೂರುಜನ ಹೆಣ್ಣು ಮಕ್ಕಳಲ್ಲಿ ಎರಡನೆಯವರು. ಬಾಲ್ಯದ ಕಹಿನೆನಪುಗಳು ತನ್ನ ಮಕ್ಕಳ ಮೇಲೆ ಉಳಿಯಬಾರದೆಂಬ ಉದ್ದೇಶದಿಂದ ಎಲ್ಲಾ ಕಷ್ಟಗಳನ್ನು ನುಂಗಿ ನಿಂತ ಆಕೆಯ ತಾಯಿ ರುದ್ರಮ್ಮಳಿಗೆ ಇಡೀ ಕುಟುಂಬವೇ ಚಿರಋಣಿ. ಬೆಂಗಳೂರಿನ ಸೆಂಟ್ ತೆರೆಸಾ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಾ ಬೆಳೆದಂತೆಲ್ಲಾ ಮನೆಯಲ್ಲೂ ಕಷ್ಟಗಳು ಪ್ರಾರಂಭವಾದವು. 1955ರಲ್ಲಿ "ಶ್ರೀ ರಾಮ ಪೂಜಾ" ಎಂಬ ಚಿತ್ರದಲ್ಲಿ ಪುಟ್ಟ ಪಾತ್ರವನ್ನು ಅಚ್ಚುಕಟ್ಟಾಗಿ ಅಭಿನಯಿಸಿದ ಬೆನ್ನಲ್ಲೇ, ಶ್ರೀ ಕು.ರಾ. ಸೀತಾರಾಮ ಶಾಸ್ತ್ರಿಗಳ ನಿರ್ದೇಶನದ 'ಮಹಾಕವಿ ಕಾಳಿದಾಸ' ಚಿತ್ರದ ನಾಯಕಿಯಾದರು. ಶ್ರೀ ಹೊನ್ನಪ್ಪ ಭಾಗವತರವರು ನಾಯಕ ನಟನಾಗಿ ನಟಿಸಿದ ಈ ಚಿತ್ರ ಆಗಿನ ಕಾಲದಲ್ಲಿ ಜನಮನವನ್ನು ಗೆದ್ದಿತು. ಈ ಚಿತ್ರ ಸರೋಜಾದೇವಿಗೆ ಜಿಗಿತದ ಹಲಗೆಯಾಗಿ ಪರಿಣಿಮಿಸಿತು.

ಪೌರಾಣಿಕ, ಸಾಮಾಜಿಕ, ಕೌಟುಂಬಿಕ, ಐತಿಹಾಸಿಕ ಯಾವುದೇ ಪಾತ್ರಕ್ಕೂ ಒಪ್ಪುವ ಮುಖ ಸೌಂದರ್ಯ ಹಾಗೂ ದೇಹ ಸೌಂದರ್ಯವಿದ್ದಿತು. ತಮಿಳಿನ ನಾಯಕನಟರುಗಳೆಂದರೆ ಎಂ.ಜಿ.ಆರ್. ಎಂದೇ ಖ್ಯಾತನಾಮರಾಗಿದ್ದ ತಮಿಳುನಾಡಿನ ಕಣ್ಮಣಿ ಎಂ.ಜಿ. ರಾಮಚಂದ್ರನ್ ಹಾಗೂ ಮನೋಜ್ಞ ಅಭಿನಯಕ್ಕೆ ಮತ್ತೊಂದು ಹೆಸರು ಶಿವಾಜಿ ಗಣೇಶನ್, ಜೆಮಿನಿ ಗಣೇಶನ್ ಇನ್ನೂ ಮುಂತಾದವರು. ತೆಲುಗಿನ ಎನ್.ಟಿ.ಆರ್. ಎಂದೇ ಖ್ಯಾತರಾಗಿದ್ದ ಪೌರಾಣಿಕ ಪಾತ್ರಗಳಿಗೆ ಹೇಳಿ ಮಾಡಿಸಿದಂತಿದ್ದ ಎನ್.ಟಿ. ರಾಮರಾವ್, ಎ. ನಾಗೇಶ್ವರರಾವ್ ಇನ್ನೂ ಮುಂತಾದ ನಟರೊಡನೆ ಜಗದೇಕವೀರುನಿಕಥಾ, ಪಾಂಡುರಂಗ ಮಹಾತ್ಮೆ ಇನ್ನೂ ಮುಂತಾದ ಚಿತ್ರಗಳಲ್ಲಿ ನಟಿಸಿದರು. ತಮಿಳಿನ ಪಾಲುಂಪಳಮುಂ, ಕಲ್ಯಾಣಪರಿಸು, ನಾಡೋಡಿ ಮನ್ನನ್ ಸೇರಿದಂತೆ ಬಹಳಷ್ಟು ಚಿತ್ರಗಳಲಿ ಮನೋಜ್ಞವಾಗಿ ನಟಿಸಿ, ಹಿಂದಿಯ ದೀಲೀಪ್ ಕುಮಾರ್, ಸುನಿಲ್‌ದತ್, ರಾಜೇಂದ್ರ ಕುಮಾರ್, ಶಮ್ಮಿ ಕಪೂರ್ ಸೇರಿದಂತೆ ಹಲವು ನಾಯಕ ನಟರೊಂದಿಗೆ ಪೈಗಾಮ್, ಸಸುರಾಲ್ ಇನ್ನೂ ಮುಂತಾದ ಹಿಂದಿ ಚಿತ್ರಗಳಲ್ಲಿ ನಟಿಸಲಾಗಿ ದಕ್ಷಿಣದ ಖ್ಯಾತ ತಾರೆ ಉತ್ತರ ಭಾರತದ ಬಾಲಿವುಡ್ ಚಿತ್ರಜಗತ್ತಿನಲ್ಲಿ ತಮ್ಮ ಅಭಿನಯದ ಛಾಪು ಮೂಡಿಸಿದರು.

ಕನ್ನಡ ಚಿತ್ರರಂಗವು ಡಾ. ರಾಜ್‌ಕುಮಾರ್‌ರಂತಹ ನಾಯಕ ನಟರಿಗಿಂತಲೂ ಸರೋಜಾದೇವಿ ಅವರಿಗೆ ಹೆಚ್ಚಿನ ಸಂಭಾವನೆ ನೀಡಿ ಕನ್ನಡಕ್ಕೆ ಕರೆತರಬೇಕಾದ ಅನಿವಾರ್ಯತೆ ಇದ್ದದ್ದು ಇಂದು ಇತಿಹಾಸವಾಗಿದೆ. (ಅಂದು ತಮಿಳು ಚಿತ್ರರಂಗದಲ್ಲಿ ಕನ್ನಡ ಚಿತ್ರರಂಗಕ್ಕಿಂತಲೂ ಹೆಚ್ಚಿನ ಸಂಭಾವನೆ ನೀಡುತ್ತಿದ್ದುದ್ದೇ ಇದಕ್ಕೆ ಕಾರಣ). ಕನ್ನಡದ ಮೇರುನಟರಾದ ರಾಜ್‌ಕುಮಾರ್, ಕಲ್ಯಾಣ್ ಕುಮಾರ್, ಉದಯ ಕುಮಾರ್, ರಾಜೇಶ್ ಸೇರಿದಂತೆ ಹಲವು ನಾಯಕನಟರೊಂದಿಗೆ ಅಭಿನಯಿಸಿದ ಕೀರ್ತಿ ಶ್ರೀಮತಿ ಸರೋಜಾದೇವಿಗೆ ಸಲ್ಲುತ್ತದೆ. ಅಮರಶಿಲ್ಪಿ ಜಕಣಾಚಾರಿ ಎಂಬ ಚಾರಿತ್ರಿಕ ಚಿತ್ರವಿರಲಿ, ಅಣ್ಣತಂಗಿ, ಕಥಾ ಸಂಗಮದಂತಹ ಸಾಮಾಜಿಕ ಚಿತ್ರವಿರಲಿ ಸಹಜ ಅಭಿನಯದ ಮೂಲಕ ಪ್ರೇಕ್ಷಕರ ಮನಸ್ಸಿನಲ್ಲಿ ಉಳಿದಿರುವುದೇ ಸಾಕ್ಷಿ. ಕಿತ್ತೂರು ರಾಣಿ ಚನ್ನಮ್ಮ ಚಲನಚಿತ್ರದಲ್ಲಿ ರಾಣಿಚನ್ನಮ್ಮಳ ಪಾತ್ರಕನ್ನಡಿಗರ ಹೃನ್ಮನಗಳನ್ನು ಗೆದ್ದ ಚಿತ್ರವಾಗಿದೆ. ಈ ಚಿತ್ರ ರಾಷ್ಟ್ರ ಪ್ರಶಸ್ತಿ ಪಡೆಯಿತು.

ಕನ್ನಡ, ತಮಿಳು, ತೆಲುಗು ಚಿತ್ರಗಳ ಮನೋಜ್ಞ ಅಭಿನಯಕ್ಕಾಗಿ ಭಾರತ ಸರ್ಕಾರವು 1969ರಲ್ಲಿ **"ಪದ್ಮಶ್ರೀ ಪ್ರಶಸ್ತಿ"**ಯನ್ನು ನೀಡಿ ಗೌರವಿಸಿತು. ಪ್ರಶಸ್ತಿ ಬಂದರೂ ಯಾವುದೇ ಹಮ್ಮುಬಿಮ್ಮಗಳಿಲ್ಲದೆ ಮಾಮೂಲಿನಂತೆ ತಮ್ಮ ಅಭಿನಯವನ್ನು ಮುಂದುವರಿಸಿದರು. ಒಂದು ಕಡೆ ಚಲನಚಿತ್ರಗಳಲ್ಲಿ ದುಡಿಯುವುದು ಮತ್ತೊಂದು ಕಡೆ ಸಂಸಾರದ ಹೊಣೆ ಹೊರುವುದು ನಡೆದೇ ಇತ್ತು. ಎಂಬತ್ತರ ದಶಕದ ಪೂರ್ವದಲ್ಲಿ ತೆರೆಕಂಡ ಭಾಗ್ಯವಂತರು ಭಾಗಶಃ ತಮ್ಮ ಖಾಸಗಿ ಜೀವನವನ್ನು ಹೋಲುವ ಚಿತ್ರವಾಗಿತ್ತು. ಅದರಲ್ಲಿನ ಅವರ ಅಭಿನಯ ಮನಮೆಚ್ಚುವಂತಹುದು. 1969ರಿಂದ ಮಾಡಿದ ಚಿತ್ರಗಳ ಅಭಿನಯ ಮತ್ತು ಸಾಧನೆಗಳನ್ನು ಮೆಚ್ಚಿದ ಭಾರತ ಸರ್ಕಾರ 1991ರಲ್ಲಿ ಸರೋಜಾದೇವಿಯವರಿಗೆ **"ಪದ್ಮಭೂಷಣ ಪ್ರಶಸ್ತಿ"**ಯನ್ನು ನೀಡಿ ಗೌರವಿಸಿತು. ಸಾಮಾನ್ಯವಾಗಿ ಚಲನಚಿತ್ರರಂಗದಲ್ಲಿರುವವರು ತಮ್ಮ ಖಾಸಗೀ ಜೀವನವನ್ನು ಕೆಡಿಸಿಕೊಂಡಿರುತ್ತಾರೆ. ಆದರೆ ಸರೋಜಾದೇವಿಯವರು ತಮ್ಮ ಖಾಸಗೀ ಜೀವನವನ್ನು ಎಳ್ಳಷ್ಟು ಊನವಾಗದಂತೆ ನೋಡಿಕೊಂಡಿರುತ್ತಾರೆ. ತಮ್ಮ ಖಾಸಗೀ ಜೀವನದ ಯಾವುದೇ ಕಷ್ಟವನ್ನು ತೋರಗೊಡದೆ ಸದಾ ಲವಲವಿಕೆಯಿಂದ ಇರುತ್ತಾರೆ.



ಶ್ರೀ ಅಂಬರೀಶ್

Public Memory is short (ಜನ ಸಾಮಾನ್ಯರ ನೆನಪು ಬಹಳ ಕಡಿಮೆ) ಎನ್ನುವಂತೆ ಹಳೆಯದನ್ನು ಬೇಗ ಮರೆತು ಪ್ರಸ್ತುತವಿರುವುದನ್ನು ಮಾತ್ರ ಸತ್ಯವೆಂದು ನಂಬಿದ್ದೇವೆ. ಕಾರಣ ಇಷ್ಟೆ ಎಂ.ಹೆಚ್. ಅಮರ್‌ನಾಥ್

ಉರುಫ್ ರೆಬಲ್‌ಸ್ಟಾರ್ ಅಂಬರೀಶ್‌ರವರ ತಾಯಿಯವರ ತಂದೆ (ಅಜ್ಜ) ಪೀಟೀಲು ಚೌಡಯ್ಯ. ಪೀಟೀಲು ನುಡಿಸುವುದರಲ್ಲಿ ಇಡೀ ಭಾರತದಾದ್ಯಂತ ಅದರಲ್ಲೂ ವಿಶೇಷವಾಗಿ ಒಮ್ಮೆ ದಕ್ಷಿಣಭಾರತದ ಸಂಗೀತ ಸಾಮ್ರಾಜ್ಯದ ಸಾಮ್ರಾಟನಾಗಿ ಮೆರೆದ ವ್ಯಕ್ತಿ. ತಮಿಳುನಾಡಿನ ಸಂಗಿತಾಭಿಮಾನಿಗಳು ಶ್ರೀ ಚೌಡಯ್ಯನವರನ್ನು ಹಾಗೂ ಅವರ ಪೀಟೀಲನ್ನು ಆನೆಯ ಅಂಬಾರಿಯಲ್ಲಿ ಕೂರಿಸಿ ಮೆರೆಸಿದ್ದು ಇಂದು ಇತಿಹಾಸವಾಗಿದೆ. ಆ ಪೀಟೀಲು ಅಜ್ಜನ ಕೀರ್ತಿಯ ಮುಂದೆ ಮೊಮ್ಮಗನ ಕೀರ್ತಿ ಕೊಂಚ ಕಡಿಮೆಯೇ ಎಂದು ಹೇಳಬಹುದು.

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ದೊಡ್ಡ ಅರಸೀಕೆರೆ ಗ್ರಾಮದ ಶ್ರೀಮಾನ್ ಹುಚ್ಚೇಗೌಡ ಮತ್ತು ಶ್ರೀಮತಿ ಪದ್ಮಮ್ಮ ದಂಪತಿಗಳ ಏಳು ಮಂದಿ ಮಕ್ಕಳಲ್ಲಿ ನಾಲ್ಕನೆಯವರೇ ಅಮರನಾಥ್. 29 ಮೇ 1952ರಲ್ಲಿ ಜನನ. ಹುಚ್ಚೇಗೌಡರು ಸರ್ಕಾರಿ ನೌಕರಿಯಲ್ಲಿದ್ದ ಒಬ್ಬ ಪ್ರಾಮಾಣಿಕ ವ್ಯಕ್ತಿ. ಇವರದು ಮಧ್ಯಮವರ್ಗದ ತುಂಬು ಕುಟುಂಬ. ಬಾಲ್ಯದಿಂದಲೂ ತುಂಟು ಸ್ವಭಾವದ ಅಮರ್ ಕುಟುಂಬಕ್ಕೆಲ್ಲ ಕಿರಿಕಿರಿ ಉಂಟುಮಾಡುತ್ತಿದ್ದ ವ್ಯಕ್ತಿ. ಸಾಮಾನ್ಯವಾಗಿ ಚುರುಕು ಬುದ್ದಿಯವರು ಸ್ವಲ್ಪ ಕಿರಿಕಿರಿಯೇ ಸರಿ. ಮನೆಯವರೆಲ್ಲಾ ವಿದ್ಯಾವಂತರಾದರು ಆದರೆ ಅಮರ್‌ನನ್ನು ಇಂಜಿನಿಯರೋ, ಡಾಕ್ಟರ್ ಆಗಿಯೋ ಮಾಡುವ ಉದ್ದೇಶದಿಂದ ಮನೆಯವರು ಅಮರ್‌ನನ್ನು ಮೈಸೂರಿಗೆ ಕಳುಹಿಸಿದರು. ಪಿ.ಯು.ಸಿ.ಗೆ ಗುಡ್‌ಬೈ ಹೇಳಿದ ಅಮರ್‌ಗೆ ಬುದ್ದಿ ಹೇಳಲಾಗದೆ ತಂದೆ ತಾಯಿಗಳು ಕೈಚೆಲ್ಲಿ ಕುಳಿತರು.

ಅಮರ್ ಸದಾ ಸ್ನೇಹಿತರ ಪಟಾಲಂನೊಂದಿಗಿರುತ್ತಿದ್ದ. ಅಮರ್‌ನ ಆತ್ಮೀಯ ಗೆಳೆಯ ಎಸ್.ವಿ. ರಾಜೇಂದ್ರಸಿಂಗ್ ಬಾಬು (ಈಗ ಹೆಸರಾಂತ ಚಲನಚಿತ್ರ ನಿರ್ದೇಶಕ) ರವರ ತಂದೆ ಡಿ. ಶಂಕರ್‌ನಾಗ್ ನಿರ್ದೇಶನ ಮಾಡುತ್ತಿದ್ದ "ಬಂಗಾರದ ಕಳ್ಳ" ಚಿತ್ರೀಕರಣವು ನೆರೆಯ ಗೋವಾದಲ್ಲಿ ನಡೆಯುತ್ತಿತ್ತು. ಈ ಚಿತ್ರದ ನಾಯಕನಟ ರಾಜೇಂದ್ರಸಿಂಗ್ ಬಾಬು ಆದ ಕಾರಣ ಆತನೊಂದಿಗೆ ಜಾಲಿಯಾಗಿ ಸುತ್ತಾಡಲು ಗೋವಾಕ್ಕೆ ಹೊರಟ ಅಮರ್‌ನಾಥ್‌ಗೆ ಅಲ್ಲಿ ಅದೃಷ್ಟ ಹಾಗೂ ಅಚ್ಚರಿ ಕಾದಿತ್ತು. ಅದೇನೆಂದರೆ ಆ ಚಿತ್ರದಲ್ಲಿ ಪಾತ್ರವಹಿಸಬೇಕಾದ ಪೋಲೀಸ್ ಇನ್‌ಸ್ಪೆಕ್ಟರ್ ಪಾತ್ರಧಾರಿ ಬಂದಿರಲಿಲ್ಲ. ಎತ್ತರವಾಗಿ ದಷ್ಟಪುಷ್ಟನಾಗಿದ್ದ ಅಮರ್‌ನನ್ನು ನೋಡಿದ ಬಾಲಾಜಿಸಿಂಗ್ ಆತ ಒಲ್ಲೆನೆಂದರೂ ಬಣ್ಣ ಹಚ್ಚಿಸಿಯೇ ಬಿಟ್ಟರು. ಅಂದು ಅಮರ್‌ನಾಥ್‌ಗೆ ನಟನೆ ಒಗ್ಗದ ಕಷಾಯವಾಗಿತ್ತು. ಅಂದು ಹಚ್ಚಿದ ಬಣ್ಣವನ್ನು ಅಂಬರೀಶ್ ಇನ್ನೂ ತೆಗೆದಿಲ್ಲ. ನಂತರ 1972ರಲ್ಲಿ ಇವರು ಕನ್ನಡದ ಹೆಸರಾಂತ ನಿರ್ದೇಶಕ ಎಸ್.ಆರ್. ಪುಟ್ಟಣ್ಣನವರು ನಿರ್ದೇಶಿಸುತ್ತಿದ್ದ 'ನಾಗರಹಾವು' ಚಿತ್ರದಲ್ಲಿ ಖಳನಾಯಕನಾಗಿ ನಟಿಸಿದರು. ಒಂದು ವಿಚಿತ್ರವೆಂದರೆ, ಬಾಲಾಜಿಸಿಂಗ್‌ರ ಬಂಗಾರದ ಕಳ್ಳ ತೆರೆ ಕಾಣುವ ಮೊದಲೇ "ನಾಗರ ಹಾವು" ತೆರೆಕಂಡಿತು. ಚಿತ್ರ ಶತದಿನ ಮಾತ್ರವಲ್ಲ ಕನ್ನಡ ಚಿತ್ರರಂಗದಲ್ಲಿ ಬಾಕ್ಸ್ ಆಫೀಸ್

ಹಿಟ್ ಆದ ಬಹು ಬೇಡಿಕೆಯ ಚಿತ್ರವಾಗಿ ಹೊರಹೊಮ್ಮಿತು. ವಿಷ್ಣುವರ್ಧನ್ ನಾಯಕ ನಟರಾಗಿ ಗೆದ್ದರೇನೋ ಸರಿ ಆದರೆ ಅಂಬರೀಶರದು ಪುಟ್ಟ ಪಾತ್ರವಾದರೂ ಜನಮಾನಸವನ್ನು ಗೆದ್ದಿತು. ಅಲ್ಲಿಂದ ಇಲ್ಲಿಯವರೆಗೂ ಸೋಲಿಲ್ಲದ ಸರದಾರನಾಗಿ ಮೆರೆದರು.

1975ರಲ್ಲಿ "ದೇವರ ಕಣ್ಣು" ಚಿತ್ರದಲ್ಲಿ ಖಳನಾಯಕನ ಪಾತ್ರಲಭಿಸಿತು. ನಂತರದ ದಿನಗಳಲ್ಲಿ ಕಿಲಾಡಿ ಜೋಡಿ, ನಾಗರಹೊಳೆ, ಶುಭಮಂಗಳ, ಪಡುವಾರಹಳ್ಳಿ ಪಾಂಡವರು, ಹೀಗೆ ಹಲವು ಹತ್ತು ಚಿತ್ರಗಳಲ್ಲಿ ನಟಿಸಲು ಅವಕಾಶಗಳು ಬಂದವು. ಆದರೆ ಇವುಗಳಲ್ಲಿ ಪೋಷಕನಟನಾಗಿ ಇಲ್ಲವೆ ಖಳನಾಯಕನಾಗಿ ನಟಿಸಿದರು. ಆದರೆ ಅಂಬರೀಶರ ದೊಡ್ಡಗುಣವೆಂದರೆ ತನ್ನನ್ನು ಹೀರೋ ಮಾಡಿ ಎಂದು ಯಾರನ್ನೂ ಅಂಗಲಾಚಿದವರಲ್ಲ. ಒಂದು ರೀತಿಯಲ್ಲಿ ಅವರಲ್ಲಿದ್ದ ಕೀಳರಿಮೆ ಏನೆಂದರೆ ನಾನು ಸ್ಪುರದ್ರೂಪಿಯಲ್ಲ, ಕಪ್ಪು ಬಣ್ಣ, ನಾಯಕನಟನಿಗಿರಬೇಕಾದ ಲಕ್ಷಣಗಳಿಲ್ಲ ಇತ್ಯಾದಿ, ಇತ್ಯಾದಿ. ಆದರೆ ಅದನ್ನು ಒಪ್ಪುವುದು ಬಿಡುವುದು ಪ್ರೇಕ್ಷಕನಿಗೆ ಬಿಟ್ಟಿದ್ದು.

ಅಂಬರೀಶರ ಅದೃಷ್ಟ ಖುಲಾಯಿಸಿತು. 1978ರಲ್ಲಿ "ಅಮರ್‌ನಾಥ್" ಎಂಬ ತಮ್ಮ ಹೆಸರಿನಲ್ಲಿಯೇ ನಿರ್ಮಾಣ ಕಂಡ ಚಿತ್ರದಲ್ಲಿ ನಾಯಕನಟನಾದದ್ದು ಅವರ ಜೀವನದ ಗತಿಯನ್ನೇ ಬದಲಾಯಿಸಿತು. ಜನ ಒಪ್ಪಿಕೊಂಡರು, ಅಪ್ಪಿಕೊಂಡರು. ಅಂದಿ–ನಿಂದ ಇಂದಿನರೆವಿಗೂ ಇವರು ಹೀರೋ ಆಗಿಯೇ ಮಿಂಚಿದರು. 1981ರಲ್ಲಿ ರಾಜೇಂದ್ರಸಿಂಗ್ ಬಾಬು ನಿರ್ದೇಶನದಲ್ಲಿ ತೆರೆಕಂಡ "ಅಂತ" ಚಿತ್ರದಲ್ಲಿ ಬಾಬುರವರು ಕರ್ನಾಟಕದ ರಾಜಕಾರಣಿಗಳ, ಪೋಲೀಸ್ ಅಧಿಕಾರಿಗಳ ಸಾಚಾತನವನ್ನು ನೈಜವಾಗಿ ಚಿತ್ರಿಸಿದ್ದಾರೆ. ಈ ಚಿತ್ರವನ್ನು ಬ್ಯಾನ್ ಮಾಡುವುದು ಖಂಡಿತ ಎಂದು ಎಲ್ಲೆಡೆ ಕಾಳ್ಗಿಚ್ಚಿ–ನಂತೆ ಹಬ್ಬಿದ ಕೂಡಲೆ ಎಲ್ಲಿ ಚಿತ್ರವನ್ನು ಬ್ಯಾನ್ ಮಾಡಿ ಬಿಡುತ್ತಾರೋ ಎಂಬ ಕುತೂಹಲದಿಂದ ಚಿತ್ರ ನೋಡದ ಜನವೇ ಇಲ್ಲ. ನಿರ್ಮಾಪಕರು ಕಂಡು ಕೇಳರಿಯ–ದಷ್ಟು ಯಶಸ್ಸು ಹಾಗೂ ಹಣದ ಹೊಳೆಯಾಗಿ ಹರಿದು ಬಂತು. ಬೇರೆ ಬೇರೆ ಭಾಷೆಗಳಲ್ಲಿ ಡಬ್ ಆಯಿತು. ಬೆಳಗಾಗುವಷ್ಟರಲ್ಲಿ ಅಂಬರೀಶರು ಸೂಪರ್ ಸ್ಟಾರ್ ಪಟ್ಟಕ್ಕೇರಿದರು. ರೆಬಲ್ ಸ್ಟಾರ್ ಅಂಬರೀಶ್ ಎಂದೇ ಖ್ಯಾತರಾದರು. ಅಂಬರೀಶ್ ಮುಟ್ಟಿದ್ದೆಲ್ಲ ಚಿನ್ನ, ನಿರ್ಮಾಪಕರು ಕಾಲ್‌ಶೀಟ್‌ಗಾಗಿ ಕಾಲನ್ನು ಹಿಡಿಯ ತೊಡಗಿದರು. ಇಷ್ಟಾದರೂ ನನ್ನದೇನೂ ಇಲ್ಲವೆಂಬ ನಿರುಮ್ಮಳ ಭಾವ. ಇದುವರೆಗಿನ ಒಟ್ಟಾರೆ ಚಿತ್ರಗಳ ಸಂಖ್ಯೆ 200ಕ್ಕೆ ಕಡಿಮೆ ಇಲ್ಲ. ಚಲನಚಿತ್ರದಲ್ಲಿ ದುಡ್ಡು ಮಾಡುವುದಷ್ಟೇ ಅಲ್ಲ ದೀನದಲಿತರಿಗೆ ಸಹಾಯ ಹಸ್ತ ನೀಡುತ್ತಾ ಬಂದಿದ್ದಾರೆ. ಸಮಾಜ ಸೇವೆಯಿಂದಾಗಿ ಇವರನ್ನು "ದಾನಶೂರ ಕರ್ಣ" ನೆಂದೇ ಜನರು ಪ್ರೀತಿಯಿಂದ ಕರೆಯುತ್ತಾರೆ.

ರಾಜಕೀಯರಂಗಕ್ಕೆ ರೆಬಲ್‌ಸ್ಟಾರ್ – ರಾಜಕಾರಣಿಗಳು ಅಂಬರೀಶರ ಜನಪ್ರಿಯತೆಯ ಎನ್‌ಕ್ಯಾಶ್ ಮಾಡಿಕೊಳ್ಳಲು ಎಡೆತಾಕತೊಡಗಿದರು. ಎಲ್ಲಿಯೂ ಒಂದೆಡೆ ನಿಲ್ಲದ ಏನನ್ನೂ ಅಪೇಕ್ಷಿಸದ ಅಂಬರೀಶ್ "ಆನೆ ನಡೆದದ್ದೇ ದಾರಿ" ಎಂಬಂತೆ ಎಲ್ಲದಕ್ಕೂ ಸೈ. ಇವರನ್ನು ದೇವೇಗೌಡರು ಮೊದಲು ತಮ್ಮ ತೆಕ್ಕೆಗೆ ತೆಗೆದುಕೊಂಡು ರಾಮನಗರ ವಿಧಾನಸಭಾ ಕ್ಷೇತ್ರಕ್ಕೆ ಕರೆತಂದು ಕಣಕ್ಕಿಳಿಸಿದರು. ಸೋಲರಿಯದ ಅಂಬರೀಶ್ ಚುನಾವಣೆಯಲ್ಲಿ ಸೋತರು. ಒಂದು ರೀತಿಯಲ್ಲಿ ಒಳ್ಳೆಯದೆ ಆಯಿತು. "ಸೋಲು ಗೆಲುವಿನ ಮೆಟ್ಟಿಲು" ಎಂಬಂತೆ ಹಾಗೂ ನೀನು ರಾಜ್ಯ ರಾಜರಾಜಕಾರಣಕ್ಕಿಂತ ರಾಷ್ಟ್ರ ರಾಜಕಾರಣ ಮಾಡು ಎಂಬ ಗುರುಹಿರಿಯರ ಆಶೀರ್ವಾದವೋ ಎಂಬಂತೆ ಈ ಜನಪ್ರಿಯ ಸಲಗವನ್ನು ದೇವೇಗೌಡರ ಪಾಳೆಯದಿಂದ ಕಾಂಗ್ರೆಸ್ ಪಾಳೆಯಕ್ಕೆ ಎಳೆತರಲಾಯಿತು. 1998ರ ಫೆಬ್ರವರಿಯಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದು ಎರಡು ಲಕ್ಷಕ್ಕೂ ಅಧಿಕ ಮತಗಳಿಸಿ ಮಂಡ್ಯ ಲೋಕಸಭಾಸದರಾದ ಮಂಡ್ಯದ ಗಂಡು ನಂತರ ಎರಡನೆ ಬಾರಿ, ಮೂರನೆಯ ಬಾರಿ ಗೆದ್ದರು.

2006 ಅಂಬರೀಷ್‌ರ ಜೀವನದಲ್ಲಿ ಮಹತ್ತರವಾದ ವರ್ಷ. ಕಾರಣ–ವೇನೆಂದರೆ ಮನಮೋಹನ್ ಸಿಂಗ್ ನೇತೃತ್ವದ ಯು.ಪಿ.ಎ. ಸರ್ಕಾರದ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವರಾಗಿ ನೇಮಕಗೊಂಡರು. ಆದರೆ ಕಾವೇರಿ ಜಲವಿವಾದದಿಂದಾಗಿ ಸಚಿವ ಹಾಗೂ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ಮತ್ತಷ್ಟು ಜನಪ್ರಿಯರಾದರು.

ಅಂಬರೀಷ್‌ರವರು ಚಿತ್ರರಂಗದಲ್ಲಿ ಮಾತ್ರವಲ್ಲ ರಾಜಕೀಯ ರಂಗದಲ್ಲಿ ಹೀರೊ. ಅಂಬರೀಷ್‌ರ ಜನಪ್ರಿಯತೆ ನಡೆನುಡಿ ಅಂದಿನ ರಾಜಕೀಯ ನೇತಾರರನ್ನು ಆಕರ್ಷಿಸಿತು. ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರ ಬಗ್ಗೆ ಅಂಬರೀಷರಿಗೆ ತುಂಬು ಗೌರವ ದೇವೇಗೌಡರ ಆಹ್ವಾನದ ಮೇರೆಗೆ ರಾಜಕೀಯಕ್ಕೆ ಧುಮುಕಿದರು. ಈ ಅವಕಾಶವನ್ನು ಕಾಯುತ್ತಿದ್ದ ಕಾಂಗ್ರೆಸಿಗರು ಆಹ್ವಾನ ನೀಡಿ 1994ರಲ್ಲಿ ತಮ್ಮ ಪಕ್ಷಕ್ಕೆ ಸೇರಿಸಿಕೊಂಡರು. 1996ರಲ್ಲಿ ಕಾಂಗ್ರೆಸ್ ತ್ಯಜಿಸಿ ಜನತಾದಳಕ್ಕೆ ಸೇರ್ಪಡೆಯಾದರು. ರಾಮನಗರ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿದ ಕಾಂಗ್ರೆಸ್ ಅಭ್ಯರ್ಥಿ ಸಿ.ಎಂ.ಲಿಂಗಪ್ಪ ವಿರುದ್ಧ ಸೋಲನ್ನು ಅನುಭವಿಸಿದರು. 1998ರಲ್ಲಿ ಮಂಡ್ಯ ಲೋಕಸಭಾಕ್ಷೇತ್ರದಿಂದ ಜನತಾದಳದಿಂದ ಸ್ಪರ್ಧಿಸಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಜಿ.ಮಾದೇಗೌಡರ ವಿರುದ್ಧ 80,523 ಮತಗಳಿಂದ ಗೆಲುವು ಸಾಧಿಸಿದರು. 1999ರಲ್ಲಿ ಜನತಾದಳ ತ್ಯಜಿಸಿ ಕಾಂಗ್ರೆಸ್ ಸೇರ್ಪಡೆಯಾದರು 2004ರ ಲೋಕಸಭಾ ಚುನಾವಣೆಯಲ್ಲಿ ಜನತಾದಳದ ಅಭ್ಯರ್ಥಿ ವಿರುದ್ಧ 1,62,280 ಮತಗಳ ಅಂತರದಿಂದ ಗೆಲುವು. 2006ರಲ್ಲಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವರಾಗಿ ಸೇವೆ. ಕಾವೇರಿ

ಗಲಭೆಯಿಂದ ನೊಂದ ಅಂಬರೀಷ್‌ರಿಂದ ರಾಜಿನಾಮೆ. 2008ರಲ್ಲಿ ಶ್ರೀರಂಗಪಟ್ಟಣ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಜೆ.ಡಿ.ಎಸ್.ನ ರಮೇಶ್ ಬಂಡಿ ಸಿದ್ದೇಗೌಡ ವಿರುದ್ಧ ಸೋಲು. 2009ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಲ್ಲಿ ಜೆ.ಡಿ.ಎಸ್. ಪಕ್ಷದ ಚಲುವರಾಯ ಸ್ವಾಮಿ ವಿರುದ್ಧ ಸೋಲು. 2013ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸಿ 1.80 ಲಕ್ಷ ಮತಗಳ ಅಂತರದಿಂದ ಗೆಲುವು. ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರ ಸಂಪುಟದಲ್ಲಿ ವಸತಿ ಸಚಿವರಾಗಿ ಸೇವೆ. 2016ರಲ್ಲಿ ಸಂಪುಟದಿಂದ ಕೈಬಿಟ್ಟ ಸಿದ್ದರಾಮಯ್ಯ ಸರ್ಕಾರ. 2018ರ ವಿಧಾನಸಭಾ ಸಾರ್ವಾತ್ರಿಕ ಚುನಾವಣೆಗೆ ಸ್ಪರ್ಧಿಸದೆ ರಾಜಕೀಯ ಇತಿಶ್ರೀ ಹಾಡಿದ ಅಂಬರೀಷ್. 2018ರ ಸೆಪ್ಟೆಂಬರ್ ಅವರ ಅಭಿನಯದ ಕೊನೆಯ ಚಿತ್ರ ಅಂಬಿನಿಂಗೆ ವಯಸಾಯ್ತು ಹಾಗೂ ಕರ್ಣ ಚಿತ್ರಗಳು.

ಅಂಬರೀಷ್ ಹುಟ್ಟಿದಾಗಿನಿಂದ ಕೊನೆಯುಸಿರೆಳೆಯುವ ತನಕ ದಿಲದಾರ್ ಮನುಷ್ಯ. ಖಾನ, ಪೀನ, ಮೌಜ್‌ಉಡಾನ ಎಂಬುದು ಅವರ ತತ್ವ, ಮಾತು ಒರಟು ಹೃದಯವಂತಿಕೆಯ ವ್ಯಕ್ತಿ ಎಂದರೆ ಅಂಬರೀಷ್. ಚಿತ್ರೋದ್ಯಮದಲ್ಲೂ ದಾದಾ, ಯಜಮಾನ, ನಾಯಕ, ಮೇಟಿ ಎಂದರೆ ತಪ್ಪಾಗಲಾರದು. ಡಾ. ರಾಜ್‌ಕುಮಾರ್‌ರ ನಂತರ ಚಿತ್ರೋದ್ಯಮದ ಚಿತ್ರನಟರ, ಸಹನಟರ, ತಂತ್ರಜ್ಞರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತಿದ್ದರು. ಹಿರಿಯ ಕಲಾವಿದರಿಗೆ ತಮ್ಮನಾಗಿ, ಕಿರಿಯ ಕಲಾವಿದರಿಗೆ ಅಣ್ಣನಾಗಿ ಪ್ರೀತಿವಾತ್ಸಲ್ಯ ಗೌರವವನ್ನು ಹೆಚ್ಚಿಸಿಕೊಂಡಿದ್ದರು. ಚಿತ್ರೋದ್ಯಮಕ್ಕೆ ತೊಂದರೆ-ಯಾದ ಸಂದರ್ಭದಲ್ಲಿ ಸರ್ಕಾರದೊಂದಿಗೆ ಮಾತುಕತೆಯಾಡಿ ಬಗೆಹರಿಸುತ್ತಿದ್ದರು. ಆರೋಗ್ಯ ಹದಗೆಟ್ಟಾಗಲೂ ಎಚ್ಚೆತ್ತುಕೊಳ್ಳಲಿಲ್ಲ. ಕಡೆಗೆ 24.11.2018ರಂದು ರಾತ್ರಿ ಕೊನೆಯುಸಿರೆಳೆದರು. ನೆನಪಿಡಬೇಕಾದ ಸಂಗತಿ ಎಂದರೆ ಅದೇದಿನ ಕಾಂಗ್ರೆಸ್‌ನ ಹಿರಿಯನಾಯಕ, ಮಾಜಿ ರೈಲ್ವೆ ಸಚಿವರಾಗಿದ್ದ ಶ್ರೀ ಜಾಫರ್ ಷರೀಫ್‌ರವರು ಮೃತರಾದರು ಅದು ಬೆಳಕಿಗೆ ಬಾರದೆ ಅಂಬರೀಷ್‌ರವರಿಗೆ ಎಲ್ಲಾ ಸುದ್ದಿಮಾದ್ಯಮ-ಗಳು ಮಾನ್ಯತೆ ಕೊಟ್ಟಿದ್ದು ಇದು ಅವರ ಜನಪ್ರಿಯತೆಗೆ ಒರೆಗಲ್ಲಾಗಿನಿಂತಿದೆ.

ಶ್ರೀಮತಿ ಐಶ್ವರ್ಯ ರೈ ಬಚ್ಚನ್



ಭಾರತೀಯ ಚಲನಚಿತ್ರರಂಗದಲ್ಲಿ ಸೌಂದರ್ಯ ಐಶ್ವರ್ಯ ರೈ ಮೊದಲ ಸ್ಥಾನದಲ್ಲಿ ನಿಲ್ಲುತ್ತಾರೆ. ಸೌಂದರ್ಯಕ್ಕೆ ಮತ್ತೊಂದು ಹೆಸರೇ ಐಶ್ವರ್ಯ ರೈ. 1994ರಲ್ಲಿ ವಿಶ್ವಸುಂದರಿಯಾಗಿ ಆಯ್ಕೆಗೊಂಡು ಇಂದಿಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿಯನ್ನು ಗಳಿಸಿಕೊಂಡ ನಟಿಯಾಗಿದ್ದಾರೆ. ಒಕ್ಕಲಿಗರ ಉಪಪಂಗಡ

ಬಂಟ ಸಮುದಾಯಕ್ಕೆ ಸೇರಿದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಕೃಷ್ಣರಾಜ ರೈ ಮತ್ತು ಬೃಂದಾರೈ ದಂಪತಿಗಳ ಮಗಳಾಗಿ 1975ರಲ್ಲಿ ಜನಿಸಿದರು. ಈಕೆಯ ತಂದೆ ಕಲ್ಕತ್ತಾ ಮತ್ತು ಮುಂಬಯಿಗಳಲ್ಲಿ ವ್ಯಾಪಾರ ವಾಣಿಜ್ಯಗಳಲ್ಲಿ ತಮ್ಮನ್ನು ತೊಡಗಿಸಿ–ಕೊಂಡಿದ್ದರು. ಐಶ್ವರ್ಯ ರೈ ಬೆಳೆದಿದ್ದು ಮತ್ತು ಓದಿದ್ದು ಮುಂಬಯಿ ಮಹಾನಗರ–ದಲ್ಲಿ. ವಿಶ್ವಸುಂದರಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಮೊದಲು ರೂಪದರ್ಶಿಯಾಗಿದ್ದರು. 1994ರಲ್ಲಿ ವಿಶ್ವಸುಂದರಿಪಟ್ಟ ಲಭಿಸಿತು. ಐಶ್ವರ್ಯಳ ಸೌಂದರ್ಯಕ್ಕೆ ಮಾರುಹೋದ ಬಾಲಿವುಡ್ ಚಿತ್ರ ಜಗತ್ತು ಹಿಂದಿ ಚಿತ್ರರಂಗಕ್ಕೆ ಕರೆತಂದಿತು. ಹೆಸರಾಂತ ತಮಿಳು ನಿರ್ದೇಶಕ ಮಣಿರತ್ನಂ ನಿರ್ಮಿಸಿದ ತಮಿಳು ಚಿತ್ರ "ಇರುವರ್" ಎಂಬ ಚಲನಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. ಅನಂತರ ಪ್ಯಾರ್ ಹೋಗಯಾ, ಜೀನ್ಸ್ ಇವೇ ಮುಂತಾದ ಹಿಂದಿ ಚಿತ್ರಗಳಲ್ಲಿ ನಟಿಸಿದರು. ಆದರೆ ಗಲ್ಲಾ ಪೆಟ್ಟಿಗೆಯ ದೃಷ್ಟಿಯಿಂದ ಈ ಚಿತ್ರಗಳು ಅಷ್ಟಾಗಿ ಯಶಸ್ಸು ಕಾಣಲಿಲ್ಲ. ಹಮ್ ದಿಲ್ ದೆ ಚುಕೆ ಸನಮ್, ಆ ಅಬ್ ಲೌಟ್ ಚಲೆ, ದೇವದಾಸ್, ಹಮ್ ತೋ ತೇರೆ ಸನಮ್, ದಿಲ್ ಕಾ ರಿಶ್ತಾ, ಇವೇ ಮುಂತಾದ ಚಲನಚಿತ್ರಗಳಲ್ಲಿ ನಟಿಸಿದರು. ಆಕೆಯ ಅನುಪಮ ಸೌಂದರ್ಯದ ಜೊತೆ ಅಭಿನಯ ಕೌಶಲ್ಯವು ಮೇಳೈಸಿತು. ಗಲ್ಲಾ ಪೆಟ್ಟಿಗೆಯ ದೃಷ್ಟಿಯಿಂದ ಈ ಚಿತ್ರಗಳು ಯಶಸ್ವಿಯಾದವು. ಇತ್ತೀಚಿಗೆ ಆಕೆ ನಟಿಸಿದ ಚಿತ್ರಗಳು, ಧೂಮ್, 'ಗುರು' ಚಿತ್ರವು ಆಕೆಯ ಖ್ಯಾತಿಯನ್ನು ಹೆಚ್ಚಿಸಿದವು. ತಮಿಳು, ಬಂಗಾಳಿ ಚಿತ್ರಗಳಲ್ಲೂ ಕೂಡ ಅಭಿನಯಿಸಿದ್ದಾರೆ. ನಂತರ ಬಾಲಿವುಡ್‌ನಿಂದ ಹಾಲಿವುಡ್‌ಗೆ ಜಿಗಿದರು. "ಪ್ರೈಡ್ ಅಂಡ್ ಪ್ರಿಜುಡೀಸ್" ಎಂಬ ಇಂಗ್ಲೀಷ್ ಸಿನಿಮಾದಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದಾರೆ. ಇವರು ಕ್ಯಾನೇ ಅಂತರ ರಾಷ್ಟ್ರಯ ಚಲನಚಿತ್ರೋತ್ಸವದಲ್ಲಿ ಅತಿಥಿಯಾಗಿ ನಂತರ ತೀಪುಗಾರರಾಗಿ ಆಯ್ಕೆಯಾಗುವ ಮೂಲಕ ತಮ್ಮ ಗೌರವ ಮತ್ತು ಪ್ರತಿಷ್ಠೆ ಹೆಚ್ಚಿಸಿ–ಕೊಂಡಿದ್ದಾರೆ. ಇವರಿಗೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳು ಲಭಿಸಿವೆ. ಈಕೆಗೆ ತಕ್ಕ ವರ ಸಿಗುವುದು ಕಷ್ಟವಾಗಲಿಲ್ಲ. ಬಾಲಿವುಡ್‌ನ ಬಾದ್‌ಷಾ, ಮೇರು ನಟ ಬಿಗ್ ಬಿ ಅಮಿತಾಬ್ ಬಚ್ಚನ್ ಮತ್ತು ಜಯಾಬಚ್ಚನ್‌ರ ಪುತ್ರ ನಟ ಅಭಿಷೇಕ್ ಬಚ್ಚನ್‌ನನ್ನು ದಿನಾಂಕ 20.4.2007ರಂದು ವಿವಾಹವಾಗುವುದರ ಮೂಲಕ ಗೃಹಸ್ಥಾಶ್ರಮಕ್ಕೆ ಕಾಲಿಟ್ಟರು. ಇವರಿಗೆ ಇನ್ನೂ ಹೆಚ್ಚಿನ ಮಾನ್ಯತೆ ದೊರಕಲಿ, ಈ ಮೂಲಕ ನಮ್ಮ ಜನಾಂಗದ ಕುಡಿಯು ಅಭಿವೃದ್ಧಿ ಹೊಂದಲಿ ಎಂದು ಆಶಿಸೋಣ.

ನಾಡುನುಡಿಗೆ ಜನಾಂಗದ ಕೊಡುಗೆ

ಮೈಸೂರಿನ ಕನ್ನೇಗೌಡ ಮೂಲತಃ ಗಂಗಡಕಾರ ಒಕ್ಕಲಿಗರ ಸಮುದಾಯಕ್ಕೆ ಸೇರಿದ ವೀರಾಗ್ರಣಿ. ಮೈಸೂರರಸರು ಮಾಗಡಿಯ ಮೇಲೆ ದಾಳಿ ಮಾಡಿ

ಗೆದ್ದುಕೊಂಡಾಗ ಅವರಿಗೆ ಸೆರೆಸಿಕ್ಕ. ನಂತರ ತನ್ನ ಶೌರ್ಯ ಪರಾಕ್ರಮಗಳಿಂದ ಮೈಸೂರಸರ ಕೃಪೆಗೆ ಪಾತ್ರನಾಗಿ ತನ್ನದೇ ಆದ ಪುರವನ್ನು ಕಟ್ಟಿದ ಅದೇ ಇಂದಿನ ಕನ್ನೇಗೌಡನ ಕೊಪ್ಪಲು. ಅದೇ ರೀತಿ ಫೌಜುದಾರ ಬೋರೇಗೌಡ ಮೈಸೂರಸರು ಕಷ್ಟಕ್ಕೆ ಸಿಕ್ಕಿದ್ದಾಗ ಮರಾಠರನ್ನು ಹಿಂದಕ್ಕಟ್ಟಿ ಮೈಸೂರು ಅರಸರ ಕೃಪೆಯಿಂದಾಗಿ ಫೌಜುದಾರನಾದ. ಕುಣಿಗಲ್ ಪ್ರಾಂತ್ಯವನ್ನು ತನ್ನ ಆಳ್ವಿಕೆಗೆ ಒಳಪಡಿಸಿದ. ಹೀಗೆ ಇವರೇ ಮುಂತಾದವರ ಶೌರ್ಯ ಪರಾಕ್ರಮದಿಂದ ಮೆರೆದ ವ್ಯಕ್ತಿಗಳನ್ನು ಇಂದು ನಾವು ಮರೆತಿದ್ದೇವೆ. ಇವರು ನಾಡು ನುಡಿಗೆ ಸಮುದಾಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಒಕ್ಕಲಿಗರು ಸಾಹಿತ್ಯ, ಕಲಾ ಪ್ರಕಾರಗಳಲ್ಲದೆ ನಾಡು ನುಡಿಗೂ ಸಾಕಷ್ಟು ಕೊಡುಗೆಯನ್ನು ನೀಡಿದ್ದಾರೆ. ಅರ್ಥಶಾಸ್ತ್ರ, ಆಡಳಿತ, ನ್ಯಾಯಾಡಳಿತ, ವೈದ್ಯಕೀಯ ಸಂಶೋಧನೆ ಇವೇ ಮುಂತಾದ ವಿಷಯಗಳಲ್ಲಿ ಛಾಪು ಮೂಡಿಸಿದ್ದಾರೆ. ಅವರುಗಳ ವ್ಯಕ್ತಿ ಚಿತ್ರಣ ಈ ಕೆಳಕಂಡಂತಿದೆ

ಫೌಜುಧಾರ್ ಶ್ರೀ ಬೋರೇಗೌಡ

ನಾಡು ನುಡಿಗೆ ಹಾಗೂ ನಾಡಿನ ರಕ್ಷಣೆಗೆ ಸಮುದಾಯದ ಸಾಕಷ್ಟು ಜನ ತಮ್ಮ ತನು ಮನ ಧನವನರ್ಪಿಸಿದ ಉದಾಹರಣೆ ಇದೆ. ಅಂತಹವರಲ್ಲಿ ಫೌಜುಧಾರ್ ಬೋರೇಗೌಡರೂ ಒಬ್ಬರು. ಬೋರೇಗೌಡರು 1777ರಲ್ಲಿ ಪಾರುಪತ್ತೇಗಾರರಾಗಿ ನಂತರ ಫೌಜುದಾರರಾಗಿ 1828ರ ವರೆವಿಗೂ ಸುಮಾರು ಐವತ್ತಕ್ಕೂ ಹೆಚ್ಚು ವರ್ಷಗಳ ಕಾಲ ಮೈಸೂರಸರ ಆಡಳಿತದ ಕಾಲದಲ್ಲಿ ನಾಡಿನ ರಕ್ಷಣೆಗೆ ನಿಂತು. ಮರಾಠರನ್ನು ಹಿಮ್ಮೆಟಿಸಿದುದೇ ಅಲ್ಲದೆ ಮಲೆನಾಡಿನ ಕಂದಾಯವನ್ನು ವಸೂಲಿ ಮಾಡಿಕೊಟ್ಟುದೇ ಅಲ್ಲದೆ ಅಲ್ಲಿನ ಜನ ಮಹಾರಾಜರಿಗೆ ವಿಧೇಯರಾಗಿರುವಂತೆ ಮಾಡಿದ್ದು ಬೋರೇಗೌಡರ ಸಾಧನೆಗಳಲ್ಲೊಂದಾಗಿದೆ.

ಬೋರೇಗೌಡರ ತಂದೆ ಮಂಚೇಗೌಡರು ಮೂಲತಃ ತುಮಕೂರು ಜಿಲ್ಲೆ ಗುಬ್ಬಿ ಸಮೀಪದ ಹೊನ್ನವಳ್ಳಿಯವರು. ಬೋರೇಗೌಡರು 1752ರಲ್ಲಿ ಜನಿಸಿರ–ಬಹುದೆಂದು ಹೇಳಬಹುದು. ಆಳರಸರನ್ನು ಮೂಲೆಗೆ ತಳ್ಳಿ ಹೈದರಾಲಿಯು ಅಧಿಕಾರ ಗ್ರಹಣ ಮಾಡಿ ಆಡಳಿತ ನಡೆಸುತ್ತಿದ್ದ ಕಾಲವದು. ದಕ್ಷತೆ ಮತ್ತು ಪ್ರಾಮಾಣಿಕತೆಗೆ ಹೆಸರಾದ ಬೋರೇಗೌಡನನ್ನು ಮೈಸೂರು ಸರ್ಕಾರ ಗುಬ್ಬಿಯ ಪಾರುಪತ್ತೇಗಾರ–ನನ್ನಾಗಿ ನೇಮಿಸಿತು. ಈ ಹುದ್ದೆಯು ಹೋಬಳಿದಾರ ಅಥವಾ ಶಿರಸ್ತೆದಾರ್ ಹುದ್ದೆಗೆ ಸರಿಸಮನಾದದುದಾಗಿತ್ತು. ಅಜಾನುಬಾಹುವಾಗಿದ್ದ ಬೋರೇಗೌಡರು ಪಾಳೆಯಗಾರ–ರಂತೆ ಕಾಣುತ್ತಿದ್ದರು. ದಕ್ಷತೆಗೆ ಹೆಸರಾದ ಬೋರೇಗೌಡರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರಖ್ಯಾತರಾಗಿದ್ದರು. 1799ರಲ್ಲಿ ಟಿಪ್ಪುಸುಲ್ತಾನನು ನಾಲ್ಕನೆಯ ಮೈಸೂರು

ಯುದ್ಧದಲ್ಲಿ ಮರಣ ಹೊಂದಲಾಗಿ ಮೈಸೂರರಸರು ಮತ್ತು ಬ್ರಿಟೀಷರು ಹಂಚಿಕೊಂಡರು (ರೀಜೆಂಟರಾಗಿ ಮತ್ತು ಕಮಿಷನರ್‌ಗಳಾಗಿ) ಅಂದಿನ ಮೈಸೂರು ಸರ್ಕಾರ ಬೋರೇಗೌಡರನ್ನು ಕಡಬ ತಾಲ್ಲೂಕಿನ ಅಮಲ್ದಾರ್ ಪದವಿಗೇರಿಸಿದರು. ಗೌಡರು ಕೆರೆ, ಕುಂಟೆ, ಕಾಲುವೆಗಳನ್ನು ಕಲ್ಯಾಣಗಳನ್ನು ತೋಡಿಸಿದರು ಹಾಗೂ ಕಾಡನ್ನು ಕಡಿದು ನಾಡನ್ನು ಕಟ್ಟಿದರು. ಕಾಲಕಾಲಕ್ಕೆ ಆಳರಸರಿಗೆ ತಂದೆಯ ವಸೂಲಿ ಮಾಡಿಕೊಡುತ್ತಿದ್ದುದೇ ಅಲ್ಲದೆ ತಮ್ಮ ಪ್ರದೇಶದಲ್ಲಿ ಶಾಂತಿ ಸುಭಿಕ್ಷೆ ನೆಲೆಸುವಂತೆ ಮಾಡಿದರು. ಅಂದಿನ ಸರ್ಕಾರ ಗೌಡರನ್ನು ಮಾಗಡಿ ತಾಲ್ಲೂಕು, ಗೌರಿಬಿದನೂರು ಹಾಗೂ ಚಿಂತಾಮಣಿ ತಾಲ್ಲೂಕುಗಳಿಗೆ ಅಮಲ್ದಾರರನ್ನಾಗಿ ನೇಮಿಸಿತು. ಗೌಡರು ಹೊದಕಡೆಯಲ್ಲಾ ಜನೋಪಯೋಗಿ ಕೆಲಸ ಮಾಡಿ 'ಸೈ' ಎನಿಸಿಕೊಂಡರು. ಆದರೂ ಗೌಡರಲ್ಲಿ ತನಗೆ ಅರ್ಹ ಹುದ್ದೆ ಸಿಗಲಿಲ್ಲವಲ್ಲ ಎಂಬ ಕೊರತೆ ಎದ್ದು ಕಾಣುತ್ತಿತ್ತು. ಕೊನೆಗೆ 1822ರಲ್ಲಿ ಅಮಲ್ದಾರ ಹುದ್ದೆಗೆ ರಾಜೀನಾಮೆ ನೀಡಿ ಮೈಸೂರಿಗೆ ನಡೆದರು.

ಅಂದು ಮೈಸೂರಿನ ರೆಸಿಡೆಂಟರಾಗಿದ್ದ ಎ.ಹೆಚ್. ಕೋಲ್‌ರವರನ್ನು ಹಾಗೂ ಆಳರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯ (1811–1831)ರನ್ನು ಭೇಟಿ ಮಾಡಿ ತನಗೆ ಉನ್ನತ ಹುದ್ದೆಯನ್ನು ದಯಪಾಲಿಸಬೇಕೆಂದು ಕೇಳಿಕೊಂಡರು. ಫೌಜುದಾರ್ ಹುದ್ದೆಯು ಸಾಮಾನ್ಯ ಹುದ್ದೆಯಾಗಿರಲಿಲ್ಲ. ಅಂದು ರಾಜ್ಯವನ್ನು ಬೆಂಗಳೂರು, ಮಧುಗಿರಿ, ಚಿತ್ರದುರ್ಗ, ಅಷ್ಟಗ್ರಾಮ, ಮಂಜರಾಬಾದ್ ಮತ್ತು ನಗರಗಳೆಂದು ಐದು ಫೌಜುದಾರಿಗಳಾಗಿ ವಿಭಜಿಸಲಾಗಿತ್ತು. ಇವುಗಳಲ್ಲಿ ಒಟ್ಟು 125 ತಾಲ್ಲೂಕುಗಳಿದ್ದುವು. ಫೌಜುದಾರರು ದಿವಾನನ ಅಧೀನದಲ್ಲಿ ಕಾರ್ಯನಿರ್ವಹಿಸಬೇಕಿತ್ತು. 18 ಇಲಾಖೆಗಳು ದಿವಾನನ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದವು.

ಇದೇ ಸಮಯಕ್ಕೆ ರಾಜ್ಯದ ಗಡಿಭಾಗದಲ್ಲಿ ಪಿಂಡಾರಿಗಳು ಎಂಬ ದರೋಡೆ –ಕೋರರ ಉಪಟಳ ಹೆಚ್ಚಾಗಿತ್ತು. ಮರಾಠರು ಆಗಿಂದ್ದಾಗ್ಗೆ ಮೈಸೂರಿನ ಗಡಿಭಾಗಗಳ ಮೇಲೆ ದಾಳಿ ನಡೆಸುತ್ತಿದ್ದರು. ಮಲೆನಾಡಿನ ಮಂಜರಾಬಾದ್ ಪ್ರದೇಶದ ಜಮಿನ್ದಾರರು ಕಂದಾಯ ನೀಡದೆ ಬಾಕಿ ಉಳಿಸಿಕೊಂಡಿದ್ದರು. ಕಂಗಾಲಾಗಿದ್ದರು. ಇಷ್ಟೇ ಅಲ್ಲದೆ ರೀಜೆಂಟರಾಗಿದ್ದ ಎ.ಎಚ್. ಕೋಲ್ ಮತ್ತು ಅರಸರ ನಡುವೆ ವಿರಸ ತಲೆ ಎತ್ತುತ್ತಿತ್ತು. ಬೋರೇಗೌಡರು ಈ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲರೇನೂ ಎಂಬ ಆಸೆಯಿಂದ ಗೌಡರಿಗೆ ಮಲೆನಾಡು ಪ್ರದೇಶದಿಂದ ಬರಬೇಕಾಗಿದ್ದ ಕಂದಾಯದ ಬಾಕಿ ವಸೂಲಿಗೆ ನಿಯೋಜಿಸಿದರು. ತಮ್ಮ ಮೊಮ್ಮಗ ಹುಚ್ಚೇಗೌಡ–ನೊಂದಿಗೆ 200 ಸೈನಿಕರ ಒಂದು ಪಡೆಯನ್ನು ಕಟ್ಟಿಕೊಂಡು ಸಮರ್ಥವಾಗಿ ಮರಾಠರನ್ನು ಗಡಿಯಿಂದ ಹಿಂದಕ್ಕಟ್ಟಿದರು. ಮಲೆನಾಡಿನ ಜಮಿನ್ದಾರರೊಂದಿಗೆ ಸೌಹಾರ್ದಯುತಾಗಿ ವರ್ತಿಸಿ ಅವರು ಬಾಕಿ ಉಳಿಸಿಕೊಂಡಿದ್ದ ಕಂದಾಯವನ್ನು ಅರಸರಿಗೆ ತಂದೊಪ್ಪಿಸುವಂತೆ ಮಾಡಿದುದೇ ಅಲ್ಲದೇ ವಿದೇಯರಾಗಿರುವಂತೆ ಮಾಡಿದ ಕೀರ್ತಿ ಬೋರೇಗೌಡರಿಗೆ ಸಲ್ಲುತ್ತದೆ.

ಬೋರೇಗೌಡರ ಕೀರ್ತಿ ಎಲ್ಲೆಡೆ ಹಬ್ಬಿತು. ಮುಮ್ಮಡಿ ಕೃಷ್ಣರಾಜ ಒಡೆಯರು ಗೌಡರಿಗೆ ದೊಡ್ಡಭೂಚಕ್ರದಕೊಡೆ, ಚಿನ್ನದ ಕಂಠೀಹಾರ ಹಾಗೂ ಬೆಲೆಬಾಳುವ ಪಟ್ಟೆ ಪೀತಾಂಬರಗಳನ್ನು ನೀಡಿ ಗೌರವಿಸುದೇ ಅಲ್ಲದೇ ಮಂಜರಾಬಾದ್ (ಸಕಲೇಶಪುರ) ಪ್ರದೇಶಕ್ಕೆ ಫೌಜುದಾರನನ್ನಾಗಿ ನೇಮಿಸಿದರು. (ಫೌಜುದಾರ್ ಬೋರೇಗೌಡರು – ಎಂ.ಎಚ್. ನಾಗರಾಜು–2006, ತುಮಕೂರು. ಪು.–54)

ಫೌಜುದಾರರಾಗಿ ಬೋರೇಗೌಡರು

ಬೋರೇಗೌಡರು ತಮ್ಮ ಶಕ್ತಿ ಮತ್ತು ಯುಕ್ತಿಯಿಂದ ಆಳರಸರ ಮನವನು ಗೆದ್ದು ಉನ್ನತ ಹುದ್ದೆಗೇರಿದರು. 1823 ರಿಂದ 1928ರ ವರೆಗೆ ಮಂಜರಾಬಾದಿನ ಫೌಜುದಾರರಾಗಿ ಆಡಳಿತ ನಿರ್ವಹಿಸಿದರು. ರಾಜರಿಗೆ ಕಂದಾಯ ವಸೂಲಿ ಮಾಡಿಕೊಡುವುದು ಒಂದು ಕೆಲಸವಲ್ಲ ಜನರ ಕಲ್ಯಾಣವನ್ನು ನೋಡಿಕೊಳ್ಳುವುದು ತಮ್ಮ ಆದ್ಯ ಕರ್ತವ್ಯವೆಂದು ತಿಳಿದು ಜನಪರ ಕಾಳಜಿ ವಹಿಸಿದರು. ಹೊನ್ನವಳ್ಳಿಯ ಕೆರೆಯನ್ನು ನಿರ್ಮಿಸಿ ಜನ, ಜಾನುವಾರುಗಳಿಗೆ ಕುಡಿಯುವ ನೀರನ್ನು ಒದಗಿಸಿದುದೇ ಅಲ್ಲದೆ ವ್ಯವಸಾಯಕ್ಕೂ ಬಳಸಿಕೊಳ್ಳಲು ಅನುವು ಮಾಡಿಕೊಟ್ಟರು. ದೇವಾಲಯ –ಗಳನ್ನು ಜೀರ್ಣೋದ್ಧಾರ ಮಾಡಿದರು. ಮಾಗಡಿಯ ರಂಗನಾಥ ದೇವಾಲಯಕ್ಕೆ ನಡೆದುಕೊಳ್ಳುತ್ತಿದ್ದರು. ಗುಬ್ಬಿಯ ಹೊರ ಭಾಗದಲ್ಲಿ ಗೋಪಾಲ ಚೆನ್ನಬಸವೇಶ್ವರರ ಗದ್ದುಗೆಯು ಶಿಥಿಲವಾಗಿದ್ದು. ಅದನ್ನು ದುರಸ್ಥಿಗೊಳಿಸಿದರು. ಅದರ ಬಳಿ ಕಲ್ಯಾಣಿಯನ್ನು ಭಕ್ತಾದಿಗಳಿಗಾಗಿ ಛತ್ರಗಳನ್ನು ಅರವಂಟಿಕೆಗಳನ್ನು ನಿರ್ಮಿಸಿದರು. ಗೋಸಲ ಚನ್ನಬಸವೇಶ್ವರ ದೇವಾಲಯವು ಯಾತ್ರಾರ್ತಿಗಳಿಂದ ತುಂಬಿ ತುಳುವ ತೊಡಗಿದಂತೆ ಬೋರೇರೌಡರು ಹೆಸರೂ ಚಿರಸ್ಥಾಯಿಯಾಗಿ ಉಳಿಯಿತು. ಬೋರೇಗೌಡರು 1928ರಲ್ಲಿ ದೈವಾಧೀನರಾದರು. ಗೌಡರು ನಂಬಿದ್ದ ಹಾಗೂ ಕಟ್ಟಿಸಿದ ಗುಬ್ಬಿಯ ಗೋಸಲ ಚನ್ನಬಸವೇಶ್ವರ ದೇವಾಲಯದ ಮುಂಭಾಗಕ್ಕೆ ಸ್ವಲ್ಪ ದೂರದಲ್ಲಿ ಅವರ ದೇಹವನ್ನು ಸಮಾಧಿ ಮಾಡಲಾಯಿತು. ಸಮಾಧಿಯ ಮೇಲೆ ಶಿಖರವನ್ನು ನಿರ್ಮಿಸಿದ್ದಾರೆ. ಇಂದಿಗೂ ಚನ್ನಬಸವೇಶ್ವರ ಸ್ವಾಮಿ ಜಾತ್ರೆ ಹಾಗೂ ವಿಶೇಷವಾದ ಹಬ್ಬಹರಿದಿನಗಳಲ್ಲಿ ಗೌಡರ ಸಮಾಧಿಗೂ ಗೌರವ ಸಲ್ಲಿಸುತ್ತಾರೆ.

ದರೋಗ ಶ್ರೀ ಚಲುವಯ್ಯ



ಬಹುಶಃ ಮೈಸೂರು ಸಂಸ್ಥಾನವು ಭಾರತದ ಮಾದರಿ ಸಂಸ್ಥಾನಗಳಲ್ಲೊಂದು ಎಂಬ ಕೀರ್ತಿಗೆ ಪಾತ್ರರಾಗಲು ಹಾಗೂ ಮಹಾತ್ಮಾಗಾಂಧೀಜಿ ಯವರು ನಾಲ್ವಡಿ ಕೃಷ್ಣರಾಜ ಒಡೆಯರನ್ನು ರಾಜ ಋಷಿಗಳೆಂದು ಕರೆಯಲು ಅರಮನೆಯ ಒಳಗೆ, ಹೊರಗೆ ದಕ್ಷತೆಯಿಂದ

ಹಾಗೂ ನಿಸ್ವಾರ್ತತೆಯಿಂದ ಹಲವಾರು ಜನ ಸೇವೆ ಸಲ್ಲಿಸಿದ್ದಾರೆ. ಅಂತವರಲ್ಲಿ ದರೋಗ ಚಲುವಯ್ಯನವರ ನಿಸ್ವಾರ್ಥ ಸೇವೆಯನ್ನು ನೋಡೋಣ.

ಚಲುವಯ್ಯನವರು 1827ರಲ್ಲಿ ಜನಿಸಿದರು. ಇವರು ಮೂಲತಃ ಮಂಡ್ಯ ಜಿಲ್ಲೆ (ಆಗ ಇನ್ನೂ ಜಿಲ್ಲೆಯಾಗಿರಲಿಲ್ಲ) ಮಂಡ್ಯ ಕಸಬ ಮಲ್ಲಿಗೆರೆಯವರು ಕಾಲಾನಂತರ ಮೈಸೂರಿಗೆ ಬಂದು ನೆಲೆಸಿದರು. ವ್ಯವಸಾಯ ಮತ್ತು ಪಶುಸಂಗೋಪನೆ ಒಕ್ಕಲಿಂಗ ಕುಲಕಸುಬಾದುದರಿಂದ ಚಲುವಯ್ಯನವರಿಗೆ ಪಶುಸಂಗೋಪನೆಯಲ್ಲಿ ಅವರಿಗೆ ವಿಶೇಷವಾದ ಆಸಕ್ತಿ ಇದ್ದಿತು. ದನಕರುಗಳ ಪಾಲನೆ ಪೋಷಣೆ ಅವುಗಳಿಗೆ ಬರುವ ಹಾಗೂ ಬರಬಹುದಾದ ಖಾಯಿಲೆಗಳು ಚಲುವಯ್ಯನವರಿಗೆ ತಿಳಿದಿತ್ತು. ಅಜಾನುಬಾಹು ಶರೀರ, ಕಸೆ ಅಂಗಿ, ಪೇಟ, ಕಚ್ಚೆಪಂಚೆ, ಕೈಯ್ಯಲ್ಲಿ ಮಂಗಳಗಿರಿ ವಸ್ತ್ರ, ಹೆಗಲ ಮೇಲೆ ಆರು ಮೊಳದ ವಸ್ತ್ರ ಮಮತೆಯ ಉಕ್ಕುವ ಮುಖದಲ್ಲಿ ಎದ್ದು ಕಾಣುವ ಗಿರಿಜಾ ಮೀಸೆ, ಒಮ್ಮೆ ನೋಡಿದರೆ ಮರೆಯಲಾಗದ ವ್ಯಕ್ತಿ ಹಾಗೂ ವ್ಯಕ್ತಿತ್ವ. (ಮೈಸೂರು : ನೂರಿನ್ನೂರು ವರ್ಷಗಳ ಹಿಂದೆ, ನಂಜರಾಜ ಅರಸ್ – ಮೈಸೂರು 2007. ಪುಟ–159)

ಚಲುವಯ್ಯನವರು ಹಸುಕರೋಟಿಯ ದರೋಗನನ್ನಾಗಿ ಅಂದಿನ ಮಹಾರಾಜರು 1850ರಲ್ಲಿ ನೇಮಿಸಿದರು. ಅಲ್ಲಿಂದ 1912ರವರೆಗೆ ಸೇವೆ ಸಲ್ಲಿಸಿದರು.

ಅರಮನೆಯಲ್ಲಿ ಹಸು ಕರೋಟಿ, ಆನೆ ಕರೋಟಿ, ಕುದುರೆಗಳ ಕರೋಟಿ, ಇವೇ ಮುಂತಾದವುಗಳಿದ್ದವು. ಮೈಸೂರಸು ಅಮೃತ ಮಹಲ್ ತಳಿಗಳನ್ನು ಅಭಿವೃದ್ಧಿ ಪಡಿಸಿ, ಪೋಷಿಸಿ, ಬೆಳೆಸಿದ ಕೀರ್ತಿಗೆ ಪಾತ್ರರಾಗಿರುವ ವಿಚಾರ ಎಲ್ಲರಿಗೂ ತಿಳಿದ ವಿಚಾರವಾಗಿದೆ. ಹಸುಕರೋಟಿಯು ಕೋಟೆಯ ದಕ್ಷಿಣ ದಿಕ್ಕಿನಲ್ಲಿರುವ ವರಾಹಾ ದ್ವಾರದಿಂದ ಒಂದು ಫರ್ಲಾಂಗ್ ದೂರದಲ್ಲಿತ್ತು. ಹಸುಕರೋಟಿ ಎಂದರೆ ಚೌಕಾಕಾರದ ಕಟ್ಟಡ. ನಾಲ್ಕೂ ಕಡೆ ಒಂದೊಂದು ಹಸುವಿಗೂ ಒಂದೊಂದು ಪ್ರತ್ಯೇಕ ಕೋಣೆಯಂತ ಸ್ಥಳ. ಈ ಹಸುಗಳಲ್ಲೂ ವಿವಿಧ ಜಾತಿಗಳು. ಒಂದೊಂದು ಜಾತಿಯ ಹಸುಗಳು ಒಂದೊಂದು ಕಡೆ. ಕರುಗಳಿಗೇ ಬೇರೆ ಬೆಲೆ. ಸುಮಾರು ಇನ್ನೂರು ಹಸು ಕರುಗಳ ವಠಾರ ಇದು. ನಾಲ್ಕೂ ಕಡೆಯ ಒಪ್ಪಾರದ ನಡುವೆ ತುಂಬಾ ವಿಶಾಲವಾದ ಬಾನಿಗೆ ತೆರೆದುಕೊಂಡ ಅಂಗಳ. ಅಂಗಳದಲ್ಲಿ ಗೋಪಾಲಕೃಷ್ಣನ ಪುಟ್ಟ ಗುಡಿ. ಪ್ರತಿ ದಿನ ಸುಮಾರು ಮುನ್ನೂರು ನಾಲ್ಕು ನೂರು ಸೇರಿನಷ್ಟು ಹಾಲು ಕರೆಯಲಾಗುತ್ತಿತ್ತು. ಈ ಹಸುಗಳಿಂದ. ಹೀಗೆ ಕರೆದ ಮೊದಲ ಹಾಲಿನ ನೈವೇದ್ಯ ಗುಡಿಯ ಗೋಪಾಲಕೃಷ್ಣನಿಗೆ. ಪ್ರತಿ ದಿನ ಬೆಳಿಗ್ಗೆ ಸಂಜೆ ಹೀಗೆ ಎರಡೂ ಹೊತ್ತು ಸುಮಾರು ಇನ್ನೂರು ಮಕ್ಕಳ ಹಾಲು ಸ್ವೀಕರಿಸಲು ಬರುತ್ತಿದ್ದರು. ತಲಾ ಒಂದೊಂದು ಪಾವಿನಂತೆ ಹಾಲು ನೀಡಲಾಗುತ್ತಿತ್ತು. ಈ ಹಸುಕರುಗಳಿಗೆ ಆಹಾರ ಹಸಿಹುಲ್ಲು.

ಭತ್ತದ ಒಣಹುಲ್ಲು, ಹುರುಳಿ. ಪ್ರತಿದಿನ ಎರಡು ಪಲ್ಲ. ಅಂದರೆ ಇನ್ನೂರು ಸೇರು ಹುರುಳಿ ಬೇಯಿಸಲಾಗುತ್ತಿತ್ತು. ಒಂದು ಪಲ್ಲ ಹುರುಳಿಯನ್ನು ರುಬ್ಬಲಾಗುತ್ತಿತ್ತು. ಇದಲ್ಲದೆ ತೌಡು, ಹಿಂಡಿ, ಈ ಹಸುಕರುಗಳ ಸೇವೆಗೆಂದೇ ಇದ್ದ ಆಳುಗಳ ಸಂಖ್ಯೆ ಸುಮಾರು ಅರವತ್ತು. ಒಂದೇ ಹಸುವಿನ ಎರಡು ಕರುಗಳು ಕರು ಹಾಕಿ ಏಕಕಾಲದಲ್ಲಿ ಹಾಲು ಕೊಡುತ್ತಿದ್ದರೆ ಆ ಅಕ್ಕತಂಗಿಯರ ಹಾಲನ್ನು ಬೆರಸಿ ಕುಡಿದರೆ ನಾಲ್ಕರ ಛಳಿ ಹೋಗುತ್ತದೆ ಎಂದು ಜನರಲ್ಲಿ ನಂಬಿಕೆ. ಇಂಥ ಆರೆಂಟು ಜೊತೆ ಗೋವುಗಳನ್ನು ಯಾವಾಗಲೂ ಕರೋಟಿಯಲ್ಲಿ ಕಟ್ಟಿರುತ್ತಿದ್ದರು. ಆ ಕರೋಟಿಯ ಮೇಲ್ವಿಚಾರಣೆಗೆ ಒಬ್ಬ ಗುಮಾಸ್ತ ಓರ್ವ ದರೋಗನನ್ನು ನೇಮಿಸುತ್ತಿದ್ದರು.

ಚಲುವಯ್ಯನವರ ಪ್ರಾಮಾಣಿಕತೆ – ಚಲುವಯ್ಯನವರು ದಕ್ಷತೆಯಿಂದ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಇಂಥ ಅಧಿಕಾರಿಗಳಿಗೂ ಅರಮನೆಗೂ ಇದ್ದ ಸಂಬಂಧ, ನಂಬಿಕೆ ಅಪಾರ. ನಂಬುಗೆಯ ತಳಹದಿಯ ಮೇಲಷ್ಟೇ ಯಾವುದೇ ನಿರ್ಮಾಣ ಸಾಧ್ಯ. ಸಂಶಯ ಬಂದರೆ ನೇರ ವಿಚಾರಣೆ, ಸಂಶಯ ನಿವಾರಣೆ, ಇದಕ್ಕೊಂದು ಉದಾಹರಣೆ :

ಮಹಾರಾಣಿ, ರಾಜಮಾತೆ, ವಾಣೀವಿಲಾಸ ಸನ್ನಿಧಾನದವರು ರಿಜೇಂಟ್ ಆಗಿದ್ದ ದಿನಗಳು. ಒಮ್ಮೆ ಅರಮನೆಗೆ ದೂರು ಹೋಯಿತು. ಹಸು ಕರೋಟಿಯ ಚೆಲುನಯ್ಯ ಹಾಲಿನ ಹಂಚಿಕೆಯನ್ನು ಸರಿಯಾಗಿ ನಿಭಾಯಿಸ್ತಿಲ್ಲ. ತಮಗೆ ಬೇಕು ಬೇಕಾದವರಿಗೆ ಹೆಚ್ಚೆಚ್ಚು ಹಾಲು ಕೊಟ್ಟು ಬಿಡ್ತಾರೆ ಹಾಗೂ ತಮ್ಮ ಮನೆಗೆ ಹಾಲು ಕೊಂಡೊಯ್ಯುತ್ತಾರೆ ಇತ್ಯಾದಿ. ರಾಜಮಾತೆ ನಂಬಲಿಲ್ಲ. ಆದರೂ ಒತ್ತಾಯ. ಕೊನೆಗೆ ಒಂದು ದಿನ ಅವರು ಕರೋಟಿಗೆ ದಯಮಾಡಿಸಿದರು. ಬಂದರೂ ಚೆಲುವಯ್ಯನವರನ್ನ ನೇರವಾಗಿ ಪ್ರಶ್ನಿಸಲು ರಾಜಮಾತೆಗೂ ಧೈರ್ಯವಿಲ್ಲ. ಅದು ಇದು ಮಾತಾಡುತ್ತಾ ಬಳಸು ಬಳಸಾಗಿ ಮುಖ್ಯ ವಿಷಯವನ್ನು ಎಳೆದು ತಂದರು. ವಿಷಯ ಅರ್ಥವಾದಾಗ ಚೆಲುವಯ್ಯ ಬಳಸು ದಾರಿ ಹಿಡಿಯದೆ ನೇರವಾಗಿ ಅಂದರು. ಪ್ರಭುಗಳ ಚಿತ್ತದ ಅಭಿಪ್ರಾಯ ಗೊತ್ತಾಯ್ತು. ನಾನು ನಮ್ಮ ಮನೆಗೆ ಒಂದು ಹನಿ ಹಾಲನ್ನೂ ತಕೊಂಡು ಹೋಗ್ತಾ ಇಲ್ಲ. ಯಾರು ಬಂದು ಕೇಳಿದರೂ ಇಲ್ಲಾಂತ ಮಾತ್ರ ಅನ್ನೋಲ್ಲ. ಅದು ನಿಜ. ಯಾಕೆಂದರೆ ಯಾರೇ ಅರಮನೆಗೆ ಬಂದರೂ ಬರಿಗೈಲಿ ಹೋಗೋದು ಗೌರವ –ವಲ್ಲ. ಅಲ್ಲದೆ ನಾವು ಊಳಿಗದವರು ಏನೇ ಮಾಡಿದರೂ ತಮ್ಮಗಳ ಶ್ರೇಯಸ್ಸಿಗೇ ಹೊರತು ಬೇರೆ ಏನೂ ಅಲ್ಲ ಎಂಬ ಅರ್ಥದ ನೇರ ನುಡಿಯ ಮಾತುಗಳು! ರಾಜಮಾತೆ ಏನನ್ನೂ ಮಾತಾಡುವ ಸ್ಥಿತಿಯಲ್ಲಿರಲಿಲ್ಲ. ಸಂಶಯ ನಿವಾರಣೆಯಾಗಿತ್ತು. ಚೆಲುವಯ್ಯನವರ ಮೇಲಿದ್ದ ಗೌರವ ಮತ್ತು ವಿಶ್ವಾಸ ಮತ್ತಷ್ಟು ವೃದ್ಧಿಯಾಗಿತ್ತು. ಸ್ವಾಮಿನಿಷ್ಠರು ನೀವು! ನಿಮ್ಮಲ್ಲಿ ನಮಗೆ ಅಪಾರ ನಂಬಿಕೆಯಿದೆ. ಅರಮನೆಯ ಯಶಸ್ಸು

ನಿಮ್ಮಿಂದ, ನಿಮ್ಮಂಥವರಿಂದ. ನಿಮಗೆ ಯಾವುದು ಒಳ್ಳೆಯದು ಅಂತ ಕಾಣುತ್ತೋ ನೀವು ಹಾಗೆ ಮಾಡಬಹುದು ಎಂದು ರಾಜಮಾತೆ ವಾಣೀವಿಲಾಸ ಸನ್ನಿಧಾನ ಹಿಂದಿರುಗಿದರು.

1912ರಲ್ಲಿ ದರೋಗ ಚಲವಯ್ಯನವರು ಶಿವೈಕ್ಯರಾದಾಗ, ಮೈಸರು ಅರಸರು ಚಲುವಯ್ಯನವರ ತೈಲವರ್ಣ ಚಿತ್ರವನ್ನು ಬರೆಸಿ ಜಗನ್ಮೋಹನ ಅರಮನೆಯಲ್ಲಿ ತೂಗು ಹಾಕಿದರು.

ರಾವ್ ಬಹದ್ದೂರ್ ಶ್ರೀ ಹೆಚ್.ಸಿ. ಜವರಾಯ



ಕಳೆದ ಶತಮಾನದ ಮೊದಲರ್ಧ ಭಾಗದಲ್ಲಿ ಅಸ್ತಿತ್ವದಲ್ಲಿದ್ದ ಮೈಸೂರು ರಾಜ್ಯವು ಅನೇಕ ವಿಶೇಷತೆ-ಗಳನ್ನು ಹೊಂದಿತ್ತು. ಆಳರಸರಾಗಿದ್ದ ಬ್ರಿಟೀಷರ ಅಧೀನ ರಾಜ್ಯವಾಗಿದ್ದ ಮೈಸೂರಿನ ದೊರೆಗಳು ತಮ್ಮ ಪ್ರಗತಿಪರ ನೀತಿಯಿಂದ ರಾಜ್ಯವನ್ನು ಮಾದರಿ ರಾಜ್ಯವನ್ನಾಗಿಸಿದ್ದರು. ಉನ್ನತ ಧ್ಯೇಯಗಳನ್ನು ಹೊಂದಿದ್ದ ದಿವಾನರುಗಳು ತಮ್ಮ ದೂರಾಲೋಚನೆ-ಯಿಂದ ರಾಜ್ಯದಲ್ಲಿ ಕೈಗಾರಿಕೆ, ಕೃಷಿ, ನೀರಾವರಿಗಳ ಬೆಳವಣಿಗೆಗೆ ಕಾರಣಕರ್ತರಾಗಿದ್ದರು. ಪ್ರಗತಿಪರರಾಗಿದ್ದ ಮಹಾರಾಜರು, ಆದರ್ಶವಾದಿಗಳಾಗಿದ್ದ ದಿವಾನರುಗಳ ಯೋಜನೆಗಳಿಗೆ ಮೂರ್ತಸ್ವರೂಪ ನೀಡಲು ಅಹರ್ನಿಶಿ ದುಡಿದ ಅಧಿಕಾರಿಗಳಿದ್ದುದು ರಾಜ್ಯದ ಅದೃಷ್ಟ. ಈ ರಾಷ್ಟ್ರ ಕಂಡ ದಕ್ಷ ಅಧಿಕಾರಿಗಳಲ್ಲಿ ಮೊದಲಿಗರು. ಸಸ್ಯೋದ್ಯಾನಗಳು ಹಾಗೂ ಬೆಳವಣಿಗೆಗೆ ಕಾರಣವಾಗಿ, ತೋಟಗಾರಿಕೆಯನ್ನು ಅಭಿವೃದ್ಧಿ ಗೊಳಿಸಿದ ಕೀರ್ತಿಗೆ ಶ್ರೀ ಹೆಚ್.ಸಿ. ಜವರಾಯರವರು ಭಾಜನರಾಗಿದ್ದಾರೆ.

ಜವರಾಯರ ಹೆಸರು ರಾಜ್ಯದ ಸಸ್ಯಕಾಶಿ ಲಾಲ್‌ಬಾಗಿನೊಂದಿಗೆ ಹಾಸುಹೊಕ್ಕಾಗಿದೆ. ತಮ್ಮ ಸೇವೆಯ ದೀರ್ಘಕಾಲ ಲಾಲ್‌ಬಾಗಿನಲ್ಲಿ ಸೇವೆ ಸಲ್ಲಿಸಿ, ಬೆಂಗಳೂರು ಮತ್ತು ಮೈಸೂರುಗಳು ಉದ್ಯಾನ ನಗರಿಗಳೆಂಬ ಕೀರ್ತಿ ಪಡೆಯಲು ಕಾರಣರಾದರು. ತಮ್ಮ ನಿಷ್ಕಳಂಕ ಸೇವೆಯಿಂದ ರಾಜ್ಯ ಹಾಗೂ ರಾಷ್ಟ್ರಮಟ್ಟದ ಉನ್ನತ ಹುದ್ದೆಗಳನ್ನಲಂಕರಿಸಿದ್ದ ಜವರಾಯರ ಸ್ಮರಣೆ ಇಂದಿನ ಅಧಿಕಾರವರ್ಗಕ್ಕೆ ಆದರ್ಶವಾಗಬಲ್ಲದು.

ಹೆಚ್.ಸಿ. ಜವರಾಯ ಮಡಿಕೇರಿಯ ಜಿಲ್ಲಾ ಸಬ್ ಜಡ್ಜ್ ಆಗಿದ್ದ ಹಿರೇಹಳ್ಳಿ ಚೆನ್ನಯ್ಯನವರ ಹಿರಿಯ ಮಗ. ಇವರು 1889ರಲ್ಲಿ ಜನಿಸಿದರು.

ಮಡಿಕೇರಿಯಲ್ಲಿ ತಮ್ಮ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮುಗಿಸಿ, ಮೆಟ್ರಿಕ್ ಪಾಸಾದ ಜವರಾಯರವರು ಇಂಟರ್ ಮೀಡಿಯೆಟ್‌ಗೆ ಬೆಂಗಳೂರಿನ ಯೂರೋಪಿಯನ್ ಸೆಂಟ್ ಜೋಸೆಫ್ ಕಾಲೇಜ್ ಅನ್ನು ಸೇರಿದರು. (ಅಂದು ಬ್ರಿಟಿಷ್ ಸಂಜಾತ ಮಕ್ಕಳಿಗೆ ಮಾತ್ರ ಪ್ರವೇಶಾವಕಾಶವಿತ್ತು. ಆದರೆ ಇವರ ತಂದೆಯವರಾದ ಚನ್ನಯ್ಯನವರು ಮಡಿಕೇರಿಯ ನ್ಯಾಯಾಧೀಶರಾಗಿದ್ದುದರಿಂದ ಇವರಿಗೆ ಪ್ರವೇಶಾವಕಾಶ ದೊರೆಯಿತು.) ನಂತರ ಕೊಯಮತ್ತೂರಿನ ಕೃಷಿ ಕಾಲೇಜಿನಿಂದ ಕೃಷಿ ಪದವೀಧರರಾದರು. ತಮ್ಮ ಪದವಿಯ ನಂತರ 1913 ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಆಗಿ ತಮ್ಮ ವೃತ್ತಿಯನ್ನು ಆರಂಭಿಸಿದರು. ಲಾಲ್‌ಬಾಗ್ ರಾಜ್ಯದ ತೋಟಗಾರಿಕೆಯ ಕೇಂದ್ರವಾಗಿದ್ದು, ರಾಜ್ಯದ ಪ್ರತಿಷ್ಠೆಯ ಸಂಕೇತವಾಗಿತ್ತು. ಯೂರೋಪಿಯನ್ ತೋಟಗಾರಿಕೆ ತಂತ್ರಜ್ಞರಾಗಿದ್ದ ಸರ್ ಜಾನ್ ಕ್ಯಾಮರಾನ್ ಜಿ.ಹೆಚ್. ಕ್ರುಂಬಿಗಲ್ ರಂತಹ ಪರಿಣಿತರ ಕೆಳಗೆ ತಮ್ಮ ಸೇವೆಯನ್ನಾರಂಭಿಸಿದ ಜವರಾಯರು, ತಮ್ಮ ದಕ್ಷತೆಯಿಂದ ಕೇವಲ ಒಂದು ವರ್ಷದೊಳಗೆ ಓವರ್ ಸಿನಿಯರ್ ಆಗಿ ಬಡ್ತಿ ಹೊಂದಿದರು.

ಜವರಾಯರ ಸೇವೆಯನ್ನು ಗಮನಿಸಿದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1914ರಲ್ಲಿ ಅವರನ್ನು ಮೈಸೂರಿಗೆ ಕರೆಸಿಕೊಂಡರು. ಜವರಾಯರನ್ನು ಅರಮನೆ ತೋಟಗಳ ಮುಖ್ಯಸ್ಥರನ್ನಾಗಿ ಮಾಡಿದರು. ಮೈಸೂರಿನ ಉದ್ಯಾನಗಳ ಬೆಳವಣಿಗೆಗೆ ಹಾಗೂ ಅರಮನೆ ತೋಟಗಳ ಮೇಲ್ವಿಚಾರಣೆಯಂತಹ ಜವಾಬ್ದಾರಿಯನ್ನು ಹೊತ್ತ ಜವರಾಯರು, ಮೈಸೂರಿನಲ್ಲಿದ್ದ ಉದ್ಯಾನಗಳನ್ನು ನವೀಕರಿಸಿ, ರಸ್ತೆಯ ಎರಡು ಕಡೆಗಳಲ್ಲಿ ಸಾಲು ಮರಗಳನ್ನು ನಡೆಸಿದರು. ಇವರ ಮೇಲ್ವಿಚಾರಣೆಯಲ್ಲಿ ಮಧುವನ, ಲಲಿತಾದ್ರಿ ತೋಟಗಳು ಹೆಚ್ಚು ಲಾಭದಾಯಕ -ವಾದವು. ಇವರ ಕಾರ್ಯವು ಮಹಾರಾಜರ ಮೆಚ್ಚುಗೆ ಪಡೆಯಿತು.

1916ರಲ್ಲಿ ಬೆಂಗಳೂರಿಗೆ ಹಿಂತಿರುಗಿದ ಜವರಾಯರು ಲಾಲ್‌ಬಾಗಿನ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರಾದರು. ಕ್ರುಂಬಿಗಲ್‌ರ ನೇತೃತ್ವದಲ್ಲಿ ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್ ತೋಟಗಳ ಅಭಿವೃದ್ಧಿಗಾಗಿ ಬಿಡುವಿಲ್ಲದೆ ದುಡಿದರು. ಇಂತಹ ಸನ್ನಿವೇಶದಲ್ಲಿ ಅನೀರೀಕ್ಷಿತ ಬೆಳವಣಿಗೆಯೊಂದು ನಡೆಯಿತು. ಮೊದಲ ಮಹಾಯುದ್ಧದ (1914–18) ಸಮಯದಲ್ಲಿ ಜರ್ಮನಿ ಮತ್ತು ಇಂಗ್ಲೆಂಡ್ ವಿರೋಧಿ ಬಣಗಳಲ್ಲಿದ್ದುದರಿಂದ ಭಾರತದಲ್ಲಿ ಪ್ರಮುಖ ಹುದ್ದೆಯಲ್ಲಿದ್ದ ಜರ್ಮನಿಯವರನ್ನು ಕೆಲಸದಿಂದ ತೆಗೆಯಲಾಯಿತು. ಲಾಲ್‌ಬಾಗಿನ ಸೂಪರಿಂಟೆಂಡೆಂಟ್ ಆಗಿದ್ದ ಕ್ರುಂಬಿಗಲ್‌ರ (ಜರ್ಮನ್ ಸಂಜಾತ) ವಿಷಯದಲ್ಲೂ ಬ್ರಿಟಿಷರಿಗೆ ಸಂಶಯ. ಆದರೆ ಪ್ರಖ್ಯಾತ ತೋಟಗಾರಿಕಾ ತಜ್ಞರಾಗಿದ್ದ ಇವರನ್ನು ಕಳುಹಿಸುವುದು ಮಹಾರಾಜರಿಗೆ

ಇಷ್ಟವಿರಲಿಲ್ಲ. ಆದರೂ ಬ್ರಿಟೀಷರ ಒತ್ತಡದಿಂದ ಮಹಾರಾಜರು ಇವರನ್ನು ಊಟಿಯಲ್ಲಿ ನಾಲ್ಕು ವರ್ಷಗಳ ಕಾಲ ಗೃಹಬಂಧನದಲ್ಲಿರಿಸಿದ್ದರು. ಆಗ ತೆರವಾಗಿದ್ದ ಸೂಪರಿಂಟೆಂಡೆಂಟ್ ಹುದ್ದೆಗೆ ತಾತ್ಕಾಲಿಕವಾಗಿ ಜವರಾಯರನ್ನು ನೇಮಿಸಲಾಯಿತು. ಹೀಗೆ ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡ ಹೊಣೆಗಾರಿಕೆ ಜವರಾಯರಿಗೆ ದೊರೆಯಿತು.

ನಾಲ್ಕು ವರ್ಷಗಳ ಕಾಲ ಈ ಜವಾಬ್ದಾರಿಯನ್ನು ಹೊತ್ತಿದ್ದ ಜವರಾಯರು ತಮ್ಮ ಮೇಲಧಿಕಾರಿಯ ಪ್ರತಿಷ್ಠೆಗೆ ಕುಂದು ಬರದಂತೆ ಕಾರ್ಯ ನಿರ್ವಹಿಸಿದರು. ಲಾಲ್‌ಬಾಗನ್ನು ತೋಟಗಾರಿಕಾ ಸಂಶೋಧನೆಯ ಕೇಂದ್ರವಾಗುವಂತೆ ಮಾಡಿ ಬೆಂಗಳೂರು ಮತ್ತು ಮೈಸೂರಿನ ಉದ್ಯಾನಗಳ ಸೌಂದರ್ಯೀಕರಣಕ್ಕೆ ಗಮನ ನೀಡಿದರು. 1922ರಲ್ಲಿ ಹೆಚ್ಚಿನ ತರಬೇತಿಗಾಗಿ ಜವರಾಯರು ಇಂಗ್ಲೆಂಡಿನ 'ಕ್ಯೂ ಬಟಾನಿಕಲ್ ಗಾರ್ಡನ್' (Kew Royal Botanic Garden) ಗೆ ತೆರಳಿದರು. ಕ್ಯೂ ಗಾರ್ಡನ್ ವಿಶ್ವವಿಖ್ಯಾತವಾದ ಬಟಾನಿಕಲ್ ಕೇಂದ್ರವಾಗಿದ್ದು, ಜವರಾಯರು ತೋಟಗಾರಿಕೆಯಲ್ಲಿ ತಮ್ಮ ಪರಿಣಿತಿಯನ್ನು ಪಕ್ವಗೊಳಿಸುವ ಸಲುವಾಗಿ ಹಾಗೂ ತಮ್ಮ ಜ್ಞಾನದಾಹವನ್ನು ತಣಿಸಿಕೊಳ್ಳಲು ತಮ್ಮ ತರಬೇತಿಯ ಸಂದರ್ಭವನ್ನು ಉಪಯೋಗಿಸಿಕೊಂಡರು. ಒಂದು ವರ್ಷದ ತರಬೇತಿಯ ನಂತರ ಜವರಾಯರು "ಫೆಲೋ ಆಫ್ ರಾಯಲ್ ಸೊಸೈಟಿ ಆಫ್ ಹಾರ್ಟಿಕಲ್ಚರ್" ಪದವಿಯನ್ನು ಪಡೆದರು. ರಾಯಲ್ ಸೊಸೈಟಿ ಆಫ್ ಹಾರ್ಟಿಕಲ್ಚರ್‌ನ ಸದಸ್ಯತ್ವ ಪಡೆದ ಪ್ರಥಮ ಭಾರತೀಯರೆಂಬ ಹೆಮ್ಮೆ ಇವರದು. ಹೀಗಾಗಿ ಅವರಿಗೆ ವಿಶ್ವದ ಪ್ರಖ್ಯಾತ ತೋಟಗಾರಿಕಾ ತಜ್ಞರಲ್ಲಿ ಒಬ್ಬರೆಂಬ ಮಾನ್ಯತೆ ದೊರೆಯಿತು. ಜವರಾಯರು ಖ್ಯಾತ ತಜ್ಞರೊಂದಿಗೆ ಸಂಪರ್ಕ ಪಡೆದುಕೊಂಡಿದ್ದಲ್ಲದೇ ಅಂತರರಾಷ್ಟ್ರೀಯ ಮಟ್ಟದ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು.

ಇವರ ಕಾರ್ಯಶೈಲಿಯನ್ನು ಬಹುವಾಗಿ ಮೆಚ್ಚಿಕೊಂಡಿದ್ದ ಮಹಾರಾಜರು ಕ್ರುಂಬಿಗಲ್‌ರ ಬಿಡುಗಡೆ ನಂತರ 1922ರಲ್ಲಿ ಜವರಾಯರನ್ನು ಮತ್ತೊಮ್ಮೆ ಮೈಸೂರಿಗೆ ಕರೆಯಿಸಿಕೊಂಡರು. ರಾಜಧಾನಿಯ ಪ್ರತಿಷ್ಠೆಗನುಗುಣವಾಗಿ ಇಲ್ಲಿನ ಉದ್ಯಾನಗಳನ್ನು ರೂಪುಗೊಳಿಸುವ ಜವಾಬ್ದಾರಿ ಜವರಾಯರ ಹೆಗಲಿಗೆ ಬಿದ್ದಿತು. ಜೊತೆಗೆ ಮಹಾರಾಜರ ಸದಭಿರುಚಿ, ದಿವಾನ ಮಿರ್ಜಾರವರು ಉದ್ಯಾನವನದ ಬಗ್ಗೆ ಹೊಂದಿದ್ದ ಅತೀವ ಆಸಕ್ತಿ ಜವರಾಯರಿಗೆ ಸವಾಲಾಗಿತ್ತು. ಅವರಿಬ್ಬರ ಕನಸುಗಳಿಗೆ ಮೂರ್ತರೂಪ ಕೊಟ್ಟು ಅವರ ಅಭಿಲಾಷೆಗಳಿಗೆ ತಕ್ಕಂತೆ ಕಾರ್ಯ ನಿರ್ವಹಿಸಬೇಕಿತ್ತು.

ಮೈಸೂರಿನಲ್ಲಿದ್ದಂತಹ ಸಮಯದಲ್ಲಿ ಜವರಾಯರು ದೊಡ್ಡ ಸಾಧನೆಯನ್ನು ಮಾಡಿದರೆನ್ನಬಹುದು. ಇಲ್ಲಿದ್ದ ಉದ್ಯಾನಗಳನ್ನು ಚೇತನಗೊಳಿಸಿ, ಸುಂದರ

ಕಾರಂಜಿಗಳನ್ನು ಹೊಂದಿರುವ ಹೊಸ ಉದ್ಯಾನಗಳನ್ನು ಸ್ಥಾಪಿಸಿದರು. ರಸ್ತೆಯ ಬದಿಗಳಲ್ಲಿ ತರ ತರಹದ ಹೂ ಬಿಡುವ ಮರಗಳು ಬೆಳೆಯುವಂತೆ ಮಾಡಿ ಮೈಸೂರು ಸದಾಕಾಲ ತನ್ನ ಆಕರ್ಷಣೆಯನ್ನು ಉಳಿಸಿಕೊಳ್ಳುವಂತೆ ಮಾಡಿದರು. ದಸರಾ ಸಮಯದಲ್ಲಿ ಈ ರಸ್ತೆಗಳು ಬಣ್ಣ ಬಣ್ಣದ ಹೂಗೊಂಚಲುಗಳಿಂದ ಅಲಂಕೃತ –ಗೊಂಡಿರುತ್ತಿದ್ದವು. ಹೀಗಾಗಿ ಸಂಜೆಯ ವೇಳೆ ಮೈಸೂರು ದೀಪಾಲಂಕಾರದಿಂದ, ಹಗಲು ಹೊತ್ತು ಸುಂದರ ಹೂಗೊಂಚಲುಗಳಿಂದ ಅಲಂಕೃತಗೊಂಡು ಪ್ರವಾಸಿಗರಿಗೆ ಅದ್ಭುತ ಅನುಭವವನ್ನುಂಟು ಮಾಡುತ್ತಿತ್ತು.

ಮೈಸೂರಿನ ಅರಮನೆಯ ತೋಟಗಳು ಇದುವರೆಗೂ ನಷ್ಟದಲ್ಲಿಯೇ ಇದ್ದವು. ಅವುಗಳ ನಿರ್ವಹಣೆಯು ಕಷ್ಟಕರವಾಗಿತ್ತು. ಜವರಾಯರು ಮಧುವನ, ಲಲಿತಾದ್ರಿ, ಲಲಿತ ಮಹಲ್ ತೋಟಗಳಲ್ಲಿ, ವಿವಿಧ ರೀತಿಯ ಹಣ್ಣಿನ ಮರಗಳನ್ನು ನೆಡಿಸಿದರು. ಹೀಗಾಗಿ ಈ ಹಣ್ಣಿನ ತೋಟಗಳು ತಮ್ಮ ನಿರ್ವಹಣಾ ವೆಚ್ಚ ಕಳೆದು ಅರಮನೆಗೆ ಲಾಭ ತಂದುಕೊಡುವಂತಾದವು. ಲಲಿತ ಮಹಲ್ ಬಂಗಲೆಯಲ್ಲಿ ಟೆರೆಸ್ ಗಾರ್ಡನ್ ರಚಿಸಿ, ಅದರ ಸೌಂದರ್ಯವನ್ನು ಹೆಚ್ಚಿಸಿ, ಅಲ್ಲಿಗೆ ಬರುತ್ತಿದ್ದ ಗಣ್ಯವ್ಯಕ್ತಿಗಳ ಆಕರ್ಷಣೆಯ ಸ್ಥಳವನ್ನಾಗಿಸಿದರು. ಜವರಾಯರ ಸತತ ಪರಿಶ್ರಮ, ತೀವ್ರ ಆಸಕ್ತಿಯನ್ನು ಮೆಚ್ಚಿದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು, ಆಸ್ಥಾನದಲ್ಲಿ ಜವರಾಯರನ್ನು ಸನ್ಮಾನಿಸಿ, ಚಿನ್ನದ ಗಡಿಯಾರವನ್ನು ಕೊಡುಗೆಯಾಗಿ ನೀಡಿದರು.

ಕೆ.ಆರ್.ಎಸ್.ನ – ಬೃಂದಾವನ ತೋಟ ನಿರ್ಮಾಣ – 1930ರಲ್ಲಿ ಕನ್ನಂಬಾಡಿ ಅಣೆಕಟ್ಟಿನ ಕೆಳಭಾಗದಲ್ಲಿ ಉದ್ಯಾನವನ್ನು ಸ್ಥಾಪಿಸುವ ಕೆಲಸ ಆರಂಭವಾಯಿತು. ಸರ್ ಎಂ. ವಿಶ್ವೇಶ್ವರಯ್ಯನವರು ಕಾವೇರಿ ನದಿಗೆ ಅಣೆಕಟ್ಟು ಕಟ್ಟಿ, ಬರಡಾಗಿದ್ದ ಮಂಡ್ಯ ಜಿಲ್ಲೆಯನ್ನು ರಾಜ್ಯದ ಭತ್ತದ ಕಣಜವಾಗಿಸಿದರೆ, ಜವರಾಯರು ಒಣಭೂಮಿಯಾಗಿದ್ದ ಅಣೆಕಟ್ಟಿನ ಕೆಳಭಾಗವನ್ನು ಸುಂದರ ಬೃಂದಾವನವನ್ನಾಗಿಸಲು ಪ್ರಯತ್ನವನ್ನಾರಂಭಿಸಿ –ದರು. ಹೊಸ ವಿನ್ಯಾಸಗಳನ್ನು ಅಳವಡಿಸಿ ಕಾರಂಜಿಗಳ ಹೂದೋಟಗಳನ್ನು ವಿವಿಧಾಕೃತಿಯ ಗಿಡಗಳಲ್ಲಿ ರೂಪಿಸಿದರು. ಜವರಾಯರು ಪೂರ್ಣಪ್ರಮಾಣದ ಸೂಪರಿಂಟೆಂಡೆಂಟ್‌ರಾಗಿ ಬೃಂದಾವನದ ಕೆಲಸವನ್ನು ಆಸಕ್ತಿಯಿಂದ ಮುಂದುವರೆಸಿ ಸಂಪೂರ್ಣಗೊಳಿಸಿದರು. ಜವರಾಯರು ಅಣೆಕಟ್ಟಿನ ಕೆಳಭಾಗದಲ್ಲಿದ್ದ ಭೂಮಿಯನ್ನು ಹಣ್ಣಿನ ತೋಟವನ್ನಾಗಿಯೂ ಸಂಶೋಧನಾ ಕೇಂದ್ರವನ್ನಾಗಿಯೂ ಮಾರ್ಪಡಿಸಿದರು. ಇವರ ಅವಿರತ ಶ್ರಮದಿಂದಾಗಿ ಕನ್ನಂಬಾಡಿಯು ವಿಶ್ವದಾದ್ಯಂತ ಪ್ರಸಿದ್ಧವಾಗಿ, ದೇಶವಿದೇಶಗಳಿಂದ ಪ್ರವಾಸಿಗರನ್ನು ಆಕರ್ಷಿಸುವಂತಾಯಿತು.

ಲಾಲ್‌ಬಾಗ್‌ನ ನೆಲೆ ಮತ್ತು ಹಿನ್ನೆಲೆ – ಕನ್ನಂಬಾಡಿಯ ಕೆಲಸದೊಂದಿಗೆ ಜವರಾಯರು ಲಾಲ್‌ಬಾಗನ್ನು ವಿಸ್ತರಿಸುವ ಕ್ರಮಕೈಗೊಂಡರು. ಲಾಲ್‌ಬಾಗಿಗೆ

ಹೊಂದಿಕೊಂಡಿದ್ದ ಬಂಜರು ಭಾಗದ ಭೂಮಿಯನ್ನು ಸೇರಿಸಿಕೊಂಡು, ಅದರ ವಿಸ್ತಾರ ಹೆಚ್ಚಿಸಿದರು. ಈಗ ಸೇರಿದ ಹೊಸ ಭಾಗದಲ್ಲಿ ತಾವರೆ ಕೊಳವನ್ನು ನಿರ್ಮಿಸಿ ಅಲ್ಲಿಯೂ ವಿಶೇಷ ರೀತಿಯ ಮರಗಳು ಬೆಳೆಯುವಂತೆ ನೋಡಿಕೊಳ್ಳಲಾಯಿತು. ಲಾಲ್‌ಬಾಗ್ ಕೆರೆಯಿಂದ ನೀರು ಹರಿಸಿ, ಕೃತಕ ಜಲಪಾತವನ್ನು ನಿರ್ಮಿಸಲಾಯಿತು. ಇದಕ್ಕೆ 'ಜವರಾಯ ಫಾಲ್ಸ್ ' ಎಂದು ಕರೆಯಲಾಯಿತು.

ಹೊಸ ಪದವಿಯೊಂದಿಗೆ, ವಿಶೇಷ ಪರಿಣತಿಯೊಂದಿಗೆ ಹಿಂದಿರುಗಿದ ಜವರಾಯರು ತಮ್ಮ ಎಲ್ಲಾ ಸಾಮರ್ಥ್ಯವನ್ನು ರಾಜ್ಯದ ತೋಟಗಾರಿಕೆಯ ಬೆಳವಣಿಗೆಗೆ ಮೀಸಲಾಗಿಸಲು ನಿರ್ಧರಿಸಿದರು. ಕಬ್ಬನ್‌ಪಾರ್ಕ್ ಅನ್ನು ಸಹಾ ಲಾಲ್‌ಬಾಗಿನಂತೆಯೇ ಸುಂದರ ಉದ್ಯಾನವನ್ನಾಗಿ ಅಭಿವೃದ್ಧಿಗೊಳಿಸಿದರು. ಬಟಾನಿಕಲ್ ಗಾರ್ಡನ್ ಆಗಿ ಬೆಳೆದ ಲಾಲ್‌ಬಾಗಿನಲ್ಲಿ ದೇಶವಿದೇಶಗಳಿಂದ ತರಿಸಿದ ಅಪರೂಪದ ಸಸ್ಯ ಪ್ರಭೇದಗಳನ್ನು ನೆಡಿಸಿದರು. ಎಲ್ಲಿಯೂ ಇರದ ಅಮೂಲ್ಯ ವೃಕ್ಷ ಸಂಪತ್ತು ಲಾಲ್‌ಬಾಗಿನಲ್ಲಿ ಕಂಡು ಬರಲು ಜವರಾಯರು ಶ್ರಮಿಸಿದರು. ಇವರ ಆಸಕ್ತಿಯ ಫಲವಾಗಿ ಲಾಲ್‌ಬಾಗ್ ಸಸ್ಯಪ್ರೇಮಿಗಳ ಸಸ್ಯಕಾಶಿಯಾಯಿತು.

1938ರಲ್ಲಿ ಹೆಸರುಘಟ್ಟದಲ್ಲಿ ತೋಟಗಾರಿಕೆ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಯಿತು. ಈ ಕೇಂದ್ರವು ತೋಟಗಾರಿಕೆ ಬೆಳವಣಿಗೆಯಲ್ಲಿ ಹೊಸ ಆಂದೋಲನವನ್ನು ಆರಂಭಿಸಿತು ಎನ್ನಬಹುದು. ಹೆಸರ ಘಟ್ಟದ ಈ ಸಂಶೋಧನಾ ಕೇಂದ್ರವು ಭಾರತದ ಪ್ರಮುಖ ತೋಟಗಾರಿಕಾ ಕೇಂದ್ರವಾಗಿ ಪ್ರಸಿದ್ಧವಾಗಿದೆ.

ಲಾಲ್‌ಬಾಗ್-ಗಾಜಿನ ಮನೆಯ ವಿಸ್ತರಣೆ – 1899ರಲ್ಲಿ ರಚನೆಯಾದ ಗಾಜಿನ ಮನೆಯು ಲಂಡನ್ನಿನ ಕ್ರಿಸ್ಟಲ್ ಪ್ಯಾಲೇಸ್‌ನ ಮಾದರಿಯಲ್ಲಿತ್ತು. ಇದರ ಸಭಾಂಗಣವು 160 ಅಡಿ ಉದ್ದ ಮತ್ತು 80 ಅಡಿ ಅಗಲವಿದ್ದು ಉತ್ತರ ಮತ್ತು ದಕ್ಷಿಣದಲ್ಲಿ 60 ಅಡಿ ಉದ್ದ ಮತ್ತು 40 ಅಡಿ ಅಗಲದ ಎರಡು ಭಾಗಗಳನ್ನು ಹೊಂದಿದ್ದು, ಶಿಲುಬೆಯ ಆಕಾರದಲ್ಲಿತ್ತು. ರಾಜಕುಮಾರ ಆಲ್ಬರ್ಟ್ ವಿಕ್ಟರ್‌ನ ಭೇಟಿಯ ನೆನಪಿಗಾಗಿ ವಿದೇಶಿ ತಂತ್ರಜ್ಞಾನವನ್ನು ಬೆಲ್ಜಿಯಂನಿಂದ ತರಿಸಲ್ಪಟ್ಟ ಗಾಜು ಮತ್ತು ವಿದೇಶದಿಂದ ತಂದಂತಹ ಕಬ್ಬಿಣವನ್ನು ಉಪಯೋಗಿಸಿ ಕಟ್ಟಲಾಗಿತ್ತು. 1930ರಲ್ಲಿ ಶ್ರೀ ಜವರಾಯರು ಕೇವಲ ಮೂರು ಭಾಗಗಳನ್ನು ಹೊಂದಿ ಅಪೂರ್ಣವಾದಂತಿದ್ದ ಈ ಕಟ್ಟಡಕ್ಕೆ ನಾಲ್ಕನೆಯದಾದ ಪೂರ್ವದ ಭಾಗವನ್ನು ಸೇರಿಸಲು ನಿರ್ಧರಿಸಿದರು. ಯುದ್ಧದ ಸಮಯದಲ್ಲಿ ತುಟ್ಟಿಯಾಗಿದ್ದ ವಿದೇಶಿ ವಸ್ತುಗಳನ್ನು ಬಿಟ್ಟು ಭದ್ರಾವತಿಯ ಕಬ್ಬಿಣ ಮತ್ತು ಸ್ಥಳೀಯವಾಗಿ ಉತ್ಪಾದನೆಯಾದ ಗಾಜನ್ನು ಉಪಯೋಗಿಸಿ ಪೂರ್ವದ ಭಾಗವನ್ನು ಮೊದಲನೆ ಕಟ್ಟಡದಷ್ಟೇ ಸುಂದರವಾಗಿ ಕಟ್ಟಿಸಿದರು. ಈ ಸೇರ್ಪಡೆಯಿಂದ ಗಾಜಿನ ಮನೆಯ ಭವ್ಯತೆಯು ಹೆಚ್ಚಿತು. ಅದರ ಪರಿಪೂರ್ಣತೆಯಿಂದಾಗಿ ಅದರ

ಆಕರ್ಷಣೆ ಮತ್ತಷ್ಟು ಹೆಚ್ಚಾಯಿತು. ಈ ಭವನದ ನಾಲ್ಕು ದ್ವಾರಗಳಿಗೂ ಬಂದು ಸೇರುವಂತೆ ಲಾಲ್‌ಬಾಗಿನ ಎಲ್ಲಾ ದಿಕ್ಕುಗಳಿಂದಲೂ ರಸ್ತೆಗಳನ್ನು ನಿರ್ಮಿಸಿದರು. ಜವಾರಾಯರ ಈ ಆಸಕ್ತಿಯ ಫಲವಾಗಿ ಗ್ಲಾಸ್ ಹೌಸ್ ಲಾಲ್‌ಬಾಗಿನ ಎಲ್ಲಾ ಚಟುವಟಿಕೆಗಳ ಕೇಂದ್ರವಾಯಿತು.

ಲಾಲ್‌ಬಾಗಿನ ಆಕರ್ಷಣೆಯನ್ನು ಮತ್ತಷ್ಟು ಹೆಚ್ಚಿಸಿರುವ ವಿಶಿಷ್ಟಾಕೃತಿಯ ಕಾವಲು ಗೋಪುರ ಶ್ರೀ ಜವರಾಯರ ಮತ್ತೊಂದು ಕೊಡುಗೆ. ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯ ಪುರಾತನ ಕಟ್ಟಡವೊಂದರ ಕಾವಲು ಗೋಪುರವು ವಿನಾಶದ ಹಾದಿಯಲ್ಲಿತ್ತು. ಲಾಂದ್ರದ ಆಕಾರದ ಈ ಪುಟ್ಟ ಕಲ್ಲಿನ ಕಟ್ಟಡವು ಒಂದಂತಸ್ತಿನ ಕಟ್ಟಡವಾಗಿ ಎಲ್ಲಾ ದಿಕ್ಕುಗಳಲ್ಲಿಯೂ ಕಿಟಕಿಗಳನ್ನು ಹೊಂದಿತ್ತು. ಶ್ರೀ ಜವರಾಯರು ಈ ಕಟ್ಟಡವನ್ನು ಹಾಳುಗೆಡವಲು ಬಿಡದೆ ಕಟ್ಟಡದ ಕಲ್ಲು ಕಲ್ಲುಗಳನ್ನು ಬೇರ್ಪಡಿಸಿ, ಸಂಖ್ಯೆಗಳನ್ನು ಬರೆದು ಲಾಲ್‌ಬಾಗಿಗೆ ಸಾಗಿಸಿ, ಲಾಲ್‌ಬಾಗಿನ ಪಶ್ಚಿಮ ದ್ವಾರದ ಬಳಿ ಸ್ಥಾಪಿಸಿದರು. ಈ ಅಪರೂಪದ ಸುಂದರ ಕಟ್ಟಡವು ಲಾಲ್‌ಬಾಗಿನ ಆಕರ್ಷಣೆಯನ್ನು ಮತ್ತಷ್ಟು ಹೆಚ್ಚಿಸಿತು. ಭಾರತದಲ್ಲಿಯೇ ಪ್ರಥಮವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಿಸಲ್ಪಟ್ಟ ಕಟ್ಟಡ ಇದು. ಲಾಲ್‌ಬಾಗಿನ ವಿಸ್ತರಣೆ, ಕೃತಕ ಜಲಪಾತದ ನಿರ್ಮಾಣ, ತಾವರೆಕೊಳದ ನಿರ್ಮಾಣ ಮತ್ತು ನೈಸರ್ಗಿಕ ಗುಹೆಗಳಲ್ಲಿ ಸೋಪಾನ –ಗಳನ್ನಾಗಿಸುವುದರ ಮೂಲಕ ಲಾಲ್‌ಬಾಗಿನ ಜನಾಕರ್ಷಣೆಯನ್ನು ಹೆಚ್ಚಿಸಿದರು.

ಭಾರತ ಸರ್ಕಾರದ ಸೇವೆಯಲ್ಲಿ – ಶ್ರಮಜೀವಿಗಳಿಗೆ ಮತ್ತು ಸಾಧಕರಿಗೆ ಕೀರ್ತಿ ಮತ್ತು ಅವಕಾಶಗಳು ಹುಡುಕಿಕೊಂಡು ಬರುತ್ತವೆ ಎಂಬುದಕ್ಕೆ ಶ್ರೀ ಜವರಾಯರೇ ಒಂದು ಉದಾಹರಣೆ. 1938ರಲ್ಲಿ ಭಾರತದ ವೈಸ್‌ರಾಯ್ ಜವರಾಯರನ್ನು ಭಾರತ ಸರ್ಕಾರದ ಹಿರಿಯ ಮಾರುಕಟ್ಟೆ ಅಧಿಕಾರಿಯನ್ನಾಗಿ ಐದು ವರ್ಷಗಳ ಅವಧಿಗೆ ನೇಮಿಸಿಕೊಂಡರು. ಹೊಸದಾಗಿ ಸ್ಥಾಪನೆಗೊಂಡ ಅಖಿಲ ಭಾರತದ ಮಟ್ಟದ ಈ ಉನ್ನತ ಹುದ್ದೆಯನ್ನು ಭಾರತೀಯರೊಬ್ಬರು ವಹಿಸಿಕೊಂಡಿದ್ದು ಹೆಮ್ಮೆಯ ವಿಷಯವಾಗಿದೆ. ಶ್ರೀ ಜವರಾಯರ ದಕ್ಷತೆ ಮತ್ತು ಸಾಮರ್ಥ್ಯ ಅವರಿಗೆ ಈ ಉನ್ನತ ಹುದ್ದೆ ದೊರೆಯುವಂತೆ ಮಾಡಿದವು. ಬ್ರಿಟೀಷ್ ಭಾರತದ ಹಿರಿಯ ಕೃಷಿ ಮಾರುಕಟ್ಟೆ ಅಧಿಕಾರಿಯಾಗಿ ಈಗಿನ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಬರ್ಮಾಗಳನ್ನು ಒಳಗೊಂಡಿದ್ದ ಇಡೀ ಭಾರತ ಇವರ ಕಾರ್ಯಕ್ಷೇತ್ರವಾಗಿದ್ದಿತು. ರೈತನು ಬೆಳೆದ ಬೆಳೆಗೆ ಉತ್ತಮ ಬೆಲೆ ದೊರೆಯುವಂತೆ ಮಾಡಲು ದೇಶದ ಉದ್ದಗಲಕ್ಕೂ ಸಂಚರಿಸಿ ಕೃಷಿ ಕ್ಷೇತ್ರದ ಸಮಸ್ಯೆಗಳನ್ನು ಅರಿತು ಅವುಗಳನ್ನು ನಿವಾರಿಸುವ ಸಲುವಾಗಿ ಕೃಷಿ ಮಾರುಕಟ್ಟೆಗಳನ್ನು ಸ್ಥಾಪಿಸಿದರು. ಇವರ ಕಾರ್ಯದ ಫಲವೇನೆಂದರೆ, ಭಾರತದಲ್ಲಿ ಕೃಷಿ ಮಾರುಕಟ್ಟೆ ಒಂದು ಆಂದೋಲನವಾಗಿ ದೇಶದ ವಿವಿಧ ಭಾಗಗಳಲ್ಲಿ ಕೃಷಿ

ಮಾರುಕಟ್ಟೆಗಳು ಕಾರ್ಯನಿರ್ವಹಿಸಲು ಆರಂಭಿಸಿದವು. ಇದುವರೆಗೂ ಸರ್ಕಾರವು ಕಡೆಗಣಿಸಿದ್ದ ರೈತನ ಮುಖ್ಯ ಸಮಸ್ಯೆಯೊಂದು ಪರಿಹಾರ ಕಾಣುವಂತಾಯಿತು.

ರಾಜಧಾನಿ ದೆಹಲಿಯ ಸೌಂದರ್ಯವನ್ನು ಹೆಚ್ಚಿಸಿದ ಜವರಾಯ – ಅವರು ದೆಹಲಿಯಲ್ಲಿದ್ದಾಗ ತಮ್ಮ ವಿಶೇಷ ಆಸಕ್ತಿಯಾದ ತೋಟಗಾರಿಕೆ ಬಗ್ಗೆ ವೈಸ್‌ರಾಯರಿಗೆ ಸಲಹೆಗಳಲ್ಲಿ ನೀಡುವುದರ ಮೂಲಕ ದೆಹಲಿಯಲ್ಲಿ ಅನೇಕ ಉದ್ಯಾನಗಳು ನಿರ್ಮಾಣವಾಗಲು ಕಾರಣರಾದರು. ಮತ್ತು ನವದೆಹಲಿಯ ಅಂದವನ್ನು ಹೆಚ್ಚಿಸಲು ರಸ್ತೆಯ ಬದಿಗಳಲ್ಲಿ ಬಣ್ಣಬಣ್ಣದ ಹೂ ಬಿಡುವ ಮರಗಳನ್ನು ನೆಡುವುದಕ್ಕೆ ಜವರಾಯರು ಪ್ರೇರಕರಾಗಿದ್ದರು. ಇವರ ಸಲಹೆ ಮೇರೆಗೆ ವೈಸರಾಯರು ಪ್ರಥಮ ಬಾರಿಗೆ ದೆಹಲಿಯಲ್ಲಿ ಫಲಪುಷ್ಪ ಪ್ರದರ್ಶನವನ್ನು ಏರ್ಪಡಿಸಿದ್ದರು. ಈ ಪ್ರದರ್ಶನವು ಎಷ್ಟು ಯಶಸ್ವಿಯಾಯಿತೆಂದರೆ ಅನೇಕ ಯೂರೋಪಿಯನ್ನರು ತೋಟಗಾರಿಕೆ ವಿಚಾರದಲ್ಲಿ ಅವರ ಸಲಹೆಗಳನ್ನು ಪಡೆಯುತ್ತಿದ್ದರು. ಇಂದಿಗೂ ದೆಹಲಿ ಆಡಳಿತವು ಫಲಪುಷ್ಪ ಪ್ರದರ್ಶನವನ್ನು ಮುಂದುವರೆಸಿಕೊಂಡು ಬಂದಿದೆ. ಶ್ರೀ ಜವರಾಯರು ಸಲ್ಲಿಸಿದ ಅಮೋಘ ಸೇವೆಗಾಗಿ ವೈಸ್‌ರಾಯರು ಅವರಿಗೆ ರಾವ್ ಬಹದ್ದೂರ್ ಎಂಬ ಬಿರುದನ್ನು ನೀಡಿದರು. ಜವರಾಯರು ದೆಹಲಿ ಗಾಲ್ಫ್ ಕ್ಲಬ್‌ನ ಸದಸ್ಯರಾಗಿ–ದ್ದರು. ಅಲ್ಲಿನ ಗಾಲ್ಫ್ ಮೈದಾನ ನವೀಕರಿಸಲು ಜವರಾಯರು ಕಾರಣರಾಗಿದ್ದರು. ದೆಹಲಿಯಲ್ಲಿ ಐದು ವರ್ಷದ ಸೇವೆ ಸಲ್ಲಿಸಿದ ನಂತರ ಮೈಸೂರಿಗೆ ಹಿಂದಿರುಗಿದರು.

ಮೈಸೂರು ಸರ್ಕಾರವು ತೋಟಗಾರಿಕೆಯ ಡೈರೆಕ್ಟರ್ ಹುದ್ದೆಯ ಜೊತೆಯಲ್ಲಿ ಚೀಫ್ ಮಾರ್ಕೆಟಿಂಗ್ ಹುದ್ದೆಯನ್ನು ಜವರಾಯರಿಗೆ ನೀಡಿತು. ಅವರು ಮಹಾರಾಜರ ಮನವೊಲಿಸಿ ರಾಜ್ಯದಲ್ಲಿ ಕೃಷಿ ಮಾರುಕಟ್ಟೆ ಎಂಬ ಹೊಸ ಇಲಾಖೆಯನ್ನೇ ಸ್ಥಾಪಿಸಿ–ದರು. ಈಗ ಬೃಹದ್ದಾಗಿ ಬೆಳೆದಿರುವ ರಾಜ್ಯ ಕೃಷಿ ಮಾರುಕಟ್ಟೆ ಇಲಾಖೆ ಶ್ರೀ ಜವರಾಯರ ಆಸಕ್ತಿಯ ಫಲ. ಅವರನ್ನು ರಾಜ್ಯದ ಕೃಷಿ ಮಾರುಕಟ್ಟೆ ಇಲಾಖೆಯ ಜನಕನೆನ್ನಬಹುದು.

ಭೂಪಾಲ್‌ನಲ್ಲಿ ಜವರಾಯರು – ತಮ್ಮ ಸೇವಾ ಅವಧಿಯಲ್ಲಿ ಸತತ ಪರಿಶ್ರಮ, ಹಾಗೂ ಕುಂದದ ಆಸಕ್ತಿಯನ್ನು ತೋರಿದ ಶ್ರೀ ರಾವ್ ಬಹದ್ದೂರ್ ಶ್ರೀ ಜವರಾಯರು 1944ರಲ್ಲಿ ಮೈಸೂರಿನ ಸೇವೆಯಿಂದ ನಿವೃತ್ತರಾದರು. ಸದಾ ಚಟುವಟಿಕೆಯಿಂದ ಇರುವವರಿಗೆ ನಿವೃತ್ತಿ ಎಂಬುವುದಿಲ್ಲ. ಇವರ ಸೇವೆಯ ಮಹತ್ವವನ್ನರಿತಿದ್ದ ಭೂಪಾಲ್‌ನ ಮಹಾರಾಜರು ಶ್ರೀ ಜವರಾಯರನ್ನು ತಮ್ಮ ರಾಜ್ಯದ ಉದ್ಯಾನಗಳ ಅಭಿವೃದ್ಧಿಗಾಗಿ ಸಲಹೆಗಾರರನ್ನಾಗಿ ನೇಮಿಸಿಕೊಂಡರು. ಎರಡು ವರ್ಷಗಳ ಕಾಲ ಭೂಪಾಲ್‌ನಲ್ಲಿದ್ದ ಅವರು ಮಧ್ಯಪ್ರದೇಶದ ಅನೇಕ ನಗರಗಳಲ್ಲಿ ಸುಂದರ ಉದ್ಯಾನಗಳನ್ನು ಸ್ಥಾಪಿಸಲು ಕಾರಣರಾದರು.

ಹೀಗೆ ದಕ್ಷತೆ, ಕಾರ್ಯ ತತ್ಪರತೆಯನ್ನು ಮೆರೆದ ಶ್ರೀ ಜವರಾಯರು ನಮ್ಮ ರಾಜ್ಯ ಮಾತ್ರವಲ್ಲ ಹೊರ ರಾಜ್ಯಗಳಲ್ಲಿಯೂ ಪ್ರಖ್ಯಾತರಾಗಿದ್ದರು ಎಂಬುದಕ್ಕೆ ಈ ಮೇಲ್ಕಂಡ ಅವರ ಕಾರ್ಯಕ್ಷಮತೆಯನ್ನು ನೋಡಿದವರಿಗೆ ತಿಳಿಯುತ್ತದೆ. ರಾವ್ ಬಹದ್ದೂರ್ ಶ್ರೀ ಜವರಾಯರು 1946ರಲ್ಲಿ ಭೂಪಾಲ್‌ನಲ್ಲಿ ದೈವಾಧೀನರಾದರು.

ಶ್ರೀ ಎಂ. ಶಂಕರಲಿಂಗೇಗೌಡ



ಈ ನಾಡಿನ ಶ್ರೇಷ್ಠ ಅರ್ಥಶಾಸ್ತ್ರಜ್ಞ, ಮೇಧಾವಿ ಹಾಗೂ ಹಿರಿಯ ರಾಜಕಾರಣಿ. ಸ್ವಾತಂತ್ರ್ಯ ಪೂರ್ವದಲ್ಲಿ ನಾಡು ಪ್ರಜಾಪ್ರಭುತ್ವಕ್ಕಾಗಿ ಹೋರಾಟ ನಡೆಸುತ್ತಿದ್ದ ವೇಳೆ ರಾಜತ್ವದ ಪರ ನಿಂತು ವಕಾಲತ್ತು ವಹಿಸುತ್ತಿದ್ದಂತಹ ವ್ಯಕ್ತಿ.

ಶ್ರೀ ಶಂಕರಲಿಂಗೇಗೌಡರವರು ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಮೈಲಾರ ಪಟ್ಟಣ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಲಿಂಗೇಗೌಡರು ರಾಜಾಶ್ವನೀರೀಕ್ಷಕರಾಗಿದ್ದರು. (ಶೇಖ್‌ದಾರ್) ಲಿಂಗೇಗೌಡರ ಆರೋಗ್ಯ ಅಷ್ಟಾಗಿ ಚೆನ್ನಾಗಿಲ್ಲದ ಕಾರಣ ತಾವು ಮಾಡಬೇಕಾಗಿದ್ದ ಕೆಲಸವನ್ನು ತಮ್ಮ ಮಗ ಶಂಕರಲಿಂಗೇಗೌಡರಿಂದ ಮಾಡಿಸುತ್ತಿದ್ದರು. ಹೀಗಾಗಿ ಶಂಕರಲಿಂಗೇಗೌಡರು ಕಂದಾಯ ಇಲಾಖೆಯ ಕೆಲಸ ಕಾರ್ಯಗಳನ್ನು ಕಲಿಯಲು ಸಾಧ್ಯವಾಯಿತು. ಅಂದು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪರೀಕ್ಷೆ ಸಿಲೋನ್‌ನಲ್ಲಿ ನಡೆಯುತ್ತಿದ್ದ ಕಾಲದಲ್ಲಿ, ಆ ಪರೀಕ್ಷೆಗೆ ಕುಳಿತು ಬಿ.ಎ. ಪದವಿ ಪಡೆದಿದ್ದರು (ಬದುಕು–ಮೆಲುಕು – ಹೆಚ್.ಕೆ. ವೀರಣ್ಣಗೌಡ, ಪುಟ–228).

1925ರಲ್ಲಿ ಜೀವ ವಿಮಾ ಸಂಸ್ಥೆಯು ಯೋಜನೆಯೊಂದನ್ನು ರೂಪಿಸಿ–ಕೊಡಲು ಗೌಡರನ್ನು ಕೇಳಿಕೊಂಡಾಗ, ಯಶಸ್ವೀ ಯೋಜನೆ ಕೊಟ್ಟರು ಮಾಡಿಕೊಡು–ವಲ್ಲಿ ಯಶಸ್ವಿಯಾದರು. ಮೈಸೂರು ಸರ್ಕಾರವು ಆರ್ಥಿಕ ಯೋಜನೆಯನ್ನು ತಯಾರಿಸಿಕೊಡಬೇಕೆಂದು ಕೇಳಿಕೊಳ್ಳಲಾಗಿ ಉತ್ತಮವಾದ ವರದಿಯನ್ನು ಸಲ್ಲಿಸಿದರು. ಇಷ್ಟೇ ಅಲ್ಲದೆ ಅಂದು ಮೈಸೂರು ರಾಜ್ಯಕ್ಕೆ ಬರಗಾಲ ಬಂದೆರಗಿದಾಗ ಅಂದಿನ ಸರ್ಕಾರ ಗೌಡರಿಗೆ ಬರಗಾಲ ಪರಿಹಾರ ಮಾರ್ಗೋಪಾಯಗಳ ಬಗೆಗೆ ವರದಿಯನ್ನು ಸಲ್ಲಿಸಬೇಕೆಂದು ಕೇಳಿಕೊಳ್ಳಲಾಗಿ ಸಮೀಕ್ಷೆ ನಡೆಸಿ ಅದನ್ನು ಪೂರೈಸಿದರು.

ಗೌಡರ ಮೇಧಾಶಕ್ತಿಯನ್ನು ಕಂಡು ಕೇಳಿದ ಕೊಲ್ಹಾಪುರ, ಬರೋಡ, ಹಾಗೂ ನವನಗರ (ಸೌರಾಷ್ಟ್ರ) ಪ್ರಾಂತ್ಯಗಳ ಮಹಾರಾಜರು ತಮ್ಮ ತಮ್ಮ ಸಂಸ್ಥಾನಗಳ

ಭೂ ಕಂದಾಯವನ್ನು ಹೊಸದಾಗಿ ನಿರ್ಧರಿಸುವ ಸಂದರ್ಭ ಒದಗಿ ಬಂದಾಗ ಆ ಹೊಣೆಗಾರಿಕೆಯನ್ನು ಅಲ್ಲಿನ ಮಹಾರಾಜರು ಶಂಕರಲಿಂಗೇಗೌಡರಿಗೆ ವಹಿಸಿದರು. ಗೌಡರು ಆಯಾ ಪ್ರಾಂತ್ಯಗಳ ಹಳ್ಳಿ ಹಳ್ಳಿಗೂ ಭೇಟಿ ನೀಡಿ, ಖುದ್ದಾಗಿ ಪರೀಶೀಲಿಸಿ ಕಂದಾಯವನ್ನು ನಿಗದಿಪಡಿಸಿದುದೇ ಅಲ್ಲದೆ ರಾಜ್ಯದ ಆಯವ್ಯಯ ಅಂದಾಜು ಪಟ್ಟಿಯನ್ನು ರಚಿಸಿಕೊಟ್ಟರು. ಆ ಸಂದರ್ಭದಲ್ಲಿ ಇವರು ತಯಾರಿಸಿದ ನಕಾಶೆಗಳು ಇಂದಿಗೂ ಸಹ ಲಭ್ಯವಿದೆ.

ದಕ್ಷಿಣಭಾರತದ ಅದರಲ್ಲೂ ತಮಿಳುನಾಡಿನ ಜಮೀನ್ದಾರರು "ಬಿ ಸೌತ್ ಇಂಡಿಯನ್ ಎಸ್ಟೇಟ್ಸ್ ಅಂಡ್ ಲ್ಯಾಂಡ್ ಓನರ್ಸ್ ಅಸೋಸಿಯೇಷನ್ ಆಫ್ ಮದ್ರಾಸ್ ಪ್ರೆಸಿಡೆನ್ಸಿ" ಎಂಬ ಸಂಘ ಸ್ಥಾಪನೆ ಮಾಡಿಕೊಂಡಿದ್ದರು. ರೈತವಾರಿ ಪದ್ಧತಿಯನ್ನು ಅಳವಡಿಸಿಕೊಂಡು ಅಲ್ಲಿನ ಜಮೀನ್ದಾರರ ಹಕ್ಕುಗಳನ್ನು ಕಸಿದುಕೊಳ್ಳಲು ಬ್ರಿಟಿಷರು ಹವಣಿಸುತ್ತಿದ್ದಾಗ ಅಲ್ಲಿನ ಜಮೀನ್ದಾರರು ಶಂಕರಲಿಂಗೇಗೌಡರ ಮೊರೆ ಹೋದಾಗ ಅವರಿಗೆ ಬಂದೊದಗಿದ್ದ ಸಮಸ್ಯೆಯನ್ನು ನಿವಾರಿಸಿದ್ದರಿಂದ ಎಕನಾಮಿಕ್ ಕೌನ್ಸಿಲ್, ತೆಪ್ಪಕುಲಂ ತಿರುಚನಾಪಳ್ಳಿ ತಮಿಳುನಾಡು ಸಂಸ್ಥೆಯು ಸೂಕ್ತವಾಗಿ ಸನ್ಮಾನಿಸಲು ತೀರ್ಮಾನಿಸಿತು. ಮೈಸೂರು ಸಂಸ್ಥಾನದ ಮೊದಲನೆ ಕೌನ್ಸಿಲರಾಗಿದ್ದ ಶ್ರೀ ಕೆ. ಚಾಂಡಿಯವರ ಅಧ್ಯಕ್ಷತೆಯಲ್ಲಿ 1936ರಲ್ಲಿ ನಡೆದ ಮದರಾಸು ಜಮೀನ್ದಾರರ ಸಭೆಯಲ್ಲಿ ಶಂಕರಲಿಂಗೇಗೌಡರಿಗೆ "ದೇಶಬಂಧು" ಎಂದು ಬಿರುದು ನೀಡಿ ಗೌರವಿಸಿತು. (ಬದುಕು ಮೆಲುಕು – ಹೆಚ್.ಕೆ. ವೀರಣ್ಣಗೌಡ, ಪುಟ–228).

ಅಂದು ಮೈಸೂರಿನ ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡಲು ಅಲ್ಲಿಂದ ಮದ್ರಾಸ್ ಇಲ್ಲವೇ ಮುಂಬಯಿ ಬಂದರಿಗೆ ಕಳುಹಿಸಬೇಕಾಗಿತ್ತು. ಅಲ್ಲದೆ ಆಯಾ ಸರ್ಕಾರಗಳಿಗೆ ಲಕ್ಷಾಂತರ ರೂಪಾಯಿ ತೆರಿಗೆ ನೀಡಬೇಕಾಗಿತ್ತು. ಇವುಗಳನ್ನೆಲ್ಲ ಮನಗಂಡ ಗೌಡರು "ಬಿ ಕರ್ನಾಟಕ ಷಿಪ್ ಬಿಲ್ಡಿಂಗ್ ಅಂಡ್ ಟ್ರಾನ್ಸ್‌ಪೋರ್ಟ್ ಕಂ. ಲಿ." ಎಂಬ ಸಂಸ್ಥೆ ಯನ್ನು ಸ್ಥಾಪಿಸಿ ಬ್ರಿಟೀಷರಿಂದ ಭಟ್ಕಳದ ಕರಾವಳಿಯಲ್ಲಿ ಜಮೀನನ್ನು 1944ರಲ್ಲಿ ಗುತ್ತಿಗೆಗೆ ಹಿಡಿದರು. ಈ ಸಂಸ್ಥೆಯ ಕಛೇರಿಯನ್ನು ಧಾರವಾಡದಲ್ಲಿ ಸ್ಥಾಪಿಸಿದರು. ಇದಕ್ಕೆ ಸಂಬಂಧಿಸಿದಂತೆ ಕೆಲವಾರು ಕೃತಿಗಳನ್ನು ರಚಿಸಿದರು (ಪಟ್ಟಿಯನ್ನು ನೀಡಲಾಗಿದೆ) ಬ್ರಿಟೀಷರು ಈ ಯೋಜನೆಗೆ ಮಂಜೂರಾತಿ ನೀಡದ ಕಾರಣದಿಂದಾಗಿ ಯೋಜನೆಯು ಮೂಲೆಗುಂಪಾಯಿತು.

ರಾಜ್ಯ ಒಕ್ಕಲಿಗರ ಸಂಘ, ಬೆಂಗಳೂರು ಇಲ್ಲಿ ಕೆಲವು ಕಾಲ ಸಂಘದ ಆರ್ಥಿಕ ಸಲಹೆಗಾರರಾಗಿ, ಒಕ್ಕಲಿಗರ ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸಿದರು. ಗೌಡರು ಆಡಳಿತ, ವ್ಯವಸಾಯ, ಪಶುಸಂಗೋಪನೆ, ಬರಗಾಲದ ಪರಿಹಾರ ಸೇರಿದಂತೆ ಹಲವಾರು ವಿಷಯಗಳ ಮೇಲೆ ಅಮೂಲ್ಯ ಕೃತಿಗಳನ್ನು, ವರದಿಗಳನ್ನು ರಚಿಸಿದ್ದಾರೆ.

1942ರಿಂದ 47ರವರೆಗೆ ಪ್ರಜಾಪ್ರತಿನಿಧಿ ಸಭೆಯ ಸಸ್ಯರಾಗಿ (ಎಂ.ಆರ್.ಎ.) ಸೇವೆ ಸಲ್ಲಿಸಿದರು. 1952ರಲ್ಲಿ ನಾಗಮಂಗಲ ವಿಧಾನಸಭಾ ಕ್ಷೇತ್ರದಿಂದ (ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿ) ವಿಧಾನಸಭೆಗೆ ಆಯ್ಕೆಯಾದರು. ರಾಜಪ್ರಭುತ್ವದಲ್ಲಿ ಬಲವಿದ್ದರೂ ಮಹಾತ್ಮ ಗಾಂಧಿ ಹಾಗೂ ಸರ್ದಾರ್ ವಲ್ಲಭಬಾಯಿಯವರ ಬಗ್ಗೆ ತುಂಬುಗೌರವವನ್ನು ಹೊಂದಿದ್ದರು. 1952 ಡಿಸೆಂಬರ್‌ನಲ್ಲಿ ದೈವಾಧೀನರಾದರು. ಶಂಕರಲಿಂಗೇಗೌಡರು ರಚಿಸಿದ ಕೃತಿಗಳು ಮತ್ತು ವರದಿಗಳ ಪಟ್ಟಿ ಈ ಕೆಳಕಂಡಂತಿದೆ.

ಶಂಕರಲಿಂಗೇಗೌಡರು ರಚಿಸಿದ ಪುಸ್ತಕ ಮತ್ತು ವರದಿಗಳು – ಇಂಡಿಯನ್ ಎಕನಾಮಿಕ್ ಸೆನ್ಸಸ್, ವಾಲ್ಯೂಮ್ 1, 2 ಮತ್ತು 3, ಭಟ್ಕಳ್ ಹಾರ್ಬರ್ ಸ್ಕೀಂ, ಲೈಫ್ ಇನ್ಸೂರೆನ್ಸ್ ಎಕನಾಮಿಕ್ಸ್ 1927, ಫೈನಾನ್ಸಿಯಲ್ ಪೊಸಿಷನ್ ಆಫ್ ಮೈಸೂರ್ 1791–1932, ನೋಟ್ ಆನ್ ಹೌ ಟು ಅವಾಯ್ಡ್ ಫೆಮೈನ್ ಇನ್ ಮೈಸೂರ್, ದ ರೈಟ್ಸ್ ಆಫ್ ಮಹಾರಾಜಾಸ್ ಪ್ರಿವಿಲೇಜಸ್ ಆಫ್ ದೇರ್ ಸಬ್ಜೆಕ್ಸ್, ಫಿಲಾಸಫಿ ಆಫ್ ಇನ್ಸೂರೆನ್ಸ್ ಸೈನ್ಸ್, ನೋಟ್ ಆನ್ ದಿ ವಿಲೇಜ್ ಅಡ್ಮಿನಿಸ್ಟ್ರೇಷನ್ ಇನ್ ದ ಮೈಸೂರ್ ಸ್ಟೇಟ್, ಎಕನಾಮಿಕ್ ರಿಪೋರ್ಟ್ ಆಫ್ ನಾಗಮಂಗಲ ತಾಲ್ಲೂಕ್, ಮಾಡೆಲ್ ಫಾರ್ಮ್ ಎಕನಾಮಿಕ್ ಸೆನ್ಸಸ್, ಜಮೀನ್ದಾರಿ ಟಾಕ್ಸೇಷನ್ ಎನ್‌ಕ್ವೈರಿ ಕಮಿಟಿ ವಾಲ್ಯೂಮ್ 1, ಎಕನಾಮಿಕ್ ಅಗ್ರಿಕಲ್ಚರ್ ಸರ್ವೇ, ಹಟ್ಟಂಗಾಲೆ ತಾಲ್ಲೂಕ್, ಕರ್ನಾಟಕ ಏಕೀಕರಣ, ಶ್ರೀ ಗುರುಗಳ ನಿರೂಪ, ಲೆಟರ್ ಟು ಮಹಾತ್ಮಾಜೀ, ಪ್ರಿನ್ಸಿಪಲ್ಸ್ ಆಫ್ ಸೆಟಲ್‌ಮೆಂಟ್, ಅಗ್ರೇರಿಯನ್ ಪಾಲಿಸಿ ಇನ್ ದ ಮೈಸೂರ್ ಸ್ಟೇಟ್ ಅಂಡ್ ಭಟ್ಕಳ್ ಹಾರ್ಬರ್ ಸ್ಕೀಂ, ಎಕನಾಮಿಕ್ ರಿಪೋರ್ಟ್ಸ್ ಆಫ್ ಎಚ್.ಎಚ್. ಛತ್ರಪತಿ ದೊಮಿನಿಯನ್ (ಕೊಲ್ಲಾಪುರ ಡೆಕ್ಕನ್), ಬಡ್ಜೆಟ್ ಅಂಡ್ ಫುಡ್ ಪ್ರಾಬ್ಲಮ್ ಫಾರ್ ದ ಇಯರ್ 1943, 1944 ಇನ್ ದ ಮೈಸೂರ್ ಸ್ಟೇಟ್ ರೀಫಾರ್ಮ್ಸ್ ಇನ್ ಮೈಸೂರ್ ಅಂಡ್ ಕಾನ್ಸೆಂಬ್ಲಿಸ್ ಇನ್ ಇಂಡಿಯನ್ ಸ್ಟೇಟ್ಸ್, ಫುಡ್ ಕಮಾಂಡೇರಿಂಗ್ ಅಂಡ್ ರೇಷನಿಂಗ್ ಇನ್ ತ್ರೀ ಸೀಟೀಸ್ ಆಫ್ ಮೈಸೂರ್ ಸ್ಟೇಟ್, ಅಗ್ರಿಕಲ್ಚರಲ್ ಇಂಡಿಪೆಂಡೆನ್ಸ್ ಇನ್ ದ ಪ್ಲೇನ್ ಕಂಟ್ರಿ ಆಫ್ ಕೊಲ್ಹಾಪುರ್ ಸ್ಟೇಟ್, ಇನೆಡಿಕ್ವಿಬಲ್ ಡಿಸ್ಟ್ರಿಬ್ಯೂಷನ್ ಆಫ್ ಪಬ್ಲಿಕ್ ರೆವಿನ್ಯೂ ಇನ್ ಮೈಸೂರ್, ರಿಪೋರ್ಟ್ಸ್ ಆನ್ ಎಕನಾಮಿಕ್ ಲ್ಯಾಂಡ್ ರೆಂಟ್ ಇನ್ ಎಚ್.ಎಚ್.ದ ಜಾವಬ್‌ಸಾಹೇಬ್ಸ್ ಡೊಮಿನಿಯನ್ಸ್ ವಾಲ್ಯೂಮ್ 1, ರಿಪೋರ್ಟ್ ಆನ್ ದ ಬರ್ಡನ್ ಲ್ಯಾಂಡ್ ರೆವಿನ್ಯೂ ಇನ್ ದ ಶಿರೋಲ್ ತಾಲ್ಲೂಕ್, ಕೊಲ್ಹಾಪುರ್, ಎಕನಾಮಿಕ್ ಅಂಡ್ ಪೊಲಿಟಿಕಲ್ ಲೈಫ್ ಇನ್ ಬರೋಡಾ ಅಟ್ ಭಾಗ್ಯನಗರ್, ದ ಸೌತ್ ಇಂಡಿಯನ್ ಎಸ್ಟೇಟ್ಸ್ ಅಂಡ್ ಲ್ಯಾಂಡ್ ಓನರ್ಸ್ ಎಕನಾಮಿಕ್ ಕೌನ್ಸಿಲ್ ಟ್ರೈಚಿನೋಪಾಲಿ, ದ ಸೌತ್ ಇಂಡಿಯನ್ ಎಸ್ಟೇಟ್ಸ್ ಅಂಡ್ ಲ್ಯಾಂಡ್ ಓನರ್ಸ್ ಎಕನಾಮಿಕ್ ಜನರಲ್ 1936, (ಈ ಮೇಲ್ಕಂಡ ಎಲ್ಲಾ ಪುಸ್ತಕಗಳು ಹಾಗೂ ವರದಿಗಳನ್ನು ರಾಜ್ಯ ಪತ್ರಾಗಾರ ಇಲಾಖೆಯಲ್ಲಿ ಸಂಗ್ರಹಿಸಿಡಲಾಗಿದೆ.)

ಶ್ರೀಮತಿ ಬಿ. ಇಂದಿರಮ್ಮ



ಒಕ್ಕಲಿಗ ಜನಾಂಗದ ಮಹಿಳೆಯರಲ್ಲಿ ಕೆಲವು ಪ್ರಥಮಗಳನ್ನು ಸಾಧಿಸಿ ಚಿರಸ್ಥಾಯಿಯಾಗಿ ಉಳಿದಿರುವ ಮೊದಲ ಮಹಿಳೆ ಬಿ. ಇಂದಿರಮ್ಮ. ಮರಿಚನ್ನಪ್ಪ ಮತ್ತು ತಿಮ್ಮಮ್ಮ ದಂಪತಿಗಳಿಗೆ 5 ಜನ ಮಕ್ಕಳು. ಈ ಐವರಲ್ಲಿ ಇಬ್ಬರು ಒಕ್ಕಲಿಗ ಜನಾಂಗದ ಮೇರು ವ್ಯಕ್ತಿಗಳು. ಇವರ ಸಹೋದರ ರತ್ನವೇ ಬಿ. ಪುಟ್ಟಯ್ಯನವರು. ಒಕ್ಕಲಿಗರ ಸಂಘ ಸ್ಥಾಪನೆಗೆ ಹಾಗೂ ಬೆಳವಣಿಗೆಗೆ ಕಾರಣರಾದ ಮಹಾನ್ ವ್ಯಕ್ತಿ. ಇಂದಿರಮ್ಮನವರು. 11.12.1892ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಬಡತನದಲ್ಲೇ ಹುಟ್ಟಿ ಬೆಳೆದರೂ ತಂದೆ ತಾಯಂದಿರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಿದರು, ತಮ್ಮ ಹಿತವನ್ನು ಬಲಿಕೊಟ್ಟು. ಬಳೇಪೇಟೆಯ ಧರ್ಮ ಮಠ ಎಂಬ ಕ್ರೈಸ್ತ ಶಾಲೆಯಲ್ಲಿ ವ್ಯಾಸಂಗ ಆರಂಭಿಸಿದರು. ಸಹೋದರ ಬಿ. ಪುಟ್ಟಯ್ಯ, ಸಹೋದರಿ ನಂಜಮ್ಮ ಮತ್ತು ಇಂದಿರಮ್ಮನವರ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಡುವ ಉದ್ದೇಶದಿಂದ ಮರಿಚನ್ನಪ್ಪನವರು ತಮ್ಮ ಬೆಂಗಳೂರಿನ ಮನೆಯನ್ನು ಭೋಗ್ಯ ಹಾಕಿ, ಮೈಸೂರಿಗೆ ನಡೆದರು. ತಮ್ಮ ಅಣ್ಣನ ಮಗ ಚನ್ನಿಗಪ್ಪ (1906ರಲ್ಲಿ ಒಕ್ಕಲಿಗರ ಸಂಘ ಸ್ಥಾಪನೆಗೆ ಮೂಲ ಕಾರಣ ಪುರುಷ) ಮೈಸೂರು ವಿಶ್ವವಿದ್ಯಾಲಯ -ದಲ್ಲಿ ಅಧ್ಯಾಪಕರಾಗಿದ್ದರೂ ಕೂಡ ಅವರ ಸಹಾಯವನ್ನು ಯಾಚಿಸದೆ ಚಿಕ್ಕ ಮನೆಯನ್ನು ಬಾಡಿಗೆಗೆ ಹಿಡಿದರು. ಈ ವಿಷಯ ತಿಳಿಯುತ್ತಲೇ ಚನ್ನಿಗಪ್ಪನವರು ಮರಿಚನ್ನಪ್ಪನವರ ಇಡೀ ಸಂಸಾರವನ್ನು ತಮ್ಮ ಮನೆಯಲ್ಲೇ ಇರಿಸಿಕೊಂಡರು.

ಇಂದಿರಮ್ಮ 1910ರಲ್ಲಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣರಾದರು. 1912ರಲ್ಲಿ ಇಂಗ್ಲೀಷ್ ಲೋಯರ್ ಸೆಕೆಂಡರಿಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸು ಮಾಡಿದರು. ಇಂದಿರಮ್ಮನವರ ವ್ಯಾಸಂಗದ ವೇಳೆಯಲ್ಲಿ ಪ್ರತಿ ತಿಂಗಳೂ ಕ್ರಮವಾಗಿ ಎಂಟು ರೂಪಾಯಿ ಮತ್ತು ಹತ್ತು ರೂಪಾಯಿಗಳು ಸರ್ಕಾರದಿಂದ ವಿದ್ಯಾರ್ಥಿ ವೇತನ ದೊರೆಯುತ್ತಿತ್ತು (ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ). ನಿಜಕ್ಕೂ ಅಂದು ಮೈಸೂರು ವಿದ್ಯಾಭ್ಯಾಸಕ್ಕೆ ಹೇಳಿ ಮಾಡಿಸಿದಂತ ದೊಡ್ಡ ಊರಾಗಿತ್ತು. ಮಹಿಳಾ ಹೈಯರ್ ಕ್ಲಾಸ್ ಶಾಲೆ (ಬ್ರಾಹ್ಮಣರಿಗೆ, ರಾಜವಂಶಸ್ಥರಿಗೆ ಮಾತ್ರ ಪ್ರವೇಶ) ಮಹಾರಾಣಿ ಹೈಸ್ಕೂಲ್ ಹೀಗೆ ಕೆಲವು ಶಿಕ್ಷಣ ಕೇಂದ್ರಗಳಿದ್ದವು. ಸಂಪೂರ್ಣ ಬ್ರಾಹ್ಮಣರ ಹಿಡಿತದಲ್ಲಿದ್ದ ಶಿಕ್ಷಣ ಇಲಾಖೆ ಮತ್ತು ಶಾಲಾ ಕಾಲೇಜುಗಳಲ್ಲಿ ಸೀಟು ಪಡೆಯುವುದು ಸುಲಭದ ಕೆಲಸವಾಗಿರಲಿಲ್ಲ. ಇಂದಿರಮ್ಮನವರು ಎಷ್ಟೇ ಪ್ರತಿಭಾ -ವಂತ ವಿದ್ಯಾರ್ಥಿನಿಯಾಗಿದ್ದರೂ ಶೂದ್ರರೆಂಬ ಕಾರಣಕ್ಕೆ ಮಹಾರಾಣಿ ಹೈಸ್ಕೂಲಿನಲ್ಲಿ ಪ್ರವೇಶ ಕೊಡದೆ ತೊಂದರೆ ನೀಡಿದರು ಮೇಧಾವಿಯಾಗಿದ್ದ ಚನ್ನಿಗಪ್ಪನವರೂ ಇದೇ

ರೀತಿಯ ತೊಂದರೆಯನ್ನು ಅನುಭವಿಸಿ ಬೇಸತ್ತಿದ್ದ ಕಾರಣ ಚನ್ನಿಗಪ್ಪ ಮತ್ತು ಮರಿಚನ್ನಪ್ಪನವರು ತೀವ್ರವಾಗಿ ಪ್ರತಿಭಟಿಸಿದರು. ಪ್ರೊ. ಸಿ.ಆರ್. ರೆಡ್ಡಿಯವರು ಮೈಸೂರಿ–ನಲ್ಲಿ ಬ್ರಾಹ್ಮಣೇತರ ಚಳವಳಿಯನ್ನು ಪ್ರಾರಂಭಿಸುತ್ತಿದ್ದ ಕಾಲವದು. ವಿಧಿಯಿಲ್ಲದೆ ಕುಮಾರಿ ಇಂದಿರಮ್ಮಳಿಗೆ ಮಹಾರಾಣಿ ಹೈಸ್ಕೂಲಿನಲ್ಲಿ ಪ್ರವೇಶ ನೀಡಿದರು. ವಿದ್ಯಾರ್ಥಿ ವೇತನ ಬರುತ್ತಿದ್ದ ಕಾರಣ ತನಗೆ ಬೇಕಾದ ಪಾಠೋಪಕರಣಗಳನ್ನು ಪಡೆದು ಉಳಿದ ಹಣವನ್ನು ಮನೆಗೆ ನೀಡುವುದರ ಮೂಲಕ ಸ್ವಲ್ಪ ಮಟ್ಟಿಗೆ ಸಂಸಾರದ ಭಾರವನ್ನು ಕಡಿಮೆ ಮಾಡುವಲ್ಲಿ ಸಫಲರಾದರು. 1917ರಲ್ಲಿ ಎಸ್.ಎಸ್. ಎಲ್.ಸಿಯನ್ನು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಬಿ.ಎ. ಪದವಿಗೆ ಸೇರಿ 1924ರಲ್ಲಿ ಒಕ್ಕಲಿಗ ಜನಾಂಗದ ಪ್ರಥಮ ಮಹಿಳಾ ಪದವೀಧರೆ ಎಂಬ ಕೀರ್ತಿಗೆ ಭಾಜನರಾದರು. ಇಂದಿಗೆ ಎಂಬತ್ತು, ತೊಂಬತ್ತು ವರ್ಷಗಳ ಹಿಂದೆ ಪದವೀಧರರಿಗೆ ಸರ್ಕಾರಿ ಹುದ್ದೆಯು ಸುಲಭವಾಗಿ ಸಿಗುತ್ತಿತ್ತು. ಆದರೆ ಶೂದ್ರರು ಎಂಬ ಕಾರಣಕ್ಕೆ ಅವರನ್ನು ಸರ್ಕಾರಿ ಉದ್ಯೋಗದಿಂದ ಹೊರಗಿಡುತ್ತಿದ್ದರು. ಬ್ರಾಹ್ಮಣರು ಎಲ್ಲಾ ಸರ್ಕಾರಿ ಹುದ್ದೆಗಳಲ್ಲಿ ಸಿಂಹಪಾಲು ಪಡೆಯುತ್ತಿದ್ದರು. ಇಂದಿರಮ್ಮನವರ ಪ್ರತಿಭೆಗೆ ತಕ್ಕಂತೆ ಅಮಲ್ದಾರ್ ಹುದ್ದೆ ಸಿಗಬೇಕಿತ್ತು. ಆದರೆ ಆಗಿನ ಪರಿಸ್ಥಿತಿ ಭಿನ್ನವಾಗಿತ್ತು.

ಶಿಕ್ಷಣ ಇಲಾಖೆಯಲ್ಲಿ ಇಂದಿರಮ್ಮ – ಮೈಸೂರಿನಲ್ಲಿ ಉನ್ನತ ವ್ಯಾಸಂಗ ಮಾಡಿದ ತರುವಾಯ ಕೊನೆಗೂ ಸರ್ಕಾರಿ ಉದ್ಯೋಗ ಸಿಕ್ಕಿತು. ಬೆಂಗಳೂರಿನ ಚಾಮರಾಜಪೇಟೆ ಬಾಲಕಿಯರ ಮಾಧ್ಯಮಿಕ ಶಾಲೆಯ ಪದವೀಧರ ಮುಖ್ಯೋ–ಪಾಧ್ಯಾಯಿನಿಯಾಗಿ ನೇಮಕವಾದರು. ನಂತರ ವಾಣಿವಿಲಾಸ ಹೆಣ್ಣು ಮಕ್ಕಳ ಪ್ರೌಢಶಾಲೆ, ಬೆಂಗಳೂರು ಇಲ್ಲಿ ಸಹ ಶಿಕ್ಷಕಿಯಾಗಿ, ವಿದ್ಯಾರ್ಥಿ ನಿಲಯದ ವಾರ್ಡನ್ ಆಗಿ ಸೇವೆ ಸಲ್ಲಿಸಿದರು. ತಾವು ಬಡತನದಲ್ಲೇ ಹುಟ್ಟಿ ಬೆಳೆದ ಕಾರಣದಿಂದಾಗಿ ಮಕ್ಕಳ ಅದರಲ್ಲೂ ಹೆಣ್ಣು ಮಕ್ಕಳ ಬಗ್ಗೆ ತುಂಬು ಕಾಳಜಿಯನ್ನು ಹೊಂದಿದ್ದರು.

ವಿದೇಶ ಪ್ರವಾಸ ಮತ್ತು ಉನ್ನತ ಶಿಕ್ಷಣ – ಪಾಶ್ಚಾತ್ಯ ದೇಶಗಳಲ್ಲಿ ಉನ್ನತ ವ್ಯಾಸಂಗಕ್ಕೆ ನೀಡುತ್ತಿರುವ ಮಹತ್ವ, ಪಾಶ್ಚಿಮಾತ್ಯ ಸ್ಥಿತಿಗತಿಗಳು, ಅವರ ಸಂಸ್ಕೃತಿ ಇವೇ ಮುಂತಾದವುಗಳನ್ನು ಇಂದಿರಮ್ಮನವರ ಸಹೋದರ ಬಿ. ಪುಟ್ಟಯ್ಯ ಮತ್ತು ತಮ್ಮ ಸಹೋದರನ ಸ್ನೇಹಿತರಾದ ಡಾ. ಸಿ.ಆರ್. ರೆಡ್ಡಿಯವರು ಆಗಾಗ್ಗೆ ಮಾತನಾಡಿಕೊಳ್ಳುತ್ತಿದ್ದರು ಹಾಗೂ ತಮ್ಮ ಸಹೋದರಿಯಾದ ಇಂದಿರಮ್ಮನವರ ತಲೆಗೆ ತುಂಬುತ್ತಿದ್ದರು. ಇದರಿಂದ ಪ್ರಭಾವಿತರಾದ ಇಂದಿರಮ್ಮನವರು ಎರಡು ವರ್ಷಗಳ ಕಾಲ ಉನ್ನತ ವ್ಯಾಸಂಗ ಮಾಡಿಬರಲು 2 ವರ್ಷ ವ್ಯಾಸಂಗ ರಜೆ (Study leave) ಮೇಲೆ ಇಂಗ್ಲೆಂಡಿಗೆ 1928ರಲ್ಲಿ ತೆರಳಿದರು. ಅಲ್ಲಿ ಎಂ.ಎ. ಪದವಿಯನ್ನು, ಲೀಡ್ಸ್ ವಿಶ್ವವಿದ್ಯಾಲಯದಲ್ಲಿ ಪೀಜಿ ಡಿಪ್ಲಮೋ ಇನ್ ಎಜುಕೇಷನ್ ಅನ್ನು ಗಳಿಸಿದರು. ತಾವು ಇಂಗ್ಲೆಂಡ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವೇಳೆಯಲ್ಲಿ ಮ್ಯಾಂಚೆಸ್ಟರ್‌ನಲ್ಲಿ ನಡೆದ

ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ಎಂಬ ವಿಚಾರವಾಗಿ ಸಂಶೋಧನಾ ಪ್ರಬಂಧವನ್ನು ಮಂಡಿಸಿ ಎಲ್ಲರ ಮೆಚ್ಚುಗೆ ಗಳಿಸಿದರು. 1930ರಲ್ಲಿ ಭಾರತಕ್ಕೆ ಮರಳಿದರು.

ಅಂದು ವಿದೇಶದಲ್ಲಿ ಉನ್ನತ ವ್ಯಾಸಂಗ ಮುಗಿಸಿ ಬಂದ ಇಂದಿರಮ್ಮನವರು ಅಂದು ಮೈಸೂರಿನಾದ್ಯಂತ ಸುದ್ದಿಯಾದರು. ಸರ್ಕಾರವು ಇವರಿಗೆ ಮಹಿಳಾ ತರಬೇತಿ ಕಾಲೇಜು, ಮೈಸೂರು, ಇಲ್ಲಿ ಅಧೀಕ್ಷಕಿಯಾಗಿ ಮುಂಬಡ್ತಿ ನೀಡಿತು. ಅಲ್ಲಿ ಬಡ ಹೆಣ್ಣು ಮಕ್ಕಳು ಸ್ವತಃ ಉದ್ಯೋಗ ಮಾಡಲು ನೆರವಾದರು. ಬಡ ಹೆಣ್ಣು ಮಕ್ಕಳ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ಅವರು ಅದರ ನೇರ ಜವಾಬ್ದಾರಿ ಹೊತ್ತರು. ಹಲವಾರು ಬಡ ಹೆಣ್ಣು ಮಕ್ಕಳ ದಾರಿದೀಪವಾದರು.


ಇಂದಿರಮ್ಮನವರ ಉತ್ಸಾಹವನ್ನು ಕಂಡ ಅಂದಿನ ಮೈಸೂರು ಸರ್ಕಾರವು ಅವರನ್ನು ಶಿಕ್ಷಣ ಇಲಾಖೆಯ ಉಪ ನಿರ್ದೇಶಕಿಯನ್ನಾಗಿ ನೇಮಿಸಿತು (Deputy Director Public Instructions). ಇಂದಿರಮ್ಮನವರೇ ರಾಜ್ಯದ ಪ್ರಪ್ರಥಮ ಮಹಿಳಾ ಡಿ.ಡಿ.ಪಿ.ಐ. ಎಂಬ ಹೆಗ್ಗಳಿಕೆಗೆ ಭಾಜನರಾಗಿದ್ದಾರೆ. ಬೆಂಗಳೂರಿಗೆ ಧಾವಿಸಿದ ಇಂದಿರಮ್ಮನವರು ಶಿಕ್ಷಣ ಇಲಾಖೆಯಲ್ಲಿದ್ದ ಹಲವಾರು ನ್ಯೂನತೆಗಳನ್ನು ತೊಡೆದು ಹಾಕಿ ಅಭಿವೃದ್ಧಿ ಪಡಿಸಿದರು. ಅಂದಿನ ಮೈಸೂರು ಸರ್ಕಾರ ಇಂದಿರಮ್ಮನವರ ಶಿಕ್ಷಣ, ಸೇವೆ ಉತ್ಸಾಹವನ್ನು ಕಂಡು ಮೈಸೂರು ವಿ.ವಿ.ಯ ಸೆನೆಟ್ ಮತ್ತು ಅಕಾಡಮಿಕ್ ಕೌನ್ಸಿಲ್‌ಗಳ ಸದಸ್ಯರನ್ನಾಗಿ ನೇಮಿಸಿತು. ಇಂದಿರಮ್ಮನವರದು ಎಂದೂ ಸುಖವಾಗಿ ಕುಳಿತು ಕಾಲ ಕಳೆದ ಜೀವವಲ್ಲ. ಗರ್ಲ್ಸ್ ಗೈಡ್ ಎಂಬ ಸಂಸ್ಥೆಯ ಮುಖಂಡರಾಗಿ, ವಯಸ್ಕರ ಶಿಕ್ಷಣ ಕೇಂದ್ರದ ಮುಖ್ಯಸ್ಥರಾಗಿ, ಕ್ಷೀರ ಕೇಂದ್ರದ, ಕುರುಡು ಮತ್ತು ಮೂಗ ಸಂಸ್ಥೆಯ ನೇತಾರರಾಗಿ ಸೇವೆ ಸಲ್ಲಿಸಿದರು. ಮೈಸೂರು ವಸ್ತು ಪ್ರದರ್ಶನದ ಮಹಿಳಾ ವಿಭಾಗದ ಮುಖ್ಯಸ್ಥರನ್ನಾಗಿ ಸರ್ಕಾರ ಇವರನ್ನು ನೇಮಕ ಮಾಡಿತು. ಅಂದು ಶ್ರೀ ಟಿ.ಎಲ್. ಕಾಂತಂ ಎಂಬುವವರ ಪರಿಚಯವಾಯಿತು. ವಿದುರರಾದ ಕಾಂತಂರವರು ಇಂದಿರಮ್ಮನವರನ್ನು ವಿವಾಹವಾದರು (1934). ಸರ್ಕಾರ ತಮಗೆ ವಹಿಸಿದ ಎಲ್ಲಾ ಜವಾಬ್ದಾರಿಯುತ ಕೆಲಸಗಳನ್ನು ನಿರ್ವಹಿಸಿದರು. ಸೇವೆಯಿಂದ ನಿವೃತ್ತರಾದರು.

ರಾಜಕೀಯ ರಂಗಕ್ಕೆ ಇಂದಿರಮ್ಮನವರು – ಇಂದಿರಮ್ಮನವರ ಕುಟುಂಬವನ್ನು ಬಹಳ ಹತ್ತಿರದಿಂದ ಬಲ್ಲ (ಬಿ. ಪುಟ್ಟಯ್ಯನವರ ಸಹೋದರಿ ಎಂಬ ಕಾರಣದಿಂದ) ಹೆಚ್.ಕೆ. ವೀರಣ್ಣಗೌಡರು ಇಂದಿರಮ್ಮನರನ್ನು ಅವರ ಮಲ್ಲೇಶ್ವರಂನ ಮನೆಯಲ್ಲಿ ಭೇಟಿ ಮಾಡಿ ರಾಜಕೀಯ ರಂಗಕ್ಕೆ ಬಂದು ಸೇವೆ ಸಲ್ಲಿಸಬೇಕೆಂದು ಬೇಡಿಕೆಯನ್ನು ಮುಂದಿಟ್ಟಾಗ ಇಂದಿರಮ್ಮನವರು ಬೆಚ್ಚಿ ಬಿದ್ದರು. ಆದರೂ ಬಿಡದೆ ಅವರನ್ನು ರಾಜಕೀಯ ರಂಗಕ್ಕೆ ಕರೆತಂದರು. ಇಂದಿರಮ್ಮನವರು ಒಕ್ಕಲಿಗರ ಸಂಘದ ಸದಸ್ಯ–ರಾಗಿ, ಮಹಿಳಾ ಘಟಕದ ಮುಖ್ಯಸ್ಥರಾಗಿ, ಎ.ಪಿ.ಸಿ.ಸಿ.ಯ ಸದಸ್ಯೆಯಾಗಿ ಬೆಂಗಳೂರು

ಮಹಿಳಾ ಘಟಕದ ನೇತಾರರಾಗಿ ಸೇವೆ ಸಲ್ಲಿಸಿದರು. ಅಂದು ಬೆಂಗಳೂರು ಮಹಾನಗರ ಪಾಲಿಗೆಯ ವಾರ್ಡ್‌ಗಳಿಗೆ ಬಹುತೇಕ ಒಕ್ಕಲಿಗ ಕಾರ್ಪೊರೇಟರ್‌ಗಳು ಆಯ್ಕೆಯಾಗುತ್ತಿದ್ದ ಕಾಲವೊಂದಿತ್ತು. ಹೀಗಾಗಿ ಇಂದಿರಮ್ಮನವರನ್ನು ಕಾರ್ಪೊರೇಷನ್‌ನ ಆಲ್ಡರ್‌ಮನ್ ಆಗಿ ಆಯ್ಕೆ ಮಾಡಿತು. (ಆಲ್ಡರ್ ಮನ್ ಎಂದರೆ ನಗರದ ಪ್ರತಿಷ್ಠಿತ ವ್ಯಕ್ತಿ ಅಥವಾ ಸಂಭಾವಿತ ವ್ಯಕ್ತಿಗಳಿಗೆ ನೀಡುವ ಸ್ಥಾನ) 1958ರಲ್ಲಿ ಬೆಂಗಳೂರು ಕಾರ್ಪೊರೇಷನ್‌ನ ಮಲ್ಲೇಶ್ವರಂ ವಿಭಾಗದಿಂದ ಕಾರ್ಪೊರೇಟರ್ ಆಗಿ ಆಯ್ಕೆ ಯಾದರು. ಆಯವ್ಯಯ ಅಂದಾಜು ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದರು. 1960ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ **'ಮೇಯರ್'** ಆಗುವ ಮೂಲಕ ಇತಿಹಾಸವನ್ನು ನಿರ್ಮಿಸಿದರು. ಕೇವಲ ಒಕ್ಕಲಿಗ ಜನಾಂಗದ ಪ್ರಥಮ ಮಹಿಳಾ ಮೇಯರ್ ಮಾತ್ರ ಅಲ್ಲ ಕಾರ್ಪೊರೇಷನ್‌ನ ಮೊದಲ ಮಹಿಳಾ ಮೇಯರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ವಿದೇಶದಲ್ಲಿ ವ್ಯಾಸಂಗ ಮಾಡಿ ಬಂದಿದ್ದ ಹಾಗೂ ಈಗಾಗಲೇ ಹಲವು ಪ್ರಥಮಗಳನ್ನು ತಮ್ಮದಾಗಿಸಿಕೊಂಡಿದ್ದ ಇಂದಿರಮ್ಮನವರ ಕೀರೀಟಕ್ಕೆ ಮೇಯರ್ ಹುದ್ದೆ ಮತ್ತೊಂದು ಚಿನ್ನದ ಗರಿಯಾಯಿತು. ಇತ್ತ ಕಾಂಗ್ರೆಸ್ ಪಕ್ಷವು ಇಂದಿರಮ್ಮನವರನ್ನು ಎಂ.ಎಲ್.ಎ. ಚುನಾವಣೆಗೆ ನಿಲ್ಲುವಂತೆ ಒತ್ತಾಯಿಸಿತು. ಅದಕ್ಕೆ ಒಪ್ಪದಿದ್ದಾಗ ಮಂತ್ರಿ ಪದವಿ ನೀಡುವುದಾಗಿ ಆಮಿಷ ಒಡ್ಡಿತು. ಇಂದಿರಮ್ಮನವರು 1976ರಲ್ಲಿ ಇಹಲೋಕ ತ್ಯೇಜಿಸಿದರು.

ತ್ಯಾಗಬುದ್ಧಿ – ಮಕ್ಕಳಿಲ್ಲದ ಕೊರಗಿದ್ದಿತಾದರೂ ಆದರೆ ಅದನ್ನು ತೋರುತ್ತಿ–ರಲಿಲ್ಲ. ಕೊನೆಗಾಲದಲ್ಲಿ ಸ್ವಲ್ಪ ದಿನ ಹಾಸಿಗೆ ಹಿಡಿದರು. ತಮ್ಮ ಸಾವಿನ ನಂತರ ತಾವು ಗಳಿಸಿದ್ದ ಮನೆಯನ್ನು ಅನಾಥ ಮಕ್ಕಳ ಶಿಕ್ಷಣ ಶಾಲೆಗೆ ನೀಡಬೇಕೆಂದು ಶ್ರೀ ಪೇಜಾವರ ಶ್ರೀಗಳಿಗೆ ದಾನಕೊಟ್ಟರು. ಮಲ್ಲೇಶ್ವರಂನ ಕ್ಲ್ಯೂನಿ ಕಾನ್ವೆಂಟ್ ಎದುರು–ಗಡೆಯ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಮೂಲೆ ನಿವೇಶನದ ಮನೆಯು ಇಂದಿಗೂ ಬುದ್ದಿಮಾಂದ್ಯ ಮಕ್ಕಳಶಾಲೆಯಾಗಿ ಪರಿವರ್ತನೆಯಾಗಿದ್ದು ಇಂದಿರಮ್ಮ –ನವರ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸಿದೆ.

ನ್ಯಾಯಮೂರ್ತಿ ಶ್ರೀ ಕೆ.ಎಸ್. ಹೆಗ್ಗಡೆ



ಶ್ರೀಯುತರು ನ್ಯಾಯವಾದಿಯಾಗಿ, ನ್ಯಾಯ ಮೂರ್ತಿಯಾಗಿ, ಸಂಸದರಾಗಿ, ಲೋಕ ಸಭಾಧ್ಯಕ್ಷ ರಾಗಿ ಮೇಲೇರಿದ ಬಹುಮುಖ ಪ್ರತಿಭೆಯ ವ್ಯಕ್ತಿಯೇ ಕೆ.ಎಸ್. ಹೆಗ್ಗಡೆ. ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲ್ಲೂಕು ಕಡೂರು ಗ್ರಾಮದಲ್ಲಿ 16 ಜೂನ್ 1909ರಲ್ಲಿ ಜನಿಸಿದರು. ಕಡೂರು ಸುಬ್ಬಯ್ಯಹೆಗ್ಗಡೆ ಮತ್ತು ಇರವಡಿ ಲಿಂಗಮ್ಮ ಶಟ್ತಿ ತಂದೆ ತಾಯಂದಿರು.

ಮಂಗಳೂರಿನ ಬೋರ್ಡ್ ಹೈಸ್ಕೂಲ್ ಮತ್ತು ಕ್ಯಾನರ ಹೈಸ್ಕೂಲ್‌ಗಳಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣ ಪಡೆದರು. ಮಂಗಳೂರಿನ ಸೇಂಟ್ ಅಲೋಸಿಯಶ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಶಿಕ್ಷಣ ಪಡೆದರು. ಮದ್ರಾಸ್‌ನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಪದವಿಗಳಿಸಿದರು. ಮದ್ರಾಸ್ ಕಾನೂನು ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಕಾನೂನು ಪದವೀಧರರಾದರು.

ಕಾರ್ಕಳದಲ್ಲಿ ನ್ಯಾಯವಾದಿಗಳಾಗಿ ತಮ್ಮ ವೃತ್ತಿಯನ್ನು ಆರಂಭಿಸಿದರು. 1934ರಲ್ಲಿ ಕುಮಾರಿ ನಿಟ್ಟೆ ಗುತ್ತು ಮೀನಾಕ್ಷಿಯವರನ್ನು ವಿವಾಹವಾದರು. ಹೆಗ್ಗಡೆಯವರ ಬುದ್ಧಿಶಕ್ತಿಗೆ ಕಾರ್ಕಳ ಬಹಳ ಚಿಕ್ಕ ಪ್ರದೇಶವಾಗಿತ್ತು. ನಂತರ ಮಂಗಳೂರಿನಲ್ಲಿ ನ್ಯಾಯವಾದಿಗಳಾಗಿ ಅಭ್ಯಾಸ ಮಾಡತೊಡಗಿದರು. ಮಂಗಳೂರಿನಲ್ಲಿ ಹೆಸರಾಂತ ವಕೀಲರೆನಿಸಿಕೊಂಡರು. 1948ರಲ್ಲಿ ಜಿಲ್ಲಾ ಸರ್ಕಾರಿ ವಕೀಲರಾಗಿ (Public prosecutor) ನೇಮಕಗೊಂಡರು.

ಅದೇ ಸಮಯಕ್ಕೆ ಮಂಗಳೂರು ಕ್ಷೇತ್ರದಿಂದ ಲೋಕಸಭೆಗೆ ಚುನಾವಣೆ ನಡೆಯಿತು. ಶ್ರೀನಿವಾಸ ಮಲ್ಯರವರ ವಿರುದ್ಧ ಚುನಾವಣಾ ಕಣಕ್ಕಿಳಿದರು. ಈ ಚುನಾವಣೆ ಹೆಗ್ಗಡೆಯವರಿಗೆ ಕೈಕೊಟ್ಟಿತು. ಚುನಾವಣೆಯಲ್ಲಿ ಸೋಲನ್ನು ಅನುಭವಿಸು –ತ್ತಿರುವ ನೋವಲ್ಲೇ ಸ್ನೇಹಿತರು, ಸಹದ್ಯೋಗಿಗಳು ಸರ್ಕಾರಿ ವಕೀಲನಾಗಿದ್ದು ನೀನು ಹೇಗೆ ಚುನಾವಣೆಗೆ ನಿಂತೆ ಎಂದು ಜರಿಯತೊಡಗಿದರು. ಕೋಪಗೊಂಡ ಹೆಗ್ಗಡೆಯವರು ಆ ಸ್ಥಾನಕ್ಕೆ ರಾಜೀನಾಮೆ ನೀಡಿ ರಾಜಕೀಯಕ್ಕಿಳಿದರು.

1954ರಲ್ಲಿ ರಾಜ್ಯ ಸಭಾ ಸದಸ್ಯರಾಗಿ ಆಯ್ಕೆಯಾದರು. ಭಾರತ ಸರ್ಕಾರವು ಹೆಗ್ಗಡೆಯವರನ್ನು ವಿಶ್ವಸಂಸ್ಥೆಗೆ ತನ್ನ ಪ್ರತಿನಿಧಿಯನ್ನಾಗಿ ಕಳುಹಿಸಿತು. ನಂತರ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಕರ್ನಾಟಕದ ಉಚ್ಚನ್ಯಾಯಾಲಯದ ನ್ಯಾಯಾಧೀಶರಾದರು. ದಕ್ಷತೆ ಶಿಸ್ತಿಗೆ ಹೆಸರಾದ ಹೆಗ್ಗಡೆಯವರು ಹೆಸರಾಂತ ನ್ಯಾಯಾಧೀಶರಾದರು. ಭಾರತ ಸರ್ಕಾರ ಶ್ರೀಯುತರನ್ನು ದೆಹಲಿ ಮತ್ತು ಹಿಮಾಚಲ ಪ್ರದೇಶಗಳ ಉಚ್ಚ ನ್ಯಾಯಾಲಯಗಳ ಮುಖ್ಯನ್ಯಾಯಾಧೀಶರನ್ನಾಗಿ ನೇಮಿಸಿತು.

ನಂತರ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಯಾಗಿ ನೇಮಕಗೊಂಡರು. 70ರ ದಶಕದಲ್ಲಿ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾ ಗಾಂಧಿ –ಯವರು ರಾಷ್ಟ್ರದ ಸರ್ವೋಚ್ಚ ನಾಯಕಿಯಾಗಿದ್ದ ಕಾಲ. ರಾಜಕೀಯವಾಗಿ ಬಿಕ್ಕಟ್ಟಿಗೆ ಸಿಲುಕಿ ಅಲಹಾಬಾದ್ ಹೈಕೋರ್ಟು ಇಂದಿರಾಗಾಂಧಿಯವರಿಗೆ ಜೈಲು ಶಿಕ್ಷೆ ವಿಧಿಸಿತ್ತು. ಇದರಿಂದ ಪಾರಾಗಲು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯ ಮೂರ್ತಿಯಾಗಿ ಜ್ಯೇಷ್ಠತೆಯನ್ನು ಕಡೆಗಣಿಸಿ ತಮಗೆ ಬೇಕಾದವರನ್ನು, ಹೆಗ್ಗಡೆ ಯವರಿಗಿಂತ ಕಿರಿಯನನ್ನು ನೇಮಿಸುವ ಹುನ್ನಾರ ನಡೆಸಿದರು. ಶಿಸ್ತಿನ ಸಿಪಾಯಿ

ಯಾದ ಹೆಗ್ಗಡೆಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರನಡೆದರು. ಉಳಿದಿಬ್ಬರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದರು. ರಾಷ್ಟ್ರದಾದ್ಯಂತ ವಕೀಲರ ಸಂಘಗಳು ಇದನ್ನು ಖಂಡಿಸಿದವು. ಹೆಗ್ಗಡೆಯವರ ಕೀರ್ತಿ ಬೆಳಗಾಗುವಷ್ಟರಲ್ಲಿ ದೇಶವನ್ನೆಲ್ಲಾ ವ್ಯಾಪಿಸಿತು.

ತುರ್ತುಪರಿಸ್ಥಿತಿಯ ನಂತರ ಚುನಾವಣೆ ನಡೆಯಿತು. ಈ ಚುನಾವಣೆಗೆ ಸ್ಪರ್ಧಿಸಿದ ಹೆಗ್ಗಡೆಯವರು ಬೆಂಗಳೂರು ಉತ್ತರ ಕ್ಷೇತ್ರದಿಂದ ಸ್ಪರ್ಧಿಸಿ ಶ್ರೀ ಕೆಂಗಲ್ ಹನುಮಂತಯ್ಯನವರನ್ನು ಸೋಲಿಸಿ ಸಂಸತ್ತನ್ನು ಪ್ರವೇಶಿಸಿದರೆ ಶ್ರೀಮತಿ ಇಂದಿರಾ ಗಾಂಧಿಯವರು ಸೋತರು. ಜನತಾ ಸರ್ಕಾರ ಹೆಗ್ಗಡೆಯವರನ್ನು ಸರ್ವಾನುಮತದಿಂದ ಲೋಕಸಭಾ ಸ್ಪೀಕರ್ ಸ್ಥಾನಕ್ಕೆ ಆಯ್ಕೆ ಮಾಡಿತು. 1977ರಿಂದ 1980ರ ತನಕ ಲೋಕಸಭೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಅಂದಿನ ಜನತಾ ಸರ್ಕಾರ ಇಂದಿರಾಗಾಂಧಿಯವರು ತುರ್ತುಪರಿಸ್ಥಿತಿಯಲ್ಲಿ ಮಾಡಿದ ಹೇಯ ಕೃತ್ಯಗಳನ್ನು ಖಂಡಿಸಿ ಜೈಲು ಶಿಕ್ಷೆ ವಿಧಿಸುವಂತೆ ಲೋಕಸಭಾಧ್ಯಕ್ಷರಾಗಿದ್ದ ಹೆಗ್ಗಡೆಯವರನ್ನು ಕೇಳಿಕೊಂಡಿತು. ಒಮ್ಮೆ ಇಡೀ ಭಾರತವನ್ನು ತನ್ನ ಅಂಗೈಯಲ್ಲಿಟ್ಟುಕೊಂಡಿದ್ದ ಇಂದಿರಾ ಗಾಂಧಿಯವರು ಸಭಾಧ್ಯಕ್ಷರಾಗಿದ್ದ ಹೆಗ್ಗಡೆಯವರ ಮುಂದೆ ತನ್ನನ್ನು ಕ್ಷಮಿಸುವಂತೆ ಕೈಕಟ್ಟಿ ನಿಂತಿದ್ದು ಇತಿಹಾಸದ ಚೋದ್ಯವೇ ಸರಿ.

ಅಧಿಕಾರ, ಅಂತಸ್ತು, ಜನಪ್ರಿಯತೆಗಳ ತುತ್ತ ತುದಿಯಲ್ಲಿದ್ದ ಹೆಗ್ಗಡೆಯವರು ದೆಹಲಿಯಲ್ಲೂ, ಬೆಂಗಳೂರಿನಲ್ಲೂ ಐಷಾರಾಮಿ ಜೀವನ ನಡೆಸಬಹುದಾಗಿತ್ತು. ಆದರೆ ಎಲ್ಲರನ್ನೂ ಮಣಿಸಿದ ಆ ಸಿಂಹ ಇದ್ಯಾವುದೂ ಶಾಶ್ವತವಲ್ಲವೆಂದು ತಿಳಿದು ತನ್ನ ಹುಟ್ಟೂರಾದ ನಿಟ್ಟೆಗೆ ಬಂದು ನೆಲೆಸಿ ಊರಿನ ಅಭಿವೃದಿಧ್ಧಿಗೆ ಯೋಜನೆ ಹಾಕಿದರು. ನಿಟ್ಟೆ ಮೀನಾಕ್ಷಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. ನಿಟ್ಟೆ ತಾಂತ್ರಿಕ ಕಾಲೇಜು ರಾಜ್ಯದ ಹೆಸರಾಂತ ಕಾಲೇಜು ಹಾಗೂ ಸಂಸ್ಥೆಯಾಗಿದೆ. ಕೆ.ಎಸ್. ಹೆಗ್ಗಡೆಯವರ ಹಿರಿಯ ಮಗ ಶ್ರೀ ವಿನಯ ಹೆಗ್ಗಡೆಯವರು ಸಂಸ್ಥೆಯನ್ನು ನೋಡಿಕೊಳ್ಳುತ್ತಿದ್ದಾರೆ. ಕೆ.ಎಸ್. ಹೆಗ್ಗಡೆಯವರ ತೃತೀಯ ಪುತ್ರರೇ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಗಡೆಯವರು.



ಜಸ್ಟೀಸ್ ಶ್ರೀ ಹೊಂಬೇಗೌಡ

ಸಾರ್ಥಕ ಸಾಧನೆಯ ಸರದಾರನೆಂದೆ ಕರೆಯಲ್ಪಟ್ಟ ಜಸ್ಟೀಸ್ ಹೆಚ್. ಹೊಂಬೇಗೌಡರು ಆಧುನಿಕ ಮೈಸೂರು ಸೀಮೆಯ ಒಕ್ಕಲಿಗ ಜನಾಂಗದ ಮೇರು ವ್ಯಕ್ತಿ. ಎಲ್ಲರಿಗೂ ಶಿಕ್ಷಣ ಎಂಬ ಮಾತು ಅತ್ಯಂತ ವಿರಳವಾಗಿದ್ದ ಕಾಲದಲ್ಲಿ ಶೈಕ್ಷಣಿಕವಾಗಿ

ಹಿಂದುಳಿದ ವರ್ಗದಿಂದ ಬಂದ ಒಬ್ಬ ವ್ಯಕ್ತಿ ಅಂದಿನ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ (ಜಸ್ಟೀಸ್) ಪದವಿಗೇರುವುದೆಂದರೆ ಅದು ಅಸಾಧಾರಣ ಸಾಧನೆಯೇ ಸರಿ. ಅಂತಹ ಮಹತ್ವದ ಪದವಿಗೇರಿ ಇಂದಿಗೂ ಮನದಲ್ಲಿ ಜನಾನುರಾಗಿ–ಯಾಗಿದ್ದಾರೆ.


ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ಬನ್ನೂರಿನ ಸಮೀಪದ ಮಾರ್ಗೋಂಡನಹಳ್ಳಿಯಲ್ಲಿ 1910ರಲ್ಲಿ ಕೃಷಿಕ ಮನೆತನದ ಹೊಂಬೇಗೌಡ ಎಂಬುವರ ಮಗನಾಗಿ ಜನಿಸಿದ ಇವರು ತಮ್ಮ ತಂದೆಯ ಹೆಸರಿನಿಂದಲೇ ಕರೆಯ –ಲ್ಪಟ್ಟರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಬನ್ನೂರಿನಲ್ಲಿ, ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ಪೂರೈಸಿದರು. ಕಲಿಕೆ ಮತ್ತು ಅಭ್ಯಾಸದಲ್ಲಿ ಆಸಕ್ತಿ ಹೊಂದಿದ್ದ ಗೌಡರು ತಮ್ಮ ಕಾಲೇಜು ಶಿಕ್ಷಣವನ್ನು ವಿಜ್ಞಾನದ ವಿದ್ಯಾರ್ಥಿಯಾಗಿ ಬೆಂಗಳೂರಿನ ಇಂಟರ್ಮೀಡಿಯೇಟ್ ಕಾಲೇಜಿನಲ್ಲಿ ಪಡೆದರು. 1931ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ., ಪದವಿ, 1932–33ರಲ್ಲಿ ಪೂನಾದ ಲಾ ಕಾಲೇಜಿನಲ್ಲಿ ಕಾನೂನು ಪದವಿಯನ್ನು ಪಡೆದು ನ್ಯಾಯಶಾಸ್ತ್ರದಲ್ಲಿ ಪಾಂಡಿತ್ಯವನ್ನು ಪಡೆದುಕೊಂಡರು. ಆ ನಂತರ 1933ರಲ್ಲಿ ಮೈಸೂರು ಸಂಸ್ಥಾನದ ಬಾರ್ ಕೌನ್ಸಿಲ್‌ನಲ್ಲಿ ವಕೀಲರಾಗಿ ತಮ್ಮ ಹೆಸರು ನೊಂದಾಯಿಸುವುದರ ಮೂಲಕ ವಕೀಲಿ ವೃತ್ತಿಯನ್ನು ಆರಂಭಿಸಿದ ಗೌಡರು ಅಂದಿನ ಹೆಸರಾಂತ ಸ್ವಾತಂತ್ರ್ಯ ಹೋರಾಟಗಾರರಾದ ಹೆಚ್.ಸಿ. ದಾಸಪ್ಪನವರ ಬಳಿ ತಮ್ಮ ವೃತ್ತಿ ಮಾರ್ಗದರ್ಶನವನ್ನು ಪಡೆದರು. ತದನಂತರದಲ್ಲಿ ಮಂಡ್ಯ ನಗರದಲ್ಲಿ ತಮ್ಮ ಸ್ವಂತ ಕಛೇರಿಯನ್ನು ತೆರೆಯುವುದರ ಮೂಲಕ ಹಿಂದೆ ಪಡೆದ ಅನುಭವವನ್ನು ಬಳಸಿ –ಕೊಂಡು ಖ್ಯಾತ ವಕೀಲರೆನಿಸಿಕೊಂಡರು. ಹೀಗೆ ಹಂತ ಹಂತವಾಗಿ ಮೇಲೇರಿದ ಹೊಂಬೇಗೌಡರು ತಮ್ಮ ನಡುವಿನ ಬಡವ ಹಿಂದುಳಿದವರ ಏಳಿಗೆಗೆ ತಮ್ಮ ಸೇವೆಯನ್ನು ಮುಡುಪಾಗಿಟ್ಟರು.

ನ್ಯಾಯಪರ ಹೋರಾಟದ ಮೂಲಕ ತಮ್ಮ ಹೋರಾಟದ ಬದುಕನ್ನು ಆರಂಭಿಸಿದ ಹೊಂಬೇಗೌಡರು ಜನಪರ ಹೋರಾಟಗಳಲ್ಲೂ ತೊಡಗಿಸಿಕೊಂಡರು. 1933ರಲ್ಲಿ ಮೊಟ್ಟ ಮೊದಲ ಬಾರಿಗೆ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರಾಗಿ ಚುನಾಯಿತರಾದರು. ಅಲ್ಲಿ ತಮ್ಮ ಜನಪರ ಕಾಳಜಿ ಮತ್ತು ಚರ್ಚೆಯ ಮೂಲಕ ಜನಪರ ಕಾರ್ಯವನ್ನು ರೂಪಿಸುವಂತೆ ಅಂದಿನ ದಿವಾನರ ಸರ್ಕಾರವನ್ನು ಎಚ್ಚರಗೊಳಿಸುತ್ತಿದ್ದರು.

ಇದೇ ಸಂದರ್ಭದಲ್ಲಿ ಅವರು ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯ –ರಾಗಿ ನೇಮಕಗೊಂಡರು. ಆನಂತರ 1947ರಲ್ಲಿ ಲೋಕಸೇವಾ ಆಯೋಗದ ಆಯುಕ್ತರಾಗಿ ಸೇವೆಗೆ ನಿಯೋಜಿಸಲ್ಪಟ್ಟರು. 1951ರಲ್ಲಿ ಮಂಡ್ಯ ಜಿಲ್ಲೆಯ

ನ್ಯಾಯಾಧೀಶರಾಗಿ ನೇಮಕಗೊಂಡು ಅಲ್ಲಿ ತಮ್ಮ ಪೂರ್ಣ ಸೇವೆಯನ್ನು ಸಲ್ಲಿಸಿದರು. ಉಚ್ಚನ್ಯಾಯಾಲಯದ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದರು. ಆನಂತರ 1955ರಲ್ಲಿ ಅವರು ಜೀವನದ ಅತ್ಯುನ್ನತ ಪದವಿಗೇರಿದರು. ಅಂದರೇ ಮೈಸೂರು ಉಚ್ಚನ್ಯಾಯಾಲಯದ ಮುಖ್ಯನ್ಯಾಯಾಧೀಶರಾಗಿ ನೇಮಕಗೊಂಡರು. 1969ರ ವರೆವಿಗೂ ಈ ರಾಜ್ಯದ ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿ ನ್ಯಾಯಾಂಗ ವಲಯದಲ್ಲೇ ಹೆಮ್ಮೆ ಪಡುವ ಅಮೂಲ್ಯ ತೀರ್ಪುಗಳನ್ನು ನೀಡಿದರು. ವೃತ್ತಿಯಲ್ಲಿ ಮೇರು ಶಿಖರಕ್ಕೇರಿದ್ದರೂ ಯಾವುದೇ ಅಹಂ ಇಲ್ಲದೇ ಉದಾರವಾದಿಯಾಗಿ ಸಹೃದಯಿಯಾಗಿ ಜಾತಿ ಭೇದವಿಲ್ಲದೇ ಸರ್ವರೊಡನೆ ಬೆರೆತು ಸ್ನೇಹಜೀವಿಯಾಗಿ-ದ್ದರು. ಹಾಗೂ ಜನಪರ ಕಾಳಜಿವುಳ್ಳವರಾಗಿದ್ದರು. ಇಂಗ್ಲೀಷಿನಂತೆ ಕನ್ನಡದಲ್ಲೂ ವಾಗ್ಮಿಯಾಗಿದ್ದ ಹೆಚ್. ಹೊಂಬೇಗೌಡರ ಮೇಲೆ ಕುವೆಂಪುರವರ ಸಾಹಿತ್ಯ ಅಪಾರ ಪ್ರಭಾವವನ್ನು ಬೀರಿತ್ತು. ಕನ್ನಡ ಭಾಷೆಯ ಬೆಳವಣಿಗೆ ಮತ್ತು ರಕ್ಷಣೆ ಬಗೆಗಿನ ಹೋರಾಟದಲ್ಲಿ ಕಾಳಜಿವಹಿಸುತ್ತಿದ್ದರು ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಹೊಂಬೇಗೌಡರು 1.8.1969ರಲ್ಲಿ ತಮ್ಮ ಸೇವಾ ಅವಧಿಯಲ್ಲೇ ವಿಧಿವಶರಾದರು.

ಹೊಂಬೇಗೌಡರು ವಾಸವಾಗಿದ್ದ ಬೆಂಗಳೂರಿನ ವಿಲ್ಸನ್ ಗಾರ್ಡನ್ ಪ್ರದೇಶ -ವನ್ನು ಅವರ ಸೇವೆಯ ನೆನಪಿಗಾಗಿ ಹೊಂಬೇಗೌಡನಗರವೆಂದೇ ಕರೆಯಲಾಯಿತು. ಅವರ ಹೆಸರಿನಲ್ಲಿ ಅವರ ಅಭಿಮಾನದಲ್ಲಿ ಹೊಂಬೇಗೌಡ ವಿದ್ಯಾಸಂಸ್ಥೆಯನ್ನೂ, ಬೆಂಗಳೂರು, ಚೆನ್ನಪಟ್ಟಣ ಮೊದಲಾದ ಕಡೆ ಸ್ಥಾಪಿಸಿ ವಿದ್ಯಾದಾನ ಮಾಡಲಾಗುತ್ತಿದೆ. ಮಂಡ್ಯ ಜಿಲ್ಲೆಯ ವಕೀಲರ ಸಮುದಾಯ ಭವನಕ್ಕೆ ಹೊಂಬೇಗೌಡರ ಹೆಸರಿನಲ್ಲಿ ಲಾ ಬಾರ್ ಅಸೋಸಿಯೇಷನ್ ರಿಕ್ರಿಯೇಶನ್ ಕ್ಲಬ್‌ಅನ್ನು ಸ್ಥಾಪಿಸಿ ಅದರ ಮುಂಭಾಗದಲ್ಲಿ ಗೌಡರ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ. ಒಕ್ಕಲಿಗ ಜನಾಂಗದ ಸಾಮಾನ್ಯ ಕುಟುಂಬದಲ್ಲೇ ಜನಿಸಿ ಅಸಾಧಾರಣ ಸಾಧನೆಯ ಸರದಾರನೆಂದೇ ಕರೆಸಿ -ಕೊಂಡ ಜಸ್ಟೀಸ್ ಹೊಂಬೇಗೌಡರು ಅಷ್ಟು ಉನ್ನತ ಹುದ್ದೆಗೇರಿದ ಒಕ್ಕಲಿಗ ಜನಾಂಗದ ಒಬ್ಬ ಮೇರು ವ್ಯಕ್ತಿ.



ಶ್ರೀ ಕೆ.ವಿ. ಶಂಕರಗೌಡ

ಕಲಾವಿದ, ನಾಟಕಕಾರ, ಸಹಕಾರಿ ಧುರೀಣ, ಶಿಕ್ಷಣತಜ್ಞ, ಮುತ್ಸದ್ದಿ ರಾಜಕಾರಣಿ, ಭಾಷಣಕಾರ ಹಾಗೂ ಸಂಘಟನಾ ಚತುರ ಹೀಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ನಾಡಿನ ವರ್ಣಮಯ ವ್ಯಕ್ತಿ ಎಂದರೆ ಕೆ.ವಿ. ಶಂಕರಗೌಡರು.

ಶಂಕರ ಗೌಡರು ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕಿನ ಕೀಲಾರ ಗ್ರಾಮದಲ್ಲಿ 15 ಜುಲೈ 1915ರಲ್ಲಿ ವೀರಪ್ಪ ಮತ್ತು ವೀರಮ್ಮ ಎಂಬ ದಂಪತಿಗಳ ಸುಪುತ್ರರಾಗಿ ಜನಿಸಿದರು. ಇವರ ತಂದೆ ಮಗನನ್ನು ಸ್ವಗ್ರಾಮದಲ್ಲಿ ಶಾಲೆಗೆ ಸೇರಿಸಿದರು. ಇವರು ಕುಶ-ಲವರ ಕಾಳಗ, ರುಕ್ಮಾಂಗದ ಚರಿತ್ರೆ, ಗಯ ಚರಿತ್ರೆ, ಮುಂತಾದ ನಾಟಕಗಳಲ್ಲಿ ಬಾಲನಟರಾಗಿ ಅಭಿನಯಿಸಿ ಮೊಟ್ಟ ಮೊದಲನೆಯದಾಗಿ ಇವರಲ್ಲಿದ್ದ ಕಲಾಪ್ರತಿಭೆಯನ್ನು ಜನತೆಗೆ ಪರಿಚಯಿಸಿದರು. ಈ ರೀತಿ ಬೆಳೆದ ನಾಟಕ ಕಲೆ ಮುಂದೆ ಅವರನ್ನು ಒಬ್ಬ ಶ್ರೇಷ್ಠ ಕಲಾವಿದ, ನಾಟಕಕಾರರಾಗಲು ಅನುವು ಮಾಡಿಕೊಟ್ಟಿತು. ಮಂಡ್ಯದಲ್ಲಿ ಮಾಧ್ಯಮಿಕ ಶಿಕ್ಷಣವನ್ನು 1930ರಲ್ಲಿ ಪೂರೈಸಿ ನಂತರ ಪ್ರೌಢಶಾಲಾ ಶಿಕ್ಷಣವನ್ನು ಚೆನ್ನಪಟ್ಟಣದ ಪ್ರೌಢಶಾಲೆಯನ್ನು ಸೇರಿ ಮುಂದುವರಿಸಿದರು. ಚೆನ್ನಪಟ್ಟಣದ ಪ್ರೌಢಶಾಲಾ ವ್ಯಾಸಂಗದ ಸಮಯದಲ್ಲಿ ಶಾಲೆ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ನಡೆಯುತ್ತಿದ್ದ ವಿವಿಧ ಚರ್ಚಾಸ್ಪರ್ಧೆ, ಕಾವ್ಯವಾಚನ, ಪ್ರಬಂಧ ಸ್ಪರ್ಧೆ, ನಾಟಕ ಸ್ಪರ್ಧೆಗಳಲ್ಲಿ ಶಂಕರಗೌಡರಿಗೆ ಬಹುಮಾನಗಳು ತಪ್ಪದೇ ಬರುತ್ತಿದ್ದವು.

ಪ್ರೌಢಶಾಲಾ ಸಹಪಾಠಿಗಳೆಂದರೆ ಎಚ್.ಎಲ್. ನಾಗೇಗೌಡ, ದೇಜಗೌ, ಎಚ್. ಹುಚ್ಚಮಾಸ್ತಿಗೌಡ, ಕೆ.ಸಿ. ವೀರೇಗೌಡ ಮೊದಲಾದವರಾಗಿದ್ದರು. ಈ ಸಮಯದಲ್ಲಿ ಭಾರತದಾದ್ಯಂತ ಸ್ವಾತಂತ್ರ್ಯ ಚಳುವಳಿ ದೇಶವ್ಯಾಪ್ತಿ ಭುಗಿಲೆದ್ದು ಹಲವಾರು ರಾಷ್ಟ್ರೀಯ ನಾಯಕರ ಭಾಷಣ ಹಾಗೂ ಸ್ವಾತಂತ್ರ್ಯಕ್ಕಾಗಿ ಅವರು ಕೊಟ್ಟ ಕರೆ ಇವರನ್ನು ಒಬ್ಬ ದೇಶಪ್ರೇಮಿಯನ್ನಾಗಿ ಮಾಡಿತು.

ಗಾಂಧೀಜಿಯವರು ಉಪವಾಸ ಸತ್ಯಾಗ್ರಹಕ್ಕೆ ಕರೆಕೊಟ್ಟಾಗ ಇವರು ಕೂಡಾ ತಮ್ಮ ವಿದ್ಯಾರ್ಥಿ ನಿಲಯದಲ್ಲಿ ಸತ್ಯಾಗ್ರಹಕ್ಕೆ ಮುಂದಾಗಿ ಉಪವಾಸ ಕೈಗೊಂಡು ರಾಷ್ಟ್ರೀಯತೆಯನ್ನು ಮೈಗೂಡಿಸಿಕೊಂಡರು.

1933ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ (ಎಸ್.ಎಸ್.ಎಲ್.ಸಿ) ಉತ್ತೀರ್ಣರಾದ ಗೌಡರು ತಮ್ಮ ಇಂಟರ್ಮೀಡಿಯೆಟ್ ಶಿಕ್ಷಣಕ್ಕಾಗಿ ಈಗಿನ ಯುವರಾಜ ಕಾಲೇಜನ್ನು ಸೇರಿದರು. 1936ರಲ್ಲಿ ತಮ್ಮ ಪದವಿ ವ್ಯಾಸಂಗಕ್ಕಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜನ್ನು ಸೇರಿದರು. ನಂತರದ ದಿನಗಳಲ್ಲಿ ಅವಕಾಶ ದೊರೆತಾಗಲೆಲ್ಲ ಖಾದಿ ಪ್ರಚಾರ, ಪಾನ ನಿರೋಧ ಕಾರ್ಯಗಳನ್ನು ಕೈಗೊಂಡು ಗ್ರಾಮಗಳ ಪುನರುಜ್ಜೀವನದಲ್ಲಿ ಹೆಚ್ಚಿನ ಆಸಕ್ತಿ ವಹಿಸಿದರು. ರಾಷ್ಟ್ರ ಪ್ರೇಮದ ಓಡಾಟದಲ್ಲಿ ಸಮಾಜ ಸುಧಾರಣೆಯ ಹಂಬಲದಲ್ಲಿ ವಿದ್ಯೆಯನ್ನು ನಿರ್ಲಕ್ಷಿಸಬೇಕಾಗಿ ಬಂದಿದ್ದರಿಂದ ಅಂತಿಮ ಪದವಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದರು.

1940ರಲ್ಲಿ ಬಿ.ಎಸ್ಸಿ ಪದವಿಯನ್ನು ಪಡೆದ ನಂತರ ಗೆಳೆಯರಾದ ಡಾ. ಎಂ.ಹೆಚ್. ಮರಿಗೌಡ ಮತ್ತು ಡಿ. ಲಿಂಗೇಗೌಡರ ಸಲಹೆ ಸೂಚನೆ ಒತ್ತಾಸೆಯಿಂದ

ಬೆಳಗಾಂಗೆ ತೆರಳಿ ಅಲ್ಲಿ ಕಾನೂನು ಕಾಲೇಜಿನಲ್ಲಿ ನ್ಯಾಯಶಾಸ್ತ್ರ ವ್ಯಾಸಂಗವನ್ನು ಮುಂದುವರಿಸಿದರು. 1944ರಲ್ಲಿ ಕಾನೂನು ಪದವಿಯನ್ನು ಪಡೆದು ನಂತರ 1944ರಲ್ಲಿ ಸುಶೀಲಮ್ಮ ಎಂಬುವವರನ್ನು ವಿವಾಹವಾದರು. ಬೆಳಗಾಂನಿಂದ ವಾಪಸ್ ಆದ ನಂತರ ಮಂಡ್ಯದ ಸುಪ್ರಸಿದ್ಧ ನ್ಯಾಯವಾದಿ ಹೆಚ್. ಹೊಂಬೇಗೌಡರ ಮಾರ್ಗದರ್ಶನದಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿದರು. 1946ರಲ್ಲಿ ಜಿಲ್ಲಾ ಬೋರ್ಡಿಗೆ ನಡೆದ ಚುನಾವಣೆಯಲ್ಲಿ ಮಂಡ್ಯ ತಾಲ್ಲೂಕಿನಿಂದ ಸ್ಪರ್ಧಿಸಿ ವಿಜಯಿಯಾದರು.

ಸ್ವಾತಂತ್ರ್ಯ ಚಳವಳಿಯಲ್ಲಿ – ರಾಷ್ಟ್ರದಲ್ಲಿ ಸ್ವಾತಂತ್ರ್ಯದ ಚಳವಳಿ ದಿನೇ ದಿನೇ ಬಿಸಿಯೇರುತ್ತಿತ್ತು. ಶಿವಪುರ ರಾಷ್ಟ್ರಕೂಟದ ನಂತರ ಕರ್ನಾಟಕದಲ್ಲಿಯೂ ಈ ಚಳವಳಿ ತೀವ್ರ ಸ್ವರೂಪ ತಾಳಿತು. ಮಂಡ್ಯ ಜಿಲ್ಲೆ ರಾಜಕೀಯ ಚಟುವಟಿಕೆಗಳ ಕೇಂದ್ರವಾಯಿತು. ಕೆ.ವಿ. ಶಂಕರಗೌಡ, ಎಂ.ಕೆ. ಶಿವನಂಜಪ್ಪ, ಕೆ. ಸಿಂಗಾರಿಗೌಡ, ಕೆ. ಬೆಟ್ಟಶೆಟ್ಟಿ, ಪಿ.ಎನ್. ಜವರಪ್ಪಗೌಡ ಮುಂತಾದ ಜಿಲ್ಲೆಯ ಯುವಕರು ಈ ಹೋರಾಟದಲ್ಲಿ ಧುಮುಕಿದರು. ಅವರು ಹಳ್ಳಿ ಹಳ್ಳಿಗೆ ಕಾಲು ನಡಿಗೆಯಲ್ಲಿ ಹೋಗಿ ಈ ರ್‍ಾಷ್ಟ್ರೀಯ ಸಮರದಲ್ಲಿ ಜನರ ಪಾತ್ರದ ಬಗ್ಗೆ ತಿಳಿವಳಿಕೆ ಹೇಳಿ ವಿದೇಶಿ ಸರ್ಕಾರದೊಂದಿಗೆ ಅಸಹಕಾರ ತೋರಿಸಬೇಕೆಂದು ಪ್ರಚಾರ ಮಾಡುತ್ತಿದ್ದರು. ತಮ್ಮ ಮಿತ್ರರೊಂದಿಗೆ ಹಳ್ಳಿಗಳಿಗೆ ಪ್ರಚಾರ ಕಾರ್ಯಕ್ಕಾಗಿ ಹೊರಟಿದ್ದರು. ಅವರ ತಂಡ ನಾಗಮಂಗಲ ರಸ್ತೆಯ ಹಳ್ಳಿಯೊಂದನ್ನು ಮುಟ್ಟಿತು. ಇದ್ದಕ್ಕಿದ್ದ ಹಾಗೆಯೇ ಅಲ್ಲಿ ಪೋಲೀಸರು ಮಂಡ್ಯ ಕಾಂಗ್ರೆಸ್ ನಾಯಕರಾದ ಹೆಚ್. ಹೊನ್ನಯ್ಯ, ಪಿ.ಎನ್. ಜವರಪ್ಪಗೌಡ, ವಿದ್ಯಾಧರಪ್ಪ, ಕೆ.ವಿ. ಶಂಕರಗೌಡ ಇನ್ನೂ ಮುಂತಾದವರನ್ನು ದಸ್ತಗಿರಿ ಮಾಡಿದರು. ಚಳವಳಿಕಾರರು ಮಂಡ್ಯ ಮತ್ತು ಬೆಂಗಳೂರು ಜೈಲಿನಲ್ಲಿ ಮೂರು ತಿಂಗಳುಗಳ ಕಾಲ ಸೆರೆವಾಸ ಅನುಭವಿಸಿದರು.

ಸಹಕಾರ ಸಂಘಗಳ ಜನಕ – ರೈತರ ಸಹಕಾರ ಸಂಘ ಹಾಗೂ ರೈತರ ವಿವಿಧೋದ್ದೇಶಗಳ ಸಂಘ ಅನೇಕ ಮುಖವಾಗಿ ಬೆಳೆದು ಬಂದು ಮಹಾ ಸಂಸ್ಥೆಯಾಗಿದೆ. ಈ ಸಂಸ್ಥೆಯ ರೈತ ಸಭಾಂಗಣ ಒಂದು ವಿನೂತನವಾದುದು. ಈ ಸಂಸ್ಥೆಗಳ ಸ್ಥಾಪಕರಾದ ಶಂಕರಗೌಡರು ಏಳೆಂಟು ವರ್ಷಗಳ ಕಾಲ ಅಧ್ಯಕ್ಷ, ಕಾರ್ಯದರ್ಶಿಯ ಸ್ಥಾನದಲ್ಲಿದ್ದುಕೊಂಡು ಅವು ಬೆಳೆಯುವಂತೆ ದುಡಿದರು. ಈ ಎಲ್ಲಾ ಸಂಸ್ಥೆಗಳೂ ಬೆಳೆದು ಸ್ವಯಂ ಪೂರ್ಣವಾದಾಗ ಅಧಿಕಾರ ಸ್ಥಾನಗಳನ್ನು ತಮ್ಮ ಮಿತ್ರರಿಗೆ ವಹಿಸಿಕೊಟ್ಟರು. ಇಂದು ಅವುಗಳ ಫಲ ವೈಫಲ್ಯ ಏನೇ ಇರಲಿ ಅವುಗಳನ್ನು ಸ್ಥಾಪನೆ ಮಾಡಿದ ಮೂಲ ಉದ್ದೇಶ ಮತ್ತು ಬೆಳವಣಿಗೆ ಶ್ರೀ ಶಂಕರಗೌಡರ ಸಂಘಟನಾ ಶಕ್ತಿಯ ದ್ಯೋತಕ ಎಂಬುದನ್ನು ಯಾರೂ ಮರೆಯುವಂತಿಲ್ಲ. ಈ ರೀತಿ ಶಂಕರಗೌಡರು ಮತ್ತು ಮಿತ್ರರ ಅಪೂರ್ವ ಸಂಘಟನಾ ಶಕ್ತಿ ಕಾರ್ಯ ಚತುರತೆ

ಈ ಸಂಸ್ಥೆಗಳನ್ನು ಸರ್ವತೋಮುಖವಾಗಿ ಬೆಳೆಸಿ ಇಂದು ರೈತರ ಕಾಮಧೇನು-ವಾಗಿಸಿದೆ. ಸಹಕಾರ ವಿಷಯದಲ್ಲಿ "ಇಂಡಿಯಾ ಮಂಡ್ಯದಂತಾಗಬೇಕು" ಎಂದು ರಾಷ್ಟ್ರಪತಿಯಾಗಿದ್ದ ನಿವೃತ್ತ ರಾಷ್ಟ್ರಪತಿ ವಿ.ವಿ. ಗಿರಿಯವರು ಹೇಳಿದ ಮಾತು ಔಚಿತ್ಯಪೂರ್ಣವಾಗಿದೆ. ಮಂಡ್ಯ ಜಿಲ್ಲೆಯ ಸಹಕಾರ ಬ್ಯಾಂಕು ಇಡೀ ಭಾರತದಲ್ಲಿ ಎರಡನೆಯದೆಂದು ಹೆಸರುಗಳಿಸಿದೆ. 15.9.1948ರಂದು "ಇರ್ವಿನ್ ನಾಲಾ ರೈತರ ಪರಸ್ಪರ ಸಹಾಯಕ ಸಂಘ" ಎಂಬುದನ್ನು ಸ್ಥಾಪಿಸಿದರು.

1947ನೇ ಸಾಲಿನ ಅಂತ್ಯದಲ್ಲಿ ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಕೆ.ವಿ. ಶಂಕರಗೌಡರು, ಪ್ರಧಾನ ಕಾರ್ಯದರ್ಶಿಯಾಗಿ ಪಿ.ಎನ್. ಜವರಪ್ಪಗೌಡರು, ವ್ಯವಸ್ಥಾಪಕ ಕಾರ್ಯದರ್ಶಿಯಾಗಿ ಎ.ಡಿ. ಬಿಳಿಗೌಡರು, ಖಜಾಂಚಿಯಾಗಿ ಪಿ. ಶ್ರೀನಿವಾಸಯ್ಯನವರು ಅವಿರೋಧವಾಗಿ ಚುನಾಯಿತರಾಗಿ 1958ನೇ ಸಾಲಿನ ತನಕ ಇವರುಗಳೇ ಮುಂದುವರಿದರು.

ರಾಜ್ಯ ರಾಜಕೀಯಕ್ಕೆ ಶಂಕರಗೌಡರು – 1951ನೇ ಸಾಲಿನಲ್ಲಿ ಬಂದ ಸಾರ್ವತ್ರಿಕ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಶಾಸನ ಸಭೆಗೆ ಸದಸ್ಯರಾಗಿ ಚುನಾಯಿತರಾಗಿ ಬಂದರು. ಹನುಮಂತಯ್ಯನವರು ಅವರಿಗೆ ಮಂತ್ರಿಯಾಗಲು ಆಹ್ವಾನ ನೀಡಿದ್ದರು. "ನಾನಿನ್ನು ಚಿಕ್ಕವನು ತನಗಿಂತ ಹಿರಿಯರಿದ್ದಾರೆ ಅವರಿಗೆ ಕೊಡಿ" ಎಂದು ಸೌಜನ್ಯದಿಂದಲೇ ಅದನ್ನು ತಿರಸ್ಕರಿಸಿದರು. ಆದರೆ ಅಧಿಕಾರದ ಬಗೆಗಿನ ದಿವ್ಯ ನಿರ್ಲಕ್ಷ ಅವರ ವ್ಯಕ್ತಿ ಶ್ರೀಮಂತಿಕೆಗೆ ಜ್ವಲಂತ ಸಾಕ್ಷಿಯಾಗಿದೆ. ವಿಧಾನಸಭೆಯಲ್ಲಿ ಒಮ್ಮೆ ಬಜೆಟ್ ಅಧಿವೇಶನದಲ್ಲಿ ಮಾತನಾಡುತ್ತಾ ಸಾಮಾನ್ಯ ಜನರು ನಮ್ಮ ದೇಶದಲ್ಲಿ ಶೇಕಡಾ 80ರಷ್ಟು ತೀವ್ರ ಬಡವರಿದ್ದಾರೆ. ಅವರ ಮೇಲೆ ಎಷ್ಟು ತೆರಿಗೆ ಭಾರ ಹೊರಿಸಬಹುದೋ ಅದಕ್ಕಿಂತ ಹೆಚ್ಚು ಭಾರ ಹೊರೆಸಿದೆ. ಧನಿಕರ ಮತ್ತು ಶ್ರೀಮಂತರ ಮೇಲೆ ಅವರು ಹೊರಬಹುದಾದ ಭಾರಕ್ಕಿಂತ ಬಹಳ ಕಡಿಮೆ ಹೊರೆ ಹೊರಸಲ್ಪಟ್ಟಿದೆ ಎಂದು ಆಪಾದಿಸುತ್ತಾರೆ. ಅಲ್ಲಿಗೆ ಹೀಗೆ ತೆರಿಗೆಯಿಂದ ವಸೂಲಾದ ಹಣದ ಬಹುಭಾಗ ಅಹರ್ನಿಶಿ ಕಷ್ಟಪಟ್ಟು ದುಡಿಯುವ ಸಾಮಾನ್ಯರಿಗೆ ವಿನಿಯೋಗವಾಗುವುದಕ್ಕಿಂತ ಹೆಚ್ಚಾಗಿ ಧನಿಕರಿಗೇ ವ್ಯಯವಾಗುತ್ತದೆ. ಏಕೆಂದರೆ ಈಗ ದೇಶದಲ್ಲಿ ಜನರಿಗೆ ಒದಗಬಹುದಾದ ಆಧುನಿಕ ರೀತಿಯ ವಿದ್ಯಾಭ್ಯಾಸ ಸೌಲಭ್ಯಗಳು, ಅಧುನಿಕ ರೀತಿಯ ವೈದ್ಯಕೀಯ ಸಹಕಾರ ಇವೇ ಮೊದಲಾದ ಅನುಕೂಲಗಳು ಶ್ರೀಮಂತರಿಗೆ, ಮುಂದುವರೆದಿರುವವರಿಗೆ ಎಷ್ಟರ ಮಟ್ಟಿಗೆ ದೊರಕಬಹುದೋ ಅಷ್ಟರ ಮಟ್ಟಿಗೆ ಸಾಧಾರಣ ಪ್ರಜೆಗಳಿಗೆ ದೊರಕುತ್ತಿಲ್ಲ, ಹೀಗೆ ಬಡವರ ಮೇಲೆ ಒಂದೊಂದು ದಿವಸಕ್ಕೆ ಎಷ್ಟು ಬೇಕೋ ಅಷ್ಟೇ ಸಂಪಾದನೆ ಮಾಡಿ ಜೀವಿಸುವವರ ಮೇಲೆ ಅಗಾಧ ತೆರಿಗೆ ಹೊರೆ ಬಿದ್ದಿರುವಾಗ ಶ್ರೀಮಂತರ ಮೇಲೆ ಕೇವಲ ಕಡಿಮೆ ಭಾರ ಬಿದ್ದಿದೆ ಎಂದು

ಹಾಗೂ ಮುಂದುವರೆದು ಮಾತನಾಡುತ್ತಾ ಸಂಪೂರ್ಣ ಪಾನ ನಿಷೇಧ ಮಾಡಿದರೆ ಅದರಿಂದ ಬರುವ ಉತ್ಪತ್ತಿ ಹೋಗುತ್ತವೆಂದು ಹೆದರಿ ಅದನ್ನು ಜಾರಿಗೆ ತರದೆ ಇರುವುದರ ಪರಿಣಾಮವಾಗಿ ಇಂದು ಸಾವಿರಾರು ಸಂಸಾರಗಳಲ್ಲಿ ಸ್ತ್ರೀಯರು, ಮಕ್ಕಳು ಕಣ್ಣೀರಿನಲ್ಲಿ ಕೈತೊಳೆಯುತ್ತಿರುವ ಭೀಕರ ದೃಶ್ಯವನ್ನು ಅಲ್ಲಲ್ಲಿ ನೋಡಬಹುದಾಗಿದೆ. ಪಾನ ನಿಷೇಧವನ್ನು ಪೂರ್ಣವಾಗಿ ಜಾರಿಗೆ ತಂದಿದ್ದರೆ ಇದನ್ನು ನೋಡಬೇಕಾದ ದೌರ್ಭಾಗ್ಯವಿರುತ್ತಿರಲಿಲ್ಲ. ಹೀಗೆ ರೈತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಗೌಡರು ಶಾಸನ ಸಭೆಯಲ್ಲಿ ಮುಖಂಡರೊಬ್ಬರ ಬೇಜವಾಬ್ದಾರಿ ಟೀಕೆಯಿಂದ ಮನನೊಂದು ಶಾಸನಸಭಾ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದರು.

1952ರಲ್ಲಿ ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲುಂಟಾದ ಘೋರ ಕ್ಷಾಮದಿಂದಾಗಿ ಜನ ಜಾನುವಾರುಗಳಿಗೆ ಆಹಾರ ಮತ್ತು ಕುಡಿಯುವ ನೀರಿನ ಸಮಸ್ಯೆ ಉಲ್ಬಣಾವಸ್ಥೆಗೆ ಏರಿತ್ತು. ಈ ಸಮಯದಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದ ಗೌಡರು ಜಿಲ್ಲೆಯದಾದ್ಯಂತ ರೈತರಿಗೆ ಕರೆ ನೀಡಿ ತಮ್ಮ ಸ್ನೇಹಿತರನ್ನು ಬರಮಾಡಿಕೊಂಡು ವಿಶ್ವೇಶ್ವರಯ್ಯ ನಾಲಾ ಬಯಲು ರೈತರಿಂದ ಕ್ಷಾಮ ನಿವಾರಣೆಗಾಗಿ ದವಸ ಮತ್ತು ಹುಲ್ಲನ್ನು ಶೇಖರಿಸಿ ತುಮಕೂರು ಮತ್ತು ಕೋಲಾರದ ಜನರಿಗೆ ಒದಗಿಸಲು ತೀರ್ಮಾನಿಸಿ ಅದರಂತೆ ಜಿಲ್ಲೆಯಾದ್ಯಂತ ಗೌಡರು ಮತ್ತು ಅವರ ಮಿತ್ರರು ಸಂಚರಿಸಿದಾಗ ಹಳ್ಳಿಯ ರೈತರು ತಮ್ಮಲ್ಲಿದ್ದ ದಾಸ್ತಾನಿನಿಂದ ಹುಲ್ಲು ಮತ್ತು ದವಸವನ್ನು ಮಂಡ್ಯದಲ್ಲಿ ಒಂದು ಕಡೆ ಶೇಖರಿಸಿದರು. ಈ ಮಂಡ್ಯ ಜಿಲ್ಲೆಯ ಜನರ ಕೊಡುಗೆಯನ್ನು ಸ್ವೀಕರಿಸಲು ಆಗ ಮುಖ್ಯಮಂತ್ರಿಯಾಗಿದ್ದ ಕೆ. ಹನುಮಂತಯ್ಯ ಮತ್ತು ರಾಜಪ್ರಮುಖರಾದ ಶ್ರೀ ಜಯಚಾಮರಾಜ ಒಡೆಯರು 25.6.1952ರಂದು ಪ್ರವಾಸ ಕೈಗೊಂಡು ಮಂಡ್ಯ ಜನರಿತ್ತ ದವಸಧಾನ್ಯಗಳನ್ನು ಕೋಲಾರ ಜಿಲ್ಲೆಯ ತಾಯಲೂರಿನಲ್ಲಿ ಹಂಚಿ ಮಂಡ್ಯ ಜನತೆ ಹಾಗೂ ಕೆ.ವಿ. ಶಂಕರಗೌಡರ ಈ ಸಹಾಯವನ್ನು ಕೊಂಡಾಡಿದರು.

ಪತ್ರಕರ್ತರಾಗಿ – 1955ರಲ್ಲಿ ಪತ್ರಿಕಾ ರಂಗದಲ್ಲಿ ಅಪಾರ ಆಸಕ್ತಿಯಿದ್ದ ಗೌಡರು "ಜನಮನ" ಎಂಬ ಉನ್ನತ ಮಟ್ಟದ ವಿಚಾರಧಾರೆಯ ಪತ್ರಿಕೆಯನ್ನು ಪ್ರಾರಂಭಿಸಿದರು. ನೇರ ನಿಷ್ಠುರ ಮತ್ತು ವೈವಿಧ್ಯಮಯ ಬರವಣಿಗೆಗಳಿಂದ ಇದೊಂದು ಉತ್ತಮ ಪತ್ರಿಕೆಯಾಗಿ ಹೊರಬಂದಿತು. ಪತ್ರಿಕೆಯ ಮೂಲಕ ಸಮಾಜದಲ್ಲಿ ವ್ಯಾಪಕವಾಗಿ ಹರಡಿಕೊಂಡಿದ್ದ ಭ್ರಷ್ಟಾಚಾರವನ್ನು ತೊಲಗಿಸಿ, ಸಮಾಜವನ್ನು ಶುದ್ಧೀಕರಿಸಬಹುದೆಂಬ ಕಲ್ಪನೆ ಅವರದು. ಆ ವ್ಯವಹಾರದಲ್ಲಿಯೂ ಅವರು ಎತ್ತರದ ಆದರ್ಶವನ್ನು ಕಣ್ಮುಂದಿರಿಸಿಕೊಂಡರೇ ಹೊರತು, ವಾಸ್ತವ ಸಂಗತಿಗಳನ್ನಲ್ಲ. ಸರ್ಕಾರದಿಂದ ಜಾಹಿರಾತು ಪಡೆಯುವುದಿಲ್ಲವೆಂದು ಅವರು ಸಂಕಲ್ಪ ತೊಟ್ಟು ಹಣದ ಮುಗ್ಗಟ್ಟನ್ನು

ಅನುಭವಿಸಿದರೂ ಕೂಡ ಲೇಖಕರಿಗೆ ಸೂಕ್ತ ಸಂಭಾವನೆ ನೀಡುತ್ತಿದ್ದರು. ಆದರೆ ಪತ್ರಿಕೆಯ ಆದಾಯ ಬಹಳ ಕಡಿಮೆಯಾಗಿ ನಷ್ಟವನ್ನು ಸರಿದೂಗಿಸಲಾರದೇ ಸುಮಾರು ಒಂಬತ್ತು ತಿಂಗಳುಗಳಲ್ಲಿ ಅಪಾರ ಹಣಕಾಸಿನ ಮುಗ್ಗಟ್ಟನ್ನು ಎದುರಿಸಿ ವಿಧಿಯೇ ಇಲ್ಲದೇ ಪತ್ರಿಕೆಯನ್ನು ನಿಲ್ಲಿಸಿದರು.

ಮಂಡ್ಯ ಜಿಲ್ಲೆಯ ರೈತರ ಅನಕ್ಷರತೆ ಹಾಗೂ ಬಡತನವನ್ನು ಕಣ್ಣಾರೆ ಕಂಡ ಗೌಡರು ಮಂಡ್ಯ ಜಿಲ್ಲೆಯಲ್ಲೊಂದು ವಯಸ್ಕರ ಶಿಕ್ಷಣದ ವಿದ್ಯಾಪೀಠವನ್ನು ತೆರೆದರು.

1955ರ ಸುಮಾರಿನಲ್ಲಿ ರಾಷ್ಟ್ರದಲ್ಲಿ ಭಾಷಾವಾರು ಪ್ರಾಂತ ರಚನಾ ಆಂದೋಲನವು ಬಿರುಗಾಳಿಯಂತೆ ಬೀಸತೊಡಗಿತು. ಶಂಕರಗೌಡರು ಮಂಡ್ಯದಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ವಿರುದ್ಧ ಸಮ್ಮೇಳನಕ್ಕೆ ಸ್ವಾಗತ ಸಮಿತಿಯ ಅಧ್ಯಕ್ಷರಾದರು.

ಈ ನಿಟ್ಟಿನಲ್ಲಿ ಮಂಡ್ಯದಲ್ಲಿ ಜನವರಿ 1ನೇ ತಾರೀಖು 1956ರಂದು ಮೈಸೂರು ವಿಲೀನ ವಿರೋಧಿ ಸಮ್ಮೇಳನಾರಂಭವಾಯಿತು. ಸಂಸ್ಥಾನದ ನಾನಾ ಭಾಗಗಳಿಂದ ಸುಮಾರು 2000ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದರು. ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಹೆಚ್.ಕೆ. ವೀರಣ್ಣಗೌಡರು ಮೈಸೂರಿನ ವೈಶಿಷ್ಟ್ಯವನ್ನು ತಿಳಿಸಿ ಆಡಳಿತದ ಹಿತದೃಷ್ಟಿಯಿಂದ ಮೈಸೂರು ಕರ್ನಾಟಕದಲ್ಲಿ ಐಕ್ಯವಾಗುವುದು ಸರಿಯಲ್ಲವೆಂದು ಮನಮುಟ್ಟುವಂತೆ ಜನತೆಗೆ ತಿಳಿಸಿದರು. ಪ್ರದರ್ಶನದಲ್ಲಿ ಪ್ರತಿಭಟನಾಕಾರರು 65 ಜೊತೆ ಎತ್ತುಗಳನ್ನು ಕಟ್ಟಿದ ರಥದಲ್ಲಿ ಭಾರತ ಮಾತೆ ಹಾಗೂ ಶ್ರೀ ಮನ್ಮಹಾರಾಜರ ಭಾವ ಚಿತ್ರಗಳನ್ನಿಟ್ಟು ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ನಂತರ ಶಂಕರಗೌಡರು ಮಾತನಾಡಿ ಮೈಸೂರಿನ ಇತಿಹಾಸದಲ್ಲಿ ಮೊಟ್ಟ ಮೊದಲಿಗೆ ಇಂತಹ ಸಮ್ಮೇಳನ ನಡೆಯುತ್ತಿರುವುದಾಗಿಯೂ ಹಾಗೂ ಸಮ್ಮೇಳನದ ಧ್ಯೇಯಗಳನ್ನು ವಿವರಿಸಿ ಮೈಸೂರು ವಿಲೀನವಾಗುವುದನ್ನು ವಿರೋಧಿಸಿದರು. ಆದರೆ ಅಂತಿಮವಾಗಿ ಎಷ್ಟೇ ಎಡರು ತೊಡರುಗಳಿದ್ದರೂ ಕೂಡ ಮೈಸೂರು ಕರ್ನಾಟಕದಲ್ಲಿ ವಿಲೀನವಾಯಿತು (ಕರ್ನಾಟಕದ ಏಕೀಕರಣವಾಯಿತು).

ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾಗಿ – 1962ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸಿದ ಗೌಡರು ರಾಜಕೀಯ ಗುಂಪುಗುಳಿತನದಿಂದ ಕೇವಲ 600 ಮತಗಳ ಅಂತರದಿಂದ ಸೋಲನ್ನನುಭವಿಸಿದರು. ಆದರೆ ಸೋತು ಸುಮ್ಮನಿರದ ಗೌಡರು ಮಂಡ್ಯ ಜಿಲ್ಲಾ ರೈತರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಚಿಂತಿಸಿ ಒಂದು ಶಿಕ್ಷಣ ಸಂಸ್ಥೆಯನ್ನು ತೆರೆದರು. ಮಂಡ್ಯ ಜಿಲ್ಲೆ ಹಳ್ಳಿಗಳ ಪ್ರದೇಶ, ಈ ಜಿಲ್ಲೆಯ ಜನರಲ್ಲಿ ನೂರಕ್ಕೆ ತೊಂಬತ್ತು ಜನ ವ್ಯವಸಾಯದಿಂದ ಜೀವಿಸುವ ರೈತರು. ಈ ಜನ ತಮ್ಮ ಮಕ್ಕಳಿಗೆ ಸರಿಯಾದ ಶಿಕ್ಷಣ

ಕೊಡಿಸಲು ಅಸಮರ್ಥರಾಗಿದ್ದರು. ಹಳ್ಳಿಯಿಂದ ನಗರಗಳಿಗೆ ಬಂದು ವ್ಯಾಸಂಗ ಮಾಡಲು ಈ ಹುಡುಗರಿಗೆ ಯಾವ ರೀತಿಯ ಅನುಕೂಲಗಳೂ ಇರಲಿಲ್ಲ. ತಮ್ಮ ಬಾಲ್ಯದಲ್ಲಿ ಗೌಡರಿಗೂ ಇಂಥದೇ ಸಮಸ್ಯೆ ಎದುರಾಗಿತ್ತು. ತಮ್ಮ ಮಿತ್ರರನ್ನು ಕೂಡಿಕೊಂಡು ಶಂಕರಗೌಡರು ಜಿಲ್ಲೆಯ ಪ್ರಮುಖ ಕೇಂದ್ರಗಳಲ್ಲಿ ನಾಟಕವಾಡಿದರು. "ದಾನಶೂರ ಕರ್ಣ" ಮತ್ತು "ಪಾದುಕಾ ಕೀರೀಟ" ಎಂಬ ಎರಡು ನಾಟಕಗಳನ್ನು ಮಾಡಿ ಅದರಲ್ಲಿ ಶಂಕರಗೌಡರು ಸ್ವತಃ ಕರ್ಣನ ಪಾತ್ರವನ್ನು ಅಭಿನಯಿಸಿದರು. ಇದರಿಂದ 37,000ರೂ.ಗಳಷ್ಟು ವಸೂಲಾಯಿತು.

ಇದರಿಂದ ಬಂದ ಹಣದಲ್ಲಿ ಮಂಡ್ಯ ಮತ್ತು ನಾಗಮಂಗಲದಲ್ಲಿ ಒಕ್ಕಲಿಗರ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು. ಇದರೊಂದಿಗೆ ಜಿಲ್ಲೆಯ ಶಿಕ್ಷಣ ಸಮಸ್ಯೆ ನೀಗಲು ಜನತಾಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇದು ಪ್ರಾಥಮಿಕ ಶಿಕ್ಷಣ ಹಾಗೂ ನರ್ಸರಿ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣ, ಮಹಿಳಾ ಶಿಕ್ಷಣ, ಗೃಹ ಹಾಗೂ ಕರಕುಶಲ ಕಸುಬುಗಳ ಬಗ್ಗೆ ವಿಶೇಷವಾಗಿ ಗ್ರಾಮೀಣ ರೈತರ ಮಕ್ಕಳಿಗೆ ತರಬೇತಿಯನ್ನು ನೀಡುವುದು, ಶಾಲಾ ಕಾಲೇಜುಗಳನ್ನು ವಿವಿಧ ಸ್ಥಳಗಳಲ್ಲಿ ತೆರೆಯುವುದು, ಹೀಗೆ ಇನ್ನೂ ಹಲವಾರು ಧ್ಯೇಯೋದ್ದೇಶಗಳನ್ನು ಹೊಂದಿ 1958ರಲ್ಲಿ ಅಸ್ತಿತ್ವಕ್ಕೆ ಬಂದಿತು. ಹೀಗೆ ಶಂಕರಗೌಡರು ಮಂಡ್ಯ ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಇದರ ಅಂಗವಾಗಿ ಮಂಡ್ಯದಲ್ಲಿ ಇಂದು ಒಂದು ಪ್ರಥಮ ದರ್ಜೆ ಕಾಲೇಜು, ಒಂದು ಇಂಜಿನಿಯರಿಂಗ್ ಕಾಲೇಜು ಹಾಗೂ ಒಂದು ಶಿಕ್ಷಣ ಮಹಾವಿದ್ಯಾಲಯ, ಕಾನೂನು ಕಾಲೇಜು, ಶಿಕ್ಷಕ ತರಬೇತಿ ಕಾಲೇಜುಗಳನ್ನು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಈ ರೀತಿ ಮಂಡ್ಯದಲ್ಲಿ ಗೌಡರು ಶಿಕ್ಷಣ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನು ಆರಂಭಿಸಿದರು ಎಂಬುದರಲ್ಲಿ ಸಂಶಯವಿಲ್ಲ.

ಶಂಕರಗೌಡರು ರಾಜಕೀಯವನ್ನು ಬಿಡಲು ಯತ್ನಿಸಿದರೂ ರಾಜಕೀಯ ಅವರನ್ನು ಬಿಡಲಿಲ್ಲ. 1966ರಲ್ಲಿ ಸ್ಥಳೀಯ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ ಶಂಕರಗೌಡರು ತಮ್ಮ ಪ್ರತಿಸ್ಪರ್ಧಿ ಜನತಾಪಕ್ಷದ ಚಿಕ್ಕಲಿಂಗಯ್ಯನವರನ್ನು 190 ಮತಗಳ ಅಂತರದಿಂದ ಸೋಲಿಸಿ ವಿಜಯಿಯಾದರು.

1967ರಲ್ಲಿ ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ವೀರೇಂದ್ರ ಪಾಟೀಲರ ಮಂತ್ರಿಮಂಡಲದಲ್ಲಿ ಶಿಕ್ಷಣ ಸಚಿವರಾಗಿ ಶಂಕರಗೌಡರು ಅಧಿಕಾರ ವಹಿಸಿಕೊಂಡರು. ಗೌಡರು ಶಿಕ್ಷಣ ಖಾತೆ ಸಚಿವರಾದ ಕೂಡಲೇ ಶಿಕ್ಷಣ ಇಲಾಖೆ ಒಂದು ಹೊಸ ಚೈತನ್ಯವನ್ನು ಕಂಡವು. ಈ ಹಿಂದೆ ಬಿದ್ದಿದ್ದ ಹಲವಾರು ಯೋಜನೆಗಳು ಇವರು ಬಂದ ನಂತರ

ಚಾಲನೆಯನ್ನು ಪಡೆದುಕೊಂಡವು. ಇವರು ವಿದ್ಯಾ ಇಲಾಖೆಯ ಸಚಿವರಾದಾಗ ಮೊಟ್ಟ ಮೊದಲಿಗೆ ರಾಜ್ಯದ ಖಾಸಗಿ ಮತ್ತು ಸ್ಥಳೀಯ ಸಂಸ್ಥೆ ಸರ್ಕಾರಿ ಶಾಲೆಗಳ ಹಾಗೂ ಪ್ರೌಢಶಾಲೆಗಳ ಅಧ್ಯಾಪಕರುಗಳ ವೇತನವನ್ನು ಸರ್ಕಾರದವರೇ ನೇರವಾಗಿ ಬ್ಯಾಂಕ್ ಚೆಕ್ ಮೂಲಕ ಕೊಡುವ ಪದ್ಧತಿಯನ್ನು ಜಾರಿಗೊಳಿಸಿದರು.

ನಂತರ ಇವರು ದೆಹಲಿಯಲ್ಲಿ ನಡೆದ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ಭಾಗವಹಿಸಿ ಅಲ್ಲಿನ ತೀರ್ಮಾನದಂತೆ 10 ವರ್ಷಗಳ ಅವಧಿಯ ಸಾಮಾನ್ಯ ಶಿಕ್ಷಣ ಹಾಗೂ ಐಚ್ಛಿಕ ವಿಷಯಗಳನ್ನು ತೆಗೆಯಬೇಕು ಆನಂತರ 2 ವರ್ಷಗಳ ಪ್ರೀ-ಯೂನಿವರ್ಸಿಟಿ ಶಿಕ್ಷಣ ದೊರಕಬೇಕು. ಇದೊಂದು ಸ್ವತಂತ್ರ ಘಟಕ ಹಾಗೂ ಮುಕ್ತಾಯ ಘಟಕವೂ ಹೌದು, ಅನಂತರ ಪದವಿ ಶಿಕ್ಷಣ ಮೂರು ವರ್ಷಗಳ ಅವಧಿಗಳೆಂದು, ಅಂದರೆ 10+2+3 ಆಗಿರಬೇಕೆಂದು ನಿರ್ಧರಿಸಿದರು. ಕನ್ನಡ ಮಾಧ್ಯಮ ವಿಶ್ವವಿದ್ಯಾನಿಲಯಗಳ ಮಟ್ಟದಲ್ಲೂ ಜಾರಿಗೊಳಿಸಲು ತೀರ್ಮಾನಿಸಿ ಈ ವ್ಯವಸ್ಥೆ ಅಂತಿಮವಾಗಿ 1972ನೇ ಶಾಲಾ ವರ್ಷದಿಂದ ಅನುಷ್ಠಾನಕ್ಕೆ ತರುವುದರ ಮೂಲಕ ಕರ್ನಾಟಕ ಶಿಕ್ಷಣ ಇಲಾಖೆಯ ಇತಿಹಾಸದಲ್ಲಿ ಒಂದು ಕ್ರಾಂತಿಯನ್ನೇ ಮಾಡಿದರು. ಈ ಯೋಜನೆ ಇಡೀ ಭಾರತದಾದ್ಯಂತ ಎಲ್ಲಾ ರಾಜ್ಯಗಳ ಗಮನ ಸೆಳೆಯಿತಲ್ಲದೆ ಮೈಸೂರು ಯೋಜನೆ ಎಂದು ಎಲ್ಲರಿಂದಲೂ ಮೆಚ್ಚುಗೆ ಪಡೆಯಿತು.

ಶಿಕ್ಷಣ ಸಚಿವರಾಗಿ – ಶಂಕರಗೌಡರು ಶಿಕ್ಷಣ ಸಚಿವರಾಗಿದ್ದ ಕಾಲ ಕನ್ನಡದ ಸುವರ್ಣಯುಗವೆಂದು ಹೇಳಬಹುದು. ತಾಂತ್ರಿಕ ಮತ್ತು ಮೆಡಿಕಲ್ ಶಿಕ್ಷಣದಲ್ಲಿ ಹೊರತುಪಡಿಸಿ ಇತರ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಯಿತು. ವಿದ್ಯಾರ್ಥಿಗಳಲ್ಲಿ ದೇಶ ಪ್ರೇಮವನ್ನು ಹುಟ್ಟಿಸುವಂತಹ ರೀತಿಯಲ್ಲಿ ಪಠ್ಯ ಪುಸ್ತಕಗಳು ಬರೆಯಲ್ಪಟ್ಟಿಲ್ಲವೆಂದು ಅವರು ಹೇಳಿ ನಾಡಿನ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಸಾಧಿಸುವಂತಹ ವಿದ್ಯಾಭ್ಯಾಸವು ಏರ್ಪಡಬೇಕೆಂದು ಅವರು ತಿಳಿಸಿದರು.

ಇವರ ಕಾಲದಲ್ಲಿ ಕನ್ನಡ ಭಾಷೆಯಲ್ಲಿ ರಚಿತವಾದ "ಕನ್ನಡ ವಿಶ್ವಕೋಶ" ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗವಾಗಿ ಮರುಹುಟ್ಟು ಪಡೆಯಿತು. ಇವರ ಸತತ ಪ್ರೋತ್ಸಾಹದಿಂದ ನಂತರದ ಆರು ವರ್ಷಗಳಲ್ಲಿ ಇದರ ಏಳು ಸಂಪುಟಗಳು ಪ್ರಕಟ-ವಾದವು. ಅಲ್ಲದೆ ಕಿರಿಯರ ಜ್ಞಾನ ಗಂಗೋತ್ರಿಯ 10 ಸಂಪುಟಗಳು ಪ್ರಕಟವಾದವು. ಈ ಯೋಜನೆಗಾಗಿ ಸರ್ಕಾರ 90 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿತು.

ಕನ್ನಡ ಸಾಹಿತ್ಯ ಪರಿಷತ್‌ಗೆ ಕಾಯಕಲ್ಪ – ಇವರ ಕಾಲದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಹೆಚ್ಚಿನ ಧನಸಹಾಯ ನೀಡಿದರು. ಪರಿಷತ್ತಿನ 15 ಲಕ್ಷ ರೂಪಾಯಿಗಳ ತ್ರೈವಾರ್ಷಿಕ ಯೋಜನೆಯ ಅರ್ಧವೆಚ್ಚವನ್ನು ಭರಿಸಿದರು. ಪರಿಷತ್ತಿನ ಈ

ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಶಾಖೆಗಳು ತೆರೆಯಲ್ಪಟ್ಟವು ಮತ್ತು ಪರಿಷತ್ತಿನಿಂದ ಕನ್ನಡ-ಕನ್ನಡ ನಿಘಂಟು 13 ಸಂಪುಟಗಳಲ್ಲಿ ಹೊರತರಲಾಯಿತು. ಪರಿಷತ್ತಿನಿಂದ ಪ್ರಚಾರೋಪನ್ಯಾಸಗಳು, ಸಮ್ಮೇಳನಗಳು ಮತ್ತು ಸಾಹಿತ್ಯೋತ್ಸವಗಳು ಕೇಂದ್ರ-ಪ್ರಾಂತ ಸರಕಾರಗಳು ಮತ್ತು ವಿಶ್ವವಿದ್ಯಾನಿಲಯ-ಗಳೊಡನೆ ಸಹಕಾರ ನೀಡಿ ರಾಜಧಾನಿಯಲ್ಲಿ ಕನ್ನಡದ ಅಭಿಮಾನವನ್ನು ಬೆಳೆಸುವುದು ಇದೇ ಮೊದಲಾದ ಪರಿಷತ್ತಿನ ಯೋಜನೆಗಳಿಗೆ ಶಂಕರಗೌಡರು ಬೆಂಬಲಿಸಿ ಸರ್ಕಾರದಿಂದ ಹಣ ಸಹಾಯ ಒದಗಿಸಲು ಸಂಪೂರ್ಣ ಪ್ರಯತ್ನ ಮಾಡಿದರು.

ಕನ್ನಡ ವಿಶ್ವಕೋಶ ಮತ್ತು ಕೆ.ವಿ.ಎಸ್. – ಇವರು ಕರ್ನಾಟಕ ಸಹಕಾರ ಪ್ರಕಟನಾಲಯವನ್ನು ಸ್ಥಾಪಿಸಲು ಕಾರಣರಾಗಿದ್ದು ಈ ಪ್ರಕಟನಾಲಯದ ವತಿಯಿಂದ "ಕಿರಿಯರ ವಿಶ್ವಕೋಶ" ಏಳು ಸಂಪುಟಗಳಲ್ಲಿ ಪ್ರಕಟವಾಗಿ ಇದಕ್ಕಾಗಿ ಅಂದಾಜುವೆಚ್ಚ 38 ಲಕ್ಷ ತಗುಲಿದ್ದು 15000 ಪ್ರತಿಗಳನ್ನು ಶಾಲೆಗಳ ಸಲುವಾಗಿ ಮುಂಗಡವಾಗಿಯೇ ಹಣಕೊಟ್ಟು ಕೊಳ್ಳಲು ನಿರ್ಧರಿಸಲಾಯಿತು. ಈ ರೀತಿ ನಿರ್ಧಾರದ ಕೀರ್ತಿ ಹೆಚ್ಚು ಕಡಿಮೆ ಶಿಕ್ಷಣ ಮಂತ್ರಿಯಾಗಿದ್ದ ಕೆ.ವಿ. ಶಂಕರಗೌಡರಿಗೆ ಸಲ್ಲುತ್ತದೆ. ಇದು ಅಲ್ಲದೆ ಕರ್ನಾಟಕ ಸಹಕಾರ ಮಂದಿರದ ಪ್ರಥಮ ಅಧ್ಯಕ್ಷರಾಗಿ ಹಾಗೂ ಕಂಠೀರವ ಸ್ಟುಡಿಯೋದ ಸ್ಥಾಪಕ ಅಧ್ಯಕ್ಷರಾಗಿಯೂ ದುಡಿದಿದ್ದಾರೆ. ನಿಜಲಿಂಗಪ್ಪನವರ ಕಾಲದಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಇವರು ಸಂಸ್ಥಾ ಕಾಂಗ್ರೆಸ್‌ನಲ್ಲಿ ಉಳಿದರು.


ವರುಣಾನಾಲೆ ರೈತ ಸತ್ಯಾಗ್ರಹದಲ್ಲಿ ಗೌಡರು – ರೈತರ ಬಗ್ಗೆ ಅಪಾರ ಒಲವಿದ್ದ ಗೌಡರು 1970ರ ದಶಕದಲ್ಲಿ ಮಂಡ್ಯ ಜಿಲ್ಲೆಯಲ್ಲಿ ನಡೆದ ವರುಣಾ ನಾಲ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಕಾವೇರಿ ನದಿ ನೀರನ್ನು ಕೃಷಿಗೆ ಬಳಸಿಕೊಳ್ಳಲು 1924ರಲ್ಲಿ ಕಾವೇರಿ ನೀರಿನ ಹಂಚಿಕೆ ಸಂಬಂಧ ಮೈಸೂರು-ಮದ್ರಾಸ್ ಸರ್ಕಾರಗಳ ನಡುವೆ ಒಪ್ಪಂದವೇರ್ಪಟ್ಟು ಈ ಒಪ್ಪಂದ 50 ವರ್ಷಗಳವರೆಗೆ ಮುಂದುವರಿಯುವುದೆಂದು 1911ರಲ್ಲಿ ಬಿ. ಸುಬ್ಬರಾವ್ ಎಂಬ ಅಧಿಕಾರಿ ಕೆ.ಆರ್.ಎಸ್. ಯೋಜನೆಗೆ ಪೂರ್ವಭಾವಿ ವರದಿಯಲ್ಲಿ ಬಲದಂಡೆ ನಾಲೆಗೆ ಒಂದು ತೂಬು ಇಡಬಹುದೆಂದು ತಿಳಿಸಿದರು. ಇದೇ ಆಧಾರದ ಮೇಲೆ ಮೈಸೂರು ಜಿಲ್ಲೆಯ ಅದರಲ್ಲೂ ಮೈಸೂರು ತಾಲ್ಲೂಕಿನ ರೈತರು ವರುಣಾ ನಾಲೆಯನ್ನು ಪ್ರಾರಂಭಿಸಬೇಕೆಂದು ಒತ್ತಾಯಿಸಿದರು. ಆದರೆ ಹಲವಾರು ಪ್ರತಿಭಟನೆಯ ಹಿನ್ನೆಲೆಯಲ್ಲಿ ಈ ಕಾಮಗಾರಿಯನ್ನು ಸ್ಥಗಿತಗೊಳಿಸಿದರು. ಆದರೆ ಡಿ. ದೇವರಾಜ ಅರಸು ಸರ್ಕಾರ 1976ರಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಂಡಿತು. ಈ ನಾಲೆಯ ನಿರ್ಮಾಣದಿಂದ ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳ 80,000 ಎಕರೆ ಖುಷ್ಕಿ ಬೆಳೆಯನ್ನು ತೆಗೆಯಲು ಅನುಕೂಲವಾಗುವುದೆಂದು ಮನಗಂಡ ಅರಸು ಸರ್ಕಾರ ಇದನ್ನು

ಪ್ರತಿಷ್ಠೆಯ ವಿಷಯವಾಗಿ ತೆಗೆದುಕೊಂಡು ಕಾಮಗಾರಿಯನ್ನು ಆರಂಭಿಸಿತು. ಆದರೆ ಅರಸು ಸರ್ಕಾರದಲ್ಲಿ ಮಂತ್ರಿಯಾಗಿದ್ದ ಎಸ್.ಎಂ. ಕೃಷ್ಣರವರು ಇದನ್ನು ವಿರೋಧಿಸಿದರು. ಈ ವೇಳೆಗೆ ವಿಶ್ವೇಶ್ವರಯ್ಯ ನಾಲೆಯಲ್ಲಿ ಹರಿವು ನೀರಿನ ಪ್ರಮಾಣ ಕಡಿಮೆಯಾಗಿದ್ದು ಮಂಡ್ಯ ಜಿಲ್ಲೆಯ ರೈತರಿಗೆ ಸಾಲದೆ ಪ್ರತಿ ವರ್ಷ ಶೇಕಡ 20–40 ಭಾಗ ಬೆಳೆ ನಷ್ಟವಾಗುತ್ತಿದ್ದು ಮನಗಂಡ ಶಂಕರಗೌಡರು ವರುಣಾ ನಾಲಾ ವಿರೋಧಿ ಚಳವಳಿಯನ್ನು ಆರಂಭಿಸಿದರು.

ನಾಟಕಕಾರರಾಗಿ ಕೆ.ವಿ.ಎಸ್. – ಬರೀ ರಾಜಕಾರಣಿ ಮಾತ್ರವೇ ಅಲ್ಲದೆ ಸ್ವಯಂ ಕಲಾವಿದರಾಗಿ ಹಲವಾರು ನಾಟಕಗಳನ್ನು ರಚಿಸಿ ನಿರ್ದೇಶಿಸಿದ್ದಾರೆ. ಕೂಡಿ ಬಾಳೋಣ, ಇವರು ರಚಿಸಿದ ಮೊದಲ ನಾಟಕ. ಸಹಕಾರ ತತ್ವ ತಳಹದಿಯ ಆಧಾರದ ಮೇಲೆ ರಚಿತವಾದ ಈ ನಾಟಕ ಹಳ್ಳಿಯಲ್ಲಿ ಪರಸ್ಪರ ಸಹಕಾರದಿಂದ ಜೀವನ ನಡೆಸುವುದರ ಬಗ್ಗೆ ವಿವರಣೆ ನೀಡುತ್ತದೆ. ಪಾದುಕಾ ಕಿರೀಟ, ದನಿ, ಕೋಕಿಲ, ಇನ್ನೊಂದು ಮುಖ, ಅಪರಂಜಿ, ಶಿಷ್ಟಾಚಾರ, ಹೀಗೆ ಹಲವಾರು ನಾಟಕಗಳನ್ನು ರಚಿಸಿ ನಿರ್ದೇಶಿಸಿದ್ದಾರೆ. ಇವರು ಚಲನಚಿತ್ರ ನಿರ್ಮಾಪಕರಾಗಿಯೂ ಹಲವು ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಇವರ ಕೂಡಿ ಬಾಳೋಣ ನಾಟಕದ ಆಧಾರದ ಮೇಲೆ ಕೂಡಿ ಬಾಳೋಣ ಚಲನಚಿತ್ರ ನಿರ್ಮಿಸಿ ರಾಜ್ಯ ಪ್ರಶಸ್ತಿಯನ್ನು ಕೂಡಾ ಪಡೆದುಕೊಂಡರು. ಇವರು ನಿರ್ಮಿಸಿದ ಮುತ್ತು ಒಂದು ಮುತ್ತು, ಚೌಕದ ದೀಪ, ಮರೆಯದ ಹಾಡು, ಹೊಸ ನೀರು ಮತ್ತು ಸಂಕ್ರಾಂತಿ ಮುಂತಾದ ಚಿತ್ರಗಳು ಸಹ ಆಯಾ ವರ್ಷಗಳಲ್ಲಿ ರಾಜ್ಯ ಪ್ರಶಸ್ತಿ ಗಳಿಸಿವೆ. ಇವರು ಗಾಂಧೀಜಿಯವರ ಅನುಯಾಯಿಗಳಾಗಿದ್ದು ಅವರ ಸ್ವಗ್ರಾಮ ಕೀಲಾರದಲ್ಲಿ ಒಂದು ಚರಕಾಕೇಂದ್ರವನ್ನು ತೆರೆದು ಅಲ್ಲಿ ನೂರಾರು ಕಾರ್ಮಿಕರಿಗೆ ಉದ್ಯೋಗ ಕೊಡುವಲ್ಲಿ ಯಶಸ್ವಿಯಾದರು. ಈ ಉದ್ದೇಶಕ್ಕಾಗಿ 1980ರಲ್ಲಿ "ಲೋಕಸೇವಕ" ಎಂಬ ಹೆಸರಲ್ಲಿ ಒಂದು ಸಂಘವನ್ನು ಸ್ಥಾಪಿಸಿದರು. ರೈತ ಹಾಗೂ ಗ್ರಾಮಾಭಿವೃದ್ದಿಯ ಕೆಲಸಗಳು ಈ ಸಂಘದ ಮೂಲಕ ಚುರುಕಾಗಿ ನಡೆದವು. ಇವರು ಗಾಂಧೀವಾದಿಯಾಗಿದ್ದರಲ್ಲದೆ ಮಹಾತ್ಮ ಗಾಂಧೀಜಿಯವರನ್ನು ಕುರಿತು ಪ್ಯಾರಲಾಲ್ ಬರೆದ ಅಂತಿಮ ಹಂತ ಎಂಬ ಮಹಾ ಸಂಪುಟವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಶಂಕರಗೌಡರು ಮಂಡ್ಯದಲ್ಲಿ "ಗೆಳೆಯರ ಬಳಗ" ಎಂಬ ಸಾಂಸ್ಕೃತಿಕ ಕೂಟದ ಸ್ಥಾಪನೆಯನ್ನು ಮಾಡಿದರು. ಆ ಮೂಲಕ ಮಂಡ್ಯದ ಅನೇಕ ಯುವಕರು ರಂಗ ಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸತೊಡಗಿದರು. ಜನತಾಶಿಕ್ಷಣ ಸಂಸ್ಥೆಯಲ್ಲೂ ಸಹ ವಿವೇಕಾನಂದ ರಂಗಮಂದಿರವನ್ನು ಹಾಗೂ ತಮ್ಮ ಸ್ವಗ್ರಾಮ ಕೀಲಾರದಲ್ಲೂ ಒಂದು ರಂಗಮಂದಿರವನ್ನು ನಿರ್ಮಿಸಿದ್ದಾರೆ.

ಹೀಗೆ ಶಂಕರಗೌಡರು ರಾಜಕಾರಣಿಯಾಗಿ, ಶಿಕ್ಷಣ ತಜ್ಞರಾಗಿ, ಸಹಕಾರಿ ಧುರೀಣರಾಗಿ, ನಾಟಕಕಾರರಾಗಿ, ಚಲನಚಿತ್ರ ನಿರ್ಮಾಪಕರಾಗಿ ದುಡಿದು 1990ರ ಮಾರ್ಚ್ 4 ರಂದು ಮಂಡ್ಯದ ತಮ್ಮ ಸ್ವಗೃಹದಲ್ಲಿ ನಿಧನರಾದರು. ಹೀಗೆ ವಿಶಿಷ್ಟ ಕೊಡುಗೆಗಳನ್ನು ನೀಡಿದ ಶಂಕರಗೌಡರು ಇಂದು ನಮ್ಮೊಡನಿಲ್ಲದಿದ್ದರೂ ಅವರು ಹಾಕಿದ ಹಲವಾರು ಯೋಜನೆಗಳಿವೆ. ಇವರ ಕಾರ್ಯಗಳು ಇನ್ನೂ ಹಚ್ಚ ಹಸಿರಾಗಿದೆ. 1990ರಲ್ಲಿ ಕೆ.ವಿ. ಶಂಕರಗೌಡ ಪ್ರತಿಷ್ಠಾನ ಟ್ರಸ್ಟ್ ಸ್ಥಾಪಿಸಿ ಅವರಿಗೆ ಪ್ರಿಯವಾದ ರಂಗಭೂಮಿ ಹಾಗೂ ಸಮಾಜ ಸೇವೆಗಾಗಿ ದುಡಿದ ನಾಡಿನ ಪ್ರಮುಖರನ್ನು ಗುರುತಿಸಿ ಅವರಿಗೆ ಈ ಟ್ರಸ್ಟ್‌ನ ವತಿಯಿಂದ ಪ್ರತಿ ವರ್ಷ ಅವರ ಪುಣ್ಯ ಸ್ಮರಣಾ ದಿನದಂದು ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಶಂಕರಗೌಡರು ಒಂದು ವ್ಯಕ್ತಿಯಲ್ಲ ಒಂದು ಅಭೂತಪೂರ್ವವಾದ ಸಂಘಟನಾ ಶಕ್ತಿಯ ಹಾಗೂ ಚೈತನ್ಯದ ಚಿಲುಮೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಶ್ರೀಯುತರನ್ನು ಕುವೆಂಪುರವರು **'ನಿತ್ಯ ಸಚಿವ'** ಎನ್ನುತ್ತಿದ್ದರು.

ಡಾ. ಬಿ.ಪಿ. ರಾಧಾಕೃಷ್ಣ



ಅಂತರರಾಷ್ಟ್ರೀಯ ಭೂವಿಜ್ಞಾನ ಕ್ಷೇತ್ರ-ದಲ್ಲಿಯೇ ದೊಡ್ಡ ಹೆಸರು ಬೆಂಗಳೂರು ಪುಟ್ಟಯ್ಯ ರಾಧಾಕೃಷ್ಣ. ಇವರ ತಂದೆ ಬಿ. ಪುಟ್ಟಯ್ಯನವರು ಇಂದಿಗೆ ನೂರು ವರ್ಷಗಳ ಹಿಂದೆ ರಾಜ್ಯ ಒಕ್ಕಲಿಗರ ಸಂಘ ಸ್ಥಾಪನೆಗಾಗಿ ದುಡಿದ ಹಿರಿಯ ಚೇತನ. ರಾಧಾಕೃಷ್ಣರವರು 30.4.1918ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ತಂದೆಯವರ ಹೆಜ್ಜೆ ಗುರುತುಗಳನ್ನೇ ಹಿಡಿದು ಮೇಲೆ ಬಂದ ರಾಧಾಕೃಷ್ಣ-ರವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ 1937ರಲ್ಲಿ ಭೂವಿಜ್ಞಾನದಲ್ಲಿ ಬಿ.ಎಸ್ಸಿ. (ಆನರ್ಸ್) ಪದವಿಯಲ್ಲಿ ಚಿನ್ನದ ಪದಕವನ್ನು ಪಡೆದರು. ರಾಧಾಕೃಷ್ಣರವರು ಉದ್ಯೋಗ-ವನ್ನು ಅರಸಿ ಹೋಗಲಿಲ್ಲ. ಉದ್ಯೋಗವೇ ಅವರನ್ನು ಅರಸಿ ಬಂದಿತು. ಇವರ ತಂದೆ ಬಿ. ಪುಟ್ಟಯ್ಯನವರು ಬೆಂಗಳೂರಿನ ಸರ್ಕಾರಿ ಮುದ್ರಣಾಲಯ ನಿರ್ದೇಶಕರಾಗಿ-ದ್ದರು. ಆರ್ಥಿಕವಾಗಿ ಸ್ಥಿತಿವಂತರಾಗಿದ್ದರು. ಆಗಿನ ಮೈಸೂರು ಸರ್ಕಾರದ ಭೂ ವಿಜ್ಞಾನ ಇಲಾಖೆಯಲ್ಲಿ (ಇಂದು ಇದನ್ನು ಕರ್ನಾಟಕ ಸರ್ಕಾರ ಗಣಿ ಮತ್ತು ಭೂವಿಜ್ಞಾನ ಇಲಾಖೆ ಎಂದು ಕರೆಯಲಾಗುತ್ತಿದೆ) ಭೂ ಸರ್ವೇಕ್ಷಣ ಸಹಾಯಕರಾಗಿ ಕೆಲಸಕ್ಕೆ ಸೇರಿದರು. ಉದ್ಯೋಗ ಸಿಕ್ಕಿದ ಕೂಡಲೆ ತಾನಾಯಿತು ತನ್ನ ಕುಟುಂಬ-ವಾಯಿತು ಎನ್ನುವ ಜಾಯಮಾನವಲ್ಲ ಇವರದು. ಭೂವಿಜ್ಞಾನವನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡತೊಡಗಿದರು. ಸದಾಕಾಲವು ಅಧ್ಯಯನ ಮತ್ತು ಸಂಶೋಧನೆಯಲ್ಲಿ

ತಮ್ಮನ್ನು ತೊಡಗಿಸಿಕೊಂಡಿದ್ದರು. ಆಗ್ಗಿಂದಾಗ್ಗೆ ಸಂಶೋಧನಾ ಲೇಖನಗಳನ್ನು ಬರೆದು ಪ್ರಕಟಿಸುತ್ತಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರದಿಂದ ಬಳ್ಳಾರಿ ಜಿಲ್ಲೆ ಮೊಳಕಾಲ್ಮೂರಿನವರೆವಿಗೂ ಹಬ್ಬಿರುವ ಕಣಶಿಲೆಯ ಬಗ್ಗೆ ಅತೀವವಾದ ಕಾಳಜಿಯನ್ನು ಹೊಂದಿದ್ದ ರಾಧಾಕೃಷ್ಣರವರು ಸಿ.ಎಸ್. ಪಿಚ್ಚು ಮುತ್ತುರವರ ಮಾರ್ಗದರ್ಶನದಲ್ಲಿ ಸುದೀರ್ಘವಾಗಿ ಸಂಶೋಧನೆ ಮಾಡಿ ಮೈಸೂರು ವಿಶ್ವವಿದ್ಯಾಲಯದ ಪಿಹೆಚ್.ಡಿ. ಪದವಿಗಾಗಿ ಮಹಾಪ್ರಬಂಧವನ್ನು ಮಂಡಿಸಲಾಗಿ 1954ರಲ್ಲಿ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿತು.

ರಾಧಾಕೃಷ್ಣರವರು ಭಾರತ ಮಾತ್ರವಲ್ಲ ದೇಶವಿದೇಶಗಳಲ್ಲಿ ನಡೆಯುವ ವಿಚಾರ ಸಂಕಿರಣಗಳಲ್ಲಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಇದುವರೆಗೂ ನಾನೂರಕ್ಕೂ ಹೆಚ್ಚು ಸಂಪ್ರಂಬಂಧಗಳು ಪ್ರಕಟಣೆಗೊಂಡಿವೆ. ವಿದೇಶಿಯರು ತಾವು ಬರೆದಿರುವ ಹಾಗೂ ಬರೆಯಲಿರುವ ಕೃತಿಗಳಲ್ಲಿ ರಾಧಾಕೃಷ್ಣರವರ ಸಂಪ್ರಬಂಧಗಳನ್ನು ಉಲ್ಲೇಖಿಸಿ ಬರೆದಿರುವುದು ಮತ್ತು ಬರೆಯುತ್ತಿರುವುದು ಅವರ ಪ್ರೌಢಿಮೆಯನ್ನು ಎತ್ತಿ ತೋರಿಸುತ್ತದೆ.

ಭೂವಿಜ್ಞಾನ ವಿಷಯವೇ ಅಲ್ಲದೇ ಇಲಾಖೆಯನ್ನು ಜನಪ್ರಿಯಗೊಳಿಸಲು 1950ರಲ್ಲಿ "ಮೈಸೂರು ಭೂವಿಜ್ಞಾನಿಗಳ ಸಂಘ"ವನ್ನು ಸ್ಥಾಪಿಸಿದರು. ಹಾಗೂ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ಭೂವಿಜ್ಞಾನಕ್ಕೆ ಸಂಬಂಧಿಸಿದ ವಿಷಯ-ವನ್ನು ತಿಳಿಸಲು ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ನಮ್ಮ ರಾಜ್ಯ ಮಾತ್ರವಲ್ಲ ಇಡೀ ಭಾರತದಾದ್ಯಂತ ನಡೆಯುವ ಭೂ ವೈಜ್ಞಾನಿಕ ಸಂಶೋಧನೆಗಳನ್ನು ಇಡೀ ವಿಶ್ವಕ್ಕೆ ಜಗಜ್ಜಾಹೀರು ಮಾಡುವುದೇ ಅಲ್ಲದೆ ವಿದೇಶಗಳಲ್ಲಿ ನಡೆಯುವ ಸಂಶೋಧನೆಗಳನ್ನು ಭಾರತೀಯರಿಗೆ ತಿಳಿಸಲು "ಜರ್ನಲ್ ಆಫ್ ಜಿಯೋಲಾಜಿಕಲ್ ಸೊಸೈಟಿ ಆಫ್ ಇಂಡಿಯಾ" ಎಂಬ ತ್ರೈಮಾಸಿಕ ನಿಯತಕಾಲಿಕೆಯನ್ನು ಪ್ರಾರಂಭಿಸಿ-ದರು. ಇದು ಇಂದಿಗೂ ಉತ್ತಮ ಪತ್ರಿಕೆಯಾಗಿದೆ. ಇಲಾಖೆಯಲ್ಲಿ ಮೇಲೇರುತ್ತಾ ಬಂದ ರಾಧಾಕೃಷ್ಣರವರು 1964ರಿಂದ 1974ರವರೆಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರಾದರು. ಶ್ರೀಯುತರು ನಿರ್ದೇಶಕರಾಗುವ ವೇಳೆಗೆ ಅಂತರರಾಷ್ಟ್ರೀಯ ಖ್ಯಾತಿವೆತ್ತ ಭೂವಿಜ್ಞಾನಿಯಾಗಿದ್ದರು. ವ್ಯವಸಾಯಕ್ಕೆ ಅನುಕೂಲ-ವಾಗಲೆಂದು ಅಂತರ್ಜಲ ಬಗ್ಗೆ ಹೆಚ್ಚು ಕಾಳಜಿ ವಹಿಸಿದರು. ಇವರ ಪರಿಶ್ರಮದಿಂದಾಗಿ 1966ರಲ್ಲಿ ರಾಜ್ಯದಲ್ಲಿ ಅಂತರ್ಜಲ ಸರ್ವೇಕ್ಷಣಾ ಘಟಕ ಮತ್ತು ಲಘು ಖನಿಜಾಭಿವೃದ್ಧಿ ಯೋಜನೆಗಳು ಸ್ಥಾಪನೆಗೊಂಡವು. ರಾಜ್ಯದ ಪ್ರತಿ ಜಿಲ್ಲೆಗಳಲ್ಲೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಶಾಖೆಗಳನ್ನು ಸ್ಥಾಪಿಸಿ ಅಂತರ್ಜಲದ ಸರ್ವೇಕ್ಷಣೆಗೆ ಹೆಚ್ಚು

ಒತ್ತುಕೊಟ್ಟರು. ಕೈಗಾರಿಕೆಗಳಿಗೆ ಅತ್ಯಗತ್ಯವಾಗಿ ಬೇಕಾಗಿರುವ ತಾಮ್ರದ ನಿಕ್ಷೇಪಗಳನ್ನು ಪತ್ತೆ ಹಚ್ಚಿ ಇಂಗಳ ದಾಳ, ಕಲ್ಯಾಡಿ, ತಿಂಥಿಣಿ ಇನ್ನೂ ಮುಂತಾದ ಕಡೆಗಳಲ್ಲಿ ತಾಮ್ರದ ಗಣಿಗಳನ್ನು ಸ್ಥಾಪಿಸಿದರು. ರಾಜ್ಯದಲ್ಲಿಯೇ ಪ್ರಪ್ರಥಮ ಬಾರಿಗೆ ರಾಜ್ಯದ ಮೊತ್ತಮೊದಲ ಅಂತರ್ಜಲ ಭೂವೈಜ್ಞಾನಿಕ ಭೂಪಟವನ್ನು ತಯಾರಿಸಿ ಪ್ರಕಟಿಸಿದರು. ಇದು ಮುಂದೆ ಇಲಾಖೆಯಲ್ಲಿ ಸುಲಭವಾಗಿ ಕೆಲಸ ಮಾಡಲು ಅನುಕೂಲವಾಯಿತು. ನೈಸರ್ಗಿಕ ಸಂಪನ್ಮೂಲಗಳನ್ನು ಹೆಕ್ಕಿ ತೆಗೆಯಲು ಪ್ರಾರಂಭಿಸಲಾಗಿ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ಲಾಭ ಬರಲು ಪ್ರಾರಂಭವಾಯಿತು. ಇದರಿಂದಾಗಿ ಹೊರರಾಜ್ಯಗಳು ರಾಧಾಕೃಷ್ಣರವರ ಕಾರ್ಯಕ್ಷಮತೆಯನ್ನು ಮೆಚ್ಚಿ ತಮ್ಮ ತಮ್ಮ ರಾಜ್ಯಗಳಲ್ಲೂ ಗಣಿ ಉದ್ಯಮಕ್ಕೆ ಒತ್ತು ಕೊಟ್ಟು ರಾಧಾಕೃಷ್ಣರವರ ಸಲಹೆಸೂಚನೆಗಳನ್ನು ಪಡೆಯ–ತೊಡಗಿದರು.

ಇಂದು ಸರ್ಕಾರದ ವತಿಯಿಂದ ನಡೆಯುತ್ತಿರುವ **"ಮೈಸೂರು ಮಿನರಲ್ಸ್ ಲಿಮಿಟೆಡ್"** ಎಂಬ ಇಲಾಖೆಯನ್ನು ಹುಟ್ಟು ಹಾಕಿದರು. ಕ್ರಮೇಣ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಲಾಭದಾಯಕ ಉದ್ಯಮವಾಯಿತು. ಇಲಾಖೆಯು ಅಧಿಕವಾಗಿ ಲಭ್ಯವಾದ ಖನಿಜಗಳನ್ನು ವಿದೇಶಗಳಿಗೆ ರವಾನಿಸಿ ಲಾಭ ಮಾಡತೊಡಗಿತು. ರಾಜ್ಯ ಸರ್ಕಾರವು ಮೇಧಾವಿಯಾದ ರಾಧಾಕೃಷ್ಣರವರ ಸಲಹೆ ಸೂಚನೆಗಳಿಗೆ ಆಹ್ವಾನಿಸಿತು. ಕಾಳಿ, ಘಟಪ್ರಭಾ, ಮಲಪ್ರಭಾ ಮತ್ತು ಕೃಷ್ಣನದಿಗಳ ಅಣೆಕಟ್ಟುಗಳಿಗೆ ಸಂಬಂಧಿಸಿದ ಅತ್ಯುಪಯುಕ್ತವಾದ ವರದಿಗಳು ಶ್ರೀಯುತರ ಮೇಧಾಶಕ್ತಿಗೆ ಹಿಡಿದ ಕನ್ನಡಿಯಾಗಿದೆ.

ಸಾಹಿತ್ಯ ಸೇವೆ – ರಾಧಾಕೃಷ್ಣರವರು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದಾರೆ. ಕನ್ನಡ ಸಾರಸ್ವತ ಲೋಕಕ್ಕೂ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. 1949ರಲ್ಲಿ ಡಿ.ವಿ. ಗುಂಡಪ್ಪನವರ ಮುನ್ನುಡಿಯೊಡನೆ ಆರಂಭವಾಗುವ "ನನ್ನ ತಂದೆ" ಎಂಬ ಅವರ ತಂದೆ ಬಿ. ಪುಟ್ಟಯ್ಯನವರನ್ನು ಕುರಿತಾದ ಕೃತಿಯು, ವ್ಯಕ್ತಿ ಚಿತ್ರಣವನ್ನು ಹೇಗೆ ಬರೆಯಬೇಕು ಎಂಬುದಕ್ಕೆ ಉತ್ತಮವಾದ ಉದಾಹರಣೆ–ಯಾಗಿದೆ. ಇಷ್ಟೇ ಅಲ್ಲದೆ ಪ್ರಸಿದ್ಧ ವಿಜ್ಞಾನಿಗಳಾದ ಸರ್. ಸಿ.ವಿ. ರಾಮನ್, ಶ್ರೀನಿವಾಸ ರಾಮಾನುಜನ್, ಬಿ.ಜಿ.ಎಲ್. ಸ್ವಾಮಿ, ಡಾರ್ವಿನ್, ಭೂಜಲವಿಜ್ಞಾನ ಸೇರಿದಂತೆ ಕೆಲವಾರು ಸಾಧಕರನ್ನು ಕುರಿತು ಅವರ ಜೀವನ ಚರಿತ್ರೆ ಮತ್ತು ಸಾಧನೆಗಳ ಬಗ್ಗೆ ಕೃತಿಗಳನ್ನು ರಚಿಸಿದ್ದಾರೆ. 1989ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಶ್ರೀಯುತರು ಬರೆದ ಸರ್.ಸಿ.ವಿ. ರಾಮನ್ ಕೃತಿಯನ್ನು ಗುರ್ತಿಸಿ ರಾಧಾಕೃಷ್ಣರವರನ್ನು ಗೌರವಿಸಿತು.

ಪ್ರಶಸ್ತಿ ಪುರಸ್ಕಾರಗಳು – 1956ರಲ್ಲಿ ಇಂಡಿಯನ್ ಸೈನ್ಸ್ ಅಕಾಡಮಿ ಇವರನ್ನು ಗೌರವ ಸದಸ್ಯರನ್ನಾಗಿ ಮಾಡಿಕೊಂಡಿತು. 1971ರಲ್ಲಿ ಭಾರತ ಸರ್ಕಾರವು ರಾಷ್ಟ್ರೀಯ ಖನಿಜ ಪ್ರಶಸ್ತಿ (National Mineral Award) 1974ರಲ್ಲಿ

ರಾಜ್ಯೋತ್ಸವ ಪ್ರಶಸ್ತಿ, 1986ರಲ್ಲಿ ಲಂಡನ್ ಭೂವೈಜ್ಞಾನಿಕ ಸಂಘಗಳು ತಮ್ಮ ಗೌರವ ಸದಸ್ಯರನ್ನಾಗಿ ಮಾಡಿಕೊಂಡವು. 1990ರಲ್ಲಿ ಕಲ್ಕತ್ತಾದ ಏಷ್ಯಾಟಿಕ್ ಸೊಸೈಟಿ ಇವರಿಗೆ ಪಿ.ಎನ್. ಬೋಸ್ ಚಿನ್ನದ ಪದಕ ನೀಡಿ ಸನ್ಮಾನಿಸಿತು. 1985ರಲ್ಲಿ ಕೋಲಾರ ಗಣಿ ಪ್ರದೇಶದಲ್ಲಿ ಸರ್ವೇಕ್ಷಣೆ ನಡೆಸಿ ಪತ್ತೆ ಮಾಡಿದ ಒಂದು ಹೊಸ ವರ್ಗದ ಖನಿಜಕ್ಕೆ ರಾಧಾಕೃಷ್ಣೈಟ್ ಎಂಬ ಹೆಸರಿಡುವುದರ ಮೂಲಕ ಇಲಾಖೆಯು ತನ್ನ ಗೌರವವನ್ನು ಸಲ್ಲಿಸಿದೆ. 1993ರಲ್ಲಿ ಭೂವಿಜ್ಞಾನದಲ್ಲೇ ಅತ್ಯಂತ ಪ್ರತಿಷ್ಠಿತ ಡಿ.ಎನ್. ವಾಡಿಯ ಚಿನ್ನದ ಪದಕವನ್ನು ನೀಡಿ ಗೌರವಿಸಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ ರಾಧಾಕೃಷ್ಣರವರ ಸೇವೆಯನ್ನು ಪರಿಗಣಿಸಿ 1991ರಲ್ಲಿ ಭಾರತ ಸರ್ಕಾರವು "ಪದ್ಮಶ್ರೀ" ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಸರಳ ಸಜ್ಜನಿಕೆಯ ಶ್ರೀ ರಾಧಾಕೃಷ್ಣರವರು ಚಾಮರಾಜಪೇಟೆಯ ತಮ್ಮ ಗೃಹದಲ್ಲಿ ಇಂದಿಗೂ ತಮ್ಮ ಮನೆಗೆ ಬರುವ ದೇಶ, ವಿದೇಶಿ ಭೂ ವಿಜ್ಞಾನಿಗಳಿಗೆ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು.

ಆರ್. ದಯಾನಂದಸಾಗರ್



ಕರ್ನಾಟಕದ ಒಕ್ಕಲಿಗ ಕೋಮಿನ ರಾಜಕಾರಣಿಗಳಲ್ಲಿ ಕೆಲವು ದಶಕಗಳ ಹಿಂದೆ ರಾಜಕೀಯ ಪಕ್ಷಗಳಲ್ಲಿ ಸಂಚಲನ ಹುಟ್ಟು ಹಾಕಿ; ಮುಖ್ಯಮಂತ್ರಿ ಗಾದಿಯ ಹೊಸ್ತಿಲವರೆಗೆ ಎಡತಾಕಿ; ರಾಜಕೀಯ ಚದುರಂಗದಾಟದಲ್ಲಿ ಅಧಿಕಾರದಿಂದ ದೂರಸರಿದವರು ದಿವಂಗತ ದಯಾನಂದ ಸಾಗರ್. ಕರ್ನಾಟಕ ರಾಜಕಾರಣದ ಇತಿಹಾಸ ಬಲ್ಲವರು ಸಾಗರ್‌ರವರ ವರ್ಣರಂಜಿತ ವ್ಯಕ್ತಿತ್ವ ಮತ್ತು ರಾಜಕೀಯ ಕ್ಷೇತ್ರದಲ್ಲಿ ಅವರು ಮೂಡಿಸಿದ ಛಾಪು ಖಂಡಿತಾ ಮರೆಯಲು ಸಾಧ್ಯವಿಲ್ಲ.

'ದಯಾನಂದ್ ಸಾಗರ್' ಬೆಳೆದು ತಮ್ಮ ಕಾರ್ಯಕ್ಷೇತ್ರ ವಿಸ್ತರಿಸಿಕೊಂಡದ್ದು ಬೆಂಗಳೂರಾದರು, ಅವರು ಹುಟ್ಟಿದ್ದು ಬೆಂಗಳೂರು ಗ್ರಾಮಾಂತರದ ದಕ್ಷಿಣದ ಭಾಗದ 'ಹೊಲೆಯನ್ ಕೆರೆ' ಎಂಬ ಪುಟ್ಟ ಹಳ್ಳಿಯಲ್ಲಿ. ಈಗದು ಅಂಜನಾಪುರವೆಂದು ಹೆಸರು ಬದಲಿಸಿಕೊಂಡಿದೆ. 24 ಜುಲೈ 1917ರಲ್ಲಿ ರೈತಾಪಿ ಬಡಕುಟುಂಬ ಒಂದರಲ್ಲಿ ಜನ್ಮ ತಾಳಿದ ಸಾಗರ್‌ರವರ ತಂದೆಯ ಹೆಸರು ರಂಗಪ್ಪ, ತಾಯಿ ಸಿಂಗಮ್ಮ, ಹಳ್ಳಿಯಲ್ಲಿ ದೊಡ್ಡೇಗೌಡನೆಂಬ ಹೆಸರಲ್ಲಿ ಆಡಿ ಬೆಳೆದು ಮುಂದೆ ಪದವಿ ಪಡೆದಂತೆ ಹೆಸರೂ ಕೂಡ ಬದಲಿಸಿಕೊಂಡು 'ದಯಾನಂದ ಸಾಗರ್' ಆದರು.

ಮುಂದೆ ಅಂಜನಾಪುರದಿಂದ ಬೆಂಗಳೂರಿನ ಕನಕನಪಾಳ್ಯದಲ್ಲಿ ಬಂದು ನೆಲಸಿ, ಬಸವನಗುಡಿ ಸರ್ಕಾರಿ ಪಾಠ ಶಾಲೆಯಲ್ಲಿ ಕಲಿತು. ಮೈಸೂರು ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಾ, 1942ರಲ್ಲಿ ವಿದ್ಯಾರ್ಥಿ ನಾಯಕರಾಗಿ ಮುಂದೆ ಗಾಂಧಿ ಪ್ರಭಾವಕ್ಕೊಳಗಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿ "ಕ್ವಿಟ್ ಇಂಡಿಯಾ ಚಳವಳಿಯಲ್ಲಿ" ಜೈಲು ಸೇರಿ ಹೋರಾಟದ ಮನೋಭಾವ ಬೆಳೆಸಿಕೊಂಡರು.

ಬಡತನ ಒಂದು ಶಾಪವಲ್ಲ, ಅದೂ ಒಂದು ವರವೇ ಎಂಬ ಧೋರಣೆಯಲ್ಲಿ ಕೀಳರಿಮೆ ಬೆಳೆಸಿಕೊಳ್ಳದೆ ಬಡತನವನ್ನು ಅನುಭವದ ಬಂಡವಾಳ ಮಾಡಿಕೊಂಡು ಆತ್ಮವಿಶ್ವಾಸದಿಂದ ಅನೇಕ ಸಾಮಾಜಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡರು. ಯೌವನದಲ್ಲಿ ಪ್ರತಿಯೊಬ್ಬ ಯುವಕರಲ್ಲೂ ಬ್ರಹ್ಮಾಂಡದಷ್ಟು ಕನಸುಗಳಿರುವಂತೆ ಸಾಗರ್‌ರವರಲ್ಲೂ ರಾಜಕೀಯ, ಪತ್ರಿಕೋದ್ಯಮ, ಚಲನಚಿತ್ರ, ರಂಗಭೂಮಿ, ಶಿಕ್ಷಣ ಇವೇ ಮುಂತಾದ ಕ್ಷೇತ್ರಗಳಲ್ಲಿ ಸಾಧಿಸುವ, ಛಲವಿತ್ತು. ಪ್ರೌಢ ಶಾಲೆಯೊಂದರಲ್ಲಿ ಮುಖ್ಯೋಪಾಧ್ಯಯರಾಗಿ ತಮ್ಮ ವೃತ್ತಿ ಜೀವನ ಪ್ರಾರಂಭಿಸಿದ ಸಾಗರ್‌ರವರು ಕ್ರಮೇಣ ತಮ್ಮ ಜಾಯಮಾನಕ್ಕೆ ಒಗ್ಗದೆ ತಿಲಾಂಜಲಿ ಇಟ್ಟು, ಮಹತ್ವಾಕಾಂಕ್ಷೆಯುಳ್ಳವರೆಂದೂ ಕಟ್ಟುಪಾಡಿನ ಜೀವನಕ್ಕೆ ಒಳಪಡಲಾರರೆಂಬ ಸತ್ಯಕ್ಕೆ ತಕ್ಕಂತೆ, ತಮ್ಮ ಅಭಿರುಚಿಯ ಕ್ಷೇತ್ರ ಹುಡುಕುತ್ತಾ ಮುಂದೆ ಹೆಜ್ಜೆ ಇಡತೊಡಗಿದರು. ಮುಂದೆ ವಯಸ್ಸು, ಅನುಭವಗಳು ಪಕ್ವವಾದಂತೆ ಶಿಕ್ಷಣ ಕ್ಷೇತ್ರದ ಹೆದ್ದಾರಿ ಹಿಡಿದು 'ದಯಾನಂದ ಸಾಗರ್' ಹೆಸರಿಗೆ ತಕ್ಕಂತೆ ಸಾಗರ್ ಶಿಕ್ಷಣ ಸಂಸ್ಥೆಗಳು ಸಾಗರದಂತೆ ಬೆಳೆಯುತ್ತಾ ನೋಡುಗರ ಕಣ್ಣ ಮುಂದೆ ಇಂದು ಮೈದಳೆದು ನಿಂತಿವೆ.

ಸಾಗರ್‌ರವರ ಬದುಕಿನ ಪ್ರಮುಖ ತಿರುವಿಗೆ ಹಾಗೂ ಪ್ರೇರಣೆಗೆ ಕಾರಣ –ರಾದವರು ಅವರ ಧರ್ಮಪತ್ನಿ ಡಾ॥ ಚಂದ್ರಮ್ಮನವರೆಂದರೆ ತಪ್ಪಾಗಲಾರದು. ಒಕ್ಕಲಿಗ ಕೋಮಿನಲ್ಲಿ ಗಂಡು ಮಕ್ಕಳು ಓದಲು ಹಿಂದೇಟು ಹಾಕುತ್ತಿದ್ದ ಕಾಲದಲ್ಲಿ, ವೈದ್ಯಕೀಯ ವ್ಯಾಸಂಗಕ್ಕೆ ಸೇರಿ ಬಂಗಾರದ ಪದಕ ಪಡೆದು, ಉನ್ನತ ವ್ಯಾಸಂಗಕ್ಕೆ ಸರ್ಕಾರದ ಧನಸಹಾಯ ಪಡೆದು, ವಿದೇಶಕ್ಕೆ ಹೋದ ಹೆಗ್ಗಳಿಕೆ ಅವರದು. ಡಾ॥ ಚಂದ್ರಮ್ಮನವರು ಎಫ್.ಆರ್.ಸಿ.ಎಸ್. (ಲಂಡನ್) ಎಫ್.ಆರ್.ಸಿ.ಎಸ್ (ಎಡಿನ್) ಎಫ್.ಆರ್.ಸಿ.ಎಸ್. (ಗ್ಲಾಸ್ಕೋ) ಉನ್ನತ ವ್ಯಾಸಂಗ ಮಾಡಿದರೆ, ಸಾಗರ್‌ರವರು, "ದಿ ಫೆಲೋ ಆಫ್ ರಾಯಲ್ ಎಕನಾಮಿಕ್ಸ್ ಸೊಸೈಟಿ ಆಫ್ ಇಂಡಿಯಾ"ದಲ್ಲಿ ಬ್ಯಾರಿಷ್ಟರ್ ಪದವಿ ಪಡೆದ ಅಪರೂಪದ ದಂಪತಿಗಳೆನಿಸಿಕೊಂಡರು. ಡಾ॥ ಚಂದ್ರಮ್ಮನವರು ಭಾರತಕ್ಕೆ ಮರಳಿ ಬಂದ ಮೇಲೆ ವಾಣಿ ವಿಲಾಸ ಆಸ್ಪತ್ರೆಯಲ್ಲಿ 'ಡೀನ್' ಆಗಿ ಕೆಲಸ ಮಾಡಿ, ಅನಂತರ ವಿಶ್ವೇಶ್ವರಪುರಂ ಬಡಾವಣೆಯಲ್ಲಿ 'ಚಂದ್ರಾ ನರ್ಸಿಂಗ್ ಹೋಂ' ಪ್ರಾರಂಭಿಸಿದರು. ಬೆಂಗಳೂರಿನನಲ್ಲಿ ಕ್ರಮೇಣ ಖ್ಯಾತ ಗೈನಕಾಲಜಿಸ್ಟ್ (ಸ್ತ್ರೀ ರೋಗ ಶಾಸ್ತ್ರಜ್ಞೆ)

ಎನಿಸಿಕೊಂಡರು. ಜೊತೆಗೆ ಭಾರತದ ಮಾಜಿ ರಾಷ್ಟ್ರಪತಿ ದಿ. ವಿ.ವಿ. ಗಿರಿಯವರಿಗೆ ಗೌರವಾನ್ವಿತ ವೈದ್ಯಕೀಯ ಸಲಹೆಗಾರರಾಗಿ ಕೆಲಸ ಮಾಡಲು ಅವಕಾಶ ಕೂಡ ಅವರ ಪಾಲಿಗೆ ಒದಗಿತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಆದರ್ಶ ಸಮಾಜ ಸುಧಾರಣೆಯ ಪ್ರಭಾವಕ್ಕೊಳಗಾಗಿ ಯುವಜನತೆ ಸುಧಾರಣೆಯ ಅನೇಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡರು. ಇದೇ ಸಂದರ್ಭದಲ್ಲಿ ಜನರ ಧ್ವನಿಯಾಗಿ ಅನೇಕ ಸಣ್ಣ ಪತ್ರಿಕೆಗಳು ಹುಟ್ಟಿಕೊಂಡವು. ಅವುಗಳಲ್ಲಿ ಸಾಗರ್ ಹುಟ್ಟು ಹಾಕಿದ 'ಗೂಳಿಗುಟುರು', 'ಕ್ರಾಂತಿ' ಪತ್ರಿಕೆಗಳಲ್ಲದೆ 'ತಾಯಿ ನಾಡು' ಪತ್ರಿಕೆಯ ಸಂಪಾದಕರಾಗಿ ದುಡಿದು ಪತ್ರಿಕಾ ರಂಗದಲ್ಲೂ ತಮ್ಮ ಹೆಜ್ಜೆ ಗುರುತನ್ನು ಮೂಡಿಸಿದರು.

ರಾಜಕಾರಣ ಪತ್ರಿಕಾರಂಗದ ಗಂಭೀರ ಕ್ಷೇತ್ರದ ಜೊತೆಗೆ ರಂಗಭೂಮಿ ಚಲನಚಿತ್ರ ರಂಗದಲ್ಲೂ ಮಹತ್ತಾದುದ್ದನ್ನು ಸಾಧಿಸಲು ಸಾಗರ್ ಅಂದು ಪ್ರಯತ್ನಿಸಿದ್ದು ಮರೆಯುವಂತಿಲ್ಲ. ಕನ್ನಡ ಸಿನಿಮಾ ನಿರ್ಮಾಣ ಮಾಡಲು ತಮಿಳು ನಾಡಿನತ್ತ ನಿರ್ಮಾಪಕರು ದೌಡಾಯಿಸಬೇಕಾದ ಕಾಲವೊಂದಿತ್ತು. ಸ್ಟುಡಿಯೋ, ನಟರು, ತಂತ್ರಜ್ಞರು ಅಲ್ಲೇ ತಳವೂರಿದ ಕಾಲದಲ್ಲಿ ಬೆಂಗಳೂರಿನ ಶಾವಿಗೆ ಮಲ್ಲೇಶ್ವರ ಬೆಟ್ಟದ ಪ್ರಶಾಂತ ಪರಿಸರ, ಗುಡ್ಡ ಬೆಟ್ಟಗಳ ನಡುವೆ ಚಿತ್ರೀಕರಣಕ್ಕೆ ಅನುಕೂಲವಾಗುವಂತೆ 'ಸುಜಾತ ಸ್ಟುಡಿಯೋ' ಹುಟ್ಟು ಹಾಕಿದರು. ಇಲ್ಲಿ ಅನೇಕ ಚಿತ್ರಗಳು ನಿರ್ಮಾಣವಾದವು. ಅವುಗಳಲ್ಲಿ ರಾಜ್‌ಕುಮಾರ್ ನಟಿಸಿದ 'ಕರುಳಿನ ಕರೆ' ಕೂಡ ಒಂದು. ಸಾಗರ್‌ರವರು ನಿರ್ಮಾಣ ಮಾಡಿದ "ಪೂರ್ಣಿಮಾ" ಅವರ ಚೊಚ್ಚಲು ಸಿನಿಮಾ. ನಟ, ನಿರ್ದೇಶಕ, ನಿರ್ಮಾಪಕ, ಸ್ಟುಡಿಯೋ ಮಾಲೀಕರಾಗಿ ಬಣ್ಣದ ಪ್ರಪಂಚದಲ್ಲೂ ಸೈ ಅನಿಸಿಕೊಂಡರು.

ರಾಜಕಾರಣಕ್ಕೆ ಸಾಗರ್ – ರಾಜ್ಯ ರಾಜಕಾರಣಕ್ಕೆ ಧುಮುಕಿದ ದಯಾನಂದ ಸಾಗರ್ ಬೆಂಗಳೂರಿನ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಿಂದ 1962–1972ರ ವರೆಗೆ ಎರಡು ಭಾರಿ ಶಾಸಕರಾಗಿ ಆಯ್ಕೆಯಾದರು. ಬೆಂಗಳೂರು ಜಿಲ್ಲೆಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ, ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ರೇಷ್ಮೆ ಖಾತೆಯ ಮಂತ್ರಿಯಾಗಿ, ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಪಕ್ಷ ವಿಭಜನೆಯಾದಾಗ ಇಂದಿರಾ ಕಾಂಗ್ರೆಸ್ ಸೇರಿ ವೀರೇಂದ್ರ ಪಾಟೀಲ್‌ರವರ ಸರ್ಕಾರ ಪತನವಾದಾಗ ರಾಜ್ಯಪಾಲರ ಆಡಳಿತ ಹೇರುವಂತೆ ಮಾಡಿದರು. ವಿರೋಧ ಪಕ್ಷದ ನಾಯಕನಾಗಿ, ದೆಹಲಿ ಮತ್ತು ಮುಂಬೈ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸಮಾವೇಶದಲ್ಲಿ ಪ್ರಮುಖ ಪಾತ್ರವಹಿಸಿ ದೇವರಾಜ ಅರಸ್ ಮುಖ್ಯಮಂತ್ರಿಗಳಾದಾಗ ವಿಧಾನ ಪರಿಷತ್ತು ಸದಸ್ಯರಾಗಿ, ಕಾಂಗ್ರೆಸ್ (ಆರ್) ಪಕ್ಷದ

ಅಧ್ಯಕ್ಷರಾಗಿ, ಮುಂದೆ ಎನ್.ಜಿ.ಇ.ಎಫ್. ಕಾರ್ಖಾನೆಯ ಅಧ್ಯಕ್ಷರಾದರು. ಮುಖ್ಯಮಂತ್ರಿ, ಕೇಂದ್ರ ಮಂತ್ರಿಯಾಗಬೇಕಾದವರು ದೇವರಾಜ ಅರಸರ ಆಡಳಿತ ವೈಖರಿಯಲ್ಲಿ ಒಕ್ಕಲಿಗ ಮತ್ತು ಲಿಂಗಾಯಿತ ಪ್ರಬಲ ಕೋಮಿನ ನಾಯಕರು ತೆರೆಮರೆ ಸೇರುವಂತಾದುದು ರಾಜಕೀಯ ಕ್ಷೇತ್ರದಲ್ಲಿ ನಡೆದ ಒಂದು ವಿಪ್ಲವ ಮತ್ತು ಅದಕ್ಕೆ ಬಲಿಪಶುವಾದವರಲ್ಲಿ ಸಾಗರ್‌ರವರೂ ಕೂಡ ಒಬ್ಬರೆನ್ನಬಹುದು.

ಸಾಗರ್‌ರವರಿಗೆ ಅತ್ಯಂತ ಆಪ್ತ ಹಾಗೂ ಪ್ರೀತಿಯ ಕ್ಷೇತ್ರವೆಂದರೆ ಶಿಕ್ಷಣ. ಸುಮಾರು ನಾಲ್ಕು ದಶಕಗಳಿಗೂ ಹಿಂದೆ ಹುಟ್ಟು ಹಾಕಿದ "ಮಹಾತ್ಮ ಗಾಂಧಿ ವಿದ್ಯಾ ಸಂಸ್ಥೆ" ಕಟ್ಟುತ್ತಲೇ ತಮ್ಮ ಕೊನೆಯುಸಿರೆಳೆದರು. ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಸರ್ಕಾರಿ ಶಾಲಾ ಕಾಲೇಜುಗಳೇ ವಿರಳವಾಗಿದ್ದಾಗ ಖಾಸಗೀ ಶಿಕ್ಷಣ ಸಂಸ್ಥೆಗಳು ತೀರಾ ಅಪರೂಪವೇ ಆಗಿದ್ದ ಕಾಲವದು.


ಶಿಕ್ಷಣ ದಾಸೋಹಕ್ಕೆ ನಿಂತ ಶ್ರೀ ಸಾಗರ್‌ರವರು – "ಕಶ್ಯಪ್ ವಿದ್ಯಾ ಪೀಠ" ಎಂಬ ಶಿಕ್ಷಣ ಸಂಸ್ಥೆ, ಐದು ದಶಕಗಳ ಹಿಂದೆ ಮಿನರ್ವ ಸರ್ಕಲ್ ಹತ್ತಿರ ಚಿಕ್ಕದಾಗಿ ಹುಟ್ಟಿಕೊಂಡಾಗ ದಯಾನಂದ ಸಾಗರ್ ಅದರ ಅಧ್ಯಕ್ಷರಾದರೆ, ಪ್ರಭಾಕರ್ ಎನ್ನುವವರು ಕಾರ್ಯದರ್ಶಿಯಾಗಿದ್ದರು. ಮುಂದೆ 1962ರಲ್ಲಿ "ಮಹಾತ್ಮ ಗಾಂಧಿ ವಿದ್ಯಾ ಸಂಸ್ಥೆ" ಸ್ಥಾಪನೆ ಆಗುವುದರೊಂದಿಗೆ ನರ್ಸರಿ, ಪ್ರೌಢಶಾಲೆ, ಪದವಿ ಪೂರ್ವ ಹಾಗೂ ಪದವಿ ಕಾಲೇಜು ಅಧ್ಯಾಪಕರ ತರಬೇತಿ ಕಾಲೇಜುಗಳು ಪ್ರಾರಂಭವಾದವು. ಒಂದು ಕಾಲದಲ್ಲಿ ದೊರೆಸ್ವಾಮಿ ನಾಯ್ಡು ಈ ಕಾಲೇಜಿನ ಉದ್ಯೋಗಿಯಾಗಿದ್ದರೆಂಬುದು ಕೂಡ ನಂಬಲಾಗದ ಸತ್ಯ. ಬೆಂಗಳೂರಿನಲ್ಲಿ ಪ್ರಾರಂಭವಾದ ಮೊದಲಿನ ಸಾಲಿನ ಕಾಲೇಜು–ಗಳಲ್ಲಿ ದಯಾನಂದ ಸಾಗರ್ ಕಾಲೇಜು ಕೂಡ ಒಂದೆಂಬುದು ಇಲ್ಲಿ ಸ್ಮರಿಸಬಹುದು.

1963ರಲ್ಲಿ ಸುಮಾರು ಮುವತ್ತು ಎಕರೆ ವಿಸ್ತೀರ್ಣದಲ್ಲಿ ಕುಮಾರಸ್ವಾಮಿ ಬಡಾವಣೆಯಲ್ಲಿ ಅಂದು ನಿರ್ಜನ ಪ್ರದೇಶದಲ್ಲಿ ಐ.ಸಿ.ಎಸ್.ಸಿ. ವಸತಿ ಶಾಲೆಯನ್ನು ಪ್ರಾರಂಭಿಸಿದರು. ಅತ್ಯಂತ ಪ್ರಶಾಂತವಾದ ಗಿಡ, ಮರ, ಗುಡ್ಡ, ಬೆಟ್ಟ ಹಸಿರಿನಿಂದ ಕಂಗೊಳಿಸುವ, ಶಿಕ್ಷಣ ಕ್ಷೇತ್ರಕ್ಕೆ ಹೇಳಿ ಮಾಡಿಸಿದ ಪ್ರಶಸ್ತ ಸುಂದರ ಸ್ಥಳದಲ್ಲಿ ದಯಾನಂದ ಸಾಗರ್‌ರವರ ದೂರದೃಷ್ಟಿಯ ಫಲವಾಗಿ ಈ ಸಂಸ್ಥೆ ಬೆಳೆಯತೊಡಗಿತು. ಈ ಸಂಸ್ಥೆಗೆ ಅಡಿಗಲ್ಲಿಟ್ಟವರು ರಾಷ್ಟ್ರ ಹಾಗೂ ರಾಜ್ಯ ರಾಜಕಾರಣದ ಘಟಾನುಘಟಿಗಳು ಭಾರತ ಸರ್ಕಾರದ ಅಂದಿನ ಗಣಿ ಮತ್ತು ಉಕ್ಕು ಖಾತೆಯ ಮಂತ್ರಿಯಾಗಿದ್ದ ಸಂಜೀವರೆಡ್ಡಿ, ಮಾಜಿ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪ, ತಮಿಳುನಾಡಿನ ಕಾಮರಾಜ ನಾಡರ್‌ರವರು. ಇದಕ್ಕೆಲ್ಲಾ ಸಾಕ್ಷಿಯೆಂಬಂತೆ ಜೊತೆ ಜೊತೆಗೆ ಬೆಳೆದು ಬಂದವರು ಈ ಸಂಸ್ಥೆಯು ಕಾರ್ಯದರ್ಶಿಯಾದ **ಶ್ರೀಯುತ ಗಾಳಿಸ್ವಾಮಿ**ಯವರು. ಸಾಗರ್‌ರವರ ಸಾಧನೆಯ ಹೆಜ್ಜೆ ಗುರುತುಗಳನ್ನು ಹಿಂಬಾಲಿಸುತ್ತಿದ್ದಾರೆ.

ದಯಾನಂದ ಸಾಗರ್‌ರವರ ಮಕ್ಕಳಾದ ಡಾ॥ ಹೇಮಚಂದ್ರ ಸಾಗರ್ ಮತ್ತು ಡಾ॥ ಪ್ರೇಮಚಂದ್ರ ಸಾಗರ್‌ರವರ ಸಮರ್ಥ ಮಾರ್ಗದರ್ಶನದಲ್ಲಿ "ದಯಾನಂದ ಸಾಗರ್ ಸಂಸ್ಥೆಗಳು" ಶಾಖೋಪಶಾಖೆಗಳಾಗಿ ಹೆಮ್ಮರವಾಗಿ ಬೆಳೆಯುತ್ತಿದೆ. (ಹೆಚ್ಚಿನ ವಿವರಗಳಿಗೆ ಒಕ್ಕಲಿಗರ ಶಿಕ್ಷಣ ಸಂಸ್ಥೆಗಳನ್ನು ನೋಡಿ). ಶಿಕ್ಷಣ ಸಂಸ್ಥೆಯ ಜೊತೆಗೆ ತಾಯಿ ಡಾ॥ ಚಂದ್ರಮ್ಮನವರ ಸವಿ ನೆನಪಿಗಾಗಿ ಪ್ರತಿಷ್ಠಿತ ಸಾಗರ್ 'ಅಪಲೋ ಆಸ್ಪತ್ರೆ' ತಲೆ ಎತ್ತಿದೆ. 'ಸಾಗರ್ ಆಟೋಮೊಬೈಲ್' ಸಾವಿರಾರು ಉದ್ಯೋಗಿಗಳಿಗೆ ಆಶ್ರಯ ನೀಡಿದೆ.

ಕೆಲವರು "ಜೀವಂತವಿರುವಾಗಲೇ ಸತ್ತಂತೆ ಬದುಕಿದರೆ ಕೆಲವರು ಸತ್ತ ಮೇಲೂ ಜೀವಂತವಾಗಿ ನೆನಪಿಸುತ್ತಾರೆ" ಎಂಬುದಕ್ಕೆ ದಿವಂಗತ ಸಾಗರ್ ಬಹುಮುಖ ವ್ಯಕ್ತಿತ್ವ ಅವರ ಸಾಧನೆ ನಮ್ಮನ್ನು ಸದಾ ಕಾಡಿಸದೆ ಬಿಡದು. ದಯಾನಂದ ಸಾಧಿಸುವ ಹಠ ಚಲದಲ್ಲಿರುವಾಗಲೇ 1984ರಲ್ಲಿ ತಮ್ಮ 69ನೇ ವಯಸ್ಸಿನಲ್ಲಿ ಅಕಾಲಿಕ ಮರಣಕ್ಕೆ ತುತ್ತಾಗಿ ಇನ್ನೂ ಸಾಧಿಸಬೇಕಾದುದ್ದನ್ನು ನಮ್ಮ ಮುಂದೆ ಬಿಟ್ಟು ಹೋಗಿದ್ದಾರೆ. ಸಾಗರ್‌ರವರ ಆಸೆಯನ್ನು ಆಶೋತ್ತರಗಳನ್ನು ಅವರ ಮಕ್ಕಳಾದ ಹೇಮಚಂದ್ರ ಸಾಗರ್ ಮತ್ತು ಪ್ರೇಮಚಂದ್ರ ಸಾಗರ್‌ರವರು ಪೂರೈಸುತ್ತಿದ್ದಾರೆ.

ಪ್ರೊ॥ ಕೆ. ವೆಂಕಟಗಿರಿಗೌಡ



ವಿಶ್ವದ ಕೆಲವೇ ಶ್ರೇಷ್ಠ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರಾದ ಪ್ರೊ॥ ಕೆ. ವೆಂಕಟಗಿರಿಗೌಡರವರು ಅಸಾಧಾರಣ ಬುದ್ಧಿಶಕ್ತಿ, ಅದ್ಭುತವಾದ ಸ್ಮರಣಶಕ್ತಿ ಹಾಗೂ ಬರವಣಿಗೆಯ ಶಕ್ತಿಯನ್ನು ಮೈಗೂಡಿಸಿ-ಕೊಂಡಿದ್ದರು. ಸ್ವಾಭಿಮಾನ, ಪ್ರಾಮಾಣಿಕತೆ, ದಕ್ಷತೆ, ನೇರ ನುಡಿಗೆ ಹೆಸರಾದ ವ್ಯಕ್ತಿ. ಅಷ್ಟೇ ಅಲ್ಲ ಮುಂಗೋಪಕ್ಕೆ ಮತ್ತೊಂದು ಹೆಸರೇ ಪ್ರೊ. ಕೆ.ವಿ.ಜಿ.

ಶ್ರೀಯುತರು ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಭೈರಾಪಟ್ಟಣ ಗ್ರಾಮದ ಕೃಷ್ಣದಾಸೇಗೌಡ ಮತ್ತು ಮಂಚಮ್ಮ ದಂಪತಿಗಳಿಗೆ 27.6.1923ರಂದು ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ತಮ್ಮ ಹುಟ್ಟೂರು ಮತ್ತು ಚನ್ನಪಟ್ಟಣದಲ್ಲಿ ಪಡೆದರು. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಬಿ.ಎ. ಆನರ್ಸ್ ಮತ್ತು 1948ರಲ್ಲಿ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ಕ್ರಮವಾಗಿ ಗಳಿಸಿದರು. 1948ರಲ್ಲಿ ಬೆಂಗಳೂರಿನ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರಾಗಿ ನೇಮಕಗೊಂಡರು. 1949ರಲ್ಲಿ ಮೈಸೂರಿನ ಯುವರಾಜ ಕಾಲೇಜಿಗೆ ವರ್ಗವಾಯಿತು. ಉತ್ತಮ

ಶಿಕ್ಷಕರಾಗಿದ್ದ ಗೌಡರು ಅಧ್ಯಯನ, ಅಧ್ಯಾಪನ ಮತ್ತು ಸಂಶೋಧನೆಗೆ ತಮ್ಮ ಒಲುವು ತೋರಿಸುತ್ತಿದ್ದರು. ಪ್ರಾಯಶಃ ಪುಸ್ತಕದ ಹುಳುವಾಗಿದ್ದರು ಎಂದರೆ ತಪ್ಪಾಗಲಾರದು. ಅವರು ಮುಂದೆ ವಿಶ್ವಪ್ರಸಿದ್ಧ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಕೇಂದ್ರದಲ್ಲಿ ಪಿಹೆಚ್.ಡಿ. ಪದವಿಯನ್ನು ಗಳಿಸಿದರು. ಮಾಡಿ ಹೆಚ್ಚಿನ ಜ್ಞಾನ ಸಂಪಾದನೆ ಮಾಡಬೇಕು ಎಂಬ ಉದ್ದೇಶದಿಂದ ಅದಕ್ಕಾಗಿ ಭೂಮಿಕೆ ಸಿದ್ಧಗೊಳಿಸ ತೊಡಗಿದರು. ಅದಕ್ಕಾಗಿ ಹಲವಾರು ಮಾಹಿತಿಗಳನ್ನು ಕಲೆ ಹಾಕತೊಡಗಿದರು.

1952ರಲ್ಲಿ ಪಿಹೆಚ್.ಡಿ. ಪದವಿಗಳಿಸುವ ಉದ್ದೇಶದಿಂದ ವಿಶ್ವದ ಹೆಸರಾಂತ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಎಂಬ ಸಂಶೋಧನಾ ಕೇಂದ್ರಕ್ಕೆ ಸೇರಿ ಗಂಭೀರವಾಗಿ ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1959ರಲ್ಲಿ ಅಲೆನ್ ಟಿ. ಪೀಕಾಕ್‌ರವರ ಮಾರ್ಗದರ್ಶನದಲ್ಲಿ Fiscal Policy and inflation ಎಂಬ ವಿಷಯದ ಮೇಲೆ ಮಹಾಪ್ರಬಂಧವನ್ನು ರಚಿಸಿ ಕೊನೆಗೆ 1959ರಲ್ಲಿ ಡಾಕ್ಟರೇಟ್ ಪದವಿಯೊಂದಿಗೆ ಭಾರತಕ್ಕೆ ಹಿಂತಿರುಗಿದರು. 1967ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸತೊಡಗಿದರು. 1970ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕಲಾ ನಿಕಾಯದ ಡೀನ್ ಆಗಿ, 1972ರಲ್ಲಿ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿದರು. 1966ರಲ್ಲಿ ನವದೆಹಲಿಯ Indian School of International Studiesನಲ್ಲಿ ಪ್ರಾಧ್ಯಾಪಕರಾಗಲು ಆಹ್ವಾನ ಬಂದಿತು. ಆದರೆ ಅದನ್ನು ಗೌಡರು ವಿನಯವಾಗಿ ತಿರಸ್ಕರಿಸಿದರು.

70ರ ದಶಕದಲ್ಲಿ ವಿಶ್ವದ ಬಲಿಷ್ಠ ರಾಷ್ಟ್ರಗಳಾದ ಅಮೆರಿಕ ಮತ್ತು ರಷ್ಯಾಗಳು ತೈಲಕ್ಕಾಗಿ ಮುಸುಕಿನ ಗುದ್ದಾಟ ನಡೆಸುತ್ತಿದ್ದವು. ಈ ಸಂದರ್ಭದಲ್ಲಿ ಭಾರತದಲ್ಲಿದ್ದ ಅಮೆರಿಕಾದ **ರಾಯಭಾರಿ ರಾಬರ್ಟ್‌ಗೋಹಿನ್‌ರವರು 1978ರಲ್ಲಿ ಗೌಡರಿಗೆ ಪತ್ರವೊಂದನ್ನು ಬರೆದು ಅಮೆರಿಕ ಸರ್ಕಾರದ ಪರವಾಗಿ ನಾನು ತಮ್ಮನ್ನು 40 ದಿನಕಾಲ ಅಮೆರಿಕೆಗೆ ಭೇಟಿ ಕೊಡಲು ಆಹ್ವಾನಿಸುತ್ತಿದ್ದೇನೆ** ಎಂದು ತಿಳಿಸಿದರು. ಗೌಡರು ಆಹ್ವಾನವನ್ನು ಮನ್ನಿಸಿ "The Oil Crisis (ತೈಲ ಬಿಕ್ಕಟ್ಟು)" ಎಂಬ ವಿಚಾರದ ಮೇಲೆ ವಿದ್ವತ್‌ಪೂರ್ಣ ವಿಚಾರವನ್ನು ಮಂಡಿಸಿದರು. ಅದರ ಪ್ರಯೋಜನವನ್ನು ಅಮೆರಿಕಾದ ಅರ್ಥಶಾಸ್ತ್ರಜ್ಞರು ಸದುಪಯೋಗ ಪಡಿಸಿಕೊಂಡರು. ಈಗಾಗಲೇ "Euro Dollar" ಎಂಬ ಕೃತಿಯೂ ಗೌಡರಿಂದ ರಚನೆಯಾಗುತ್ತಿದ್ದ ವಿಚಾರ ತಿಳಿದ ಅಮೆರಿಕಾದ ಅರ್ಥಶಾಸ್ತ್ರಜ್ಞರು ಅದರ ಬಗ್ಗೆಯೂ ಚರ್ಚಿಸಿದರು. ಗೌಡರು ಭಾರತಕ್ಕೆ ಬಂದು 1979ರಲ್ಲಿ Euro Dollar ಕೃತಿಯನ್ನು ಹೊರತಂದರು. (Euro Doller Flows and International monetary stability) ವಿದೇಶಿಯರು ತಮ್ಮ ಜ್ಞಾನವನ್ನು ಸದ್ಭಳಕೆ ಮಾಡಿಕೊಳ್ಳುತ್ತಿದ್ದಾರೆ ಆದರೆ ತನ್ನ ತಾಯ್ನಾಡಿಗೆ ಅಂತಹ ಲಾಭವಿಲ್ಲವಲ್ಲ

ಎಂದು ಮರುಗಿ 1990ರಲ್ಲಿ "Perestroika and Glasnost for India" ಎಂಬ ಅತ್ಯಮೂಲ್ಯವಾದ ಕೃತಿಯನ್ನು ರಚಿಸಿದರು.

ಈ ಕೃತಿಯನ್ನು ಬರೆಯಲು ಕಾರಣವೇನೆಂದರೆ ಭಾರತ ಮತ್ತು ರಷ್ಯಾ ರಾಷ್ಟ್ರಗಳು ಪರಸ್ಪರ ಹತ್ತಿರವಾಗುತ್ತಿದ್ದವು. ರಷ್ಯಾದ ಆರ್ಥಿಕ ಸಬಲೀಕರಣ, ಉದಾರೀಕರಣಕ್ಕಾಗಿ ಅಧ್ಯಕ್ಷ ಮಿಕಾಯಿಲ್ ಎಸ್. ಗೋರ್‌ಬಚೇವ್‌ರವರು ಆರ್ಥಿಕ ಮುಕ್ತತೆ ಮತ್ತು ಪುನರ್ ರಚನೆ ಎಂಬ ಸುಧಾರಣೆ ನೀತಿಗಳನ್ನು ಜಾರಿಗೆ ತಂದನು. ಆದ ಕಾರಣ ರಷ್ಯನ್ ಶಬ್ದಗಳಾದ ಪೆರಿಸ್ಟ್ರಯಿಕ (ಪುನರ್ ರಚನೆ) ಮತ್ತು ಗ್ಲಾಸ್‌ನಾಸ್ಟ್ (ಮುಕ್ತತೆ) ಎಂಬ ಪದಗಳನ್ನು ಇಡಿಯಾಗಿಯೇ ತಮ್ಮ ಕೃತಿಗೆ ಬಳಸಿಕೊಂಡಿದ್ದಾರೆ.


ರಾಜ್ಯ ಒಕ್ಕಲಿಗರ ಸಂಘ ಮತ್ತು ಪ್ರೊ. ಕೆ.ವಿ.ಜಿ. – ಒಕ್ಕಲಿಗ ಜನಾಂಗದ ಬಗ್ಗೆ ತುಂಬು ಕಾಳಜಿಯನ್ನು ಹೊಂದಿದ್ದ ಗೌಡರು ಸಂಘವನ್ನು ಉಳಿಸಿ ಬೆಳೆಸಲು ಶ್ರಮಿಸಿದರು. ಸಂಘದ ಚುನಾವಣೆಯಲ್ಲಿ ಅತಿ ಸುಲಭವಾಗಿ ಗೆಲ್ಲುತ್ತಿದ್ದರು. ಶುದ್ಧ ಹಸ್ತರಾದ ಗೌಡರಿಗೆ ಯಾವಾಗಲೂ ಮತದಾರರು ಒಂದು ಮತವನ್ನು ಮೀಸಲಿಡುತ್ತಿದ್ದರು. ಎಷ್ಟೋ ಬಾರಿ ಗೌಡರು ಮತ ಕೇಳದಿದ್ದರೂ ಮತದಾರರು ಅವರಿಗೆ ಮತ ನೀಡುತ್ತಿದ್ದರು. ಎರಡು ಬಾರಿ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಗೌಡರಿಗೆ ತಾನು ವಿಶ್ವವಿದ್ಯಾಲಯವೊಂದರ ಉಪಕುಲಪತಿಯಾಗಲಿಲ್ಲವೆಂಬ ಕೊರಗಿತ್ತು.

ಪ್ರೊ|| ಕೆ. ವೆಂಕಟಗಿರಿಗೌಡರು ರಚಿಸಿದ ಕೃತಿಗಳು

1.	Fiscal Policy and inflation	1959
2.	Appreciation of the Indian Rupee	1961
3.	Keynes – Triffin Plans for International Liquidity	1962
4.	European Common Market and India	1962
5.	Common Wealth Common Market	1964
6.	International Currency Plans and Expansion of World Trade	1964
7.	Euro-Dollar Flows and International Monetary Stability	1979
8.	Eradication of Black Wealth and Black money	1985
9.	India's seventh Five Year plan	1985
10.	Fiscal Revolution in India	1987
11.	Perestroika and Glasnost for India	1990
12.	Democracy in Deficits	1992
13.	New Dimensions for Indian Planning	1992
14.	The Mandal Revolution	1992

ಮತ್ತು ವಿವಿಧ ವೃತ್ತೀಯ ಪತ್ರಿಕೆಗಳಲ್ಲಿ ಪ್ರಕಟವಾದ 50ಕ್ಕಿಂತ ಹೆಚ್ಚಿನ ಲೇಖನಗಳು. ಈಗಾಗಲೇ ತಿಳಿಸಿರುವಂತೆ ಅಪಾರವಾದ ಜ್ಞಾನ, ಸ್ಮರಣಶಕ್ತಿಯನ್ನು ಹೊಂದಿದ್ದ ಗೌಡರು ಹೇಳಿಕೆ ಮಾತು ಕೇಳುತ್ತಿದ್ದರು. ಅವರ ಮುಂಗೋಪ ಮತ್ತು ಪ್ರಭಾವವನ್ನು ಬಳಸಿಕೊಂಡ ಕೆಲವು ತಿಳಿಗೇಡಿಗಳು ಅವರನ್ನು ದುರ್ಬಳಕೆ ಮಾಡಿಕೊಂಡರು. ಗೌಡರು ಎಂದೂ ರಾಜಕಿಯದ ನಂಟನ್ನು ಬಯಸಿದವರಲ್ಲ. ತಳಕು, ಬಳಕು, ಮೋಸವನ್ನರಿಯದ ಶುದ್ಧ ಹಸ್ತರು. ಅಂತಹ ವ್ಯಕ್ತಿ ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಗುಂಡೂರಾವ್‌ರವರನ್ನು ಬೆಂಗಳೂರು ದಕ್ಷಿಣ ಲೋಕಸಭಾ ಚುನಾವಣೆಯಲ್ಲಿ ಬಿ.ಜೆ.ಪಿ. ಅಭ್ಯರ್ಥಿಯಾಗಿ ಸೋಲಿಸಿದ್ದು ಅದ್ಭುತವೇ ಸರಿ. ನಿಷ್ಠುರವಾದಿ ಲೋಕವಿರೋಧಿ ಎಂಬ ಮಾತು ನೂರಕ್ಕೆ ನೂರುಪಾಲು ಗೌಡರಿಗೆ ಒಪ್ಪುತ್ತದೆ. ಗೌಡರು 2005ರಲ್ಲಿ ಇನ್ನಿಲ್ಲವಾದರು.

ಶ್ರೀ ಕುರಂಜಿ ವೆಂಕಟರಮಣಗೌಡ



ಜಪಾನಿಯರ ನುಡಿಗಟ್ಟು ಹೀಗೆ ಹೇಳುತ್ತದೆ "ತಂದೆ ತಾಯಂದಿರು ತಮ್ಮ ಮಕ್ಕಳಿಗೆ ಮೀನು (ಆಹಾರ) ಕೊಡಬಲ್ಲರು ಅದು ಅವರು ಇರುವ ತನಕ. ಆದರೆ ಒಬ್ಬ ಶಿಕ್ಷಕ ಮೀನನ್ನು ಹಿಡಿಯುವುದನ್ನು ಕಲಿಸು–ತ್ತಾನೆ. ಮುಂದೆ ಅದೇ ಆ ವ್ಯಕ್ತಿಗೆ ಜೀವನಾಧಾರವಾಗು–ತ್ತದೆ." ಈ ಮಾತು ಶಿಕ್ಷಕ ಹಾಗೂ ಶಿಕ್ಷಣ ದಾಸೋಹ ಮಾಡಿದ ಹಾಗೂ ಮಾಡುತ್ತಿರುವ ವ್ಯಕ್ತಿಗಳಿಗೆ ಸಲ್ಲುತ್ತದೆ. ಅಂತಹವರಲ್ಲಿ ದೂರದ ಪುತ್ತೂರು, ಸೂಳ್ಯದಂತಹ ಮಲೆನಾಡು ಪ್ರದೇಶದಲ್ಲಿ ಶಿಕ್ಷಣ ದಾಸೋಹ ಮಾಡುತ್ತಿರುವ ಶ್ರೀಕುರಂಜಿ ವೆಂಕಟರಮಣ ಗೌಡರು ಕೂಡ ಒಬ್ಬರು.

ಮಲೆನಾಡ ಹಸಿರನ್ನೇ ಹೊದ್ದುಕೊಂಡಂತ್ತಿರುವ ಪುತ್ತೂರು, ಸೂಳ್ಯ ಈ ಪ್ರದೇಶಗಳು ಹಿಂದೊಮ್ಮೆ ಕಾಲರ ಮಲೇರಿಯಾಗಳ ತೌರೂರು. ಕುರಂಜಿ ವೆಂಕಟರಮಣ ಗೌಡರು 1928ರಲ್ಲಿ ಶ್ರೀ ಕುರಂಜಿ ಮಾಲಿಂಗ ಮಾಸ್ತರ ಹಾಗೂ ಶ್ರೀಮತಿ ಲಕ್ಷ್ಮಿ ದಂಪತಿಗಳ 7 ಜನ ಮಕ್ಕಳ ತುಂಬು ಕುಟುಂಬದಲ್ಲಿ ಜನಿಸಿದರು. ಮೊದಲೇ ಶಾಲಾ ಮಾಸ್ತರು ಬಡತನದ ಮತ್ತೊಂದು ಹೆಸರು. ಕೆ.ವಿ.ಜಿ. ಯವರು ಕೇವಲ 15 ವರ್ಷಗಳ ಬಾಲಕನಾಗಿರುವಾಗಲೇ ತಂದೆ ಮಾಲಿಂಗರವರು ಶಿವೈಕ್ಯರಾದರು. ತುಂಬು ಸಂಸಾರಕ್ಕೆ ಬರ ಸಿಡಿಲು ಬಡಿದಂತಾಯ್ತು. ಗೌಡರು ಶಿಕ್ಷಣ ಮುಂದುವರಿಸಲಾಗದೆ ಎಲ್.ಎಸ್.ಗೆ ವಿದಾಯ ಹೇಳಿದರು. ಈ ಸಹೋದರರು ದೃತಿಗೆಡದೆ ವ್ಯಾಪಾರ, ವ್ಯವಹಾರ, ಕೃಷಿಗೆ ಒತ್ತು ಕೊಟ್ಟರು.

ವ್ಯಾಪಾರ ವ್ಯವಹಾರದಲ್ಲಿ ಕೆ.ವಿ.ಜಿ – ಕೃಷಿ, ವ್ಯವಸಾಯ ಮತ್ತು ಪಶು ಸಂಗೋಪನೆಯಲ್ಲಿ ಯಶಸ್ವಿಯಾದರು. ನಂತರ 1948ರಲ್ಲಿ ವೆರಾಯಿಟಿ ಸ್ಟೋರ್ಸ್ ಅನ್ನು, 1954ರಲ್ಲಿ ಕುರಂಜಿ ಕಾರ್ಸ್ ಕಂಪನಿಯನ್ನೂ ಕೋಕೋನೆಟ್ ಫಾರ್ಮ್‌ಅನ್ನು, 1958ರಲ್ಲಿ ಕುರಂಜಿ ಕಾರ್ಸ್ ಫ್ಯಾಶನ್ ಹೌಸ್ ಎಂಬ ಕಾರುಗಳ ಸೌಂದರ್ಯವರ್ಧಕ ಕಂಪನಿಯನ್ನು, 1963ರಲ್ಲಿ ಕುರಂಜಿ ಕಾರ್ಸ್ ಅರ್ಕನೆಟ್ ಫಾರ್ಮ್ ಅನ್ನು ಸ್ಥಾಪಿಸಿ ಯಶಸ್ವಿಯಾಗಿ ತಾವೊಬ್ಬ ಚಾಣಾಕ್ಷ ವ್ಯವಹಾರಸ್ಥ ಎಂದು ಸಾಬೀತು ಪಡಿಸಿದರು. ಸಹೋದರರು ಒಗ್ಗಟ್ಟಾಗಿ ಕೆ.ವಿ.ಜಿ. ಯವರ ಹೆಗಲಿಗೆ ಹೆಗಲು ಕೊಟ್ಟು ದುಡಿದರು. ಈ ಕುಟುಂಬ ತಾಲ್ಲೂಕಿನಲ್ಲೇ ಮಾದರಿಯಾಯಿತು.

ಸಮಾಜಮುಖಿಯಾಗಿ ಗೌಡರು – ವ್ಯಾಪಾರ, ವ್ಯವಹಾರಗಳು ಕೇವಲ ಹಣ ಗಳಿಕೆಗೆ ಮಾತ್ರ ಎಂದು ತಿಳಿದ ಗೌಡರು ಸಮಾಜ ಸೇವೆಗೆ ತಮ್ಮನ್ನು ತೊಡಗಿಸಿಕೊಳ್ಳಲು ತೀರ್ಮಾನಿಸಿದರು. ಸೂಳ್ಯ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿ, ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಉಪಾಧ್ಯಾಕ್ಷರಾಗಿ, ಸೂಳ್ಯ ಪುರಸಭಾ ಅಧ್ಯಕ್ಷರಾಗಿ 1986ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಗೌಡ ಸಮ್ಮೇಳನದ ಅಧ್ಯಕ್ಷರಾಗಿ, ಬೆಂಗಳೂರಿನ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾಗಿ, 1996ರಲ್ಲಿ ಅಖಿಲ ಭಾರತ ಗೌಡ ಸಮ್ಮೇಳನದ ಅಧ್ಯಕ್ಷರಾಗಿ, ಮಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿದರು.

ಶಿಕ್ಷಣ ದಾಸೋಹಕ್ಕೆ ಕೆ.ವಿ.ಜಿ. – ವ್ಯಾಪಾರ ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಕೆ.ವಿ.ಜಿ.ಯವರು ಶಿಕ್ಷಣ ಕ್ಷೇತ್ರಕ್ಕೆ ಧುಮುಕಲು ಬಲವಾದ ಕಾರಣವೊಂದಿದೆ. ಅದೇನೆಂದರೆ 1973ರಲ್ಲಿ ಜಿಲ್ಲಾ ಮಟ್ಟದ ಚುನಾವಣೆಗೆ ಗೌಡರು ನಿಂತರು. ಚುನಾವಣಾ ಪ್ರಣಾಳಿಕೆಯಲ್ಲಿ ಸೂಳ್ಯದಲ್ಲಿ ಕಾಲೇಜನ್ನು ಸ್ಥಾಪಿಸುವ ಮೂಲಕ ಬಡಮಕ್ಕಳಿಗೆ ನೆರವಾಗುತ್ತೇನೆ ಎಂದು ಹೇಳಿದ್ದರು. ಫಲಿತಾಂಶ ಬಂದಾಗ ಸೋಲು ಗೌಡರದಾಯಿತು. ಸೋಲಲಿ ಗೆಲ್ಲಲಿ ಕೊಟ್ಟ ಮಾತಿಗೆ ತಪ್ಪಬಾರದೆಂದು ಹಗಲಿರುಳು ಶ್ರಮಿಸಿ (1976ರಲ್ಲಿ ಅಕಾಡೆಮಿ ಅಫ್ ಲಿಬರಲ್ ಎಜುಕೇಶನ್ ಎಂಬ ಸಂಸ್ಥೆಯನ್ನು ಸೂಳ್ಯದಲ್ಲಿ ಈಗಾಗಲೇ ಸ್ಥಾಪಿಸಿದ್ದರು.) 1976ರಲ್ಲಿ ನೆಹರು ಮೆಮೋರಿಯಲ್ ಪ್ರಥಮ ದರ್ಜೆ ಕಾಲೇಜನ್ನು ಸೂಳ್ಯದಲ್ಲಿ ಸ್ಥಾಪಿಸಿದರು. ಅಲ್ಲಿಂದ ಪ್ರಾರಂಭವಾದ ತಮ್ಮ ಶಿಕ್ಷಣ ದಾಸೋಹದ ಕೈಂಕರ್ಯವನ್ನು ಸೂಳ್ಯ, ಪುತ್ತೂರು, ಮಡಿಕೇರಿ, ಮೈಸೂರಿನವರೆವಿಗೂ ವಿಸ್ತರಿಸಿದರು. (ಹೆಚ್ಚಿನ ವಿವರಗಳಿಗೆ ಒಕ್ಕಲಿಗರ ವಿದ್ಯಾ ಸಂಸ್ಥೆಗಳ ಪಟ್ಟಿಯನ್ನು ನೋಡಿ) ತಮ್ಮ ಶಿಕ್ಷಣ ಸಂಸ್ಥೆಗಳಿಂದ ಬಂದ ಲಾಭವನ್ನು ತಮ್ಮ ಕುಟುಂಬಕ್ಕೆ ಇಲ್ಲವೆ ಮತ್ತಷ್ಟು ಆಸ್ತಿಪಾಸ್ತಿಗಳನ್ನು ಮಾಡಿಕೊಳ್ಳಲು ಇಚ್ಛಿಸದೆ ಬೇರೆ ಬೇರೆ ಸಂಘ ಸಂಸ್ಥೆಗಳ ಬೆಳವಣಿಗೆಗೆ ಹಾಗೂ ಗ್ರಂಥಾಲಯಗಳಿಗೆ ಉಧಾರವಾಗಿ ಧನ ಸಹಾಯ ಮಾಡಿ ಶಿಕ್ಷಣ ದಾಸೋಹ ಎಂಬುದಕ್ಕೆ ನಿಜವಾದ ಅರ್ಥ ಕಲ್ಪಿಸಿದರು.

ಒಮ್ಮೆ ಕುಗ್ರಾಮವಾಗಿದ್ದ ಸೂಳ್ಯವನ್ನು ಮಾದರಿ ನಗರವನ್ನಾಗಿ ಮಾಡಿದ ಕೀರ್ತಿ ಕೆ.ವಿ.ಜಿ.ಯವರಿಗೆ ಸಲ್ಲುತ್ತದೆ.

ಬಹುಷಃ ಸ್ವಾತಂತ್ರ್ಯ ಬಂದು 60 ವರ್ಷಗಳಾದರೂ ಸರ್ಕಾರವು ಮಾಡದ ಕೆಲಸವನ್ನು ಒಬ್ಬ ವ್ಯಕ್ತಿ ಇಲ್ಲವೆ ಒಂದು ಕುಟುಂಬ ಮಾಡುತ್ತಿದೆ ಎಂದರೆ ನಿಜಕ್ಕೂ ಸ್ತುತ್ಯಾರ್ಹವಾದುದು.

ಜಸ್ಟೀಸ್ ಶ್ರೀ ವೆಂಕಟಾಚಲ



ಕರ್ನಾಟಕ ಸೇರಿದಂತೆ ಇಡೀ ಭಾರತ ಭ್ರಷ್ಟಾಚಾರದ ಕೂಪವಾಗ ತೊಡಗಿದಾಗ ಭಾರತ ಸರ್ಕಾರ ಇಂತಹ ಭ್ರಷ್ಟಾಚಾರವನ್ನು ನಿಯಂತ್ರಿಸಲು ಲೋಕಾಯುಕ್ತ ಎಂಬ ಸ್ವಾಯತ್ತ ಸಂಸ್ಥೆಯನ್ನು ಸ್ಥಾಪಿಸಿ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಾಧೀಶರೊಬ್ಬರನ್ನು ನೇಮಕ ಮಾಡಿ ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಸುವಂತೆ ಮಾಡಿತು. ಕರ್ನಾಟಕದಲ್ಲಿ ಲೋಕಾಯುಕ್ತ ಇಲಾಖೆಯು ಜನಪ್ರಿಯವಾಗಲು, ಮನೆ ಮಾತಾಗಲು, ಲೋಕಾಯುಕ್ತಕ್ಕೆ ರಾಷ್ಟ್ರ ವ್ಯಾಪಿ ಹೆಸರು ಬರಲು ಕಾರಣರಾದ ಆ ಧೀಮಂತ ವ್ಯಕ್ತಿಯೇ ನ್ಯಾಯಮೂರ್ತಿ ವೆಂಕಟಾಚಲರವರು. ತಮ್ಮ ಅರವತ್ನಾಲ್ಕನೆಯ ವಯಸ್ಸಿನಲ್ಲಿ ಲೋಕಾಯುಕ್ತರಾಗಿ ನೇಮಕಗೊಂಡು ಚುರುಕಿನಿಂದ, ಲವಲವಿಕೆಯಿಂದ ರಾಜ್ಯದಾದ್ಯಂತ ಭ್ರಷ್ಟಾಚಾರಿಗಳನ್ನು ಬೇಟೆಯಾಡಿ ಅವರ ಕರಾಳ ಮುಖವನ್ನು ಜಗಜ್ಜಾಹೀರು ಮಾಡಿ ಸಾರ್ವಜನಿಕರಲ್ಲಿ ಶಾಂತಿ ನೆಮ್ಮದಿ ಮೂಡುವಂತೆ ಮಾಡಿದುದೇ ಅಲ್ಲದೆ ಲೋಕಾಯುಕ್ತ ವ್ಯವಸ್ಥೆಗೆ ಕಾಯಕಲ್ಪ ಮಾಡಿದ ಕೀರ್ತಿ ಜಸ್ಟೀಸ್ ವೆಂಕಟಾಚಲರವರಿಗೆ ಸಲ್ಲುತ್ತದೆ.

ವೆಂಕಟಾಚಲರವರು 3.7.1930ರಂದು ಶ್ರೀ ನಂಜೇಗೌಡ ಮತ್ತು ಶ್ರೀಮತಿ ಮುನಿವೆಂಕಟಮ್ಮ ದಂಪತಿಗಳಿಗೆ ಜನಿಸಿದರು. ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಮಿಟ್ಟೂರು ಇವರ ಹುಟ್ಟೂರು. ತಮ್ಮ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಳಬಾಗಿಲಿನಲ್ಲಿ ಪೂರೈಸಿದರು. ಕೋಲಾರದ ಸರ್ಕಾರಿ ಪದವಿ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿಯನ್ನು (1946–50) ಗಳಿಸಿದರು. ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎಲ್. (1954) ಪದವಿಗಳಿಸಿದರು. ಬಾಲ್ಯದಿಂದಲೂ ಓದಿನಲ್ಲಿ ಚುರುಕಾಗಿದ್ದ ವೆಂಕಟಾಚಲರವರಿಗೆ ಪ್ರಥಮ ದರ್ಜೆ ಕಾದಿರುತ್ತಿತ್ತು. 1955ರಲ್ಲಿ ಕರ್ನಾಟಕ ರಾಜ್ಯ ಉಚ್ಛನ್ಯಾಯಾಲಯದಲ್ಲಿ ವಕೀಲರಾಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ವೆಂಕಟಾಚಲರವರು ವಕೀಲಿ ವೃತ್ತಿಯ ಜೊತೆಜೊತೆಗೆ ನ್ಯಾಯಶಾಸ್ತ್ರವನ್ನು ಬೋಧಿಸಿ

ವಿದ್ಯಾರ್ಥಿಗಳಿಗೆ ತಮ್ಮಲ್ಲಿರುವ ಜ್ಞಾನವನ್ನು ತಿಳಿಸಲು ತೀರ್ಮಾನಿಸಿದರು. 1958ರಿಂದ 1970ರ ವರೆಗೆ ಸುಮಾರು ಹನ್ನೆರಡು ವರ್ಷಗಳ ಕಾಲ ತಮ್ಮ ಮೆಚ್ಚಿನ ಮರ್ಕೆಂಟೈಲ್ ಲಾ ವಿಷಯವನ್ನು ಬೋಧಿಸತೊಡಗಿದರು.

ಶ್ರೀ ವೆಂಕಟಾಚಲರವರ ಬುದ್ಧಿಶಕ್ತಿ ಮತ್ತು ಮೇಧಾಶಕ್ತಿಯನ್ನು ಕಂಡ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳು ತಮ್ಮ ತಮ್ಮ ವಿಶ್ವವಿದ್ಯಾಲಯಗಳ ಕಾನೂನು ಸಲಹೆಗಾರರಾಗಿ ನೇಮಿಸಿಕೊಂಡವು. 1973ರಿಂದ 1977ರವರೆಗೆ ಕರ್ನಾಟಕ ರಾಜ್ಯ ಹೈಕೋರ್ಟ್‌ನಲ್ಲಿ ಸರ್ಕಾರಿ ವಕೀಲರಾಗಿ ಸೇವೆ ಸಲ್ಲಿಸಿದರು. 28.9.1977ರಂದು ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡರು. 8.8.1978ರಂದು ಖಾಯಂ ನ್ಯಾಯಮೂರ್ತಿಯಾಗಿ ನೇಮಕಗೊಂಡರು. ಸುಮಾರು ಹನ್ನೆರಡು ವರ್ಷಗಳ ಕಾಲ ಸೇವೆ ಸಲ್ಲಿಸಿದ ಬಳಿಕ 1990 ಪ್ರತಿಬಂಧಕ ಚಟುವಟಿಕೆಗಳ ನಿರ್ಬಂಧ ಕಾಯಿದೆ ಅನ್ವಯ ಪಂಜಾಬ್‌ನಲ್ಲಿ ರಚನೆಗೊಂಡ ನ್ಯಾಯಾಧೀಕರಣದ ಉಸ್ತುವಾರಿ ನ್ಯಾಯಮೂರ್ತಿಗಳಾಗಿ ನೇಮಕಗೊಂಡರು. ಅಲ್ಲಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿದರು. ಮೇ 1992ರಂದು ಕರ್ನಾಟಕ ರಾಜ್ಯ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದರು.

ತಾರೀಖು 1.7.1992ರಂದು ನಮ್ಮ ರಾಷ್ಟ್ರದ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕಗೊಂಡರು. ಬಹಳ ಪ್ರಾಮಾಣಿಕರಾಗಿ ಹಾಗೂ ದಕ್ಷತೆಯಿಂದ ಕಾರ್ಯನಿರ್ವಹಿಸುವ ಮೂಲಕ ಸುಪ್ರಿಂಕೋರ್ಟ್‌ನ ಘನತೆ ಗೌರವ –ವನ್ನು ಹೆಚ್ಚಿಸಿದರು. ಈ ಮೊದಲು ಒಕ್ಕಲಿಗ ಜನಾಂಗದವರೇ ಆದ ಜಸ್ಟೀಸ್ ಕೆ.ಎಸ್. ಹೆಗ್ಗಡೆಯವರು ಶ್ರೀಮತಿ ಇಂದಿರಾಗಾಂಧಿಯವರ ಕೇಸ್‌ನಲ್ಲಿ ಸುಪ್ರೀಂ ಕೋರ್ಟ್‌ನ ಘನತೆ ಗೌರವವನ್ನು ಕಾಪಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಜಸ್ಟೀಸ್ ವೆಂಕಟಾಚಲರವರು 2.7.1995ರಂದು ಸುಪ್ರಿಂಕೋರ್ಟ್ ನ್ಯಾಯಮೂರ್ತಿ ಸ್ಥಾನದಿಂದ ನಿವೃತ್ತಿಯಾದರು. 1996ರಲ್ಲಿ ರೈಲ್ವೆ ಅಪಘಾತಗಳು ಮತ್ತು ಪರಿಹಾರಗಳ ಆಯೋಗಕ್ಕೆ ಅಧ್ಯಕ್ಷರಾಗಿ ಭಾರತ ಸರ್ಕಾರದಿಂದ ನೇಮಕವಾದರು. ಈ ಸಂದರ್ಭದಲ್ಲಿ ಅಪಘಾತದಲ್ಲಿ ನೊಂದವರಿಗೆ ಸೂಕ್ತ ಪರಿಹಾರ ನೀಡುವಲ್ಲಿ ಸಫಲರಾದರು. 1997ರಿಂದ 2000 ಮೂರು ವರ್ಷಗಳ ಕಾಲ ಹೊಸ ದೆಹಲಿಯ ರಾಷ್ಟ್ರೀಯ ಪರಿಸರ ಮೇಲ್ಮನವಿ ಪ್ರಾಧಿಕಾರದ ಅಧ್ಯಕ್ಷರಾಗಿ ಶ್ರೀಯುತರನ್ನು ಭಾರತಸರ್ಕಾರ ನೇಮಿಸಿತು.

ಲೋಕಾಯುಕ್ತರಾಗಿ ಜಸ್ಟೀಸ್ ವೆಂಕಟಾಚಲ – ಭಾರತ ಸರ್ಕಾರವು ಜಸ್ಟೀಸ್ ವೆಂಕಟಾಚಲರವರನ್ನು ಕರ್ನಾಟಕ ಲೋಕಾಯುಕ್ತರನ್ನಾಗಿ ನೇಮಿಸಿತು. ಈಗಾಗಲೇ ತಿಳಿಸಿರುವಂತೆ ಇಡೀ ರಾಷ್ಟ್ರದಾದ್ಯಂತ ಜೆ.ಎಂ.ಎಂ. ಹಗರಣ, ಹರ್ಷದ್ ಮೆಹ್ತಾ

ಪ್ರಕರಣ, ಕ್ಲಾಸಿಕ್ ಕಂಪ್ಯೂಟರ್ ಹಗರಣ, ಮಾಜಿ ರೈಲ್ವೆ ಸಚಿವರೊಬ್ಬರ (ಕರ್ನಾಟಕಕ್ಕೆ ಸೇರಿದವರು) ಅಕ್ರಮ ಆಸ್ತಿ ಗಳಿಕೆ, ಇವೇ ಮುಂತಾದವು ರಾಷ್ಟ್ರೀಯ ಸುದ್ದಿಯಾಗಿದ್ದವು. ಇವುಗಳಲ್ಲಿ ಬಹುತೇಕ ಎಲ್ಲಾ ಕೇಸುಗಳಲ್ಲೂ ರಾಜಕಾರಣಿಗಳ ಕೈವಾಡವಿತ್ತು. ಇದಕ್ಕೆ ಕಾರಣ ಇಷ್ಟೇ ಅಧಿಕಾರಿಗಳು ಭ್ರಷ್ಟಾಚಾರ ಮಾಡಿ ತಂದ ಹಣವನ್ನು ಎಂ.ಎಲ್.ಎ.ಗಳು ಮಂತ್ರಿಗಳಿಗೆ ಪಾಲು ನೀಡಬೇಕು, ನೀಡದಿದ್ದರೆ ದೂರದ ಊರುಗಳಿಗೆ ವರ್ಗಾವಣೆ ಮಾಡುವುದು, ಅವರಿಗೆ ಕಿರುಕುಳ ನೀಡುವುದು ಸರ್ವೇಸಾಮಾನ್ಯ. ರಾಜಕಾರಣಿಗಳು ತಾವು ಗಳಿಸಿದ ಆಸ್ತಿ/ಪಾಸ್ತಿಯ ಸಹಾಯದಿಂದ ಚುನಾವಣೆಗಳಲ್ಲಿ ಗೆಲ್ಲುವುದು ನಡೆದೇ ಇತ್ತು. ಸಾರ್ವಜನಿಕರು ಭ್ರಷ್ಟಾ ಅಧಿಕಾರಿಗಳ ವಿರುದ್ಧ ದೂರು ಹೇಳಿದರೂ ರಾಜಕಾರಣಿಗಳು ಅದಕ್ಕೆ ಸೊಪ್ಪು ಹಾಕುತ್ತಿರಲಿಲ್ಲ. ಆಸ್ಪತ್ರೆಗಳು ದನದ ಕೊಟ್ಟಿಗೆಗಳಂತಿದ್ದು ಭ್ರಷ್ಟಾಚಾರದ ಕೂಪವಾಗಿತ್ತು. ಅದೇ ರೀತಿ ಪೋಲೀಸರು ಆರಕ್ಷಕರಾಗಿರುವ ಬದಲು ಭಕ್ಷಕರಾಗತೊಡಗಿದರು. ಇಂತಹ ಹದಗೆಟ್ಟ ಪರಿಸ್ಥಿತಿಯಲ್ಲಿ ಜಸ್ಟೀಸ್ ವೆಂಕಟಾಚಲರವರು ದಿನಾಂಕ 3.7.2001ರಂದು ಕರ್ನಾಟಕ ಲೋಕಾಯುಕ್ತರಾಗಿ ನೇಮಕಗೊಂಡರು. ಶ್ರೀಯುತರು ಈಗಾಗಲೇ ವಕೀಲರಾಗಿ, ಹೈಕೋರ್ಟ್ ಮತ್ತು ಸುಪ್ರಿಂಕೋರ್ಟ್‌ನ ನ್ಯಾಯಾಧೀಶರಾಗಿ ನಿವೃತ್ತಿ ನಂತರ ಸರ್ಕಾರದ ನಾನಾ ಸಮಿತಿಗಳಲ್ಲಿ ಕೆಲಸ ಮಾಡಿ ಅನುಭವವನ್ನು ಗಳಿಸಿದ್ದರು. ಪತ್ರಿಕೆಗಳಲ್ಲಿ ಆಗಿಂದಾಗ್ಗೆ ಬರುತ್ತಿದ್ದ ಭ್ರಷ್ಟಾಚಾರದ ವಿಚಾರವನ್ನು ಕಂಡುಕೇಳಿದ್ದ ಜಸ್ಟೀಸ್ ವೆಂಕಟಾಚಲರವರು ಭ್ರಷ್ಟಾಚಾರಕ್ಕೆ ಶಸ್ತ್ರ ಚಿಕಿತ್ಸೆ ಮಾಡಲು ನಿರ್ಧರಿಸಿದರು. ಅಂದಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಎಂ. ಕೃಷ್ಣರವರು ಲೋಕಾಯುಕ್ತರ ಬೆಂಬಲಕ್ಕೆ ನಿಂತರು. ಇದೇ ಸಮಯಕ್ಕೆ ಬಿಳಿಗಿರಿ ರಂಗನ ಬೆಟ್ಟದ ಸೋಲಿಗರ ಬದುಕನ್ನು ಹಸನುಗೊಳಿಸಿ ನೊಬೆಲ್ ಪ್ರಶಸ್ತಿಗೆ ಸಮನಾದ ರೈಟ್‌ಲೈವ್ಲಿ ಹುಡ್ ಪ್ರಶಸ್ತಿಗೆ ಭಾಜನರಾಗಿದ್ದ ಡಾ|| ಸುದರ್ಶನ್‌ರವರನ್ನು ಕೃಷ್ಣರವರು ರಾಜ್ಯದ ಶಿಕ್ಷಣ, ಆರೋಗ್ಯ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಜಾಗೃತದಳದ ಮುಖ್ಯಸ್ಥರನ್ನಾಗಿ ನೇಮಿಸಿತ್ತು. ಡಾ|| ಸುದರ್ಶನ್‌ರವರು ಲೋಕಾಯುಕ್ತರ ಹೆಗಲಿಗೆ ಹೆಗಲು ಕೊಟ್ಟು ದುಡಿಯಲು ಮುಂದೆ ಬಂದರು. ಜಸ್ಟೀಸ್ ವೆಂಕಟಾಚಲರವರು ಅಧಿಕಾರ ವಹಿಸಿಕೊಂಡ ಕೂಡಲೆ ಸಾರ್ವಜನಿಕರು ಭ್ರಷ್ಟಾಚಾರಿಗಳ ವಿರುದ್ಧ ದೂರು ಸಲ್ಲಿಸಬಹುದೆಂದು ಕರೆಕೊಟ್ಟರು. ಸಾರ್ವಜನಿಕರು ಕೊಟ್ಟ ದೂರಿನ ಸತ್ಯಾಸತ್ಯತೆಗಳನ್ನು ಪರೀಕ್ಷಿಸಿ ದಾಳಿ ಆರಂಭಿಸಿದರು. ಸರ್ಕಾರಿ ಆಸ್ಪತ್ರೆಯಾದ ವಿಕ್ಟೋರಿಯಾ ಆಸ್ಪತ್ರೆಗೆ ಲೋಕಾಯುಕ್ತರೇ ದಿಢೀರ್ ಭೇಟಿ ನೀಡಿ ಪರೀಕ್ಷಿಸಿ ಅಲ್ಲಿನ ವೈದ್ಯರ, ದಾದಿಯರ ಭ್ರಷ್ಟಾಚಾರವನ್ನು ಹೊರಗೆಳೆದು ಸುದ್ದಿ ಮಾಡಿದರು. ಸಾರ್ವಜನಿಕರಲ್ಲಿ ಒಂದು ರೀತಿಯ ಮಿಂಚಿನ ಸಂಚಾರವಾಯಿತು. ಭ್ರಷ್ಟಾಚಾರದ ಕೂಪಗಳಾದ ಆರ್.ಟಿ.ಓ., ಸಬ್‌ರಿಜಿಸ್ಟ್ರರ್ ಕಛೇರಿ, ತಹಶೀಲ್ದಾರ್ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ, ಕರ್ನಾಟಕ

ಸೋಪ್ ಫ್ಯಾಕ್ಟರಿ ಅಷ್ಟೇ ಅಲ್ಲ ಭ್ರಷ್ಟ ಪೋಲೀಸ್ ಅಧಿಕಾರಿಗಳನ್ನು ಬಿಡಲಿಲ್ಲ. ಕ್ಯಾಮರ ಹೊತ್ತ ಮಾಧ್ಯಮಗಳ ಪತ್ರಕರ್ತರು ಲೋಕಾಯುಕ್ತರ ಹೆಜ್ಜೆಯನ್ನೇ ಅನುಸರಿಸಿ ಅವುಗಳನ್ನೆಲ್ಲಾ ಚಿತ್ರೀಕರಿಸಿ ದೂರದರ್ಶನಗಳಲ್ಲಿ ಬಿತ್ತರಿಸಿದರು. ಭ್ರಷ್ಟಾಚಾರಿಗಳು ಸುಸ್ತು ಹೊಡೆಯತೊಡಗಿದರು. ಕ್ಯಾಮರ ಎದುರೇ ಲಂಚಕೋರರಿಗೆ ಛೀಮಾರಿ ಹಾಕುವುದರ ಮೂಲಕ ಸಾರ್ವಜನಿಕರಿಂದ ಜ॥ ವೆಂಕಟಾಚಲರವರು ಶಹಭಾಸ್‌ಗಿರಿ ಪಡೆಯತೊಡಗಿದರು. ಲೋಕಾಯುಕ್ತರ ಹೆಚ್ಚಿನ ಅಧಿಕಾರಕ್ಕಾಗಿ ಅಂದಿನ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಅವರ ಬೇಡಿಕೆ ಸರ್ಕಾರಕ್ಕೆ ಬಿಸಿ ತುಪ್ಪವಾಗಿ ಪರಿಣಮಿಸಿತು. ಲೋಕಾಯುಕ್ತರ ಸತತ ದಾಳಿಗಳು ರಾಷ್ಟ್ರೀಯ ಸುದ್ದಿಯಾಯಿತು. ಹೊರರಾಜ್ಯಗಳ ಲೋಕಾಯುಕ್ತರನ್ನು ಅಲ್ಲಿನ ಜನ ಸಂಶಯಾತ್ಮಕವಾಗಿ ನೋಡತೊಡಗಿದರು. ಇಡೀ ರಾಷ್ಟ್ರವೇ ಜ॥ ವೆಂಕಟಾಚಲರವರನ್ನು ಕರ್ನಾಟಕದ ಶೇಷನ್ ಎಂದು ಕೊಂಡಾಡಿತು. 2002–03ರಲ್ಲಿ ಅಖಿಲ ಭಾರತ ಲೋಕಾಯುಕ್ತ ಸಂಘಕ್ಕೆ ಮೊದಲು ಉಪಾಧ್ಯಕ್ಷ–ರಾಗಿ ನಂತರ ಅಧ್ಯಕ್ಷರಾಗಿ ಆಯ್ಕೆಯಾದರು. ಹೊರರಾಜ್ಯಗಳಿಂದ ಕರ್ನಾಟಕ ಲೋಕಾಯುಕ್ತ ಕಾರ್ಯ ವೈಖರಿಯನ್ನು ಅಧ್ಯಯನ ಮಾಡಲು ತಂಡಗಳು ಬಂದವು.

ಹೀಗೆ ಜಸ್ಟೀಸ್ ವೆಂಕಟಾಚಲರವರು ಲೋಕಾಯುಕ್ತಕ್ಕೆ ಹೊಸಕಾಯ ಕಲ್ಪ ನೀಡಿ ಸಾರ್ವಜನಿಕರಲ್ಲಿ ಹೊಸ ಭರವಸೆಯನ್ನು ಮೂಡಿಸಿದರು. ಲಂಚಕೋರರಿಗೆ ಛಾಟಿ ಏಟು ನೀಡಿದರು. ಭ್ರಷ್ಟಾಚಾರಿಗಳು ತತ್ತರಿಸಿದರು. ಶ್ರೀಯುತರು 1.7.2006ರ ವರೆಗೂ ಲೋಕಾಯುಕ್ತರಾಗಿ ಐದುವರ್ಷಗಳ ಕಾಲ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿ ವಿಶ್ರಾಂತಿ ಜೀವನ ನಡೆಸುತ್ತಿದ್ದಾರೆ. ಅವರ ನಂತರ ಲೋಕಾಯುಕ್ತರಾಗಿ ಅಧಿಕಾರ ವಹಿಸಿಕೊಂಡ ಬಂಟ ಸಮುದಾಯದ ಜಸ್ಟೀಸ್ ಕೆ.ಎಸ್. ಹೆಗ್ಗಡೆಯವರ ಪುತ್ರರಾದ ಜಸ್ಟೀಸ್ ಸಂತೋಷ್ ಹೆಗ್ಗಡೆಯವರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಂತೋಷ ಹೆಗ್ಗಡೆ



ಸಮಾಜದಲ್ಲಿ ಕೆಲವು ವ್ಯಕ್ತಿಗಳು ತಾವು–ಗಳಿಸಿದ ವಿದ್ಯೆ ವಿದ್ವತ್ತು, ಅಧಿಕಾರ, ಅಂತಸ್ತಿನ ಪ್ರಭಾವದಿಂದ ಬೇನಾಮಿ ಆಸ್ತಿ, ಹಣಗಳಿಸಲು ತವಕಿಸುತ್ತಿರುತ್ತಾರೆ. ಆದರೆ ಅದಕ್ಕೆ ವಿರೋದಾಬಾಸ–ವೆಂದರೆ ನ್ಯಾಯಾಮೂರ್ತಿ ಎನ್. ಸಂತೋಷ ಹೆಗ್ಗಡೆಯವರು. ನೂಲಿನಂತೆ ಸೀರೆ ಎನ್ನುವಂತೆ ಎನ್. ಸಂತೋಷ ಹೆಗ್ಗಡೆಯವರ ತಂದೆಯವರಾದ ನ್ಯಾಯಮೂರ್ತಿ ಕೆ.ಎಸ್. ಹೆಗ್ಗಡೆಯುವರು ನ್ಯಾಯವಾದಿಗಳಾಗಿ, ನ್ಯಾಯಮೂರ್ತಿಗಳಾಗಿ

ಲೋಕಸಭಾ ಸದಸ್ಯರಾಗಿ, ಲೋಕಸಭಾ ಸ್ಪೀಕರ್‌ರಾಗಿ ಸೇವೆ ಸಲ್ಲಿಸುತ್ತಿದ್ದ ಸಂತೋಷ ಹೆಗ್ಗಡೆಯುವರು ನೇರವಾಗಿ ಭಾರತದ ಸರ್ವೋಚ್ಚ ನ್ಯಾಯಾಲಯುದ ನ್ಯಾಯಮೂರ್ತಿಯಾಗಿ ಆಯ್ಕೆಯಾದದ್ದು ಅಪರೂಪವೇ ಸರಿ. ಲೋಕಾಯುಕ್ತರಾಗಿ ಆಯ್ಕೆಯಾಗಿ ಮಾಡಿದ ಕೆಲಸದಿಂದ ಇಡೀ ಕರ್ನಾಟಕ ಸ್ಮರಿಸಿಕೊಳ್ಳುವ ಕೆಲಸ ಮಾಡಿದ್ದಾರೆ. ಅಣ್ಣಾ ಹಜಾರೆಯವರೊಂದಿಗೆ ಕೈಜೋಡಿಸಿ 'ಲೋಕಪಾಲ್ ಮಸೂದೆ'ಗೆ ಪಟ್ಟು ಹಿಡಿದು ಹೋರಾಟ ಮಾಡಿದ್ದು ಒಬ್ಬ ವಿಶ್ರಾಂತ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಯೊಬ್ಬರು ಬೀದಿಗಿಳಿದು ಅಣ್ಣ ಹಜಾರೆಯೊಂದಿಗೆ ಹೋರಾಡಿದ್ದು ಭಾರತದ ಇತಿಹಾಸದಲ್ಲಿ ಅಪರೂಪದಲ್ಲಿ ಅಪರೂಪದ ವಿಷಯವಾಗಿದೆ.

ಹುಟ್ಟು ಮತ್ತು ಬೆಳವಣಿಗೆ – ನಿಟ್ಟೆ ಸಂತೋಷ ಹೆಗ್ಗಡೆಯವರು 16 ಜೂನ್ 1940ರಲ್ಲಿ ಸಂಪ್ರದಾಯಸ್ಥ ಬಂಟ ಸಮುದಾಯದ ಉಡುಪಿಯ ನಿಟ್ಟೆಯಲ್ಲಿ ಜನಿಸಿದರು. ಕೆ.ಎಸ್. ಹೆಗ್ಗಡೆ ಮತ್ತು ನಿಟ್ಟೆ ಮೀನಾಕ್ಷಿಯವರು ಇವರ ತಂದೆ ತಾಯಂದಿರು, ತಮ್ಮ ಪ್ರಾಥಮಿಕ ಶಿಕ್ಷಣವನ್ನು ಉಡುಪಿಯಲ್ಲಿ ನಂತರ ಮಂಗಳೂರಿನ ಸೆಂಟ್ ಅಲೋಫಿಯಸ್ ಕಾಲೇಜಿನಲ್ಲಿ ಪಡೆದರು. ಮದ್ರಾಸ್‌ನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಶಿಕ್ಷಣ ಪಡೆದ ಹೆಗ್ಗಡೆಯವರು ಬೆಂಗಳೂರಿನ ಸೆಂಟ್ ಜೋಸೆಪ್ಸ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಶಿಕ್ಷಣ ಪಡೆದರು. ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದರು. 1965ರಲ್ಲಿ ಬೆಂಗಳೂರಿನ ಕಾನೂನು ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಕಾನೂನು ಪದವೀದರರಾದರು.

ನ್ಯಾಯವಾದಿಯಾಗಿ ಹೆಗ್ಗಡೆವರು – ಕಾನೂನು ವಿಷಯದಲ್ಲಿ ಪಾಂಡಿತ್ಯವನ್ನ ಗಳಿಸಿದ ಸಂತೋಷ ಹೆಗ್ಗಡೆಯವರು ಮಂಗಳೂರಿನಲ್ಲಿ ನಂತರ ಬೆಂಗಳೂರಿನ ಉಚ್ಚ ನ್ಯಾಯಾಲಯದಲ್ಲಿ ನ್ಯಾಯವಾದಿಗಳಾಗಿ ಕಾರ್ಯನಿರ್ವಹಿಸಿದರು. ಹೆಗ್ಗಡೆಯವರ ವಾದದ ಸರಣಿ, ಕಾರ್ಯಕ್ಷಮತೆಯು ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಬೆರಗುಗೊಳಿಸಿತು. 1984ರಲ್ಲಿ ಕರ್ನಾಟಕದ ಅಡ್ವೋಕೇಟ್ ಜನರಲ್‌ರಾಗಿ ನೇಮಕಗೊಂಡರು. ಅಲ್ಲಿಂದ 1988ರ ತನಕ ನಿಸ್ಪೃಹ ಸೇವೆ ಸಲ್ಲಿಸಿದರು. 1989ರಲ್ಲಿ ಅಡಿಷನಟ್ ಸಾಲಿಸಿಟರ್ ಜನರಲ್‌ರಾಗಿ 1998ರಲ್ಲಿ ಭಾರತದ ಸಾಲಿಸಿಟರ್ ಜನರಲ್‌ರಾಗಿ ನೇಮಕಗೊಂಡರು. 8.1.1999ರಲ್ಲಿ ಭಾರತ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡರು. 2005ರಲ್ಲಿ ಸರ್ವೋಚ್ಚ ನ್ಯಾಯಾಲಯದಿಂದ ನಿವೃತ್ತಿ ಪಡೆದರು. 2005ರಲ್ಲಿ ಮಂಗಳೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು. ಹೆಗ್ಗಡೆಯವರನ್ನು ಭಾರತ ಸರ್ಕಾರವು ದೂರವಾಣಿ ಇಲಾಖೆಯ ದೂರುಗಳು ಹಾಗೂ ಅವ್ಯವಹಾರ ತಡೆ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿತು.

ಲೋಕಾಯುಕ್ತರಾಗಿ ಸಂತೋಷ ಹೆಗ್ಗಡೆಯವರು (2006-2010) – ಇಡೀ ಭಾರತದಲ್ಲಿ ಕರ್ನಾಟಕ ಲೋಕಾಯುಕ್ತ ಇಲಾಖೆಯು ಉತ್ತಮವಾಗಿ ಕೆಲಸ ಮಾಡುತ್ತಿತ್ತು. ಲೋಕಾಯುಕ್ತಕ್ಕೆ ಕಾಯಕಲ್ಪ ನೀಡಿದ ನ್ಯಾಯಮೂರ್ತಿ ವೆಂಕಟಾಚಲರವರ ನಿವೃತ್ತಿಯ ನಂತರ ಅಷ್ಟೇ ಸಮರ್ಥರು ಬರಬೇಕೆಂದು ಜನ ನಿರೀಕ್ಷಿಸುತ್ತಿದ್ದ ಸಮಯಕ್ಕೆ ನೇಮಕಗೊಂಡವರೇ ನ್ಯಾಯಮೂರ್ತಿ ಎನ್. ಸಂತೋಷ ಹೆಗ್ಗಡೆಯವರು. ಜನ ನಿರೀಕ್ಷೆಯನ್ನು ಹುಸಿಗೊಳಿಸಲಿಲ್ಲ. ಇವರಿಗಿಂತ ಹಿಂದೆ ಲೋಕಾಯುಕ್ತರಾಗಿ ಸೇವೆ ಸಲ್ಲಿಸಿದ್ದ ಲೋಕಾಯುಕ್ತ ವೆಂಕಟಾಚಲರವರು ಸಣ್ಣ ಪುಟ್ಟ ಲಂಚಕೋರರು, ದಗಾಕೋರರು, ಲೂಟಿಕೋರರನ್ನು ಸದೆ ಬಡಿದರೆ ಸಂತೋಷ ಹೆಗ್ಗಡೆಯವರು ಭಾರಿ ಕುಳಗಳನ್ನು ಖೆಡ್ಡಕ್ಕೆ ಕೆಡವಿದರು. ಬಳ್ಳಾರಿ ಜಿಲ್ಲೆಯ ಜನಾರ್ಧನ ರೆಡ್ಡಿ, ಸೋಮಶೇಖರ ರೆಡ್ಡಿ ಮತ್ತು ಕರುಣಾಕರ ರೆಡ್ಡಿ ಇವರೇ ಮುಂತಾದವರು. ಓಬಳಾಪುರಂ ಮೈನಿಂಗ್ ಕಂಪನಿಯನ್ನು ಪ್ರಾರಂಭಿಸಿ ಕರ್ನಾಟಕ ಹಾಗೂ ಆಂಧ್ರ ಸರ್ಕಾರಗಳ ದೌರ್ಬಲ್ಯವನ್ನು ಬಳಸಿಕೊಂಡು ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರಕ್ಕೆ ಮೋಸ ಮಾಡಿ ಹಣಗಳಿಸಿ ಇಡೀ ಬಳ್ಳಾರಿ ಜಿಲ್ಲೆಯನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದರು. ನ್ಯಾಯಮೂರ್ತಿ ಸಂತೋಷ ಹೆಗ್ಗಡೆಯವರು ಗಣಿಗಾರಿಕೆಯಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟವನ್ನು ಪತ್ತೆ ಹಚ್ಚಿ ರೆಡ್ಡಿತ್ರಯರು ಹೇಗೆ ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆಂದು ತನಿಖೆ ಮಾಡಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ರೆಡ್ಡಿಗಳನ್ನು ಜೈಲಿಗಟ್ಟಿದರು. ಇದರಿಂದಾಗಿ ಬಳ್ಳಾರಿ ಗಣಿದಣಿಗಳು, ಸರ್ಕಾರಿ ಅಧಿಕಾರಿಗಳು, ಗೋಸಂಬಿ ರಾಜಕಾರಣ ಮಾಡುತ್ತಿದ್ದ ಕಳ್ಳ ರಾಜಕಾರಣಿಗಳು, ಮಂತ್ರಿಗಳ ಬಣ್ಣ ಬಯಲು ಮಾಡಿದರು. ಅಲ್ಲಿಯ ತನಕ ಹತ್ತು ಸಾವಿರ ಕೋಟಿ ರೂಪಾಯಿ (ಒಂದು ಅಂದಾಜಿನ ಪ್ರಕಾರ) ಮೋಸವಾಗಿರುವುದಾಗಿಯೂ ಹಲವಾರು ಜನರ ಕೊಲೆ, ಸುಲಿಗೆ, ದ್ರೋಹ, ವಂಚನೆ ಮಾಡಿರುವುದನ್ನು ಪತ್ತೆ ಹಚ್ಚುವ ಮೂಲಕ ಬ್ರಾಹ್ಮಾಂಡ ಭ್ರಷ್ಟಾಚಾರವನ್ನು ಬಯಲು ಮಾಡಿದರು. ಅಂದು ಮುಖ್ಯಮಂತ್ರಿಯಾಗಿದ್ದ ಶ್ರೀ ಯಡಿಯೂರಪ್ಪನವರು ಭ್ರಷ್ಟಾಚಾರದಲ್ಲಿ ತೊಡಗಿದ್ದರಿಂದ ಅವರು ಅಧಿಕಾರ ಕಳೆದುಕೊಂಡದ್ದೇ ಅಲ್ಲದೆ ಜೈಲಿಗೆ ಹೋಗಿಬರಬೇಕಾಯಿತು. ನ್ಯಾಯಮೂರ್ತಿ ಸಂತೋಷ್ ಹೆಗ್ಗಡೆಯವರು ತಮ್ಮ ಲೋಕಾಯುಕ್ತಾ ಹುದ್ದೆಗೆ ರಾಜೀನಾಮೆ ನೀಡಿ ಹೊರಬಂದರು.

ಅಣ್ಣಾ ಹಜಾರೆಯೊಂದಿಗೆ ಕೈಜೋಡಿಸಿದ ಸಂತೋಷ್ ಹೆಗ್ಗಡೆಯವರು (2010-11) – ಪ್ರಾಮಾಣಿಕರು, ಸ್ವಾತಂತ್ರ್ಯ ಹೋರಾಟಗಾರರಾದ ಅಣ್ಣಾ ಹಜಾರೆಯವರು **"ಭ್ರಷ್ಟಾಚಾರ ನಿಗ್ರಹ ಹಾಗೂ ಲೋಕಪಾಲ್ ಮಸೂದೆ"** ತರಲು ಕೇಂದ್ರ ಸರ್ಕಾರವನ್ನು ಒತ್ತಾಯಿಸತೊಡಗಿದರು. ಅಣ್ಣಾ ಹಜಾರೆಯವರ ಪ್ರಾಮಾಣಿಕತೆಯನ್ನು ಕಂಡ ಅರವಿಂದ್ ಕೇಜ್ರಿವಾಲ್, ಕಿರುಣ್‌ಬೇಡಿ, ನ್ಯಾಯಮೂರ್ತಿ

ಸಂತೋಷ್ ಹೆಗ್ಗಡೆಯವರು ಬೀದಿಗಿಳಿದು ಲೋಕಪಾಲ್ ಮಸೂದೆ ಜಾರಿಗೆ ತರಲು ಹೋರಾಟಕ್ಕಿಳಿದರು. ಇಡೀ ಭಾರತದ ಯುವ ಸಮುದಾಯ ಅಣ್ಣಾ ಮತ್ತು ಅವರ ತಂಡವನ್ನು ಪೂರ್ಣ ಪ್ರಮಾಣದಲ್ಲಿ ಬೆಂಬಲಿಸಿತು. ಕರ್ನಾಟಕದಲ್ಲಿ ಮಾತ್ರ ಹೆಸರುವಾಸಿಯಾಗಿದ್ದ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಗಡೆಯವರು ರಾಷ್ಟ್ರಮಟ್ಟದಲ್ಲಿ ಹೆಸರುವಾಸಿಯಾದರು. ಇಂದು ಪ್ರಾಮಾಣಿಕ ಹಾಗೂ ಸರಳ ಜೀವನ ನಡೆಸುತ್ತಿದ್ದಾರೆ.

ಡಾ॥ ಸುದರ್ಶನ್



ಇತ್ತೀಚಿನ ದಿನಗಳಲ್ಲಿ ಇಂಜಿನಿಯರ್ ಹಾಗೂ ಡಾಕ್ಟರ್‌ಗಳು ಆಗುವುದು ಏಕೆಂದರೆ ಹೇರಳವಾಗಿ ಸಂಪಾದನೆ ಮಾಡಿ, ಸಮಾಜದಲ್ಲಿ ಹೆಸರು ಮಾಡಿ, ಐಷಾರಾಮಿಜೀವನ ನಡೆಸುವುದಕ್ಕಾಗಿ. ಹಾಗೂ ಇದೇ ಪ್ರತಿಷ್ಠೆ ಎಂದು ಹಲವಾರು ಜನ ನಂಬಿದ್ದಾರೆ. ಹಣಕ್ಕಾಗಿ ತಾವು ಕಲಿತಿರುವ ವಿದ್ಯೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇವುಗಳಿಗೆ ಹೊರತಾಗಿರುವ ವ್ಯಕ್ತಿಯೇ ಡಾ॥ ಹೆಚ್. ಸುದರ್ಶನ್. ರಾಮಕೃಷ್ಣಾಶ್ರಮದ ವಿದ್ಯಾರ್ಥಿಯಾಗಿ, ಸ್ವಾಮಿವಿವೇಕಾನಂದರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡಿರುವ ಸುದರ್ಶನ್‌ರವರು ಬಿಳಿಗಿರಿರಂಗನ ಬೆಟ್ಟದ ಆಸುಪಾಸಿನಲ್ಲಿ ವಿವೇಕಾನಂದ ಗಿರಿಜನ ಕಲ್ಯಾಣಕೇಂದ್ರವನ್ನು ಪ್ರಾರಂಭಿಸಿ ಸದ್ದುಗದ್ದಲವಿಲ್ಲದೇ ಬಹಳಷ್ಟು ಕಾಲ ಸೇವೆ ಸಲ್ಲಿಸುತ್ತಿರುವುದನ್ನು ಮನಗಂಡು ಸ್ವೀಡನ್ ದೇಶವು ರೈಟ್ ಲೈವ್ಲಿಹುಡ್ (The Right Livelihood Award) ಎಂಬ ನೊಬೆಲ್ ಪ್ರಶಸ್ತಿಗೆ ಸಮಾನಂತರವಾದ ಈ ಪ್ರಶಸ್ತಿಯನ್ನು ಸುದರ್ಶನ್‌ರವರಿಗೆ ನೀಡಿ ಗೌರವಿಸಿದಾಗ ಇಡೀ ಭಾರತವೇ ಡಾ॥ ಸುದರ್ಶನ್ ಕಡೆಗೆ ತಿರುಗಿ ನೋಡಿತು.

ಸುದರ್ಶನ್‌ರವರು 1950ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಬಾಲ್ಯದಿಂದಲ್ಲೂ ಓದಿಗೆ ಹೆಚ್ಚಿನ ಗಮನ ಕೊಡುತ್ತಿದ್ದ ಬಾಲಕ. ಬಹಳ ಚೂಟಿಯಾಗಿದ್ದ ಸುದರ್ಶನ್ ಪಿ.ಯು.ಸಿಯಲ್ಲಿ ಉತ್ತಮವಾದ ಅಂಕಗಳಿಸಿ ಬೆಂಗಳೂರು ಮೆಡಿಕಲ್ ಕಾಲೇಜಿಗೆ ಸೇರಿದರು. ಇವರು ಓದಿನ ಗೀಳಿನ ಜೊತೆಗೆ ಆಧ್ಯಾತ್ಮಿಕದ ಗೀಳನ್ನೂ ಅಂಟಿಸಿ-ಕೊಂಡರು. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದರ ತತ್ವಾದರ್ಶನಗಳಿಗೆ ಮಾರುಹೋದರು. ರಾಮಕೃಷ್ಣ ಮಿಷನ್‌ನ ಆರೋಗ್ಯ ಯೋಜನೆಯಡಿ ಹಿಮಾಲಯದಲ್ಲಿ ಕೆಲಸ ಮಾಡುವ ಅವಕಾಶ ಇವರಿಗೆ ಲಭಿಸಿತು. ಇದರಿಂದ

ಪ್ರಭಾವಿತರಾದ ಸುದರ್ಶನ್‌ರವರು ಬಂಗಾಳದ ಕಲ್ಕತ್ತಾ ಬಳಿ ಇರುವ ಬೇಲೂರು ಮಠ ಮತ್ತು ಕರ್ನಾಟಕದ ಪೊನ್ನಂಪೇಟೆಗಳಲ್ಲೂ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ರಾಮಕೃಷ್ಣಾಶ್ರಮದ ಸೇವೆಯನ್ನು ಅರ್ಥಮಾಡಿಕೊಂಡು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಸಮಾಜಸೇವೆ ಮಾಡಲು ತೀರ್ಮಾನಿಸಿದರು. ಎಂ.ಬಿ.ಬಿ.ಎಸ್. ಪದವಿಪಡೆದ ಕೂಡಲೇ ವೈದ್ಯರಾಗಿ ಸೇವೆ ಸಲ್ಲಿಸತೊಡಗಿದರು. ಬಡವರಲ್ಲಿ ಅತಿ ಬಡವರು, ಅವಿದ್ಯಾವಂತರೂ ಹಾಗೂ ಸಮಾಜದ ಕೆಳಸ್ಥರದಲ್ಲಿದ್ದ ಬಿಳಿಗಿರಿರಂಗನ ಬೆಟ್ಟದ ಸೋಲಿಗ ಜನಾಂಗದ ಶ್ರೇಯೋಭಿವೃದ್ಧಿಗಾಗಿ 1980ರಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಬುಡಕಟ್ಟು ಜನಾಂಗದ ಶ್ರೇಯೋಭಿವೃದ್ಧಿ ಮಾಡುವ ಉದ್ದೇಶದಿಂದ "ಕರುಣ ಟ್ರಸ್ಟ್" ಎಂಬ ದತ್ತಿಯನ್ನು ಸ್ಥಾಪಿಸಿದರು. ಹಾಗೂ ವಿವೇಕಾನಂದ ಫೌಂಡೇಷನ್‌ನ ಅಧ್ಯಕ್ಷರು ಆದರು.

ಬುಡಕಟ್ಟು ಜನಾಂಗಕ್ಕೆ ಸೇರಿದ ಸೋಲಿಗರು ಮೊದಮೊದಲು ಡಾ॥ ಸುದರ್ಶನ್‌ರವರನ್ನು ನಂಬಲಿಲ್ಲ. ಸಂಶಯಾತ್ಮಕವಾಗಿ ನೋಡತೊಡಗಿದರು. ಇನ್ನೂ ಹೆಚ್ಚಾಗಿ ಸೋಲಿಗರ ಭಾಷೆಯನ್ನು ಕಲಿಯುವುದು ಸುದರ್ಶನ್‌ರವರಿಗೆ ಅನಿವಾರ್ಯ ವಾಯಿತು. ಇಂತಹ ಸಂದರ್ಭದಲ್ಲಿ ಸ್ನೇಹಪರರು ಮಿತ ಭಾಷಿಕರು ಆದ ಸುದರ್ಶನ್-ರವರು ಸೋಲಿಗರ ಭಾಷೆಯನ್ನು ಕಲಿತು ಅವರ ವಿಶ್ವಾಸವನ್ನು ಗಳಿಸಿ ಅವರ ಸಂಕಷ್ಟಗಳಿಗೆ ಸ್ಪಂದಿಸಿದರು. ಬುಡಕಟ್ಟು ಜನರಲ್ಲಿ ಸಾಮಾನ್ಯವಾಗಿರುವ "ಸಿಕಲ್‌ಸೆಲ್ ಅನಿಮಿಯ" ಎಂಬ ರಕ್ತಹೀನತೆಯ ರೋಗವನ್ನು ಪತ್ತೆ ಹಚ್ಚುವ ಪರೀಕ್ಷಾ ವಿಧಾನ, ಗ್ರಾಮಾಂತರರ ಆರೋಗ್ಯ ಸಿಬ್ಬಂದಿಗೆ ಶಿಕ್ಷಣ, ದೈಹಿಕ ನೈರ್ಮಲ್ಯದ ಬಗ್ಗೆ ತಿಳುವಳಿಕೆ, ಕ್ಷಯ ಮತ್ತು ಕುಷ್ಠ ರೋಗಗಳನ್ನು ಪತ್ತೆ ಹಚ್ಚಿ ಅವುಗಳಿಗೆ ಸೂಕ್ತ ಚಿಕಿತ್ಸೆ ನೀಡುವುದು ಇವೇ ಮುಂತಾದ ವೈದ್ಯಕೀಯ ಕ್ಷೇತ್ರದ ಕೆಲಸಕಾರ್ಯಗಳನ್ನು ಹಮ್ಮಿಕೊಂಡರು. ಇಷ್ಟೇ ಅಲ್ಲದೆ ಗರ್ಭಿಣಿ ಸ್ತ್ರೀಯರಿಗೆ ಹಾಗೂ ಮಕ್ಕಳಿಗೆ ಪೌಷ್ಠಿಕ ಆಹಾರದ ಪೂರೈಕೆ ಔಷಧಿ, ಇವೇ ಮುಂದಾದವುಗಳನ್ನು ಒದಗಿಸತೊಡಗಿದರು. ಈ ತೆರನಾದ ವೈದ್ಯಕೀಯ ಸೌಲಭ್ಯವನ್ನು ನೀಡಲು "ಜೈ ವಿಜಯ" ಎಂಬ ಆಸ್ಪತ್ರೆಗಳನ್ನು ತೆರೆದರು. ಸೋಲಿಗರಿಗೆ ಕಾಡುವ ಜೆಂತುಹುಳು, ಕ್ರಿಮಿಕೀಟಗಳ ಬಾಧೆ, ಹಾವುಗಳ ಕಡಿತ ಇವೇ ಮುಂತಾದವುಗಳಿಂದ ಆ ಜನಗಳನ್ನು ರಕ್ಷಿಸಲು ಹೋರಾಟವನ್ನೇ ಮಾಡಿದರು.

ವೈದ್ಯಕೀಯ ಸೌಲಭ್ಯವೇ ಅಲ್ಲದೆ ಶಿಕ್ಷಣಕ್ಕೆ ಅಷ್ಟೇ ಆದ್ಯತೆ ನೀಡಿದರು. ಶಿಕ್ಷಣದಿಂದ ಮಾತ್ರ ಮೂಢನಂಬಿಕೆಗಳು ಹಾಗೂ ಸಾಮಾಜಿಕ ರೋಗರುಜಿನಗಳನ್ನು ತೊಡೆದು ಹಾಕಬಹುದೆಂಬ ಉದ್ದೇಶದಿಂದ ಶಿಕ್ಷಣಕ್ಕೆ ಹೆಚ್ಚಿನ ಮಹತ್ವನ್ನು ನೀಡಿದರು. ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳನ್ನು ಸ್ಥಾಪಿಸಿದರು. ಬಿಳಿಗಿರಿ ರಂಗನಬೆಟ್ಟ ಪ್ರದೇಶದಿಂದ ಯಳಂದೂರು, ಚಾಮರಾಜನಗರ, ಕೊಳ್ಳೇಗಾಲ, ಮಲೆ ಮಹದೇಶ್ವರನ ಬೆಟ್ಟ ಸೇರಿದಂತೆ ತಮಿಳುನಾಡಿನ ಸತ್ಯಮಂಗಲದವರೆವಿಗೂ

ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರವು ವ್ಯಾಪಿಸಿದೆ. ಈ ಸಂಘದ ಅಡಿಯಲ್ಲಿ ಗಿರಿಜನರನ್ನು ದುಡಿಮೆಗೆ ಹಚ್ಚುವ ಹಾಗೂ ಸ್ವಾವಲಂಬಿಗಳಾಗಿ ಬದುಕಲು ಅನುಕೂಲ –ವಾಗುವಂತೆ ಮರಗೆಲಸ, ಹೊಲಿಗೆ ಮತ್ತು ಹೆಣಿಗೆ, ಬುಟ್ಟಿ, ಚಾಪೆ ಇವೇ ಮುಂತಾದ ಕರಕುಶಲ ಕೆಲಸ ಮಾಡುವುದು. ಜೇನುಸಾಕಣೆ, ನೂಲುವುದು, ನೇಯುವುದು, ಮೇಣದಭತ್ತಿ ತಯಾರಿಕೆ, ಬಟ್ಟೆ ಮೇಲೆ ಚಿತ್ರದ ಅಚ್ಚು, ಕುಸುರಿ ಕೆಲಸ ಇವೇ ಮುಂತಾದ ಕರಕುಶಲ ಕೆಲಸಗಳಿಗೆ ಇವರನ್ನು ಸಜ್ಜುಗೊಳಿಸಿದರು. ಗೃಹ ಕೈಗಾರಿಕೆ –ಯನ್ನು ಸ್ಥಾಪಿಸುವುದರ ಮೂಲಕ ಗಿರಿಜನರು ಸ್ವಾವಲಂಬಿಗಳಾದರು. ಗಿರಿಜನರು ತಮ್ಮ ದೈನಂದಿನ ಆಹಾರೋತ್ಪಾದನೆಗೆ ಸಾಕಷ್ಟು ಪ್ರಮಾಣದಲ್ಲಿ ಕಟ್ಟಿಗೆಯನ್ನು ಕಡಿಯು –ತ್ತಿದ್ದರು. ಇದನ್ನು ತಪ್ಪಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯದ ವೈಜ್ಞಾನಿಕ ಹಾಗೂ ತಾಂತ್ರಿಕ ಪರಿಷತ್‌ನ (ಸಿ.ಸಿ.ಎಸ್.ಟಿ.) ನೆರವಿನಿಂದ ಗಿರಿಜನರಿಗೆ ಹೊಗೆ ಇಲ್ಲದೇ ಅಡುಗೆ ಮಾಡುವ ಆಸ್ತ್ರ ಒಲೆಗಳನ್ನು, ಸೌರಶಕ್ತಿಯ ಸಲಕರಣೆಗಳನ್ನು, ಗೋಬರ್ ಗ್ಯಾಸ್ ತಯಾರಿಕಾ ಸಾಧನಗಳನ್ನು, ವಾಯುಗಿರಣಿಗಳನ್ನು ಒದಗಿಸಿದರು. ಪ್ರತಿಯೊಂದು ಸೋಲಿಗರ ಆಡಿಗಳಲ್ಲಿ ಸೋಲಿಗರ ಅಭಿವೃದ್ಧಿ ಸಂಘವನ್ನು ಸ್ಥಾಪಿಸುವುದರ ಮೂಲಕ ಸೋಲಿಗ ಸಹಬಾಳ್ವೆ ಮತ್ತು ಐಕ್ಯಮತಕ್ಕೆ ಭದ್ರಬುನಾದಿಯನ್ನು ಹಾಕಿಕೊಟ್ಟರು.

ಅರಣ್ಯ ಇಲಾಖೆಯವರಿಗೆ ಒಮ್ಮೆ ಈ ಸೋಲಿಗರು ತಲೆನೋವಾಗಿದ್ದರು. ಕಾರಣವೇನೆಂದರೆ ಕಾಡಿನಲ್ಲಿರುವ ಪ್ರಾಣಿಪಕ್ಷಿಗಳನ್ನು ಬೇಟೆ ಮಾಡುವುದು ಇವೇ ಮುಂತಾದ ಸಮಾಜವಿರೋಧಿ ಕೃತ್ಯದಲ್ಲಿ ತೊಡಗಿದ್ದಾರೆಂದು ಟೀಕಿಸುತ್ತಿದ್ದರು. ಡಾ॥ ಸುದರ್ಶನ್‌ರವರು ಇವುಗಳೆಲ್ಲವನ್ನೂ ತಪ್ಪಿಸಿ ಕೃಷಿ ಮಾಡುವುದು, ಹಣ್ಣು ಹಂಪಲು ಬೆಳೆಯುವುದು, ಮೀನುಗಾರಿಕೆ ಇವೇ ಮುಂತಾದ ಲಾಭದಾಯಕದ ಹುದ್ದೆಗೆ ಸೋಲಿಗರನ್ನು ತೊಡಗಿಸಿಕೊಳ್ಳುವಂತೆ ನೋಡಿಕೊಂಡರು.

ತೆರೆಯಮರೆಯಲ್ಲಿ ಸಮಾಜಸೇವೆ ಮಾಡುತ್ತಿದ್ದ ಡಾ॥ ಸುದರ್ಶನ್‌ರವರ ಬಗ್ಗೆ ಕನ್ನಡದ ಹಲವಾರು ಪತ್ರಿಕೆಗಳು, ವಾರಪತ್ರಿಕೆ ಇವೇ ಮುಂತಾದವುಗಳು ಸುದರ್ಶನ್‌ರವರನ್ನು ಕೊಂಡಾಡಿದವು. ಕರ್ನಾಟಕ ರಾಜ್ಯವು 1984ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು, 1991ರಲ್ಲಿ ವಿವೇಕಾನಂದ ಸೇವಾ ರಾಷ್ಟ್ರೀಯ ಪುರಸ್ಕಾರ ಪ್ರಶಸ್ತಿಯನ್ನು, 1992ರಲ್ಲಿ ಕರ್ನಾಟಕ ರಾಜ್ಯಸರ್ಕಾರದ ಪರಿಸರ ಪ್ರಶಸ್ತಿಯನ್ನು, ಡಾ॥ ಬಿ.ಆರ್. ಅಂಬೇಡ್ಕರ್ ಶತಮಾನೋತ್ಸವ ಪ್ರಶಸ್ತಿಯನ್ನು, 1994ರಲ್ಲಿ ರಾಜ್ಯ ಸರ್ಕಾರವು ಶ್ರೇಷ್ಠ ಶಿಶುಕಲ್ಯಾಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

1994ರಂದು ನೊಬೆಲ್ ಪ್ರಶಸ್ತಿಗೆ ಪರ್ಯಾಯ ಪ್ರಶಸ್ತಿ ಎನಿಸಿದ್ದ ಸ್ವೀಡನ್‌ನ **"ರೈಟ್ ಲೈವ್ಲಿ ಹುಡ್"** ಪ್ರಶಸ್ತಿ ಫಲಕವನ್ನು ದಯಪಾಲಿಸಿತು. ಇದರಿಂದಾಗಿ

ಡಾ॥ ಸುದರ್ಶನ್‌ರವರು ವಿಶ್ವಪ್ರಸಿದ್ಧರಾದರು. 1995ರಲ್ಲಿ ಅಮೆರಿಕನ್ ಅಸೋಸಿ-ಯೇಷನ್ ಆಫ್ ಫಿಸಿಷಿಯನ್ ಆಫ್ ಇಂಡಿಯನ್ ಆರಿಜನ್ ಸಂಸ್ಥೆಯು ಇಂಟರ್ ನ್ಯಾಷನಲ್ ಡಿಸ್ಟಿಂಗ್‌ವಿಷ್ಡ್ ಫಿಸಿಷಿಯನ್ ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿತು. 1999ರಲ್ಲಿ ಪ್ರತಿಷ್ಠಿತ **'ಬಸವ ಪ್ರಶಸ್ತಿ'**ಯನ್ನು ನೀಡಿ ಇವರನ್ನು ಗೌರವಿಸಲಾಯಿತು. ಹೀಗೆ ಇನ್ನೂ ಹತ್ತಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಡಾ॥ ಸುದರ್ಶನ್ ರವರಿಗೆ ಭಾರತ ಸರ್ಕಾರವು 2000 ಇಸವಿಯಲ್ಲಿ **'ಪದ್ಮಶ್ರೀ ಪ್ರಶಸ್ತಿ'**ಯನ್ನು ನೀಡಿ ಗೌರವಿಸಿತು.

ಹೀಗೆ ಒಕ್ಕಲಿಗ ಸಮುದಾಯವು ಸಾಹಿತ್ಯ, ಕಲೆ, ಸಂಸ್ಕೃತಿ, ನಾಡು, ನುಡಿಗೆ ನೂರಾರು, ಸಾವಿರಾರು ವರ್ಷಗಳಿಂದಲೂ ತಮ್ಮ ಕೊಡುಗೆಯನ್ನು ಕೊಡುತ್ತಾ ಬಂದಿದ್ದಾರೆ. ಆದರೆ ದುರದೃಷ್ಟವಶಾತ್ ಅಂತಹ ವ್ಯಕ್ತಿಗಳನ್ನು, ಅವರು ಮಾಡಿರುವ ಸೇವೆಗಳನ್ನು ಗುರುತಿಸುತ್ತಾ ಬಂದಿಲ್ಲ. ಇನ್ನು ಮುಂದಾದರೂ ಗುರುತಿಸುವಂತಾಗಲಿ.

□

ಒಕ್ಕಲಿಗ ಸಾಧಕರಿಗೆ 'ಪದ್ಮ' ಪುರಸ್ಕಾರ

ಈಗಾಗಲೆ ತಿಳಿಸಿರುವಂತೆ ಒಕ್ಕಲಿಗ ಸಮುದಾಯದಲ್ಲಿ ಸಾಕಷ್ಟು ಮಂದಿ ಸಾಹಿತ್ಯ, ಸಂಗೀತ, ಶಿಕ್ಷಣ, ಆಡಳಿತ, ಕಲೆ ಮತ್ತು ವೈದ್ಯಕೀಯ ಇವೇ ಮುಂತಾದ ರಂಗಗಳಲ್ಲಿ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ. ಇವರಲ್ಲಿ ಕೆಲವರು ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಖ್ಯಾತ ನಾಮರಾಗಿ ಪ್ರಶಸ್ತಿ ಮತ್ತು ಪುರಸ್ಕಾರವನ್ನು ಪಡೆದಿದ್ದಾರೆ. ರಾಷ್ಟ್ರಮಟ್ಟದ "ಪದ್ಮಶ್ರೀ" ಪ್ರಶಸ್ತಿ ಪಡೆಯುವುದು ಸಾಮಾನ್ಯವಾದ ವಿಷಯವಲ್ಲ ನಮ್ಮಲ್ಲಿ ಕೆಲವರು **"ಪದ್ಮಶ್ರೀ", "ಪದ್ಮಭೂಷಣ", "ಪದ್ಮವಿಭೂಷಣ"** ಪ್ರಶಸ್ತಿಯನ್ನು ಎರಡು ಬಾರಿ ಪಡೆದಿರುವ ಉದಾಹರಣೆ ಇದೆ. ಕೆಲವರು "ಪದ್ಮ" ಪ್ರಶಸ್ತಿಯನ್ನು ಕೇಂದ್ರ ಸರ್ಕಾರವು ಸ್ಥಾಪಿಸುವ ಮೊದಲೇ ಸಾಧನೆ ಮಾಡಿರುವ ಹಾಗೂ ಮಾಡುತ್ತಿರುವ ವ್ಯಕ್ತಿಗಳಿದ್ದಾರೆ. ಒಟ್ಟಿನಲ್ಲಿ ಒಕ್ಕಲಿಗರಲ್ಲಿ ಕೆಲವರು ಗುರಿಮೀರಿ ಸಾಧನೆ ಮಾಡಿದ್ದಾರೆ ಹಾಗೂ ಸಾಧನೆ ಮಾಡುತ್ತಿದ್ದಾರೆ ಎಂದೇಳಬಹುದು.

"ಪದ್ಮ" ಪ್ರಶಸ್ತಿ ಇತಿಹಾಸ

ಸ್ವಾತಂತ್ರ್ಯ ನಂತರ ಭಾರತ ರಾಷ್ಟ್ರವು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದತೊಡಗಿತು. ಭಾರತ ದೇಶವಾಸಿಗಳು ಕಲೆ, ಸಾಹಿತ್ಯ, ಸಂಗೀತ, ವಿಜ್ಞಾನ ಮತ್ತು ತಂತ್ರಜ್ಞಾನ ಇವೇ ಮುಂತಾದ ರಂಗಗಳಲ್ಲಿ ಖ್ಯಾತನಾಮರಾದ ಹಾಗೂ ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣರಾದ ವ್ಯಕ್ತಿಗಳನ್ನು (ಜಾತಿ, ಮತ, ಧರ್ಮವನ್ನು ಹೊರತುಪಡಿಸಿ) ಗುರುತಿಸಿ ಅವರವರ ಸಾಧನೆಗೆ ತಕ್ಕಂತೆ ಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣ, ಭಾರತರತ್ನ ಪ್ರಶಸ್ತಿಗಳನ್ನು ಕೊಡಲು 1954ರಲ್ಲಿ ತೀರ್ಮಾನಿಸಿತು. ಅಲ್ಲಿಂದಾಗಿ ದೇಶದ ನಾನಾ ಮೂಲೆಗಳಲ್ಲಿ ಹುಡುಕಿ ಅವರ ಸಾಧನೆ ಮತ್ತು ಕೊಡುಗೆಗೆ ಅನುಗುಣವಾಗಿ ಪ್ರಶಸ್ತಿಯನ್ನು ನೀಡಲು ಉಪಕ್ರಮಿಸಿತು. ಇಂದಿಗೂ ಈ ಪದ್ಮ ಪುರಸ್ಕಾರವು ಗೌರವ ಮತ್ತು ಪಾವಿತ್ರತೆಯನ್ನು ಉಳಿಸಿಕೊಂಡು ಬಂದಿದೆ.

ಒಕ್ಕಲಿಗರ ಸಾಧಕ ಪದ್ಮ ಪುರಸ್ಕೃತರ ಪಟ್ಟಿ

	ಹೆಸರು	ರಂಗ	ಕಾಲ	ಪ್ರಶಸ್ತಿ / ಪ್ರಶಸ್ತಿಗಳು
1.	ಕುವೆಂಪು	ಸಾಹಿತ್ಯ ಮತ್ತು ಶಿಕ್ಷಣ	1958 1988	ಪದ್ಮಭೂಷಣ ಪದ್ಮವಿಭೂಷಣ
2.	ಸುಧಾವೆಂಕಟಶಿವಾರೆಡ್ಡಿ	ಸಮಾಜಸೇವೆ	1968	ಪದ್ಮಶ್ರೀ
3.	ಬಿ. ಸರೋಜದೇವಿ	ಕಲೆ	1969 1969 1992	ಪದ್ಮಶ್ರೀ ಪದ್ಮಭೂಷಣ ಪದ್ಮಭೂಷಣ
4.	ಯಶೋಧರ ದಾಸಪ್ಪ	ಸಮಾಜಸೇವೆ	1972	ಪದ್ಮಭೂಷಣ
5.	ಡಾ. ಬಿ.ಪಿ. ರಾಧಾಕೃಷ್ಣ	ವಿಜ್ಞಾನ	1991	ಪದ್ಮಶ್ರೀ
7.	ಡಾ. ಹೆಚ್. ಸುದರ್ಶನ್	ಸಮಾಜ ಸೇವೆ	2000	ಪದ್ಮಶ್ರೀ
8.	ಪ್ರೊ. ದೇ. ಜವರೇಗೌಡ	ಶಿಕ್ಷಣ, ಸಾಹಿತ್ಯ	2001	ಪದ್ಮಶ್ರೀ
9.	ಡಾ. ದೇವಿಪ್ರಸಾದ್ ಶೆಟ್ಟಿ	ವೈದ್ಯಕೀಯ ವೈದ್ಯಕೀಯ	2004 2012	ಪದ್ಮಶ್ರೀ ಪದ್ಮಭೂಷಣ
10.	ಕೆ. ಚಂದ್ರಶೇಖರರೆಡ್ಡಿ	ವಿಜ್ಞಾನ	2005	ಪದ್ಮಶ್ರೀ
11.	ಡಾ. ಡಿ. ದೇವಪ್ಪಗೌಡ ಚಿನ್ನಯ್ಯ	ವೈದ್ಯಕೀಯ	2006	ಪದ್ಮಶ್ರೀ
12.	ಡಾ.ಸಿ.ಎನ್.ಮಂಜುನಾಥ್	ವೈದ್ಯಕೀಯ	2007	ಪದ್ಮಶ್ರೀ
13.	ಡಾ. ಬಿ.ಆರ್. ಶೆಟ್ಟಿ	ಉದ್ಯಮ	2009	ಪದ್ಮಶ್ರೀ
14.	ಐಶ್ವರ್ಯ ರೈ	ಕಲೆ	2009	ಪದ್ಮಭೂಷಣ
15.	ಅನಿತಾ ರೆಡ್ಡಿ	ಸಮಾಜಸೇವೆ	2010	ಪದ್ಮಶ್ರೀ
16.	ಶ್ರೀಶ್ರೀಶ್ರೀ ಬಾಲಗಂಗಾಧರ ನಾಥ ಮಹಾ ಸ್ವಾಮೀಜಿ	ಆಧ್ಯಾತ್ಮಿಕ	2010	ಪದ್ಮಭೂಷಣ
17.	ಡಾ. ಬಿ.ಎಂ. ಹೆಗ್ಗಡೆ	ವೈದ್ಯಕೀಯ ವೈದ್ಯಕೀಯ	2010 2020	ಪದ್ಮಭೂಷಣ ಪದ್ಮವಿಭೂಷಣ
18.	ಹೆಚ್.ಜಿ. ನಾಗರಾಜಗೌಡ	ಕ್ರೀಡೆ	2013	ಪದ್ಮಶ್ರೀ
19.	ಸುಕ್ರಿ ಬೊಮ್ಮೆಗೌಡ	ಕಲೆ	2017	ಪದ್ಮಶ್ರೀ
20.	ವಿಕಾಸಗೌಡ	ಕ್ರೀಡೆ	2017	ಪದ್ಮಶ್ರೀ
21.	ದೊಡ್ಡರಂಗೇಗೌಡ	ಸಾಹಿತ್ಯ	2018	ಪದ್ಮಶ್ರೀ
22.	ತುಳಸಿಗೌಡ	ಪರಿಸರ	2020	ಪದ್ಮಶ್ರೀ

ಪದ್ಮ ಪ್ರಶಸ್ತಿ ಪುಸ್ಕೃತರು

ಸಾಹಿತ್ಯ, ಸಂಗೀತ, ವೈದ್ಯಕೀಯ ಹೀಗೆ ನಾನಾ ರಂಗಗಳಲ್ಲಿ ಅದ್ವಿತೀಯ ಸೇವೆಸಲ್ಲಿಸಿದ ವ್ಯಕ್ತಿಗಳಿಗೆ ಭಾರತ ಸರ್ಕಾರವು ತನ್ನ ಅತ್ಯುನ್ನತ ಪ್ರಶಸ್ತಿಯಾದ ಪದ್ಮಶ್ರೀ, ಪದ್ಮ ಭೂಷಣ, ಪದ್ಮ ವಿಭೂಷಣ, ಭಾರತ ರತ್ನ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತದೆ. ಇಂತಹ ಅತ್ಯುನ್ನತ ಪ್ರಶಸ್ತಿಯನ್ನು ಪಡೆದ ಮಣ್ಣಿನ ಮಕ್ಕಳು ಈ ಕೆಳಕಂಡಂತ್ತಿದ್ದಾರೆ.

ಡಾ. ಕೆ.ವಿ. ಪುಟ್ಟಪ್ಪ (ಕುವೆಂಪು)



ಡಾ|| ಕೆ.ವಿ. ಪುಟ್ಟಪ್ಪ (ಕುವೆಂಪು) ಸರ್ವಕಾಲಕ್ಕೂ ಶ್ರೇಷ್ಠ ಕವಿ ಶ್ರೀಯುತರು ಕಥೆ, ಕಾದಂಬರಿ, ನಾಟಕ, ಆತ್ಮಚರಿತ್ರೆಯೇ ಅಲ್ಲದೆ **"ರಾಮಾಯಣ ದರ್ಶನಂ"** ಎಂಬ ಶೇಷ್ಠ ಮಹಾಕಾವ್ಯ ರಚನೆಗೆ ಭಾರತ ಸರ್ಕಾರವು 1958ರಲ್ಲಿ **"ಪದ್ಮ ಭೂಷಣ"** ಪ್ರಶಸ್ತಿಯನ್ನು, 1988ರಲ್ಲಿ **"ಪದ್ಮ ವಿಭೂಷಣ"** ಪ್ರಶಸ್ತಿಯನ್ನು ನೀಡಿ ಗೌರವಿಸಿತು.
(ವಿ.ಸೂ.: ಹೆಚ್ಚಿನ ವಿವರಗಳಿಗೆ ನೋಡಿ ನಾಡಿನ ಸಾಹಿತ್ಯ, ಕಲೆ, ಸಂಸ್ಕೃತಿಗೆ ಒಕ್ಕಲಿಗರ ಕೊಡುಗೆ ಅಧ್ಯಾಯದಲ್ಲಿ)

ಸುಧಾರೆಡ್ಡಿ (ಸುಧಾ ವೆಂಕಟಶಿವಾರೆಡ್ಡಿ)



ಶ್ರೀಮತಿ ಸುಧಾರೆಡ್ಡಿಯವರ ಪತಿ ಐ.ಎ.ಎಸ್. ಅಧಿಕಾರಿ ಟಿ. ವೆಂಕಟಶಿವಾರೆಡ್ಡಿಯವರ ಧರ್ಮ ಪತ್ನಿ. ಹಲವಾರು ವರ್ಷಗಳ ಕಾಲ ವೆಂಕಟಶಿವಾರೆಡ್ಡಿಯವರು ಸರ್ಕಾರದ ನಿಯೋಜನೆಯ ಮೇರೆಗೆ ಇಂಗ್ಲೆಂಡಿಗೆ ಕಳುಯಿಸಿದಾಗ ಅವರೊಂದಿಗೆ ಕೆಲವಾರು ವರ್ಷ ಅಲ್ಲೇ ಕಳೆದ ಸುಧಾರೆಡ್ಡಿಯವರು ಭಾರತದಲ್ಲಿರುವ ಸಮಾಜ, ಶಿಕ್ಷಣದ ಕೊರತೆ, ನಿರುದ್ಯೋಗ, ಬಡತನ ಇವೇ ಮುಂತಾದವುಗಳನ್ನು ಕಂಡು ಮರುಗಿದರು. ಶ್ರೀಯುತರು ಭಾರತಕ್ಕೆ ಬಂದ ಮೇಲೆ ಕರ್ನಾಟಕದ ಕೆಲವಾರು ಭಾಗಗಳಲ್ಲಿ ಬಡವರಿಗಾಗಿ ಶ್ರಮಿಸಿದರು. ಶ್ರೀಯುತರನ್ನು ಕರ್ನಾಟಕ ಸರ್ಕಾರವು ಕಾವೇರಿ ಎಂಪೋರಿಯಂ ಅಧ್ಯಕ್ಷರನ್ನಾಗಿ ನೇಮಿಸಿತು. 1968ರ ಲೋಕಸಭಾ ಚುನಾವಣೆಯಲ್ಲಿ ಮಧುಗಿರಿ ಯಿಂದ ಸ್ಪರ್ದಿಸಿ ಗೆಲುವನ್ನು ಸಾಧಿಸಿದರು. ಇವರ ಪತಿಯವರು ಕ್ಯಾನ್ಸರ್ ರೋಗಕ್ಕೆ ತುತ್ತಾದಾಗ ರಾಜಕೀಯಕ್ಕೆ ವಿಮುಖರಾಗಿ ಸಮಾಜಸೇವೆ ಮಾಡತೊಡಗಿದರು. ಶ್ರೀಯುತರಿಗೆ ಭಾರತ ಸರ್ಕಾರವು 1968ರಲ್ಲಿ **"ಪದ್ಮಶ್ರೀ"** ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಡಾ. ಬಿ. ಸರೋಜದೇವಿ



ಡಾ॥ ಬಿ. ಸರೋಜದೇವಿ ಪಂಚ ಭಾಷಾ ತಾರೆ. ಇವರ ಮನೋಜ್ಞ ಅಭಿನಯಕ್ಕೆ ಭಾರತ ಸರ್ಕಾರವು 1969ರಲ್ಲಿ ಪದ್ಮಶ್ರೀ ಪ್ರಸಸ್ತಿಯನ್ನು 1992ರಲ್ಲಿ **ಪದ್ಮಭೂಷಣ ಪ್ರಶಸಿಯನ್ನು** ನೀಡಿ ಗೌರವಿಸಿದೆ.

(ವಿ.ಸೂ.: ಹೆಚ್ಚಿ ವಿವರಗಳಿಗೆ ನೋಡಿ ನಾಡಿನ ಸಾಹಿತ್ಯ, ಕಲೆ, ಸಂಸ್ಕೃತಿಗೆ ಒಕ್ಕಲಿಗರ ಕೊಡುಗೆ ಅಧ್ಯಾಯದಲ್ಲಿ)


ಶ್ರೀಮತಿ ಯಶೋಧರ ದಾಸಪ್ಪ



ಶ್ರೀಮತಿ ಯಶೋಧರ ದಾಸಪ್ಪ ಸ್ವಾತಂತ್ರ್ಯ ಹೋರಾಟಗಾರರಾಗಿ, ಗಾಂಧಿ ಅನುಯಾಯಿಯಾಗಿ, ಶಾಸಕಿಯಾಗಿ ಸಚಿವೆಯಾಗಿ ಸೇವೆ ಸಲ್ಲಿಸಿದರು. ಶ್ರೀಯುತರಿಗೆ 1972ರಲ್ಲಿ ಭಾರತ ಸರ್ಕಾರವು **'ಪದ್ಮಭೂಷಣ'** ಪ್ರಶಸ್ತಿ ನೀಡಿ ಗೌರವಿಸಿತು.

(ವಿ.ಸೂ.: ಹೆಚ್ಚಿ ವಿವರಗಳಿಗೆ ನೋಡಿ ಸ್ವಾತಂತ್ರ್ಯ ಹೋರಾಟದಲದಲಿ ಒಕ್ಕಲಿಗರು ಅಧ್ಯಾಯದಲ್ಲಿ)

ಡಾ॥ ಬಿ.ಪಿ. ರಾಧಾಕೃಷ್ಣ



ಡಾ॥ ಬಿ.ಪಿ. ರಾಧಾಕೃಷ್ಣ ಶ್ರೇಷ್ಠ ವಿಜ್ಞಾನಿ. ರಾಷ್ಟ್ರ ಮತ್ತು ಅಂತರ ರಾಷ್ಟ್ರಮಟ್ಟದಲ್ಲಿ ಭೂ ವಿಜ್ಞಾನದಲ್ಲಿ ಮಾಡಿದ ಸಾಧನೆಗಾಗಿ ಭಾತರ ಸರ್ಕಾರವು ಶ್ರೀಯುತರಿಗೆ 1991ರಲ್ಲಿ **ಪದ್ಮಶ್ರೀ ಪ್ರಶಸ್ತಿಯನ್ನು** ನೀಡಿ ಗೌರವಿಸಿತು.

(ವಿ.ಸೂ.: ಹೆಚ್ಚಿನ ವಿವರಗಳಿಗೆ ನೋಡಿ ನಾಡಿನ ಸಾಹಿತ್ಯ, ಕಲೆ, ಸಂಸ್ಕೃತಿಗೆ ಒಕ್ಕಲಿಗರ ಕೊಡುಗೆ ಅಧ್ಯಾಯದಲ್ಲಿ)

ಡಾ॥ ಹೆಚ್. ಸುದರ್ಶನ್



ಡಾ॥ ಹೆಚ್. ಸುದರ್ಶನ್ ಚಾಮರಾಜನಗರದ ಬಿಳಿಗಿರಿ ರಂಗನ ಬೆಟ್ಟದಲ್ಲಿ ವಾಸವಾಗಿರುವ ಗಿರಿಜನರಾದ ಸೋಲಿಗರ ಸರ್ವತೋಮುಖ ಅಭಿವೃದ್ದಿಗೆ ದುಡಿದ ಸುದರ್ಶನ್‌ರವರ ಸೇವೆಯನ್ನು ಮನಗಂಡ ಭಾರತ ಸರ್ಕಾರ ಶ್ರೀಯುತರಿಗೆ 2000ದಲ್ಲಿ **ಪದ್ಮಶ್ರೀ ಪ್ರಶಸ್ತಿಯನ್ನು** ನೀಡಿ ಗೌರವಿಸಿತು.

(ವಿ.ಸೂ.: ಹೆಚ್ಚಿನ ವಿವರಗಳಿಗೆ ನೋಡಿ ನಾಡಿನ ಸಾಹಿತ್ಯ, ಕಲೆ, ಸಂಸ್ಕೃತಿಗೆ ಒಕ್ಕಲಿಗರ ಕೊಡುಗೆ ಅಧ್ಯಾಯದಲ್ಲಿ)


ಪ್ರೊ॥ ದೇ. ಜವರೇಗೌಡ



ಪ್ರೊ॥ ದೇ. ಜವರೇಗೌಡ ಕಥೆ, ಕಾದಂಬರಿ, ನಾಟಕಗಳು ಇವೇ ಮುಂತಾದ ಸಾಹಿತ್ಯ ಸಾಧನೆಗೆ ಭಾರತ ಸರ್ಕಾರವು ಶ್ರೀಯುತರಿಗೆ 2001ರಲ್ಲಿ **ಪದ್ಮಶ್ರೀ ಪ್ರಶಸ್ತಿ**ಯನ್ನು ನೀಡಿ ಗೌರವಿಸಿತು.

(ವಿ.ಸೂ.: ಹೆಚ್ಚಿನ ವಿವರಗಳಿಗೆ ನೋಡಿ ನಾಡಿನ ಸಾಹಿತ್ಯ, ಕಲೆ, ಸಂಸ್ಕೃತಿಗೆ ಒಕ್ಕಲಿಗರ ಕೊಡುಗೆ ಅಧ್ಯಾಯದಲ್ಲಿ)

ಡಾ॥ ದೇವಿಪ್ರಸಾದ್ ಶೆಟ್ಟಿ



ಡಾ. ದೇವಿಪ್ರಸಾದ್ ಶೆಟ್ಟಿಯವರು ವಿಶ್ವವಿಖ್ಯಾತ ಹೃದ್ರೋಗ ತಜ್ಞರು ಶ್ರೀಯುತರು ಕರ್ನಾಟಕದಲ್ಲಿ ಎಂ.ಬಿ.ಬಿ.ಎಸ್. ಪದವಿಯನ್ನು ಇಂಗ್ಲೆಂಡಿನ ರಾಯಲ್ ಕಾಲೇಜಿನಲ್ಲಿ ಎಫ್.ಆರ್.ಸಿ.ಎಸ್. ಪದವಿಯನ್ನು ಲಂಡನ್‌ನ "ಗಾಯ್ಸ್" ಆಸ್ಪತ್ರೆಯಲ್ಲಿ ತರಬೇತಿ ಪಡೆದರು. ಭಾರತಕ್ಕೆ ಮರಳಿ ಬೆಂಗಳೂರಿನ ಮಣಿಪಾಲ್ ಹಾರ್ಟ್ ಫೌಂಡೇಷನ್‌ನಲ್ಲಿ ಸೇವೆಸಲ್ಲಿಸಿದರು. 2001ರಲ್ಲಿ **"ನಾರಾಯಣ ಹೃದಯಾಲಯ"** ಎಂಬ ಹೃದಯ ಚಿಕಿತ್ಸಾ ಆಸ್ಪತ್ರೆಯನ್ನು ಸ್ಥಾಪಿಸಿದರು. ಒಂದು ಸಾವಿರ ಹಾಸಿಗೆಯುಳ್ಳ ಆಧುನಿಕ ಸುಸಜ್ಜಿತ ಆಸ್ಪತ್ರೆ. ಭಾರತದ ಬಹುತೇಕ ರಾಜ್ಯಗಳ ಹೃದ್ರೋಗ ಆಸ್ಪತ್ರೆಗಳೊಂದಿಗೆ ಸಂಪರ್ಕ ವಿದ್ದು ವೈದ್ಯರಿಗೆ ಸೂಕ್ತ ಸಲಹೆ ಸಹಕಾರ ನೀಡುತ್ತಿದ್ದಾರೆ. ಶ್ರೀಯುತರು "ಕಾರ್ಡಿಯೋ ವ್ಯಾಸ್ಕೂಲರ್ ಥೊರೆಸಿಕ್ ಸರ್ಜರಿ"ಯಲ್ಲಿ ಪರಿಣಿತರು. ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿ ಯಾಗಿದ್ದಾಗ ಪ್ರಾರಂಭಿಸಿದ "ಯಶಸ್ವಿನಿ" ಎಂಬ ಬಡವರಿಗೆ ಕೈಗೆಟಕುವ ದರದಲ್ಲಿ ನೀಡುವ ವೈದ್ಯಕೀಯ ಸೇವೆಗೆ ಮನಸೋತು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು. ಇಂದಿಗೂ ವಿಶ್ವದಲ್ಲೆ ಕಡಿಮೆ ವೆಚ್ಚದಲ್ಲಿ ಹೃದ್ರೋಗಿಗಳ ತಪಾಸಣೆ, ಶಸ್ತ್ರ ಚಿಕಿತ್ಸೆ ಇವೇ ಮುಂತಾದವುಗಳನ್ನು ಮಾಡುವ ಮೂಲಕ ಜನಸೇವೆ ಮಾಡುತ್ತಿದ್ದಾರೆ. ಶ್ರೀಯುತರ ಬುದ್ಧಿ ಶಕ್ತಿ ಮತ್ತು ಸೇವೆಯನ್ನು ಪರಿಗಣಿಸಿ ಭಾರತ ಸರ್ಕಾರವು 2004ರಲ್ಲಿ **"ಪದ್ಮಶ್ರೀ"** ಪ್ರಶಸ್ತಿಯನ್ನು 2012ರಲ್ಲಿ **"ಪದ್ಮಭೂಷಣ"** ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಕೆ.ಸಿ. ರೆಡ್ಡಿ (ಕೆ. ಚಂದ್ರಶೇಖರ ರೆಡ್ಡಿ)



ಬೆಂಗಳೂರಿನಲ್ಲಿ ಜನಿಸಿದ **ಕೆ.ಸಿ. ರೆಡ್ಡಿ**ಯವರು ಬಿ.ಇ. ಸಿವಿಲ್ ಇಂಜಿನಿಯರಿಂಗ್ ಪದವಿಧರರಾಗಿ ನಂತರ ಅಮೆರಿಕೆಗೆ ತೆರಳಿ ಅಲ್ಲಿ ಎಂ.ಎಸ್. ಪದವಿಗಳಿಸಿ ಭಾರತಕ್ಕೆ ಹಿಂತಿರುಗಿದರು ತಮ್ಮ ಜಾಣ್ಮೆ ಮತ್ತು ಕೌಶಲತೆಯಿಂದಾಗಿ ಮಲ್ಪೆಯ ಮೀನುಗಾರಿಕಾ ಬಂದರಿನ ನಿರ್ಮಾಣ, ಮಂಗಳೂರು ಮತ್ತು ಕುದುರೆಮುಖ ಬೆಟ್ಟಗಳ ನಡುವಿನ ರಸ್ತೆ ನಿರ್ಮಾಣ, ಹಲವು ಹತ್ತು ವಿದ್ಯುತ್ ಯೋಜನೆಗಳಿಗೆ ಸಲಹೆಗಾರರಾಗಿ ದುಡಿದರು. ಬೆಂಗಳೂರಿನ ಜಕ್ಕೂರಿನಲ್ಲಿರುವ ಜವಹರ್‌ಲಾಲ್ ನೆಹರು ಆಧುನಿಕ ಪ್ರಯೋಗಶಾಲೆ ನಿರ್ಮಾಣ, ಭಾರತೀಯ ವಿಜ್ಞಾನ ಸಂಸ್ಥೆಯ ಕ್ಯಾಂಪಸ್‌ನಲ್ಲಿನ ಬೃಹತ್ ಕಟ್ಟಡಗಳ ನಿರ್ಮಾಣ ನೀರಾವರಿ ಇಲಾಖೆಗೆ, ವಿದ್ಯುತ್‌ಚಕ್ತಿ ಇಲಾಖೆಗೆ, ಹೆದ್ದಾರಿ ನಿರ್ಮಾಣ ಇಲಾಖೆಗೆ (ಪಿ.ಡಬ್ಲ್ಯು.ಡಿ ಇಲಾಖೆ) ಸಲಹೆಗಾರರಾಗಿ ಸೇವೆಸಲ್ಲಿಸಿದರು. ಇವರ ಬುದ್ಧಿಶಕ್ತಿ ಪ್ರಾಮಾಣಿಕೆ ಕೆಲಸ ಕಾರ್ಯ–ಗಳನ್ನು ಮೆಚ್ಚಿದ ಭಾರತ ಸರ್ಕಾರವು 2005ರಲ್ಲಿ **"ಪದ್ಮಶ್ರೀ"** ಪ್ರಶಸ್ತಿಯನ್ನು ನೀಡಿ ಗೌರವಿಸಿತು.


ಡಾ. ದೇವಪ್ಪಗೌಡ ಚಿನ್ನಯ್ಯ



ಮಲನಾಡು ಭಾಗದಲ್ಲಿ ಉದಿಸಿದ ಪ್ರತಿಭಾವಂತ ವ್ಯಕ್ತಿಯೇ **ಡಾ. ದೇವಪ್ಪಗೌಡ ಚಿನ್ನಯ್ಯ**ನವರು. ಶ್ರೀಯುತರು ರಾಷ್ಟ್ರಕವಿ ಕುವೆಂಪುರವರ ಬಂಧುಗಳು ವೈದ್ಯಕೀಯ ಶಾಸ್ತ್ರದಲ್ಲಿ ಪದವಿಗಳಿಸಿದ ತರುವಾಯ ಉನ್ನತ ಶಿಕ್ಷಣವನ್ನು ಇಂಗ್ಲೆಂಡಿನಲ್ಲಿ ಎಂ.ಆರ್.ಸಿ.ಪಿ. (ಮೆಂಬರ್ ಆಫ್ ರಾಯಲ್ ಕಾಲೇಜ್ ಫಿಜಿಷಿಯನ್) ಮತ್ತು ಎಫ್.ಆರ್.ಸಿ.ಎಸ್. (ಫೇಲೋಷಿಪ್ ಆಫ್ ದಿ ರಾಯಲ್ ಕಾಲೇಜ್ ಆಫ್ ಸರ್ಜನ್) ಪದವಿಗಳನ್ನು ಪಡೆದು ಬೆಂಗಳೂರಿಗೆ ಬಂದು ಹೃದ್ರೋಗ ತಜ್ಞರಾದರು. ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕರಾಗಿ ಸೇವೆಸಲ್ಲಿಸಿದರು ಹಾಗೂ ಆಸ್ಪತ್ರೆಯ ಸರ್ವತೋಮುಖ ಬೆಳವಣಿಗೆಗಾಗಿ ದುಡಿದರು. ನೂರಾರು ಜನ ಹೃದ್ರೋಗಿಗಳ ಹೃದಯ ತಪಾಸಣೆ ಹಾಗೂ ಶಸ್ತ್ರಕ್ರಿಯೆ ನಡೆಸಿ

ಯಶಸ್ವಿಯಾದರು. ಭಾರತದ ಪ್ರಮುಖ ವ್ಯಕ್ತಿಗಳ ಹೃದ್ರೋಗವನ್ನು ವಾಸಿಮಾಡಿದರು, ಶ್ರೀಯುತರ ಸೇವೆಗೆ ಭಾರತ ಸರ್ಕಾರವು 2006ರಲ್ಲಿ **"ಪದ್ಮಶ್ರೀ"** ಪ್ರಶಸ್ತಿ ನೀಡಿ ಗೌರವಿಸಿತು.

ಡಾ|| ಸಿ.ಎನ್. ಮಂಜುನಾಥ್



ಡಾ|| ಸಿ.ಎನ್. ಮಂಜುನಾಥ್ ಶ್ರೇಷ್ಠ ಹೃದ್ರೋಗ ತಜ್ಞರು ದೇಶ ವಿದೇಶಗಳ ಹೃದ್ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಿದ್ದಾರೆ ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಹೃದ್ರೋಗಿಗಳಿಗೆ ಸಲಹೆ ಸೂಚನೆ ನೀಡಿದ್ದಾರೆ. ಇವರ ಬಲೂನ್ ಕ್ಯಾಥಟರ್ ನ ಬಳಕೆಗಾಗಿ ಭಾರತ ಸರ್ಕಾರವು ಶ್ರೀಯುತರಿಗೆ 2007ರಲ್ಲಿ **ಪದ್ಮಶ್ರೀ** ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಬಿ.ಆರ್. ಶೆಟ್ಟಿ



ಬವಗುತು ರಘುರಾಮ ಶೆಟ್ಟಿ ಇವರು ಅನಿವಾಸಿ ಭಾರತೀಯ ರಾಗಿದ್ದು ಅರಬ್ ಎಮಿರೆಟಸ್‌ನಲ್ಲಿ "ನಿಯೋ ಫಾರ್ಮ್" ಎಂಬ ಔಷಧಿ ಕೈಗಾರಿಕೆ ಮತ್ತು ಗುಣಮಟ್ಟದ ಔಷಧಿಗಳನ್ನು ಅಂತರಾಷ್ಟ್ರ ಮಟ್ಟದಲ್ಲಿ ಸರಬರಾಜು ಮಾಡುವುದರ ಮೂಲಕ ಖ್ಯಾತನಾಮರಾದರು. ಆಸ್ಪತ್ರೆಗಳು, ಹಣಕಾಸು ವ್ಯವಹಾರ, ಕೈಗಾರಿಕೆಗಳ ಸ್ಥಾಪನೆ, ಆರ್ಯತ ನಿರ್ಯತ ಸೇರಿದಂತೆ ಭಾರಿ ವ್ಯವಹಾರಗಳ ಮೂಲಕ ಕೋಟ್ಯಾಂತರ ರೂಪಾಯಿಗಳಿಸಿದರು. 2015 ಮತ್ತು 2020ರ 'ಪೋರ್ಬ್ಸ್' ವಿಶ್ವ ಶ್ರೀಮಂತರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದರು. ಅರಬ್ ಎಮಿರೆಟಸ್ ನೀಡುವ "ಅಬುದಬಿ ಅವಾರ್ಡ್" (2004) ಪ್ರಶಸ್ತಿ ಮತ್ತು ಗೌರವವನ್ನು ಅಮೆರಿಕ ರಾಷ್ಟ್ರವು "ಡಿಸ್ಟಿಂಗಿಷ್ಡ ಎಂಟರ್‌ಪ್ರೈನರ್ ಅವಾರ್ಡ್", ಭಾರತರಾಷ್ಟ್ರವು ನೀಡುವ "ಪ್ರವಾಸಿ ಭಾರತೀಯ ಸಮ್ಮಾನ್" ಪ್ರಶಸ್ತಿಯನ್ನು, (2007)ಗಳಿಸಿದರು. ಭಾರತವು 2009ರಲ್ಲಿ ಶ್ರೀಯುತರಿಗೆ **"ಪದ್ಮಶ್ರೀ"** ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಐಶ್ವರ್ಯರೈ ಬಚ್ಚನ್



ಐಶ್ವರ್ಯರೈ ಬಚ್ಚನ್ ಇವರ ಮನೋಜ್ಞ ಅಭಿನಯಕ್ಕೆ ಭಾರತ ಸರ್ಕಾರವು 2009ರಲ್ಲಿ **ಪದ್ಮಶ್ರೀ ಪ್ರಶಸ್ತಿ**ಯನ್ನು ನೀಡಿ ಗೌರವಿಸಿತು.

(ವಿ.ಸೂ.: ಹೆಚ್ಚಿನ ವಿವರಗಳಿಗೆ ನೋಡಿ ನಾಡಿನ ಸಾಹಿತ್ಯ, ಕಲೆ, ಸಂಸ್ಕೃತಿಗೆ ಒಕ್ಕಲಿಗರ ಕೊಡುಗೆ ಅಧ್ಯಾಯದಲ್ಲಿ)

ಅನಿತಾ ರೆಡ್ಡಿ



ಶ್ರೀಮತಿ ಅನಿತಾರೆಡ್ಡಿಯವರು ಅಂದಿನ ಮೈಸೂರು ರಾಜ್ಯದ ಮೊದಲ ಮುಖ್ಯ ಮಂತ್ರಿಯಾಗಿದ್ದ ಕೆ.ಸಿ. ರೆಡ್ಡಿಯವರ ಸೊಸೆ (ಪ್ರತಾಪ ರೆಡ್ಡಿಯವರ ಪತ್ನಿ) ಹುಟ್ಟಿದ್ದು ಬೆಳೆದದ್ದು ವ್ಯಾಸಂಗ ಮಾಡಿದ್ದು ಆಂಧ್ರ, ತಮಿಳುನಾಡುಗಳಲ್ಲಿ, ಅಮೆರಿಕದಲ್ಲಿ ತಮ್ಮ ವೈವಾಹಿಕ ಜೀವನವನ್ನು ನಡೆಸಿದರು. ಹೆಚ್ಚಿನ ಕಾಲವನ್ನು ಬೆಂಗಳೂರಿನಲ್ಲೇ ಕಳೆದರು. ಶ್ರೀಮಂತಿಕೆಯಲ್ಲೇ ಹುಟ್ಟಿ ಬೆಳೆದರೂ ಕರ್ನಾಟಕ ಮತ್ತು ಆಂಧ್ರದಲ್ಲಿರುವ ಕೊಳಗೇರಿಯ ಅಭಿವೃದ್ಧಿ ಅಲ್ಲಿನ ಮಕ್ಕಳ ಶಿಕ್ಷಣಕ್ಕೆ ಒತ್ತುಕೊಟ್ಟರು. ಶ್ರೀಯುತರು AVAS (Association for Voluntary Action and Services) ಎಂಬ ಸ್ವಯಂಸೇವಾ ಸಂಸ್ಥೆಯನ್ನು ಕಟ್ಟಿ ಬೆಳೆಸಿ, ಅದರ ಮೂಲಕ ಸಮಾಜದ ಕೆಳಸ್ಥರದ ಜನರಸೇವೆ ಮಾಡತೊಡಗಿದರು. ಇಷ್ಟೇ ಅಲ್ಲದೆ "ದ್ವಾರಕ" ಮತ್ತು "ಡ್ರಿಕ್" ಎಂಬ ಮತ್ತೆರಡು ಸಂಸ್ಥೆಗಳನ್ನು ಹುಟ್ಟುಹಾಕಿ ಬಡಜನರ ಸೇವೆ ಮಾಡತೊಡಗಿದರು. ಭಾರತ ಸರ್ಕಾರವು ಶ್ರೀಯುತರ ಸಮಾಜ ಸೇವೆಯನ್ನು ಗುರುತಿಸಿ 2011ರಲ್ಲಿ **"ಪದ್ಮಶ್ರೀ"** ಪ್ರಶಸ್ತಿಯನ್ನು ನೀಡಿ ಗೌರವಿಸಿತು.


ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ



ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಶ್ರೀಗಳ ತ್ರಿವಿದ ದಾಸೋಹ ಸಮಾಜವನ್ನು ಸರ್ವತೋಮುಖವಾಗಿ ಅಭಿವೃದ್ಧಿಗೊಳಿಸಿದ್ದು ಹಾಗೂ ಸಮಾಜದ ಜನರನ್ನು ಸಾತ್ವಿಕಗೊಳಿಸಿದ್ದು ಇವೇ ಮುಂತಾದ ಸೇವೆಗೆ ಭಾರತ ಸರ್ಕಾರವು 2010ರಲ್ಲಿ **ಪದ್ಮಭೂಷಣ ಪ್ರಶಸ್ತಿ** ನೀಡಿ ಗೌರವಿಸಿತು.

(ವಿ.ಸೂ.: ಹೆಚ್ಚಿನ ವಿವರಗಳಿಗೆ ಸಾಮಾಜಿಕ ಬದಲಾವಣೆಯಲ್ಲಿ ಒಕ್ಕಲಿಗ ಜನಾಂಗದ ಪಾತ್ರ ನೋಡಿರಿ)

ಡಾ॥ ಬಿ.ಎಂ. ಹೆಗ್ಗಡೆ



ಡಾ. ಬೆಳ್ಳೆ ಮಾನಪ್ಪ ಹೆಗ್ಗಡೆರವರು ವಿಶ್ವವಿಖ್ಯಾತ ಹೃದ್ರೋಗ ತಜ್ಞರು 1999 ರಿಂದ 2003ರ ತನಕ ಮಣಿಪಾಲ್ ಅಕಾಡೆಮಿ ಉನ್ನತ ಶಿಕ್ಷಣ ಸಂಸ್ಥೆಯ ಉಪಕುಲಪತಿಗಳಾಗಿ ಸೇವೆಸಲ್ಲಿಸಿದರು. ಪ್ರಾಧ್ಯಾಪಕರಾಗಿ, ವೈದ್ಯಕೀಯ ಪ್ರಾಧ್ಯಾಪಕರಾಗಿ, ವೈದ್ಯ ವಿಜ್ಞಾನಿಯಾಗಿ, ಹಲವಾರು ವೈದ್ಯಕೀಯ ಗ್ರಂಥಗಳನ್ನ ರಚಿಸಿದ್ದಾರೆ. ಹಾಗೂ ವೈದ್ಯಲೋಕದ ಪರಿಚಯವನ್ನು ಸರಳವಾಗಿ ಜನಸಾಮಾನ್ಯರಿಗೆ ತಿಳಿಯುವಂತೆ ಸಾವಿರಾರು ಉಪನ್ಯಾಸಗಳನ್ನು ನೀಡಿದ್ದಾರೆ. ಜನಸಾಮಾನ್ಯರ ವೈದ್ಯರೆಂದೇ ಖ್ಯಾತರಾಗಿದ್ದಾರೆ. ಶ್ರೀಯುತರು ನಮ್ಮ ಒಕ್ಕಲಿಗ ಸಮುದಾಯದ ಉಪ ಪಂಗಡವಾದ 'ಬಂಟ' ಸಮುದಾಯಕ್ಕೆ ಸೇರಿದವರು. ಇವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಉಡುಪಿ ಬಳಿಯ ಹಿರಿಯಡಕದಲ್ಲಿ ಪಡೆದರು. ಬಾಲ್ಯದಲ್ಲಿಯೇ ಬಹಳ ಬುದ್ಧಿವಂತರು. ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಉನ್ನತ ವ್ಯಾಸಂಗ ಮಾಡಿದರು. 1960ರಲ್ಲಿ ಮದ್ರಾಸ್ ಸ್ಟ್ಯಾನ್ಲಿ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಪದವಿಯನ್ನು ಪಡೆದರು. ಆ ಸಂದರ್ಭದಲ್ಲಿ ಮೂರು ಚಿನ್ನದ ಪದಕಗಳನ್ನು ಪಡೆದರು. ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ ಸಹಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಡೀನ್ ಆಗಿ ಸೇವೆ ಸಲ್ಲಿಸಿದರು (1999-2003) ಮಣಿಪಾಲ್ ಅಕಾಡೆಮಿ, ಕಸ್ತೂರಿಬಾ ಮೆಡಿಕಲ್ ಕಾಲೇಜ್, ಭಾರತೀಯ ವಿದ್ಯಾಭವನ (ಮಂಗಳೂರು ಕೇಂದ್ರ) ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಸಲಹೆಗಾರರಾಗಿ ಸೇವೆ ಸಲ್ಲಿಸಿದರು. ಹೃದ್ರೋಗದ ವಿಷಯದಲ್ಲಿ ವೈದ್ಯರು ಹೇಗೆ ರೋಗಿ -ಗಳನ್ನು ಮೋಸಗೊಳಿಸುತ್ತಾರೆ, ಜನಸಾಮಾನ್ಯರಿಗೆ ಸಾಮಾನ್ಯ ಆರೋಗ್ಯ ಹಾಗೂ ಹೃದ್ರೋಗ ಬರದಂತೆ ಹೇಗೆ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಇವೇ ಮುಂತಾದ ತಿಳುವಳಿಕೆ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ವಿಶ್ವದ ನಾನಾ ಭಾಗಗಳಿಂದ ಹೃದ್ರೋಗ ತಜ್ಞರು ಡಾ. ಬಿ.ಎಂ. ಹೆಗ್ಗಡೆಯವರ ಸಲಹೆ, ಸಹಕಾರವನ್ನು ಕೇಳುತ್ತಿರುತ್ತಾರೆ. ಶ್ರೀಯುತರಿಗೆ 1997ರಲ್ಲಿ **ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ**, 2010ರಲ್ಲಿ **ಪದ್ಮಭೂಷಣ ಪ್ರಶಸ್ತಿ**, 2021ರಲ್ಲಿ **ಪದ್ಮವಿಭೂಷಣ ಪ್ರಶಸ್ತಿ** ನೀಡಿ ಭಾರತ ಸರ್ಕಾರವು ಶ್ರೀಯುತರನ್ನು ಗೌರವಿಸಿದೆ.

ಹೆಚ್.ಜಿ. ನಾಗರಾಜಗೌಡ (ಹೊಸನಗರ ಗಿರೀಶ್ ನಾಗರಾಜೇಗೌಡ)




ಹೊಸನಗರ ಗಿರೀಶ್ ನಾಗರಾಜೇಗೌಡರವರು 1988ರಲ್ಲಿ ಶಿವಮೊಗ್ಗ ಜಿಲ್ಲೆಯ ಹೊಸನಗರದಲ್ಲಿ ಜನಿಸಿದರು. ಇವರು ಸಾಕಷ್ಟು ಬಾರಿ ಐಜಂಪ್ (ಎತ್ತರ ಜಿಗಿತ) ಕ್ರೀಡೆಯಲ್ಲಿ ವಿಶ್ವದ ನಾನಾಕಡೆಗಳಲ್ಲಿ ನಡೆದ ಅಂತರ ರಾಷ್ಟ್ರಮಟ್ಟದ ಪ್ಯಾರಾ ಒಲಂಪಿಕ್ಸ್‌ನಲ್ಲಿ ಭಾರತಕ್ಕೆ ಚಿನ್ನದ ಪದಕವನ್ನು 2013ರಲ್ಲಿ ಲಂಡನ್‌ನಲ್ಲಿ ನಡೆದ ಒಲಂಪಿಕ್ಸ್‌ನಲ್ಲಿ ನಡೆದ ಪ್ಯಾರಾಲಂಪಿಕ್ಸ್ ವಿಭಾಗದಲ್ಲಿ "ಬೆಳ್ಳಿ" ಪದಕವನ್ನೂ, 2014ರಲ್ಲಿ ದಕ್ಷಿಣ ಕೊರಿಯದಲ್ಲಿ ನಡೆದ ಏಷ್ಯಾಪ್ಯಾರಗೇಮ್ಸ್ ಪಂದ್ಯದಲ್ಲಿ ಕಂಚಿನ ಪದಕವನ್ನು ತಂದುಕೊಟ್ಟರು. ಶ್ರೀಯುತರ ಸಾಧನೆಯನ್ನು ಗೌರವಿಸಿ 2012ರಲ್ಲಿ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನು 2013ರಲ್ಲಿ ಭಾರತ ಸರ್ಕಾರವು ನೀಡುವ **ಪದ್ಮಶ್ರೀ** ಪ್ರಶಸ್ತಿಯನ್ನು ಹಾಗೂ "ಏಕಲವ್ಯ" ಪ್ರಶಸ್ತಿಯನ್ನು ನೀಡಿ ಗೌರವಿಸಿತು. 2014ರಲ್ಲಿ ಅತ್ಯುತ್ತಮ ಕ್ರೀಡಾಳುವಿಗೆ ನೀಡುವ "ಅರ್ಜುನ್" ಪ್ರಶಸ್ತಿಯನ್ನು ನೀಡಿಗೌರವಿಸಿತು.

ಸುಕ್ರಿ ಬೊಮ್ಮಗೌಡ



ಉತ್ತರ ಕನ್ನಡ ಜಿಲ್ಲೆ ಬಡಿಗೇರಿಯಲ್ಲಿ ಹಾಲಕ್ಕಿ ಒಕ್ಕಲಿಗ ಸಮುದಾಯದಲ್ಲಿ ಜನಿಸಿದ ಈಕೆ ತಮ್ಮ ಸಾಂಪ್ರದಾಯಿಕ ಜಾನಪದ ಗೀತೆಯನ್ನು ಸುಶ್ರಾವ್ಯವಾಗಿ ಹಾಡುವುದೇ ಅಲ್ಲದೆ ಮುಂದಿನ ಪೀಳಿಗೆಗೂ ಉಳಿಯುವಂತೆ ಮಾಡುವ ಉದ್ದೇಶದಿಂದ ಬೆಳೆಯುವ ಮಕ್ಕಳಿಗೆ ಕಲಿಸತೊಡಗಿದಳು. ಇದರಿಂದಾಗಿ ಈಕೆಯು "ಹಾಲಕ್ಕಿ ನೈಟಿಂಗ್‌ಹೇಲ್" ಎಂದೇ ಪ್ರಖ್ಯಾತಿ ಪಡೆದಳು ಮೊದಲು ನಾಡೋಜ ಹೆಚ್.ಎಲ್. ನಾಗೇಗೌಡರು ಗುರುತಿಸಿದರು, ನಂತರ ಆಲ್ ಇಂಡಿಯಾ ರೇಡಿಯೋ ಹಾಗೂ ಜಾನಪದ ಅಕಾಡೆಮಿ ಗುರುತಿಸಿತು. ಶ್ರೀಯುತರ ಕಲೆಯನ್ನು ಕಂಡು ಹಂಪೆ ವಿಶ್ವವಿದ್ಯಾನಿಲಯವು ನಾಡೋಜ ಪ್ರಶಸ್ತಿಯನ್ನು 2017ರಲ್ಲಿ ಭಾರತ ಸರ್ಕಾರವು ತನ್ನ ಅತ್ಯುನ್ನತ ಪ್ರಶಸ್ತಿಯಾದ **"ಪದ್ಮಶ್ರೀ"** ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ವಿಕಾಸಗೌಡ




ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ "ಡಿಸ್ಕಸ್ ಥ್ರೋ", ಷಾಟ್‌ಪುಟ್ (ಗುಂಡು ಎಸೆತ) ಥ್ರೋನಲ್ಲಿ ವಿಶ್ವವಿಖ್ಯಾತರು. ಇವರು ಹುಟ್ಟಿದ್ದು ಮೈಸೂರಿನಲ್ಲಿ ಬೆಳೆದಿದ್ದು ಅಮೆರಿಕಾದ ನಾರ್ಥ್‌ಕೆರೊಲಿನಾದಲ್ಲಿ 2008ರಲ್ಲಿ ಬೀಜಿಂಗ್ ಒಲಂಪಿಕ್ಸ್, 2012ರಲ್ಲಿ ಲಂಡನ್ ಒಲಂಪಿಕ್ಸ್‌ನಲ್ಲಿ , 2013ರಲ್ಲಿ ಏಷ್ಯನ್ ಒಲಂಪಿಕ್ಸ್ ಹಾಗೂ 2014ರಲ್ಲಿ ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಅಮೆರಿಕ ಹಾಗೂ ಭಾರತವನ್ನು ಪ್ರತಿನಿಧಿಸಿದರು. 2014ರ ಕಾಮನ್‌ವೆಲ್ತ್ ಗೇಮ್ಸನಲ್ಲಿ ಭಾರತಕ್ಕೆ ಚಿನ್ನ ತಂದುಕೊಟ್ಟ ಕೀರ್ತಿಗೆ ಪಾತ್ರರಾಗಿದ್ದಾರೆ. ಇವರ ತಂದೆಯವರು ಶಿವೇಗೌಡರು ಕ್ರೀಡಾ ತರಬೇತುದಾರರು. ಶ್ರೀಯುತರಿಗೆ ಭಾರತ ಸರ್ಕಾರವು 2017ರಲ್ಲಿ **"ಪದ್ಮಶ್ರೀ"** ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಡಾ. ದೊಡ್ಡರಂಗೇಗೌಡ



ಡಾ. ದೊಡ್ಡರಂಗೇಗೌಡ ಅಧ್ಯಯನ, ಅಧ್ಯಾಪನ, ಸಂಶೋಧನೆ, ಸಾಹಿತ್ಯದಲ್ಲಿ ಸಾಕಷ್ಟು ಸಾಧನೆ ಮಾಡಿದ್ದಾರೆ. ಅಳಿವಿನಂಚಿನಲ್ಲಿರುವ ಜಾನಪದ ಸಂಗೀತ, ಕಲೆ, ದೇಶಿಕಲೆ, ಸಾಹಿತ್ಯ, ಸಂಸ್ಕೃತಿಗೆ ಮರುಜೀವ ನೀಡಿ ಮುಖ್ಯವಾಹಿನಿಗೆ ತಂದ ಶ್ರೀಯುತರ ಸೇವೆಗೆ ಭಾರತ ಸರ್ಕಾರವು 2018ರಲ್ಲಿ **ಪದ್ಮಶ್ರೀ ಪ್ರಶಸ್ತಿ** ನೀಡಿ ಗೌರವಿಸಿತು.

ತುಳಸಿಗೌಡ



ತುಳಸಿಗೌಡ ಅಂಕೋಲದ ಹೊನ್ನಳ್ಳಿ ಎಂಬಲ್ಲಿ 1944ರಲ್ಲಿ ಜನಿಸಿದರು. ಈಕೆ ಎರಡು ವರ್ಷದ ಬಾಲಕಿಯಾಗಿರುವಾಗಲೆ ಈಕೆಯ ತಂದೆ ಮರಣವನ್ನಪಿದರು. ಬಡತನದಲ್ಲೇ ಹುಟ್ಟಿ ಬೆಳೆದ ತುಳಸಿಗೌಡರವರು ತಮ್ಮ ಊರಿನ ಬಳಿಯೇ ಇದ್ದ ಕಾಡಿನ ಪರಿಸರವನ್ನು ಅರ್ಥಮಾಡಿಕೊಂಡು ಮರಗಳ ಬೀಜ ಸಂಗ್ರಹಣೆ ಅವುಗಳನ್ನು ಬಿತ್ತಿ ಬೆಳೆದು ನಂತರ ಸಸಿಗಳನ್ನು ನೆಟ್ಟಿರುತ್ತಾರೆ. ಅರಣ್ಯಾಧಿಕಾರಿಯೊಬ್ಬರು ತುಳಸಿಗೌಡರು ಕಾಡಿನ ಬೆಳವಣಿಗೆಗೆ ಸಹಾಯ ಸಹಕಾರ ಮಾಡುತ್ತಿರುವುದನ್ನು ಕಂಡು ದಿನಗೊಲಿ

ನೌಕರಳ ಹುದ್ದೆ ನೀಡಿದರು. ಅಲ್ಲಿಂದಾಗಿ ಅರಣ್ಯದ ಒಡನಾಟ ಮತ್ತಷ್ಟು ಹೆಚ್ಚಿತು. ಹಣ್ಣು, ಕಾಯಿ, ಬೀಜ, ವೃಕ್ಷಗಳು ಅವುಗಳ ಬೆಳವಣಿಗೆಗೆ, ಔಷಧಿ ಸಸ್ಯಗಳ ಬಗ್ಗೆ ಅಗಾಧವಾದ ಜ್ಞಾನವನ್ನು ಗಳಿಸಿದರು. 300ಕ್ಕೂ ಹೆಚ್ಚು ಔಷಧಿಯ ಸಸ್ಯಗಳನ್ನು ಗುರ್ತಿಸಿದ್ದಾರೆ. ಈಕೆಯ ಪರಿಸರ ಪ್ರಜ್ಞೆ ಸಸ್ಯಗಳ ಮೇಲಿರುವ ಜ್ಞಾನವನ್ನು ಕಂಡು ಅರಣ್ಯ ಶಾಸ್ತ್ರದ ನಡೆದಾಡುವ **"ವಿಶ್ವಕೋಶ"** ಎನ್ನುತ್ತಾರೆ.

ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ (1986), ಎಕೊ ಟ್ಯೂರಿಸಂ ಪ್ರಶಸ್ತಿ (1991), ಐ.ಪಿ.ವಿ.ಎಂ. ಪ್ರಶಸ್ತಿ (1995), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1999), ಭಾರತ ಸರ್ಕಾರವು 2020ರಲ್ಲಿ ರಾಷ್ಟ್ರದ ಅತ್ಯುನ್ನತ ಪ್ರಶಸ್ತಿಯಾದ "ಪದ್ಮಶ್ರೀ" ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಶ್ರೀಮತಿ ತುಳಸಿಗೌಡರಿಗೆ ಸ್ಥಳೀಯರಾದ ನಾಗರಾಜಗೌಡ ಹಾಗೂ ಪರಿಸರ ತಜ್ಞರಾದ ಡಾ. ಯಲ್ಲಪ್ಪ ರೆಡ್ಡಿಯವರು ಸಹಾಯ ಅಸ್ತ ನೀಡಿ ಆಕೆಯ ಬೆಳವಣಿಗೆಗೆ ಪೂರಕವಾಗಿ ನಿಂತಿದ್ದಾರೆ.

□

ಉಪಸಂಹಾರ

ಹೀಗೆ ಒಕ್ಕಲಿಗರು ವ್ಯವಸಾಯ ಮತ್ತು ಪಶುಸಂಗೋಪನೆಯನ್ನು ತಮ್ಮ ಮುಖ್ಯ ಕಸುಬನ್ನಾಗಿ ಮಾಡಿಕೊಂಡರು. ಕಷ್ಟ ಸಹಿಷ್ಣುಗಳಾದ ಇವರು ನಾಡಿನ ರಕ್ಷಣೆಗೆ ನಿಂತರು. ನಾಡನ್ನು ಕಟ್ಟಿ ನಾಡ ಪ್ರಭುಗಳಾಗಿ, ಫೌಜುದಾರರಾಗಿ, ಗ್ರಾಮ ಮುಖಂಡರಾಗಿ ಸೇವೆ ಸಲ್ಲಿಸಿದರು. ಕಾಲಾನಂತರ ಇಡೀ ಸಮುದಾಯ ಅಧಃಪತನದ ಹಾದಿ ಹಿಡಿದಾಗ ಎಚ್ಚೆತ್ತುಕೊಂಡು ತಮ್ಮ ಉಳಿವಿಗಾಗಿ ಚಳವಳಿ ನಡೆಸಿದರು. ರಾಷ್ಟ್ರ ಇಲ್ಲವೇ ರಾಜ್ಯ ಬ್ರಿಟಿಷರ ದಾಸ್ಯ ಶೃಂಖಲೆಗೆ ಒಳಗಾದಾಗ ಇಡೀ ಸಮುದಾಯ ಬ್ರಿಟಿಷರ ವಿರುದ್ಧ ಹೋರಾಡಿತು. ಸ್ವಾತಂತ್ರ್ಯಾ ನಂತರ ನಾಡನ್ನು ಕಟ್ಟಿದರು. ನಾಡು, ನುಡಿ, ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ವ್ಯವಸಾಯ ಮತ್ತು ಪಶುಸಂಗೋಪನೆಯಂತಹ ಕಷ್ಟಕರವಾದ ವೃತ್ತಿಗೆ ಒಗ್ಗಿಕೊಂಡ ಈ ಸಮುದಾಯ ಎತ್ತುಗಳನ್ನು ಬೆದರಿಸಲು ಚಾಟಿ ಬೀಸುವಷ್ಟೇ ಸಹಜವಾಗಿ ಕತ್ತಿ ಬೀಸತೊಡಗಿದರು. ನಾಡನ್ನು ಕಟ್ಟಿದರು. ಸಾಹಿತ್ಯ, ಕಲೆ, ಸಂಸ್ಕೃತಿ ಅದರಲ್ಲೂ ವಿಶೇಷವಾಗಿ ಧರ್ಮಕ್ಕೆ ರಕ್ಷಣೆ ನೀಡಿದ ಹಾಗೂ ಅನ್ಯಮತ ಸಹಿಷ್ಣುಗಳೂ ಆದ ಗಂಗರು, ಚಾಲುಕ್ಯರು, ಹೊಯ್ಸಳರು, ರಾಷ್ಟ್ರಕೂಟರು, ಈ ಕೃಷಿಕ ಸಮಾಜ ಇಲ್ಲವೇ ಸಮುದಾಯದಿಂದ ಬಂದವರು. ಗಂಗಡಕಾರ ಒಕ್ಕಲಿಗರು ಎಂದು ಕರೆಯುವ ಈ ಸಮುದಾಯವನ್ನು ಹಳೇ ಮೈಸೂರು ಪ್ರಾಂತ್ಯದಲ್ಲಿ ಹೆಚ್ಚಾಗಿ ಕಾಣಬಹುದು. ಅದೇ ರೀತಿ ಇತ್ತೀಚೆಗೆ ಎಂದರೆ ಕ್ರಿ.ಶ. 15ನೇ ಶತಮಾನದಿಂದ 17ನೇ ಶತಮಾನ ಕಾಲದಲ್ಲಿ ಬೆಂಗಳೂರು, ಮಾಗಡಿ ಸೇರಿದಂತೆ ಹಲವಾರು ಪ್ರದೇಶಗಳನ್ನು ಕಟ್ಟಿ ಆಳಿದ ಮರಸು ಒಕ್ಕಲಿಗರು, ಮಧುಗಿರಿ, ಮಿಡಿಗೇಶಿ ಸೇರಿದಂತೆ ಹಲವಾರು ಪಾಳೆಯಪಟ್ಟನ್ನು ಕಟ್ಟಿ ಆಳ್ವಿಕೆ ಮಾಡಿದ ಸ್ಥಾನಿಕ ಪ್ರಭುಗಳು ಕರ್ನಾಟಕದ ಇತಿಹಾಸಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ರಾಜ್ಯ ವಿಸ್ತರಣೆಗಿಂತಲೂ ಹೆಚ್ಚಾಗಿ ಸುಖೀ ರಾಜ್ಯ ಸ್ಥಾಪನೆಗೆ ಮಹತ್ವ ನೀಡಿದರು. ಕೆರೆ, ಕುಂಟೆ, ಕಾಲುವೆಗಳನ್ನು ತೋಡಿಸಿದರು. ದೇವಾಲಯಗಳು, ಗುಡಿ ಗೋಪುರಗಳನ್ನು ನಿರ್ಮಿಸಿದರು.

ಕಾಲಚಕ್ರಕ್ಕೆ ಸಿಲುಕಿದ ಈ ಸಮುದಾಯ ಮೈಸೂರಸರ, ಬ್ರಿಟೀಷರ ಆಳ್ವಿಕೆಯಿಂದಾಗಿ ಶಿಕ್ಷಣ, ಉದ್ಯೋಗ, ಇವೇ ಮುಂತಾದ ಸವಲತ್ತುಗಳಿಂದ ವಂಚಿತರಾಗಿ ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಹಿಂದುಳಿದರು. ಜೈನಧರ್ಮವನ್ನು ವರ್ಜಿಸಿ ಹಿಂದೂ ಧರ್ಮವನ್ನು ಪೋಷಿಸಲಾಗಿ ಮೇಲ್ವರ್ಗದವರಿಂದ ಶೂದ್ರ ಪಟ್ಟವನ್ನು ಕಟ್ಟಿಸಿಕೊಳ್ಳಬೇಕಾಯಿತು. ಇಪ್ಪತ್ತನೆಯ ಶತಮಾನದ ಪೂರ್ವದಲ್ಲಿ ಕೆಲವೇ ಕೆಲವು ಮಂದಿ ಹಿಂದುಳಿದ ವರ್ಗಗಳ ಬುದ್ಧಿ ಜೀವಿಗಳಿಂದಾಗಿ ಬ್ರಾಹ್ಮಣೇತರ ಚಳವಳಿ ಇಲ್ಲವೆ ಹಿಂದುಳಿದ ವರ್ಗಗಳ ಚಳವಳಿಯನ್ನು ಮಾಡುವುದರ ಮೂಲಕ ಶಿಕ್ಷಣ, ಉದ್ಯೋಗ, ಇವೇ ಮುಂತಾದ ಸವಲತ್ತುಗಳನ್ನು ಪಡೆಯುವಲ್ಲಿ ಫಲಪ್ರದರಾದರು. ಇದರ ಫಲವಾಗಿ ಹಂತಹಂತವಾಗಿ ಮೇಲೇರತೊಡಗಿದರು. ಸುಶಿಕ್ಷಿತರಾದ ಒಕ್ಕಲಿಗ ಸಮುದಾಯವು ಪ್ರಜಾಪ್ರತಿನಿಧಿ ಸಭೆಯಂತಹ ಪ್ರತಿಷ್ಠಿತ ರಾಜಕೀಯ ವ್ಯವಸ್ಥೆಯಲ್ಲಿ ಸ್ಥಾನಗಿಟ್ಟಿಸಿಕೊಂಡಿತು. ರಾಜ್ಯ ಸೂತ್ರದಲ್ಲಿ ತನ್ನ ಅನಿಸಿಕೆ, ಅಭಿಪ್ರಾಯ, ಸಲಹೆ, ಸೂಚನೆ ನೀಡುವ ಮೂಲಕ ಅಂದಿನ ದಿವಾನರ, ಆಳರಸರ ಕಣ್ಣು ತೆರೆಸಿದರು.

ಇದೇ ಸಮಯಕ್ಕೆ ಶಿಕ್ಷಣ ದಾಸೋಹ ನೀಡಲು "ಒಕ್ಕಲಿಗರ ಸಂಘ"ವನ್ನು ಸ್ಥಾಪನೆ ಮಾಡಿಕೊಂಡು ಒಕ್ಕಲಿಗರೇ ಅಲ್ಲದೆ ಬೇರೆ ಸಮುದಾಯದ ಮಕ್ಕಳನ್ನೂ ಕೂಡ ತಮ್ಮ ಮಕ್ಕಳೇ ಎಂದು ಭಾವಿಸಿ ಅವರಿಗೂ ತನ್ನ ವಿದ್ಯಾರ್ಥಿ ನಿಲಯದಲ್ಲಿ ಅವಕಾಶ ನೀಡಿ ಅನ್ಯಮತ ಸಹಿಷ್ಣುತೆ ಹಾಗೂ ಹೃದಯ ವೈಶಾಲ್ಯತೆಯನ್ನು ಮರೆಯಿತು. ಇದರ ಪರಿಣಾಮವಾಗಿ ರಾಜ್ಯದಾದ್ಯಂತ ಓತ ಪ್ರೋತವಾಗಿ ಸಮುದಾಯದ, ಸಂಘ ಸಂಸ್ಥೆಗಳು, ವಿದ್ಯಾರ್ಥಿ ನಿಲಯಗಳು ಹುಟ್ಟಿಕೊಂಡು ಶಿಕ್ಷಣಕ್ಕೆ ಆದ್ಯತೆ ನೀಡಿ ಇಡೀ ಸಮುದಾಯವನ್ನು ಸಮಾಜದ ಮುಖ್ಯ ವಾಹಿನಿಗೆ ಸೇರಿಸುವಲ್ಲಿ ಫಲಪ್ರದವಾಯಿತು. ಅದರ ಮುಂದಿನ ವರ್ಷವೇ ಸಂಘವು ಪ್ರಾರಂಭಿಸಿದ "ಒಕ್ಕಲಿಗರ ಪತ್ರಿಕೆ"ಯು ಸಮುದಾಯದಲ್ಲಿ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ ಮೂಡಿಸಿತು.

ಇದರಿಂದಾಗಿ ಒಕ್ಕಲಿಗರಲ್ಲಿ ಅನೇಕರು ಪತ್ರಿಕೋದ್ಯಮಕ್ಕೆ ಧುಮುಕಿದರು. ಒಕ್ಕಲಿಗರ ಪತ್ರಿಕೆಯು ಎಪ್ಪತ್ತು ವರ್ಷಗಳ ಕಾಲ ನಾಡು ನುಡಿಗೆ ಸೇವೆ ಸಲ್ಲಿಸಿದ್ದು ನಿಜಕ್ಕೂ ಶ್ಲಾಘನೀಯ.

ದಾಸ್ಯ ಶೃಂಖಲೆಯಿಂದ ನಾಡನ್ನು ಮುಕ್ತಿಗೊಳಿಸಲು ಸ್ವಾತಂತ್ರ್ಯ ಹೋರಾಟ ನಡೆದದ್ದು ರಾಜ್ಯದ ಇತಿಹಾಸದಲ್ಲಿ ಪ್ರಮುಖವಾದ ಅಧ್ಯಾಯವೇ ಸರಿ. ಈ ಚಳವಳಿಯಲ್ಲಿ ಒಂದೆಡೆ ಆಳರಸ ಮತ್ತೊಂದೆಡೆ ಬ್ರಿಟಿಷರ ವಿರುದ್ಧ ಏಕಕಾಲದಲ್ಲಿ ಹೋರಾಡಬೇಕಾಯಿತು. ಇಂತಹ ಸಂದರ್ಭದಲ್ಲಿ ಒಕ್ಕಲಿಗ ಸಮುದಾಯವು ಚಳವಳಿಯ ಮುಂಚೂಣಿಯಲ್ಲಿ ನಿಂತು ಹೋರಾಡಿತು. ಸಮುದಾಯದ ಶ್ರೀಮಂತರು,

ಬುದ್ಧಿಜೀವಿಗಳು ತಮ್ಮ ಸ್ಥಾನ ಮಾನಗಳನ್ನು ಬದಿಗಿಟ್ಟು ಬೀದಿಗಿಳಿದು ಅಹರ್ನಿಶಿ ದುಡಿದರೆ ಸಮಾಜದ ಕೆಳಸ್ತರದಲ್ಲಿ ಹಲವಾರು ಜನ ಆಸ್ತಿ, ಪಾಸ್ತಿ, ಮನೆ, ಮಠ, ಪ್ರಾಣ ಕಳೆದುಕೊಂಡರು. ಸಮುದಾಯದ ಪತ್ರಿಕೆಗಳು, ಸಾಹಿತಿಗಳು, ಸ್ವಾತಂತ್ರ್ಯ ಕಹಳೆಯನ್ನೂದಿದರೆ, ರೈತರು ಪರೋಕ್ಷವಾಗಿ ಚಳವಳಿಯನ್ನು ಬೆಂಬಲಿಸಿದರು. ಆದರೆ ಅವರು ಬೆಳಕಿಗೆ ಬರಲಿಲ್ಲ. ಮೈಸೂರಿನ ಸಾಹುಕಾರ್ ಚನ್ನಯ್ಯನವರ ಮನೆ, ದಾಸಪ್ಪನವರ "ಯಶೋವಿಲಾಸ" ಸತ್ಯಾಗ್ರಹಿಗಳ ಆಶ್ರಯ ತಾಣವಾಗಿತ್ತು. ಅವರು ಸಂಪಾದಿಸಿದ ಹಣ ಸ್ವಾತಂತ್ರ್ಯ ಹೋರಾಟಕ್ಕಾಗಿ ಹೊಳೆಯಂತೆ ಹರಿಯಿತು.

ಸ್ವಾತಂತ್ರ್ಯಾನಂತರ ಒಕ್ಕಲಿಗ ಜನಾಂಗದವರು ಸಚಿವರಾಗಿ, ಮುಖ್ಯಮಂತ್ರಿಗಳಾಗಿ, ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸುವ ಸೌಭಾಗ್ಯ ದೊರೆಯಿತು. ನಾಡನ್ನು ಕಟ್ಟುವ ದೆಸೆಯಲ್ಲಿ ಹಲವಾರು ಸಮಸ್ಯೆಗಳು ಎದುರಾದವು. ಸಾಮಾನ್ಯವಾಗಿ ಮುಖ್ಯಮಂತ್ರಿ ಕುರ್ಚಿಯು ಹೂವಿನ ಸುಪ್ಪತ್ತಿಗೆಯಾಗಿರದೆ, ಮುಳ್ಳಿನ ಕುರ್ಚಿಯಾಗಿ ಪರಿಣಮಿಸಿತು. ಬಂದಂತಹ ಕಷ್ಟ, ನಿಷ್ಠುರಗಳನ್ನು ಎದುರಿಸಿ ನಾಡನ್ನು ಕಟ್ಟಲು ಪಣ ತೊಟ್ಟರು. ಆಳರಸರ ಕಾಲದಲ್ಲಿ ಮೈಸೂರು ಹೇಗೆ ಇಡೀ ಭಾರತದಲ್ಲಿ ಮಾದರಿ ಸಂಸ್ಥಾನವಾಗಿತ್ತೋ, ಸ್ವಾತಂತ್ರ್ಯಾ ನಂತರದ ಕಾಲದಲ್ಲಿ ಇನ್ನಷ್ಟು ಮೇಲೆತ್ತರಕ್ಕೇರಿತು. ಭಾಷಾವಾರು ಪ್ರಾಂತ್ಯಗಳಾಗಿ ರಾಜ್ಯವನ್ನು ವಿಂಗಡಣೆ ಮಾಡುವ ಸಂದರ್ಭದಲ್ಲಿ ಬಹಳಷ್ಟು ಮುಂದಾಲೋಚನೆ ಮತ್ತು ಜಾಣ್ಮೆಯಿಂದ ನಡೆದುಕೊಂಡರು. ಎಲ್ಲಾ ವಿಧವಾದ ವಿರೋಧ, ಟೀಕೆ, ಟಿಪ್ಪಣಿಗಳಿಗೆ ಅಂಜದೆ ಮೈಸೂರು ರಾಜ್ಯವನ್ನು ವಿಶಾಲ ಕರ್ನಾಟಕವನ್ನಾಗಿ ಮಾಡಿದರು. ಉತ್ತಮವಾದ ಆಡಳಿತದಿಂದಾಗಿ ಕೆಂಪೇಗೌಡ ಕಟ್ಟಿದ ಬೆಂಗಳೂರು ಐ.ಟಿ., ಬಿ.ಟಿ. ಸಿಟಿ, ಸಿಲಿಕಾನ್ ವ್ಯಾಲಿ, ಗಾರ್ಡನ್ ಸಿಟಿ, ಇವೇ ಮುಂತಾದ ಉಪಮೆಗಳನ್ನು ಪಡೆದುಕೊಂಡಿತು. ಬೆಂಗಳೂರನ್ನು ಸಿಂಗಪೂರ್ ಮಾದರಿ ನಿರ್ಮಾಣ ಮಾಡಲು ಕ್ರಮ ಕೈಗೊಂಡದ್ದು ಶ್ಲಾಘನೀಯ.

ಒಕ್ಕಲಿಗರು ಸಂಘಟಿತರಾಗಲು ಕಂಡುಕೊಂಡಿದ್ದು ಮೂರು ಅಂಗಗಳು. ಅವುಗಳು ಯಾವುವೆಂದರೆ 1) ಗುರುಮಠ 2) ಒಕ್ಕಲಿಗರ ಸಂಘ 3) ರೈತ ಸಂಘ. ಆ ಮೂಲಕ ತಮ್ಮ ಮುಂದಿನ ದಾರಿಯನ್ನು ಕಂಡು ಕೊಂಡರು. ಕುವೆಂಪುರವರ ತತ್ವಾದರ್ಶವನ್ನು ಚಾಚೂ ತಪ್ಪದೆ ಪಾಲಿಸುವುದು ಪ್ರಸ್ತುತ ಪರಿಸ್ಥಿತಿಯಲ್ಲಿ ಬಹಳ ಅವಶ್ಯವಾಗಿದೆ. ಜಾತಿ ಪದ್ಧತಿಯನ್ನು ಹೋಗಲಾಡಿಸುವುದು, ಪುರೋಹಿತಶಾಹಿಯನ್ನು ದೂರವಿಡುವುದು, ನಿರಂಕುಶಮತಿಗಳಾಗುವುದು, ಸರಳ ವಿವಾಹ ಅಥವಾ ಮಂತ್ರ ಮಾಂಗಲ್ಯವನ್ನು ಬೆಂಬಲಿಸುವುದು ಇವೇ ಮುಂತಾದವು. "ಮನುಜಮತ, ವಿಶ್ವಪಥ" ಎಂಬ ಉಕ್ತಿಯನ್ನು ಎಲ್ಲೆಡೆ ಜಾರಿಗೆ ತರುವುದು ಹಾಗೂ ಸಾರುವುದು ಇಂದಿಗೆ ಸೂಕ್ತವಾಗಿದೆ. ಸುಶಿಕ್ಷಿತರು ನಿರಕ್ಷರಕುಕ್ಷಿಗಳಿಗೆ ದಾರಿದೀಪವಾಗಬೇಕು. ಕುವೆಂಪುರವರೇ

ಹೇಳಿರುವಂತೆ "ಎಲ್ಲರೂ ರೈತನ ಜೀವ ತಿನ್ನುವವರೆ ....." ಇತ್ಯಾದಿ. ರೈತರ ಬಾಳು ಹಸನಾಗಲು ಒಕ್ಕಲಿಗ ಸಮುದಾಯದ ಸುಶಿಕ್ಷಿತರು, ರಾಜಕಾರಣಿಗಳು, ವಿಜ್ಞಾನಿಗಳು, ಟೊಂಕ ಕಟ್ಟಿ ನಿಲ್ಲಬೇಕು. ಇದರಿಂದಾಗಿ ಸ್ವಲ್ಪ ಮಟ್ಟಿಗಾದರೂ ಹಳ್ಳಿಗಳಿಂದ ಪಟ್ಟಣಕ್ಕೆ ವಲಸೆ ಬರುವುದನ್ನು ತಡೆಯಬಹುದು. ಉಳ್ಳವರು ಉಳ್ಳದಿರುವವರಿಗೆ ಸಹಾಯ ಮಾಡಬೇಕು.

ಸಾಹಿತ್ಯ, ಕಲೆ, ಸಂಸ್ಕೃತಿ, ನಾಡು, ನುಡಿಗೆ ಸಾಕಷ್ಟು ಕೊಡುಗೆಯನ್ನು ನೀಡಿದ್ದಾರೆ. ನಾಡಿನ ಕೀರ್ತಿಯನ್ನು ರಾಷ್ಟ್ರ ಹಾಗೂ ಅಂತರರಾಷ್ಟ್ರ ಮಟ್ಟಕ್ಕೇರಿಸಿದ್ದಾರೆ. ಆಡಳಿತ ಕ್ಷೇತ್ರದಲ್ಲಿ ಯಾರಿಗೂ ಏನೂ ಕಡಿಮೆ ಇಲ್ಲವೆಂದು ತೋರಿಸಿಕೊಟ್ಟಿದ್ದಾರೆ. ಲೋಕಸಭಾಧ್ಯಕ್ಷ ಗದ್ದುಗೆಗೇರಿದ ಶ್ರೀಮತಿ ಇಂದಿರಾ ಗಾಂಧಿಯಂತಹ ಘಟಾನುಘಟಿ ರಾಜಕಾರಣಿಗಳನ್ನು ಮಣಿಸಿದ ಉದಾಹರಣೆಯನ್ನು ನೋಡಬಹುದು. ಕಾಲಾನಂತರ ರಾಷ್ಟ್ರದ ಪ್ರಧಾನಿ ಹುದ್ದೆಯಂತಹ ಗದ್ದುಗೆಗೂ ಏರಿ ಬಂದದ್ದಾಯಿತು.

ಇನ್ನುಳಿದಿರುವುದು ರಾಷ್ಟ್ರಪತಿ ಸ್ಥಾನ ಒಂದೇ. ಮಣ್ಣಿನ ಮಕ್ಕಳು ರಾಷ್ಟ್ರಪತಿ –ಯಾದಾಗ ಮಾತ್ರ ಭಾವಿ ಭವಿತವ್ಯವು ಸುಂದರ ಹಾಗೂ ಸುಖಮಯವಾಗುವುದು. ನಾಡಿನ ಮೇರು ವ್ಯಕ್ತಿಯಾದ ಡಾ. ಎಂ.ವಿ. ಕೃಷ್ಣರಾವ್‌ರವರು ಇಂದಿಗೆ ಮೂರು ದಶಕಗಳ ಹಿಂದೆಯೇ ತಮ್ಮ ಕೃತಿಯಲ್ಲಿ ಹೀಗೆ ಉಲ್ಲೇಖಿಸಿದ್ದಾರೆ :

ಗೌಡ–ರಾಷ್ಟ್ರಪತಿ

ಈ ಒಕ್ಕಣೆಯಲ್ಲಿ ಕೆಂಪೇಗೌಡನ ಆಗಿನ ಮನೋಭಾವವಷ್ಟೇ ಅಲ್ಲ, ಅವರ ಹಿರಿಯರೂ ಕೂಡ ಆಪತ್ಕಾಲದಲ್ಲಿ ಕುಗ್ಗುವರಲ್ಲ, ಸಂಪತ್ತಿನಲ್ಲಿ ಹಿಗ್ಗುವರಲ್ಲ; ಗೀತೆಯ ಆದೇಶ ಮನನ ಮಾಡಿ ಆದರ್ಶಮಾನವರಂತೆ ನಡೆದು ಬದುಕಿ ಬಾಳಿದ್ದು ಈ ಒಕ್ಕಲಿಗ ಜನಾಂಗ, ರೈತ ಜನಾಂಗ, ನೆಲದೊಡೆಯರು, ನಾಡೊಡೆಯರು ಎನ್ನುವುದು ಸರ್ವವಿಧಿತ. ಭಾರತ ಪಿತೃ ಮಹಾತ್ಮಾ ಗಾಂಧೀಜಿ ಹೇಳುತ್ತಿದ್ದರು, ಇಂದು ನೆಲದ ಸೇವೆ ಮಾಡುತ್ತಿರುವವ ನಾಳೆ ರಾಷ್ಟ್ರಪತಿಯಾಗಬಲ್ಲನೆಂದು, ಆಗಬೇಕೆಂದು. ಈ ತತ್ವವನ್ನು ನಮ್ಮ ಕನ್ನಡ ನಾಡಿನ ಒಕ್ಕಲು ಮಕ್ಕಳು ಆರೇಳು ಶತಮಾನಗಳ ಹಿಂದೆಯೇ ಅನುಷ್ಠಾನಕ್ಕೆ ತಂದಿದ್ದರೆಂಬುದೂ, ಆ ಅನುಷ್ಠಾನದಲ್ಲಿ ಕೃತಕೃತ್ಯರಾದರೆಂಬುದೂ ಅವರು ಹುಟ್ಟುಹಾಕಿ ಬಿಟ್ಟು ಹೋಗಿರುವ ಬೆಂಗಳೂರು ಇಂದು ಬೆಳೆದು ವಿಶ್ವರಾಷ್ಟ್ರಗಳ ಕಣ್‌ಮನಗಳನ್ನು ಸೆಳೆದು ಮಹಾ ನಗರವಾಗಿರುವುದರಲ್ಲಿ ಕಾಣುತ್ತದೆ. ಮತ್ತು ರಾಷ್ಟ್ರಪತಿಯಾಗಬೇಕಾದರೆ ಯಾವ ಜಾತಿ, ಕುಲ, ಗೋತ್ರದವರೇ ಆಗಲಿ, ನಾಡ ಕಟ್ಟುವುದಕ್ಕೆ ಬೇಕಾದ ವಿದ್ಯೆಯಲ್ಲಿ ಪರಿಣತರಾದರೆಂದರೆ ಅವರು ರಾಷ್ಟ್ರಪತಿಗಳಾಗಿಯೇ ಆಗುತ್ತಾರೆಂಬುದನ್ನೂ ಸಾಧಿಸಿ ತೋರಿಸಿದವರು ನಮ್ಮ ಒಕ್ಕಲು ಮಕ್ಕಳು. ಅದಕ್ಕೆ ಅಗತ್ಯವಾಗಿ ಬೇಕಾದುದೆಂದರೆ ಚಿಕ್ಕಂದಿನಿಂದಲೇ ಯೋಗ್ಯ ಗುರುಗಳಲ್ಲಿ ಸೇವೆ,

ಶಿಷ್ಯವೃತ್ತಿ, ವಿದ್ಯಾಭ್ಯಾಸ ಪೂರ್ಣವಾಗುವವರೆಗೆ ತನ್ನ ಉದ್ದೇಶ ಮರೆಯದೆ ಏಕಾಗ್ರಚಿತ್ತದಿಂದ ಆ ವಿದ್ಯೆಯ ಕ್ಷೇತ್ರ ಬಿಡದೆ ಪೂರೈಸಿಕೊಳ್ಳುವುದು; ವಿವಿಧ ಶಾಸ್ತ್ರ ಪಾರಂಗತನಾಗುವುದು; ಸಂಸಾರದಲ್ಲಿ, ಗುರುಹಿರಿಯರಲ್ಲಿ, ಒಡನಾಡಿಗಳಲ್ಲಿ ಸೂಕ್ತ ವ್ಯವಹಾರ ಕಲಿಯುವುದು; ಗುರುಗಳ, ಹಿರಿಯರ ಆಶೀರ್ವಾದ ಪಡೆದು ದೇವ ದೇವನಲ್ಲಿ ಭಕ್ತಿ ಭಾವವನ್ನಿಟ್ಟು ತಾನು ನಿರ್ದೇಶಿಸಿಕೊಂಡ ಕರ್ತವ್ಯವನ್ನು ನಿಷ್ಠೆಯಿಂದ ಋಜುಭಾವದಿಂದ ನೆರವೇರಿಸುವುದು. (ಬೆಂಗಳೂರು ಕೆಂಪೇಗೌಡ – ಡಾ॥ ಎಂ.ವಿ. ಕೃಷ್ಣರಾವ್, ಪುಟ 129–130, 1964, ಬೆಂ.)

(ಎಂ.ವಿ. ಕೃಷ್ಣರಾವ್‌ರವರ ಈ ಕೃತಿಯು ರಚನೆಯಾದ ಎಷ್ಟೋ ವರ್ಷಗಳ ನಂತರ ಆಂಧ್ರದ ಮಣ್ಣಿನಮಗನಾದ ನೀಲಂ ಸಂಜೀವರೆಡ್ಡಿಯವರು ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದರು.)

ಹಿರಿಯ ಚೇತನವಾದ ಡಾ. ಎಂ.ಹೆಚ್. ಮರೀಗೌಡರು 1982ರಲ್ಲಿ ವಜ್ರಸಂಪುಟದಲ್ಲಿ ಉಲ್ಲೇಖಿಸಿರುವುದನ್ನು ಓದುಗರ ಗಮನಕ್ಕೆ ತರುತ್ತೇನೆ. "ಒಕ್ಕಲಿಗರು ತಮ್ಮ ಗತ ವೈಭವವನ್ನು ಓದಿ ಸ್ಫೂರ್ತಿಹೊಂದಬೇಕು. ತಮ್ಮಲ್ಲಿರುವ ಕೀಳರಿಮೆಯನ್ನು ಬಿಡಬೇಕು. ರಾಜಕೀಯವಾಗಿ, ಸಾಮಾಜಿಕವಾಗಿ ಸಂಘಟಿತರಾಗಿ ಮತ್ತೊಮ್ಮೆ ಮೇಲೆತ್ತರಕ್ಕೇರಬೇಕು. ಒಕ್ಕಲಿಗರು ಕಷ್ಟಪಟ್ಟುಗಳಿಸಿದ ಹಣ ಒಳ್ಳೆಯ ಕೆಲಸಕ್ಕೆ ಸದ್ಬಳಕೆಯಾಗುತ್ತಿಲ್ಲ. ಕೋರ್ಟು, ಕಛೇರಿಗಳಿಗೆ ಹೋಗಿ ಹಣ ವ್ಯಯಮಾಡುವುದಂತೂ ಒಕ್ಕಲಿಗರ ಹುಟ್ಟು ಮತ್ತು ಕಲಿತ ಬುದ್ಧಿ. ಇದನ್ನು ಬಿಡಬೇಕು. ಜನಾಂಗದ ಶ್ರೀಮಂತರು ಸತ್ಕಾರ್ಯಗಳಿಗೆ ತಾವು ದುಡಿದ ಹಣವನ್ನು ವ್ಯಯ ಮಾಡಿ. ಶ್ರೀಮಂತ ಒಕ್ಕಲಿಗ ಬಾಂಧವರು ಬಡಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಣ ಖರ್ಚು ಮಾಡಿ. ಬಡರೈತರ ಕಷ್ಟನಷ್ಟಗಳಿಗೆ ಸ್ಪಂದಿಸಿ" ಎಂದಿದ್ದಾರೆ. ಅದೇ ರೀತಿ ವಿದೇಶಗಳಿಗೆ ತೆರಳುವ ಜನಾಂಗದವರಿಗೆ ಹೀಗೆ ಸಲಹೆ ನೀಡುತ್ತಾರೆ. "ಹೊರದೇಶಗಳಿಗೆ ವಿದ್ಯಾರ್ಜನೆಗೆ ಹೋಗುವ ಒಕ್ಕಲಿಗರೆಲ್ಲರೂ ಯುವಕರೆ. ಇಂತಹ ಯುವಕರು ಹೆಚ್ಚಾಗಿ ಇರುವುದು ಇಂಗ್ಲೆಂಡ್ ಮತ್ತು ಅಮೆರಿಕಾಗಳಲ್ಲಿ. ಆಯಾ ದೇಶಗಳಲ್ಲಿ ಈ ಯುವಕರೆಲ್ಲಾ ಸೇರಿ ತಮ್ಮದೇ ಆದ ಸಂಘ ಏರ್ಪಡಿಸಿಕೊಳ್ಳಲು ಪ್ರಯತ್ನಿಸಬೇಕು." ಎಂದಿದ್ದಾರೆ. (ಎಂ.ಹೆಚ್. ಮರೀಗೌಡ, ವಜ್ರಸಂಪುಟ, ಪುಟ–5, ಬೆಂಗಳೂರು 1981).

ಯಾರೋ ಅವಿಚಾರಿಗಳು "ಬೆಕ್ಕು ಹೆಬ್ಬುಲಿಯಲ್ಲ, ಕಕ್ಕೆಯ ಗಿಡ ಮರವಲ್ಲ, ಒಕ್ಕಲಿಗ ಪ್ರೌಢನಲ್ಲ" ಎಂಬಿತ್ಯಾದಿಯಾಗಿ ಕುಹಕದ ನುಡಿಗಟ್ಟುಗಳನ್ನು ಸೃಷ್ಟಿಸಿದ್ದಾರೆ. ತನಗೆ ಅನ್ನ ನೀಡಿದ ರೈತನನ್ನು ಈ ರೀತಿ ಕಡೆಗಾಣುವುದು ಶೋಭೆಯಲ್ಲ. ಬಹುಶಃ ಈ ಕೃತಿಯು ಇಂತಹ ಕುತಂತ್ರಿಗಳಿಗೆ ಉತ್ತರ ನೀಡಬಲ್ಲದು. ಒಕ್ಕಲಿಗರು ಮಾಡಿರುವ ಸಾಧನೆಗಳಲ್ಲಿ ಕೆಲವನ್ನು ಇಲ್ಲಿ ದಾಖಲಿಸಲಾಗಿದೆ. ಈ ಕೃತಿಯನ್ನು ಓದುವುದರ

ಮೂಲಕ ಸ್ಫೂರ್ತಿಗೊಂಡು ನಮ್ಮಲ್ಲಿರುವ ಕೀಳರಿಮೆಯನ್ನು ಬಿಟ್ಟು ಮೇಲರಿಮೆ-ಯನ್ನು ಹೊಂದಬೇಕು ಎಂದು ಆಶಿಸೋಣ.

ಒಕ್ಕಲಿಗರ ಮೂಲ ವೃತ್ತಿ ವ್ಯವಸಾಯ ಮತ್ತು ಪಶುಸಂಗೋಪನೆಯಾಗಿದೆ. ವ್ಯವಸಾಯವು ಲಾಭವಿಲ್ಲದ ವೃತ್ತಿಯೆಂದು ಗೊತ್ತಿದ್ದರೂ ಉತ್ತಮ ಶಿಕ್ಷಣ, ಉದ್ಯೋಗ ಇವೇ ಮುಂತಾದ ಸೌಲಭ್ಯಗಳಿಂದ ವಂಚಿತರಾಗಿ ಕೃಷಿಯನ್ನೇ ಅವಲಂಬಿಸಿ ಇಂದಿಗೂ ಗ್ರಾಮಗಳಲ್ಲಿ ಬದುಕುತ್ತಿದ್ದಾರೆ. ದನಿಯಿಲ್ಲದ ಆ ಜನರಿಗೆ ದನಿಯಾಗ-ಬೇಕಾದ ಅಗತ್ಯ ಇಂದು ಒದಗಿ ಬಂದಿದೆ.

ಇಂದು ಒಕ್ಕಲಿಗರು ರಾಜಕೀಯವಾಗಿ ಆರ್ಥಿಕವಾಗಿ ಬೌದ್ಧಿಕವಾಗಿ ಸದೃಢರಾಗಿದ್ದಾರೆ ನಿಜ. ದೇಶ-ವಿದೇಶಗಳಲ್ಲಿ ನಮ್ಮ ಕುಲಬಾಂಧವರು ಉತ್ತಮ ಸ್ಥಾನಮಾನಗಳಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಒಕ್ಕಲಿಗರಿಗೆ ಅವಶ್ಯವಾದುದೆಂದರೆ ಒಗ್ಗಟ್ಟು, ಒಕ್ಕಲಿಗರಲ್ಲಿರುವ ಉಪಜಾತಿಗಳ ಬಗ್ಗೆ ಕೀಳರಿಮೆ ಕೂಡದು, ತಾಮಸಗುಣ ಬಿಟ್ಟು ಸಾತ್ವಿಕ ಗುಣ ಬೆಳೆಸಿಕೊಳ್ಳಬೇಕು. ದೇಶದಲ್ಲಿರುವ ಜಾಟರು, ಕುರ್ಮಿಗಳು, ಪಟೇಲರು, ಠಾಕೂರರು, ರೆಡ್ಡಿಗಳು, ಗೌಂಡರು, ನಾಯರ್‌ಗಳು, ಗೌಡರು ಎಲ್ಲರೂ ಒಂದಾಗಬೇಕು ಕಾರಣ ಇವರೆಲ್ಲರ ಕುಲಕಸುಬು ಒಕ್ಕಲುತಾನವಾಗಿದೆ.

□

ಗ್ರಂಥ ಋಣ

1. ಎಚ್.ಕೆ. ವೀರಣ್ಣಗೌಡ, **ಬದುಕು ಮೆಲುಕು**, 2006
2. ಡಾ. ಎಸ್. ಚಂದ್ರಶೇಖರ್, **ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಕೆಲವು ಒಳನೋಟಗಳು**, 1881–1940
3. ಬಿ.ಪಿ. ರಾಧಾಕೃಷ್ಣ, **ನನ್ನ ತಂದೆ**
4. ಎಂ.ಜಿ. ನಾಗರಾಜ್, **ಕರ್ನಾಟಕ ರೈತ ಚಳುವಳಿಗಳು–ಸತ್ಯಾಗ್ರಹಗಳು** (3 ಸಂಪುಟಗಳು), 2006, ಬೆಂಗಳೂರು
5. ಸೂರ್ಯನಾಥ ಯು. ಕಾಮತ್, **ಒಕ್ಕಲುತನ ಮತ್ತು ಒಕ್ಕಲಿಗರು**, 2006
6. ಎಂ.ಹೆಚ್. ನಾಗರಾಜು, **ಕುಂಚಟಿಗರು : ಸಾಂಸ್ಕೃತಿಕ ಇತಿಹಾಸ**, ತುಮಕೂರು, 2002
7. ಡಾ. ನಲ್ಲೂರು ಪ್ರಸಾದ್, **ಗಂಗಡಿಕಾರ ಒಕ್ಕಲಿಗರು**, 2001
8. ನಾ. ದಯಾನಂದ, **ಜಸ್ಟೀಸ್ ಎನ್. ವೆಂಕಟಾಚಲ**, 2006, ಜಿ.ಆರ್. ನಂಜುಂಡೇಗೌಡ, ಉಪಕೃತಿ, 1986
9. ಮಾಕೋನಹಳ್ಳಿ ದೊಡ್ಡಪ್ಪಗೌಡ, **ಒಕ್ಕಲಿಗರು ಮತ್ತು ಸಂಪ್ರದಾಯಗಳು**
10. ಎಂ.ವಿ. ಕೃಷ್ಣರಾವ್, **ಕರ್ನಾಟಕ ಇತಿಹಾಸ ದರ್ಶನ**, ಬೆಂಗಳೂರು, 1970
11. ರವೀಂದ್ರನಾಥ್ ಆರ್.ವಿ., **ಧೀಮಂತ ರಾಜತಂತ್ರಜ್ಞ** ಕೆ.ಸಿ. **ರೆಡ್ಡಿ**, 2002
12. ಇಂದಿರಾ ಹೆಗ್ಗಡೆ, **ಬಂಟರ, ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ**, 2004
13. **ಕರ್ನಾಟಕ ಮುಖ್ಯಮಂತ್ರಿಗಳು**, ಎಸ್.ವಿ. ಶ್ರೀನಿವಾಸರಾವ್ ಮತ್ತು ಅರಳು ಮಲ್ಲಿಗೆ ಪಾರ್ಥಸಾರಥಿ (ಸಂಪಾದನೆ), 2001
14. ರಾಮಪ್ಪಗೌಡ ಎಸ್. ಕಡಿದಾಳು, **ಮಲೆನಾಡು ಶ್ರೀ ವೈಷ್ಣವ ನಾಮಧಾರಿ ಗೌಡರು**
15. ಡಾ. ಚಂದ್ರಶೇಖರ್ ಎಸ್., **ದಕ್ಷಿಣ ಭಾರತ ವಸಾಹತು ಶಾಹಿ ರಾಷ್ಟ್ರೀಯತೆ**
16. ಡಾ. ಸಿ. ನಾಗಣ್ಣ (ಕನ್ನಡ ಅನುವಾದ) **ದಕ್ಷಿಣ ಭಾರತ ವಸಾಹತು ಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ**, 2000

17. ಹೆಚ್.ಎಸ್. ದೊರೆಸ್ವಾಮಿ, **ನೆನಪಿನ ಸುರುಳಿ ತೆರೆದಾಗ,** 2003
18. ಎಸ್.ಕೆ. ರಾಮಚಂದ್ರರಾವ್, **ಸಂಗೀತ ರತ್ನ ಮೈಸೂರು ಟಿ ಚೌಡಯ್ಯ,** ಬೆಂಗಳೂರು, 1984
19. ಪಿ.ಕೆ. ರಾಜಶೇಖರ್ ಬಿ.ಎಸ್., ತಲ್ವಾಡಿ, ಸತೀಶ ಕಿತ್ತೂರು, **ಮಣ್ಣಿನ ಹಣತೆ**
20. ಎಚ್ಚೆಸ್ಕೆ, **ಗಗನ ಚುಕ್ಕಿ ಭರಚುಕ್ಕಿ**
21. ಎಂ.ಹೆಚ್. ಕೃಷ್ಣಯ್ಯ, ದೇವರಕೊಂಡಾರೆಡ್ಡಿ, **ಸಾಲು ದೀಪಗಳು**
22. ಡಾ. ಡಿ.ಎಸ್. ಜಯಪ್ಪ ಗೌಡ, **ಭೈರವ ಬಾಗಿನ,** ಚಿಕ್ಕಮಗಳೂರು, 1999
23. ಕೊಣಂದೂರು ವೆಂಕಪ್ಪಗೌಡ, **ಜೀವಂತ ಜ್ವಾಲೆ ಶಾಂತವೇರಿ ಗೋಪಾಲಗೌಡ,** ಬೆಂಗಳೂರು, 1987
24. ಬಪ್ಪನಾಡು ರಾಘವ, ಕಾಡೇನಹಳ್ಳಿ ವೀರಣ್ಣಗೌಡ, ಎಸ್.ಎಂ. ಕೃಷ್ಣ, ಬೆಂಗಳೂರು, 2004
25. ಡಾ. ಎಂ.ವಿ. ಕೃಷ್ಣರಾವ್, **ಬೆಂಗಳೂರು ಕೆಂಪೇಗೌಡ,** ಬೆಂಗಳೂರು, 1964
26. ಡಾ. ರಾಗೌ ಮತ್ತು ಡಾ. ದಯಾನಂದ ಪಟೇಲ್, **ಯಲಹಂಕ ಪ್ರಭುಗಳು – ಒಂದು ಅಧ್ಯಯನ,** ಬೆಂಗಳೂರು, 1994
27. ಪ್ರೊ. ಎಸ್.ಕೆ. ರಾಮಚಂದ್ರರಾವ್, **ಸಂಗೀತ ರತ್ನ ಟಿ. ಚೌಂಡಯ್ಯ**
28. ಯಲಹಂಕ ಗೌಡಪ್ರಭುಗಳು – **ವಾಸ್ತು ಶಿಲ್ಪ ಕಲೆ ಡಾ. ಎಸ್.ಕೆ. ಅರಣಿ.**
29. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು – **ಶಂಕರ ನಾರಾಯಣ ರಾವ್**
30. ಶ್ರೀಮತಿ ಬಿ.ಎಲ್. ಸುಬ್ಬಮ್ಮ – **ಪ್ರತಿಭಾನ್ವಿತ ಸಂಸದೀಯ ಪಟುಗಳು ಮಾಲಿಕೆ**
31. ಹಿ.ಚಿ. ಬೋರಲಿಂಗಯ್ಯ – **ಶ್ರೀ ವೈ.ಕೆ. ರಾಮಯ್ಯ**
32. ಡಾ. ಸೂರ್ಯನಾಥ ಕಾಮತ್ – ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು
33. ಬಿ.ಆರ್. ಪ್ರಾಣೇಶ್‌ರಾವ್ – ಯಶೋಧರ ದಾಸಪ್ಪ ಮತ್ತು ಹೆಚ್.ಸಿ. ದಾಸಪ್ಪ ಜೀವನ ಮತ್ತು ಸಾಧನೆ
34. ಡಾ. ಶೈಲಜ, ಸಿ.ಪಿ. – ಶ್ರೀಮತಿ ಯಶೋಧರ ದಾಸಪ್ಪನವರ ಜೀವನ ಮತ್ತು ಸಾಧನೆ
35. ಡಿ. ಲಿಂಗಯ್ಯ – ಸತ್ಯಾಗ್ರಹಿಗಳ ಸಂದರ್ಶನ
36. ಕೃಷ್ಣೇಗೌಡ, ಡಿ. – ಒಕ್ಕಲಿಗರ ಹಬ್ಬ ಹರಿದಿನಗಳು

37. ಡಾ. ಚಿದಾನಂದಮೂರ್ತಿ – ಸಂಶೋಧನ ತರಂಗ
38. ತಿಮ್ಮೇಗೌಡ, ಎನ್.ಎಸ್. – ತುಮಕೂರು ಜಿಲ್ಲೆಯ ಜಾನಪದ ನಂಬಿಕೆಗಳು
39. ನಂಜುಂಡೇಗೌಡ, ಜೆ.ಆರ್. – ಉಪಕೃತಿ (ಸ್ಮರಣ ಸಂಚಿಕೆ)
40. ನಾಗೇಗೌಡ, ಹೆಚ್.ಎಲ್. – ಪ್ರವಾಸಿ ಕಂಡ ಇಂಡಿಯ
41. ನಾಗೇಗೌಡ, ಹೆಚ್.ಎಲ್. – ನನ್ನೂರು
42. ಪುಟ್ಟಯ್ಯ, ಎಂ. – ಕುಂಚಿಟಿಗರ ಸಮಾಜ ಚರಿತ್ರೆ
43. ಪದ್ಮಪ್ರಸಾದ್ – ಮಳೆ ಒಂದುಅಧ್ಯಯನ
44. ಬಾನುಮತಿ, ವೈ.ಸಿ. – ಮಲೆನಾಡ ಶೈವ ಒಕ್ಕಲಿಗರು
45. ರತ್ನ ಪಿ. ನಗುವನಹಳ್ಳಿ – ಜಾನಪದ ಸೋಪಾನ
46. ರಾಮಚಂದ್ರೇಗೌಡ, ಹಿ.ಶಿ. – ಭೂಮಿ ಮತ್ತು ಹಿಂಸೆ
47. ಹಿರೇಮಲ್ಲೂರು ಈಶ್ವರನ್ – ಭಾರತದ ಹಳ್ಳಿಗಳು
48. ಡಾ. ಪುಟ್ಟಸ್ವಾಮಿ, ಬಿ.ಎಸ್. – ಬೆಂಗಳೂರು ಕೆಂಪೇಗೌಡ
49. ನಂದಿ ವೆಂಕಟೇಶಮೂರ್ತಿ – ಬೆಂಗಳೂರು ನಿರ್ಮಾಪಕ ಕೆಂಪೇಗೌಡನ ವಂಶಸ್ಥರು
50. ಸುಂದರರಾವ್, ಬ.ನ. – ಬೆಂಗಳೂರಿನ ಇತಿಹಾಸ
51. ಲಿಂಗಯ್ಯ, ಡಿ. – ಶಿವಪುರ ಧ್ವಜಸತ್ಯಾಗ್ರಹ
52. ಡಾ. ದಯಾನಂದ ಪಟೇಲ್, ಜಿ.ಟಿ. ವೀರಪ್ಪ – ಯಲಹಂಕ ಪ್ರಭುಗಳು ಒಂದು ಅಧ್ಯಯನ
53. ಕನ್ನಡದೊಳ್ ಭಾವಿಸಿದ ಜನಪದಂ – (ಸಂ.) ಎಂ.ವಿ.ವಸು
54. ಗೋವಿಂದಯ್ಯ, ಟಿ. – ಕಾವೇರಿ ಅಂತಿಮ ತೀರ್ಪು
55. ದಯಾನಂದ, ನ. – ಎನ್. ವೆಂಕಟಾಚಲ
56. ಲಿಂಗಯ್ಯ, ಡಿ. – ರಾಷ್ಟ್ರರತ್ನ ಕೆಂಗಲ್ ಹನುಮಂತಯ್ಯ
57. ಚಂದ್ರಶೇಖರಯ್ಯ – ಬಚ್ಚಳ್ಳಿಯ ಬೆಳಕು
58. ಕೊಣಂದೂರು ವೆಂಕಪ್ಪಗೌಡ – (ಸಂ) ಜೀವಂತಜ್ವಾಲೆ ಶಾಂತವೇರಿ ಗೋಪಾಲಗೌಡ ಸ್ಮಾರಕಗ್ರಂಥ

59. ಡಾ. ಕುಮಾರ್, ಕೆ.ಎಂ. – ಕರ್ನಾಟಕದಲ್ಲಿನ ರೈತ ಚಳುವಳಿ

60. ರಾಜೇಗೌಡ, ಹ.ಕ. – ಅಪೂರ್ವ ಪುರುಷ ಸಿಂಹ

61. ಡಾ. ಗೋವಿಂದರಾಜು, ಸಿ.ಆರ್. – ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ

62. ಎಂ.ವಿ. ಕೃಷ್ಣರಾವ್ – ಬೆಂಗಳೂರು ಕೆಂಪೇಗೌಡ

63. ಡಾ. ದುಗ್ಗಮ್ಮ ವಿ.ಡಿ. – ಮಲೆನಾಡಿನ ಒಕ್ಕಲಿಗರ ಆಹಾರ ಕ್ರಮ

64. ಡಾ. ಎಂ.ಜಿ. ನಾಗರಾಜ್ – ಕರ್ನಾಟಕ ರೈತ ಚಳುವಳಿ

65. ಭಗವತ್ ಶರಣ ಉಪಾದ್ಯಾಯ – ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ

66. ಶಂಕರ ನಾರಾಯಣರಾವ್, ಎಸ್.ಪಿ. – ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು

67. ರಾಜೇಗೌಡ, ಹ.ಕ. – (ಸಂ) ಚಿತ್ರಗುಪ್ತ ಸ್ಮರಣೆ

68. ಡಾ. ದೇ.ಜ.ಗೌ – ಸುವರ್ಣ ಮಂಡ್ಯ

69. ದೇವಿಪ್ರಸಾದ್ ಸಂಪಾಜೆ – ಅಮರಸೂಳ್ಯದ ಸಮರ

70. ಕ.ವಿ. ಸಚಿವಾಲಯ – ಕೆ. ಹನುಮಂತಯ್ಯ

71. ಡಾ. ಪಾಂಡುಕುಮಾರ್, ಬಿ. – ಕರ್ನಾಟಕದ ರತ್ನಗಳು

72. ಡಾ. ಅರುಣಿ, ಎಸ್.ಕೆ. – ಯಲಹಂಕ ನಾಡ ಪ್ರಭುಗಳ ವಾಸ್ತುಶಿಲ್ಪ – ಶಿಲ್ಪಕಲೆ

73. ಲಿಂಗಯ್ಯ ಡಿ. ಡಾ. ಜಮುನ. ಎಂ – ಯಲಹಂಕನಾಡ ಪ್ರಭುಗಳು

74. ಡಾ. ಪಾಂಡುಕುಮಾರ್, ಬಿ. – ಮಣ್ಣಿನ ದೀಪಗಳು

75. ಡಾ. ನಂದೀಶ್, ಎನ್. – ಮಧ್ಯಕಾಲೀನಕ ರ್ನಾಟಕದಲ್ಲಿ ಆಹಾರ ಮತ್ತು ಪಾನೀಯಗಳು

76. ಕೃಷ್ಣಯ್ಯ, ಡಿ.ಎನ್. – ಕೊಡಗಿನ ಇತಿಹಾಸ

77. ಸಿಂಗ್ರಯ್ಯ, ಎಂ – ನಾಲ್ವಡಿ ಕೃಷ್ಣರಾಜ ಒಡೆಯರ್

78. ಲಿಂಗಯ್ಯ, ಎಂ.ಕೆ. – ಮೈಸೂರು ಒಂದು ಅಧ್ಯಯನ

79. ನಂಜರಾಜ್ ಅರಸ್, ಪಿ.ವಿ. – ನಾನು ಕನ್ನಂಬಾಡಿ ಕಟ್ಟೆ

80. ಡಾ. ರವಿಂದ್ರನಾಥ್, ಆರ್.ವಿ. – ಮಹಾನ್ ಸಾಧಕ ಕೆ.ಸಿ. ರೆಡ್ಡಿ
81. ಲಿಂಗಯ್ಯ, ಡಿ. – ರಾಷ್ಟ್ರರತ್ನ ಕೆಂಗಲ್ ಹನುಮಂತಯ್ಯ
82. ರಾಮರತ್ನಂ, ವಿ. – ಮೈಸೂರು ಒಡೆಯರ್ ಮತ್ತು ಕರ್ನಾಟಕ ಸಂಗೀತ
83. ಡಾ. ಜಯಪ್ಪಗೌಡ, ಡಿ. – ಭಾರತರತ್ನ ಸರ್ ಎಂ.ವಿ.
84. ಬೆಂ., ಕೆ. ವೆಂಕಟರಾಂ, ಡಾ. ಸರ್ವಮಂಗಳ – (ಸಂ) ಕಲಾಚೇತನ
85. ಎಂ. ಕೃಷ್ಣಯ್ಯ – ಸಮಗ್ರ ಆಧುನಿಕ ಮೈಸೂರು ಚರಿತ್ರೆ
86. ಡಾ. ಎನ್. ನಂದೀಶ್ವರ – ಸಿರಾ ತಾಲ್ಲೂಕು ದರ್ಶನ
87. ರಹಮತ್ ತರೀಕೆರೆ – ಕರ್ನಾಟಕ ನಾಥಪಂಥ
88. ಮನುದೇವ ದೇವಾಂಗಿ – ಸ್ವಾತಂತ್ರ್ಯ ಸೇನಾನಿ ದೇವಾಂಗಿ ಮೊನಪ್ಪ
89. ಡಾ. ಎಂ.ಜಿ. ನಾಗರಾಜ್ – ಕರ್ನಾಟಕ ರೈತ ಚಳುವಳಿ – ಸತ್ಯಾಗ್ರಹಿಗಳು
90. ತೈಲೂರು ವೆಂಕಟಕೃಷ್ಣ – ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ
91. ಡಾ. ಕೋರನ ಸರಸ್ವತಿ ಪ್ರಕಾಶ್ – ಕೊಡಗುಗೌಡ ಸಮುದಾಯ
92. ಡಾ. ಬಿ. ಪಾಂಡುಕುಮಾರ್ – ಬೆಂಗಳೂರು ನಿರ್ಮಾಪಕ ಕೆಂಪೇಗೌಡ
93. ಡಾ. ಸಿ.ಆರ್. ಶ್ಯಾಮಲ – ಪೂರ್ವಕರ್ನಾಟಕದ ಪಾಳೆಯಗಾರರು ಒಂದು ಅಧ್ಯಯನ
94. ಡಾ. ದುಗ್ಗಮ್ಮ, ಎ.ಡಿ. – ಮಲೆನಾಡಿನ ಒಕ್ಕಲಿಗರ ಆಹಾರ ಕ್ರಮ ಸಾಂಸ್ಕೃತಿಕ ಅಧ್ಯಯನ
95. ಡಾ. ಅಣ್ಣಯ್ಯ ತೈಲೂರು – ರಾಜ್ಯವನ್ನಾಳಿದ ನಾಯಕರುಗಳು
96. ನಂದಿ ವೆಂಕಟೇಶಮೂರ್ತಿ – ಒಕ್ಕಲಿಗರ ಇತಿಹಾಸ ಮತ್ತು ಪರಂಪರೆ
97. ಗೋಪಾಲಗೌಡ ಕಲ್ಪಮಂಜಲಿ – ಆವತಿ ನಾಡಪ್ರಭುಗಳು ಮತ್ತವರ ಬಂಧು ಬಳಗ
98. ಡಾ. ಎಂ.ಜಿ. ಮಂಜುನಾಥ – (ಸಂ) ಬೆಂಗಳೂರಿನ ಬಖೈರುಗಳು
99. ಡಾ. ದೇವರಕೊಂಡಾರೆಡ್ಡಿ – (ಸಂ) ಬೆಂಗಳೂರು ಕೆಂಪೇಗೌಡರ ವಂಶಸ್ಥರು
100. ಡಾ. ನಾ. ಡಿಸೋಜ – ಶಾಂತವೇರಿ ಗೋಪಾಲಗೌಡ
101. ಡಾ. ಬಿ.ಎಸ್. ಪುಟ್ಟಸ್ವಾಮಿ – ಯಲಹಂಕ ನಾಡಪ್ರಭು ಕೆಂಪೇಗೌಡ

102. ಅಮ್ಮೆಂಬಳ ಆನಂದ – ನೇಗಿಲ ಯೋಗಿಯ ದಾರಿಯ ಬುತ್ತಿ
103. ಡಾ. ಕೆ.ಆರ್. ಸಂಧ್ಯಾರೆಡ್ಡಿ – ಕರ್ನಾಟಕದಲ್ಲಿ ರೆಡ್ಡಿ ಸಮುದಾಯ
104. ಡಾ. ಎಚ್.ಎಂ. ನಾಗರಾಜು – ದುರ್ವಿನೀತ
105. ಪ್ರೊ. ಸಿದ್ದಣ್ಣ ಬಿ. ಉತ್ನಾಳ – ಕುಡು ಒಕ್ಕಲಿಗರು
106. ಡಾ. ಗಣಪತಿಗೌಡ – ಗ್ರಾಮ ಒಕ್ಕಲಿಗರ ಸಾಂಸ್ಕೃತಿಕ ಅನನ್ಯತೆ ಮತ್ತು ಸಮಕಾಲೀನ ಸಂದರ್ಭಗಳು
107. ಎಂ.ಎಚ್. ನಾಗರಾಜು – ಒಕ್ಕಲಿಗರು ಒಕ್ಕಲಿಗರ ಪ್ರಬೇಧಗಳು ಸ್ಥಿತ್ಯಂತರ – ಸಂಘರ್ಷ – ಸಾಮರಸ್ಯ
108. ಎಂ.ಎಚ್. ನಾಗರಾಜು – ಗುಬ್ಬಿ ಹೊಸಹಳ್ಳಿ ಪ್ರಭುಗಳು
109. ಕೆ.ಎಸ್. ಭಗವಾನ್ – ಕೆಂಗಲ್ಲರ ಭಾಷಣಗಳು
110. ಪುತ್ತೂರು ಅನಂತರಾಜೇಗೌಡ – ರಾಜ ಪರಂಪರೆಯ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡರು
111. ಕೆ. ಪ್ರಹ್ಲಾದರಾವ್ – ಸಿ. ಭೈರೇಗೌಡ
112. ಡಾ. ಎಂ.ಜಿ. ಮಂಜುನಾಥ್ – ಬೆಂಗಳೂರಿನ ಬಖೈರುಗಳು
113. ಪ್ರೊ. ಎಚ್.ಎಸ್. ಹರಿಶಂಕರ್ ಮತ್ತು ಬಿ.ಎನ್. ದಾಸೇಗೌಡ –ತಲಕಾಡಿನ ಗಂಗರು ಮತ್ತು ಬಳ್ಳಾಳ ಒಕ್ಕಲಿಗರು
114. ಡಾ. ತಲಕಾಡು ಚಿಕ್ಕರಂಗೇಗೌಡ – ಶ್ರೀ ಕೆಂಪೇಗೌಡ ರಾಜವಂಶ ಚರಿತೆ
115. ಡಾ. ಆರ್. ಶೇಷಶಾಸ್ತ್ರಿ – ಕರ್ನಾಟಕದ ವೀರಗಲ್ಲುಗಳು
116. ಡಾ. ಎಸ್. ಚಂದ್ರಶೇಖರ್ – ವಸಾಹತು ಕಾಲೀನ ಕರ್ನಾಟಕ
117. ಕೊಣಂದೂರು ವೆಂಕಪ್ಪಗೌಡ – ಜೀವಂತ ಜ್ವಾಲೆ ಶಾಂತವೇರಿ ಗೋಪಾಲಗೌಡ
118. ಡಾ. ಕೆ.ಆರ್. ಕಮಲೇಶ್ – ಸ್ಮೃತಿ ವಾಹಿನಿ
119. ಡಾ. ಕೆ.ಆರ್. ಕಮಲೇಶ್ – ಭವಿಷ್ಯದರ್ಶನ
120. ಡಾ. ಎಸ್.ಎಚ್. ಕವಂಟೆ ಮತ್ತುಡಾ. ವಿ.ಜೆ. ಪೂಜಾರ್ – ಶ್ರೀ ಕಡಿದಾಳ ಮಂಜಪ್ಪ (ಪ್ರತಿಭಾವಂತ ಸಂಸದೀಯ ಪಟುಗಳ ಬದುಕಯ ಬರಹ ಮಾಲಿಕೆ)
121. ಬೆಂಗಳೂರು ಎಂ. ಗೋಪಿನಾಥ್ – ಕರ್ನಾಟಕ ಸಂಗೀತ ಲೋಕದ ದಿಗ್ಗಜರು
122. ಡಾ. ವಿಜಯಭಾರತಿ – ಗಾನಯೋಗಿ ಕೆಂಪೇಗೌಡರು

123. ಮಾಕೊನಹಳ್ಳಿ ದೊಡ್ಡಪ್ಪಗೌಡ – ಪಾಶುಪತ ಶೈನರುಗೌಡ ಸಮಾಜ, ಮಲೆನಾಡಿನ ಚಿತ್ರಗಳು

124. ಕುವೆಂಪು – ಮಲೆನಾಡಿನ ಚಿತ್ರಗಳು

125. ಜಿ.ವಿ. ಚೇತನ್ ಜುಂಜೇರು – ಕೆ.ವಿ. ಶಂಕರಗೌಡ

126. ಕಡಿದಾಳು ಕೆ.ಎಸ್. ರಾಮಪ್ಪಗೌಡ – ಮಲೆನಾಡಿನ ಅಂದಿನ ನೆನಪುಗಳು

127. ಡಾ. ಪಾಂಡುಕುಮಾರ್, ಬಿ. – ರಾಜ್ಯ ಒಕ್ಕಲಿಗರ ಸಂಘದ ಇತಿಹಾಸ

128. ಡಾ. ಹೆಚ್.ಎಲ್ ನಾಗೇಗೌಡ – ಭೂಮಿಗೆ ಬಂದಗಂಧರ್ವ

129. ಡಾ. ಎಸ್. ಚಂದ್ರಶೇಖರ್ – ಆಧುನಿಕ ಕರ್ನಾಟಕದ ಆಂದೋಲನ

130. ಡಾ. ಎನ್. ಆರ್. ನಾಯಕ – ನಾಡವರ ಒಂದು ಸಾಂಸ್ಕೃತಿಕ ಅಧ್ಯಯನ

131. ಡಾ. ಪಿ.ವಿ. ಕೃಷ್ಣಮೂರ್ತಿ – ತಮಿಳುನಾಡಿನ ಕನ್ನಡ ಶಾಸನಗಳು

132. ಡಾ. ಪ್ರಮೀಳಾದೇವಿ, ಬಿ.ಕೆ. – ಗಾಂಧೀಜಿ ಮತ್ತು ಯಶೋಧರಮ್ಮ ದಾಸಪ್ಪ

133. ಡಾ. ತುಳಸಿ ರಾಮನಾಯಕ್ – ಬೆಂಗಳೂರಿನ ಸಂಕ್ಷಿಪ್ತ ಇತಿಹಾಸ

134. ಡಾ. ಎಸ್.ಕೆ. ಅರುಣಿ – ಬೆಂಗಳೂರು ಪರಂಪರೆ

135. ಪ್ರೊ. ಬಿ. ಜಯಪ್ರಕಾಶಗೌಡ ಲಿಂಗಣ್ಣ ಬಂಧುಕಾರ್ – ಮಂಡ್ಯ ಜಿಲ್ಲಾ ಸ್ವಾತಂತ್ರ್ಯ ವೀರರು.

136. ಡಾ. ಚಕ್ಕೆರೆ ಶಿವಶಂಕರ್ – (ಸಂ) ನಾಗಸಂಪದ

137. ಡಾ. ಟಿ.ಸಿ. ಪೂರ್ಣಿಮ – ಎಸ್.ಸಿ. ಮಲ್ಲಯ್ಯ

138. ಡಾ. ರವೀಶ್ – ಶ್ರೀಪುರುಷ

ಅಭಿನಂದನಾ ಗ್ರಂಥಗಳು, ಸ್ಮರಣ ಸಂಚಿಕೆ, ನಿಘಂಟುಗಳು ಇತ್ಯಾದಿ

1. *ಕರ್ನಾಟಕ ರಾಜ್ಯ ಗೆಜೆಟಿಯರ್ ಸಂಪುಟ ಭಾಗ–1,* ಡಾ. ಸೂರ್ಯನಾಥ ಕಾಮತ್
2. *ವಿಶ್ವಕೋಶ,* ಮೈಸೂರು ವಿಶ್ವವಿದ್ಯಾಲಯ, 2006
3. *ಭೈರವ ಬಾಗಿನ,* ಡಾ. ಡಿ.ಎಸ್. ಜಯಪ್ಪಗೌಡ, 2005
4. ಕೆಂಪೇಗೌಡ ಎಂ.ಕೆ., *ವಜ್ರಹಾರ,* 1999
5. *ವಜ್ರ ಸಂಪುಟ – ಒಕ್ಕಲಿಗರ ಸಂಘ,* 1982
6. *ಒಕ್ಕಲಿಗರ ಸಂಘ ಸುವರ್ಣ ಮಹೋತ್ಸವ,* 1961, ಸಂಚಿಕೆ : ಒಕ್ಕಲಿಗರ ಸಂಘ, 1961
7. *ಕನ್ನಡ ವಿಷಯ ವಿಶ್ವಕೋಶ,* ಮೈಸೂರು ವಿಶ್ವವಿದ್ಯಾಲಯ, 2006
8. *ಪುಣ್ಯಕೋಟಿ,* ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ
9. ಇ.ಸಿ. *ವಾಲ್ಯುಮ್* 1 ರಿಂದ 9
10. **ಭೈರವ ಬಾಗೀನ** ವಿ.ವಿ.ಪುರಂ ಕಾಲೇಜು
11. Role of Vokkaligala Sangha in the Change of Social, political Activitied in Karnataka - A Study - By. Dr. B. Pandukumar UGC Project.
12. *ಹೇಮಾವತಿ*
13. *ಸುವರ್ಣ ಮಂಡ್ಯ*
14. *ಕಬ್ಬಿನ ಹಾಲು*



ಡಾ. ಬಿ. ಪಾಂಡುಕುಮಾರ್ ಇವರು 1980ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು, 1998ರಲ್ಲಿ ಪಿಹೆಚ್.ಡಿ. ಪದವಿಯನ್ನು ಗಳಿಸಿರುತ್ತಾರೆ. ಇಂದಿಗೆ ಮೂವತ್ತೈದು ವರ್ಷಗಳ ಕಾಲ ನಗರದ ವಿ.ವಿ. ಪುರಂ ಕಾಲೇಜು ಹಾಗೂ ವಿವೇಕಾನಂದ ಪದವಿ ಕಾಲೇಜುಗಳಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ಸೇವೆಸಲ್ಲಿಸಿದ್ದಾರೆ. ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರಮಟ್ಟದ ವಿಚಾರಸಂಕಿರಣಗಳಲ್ಲಿ ಸಂಶೋಧನಾತ್ಮಕ ಪ್ರಬಂಧಗಳನ್ನು ಮಂಡಿಸಿರುತ್ತಾರೆ. ಇವರ ವಿಚಾರಪೂರಿತ ಲೇಖನಗಳು ಸಾಕಷ್ಟು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. 1990ರಿಂದ ಮಧುರೈ ಕಾಮರಾಜ ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಪಿಹೆಚ್.ಡಿ ಸಂಶೋಧನಾ ಮಾರ್ಗದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಸಂಶೋಧನ ಮಾರ್ಗದರ್ಶನದಲ್ಲಿ ಇಬ್ಬರು ಎಂ.ಫಿಲ್ ಮತ್ತು ಇಬ್ಬರು ಪಿಹೆಚ್.ಡಿ ಪದವಿಯನ್ನು ಪಡೆದಿರುತ್ತಾರೆ. ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಬರೇಲಿ, (2004)ಯಲ್ಲಿ ನಡೆದ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಶ್ರೀಯುತರು ಮಂಡಿಸಿದ Bangalore is the only city in India to have Hydro-Electricity Power ಎಂಬ ಸಂಪ್ರಬಂಧವು ದ್ವಿತೀಯ ಬಹುಮಾನಗಳಿಸಿತು. 2005ರಲ್ಲಿ "Role of Vokkaligara Sangha in the change of Social & Political activities in Karnataka- A Study" ಎಂಬ ಯು.ಜಿ.ಸಿ. ಪ್ರಾಯೋಜಿತ ಸಂಶೋಧನಾ ಯೋಜನೆಯನ್ನು ಪೂರ್ಣಗೊಳಿಸಿರುತ್ತಾರೆ. 2001ರಲ್ಲಿ ಅಮೆರಿಕಾದ ಟೆಕ್ಸಾಸ್ A&M ವಿಶ್ವವಿದ್ಯಾಲಯವು ಶ್ರೀಯುತರಿಗೆ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು, 2005ರಲ್ಲಿ ಜನತಾಶಿಕ್ಷಣ ಸಂಸ್ಥೆಯು ಪ್ರೊ. ಸಂಕೇಗೌಡ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. 2013ರಲ್ಲಿ ಶ್ರೀಯುತರಿಗೆ ಕೆಂಪೇಗೌಡ ಪ್ರಶಸ್ತಿಯು ಲಭಿಸಿದೆ.

2007ರಲ್ಲಿ ಶ್ರೀಯುತರು ರಚಿಸಿದ '1600 ವರ್ಷಗಳ ಒಕ್ಕಲಿಗರ ಇತಿಹಾಸ' ಎಂಬ ಕೃತಿಯು ಓದುಗರಿಂದಾಗಿ ಶ್ರೀಯುತರ ಪ್ರಯತ್ನವು ಸಫಲವಾಗಿದೆ ಎಂದೇಳಬಹುದು. ದಿನಾಂಕ 05 ಡಿಸೆಂಬರ್ 2012ರಲ್ಲಿ 'ದೆಹಲಿ ಕರ್ನಾಟಕ ಸಂಘ' ನವದೆಹಲಿ ಇಲ್ಲಿ 500ನೇ ವರ್ಷದ ಕೆಂಪೇಗೌಡ ಜಯಂತ್ಯೋತ್ಸವದ ಆಚರಣೆಯ ಅಂಗವಾಗಿ ರಚಿಸಿದ "ಬೆಂಗಳೂರು ನಿರ್ಮಾಪಕ ಕೆಂಪೇಗೌಡ" ಎಂಬ ಕೃತಿಯನ್ನು ಲೋಕಾರ್ಪಣೆ ಮಾಡಲಾಯ್ತು. ಶ್ರೀಯುತರು 2011 ರಿಂದ 2013ರ ಅವಧಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಇತಿಹಾಸ ಅಧ್ಯಾಪಕರ ವೇದಿಕೆಯ ಅಧ್ಯಕ್ಷರಾಗಿದ್ದು ರಾಜ್ಯ ಮತ್ತು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಏರ್ಪಡಿಸಿ. 2014 ಜುಲೈ ತಿಂಗಳಿನಲ್ಲಿ ಸಂಶೋಧನಾ ಪ್ರಬಂಧಗಳ 'Facets of Urbanisation' ಎಂಬ ಕೃತಿಯನ್ನು ಲೋಕಾರ್ಪಣೆ ಮಾಡಲಾಯಿತು. 2014ರಲ್ಲಿ 'ಕರ್ನಾಟಕ ರತ್ನಗಳು', 2017ರಲ್ಲಿ 'ಮಣ್ಣಿನ ದೀಪಗಳು', ಸಮಗ್ರ ಭಾರತ ಪ್ರವಾಸ (ಬಹುವರ್ಣಗಳಲ್ಲಿ) ಇವೇ ಮುಂತಾದ ಕೃತಿಗಳನ್ನು ಲೋಕಾರ್ಪಣೆಗೊಳಿಸಿದ ಕೀರ್ತಿ ಶ್ರೀಯುತರಿಗೆ ಸಲ್ಲುತ್ತದೆ.

2015ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ ಕೂಡಲೆ ರಾಜ್ಯ ಒಕ್ಕಲಿಗರ ಸಂಘದ ಆಶ್ರಯದಲ್ಲಿ ಹೊರಬರುತ್ತಿರುವ 'ಒಕ್ಕಲಿಗರ ಪತ್ರಿಕೆ'ಯ ಗೌರವ ಸಂಪಾದಕರಾಗಿ ನಾಲ್ಕು ವರ್ಷಗಳ ಕಾಲ ಸೇವೆಸಲ್ಲಿಸಿದರು.

ಜಸ್ಟೀಸ್ ಹೊಂಬೇಗೌಡ ಒಕ್ಕಲಿಗರ ಸಂಘ

ನ್ಯಾಯಾಂಗ ಬಡಾವಣೆ, ಬೆಂಗಳೂರು

